2020

ಶ್ರೀ ಗುರುಚರಿತ್ರ ಪದ್ಯ

ಶ್ರೀದತ್ತ ದಿಕ್ಷಿತ ಓಣಿಕೈ

ಬೆಂಗಳೂರು

ಶುಭ-ಆಶೀರ್ವಾದಗಳು



ಪರಮ ಪೂಜ್ಯ ಸದ್ಗುರು ನಾರಾಯನಾಂದ ತೀರ್ಥ ಮಹಾಸ್ವಾಮಿಗಳು

ಶ್ರೀ ಕ್ಷೇತ್ರ ಔದುಂಬರ, ತಾಲೂಕ ಪಲುಸ, ಜಿಲ್ಲಾ ಸಾಂಗ್ಲಿ - 416320, ಮಹಾರಾಷ್ಟ್ರ

ಪೂರ್ವಾಶ್ರಮ

ಶ್ರೀ ವೇದಮೂರ್ತಿ ತಿಮ್ಮಣ್ಣ ನರಸಿಂಹ ದಿಕ್ಷಿತ, ಒಣಿಕೈ,

(02/09/1886 - 15/02/1968)

ಪೋಸ್ಟ: ಪಂಚಲಿಂಗ, ತಾಲೂಕ : ಶಿರಸಿ, ಉತ್ತರಕನ್ನಡ 581403 ಕರ್ನಾಟಕ

ಶ್ರೀ ತಿಮ್ಮಣ್ಣ ಭಟ್ಟ ಮತ್ತು ಶ್ರೀಮತಿ ಯಮುನಾ ಅವರ ಕಿರು ಪರಿಚಯ

ತಿಮ್ಮಣ್ಣ ಭಟ್ಟರು ಭಾದ್ರಪದ ಶುದ್ದ ಪಂಚಮಿ 1808ರಲ್ಲಿ ಜನನ, (ಗುರುವಾರ 2ನೆ ಸೆಪ್ಟಂಬರ್ 1886). 8 ವರ್ಷಕ್ಕೆ ಉಪನಯನ, ಗೋಕರ್ಣದ ಗಾಯತ್ರಿ ತಿಮ್ಮಣ್ಣ ಭಟ್ಟರಲ್ಲಿ ಕೃಷ್ಣ ಯುಜುರ್ವೇದ ಅಭ್ಯಾಸ. ಶ್ರೀ ಶಿವಾನಂದ ಸರಸ್ವತಿ ಶಿಗೆಹಳ್ಳಿ ಅವರ ಸನ್ಯಾಸ ದೀಕ್ಷೆ ಸಮಾರಂಭದ ಪೌರೋಹಿತ್ಯ ವಹಿಸಿದರು. ಕಡಬಾಳದ ಯಮುನಾ ಅವರನ್ನು ಮದುವೆಯಾಗಿ ನರಸಿಂಹ, ಯಜ್ಞನಾರಾಯಣ, ಮಹಾದೇವಿ, ದತ್ತಾತ್ರೇಯ, ದಕ್ಷಿಣಾಮೂರ್ತಿ, ರಾಮಚಂದ್ರ, ಗಂಗಾ ಒಟ್ಟು 7 ಮಕ್ಕಳನ್ನು ಪಡೆದರು ಹಾಗೂ ಅಗ್ನಿಹೋತ್ರವನ್ನು ಶುರು ಮಾಡಿದರು. ಸೋಮಯಾಗ ಯಜ್ಞವನ್ನು ಪೂರೈಸಿ ತಿಮ್ಮಣ್ಣ ದಿಕ್ಷಿತ್ ಎನಿಸಿಕೊಂಡರು. ಚಾತುರ್ಮಾಸ ಯಾಗ ಮತ್ತು ನಕ್ಷತ್ರ ಯಾಗಗಳನ್ನೂ ನೆರವೇರಿಸಿದರು. 30ನೆ ವಯಸ್ಸಿನಲ್ಲಿ ದತ್ತಮಂದಿರವನ್ನು ಸ್ತಾಪಿಸಿದರು. ಶ್ರೀಧರ ಸ್ವಾಮೀ ಮತ್ತು ಇತರರಿಗೆ ಸನ್ಯಾಸ ದೀಕ್ಷೆ ಕೊಟ್ಟರು. ಶ್ರಾವಣ ಶುದ್ದ ಪಂಚಮಿ ಬುಧವಾರ 1873 ಶಕೆ (ಆಗಸ್ಟ್ 8 1951) ಔದಂಬರದಲ್ಲಿ ತಾವೇ ಸನ್ಯಾಸ ದೀಕ್ಷೆ ಸ್ವೀಕರಿಸಿ ಶ್ರೀ ನಾರಾಯಣಾನಂದ ತೀರ್ಥರಾದರು. ಟೆಂಬೆ ಮಹಾರಾಜ, ಅವಧೂತ ಸ್ವಾಮಿ, ಅಕ್ಕಲಕೋಟ ಮಹಾರಾಜ ಮುಂತಾದವರ ಒಡನಾಟ. ಔದಂಬರದಲ್ಲಿ ಶ್ರೀ ಗುರು ಶಿವಶಂಕರಾನಂದ ಆಶ್ರಮ ಸ್ಥಾಪನೆ. ದತ್ತಮಂದಿರ ಸ್ಥಾಪನೆ. ಮಾಘ ಬಹುಳ ಪಾಡ್ಯ 1889 ರಂದು ತಮ್ಮ 82ನೆ ವಯಸ್ಸಿನಲ್ಲಿ ಸಮಾಧಿ ಹೊಂದಿದರು. (ಗುರುವಾರ ಫೆಬ್ರವರಿ 15 1968)

ಪ್ರಕಾಶಕರ ನುಡಿ

ಮನುಷ್ಯನಿಗೆ ಮಾತ್ರ ಧರ್ಮವನ್ನು ಆಚರಿಸುವ ಸಾಮರ್ಥ್ಯವಿರುವುದು. ಧರ್ಮಾಚರಣೆಯಿಂದಲೇ ಒಬ್ಬ ವ್ಯಕ್ತಿಯು ಸುಂದರವಾದ ಬದುಕನ್ನು ತಾನು ಅನುಭವಿಸುವುದಲ್ಲದೆ, ತನ್ನ ಕುಟುಂಬ, ಸಮಾಜ, ದೇಶ ಹೀಗೆ ಎಲ್ಲವನ್ನು ಬೆಳೆಸಿ ಮೋಕ್ಷ ಸಾಧನೆ ಸಾಧ್ಯವಾಗುವುದು. ಧರ್ಮದ ಸ್ವರೂಪವನ್ನು ವೇದಗಳು, ಶಾಸ್ತ್ರಗಳು, ಉಪನಿಷತ್ತುಗಳು, ಪುರಾಣಗಳು ಮುಂತಾದವುಗಳಿಂದ ತಿಳಿಯಬಹುದಾಗಿದೆ. ಅನೂಚಾನವಾಗಿ ಧರ್ಮಾಚರಣೆ ಮುಂದುವರೆಸಲು ನಮ್ಮ ಪೂರ್ವಜರು ಎಲ್ಲ ಸ್ತರಗಳಲ್ಲಿ ವ್ಯಕ್ತಿ, ಕುಟುಂಬ, ಸಮಾಜ, ದೇಶ, ಹಾಗೂ ಎಲ್ಲ ಕಾಲದಲ್ಲಿ ಅಂದರೆ ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ, ಹುಟ್ಟಿದಾಗಿನಿಂದ ಸಾಯುವವರೆಗೆ ಮನುಷ್ಯನಾದವನು ಪಾಲಿಸಬೇಕಾದ ನಿಯಮಗಳನ್ನು ರೂಪಿಸಿದ್ದಾರೆ. ಈ ನಿಯಮಗಳು ಎಲ್ಲರಿಗೆ ಎಲ್ಲ ಕಾಲದಲ್ಲಿ ವ್ಯವಸ್ಥಿತವಾಗಿ ಸಿಗುವಂತಾಗಲು, ಸಮಾಜದ ಪ್ರತಿಯೊಬ್ಬನೂ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕುವಿಧದ ಪುರುಷಾರ್ಥಗಳನ್ನು ಪಡೆಯಬೇಕೆಂಬ ಸಂಕಲ್ಪದಿಂದ, ಮಠಮಾನ್ಯಗಳು, ಸಂಘ ಸಂಸ್ಥೆಗಳು, ದೇವಾಲಯಗಳು, ಸನ್ಯಾಸಿಗಳು, ಪುರೋಹಿತರು, ಅರ್ಚಕರು ಹೀಗೆ ಅನೇಕರನ್ನೊಳಗೊಂಡ ಸುಂದರವಾದ ವ್ಯವಸ್ಥೆಯನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುವುದೇ ಈ ಸಂಗ್ರಹದ ಉದ್ದೇಶ.

ಕೃಷ್ಣ ಯಜುರ್ವೇದ-ಬೋಧಾಯನೀಯ ಸ್ಮಾರ್ತ ಹವ್ಯಕ ಸಂಪ್ರದಾಯಸ್ಥ ಮನೆತನವಾದ ಓಣಿಕೈ ಕುಟುಂಬವು ಎಲ್ಲ ಧಾರ್ಮಿಕ - ವೈದಿಕ, ಹಬ್ಬ - ಹರಿದಿನಗಳು, ಹಿರಿಯರ ದಿನಗಳನ್ನು ಪೂರ್ವಜರು ಹಾಕಿಕೊಟ್ಟ ಪದ್ಧತಿಯಂತೆ ಅನೂಚಾನವಾಗಿ ನಡೆಸಿಕೊಂಡು ಬರುತ್ತಾ ಇದ್ದಾರೆ . ಅಪಾರ ಆಸ್ತಿಕ ಶಿಷ್ಯರನ್ನೂ ಕಾಲಮಾನಕ್ಕೆ ಅನುಗುಣವಾಗಿ ಅಲ್ಪಸ್ವಲ್ಪ ತಿದ್ದುಪಡಿಗಳೊಂದಿಗೆ ಮಾರ್ಗದರ್ಶಕ ಸ್ಥಾನದಲ್ಲಿ ನಿಂತು ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ನಮ್ಮ ಕುಟುಂಬದವರು ಹಾಗೂ ಶಿಷ್ಯರು, ಬೆಂಗಳೂರು, ಔದುಂಬರ, ಮುಂತಾದ ಊರುಗಳಲ್ಲಿ ನೆಲೆಸಿದ್ದಾರೆ. ಅಲ್ಲಿಯೂ ಧಾರ್ಮಿಕ, ವೈದಿಕ ಆಚಾರ ವಿಚಾರಗಳನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲವಾಗುವ ನಿಟ್ಟಿನಲ್ಲಿ, ಹಾಗೂ ಈ ಎಲ್ಲಾ ವಿಚಾರಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸುವತ್ತ, ಪ ಪೂ ನಾರಾಯಣಾನಂದ ತೀರ್ಥ ಪ್ರತಿಷ್ಠಾನವು ಶ್ರೀಮತಿ ಕಮಲಾ ದಕ್ಷಿಣಾಮೂರ್ತಿ ಗ್ರಂಥಮಾಲಿಕೆಯಡಿಯಲ್ಲಿ ಪ್ರಕಟಣಾ ಕಾರ್ಯದಲ್ಲಿ ತೊಡಗಿಸಿಕೊಂಡಿದೆ.

ಆಸಕ್ತ ಜನಸಾಮಾನ್ಯರಿಗೆ ಸರಳ ಕನ್ನಡಭಾಷೆಯಲ್ಲಿ, ಚಿಕ್ಕ ಚಿಕ್ಕ ಪ್ರಕಟಣೆಗಳ ಮೂಲಕ ಉಚಿತವಾಗಿ ಒದಗಿಸುವ ಉದ್ದೇಶ ಪ್ರತಿಷ್ಠಾನದ್ದು. ಪ್ರತಿಷ್ಠಾನದ ಈ ಸೇವಾ ಕಾರ್ಯದಲ್ಲಿ ವಿಷಯ ಸಂಗ್ರಹಣೆ, ಸಂಪಾದನೆ, ಕರಡು ಪರಿಷ್ಕರಣೆ, ವಿನ್ಯಾಸ ಹೀಗೆ ಹಲವು ಕೆಲಸಗಳಲ್ಲಿ ಸಲಹೆ, ಸಹಾಯ, ಸಹಕಾರ ನೀಡಿದ ನನ್ನ ತಮ್ಮ ಶ್ರೀ ಕೇಶವ, ಪತ್ನಿ ಶ್ರೀಮತಿ ಭಾಗೀರಥಿ, ಹಾಗೂ ಪ್ರತ್ಯಕ್ಷ-ಪರೋಕ್ಷವಾಗಿ ಪರಿಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು. ಆಸಕ್ತ ಆಸ್ತಿಕಲೋಕ ಸಹೃಯದಯರಾಗಿ ಸ್ವೀಕರಿಸಬೇಕೆಂದು ಕೋರಿದೆ.

ಪ್ರಕಾಶಕರು

"Sri Gurucharitra Padya"

Smt. Kamala Daxinamurthy Grantha Maalike

Axi – 12

Compiled by

Shridatta Dixit Onikai,
Bengaluru

First Print: 2021

Rights: Publisher

Price: Free

Publisher

Pa. Pu. Narayanananda Tirtha Pratistana (R)

No 431, ShriRaksha, 7th Main Road, ISRO Layout,
Bengaluru - 560111, Karnataka, Cell No. 9448242402,
Email: sddixit@outlook.com

ಶ್ರೀ ಗುರುಚರಿತ್ರ ಪದ್ಯ

ಶ್ರೀಮತಿ ಕಮಲಾ ದಕ್ಷಿಣಾಮೂರ್ತಿ ಗ್ರಂಥಮಾಲಿಕೆ

ಅಕ್ಷಿ – 12

ಸಂಪಾದನೆ

ಶ್ರೀದತ್ತ ದೀಕ್ಷಿತ ಓಣಿಕೈ, ಬೆಂಗಳೂರು

ಹಕ್ಕುಗಳು : ಪ್ರತಿಷ್ಠಾನದ ಅಧೀನದಲ್ಲಿವೆ

ಪ್ರಕಾಶಕರು

ಪ. ಪೂ. ನಾರಾಯಣಾನಂದ ತೀರ್ಥ ಪ್ರತಿಷ್ಠಾನ (ರಿ)

ಸಂ. 431, ಶ್ರೀರಕ್ಷಾ, 7ನೇ ಮುಖ್ಯ ರಸ್ತೆ, ಇಸ್ರೋ ಬಡಾವಣೆ, ಬೆಂಗಳೂರು-560111,

ಕರ್ನಾಟಕ, ದೂರವಾಣಿ : +91 94482 42402, sddixit@outlook.com

ಅನುಕ್ರಮಣಿಕೆ

ದತ್ತಾತ್ರೇಯರ ಪರಿಚಯ 4

ಪಾರಾಯಣ ಕ್ರಮ 7

ಅಧ್ಯಾಯ 1 9

ಅಧ್ಯಾಯ 2 17

ಅಧ್ಯಾಯ 3 31

ಅಧ್ಯಾಯ 4 37

ಅಧ್ಯಾಯ 5 43

ಅಧ್ಯಾಯ 6 50

ಅಧ್ಯಾಯ 7 62

ಅಧ್ಯಾಯ 8 74

ಅಧ್ಯಾಯ 9 82

ಅಧ್ಯಾಯ 10 86

ಅಧ್ಯಾಯ 11 91

ಅಧ್ಯಾಯ 12 100

ಅಧ್ಯಾಯ 13 110

ಅಧ್ಯಾಯ 14 123

ಅಧ್ಯಾಯ 15 127

ಅಧ್ಯಾಯ 16 135

ಅಧ್ಯಾಯ 17 147

ಅಧ್ಯಾಯ 18 152

ಅಧ್ಯಾಯ 19 158

ಅಧ್ಯಾಯ 20 167

ಅಧ್ಯಾಯ 21 177

ಅಧ್ಯಾಯ 22 185

ಅಧ್ಯಾಯ 23 191

ಅಧ್ಯಾಯ 24 196

ಅಧ್ಯಾಯ 25 .... *201*
ಅಧ್ಯಾಯ 26 .... *209*
ಅಧ್ಯಾಯ 27 .... *219*
ಅಧ್ಯಾಯ 28 .... *224*
ಅಧ್ಯಾಯ 29 .... *241*
ಅಧ್ಯಾಯ 30 .... *261*
ಅಧ್ಯಾಯ 31 .... *275*
ಅಧ್ಯಾಯ 32 .... *285*
ಅಧ್ಯಾಯ 33 .... *299*
ಅಧ್ಯಾಯ 34 .... *308*
ಅಧ್ಯಾಯ 35 .... *315*
ಅಧ್ಯಾಯ 36 .... *341*
ಅಧ್ಯಾಯ 37 .... *382*
ಅಧ್ಯಾಯ 38 .... *411*
ಅಧ್ಯಾಯ 39 .... *419*
ಅಧ್ಯಾಯ 40 .... *433*
ಅಧ್ಯಾಯ 41 .... *446*
ಅಧ್ಯಾಯ 42 .... *469*
ಅಧ್ಯಾಯ 43 .... *486*
ಅಧ್ಯಾಯ 44 .... *501*
ಅಧ್ಯಾಯ 45 .... *511*
ಅಧ್ಯಾಯ 46 .... *521*
ಅಧ್ಯಾಯ 47 .... *525*
ಅಧ್ಯಾಯ 48 .... *530*
ಅಧ್ಯಾಯ 49 .... *536*
ಅಧ್ಯಾಯ 50 .... *546*
ಅಧ್ಯಾಯ 51 .... *567*
ಅಧ್ಯಾಯ 52 .... *574*

ಅಧ್ಯಾಯ 53..*580*

ಆರತಿ..*591*

ದತ್ತಾತ್ರೇಯರ ಪರಿಚಯ

ದತ್ತಾತ್ರೇಯರು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಅವತಾರ. ತ್ರಿಮೂರ್ತಿಗಳು ತಮ್ಮನ್ನು ತಾವೇ ಋಷಿ ದಂಪತಿಗಳಾದ ಅತ್ರಿ ಮತ್ತು ಅನಸೂಯೆಯರಿಗೆ ಪುತ್ರನ ರೂಪದಲ್ಲಿ ಅರ್ಪಿಸಿದ್ದರಿಂದ ದತ್ತನೆಂದು ಕರೆಯಲ್ಪಡುತ್ತಾರೆ. ಅವರು ಅತ್ರಿಯ ಪುತ್ರ, ಹಾಗಾಗಿ "ಆತ್ರೇಯ"ನೆಂಬ ಹೆಸರು. ‘ದತ್ತ’ ಮತ್ತು ‘ಆತ್ರೇಯ’ ಎರಡು ಪದಗಳು ಸೇರಿದ ದತ್ತಾತ್ರೇಯ ಆಗಿದೆ. ದುರ್ವಾಸ ಮುನಿ ಮತ್ತು ಚಂದ್ರ ಇವರ ಸಹೋದರರು. ನಿಮಿ ಋಷಿ ಇವರ ಮಗ ಆದರೂ ಇವರು ಬ್ರಹ್ಮಚಾರಿಯೆಂದು ಹೇಳಲಾಗಿದೆ. ಈ ದತ್ತನಲ್ಲಿ ಚಂದ್ರ, ದುರ್ವಾಸರ ಅಂಶವೂ ಒಳಗೊಂಡಿತ್ತು. ಆದರಿಂದಲೇ ಇವರಿಗೆ ಮೂರು ಮುಖ, ಆರು ಕೈಗಳು. ಕೆಳಗಿನ ಕೈಗಳಲ್ಲಿ ಮಾಲೆ, ಕಮಂಡಲ, ಮಧ್ಯದ ಕೈಗಳಲ್ಲಿ ಡಮರು, ತ್ರಿಶೂಲ, ಮೇಲಿನ ಕೈಗಳಲ್ಲಿ ಗದಾ, ಚಕ್ರ, ಕಾವಿಬಟ್ಟೆಯನ್ನು ತೊಟ್ಟು, ಜಡೆ, ವಿಭೂತಿಗಳಿಂದ ಅಲಂಕೃತರಾಗಿದ್ದಾರೆ. ಅವರು ಹುಟ್ಟಿದ್ದು ಮಾರ್ಗಶೀರ್ಷ ಮಾಸದ ಹುಣ್ಣಿಮೆ. ಆ ದಿನದಂದೇ ಪ್ರತಿ ವರ್ಷ “ದತ್ತ ಜಯಂತಿ” ಆಚರಿಸುವರು. ದತ್ತಾತ್ರೇಯರ ಜೊತೆಇರುವ ಹಸುವೇ ಕಾಮಧೇನು, ಮರವೇ ಕಲ್ಪವೃಕ್ಷ, ನಾಯಿಗಳೇ ನಾಲ್ಕು ವೇದಗಳು. ಹೀಗೆ ದತ್ತಾತ್ರೇಯರ ಮೂರ್ತಿ ತ್ಯಾಗ, ಭಕ್ತಿ, ಜ್ಞಾನ, ಅನುಕಂಪಗಳ ಸಾಕಾರ ಮೂರ್ತಿಯಾಗಿದೆ. ನಮ್ಮ ದೇಶದ ನೈರುತ್ಯ ಭಾಗದಲ್ಲಿ ಗುಜರಾತ್ ರಾಜ್ಯದಲ್ಲಿರುವ ಸಹ್ಯಗಿರಿ ದತ್ತಾತ್ರೇಯರ ವಾಸಸ್ಥಾನವಾಗಿದೆ. ಇದು ರಮ್ಯವಾದ ಬೆಟ್ಟ ಪ್ರದೇಶ, ಅನೇಕ ಗವಿಗಳು, ಕಂದರಗಳು ಅಲ್ಲಿವೆ. ಹೆಮ್ಮರಗಳು ಬೆಳೆದು ನಿಂತಿವೆ. ಇಂಥ ಪ್ರಕೃತಿ ರಮ್ಯಸ್ಥಾನದಲ್ಲಿ ದತ್ತರ ಆಶ್ರಮ ಇದೆ.

ದತ್ತಾತ್ರೇಯರ ಮರು ಅವತಾರವೆನ್ನಲಾದ ಶ್ರೀಪಾದಶ್ರೀವಲ್ಲಭ ಸ್ವಾಮಿಯವರು, ಆಂಧ್ರಪ್ರದೇಶದ ಪಿಠಾಪುರಂನಲ್ಲಿ ಘಂಡಿಕೋಟ ಅಪ್ಪಲರಾಜು ಶರ್ಮ ಮತ್ತು ಸುಮತಿ ಬ್ರಾಹ್ಮಣ ದಂಪತಿಗಳಿಗೆ ಮೂರನೆಯ ಮಗನಾಗಿ ಕ್ರಿ. ಶ. 1320ರಲ್ಲಿ ಜನಿಸಿದರು. 8ನೇ ವರ್ಷಕ್ಕೆ ಉಪನಯನ ಮತ್ತು 16 ನೇ ವರ್ಷದಲ್ಲಿ ಸನ್ಯಾಸ ಸ್ವೀಕಾರ. ಕಾಶೀ, ಬದರಿನಾಥ, ಗೋಕರ್ಣ, ಶ್ರೀಶೈಲ, ಮುಂತಾದ ಕ್ಷೇತ್ರ ಸಂದರ್ಶನ

ಮಾಡಿ ಭಕ್ತರಿಗೆ ಉಪದೇಶ ನೀಡಿದರು. ಅನೇಕ ಲೀಲೆಗಳನ್ನು ತೋರಿ ತಮ್ಮ 30 ನೇ ವಯಸ್ಸಿನಲ್ಲಿ ಕುರುವಪುರ ಅಥವಾ ಕುರುಗಡ್ಡಿಯಲ್ಲಿ ಜಲಸಮಾಧಿ ಹೊಂದಿದರು. ಶ್ರೀ ಗುರುಚರಿತ್ರೆಯಲ್ಲಿ ಅದ್ಯಾಯ 5 ರಿಂದ 9 ರವರೆಗೆ ಶ್ರೀಪಾದಶ್ರೀವಲ್ಲಭರ ಜೀವನ, ಉಪದೇಶ, ಲೀಲೆಗಳ ವಿವರವಾದ ವರ್ಣನೆಯಿದೆ. ಶ್ರೀಪಾದಶ್ರೀವಲ್ಲಭರ ಸಮಕಾಲಿನರೂ ಶಿಷ್ಯರೂಆದ ಗೋಕರ್ಣದ ಶಂಕರ ಭಟ್ಟರು ಸಂಸ್ಕೃತದಲ್ಲಿ ರಚಿಸಿದ 53 ಅಧ್ಯಾಯಗಳ "ಶ್ರೀಪಾದಶ್ರೀವಲ್ಲಭ ಚರಿತಾಮೃತ" ಸಂಪೂರ್ಣವಾಗಿ ಶ್ರೀಪಾದಶ್ರೀವಲ್ಲಭರಿಗೆ ಮುಡಿಪಾದ ಗ್ರಂಥ. ಶ್ರೀಪಾದಶ್ರೀವಲ್ಲಭ ಮಹಾ ಸಂಸ್ಥಾನ ಪೀಠಾಪುರಂ ಅವರು ಈ ಗ್ರಂಥವನ್ನು ಈಗ ಕನ್ನಡ, ತೆಲಗು, ಮರಾಠಿ ಭಾಷೆಗಳಲ್ಲಿ ಉಪಲಬ್ಧವಾಗಿಸಿದ್ದಾರೆ.

ದತ್ತಾತ್ರೇಯರ ಮರು ಅವತಾರವೆನ್ನಲಾದ ಶ್ರೀ ನರಸಿಂಹ ಸರಸ್ವತಿ ಸ್ವಾಮಿಯವರು ನೆಲೆಸಿರುವ ಕ್ಷೇತ್ರವೆ ಕರ್ನಾಟಕದ ಭೀಮಾ ಹಾಗೂ ಅಮರ್ಜಾ ನದಿಗಳ ಸಂಗಮ ಶ್ರೀಕ್ಷೇತ್ರ ಗಾಣಗಾಪುರ. ಶ್ರೀ ಗುರುಚರಿತ್ರದಲ್ಲಿ ವರ್ಣಿತವಾಗಿರುವಂತೆ ಶ್ರೀ ನರಸಿಂಹ ಸರಸ್ವತಿ ಸ್ವಾಮಿಯವರ ಜೀವನದ ಮುಖ್ಯ ಘಟನೆಗಳು ಕೆಳಗಿನಂತಿವೆ,

ಶಕೆ 1300 (1378 ಇಸವಿ): ಹುಟ್ಟು ಲಾಡ್-ಕರಂಜ, ಮಹಾರಾಷ್ಟ್ರ

ಶಕೆ 1307 (1385 ಇಸವಿ): ಉಪನಯನ

ಶಕೆ 1308 (1386 ಇಸವಿ): ಮನೆ ಬಿಟ್ಟರು

ಶಕೆ 1310 (1388 ಇಸವಿ): ಸನ್ಯಾಸ ಸ್ವೀಕಾರ

ಶಕೆ 1338 (1416 ಇಸವಿ): ಲಾಡ್-ಕರಂಜಗೆ ಹಿಂದಿರುಗಿದರು

ಶಕೆ 1340 (1418 ಇಸವಿ): ಗೋದಾವರಿ ನದೀ ದಡದಲ್ಲಿ ಸಂಚರಿಸಿದರು

ಶಕೆ 1342 (1420 ಇಸವಿ): ಪಾರ್ಲಿ ವೈಜನಾಥದಲ್ಲಿ ವಾಸ

ಶಕೆ 1343 (1421 ಇಸವಿ): ಸಾಂಗ್ಲಿಯ ಭಿಲವಡಿ ಹತ್ತಿರದ ಔದುಂಬರದಲ್ಲಿ ವಾಸ

ಶಕೆ 1344-1356 (1422-1434 ಇಸವಿ): ಕೊಲ್ಹಾಪುರದ ನರಸೊಬವಾಡಿಯಲ್ಲಿ ವಾಸ

ಶಕೆ 1357-1380 (1435-1458 ಇಸವಿ): ಗುಲಬರ್ಗಾದ ಗಾಣಗಾಪುರದಲ್ಲಿ ವಾಸ

ಶಕೆ 1380 (14 January 1459 ಇಸವಿ): ಶ್ರೀಶೈಲ ಪರ್ವತಗಳಲ್ಲಿ ನಿಜಾನಂದಗಮನ

ಶ್ರೀ ಗುರುಚರಿತ್ರೆಯು ತ್ರಿಮೂರ್ತಿ ಸ್ವರೂಪನಾದ ದತ್ತಾತ್ರೇಯ ಮತ್ತು ಅವರ ಅವತಾರಗಳಾದ ಶ್ರೀಪಾದಶ್ರೀವಲ್ಲಭರು, ಶ್ರೀ ನೃಸಿಂಹ ಸರಸ್ವತಿ ಯತಿಗಳ ಜೀವನ ವರ್ಣನೆ, ಉಪದೇಶಗಳು, ಆದೇಶಗಳು ಅಲ್ಲದೇ ಹಲವು ಪೌರಾಣಿಕ ಕಥೆಗಳನ್ನು ಒಳಗೊಂಡ ಒಂದು ಪವಿತ್ರ ಗ್ರಂಥ. ಮೂಲ ಗೃಂಥವನ್ನು 15ನೇ ಶತಮಾನದಲ್ಲಿ ಮರಾಠಿ ಭಾಷೆಯಲ್ಲಿ ಶ್ರೀ ಸರಸ್ವತಿ ಗಂಗಾಧರರು ರಚಿಸಿದರು. ಇವರ ಊರು ಈಗಿನ ಕರ್ನಾಟಕ ರಾಜ್ಯದ ಕಲಬುರ್ಗಿ ಜಿಲ್ಲೆಯ ಕಡಗಂಚಿ. ಶ್ರೀ ವಾಸುದೇವಾನಂದ ಸರಸ್ವತೀ ಸ್ವಾಮೀಯವರು ಸಂಸ್ಕೃತಕ್ಕೆ ಭಾಷಾಂತರಿಸಿದರು. ನಿಪ್ಪಾಣಿಯ ಗುರುಚರಣ ಸದ್ಭಕ್ತ ಶ್ರೀ ವಿಷ್ಣುಶರ್ಮರಿಂದ ಮರಾಠಿಯಲ್ಲಿ ರಚಿತವಾದ ಗ್ರಂಥವನ್ನು ಶ್ರೀ ರಾ. ರಾ. ರಾಘವೇಂದ್ರ ಸುಬ್ಬರಾವ ಮೂಡಕಟ್ಟಿ ಅವರು ಕನ್ನಡಕ್ಕೆ ಅನುವಾಸಿದರು. 53 ಅಧ್ಯಾಯಗಳ ಶ್ರೀ ಗುರುಚರಿತ್ರೆಯನ್ನು ಜ್ಞಾನ ಕಾಂಡ (ಅಧ್ಯಾಯ 1 ರಿಂದ 24), ಕರ್ಮ ಕಾಂಡ (ಅಧ್ಯಾಯ 25 ರಿಂದ 37), ಭಕ್ತಿ ಕಾಂಡ (ಅಧ್ಯಾಯ 38 ರಿಂದ 53), ಎಂದು ವಿಭಾಗಿಸಲಾಗಿದೆ. ವೇದಗಳ ಮಹಾವಾಕ್ಯಗಳಾದ (1) ಪ್ರಜ್ಞಾನಮ್ ಬ್ರಹ್ಮ "Pure awareness is Brahman" (2) ತತ್ವಮಸಿ "That thou art" (3) ಅಯಮಾತ್ಮಾ ಬ್ರಹ್ಮ "The self of mine is verily Brahman" (4) ಅಹಂ ಬ್ರಹ್ಮಾಸ್ಮಿ "I am verily the Brahman" ತತ್ವಗಳನ್ನು ಅತ್ಯಂತ ಸರಳವಾಗಿ ಸಾಧಕರಿಗೆ ವಿವರಿಸಲಾಗಿದೆ. ಗಾಣಗಾಪುರ ಕ್ಷೇತ್ರದಲ್ಲಿ ನಾಮಧಾರಕನೆಂಬ ಭಕ್ತನಿಗೆ ದತ್ತಾತ್ರೇಯರು ಸಿದ್ಧಮುನಿಯ ರೂಪದಲ್ಲಿ ಬಂದು ಶ್ರೀ ಗುರುಚರಿತ್ರೆಯನ್ನು ವರ್ಣಿಸಿ, ಅನುಗ್ರಹಿಸಿದರೆಂಬಂತೆ ಈ ಗ್ರಂಥದಲ್ಲಿ ಬಿಂಬಿತವಾಗಿದೆ.

ಪಾರಾಯಣ ಕ್ರಮ

ಈ ಪುಸ್ತಕವನ್ನು ದತ್ತಾತ್ರೇಯರ ಪವಿತ್ರ ಪ್ರಸಾದವೆಂದು ಪರಿಗಣಿಸಿ ಅದರಲ್ಲಿಯೇ ತಿಳಿಸಿದ ನಿಯಮಗಳನ್ನು ಅನುಸರಿಸಿ ಓದಬೇಕು. ಏಳು ದಿನಗಳಲ್ಲಿ ಓದುವ ಕ್ರಮನ್ನು "ಪಾರಾಯಣ ಸಪ್ತಾಹ" ಎನ್ನುತ್ತಾರೆ. ಅಲ್ಲದೆ 3, 2, 1, ದಿನದಲ್ಲಿ ಓದುವ ಕ್ರಮವೂ ರೂಢಿಯಲ್ಲಿದೆ. ಪಾರಾಯಣ ಸಪ್ತಾಹವನ್ನು ಗುರುವಾರ ಪ್ರಾರಭಿಸಬೇಕು. ಮೊದಲನೆಯ ದಿನ ಅಧ್ಯಾಯ 1 ರಿಂದ 9, ಎರಡನೆಯ ದಿನ ಅಧ್ಯಾಯ 10 ರಿಂದ 21, ಮೂರನೆಯ ದಿನ ಅಧ್ಯಾಯ 22 ರಿಂದ 29, ನಾಲ್ಕನೆಯ ದಿನ ಅಧ್ಯಾಯ 30 ರಿಂದ 35, ಐದನೆಯ ದಿನ ಅಧ್ಯಾಯ 36 ರಿಂದ 38, ಆರನೆಯ ದಿನ ಅಧ್ಯಾಯ 39 ರಿಂದ 43, ಮತ್ತು ಏಳನೆಯ ದಿನ ಅಧ್ಯಾಯ 44 ರಿಂದ 53, ಕ್ರಮದಲ್ಲಿ ಓದಬೇಕು. ಮೂರು ದಿನದ ಪಾರಾಯಣ ಕ್ರಮದಲ್ಲಿ ಮೊದಲನೆಯ ದಿನ ಜ್ಞಾನಕಾಂಡ (ಅಧ್ಯಾಯ 1 ರಿಂದ 24), ಎರಡನೆಯ ದಿನ ಕರ್ಮಕಾಂಡ (ಅಧ್ಯಾಯ 25 ರಿಂದ 37), ಮೂರನೆಯ ದಿನ ಭಕ್ತಿಕಾಂಡ (ಅಧ್ಯಾಯ 38 ರಿಂದ 53), ಗಳನ್ನು ಓದಬೇಕು. ಪ್ರತಿದಿನ ಮುಂಜಾನೆ ತಲೆಸ್ನಾನಮಾಡಿ, ದಿನನಿತ್ಯದ ಅನುಷ್ಠಾನಗಳನ್ನು ಮುಗಿಸಿ ಉಪಾಹಾರ ಸೇವಿಸದೆ, ಒಂದು ನಿರ್ಧಿಷ್ಟ ಜಾಗದಲ್ಲಿ, ಉತ್ತರ ಅಥವಾ ಪೂರ್ವ ದಿಕ್ಕಿಗೆ ಮುಖಮಾಡಿ, ಚಾಪೆ/ಮಣೆಯ ಮೇಲೆ ಕುಳಿತು ಓದಬೇಕು. ಪ್ರತಿನಿತ್ಯ ಅದೇ ಸ್ಥಾನದಲ್ಲಿ ಪಾರಾಯಣ ಮಾಡಬೇಕು. ಎದುರಿಗೆ ಇನ್ನೊಂದು ಮಣೆ ಅಥವಾ ಪೀಠದ ಮೇಲೆ ಶ್ರೀ ಗುರುಚರಿತ್ರ ಗ್ರಂಥದ ಜೊತೆ ದತ್ತಾತ್ರೇಯರ ಭಾವಚಿತ್ರ ಜೋಡಿಸಿಕೊಳ್ಳಿ. ಪ್ರತಿದಿನ ಪಾರಾಯಣ ಪ್ರಾರಂಭದಲ್ಲಿ ವಿಘ್ನನಿವಾರಕ ಗಣಪತಿಯ ಧ್ಯಾನಮಾಡಿ, ದತ್ತಾತ್ರೇಯರಿಗೆ ಮತ್ತು ಗ್ರಂಥಕ್ಕೆ ಹೂ ಗಂಧ ಅಕ್ಷತೆ ಧೂಪ ದೀಪ ನೈವೇದ್ಯ ಆರತಿಯೊಂದಿಗೆ ಪಂಚೋಪಚಾರ ಪೂಜೆ ಸಲ್ಲಿಸಿರಿ. ಪ್ರತಿದಿನದ ನಿಗದಿತ ಅಧ್ಯಾಯಗಳನ್ನು ನಿರಂತರವಾಗಿ ಗಟ್ಟಿಯಾಗಿ ಓದಿ ಮುಗಿಸಬೇಕು. ಪ್ರತಿದಿನ ಪಾರಾಯಣದ ಕೊನೆಯಲ್ಲಿ ಇನ್ನೊಮ್ಮೆ ಪಂಚೋಪಚಾರ ಪೂಜೆ ಸಲ್ಲಿಸಿರಿ.

ಸಪ್ತಾಹದ ಅವಧಿಯಲ್ಲಿ ಮಧ್ಯಾಹ್ನ ಒಂದೇ ಹೊತ್ತು ಊಟ ಮಾಡಬೇಕು. ರಾತ್ರಿ ಹಾಲು/ಹಣ್ಣು ಅಥವಾ ಉಪಹಾರ ಸೇವನೆ ಮಾಡಬೇಕು. ಯಾವುದೇ ಸಭೆ, ಸಮಾರಂಭ, ಬಂಧುಗಳ ಮನೆಭೇಟಿ, ಪರಾನ್ನ ಮಾಡಬಾರದು. ಮನೆಗೆಬಂದ ಅತಿಥಿಗಳನ್ನು ಆದರಿಸಿ ಸತ್ಕರಿಸಬೇಕು. ಭಿಕ್ಷುಕರನ್ನು ಬರಿಗೈಲಿ ಕಳಿಸಬಾರದು. ಗ್ರಂಥವನ್ನು ನೆಲದಮೇಲೆ ಇಡಬಾರದು. ಬ್ರಹ್ಮಚರ್ಯ ಮತ್ತು ಶಾಖಾಹಾರ ಪಾಲಿಸಿರಿ. ಮುಕ್ತಾಯದ ದಿನ, ಬಂಧು ಮಿತ್ರರೊಂದಿಗೆ ಬ್ರಾಹ್ಮಣ ಸುವಾಸಿನಿ ಕೌಮಾರಿಕೆಯರ ಪೂಜೆ ಸಂತರ್ಪಣೆ, ದಕ್ಷಿಣೆ ಸಹಿತ ವಸ್ತ್ರ ದಾನ ಏರ್ಪಡಿಸಬೇಕು. ಅದು ಸಾಧ್ಯವಾಗದಿದ್ದಲ್ಲಿ ಅದೇ ಮೊತ್ತವನ್ನು ದತ್ತಾತ್ರೇಯ ದೇವಸ್ಥಾನಕ್ಕೆ ಸಮರ್ಪಿಸಿ.

****

ಅಧ್ಯಾಯ 1

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ॥

॥ ಶ್ರೀ ಗುರುಚರಿತ್ರ ಪ್ರಾರಂಭ ॥

॥ ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ । ಗುರುರೇವ ಪರಬ್ರಹ್ಮ ತಸ್ಮೈ ಶ್ರೀಗುರುವೆ ನಮಃ ॥

(ಭಾಮಿನೀ ಷಟ್ಪದಿ)

ಧೀರಗುರುವರ ಕರುಣಪಾರಾ- । ವಾರ ದೈತ್ಯಕುಠಾರ ಭಕ್ತ ಘ- । ನಾರವಿಂದದಿವಾಕರ ಸ್ಥಿತಿಕಾರಣನುದಾರಾ ॥
ಚಾರುಚರಣಸರೋಜ ಮಧುವೆಂ- । ಟಾರರಲಿ ದುರ್ಲಭ ಸುಭದ್ರಾ- । ಕಾರ ಕೃತಿಗೀ ಮಂಗಲವ ಕೊಡು ದತ್ತಗುರುರಾಯಾ ॥1॥

ರಾಜನನು ದಂಡಿಸಿದ ನೀತಿ ಪ- । ರಾಜಯವನೋಡಿಸುವ ಕೀರ್ತಿ ಜ- । ರಾಜನಿತರಿಂಗಿರುವ ಭೀತಿಯ ಗಿರಿಗೆ ವಜ್ರಪತಿ ॥
ಭೋಜನಪ್ರಿಯಪಕ್ಷ ಪಾದಾಂ- । ಭೋಜಭಕ್ತರವಶ್ಯ ಸುರನರ- । ಭೋಜಯಾನ್ವಿತ ಘೋಷ ಮಂಗಲವೀಯೊ ವಿಘ್ನೇಶಾ ॥2॥

ವಂದಿಸುವೆ ನಾನಿನ್ನ ಗಿರಿಜಾ- । ನಂದನನೆ ಗಜವದನ ವಿಘ್ನ-। ವೃಂದಸಂಹಾರಕನೆ ವಿಘ್ನೇಶನೆ ದಯಾನಿಧಿಯೇ ॥
ಮಂದಮತಿ ನಾ ಗುರುಚರಿತ್ರವ । ಕುಂದನಿಲ್ಲದೆ ಬಣ್ಣಿಸುವ ತೆರ । ದಿಂದ ಮತಿಯೆನಗಿತ್ತು ಸಲಹೈ ಭಕ್ತವತ್ಸಲನೆ ॥3॥

ಕೈಯ ನುಡಿಸುವ ವೀಣೆ ಪೂಸಿದ । ಮೈಯಗರುವಾಸನೆ ಮನೋಹರೆ । ಬಾಯ ನುಡಿಪ ಪ್ರವೀಣೆ ಹೆಜ್ಜೆಯನಿಡಲು ಮದದಾನೆ ॥
ಆಯತಾಂಬಕಿ ಜಾಣೆಯಮರರ । ರಾಯವಂದಿಪ ಚರಣೆ ಮನ್ಮನ । ದಾಯತವ ನಾಪಡೆಯೆನೇ ಎನಗೊಲಿದಿರಲು ನೀನೇ ॥4॥

ನಿನ್ನ ಚರಣವ ಪಿಡಿದೆ ಶಾರದೆ । ಯೆನ್ನ ಜಿಹ್ವೆಯ ಮೇಲೆ ನಲಿದೀ । ಸನ್ನುತ ಶ್ರೀ ಗುರುಚರಿತ್ರವ ನುಡಿಸು ಕವಿತೆಯಲಿ ॥
ಎನ್ನ ಗುರು ನರಹರಿ ಸರಸ್ವತಿ । ಯನ್ನು ವಂದಿಪೆ ನಿನ್ನ ಹೆಸರಿನ । ಸನ್ನುತಾತ್ಮನ ಸಕಲವಿದ್ಯಾನಿಧಿಯ ಗುರುವರನಾ ॥5॥

ಹರಿಹರ ಬ್ರಹ್ಮಾದಿಗಣನಾ । ಚರಣಯುಗಳವ ಸ್ಮರಿಸಿ ಮುಂದೀ । ಗುರುಚರಿತ್ರದ ಕಥನದಲಿ ಮಂಗಲವ ಕೊಡಲೆನುತಾ ॥
ಪರಮಭಕ್ತಿ ಪುರಸ್ಸರದಿ ನಾ । ಕರಗಳನು ಜೋಡಿಸುತ ವಂದಿಪೆ । ಶರಣ ವತ್ಸಲರಿಹರು ಯೆನ್ನನು ಬಿಡುವರೇ ಬರಿದೆ ॥6॥

ಆದಿಕವಿ ವಾಲ್ಮೀಕಿ ಭಾರತ । ವೇದವೆಂತಾ ಕೀರ್ತಿ ಪಡಿಸಿದ । ಬಾದರಾಯಣ ಗುರುವರನ ಪಾದಗಳ ವಂದಿಸುತಾ ॥
ಸಾದರದಿ ಶುಕಶೌನಕರ ಸೂ । ತಾದಿಪುಣ್ಯಚರಿತ್ರವನು ನಾ । ಭೇದವಿಲ್ಲದೆ ವಂದಿಪೆನು ನಾರದಮುನೀಶ್ವರನಾ ॥7॥

ಜ್ಞಾನಿಗಳು ಮೆಚ್ಚುವ ತೆರದೋಳ- । ಜ್ಞಾನಿಗಳು ತಲೆದೂಗುವಂದದಿ । ಸಾನುರಾಗದಿ ಗೀತೆಯನು ಪ್ರಾಕೃತ ಮನುಷ್ಯರಿಗೆ ॥
ಪಾಪವನು ಮಾಡಿಸಿದ ವೇದವ । ಕೋಣಮುಖದಿಂದಲಿ ವದಿಸಿದ ಮ । ಹಾನುಭಾವ ಶಿರೋಮಣಿ ಜ್ಞಾನೇಶ್ವರಗೆ ವಂದೇ ॥8॥

ಗುರುಚರಣ ಸದ್ಭಕ್ತಿ ಮಹಿಮೆಯ । ನರಿಯರೈ ಪಾಮರರು ಭವಸಾ । ಗರದಿ ಮುಳುಗುತ ತೇಲಿ ತಾಪತ್ರಯದಿ ಬಳಲುವರು ॥
ಮರೆತು ತರುಣೋಪಾಯವನು ಬಹು । ತೆರದಿ ಬಳಲುವ ಮಾನವರಿಗೀ । ಪರಿಯ ಸುಲಭೋಪಾಯ ಪೇಳ್ವೆನು ಗುರುಚರಣ ಭಕ್ತಿ ॥9॥

ಮರೆತು ಗುರುಭಕ್ತಿಯನು ನಾನೀ । ವರೆಗೆ ತಾಪತ್ರಯವನುಂಡೆನು । ಗುರುಚರಿತ್ರವನೋದಿ ತಾಪತ್ರಯವ ಜಯಿಸಿದೆನು ॥
ನರರೆ ಯೆನ್ನೀಯನುಭವವ ಕೇ- । ಳಿರಿ ಸದಾ ನಿಮಗದುಭುತದ ನುಡಿ । ಯರಿಯಿರೈ ಸಟಿಯಲ್ಲ ಪರಮಾನಂದ ಮಯವಹುದು ॥10॥

ಎನಗೆ ಸದ್ಗುರುಭಕ್ತಿ ಸಕ್ಕರೆ । ಯುಣಿಸಿದನು ನಿಪ್ಪಾಣಿಯೂರಿನ । ವಿನುತಚರಿತನು ವಿಷ್ಣುಶರ್ಮನು ದತ್ತಸೇವಕನು ॥
ಅನುಮತಿಯ ಕೊಡಲವನು ತತ್ಕಥೆ । ಯನು ವಿನೋದದಿ ಕನ್ನಡಿಸುವೆನು । ಎನಗೆ ಗುರುವಾಕ್ಯವೇ ಪ್ರಮಾಣವು ಭೇದವೇನಿದಕೆ ॥11॥

ವತ್ಸಗೋತ್ರದಿ ಜನಿಸಿದೆನು ಸಾ । ರಸ್ವತರ ಶಾಖೆಯಲಿ ಹುಟ್ಟಿದ । ಸುಸ್ವಭಾವದ ದಾಸಪನ ಮಗ ಸುಬ್ಬರಾಯನಿಗೆ ॥
ವತ್ಸತನವೆನಗಾಯ್ತು ನಾಲ್ಕನೇ । ಯಾಶ್ವಲಾಯನಶಾಖೆ ರಾಮನ । ಸದ್ವಿನುತಧ್ಯಾನದಲಿ ರತನೈ ಪಿತನು ಸನ್ನುತನು ॥12॥

ಗುರುವಿನಗಣಿತ ಗುಣಗಳನ್ನು ವಿ- । ಸ್ತರಿಸಲಾರೆನು ಪಾಮರನು ನಾ । ನಾರಿಯೆ ನಿಗಮಾಗಮಕೆ ಸಾಧ್ಯವೆ ಬಣ್ಣಿಸಲು ಗುರುವಾ ॥
ಗರುಡನಂದದಿ ಹಾರಲೆತ್ನಿಪ । ಕಿರಿದು ಗುಬ್ಬಿಯ ತೆರದಿ ಕೇಳ್ದಾ । ಪರಮ ಹಾಸ್ಯಾಸ್ಪದಕೆ ಗುರಿಯಾಗಿಹೆನು ಮನವರಿಯೆ ॥13॥

ವ್ಯಾಕರಣ ಛಂದಸ್ಸು ಶಾಸ್ತ್ರವ । ನಾಕಲಿಯದೀ ಕೃತಿಯನೆತ್ನಿಪೆ । ಸಾಕುಬೇಕೆಂದೆನುವವನು ನಾನೆತರವನಿನ್ನು ॥
ಯಾಕೆ ಯೆನಗಂಜಿಕೆಯು ಗುರುವರ । ನೇ ಕರುಣದಿಂ ಬೆಂಬಲಕ್ಕಿರ । ಲಾಕರುಣದಿಂ ಹೆಳವ ಮೇರುವನೇರನೇ ನಿಜದಿ ॥14॥

ಕಲಿಯುಗದಿ ಭಾವಸಾಗರಕೆ ಬಹು । ಸುಲಭ ತರಣೋ ಪಾಯವಿಹುದದು । ತಿಳಿಯಬೇಕಿದು ವೇದವಾಕ್ಯವು ಸಿದ್ಧಮಾತ್ರೆಯಿದು ॥
ಇಳೆಯೊಳಗೆ ಪಾಮರರು ತಿಳಿಯದೆ । ಹಲವು ತೆರದಲಿ ಬಳಲುವವರೀ । ಯೊಲಿದು ಸದ್ಗುರು ಭಕ್ತಿಸಕ್ಕರೆ ಸ್ವಾದಿಸಿರಿ ಮುದದಿ ॥15॥

ಗುರುಚರಿತ್ರಾಮೃತವ ಸೇವಿಸು । ವರಿಗೆ ರೋಗವದೆಲ್ಲಿ ಯಮ ಕಿಂ । ಕರರ ಭೀತಿಯದೇಕೆ ಸುತಧನಧಾನ್ಯ ಸಂಪತ್ತು ॥
ಮೆರೆಯುತಿಹುದಾ ಭವನದಲಿ ತ । ದ್ಗುರುಚರಿತ್ರದ ಪಠಣಮಾತ್ರದಿ । ನರರೆ ಶುದ್ಧಮನಸ್ಸಿನಲ್ಲಿ ಭಕ್ತಿಯಲಿ ವಾಚಿಸಿರಿ ॥16॥

ಗುರುಚರಿತ್ರದ ಗ್ರಂಥವನ್ನಾ । ದರದಿ ಪೂಜಿಸಿ ಮನೆಯೊಳಿಟ್ಟರೆ । ಪರಿಹರಿಸುವುದು ಭೂತಪ್ರೇತಾದಿಗಳ ಭಾಧೆಯನು ॥
ನಿರತ ಭಕ್ತಿಯಲೋದಿ ಪೂಜಿಸಿ । ದರೆ ಸಕಲ ಪುರುಷಾರ್ಥ ಸಾಧನ । ಪರಮ ಲಕ್ಷ್ಮಿಯ ವಾಸವಪ್ಪುದು ಬಂಧಮೋಚನವು ॥17॥

ನಾನು ಪಾಮರನೆನ್ನ ನುಡಿಯನು । ಮಾನವಿಲ್ಲದೆ ಪಾಮರತ್ವದಿ । ಹೀನವಿಹುದೇ ? ಕಬ್ಬು ಡೊಂಕಾಗಿರಲು ಸವಿ ಡೊಂಕೇ ? ॥
ಮೀನಚಿಪ್ಪೆಯೊಳಾಗೆ ಮುತ್ತಿಗೆ । ಹೀನತನ ಬರುತಿಹುದೆ ನೀವು ಮ । ಹಾನುಭಾವರು ನೋಡಿರೈ ಪರಿಕಿಸಿರಿ ಯೀನುಡಿಯಾ ॥18॥

ಜೇನುಹುಳದೆಂಜಲವೆನುತ್ತಲಿ । ಜೇನುತುಪ್ಪವ ತ್ಯಜಿಸ ಬಾರದು । ನಾನಿರಲು ಸಾಮಾನ್ಯನೆನ್ನಯ ನುಡಿಯದಸಮಾನ್ಯ ॥
ಮಾನಿಸಿರಿ ಸದ್ಭಾವ ಭಕ್ತಿಯೊ । ಳೇನಸಾಧ್ಯವು ದತ್ತ ಭಕ್ತ ರಿ । ಗೇನ ಹೇಳಲಿ ಸರ್ವ ಸಿದ್ಧಿಗಳವರ ವಶವಹರು ॥19॥

ಎರಡನೆಯ ವೈಕುಂಠವೆಂದೀ । ಧರೆಯೊಳಗೆ ಪೆಸರಾದ ಗಾಣಗ । ಪುರವು ರಂಜಿಸುತಿಹುದು ಮುಕ್ತಿಯ ಸುಲಭ ಸೋಪಾನಾ ॥
ಶರಣರಿಗೆ ಸುರಧೇನು ದೈತ್ಯದ । ಗಿರಿಗೆ ವಜ್ರಾಯುಧವು ನಾಮ । ಸ್ಮರಣ ಭಕ್ತಿಯ ಬೀಡು ತಾಪತ್ರಯಕೆ ಕಾಳ್ಗಿಚ್ಚು ॥20॥

ನಾರಸಿಂಹ ಸರಸ್ವತಿಯು ಯೀ । ಚಾರು ಸುಕ್ಷೇತ್ರದಲಿ ವಾಸಿಸಿ । ಭಾರಮಹಿಮಾಕೀರ್ತಿಯಾಯಿತು ಜಗದಿ ಪಸರಿಸಿತು ॥
ಧಾರುಣಿಯ ಸದ್ಭಕ್ತ ಮಂಡಳ । ಸೇರಿ ತತ್ ಕ್ಷೇತ್ರದಲಿ ಪಡೆವರು । ಚಾರು ಕಾಮಿತಫಲವ ಸುರತರುವಾಯಿತಾಸ್ಥಾನ ॥21॥

ಧರೆಯೊಳೀ ಪುಣ್ಯಪ್ರತಾಪದ । ಪುರಕೆ ಯಾತ್ರೆಯ ಮಾಡಿ ಸದ್ಗುರು । ಚರಣ ದರ್ಶನಮಾತ್ರದಲಿ ಕಾಮಿತವ ಪಡೆಯುವರು ॥
ದೊರೆಯುವುದು ನಿಧಿ ನಿರ್ಧನಗೆ ಸಂ । ದರುಶನದಿ ಸಂತಾನ ಬಂಜೆಗೆ । ದೊರೆಯುವುದು ನರರಿಗೆ ಮಹಿಮೆಯದುಭುತವು ॥22॥

ಈ ಮಹಿಮೆಯನು ಕೇಳಿ ಭಕ್ತನು । ನಾಮಧಾರಕನೋರ್ವ ಗಾಣಗ । ಸೀಮೆಗತಿ ಭಕ್ತಿಯಲಿ ಗುರುದರ್ಶನಕೆ ನಡೆತಂದು ॥
ಸ್ವಾಮಿದರ್ಶನಕಾತುರನು ತಾ । ನೇಮವನು ಮಾಡಿದನು ದರ್ಶನ । ವಾಮಹಾತ್ಮನು ದತ್ತರಾಜನು ಕೊಡಲು ಬೇಕೆನುತಾ ॥23॥

ಗುರುವೆ ನೀ ದರ್ಶನವ ಕೊಡದಿ । ದ್ದರೆ ಜನುಮ ಬೇಕಿಲ್ಲ ಯೇನಗಿಂ । ತೊರೆವೆನ್ನೈ ನಾನೀಗ ಪಂಚಪ್ರಾಣವನು ನಿಜದಿ ॥
ಮರೆಯ ಬೆಡೈಯನ್ನ ಬಡವನ । ಕರೆದು ಮುಂದಕೆ ಹರಸು ನಿನ್ನಯ । ವರದಹಸ್ತದೊಳೆನ್ನ ನಾಶೀರ್ವದಿಸು ಪ್ರೀತಿಯಲಿ ॥24॥

ನಿನ್ನ ಚರಣವ ತೋರಿಸೈ ಸಂ । ಪನ್ನ ಮೂರುತಿ ನೀನು ಲೋಹವ । ಚಿನ್ನ ಮಾಡುವ ಪರಿಸ ನಿನ್ನಯ ನಾಮ ಕೀರ್ತನವು ॥
ಅನ್ನವನು ತ್ಯಜಿಸುವೆನು ದರ್ಶನ । ವನ್ನು ಕೊಡಬೇಕೈ ದಯಾನಿಧೆ । ನಿನ್ನ ಹೊರತೆನಗಿಲ್ಲ ಬೇರಿನ್ನಾರು ಮೂಜಗದಿ ॥25॥

ದೀನನೆನ್ನ ನುಪೇಕ್ಷಿಸಿದರಿ । ನ್ನೇನ ಮಾಡಲಿ ನಾನು ಭಕ್ತರ । ಮಾನಿ ನೀನಿರಲೆನಗೆಯಂಜಿಕೆ ಯಾತಕೀ ಜಗದಿ ॥
ದೀನ ಭಕ್ತನ ಕಂಡು ನಿನಗಭಿ । ಮಾನವಿದ್ದರೆ ದೈನ್ಯ ಹರಿಸುವೆ । ಮಾನನಿಧಿಗಳು ನಿನಗೆ ದೋಷವ ಕೊಡದೆ ಬಿಡರಿನ್ನು ॥26॥

ಗುರುವ ಕಾಣದೆ ನಾಮಧಾರಕ । ಮರುಗಿದನು ನಾನಾ ಪ್ರಕಾರದಿ । ಪರಿಪರಿಯೋಳಾಲಾಪಗೈದನು ಸ್ತುತಿಸಿ ಗುರುಪದವಾ ॥
ಗುರುವೆ ಮೂರ್ತಿತ್ರಯ ವೆನುತ್ತಲಿ । ಪರಿಪರಿಯೊಳಾವೇದ ನುಡಿವುದು । ಗುರು ನೃಸಿಂಹಸರಸ್ವತಿಯುಯೀಕಲಿಯೋಗದೊಳೆನುತಾ ॥27॥

ಗುರುವೆ ಕರುಣಾ ಸಿಂಧು ಭಕ್ತರ । ಗುರುವೆ ಸಾರಥಿ ತ್ರಿಗುಣ ಮೂರ್ತಿಯೆ । ಪರಮ ಮಂಗಲಧಾಮ ಸದ್ಗುರು ಭಕ್ತ ರಕ್ಷಕನು ॥
ಗುರುವೆ ಅಂತಃ ಕರಣ ಶುದ್ಧಿಯ । ನರಿಯೆ ಭಕ್ತಿಯ ತಿಳಿಯೆ ನಿನ್ನಯ । ಚರಣ ಕಮಲಕೆ ಶಿರವ ಬಾಗಿಸಿ ನಮಿಪೆ ನೊಲಿ ಯೆನಗೆ ॥28॥

ಬಾರೊ ಶ್ರೀಗುರುರಾಯ ಕರುಣವ । ತೋರೊ ಯೆನ್ನಯ ಮೇಲೆ ಕೂಸನು । ದೂರ ಬಿಸುಡುವ ತಾಯಿ ಇರುವಳೆ ನೀದಯಾನಿಧಿಯೆ ॥
ಯಾರು ಕಾಯ್ವರು ನಿನ್ನ ಹೊರತಿ । ನ್ನಾರು ಜಗದೊಳಗಿಹರು ನೀ ಕೈ । ವಾರಿ ಭಕ್ತರಿಗಿನ್ನು ತಾಯ್ತಂದೆಗಳು ನೀನೆನಗೆ ॥29॥

ನೀನೆ ನಿಜ ಸಖ ಬಂಧುಬಳಗವು । ನೀನು ಕುಲದೈವತವು ಯೆನ್ನಯ । ದೀನತನದಲಿ ನಿನ್ನ ಭಜಿಪೆನು ಸರ್ವಕಾಲದಲಿ ॥
ಮಾನಿಸದೆ ನೀನೆನ್ನ ನೀಪರಿ । ತಾನುಪೇಕ್ಷಿಸಲೀಗ ಮುಂದಿ । ನ್ನೇನು ಹಾದಿಯ ತೋರಿಸುವರಾರಿಹರು ಭೂಮಿಯಲಿ ॥30॥

ನೀದಯಾನಿಧಿ ವಿಶ್ವಪಾಲಕ । ನಾದಿ ಮೂರುತಿ ಶರಣರಕ್ಷಕ । ಸಾದರದಿ ವಂದಿಪೆನು ದೇವರದೇವ ನೀನಿಜವು ॥
ಈ ಧರೆಯೊಳನ್ಯರನು ಕಾಣೆನು । ಹೇ ದಯಾನಿಧಿ ನೀನೆ ದಾತಾ ಭೇದಭಾವವ ಮರೆತು ಯೆನ್ನನು ಕಾಯೊ ಸರ್ವಜ್ಞ ॥31॥

ನಿನಗೆ ನಾ ಸರ್ವಜ್ಞನೆಂದೀ । ವಿನಯದಲಿ ಸಂಭೋದಿಸಿದೆನ್ನೈ । ಯೆನಗೆ ತೋರದು ವಿಹಿತವೆಂದೀ ಹೆಸರು ನಿನಗಿನ್ನು ॥
ನಿನಗೆ ತಿಳಿಯದು ಯೆನ್ನ ದೀಸ್ಥಿತಿ । ಯೇನಲು ನೀ ಸರ್ವಜ್ಞನೆಂಬೀ । ಘನತರದ ಹೆಸರನ್ನು ಬಿಡು ವಂಚಿಸದೆ ಭಕ್ತರನು ॥32॥

ಬಾಲಕನು ನಾನಜ್ಞ ನಿನ್ನಯ । ಲೀಲೆಯನು ನಾನರಿಯೆ ತಾಯಿಯ । ಮೇಲೆ ಪ್ರೀತಿಯನಿಡುವ ತನಯನ ಬಿಡುವಳೇ ತಾಯಿ ॥
ಘೋಳಿಡುವೆ ನೀಪರಿಯೊಳಗೆ ನಾ । ನೇಳು ಪಾಲಿಸು ದಯೆಯೋಳೆನ್ನಯ । ಹೇಳು ನಿರ್ದಯನಾದೆ ಯೆನ್ನಯ ಮೇಲೆ ನೀನೇಕೆ ॥33॥

ದಾನ ಮಾಡದೆ ಮಾನ ಸಿಗದೀ । ಮಾನವಂಗೀಗಾದೆಮಾತನು । ನೀನು ಪಾಲಿಸುತಿಹರೆ ಪೇಳಾಪರಿಯೊಳಗೆ ಯೆನಗೆ ॥
ದಾನವನು ಮಾಡಿದ ಬಲಿಗೆ ನೀ । ನೇನ ಮಾಡಿದೆ ಲಂಕೆಪಡೆದಾ । ದಾನವನು ಮಾಡಿಹನೆ ಲಂಕಾದಾನವನು ಹಿಂದೆ ॥34॥

ತರಳ ಧ್ರುವನಿಗೆ ಪ್ರೀತಿಯಲಿ ನೀ । ಸ್ಥಿರ ಪದವಿಯನು ಕೊಟ್ಟು ಸಲಹಿದೆ । ತಿರುಗಿಯಾ ಧ್ರುವನೇನು ಕೊಟ್ಟನು ನಿನಗೆ ಪ್ರೀತಿಯಲಿ ॥
ಧರಣಿಯನು ನಿಃಕ್ಷತ್ರ ಮಾಡೀ । ಧರಣಿ ದಾನವ ದ್ವಿಜರಿಗಿತ್ತೀ । ಮರಳಿ ಭೂಸುರರೇನು ಕೊಟ್ಟರು ಪೇಳು ನಿಜವಾಗಿ ॥35॥

ಜಗಕೆ ನೀ ಪೋಷಕನು ರಕ್ಷಕ । ನಗಣಿತದ ಲೀಲಾವತಾರಿಯು । ನಗುವುದೀ ಜಗವೆಲ್ಲ ನಿನಗಾಂ ದಾನ ಮಾಡಿದರೆ ॥
ಮುಗುದೆ ಲಕ್ಷ್ಮಿಯು ನಿನ್ನ ಮನೆಯಲಿ । ಸುಗುಣರೂಪದ ದಾಸಿಯಿದಕಿಂ । ಮಿಗಿಲು ಕೊಡುವರೆ ಶಕ್ಯವೇ ಯೀಪಾಮರಗೆ ತಿಳಿಯೆ ॥36॥

ತಾಯಿ ತನ್ನಯ ಕೂಸನೆತ್ತುತ । ಬಾಯೊಳಗೆ ಮೊಲೆಯುಣಿಸುವಳು ಮೇಣ್ । ತಾಯಿಗಾ ಬಾಲಕನು ಕೊಟ್ಟನೆ ಪಾರಿತೋಷಕವಾ ॥
ತೋಯವಂಬರ ಸುರಿಯುವುದು ಮೇ । ಣೀಯುವರು ತಾವಾರು ಮೇಘಕೆ । ಜೀಯ ಕೊಟ್ಟರೆ ಕೊಡುವವರು ದಾತಾರರೆನಿಸುವರೆ ॥37॥

ಕೊಡಲು ನೀನಿಚ್ಛಿಸಿದರಿನ್ನೇ । ನಡಚಣಿಯು ನಿನಗಿರುವುದೇ ತಾ । ಪೊಡವಿಗಳು ಹದಿನಾಲ್ಕು ನಿನ್ನವು ನಿನ್ನದೇ ವಿಶ್ವಾ ॥
ಕೊಡಲು ಸಂಶಯ ಬರುವುದೇ ನಿ । ನ್ನಡಿಯ ಸೇವೆಯ ಮಾಡಲಾರದೆ । ಕೊಡಲು ಬಾರದೆನುತ್ತ ಮನದೊಳಗಿದ್ದರದ ಹೇಳು ॥38॥

ಸೇವೆಯನು ಮಾಡಲ್ಕೆ ಕೊಡಲದು । ಸೇವಕನ ವೇತನವದಾಯಿತು । ಯಾವನ್ಯೆ ಮನ್ನಿಪನದನು ದಾತೃತ್ವ ಲಕ್ಷಣದಿ ॥
ಬಾವಿನದಿಯು ಸರೋವರಂಗಳು । ಯಾವತರದಲಿ ಮೇಘರಾಜನ । ಸೇವೆಮಾಳ್ಪವು ಮೇಘರಾಜನು ಜಗದ ದಾತಾರಾ ॥39॥

ನೀದಯಾನಿಧಿಯೆಂದು ಜಗದಲಿ । ಬೋಧಿಪವು ವೇದಾದಿಗಳು ಬಹು । ಬಾಧೆಯಪ್ಪುದು ನಿನ್ನ ಬಿರುದಿಗೆ ದುಡಿಸಿ ಕೊಡುವವಗೆ ॥
ಬೇಧವಿಲ್ಲದೆ ಯೆನ್ನ ಪೂರ್ವಜ । ರಾದರದಿ ಸೇವೆಯನು ಮಾಡಿಹ । ರೇದಯಾನಿಧಿ ಯೆನ್ನ ದಯೆಯಲಿ ಕಾಯೋ ಗುರುರಾಯಾ ॥40॥

ಜನುಮಜನುಮಾಂತರದಿ ನಿನ್ನಯ । ವಿನುತ ಸೇವೆಯ ದೊರೆಯ ಬೇಕೆಂ । ದೆನುತ ವಿಜ್ಞಪ್ತಿಯನು ಮಾಡುವೆ ಕರವ ಜೋಡಿಸುತಾ ॥
ಎನಗೆ ನೀ ಋಣಕೊಟ್ಟು ಋಣಮೋ । ಚನವ ಮಾಡಿಸು ದೇವನಿನ್ನಯ । ಗಣತಿಯನು ಮಾಡುವರೆ ಸಾಧ್ಯವೆ ಭಕ್ತಿ ಕೊಡು ಎನಗೆ ॥41॥

ಬಾರದ್ಯೆ ನಿನಗಿನ್ನು ಕರುಣವು ತೋರುವುದು ಬಹುಕಠಿಣ ನಿನ್ನಯ । ಕ್ರೂರವಂತಃಕರಣವನು ಕರಗಿಸುವ ಪರಿಯೆಂತು ॥
ಸೇರದೀ ಗುಣ ನಿನಗೆ ದ್ಯೆತ್ಯಕು । ತಾರನಾಗಲು ಬೇಕು ಯೀಪರಿ । ತೋರಬಾರದು ಕಠಿಣತೆಯ ಸೇವಕಗೆ ಭಕ್ತನಿಗೆ ॥42॥

ಚರಣ ಸೇವೆಯ ಭಕ್ತನಿಗೆ ನೀ । ಕರುಣ ತೋರಿಸಲಾರದಿದ್ದರೆ । ಬರಿದೆ ದೂಷಣ ಕೊಡುವರ್ಯೆ ಜಗದೊಳಗೆ ಮಾನವರು ॥
ಪರಿಪರಿಯೋಳೀಮಾತನಾಡಿದೆ । ಶರಣವತ್ಸಲ ನೀನು ಅಂತಃ । ಕರಣಪೂರ್ವಕ ನೋಡು ದಾಸನ ನಿನ್ನ ಬಾಲಕನಾ ॥43॥

ಬಾಲತನದಜ್ಞಾನದಲಿ ನಾ । ಶೀಲವಿಲ್ಲದೆ ನಿನಗೆ ಯೀಪರಿ । ಪೇಳಿದೆನು ನಿಜ ಕೋಪಿಸಲು ನೀ ಯೋಗ್ಯವೇ ನಿನಗೆ ॥
ಆಲಿಸ್ಯೆ ಸಿಟ್ಟಿನಲಿ ತಾಯನು । ಬಾಲಕನು ಮ್ಯೆಮರೆತು ಬ್ಯೆದರೆ । ತಾಳಲಾರಳೆ ತಾಯಿ ಮಗನನು ಮುದ್ದಿಸಳೆ ಮೇಣು ॥44॥

ತಂದೆ ಕೋಪದಿ ನೂಕಲಾ ಮಗು । ಬಂದು ತಾಯಿಗೆ ದೂರುವನು ಮುನಿ । ಸಿಂದ ತಾಯ್ ಕೋಪಿಸಲು ಬರುವನು ತಾತನಿದ್ದೆಡೆಗೆ ॥
ತಂದೆತಾಯಿಯು ನೀನು ಕೋಪಿಸ । ಲಿಂದು ಯೆನಗಿನ್ನಾರು ಗತಿ ನೀ । ಕಂದನಂದದಿ ಸಲಹೊ ಯೆನ್ನನು ದತ್ತಗುರುರಾಯಾ ॥45॥

ಏನು ನಿನಗಪರಾಧ ಮಾಡಿದೆ । ನೇನು ಕೊರತೆಯ ನೋಡಿ ಯೆನಗನು । ಮಾನ ಮಾಡುವೆ ನಿನ್ನ ಹೊರತಿನ್ನಾರು ಸಲಹುವರು ॥
ನೀನು ಯೆನ್ನೊಳು ಕೋಪಮಾಡಲು । ಕಾಣೆ ಮುಂದಿನ ಗತಿಯ ನೀನೇ । ಮಾನಿಸೆನ್ನಯ ದೀನವಾಣಿಯ ನೀನೆ ತಾಯ್ತಂದೆ ॥46॥

ಎನ್ನ ಕರುಣಾ ವಚನಗಳ ಕೇ । ಳ್ದಿನ್ನು ಕಲ್ಲಿಗೆ ಝರೆಯು ಪುಟ್ಟುವು । ದಿನ್ನು ನಿನಗೀ ದೀನಭಕ್ತನ ಕರುಣೆ ಬಾರದಲಾ ॥
ಬಣ್ಣ ಬಡುವೆನು ನಾನು ಗುಣಸಂ । ಪನ್ನನೀ ಕಂದೆರೆದು ನೋಡೈ । ಯಿನ್ನು ಬಣ್ಣಿಸಲಾರೆನೆಂದನು ನಾಮಧಾರಕನು ॥47॥

ಇಂತು ಸದ್ಗುರು ಚರಣ ಧ್ಯಾನಿಸಿ । ಚಿಂತಿಸುತ ಬಳಲಿದನು ಶಿಷ್ಯನು । ಬಂತು ಕರುಣೆಯು ಸದ್ಗುರುವಿಗಾ ಶರಣವತ್ಸಲಗೆ ॥
ಸಂತಸದಿ ಗುರುನಾಥ ಬಂದನು । ನಿಂತನೈ ಶಿಷ್ಯನಿಗೆ ಸನ್ಮುಖ । ವೆಂತು ಕರುವನು ಬಿಟ್ಟಿರುವುದೇ ಧೇನು ಮನವರಿಯೆ ॥48॥

ಕಂಡನಾ ಗುರುನಾಥ ಚರಣವ । ನುಂಡನೈ ಚರಣಾಬ್ಜರಸವನು । ದಂಡದಾಕಾರದಲಿ ವಂದಿಸಿದನು ಗುರುವಿನಡಿಗೆ ॥
ಮಂಡೆ ಕೂದಲಿನಿಂದ ಧೂಳಿಯ । ತಂಡವನು ಝಾಡಿಸಿದನವನಾ । ದಂಡಧಾರಿಯ ಪೂಜಿಸಿದನಾ ವಿಧಿ ಪುರಸ್ಸರದಿ ॥49॥

ಹೃದಯ ಸಿಂಹಾಸನದಿ ಗುರುವಿನ । ಪದಯುಗಳವನು ಸ್ಥಾಪಿಸಿದನಾ । ಸದಯ ಶಿಷ್ಯನು ರೋಮಪುಳಕದಿ ಗುರುವ ನೋಡಿದನು ॥
ಉದಯವಾದನು ಜ್ಞಾನಭಾಸ್ಕರ । ಹೃದಯತಿಮಿರ ವದೆತ್ತ ಪೋಯಿತೊ । ಸದಮಲಾಂತಃ ಕರುಣನೈ ಗುರು ವಿಷ್ಣುಮೂರ್ತಿಯಲಾ ॥50॥

॥ ಅಧ್ಯಾಯ 1 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 2

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಸರಸಿಜಾಸನ ರಚಿಸಿ ಸೃಷ್ಟಿಯ । ಪರಿಪರಿಯ ಯುಗಧರ್ಮ ಪೇಳ್ದನು । ಅರುಹಿದನು ಕಲಿರಾಜನಿಗೆ ಶ್ರೀ ಗುರುಮಹಾತ್ಮ್ಯೆಯನು॥

ರಾಜರಾಜೇಶ್ವರನೆ ನೀ ಗುರು । ರಾಜ ಕೃಷ್ಣಾತೀರವಾಸಿಯೆ । ಮೂಜಗದಿ ಭಕ್ತರಿಗೆ ಕಾಯುವ ಲೀಲೆಯಾಡುತಿಹೆ ॥
ರಾಜಿಸುವ ನಿನ್ನಯ ವಿಲಾಸವು । ಸೋಜಿಗವಲಾ ದೇವದೇವನೆ । ಈ ಜಗದ ಮಹಿಮೆಯನು ನೋಡುತ ಸುರರು ನಲಿಯುವರು ॥1॥

ಮರುಗುತೀಪರಿ ನಾಮಧಾರಕ । ತಿರುಗಿ ನಾನಾ ಹಾದಿಯಲಿ ಮೈ । ಮರೆತು ಮಲಗಿದನೊಂದು ವೃಕ್ಷಛಾಯೆಯಲಿ ಬಳಲಿ ॥
ಅರೆಮರೆವು ನಿದ್ರೆಯಲಿ ಸ್ವಪ್ನದ । ಪರಿಯ ನೋಡಿದನಮಮ ಯೋಗಿಯ । ಶಿರದಿ ಶೋಭಿಪ ಜಟೆಯ ಭಾಲದಿಭಸ್ಮಭೂಷಿತನಾ ॥2॥

ಉಟ್ಟಪೀತಾಂಬರದ ಶೋಭೆಯ । ದೃಷ್ಟಿ ಕರುಣಾರ್ದ್ರಿತದ ಕರದಿಂ । ಕೊಟ್ಟು ನಿರ್ಭಯ ಚಿಹ್ನೆಯನು ಶಿಷ್ಯನನು ಮುದ್ದಿಸುತಾ ॥
ಬಿಟ್ಟ ನಿದ್ರೆಯ ನಾಲ್ಕು ದಿಶೆಗಳ । ದಿಟ್ಟಿಸುತ ತಾನೆದ್ದು ಕುಳಿತನು । ಕಷ್ಟಬಟ್ಟನು ಸ್ವಪ್ನವನು ಯೋಚಿಸುತ ಮನದೊಳಗೆ ॥3॥

ಮುಂದೆ ನೋಡಲು ಹಾದಿಯಲಿ ತಾ । ನಂದುಸ್ವಪ್ನದ ಮೂರ್ತಿಯನು ಕ । ಣ್ಣಿಂದ ನೋಡಿದನಚ್ಚರಿಯಲಾ ಗುರುಮಹಿಮೆ ಜಗದಿ ॥
ಚಂದದಲಿ ನಮನವನು ಮಾಡಿದ । ನಿಂದಿಗಾನೇ ಧನ್ಯನೆಂದು । ಬಂದು ಕಾಲಿಂಗೆರಗಿ ಕೊಂಡಾಡಿದನು ಗುರುವರನಾ ॥4॥

ಜಯಜಯತು ಯೋಗೀಶ ಗುರುವರ । ಜಯಜಯತು ಜ್ಯೋತಿಪ್ರಕಾಶಕ । ಜಯಜಯತ್ವಜ್ಞಾನ ತಿಮಿರಕೆ ದಿವ್ಯ ಭಾಸ್ಕರನೆ ॥
ಜಯಜಯತು ಸದ್ಭಕ್ತ ವತ್ಸಲ । ಜಯಜಯತು ಕರುಣಾಬ್ಧಿ ದೇವನೆ । ಜಯಜಯತು ನಾ ಕಾಲಿಗೆರಗುವೆ ನುದ್ಧರಿಸೊಯನ್ನ ॥5॥

ನಿನ್ನ ದರುಶನದಿಂದ ಗುರುವರ । ಎನ್ನ ಪಾಪದ ರಾಶಿ ಸುಟ್ಟಿತು । ಸನ್ನುತಾನನ ನೀನು ಭವಸಾಗರಕೆ ತಾರಕನು ॥
ಧನ್ಯನಾನೇ ಮೂಜಗದಿ ಯೇನ । ಗಿನ್ನು ಕಾಣೆನು ಸರಿಯನೆನುತಲಿ । ಮನ್ನಿಸುತಲಾ ನಾಮಧಾರಕ ನೆರಗಿದನು ಪದಕೆ ॥6॥

ಆಗಮನವೆಲ್ಲಿಂದ ಗುರುವರ । ಯೋಗಿರಾಜನೆ ನಿನ್ನ ಹೆಸರನು । ಬೇಗ ಪೇಳೆನಗೀಗ ವಾಸಸ್ಥಾನವೆಲ್ಲಿಯದು ॥
ಹೀಗೆ ಕೇಳಲು ಶಿಷ್ಯ ರಾಜನು । ಯೋಗಿವರನಿಂತೆಂದನವನಿಗೆ । ಭಾಗ್ಯವೆನ್ನದು ಕೇಳು ಯೆನ್ನಯ ಗುರುಪರಂಪರೆಯಾ ॥7॥

ಧರೆಯೊಳಗೆ ಭೀಮಾನದಿಗೆ ಕೂ । ಡಿರುವುದೈ ನದಿಯಮರಜೆಯು ತ । ತ್ಪರಮ ಪಾವನ ಸಂಗಮದಿ ಗಂಧರ್ವಪುರವಿಹುದು ॥
ಶರಣವತ್ಸಲ ದತ್ತರಾಜನು । ವರನೃಸಿಂಹ ಸರಸ್ವತಿಯು ಬಹು । ಕರುಣದಿಂ ಭಕ್ತರನು ಸಲಹುವನಲ್ಲಿ ಲೀಲೆಯಲಿ ॥8॥

ಶರಣರಿಗೆ ಸುರಧೇನು ಸದ್ಗುರು । ಕರುಣಿಸುವನೈ ಪುತ್ರಪೌತ್ರರ । ನಿರತ ಧನಧಾನ್ಯಾದಿ ಸುಖಸಂಪತ್ತು ಭಕ್ತರಿಗೆ ॥
ಅರಿಯೆ ಸದ್ಗುರು ಭಕ್ತರಿಗೆ ತಾ । ತೊರೆಯುವದ ನಾ ಕಾಣೆ ದೈನ್ಯದ । ಪರಿಯನರಿಯರು ದತ್ತ ಪಾದಾಬ್ಜವನು ಸೇವಿಪರು ॥9॥

ನಾಮಧಾರಕ ಕೇಳು ಶಿಷ್ಯ ಶಿ । ರೋಮಣಿಯೆ ನಾ ಗಾಣಗಾಪುರ । ಸೀಮೆಯಲಿ ನರಹರಿಸರಸ್ವತಿ ಚರಣ ಸೇವೆಯಲಿ ॥
ಕಾಮಿತಾರ್ಥವ ಪಡೆದು ಮುಂದೀ । ಭೂಮಿಯಲಿ ತೀರ್ಥಾಟಣಂ ಗಳ ಕ್ಷೇಮದಿಂದಲಿ ಮಾಡಿ ತಿರುಗುವೆ ಗುರುಚರಣ ನೆನೆದು ॥10॥

ಇದನು ಕೇಳ್ದಾ ನಾಮಧಾರಕ । ಮುದದಿ ವಂದಿಸಿ ಕೇಳ್ದನವನಿಗೆ । ವಿದಿತವಾಗದು ಯೆನಗೆ ನಿನ್ನಯ ಮಾತು ನಿಜ ವಹುದೇ ? ॥
ಒದಗುತಿದೆ ತಾಪತ್ರಯವು ಯೆನ । ಗಿದು ಚಮತ್ಕಾರವು ಕಣಾ ಗುರು । ಪದವ ವಂಶಪರಂಪರೆ ಯಲರ್ಚಿಸುವರಿಗೆ ದಿಟದಿ ॥11॥

ಇಂತು ಕೇಳ್ದಾ ನಾಮಧಾರಕ । ಚಿಂತೆಯಿಂ ನಿಟ್ಟುಸಿರ ಬಿಟ್ಟನು । ಬಂತು ಕರುಣೆಯು ಭಕ್ತವರದಗೆ ಯೋಗಿರಾಜನಿಗೆ ॥
ಶಾಂತತನದಲಿ ಶಿಷ್ಯನನು ಬಹು । ಸಂತವಿಟ್ಟನು ವರದಹಸ್ತದಿ । ಸಂತಸದಿ ಬಿಗಿದಪ್ಪಿ ಕೊಂಡಾಡಿದನು ಗುರುಮಹಿಮೆ ॥12॥

ಗುರುಕೃಪಾ ಛತ್ರವುತಲೆಯ ಮೇ । ಲಿರಲು ತಾಪತ್ರಯದ ಬಿಸಿಲಿಗೆ । ಬರಿದೆ ಬೆದರುವರಾರು ದೈನ್ಯವು ತಟ್ಟುವುದೇ ಮರುಳೆ ॥
ಗುರುಚರಣದಲಿ ನಿನ್ನ ಭಕ್ತಿಯ । ಪರಿಯ ಕಂಡೆನು ಸಂಶಯಾತ್ಮಕ । ವಿರಲು ಫಲಿಸದು ಭಾವ ದೃಢ ವಿರಬೇಕು ಗುರುವಿನಲಿ ॥13॥

ಹರಿಯು ತ್ರಿಪುರಾರಿಗಳು ಮುನಿದರೆ । ಗುರುವು ರಕ್ಷಿಪ ಭಕ್ತಜನರನು । ಗುರುವು ಕೋಪಿಸಲು ಕಾಯ್ವರ ಕಾಣೆ ಮೂಜಗದಿ ॥
ಗುರುವೆ ತ್ರೈ ಮೂರ್ತಿಗಳು ನೋಡಾ । ಗುರುವೆ ಸಕಲಾ ಭೀಷ್ಟಸಾಧನ । ಗುರುಚರಣ ಭಕ್ತಿಯಲಿ ಧೃಢತೆಯ ತೋರಿಸೈ ನೀನು ॥14॥

ಸಿದ್ಧನೀಪರಿ ಬೋಧಿಸಲ್ಕಾ । ಶುದ್ಧಮನದಲಿ ನಾಮಧಾರಕ । ಸದ್ವಿನುತ ಯೋಗೀಶನಿಗೆ ವಂದಿಸುತ ಕೇಳಿದನು ॥
ಇದ್ದರಿದಕಾಧಾರವಾವುದು । ಬುದ್ಧಿವಂತನೆ ಯಾರ ವಚನವು । ಸಿದ್ಧನೇ ತ್ರೈಮೂರ್ತಿಗಳು ಗುರುವಾದ ಪರಿ ಹೇಗೆ ॥15॥

ಕರುಣದಿಂದಲಿ ಕೇಳಿ ಯೋಗೀ । ಶ್ವರನು ಮಹದಾನಂದದಿಂದಲಿ । ಮರಳಿ ಶಿಷ್ಯನಿಗೆಂದ ಭಾಗ್ಯನಿಧಿಯೇ ಕೇಳಿನ್ನು ॥
ಅರಿಯುವಂದದೊಳುಸುರುವೆನು ಕೇ । ಳಿರದೆ ನಾನೀ ಪೇಳ್ವ ವಾಕ್ಯವು । ಪರಮ ವೇದಕೆ ಸಮ್ಮತವಲಾ ಪರಿಕಿಸಲು ಮನದಿ ॥16॥

ಪುಟ್ಟಿದವು ವೇದಗಳು ನಾಲ್ಕಾ । ಸೃಷ್ಟಿ ಕರ್ತನ ಬ್ರಹ್ಮ ಮುಖದಲಿ । ಪುಟ್ಟಿದವು ಹದಿನೆಂಟು ಮೇಲೆ ಪುರಾಣಗಳು ಜಗದಿ ॥
ಇಷ್ಟು ಪೌರಾಣದಲಿ ಕೀರ್ತಿಯ । ಪಟ್ಟ ವೈಪರ್ತಕ ಪುರಾಣದಿ । ಶಿಷ್ಟಸಮ್ಮತ ವಾಕ್ಯವಿದನೀ ಕೇಳು ಭಕುತಿಯಲಿ ॥17॥

ದ್ವಾಪರಾಂತದಿ ವಿಷ್ಣುಮೂರ್ತಿಯು । ತಾಪಸಾಕೃತಿ ಧರಿಸಿ ಪ್ರೇಮದೊ । ಳಾಪುರಾಣಂಗಳನು ವೇದವ್ಯಾಸ ರಚಿಸಿದನು ॥
ಈ ಪರಿಯೋಳಾಕೀರ್ತಿ ಪಡೆದಿಹ । ತಾಪರಹಿತ ಪುರಾಣಗಳನಾ । ಲೋಪಮಾಡದೆ ಪೇಳ್ವೆ ಬ್ರಹ್ಮನು ಕಲಿಗೆ ಪೇಳಿದುದಾ ॥18॥

ಗುರುನುಡಿಗಳನು ಕೇಳ್ದು ಶಿಷ್ಯನು । ಚರಣಕಭಿವಂದಿಸುತ ನಯದಲಿ । ಗುರುಕಥಾಮೃತವೃಷ್ಟಿ ಯಿಚ್ಛಿಪ ಚಾತಕನ ತೆರದಿ ॥
ಮರಳಿ ಕೇಳ್ದನು ನೀನು ಭವಸಾ । ಗರಕೆ ತಾರಕನಹುದು ಯಾಕಿ । ನ್ನರುಹು ಬ್ರಹ್ಮನು ಕಲಿಗೆ ನುಡಿದನು ಕಾರಣವದೇನು ॥19॥

ಗುರುವಿದನು ಕೇಳಿದನು ಶಿಷ್ಯನು । ಪರಮಚೌಕಸನೆಂದು ಹಿಗ್ಗುತ । ಲರುಹಿದನು ಪೌರಾಣಕಥೆಯನು ಮನಹರಿಸುವಂತೆ ॥
ತರಳ ಕೇಳಾದಿಯಲಿ ಜಲಮಯ । ಧರಣಿಯಿತ್ತರೊಳಗೆ ತೇಲುತ । ಲಿರ ವುದಾವಟಪತ್ರವದರಲಿ ವಿಷ್ಣುಮೂರ್ತಿಯದು ॥20॥

ವ್ಯಕ್ತವಾಗದೆ ಶಯನಮಾಡಿ ಸ । ಮಸ್ತ ಸೃಷ್ಟಿಯ ರಚನೆಯನು ತಾ । ನುತ್ತಮಾಂಗನು ಮನಕೆ ತಂದನು ನಾಭಿಕಮಲವನು ॥
ಮತ್ತೆ ಸೃಷ್ಟಿಸಿ ನಾಭಿಕಮಲದಿ । ಕತ್ತರಿಸಿ ಬ್ರಹ್ಮನನು ಪುಟ್ಟಿಸಿ । ಯಿತ್ತನೈ ಯಾಜ್ಞೆಯನು ಸೃಷ್ಟಿಯ ಪುಟ್ಟಿಸೆನುತಾಗ ॥21॥

ನೋಡಲಾವಿಧಿ ನಾಲ್ಕು ದಿಶೆಯನು । ಮೂಡಿದವು ಮೋರಗಳು ನಾಲುಕು । ಪಾಡು ಯಾರೆನಗೀಗ ಲೆನುತಲೆ ಯುಬ್ಬಿದನು ಮನದಿ ॥
ನೋಡಿದನು ಶ್ರೀವಿಷ್ಣು ಬ್ರಹ್ಮನ । ಗೂಢ ಗರ್ವಕೆ ನಕ್ಕು ಮನದಲಿ । ಬೇಡ ನಿನಗೆ ವಿಚಾರವಿದು ಸೃಷ್ಟಿಯನು ಸೃಜಿಸೆಂದಾ ॥22॥

ಜಡಜನಾಭನ ನುಡಿಯ ಕೇಳುತ । ಲಡಿಗೆ ವಂದಿಸಿ ಜಡಜಸಂಭವ । ನುಡಿದನಜ್ಞನು ನಾನು ವಿಶ್ವವ ಸೃಜಿಪ ಪರಿಯರಿಯೆ ॥
ಕೊಡಲು ನೀ ಜ್ಞಾನವನು ನಾನೀ । ಸಡಗರದೊಳದರಂತೆ ಮಾಳ್ಪೆನು । ನಡೆನುಡಿಯ ನೀ ಗರುವನೆಂದನು ವಿಧಿಯು ವಿಷ್ಣುವಿಗೆ ॥23॥

ಕೇಳುತಾ ವಚನವನು ಶ್ರೀಹರಿ । ತಾಳಿ ಸಂತಸ ಮನದಿ ನಿನಗನು । ಕೂಲವಾಗಿಹ ವೇದ ನಾಲ್ಕನು ಕೊಡುವೆನಿದರಂತೆ ॥
ಮೇಲೆ ಸೃಷ್ಟಿಯ ರಚಿಸು ಕನ್ನಡಿ । ಯೋಲು ನಿನಗೆಲ್ಲವು ಸದಾ ಸಂ- । ಭಾಳಿಸುವದದು ಭೀತಿ ನಿನಗೇಕೆಂದನಾ ಹರಿಯು ॥24॥

ವಿರಚಿಸಿದನಾ ಬ್ರಹ್ಮ ಸೃಷ್ಟಿಯ । ಪರಿಪರಿಯೋಳಾ ಸ್ವೇದಜಾಂಡಜ । ವರಾಜರಾಯುಜ ವುದ್ಭಿಜಾದಿಗಳನ್ನು ಸಂತಸದಿ ॥
ವಿರಚಿಸಿದನಾ ಸ್ಥಾವರಂಗಳ । ನಿರದೆ ಜಂಗಮ ಜಂತುಗಳ ಪರಿ । ಪರಿಯ ಸೃಷ್ಟಿಯ ಯಕ್ಷರಾಕ್ಷಸ ಕಿನ್ನರಾದಿಗಳಾ ॥25॥

ಯುಗಚತುಷ್ಟಯ ಸೃಷ್ಟಿಸಿದನೀ । ಜಗಕೆ ಕೃತತ್ರೇತ ದ್ವಾಪರ । ಯುಗವ ನಾಲ್ಕನೆ ಕಲಿ ಯೆನುತ್ತಲಿ ನಾಮಗಳನಿಟ್ಟು ॥
ಯುಗಗಳೆಲ್ಲರು ತಮ್ಮ ಗುಣಧ । ರ್ಮಗಳ ಪರಿಯಲಿ ಬಂದು ಬ್ರಹ್ಮಗೆ । ಮುಗಿದು ಕೈಗಳ ಬಿನ್ನಯಿಸಿದರು ವಿನಯಯುತರಾಗಿ ॥26॥

ಕೃತಯುಗದ ಲಕ್ಷಣವ ಪೇಳ್ವೆನು । ಸತತ ಸತ್ಯವ್ರತನು ಸಾತ್ವಿಕ । ನತಿವಿರಕ್ತ ಜ್ಞಾನಿ ಯಜ್ಞೋಪವೀತಧಾರಣನು ॥
ಸತತ ರುದ್ರಾಕ್ಷವನು ಧರಿಸುತ । ಕ್ಷಿತಿಯೊಳಗೆ ಚಿರಕಾಲವನು ಕಳೆ । ಯುತಲಿ ನೀ ಹಿಂತಿರುಗಿ ಸಂತಸದಿಂದ ಬಾರೆಂದಾ ॥27॥

ಎರಡನೆಯ ತ್ರೇತಾ ಯುಗಕೆ ವಿಧಿ । ಕರೆದು ಪೇಳಿದ ಕೇಳು ನಂತರ । ಧರಣೀಯಲಿ ನೀಪೋಗಿ ರಂಜಿಸಬೇಕು ಮನವರಿಯೆ ॥
ಕರದಿ ಕುಶಸಮಿಧಾದಿ ಯಜ್ಞದ । ಪರಿಕರವ ತಾನಾಂತು ಕರ್ಮದ । ಪರಿಯ ಬೋಧಿಸಿ ಯಜ್ಞಯಾಗವ ನಡಿಸಿದನು ಮುದದಿ ॥28॥

ದ್ವಾಪರಕೆ ಕರೆತಂದು ಜಂಬೂ- । ದ್ವೀಪಕಾನಂತರದಿ ಕಳುಹಿದ । ಪಾಪಪುಣ್ಯದರಾಶಿ ಸಮನಿಸಿ ಬಂತು ದ್ವಾಪರವು ॥
ಕೋಪ ನಿಷ್ಠುರ ಶಾಂತಿ ದಯೆಯು ಸ- । ಮಾಪಕರ್ಷದಿ ತೋರಿ ವರ್ತಿಸಿ- । ತೀಪರಿಯಲದು ಖಡ್ಗ ಬಾಣ ಧನುಷ್ಯಗಳ ಧರಿಸಿ ॥29॥

ಕಲಿಯುಗವು ಬಂತದರ ನಂತರ । ನಲಿನಲಿದು ನಾಲ್ದೆಶೆಯ ನೋಡುತ । ಲಳಿದ ತೇಜದ ಗಳಿತ ಪ್ರೇಮದ ಕೀಳು ಮುಸುಡಿನಲಿ ॥
ಕಲಹ ದ್ವೇಷವ ಕೂಡಿ ಜಿಹ್ವೆಯ । ಬಲದ ಕೈಯಲಿ ಹಿಡಿದು ಲಿಂಗವ । ನುಳಿದ ಕೈಯಲಿ ಹಿಡಿದು ಹಲ್ಲನು ಕಿಸಿದು ನಸುನಗುತಾ ॥30॥

ಮೋರೆ ನೋಡೆ ಪಿಶಾಚನಂದದೊ । ಘೋರೆ ನೋಡುತ ಬೀಳುತೇಳುತ । ದೂರದಿಂದಲಿ ಪಾಪಪುಣ್ಯಕೆ ಸ್ತುತಿಸಿ ಬೈಯುತಲಿ ॥
ಚಾರುತರದೀ ಲಕ್ಷಣಂಗಳ । ತೋರಿದನು ವಿಧಿ ಕೇಳಿದನು ಮುದ । ವೇರಿ ಕಲಿಯುಗ ಪೇಳ್ದನುತ್ತರ ಬ್ರಹ್ಮದೇವನಿಗೆ ॥31॥

ಧರಣೀಯಲಿ ಕೇಳೆನ್ನ ರಾಜ್ಯವ । ನಿರತ ಸಂಸ್ಥಾಪಿಸುವೆನಂಜಿಕೆ । ಯಿರದೆ ಜಯಿಸುವೆ ಸರ್ವರನು ನಾ ಹಿಡಿವೆ ಪಾಶದಲಿ ॥
ನರರ ಜಿಹ್ವಾಲಿಂಗಗಳ ವಶ । ಕಿರದೆ ನಿಗ್ರಹ ಮಾಡುವವರೇ । ಅರಿಗಳೆನಗಿನ್ನುಳಿದವರ ಪಾಡೇನು ಭೂತಳದಿ ॥32॥

ಕೇಳು ದೇವ ವಿರಂಚಿ ಯೆನ್ನಯ । ಶೀಲವನು ನಾ ಪೇಳ್ವೆ ಭೂಮಿಯ । ಮೇಲೆ ಯೆನ್ನಯ ರಾಜ್ಯದೇಳಿಗೆ ಮಹಿಮೆ ಗುಣಗಣವಾ ॥
ಕೀಳುವೆನು ಧರ್ಮವ ನಿರಂಕುಶ । ನಾಳುವೆನು ತಾ ಕಲಹ ನಿಂದೆಗ । ಳೂಳಿಗದ ಕಡುಬಂಟರೆನ್ನನು ಕೆಣಕುವವರಾರು ॥33॥

ಪರರೊಡವೆಯಪಹಾರಕರು ಪರ । ತರುಣಿರತರೆನ್ನವರು ಬಂಧುಗ । ಳರಿಯಲಾ ಸ್ನೇಹಿತರು ಮದಮತ್ಸರರು ದಾಂಭಿಕರು ॥
ಪರರಿಗುಪಹತಿ ಮಾಡಿ ದ್ರವ್ಯವ । ಹರಿಸುವರು ಯೆನಗಾಪ್ತರ್ರೈ ಬಕ । ಪರಿಯಲಾ ಧ್ಯಾನವನು ಮಾಡುವರೆನಗೆ ಸ್ನೇಹಿತರು ॥34॥

ಧರೆಯೊಳಗೆ ಪುಣ್ಯಾತ್ಮಕರು ಕೇ । ಳರಿಗಳಾಗಿಹರೆನಗೆ ಗುರುಹಿರಿ । ಯರನು ವಂದಿಸುವವರು ದೇವದ್ವಿಜರ ಪೂಜಿಪರು ॥
ಭರದಿ ಕಲಿಯೀಪರಿಯೊಳೆಂದನು । ಶಿರವ ತೂಗಿಸಿ ಬ್ರಹ್ಮಮೇ । ಣುತ್ತರವ ಕೊಟ್ಟನುಕಲಿಗೆ ಕೇಳ್ಳೈ ಶಿಷ್ಯ ಮನಗೊಟ್ಟು ॥35॥

ನರರು ಕೇಳಲ್ಪಾಯುಷಿಗಳ್ಳೈ । ಬರಿದೆ ತ್ರಾಸಿಸ ಬೇಡ ಕೃತದ್ವಾ । ಪರದ ಪರಿಯಂತಲ್ಲ ತಪಸಿನ ಮಹಿಮೆ ಬೇರಿಲ್ಲ ॥
ಗುರುಚರಣ ಸದ್ಭಕ್ತಿಯೊಂದಾ । ದರೆ ಘಳಿಗೆ ಮಾತ್ರದಲಿ ಭಾವಸಾ । ಗರವ ತರಿಸುವದ್ಯೆ ಸದಾ ಗುರುಚರಣ ತಾರಣವು ॥36॥

ಇದನು ಕೇಳ್ದಾ ಕಲಿ ಪುರುಷ ತಾ । ಬೆದರಿ ಬ್ರಹ್ಮಗೆ ಪೇಳ್ದನಾಗಲೆ । ವಿಧಿಯೆ ಯೆನಗಂಜಿಕೆಯು ಬರುತಿದೆ ಮರ್ತ್ಯ ಲೋಕದಲಿ ॥
ಒದೆಯುವರು ವೈಷ್ಣವರು ಯೆನ್ನನು । ಕುದಿಸುವರು ಹರಿಹರ ಭಜನೆಯಲಿ । ಬದುಕುವೆನೆ ಗುರುಚರಣ ಸೇವೆಯ ವಿಷವನುಣಿಸುವರು ॥37॥

ವೈರಿಗಳು ಯೆನಗವರು ಗಂಗಾ । ತೀರವಾಸಿಗಳೇನ ಹೇಳಲಿ । ವಾರಣಾಸಿಗೆ ಹೋಗಿ ಧರ್ಮವ ಮಾಳ್ಪದಾನಿಗಳು ॥
ಧಾರಿಣಿಯೊಳಿಹ ಪುಣ್ಯ ತೀರ್ಥಗ । ಳಾರು ಸಂಚರಿಸುವರೊ ಕಾಲಲಿ । ಭಾರಿವೈರಿಗಳವರು ಶಾಸ್ತ್ರ ಪುರಾಣ ಕೇಳ್ವವರು ॥38॥

ಶಾಂತಿಶಮೆದಮೆಯುತರು ಷಡ್ರಿಪು । ಭ್ರಾಂತಿಯನು ಗೆದ್ದವರು ಹಿರಿಯರ । ಸಂತಸದಿ ಸೇವಿಪರು ಜಪತಪನೇಮನಿಷ್ಠಕರು ॥
ಇಂತವರನಾ ಕಂಡೆನಾದೊಡೆ । ಬಂತು ಪ್ರಾಣವು ಕಂಠದಲಿ ನಾ । ನೆಂತು ಜೀವಿಸಬೇಕು ಭಾರತಪುಣ್ಯಭೂಮಿಯಲಿ ॥39॥

ಮಡದಿ ಮಕ್ಕಳ ಪ್ರೀತಿಸುತ ತಾ । ಹಡೆದ ತಾಯ್ತಂದೆಗಳ ತುಚ್ಛಿಸಿ । ಬಿಡುವವನು ಕೇಳೆನ್ನ ಗೆಳೆಯನು ಪ್ರಾಣಸಖನೆನ್ನಾ ॥
ಮೃಡನ ದೂಷಿಸುವವನು ಹಾಲಿನ । ಕಡಲ ಶಯನನ ನಿಂದಿಪನು ಯೆ । ನ್ನೊಡೆಯ ಶಾಸ್ತ್ರಾದಿಗಳ ನಿಂದಿಪನೆನ್ನ ಸ್ನೇಹಿತನು ॥40॥

ಧಾರುಣಿಯೊಳಾರೆಂತು ವರ್ತಿಸ । ಲಾರು ಯೆನಗನುಕೂಲರಪ್ಪರು । ಯಾರು ಯೆನಗಂಜುವರು ಕರುಣದಿ ಪೇಳೆನಲು ಕಲಿಯು ॥
ತೋರಿದನು ಕರುಣವನು ಬ್ರಹ್ಮನು । ಚಾರು ನಗೆಮೊಗದಿಂದ ಪೇಳ್ದನು । ನೀರಜಾಕ್ಷನ ಭಜಿಪರನು ನೀ ಮುಟ್ಟದಿರು ಮಗನೆ ॥41॥

ಕಳುಹುವೆನು ಕಾಲಾತ್ಮಕನನುನಾ । ಗೆಳೆಯನಾಗಿಹನವನು ಭರದೊಳ । ಗಿಳೆಯೊಳಗೆ ಸಂಹರಿಸುವನು ಧರ್ಮಪ್ರವೃತ್ತಿಯನು ॥
ಬೆಳಿಸುವನು ಮೂಢತೆಯ ಜನರೊಳು । ತಿಳುಗೆಡುಕರು ವಿವೇಕ ಹೀನರು । ಸಿಲುಕುವರು ಪಾಶದಲಿ ನಿನ್ನಯ ಲೋಭಮೋಹಿತರು ॥42॥

ಹೊಲಸು ಮೈಲಿಗೆ ಯಾಚರಿಸುವರು । ಕುಲಕಲಂಕರು ನಿನ್ನ ಮಿತ್ರರು । ಸೆಳೆಯುವರು ಷಡ್ರಿಪುಗಳವರನು ನಿನ್ನ ವಶವಾಗಿ ॥
ಕಳೆದು ಪುಣ್ಯವ ಪಾಪರಾಶಿಯ । ನೊಲಿಸುವರು ನಿನ್ನಂತೆ ನಡೆವರು । ಬೆಳೆಯುವದು ತವ ರಾಜ್ಯ ಭೂಮಿಯ ಮೇಲೆ ರಭಸದಲಿ ॥43॥

ಹರಿಹರರ ದೂಷಿಸುವರೆಲ್ಲರು । ಪರಮ ಮಿತ್ರರು ಹರಿಹರರ ತಾ । ವಿರದೆ ಪೂಜಿಸುವವರು ನಿನ್ನಯ ಕೊರಳ ಹಿಸುಕುವರು ॥
ಗುರುಹಿರಿಯರನು ವಂದಿಸುವ ನರ । ರರಿಗಳೆಲ್ಲರು ನಿನಗೆ ಗೋದ್ವಿಜ । ಚರಣ ಭಕ್ತರು ನಿನ್ನಪಾಶದಿ ಸಿಲುಕರಾರಲಾ ॥44॥

ತುಳಸಿ ವೃಂದಾವನದ ಬಳಿಯಲಿ । ಸುಳಿಯಬೇಡಾ ಬ್ರಹ್ಮನಿಷ್ಠರ । ನುಳಿದು ರಮಿಸ್ಯೆ ಧೇನುಗಾಯತ್ರಿಗಳ ಪೂಜಿಪರಾ ॥
ತಿಳಿದು ಬಿಡು ನೀನವರ ಸಂಗತಿ । ಬಳಲಿಸಲು ನೀ ಬಾರದ್ಯೆ ಮ । ತ್ತಿಳೆಯೊಳಗೆ ಶಾಸ್ತ್ರಿಗಳ ಪೌರಾಣಿಕರ ವೈದಿಕರಾ ॥45॥

ಗುರುಚರಣ ಸದ್ಭಕ್ತಿ ಮಾಳ್ಪರು । ಪರಮ ತೇಜೋರಾಶಿಗಳು ಕೇ । ಳರಿತುಕೋ ನೀನವರ ಮಹಿಮೆಯ ಜಾಣತನದಿಂದಾ ॥
ಗುರುವೆ ಕಲಿಸಂಹಾರಕನು ಮೇಣ್ । ಗುರುವೆ ದೇವರದೇವ ತ್ರಿಜಗದಿ । ಗುರುಚರಣ ಪೂಜಕರು ನಿನ್ನನು ನುಂಗಿಬಿಡುವರಲಾ ॥46॥

ಕಲಿಯು ಕೇಳಿದನೀ ಪರಿಯ ನುಡಿ । ಬಳಲಿದನು ಬಾಯಾರಿ ಬ್ರಹ್ಮಗೆ । ತಲೆಯ ಬಗ್ಗಿಸಿ ಬಿನ್ನವಿಸಿದನು ವಿನಯಪರನಾಗಿ ॥
ತಿಳಿಸಿ ಹೇಳೆನಗತಿ ವಿನೋದದಿ । ಮುಳುಗಿದೆನು ಭೀತಿಯ ಸಮುದ್ರದೊ । ಳುಳಿಸು ಪಾಲಿಸು ದೇವದೇವನೆ ವಿಶ್ವಪಾಲಕನೇ ॥47॥

ಗುರುವು ಯಾರೀ ಜಗದೊಳಗೆ ಮೇಣ್ । ಗುರುಮಹಿಮೆ ಯೆಂತಿಹುದಗಾಧವು । ಗುರುವನರಿಯುವ ಪರಿಯದಾವುದು ಪೇಳುಯೇನಗೀಗಾ ॥
ಗುರುಮಹಿಮೆಯನು ನನ್ನ ರಾಜ್ಯದೊ । ಳಿರಗೊಡೆನು ಮರಳೇನ ಮಾಳ್ಪರು । ಭರದಿ ವಿವರಿಸಿ ಪೇಳೆನುತ ತಲೆಬಾಗಿದನು ಕಲಿಯು ॥48॥

ನಸುನಗುತಲಿ ವಿರಂಚಿಯಾ ಕಲಿ । ಗುಸುರಿದನು ಕಲಿರಾಜ ನಿನ್ನಯ । ವಿಷಮಮಾಯಾವಾದ ನಡೆಯದು ಶ್ರೀ ಗುರುವಿನೆದುರು ॥
ವಿಷ ಪರೀಕ್ಷೆಯ ಮಾಡಬೇಡೈ । ನುಸುಳದಿರು ತದ್ರಾಜ್ಯದಲಿ ನಿ । ನ್ನಸುವ ಸುಡುವನು ಗುರು ಮುನಿದರಾರಿನ್ನು ಕಾಯುವರು ॥49॥

ಗುರುಗಣೇಶನಿಗನ್ನುವರಲಾ । ಗುರುವು ವೈಶ್ವಾನರನು ಮೇಣಾ । ಗುರುವು ವಿಷ್ಣುವು ಗುರುವೆ ಕೇಳೈ ಮುಕ್ತಿದಾಯಕನು ॥
ಗುರುವು ಕಾಯ್ವನು ತಂದೆತಾಯಿಗ । ಳರಿತು ಮುನಿದರೆ ಗುರುವು ಮುನಿದರೆ । ಧರೆಯೊಳನ್ಯರಕಾಣೆ ಕಾಯ್ವರೆ ಕೇಳು ಕಲಿರಾಯಾ ॥50॥

ಗುರುವೆ ಬ್ರಹ್ಮನು ಗುರುವೆ ವಿಷ್ಣುವು । ಗುರು ಮಹೇಶನು ದೇವದೇವನು । ಗುರುಪರಬ್ರಹ್ಮ ಸ್ವರೂಪನು ವಂದಿಸುವೆ ಗುರುವಾ ॥
ಹರಿಯೊಲಿದರಾ ಗುರುವ ಧ್ಯಾನಿಸು । ವರುಕಣಾ ಗುರುವೊಲಿದರೆಲ್ಲರು । ಹರಿಹರಬ್ರಹ್ಮಾದಿಗಳು ತಾವಾಗಿಯೊಲಿಯುವರು ॥51॥

ಗುರು ಚರಣದಲಿ ತೀರ್ಥವೆಲ್ಲವು । ಗುರುಚರಣ ಸಾಕಲಾರ್ಥ ಸಾಧನ । ಗುರುವೆ ಯೋಗತಪಾದಿ ಧರ್ಮಗಳುಗಮದಾಸ್ಥಾನ ॥
ಗುರುವೆ ಸರ್ವವ್ರತ ನಿರೂಪಣ । ಗುರುಚರಣ ಸದ್ಯೋಗ ಸಾಧನ । ಗುರುವೆ ವರ್ಣಾಚಾರ ಸ್ಥಾಪನ ಜ್ಞಾನ ದರ್ಪಣವು ॥52॥

ಗುರು ವಿವೇಕದಸಾರ ಭಾವಸಾ । ಗರದ ತರಣೋಪಾಯ ಭಕ್ತಿಯ । ಪರಮಸಾಗರ ಮುಕ್ತಿಯಾಗರ ಬೀಜವಿದ್ಯೆಯಲಾ ॥
ಗುರು ವಿರಕ್ತಿಯ ಮೂರ್ತಿಯೆನಲೀ । ಪರಿಯ ವಾಕ್ಯವ ಕೇಳಿ ಕಲಿಯು । ತ್ತರವನಿತ್ತನು ಗುರುಚರಿತ್ರವ ಹೇಳು ಹೇಳೆನುತಾ ॥53॥

ಮರಳಿ ಕಲಿಗಿಂತೆಂದನಾ ವಿಧಿ । ಪರಮ ಸಂತೋಷದಲಿ ಗುರುವಿನ । ಚರಣಕಮಲವ ಧ್ಯಾನಿಸುತ ಗುರುಚರಿತ ಪೇಳಿದನು ॥
ಗುರುವೆ ಕರ್ಣವು ಸಕಲರಿಗೆ ಕಿವಿ । ಯಿರದೆ ಶಾಸ್ತ್ರಗಳೆಲ್ಲ ವ್ಯರ್ಥವು । ಗುರುವ ಬಿಟ್ಟರೆ ಶ್ರವಣವಾಗುವ ಪರಿಯ ಕಾಣೆನಲಾ ॥54॥

ಗುರುಚರಣ ಸೇವಿಸಲು ಸಿದ್ಧಿಗ । ಳರರೆ ದಾಸಿಯರಾಗುವರಲಾ । ಕಾರಣ ಮೂರರ ಶುದ್ಧಿ ಶ್ರೀಗುರುಚರಣ ಸದ್ಭಕ್ತಿ ॥
ಹರುಷದಿಂ ನಾ ಪೇಳ್ವೆ ಕಥೆಯನು । ಗುರುಚರಿತ್ರ ಸುಧಾರಸವನಾ । ನಿರದೆ ನಿನಗರ್ಪಿಸುವೆನೆಂದನು ಕಲಿಗೆ ಕಮಲಜನು ॥55॥

ಹರಿಯುವದು ಗೋದಾವರೀ ನದಿ । ಪರಮಪಾವನಪುಣ್ಯ ತೀರದಿ । ಮೇರೆವುದಾಶ್ರಮ ಕೇಳು ಆಂಗೀರಸ ಮುನೀಶ್ವರನಾ ॥
ತರಣಿಮಂಡಳ ಚುಂಬಿಸುವ ಘನ । ತರದ ವೃಕ್ಷಗಳಿಹವು ನಾನಾ । ಪರಿಯ ಗಿಡಬಳ್ಳಿಗಳು ನಿಬಿಡಚ್ಛಾಯೆ ರಂಜಿಪುದು ॥56॥

ಶುಕಪಿಕಂಗಳ ಕಿಲಕಿಲಾಟವು । ಸಕಲ ಮೃಗಗಳ ಸ್ನೇಹ ಕೂಟವು । ಬಕುಳಚಂಪಕ ಕೇತಕಿಗಳಾ ಸ್ವಾದಪರಿಮಳವು ॥
ನಿಖಿಲ ಮುನಿಗಳ ವೇದ ಘೋಷವು । ಸುಖದಶಾಂತಿಯ ಶಮೆದಮೆಯ ಶುಚಿ । ನಿಕರವಿತ್ತಾ ಸ್ಥಾನದಲಿ ಬಹುರಮ್ಯ ಭೂಮಿಯದು ॥57॥

ವೇದಶಾಸ್ತ್ರ ಪುರಾಣಗಳ ತಾ । ನೋದಿಸುತ ಋಷಿವರ್ಯನೋರ್ವನು । ವೇದಧರ್ಮನು ಪೈಲ ಪುತ್ರನು ಶಿಷ್ಯರೊಡಗೂಡಿ ॥
ಮೋದದಿಂದಾಶ್ರಮದೊಳಿದ್ದನು । ಬೇಧವಿಲ್ಲದೆ ಶಿಷ್ಯರನ್ನು ವಿ । ನೋದದಿಂದಲಿ ಕರೆದು ಪೇಳಿದನೊಂದು ಹಿತಗುಜವಾ ॥58॥

ಕೇಳಿರೈ ನೀವ್ ಶಿಷ್ಯವರ್ಯರೆ । ಬಾಳಲಿಖಿತವ ಮೀರಲಾರೆನು । ವೇಳೆ ಬಂದಿಹುದೆನಗೆ ಪಾಪದ ಫಲವ ಭುಂಜಿಸುವಾ ॥
ಬಾಳುವೆಯು ಬಹು ಕಠಿಣವಾಗುವು । ದೇಳಿಗೆಯ ನಾಕಾಣೆ ನಿಮ್ಮೊಳು । ಪೇಳಿರೈ ಯಾರೆನ್ನ ಸೇವೆಯ ಮಾಡುವರು ನಿಜದಿ ॥59॥

ವೇದಧರ್ಮನ ನುಡಿಯ ಕೇಳಿ ವಿ । ಷಾದವಾಯಿತು ಶಿಷ್ಯವರ್ಗಕೆ । ಹೇ ದಯಾನಿಧಿ ನೀನು ಭವಸಾಗರಕೆ ತಾರಕನು ॥
ಪಾದವನು ಬಿಡಲಾರೆವೈ ನಿನ । ಗಾದ ಪರಿಯಲಿ ತ್ಯಜಿಸಲಾರೆವು । ನೀದಯದಿ ಪೇಳೆನುತ ಶಿಷ್ಯವೃಂದ ಮರುಗಿತಲಾ ॥60॥

ಕೇಳಿರೆಂದನು ಗುರುವು ಶಿಷ್ಯರೆ । ತಾಳಲಾರೆನು ಕುಷ್ಟ ರೋಗವು । ಏಳುವದು ಯೆನ್ನಂಗ ಛಿನ್ನವಿಛಿನ್ನ ಮಾಡುವದು ॥
ಕೀಳುಮೇಲೆಂಬುದನು ನೋಡದ । ಊಳಿಗವ ಮಾಡುವ ಮಹಾತ್ಮರು । ಏಳಿರೈ ನಾ ಹೋಗುವೆನು ಕಾಶೀಪುರಕೆ ಜವದಿ ॥61॥

ಅಲ್ಲಿ ಕಾಶೀವಿಶ್ವನಾಥನ । ಸಲ್ಲಲಿತಪದ ಸೇವೆ ಮಾಡುತ । ಮೆಲ್ಲಮೆಲ್ಲನೆಯನುಭವಿಸುವೆನು ಪೂರ್ವಸಂಚಿತವಾ ॥
ಅಲ್ಲಿಯಿಪ್ಪತ್ತೊಂದು ವರ್ಷದಿ । ತಲ್ಲಣಿಸುವೆನು ರೋಗದಲಿ ನಾ । ನಿಲ್ಲಲಾರೆನು ಯಿಲ್ಲಿ ಗುರುಸೇವಕರು ಯಾರಿಹರು ॥62॥

ಅದರೊಳೊಬ್ಬನು ದೀಪಕನು ಗುರು । ಪದಕೆ ಬಿನ್ನೈಸಿದನು ಗುರುವೇ । ಯೊದಗಿ ಸೇವೆಯ ಮಾಡುವೆನು ತವ ಕುಷ್ಟ ರೋಗದಲಿ ॥
ಬದುಕಲಾರೆನು ಬಿಟ್ಟು ನಿನ್ನನು । ಸದಮಲಾಂತಃಕರಣದಲಿ ನಾ । ಮುದದಿ ಸೇವೆಯಮಾಳ್ಪೆನೆಂದನು ಶಿಷ್ಯ ದೀಪಕನು ॥63॥

ದೀಪಕನ ನುಡಿ ಕೇಳ್ದು ಮುಂದಿನ । ತಾಪವನು ಪೇಳಿದನು ಗುರುವಾ । ಲೋಪವಾಗದು ಪಾಪರಾಶಿಯನನುಭವಿಸಬೇಕು ॥
ಈ ಪರಿಯ ಮನದನುಭವವು ಬಹು । ತಾಪದಾಯಕ ನೋಡು ಯೆನ್ನಯ । ಪಾಪರಾಶಿಗೆ ಪುತ್ರಶಿಷ್ಯರು ಪಾಲಿನವರಲ್ಲಾ ॥64॥

ಕಾಶಿಪುರದಲಿ ಹೋಗಿ ಪಾಪದ । ರಾಶಿಯನು ನಾ ಸುಟ್ಟು ಸದ್ಗತಿ । ಲೇಸಿನಿಂ ಹೊಂದುವೆನು ನಿನ್ನಯ ಕರ್ಮಧರ್ಮದಲಿ ॥
ಈಸುಪರಿಯಲಿ ಯೆನ್ನ ಸಂಗಡ । ತೋಷದಿಂದಲಿ ಬಂದಿ ನೀನಾ । ಕ್ಲೇಶ ಸಾಗರ ಮಡುವಿನಲಿ ಧುಮ್ಮಿಕ್ಕಿದಂತಾಯ್ತು ॥65॥

ಈ ತೆರದಿ ಗುರು ಶಿಷ್ಯರಿಬ್ಬರು । ಭೀತಿಯಿಲ್ಲದೆ ಕಾಶಿಕಂಬಳ । ನಾಥನಿದಿರಲಿ ಹೋಗೆ ಗುರುವಿಗೆ ಕುಷ್ಟವಾಯಿತಲಾ ॥
ನೀತಿ ಮರೆಯದೆ ಭಕ್ತಿಯಲಿ ಗುರು । ನಾಥನನು ಸೇವಿಸುತಲಿದ್ದನು । ಖ್ಯಾತಿಯಾಗುವ ವೇಳೆ ಸಂದೀಪಕಗೆ ಸಮನಿಸಿತು ॥66॥

ಪೇಟೆಯಲಿ ಭಿಕ್ಷೆಯನು ಬೇಡಿದ । ನೂಟವನು ಗುರುವಿಂಗೆ ಬಡಿಸಲು । ಸೋಟೆಯಿಂದಲಿ ಬಡಿದವನಿಗೆ ಕೋಪವಶವಾಗಿ ॥
ಕಾಟ ತಾಳೆನು ನಿನ್ನ ದೀಪಕ । ತಾಟ ತುಂಬಿಲ್ಲೇಕೆ ಅನ್ನದಿ । ನೇಟು ನಿನಗಿಲ್ಲಕಟ ಯೆನ್ನನು ಕೊಂದಿ ನೀ ಮಗನೆ ॥67॥

ಸವಿ ಪದಾರ್ಥವ ಬಡಿಸಲವನಿಗೆ । ಸವಿಯು ಬೇಕಾಗಿಲ್ಲವೆಂಬನು । ಸವಿಯ ಬಡಿಸದಲೂಟವಿತ್ತರೆ ಸವಿಯ ಬೇಡುವನು ॥
ಲವಲವಿಕೆಯಿಂ ರಕ್ತ ಶೋಣಿತ । ವವನು ತೆಗೆಯಲು ಬೈವ ತೆಗೆಯದೆ । ದಿವಸಗತವಾದರೆ ಬಡಿವನ್ಯೆ ಮರುಗಿ ಬೈಯುವನು ॥68॥

ಗುರುವೆ ತ್ರೈ ಮೂರ್ತಿಗಳು ಬ್ರಹ್ಮನು । ಹರಿಹರಾದಿಗಳೆಂದು ಭಾವಿಸಿ । ಗುರುವೆ ತೀರ್ಥಾಟಣ ವೆನುತ್ತಲಿ ನಂಬುತಲೆ ಮನದಿ ॥
ಗುರುವೆ ಭಾವಸಾಗರದ ತಾರಣ । ಗುರುವೆ ಸಕಲಾರಿಷ್ಟನಾಶನ । ಗುರುವೆ ದುರಿತನಿವಾರಣನು ತಾನೆಂದು ದೃಢಮನದಿ ॥69॥

ಪರಿಪರಿಯ ತೊಂದರೆಯ ಸಹಿಸುತ । ಗುರುವನೊಂದೇ ಭಾವದಿಂದಲಿ । ಪರಮ ಭಕ್ತಿಯ ಮನದಿ ಸೇವಿಸುತಿರ್ದನಾ ಶಿಷ್ಯ ॥
ಗುರುವು ಬೈಯಲು ನಗುವ ಮತ್ತಾ । ಗುರುವು ಬಡಿದರೆ ಸ್ತುತಿಪ ಮತ್ತಾ । ಗುರುವು ಕೋಪಿಸಲಾಗ ಸಂತಸದಿಂದ ಮೈಮರೆವಾ ॥70॥

ಇಂತು ಬಹು ವರುಷಗಳು ಪೊದವು । ಸಂತಸದಿ ಮೆಚ್ಚಿದನು ಶ್ರೀಹರ । ಬಂತು ಕರುಣೆಯು ಶಿಷ್ಯದರ್ಶನಕಾಗಿ ಬಂದನಲಾ ॥
ನಿಂತು ದ್ವಾರದಿ ಕರೆದು ಶಿಷ್ಯನ । ಸಂತಸದಿ ಕೇಳ್ದನು ಮಹೇಶನು । ಎಂತು ಕೊಂಡಾಡುವೆನು ನಿನ್ನಯ ಗುರುಚರಣ ಭಕ್ತಿ ॥71॥

ವರವ ಬೇಡೈ ದೀಪಕನೆ ನಿನ । ಗೊರೆವೆ ಬೇಕಾದುದನು ಬೇಡೈ । ಪರಮ ಭಕ್ತಿಗೆ ಮೆಚ್ಚಿದೆನು ತಾನೆಂದನಾ ಹರನು ॥
ಮರಳಿ ದೀಪಕನೆಂದ ದೇವನೆ । ಗುರುವ ಕೇಳದೆ ವರವ ಬೇಡೆನು । ಗುರುವ ಕೇಳ್ವೆನೆನುತ್ತ ಗುರುವಿದ್ದೆಡೆಗೆ ನಡೆತಂದಾ ॥72॥

ಗುರುವೆ ಹರ ಬಂದಿಹನು ಕೇಳ್ವನು । ವರವ ಬೇಡೆಂದಾಗ್ರಹಿಸುವನು । ಗುರುವೆ ನಿನ್ನಯ ಕುಷ್ಟ ರೋಗನಿವಾರಣದ ವರವಾ ॥
ಹರನೊಡನೆ ಬೇಡುವರೆ ನಿನ್ನಯ । ಚರಣದನುಮತಿ ಬೇಕು ಯೆನಾಲಾ । ಗುರುವು ಕೋಪದಿ ಬೈದು ನೂಕಿದನೇನು ಹೇಳುವೆನು ॥73॥

ಬೇಡ ದೀಪಕ ನಿನ್ನ ಕೃಪೆಯು ಸ । ಗಾಢದಲಿ ನಾನನುಭವಿಸಿ ಬಹು । ಕೇಡನಿದನು ವಿನಾಶ ಮಾಳ್ಪನು ಬೇಡ ಹರನೊಲುಮೆ ॥
ನೋಡುವರೆ ನೀ ಕಷ್ಟ ಸಹಿಸದ । ಲೋಡಿದರೆ ನಾನಂಜೆ ನಿನ್ನಯ । ಕೂಡ ಸಾಕೀ ಬಾಳ್ವೆ ಯೇಂದನು ಮುಳಿಸಿನಲಿ ಗುರುವು ॥74॥

ನುಡಿಯ ಕೇಳ್ದಾ ದೀಪಕನು ಹರ । ನೊಡನೆ ಪೇಳ್ದನು ಗುರುನಿರೋಪವ । ಬಿಡು ಬೇಡೆಲೊ ವರಬೇಡ ನೀ ಬಂದಂತೆ ಹೋಗೆನಲು ॥
ಮೃಡನು ಚೋದ್ಯವ ಪಟ್ಟು ಪೋದನು । ಕಡಲಶಯನನ ಕಡೆಗೆ ಬಂದನು । ನುಡಿದನೀ ನಿಷ್ಕಾಮ ಗುರುಭಕ್ತಿ ಪ್ರತಾಪವನು ॥75॥

ನುಡಿಯ ಕೇಳ್ದು ಮುಕುಂದ ಕಾಶಿಗೆ । ನಡೆದು ಬಂದನಲಾ ಪರಾತ್ಪರ । ಮೃಡನ ವರವನು ಧಿಕ್ಕರಿಸಿದಾ ಹುಡುಗನಿದ್ದೆಡೆಗೆ ॥
ಕೊಡುವೆ ನಿನಗಾಂ ವರವ ದೀಪಕ । ಬಿಡುವವನು ನಾನಲ್ಲ ಯೋಚಿಸಿ । ಕೊಡು ಯೆನಗೆ ಉತ್ತರವನೆಂದನು ವಿಷ್ಣು ಪ್ರೇಮದಲಿ ॥76॥

ದೀಪಕನು ಕೇಳ್ದಿದನು ನುಡಿದನು । ತಾಪವೇತಕೆ ಕೊಡುವಿ ನಿನ್ನ ಪ್ರ । ತಾಪವನು ನಾಬಲ್ಲೆ ನಿನ್ನಯ ವರವ ನಾನೊಲ್ಲೆ ॥
ತಾಪಸಿಗಳಿಹರ್ಯೆಯನೇಕರು । ಲೋಪವಿಲ್ಲದಲವರಿಗೀಯದೆ । ಈ ಪರಿಯೊಳೆನಗೇಕೆ ತ್ರಾಸಿಪೆ ಹೋಗು ಹೋಗೆಂದಾ ॥77॥

ಮಾಡಲಿಲ್ಲ್ಯೆ ನಿನ್ನ ಭಕ್ತಿಯ । ಬೇಡಲಾರೆನು ವರವೆನಗದು । ಬೇಡ ಬೇಡುವರಿಂಗೆ ಕೊಡದಿಹ ಪರಮ ದಾತಾರಾ ॥
ಕಾಡಬೇಡೈ ದೇವ ನಾ ಕೊಂ । ಡಾಡಲಾರೆನು ನಿನಗೆ ಧರೆಯೊಳು । ನೋಡಲಾರೆನು ಗುರುವ ಬಿಟ್ಟನ್ಯರನು ನಾನರಿಯೆ ॥78॥

ನಸುನಗುತ ಹರಿ ನುಡಿದನಾಗಲೆ । ಅಸಮ ಭಕ್ತನೆ ಕೇಳು ಗುರುವನು । ಬಸವಳಿಯ ದೇಕಾಗ್ರಮನದಲಿ ಬಿಡದೆ ಸೇವಿಸಲು ॥
ಹಸುಳೆ ಮುಟ್ಟುವುದೆನಗೆ ಕೇಳ್ತಾ । ಪಸರ ಸನ್ಯಾಸಿಗಳ ವಂದನೆ । ವಸುಧೆಯೊಳು ಸರ್ವಸ್ವ ಕರ್ಮವನರ್ಪಿಸುವರೆನಗೆ ॥79॥

ತಂದೆ-ತಾಯ್ಗಳ ಸೇವಿಸುತ ಮುದ । ದಿಂದ ಮಗ ತಾ ಮಾಳ್ಪ ಸೇವೆಯು । ಬಂದುಮುಟ್ಟುವುದೆನಗೆ ತದ್ವತ್ ಸತಿಯ ಪತಿಸೇವೆ ॥
ಕಂದ ಕೇಳೈ ಕೊಡುವೆ ವರವನು । ಮಂದಮತಿಯಂದದಲಿ ಯೆನ್ನನು । ಕುಂದಿಸಲು ಬೇಡಕಟ ಬುದ್ಧಿಯ ಮಾತ ಕೇಳೆನ್ನಾ ॥80॥

ಇದನು ಕೇಳ್ದಾ ದೀಪಕನು ತಾ । ಮುದದಿ ವಿಷ್ಣುವಿಗೆಂದ ದೇವನೆ । ಮದನಪಿತ ಸುತ್ರಾಮ ವಂದಿತ ಚರಣ ಯೆನಗೊಲಿದು ॥
ಹೃದಯ ಕಮಲದೊಳೆನ್ನ ಸದ್ಗುರು । ಪದದ ಭಕ್ತಿಯ ದೃಢತೆಯಾಗಲಿ । ಯಧಿಕ ಸೇವೆಯು ದೊರೆಯಲೆನಗೀ ವರವ ನೀನೀಯೋ ॥81॥

ಇಂತು ದೀಪಕ ವರವ ಬೇಡಲು । ಕಂತುಪಿತ ನಸುನಗುತ ಪೇಳ್ದನು । ಸಂತಸದೊಳೀವರವ ಕೊಟ್ಟೆನು ಮೆಚ್ಚಿದೆನು ನಿನಗೆ ॥
ಚಿಂತಿಸುತ ಗುರುಚರಣವನ್ನು ನಿ । ರಂತರದಿ ಗುರುಭಕ್ತಿ ಮಾಡಲು । ಬಂತು ಯೆನಗದು ಗುರುನುತಿಯು ನೀನಂಜದಿರು ಮಗನೇ ॥82॥

ಗುರುವೆ ನಿಗಮಾಗಮದ ಸಾರವು । ಗುರುವೆ ಹರಿಹರಬ್ರಹ್ಮ ಮೂರ್ತಿಯು । ಗುರುವೆ ದೇವರದೇವ ದಿಟವಿದು ವೇದವಾಕ್ಯವಿದು ॥
ಗುರು ಸುಧಾರಸಸಾಗರವು ಕೇಳ್ । ಗುರುವ ಭಜಿಪನು ಮೂರುಲೋಕದಿ । ಪರಮ ಪೂಜ್ಯನು ಯಮನ ಜಯಿಸಿದ ವೀರನವನೆಂದಾ ॥83॥

ಹರಿಹರಬ್ರಹ್ಮಾದಿಗಳು ನಾವ್ । ವರವ ಕೊಟ್ಟರು ಫಲವ ಕೊಡುವವ । ಗುರುವೆಯದರಿಂ ಗುರು ತ್ರಿಮೂರ್ತಿಗಳೆನ್ನುವರು ಜಗದಿ ॥
ಹರಿಯನೀಪರಿ ಬೀಳುಕೊಂಡನು । ಗುರುಚರಣ ಕಿದಿರಾಗಿ ಬಂದನು । ಕರುಣದಿಂ ತಕ್ಕೈಸಿ ಕೇಳ್ದನು ವೇದಧರ್ಮಕನು ॥84॥

ಏನುವರವಿತ್ತನು ಮಗನೆ ನೀ । ನೇನ ಬೇಡಿದಿ ವಿಷ್ಣುವಿನ ಕೂ । ಡೇನು ಮಾಡಿದಿ ಭಾಷಣವ ನೆನಲಾಗ ದೀಪಕನು ॥
ಜ್ಞಾನರಾಶಿಯೆ ಗುರುವೆ ಪೇಳ್ವೆನು । ಮಾಣೆ ನಾನೆರಡನೆಯ ವರವನು । ಸಾನುರಾಗದ ಗುರುಚರಣ ಸದ್ಭಕ್ತಿ ವರ್ಧಿಸಲಿ ॥85॥

ಈ ವರವ ಬೇಡಿದೆನು ಯೇನಗಾ । ಶ್ರೀವಧೂವರ ಕೊಟ್ಟನೆನಲಾ । ಭಾವವನು ಮರೆತಪ್ಪಿದನ ಸದ್ಗುರುವು ಶಿಷ್ಯನನು ॥
ಈ ವಿಧದಿ ನಿಜರೂಪ ತೋರಿಸಿ । ಪಾರ್ವತೀಪತಿ ದೀಪಕಂಗಾ । ಶೀರ್ವದಿಸಿ ಪರವಿತ್ತನಾಗಲೆ ಭಕ್ತವತ್ಸಲನು ॥86॥

ನಿನ್ನ ನಾಮ ಸ್ಮರಣ ಮಾತ್ರದಿ । ವಿಘ್ನಕೋಟಿಗಳೋಡಿ ಪೋಪವು । ನಿನ್ನ ಕೃಪೆಯಾಗಲು ಸದಾ ದಾಸಿಯರು ಸಿದ್ಧಿಗಳು ॥
ನಿನ್ನ ನಾಮವೆ ಕಾಶಿಯಾತ್ರೆಯು । ಪುಣ್ಯ ತರುವುದು ವಿಶ್ವನಾಥನು । ನಿನ್ನ ಸ್ವಾಧೀನದಲಿ ಕುಣಿವನು ಶರಣವತ್ಸಲನು ॥87॥

ವರವನೀಪರಿ ಕೊಟ್ಟು ಶಿಷ್ಯಗೆ । ಪರಮ ನಿಜ ರೂಪವನು ತೋರಿಸಿ । ಕರುಣದಿಂ ಕೊಂಡಾಡಿದನು ಮನದಣಿಯೆ ॥
ಪರಮ ಪಾವನ ಕಥೆಯ ನಿದನಾ । ಸರಸಿಜಾಸನ ಕಲಿಗೆ ಪೇಳ್ದನು । ಧರಣಿಯಲಿ ಕಾಶೀ ನಿವಾಸಿಗಳೆಲ್ಲ ಮುಕ್ತರಲಾ ॥88॥

ಗುರು ಮಹಾತ್ಮ್ಯೆಯ ಮೂಲಬೀಜದ । ಪರಿಯ ಬ್ರಹ್ಮನು ಕಲಿಗೆ ಪೇಳಿದ । ನರುಹಿದನು ಗುರುಭಜಕರನು ನೀ ಮುಟ್ಟಬೇಡೆನುತಾ ॥
ಪರಮ ಪಾವನ ಪುಣ್ಯ ಕಥೆಯಿದು । ನರರು ಭಕ್ತಿಯಲೋದಿ ಪಠಿಸಲು । ಗುರುವು ಕಾಮಿತ ವೀವನೈ ಶ್ರೀ ವಿಷ್ಣು ವಚನವಿದು ॥89॥

॥ ಅಧ್ಯಾಯ 2 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 3

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಶರಣನಿಗೆ ಮುನಿಕೊಟ್ಟ ಶಾಪವ । ಶಿರದೊಳಗೆ ತಾನಾಂತು ಧರೆಯಲಿ । ಪರಿಪರಿಯ ಜನ್ಮದಲಿ ಭಕ್ತೋದ್ಧರಣನೈತಂದ॥

ಸಿದ್ಧಮುನಿ ಯೀಪರಿಯೊಳನುಭವ । ಸಿದ್ಧವಹ ವಚನವನು ಪೇಳ್ದನು । ಮುದ್ದುಗೈದನು ಶಿಷ್ಯನನು ತಾ ರೋಮಪುಳಕದಲಿ ॥
ಎದ್ದು ಕೇಳ್ದನು ನಾಮಧಾರಕ । ಬುದ್ಧಿಗಿನ್ನಾ ಜ್ಯೋತಿ ತೋರಿಸಿ । ಉದ್ಧರಿಸಿದೆಯಲಾ ಮಾಹಾತ್ಮನೆ ಶರಣವತ್ಸಲನೆ ॥1॥

ಇಂದು ನಿನ್ನಯ ಚರಣ ದರ್ಶನ । ದಿಂದ ಪಾವನನಾದೆ ಸಂಶಯ । ಸಿಂಧುವನು ದಾಟಿದೆನು ನಿನ್ನಯ ಚರಣ ನೌಕೆಯಲಿ ॥
ಮುಂದೆ ಯೀ ಗುರುಚರಿತವನು ಬಹು । ಚಂದದಿಂದಲಿ ತಿಳಿಸಿ ಯೆನಗಾ । ನಂದ ಸಾಗರದಲ್ಲಿ ಮುಳುಗಿಸು ಯೋಗಿಚಂದ್ರಮನೆ ॥2॥

ದೇಶವಾವುದು ನಿಮ್ಮ ಚರಣದ । ವಾಸವಾವುದು ಯಿಲ್ಲಿ ಬಂದ ವಿ । ಶೇಷ ಕಾರಣವೇನು ಭಕ್ತಾಧೀನ ನೀನರಿಯೆ ॥
ದಾಸನಾಗುವೆ ನಿನ್ನಪದಸಹ । ವಾಸ ಕೊಡಬೇಕೆನಗೆ ಯೀಭವ । ವಾಸುಕಿಗೆ ಗಾರುಡಿಯು ನಿನ್ನಯ ಮಂತ್ರ ಗುರುಭಕ್ತಿ ॥3॥

ನುತಿಸುತಲೀಪರಿ ನಾಮಧಾರಕ । ಯತಿವರಗೆ ಸಂತೋಷವಾಯಿತು । ಮತಿ ಸಮುದ್ರಕೆ ಭರತಿ ಬಂತಾ ಶಿಷ್ಯ ಚಂದ್ರನಲಾ ॥
ಕ್ಷಿತಿಯೊಳಗೆ ಶ್ರೀಗುರುಚರಣವೇ । ಸತತವೆನ್ನಯ ಗ್ರಾಸವಾಸವು । ಮತಿಗೆ ಬೇರಿನ್ನಾರು ತೋರರು ಯೆಂದನಾ ಯೋಗಿ ॥4॥

ಗುರುಚರಣ ಮಹಿಮಾನವೆನ್ನಯ । ವರಸುಧಾರಸಪಾನ ಮುಕ್ತಿಯ । ಪರಮಸಾಧನ ಪುತ್ರ ಪೌತ್ರಾದಿಗಳ ಸಂಧಾನ ॥
ಗುರುವೆ ಧನಧಾನ್ಯಾದಿ ಮಂಗಳ । ಕರ ಸುಧಾರಸಪಾನ ಶ್ರೀಗುರು । ಚರಣ ಸಿದ್ಧಿಯ ಸ್ಥಾನ ವೆಂದನು ನಗುತ ಯೋಗೀಶಾ ॥5॥

ಗುರುಚರಣ ಗುಣ ವರ್ಣನೆಯೆ ಯೇನ । ಗುರುತರದ ಪಕ್ವಾನ್ನ ವೆಂದಾ । ಗುರುಚರಿತ್ರದ ಪುಸ್ತಕವ ತೋರಿಸಿದನಾ ಯೋಗಿ ॥
ಪರಮ ಭಕ್ತಿಯೊಳಿದನು ಪಠಿಸಲು । ದುರಿತರಾಶಿಯು ನಾಶವಪ್ಪುದು । ದೊರಕುವುದು ಧನಧಾನ್ಯ ಸಂಪತ್ಪರಮ ಸುಖಶಾಂತಿ ॥6॥

ಭಾವಭಕುತಿಯೊಳಿದನು ಪಠಿಸಲು । ಕಾವನೈ ಶ್ರೀದತ್ತರಾಜನು । ಸಾವುದೈ ದುರಿತಾಳಿ ಗ್ರಹರೋಗಾದಿ ಪೀಡನವು ॥
ಈವನೈ ಜ್ಞಾನಾದಿ ಸಿದ್ಧಿಯ । ಸಾವಧಾನದಿ ಕೇಳು ತತ್ಕರು । ಣಾವಲೋಕನದಿಂದ ಬಂಧನ ಮೋಕ್ಷವಾಗುವದು ॥7॥

ಧನ್ಯನಾದೆನೆನುತ್ತ ಮನದಲಿ । ಛಿನ್ನಸಂಶಯ ನಾಮಧಾರಕ । ನಿನ್ನು ಯೋಗೀಶನ ಚರಣದಲಿ ಬಿದ್ದನೈ ಭರದಿ ॥
ನಿನ್ನ ಚರಣವ ಕಂಡು ಜನ್ಮದ । ಧನ್ಯತೆಯು ಯೆನಗಾಯ್ತು ಗುರುವರ । ಯೆನ್ನ ರಕ್ಷಿಸು ರಕ್ಷಿಸೈ ನೀ ಶ್ರೀ ಗುರುವೆ ನಿಜದಿ ॥8॥

ಹಸಿದು ತಾ ಬಾಯಾರಿ ಬಳಲುತ । ದಿಶೆದಿಶೆಯ ಹುಡುಕುತ್ತ ಪೋಗುವ । ಪಸುಳೆಯನು ತೆಗೆದೆತ್ತಿಯಮೃತವ ಕುಡಿಸುವಂದದಲಿ ॥
ಬಸವಳಿವ ಶರಣನಿಗೆ ನೀನೀ । ನುಸುಳಿ ಬಂದು ಪಿಯೂಸ ಕುಡಿಸಿದಿ । ಅಸಮ ಮಹಿಮನಲಾ ಕೃಪಾನಿಧಿ ಯೆಂದನಾ ಶಿಷ್ಯಾ ॥9॥

ಗುರುಚರಿತ್ರವ ಕೇಳು ಯೆನ್ನಯ । ದುರಿತರಾಶಿಗೆ ಕಿಚ್ಚು ಹಚ್ಚೀ । ಪರಿಯ ಯೆನ್ನಿಚ್ಛೆಯನು ಪೂರೈಸಿನ್ನು ಗುರುರಾಯಾ ॥
ಎರಗುವೆನು ನಿನ್ನಂಘ್ರಿಕಮಲಕೆ । ಸುರತರುವೆ ನೀನೆನಗೆ ನೋಡಲು । ಪರಮ ಸಿದ್ಧಿಯ ಸಿದ್ಧ ನೀನೇ ಯೆನುತ ಪದವಿಡಿದಾ ॥10॥

ಇಂತು ಪೇಳಲು ನಾಮಧಾರಕ । ಸಂತಸದಿ ಕರಪಿಡಿದು ಸಿದ್ಧನು । ಮುಂತೆರಳಿದನು ಕಲ್ಪವೃಕ್ಷಕೆ ಬಂದರವರಾಗಾ ॥
ಚಿಂತಿತಾರ್ಥವ ಕೊಡುವ ಪಿಂಪಳ । ಕಂತು ಬಂದರು ಕೂತು ಸಿದ್ಧನು । ಶಾಂತಚಿತ್ತದಿ ಗುರುಚರಿತ್ರವ ಹೇಳತೊಡಗಿದನು ॥11॥

ನಿನರಿಯೆ ಗುರುದಾಸ್ಯ ಭಾವವ । ನೇನ ಮಾಳ್ಪನು ಗುರುವೆನುತಲನು । ಮಾನ ಮಾಡಲು ಗುರುವು ಕಾಮಿತಫಲವ ನೀಯನಲಾ ॥
ಧ್ಯಾನಮಾಡಲು ಬೇಕು ಗುರುಪದ । ಕೇನಶಕ್ಯ ವೆನುತ್ತ ದೃಢತರ । ಮಾನಸದಿ ಸದ್ಭಕ್ತಿ ಯಿರಬೇಕೆಂದನಾ ಯೋಗಿ ॥12॥

ಕೇಳು ಗುರುವರ ನಾನು ತಾಪದ । ಜಾಲದಲಿ ಬಳಲಿದೆನು ವಿಷಯದ । ಜ್ವಾಲೆಯಲಿ ನಾ ಬೆಂದು ಭವಸಾಗರದಿ ಮುಳುಗಿದೆನು ॥
ಮೇಳವಿಸಿ ವಿಜ್ಞಾನ ನೌಕೆಯ । ಮೇಲೆ ಶ್ರೀ ಗುರುಕೃಪೆಯ ವಾಯುವ । ನೇಳಿಸೈ ಯೆನಗಿನ್ನು ಯೆಂದನು ನಾಮಧಾರಕನು ॥13॥

ಮಾಯೆಯಜ್ಞಾನದಲಿ ಮುಳುಗಿ ಸ । ಹಾಯಬೇಡಲು ಭಾವವಿಲ್ಲದೆ । ಯೀಯನೈ ಗುರು ಕೇಳು ಭಕ್ತಿಯ ಮಹಿಮೆ ಚೋದ್ಯವಲಾ ? ॥
ತೋಯ ವರ್ಷಿಪ ತೆರದೊಳಾಗುರು । ರಾಯ ಸುರಿವನು ಕೃಪೆಯ ಭಕ್ತರ । ಕಾಯುವನು ಪೀಯೂಷ ದೃಷ್ಟಿಯಲೆಂದನಾ ಯೋಗಿ ॥14॥

ದೃಢ ತರದ ಸದ್ಭಕ್ತಿ ಯೆಂಬುದು । ಮಡುವಿನೊಳಗಿನ ನೀರು ನೋಡಾ । ಗಡಬಡಿಸಲಾರದು ಕಣಾ ದಾಂಭಿಕನು ಗುಡ್ಡವಲಾ ॥
ಕಡಿದು ನೀರದು ಕೆಳಗೆ ಹರಿವುದು । ಬಿಡು ಬಿಡೀಪರಿ ಪರೀಕಿಸಲು ನೀ । ಹೊಡೆದು ಸಂಶಯ ಚಿತ್ತ ಸ್ಥೈರ್ಯವ ಪಡೆಯ ಬೇಕೆಂದಾ ॥15॥

ಗುರುವೊಲಿದರೀ ಮರ್ತ್ಯಲೋಕವು । ಯೆರಡನೆಯ ವೈಕುಂಠ ನೋಡೈ । ಗುರುವೆ ಪರಬ್ರಹ್ಮನು ಕಣಾ ಸಂಶಯವ ನೆಣಿಸದಿರು ॥
ಸುರತರುವು ಸುರಧೇನು ಚಿಂತಿತ । ವರವ ಕೊಡುವುದು ಯೆನ್ನ ಶ್ರೀಗುರು । ವರನು ಚಿಂತಿಸಲಾರದೀವನು ಸೇರದುಪಮೆಯದು ॥16॥

ಗುರುವೆ ತ್ರೈಮೂರ್ತಿಗಳೆನುತ್ತಲಿ । ಧರಣಿಯಲಿ ಪಸರಿಸಿತು ಕೀರ್ತಿಯು । ಗುರುಪದವ ನೀ ನಂಬು ಸಿದ್ಧಿಯ ಬೀಜವೇಯೆಂದು ॥
ಬರಿದೆ ಸಂಶಯ ರೂಪಕಲ್ಲನು । ಕೊರಳಿಗೆ ತಾ ಕಟ್ಟಿ ಭವಸಾ । ಗರದೊಳಗೆ ನೀ ಧುಮುಕ ಬೇಡೆಂದನು ಮಹಾಯೋಗಿ ॥17॥

ಬಿನ್ನವಿಸಿದನು ನಾಮಧಾರಕ । ಬನ್ನಬಟ್ಟೆನು ಯೀವರೆಗೆ ನಾ । ನಿನ್ನು ಕಂಡೆನು ನಿನ್ನ ಚರಣವ ಭಾಗ್ಯವಶದಿಂದಾ ॥
ಎನ್ನ ನೀನುದ್ಧರಿಸು ಗುರುಕೃಪೆ । ಯನ್ನು ತೋರಿಸಿ ಚರಿತಪಠಣವ । ನಿನ್ನು ಮಾಡಿಸು ಯೆನಗೆನುತಲಾ ಶಿಷ್ಯ ಪೇಳಿದನು ॥18॥

ಗುರುವೆ ತ್ರೈಮೂರ್ತಿಗಳೆನುತ ನೀ । ನೊರೆದೆ ತ್ರೈಮೂರ್ತಿಗಳು ಯಾಕೀ । ಧರಣಿಯೊಳಗವತರಿಸಿದರು ನೀಪೇಳು ಮನವರಿಯೆ ॥
ಗುರುಚರಿತ್ರವ ಕೇಳಲಿಕೆ ಮನ । ಭರದಿ ಹಾರೈಸುತ್ತಲಿದೆ ಪತಿ । ಕರಿಸು ಯೆನ್ನ ವಿನಂತಿ ಯೆಂದನು ಶಿಷ್ಯ ವಿನಯದಲಿ ॥19॥

ನಾಮಧಾರಕ ಕೇಳು ಶಿಷ್ಯಶಿ । ರೋಮಣಿಯೆ ಹೃದಯಾಂಬುನಿಧಿಗಾ । ಸೋಮನಂತಿಹೆ ನೀನು ಸಂತಸವುಕ್ಕುತಿದೆ ಯೆನಗೆ ॥
ಈ ಮಹೀತಳವೆಲ್ಲ ತಿರುಗಿದೆ । ನೀ ಮಹಾತುಮನಹುದು ನಿನ್ನಯ । ಕಾಮಿತಾರ್ಥವ ಕೊಡುವನಾಗುರುರಾಜ ಕೇಳೆಂದಾ ॥20॥

ಗುರುಚರಿತ್ರವ ಕೇಳಲಿಚ್ಛಿಪ । ರಿರುವರೈ ಧನ್ಯಾತ್ಮರವರಿಗೆ । ದುರಿತ ಭೀತಿಯೆಯಿಲ್ಲವಿಹ ಪರ ಸೌಖ್ಯ ಸಾಮ್ರಾಜ್ಯಾ ॥
ಪರಮ ಧನಧಾನ್ಯಾದಿ ಸಂಪತ್ । ಕರುಣಿಪನು ಗುರು ಪುತ್ರ ಪೌತ್ರರ । ಮರಳಿ ಸದ್ಗತಿ ಕೊಡುವನೈ ನೀನಂಜ ಬೇಡೆಂದಾ ॥21॥

ಧರೆಯಭಾರವ ಹರಿಸಲೋಸುಗ । ಶರಣರನು ರಕ್ಷಿಸುವ ನೆವದಲಿ । ಹರಿಹರರು ನರದೇಹದಿಂದ ವತರಿಸುವರು ಜಗದಿ ॥
ಹರಿಹರಬ್ರಹ್ಮಾದಿಗಳು ಗುಣ । ವರಿಯೆ ಮೂರಿಹರವರು ಮೇಣಾ । ಪರಿಕಿಸಲು ತಾ ಮೂರ್ತಿಯೊಂದೇ ಯೆಂದನಾಯೋಗಿ ॥22॥

ಜಗವ ಸೃಷ್ಟಿಪ ಬ್ರಹ್ಮ ಮೂರುತಿ । ಜಗವ ರಕ್ಷಿಪ ವಿಷ್ಣು ಮೂರುತಿ । ಜಗವ ಸಂಹರಿಸುವ ಮಹೇಶನ ಮೂರ್ತಿ ಮೂರಾಗಿ ॥
ತ್ರಿಗುಣದಲಿ ವಿಶ್ವವನು ವ್ಯಾಪಿಸಿ । ಬಕುತರಿಗೆ ರಕ್ಷಿಸುವ ಕಾರಣ । ಜಗದೊಳವತರಿಸುವರು ಧರ್ಮಸ್ಥಾಪಕರು ತಿಳಿಯೇ ॥23॥

ಅಂಬರೀಷನ ಕಥೆಯ ಪೇಳುವೆ । ಕುಂಭಿನಿಗೆ ವಿಷ್ಣುವನು ತರಿಸಿದ । ಸಂಭ್ರಮವ ನೀ ಕೇಳು ಸದ್ಗುರುಭಕ್ತಿ ಚಾತಕನೆ ॥
ಬೆಂಬಲಕೆ ಶರಣರಿಗೆ ಭಕ್ತ ಕು । ಟುಂಬನಿರಲಾ ಭವದ ತಾಪದ । ಹಂಬಲಿಕೆ ನಿಮಗೇಕೆ ಯೆಂದನು ಸಿದ್ಧಮುನಿಯವಗೆ ॥24॥

ಧರಣಿಯೊಳು ಸಾಕೇತಪುರವರ । ವಿರುವುದದರಲಿ ಸೂರ್ಯವಂಶ ದೊ । ಳರಸನೋರ್ವನು ರಾಜ್ಯಗೈದನು ಪೂರ್ವಕಾಲದಲಿ ॥
ಹರಿಪರಾಯಣನವನು ಪ್ರಜೆಗಳ । ಪರಮಪ್ರೀತಿಯೊಳಾಳುತಿರ್ದನು । ಧರೆಯೊಳಗೆ ಸುಖ ಶಾಂತಿ ರಾಜ್ಯವದಂಬರೀಷನದು ॥25॥

ಹರಿದಿನದಿ ಜಾಗರಣೆ ದ್ವಾದಶಿ । ಗಿರದೆ ಬ್ರಾಹ್ಮಣ ಭೋಜನವು ಮೇ । ಣಿರುವುದೈ ಗೃಹಗೃಹದಿ ತುಳಸೀವನವು ವನದೊಳಗೆ ॥
ಹರಿಯ ಮಂದಿರ ಹರಿಯ ಮೇಣ್ಮಂ । ದಿರದೊಳಗೆ ಹರಿಭಜನ ವಿಂತೀ । ಪರಿಯಲಾ ಸಾಮ್ರಾಜ್ಯ ಮೆರೆದುದು ಪುಣ್ಯ ಭೂಮಿಯಲಿ ॥26॥

ದ್ವಾದಶಿಯ ದಿವಸದಲಿ ರಾಜನು । ಭೂದಿವಿಜರನು ಕರೆಸಿ ಭೋಜನ । ವಾದರಾತಿತ್ಯದಲಿ ಸಂತೈಸುವನು ಮನಮುಟ್ಟಿ ॥
ಆ ದಯಾನಿಧಿ ಭಕ್ತವತ್ಸಲ । ನಾದಿ ಮೂರುತಿಮೆಚ್ಚಿ ಚಕ್ರವ । ನಾದರಿಸಿ ರಕ್ಷಣೆಗೆ ಕೊಟ್ಟನೆನುತ್ತ ಮುನಿನುಡಿದಾ ॥27॥

ಈ ತೆರದಿ ದ್ವಾದಶಿಯ ವ್ರತ ಸಾ । ಕೇತ ಪುರದಲಿ ನೆಡೆಯುತಿರಲೀ । ಕೀರ್ತಿ ಪಸರಿಸಿತಂಬರೀಷನ ಪರಮ ವೈಷ್ಣವನಾ ॥
ಆ ತಪೋ ನಿಧಿ ತನ್ನ ಶಿಷ್ಯ । ವ್ರಾತವನು ಕರೆಕೊಂಡು ಬಂದನು । ಭೀತನಾದನು ನೃಪನು ದುರ್ವಾಸನನು ನೋಡುತಲಿ ॥28॥

ಬಂದ ಮುನಿಗಳನೆಲ್ಲ ನೃಪನಭಿ । ವಂದಿಸಿದನೈ ಅರ್ಘ್ಯಪಾದ್ಯಗ । ಳಿಂದ ಸಂತೈಸಿದನು ಕರೆದನು ಭೋಜನಕೆ ಮುದದಿ ॥
ಮಿಂದು ನೀವ್ ಬೇಗದಲಿ ಬರಬೇ । ಕೆಂದು ನೃಪ ಬಿನ್ನೈಸಿದನು ಮುನಿ । ವೃಂದವೆಲ್ಲವು ಸ್ನಾನಕೋಸುಗ ನದಿಗೆ ತೆರಳಿದರು ॥29॥

ಸ್ನಾನ ಸಂಧ್ಯಾ ದಿಗಳ ತೀರಿಸಿ । ಮಾನನಿಧಿ ದುರ್ವಾಸ ಬರಲಿಕೆ । ಯೇನ ಹೇಳಲಿ ವೇಳೆಯಾಯಿತು ನೃಪನು ಕಳವಳಿಸಿ ॥
ತಾನು ತೀರ್ಥವ ಸೇವಿಸಿದನೈ । ಮೇಣು ತುಳಸಿಯ ಭಕ್ಷಿಸಿದನಾ । ಭಾನುವಂಶಜನೀತೆರದಿ ದ್ವಾದಶಿಯ ಸಾಧಿಸಿದಾ ॥30॥

ತಿರುಗಿ ಬಂದನು ಮುನಿಯು ರಾಜನ । ಪರಿಕಿಸಿದನಾ ಮೋರೆಯನು ನಾ । ಬರುವ ಹಾದಿಯ ನೋಡದಲೆ ನೀನುಂಡು ಕುಳಿತೆಯಲಾ ॥
ಸೆರಗ ಹಿಡಿ ಶಾಪವನು ಕೊಡುವೆನು । ಧರಣಿಯಲಿ ಜನ್ಮಿಸಲು ಬೇಕೈ । ಪರಿಪರಿಯ ಯೋನಿಯಲಿ ನೀನೆಂದವಗೆ ಶಾಪಿಸಿದಾ ॥31॥

ಶಾಪವನು ದುರ್ವಾಸ ಕೊಡಲಾ । ಭೂಪ ಮೊರೆಯಿಟ್ಟನು ಕಣಾ ನಿರ್ । ಲೇಪ ಶ್ರೀಹರಿ ಗಾಕ್ಷಣವೆ ವೈಕುಂಠ ನಾಯಕಗೆ ॥
ಶ್ರೀಪತಿಯು ತತ್ ಕ್ಷಣದಿ ಬಂದನು । ತಾಪ ಹಾರಕ ಸೋಮ ಬಂದನು । ತಾಪಸಿಯ ಸನ್ಮುಖದಿ ನಿಂತನು ಭಕ್ತವತ್ಸಲನು ॥32॥

ಮುನಿಯೆ ಕೇಳ್ಮೆ ನಿನ್ನ ಶಾಪವ । ನೆನಗೆ ಕೊಡು ನಾ ಭಕ್ತರಕ್ಷಕ । ನೆನುವ ಬಿರುದನು ನಾನು ಕೆಡಿಸೆನು ಕ್ಷಮಿಸು ಭಕ್ತನನು ॥
ಎನಲು ಶ್ರೀಹರಿ ತಿರುಗಿ ಯೋಚಿಸಿ । ಮುನಿಯು ಪ್ರತ್ಯುತ್ತರವ ನಿತ್ತನು । ಮನದಿ ಹರುಷವ ತಾಳಿ ಹರಿಗೀತೆರದಿ ಪೇಳಿದನು ॥33॥

ಹರಿಯೆ ಭಕ್ತರ ವಜ್ರಪಂಜರ । ಬಿರುದು ನಿನ್ನದು ದಿಟವು ನಿನಗೀ । ಪರಿಯ ಶಾಪವನಿತ್ತೆನಾದರೆ ಕೆಲಸ ಬಹುವಿಹುದು ॥
ಧರಣಿಯಲಿ ದುಷ್ಟರನು ಶಿಕ್ಷಿಸಿ । ಶರಣರನು ಪಾಲಿಸಲುಗೋಸುಗ । ಪರಿಪರಿಯ ರೂಪದಲಿ ನಿನವತರಿಸಬೇಕೆಂದಾ ॥34॥

ಹತ್ತುಪರಿಯಲಿ ಹರಿಯು ಜನ್ಮವ । ನೆತ್ತಿ ಭೂಭಾರವನು ಹರಿಸುತ । ಮರ್ತ್ಯ ಲೋಕದೊಳು ದ್ಧರಿಸಿದನು ಭಕ್ತ ವೃಂದವನು ॥
ಮುಕ್ತಿ ಹಾದಿಯ ತೋರಿಸಿದನು ಯೆ । ನುತ್ತ ಕೇಳ್ವಿಹೆ ಮಿಕ್ಕ ಜನ್ಮದ । ಕೀರ್ತಿ ಜಗದೊಳಗನಿತು ಯಿಲ್ಲೆಂದನು ಮಹಾಯೋಗಿ ॥35॥

ಪುತ್ರರಾದರು ಮೂರು ಮೂರ್ತಿಗ । ಳತ್ರಿಋಷಿಯನಸೂಯೆ ಯಿವರಿಗೆ । ಕೃತ್ರಿಮದ ವೇಷದಲಿ ಬಂದರು ಬಾಲರಾದರಲಾ ॥
ಧಾತ್ರಿಯಲಿ ಗುರುಪೀಠವಿದು ದ । ತ್ತಾತ್ರೇಯನ ಸುವಿಚಿತ್ರ ಚರಿತ ಪ । ರತ್ರ ಸಾಧನವಿಹುದು ಮಂಗಳಧಾಮ ಕೇಳೆಂದಾ ॥36॥

ನುಡಿಯಲೀಪರಿ ಸಿದ್ಧಯೋಗಿಯು । ಪಡೆದನಾನಂದವನು ಶ್ರೀಗುರು । ಪೊಡವಿಯಲಿ ಯಾರತ್ರಿಋಷಿ ಯಾರಿಂದ ಸಂಭವವು ॥
ಒಡನೆ ನೀನೆನಗೇಕ ಚಿತ್ತದಿ । ಕುಡಿಸು ಗುರುಚರಿತಾಮೃತವನಾ । ನಡಿಗೆ ವಂದಿಪೆನೆಂದು ನುಡಿದನು ನಾಮಧಾರಕನು ॥37॥

ಯಾರು ಸೂರ್ಯಗೆ ಜ್ಯೋತಿಯಿತ್ತರೊ । ಯಾರು ಚಂದ್ರಗೆ ಸುಧೆಯ ನಿತ್ತರೊ । ಯಾರು ಅಗ್ನಿಗೆ ಕೊಟ್ಟರಾಯುಷ್ಯವನು ಮೋದದಲಿ ॥
ಚಾರುಮಹಿಮನು ಯೆನ್ನ ಸದ್ಗುರು । ಮೂರುತಿಯಲಾ ಜಗವ ರಕ್ಷಿಪ । ಕಾರಣಿಕ ನಾನವಗೆ ವಂದಿಪೆ ವಿಷ್ಣು ರೂಪನಿಗೆ ॥38॥

॥ ಅಧ್ಯಾಯ 3 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 4

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಅತ್ರಿಯಾಶ್ರಮ ಕೈದೆ ಸತಿಯಳ । ಸತ್ಯವನು ಪರಿಕಿಸಲು ಬಂದ ಶಿ । ಶುತ್ವವನು ಪಡೆದರು ಹರಿಹರಬ್ರಹ್ಮಮೂರ್ತಿಗಳು॥

ನಾಮಧಾರಕ ಕೇಳು ಶಿಷ್ಯ ಶಿ । ರೋಮಣಿಯೆ ನಿನ್ನಂತೆ ಧನ್ಯರ । ಭೂಮಿಯಲಿ ನಾಕಾಣೆ ಗುರುಭಕ್ತಿಯ ಶಿಖಾಮಣಿಯೆ ॥
ಪ್ರೇಮದಿಂದಲಿ ನಿನಗೆ ಪೇಳುವೆ । ನಾ ಮನೋಹರ ಚರಿತ ದತ್ತನ । ಕಾಮಿತಾರ್ಥವ ನೀವ ಪಾವನ ಪುಣ್ಯ ಗುಣಗಣವಾ ॥1॥

ಮರ್ತ್ಯ ಲೋಕದೊಳುದ್ಭವಿಸಿ ತಾ । ಚಿತ್ತ ಶುದ್ಧಿಯ ಗಳಿಸಿ ಜೀವನ್ । ಮುಕ್ತರಾಗುವ ಹೇತುವಿಂದಾ ಸುರರು ಜನ್ಮವನು ॥
ಎತ್ತಿ ಬರಬೇಕೆಂಬ ಇಚ್ಛೆಯ । ವ್ಯಕ್ತ ಪಡಿಸುವರಾರ ಚರಣಾ । ಸಕ್ತಿಯನು ತೋರಿಪರೊ ತತ್ ಸದ್ಗುರುವ ವಂದಿಸುವೆ ॥2॥

ಪ್ರಳಯ ಕಾಲದೊಳೆಲ್ಲ ಸೃಷ್ಟಿಯು । ಜಲಮಯವೆ ತಾನಿತ್ತು ಮುಂದಕೆ । ಜಲದೊಳಾಯ್ತು ಹಿರಣ್ಯಗರ್ಭವಿದೆಂಬ ಬ್ರಹ್ಮಾಂಡ ॥
ಬಳಿಕ ಶಕಲಗಳಾದವೈಯದ । ರೊಳಗೆ ಭೂಮಿಗೆ ಯಾದವೆರಡಾ । ಯ್ತುಳಿದು ಬ್ರಹ್ಮನು ವಿರಚಿಸಿದನೀರೇಳು ಭುವನವನು ॥3॥

ವಿರಚಿಸಿದನು ವಿರಂಚಿ ಮಾನಸ । ತರುಣ ಪುತ್ರರನೇಳು ಮಂದಿಯ । ಮರಿಚಿಯತ್ರಿ ಪುಲಸ್ತ್ಯಕೃತುವಾಸಿಷ್ಠ ಮೊದಲಾಗಿ ॥
ಎರಡನೆಯ ಮಾನಸ ಸುಪುತ್ರನು । ಮೆರೆದನತ್ರಿ ಮುನೀಶ್ವರನು ಗುರು । ವರನ ಪೀಠದ ಮೂಲಸ್ಥಾನ ವೆನುತ್ತ ಮುನಿ ನುಡಿದಾ ॥4॥

ಅತ್ರಿಋಷಿಗನಸೂಯೆ ಭಾರ್ಯೆಯು । ವ್ಯಕ್ತವಾಗಿಹ ಜಗದಿ ಪಾತಿ । ವ್ರತ್ಯ ಮೂರ್ತಿಯೊ ರೂಪಲಾವಣ್ಯದ ಸುಪುತ್ಥಳಿಯೊ ॥
ಭಕ್ತಿಯಲಿ ಪತಿ ಸೇವೆಯನು ತಾ । ನುತ್ತಮೋತ್ತಮ ರೀತಿಯಲಿ ಮಾ । ಡುತ್ತಲಿರ್ದಳು ಭೀತರಾದರು ಸುರವರಾದಿಗಳು ॥5॥

ತರಣಿ ತಾ ಭಯಭೀತಿಯಲಿ ನಿಜ । ಕಿರಣವನು ಸಂಹರಿಸುವನು ಹಿಮ । ಕರನು ಕಿರಣವನಾವರಿಸುವನು ಸತಿಯ ಭೀತಿಯಲಿ ॥
ಧರಣಿಯಾಕೆಯ ಭೀತಿಯಲಿ ಮೃದು । ತರವದಾಯಿತು ಶಾಪವಿತ್ತರೆ । ಪರಿಹರಿಪರಾರೆಂದು ನಡುಗುತ ಲಿರ್ದುದಮರಗಣ ॥6॥

ಪತಿಯೆ ದೈವತವೆಂದು ನೆನೆದಾ । ಸತಿಯು ನಿಜಪತಿ ಸೇವೆ ಮಾಳ್ಪಳು । ಪತಿಯ ಚರಣದ ತೀರ್ಥವನು ಭಕ್ತಿಯಲಿ ಸೇವಿಪಳು ॥
ಅತಿಥಿಯಭ್ಯಾಗತರ ಪೂಜಿಸಿ । ಕ್ಷಿತಿಯ ವೈಕುಂಠವನು ಮಾಳ್ಪಳು । ನುತಿಸಳಲೆನಗಳವಲ್ಲ ಸತಿಸದ್ಗುಣಂಗಳನು ॥7॥

ಸುರವರರು ಭಯಭೀತರಾದರು । ಹರಿಹರಬ್ರಹ್ಮರಿಗವರು ತಾ । ವರುಹಿದರು ಕೈ ಮುಗಿದು ಕೊಂಡಾಡಿದರು ಸತಿಗುಣವಾ ॥
ಅರಿಯದೆಮಗದು ಮನುಜರೂಪದಿ । ಪರಮ ಪಾತಿವ್ರತ್ಯ ಬಂದಿದೆ । ಸುರವರ ಪಾಡೇನು ಭೂತಳಕೈದಿ ಸೇವಿಪೆವು ॥8॥

ಸತಿಯ ಪಾತಿವ್ರತ್ಯ ಕೆಡಿಸದೆ । ಗತಿಯ ಕಾಣೆವು ಮುಂದೆ ನಮ್ಮನು । ಪತಿಕರಿಸುವುದು ಬಿಡುವುದಾವುದು ಹಿತಕರವು ನಿಮಗೆ ॥
ಸತಿಯ ತಾಪವ ಬಿಡಿಸದಿರೆ ನಾವ್ । ಸತಿಗೆ ಹೋಗುವೆವು ಶರಣು ಶರಣಾ । ಗತರ ರಕ್ಷಕಳೆಂಬ ಬಿರುದನು ಧರಿಸಿಹಳು ಸತಿಯು ॥9॥

ಸುರವರರ ನುಡಿಗಳನು ಕೇಳ್ದಾ । ಹರಿಹರಬ್ರಹ್ಮಾದಿ ಮೂರ್ತಿಗ । ಳರೆಘಳಿಗೆ ಯೋಚಿಸುತ ಹೊರವಂಟರು ನಿಜಾಲಯವಾ ॥
ಧರಣಿಗಿಳಿದರು ಸತಿಯಗುಣಗಣ । ವರಿಯದಾತ್ರೇಯಾಶ್ರಮಕೆ ಭೂ । ಸುರರ ವೇಷದಿ ಬಂದರೈ ಲೀಲಾವಿನೋದಿಗಳು ॥10॥

ಅತ್ರಿಯಾಶ್ರಮ ವೆಂದರದು ಕೇಳ್ । ಧಾತ್ರಿ ಯೊಳಗಿಹ ಸತ್ವ ಗುಣವದು । ಮೂರ್ತಿಯಾಗಿಹುದಾಶ್ರಮದಿ ರಮಿಸುವುದೊ ಯೆಂಬಂತೆ ॥
ಚಿತ್ರತರ ವಾಗಿರ್ಪುದೆಲ್ಲವೂ । ಮೈತ್ರಿಯಲಿ ಮೃಗಪಕ್ಷಿಗಳು ಸರಿ । ವರ್ತಿಸುವರೇನದನು ವರ್ಣಿಸೆನೊಂದು ಜಿಹ್ವೆಯಲಿ ॥11॥

ದನದ ಕರು ಹುಲಿಮೊಲೆಯ ಸೇವಿಪು । ದನುನಯವು ಮುಂಗುಲಿಯು ಹಾವನು । ಮನೆಗೆ ಕರೆದಾತಿಥ್ಯ ಮಾಳ್ಪದು ಬೆಕ್ಕು ಇಲಿಗಳನು ॥
ವಿನಯದಿಂದಾಡಿಸುವದ್ಯೆ ಮ । ತ್ತನಿತು ಮೃಗ ಪಕ್ಷಿಗಳ ಜಾತಿಯ । ಗುಣವ ಬಿಟ್ಟಾರಾಮದಿಂದಲಿಯಿದ್ದವಾಶ್ರಮದಿ ॥12॥

ಮುನಿಯು ತನ್ನಾಶ್ರಮವಬಿಟ್ಟು । ದಿನದ ನೈಮಿತ್ತಿಕವ ತೀರಿಪೆ । ನೆನುತ ನಡೆದನು ನದಿಯ ತೀರಕೆ ವಾಡಿಕೆಯ ತೆರದಿ ॥
ಮುನಿಯು ಮನೆಯನು ಬಿಟ್ಟು ಪೋಗಲ । ದನುವ ಸಾಧಿಸಿ ಪೊಕ್ಕರಾಶ್ರಮ । ವನಿತೆಯೊಬ್ಬಳ ನೋಡಿ ಬೇಡಿದರಿಷ್ಟ ಭೋಜನವಾ ॥13॥

ಹೊಟ್ಟೆ ಹಸಿವೆಯ ತಾಪ ತಾಳೆವು । ಥಟ್ಟನೆಮಗನ್ನವನು ನೀಡೌ । ಇಷ್ಟ ಭೋಜನ ಕೊಡುವ ಕೀರ್ತಿಯು ಪಸರಿಹುದು ಜಗದಿ ॥
ಕಷ್ಟ ಪಟ್ಟೆವು ಬಳಲಿ ಬಂದೆವು । ಕೊಟ್ಟು ಭೋಜನವೆಮಗೆ ನೀ ಸಂ । ತುಷ್ಟ ಮಾಡೆಂದೊದರಿದರು ತ್ರೈಮೂರ್ತಿಗಳು ಬಿಡದೆ ॥14॥

ಸತಿಯು ತನ್ನಾಶ್ರಮಕೆ ಬಂದಿರು । ವತಿಥಿ ಗಳನಾದರಿಸಿದಳು ನಿಜ । ಪತಿಯ ಚರಣವ ಧ್ಯಾನಿಸುತ ಮಣೆಯಿಟ್ಟು ಭೋಜನಕೆ ॥
ನುತಿಸುತನ್ನವ ಬಡಿಸಿ ಕೈಯಲಿ । ಘೃತವನಭಿಗಾರಿಸುವ ವೇಳ್ಯದೊ । ಳತಿಥಿಗಳು ಮನಮುರಿದು ಪೇಳ್ದರು ಕಪಟವೇಷಿಗಳು ॥15॥

ವನಿತೆ ನೀನೆಮಗಿಷ್ಟ ಭೋಜನ । ವನು ಕೊಡುವಿ ತಾನೆಂದು ಹಿಗ್ಗುತ । ಮನದಿ ಬಂದೆವು ದೂರದಿಂದಾಶ್ರಮಕೆ ಬಳಲಿದೆವು ॥
ನಿನಗೆಪೇಳುವೆವೀಗ ಕೇಳಾ । ಮನದಭೀಷ್ಟವನಿತ್ತು ನೀ ಭೋ । ಜನವ ಬಡಿಸಲು ಬೇಕು ಸೀರೆಯ ಬಿಟ್ಟು ನೀನೆಮಗೆ ॥16॥

ಇದ್ದರೀಪರಿ ಬಡಿಸು ಬಡಿಸದೆ । ಯಿದ್ದರಾವಿದೆ ಹೋಗುವೆವು ನಾ । ವೆದ್ದು ಭೋಜನ ಬಿಟ್ಟು ಬೇಡವೆಮಗುಳಿದ ಭೋಜನವು ॥
ಬಿದ್ದಳಾ ಸತಿ ಶಂಕೆಯಲಿ ತಾ । ಶುದ್ಧ ಮನದಲಿ ಪತಿಯ ಚರಣದ । ಶ್ರದ್ಧೆಯಿಂದಲಿ ಸತಿಯು ಕೇಳಭಿವಚನ ಕೊಟ್ಟಳಲಾ ॥17॥

ಪತಿಯ ಚರಣವ ನೆನೆದು ತೀರ್ಥವ । ಸತಿಯು ಸಂಪ್ರೋಕ್ಷಿಸಿದಳಾಕ್ಷಣ । ವತಿಥಿಗಳು ಬಾಲಕರೆನುತ ಮನದೊಳಗೆ ನಿರ್ಧರಿಸಿ ॥
ಕ್ಷಿತಿಯೊಳಗೆ ತ್ರೈಮೂರ್ತಿಗಳು ಬಾ । ಲ್ಯತೆಯನಾಂತು ವಿನೋದದಿಂದಲಿ । ಸತಿಯ ಮುಂದಾಡಿದರು ಪಾತಿವ್ರತ್ಯ ಮಹಿಮೆಯಲಾ ॥18॥

ಸೀರೆಯನು ತೆಗೆದಿಟ್ಟು ನಂತರ । ನಾರಿ ಬಂದಳು ಬಾಲರಿದ್ದೆಡೆ । ವಾರಿಜಾಸನ ಹರಿಹರರು ಬಾಲತ್ವ ಹೊಂದಿದರು ॥
ಭಾರಿ ಮುದ್ದಾಡುತಲಿ ಬಾಲರ । ನೇರಿಸುತ ತೊಡೆಯಲ್ಲಿ ಮೊಲೆಯನು । ಚಾರುಮಮತೆಯಲುಣಿಸಿದಳು ಸತಿಭಾಗ್ಯವೇನೆಂಬೆ ॥19॥

ಸುತರ ಮೂರ್ವರ ತೊಟ್ಟಿಲಲಿ ತಾ । ಸತಿ ವಿವೇಕದಿ ಹಾಕಿ ತೂಗಿಸಿ । ಪತಿಯ ಸೇವೆಯ ಮಹಿಮೆಯನು ಮನದೊಳಗೆ ನೆನೆನೆನೆದು ॥
ಮತಿಯ ಶುದ್ಧತೆಯಿರಲು ತಾದು । ರ್ಮತಿಯ ಕಾಮುಕರೇನ ಮಾಳ್ಪರು । ರತಿಪತಿಯ ಪಿತ ಚರಿತವನು ಪೊಗಳಿದಳು ಜೋಗುಳದಿ ॥20॥

ಜೋಜೋಜೋಜೋ ವಿಷ್ಣು ಮುಕುಂದಾ । ಜೋಜೋಯೆನ್ನಯ ಹೃದಯಾನಂದಾ ॥
ಜೋಜೋಜೋಜೋ ಆಶ್ರಮಕೆಮ್ಮಾ । ಜೋಜೋ ಬಂದಿಹೆ ಯಾತಕೆ ತಮ್ಮಾ ॥ ಜೋಜೋ ॥21॥

ಜೋಜೋಜೋಜೋ ಪ್ರಮಥರ ನಾಥಾ । ಜೋಜೋ ಈಪರಿ ಬಂದಿಹೆ ಭ್ರಾಂತಾ ॥
ಜೋಜೋಜೋಜೋ ಗಿರಿಜೆಯಾನಂದಾ । ಜೋಜೋಜೋಜೋ ಸದ್ಗುಣ ಸಾಂದ್ರಾ ॥ ಜೋಜೋ ॥22॥

ಜೋಜೋಜೋಜೋ ಹೆಸರಿನ ವಿಧಿಯೇ । ಜೋಜೋಜೋಜೋ ನೋಡೆ ಯೀ ವಿಧಿಯೆ ॥
ಜೋಜೋ ಧನ್ಯಳು ನಾನೆ ಈ ಕೀರ್ತಿ । ಜೋಜೋ ಹಾಡುವರಿಗೆ ಮುಕ್ತಿಪ್ರಾಪ್ತಿ ॥ ಜೋಜೋ ॥23॥

ಮುನಿಯು ತಾನಾಹ್ನಿಕವ ತೀರಿಸಿ । ಮನೆಗೆ ನಡೆತರಲಿದನು ನೋಡಿದ । ನನಿಮಿಷೇಕ್ಷಣರನ್ನು ತೊಟ್ಟಿಲ ಜೋಗುಳವ ಕೇಳಿ ॥
ವನಿತೆಯನು ಕೇಳಿದನು ಕೇಳ್ದು । ಮನದಿ ಸಂತಸ ತಾಳಿ ಭಾರ್ಯೆಯ । ವಿನುತವರ್ತನ ನೋಡಿ ಮಹಾದಾನಂದವನು ತಾಳ್ದು ॥24॥

ಮುರಮಥನ ನಿನ್ನಯ ಮಹಾತ್ಮ್ಯೆಯ । ನರಿಯದಾದವು ನಿಗಮಗಳು ನೀ । ಪರಿಕಿಸಲು ಬಂದಿಯೊ ಕಣಾ ಸತ್ವವನು ಭಾರ್ಯೆಯಲಿ ॥
ತಿರುಗಿ ಮಾನವ ವೇಷದಲಿ ನೀ । ಧರೆಯ ಭಾರವ ಹರಿಸಿ ದೈತ್ಯರ । ನಿರದೆ ಸಂಹರಿಸಿದೆಯೊ ಬಾಲಕನಾಗು ನಮಗೀಗಾ ॥25॥

ವಿರಚಿಸಿದೆ ಭುವನಾಳಿಗಳ ನೀ । ಸರಸಿಜಾಸನ ನಿನ್ನ ವೇದಗ । ಳರಿಯದಸುರರು ವೊಯ್ಯಲಾ ಮುರಮಥನ ದೈತ್ಯರನು ॥
ಹರಿದು ವೇದವ ತರಿಸಿ ಸೃಷ್ಟಿಯ । ವಿರಚಿಸಿದೆ ಶ್ರಮವಾಯ್ತು । ಶ್ರಮವನು ಹರಿಸು ಯೆನ್ನಾಶ್ರಮದಿ ಸತಿಯಳ ಮಾತೃ ಪ್ರೇಮದಲಿ ॥26॥

ಹರನೆ ಮನ್ಮಥಹರನೆ ಜಗದೀ । ಶ್ವರನೆ ಮುಕ್ಕಣ್ಣನೆ ಸದಾಶಿವ । ಭರಣವೆಲ್ಲಿಹುದಹಿಗಣವ ನೀನೆತ್ತ ಬಿಚ್ಚಿಟ್ಟೆ ॥
ಸುರನದಿಯು ತಾನೆತ್ತ ಪೋದಳು । ಭರದಿ ಮೂರನೆ ಕಣ್ಣ ಬಿಟ್ಟಾ । ಎರಡ ಕಣ್ಣಿಲಿ ಬಾಲನಾದೆಯೊ ಶರಣು ನಿನಗೆಂದಾ ॥27॥

ನುತಿಸಲೀಪರಿಯಲ್ಲಿ ತ್ರೈಮೂ । ರುತಿಗಳೊಲಿದರು ದಿವ್ಯ ವೇಷದಿ । ಯತಿಯ ಕೊಂಡಾಡಿದರು ಸತಿಗೆರಗಿದರು ಚರಣದಲಿ ॥
ಅತಿವಿಚಿತ್ರ ವಿದಾಯ್ತು ನಿನ್ನಯ । ಸತಿಯ ಪಾತಿವ್ರತ್ಯ ಮಹಿಮೆಯು । ಕ್ಷಿತಿಯೊಳದುಭುತವಾಯಿತನುಪಮ ಕೀರ್ತಿ ಪಸರಿಸಿತು ॥28॥

ನಿನ್ನ ಪತ್ನಿಯ ಮಹಿಮೆ ತಿಳಿಯದೆ । ಬನ್ನ ಬಟ್ಟೆವು ನಾವು ಬೆಂಕಿಯ । ತಿನ್ನುವಭಿಲಾಷೆಯನು ಮಾಡಿದೆವಮಮ ತಪ್ಪಾಯ್ತು ॥
ಚಿನ್ನಕಾಪುಟವಿಡಲು ಕಿಲ್ಬಿಷ । ವನ್ನು ತೊರೆಯುವ ತೆರದಿ ನಿನ್ನಯ । ಪತ್ನಿ ನಿರ್ದೋಷಿಣಿಯು ವರವನು ಬೇಡುಬೇಡೀಗಾ ॥29॥

ಎನಲು ಮುನಿ ಸಂತೋಷದಿಂದಲಿ । ವನಿತೆಯಳ ಮೊಗ ನೋಡಿ ಪೇಳ್ದನು । ಮನದ ಬಯಕೆಯ ಪೇಳು ತ್ರೈಮೂರ್ತಿಗಳೆ ವಶವಿಹರು ॥
ಎನಗೆ ನೋಡಿದರಿಂದಧಿಕ ಪಾ । ವನ ಸುಕರ್ಮವು ತೋರದೆಂದಾ । ಮುನಿಯು ಪೇಳಲು ಸತಿಯು ನಸುನಗುತೆಂದಳನಸೂಯೆ ॥30॥

ಪತಿಯ ಚರಣಗಳೆನಗೆ ಪರದೈ । ವತವೆನುತ ನಂಬಿರ್ದೆ ತ್ರೈಮೂ । ರುತಿಗಳೇ ಸಾಕ್ಷಿಗಳು ಪತಿಯಾಜ್ಞೆಯಲಿ ಬೇಡುವೆನು ॥
ಸುತರು ನೀವಿರಬೇಕು ಯೆನ್ನಯ । ಮತವ ಪೇಳ್ವೆನು ವರವನಿದನೀ । ಪತಿಕರಿಸಿ ತಾವೆಂದು ಬಿನ್ನಹಗೈದಳಾ ಸತಿಯು ॥31॥

ಎಲೆ ಹಸಾದವೆನುತ್ತ ವರವನು । ಲಲನೆಗಿತ್ತರು ಪೆಸರ ಪೇಳ್ದರು । ನಳಿನ ನಾಭನು ದತ್ತನಾದನು ಹರನು ದುರ್ವಾಸಾ ॥
ಜಲಜಸಂಭವ ಚಂದ್ರನಾದನು । ಬಳಿಕ ತಾಯಡಿಗೆರಗಿ ಪೋದನು । ಇಳೆಯೊಳಗೆ ಭಿಕ್ಷಾಟಣದೊಳಾ ಮುನಿಪ ದುರ್ವಾಸ ॥32॥

ಶಶಿಯು ತಾಯಿಗೆ ಬಂದು ಬೇಡಲು । ಶಶಿಮುಖಿಯು ಮನ್ನಿಸಿದಳಾಕ್ಷಣ । ಬಿಸಜವೈರಿಯು ತೆರಳಿದನು ಕೇಳ್ ಗಗನಮಂಡಲಕೆ ॥

ಬಿಸಜನಾಭನು ದತ್ತನಾಮದಿ । ಋಷಿಯ ಪರ್ಣಾಶ್ರಮ ದೊಳಿದ್ದನು । ವಸುಮತಿಯನುದ್ಧರಿಸಲೋಸುಗ ಜಗಕೆ ಗುರುವಾಗಿ ॥33॥

ಗುರುವಿವನು ಶ್ರೀದತ್ತರಾಜನು । ಗುರುಪರಂಪರೆಗಾದಿಮೂರುತಿ । ಧರಿಸಿ ಕೆಂಜೆಡೆ ಯುಟ್ಟಪೀತಾಂಬರದ ಸೊಬಗಿನಲಿ ॥

ಕರದಿ ದಂಡ ಕಮಂಡಲುಂಗಳ । ನಿರದೆ ತಾ ಧರಿಸುತ್ತ ಜಗದೊಳು । ಶರಣ ರಕ್ಷಕನಾಗಿ ತಿರುಗುವ ವಿಷ್ಣು ರೂಪನಲಾ ॥34॥

॥ ಅಧ್ಯಾಯ 4 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 5

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಶರಣ ರಕ್ಷಕನೆಂಬ ಬಿರುದಿನ । ಗುರುವರನು ಶರಣರನು ಕಾಯಲು । ಧರಣಿಯೊಳಗವತರಿಸಿದನು ಶ್ರೀಪಾದನಾಮದಲಿ॥

ಹರಿಹರ ವಿರಂಚಿಗಳು ಭಾವಸಾ । ಗರದಿ ಮುಳುಗಿದರಕಟ ಕಾಮಿನಿ । ಯರ ಬಲೆಗೆ ಸಿಲುಕಿದರು ಭಕ್ತರ ತರಿಸುವವರಾರು ॥
ಶರಣ ರಕ್ಷಕನೆಂಬ ಬಿರುದನು । ಧರಿಸಿ ತಾಪಸ ವೇಷದಲಿ ಗುರು । ವರನು ಸಂಜನಿಸಿದನು ಭಕ್ತಕುಟುಂಬಕನು ಜಗದಿ ॥1॥

ಕೇಳಿದ್ಯೆ ನೀ ನಾಮಧಾರಕ । ತಾಳ್ದನವತಾರಗಳ ಲಕ್ಷ್ಮೀ । ಲೋಲ ಜಗದೊಳಗಂಬರೀಷನ ಕಾಯ್ವ ನೆವದಿಂದಾ ॥
ಶೀಲಧರ್ಮಾದಿಗಳ ಜಗದಲಿ । ಹಾಳು ಮಾಳ್ಪರಕೊಂದು । ಧರ್ಮದ ಪಾಲಕನು ತಾನೆನಿಕೊಂಬನು ವಿಷ್ಣು ಯುಗಯುಗದಿ ॥2॥

ವೇದಗಳ ಕದ್ದೊಯ್ದ ಖೂಳನ । ಛೇದಿಸಲು ಶ್ರೀ ವಿಷ್ಣುವು ತಾ ಮೀ । ನಾವತಾರವ ತಾಳಿ ಕೂರ್ಮದಿ ಗಿರಿಯ ನಾಂತನಲಾ ॥
ಮೇದಿನಿಯ ಕದ್ದೊಯ್ದ ದೈತ್ಯನ । ಛೇದಿಸಿದನು ವರಾಹನಾ ಪ್ರಾ । ಹ್ಲಾದನನು ರಕ್ಷಿಸಿದನೈ ನರಸಿಂಹ ರೂಪದಲಿ ॥3॥

ಇಳೆಯ ದಾನವ ಬೇಡಿ ವಾಮನ । ಬಲಿಯ ಮೆಟ್ಟಿದ ಕ್ಷಾತ್ರ ಕುಲವನು । ಕೊಲುತ ಪೃಥ್ವಿಯ ದಾನವಿತ್ತನು ಭೃಗುಜ ರೂಪದಲಿ ॥
ಖಳ ದಶಾಸ್ಯನ ಕುಲಸಹಿತ ಯಮ । ನಿಳಯಕಟ್ಟಿದ ರಾಮಾನಾಗೋ । ವಳರ ಕುಲದಲಿ ಪುಟ್ಟಿ ಕಂಸನ ಕೊಂದ ಕಂಸಾರಿ ॥4॥

ಮೂರು ಪುರಗಳ ಸಂಹರಿಸಲಾ । ನಾರಿಯರ ವ್ರತ ಕೆಡಿಸಿ ಬೌದ್ಧಾ । ಕಾರದಲಿ ಜಗವರಿಯೆ ಬತ್ತಲೆಯಾಗಿ ನಿಂತನಲಾ ॥
ಏರಿ ಕುದುರೆಯ ಮೇಲೆ ಭೂಮಿಯ । ಭಾರವನು ಸಂಹರಿಸೆ ಕಲ್ಕ್ಯ ವ । ತಾರವನು ಕೈ ಕೊಂಬನ್ಯೆ ದಶ ವೇಷ ಧಾರಿಯಲಾ ॥5॥

ಹತ್ತುಪರಿಯಲಿ ವೇಷವೆತ್ತಿ ಜ । ಗತ್ತಿನಲಿ ಸತ್ಕೀರ್ತಿ ಪಡೆದನು । ಮತ್ತಿಹವು ನೂರಾರು ವೇಷಗಳೇನ ವರ್ಣಿಸಲಿ ॥
ಭಕ್ತಜನರನು ರಕ್ಷಿಸಲು ತಾ । ನೆತ್ತುವನು ನರವೇಷವನು ಗುರು । ಸತ್ತಮನು ತ್ರೈಲೋಕ್ಯ ಕಲ್ಯಾಣೇಚ್ಛು ತಾನಿಹನು ॥6॥

ಸಗರಪುತ್ರೋದ್ಧರಣ ಕಾರಣ । ಜಗಕೆ ಭಾಗೀರಥಿಯ ತಂದನು । ಸಗರಕುಲದೀಪಕನಲಾ ಕೇಳಾ ಭಗೀರಥನು ॥
ಸುಗುಣಿಯೋರ್ವಳು ವಿಪ್ರವನಿತೆಯು । ಸುಗುಣ ಗುರುಪದ ಧ್ಯಾನಮಾತ್ರದಿ । ಮಗನ ಪಡೆದಳು ದತ್ತರಾಜನ ನೇನು ಧನ್ಯತೆಯೊ ॥7॥

ಧರಣಿಯಲಿ ರಂಜಿಪುದು ಪೀಠಾ । ಪುರವರವು ಕೇಳ್ ಪೂರ್ವದೇಶದೊ । ಳಿರುವನ್ಯೆ ತತ್ಪುರದೊಳಾಪಸ್ತಂಬ ಶಾಖೆಯಲಿ ॥
ಗುರುಚರಣ ಸದ್ಭಕ್ತನ್ಯೆ ಭೂ । ಸುರನು ಆಪಳರಾಜನಾಮದಿ । ತರುಣಿ ಯವನಿಗೆ ಸುಮತಿಯೆಂಬಳು ಪತಿಪರಾಯಣಳು ॥8॥

ಪತಿಯೆ ದೈವತವೆಂದು ಭಾವಿಸಿ । ಸತಿಸುಮತಿ ಪತಿ ಪೂಜೆ ಮಾಳ್ಪಳು । ಅತಿಥಿ ಅಭ್ಯಾಗತರ ಸಂತೈಸುವಳು ಸಾದರದಿ ॥
ಸತತವೀಪರಿಯಿಂದ ಸುಮತಿಯು । ಪತಿಪರಾಯಣಳಾಗಿ ನಡೆವಳು । ಯತಿವರ ಶ್ರೀದತ್ತರಾಜನು ಮೆಚ್ಚಿದನು ಗುಣಕೆ ॥9॥

ಕ್ಷಿತಿಯೊಳಗೆ ಮಧ್ಯಾಹ್ನ ಕಾಲದೊ । ಳತಿಥಿರೂಪದಿ ದತ್ತರಾಜನು । ಸತತ ತಿರುಗುವನೆಂದು ನಾಣ್ನುಡಿ ಸುಪ್ರಸಿದ್ಧವಲಾ ॥
ಯತಿವರೇಣ್ಯನು ದತ್ತರಾಜನು । ಸತಿಸುಮತಿಯನು ಪರಿಕಿಸಲು ತಾ । ಕೃತಕ ರೂಪದಿ ಬಂದನ್ಯೆ ಮಧ್ಯಾಹ್ನ ಕಾಲದಲಿ ॥10॥

ಆ ದಿವಸವಮಾವಾಸ್ಯ ಪಿತರರ । ಶ್ರಾದ್ಧವಿತ್ತಾ ದ್ವಿಜನ ಮನೆಯಲಿ । ಬೇಧವಿಲ್ಲದೆ ಭಿಕ್ಷುಕಂಗಾ ಭಿಕ್ಷೆಯಿತ್ತಳಲಾ ॥
ಆದಯಾನಿಧಿ ದತ್ತಮೂರ್ತಿಯು । ಮೋದದಿಂದಾ ಸತಿಯ ಭಾವಕೆ । ತೋರ್ದನಾಗಲು ನಿಜಸ್ವರೂಪವ ಭಕ್ತವತ್ಸಲನು ॥11॥

ಮೂರು ಮೂರ್ತಿಗಳಾಗಿ ಭಿಕ್ಷುಕ । ನಾರಿಗಭಿವಂದಿಸಿದನಾಕ್ಷಣ । ಚಾರು ಭಕ್ತಿಗೆ ಮೆಚ್ಚಿದೆನು ನೀ ಬೇಡು ವರವೆಂದಾ ॥
ಭಾರಿ ಸಂತೋಷದಲಿ ಯತಿಪದ । ವಾರಿಜಕೆ ತಲೆಬಾಗಿ ಯೆನ್ನಮ । ನೋರಥವ ಸಲಿಸೆಂದು ನಾನಾ ತೆರದಿ ಪೊಗಳಿದಳು ॥12॥

ಐದು ವರುಷದ ಕೂಸು ಧ್ರುವನನು । ಬೈದು ಮಲತಾಯ್ ನೂಕಲವನಿಗೆ । ನೀ ದಯಾನಿಧಿ ಯಚಲಪದವನು ಕೊಟ್ಟು ರಕ್ಷಿಸಿದೆ ॥
ಆ ದಶಾನನ ಮುನಿದು ತನ್ನ ಸ । ಹೋದರನ ಹೊರಹಾಕಲವನಿಗೆ । ನೀ ದಯಾನಿಧಿ ಲಂಕೆಯಧಿಪತ್ಯವನು ಕೊಟ್ಟೆಯಲಾ ॥13॥

ಶರಣರನು ಪಾಲಿಸುವೆನೆಂಬೀ । ಬಿರುದ ಕಾಯ್ವರೆ ಧರಣಿಯೊಳು ನೀ । ಪರಿಪರಿಯ ವೇಷದಲಿ ಯುಗಯುಗದಲ್ಲಿ ತಿರುಗುತಿಹೆ ॥
ವರವ ನೀ ಕೊಡಬೇಕು ಭಕ್ತರ । ಸುರತರುವಲಾ ನೀನು ನಿನ್ನಯ । ಚರಣಕಮಲಕೆ ವಂದಿಪೆನು ತಾನೆಂದಳಿಂದುಮುಖಿ ॥14॥

ಪತಿತ ಪಾವನ ಜಗಕೆ ಜೀವನ । ಗತಿಯನಾಥರ ನಾಥ ನೀನೇ । ಪತಿಕರಿಸು ನೀನಬಲೆಯನು ನಾರಾಯಣನೆ ಜಗಕೆ ॥
ನುತಚರಣ ಭವಹರಣ ಲಕ್ಷ್ಮೀ । ಪತಿಯೆ ದಾನವಮಥನ ಭಕ್ತಿಯ । ಮತಿಯ ನೀನೆಗಿತ್ತು ಸಲಹೆಂದಳು ಸತಿಯು ಸುಮತಿ ॥15॥

ತಾಯೆ ನಿನಗಾಂ ವರವನಿತ್ತೆನು । ಬಾಯ ಬಿಡು ನೀ ಕೇಳು ಕೊಡುವೆನ । ಲಾಯತಾಂಬಾಕಿ ಪೇಳ್ದಳಾಕ್ಷಣ ಪರಮ ಸಂತಸದಿ ॥
ತಾಯೆ ಎಂದೇ ಕರೆದೆ ಯೆನ್ನನು । ಬೀಯವಾಗದು ನಿನ್ನ ಮಾತದು । ತೋಯಜಾಕ್ಷನೆ ನೀನೆ ಮಗನಾಗೆಂದ ಳಿಂದುಮುಖಿ ॥16॥

ಶರಣ ರಕ್ಷಕ ಪುತ್ರರೆನಗಾ । ದರು ಅನೇಕರು ಪುಟ್ಟಿದಾಕ್ಷಣ । ಮರಣವಶವಾದರು ಕಣಾ ಬಳಿಕುಳಿದವರ ಗತಿಯು ॥
ಕುರುಡ ಕುಂಟರು ಪುತ್ರರಿಹರೀ । ಪರಿಯ ಪೂರ್ವಾರ್ಜಿತವ ನುಂಡೆನು । ಕರುಣಿಸೈ ಪುತ್ರರನು ವೇದಪುರಾಣ ಪಂಡಿತನಾ ॥17॥

ನುಡಿಯ ಕೇಳ್ದು ದತ್ತರಾಜನು । ಸಡಗರದಲಿ ತಥಾಸ್ತು ಯೆಂದನು । ನುಡಿವೆನೊಂದೇಮಾತ ನಿನ್ನಯ ಬಯಕೆ ಫಲಿಸುವುದು ॥
ಪೊಡವಿಯೊಳಗವತರಿಸುವೆನು ನಾ । ಹುಡುಗನಾದರೆ ಯೆನ್ನ ಮಾತಿಂ । ಗೊಡಬಡಲು ಬೇಕೆಂದು ಬಿನ್ನೈಸಿದನು ಗುರುರಾಯ ॥18॥

ವನಿತೆಗೀಪರಿ ವರವನಿತ್ತನು । ವಿನುತ ಚರಣನು ದತ್ತರಾಜನು । ಮನದಿ ಹಿಗ್ಗಿದಳಾವನಿತೆ ಕೇಳ್ ವರವ ನೆನೆನೆನೆದು ॥
ವಿನಯದಿಂ ನಿಜಪತಿಯ ಕರೆದಳು । ಸನುಮತವ ಕೇಳಿದಳು ಪತಿರಾ । ಜನಿಗೆ ಬಿನ್ನೈಸಿದಳು ನಡೆದಿಹ ಸಂಗತಿಯನೆಲ್ಲಾ ॥19॥

ಹರುಷವಾಯಿತು ಪತಿಗೆ ಭೀಕ್ಷುಕ । ಗುರುವರನು ಶ್ರೀದತ್ತರಾಜನು । ತಿರುಗುವನು ಮಧ್ಯಾಹ್ನಕಾಲದೊಳತಿಥಿ ವೇಷದಲಿ ॥
ಮರೆಯದವನಿಗೆ ಭಿಕ್ಷೆ ಹಾಕಲು । ಕರುಣಿಸುವ ಕಾಮಿತವ ಕೇಳ್ಮಾ । ಹುರದಿ ಕರವೀರದಲಿ ವಾಸಿಪ ದತ್ತಗುರುರಾಯಾ ॥20॥

ಕೃತಕ ವೇಷದಿ ದತ್ತ ಬರುವನು । ಯತಿವಾರಗೆ ಮಧ್ಯಾಹ್ನ ಕಾಲದಿ । ಸತತ ಭಿಕ್ಷೆಯ ನೀಡು ಯೆನ್ನನುಮತಿಯ ಬೇಡದಲೆ ॥
ಪತಿಯು ಈ ಪರಿ ಪೇಳಲಾಕ್ಷಣ । ಸತಿಯು ನುಡಿದಳು ಯಿಂದು ನಿಮ್ಮನು । ಮತಿಯ ಕೇಳದೆ ಭಿಕ್ಷೆ ನೀಡಿದೆನೆಂದಾಳಾ ಸುದತಿ ॥21॥

ಲೇಸು ಮಾಡಿದೆ ಸತಿಯೆ ಯೆನಗತಿ । ತೋಷವಾಯಿತು ಪಿತರಿಗೆನ್ನಯ । ವಾಸಿಯಾಯಿತು ಧನ್ಯರಾದರು ಪಿತೃಗಳೆಮ್ಮವರು ॥
ಭೂಸುರರ ನುಣಿಸುವುದು ತತ್ಫಲ । ದಾಶೆಯಿಲ್ಲದೆ ಕೃಷ್ಣಗರ್ಪಣೆ । ಯೀಸಮಯದಲಿ ಕೃಷ್ಣನೇ ಬಂದೂಟಮಾಡಿದನು ॥22॥

ವರವ ಪಡೆದಿಹ ಧಾನ್ಯಳಾರೀ । ಧರೆಯೊಳಗೆ ನಿನ್ನಂತೆ ಬೇರಾ । ರಿರುವರೈ ನಿನ್ನುದರದಲಿ ಲೀಲಾವತಾರಿ ಹರಿ ॥
ಬರುವನೈಯವತಾರವಾಗುವ । ದರರೆ ಚಿತ್ರವಿದಾಯ್ತು ವಂಶಗ । ಳೆರಡು ನಮ್ಮವು ಧನ್ಯವಾದವು ಯೆಂದನಾ ದ್ವಿಜನು ॥23॥

ಸುದತಿ ಗರ್ಭಿಣಿಯಾದಳೈ ಗುರು । ಪದದ ಕರುಣವಗಾಧ ನವಮಾ । ಸದಲಿ ಶುಭದಿವಸದಲಿ ಸಂಜನಿಸಿದನು ಗುರುರಾಯ ॥
ಮುದದಿ ಭೂಸುರ ವೃಂದವೆಲ್ಲವು । ವೊದಗಿ ತಾ ವಿಪ್ರನಲಿ ಜಾತಕ । ವಿಧಿಯ ಮಾಡಿದರೇನ ಹೇಳುವೆ ದ್ವಿಜನ ಭಾಗ್ಯವನು ॥24॥

ಜಾತಕರ್ಮವ ಮಾಡಿ ದಿವಿಜ । ವ್ರಾತ ಫಲವನು ವರ್ತಿಸಿತು ಮು । ನ್ನೀತ ತ್ರಿಜಗದ್ವಂದ್ಯ ನುದ್ಧರಿಸುವನು ಕುಲವೆರಡಾ ॥
ಈತ ಕೊಡುವನು ಜಗಕೆ ದೀಕ್ಷೆಯ । ನೀತನೇ ತಾಪಸ ಶಿರೋಮಣಿ । ಯೀತನಿಂದ ಪುನೀತವಪ್ಪುದು ತೀರ್ಥವೃಂದವಲಾ ॥25॥

ಎನುತ ವಿಪ್ರರು ಜಾತಕದ ಫಲ । ವನು ವಿನೋದದಿ ಪೇಳ್ದರಾದಿನ । ಮಣಿಯ ತೆರದಲಿ ಶೋಭಿಸಿದನಾ ಬಾಲಯತಿವರನು ॥
ದಿನಗಳಾದವು ಹದಿನೆರಡು ಬಾ । ಲನಿಗೆ ನಾಮವನಿಟ್ಟರಾ ದ್ವಿಜ । ಗಣವು ಶ್ರೀಪಾದವಲ್ಲಭ ನೆನುತ ಮೋದದಲಿ ॥26॥

ಏಳುವರುಷಗಳಾದವೈ ತದ್ । ಬಾಲನಿಗೆ ವ್ರತಬಂಧವಾಯಿತು । ಪೇಳಲಾರಂಭಿಸಿದನೈ ವೇದಗಳನೆಲ್ಲವನು ॥
ಹೇಳಿದನು ಮೀಮಾಂಸತರ್ಕವ । ಪೇಳಿದನು ವೇದಾಂತ ಭಾಷ್ಯವ । ಪೇಳಿದನು ವ್ಯವಹಾರ ಪ್ರಾಯಶ್ಚಿತ್ತ ಸಂಸ್ಕಾರ ॥27॥

ಕೇಳಿ ವಿಸ್ಮಿತ ರಾದರೈ ವಿ । ಪ್ರಾಳಿ ತಲೆದೂಗಿದರು ಬಾಲನ । ಲೀಲೆಯನು ನೋಡಿದರುಚೋದ್ಯವನಾರು ಹೊಗಳುವರು ॥
ಬಾಲನಿಗೆ ಹದಿನಾರು ವರುಷದ । ಮೇಲೆ ವೈವಾಹವನು ಮಾಡಲು । ಕೇಳಿದರು ಪುತ್ರನಿಗೆ ವಾಂಛಿತವೇನು ನಿನಗೆಂದು ॥28॥

ಮಾತೆ ಕೇಳೌ ಯೆನ್ನ ಮಾತನು । ಪ್ರೀತಿಯಿಂದಲಿ ಲಗ್ನವಾಗುವೆ । ಭೂತಳದಿ ಕರೆತರಲು ಪತ್ನಿವಿರಕ್ತಿ ಭಾಮಿನಿಯಾ ॥
ಮಾತೆಸಮ ಮಿಕ್ಕುಳ್ಳ ಸ್ತ್ರೀಯರು । ಕಾತರಿಸದಿರು ಮನದೊಳೆರಡನೆ । ಮಾತನರಿಯೆನು ಯೆನಗೆ ವೈರಾಗ್ಯವೆ ಸುಕಾಮಿತವು ॥29॥

ತಾಪಸವ್ರತ ವೆಮಗೆ ಕಾಮ್ಯವು । ಕೋಪ ಬೇಡೌ ಯೆನ್ನ ಮೇಲಾ । ಲೋಪವಾಗದೆ ಬ್ರಹ್ಮಚರ್ಯವ ಚರಿಸುವೆನು ನಾನು ॥
ಈ ಪರಿಯಲಾ ಸುತನು ಪೇಳ್ದನು । ಜ್ಞಾಪಕಕೆ ಬಂತವನ ಭಾಷಿತ । ಶ್ರೀಪತಿಯೆ ತಾಹಿಂದೆ ಪೆಳ್ದುದ ಸ್ಮರಿಸಿದಳು ಮಾತೆ ॥30॥

ಅಲ್ಲವೆಂದರೆ ಮಗನು ಕೇಳನು । ಸೊಲ್ಲನೆನ್ನಯ ಹಿಂದಕಾ ಶ್ರೀ । ವಲ್ಲಭನು ನುಡಿದಂತೆ ಬಾಲನು ಬಿಡನು ನಿಜಮತವಾ ॥
ಮೆಲ್ಲನಿವನನು ಭೋದಿಪೆನು ತಾ । ಸಲ್ಲಲಿತ ಮಾತಿನಲೆನುತ ದ್ವಿಜ । ವಲ್ಲಭೆಯು ಪುತ್ರನಿಗೆ ಮುದ್ದಿಸುತೆಂದಳಕ್ಕರದಿ ॥31॥

ಪುತ್ರ ನಿನ್ನಯ ಮಾತ ಕೇಳೀ । ನೇತ್ರಗಳು ಕೇಳ್ ತುಂಬಿ ಬರುವವು । ಪುತ್ರ ಮೋಹದೊಳಿದ್ದೆ ನೀನಾಧಾರವೆಮಗೆಂದು ॥
ಚಿತ್ರವಾಯ್ತೆಮಗಿಂದು ಕಾಣೆನು । ಧಾತ್ರಿಯಲಿ ರಕ್ಷಿಪರ ಕೇಳ್ಕೈ । ಉತ್ತಮಾಂಗನೆ ಯೆನುತ ಮೂರ್ಛಿ ತಳಾದಳಾ ಜನನಿ ॥32॥

ಕರುಣದಿಂದಾ ತಾಯನೆಬ್ಬಿಸಿ । ಗುರುವರನು ಸಂತೈಸಿದನು ನೀ । ಮರುಗಬೇಡೌ ತಾಯೆ ಬೇಕಾದುದನು ಬೇಡೀಗಾ ॥
ಕರುಣಿಸುವೆ ನಾ ನಿನಗೆ ಮನದಲಿ । ಯೆರಡನೆಯ ಮತ ಬೇಡ ನಾನೀ । ಪರಿಣಯವನೊಲ್ಲೆನು ಯೆನುತ್ತಲಿ ಪೇಳ್ದನಾ ಮಗನು ॥33॥

ವೃದ್ಧರಾಗಿಹವಿನ್ನು ಯೆಮ್ಮನು । ಮುದ್ದಿಪರು ಯಾರಿನ್ನು ಮಕ್ಕಳು । ಯಿದ್ದು ಫಲವೇನಿನ್ನು ಯಿಬ್ಬರು ಕುರುಡ ಕುಂಟರಲಾ ॥
ಬುದ್ದಿಯೆನ್ನದು ಭ್ರಷ್ಟ ವಾದುದು । ಮುದ್ದುಮಗನೇ ದೂಡಿ ನಮ್ಮನು । ಯೆದ್ದು ಹೋಗಲು ಬೇಡವೆಂದಳು ತುಂಬಿಕಂಬನಿಯಾ ॥34॥

ಕರುಣದಲಿ ಶ್ರೀಪಾದನಾಕ್ಷಣ । ಕರೆದನೈ ಸೋದರರ ಕರುಣಾ । ವರದ ದೃಷ್ಟಿಯ ನೆತ್ತಿದನು ಯೇನೆಂಬೆನದ್ಭುತವಾ ॥
ಕುರುಡನಿಗೆ ಬಂತಾಗ ದೃಷ್ಟಿಯು । ಚರಣ ಹೀನಗೆ ಚರಣ ಬಂತಾ । ಗುರುವರನ ಪೀಯೂಷ ದೃಷ್ಟಿಯ ಬಗೆಯ ನೇನೆಂಬೆ ॥35॥

ಪರುಷ ಸ್ಪರ್ಶದಿ ಕೀಳುಲೋಹಕೆ । ಬರುವುದೈ ಬಂಗಾರ ಯೋಗ್ಯತೆ । ವರವನಿತ್ತನು ಮಾತೆ ಕೇಳೌ ಚಿಂತೆ ಮಾಡದಿರಿ ॥
ಧರಣಿಯಲಿ ಧನ ಧಾನ್ಯ ಸಂಪತ್ । ಪರಮ ಸುತ ಸಂತಾನ ದಿಂದಲಿ । ಮೆರೆಯುವಿರಿ ಸುಖ ಸೌಖ್ಯ ಪಡೆವಿರಿ ಬೇಡ ಸಂಶಯವು ॥36॥

ಕೇಳು ನಿನ್ನೀ ಪುತ್ರರಿಬ್ಬರು । ಬಾಳುವರು ಪೂರ್ಣಾಯುಷಿಗಳಾ । ಬಾಲಬಾಲಕಿಯರನು ಪಡೆವರು ಪುತ್ರಪೌತ್ರರನು ॥
ತಾಳದಿರು ದುಃಖವನು ನೀ ದಯ । ಪಾಲಿಸೇನಗಾಜ್ಞೆ ಯನು ಲಕ್ಷ್ಮೀ । ಲೋಲ ನಿಮಗಿಹಪರದ ಸುಖವನು ಕೊಡುವ ತಾನೆಂದಾ ॥37॥

ಎಂದನಾ ಶ್ರೀಪಾದನಾಕ್ಷಣ । ತಂದೆ ತಾಯ್ಗಳ ಬಿಟ್ಟು ನಡೆದನು । ಮುಂದೆ ಕಾಶೀ ಪುರಕೆ ಬಂದನು ಗುಪ್ತ ರೂಪದಲಿ ॥
ಬಂದು ಬದರೀ ವನಕೆ ಮತ್ತಾ । ನಂದದಿಂದಲಿ ತೀರ್ಥರಾಜನ । ಮಿಂದು ನಂತರ ಬದರಿನಾರಾಯಣನ ನೋಡಿದನು ॥38॥

ಗುರುವರನು ತಾ ತೀರ್ಥಯಾತ್ರೆಯ । ಭರದಿ ಮಾಡುವ ಹೇತುವೆಂದರೆ । ಧರಿಸಿ ನರತನು ಭಕ್ತಜನರಿಗೆ ದೀಕ್ಷೆ ಕೊಡಲೆನುತಾ ॥
ಧರಣಿಯಲಿ ಗೋಕರ್ಣ ತೀರ್ಥಕೆ । ಬರಲು ಭಕ್ತೋದ್ಧ ರಣಕಲ್ಲದೆ । ಗುರುವಿ ಗೇತರ ತೀರ್ಥ ಪಾವನ ವಿಷ್ಣು ಮೂರುತಿಗೆ ॥39॥

॥ ಅಧ್ಯಾಯ 5 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 6

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಹರನು ಮೆಚ್ಚುತಲಾತ್ಮಲಿಂಗವ । ದುರುಳ ದಶಕಂಧರಗೆ ಕೊಡಲದ । ವರದ ಗಣಪನು ಮುದದಿ ಗೋಕರ್ಣದಲಿ ಸ್ಥಾಪಿಸಿದಾ॥

ವರಮುನಿಪ ದಯೆಯಿಂದ ನಿನ್ನಯ । ತಿಳಿವು ಬಂತಾ ಗುರುಚರಿತ್ರದ । ಪರಮ ಗುಹ್ಯದ ಬೀಜ ನೀನೀಯಂಧಕಾರದಲಿ ॥
ತರಣಿ ರೂಪದ ಜ್ಯೋತಿ ಪೇಳಾ । ಗುರುವರನು ತ್ರೈಮೂರ್ತಿಯಿರಲಾ । ಧರಣಿಯಲಿ ಗೋಕರ್ಣ ಕ್ಷೇತ್ರಕೆ ಬಂದಪರಿಯೇನು ॥1॥

ಪರಿಪರಿಯ ತೀರ್ಥಗಳು ಭೂಮಿಯೊ । ಳಿರಲು ಸರ್ವವ ಬಿಟ್ಟು ತಾ ಗೋ । ಕರಣ ತೀರ್ಥಕೆ ಯಾಕೆ ಬಂದನು ಮಹಿಮೆ ಯೇನಿಹುದು ॥
ಕರುಣಿಸೆಂದಾ ನಾಮಧಾರಕ । ಚರಣ ಕೆರಗಲು ಸಿದ್ಧಮುನಿ ತಾ । ನರುಹಿದನು ಸಂತೋಷದಿಂದಾ ತೀರ್ಥ ಮಹಿಮೆಯನು ॥2॥

ಗುರುಚರಿತ್ರವ ಕೇಳುವುದಕಾ । ತುರನು ನೀನಿರೆ ಯೆನಗೆ ಕಥನದ । ಸ್ಫುರಣ ಬರುತಿದೆ ಸಂತಸದ ಸಾಗರಕೆ ಚಂದ್ರನಲಾ ॥
ಶರಣರಕ್ಷಕ ನಾಗಿ ಭಕ್ತೋ । ದ್ಧರಣನೆಂಬೀ ಬಿರುದ ಧರಿಸಿದ । ಗುರುವರನು ತೀರ್ಥಾಟನವ ಮಾಡುವನು ಬೇರೇನು ॥3॥

ಮಿಂದ ಮಾತ್ರದಿ ತೀರ್ಥಗಳು ನಲ । ವಿಂದ ಪಾಪವ ದೂರ ಮಾಳ್ಪವು । ಮುಂದೆ ತೀರ್ಥದಿ ರಾಶಿಯಾಗಿಹ ಪಾಪಕೇನು ಗತಿ ॥
ಬಂದು ಗುರು ದರ್ಶನವ ಕೊಡುವುದ । ರಿಂದ ತೀರ್ಥದ ಪಾಪಗಳು ತ । ಮ್ಮಿಂದ ತಾವೇ ಬೆಂದು ಪೋಪವು ಚಿತ್ರವಿದು ಜಗದಿ ॥4॥

ಗುರುವರನು ತೀರ್ಥಾಟಣವ ಮಾ । ಡಿರುವ ಕಾರಣ ಕೇಳು ತೀರ್ಥೋ । ದ್ಧರಣವಲ್ಲದೆ ಗುರುವ ಪಾವನ ಮಳ್ಪರಾರಿನ್ನು ॥
ನರರ ವೇಷವ ಧರಿಸಿ ಭಕ್ತೋ । ದ್ಧರಣ ನರರಂತಾಚರಿಸುವನು । ಶರಣರಿಗೆ ತಿದ್ದುದಕೆ ಮೇಲ್ಪಂಕ್ತಿಯನು ಹಾಕುವನು ॥5॥

ಧರಣಿಯಲಿ ತೀರ್ಥಗಳನೇಕಗ । ಳಿರುತಿರಲು ಗೋಕರ್ಣ ಕ್ಷೇತ್ರಕೆ । ಗುರುವು ಬಂದಿಹ ಕಾರಣವ ನಾ ಪೇಳ್ವೆ ಮನವೊಲಿದು ॥
ಸುರವರರ ಸಮ್ಮತಿಯಲಾಗಣ । ವರನು ಗೋಕರ್ಣದಲಿ ಪರಮೇ । ಶ್ವರನ ಲಿಂಗವನಿರಿಸಿದನು ಕೇಳಾತ್ಮಲಿಂಗವನು ॥6॥

ಋಷಿ ಪುಲಸ್ತ್ಯನ ಭಾರ್ಯೆ ಕೈಕಯೆ । ದಶಶಿರನ ಹಡೆದವ್ವ ಕೇಳ್ಕೈ । ಪಶುಪತಿಯ ಪೂಜೆಯಲಿ ತತ್ಪರಳಿಹಳು ಯೋಗಿಯಲಾ ॥
ಪಶುಪತಿಯ ಲಿಂಗಕ್ಕೆ ಪೂಜೆಯ । ನೆಸಗದನ್ನವ ತಾನು ಗ್ರಹಿಸಳು । ವಿಷಮ ಸಂಗತಿ ಯಾಯ್ತುದೊಂದಿನ ಲಿಂಗ ಸಿಗದಿರಲು ॥7॥

ಮೃತ್ತಿಕಾ ಲಿಂಗವನು ಮಾಡಿದ । ಳುತ್ತಮಾಂಗಿಯು ಕೇಳು ತದ್ದಿನ । ಹತ್ತುಶಿರದವ ಬಂದು ನೋಡಿದ ನವಳ ಪೂಜೆಯನು ॥
ಚಿತ್ತದಲಿ ಖೇದವನು ತಾಳಿದ । ನುತ್ತರವ ಪೇಳಿದನು ತಾಯಿಗೆ । ಪುತ್ರ ಮೂಜಗ ಗಂಡ ನಾನಿರೆ ಯೋಗ್ಯವೇ ನಿನಗೆ ॥8॥

ಮೃತ್ತಿಕಾ ಲಿಂಗವನು ಪೂಜಿಪು । ದುತ್ತಮವೆ ಯೀ ವೃತದ ಮಹಿಮೆಯ । ವಿಸ್ತರಿಸಬೇಕೆಂದು ದಶಶಿರನೆರಗಿದನು ಪದಕೆ ॥
ಪುತ್ರ ರಾಯನೆ ಕೇಳು ವೃತದ ಮ । ಹತ್ವ ಕೈಲಾಸದಲಿ ವಾಸವು । ಮುಕ್ತಿ ಪದವೆಂದೆನಲು ತಾಯಿಗೆ ಪೇಳ್ದನಾ ಖಳನು ॥9॥

ತಾಯೆ ಚಿಂತಿಪೆ ಯಾಕೆ ನಿನಗಾಂ । ಪ್ರೀಯವಹ ಕೈಲಾಸವನು ತಾ । ಹೇಯವಿಲ್ಲದೆ ತಂದು ಮುಂದಿರುಸುವೆನು ಲಂಕೆಯಲಿ ॥
ಆಯಸವ ಬಿಡು ಮೂರು ಲೋಕದ । ರಾಯನವ್ವಗೆ ಮಣ್ಣಲಿಂಗವು । ತೋಯಜಾಕ್ಷಿಯೆ ಯೋಗ್ಯವೇ ನೀ ಪೇಳು ಜಗನಗದೆ ? ॥10॥

ಎಂದು ತಾಯನು ಸಂತವಿಸಿದ ದಶ । ಕಂಧರನು ರಭಸದಲಿ ನಡೆದನು । ಇಂದುಧರ ವಾಸಿಸುವ ಕೈಲಾಸಪರ್ವತಕೆ ॥
ಬಂದು ಪರ್ವತದಡಿಗೆ ಸಂಭ್ರಮ । ದಿಂದ ಮೊಳಕಾಲೂರಿ ದಶಶಿರ । ನೊಂದೆವೇಳೆಗೆ ಕಿತ್ತಿದನು ಕೇಳತುಳ ವಿಕ್ರಮವ ॥11॥

ಹತ್ತು ಕರಗಳ ಟೊಂಕಕೇರಿಸಿ । ಹತ್ತು ಶಿರಗಳ ನೊತ್ತಿ ಪರ್ವತ । ವೆತ್ತಿದನು ನಾ ಪೊಗಳಲಾರೆನು ದಶಶಿರನ ಬಲವಾ ॥
ಸತ್ಯಲೋಕವು ನಡುಗಿದುದ ಫಣಿ । ಮಸ್ತಕವು ಚಲಿಸಿಹುದು ಭರದಿಂ । ಸಪ್ತ ಪಾತಾಳಗಳು ನಡುಗಿದವಮಮ ಭೂಕಂಪಾ ॥12॥

ನಡುಗಿದುದು ಭಯಭೀತಿಯಲಿ ಸುರ । ಗಡಣ ಪ್ರಮಥಾದಿಗಳು ಫಣಿವರ । ಹೆಡೆಯ ಬಿಟ್ಟನು ಧರಣಿ ಕೂರ್ಮನು ನಡುಗಿದನು ಭಯದಿ ॥
ಗಡಬಡಿಸಿ ಗಿರಿಜಾತೆ ಬಂದಳು । ಮೃಡನ ಚರಣವ ಹಿಡಿದು ಭಯದಲಿ । ನುಡಿದಳೈ ಜಗದೊಡೆಯ ಕಾಯೋ ಜಗವ ಲೀಲೆಯಲಿ ॥13॥

ಗಿರಿಯು ನಡುಗುವ ಕಾರಣವ ನೆನ । ಗರುಹು ಪ್ರಾಣೇಶ್ವರನೆ ಕಂಪವ । ನರಿಯೆ ದೇವಾದಿಗಳು ಬಾಯ್ಬಿಟ್ಟಿರಲು ನೀನೆ ಗತಿ ॥
ಗಿರಿಜೆಯಾಡಿದ ನುಡಿಯ ಕೇಳ್ದಾ । ಹರನು ನಸುನಗುತೆಂದ ಕೇಳ್ದಶ । ಶಿರನು ಲೀಲೆಯನಾಡುವನು ಮದ್ಭಕ್ತಪರನಿಹನು ॥14॥

ಹರನ ವಚನವ ಕೇಳ್ದು ನುಡಿದಳು । ಗಿರಿಜೆ ಬಿನ್ನೈಸಿದಳು ಪ್ರಳಯದ । ಪರಿಯು ಬಂದಿದೆ ಕಾಯೊ ಭಕ್ತೋದ್ಧಾರ ದೇವೇಶಾ ॥
ಗಿರಿಜೆಯಾಡಿದ ನುಡಿಯ ಕೇಳ್ದನು । ಗಿರಿಯನೊತ್ತಿದನೆಡಚರಣದಲಿ । ಹರಹರಾ ದಶಶಿರನು ಸಿಕ್ಕಿದನದ್ರಿಯಲಿ ಕೆಳಗೆ ॥15॥

ದಶಶಿರನು ಸಿಲುಕಿದನು ಗಿರಿಯಡಿ । ಗುಸಿರಡಗಿ ಬಾಯಾರಿ ಚೀರಿದ । ನಸುವ ಕಾಯೋ ಭಕ್ತವರದನೆ ಶಿವಶಿವಾ ಯೆನಗೆ ॥
ಕುಸುಮಶರಹರ ದೇವ ನೀನಾ । ವಿಶವನುಂಡು ಜಗತ್ರಯವ ರ । ಕ್ಷಿಸಿದ ಫಣಿವರ ಭೂಷಣನೆ ನೀಕಾಯೋ ಗಿರಿಜೇಶಾ ॥16॥

ಸ್ತುತಿಯ ಕೇಳ್ದಾ ಹರನು ಭಕ್ತರ । ಸತತ ಕಾಯುವನೆಂಬ ಬಿರುದನು । ಸ್ಮೃತಿಪಥಕೆ ತಂದನು ಕೃಪಾನಿಧಿ ಕಾಲ ಸಡಿಲಿಸಿದಾ ॥
ಕ್ಷಿತಿಯೊಳಗೆ ಸುಕ್ಷೇಮದಿಂದಲಿ । ಗತಿಸಿದನು ದಶಶಿರನು ನಂತರ । ನುತಿಸಲಾರಂಭಿಸಿದನಾ ಹರ ದೇವದೇವನನು ॥17॥

ದಶಶಿರನು ಮನಗುಂದಿ ತಾಯಿಗೆ । ಬೇಸಸಿದುದ ನೆನೆನೆನೆದು ಮನದಲಿ । ಮುಸುಡ ದುಗುಡದ ಮನದಿ ಚಿಂತಿಸಿದನು ಮಹೇಶನನು ॥
ಪಶುಪತಿಯ ನಾವೊಲಿಸಿ ತಪದೋಳ । ಗಸಮ ವರವನು ಪಡೆವೆನೆಂದನು । ದಶವಾದನದಲಿ ಭಕ್ತಿಯಿಂ ಪೊಗಳಿದನು ಶಿವಗುಣವಾ ॥18॥

ಗಣಗಳೆಂಟನು ಬಾಯಲುಚ್ಚಾ । ರಣೆಯ ಮಾಡಿದನೇನ ಪೇಳ್ವೆನು । ನೆನೆದು ವೇದಸಹಸ್ರ ವರ್ಣ ಕ್ರಮವ ನನುಸರಿಸಿ ॥
ಗಣರಸಸ್ವರ ಯುಕ್ತ ಗಾ । ಯನವ ಮಾಡಿದನವನು ಲಂಕೇ । ಶನ ಹಟಕೆ ಸರಿಯಾರು ಹಾಡಿದ ಸಾಮವೇದವನು ॥19॥

ಗಾಯನವ ಮಾಡಿದನು ಲಂಕಾ । ರಾಯನಾ ಹಟಯೋಗದಲಿ ಶಿವ । ರಾಯ ಮೆಚ್ಚುವ ತೆರದಿ ನವರಸಭರಿತ ರಾಗದಲಿ ॥
ಗಾಯನವ ಮಾಡಿದನು ಲಂಕಾ । ನಾಯಕಾಣು ಕೇಳ್ ಸಾಮವೇದವ । ಪ್ರೀಯವಹ ರಾಗದಲಿ ರಾಗಿಣಿಯ ವಿನೋದದಲಿ ॥20॥

ಏಳುಸ್ವರಗಳ ಬೇರೆಬೇರಾ । ಮಾಲಿಕೆಯ ಮಾಡಿದನು ಸುಸ್ವರ । ಮೇಳದಲಿ ಬಹುವಿಧದ ರಾಗಂಗಳನು ಹಾಡಿದನು ॥
ಕೇಳು ಭೈರವಿ ಮುಖ್ಯರಾಗವ । ವೇಳೆಗನುಸರಿಸುತ್ತ ಕೌಶಿಕ । ಮಾಳಿ ತ್ರಾಟಿಕಿ ಮೋಟಿಕಿ ಟಂಕಾಕ್ಷಿ ಗುರ್ಜರಿಯಾ ॥21॥

ವಿಧವಿಧದ ರಾಗಗಳನಾದಶ । ವದನ ನಾಲಾಪಿಸಿದನೇನಾ । ವಿಧವ ಬಣ್ಣಿಪೆನೆಂತು ಮೂವತ್ತಾರು ರಾಗಗಳಾ ॥
ಉದಯ ಕಾಲದೊಳೆದ್ದು ಸಂಧ್ಯಾ । ಸುದತಿ ಬಂದಾ ರಾತ್ರೆಯಾಗಲು । ಉದಯಪರಿತೊಂದೇ ಸವನೆ ಹಾಡಿದನು ಖಳನು ॥22॥

ತನ್ನ ಶಿರವನು ತಾನೇ ಛೇದಿಸಿ । ಬನ್ನ ಬಟ್ಟನು ಕರದ ಕಮಲಿಕೆ । ಯನ್ನು ಮಾಡಿದ ಕರುಳ ತೆಗೆದಾ ತಂತಿ ಮಾಡಿದನು ॥
ಇನ್ನು ಬಣ್ಣಿಸಲೇನು ಶಕ್ಯವೆ । ಬಿನ್ನಹವ ಮಾಡಿದನು ಹರನು ಪ್ರ । ಸನ್ನನಾದನು ಮುಂದೆ ದಶಕಂಧರನ ಸಂತೈಸಿ ॥23॥

ಕೇಳು ದಶಕಂಧರನೆ ತಪದಿಂ । ದೇಳು ನಿನ್ನಯ ತಪಕೆ ಮೆಚ್ಚಿದೆ । ಪೇಳು ನಿನ್ನಯ ಮನದ ಬಯಕೆಯನೀಗ ಬೇಗದಲಿ ॥
ಭಾಳನಯನ ಮಧುರ ನುಡಿಗಳ । ನಾಲಿಸಿದನಾ ದೈತ್ಯರಾಯನು । ಕಾಲಮೇಲೆರಗಿದನು ಶಿವನಿಗೆ ಪೇಳ್ದನೀ ತೆರದಿ ॥24॥

ಏನು ಬೇಡುವೆ ನಿನ್ನ ಕೂಡಿ । ನ್ನೇನು ಕಡಿಮೆಯು ಎನಗೆ ಕೇಳ್ಚತು । ರಾನನನು ದಿನದಿನದಿ ಪಂಚಾಂಗವನು ಪೇಳುವನು ॥
ಸೂನು ದೇವೇಂದ್ರನನು ಗೆದ್ದವ । ಸ್ಥಾನ ಸಾಗರ ಮಧ್ಯದಲಿ ಸುರ । ಧೇನುವಿರುವುದು ಕೋಟಿವರುಷದ ಜೀವಮಾನವಲಾ ॥25॥

ಮನೆಯ ದಾಸಿಯು ಲಕುಮಿ ದೇವಿಯು । ಮನೆಯ ದಾಸಿಗಳಷ್ಟ ಸಿದ್ಧಿಗ । ಳೆನಗೆ ತೇತಿಸಕೋಟಿ ದೇವಾದಿಗಳು ಕಿಂಕರರು ॥
ಎನಗೆವಶವ ಹರಷ್ಟಪಾಲಕ । ರನಲ ರನಿಲಾದಿಗಳು ಸೇವಕ । ರೆನಗೆ ಭ್ರಾತನು ಕುಂಭಕರ್ಣನು ತ್ರಿಜಗ ಶೂರನಲಾ ॥26॥

ಇಂದುಧರ ನೀ ಕೇಳು ತವಕೃಪೆ । ಯಿಂದ ಸಾಧನವೆಲ್ಲ ವಿಪರಿ । ಯಿಂದ ಯೆನಗಿರಲಿನ್ನು ಜಗದೊಳು ಯಾರು ಸರಿಯೆನಗೆ ? ॥
ಕುಂದನೊಂದನು ಕಂಡೆ ನದರಿಂ । ಬಂದೆ ನಿನ್ನಯ ಚರಣ ಸೇವೆಗೆ । ಚೆಂದದಿಂ ಕೈಲಾಸವನು ನಾನೊಯ್ವೆ ನೆಂದೀಗಾ ॥27॥

ಜನನಿಗಿಹುದ್ಯೆ ವೃತವು ತವ ಪೂ । ಜನವ ಮಾಡಿದ ಬಳಿಕಲನ್ನವ । ನಿಣುವ ನೇಮವು ಯೆನಗೆ ನೀನಿದ ಕೊಡಲು ಬೇಕೀಗಾ ॥
ಜನನಿಗಭಿವಚನವನು ಕೊಟ್ಟಿಹೇ । ನಿನಗೆ ಕೈಲಾಸವನು ತರುವೆನು । ಯೆನುತ ಕೊಟ್ಟಿಹ ವಚನವನು ನೀ ಪಾಲಿಸಲು ಬೇಕು ॥28॥

ಈಸುಪರಿ ವೃತಕೇಕೆ ನೀ ಕೈ । ಲಾಸ ವೊಯ್ಯುವೆ ಲಂಕೆಗಿನ್ನಾ । ಯಾಸವಿಲ್ಲದೆ ನಿನ್ನ ಜನನಿಯ ಬಯಕೆ ತೀರಿಸುವೆ ॥
ಲೇಸು ನಿನಗಾನಾತ್ಮಲಿಂಗವ । ತೋಷದಿಂದಲಿ ಕೊಡುವೆ ನೀನು । ಲ್ಹಾಸದಿಂದದನೊಯ್ದು ಪೂಜಿಸು ಲಂಕೆಯಲಿ ಮುದದಿ ॥29॥

ಕಾಮಿತವನೆಲ್ಲವನು ಕೊಡುವುದು । ರಾಮಣೀಯಕ ಲಿಂಗವಿದನೀ । ನೇಮದಿಂ ಪ್ರತಿದಿವಸ ಪೂಜಿಸು ಮೂರುವೇಳೆಯಲಿ ॥
ಭೂಮಿಯಲಿ ಕೇಳಿದನು ನೀ ನಿ । ಸ್ಸೀಮ ಭಕ್ತಿಯಲೆಡಬಿಡದೆ ಭಜಿ । ಸಾಮಹಿಮೆ ನಿನಗೇನ ಹೇಳಲಿ ನೋಡು ನೀನಿದನು ॥30॥

ಯಾರು ಪೂಜಿಪರಿದನು ಭಾವದಿ । ಮೂರುವರುಷವು ಬಿಡದೆ ಪ್ರತಿದಿನ । ನೂರುಯೆಂಟಾವರ್ತಿ ಜಪವನು ಮಾಡುವರು ದೃಢದಿ ॥
ಧಾರುಣಿಯೊಳವರಾಗ ಪಡೆವರು । ಮಾರಹರನ ಸ್ವರೂಪವನು ಯಮ । ನೂರಕಾಣರು ಲಿಂಗ ದರ್ಶನ ಪಾಪನಾಶನವು ॥31॥

ಕರದಿ ನೀ ಪಿಡಿದಿದನು ಲಂಕೆಗೆ । ಭರದಿ ಪೋಗಲು ನಡುವೆ ನೀನಿದ । ಧರಣಿಯಲ್ಲಿಡಬಾರದ್ಯೆ ನೀನಿದನು ಪೂಜಿಸಲು ॥
ವರವ ಕೊಡುವೆನು ಮೂರು ಸಂವ । ತ್ಸರಕೆ ನೀನೀಶ್ವರನೆ ಯಾಗುವೆ । ತೆರಳು ಲಂಕೆಗೆನುತ್ತ ಲಿಂಗವನಿತ್ತನಾ ಶಿವನು ॥32॥

ಚರಣಕಭಿವಂದಿಸಿದನಾ ದಶ । ಶಿರನು ಲಿಂಗವ ಪಿಡಿದು ಕೈಯಲಿ । ತೆರಳಿದನು ಕೈಲಾಸದಿಂದಾ ವಾಯು ವೇಗದಲಿ ॥
ಸುರಮುನಿಯು ನಾರದನು ನೋಡಿದ । ನರರೆ ದೇವಾದಿಗಳ ಘಾತವ । ಹರನು ಮಾಡಿದನೆಂದು ತಾನೋಡಿದನು ಸುರಪುರಕೆ ॥33॥

ಸುರವರನೆ ಕೇಳಾತ್ಮಲಿಂಗವ । ಹರನು ದಶಕಂಧರನಿಗಿತ್ತನು । ವರವ ಕೊಟ್ಟನು ಮೂರುವರುಷದಿ ನೀನೆ ಹರನೆಂದು ॥
ಮರಣಭಯವೆಲ್ಲಿಂದ ದಶಕಂ । ಧರನಮರಪದ ಪಡೆದುನಿಂದಾ । ಸುರರ ದಾಸ್ಯತ್ವವು ನಿಮಗೆ ಕೇಳ್ ವಜ್ರ ಲೇಪವಲಾ ॥34॥

ಗೂಳೆಯವ ತೆಗೆ ರಂಭೆ ಮೇನಕೆ । ಸೂಳೆಯರು ಕೊಡು ನೀ ದಶಾಸ್ಯಗೆ । ಕಾಲಿಗೆರಗುತವನ ನೊಲಿಸೈ ಸರ್ವ ರೀತಿಯಲಿ ॥
ಭಾಳಲೋಚನ ನಿತ್ತ ವರದಿಂ । ಖೂಳ ಮೃತ್ಯುವ ಗೆದ್ದನೈ ನೀ । ನೇಳುಪಾಯವ ಮಾಡು ಯೆಂದನು ನಗುತ ನಾರದನು ॥35॥

ನಾರದನ ನುಡಿ ಕೇಳಿ ಮನದಲಿ । ಭಾರಿಚಿಂತೆಯನಾಂತನಿಂದ್ರನು । ಧಾರುಣಿ ಯೊಳಾರೆಮ್ಮ ಸಲಹುವರೆನುತ ದುಗುಡದಲಿ ॥
ವಾರಿಜಾಸನ ನಿದ್ದೆಡೆಗೆ ಶ । ಕ್ರಾರಿ ವೇಗದಿ ನಡೆದನಾ ಮುನಿ । ನಾರದನ ಸಂಗಾತ ಬ್ರಹ್ಮನ ಕಡೆಗೆ ದುಗುಡದಲಿ ॥36॥

ಕೇಳಿದನು ನಾರದನ ನುಡಿಯನು । ಪೇಳಿದನು ನಸುನಗುತ ಕಮಲಜ । ನೇಳಿರೈ ನೀವೀಗ ಪೋಗಿರಿ ಕಮಲನಾಭನಿಗೆ ॥
ಕೇಳಿರೈ ನೀವೀಗ ಲಕ್ಷ್ಮೀ । ಲೋಲನೊಬ್ಬನೆ ಕಾಯ್ವ ದೇವನು । ಕಾಲಿಗೆರಗಿರಿ ಕಾಯ್ವ ನವನಿಂತೆಂದ ನಬುಜಭವಾ ॥37॥

ಸರಸಿಜಾಸನ ಕೂಡಿ ಸುರಮುನಿ । ಸುರವರರು ವೈಕುಂಠನಾಥಗೆ । ಮೊರೆಯಿಡಲು ನಡೆತಂದರಾ ವೈಕುಂಠ ಲೋಕಕ್ಕೆ ॥
ಚರಣಕೆರಗುತ ನಡೆದ ಪರಿಯ । ನ್ನರುಹಿದರು ವೈಕುಂಠನಾಥಗೆ । ತೆರಳು ತತ್ ಕ್ಷಣ ಕಾರ್ಯ ಕೆಟ್ಟಿತು ಮುಂದೆ ಗತಿಯೇನು ॥38॥

ದುರುಳ ದಶಶಿರ ಪ್ರಾಣಲಿಂಗವ । ಹರನ ಮೆಚ್ಚಿಸಿ ಪಡೆದು ಲಂಕಾ । ಪುರಕೆ ತೆರಳಿದನವನೆ ಹರನಾಗುವನು ಮುಂದೇನು ॥
ಹರಿಯೆ ನೀ ರಾಮಾವತಾರದಿ । ದುರುಳನನು ಭಂಗಿಸುವ ಪರಿಯೇ । ನಿರದೆ ನೀನೇ ನೋಡು ಕಾರ್ಯವನೆಂದವರಾಗಾ ॥39॥

ನಸುನಗುತ ಲಕ್ಷ್ಮೀವರನು ಕೇ । ಳುಸಿರಿದನು ಬ್ರಹ್ಮಾದಿಗಳಿಗಾ । ಪಶುಪತಿಯ ನಾ ಕೇಳ್ವೆನೆನುತಲಿ ನಡೆದನಸುರಾರಿ ॥
ಕುಸುಮಶರ ವೈರಿಯ ನು ನೋಡಿದ । ನಸುರರಿಪು ಪೇಳ್ದನು ಮಹೇಶಗೆ । ಪೊಸಪರಿಯ ನೀಮಾಡಿ ಕೊಟ್ಟಿಹೆ ಯಾತ್ಮಲಿಂಗವನು ॥40॥

ದುರುಳನ್ನೆ ರಾವಣನು ಸುರರನು । ಸೆರೆಯ ಹಾಕಿಸಿ ಕಾಡುವನಲಾ । ವರವನಿತ್ತ್ಯೈ ಮುಂದೆ ದೇವರಿಗೆಂತು ಬಿಡುಗಡೆಯು ॥
ಹರನೆ ನೀ ಕೊಟ್ಟಿರುವ ವರವನು । ಹರಣ ಮಾಡುವ ಬಗೆಯದಾವುದು । ವರವ ಕೊಟ್ಟಾ ಯ್ತೀಸು ವೇಳೆಯಿದೆಂದನಾ ಹರಿಯು ॥41॥

ಹರನು ವಚನವ ಕೇಳಿ ಪ್ರತ್ಯು । ತ್ತರವನಿತ್ತನು ಕೇಳು ಲಕ್ಷ್ಮೀ । ವರನೆ ಮೆಚ್ಚಿದೆ ಖೂಳ ದಶಕಂಧರನ ಗಾಯನಕೆ ॥
ಶಿರವ ತನ್ನಯ ಕಡಿದು ವೀಣೆಯ । ವಿರಚಿಸಿದನ್ನೆ ಸಾಮವೇದವ । ಸರಸದಲಿ ಹಾಡಿದನು ಮರುಳಾದೆ ದಶಾಸ್ಯನಿಗೆ ॥42॥

ಪ್ರಾಣಲಿಂಗವನಿತ್ತೆ ನಿಜವಿದು । ದಾನವಾರಿಯೆ ಕೇಳು ದಶಶಿರ । ಗಾನು ಕೊಡುವವನಿದ್ದೆ ಕೇಳರ್ಧಾಂಗಿ ಪಾರ್ವತಿಯ ॥
ಸಾನುರಾಗದ ಭಕ್ತನವಗಿ । ನ್ನೇನು ನಾಸ್ತಿಯ ವಚನ ಪೇಳಲಿ । ನೀನೇ ಯೋಚಿಸು ಮುಂದುಪಾಯವ ನೆಂದನಾ ಹರನು ॥43॥

ಹರನೆ ನೀನೀ ಮರುಳ ತನದಲಿ । ವರವನೀಯಲು ದುಷ್ಟ ರಾಕ್ಷಸ । ರರಿಯುವರು ಮೂರ್ಲೋಕವನು ಪರಿಹರಿಸ ಲೆನಗೆಲ್ಲಾ ॥
ಧರಣಿ ಯೊಳಗವತಾರ ಧರಿಸುವ । ಪರಿಯುಬರುವುದು ಯೇನಗೆನುತ್ತಲಿ । ಹರಿಯು ಯೋಚನೆ ಮಾಡಿದನು ನಾರದನ ಕರೆಸಿದನು ॥44॥

ಮುನಿವರನೆ ನೀನೀಗ ಕೇಳ್ರಾ । ವಣನ ಹಾದಿಯ ತಡವರಿಸು ನಾ । ಗಣಪನನು ಕರೆತಂದು ಮುಂದಿನ ಯೋಚನೆಯ ಮಾಳ್ಪೆ ॥
ಎನುತ ಲಕ್ಷ್ಮೀಲೋಲ ನಾರದ । ಮುನಿಪನನು ಮುಂದಕ್ಕೆ ಕಳುಹಿಸು । ತಿನನ ಮುಚ್ಚಲು ಚಕ್ರವನು ತಾಬಿಟ್ಟನಸುರಾರಿ ॥45॥

ಕರೆದು ಗಣನಾಯಕನ ಮುಂದಿನ । ಪರಿಯ ಪೇಳ್ದನು ನಿನಗೆ ವಿಘ್ನೇ । ಶ್ವರಗೆ ಪೂಜಿಪರೆಲ್ಲರಾದಶಶಿರನು ಪೂಜಿಸನು ॥
ದುರುಳ ರಾವಣ ಪ್ರಾಣ ಲಿಂಗವ । ನರಿಯದಂದದಿ ನೀನು ವೊಯ್ವನೆ । ತೆರಳು ವಿಘ್ನವ ಮಾಡು ವಿಘ್ನೇಶ್ವರನೆ ಯೊಲಿದಿಗಾ ॥46॥

ಹರನ ದಾಜ್ಞೆಯ ಕೇಳು ಲಿಂಗವ । ಧರಣಿಯಲ್ಲಿಡಬಾರದೆಂದೇ । ಮರಳಿ ಶೌಚಾಚಮನ ವೇಳೆಗೆ ಕರದೊಳಿಡ ದಂತೆ ॥
ದುರುಳ ಸಂಧ್ಯಾವಂದನೆಯ ಬಿಡ । ನರರೆ ನೀನಾವೇಳೆಗಲ್ಲಿಗೆ । ತೆರಳಿ ಕಪಟದಲಿ ಲಿಂಗವನು ನೀ ಗ್ರಹಣ ಮಾಡುತಲಿ ॥47॥

ರಾವಣನು ಸಂಧ್ಯೆಯನು ಮಾಡುವ । ಭಾವವನು ತಾ ತಿಳಿದು ತತ್ ಕ್ಷಣ । ಸಾವಧಾನದಿ ಲಿಂಗವನು ನೀ ಭೂಮಿಯಲ್ಲಿಡಲು ॥
ದೇವರೆಲ್ಲರು ಮೆಚ್ಚುವರು ಕೇಳ್ । ರಾವಣನ ವರ ವ್ಯರ್ಥ ಮಪ್ಪುದು । ಕಾವ ದೇವನು ನೀನು ದೇವರ ಬಂಧಮೋಚಕನು ॥48॥

ಎಂದು ಹರಿಯಾಡಿದುದ ಕೇಳ್ದನು । ಸಿಂಧುರಾಂಗನು ಹರಿಯೊಡನೆ ನಗು । ತೆಂದನೈ ಕೊಡುಯೆನಗೆ ಯೆಳ್ಳಿನ ಲಡ್ಡು ಕೊಬ್ಬರಿಯಾ ॥
ಮುಂದೆ ಸಕ್ಕರೆ ತುಪ್ಪ ಹಾಲನು । ತಂದು ಕೊಡು ದಾಳಿಂಬ ಕಬ್ಬನು । ತಿಂದು ಹೊರಡುವೆ ಹಸಿವೆಯಾಗಿದೆ ಯೆಂದನಾ ಗಣಪ ॥49॥

ಗಣಪ ತೋಷದಲಿ ಬೇಡಿದುದನಾ । ತಿನಸನೆಲ್ಲವ ಕೊಟ್ಟು ಕಳುಹಿದ । ಮುನಿಪ ನಾರದ ಮುಂದೆ ಹೋಗಿಂತೆಂದ ದಶಶಿರಗೆ ॥
ದನುಜರಾಜನೆ ಪಯಣವೆಲ್ಲಿಗೆ । ನಿನಗೆ ಯೋಗಕ್ಷೇಮವೇ ಯೆಂ । ದೆನಲು ನಗುತಿಂತೆಂದನಾ ದಶಶಿರನು ನಾರದಗೆ ॥50॥

ಸುರಮುನಿಯೆ ಕೇಳ್ ಹರನ ಮೆಚ್ಚಿಸಿ । ವರವ ಪಡೆದಿಹನಾತ್ಮಲಿಂಗವ । ಪರಮ ಸಂತೋಷದಲಿ ಕೊಟ್ಟನು ಯೆನಗೆ ಹರನೊಲಿದು ॥
ಮರಳಿ ಪೇಳಿದ ನನಗೆ ಪೂಜಿಸು । ವರೆಯದೀ ಲಿಂಗವನು ಮೂರೇ । ವರುಷದಲಿ ನೀ ಹರ ಸಮಾನನೆನುತ್ತ ಹರನುಡಿದಾ ॥51॥

ಇಂತು ಕೇಳ್ದು ಮುನಿಪ ನಾರದ । ಸಂತಸವ ತಾನಾಂತು ಪೇಳ್ದನು । ಯೆಂತು ನಿನಗೀ ಪ್ರಾಣಲಿಂಗವು ದೊರೆಯಿತ ದುಭುತವು ।
ಬಂತು ಭಾಗ್ಯವು ನಿನಗೆ ಹರನೊಲಿ । ದಂತೆ ತೋರುವುದೆನಗೆ ಧರೆಯೊಳು । ನಿಂತು ತೋರಿಸು ಕಣ್ಣಿನಿಂದಲಿ ನೋಳ್ಪೆ ಲಿಂಗವನು ॥52॥

ತೋರಿಸೆಲೆ ನಿಜ ಶಿವನ ಲಿಂಗವ । ಮಾರಹರ ವಂಚಿಸದೆ ಕೊಟ್ಟನೆ । ತೋರಿಪೆನು ನಾ ನಿಜವೊ ಪುಸಿಯೋ ಗುಣಗಳೆಲ್ಲವನು ॥
ನಾರದನ ನುಡಿ ಕೇಳಿ ದಶಶಿರ । ಭಾರಿ ಸಂಶಯ ದಿಂದ ಲಿಂಗವ । ದೂರದಿಂದಲೆ ತೋರಿಸಿದನೈ ನೋಡುನೋಡೆನುತಾ ॥53॥

ಮನದಿ ಹಿಗ್ಗುಗ್ತ ನೋಡಿದನು ಸುರ । ಮುನಿಯು ರಾವಣಗೆಂದ ಕೇಳ್ಮೈ । ಮನವೊಲಿಯೆ ನಾ ಪೇಳ್ವೆ ಲಿಂಗದ ಮಹಿಮೆಯನು ಕೇಳು ॥
ತಿನುತ ಸೌರಭ ವೆಲ್ಲವನು ಮೃಗ । ಮಿನುಗಿ ನಲಿ ಕಾಲಾಗ್ನಿ ರೂಪದಿ । ವನಜಭವಖಂಡದಲಿ ಬಿದ್ದಿತು ಕೇಳು ದಶಶಿರನೆ ॥54॥

ಹರಿಹರವಿರಂಚಿಗಳು ಬೇಟೆಗೆ । ತೆರಳಿದರು ತನ್ಮೃಗವ ಕೊಂದರು । ಹರುಷದಿಂ ಭಕ್ಷಿಸಿದರಾ ಮೃಗ ಮೇಧವನು ನಯದಿ ॥
ಹರಿಣಕಿದ್ದವು ಮೂರು ಕೋಡುಗ । ಳರರೆ ಮೂರೇ ಲಿಂಗವದ ಪತಿ । ಕರಿಸಿದರು ಮೂರಂಶದಲಿ ಕೇಳ್ಪ್ರಾಣ ಲಿಂಗಗಳಾ ॥55॥

ಮೂರು ವರುಷದೊಳೆಡೆಬಿಡದೆ ತಾ । ನಾರು ಪೂಜಿಪರಿದನು ಮೆಚ್ಚುತ । ಮಾರಹರ ನಾಗುವನು ಕೇಳ್ಮೈ ವೇದಮೂರ್ತಿಯಲಾ ।
ಧಾರುಣಿಯೊಳೀಲಿಂಗವಿದ್ದಾ । ವೂರೆ ಕೈಲಾಸಕ್ಕೆ ಸಮವಿ । ನ್ನಾರು ನಿನ್ನಯ ಪಾಡು ಜಗದಲಿ ನೀನೆ ಹರನಾದಿ ॥56॥

ಎಂದು ಲಿಂಗದ ಮಹಿಮೆಯನು ಮುನಿ । ಚಂದದಿಂದಲಿ ಭೋದಿಸಿದ ದಶ । ಕಂಧರನ ಸಂತೈಸಿ ನುಡಿದನು ಸಾವಧಾನದಲಿ ॥
ಇಂದು ವಿಸ್ತರಿಸುವೆನು ಮಹಿಮೆಯ । ನೆಂದು ದಶಕಂಧರನ ಕೈಯನು । ಬಂದು ಪಿಡಿದನು ಕೂಡುಕೂಡೆಂದರುಹಿದನು ಮುನಿಯು ॥57॥

ಹಿಡಿದ ಕೈಯನು ಬಿಡಿಸಿ ದಶಶಿರ । ಗಡಬಡಿಸಿ ಮುಂದಕ್ಕೆ ನಡೆದನು । ಸಡಗರದಿ ನಾರದನು ಪೇಳ್ದನು ವಿನಯ ಪರನಾಗಿ ॥
ನುಡಿವೆ ನೀನೀ ವೇದ ಖಂಡಿಸಿ । ಪಡೆದೆ ಕೀರ್ತಿಯನಿಂದು ಸಂಧ್ಯೆಯ । ಬಿಡುವಿ ನೀ ನೋಡಸ್ತಮಾನದ ವೇಳೆಯಾಯಿತಲಾ ॥58॥

ಎಂದು ನಾರದ ಮುನಿಯು ಸಂಧ್ಯಾ । ವಂದನೆಯ ಮಾಡಲ್ಕೆ ತಾ ನಡೆ । ತಂದನ್ನೆ ಜಲತೀರಕನುಪಮ ವಿನಯ ಭಾವದಲಿ ॥
ಮುಂದೆ ಮಾರ್ಗವ ನಡೆಯೆ ಸಂಧ್ಯಾ । ವಂದನೆಯ ವೃತಭಂಗಮಪ್ಪುದು । ಯೆಂದು ಮನದಲಿ ಚಿಂತಿಸಿದನಾ ಹರನ ವಚನವನು ॥59॥

ಧರಣಿಯಲಿ ತಾ ನಿಡಲು । ಹರನ ವಚನದ ಭಂಗಮಪ್ಪುದು । ಕರದಿ ಪಿಡಿವುದಕಾಚಮನ ಸಮಯದಲಿ ಸವಡಿಲ್ಲಾ ॥
ಹರಹರಾ ಕೇಳಿಂತು ಸಂಕಟ । ಹರಣ ವಪ್ಪುವ ಪರಿಯ ಚಿಂತಿಸು । ತಿರಲು ವಟುವನು ನೋಡಿದನು ದಶಶಿರನು ಹಾದಿಯಲಿ ॥60॥

ಬಾಲವಟುವನು ನೋಡಿ ಸಂತಸ । ದಾಳಿ ಹತ್ತರ ಕರೆದು ಸವಿನುಡಿ । ಪೇಳಿದನು ದಶಶಿರನು ಸಂಧ್ಯಾಸಮಯ ವಿದೆಯೆನಗೆ ॥
ಕೇಳು ನೀನೀ ಲಿಂಗವನು ಪಿಡಿ । ಪೇಳು ನೀನೆಲ್ಲಿಂದ ಬಂದಿಹೆ । ಕಾಲವಘಟಿತ ತಂದೆ ತಾಯ್ನಿನಗಾರು ಪೇಳೆಂದಾ ॥61॥

ನುಡಿಯ ಕೇಳ್ದಾ ವಟುವು ಸಿಟ್ಟಿಲಿ । ನುಡಿದನೈ ದಶಶಿರನೆ ಯೆನ್ನಯ । ಹಡೆದ ತಾಯ್ತಂದೆಗಳು ನಿನ್ನಯ ಸಾಲ ವೊಯ್ದಿಹರೆ ॥
ಬಿಡುಬಿಡೆಲೊ ನೀ ಕೋಪವನು ವಟು । ಹಡೆದವರ ನಾ ಕೇಳ್ದೆ ಪ್ರೀತಿಯ । ಸಡಗರದಿ ಪೇಳೆಂದು ನುಡಿದನು ರಾವಣನು ಮುದದಿ ॥62॥

ವಟುವು ಕೇಳ್ದನು ಪ್ರತಿನುಡಿಯ ಕೇಳ್ । ಜಟೆಯ ಧರಿಸುತಲೆನ್ನ ತಾತನು । ನಟಿಸುವನು ಭಾಸ್ಮಾಂಗ ಲೇಪವ ಮಸಣ ವಟಿಯೊಳಗೆ ॥
ಸಟೆಯ ಪೇಳ್ವೆನು ತಾತ ಶಂಕರ । ಲಟಪಟಿಸಿ ಭಿಕ್ಷೆಯನು ಬೇಡುವ । ದಿಟವು ತಾಯಿ ಮೃಡಾಣಿ ವೃಷಭಾ ರೂಢರಿಹರವರು ॥63॥

ಎನ್ನ ತಾಯ್ತಂದೆಗಳ ಪೆಸರನು । ಬಣ್ಣಿಸಿದೆ ಪೇಳೆನಗೆ ನೀನಾ । ರೆನ್ನುತಲಿ ಮನವೊಲಿದು ನಿನ್ನನು ನೋಡಿ ಭಯವಾಯ್ತು ॥
ಬಣ್ಣ ಬಡಿಸಲು ಬೇಡವೆನುತಾ । ಚಿಣ್ಣರೂಪದ ಬೆನಕ ಪೇಳಲು । ಸನ್ನುತಾನನ ದಶವದನ ನಿಂತೆಂದ ವಟುವಿಂಗೆ ॥64॥

ನಾನು ಲಂಕಾನಾಥ ದಶಶಿರ । ನೇನ ಹೇಳುವೆನೆನ್ನ ವೈಭವ । ಭಾನು ಶಶಿ ದಿಕ್ಪಾಲರೆಲ್ಲರು ದಾಸರಿಹರೆನಗೆ ॥
ಸಾನುರಾಗದಿ ಲಕ್ಷ್ಮಿ ಯೆನ್ನ ಮ । ಹಾನುಭಾವಕೆ ಮೆಚ್ಚಿ ದಾಸಿಯು । ನೀನು ಬಾರೈ ಲಂಕೆಗೆನ್ನಲಿ ದೇವತಾರ್ಚನಕೆ ॥65॥

ಬೇಡ ಲಂಕಾನಾಥ ನಿನ್ನಯ । ನಾಡು ಬಹುದೂರವು ಕಣಾ ಜನ । ರಾಡುತಿಹರೈ ನೀವು ರಕ್ಕಸರೆಮ್ಮ ನುಂಗುವಿರಿ ॥
ಕಾಡಬೇಡೈ ಯೆನ್ನ ಹಾದಿಯ । ನೋಡಿ ಮುಂದಕೆ ಪೋಪೆನೆಂದಾ । ಗೂಢವೇಷದ ಗಣಪನೆಂದನು ನೋಡಿ ದಶಶಿರನಾ ॥66॥

ಬೆದರದಿರು ನೀ ವಟುವೆ ನಿನಗಾಂ । ಸದಯದಿಂದಲಿ ಬೇಡಿಕೊಳ್ಳುವೆ । ಮುದದೊಳೀಲಿಂಗವನು ಪಿಡಿಯೈ ಸಂಧ್ಯೆಯನು ಮಾಳ್ಪೆ ॥
ಅದರ ಮೇಲಿಂದಾನು ಬಂದೀ । ಬದುಕನಾ ಕೊಳ್ಳುವೆನೆನುತ ದಶ । ವದನ ಬೋಳೈಸಿದನು ಬಾಲನ ವೇಷ ಧಾರಕನಾ ॥67॥

ಬಾಲನೆಂದನು ಕಾಡದಿರು ಬಹು । ಕಾಲ ವಿದನಾನೆತ್ತಲಾರೆನು । ಕೇಳು ಬಹು ಜಡ ವಿಹುದು ಯೆನಗದು ಸಲ್ಲದೈ ಜೀಯಾ ॥
ಆಲಿಸದೆ ತದ್ವಚನವನು ತ । ದ್ಬಾಲಕಗೆ ಲಿಂಗವನು ಕೊಟ್ಟನು । ಲೀಲೆಯಲಿ ಸಾಗರದ ತೀರಕೆ ನಡೆದನಮರಾರಿ ॥68॥

ದಶವದನ ಕೇಳಿದನು ಲಿಂಗವ । ವಸುಮತಿ ಯೊಳಾನಿಡುವೆ ನಿನಗಾ । ನುಸಿರುವೆನು ಜಡವಾದಡಿದು ನಾ ಮೂರುಬಾರಿಯಲಿ ॥
ಬಸವಳಿದೆನಾದರೆ ನಿನಗೆ ನಾ । ನೊಸಗೆ ತಿಳಿಸುವೆ ಬೆಗಬಾರೆಂ । ದುಸಿರುವೆನು ನೀ ಬಾರದಿದ್ದರೆ ದೂರದಿರು ಯೆನಗೆ ॥69॥

ಎಂದು ಪೇಳ್ದಾ ವಟುವು ಲಿಂಗವ । ನೊಂದು ಕರದಲಿ ಪಿಡಿದು ನಿಂತನು । ಮುಂದೆ ದಶಕಂಧರನು ಸಂಧ್ಯಾವಂದನೆಯ ನಡಿಸಿ ॥
ಚಂದದಿಂದರ್ಘ್ಯವನು ಕೊಡುವಾ । ಸಂಧಿಯನು ಸಾಧಿಸಿದನಾವಟು । ಬಂದು ಲಿಂಗವ ಕೊಳ್ಳೆನುತೆ ಕೂಗಿದನು ರಭಸದಲಿ ॥70॥

ಒಂದು ಕರದಲಿ ಅರ್ಘ್ಯ ಕೊಡುತಿ । ನ್ನೊಂದು ಕರದಲಿ ವಟುಗೆ ತಡಿ ತಡಿ । ಯೆಂದು ಸಂಜ್ಞೆ ಯ ಮಾಡಿದನು ದಶಶಿರ ನು ಮನಮರುಗಿ ॥
ಚಂದವನು ನೋಡಲ್ಕೆ ನಿರ್ಜರ । ವೃಂದ ಬಂದಿಹುದೇನನೆಂಬೆನು । ವಂದೆರಡುಮೂರೆನುತ ವಟು ಲಿಂಗವನು ಕೆಳಗಿಟ್ಟಾ ॥71॥

ಸುರರು ನಲಿದರು ಗಗನದಲಿ ಹೂ । ಸುರಿಸಿದರು ಭೂಮಿಯಲಿ ಕೇಳ್ದಶ । ಶಿರನು ಕೋಪದಿ ಬಂದು ವಟುವಿಗೆ ಮುಷ್ಟಿ ಮೋದಕವಾ ॥
ಭರದಿ ಕೊಡಲಾವಟುವು ಕಣ್ಣುಗ । ಳೊರೆಸುತೊರೆಸುತ ತನ್ನ ತಾತನಿ । ಗರುಹುವೆನು ತಾನೆನುತ ನಡೆದನು ಸುರರು ನಲಿನಲಿಯೆ ॥72॥

ಹತ್ತುವದನನು ಕೋಪದಲಿ ತಾ । ಕಿತ್ತು ಲಿಂಗವ ಲಂಕೆಗೊಯ್ವೆನೆ । ನುತ್ತ ಕಿತ್ತಲಿ ಕೆತ್ನಿಸಿದನಾ ಕೇಳ್ಮಹಾಬಲಿಯು ॥
ಪೃಥ್ವಿಯದರಿತು ಲಿಂಗಬಾರದೆ । ಯೆತ್ತ ಪೋಯಿತೊ ಕೇಳ್ದಶಾಸ್ಯನ । ಸತ್ವ ಕೇಳು ಮಹಾಬಲೇಶ್ವರನೆಂಬ ಹೆಸರಾಯ್ತು ॥73॥

ಧರಣಿಯನು ಬಿಡದಿಹುದು ಲಿಂಗವು । ಧರಿಸಿತೈ ಗೋಕರ್ಣದಾಕೃತಿ । ಕರೆವರದರಿಂ ಸುರನರರು ಗೋಕರ್ಣವೆಂದೀಗಾ ॥
ಸುರವರ ಕಾಯುವ ನಿಮಿತ್ತದಿ । ಹರಿಯ ಸನುಮತ ದಿಂದ ವಿಘ್ನೇ । ಶ್ವರನು ಸ್ಥಾಪಿಸಿದನು ಮಹಾಬಲ ಲಿಂಗ ಧರಣಿಯಲಿ ॥74॥

ಆರು ವೈರಿಯ ಜಯಿಸಿದಾ ಮದ । ನಾರಿಯೊಲಿದರದೇನು ಫಲವಮ । ರಾರಿ ದಶಕಂಧರಗೆ ದಕ್ಕಿತೆ ಪ್ರಣ ಲಿಂಗವದು ॥
ಆರು ವೈರಿಯ ಗೆಲಿದರಾ ಮದ । ನಾರಿ ಸದ್ಗುರು ಮೂರ್ತಿ ಹೃದಯದಿ । ಸೇರಿ ಮನೆ ಮಾಡುವುದು ಕೇಳ್ಕೈ ವಿಷ್ಣು ವಚನವಿದು ॥75॥

॥ ಅಧ್ಯಾಯ 6 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 7

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಭೂತಳದಿ ಗೋಕರ್ಣ ತೀರ್ಥ ಮ । ಹಾತುಮೆಯ ಕಥೆಗಳನು ನೃಪ ಸಾ । ಕೇತಪುರದರಸನಿಗೆ ಪೇಳ್ದನು ಗೌತಮನು ಮುದದಿ॥

ಬಾಲಕನು ಸುಜ್ಞಾನ ವಿಲ್ಲದೆ । ಹಾಲನುಗುಳುವ ಹಸಿವೆ ತಿಳಿಯದೆ । ಮೇಲೆ ತಾಯುಣಿಸುವಳು ಬಾಲನ ಬೆನ್ನ ಚಪ್ಪರಿಸಿ ॥
ಕೇಳು ಸದ್ಗುರು ಭಕ್ತಿ ಯೆಂಬುವ । ಹಾಲನೀವನು ಜ್ಞಾನ ವಿಲ್ಲದೆ । ಖೂಳತನದಲಿಯುಗಳೆ ಗುರುವಕ್ಕರ ದೊಳುಣಿಸುವನು ॥1॥

ಎಲ್ಲ ತೀರ್ಥವ ಬಿಟ್ಟು ಶ್ರೀಪದ । ವಲ್ಲಭನು ಗೋಕರ್ಣಕೈದಿಹ । ಸಲ್ಲಲಿತ ಕಾರಣವದೇನಿಹುದೆನಗೆ ಪೇಳೀಗಾ ॥
ತಲ್ಲಣಿಸುತಿದೆ ಮನವು ಕಥೆಯನು । ಬಲ್ಲವನು ನೀ ಪೇಳು ಯುಗಯುಗ । ದಲ್ಲಿ ನಡೆದಿಹುದೆಲ್ಲವನು ನೀನರುಹಬೇಕೆನಗೆ ॥2॥

ಎಂದು ಪೇಳಲು ನಾಮಧಾರಕ । ಗೆಂದನಾಗುರು ಸಿದ್ಧಯೋಗಿಯು । ಕಂದ ನಿನ್ನ ಕುತೂಹಲವ ನಾನೆಂತು ಬಣ್ಣಿಸಲಿ ॥
ಚಂದದಿಂದಲಿ ಪೇಳ್ವೆ ತೀರ್ಥದ । ಬಂಧುರದ ಮಹಿಮೆಯನು ಪಶ್ಚಿಮ । ಸಿಂಧುತೀರದ ತೀರ್ಥ ಗೋಕರ್ಣದ ಮಹಾತ್ಮ್ಯೆಯನು ॥3॥

ಪೂರ್ವದಲಿ ಇಕ್ಷ್ವಾಕು ವಂಶದೊ । ಳೋರ್ವ ಕ್ಷತ್ರಿಯ ರಾಜನಿದ್ದನು । ಸರ್ವಗುಣ ಸಂಪನ್ನ ನಾಮವು ಮಿತ್ರಸಹ ನೆನುತಾ ॥
ಉರ್ವಿಯನು ಪಾಲಿಸುತಿದ್ದನು । ಸರ್ವಸ್ಮೃತಿ ಸಂಪನ್ನ ಪ್ರಜೆಗಳ । ನಿರ್ವಹಿಸುತಿರೆ ಮುದದಲೊಂದಿನ ಬೇಟೆಗೈತಂದಾ ॥4॥

ಹುಲಿ-ಕರಡಿ-ಸಿಂಹಾದಿ ಮೃಗಗಳು । ನಲಿಯುತಿಹ ನಿರ್ಜನ ವನಾಂತರ । ದೊಳಗೆಬೇಟೆಯ ನಾಡುತಿರ್ದನು ಭೀತಿಯಿಲ್ಲದಲೇ ॥
ಜ್ವಲನದಂದಳೊರ್ವ ರಾಕ್ಷಸ । ಘಳಿಲನವನೆದುರಾಗಿ ಬಂದನು । ಕಲಿನೃಪನು ಬಾಣದಲಿ ಕೊಂದನು ರಾಕ್ಷಸಾಧಮನಾ ॥5॥

ಬಂಧುವನು ಕರೆದವನು ರಾಕ್ಷಸ । ನೆಂದನೈ ನೀ ಕೇಳು ಯನ್ನಯ । ತಂದೆ ಹೊಟ್ಟೆಯ ತಮ್ಮನಾದರೆ ಮುಯ್ಯ ತೀರಿಸುವೆ ॥
ಎಂದು ತಮ್ಮಗೆ ಪೇಳಿ ರಕ್ಕಸ । ಸಂದನೈ ಯಮಪುರಕೆ ಕೇಳಾ । ಬಂಧು ನರರೂಪದಲಿ ಸುಳಿದನು ರಾಜಮಂದಿರದಿ ॥6॥

ಕೃತಕ ನರವೇಷದಲಿ ಬಂದಾ । ಕ್ಷಿತಿಪತಿಯ ಮಂದಿರದ ಸೇವಕ । ತತಿಗಳಲಿ ಮನವೊಲಿಯೆ ಸುಳಿದಾಡಿದನು ರಕ್ಕಸನು ॥
ಅತಿವಿನಯದಿಂದಿರುವ ರಾಜನ । ಮತಿಗೆ ಸಂಶಯವೆಂತು ಬರುವದು । ಗತಿಸಿದವು ಬಹುದಿವಸಗಳು ಕೇಳೀ ತೆರದಿ ಪುರದಿ ॥7॥

ಪೂರದೊಳಾ ಸೇವಕನ ಬಿಡುತಲಿ । ನರಪತಿಯು ಪೊಗುವನು ಬೇಟೆಗೆ । ತರುವನವನು ಮೃಗಾದಿಗಳ ನೇವೇಳ್ವೆ ಸಂತಸದಿ ॥
ತೆರದೊಳೀ ಬಹುದಿವಸ ಪೋದವು । ನರಪತಿಯ ಪಿತೃ ಶ್ರಾದ್ಧ ಬಂತೈ । ಕರೆನಾದಿನ ಕುಲಗುರುವ ವಿಪ್ರರನು ಭೋಜನಕೆ ॥8॥

ಶಾಕಪಾಕದ ಮೇಲೆ ರಕ್ಕಸ । ದೇಖರೇಖಿಗೆ ನಿಂತನಾದಿನ । ನೂಕಿದನು ನರಮಾಂಸವನು ವಂಚಿಸುತ ಭೋಜನದಿ ॥
ಪಾಕವದನಾ ಬಡಿಸಲಾ ಋಷಿ । ಕಕ್ಕುಲತೆಯಿಂದೆದ್ದು ಭೂಪಗೆ । ಸಾಕು ನರಮಾಂಸವನು ಬಡಿಸಿದೆ ಕೊಡುವೆ ಶಾಪವನು ॥9॥

ಎಂದು ನುಡಿದ ವಸಿಷ್ಠ ನಿಗೆ ನೃಪ । ನೆಂದನೈ ನೀನೇಕೆ ಶಪಿಸುವೆ । ತಂದು ನರಮಾಂಸವನು ಬಡಿಸಿದ ಪರಿಯ ನಾನರಿಯೆ ॥
ಕುಂದು ಯೆನ್ನೊಳಗಿಲ್ಲ ಶಪಿಸಿದ । ರಿಂದು ನಾ ಶಪಿಸುವೆನು ನಿನಗಿಂ । ತೆಂದು ತೀರ್ಥವ ತೆಗೆದು ಶಾಪವ ಕೊಡಲು ಯತ್ನಿಸಿದಾ ॥10॥

ಇಂತು ಮಾಡುವ ಪತಿಯನಾ ಮದ । ಯಂತಿ ಕೈಪಿಡಿದೆಂದಳಾಕ್ಷಣ । ಸಂತವಿಸು ಕೋಪವನು ಗುರುವಿಗೆ ಶಾಪ ಸಲ್ಲದಲಾ ॥
ಕಾಂತೆಯಾಡಿದ ನುಡಿಯನವನೀ । ಕಾಂತ ಕೇಳ್ದನು ತೀರ್ಥದಂಜಲಿ । ಸಂತಸದಿ ತಾ ಬಿಟ್ಟ ನಿಜಪಾದದಲಿ ಮನವರಿಯೆ ॥11॥

ಆದನವನೀಪಾದ ಕಲ್ಮಷ । ಪಾದನೆಂಬುವ ಬ್ರಹ್ಮರಾಕ್ಷಸ । ಪಾದದಲಿ ಬಿದ್ದೊರಳಿದಳು ಮದಯಂತಿ ಪ್ರೇಮದಲಿ ॥
ಹೇ ದಯಾನಿಧೆ ಗುರುವೇ ಯೀಯಪ । ರಾಧಕೀ ದುಸ್ತರದ ಶಾಸನ । ವಾದ ಡಿನ್ನೇನೆಂದು ಸತಿ ಮರುಗಿದಳು ಬಹುತೆರದಿ ॥12॥

ಮುನಿವಸಿಷ್ಠ ಗೆ ಕರುಣ ಬಂದಾ । ವನಿತೆಗಂದನು ನಿನ್ನ ಪತಿ ಕೇಳ್ । ನಿನಗೆ ದೊರಕುವ ನರಸನಾಗುವ ನೀ ಧರೆಗೆ ಮರಳಿ ॥
ವನದಿ ಹದಿನೆಂಡಬುಧ ಕಳೆಯಲಿ । ಯೆನುತಲುಶ್ಯಾಪವನು ಕೊಟ್ಟನು । ಘನವಲಾ ಗುರುವಾಕ್ಯ ಕೇಳೈ ನಾಮಧಾರಕನೆ ॥13॥

ಮಿತ್ರಸಹನಿಗೆ ಶಾಪವಾಯಿತು । ಧಾತ್ರಿಯಲಿ ನಿರ್ಜನ ಪ್ರದೇಶದಿ । ಕ್ಷಾತ್ರಕುಲ ಸಂಜಾತ ಸಂಚರಿಸಿದನು ಶಾಪದಲಿ ॥
ನಿತ್ಯದಲಿ ಪಶುಪಕ್ಷಿನರರನು । ಹೊತ್ತುಹೊತ್ತಿಗೆ ತಿಂದುಬಿಡುವನು । ಚಿತ್ರವಾಯಿತು ಮುನಿಯ ಶಾಪವಿದೆಂದನಾ ಯೋಗಿ ॥14॥

ಹಲವು ದಿವಸಗಳಾದವೀಪರಿ । ಯಲಿ ಕಣಾ ಮೇಣೊಂದು ದಿನದಲಿ । ಸುಳಿದನೈ ದ್ವಿಜನೋರ್ವ ತನ್ನಯ ಪತ್ನಿಯೊಡಗೂಡಿ ॥
ಹುಲಿಯು ಪಶುವನ್ನೊಯ್ಯುವಂದದಿ । ತಲೆಯ ಹಿಡಿದಮರಿದನು ರಕ್ಕಸ । ಹಲುಬಿದಳು ಸತಿ ನೋಡಿ ನಾನಾತರದಿ ಶೋಕಿಸುತಾ ॥15॥

ಕೊಲ್ಲ ಬೇಡೆಲೊ ಬ್ರಹ್ಮರಕ್ಕಸ । ನಿಲ್ಲು ನಿಲ್ಲೆಲೊ ರಕ್ಷಿಸೆನ್ನಯ । ವಲ್ಲಭನ ಬಿಡು ಯೆನ್ನ ಹಿಡಿ ಕೊಡು ಚೂಡದಾನವನು ॥
ಬಲ್ಲವನು ವೇದಾದಿ ಶಾಸ್ತ್ರಗ । ಳೆಲ್ಲವನು ಪತಿರಾಜನೆನ್ನಯ । ಸೊಲ್ಲ ಕೇಳ್ದರೆ ಕೀರ್ತಿಯಪ್ಪುದು ನಿನಗೆ ದಿಟದಿಟವು ॥16॥

ಬಿಡುಬಿಡೆಲೊ ಕರುಣದಲಿ ಯೆನ್ನಯ । ವಡೆಯನನು ನೀ ಬಿಡಲು ನಿನ್ನನು । ಅಡಿಗಡಿಗೆ ಕೊಂಡಾಡುವೆನು ಹರಸುವೆನು ಭಕ್ತಿಯಲಿ ॥
ಹುಡುಗನಾದೊಡೆ ನಿನ್ನ ನಾಮವ । ನಿಡುವೆ ನಿನ್ನಯ ಕೀರ್ತಿವರ್ಧಿಪೆ । ಮಡದಿ ನುಡಿದುದ ಧಿಕ್ಕರಿಸ ಬೇಡೆಂದಳಾ ನಾರಿ ॥17॥

ಎಂದ ನುಡಿಯನು ಕೇಳದಾಖಳ । ಕೊಂದನೈ ದ್ವಿಜವರನ ನಂತರ । ತಿಂದನೈ ಮೇಧಾದಿಗಳನಾ ತರುಣಿಯೆದುರಿನಲಿ ॥
ಮಂದಮತಿ ಕೇಳೆನ್ನ ಶಾಪವ । ನೊಂದು ಮನದಲಿ ಕೊಡುವೆ ನಾ ನೀನ । ಗೆಂದು ನುಡಿದಳು ಸತಿಯು ಪತಿನಿಧನದ ವಿಕೋಪದಲಿ ॥18॥

ತರಣಿವಂಶದ ರಾಜನೀನಾ । ಗಿರುವೆ ಗುರುವಿನ ಶಾಪದಲಿ ನೀ । ತಿರುಗುತಿಹೆಯೀ ಯೋನಿಯಲಿ ಕರ್ಮಾನು ಪಾಕದಲಿ ॥
ವರುಷ ಹದಿನೆರಡಾದ ನಂತರ । ಮರಳಿ ರಾಜ್ಯಕೆ ಪೋಗಿ ನಿನ್ನಯ । ತರುಣಿಯನು ರಮಿಸಲ್ಕೆ ತತ್ ಕ್ಷಣ ಪ್ರಾಣ ಹೋಗುವದು ॥19॥

ಇಂತು ಶಾಪವ ಕೊಟ್ಟು ಸತಿಮದ । ಯಂತಿ ನಂತರ ಪತಿಯ ಯೆಲುವನು । ಖಂತಿಯಿಂದದ ನೊಟ್ಟಿ ಕಾಷ್ಠ ದ ಚಿತೆಯ ಮೇಲಿರಿಸಿ ॥
ಕಂತುಪಿತ ನಂಘ್ರಿಗಳ ಧ್ಯಾನಿಸಿ । ಸಂತಸ ದೊಳಗ್ನಿ ಪ್ರವೇಶದಿ । ಕಾಂತನೋಡನ್ಯೆದಿದಳು ಸ್ವರ್ಗಕೆ ಪತಿಪರಾಯಣಳು ॥20॥

ವರುಷ ಹದಿನೆರಡಾಯ್ತು ರಾಯನ । ಗುರುವು ಕೊಟ್ಟಿಹ ಶಾಪ ತೀರಿತು । ಮರಳಿ ಬಂದನು ರಾಜಧಾನಿಗೆ ಸತಿಯ ನೀಕ್ಷಿಸುತಾ ॥
ತರುಣಿ ಕೇಳೀ ಸತಿಯ ವಚನದ । ಪರಿಯ ನೊರೆವೆನು ನಿನ್ನ ರಮಿಸಲು । ಮರಣ ತತ್ ಕ್ಷಣ ವೆನಗೆ ಬರುವುದು ಯೆಂದನಾನೃಪನು ॥21॥

ರಾಯನಾಡಿದ ನುಡಿಯ ಕೇಳ್ದಾ । ರಾಯನರಸಿಗೆ ಚಿಂತೆಯಾಯಿತು । ಜೀಯ ಮುಂದಿನ್ನೇನು ಯೋಚನೆ ದೈವ ಗತಿಯೇನು ॥
ಆಯ ತಪ್ಪಿತು ವಂಶವೃದ್ಧಿಯು । ಪಾಯವಾವುದು ಪುತ್ರನಿಲ್ಲದ । ಕಾಯಕಿಹುದೇ ಮುಂದೆ ಸದ್ಗತಿ ಯೆಂದಳಿಂದುಮುಖಿ ॥22॥

ಕರೆಸಿದನು ಮಂತ್ರಿಗಳನೆಲ್ಲರ । ಧರಣಿಯಮರನ ಸತಿಯ ಶಾಪದ । ಪರಿಯ ಪೇಳ್ದನು ಬ್ರಹ್ಮಹತ್ಯ ವಿಮೋಚನವಿದೆಂತು ॥
ಅರುಹಿದನು ಮನಮರುಗಿ ಕುಲಗುರು । ಚರಣದಲಿ ಬಿದ್ದೆದ್ದು ಮುಂದಿನ । ತೆರನದಾವುದೆನುತ್ತೆ ದುಃಖಿಸಿದನು ಸಗಾಢದಲಿ ॥23॥

ಅರಸನಾಡಿದ ದುಃಖವಚನವ । ನರಿತು ಪೇಳ್ದನು ಕುಲಗುರುವು ನೀ । ಚರಿಸು ತೀರ್ಥಗಳೆಲ್ಲವನು ನೀ ಭಕ್ತಿ ಯುತವಾಗಿ ॥
ಪರಿಹರಿಪುದೈ ಬ್ರಹ್ಮಹತ್ಯದ । ದುರಿತವೆಂದೀ ಮಾತ ಕೇಳುತ । ಪೊರಟನೈ ತೀರ್ಥಾಟಣಕೆ ಸತಿಸಹಿತ ನೃಪವರನು ॥24॥

ತಿರುಗಿ ನಾನಾ ತೀರ್ಥಗಳನಾ । ಧರಣಿಪತಿ ದಾನಾದಿಕರ್ಮವ । ಪರಿಪರಿಯ ದ್ವಿಜ ಭೋಜನಂಗಳ ಮಾಡಿದನು ಮುದದಿ ॥
ದುರಿತ ಮಾತ್ರವು ಬೆನ್ನ ಹಿಡಿದೇ । ಬರುವುದನು ತಾ ನೋಡಿ ಚಿಂತಾ । ತುರನು ಮನದಲಿ ಮರುಗಿ ಬಂದನು ಮಿಥಿಲ ಪಟ್ಟಣಕೆ ॥25॥

ಪುರದ ಹೊರಳವಯದಲಿ ಚಿಂತಾ । ತುರನು ಕುಳ್ಳಿರ್ದನು ಕಣಾ ನೃಪ । ವರನು ವೃಕ್ಷಛಾಯೆಯಲಿ ಕರ್ಮವನು ನೆನೆನೆನೆದು ॥
ಬರುತಲಿರ್ದನು ಗೌತಮನು ಋಷಿ । ವರರ ಸಮ್ಮೇಳದಲಿ ನೋಡಿದ । ಹರನ ಮೂರ್ತಿಯ ತೆರದಿ ರಂಜಿಸುತಿರುವ ಗೌತಮನಾ ॥26॥

ಬಂದು ಮುಂದಕೆ ಗೌತಮಂಗಭಿ । ವಂದಿಸಿದನೈ ರಾಜನಾಕ್ಷಣ । ಚಂದದಿಂದಲಿ ಸತ್ಕರಿಸಿದನು ಶಿಷ್ಯವೃಂದವನು ॥
ಕಂದಿದಾನನದರಸನನು ಮುನಿ । ವೃಂದ ನೋಡಿತು ಬೆಚ್ಚಿ ಬೆರಗಿತು । ನೊಂದುದೇತಕೆ ವದನವೆಂದನು ಗೌತಮನು ನೃಪಗೆ ॥27॥

ಧರಣಿಯಮರನ ಸತಿಯ ಶಾಪದ । ಪರಿಯನೆಲ್ಲವ ಪೇಳಿದನು ಪರಿ । ಹರಿಪುದಕೆ ನಾ ತೀರ್ಥಯಾತ್ರೆಯ ಮಾಡಿ ತೊಳಲಿದೆನು ॥
ದುರಿತವೆನ್ನಯ ಬೆನ್ನ ಹತ್ತಿದೆ । ಕರುಣಿಸೈ ಮೋಚನದ ಮಾರ್ಗವ । ಚರಣ ಲಾಭವಿದಾಯ್ತು ಯೆನ್ನಯ ಭೂರಿ ಲಾಭವಿದು ॥28॥

ಧನ್ಯನಾದೆನು ನಾನಿದೀಗಲೆ । ನಿನ್ನ ಚರಣವ ಕಂಡೆ ಪಾಪವು । ಛಿನ್ನವಾಯ್ತು ಕೃತಾರ್ಥ ನಾದೆನು ನಿನ್ನ ದರುಶನದಿ ॥
ಇನ್ನು ನೀ ಪೇಳ್ದುದನು ಮಾಳ್ಪೆನು । ಸನ್ನುತಾತ್ಮನೆ ನಿನ್ನ ಚರಣದ । ಮನ್ನಣೆಯ ಮೋಚನವ ಕೊಡುತಿಹುದೆಂದನಾ ನೃಪನು ॥29॥

ಎನಲು ಕರುಣಾ ಸಿಂಧು ಗೌತಮ । ಮುನಿಯು ನಸುನಗು ತೆಂದ ನೀನೀ । ಮನದೊಳಗೆ ಶಂಕಿಸಲು ಬೇಡೈ ಪೇಳ್ವೆ ಮೋಚನವಾ ॥
ವಿನುತ ಪುಣ್ಯಕ್ಷೇತ್ರವಿದೆ ಧಾ । ರುಣಿಯ ಪಶ್ಚಿಮ ತೀರದೊಳಗಾ । ಗಣವರನು ಸ್ಥಾಪಿಸಿದ ಲಿಂಗದ ತೀರ್ಥ ಗೋಕರ್ಣಾ ॥30॥

ಸ್ಮರಣ ಮಾಡಲು ಬ್ರಹ್ಮಹತ್ಯದ । ದುರಿತ ನಾಶನವಹುದು ಮಾಹೇ । ಶ್ವರ ಸದಾಶಿವನಿಹನು ಮೃತ್ಯುಂಜಯನು ವಾಸಿಪನು ॥
ಇರುವದೈ ಗೋಕರ್ಣ ಕ್ಷೇತ್ರವು । ಸರಿಯು ಕೈಲಾಸಕ್ಕೆ ಪಾವನ । ಪರಮ ಮಂಗಳಧಾಮ ಸುಲಭದ ಮೋಕ್ಷ ಸೋಪಾನ ॥31॥

ಮುತ್ತಿರಲು ಧರಣಿಯಲಿ ಬಲು ಕ । ಗ್ಗತ್ತಲೆಯು ದೀಪದ ಪ್ರಕಾಶವು । ಕತ್ತರಿಸುವುದೆ ತಿಮಿರವನು ಬೆಳದಿಂಗಳಾದರದು ॥
ಮತ್ತೆ ಸೂರ್ಯೋದಯವದಾಗಲು । ಕತ್ತಲೆಯು ಕತ್ತರಿಸಿ ಪೋಪುದು । ಕ್ಷೇತ್ರವಿದು ಸೂರ್ಯ ಪ್ರಕಾಶವು ಪಾಪಕತ್ತಲೆಗೆ ॥32॥

ಹಲವು ಸಾವಿರ ಬ್ರಹ್ಮಹತ್ಯದ । ಕೊಲೆಗಳನು ನಿರ್ಮೂಲ ಮಾಳ್ಪುದು । ನಳಿನಭವ ಹರಿಹರರು ತಪವನು ಮಾಡುತಿಹ ಕ್ಷೇತ್ರ ॥
ತಿಳಿಯಲೀ ಕ್ಷೇತ್ರದಲಿ ಕರ್ಮದ । ಫಲವು ಸಿಗುವುದು ಲಕ್ಷಗುಣದಲಿ । ನಳಿನ ನಾಭನು ಬ್ರಹ್ಮಮುಖ್ಯರು ಸಿದ್ಧಿಪಡೆದರಲಾ ॥33॥

ಹರನೆ ನಿಜವು ಮಹಾಬಳೇಶ್ವರ । ಹರಿಯ ವಚನದಿ ಸ್ಥಾಪಿಸಿದನಾ । ಸುರ ಮುನಿಯ ಸುಸಹಾಯದಿಂದಲಿ ವಿಘ್ನನಾಯಕನು ॥
ಸುರರು ವಿಷ್ಣು ವಿರಂಚಿ ಸುರಪುರ । ದರಸ ವಿಶ್ವದ ದೇವರೆಲ್ಲರು । ಮರುತಗಣಗಳು ವಾಸಿಪರು ಗೋಕರ್ಣ ಕ್ಷೇತ್ರದಲಿ ॥34॥

ತರಣಿ ಶಶಿಗಳು ಮೇಲೆ ವಸುಗಳು । ಯಿರುವರೈ ತಾ ಪೂರ್ವ ದ್ವಾರದೊ । ಳಿರುವರೈ ದಕ್ಷಿಣದಿ ಯಮರುದ್ರಾಗ್ನಿಪಿತೃಗಣವು ॥
ವರುಣಗಂಗಾದಿಗಳು ಪಶ್ಚಿಮ । ಕಿರುವರೈ ಉತ್ತರದ ದ್ವಾರದೊ । ಳಿರುತಿಹರು ಮೇಣ್ವಾಯು ಚಂಡಿಕುಬೇರಕಾಳಿಗಳು ॥35॥

ಚಿತ್ರರಥ ಮೊದಲಾದ ವಸುಗಳು । ಚಿತ್ರಸೇನಾದಿಗಳು ರಂಭೆ ತಿ । ಲೋತ್ತಮೆ ಯರಾಡುವರು ನರ್ತನ ಶಿವನ ಸನ್ಮುಖದಿ ॥
ನಿತ್ಯದಲಿ ಬರುತಿಹರು ವಿಶ್ವಾ । ಮಿತ್ರಕಶ್ಯಪ ಕಣ್ವ ಜೈಮಿನಿ । ಸತ್ವಶೀಲ ವಸಿಷ್ಠ ರೆಲ್ಲರು ಪೂಜಿಪರು ಶಿವನಾ ॥36॥

ಕೃತ ಯುಗದಿ ಬ್ರಹ್ಮರ್ಷಿ ನಾರದ । ಯತಿ ಮರೀಚ್ಯತ್ರಿ ಗಳು ಕ್ಷೇತ್ರದ । ಕ್ಷಿತಿಯೊಳಗೆ ತಪಗೈದರಾ ಸನಕಾದಿ ತಾಪಸರು ॥
ಅತುಲ ಭಕ್ತಿಯೊಳಾ ಮೃಡನ ತಪ । ಯತಿವರೇಣ್ಯರು ಮಾಡುತಿದ್ದರು । ನುತಿಸಲಾರೆನು ಶಂಭು ಲೀಲೆಯಗಾಧ ನಿರುಪಮೆಯು ॥37॥

ಸುರರು ಗಂಧರ್ವರು ವಸುಗಳಾ । ವುರಗ ತಕ್ಷಕ ಶೇಷ ನಾಗರು । ಪರಿಪರಿಯ ವೇತಾಳ ಗುಹ್ಯಕ ಕಿನ್ನರರು ಬಹರು ॥
ಹರನ ಪೂಜಿಪರಿನ್ನು ವಿದ್ಯಾ । ಧರರು ಕಿಂಪುರುಷರು ವಸುಗಳಾ । ಬರುವರೈ ಪೂಜಿಪರು ನಿತ್ಯದಿ ಭಾವಭಕುತಿಯಲಿ ॥38॥

ಕೆಲರು ಗಾಯನ ಸೇವೆಯಲಿ ಮ । ತ್ತುಳಿದವರು ನರ್ತನದಿ ಸ್ತೋತ್ರದಿ । ಕೆಲರು ಪೂಜಾಸೇವೆಯಲಿ ತತ್ಪರರು ನೋಡಿರಲಾ ॥
ಕೆಲರು ದಂಡಾಕಾರದಲಿ ಕೇ । ಳಿಳೆಯೊಳಗೆ ಹರನೆದುರು ಬೀಳ್ವರು । ಕೆಲರು ನಾಮಸ್ಮರಣ ಘೋಷದಿ ಭಜನೆ ಮಾಡುವರು ॥39॥

ಶರಣರೆಲ್ಲರು ಚಿಂತಿತವ ಪಡೆ । ವರು ಕಣಾ ಗೋಕರ್ಣ ಕ್ಷೇತ್ರವು । ಧರೆಯೊಳಗೆ ಸುರಧೇನು ಚಿಂತಾಮಣಿಗೆ ಸಮನಾಯ್ತು ॥
ಧರೆಯೊಳಗೆ ನಾನನ್ಯಕ್ಷೇತ್ರವ । ನರಿಯೆ ಗೋಕರ್ಣ ಸಮಾನವು । ನರಪತಿಯೆ ನೀ ಪೋಗುಯೆಂದನು ನೃಪಗೆ ಗೌತಮನು ॥40॥

ವರವ ಪಡೆದರಗಸ್ತಿ ಮುಖ್ಯರು । ಸುರರು ದಾನವರಗ್ನಿ ಮುಖ್ಯರು । ದಿನದಿನಕೆ ಪೂಜೆಯನು ಮಾಳ್ಪರು ಭದ್ರ ಕಾಳಿಯರು ॥
ಗರುಡ ನುರಗನ ಕೊಲನು ಚಿತ್ರವು । ದುರುಳರಾವಣ ಕುಂಭಕರ್ಣರು । ವರವ ಪಡೆದಿಹ ಕ್ಷೇತ್ರ ಪೂಜಿಪನೈ ವಿಭೀಷಣನು ॥41॥

ಹರನ ಪೂಜೆಗೆ ಬಂದವರು ತಾ । ವಿರದೆ ತಮ್ಮಯ ಹೆಸರ ಲಿಂಗವ ನಿರಿಸುವರು ಕ್ಷೇತ್ರದಲಿ ಕಾಮಿತವನ್ನು ಪಡೆಯುವರು ॥
ಹರಿಹರವಿರಂಚಿ ವಿನಾಯಕಾದ್ಯರು । ಕರಸಹಸ್ರದ ಕಾರ್ತಿವೀರ್ಯನು । ಪರಮ ದುರ್ಗಾ ದೇವಿಯರು ಲಿಂಗವನು ನಮಿಸುವರು ॥42॥

ಕ್ಷೇತ್ರವಿದು ಕೇಳ್ಪರಮ ಪಾವನ । ತೀರ್ಥದಗಣಿತ ಲಿಂಗಸ್ಥಾನವು । ಧಾತ್ರಿಯಲ್ಲೀ ಸ್ಥಳದ ಕಲ್ಲುಗಳೆಲ್ಲ ಲಿಂಗಗಳು ॥
ತೀರ್ಥ ವಿರುವುದು ಸರ್ವ ನೀರೊಳ । ಗುತ್ತರೋತ್ತರ ಪಾಪ ನಾಶನ । ಸತ್ಯವಿರುವದು ಮಹಿಮೆ ಕೇಳೈ ಪ್ರಾಣಲಿಂಗವಿದು ॥43॥

ಶ್ವೇತವಿತ್ತಾ ಕೃತಯುಗದೊಳಾ । ಕ್ಷೇತ್ರದಲ್ಲಿ ಮಹಾಬಲೇಶ್ವರ । ತ್ರೇತ ಯುಗದಲಿ ಲೋಹಿತವು ಮೇಣಿತ್ತು ಶಿವಲಿಂಗಾ ॥
ಪೀತವರ್ಣವು ದ್ವಾಪರದೊಳಾ । ತೀರ್ಥರಾಜಗೆ ಬಂತು ಕಲಿಯಲಿ । ಖ್ಯಾತಿಯಾಯಿತು ಕೃಷ್ಣವರ್ಣ ದಲೆಂದನಾ ಮುನಿಪ ॥44॥

ಸಪ್ತ ಪಾತಾಳದಲಿ ಪಸರಿಸಿ । ಗುಪ್ತವಾಗಿಹುದಾತ್ಮ ಲಿಂಗವು । ಮತ್ತೆ ತೋರುವುದೀಗ ಕಲಿಯಲಿ ಸೂಕ್ಷ್ಮ ಮೃದುವಾಗಿ ॥
ಭಕ್ತಿಯಲಿ ಪೂಜೆಯನು ಚಂದ್ರಾ । ದಿತ್ಯ ಬುಧ ವಾರದಲಿ ಮಾಡಲು । ಸಪ್ತಜನ್ಮದ ದುರಿತ ನಾಶನ ಶಾಸ್ತ್ರ ಸಮ್ಮತವು ॥45॥

ಸುಟ್ಟುಬಿಡುವುದು ಪಾಪ ಕರ್ಮದ । ಬೆಟ್ಟವನು ಹಿರಿಕಿರಿದು ನೋಡದೆ । ದೃಷ್ಟಿ ಯಾದರೆ ಸಾಕು ಗೋಕರ್ಣದ ಮಹಾಬಲನಾ ॥
ಶಿಷ್ಟಕರ್ಮವ ಮಾಡಲಾ ಫಲ । ವೆಷ್ಟು ಬಣ್ಣಿಸಲಿನ್ನು ಸಾವಿರ । ಪಟ್ಟು ಸಿಗುವುದು ಸರ್ವ ಕಾಲದ ಕ್ಷೇತ್ರ ಮಹಿಮೆಯದು ॥46॥

ಸ್ನಾನವನು ಸಾಗರದಿ ಮಾಡಿ ಸು । ದಾನ ಧರ್ಮಾದಿಗಳ ಮಾಡಲು । ಕ್ಷೋಣಿ ಯಲಿ ಯಮವಾಸೆ ಪರ್ವಸುಕಾಲ ವೇಳೆಯಲಿ ॥
ಮೇಣು ಜಪತಪಹವನ ಶಿವಪೂ । ಜಾನುವ್ರತ ಮಾಡಲ್ಕೆ ಶತಸಂ । ಧಾನ ಗುಣ ದೊರೆಯುವದು ಯೆಂದನು ನೃಪಗೆ ಗೌತಮನು ॥47॥

ಪರ್ವಕಾಲದಿ ಶಾಸ್ತ್ರ ವಿಧಿಯಲಿ । ಸರ್ವ ಭಕ್ತಿ ಪುರಃಸರದಿ ತಾ । ನುರ್ವಿಯಲಿ ವ್ಯತಿಪಾತ ಸಂಕ್ರಾಂತಿ ಪ್ರದೋಷದಲಿ ॥
ಶರ್ವನನು ಗೋಕರ್ಣಕ್ಷೇತ್ರದಿ । ಭಾವ ಶುದ್ಧದೊಳಾರು ಪೂಜಿಪ । ನೇರ್ವನವ ಕೈಲಾಸ ಪುಣ್ಯವ ಲೆಕ್ಕಿಪರು ಯಾರು ॥48॥

ಹೇಗೆ ವರ್ಣಿಸಲೀಶ್ವರನ ಮಹಿ । ಮಾಗುಣವ ಪೂಜನ ಮಾತ್ರದಿ । ಬೇಗದಲಿ ವಶವಹನು ಭೋಳಾ ಸಾಂಬ ನೆಂಬರಲಾ ॥
ಮಾಘಮಾಸದ ಕೃಷ್ಣ ಪಕ್ಷದ । ಮೋಘ ಶಿವರಾತ್ರಿಯ ಚತುರ್ದಶಿ । ಯಾಗ ಯೊಂದೇ ಬಿಲ್ವ ಪತ್ರದಿ ಯೊಲಿವ ಪರಶಿವನು ॥49॥

ಈ ತೆರದಿ ಶಿವನೊಲಿದ ಕ್ಷೇತ್ರಕೆ । ಯಾತಕ್ಕೆ ನೀ ಪೋಗಲಾರದೆ । ಯಾತನೆಯ ಪಡುತಿರುವೆ ಬಳಲುವೆಯನ್ಯಯಾತ್ರೆಯಲಿ ॥
ನೀ ತೆರಳು ಗೋಕರ್ಣ ಯಾತ್ರೆಗೆ । ಪಾತಕವು ದ್ವಿಜ ಹತ್ಯೆ ಯಿರಲು ವಿ । ಭೂತಿಯಪ್ಪುದು ಸುಟ್ಟು ಯೆಂದನು ನೃಪಗೆ ಗೌತಮನು ॥50॥

ಎಂದ ನುಡಿಯನು ಕೇಳಿ ನೃಪಮುನಿ । ಗೆಂದ ಸಂತೋಷದಲಿ ತವ ಕೃಪೆ । ಯಿಂದ ಮೋಚನ ಸಾಧನವು ಗೋಚರಿಸಿತ್ಯೆ ಯೆನಗೆ ॥
ಹಿಂದೆ ಯಾರಿಗೆ ಕ್ಷೇತ್ರ ಮಹಿಮೆಯು । ಬಂದಿಹುದು ಗೋಚರಕೆ ನೀ ಪೇ । ಳೆಂದು ಗೌತಮನಡಿಗೆ ಬಿದ್ದನು ಮುದದಿ ಭೂಪಾಲಾ ॥51॥

ಜನಪ ನಾಡಿದ ನುಡಿಯ ಕೇಳ್ದಾ । ಮುನಿಪ ಸಂತೋಷದಲಿ ಪೇಳ್ದನು । ಯೆನಗೆ ಬಂದಿಹ ವನುಭವವ ಕಣ್ಣಿಂದ ನೋಡಿದೆನು ॥
ಜನರು ಹೋಗುವ ತೆರದಿ ಕ್ಷೇತ್ರಕೆ । ಯೆನಗೆ ಯಾತ್ರಾಲಾಭವಾಯಿತು । ದಣಿದು ವೃಕ್ಷ ಛಾಯೆಯಲಿ ಕುಳ್ಳಿರ್ದೆ ಕ್ಷೇತ್ರದಲಿ ॥52॥

ನೋಡಿದೆವು ದೂರದಲಿ ರೋಗದ । ಪೀಡಿತಳು ಚಾಂಡಾಳಿಯೊಬ್ಬಳು । ಬೇಡುತಿದ್ದಳು ಭಿಕ್ಷೆಯುಪವಾಸದಲಿ ಬಳಲಿದಳು ॥
ಬಾಡಿದಾನನ ಕುಷ್ಟ ರೋಗವು । ಕಾಡುತಿಹುದ್ಯೆ ರಕ್ತ ಪೂಗಳ । ನೋಡಿ ನೊಣಗಳು ಬಂದು ಮೈಯನು ಮುಸುಕುವವು ಕೇಳ್ಯೆ ॥53॥

ತರುಣಿ ಕೇಳಾ ಹಸಿವೆಯಿಂದಲಿ । ಮರುಗುವಳು ಮೈ ಮೇಲೆ ವಸ್ತ್ರಾ । ವರಣ ವಿಲ್ಲೈ ಗಂಡಮಾಲೆಯ ಕಣ್ಣು ಕಾಣದಲೆ ॥
ನೆರಳುವಳು ಮೈಬೇನೆಯಲಿ ತ । ತ್ಪುರದಿ ಭಿಕ್ಷೆಯು ಸಿಗದೆ ದುಃಖದ । ಭರದಿ ಬಿಸಿಲಲಿ ಜೀವ ಕಸವಿಸಿ ಗೊಂಡು ಹಸಿವೆಯಲಿ ॥54॥

ವಿಧವೆ ಯಾಕೆಯು ಕೇಶವಪನದ । ವಿಧಿಯ ಮೂಲಕ ದೇಹಭಿನ್ನತೆ । ಯೊದಗಿ ಬಂದು ಮರದ ನೆರಳಿಗೆ ಪ್ರಾಣ ಬಿಟ್ಟಳ ಲಾ ॥
ಅದುಬುತವನೆನೆಂಬೆ ತತ್ ಕ್ಷಣ । ಮುದದೊಳಿಳಿದರು ಶಿವನ ದೂತರು । ಸುದತಿ ಯಿದ್ದೆಡೆ ಬಂದರಾ ಶಸ್ತ್ರಾಸ್ತ್ರ ಪಾಣಿಯರು ॥55॥

ನೋಡಿ ಶಿವ ದೂತರನು ಕೇಳ್ಮಾ । ತಾಡಿಸಿದೆವೈ ಯೀ ವಿಮಾನವು । ರೂಢಿ ಗಿಳಿದುದು ಯಾರನೊಯ್ಯುವಿರೆಂದು ಕೇಳಿದೆವು ॥
ನೋಡಿರೈ ಚಾಂಡಾಳಿಯಾಕೆಯು । ಕೂಡಿಸುವರೆ ವಿಮಾನತಂದೆವು । ಬೇಡ ಸಂಶಯ ಮೃಡನ ಪ್ರೀತಿಯ ಪಾತ್ರ ವೀಕೆಯಲಾ ॥56॥

ಯೆನುವ ನುಡಿಗಳ ಕೇಳಿದಾಕ್ಷಣ । ಮನದೊಳಚ್ಚರಿ ಯಾಯ್ತು ದೂತರ । ಪುನ ಪುನಃ ಕೇಳಿದೆವು ರಾಯನೆ ಕೇಳು ಮನಗೊಟ್ಟು ॥
ಶುನಕಕೆಂತೀ ಶ್ರೇಷ್ಠ ಸಿಂಹಾ । ಸನದಿ ಕೂಡಿಸುತಿಹಿರಿ ಕೇಳ್ವಾ । ಪಿಣಿಗೆ ಕೈಲಾಸದ ಪದವಿ ಸಲ್ಲುವುದೆ ನೋಡಿರಲಾ ॥57॥

ಹುಟ್ಟಿದಾರಭ್ಯ ದಲಿ ಪಾಪದ । ಬೆಟ್ಟವನು ಸಂಗ್ರಹಿಸಿ ಪುಣ್ಯರ । ವಷ್ಟು ಮಾಡದೆ ಜನ್ಮ ಕಳೆದಳು ಯೆಂತು ಕೈಲಾಸಾ ॥
ದುಷ್ಟ ವರ್ತನ ಶಿವನ ಧ್ಯಾನದ । ಬಟ್ಟೆ ಯರಿತವಳಲ್ಲ ತಪಸಿನ । ಕಷ್ಟ ಸಾಧಿಸಲಿಲ್ಲ ಶಿವನ ಜ್ಞಾನ ಬೇರಿಲ್ಲ ॥58॥

ಸತ್ಯ ದಯೆಯನು ತಿಳಿಯದೀ ಶಿವ । ರಾತ್ರಿ ಯಲಿ ವ್ರತ ಮಾಡದೀಪರಿ । ಸತ್ತವಳ ಪಶು ಮಾಂಸ ತಿಂಬುವ ದುಷ್ಟ ಚಾಂಡಾಳಿ ॥
ರಕ್ತ ಪೂ ದುರ್ಗಂಧ ಕುಷ್ಟದ । ನೆತ್ತರಿಂದಲಿ ಕೊಳೆವ ದೇಹದ । ಮರ್ತ್ಯ ಳಿಗೆ ಕೈಲಾಸ ಪದ ವೊಪ್ಪುವುದೆ ಕೇಳೆಂದಾ ॥59॥

ಸ್ನಾನ ಮಾಡದೆ ಪರ್ವ ಕಾಲದಿ । ದಾನ ಧರ್ಮಾ ದಿಗಳ ಮಾಡದೆ । ಮಾನಿನಿಯು ಚಾಂಡಾಳಿ ಶಿವ ಪಂಚಾಕ್ಷರಿಯ ತೊರೆದು ॥
ಹೀನಜನ್ಮದ ಹೀನಗುಣಳಿಗೆ । ಯೆನಿದಚ್ಚರಿ ಕೂಡಿಸುವಿರಿ ವಿ । ಮಾನದಲಿ ಶಿವಲೋಕ ಕೊಯ್ಯುವಿರೆಂದು ನಾನುಡಿದೆ ॥60॥

ಮಾತ ಕೇಳಿದರೆನ್ನ ಮೇಣಾ । ದೂತರೆಂದರು ಪೇಳ್ವೆವೀಕೆಯ । ಗೌತಮನೆ ನೀ ಕೇಳು ಚಾಂಡಾಳಿಯ ಕಥಾನಕವಾ ॥

ಭೂತದೊಳಾ ಬ್ರಹ್ಮ ಕುಲ ಸಂ । ಜಾತಳಿದ್ದಳು ಪೂರ್ವ ಜನ್ಮದೊ । ಳೀತಳೋದರಿ ಸೋಮನಂದದಿ ವರ್ಧಿಸಿದಳೆನುತಾ ॥61॥

ಸೌಮಿನೀ ಪೆಸರಾಯ್ತು ಸುಂದರ । ಕಾಮಿನಿಯು ತಾನಾದಳೈ ಮನ । ಕಾಮುಕಳು ವೈವಾಹವಾಯಿತು ಗೃಹ್ಯ ರೀತಿಯಲಿ ॥

ಆ ಮಹಾತುಮ ಗಂಡ ತೀರಲು । ಭಾಮಿನಿಗೆ ವೈದವ್ಯ ವಾಯಿತು । ಸೌಮಿನಿಯು ಕೇಳ್ ಜಾರ ಕರ್ಮಕೆ ಮನವ ಕೊಟ್ಟಳಲಾ ॥62॥

ನಾರಿ ಕೆಳ್ವರಪುರುಷರೊಂದಿಗೆ । ಜಾರಕರ್ಮವನಾರಭಿಸಿದಳು । ಜಾರಕರ್ಮದ ಫಲವು ಬಹಿರಂಗದಲಿ ತೋರಿತಲಾ ॥

ಭೂರಿ ದುಃಖದಿ ಬಂಧು ವರ್ಗವು । ನಾರಿಯನು ಹೊರ ಹಾಕಿದರು ಮೇ । ಣಾರಭಿಸಿದಳು ಜಾರಕರ್ಮವ ಶಂಕೆಯಿಲ್ಲದಲೆ ॥63॥

ವಾಣಿಯೊಬ್ಬನು ರೂಪ ಗುಣ ಸಂ । ಪೂರ್ಣನಿದ್ದನು ಪೂರ್ವವಯದೆ । ಖ್ಯಾಣನಿದ್ದನು ವರಿಸಿದಳು ಕೇಳವನ ಪ್ರೀತಿಯಲಿ ॥

ಕ್ಷೋಣಿಯಲ್ಲೀ ನಾರಿ ಕೃತ್ಯದಿ । ಹೀನತನ ಕೇಳುಭಯ ಕುಲಕ್ಕೈ । ಯೇನ ಹೇಳುವೆ ಶೂದ್ರನೊಳು ರಮಿಸಿದಳು ದಿನರಜನಿ ॥64॥

"ಸ್ತ್ರೀಯಃ ಕಾಮೇನ ನಸ್ಯಂತಿ । ಬ್ರಾಹ್ಮಣೋ ಹೀನ ಸೇವಯಾ । ರಾಜಾನೋ ಬ್ರಹ್ಮ ದಂಡೇನ । ಯತಯೋ ಭೋಗ ಸಂಗ್ರಹಾತ್"

ತರುಣಿಯರು ನಾಶಿಪರು ಕಾಮದೊ । ಳರಸರೈ ದ್ವಿಕ್ಷೋಭದಲಿ ಭೂ । ಸುರರು ಹೀನರ ಸೇವೆಯಿಂ ಯತಿವರರು ಭೋಗದಲಿ ॥

ಪರಿಯಲೀ ಕೆಲ ದಿವಸ ಪೋಗಲು । ತರುಣ ಗಾಯಿತು ಕೂಸು ದಿನದಿನ । ಕಿರದೆ ಮಾಂಸವ ತಿಂದು ಮದ್ಯಾಸಕ್ತಳಾದಳಲಾ ॥65॥

ಕುಡಿದು ಮದ್ಯವನೊಂದು ದಿನವೈ । ಕಡಿದಳಾಕಳ ಕರುವನಾಡೆಂ । ದಡಿಗೆ ಮಾಡಿದಳಕಟ ಗೋಮಾಂಸವನು ತಿಂದರಲಾ ॥

ಮಡದಿ ಯೆರಡನೆ ದಿವಸ ಶುಧ್ಧಿಯ । ಪಡೆಯಲಾದಿನ ನೋಡಲಾಕ್ಷಣ । ನಡೆದ ಪರಿ ಗೋಚರಕೆ ಬಂತೇವೇಳ್ವೆ ಗೋಹತ್ಯಾ ॥66॥

ಪತಿಗೆ ತಿಳಿಯದ ಮುನ್ನವೀ ಕೃತಿ । ಕರುವನು ಹುಗಿದು ಹುಲಿ ಹಿಡಿ । ಯಿತು ಯೆನುತ್ತ ವಿಲಾಪ ಮಾಡಿದಳಂಜಿ ದುಷ್ಕೃತಿಗೆ ॥
ಕ್ಷಿತಿಯೊಳೀಪರಿ ಪಾಪರಾಶಿಯ । ಮತಿಗೆ ಬಂದಂತೆಸಗಿ ಸತ್ತಳು । ಗತಿಯ ಮುಂದಾಯ್ತಾ ಕೆಗ್ಯೆ ನರಕದಲಿ ಬಹು ವರುಷಾ ॥67॥

ನರಕ ಭೋಗಿಸಿ ಜನ್ಮವಾಯಿತು । ಧರಣಿಯಲಿ ಕೇಳೀಗ ಚಾಂಡಾ । ಲರಲಿ ಬಂದಳು ನೇತ್ರಹೀನಳು ಪಾಪ ಫಲಿಸಿತಲಾ ॥
ಮರಣ ಪಡೆದರು ತಂದೆ ತಾಯ್ಗಳು । ಅರರೆ ಕುಷ್ಟ ಶರೀರ ವಾಯಿತು । ತಿರುಗಿದಳು ಭಿಕ್ಷೆಯಲಿ ಯುದರಂಭರಣ ಮಾಡಿದಳು ॥68॥

ಹಲವು ದಿವಸಗಳಾದವೀಪರಿ । ಮಹಾ ರೋಗದಲಿ ಪೀಡಿತ । ಳಳಲಿ ಬಂದಳು ಗೋಕರ್ಣಕ್ಷೇತ್ರಕ್ಕೆ ತಿರುತಿರುಗಿ ॥
ಗಳಿತ ಕುಷ್ಟದ ರಕ್ತಪೂಗಳ । ಮಲಿನ ವಸ್ತ್ರದ ಬಿಟ್ಟ ಬಾಯಿಯ । ಲಲನೆ ಬಂದಳು ಯಾತ್ರಿಕರ ಹಿಂಬದಿಗೆ ಬೇಡುತಲೆ ॥69॥

ಕೆಲರು ನಾಮಸ್ಮರಣೆ ಮಾಡುತ । ಕೆಲರು ಲೋಟಾಂಗಣವ ಹಾಕುತ । ಕೆಲರು ಕುಣಿಯುತ ಕೆಲರು ವೀಣಾ ವಾದ್ಯ ಬಾರಿಸುತಾ ॥
ಕೆಲರು ಹಾಡುತ ಕೆಲರು ಕುಣಿಯುತ । ಕೆಲರು ರಥವಾರೂಢರಾಗುತೆ । ಹಲತೆರದಿ ಶಿವಯಾತ್ರೆ ಗಾದಿನ ಮಂದಿ ಬರುತಿರಲು ॥70॥

ಹಿಂದೆ ಬಂದಳು ಭಿಕ್ಷುಕರ ಬಹು । ವೃಂದದಲಿ ಚಾಂಡಾಳಿ ಭಿಕ್ಷೆಯ । ನಿಂದು ಹಾಕಿರಿ ಹೊಟ್ಟೆ ಹಸಿವೆಗೆನುತ್ತಲೊದರುವಳು ॥
ಅಂಧಳಾಗಿಹೆ ರೋಗಪೀಡಿತ । ಳಿಂದ ಪಾಪಿಣಿ ಹೊಟ್ಟೆಹಸಿವೆಗೆ । ಯೊಂದು ತುತ್ತನ್ನವನು ಚಲ್ಲಿರೆನುತ್ತಲೊದರುವಳು ॥71॥

ಹಿಂದೆ ಮುಂದೆನಗಿಲ್ಲ ದೇವರೆ । ಹಿಂದೆ ಜನ್ಮಾಂತರದೊಳಗೆ ನಾ । ನೆಂದು ಧರ್ಮವ ಮಾಡಿದೆನೊ ನಾ ತಿಳಿಯೆ ಕರುಣದಲಿ ॥
ಒಂದು ತುತ್ತನು ಹಾಕಿ ಪ್ರಾಣವ । ಚಂದದಿಂ ರಕ್ಷಿಸಿರಿ ಯಾತ್ರಿಕ । ರೆಂದು ಮೊರೆಯಿಟ್ಟಳಲಿದಳು ಚಾಂಡಾಳಿ ಹಾದಿಯಲಿ ॥72॥

ಮಂದ ಮಂದದೊಳಿವಳು ತಾನಡೆ । ತಂದಳಾ ಮೃಡನಾತ್ಮ ಲಿಂಗದ । ಮುಂದೆ ಬೇಡುವಳನ್ನವನು ಯಾತ್ರಿಕರ ನೋಡುತಲೆ ॥
ಅಂದು ಶಿವರಾತ್ರಿಯಲುಪವಾಸವು । ನೊಂದಾಳಾ ಚಾಂಡಾಳಿ ದೇವರ । ಮುಂದೆ ಕುಳಿತಳು ಭಿಕ್ಷೆ ಹಾಕಿರೆನುತ್ತ ಲೊದರಿದಳು ॥73॥

ತರುಣಿ ಯೋರ್ವಳು ನಗುತ ಕೈಯೊಳ । ಗಿರುವ ಬಿಲ್ವವನೊಂದು ಭಿಕ್ಷೆಗೆ । ಕರದಿ ಹಾಕಲು ಮೂಸಿ ಚಾಂಡಾಳಿಯು ಸಕೋಪದಲಿ ॥
ಮರಳಿ ಬೀಸಾಡಿದಳು ತದ್ದಳ । ವರರೆ ಬಿತ್ತಾ ಮಾಬಲೇಶ್ವರ । ಶಿರದಿ ಮೆಚ್ಚಿದನಿವಳ ಸೇವೆಗೆ ಶುಂಭು ಭೋಳನಲಾ ॥74॥

ಅನ್ನಸಿಗದುಪವಾಸವಾಯಿತು । ಬನ್ನ ಬಟ್ಟಿರೆ ಜಾಗರಣೆ ಸಂ । ಪೂರ್ಣವಾಯಿತು ಬಿಲ್ವದಳದಲಿ ಪೂಜೆ ಶಿವಗಾಯ್ತು ॥
ಅನ್ನ ಸಿಗದೀ ಕ್ಷೇತ್ರದಲಿ ಆಸು । ವನ್ನು ತೊರೆದಳು ಮರಣವಾಯಿತು । ಛಿನ್ನವಾಯಿತು ಜನ್ಮ ಜನ್ಮಾಂತರದ ಪಾಪವಲಾ ॥75॥

ಪ್ರೀತಿಯಲಿ ಶಿವನೆಮ್ಮ ಕಳುಹಿದ । ಪ್ರೀತನಲ್ಲಾ ಬಿಲ್ವದಳದಲಿ । ಯೀತೆರದ ಭಕ್ತಾಭಿ ಮಾನಿಯ ಕಾಣೆ ನಾವಿನ್ನು ।
ದೂತರಿಂತೀ ತೆರದಿ ಪೇಳ್ದರು । ಪ್ರೀತಿಯಿಂದ ಪಿಯೂಷ ಸುರಿದರು । ಆ ತತೂಕ್ಷಣ ಕುಷ್ಟ ಹೋಯಿತು ಬಂತು ಬಹು ಕಾಂತಿ ॥76॥

ಕಣ್ಣೀನಿಂ ನೋಡಿರ್ದ ಪಾವನ । ಪುಣ್ಯ ಕಥೆಯನು ನಿನಗೆ ಪೇಳಿದೆ । ಛಿನ್ನ ಸಂಶಯ ನಾಗಿ ಗೋಕರ್ಣಕ್ಕೆ ನೀ ತೆರಳು ॥
ಮುನ್ನ ನಿನ್ನ ಸಮಸ್ತ ಪಾಪಗ । ಳನ್ನು ನಾಶಿಪ ದೇವದೇವನು । ಚಿನ್ಮಯನು ಗೋಕರ್ಣವಾಸಿ ಮಹಾಬಲೇಶ್ವರನು ॥77॥

ಎಂದು ಗೌತಮಪೇಳ್ದನಾನೃಪ । ನಂದು ಗೋಕರ್ಣಕ್ಕೆ ಪೋದನು । ಚಂದ್ರಮೌಳಿಯ ದಯದಿ ಪಾಪವದೆಲ್ಲ ಲಯವಾಯ್ತು ॥
ಎಂದು ಸಿಧ್ಧನು ನಾಮಧಾರಕ । ಗೆಂದನಾ ಕಾರಣದಿ ಸದ್ಗುರು । ಬಂದನಾ ಗೋಕರ್ಣ ಕ್ಷೇತ್ರಕ್ಕೆಂದು ಪೇಳಿದನು ॥78॥

ಪರಮ ಪಾವನ ಪುಣ್ಯ ಕಥೆಯಿದು । ದುರಿತ ನಾಶಕ ಮಾತ್ರೆಯಿದು ಸ । ದ್ಗುರು ಕೃಪಾಮೃತ ವೃಷ್ಟಿ ಯಿದು ದುರ್ಜನರು ಕೇಳುವುದು ॥
ಧರಣಿಯಲಿ ಗೋಕರ್ಣ ಕ್ಷೇತ್ರಕೆ । ತೆರಳಿ ನೇತ್ರಾನಂದ ಪಡೆವುದು । ಗುರುಚರಣ ಪರನಾಗಿ ವಿಷ್ಣುವಿಗೆರಗಿ ಪೇಳುವೆನು ॥79॥

॥ ಅಧ್ಯಾಯ 7 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 8

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುವರನು ಸಂತೋಷದಿಂದಲಿ ವಿ । ಸ್ತರಿಸಿದನು ಶಿವನ ಪ್ರದೋಷದ । ಚರಿತವನು ಮೂಢನಿಗೆ ಜ್ಞಾನಾಮೃತವ ಕುಡಿಸಿದನು॥

ಗುರುಚರಿತ ಪೀಯೂಷಪಾನದಿ । ಕರಗಿದವು ತಾಪತ್ರಯಂಗಳು । ಮರಳಿ ಚರಿತಾಮೃತವ ಪಾನದ ಲಾಶೆ ಯಂಕುರಿಸಿ ॥
ಮರುಳು ಮಾಳ್ಪದು ಮನವ ಶ್ರೀಗುರು । ವರನ ಮುಂದಿನ ಚರಿತವನು ತನ । ಗರುಹ ಬೇಕೆಂದೆರಗಿದನು ಸಿದ್ಧನಿಗೆ ವಟುವರನು ॥1॥

ಸಿದ್ಧಮುನಿ ಗಾನಂದವಾಯಿತು । ಮುದ್ದಿಸುತ ಶಿಷ್ಯನಿಗೆ ಪೇಳ್ದನು । ಇದ್ದನಾ ಗೋಕರ್ಣ ಕ್ಷೇತ್ರದಿ ಗುಪ್ತ ರೀತಿಯಲಿ ॥
ಅಬ್ದ ಮೂರರ ತನಕ ನಂತರ । ಯೆದ್ದು ನಡೆದನು ಶ್ರೀಗಿರಿಗೆ ಜಗ । ದುದ್ಧರಣ ತತ್ಪರನು ಶ್ರೀಪಾದ ಶ್ರೀವಲ್ಲಭನು ॥2॥

ಗುರುಚರಣದಲಿ ಸರ್ವತೀರ್ಥಗ । ಳಿರಲು ಗುರುವಿಗೆ ತೀರ್ಥವೇತಕೆ । ಚರಣ ವಿತತ ಪುರಾಣ ಪಾವನ ವೇದ ಶ್ರುತಿವಚನಾ ॥
ಗುರುಚರಣ ಸಂದರ್ಶನವೆ ಸಕ । ಲರಿಗೆ ತೀರ್ಥಸಮಾನ ನಿಜವಿದು । ಧರೆಯ ತೀರ್ಥಂಗಳಿಗೆ ಪಾವನ ಕರಣ ಗುರುಚರಣ ॥3॥

ಕಳೆದು ತಿಂಗಳು ನಾಲ್ಕು ಗಿರಿಯಲಿ । ಬಳಿಕ ಬಂದು ನಿವೃತ್ತಿ ಸಂಗಮ । ದುಳಿದನೈ ಕೆಲದಿವಸ ದರ್ಶನ ಕೊಟ್ಟು ಸಂತರಿಗೆ ॥
ಬಳಿಕ ನಡೆದನು ಕುರುವ ಪುರಕಾ । ನಿಲವು ಮಾಡಿದನಲ್ಲಿ ಬಹುದಿನ । ವಿಳೆಯೊಳಿದು ಗಂಗಾ ಸಮಾನವು ಕೃಷ್ಣಾ ನದೀ ಸ್ನಾನಾ ॥4॥

ಧಾರುಣಿಯೊಳಾ ತೀರ್ಥರಾಜನ । ಸೇರಲಾ ಗುರುಚರಣವಾಕ್ಷಣ । ಭಾರಿ ಮಹಿಮಾ ಕೀರ್ತಿ ಹಬ್ಬಿತು ಕೇಳು ನಾಲ್ದೆಸೆಗೆ ॥
ಯಾರು ಬಕ್ತಿಯಲ್ಯೆದಿ ಗುರುಪಾ । ದಾರವಿಂದವ ಭಜಿಪರವರಿಗೆ । ತೋರಿಸುವನ್ಯೆ ಕಾಮಿತವ ಗುರುರಾಯ ಪ್ರೀತಿಯಲಿ ॥5॥

ಅರುಹಲಾರೆ ಸಮಗ್ರ ಚರಿತವ । ನರುಹುವೆನು ಸಂಕ್ಷಿಪ್ತ ರೀತಿಯೊ । ಳಿರದೆ ಮುಂದವತಾರ ಕಾರಣ ಮಾತ್ರ ಪೇಳುವೆನು ॥
ಕುರವಪುರದೊಳು ಸರ್ವ ಸದ್ಗುಣ । ಭರಿತ ಭೂಸುರನೋರ್ವನಿದ್ದನು । ತರುಣಿಯವನಿಗೆ ಯಂಬಿಕಾ ಪೆಸರಿನಲಿ ರಂಜಿಪಳು ॥6॥

ಪತಿಯೆ ದೈವತವೆಂದು ಸತಿಯಾ । ಪತಿಪರಾಯಣಳಿದ್ದಳೀಪರಿ । ಯತಿಥಿ ಅಭ್ಯಾಗತರ ಪೂಜಿಸಿ ಧರ್ಮವಾಚರಿಸಿ ॥
ಕ್ಷಿತಿಯೊಳಗೆ ಸಂಸಾರ ಸಾಗಿಸು । ತತಿ ಮುದದೊಳವರಿದ್ದರೀಪರಿ । ಸುತರು ಯಿಲ್ಲದ ಚಿಂತೆಯೊಂದೇ ಮನಕೆ ಕುಂದಾಯ್ತು ॥7॥

ಸತ್ತು ಹೋದವು ಹಲವು ಮಕ್ಕಳು । ಹೊತ್ತೆನಕಟಾ ವ್ಯರ್ಥಗರ್ಭವೆ । ನುತ್ತ ದೇವರ ನವಸ ಮಾಡಿದಳತ್ತು ದಿನ ದಿನದಿ ॥
ಮತ್ತೆ ಬಾಲಕನಾದನೋರ್ವನು । ಚಿತ್ತ ಸಂತೋಷದಲಿ ಬಾಲಕ । ನೆತ್ತಿ ಮುದ್ದಾಡಿದರು ಬದುಕಿದ ಬಾಲನನು ನೋಡಿ ॥8॥

ಹತ್ತು ವರ್ಷಗಳಾಯ್ತು ಬಾಲಗೆ । ಮತ್ತೆ ಮುಂಜೀ ಬಂಧನವ ದ್ವಿಜ । ಸತ್ತಮನು ಮಾಡಿದನು ಬಾಲನು ಮೂಢ ಕಿವುಡನಲಾ ॥
ಯೆತ್ತಣಿಂದೀ ಕಿವುಡ ಬೆನ್ನನು । ಹತ್ತಿಹುದು ಪ್ರಾಕೃತವು ಬಿಡದುಯೆ । ನುತ್ತ ದಂಪತಿಗಳಿಗೆ ದುಃಖವು ದ್ವಿಗುಣವಾಯಿತಲಾ ॥9॥

ಪರಿಪರಿಯ ದೇವರಿಗೆ ನವಸವ । ವಿರಚಿಸಿ ದೇವಾವ್ ಮೂಢ ಬಾಲಕ । ನಿರಲು ಯಿಲ್ಲದ ತೆರದಿ ಪೂರ್ವಾರ್ಜಿತವು ಫಲಿಸಿತಲಾ ॥
ಕರೆದು ಬಾಲಗೆ ವೇದ ವಿದ್ಯೆಯು । ಬರುವ ಲಕ್ಷಣ ವಿಲ್ಲವೆಂದಾ । ತುರವಿ ಬಡೆವನು ಹೊಡೆವನಾದ್ವಿಜ ತನ್ನ ಬಾಲನನು ॥10॥

ಇಂತು ನಡೆದಿಹ ಸಂಗತಿಯನಾ । ಕಾಂತೆ ನೋಡಿದಳಮಿತ ದುಃಖದಿ । ಕಾಂತನಿಂಗಿಂತೆದಳಾಸತಿ ಪುತ್ರ ವತ್ಸಲಳು ॥
ಇಂತು ಹೊಡೆದರೆ ಬಡೆದರವನಿ । ನ್ನೆಂತು ವಿದ್ಯಾವಂತನಹನೀ । ಖಂತಿ ಯಾಗುವುದೆನಗೆ ಹೊಡೆದರೆ ಪ್ರಾಣ ತ್ಯಜಿಸುವೆನು ॥11॥

ಎಂದು ಪೇಳಿದ ನುಡಿಯನಾ ದ್ವಿಜ । ಚಂದದಿಂದಲಿ ಕೇಳಿದನು ಮನ । ಬಂದ ತೆರದಲಿ ಮಾಡೆನುತಲವಗೊಡವೆ ಬಿಟ್ಟನಲಾ ॥
ಮುಂದೆ ಕೆಲ ದಿನಕವನು ಯಮಪುರ । ಕಂದು ನಡೆದನು ತಾಯಿ ಮಗನಿಗೆ । ಬಂದು ಭಿಕ್ಷಾಪಾತ್ರ ಮುಟ್ಟಿತು ಯೇನು ದೈವಗತಿ ॥12॥

ಮಂದಮತಿ ಬಾಲಕನ ನೋಡುತ । ನಿಂದೆಯನು ಮಾಡುವರು ಗ್ರಾಮದಿ । ತಂದೆ ವಿದ್ಯಾವಂತ ನವನಿಗೆ ಮೂರ್ಖ ಮಗನಾದಾ ॥
ಕುಂದುನೀ ವಂಶಕ್ಕೆ ಮಗನೇ । ತಂದೆ ಸಾಕ್ಷಾತ್ ಕಲ್ಲುಪರಿಯಲಿ । ಕಂದ ಜನ್ಮದ ಸಾರ್ಥಕವ ನೀನೆಂತು ಮಾಡುವಿಯೊ ॥13॥

ಹೊಟ್ಟೆ ಹೊರುವರೆ ಭಿಕ್ಷೆ ಬೇಡುವು । ದಿಷ್ಟವೇ ಕೇಳ್ನಿನ್ನ ವಂಶಕೆ । ಕೊಟ್ಟೆ ಲಾಂಛನ ಪಿತೃಕುಲವ ನೀನೆಳೆದೆ ನರಕದಲಿ ॥
ಭ್ರಷ್ಟ ಕಾಯವ ಬೆಳೆಸಿ ನೀಕೇ । ಳೆಷ್ಟು ದಿನ ಬಾಳುವೆಯ ನೀಗುವಿ । ಥಟ್ಟನೇ ನದಿಯೊಳಗೆ ಧುಮುಕಲು ಬಾರದೇ ಮಗನೇ ॥14॥

ಎಂದು ಮೂಢನ ನೋಡಿ ಬ್ರಾಹ್ಮಣ । ವೃಂದವೆಲ್ಲವು ನುಡಿದುದನು ಮಗ । ನೊಂದು ದಿನ ಕೇಳಿದನು ತಾಯಿಗೆ ಪೇಳ್ದ ನೀ ಹದನಾ ॥
ಒಂದೆ ಮಾತನು ಪೇಳ್ವೆ ತಾಯಿಯೆ । ನಿಂದೆಯನು ಮಾಡುವರು ನಾನಾ । ನಂದದಿಂದಲಿ ನದಿಯೊಳಗೆ ಪ್ರಾಣವನು ತ್ಯಜಿಸುವೆನು ॥15॥

ಮಗನ ನುಡಿಯನು ಕೇಳಿ ಜನನಿಗೆ । ದ್ವಿಗುಣವಾಯಿತು ದುಃಖ ಮಗನನು । ತೆಗೆದು ಬಿಗಿದಪ್ಪಿದಳು ಕಂಬನಿದುಂಬಿ ಪೇಳಿದಳು ॥
ಅಗಲಲಾರೆನು ಮಗನೆ ನಿನ್ನನು । ಜಗದಿ ನಿನ್ನನು ಬಿಟ್ಟು ಬದುಕುವ । ಬಗೆಯ ನರಿಯೆನು ನಾನೆ ನದಿಯಲಿ ಪ್ರಾಣ ತ್ಯಜಿಸುವೆನು ॥16॥

ಇಂತು ನಿರ್ಧಾರದಲಿ ಚಿಂತಾ । ಕ್ರಾಂತಳಾದಳು ನದಿಗೆ ಬಂದಳು । ನಿಂತು ಕೃಷ್ಣಾ ನದಿಯೊಳಗೆ ಚಿಂತಿಸಿದಳಘಹರನಾ ॥
ಭ್ರಾಂತ ಚಿತ್ತಳು ನದಿಯ ನೀರಲಿ । ನಿಂತು ದುಃಖದಿ ನಾಲ್ಕು ದಿಶೆಯಲಿ । ಪಿಂತಿರುಗಿ ನೋಡಲ್ಕೆ ಕಂಡಳು ಗುರುವರನ ಚರಣಾ ॥17॥

ಗುರುಚರಣ ನೋಡಲ್ಕೆ ಭವಸಾ । ಗರದ ತಾಪತ್ರಯವು ಸುಟ್ಟಿತು । ತಿರುಗಿ ಗುರುವಿದ್ದೆಡೆಗೆ ಓಡಿದಳೇಕಮನಳಾಗಿ ॥
ಮರಳಿ ಬಂದನು ತಾಯಿ ಹಿಂದಕೆ । ಕರು ಬರುವವೋಲ್ ಬಾಲಕನು ಮೇಣ್ । ಚರಣ ಕೆರಗಿದರಿಬ್ಬರಾ ಶ್ರೀಪಾದ ಗುರುವರನಾ ॥18॥

ಬಿನ್ನವಿಸುವೆವು ಗುರುವೆ ಭವದಲಿ । ಬನ್ನ ಬಟ್ಟೆವು ನಿನ್ನ ಚರಣವ । ಕಣ್ಣಿನಿಂ ಕಂಡೆವು ಕಣಾ ಪ್ರಾರಬ್ಧಯೋಗದಲಿ ॥
ಇನ್ನು ಯಮಗಾಜ್ಞೆಯನು ಕೊಡಲಾ । ಮುನ್ನ ಸದ್ಗತಿಯಹುದು ಪ್ರಾಣವ । ನಿನ್ನು ತ್ಯಜಿಪೆವು ನೀ ನಿರೋಪವ ಕೊಡಲು ಬೇಕಿಂದು ॥19॥

ಸುದತಿಯನು ನೋಡಿದನು ಬಾಡಿದ । ವದನವನು ತಾನೀಕ್ಷಿಸಿದನೈ । ನದಿಯೊಳಗೆ ಪ್ರಾಣವನು ತ್ಯಜಿಸುವದೇನು ಕಾರಣವು ॥
ಮುದದಿ ಪೇಳೆನಲಾ ವನಿತೆ ಗುರು । ಪದವ ಕಣ್ಣೀರಿಂದ ಸ್ನಾಪಿಸಿ । ಯೊದಗಿ ಪೇಳ್ದಳು ತನ್ನ ಚರಿತವನೆಲ್ಲ ಯತಿವರಗೆ ॥20॥

ಭಕ್ತವತ್ಸಲ ಸ್ವಾಮಿ ಕೇಳೈ । ಪುತ್ರನಿಲ್ಲ ವೆನುತ್ತ ಧರಣಿಯ । ತೀರ್ಥಗಳ ಸಂಚರಿಸಿದೆನು ಹಾಲ ನವಸ ಮಾಡಿದೆನು ॥
ವ್ಯರ್ಥವಾದೀ ಪುತ್ರನಾದನು । ಕತ್ತೆಯಂದದಿ ಮೂರ್ಖ ಕೇಳೈ । ಮರ್ತ್ಯನೋ ಪಶುವೆಂದು ತಿಳಿಯದು ನೋಡು ನೀನೀಗಾ ॥21॥

ಮೂರು ಲೋಕದಿ ಯೆನ್ನ ಪತಿಯಂ । ತಾರ ಕಾಣೆನು ವೇದಶಾಸ್ತ್ರದಿ । ಪಾರಗನು ಸದ್ಗುಣನು ಹೊಟ್ಟೆಯಲಾತಗೀಪರಿಯಾ ॥
ಧಾರುಣಿಯೊಳವತರಿಸಿದನು ಮಗ । ಬೇರೆ ಮಾತಿನ್ನೇಕೆ ಪೇಳ್ಬವ । ವಾರಿಧಿಯೊಳೀಪರಿಯ ಪುತ್ರನು ಜನಿಸಬಾರದಲಾ ॥22॥

ತಿರುತಿರುಗಿ ಜನ್ಮಾಂತರದೊಳೀ । ತರುಣನಂತಾ ಮೂರ್ಖ ಪುತ್ರನು । ಬರದ ರೀತಿಯ ಯತ್ನ ಹೇಳೈ ನೀ ದಯಾನಿಧಿಯೇ ॥
ಶರಣರಘಸಂಹರಣನೆಂಬೀ । ಬಿರುದನಾ ಕೇಳಿಹೆನು ನಿನ್ನಯ । ಚರಣ ಪಿಡಿದಿಹೆ ಗತಿಯ ತೋರಿಸು ಬಿಡೆನು ನಾನೀಗ ॥23॥

ಮೆಲ್ಲನೊಂದೇ ಮಾತ ಪೇಳುವೆ । ಸಲ್ಲಿಸುವ ದಾತಾರ ನೀ ಶ್ರೀ । ವಲ್ಲಭನೆ ನಿನ್ನಂತೆ ತ್ರಿಜಗದ್ವಂದ್ಯ ಸುತನೆನಗೆ ॥
ಬಲ್ಲವನು ನಿನ್ನಂತೆ ಶಾಸ್ತ್ರಗ । ಳೆಲ್ಲವನು ಈ ಪರಿಯ ಸುತನನು । ಅಲ್ಲಗಳೆಯಲು ಬೇಡ ಮುಂದಿನ ಜನ್ಮದಲಿ ಕೊಡಿಸು ॥24॥

ಕೊಡಲು ಬೇಕೀಪರಿಯ ಸುತನನು । ಹಡೆದ ಕೂಡಲೆ ಸಪ್ತಪಿತರರು । ಪಡೆಯಬೇಕೈ ಸ್ವರ್ಗ ಧನ್ಯತೆಯನ್ನು ಕೊಂಡಾಡಿ ॥
ಹುಡುಗತನದಲಿ ಜಗಕೆ ವಂದ್ಯನು । ಬಿಡದೆ ಬ್ರಹ್ಮಜ್ಞಾನಿ ಯಾಗಿಯೆ । ಮೃಡನ ಯೋಗ್ಯತೆಯಿಂದ ಪೂಜ್ಯನ ಶ್ರೇಷ್ಠ ಸುತವರನಾ ॥25॥

ತರುಣಿ ಪೇಳ್ದೀ ಮಾತ ಕೇಳುತ । ಕರುಣದಲಿ ಗುರುವರನು ಪೇಳ್ದನು । ಹರನ ಪೂಜಿಸು ಹರಿಯ ಸರಿಯಹ ಪುತ್ರ ದೊರಕುವನು ॥
ಹರನನೇ ಪೂಜಿಸಿದರದರಿಂ । ಹರಿಯು ಗೋವಳಕುಲದಿ ಬಿಡದವ । ತರಿಸಿದನು ನೀನರಿಯಲಾ ಶಾಸ್ತ್ರ ಪ್ರಸಿದ್ಧವಿದು ॥26॥

ಮಂದವಾರ ಪ್ರದೋಷ ಕಾಲದೋ । ಳಿಂದು ಮೌಳಿಯ ಪೂಜೆಯನು ನಲ । ವಿಂದ ಮಾಡ್ಯೆ ನಿನಗೆ ಹರಸಮ ಪುತ್ರ ಜನಿಸುವನು ॥
ಮುಂದೆ ನರಜನುಮದಲಿ ನಿನಗಿದು । ಚಂದದಿಂ ದೊರೆಯುವದು ಕೇಳ್ಯೆ । ಸ್ಕಂದ ಪುರಾಣದ ಕಥೆಯ ನಾನಿಂದು ಪೇಳುವೆನು ॥27॥

ಎಂದು ಪೇಳಿದ ನುಡಿಯ ಕೇಳ್ದಾ । ನಂದದಿಂದಾ ವಿಪ್ರರಮಣಿಯು । ಮುಂದೆ ಗುರುಚರಣದಲಿ ಲೋಟಾಂಗಣವ ಮಾಡಿದಳು ॥
ಇಂದುಧರ ಪೂಜೆಯನು ಮಾಡಿದ । ಸುಂದರಾಖ್ಯಾನವನು ಪೇಳೆನ । ಗೆಂದು ನುಡಿಯಲು ಗುರುವು ಕಥೆಯನು ಪೇಳತೊಡಗಿದನು ॥28॥

ಚಂದ್ರಸೇನಾಖ್ಯನು ಮಹಾರಾ । ಜೇಂದ್ರ ನಿದ್ದನು ಧರ್ಮತತ್ಪರ । ನಿಂದ್ರ ನಂದದೊಳುಜ್ಜಯನೀಯಲಿ ರಾಜ್ಯ ಮಾಡಿದನು ॥
ಇಂದುಮೌಳಿಯ ಭಕ್ತನಾ ರಾ । ಜೇಂದ್ರನಿಗೆ ಮಣಿಭದ್ರ ನೆಂಬುವ । ಸುಂದರಾಂಗನು ಪ್ರಾಣಸಖ ನಿದ್ದನು ಕಣಾ ಪುರದಿ ॥29॥

ಪರಿಪರಿಯೊಳಾ ಹರನ ನೊಲಿಸುತ । ದೊರಕಿಸಿದನವ ಮಣಿಯ ನೊಂದನು । ತರಣಿ ಕೋಟಿ ಸಮ ಪ್ರಕಾಶವು ಮಾಣಿಕವು ನೋಡಾ ॥
ಧರಿಸಲದ ಕಂಠದಲಿ ಸಂತಸ । ವರರೆ ಬಣ್ಣಿಸಲಾರೆ ಸ್ಪರ್ಶದಿ । ಪರುಷದಂದದಿ ಲೋಹವನು ಬಂಗಾರ ಮಾಡುವದು ॥30॥

ಚಿಂತಿತವ ಕೊಡುತಿಹುದು ಮಾಣಿಕ । ವೆಂದ ಕೀರ್ತಿಯು ಜಗದಿ ಪಸರಿಸಿ । ತಮತಮಗೆ ಬೇಡುವರು ರಾಜರು ಲೋಭಮೋಹದಲಿ ॥
ಸಂತಸದಿ ಬೇಡುವರು ಕೆಲವರು । ಸಂತಸದಿ ಕೊಡಲಾರದಿದ್ದರೆ । ನಿಂತು ಯುದ್ಧದೆ ಗೆಲುವೆವೆಂಬರು ವಲಿಸುವರು ಕೆಲರು ॥31॥

ಅರಸರೆಲ್ಲರು ಕೂಡಿ ದಾಳಿಯ । ನಿರದೆ ಬಿಟ್ಟರು ರಾಜ್ಯದಲಿ ಪುರ । ಹೊರಗಿನಲಿ ಮುತ್ತಿಗೆಯ ನಿತ್ತರು ಮಣಿಯ ಲೋಭದಲಿ ॥
ಅರಿಯನಿದನೀ ರಾಜ ಕಾಲೇ । ಶ್ವರನ ಪೂಜೆಯ ಮಾಡುತಿದ್ದನು । ನೆರೆದರಾಪೂಜೆಯನು ನೋಡಲು ಗೋಪ ಬಾಲಕರು ॥32॥

ತರಳರೀಪರಿ ನೃಪತಿ ಮಾಡುವ । ಹರನ ಪೂಜೆಯ ನೋಡುತಾಪರಿ । ವಿರಚಿಸುವೆವಾವೆಂದು ಕಲ್ಪಿಸಿದರು ಶಿವಾಲಯವಾ ॥
ಪರಿಪರಿಯ ಪುಷ್ಪಗಳನು ಪತ್ರಿಯ । ನಿರದೆ ಸಂಗ್ರಹಿಸುತಲಿ ಪರಮೇ । ಶ್ವರನ ಕಲ್ಪಿಸಿ ಪೂಜೆ ಮಾಡಿದರೊಂದು ಶಿಲೆಯನ್ನು ॥33॥

ಬಾಲರೆಲ್ಲರು ಕೂಡುತೀಪರಿ । ಲೀಲೆಯಲಿ ಪೂಜಿಸಲು ಗೊಲ್ಲರ । ಬಾಲೆಯರು ಕರೆದೊಯ್ದರಾ ಬಾಲರನು ಭೋಜನಕೆ ॥
ಬಾಲನೋರ್ವನು ಭೋಜನಕೆ ತ । ನ್ನಾಲಯ ಪೋಗನು ಕಣಾ ಮುಂ । ದೇಳು ಯೇಳೆಂದವನ ತಾಯಿಯು ಬಡೆದು ಹೊಡೆದಳಲಾ ॥34॥

ಮಾತೆ ಕೋಪಿಸಿ ಹೊಡೆಯಲೀಪರಿ । ಮಾತ ಕೇಳನು ಬಾಲನೆಂದಳು । ಆ ತತೂಕ್ಷಣ ಚಲ್ಲಿದಳು ಕಾಲಲಿ ಶಿವಾಲಯವಾ ॥
ಭೂತಳದಿ ಪಾಷಾಣವೆಲ್ಲವು । ಪಾತವಾಯಿತು ಗೊಲ್ಲಬಾಲನು । ಭೀತಿಯಿಲ್ಲದೆ ಅಲ್ಲೆಯುಳಿದನು ಕತ್ತಲೆಯ ರಾತ್ರಿ ॥35॥

ಅರರೆ ತಾಯಿಯು ಶಿವನ ಪೂಜೆಗೆ । ಬರಿದೆ ವಿಘ್ನವ ತಂದಳೆಂದಾ । ತರಳ ಮನದಲಿ ನೊಂದು ಮಾಡಿದನ್ನೈ ಪ್ರಲಾಪವನು ॥
ಮರಣವೇ ಲೇಸೆಂದು ಮನನಿ । ರ್ಧರಿಸಿ ಪ್ರಾಣವ ತ್ಯಜಿಪ ಯತ್ನವ । ನಿರದೆ ಮಾಡಲು ಬಂದನಾ ಪ್ರತ್ಯಕ್ಷ ಗಿರಿಜೇಶಾ ॥36॥

ಹರನು ಮೆಚ್ಚಿದ ಗೋಪಬಾಲಗೆ । ವರವ ಬೇಡೆಂದೆನುತ ಪ್ರೇಮದಿ । ಕರಪಿಡಿದು ಬಿಗಿದಪ್ಪಿ ಮುದ್ದಾಡಿದನು ಬಾಲನನು ॥
ಹರನೆ ಸರ್ವೇಶ್ವರನೆ ಗಿರಿಜಾ । ವರನೆ ಕ್ಷಮಿಸೈ ಯೆನ್ನ ತಾಯಿಯ । ನರಿಯದಲಿ ಮಾಡಿದಳು ವಿಘ್ನವನೆಂದನಾ ಬಾಲಾ ॥37॥

ಹರಿಯು ಧರೆ ಗಿಳಿದಿಹನು ಗೊಲ್ಲರ । ತರುಣಿಯರ ಪುಣ್ಯಪ್ರಭಾವವು । ಹರನ ಪೂಜೆಯು ಫಲಿಸಿತೈ ತಲ್ಲಿಂಗದಾ ಸ್ಥಳದಿ ॥
ತರಣಿ ಕೋಟಿ ಪ್ರಕಾಶ ಸಮವಾ । ಗುರುತರದಲಿ ವಿರಾಜಿಸುತ್ತಿದೆ । ಭರದೊಳಾಯ್ತು ಸ್ಥಾನದಲಿ ಸುಂದರ ಶಿವಾಲಯವು ॥38॥

ದಾಳಿಗೆಂದೇ ಬಂದ ರಾಜರ । ಪಾಳಯವು ಮೇಣಂಜಿ ಪೋದುದು । ಭಾಳಲೋಚನ ನೊಲುಮೆ ಕಾಂಬುದು ಯೇನಿದದ್ಭುತವು ॥
ಕಾಳರಾತ್ರಿಯಲಿವನ ಪುರದಲಿ । ಮೇಳವಿಸಿದನು ಸೂರ್ಯನಿವನೊಳು । ಕಾಳಗವ ಮಾಡುವದು ಸಲ್ಲವೆನುತ್ತಾ ಮನವರಿದು ॥39॥

ಅರಸನಿದ್ದೆಡೆ ಗೈದು ಚರಣ । ಕ್ಕೆರಗಿ ಮಗುಳಿಂತೆಂದರೀ ಪುರ । ವರವು ಝುಗಝುಗಿಸುತ್ತಲಿಗೆ ಕತ್ತಲೆಯ ರಾತ್ರಿಯಲಿ ॥ ಮಗುತ
ಹರಹರಾ ನಿನ್ನೊಡನೆ ಕಾಳಗ । ಸರಿಯೆ ನಮ್ಮನು ಕ್ಷಮಿಸು ಸಲಹೈ । ಕರುಣದಿಂದಲಿ ಕಾಯ್ವನೆಂದರು ಚಂದ್ರಾಸೇನನೊಳು ॥40॥

ಅರಸ ವಿಸ್ಮಿತನಾಗಿ ನೋಡಿದ । ನರರೆ ಯಾರೀ ಪುಣ್ಯಪುರುಷನು । ಹರನ ಮೆಚ್ಚಿಸಿದವನೆನುತ ನಡೆತಂದರಾ ಸ್ಥಳಕೆ ॥
ಪರಮ ಸಂತಸ ದಿಂದ ಗೊಲ್ಲರ । ತರುಣನನು ನೋಡಿದನು ನಡೆದಿಹ । ಪರಿಯನೆಲ್ಲವ ಗೊಲ್ಲಹುಡುಗನು ಪೇಳ್ದ ಚಂದದಲಿ ॥41॥

ಮರಳಿ ತೆರಳಿದರೆಲ್ಲ ರಾಜರು । ಹರನ ಪೂಜಿಪ ಪರಮ ಭಕ್ತರ । ಕರುಣದಲಿ ಸಲಹುವನು ಶೂಲಿಯು ಭೀತಿಯೆಲ್ಲಿಯದು ॥
ತರುಣ ನಡೆದನು ಮನೆಗೆ ತಾಯಿಯ । ಚರಕಭಿವಂದಿಸುತ ಪೇಳ್ದನು । ಹರನು ಮೆಚ್ಚಿದ ಪರಿಯ ಕೊಟ್ಟಿಹ ವರಗಳೆಲ್ಲವನು ॥42॥

ತಾಯೆ ಕೇಳೌ ನಿನ್ನ ಗರ್ಭದಿ । ತೋಯಜಾಂಬಕ ಹರಿಯು ಬರುವನು । ಕಾಯಬೇಕೆಂದೆನುತ ನಿನ್ನನು ಕ್ಷಮಿಸಬೇಕೆನುತಾ ॥
ಆಯ ದಿಂಡಲಿ ವರವ ಬೇಡಿದೆ । ತೋಯಜಾಕ್ಷಿಯೆ ವರವ ಪಡೆದೆನು । ತಾಯೆ ನೋಡು ಶಿವಾಲಯವ ಹರಪಾಲಿಸಿದುದೆಂದಾ ॥43॥

ಎಂದು ಶ್ರೀ ಗುರು ದ್ವಿಜ ತರುಣಿಗಾ । ನಂದದಿಂದಲಿ ಪೇಳ್ದ ಗೋಪಿ । ನಂದನನ ಪುಣ್ಯ ಪ್ರದೋಷದ ಪೂಜೆ ಮಹಿಮೆಯನು ॥
ಇಂದುಮೌಳಿಯ ಭಕ್ತಿಯಲಿ ನೀ । ಮಂದವಾರ ಪ್ರದೋಷಕಾಲದಿ । ಮುಂದೆ ಪೂಜಿಸೆ ಪುತ್ರನೆನ್ನ ಸಮಾನ ನಾಗುವನು ॥44॥

ಎನುತ ಪೇಳ್ದಾ ಗುರುವರನು ದ್ವಿಜ । ತನುಜನನು ಮುಂದಕ್ಕೆ ಕರೆದನು । ಮನದೊಳಾಶೀರ್ವಚನ ದಿಂದಲಿ ಮಸ್ತಕದಿ ಕರವಾ ॥
ವಿನುತ ಪ್ರೇಮದೋಳಿಡಲು ತತ್ ಕ್ಷಣ । ಮಿನುಗಿತ್ತೈ ಜ್ಞಾನಪ್ರಕಾಶವು । ಘನ ತರದಲಿ ತ್ರಿವೇದಿಯಾದನು ಇಂದ್ರಜಾಲವಲಾ ॥45॥

ಗುರುವರನ ಶ್ರೀವರದ ಹಸ್ತದ । ಪರಮ ಮಹಿಮೆಯ ಬಣ್ಣಿಸುವರೆನ । ಗರಿದು ದ್ವಿಜಸುತ ತರ್ಕ ಶಸ್ತ್ರಾದಿಗಳ ಪೇಳ್ದನಲಾ ॥
ನರಶರೀರದೊಳೀ ಜಗಕೆ ಸಂ । ತರಣನಾಗಿಯೆ ಬಂದ ಹರ ನೆಂ । ದರುಹಿ ತಮತಮ್ಮೊಳಗೆ ಚೋದ್ಯವ ಬಟ್ಟರಾನರರು ॥46॥

ನೋಡಿದಳು ದ್ವಿಜವನಿತೆ ಚೋದ್ಯವು । ರೂಢಿಯೊಳಗಿದು ಪುಣ್ಯದಿಂದಲಿ । ಜೋಡಿಸಿತು ದರ್ಶನವೆನುತ್ತಲಿ ಹಿಗ್ಗಿದಳು ಮನದೊಳಗೆ ॥
ಪಾಡಿದಳು ಗುರುವರನು ಹರನೆಂ । ದಾಡಿದಳು ಪೇಳ್ದಂತೆ ಪೂಜೆಯ । ಮಾಡಿದಳು ಭಕ್ತಿಯಲಿ ಗುರುಸಮ ಪುತ್ರಕಾಂಕ್ಷೆಯಲಿ ॥47॥

ಜಡಮತಿಯ ದ್ವಿಜಸುತನೆನುತ್ತಲಿ । ನುಡಿವವರಿಗಚ್ಚರಿಯದಾಯಿತು । ಜಡಜಸಂಭವ ನಂತೆ ವೇದವ ಪಠಿಸಿದನು ಮುದದಿ ॥
ಮಡದಿಯಾದಳು ಮಕ್ಕಳಾದವು । ಪೊಡವಿಯಲಿ ಲಕ್ಷ್ಮೀ ಕಟಾಕ್ಷವು । ನಡೆದು ಬಂತೀ ದ್ವಿಜಗೆ ಶ್ರೀಪಾದ ಪ್ರಸಾದದಲಿ ॥48॥

ಗುರುಚರಣ ಸದ್ಭಕ್ತಿ ಯುತರಿಗೆ । ಧರೆಯೊಳಿಹುದೇ ದುಃಖ ಭವಸಂ । ತರಣನಲ್ಲಾ ನಂಬಿದವರಿಂಗಿಂಬನೀವನಲಾ ॥
ಕರಣ ಮೂರಿರಬೇಕು ಶುದ್ಧವು । ಅರಿಗಳಾರರನು ಜಯಿಸಲಾ ಗುರು । ವರನು ಹೃದಯದಿ ಶಯನ ಮಾಳ್ಪನು ವಿಷ್ಣು ವಚನವಿದು ॥49॥

॥ ಅಧ್ಯಾಯ 8 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 9

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಪರಮ ಭಕ್ತಿಗೆ ಮೆಚ್ಚಿ ಸದ್ಗುರು । ವರನು ರಜಕಗೆ ವರವನಿತ್ತನು । ಯೆರಡನೆಯ ಜನ್ಮದಲಿ ಪಡೆಯುವೆ ರಾಜ್ಯಪದವೇನುತ॥

ಗುರುಚರಣ ಸದ್ಭಕ್ತಿ ಯೆಂಬುದು । ಧರಣಿಯೊಳು ಸಂಪತ್ತಿಯಾಗರ । ನಿರತ ಸುತಸಂತಾನ ಕ್ಷೇಮೈಶ್ವರ್ಯ ಸಾಧನವು ॥
ಪರಮ ಮುಕುತಿಯ ಬೀಡು ಸಂಸೃತಿ । ಶರಧಿ ಗುತ್ತಮ ವಿಹುದು ತಾರಣ । ಗುರುಚರಣ ಭಕ್ತಿಯ ಕೃಪಾಂಜನ ಮಾಡು ಸಂಗ್ರಹಣ ॥1॥

ನಾಮಧಾರಕ ಕೇಳು ಶಿಷ್ಯಶಿ । ರೋಮಣಿಯೆ ಶ್ರೀಪಾದವಲ್ಲಭ । ಗ್ರಾಮದಲಿ ಸಂತಸದಲಿದ್ದರು ಕೆಲವು ದಿನ ಬಿಡದೆ ॥
ನೇಮದಲಿ ಸಂಗಮಕೆ ಪೋಗಾ । ರಾಮದಲಿ ಸಂಧ್ಯಾದಿಜಪಗಳ । ನಾಮಹಾತ್ಮರು ಮಾಡುತಿದ್ದರು ಕುರುವ ಪುರದೊಳಗೆ ॥2॥

ಚರಣ ದರ್ಶನ ದಿಂದ ತೀರ್ಥದ । ದುರಿತ ಹರಿಸುವ ಪಾವನಾತ್ಮಗೆ । ಧರೆಯೊಳೀ ತೆರನಿರುವ ನೇಮವದೇಕೆ ತೀರ್ಥದಲಿ ॥
ದರದಿವಸ ಸಂಗಮದ ಸ್ನಾನದ । ಪರಿಯ ನಾಟಕ ವೇಕೆ ಭಕ್ತರ । ಕರುಣದಿಂ ಪಾಲಿಸುವ ಕಾರಣವೇ ಖಟಾಟೋಪ ॥3॥

ಗುರುವರನು ದಿನದಿನದೊಳೀತೆರ । ವಿರದೆ ನದಿಯಲಿ ಸ್ನಾನ ಮಾಡಲು । ಹರಿವ ಕೃಷ್ಣಾನದಿಯ ಜಲದೊಳಗಿಳೆಯೆ ಭಕ್ತಿಯಲಿ ॥
ಪರಿಟನೊಬ್ಬನು ನದಿಯ ತೀರದಿ । ಬರುತ ಶ್ರೀಗುರುವಿಂಗೆ ದೂರದೊ । ಳೆರಗಿ ಸಾಷ್ಟಾಂಗ ಪ್ರಣಾಮವ ಮಾಳ್ಪನೊಲವಿನಲಿ ॥4॥

ಹಲವು ದಿನವೀತೆರದಿ ಕಾಲವು । ಕಳೆಯಲೊಂದಿನ ರಜಕ ಬಂದನು । ಕುಳಿತನೈ ದೂರದಲಿ ದಂಡ ಪ್ರಣತಿ ಮಾಡಿದನು ॥
ತಿಳಿದನಂತಃಕರಣ ಭಕ್ತನ । ಇಳೆಯನಾಳುವ ರಾಜನಾಗುವ । ಕಳೆಯು ನಿನಗಿದೆ ನಿನ್ನ ಭಕ್ತಿಗೆ ಮೆಚ್ಚಿ ವರವಿತ್ತೆ ॥5॥

ಇಂತು ಗುರುನುಡಿ ಕೇಳಿ ರಜಕನು । ಸಂತಸವ ತಾಳಿದನು ಸಂಸ್ಕೃತಿ । ಚಿಂತೆಯನು ಬಿಟ್ಟವನು ಗುರುವಿನ ಬೆನ್ನ ಹತ್ತಿದನು ॥
ನಿಂತು ಮಠದಲಿ ಶ್ರೀಗುರುವಿಗವ । ನಂತ ದಂಡಾಕಾರವೆರಗುವ । ನೆಂತು ಬಣ್ಣಿಸಲಿವನ ಭಕ್ತಿಯನನ್ಯ ಭಾವವನು ॥6॥

ಗುರುವು ಪೇಳಿದ ಶಕುನವಚನವ । ನರಿತು ಗಂಟನು ಕಟ್ಟಿಯಿಟ್ಟನು । ಗುರುವೆ ನಿಮ್ಮಾಶೀರ್ವಚನ ಫಲಿಸುವುದು ಸಟೆಯುಂಟೆ ॥
ಗುರುವನ ವಾಕ್ಯ ಪ್ರಮಾಣವು । ಅರಿಯೆ ನಾ ಬೇರೊಂದನೆಂದಾ । ಚರಣ ಸೇವಕ ರಜಕ ಸೇವಿಸುತಿರ್ದ ಭಕ್ತಿಯಲಿ ॥7॥

ಗುರುಮಠಕೆ ದಿನದಿನಕೆ ಬಂದಾ । ದರದಿ ದೂರದಿ ಕೂಡುವನು ನಿಜ । ಕರದಿ ನೀರನು ಪ್ರೋಕ್ಷಿಸುತ ಲಂಗಣವ ಝಾಡಿಸುವಾ ॥
ಪರಿಯಪರಿಯ ಸೇವೆಯನು ಮಾಡುತ । ಗುರುಚರಣವನು ವಲಿಸಿದನು ಗುರು । ವರನು ಭಕ್ತರ ಕಾಮಧೇನುವು ಸುರತರುವು ನಿಜವು ॥8॥

ಇಂತು ಕೆಲಕಾಲದಲಿ ರಜಕನು । ಸಂತಸದಿ ಗುರುಸೇವೆ ಮಾಡಲು । ಬಂತು ಕೇಳೈ ಋತುವಸಂತವು ಕಾಮನೇಳಿಗೆಯು ॥
ಕಾಂತೆಯರ ಮೇಳದಲಿ ಧರಣೀ । ಕಾಂತ ಯವನನು ಗಂಗೆಯಲಿ ಸಿರಿ । ವಂತದೊಯ್ಯಾರದಲಿ ಬಂದನು ಕ್ರೀಡಿಸುತ ಜಲದಿ ॥9॥

ಎಂತು ಬಣ್ಣಿಪೆ ರಾಜಠೀವಿಯ । ನಂತದಳ ಕುದುರೆಗಳ ಸ್ವಾರರ । ದಂತಿಪಂಕ್ತಿಯ ವಾದ್ಯಭೇರಿಯ ಡೌಲನೇನೆಂಬೆ ॥
ಇಂತು ರಾಜ್ಯದ ವೈಭವವನಾ । ಸಂತಸದೊಳಾ ರಜಕ ನೋಡಿದ । ನೆಂತಿವನ ಗುರುಸೇವೆ ಫಲಿಸಿತೆನುತ್ತ ಚಿಂತಿಸಿದಾ ॥10॥

ಏನು ಸುಕೃತವೊ ರಾಜನೀತನು । ಮಾನನೀಯನು ಧನ್ಯನೀತನು । ಮಾನವರ ಜನ್ಮದಲಿ ಬಂದೀ ರಾಜ್ಯ ಭೋಗಿಪನು ॥
ಮಾನಿನೀಯರ ಸುಖದ ಸಂಭ್ರಮ । ಕ್ಷೋಣಿಯಲಿ ಭೋಗಿಸದೆ ಯಿದ್ದರೆ । ಹೀನಪಶುವಿನ ತೆರದೊಳೀ ನರಜನ್ಮವಾಯಿತಲಾ ॥11॥

ಮನದಿ ಯೋಚಿಸುತಿದ್ದನಾ ರಜ । ಕನು ಗುರುವ ವಂದಿಸುವ ಸಮಯದಿ । ಮನದೊಳರಿತನು ಗುರುವರನು ಸರ್ವಜ್ಞನೇ ನಿಜವು ॥
ಎನಗೆ ಪೇಳ್ವೈ ರಜಕ ನಿನ್ನಯ । ಮನದ ಬಯಕೆಯ ವಂಚಿಸದೆ ನೀ । ನೆನಲು ರಜಕನು ಭಾವಭಕ್ತಿಯೊಳೆಂದನಾ ಗುರುಗೆ ॥12॥

ನೋಡಿದರೆ ಶ್ರೀಗುರುವರರೆ ನಾ । ನಾಡಲೇನಿದ ಮನದ ಬಯಕೆಯ । ರೂಢಿ ಪತಿಯೀ ತೆರದಿ ಭೋಗಿಪ ರಾಜ್ಯ ವೈಭವವಾ ॥
ನೋಡಿ ಕಣ್ಣಿಲಿ ಭ್ರಾಂತನಾದೆನು । ನೀಡುತಿದ್ದರೆ ಯೆನಗೆ ನಿನ್ನ ಸ । ಗಾಢಲೀಲೆಯ ಶಕುನವನು ನಾ ನೆನೆದೆ ಮನದೊಳಗೆ ॥13॥

ಹುಟ್ಟಿದಾರಭ್ಯದಲಿ ನೀ ಸಂ । ಕಷ್ಟವನು ಭೋಗಿಸಿದಿ ಸೌಖ್ಯದ । ಬಟ್ಟೆಯಿದು ನಾನೀವೆ ರಾಜ್ಯದ ವೈಭವವ ನಿನಗೆ ॥
ಇಷ್ಟವಾದರೆ ಮ್ಲೇಂಛ ಕುಲದಲಿ । ಹುಟ್ಟಿ ರಾಜ್ಯದ ಭೋಗದಲಿ ಸಂ । ತುಷ್ಟನಾಗಿಂದ್ರಿಯಗಳೆಲ್ಲವ ಸುಖಿಸು ನೀ ಬಿಡದೆ ॥14॥

ಶಾಂತ ಮಾಡದೆ ಬಿಟ್ಟರಾ ಜ । ನ್ಮಾಂತರದಿ ಕೇಳಿಂದ್ರಿಯಂಗಳು । ಖಂತಿಯಲಿ ಮೋಕ್ಷಕ್ಕೆ ಬಾಧೆಯ ಮಾಳ್ಪವೈ ನಿನಗೆ ॥
ಇಂತು ನುಡಿಯನು ಕೇಳಿ ರಜಕನು । ಸಂತಸದಿ ಬಿನ್ನೈಸಿದನು ಯೆನ । ಗಿಂತುಪೇಕ್ಷಿಸ ಬೇಡ ದರ್ಶನ ಮುಂದೆ ಕೊಡಬೇಕು ॥15॥

ಗುರುವರರು ಪುನರುತ್ತರವ ನಿ । ತ್ತರು ಕಣಾ ನೀ ರಾಜ್ಯವಾಳುವೆ । ಪುರದಿ ಬೈದೂರೆಂಬ ರಾಜ್ಯದೊಳಂತ್ಯ ಕಾಲದಲಿ ॥
ತರುವೆ ನಿನ್ನನು ಭೇಟಿಗೋಸುಗ । ಮರೆಯಲಾರೆನು ನಿನ್ನ ದೃಷ್ಟಿಗೆ । ಸ್ಮರಣ ಬರುವುದು ಭೇಟಿ ಯಾದಾಕ್ಷಣಕೆ ನೀ ನಂಬು ॥16॥

ಮುಂದಿನವತಾರದಲಿ ನಾ ಕೇ । ಳೊಂದು ಬಾರಿಗೆ ನಿನಗೆ ಭೇಟಿಯ । ಚಂದವನು ತೋರಿಸುವೆ ತಾಪಸ ವೇಷವನು ತಾಳಿ ॥
ಇಂದು ನಿನಗಾಂ ಪೇಳುವೆನು ನಲ । ವಿಂದ ಮುಂದಿನ ಯೆನ್ನ ಪೆಸರನು । ಬಂದಪೆನು ನರಹರಿ ಸರಸ್ವತಿ ಯೆಂಬ ನಾಮದಲಿ ॥17॥

ಎರಗಿದನು ಗುರುಚರಣ ಕಮಲಕೆ । ತಿರುಗಿ ರಜಕನು ಕೇಳಲವನಿಗೆ । ಬರುವ ಜನ್ಮದಿ ರಾಜ್ಯ ಭೋಗವ ಭೋಗಿಸೆಂದೆನುತಾ ॥
ಶರಣನನು ಕಳುಹಿಸುತ ಬಂದರು । ಕುರವಪುರಕಾ ಗುರುವರರು ಕೇ । ಳರರೆ ಗುರುವಾಕ್ಯದ ಮಹಾತ್ಮೆಯ ನಾಮಧಾರಕನೆ ॥18॥

ಮರಣವಾಯಿತು ರಜಕನಿಗೆ ಬೈ । ದುರನಗರದಲಿ ಮ್ಲೇಂಛಕುಲದಲಿ । ಮರಳಿ ಜನ್ಮಕೆ ಬಂದನೈ ರಾಜೇಂದ್ರ ವಂಶದಲಿ ॥
ಚರಿತವನು ನಾ ಮುಂದೆ ಪೇಳ್ವೆನು । ಧರಣಿಪನ ಸದ್ಭಕ್ತ ಚಂದ್ರನ । ಕುರವಪುರದದ್ಭುತ ಚರಿತವ ಕೇಳು ನೀನೀಗಾ ॥19॥

ಪೇಳಲಾರೆನು ಸರ್ವ ಮಹಿಮೆಯ । ಪೇಳುವರೆ ಶೇಷನಿಗಶಕ್ಯವು । ಪೇಳುವೆನು ನಾನಿಂತು ಗುರುಮಹಿಮೆಯನು ತಿಳಿದಷ್ಟು ॥
ಪಾಲಿಸುತ ಭಕ್ತರನು ಕಾಮಿತ । ದೇಳಿಗೆಯ ನೀಯುತ್ತ ಭಕ್ತ ಕೃ । ಪಾಳು ಸಂಗಮಕಿರಲು ಕೀರ್ತಿಯು ಹಬ್ಬಿತೈ ಜಗದಿ ॥20॥

ಗುರುವರರು ಆಶ್ವೀಜ ವದ್ಯದ । ಪರಮ ದ್ವಾದಶಿ ತಿಥಿಯಲಾ ಹಿಮ । ಕರನು ಮೃಗರಾಜನಲಿ ಬಂದಿರಲಾ ಮುಹೂರ್ತದಲಿ ॥
ಕುರವಪುರದೊಳದೃಶ್ಯರಾದರು । ಗುರುವರರು ನಿರ್ಗುಣ ಸ್ವರೂಪವ । ಧರಿಸುತವತಾರವನು ಪೂರ್ಣತೆ ಗೈದರಾ ಸ್ಥಳದಿ ॥21॥

ಕುರವಪುರದಲಿ ಸಗುಣ ರೂಪವ । ತೊರೆದು ನಿರ್ಗುಣ ರೂಪದಿಂದಲಿ । ಧರೆಯೊಳಗೆ ಶ್ರೀಪಾದಾಶ್ರೀವಲ್ಲಭರು ಭಕ್ತರನು ॥
ಕರುಣದಿಂದೀವರೆಗೆ ಸಲಹುತ । ಲಿರುವರೈ ದೃಢಭಾವಭಕುತಿಯ । ಶರಣರಾಗಿರಬೇಕು ಪೊರೆವರು ವಿಷ್ಣು ವಚನವಿದು ॥22॥

॥ ಅಧ್ಯಾಯ 9 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 10

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ತುಡುಗರನು ಸದೆದಾತ್ರಿಶೂಲದಿ । ಮಡಿದ ಭಕ್ತಗೆ ಪ್ರಾಣವಿತ್ತನು । ದೃಢತರದ ಭಕ್ತಿಯೆ ಕಣಾ ಸಂಜೀವನೌಷಧವು॥

ಧರೆಯೊಳಾದರು ಹಿಂದೆ ಯುಗದ್ವಾ । ಪರದೊಳೈ ಶ್ರೀರಾಮಕೃಷ್ಣರು । ಮೆರೆದರಾ ಸಂಸಾರದಲಿ ವರಕ್ಷಾತ್ರತೇಜದಲಿ ॥
ಗುರುಗಳವರಿಗೆ ಬ್ರಹ್ಮಕುಲದಲಿ । ಚರಣಕೆರಗಿದರವರು ತಾವೇ । ಗುರುಗಳಾಗದೆ ಶಿಷ್ಯತನದಲಿ ಜಗವ ಸಲಹಿದರು ॥1॥

ಕಲಿಯುಗದೊಳೀ ಪರಿಯು ಸಲ್ಲದು । ಮುಳುಗಿದುದು ಜಗವೆಲ್ಲ ದುರಿತದ । ಜಲಧಿಯಲ್ಲಿದನರಿತು ತ್ರೈಮೂರ್ತಿಗಳು ಕರುಣದಲಿ ॥
ಇಳೆಯೊಳವತರಿಸಿದರು ಬ್ರಾಹ್ಮಣ । ಕುಲದಿ ಸನ್ಯಾಸಾಶ್ರಮದಿ ಗುರು । ಕುಲವಂಗೀಗೀಕರಿಸಿ ಸಲಹುವರೆಲ್ಲ ಭಕ್ತರನು ॥2॥

ಕಲಿಯುಗದಿ ಶ್ರೀಪಾದವಲ್ಲಭ । ರಿಳೆಯ ಸಂಸಾರಾಂಧಕಾರಕೆ । ಬೆಳಗುತಿಹ ಸೂರ್ಯ ಪ್ರಕಾಶವು ನಂಬಿ ನಡೆವವರಾ ॥
ಕುಲಗುರುವು ಕುಲದೈವತವು ಬೆಂ । ಬಲವು ಶರಣರ ಕಾಮಧೇನುವು । ಕಲಿಯುಗದೊಳೆರಡನೆಯ ದೈವತ ಕಾಣೆನುರ್ವಿಯಲಿ ॥3॥

ನಾಮಧಾರಕ ಕೇಳು ಶಿಷ್ಯಶಿ । ರೋಮಣಿಯೆ ಮುಂದಿನ ಕಥಾನಕ । ರಾಮಣೀಯಕ ವಿಹುದು ನಿರ್ಗುಣ ರೂಪ ಗುರುವಾಗೆ ॥
ಸೀಮೆಯಿಲ್ಲದೆ ಜನರು ಬಂದಾ । ಕಾಮಿತವ ಬೇಡುವರು ಯೋಗ್ಯತೆ । ನಾಮಶೇಷದ ನರರು ಪಾಡಲ್ಲೆಂದು ಗುರು ನೆನೆದಾ ॥4॥

ಯುಗಯುಗದೊಳವತರಿಸಿ ಭಕ್ತರ । ಬಗೆಬಗೆಯ ರೂಪದಲಿ ಕಾಯ್ದಿಹ । ತ್ರಿಗುಣ ಮೂರುತಿಯಾದಿಕೇಶವ ತತ್ವ ನೀನೊಂದೇ ॥
ಸಗುಣರೂಪದಿ ಶರಣರನು ನೀ । ತೆಗೆದು ಸಂತೈಸುವ ಸದಾ ನೀ । ನಗಣಿತ ಶ್ರೀಪಾದವಲ್ಲಭ ಮಹಿಮೆ ನಿನ್ನದಲಾ ॥5॥

ಬರಿದೆ ನಿಷ್ಫಲ ವಾಗಲಾರದು । ಗುರುಚರಣ ಸದ್ಭಕ್ತಿ ನೀ ನಂ । ಬಿರುಸದಾ ಗುರುಶರಣರನು ದುರ್ಲಕ್ಷಿಸನು ಯೆನುತಾ ॥
ಪರಮ ಭಕ್ತಿಯ ಮಾಡು ನಂತರ । ಗುರುಮಹಿಮೆಯ ನೋಡು ಸಂಶಯ । ತೊರೆದು ನಿನಗಾ ನೊರೆವೆನೊಂದು ಕಥಾನಕವನೀಗಾ ॥6॥

ಭೂಸುರನುಕೇಳೋರ್ವ ನಿದ್ದನು । ಕಾಶ್ಯಪಾನ್ವಯನವನು ಮನದಲಿ । ದೋಷರಹಿತನು ಹೆಸರು ಕೇಳ್ಳೈ ವಲ್ಲಭೇಶನಲಾ ॥
ಬೇಸರಿಲ್ಲದೆ ಕುರವಪುರಕಾ । ವಾರ್ಷಿಕೋತ್ಸವ ಕೈದೆ ಬರುವನು । ತೋಷದಿಂದಲಿ ನವಸ ಮಾಡಿದನೊಂದು ದಿವಸದಲಿ ॥7॥

ತೆರಳುವೆನು ನಾನೊಂದು ಕೆಲಸಕೆ । ಗುರುಚರಣಮಹಿಮೆಯಲಿ ಲಾಭವು । ದೊರೆತರದರಲಿ ಮುಂದೆ ಯಾತ್ರೆಗೆ ಬಂದ ವೇಳೆಯಲಿ ॥
ಕುರವಪುರಕೈತಂದು ನಾ ಸಾ । ವಿರ ದ್ವಿಜರಿಗಿಕ್ಕುವೆನು ಕೇಳ್ ಪರಿ । ಪರಿಯ ಇಚ್ಛಾ ಭೋಜನವ ತಾನೆಂದನಾ ದ್ವಿಜನು ॥8॥

ಗುರುಚರಣಮಹಿಮೆಯಲಿ ದ್ವಿಜನಿಗೆ । ದೊರೆಯಿತ್ತೈ ಶತಗುಣದ ಲಾಭವು । ಪರಮ ಸಂತಸವಾಯ್ತು ಸಂತರ್ಪಣೆನಿಮಿತ್ತದಲಿ ॥
ಪುರವ ಹೊರವಂಟನು ಕಣಾ ಭೂ । ಸುರನು ಹಣವನು ಹೇರಿಕೊಂಡಾ । ಕುರವಪುರ ಹಾದಿಯಲಿ ಪಯಣದ ಮೇಲೆ ಪಯಣದಲಿ ॥9॥

ಹಲವು ತುಡುಗರು ಕಪಟವೇಷದಿ । ಸುಳಿದರಾ ಹಾದಿಯಲಿ ದ್ವಿಜನಿಗೆ । ತಿಳಿಸಿಕೊಟ್ಟರು ಪಥಿಕರಾವ್ ಶ್ರೀಪಾದಪುರಕೆನುತಾ ॥
ಉಳಿದರೀಪರಿ ಯೊಂದೆರಡು ದಿನ । ಬಳಸಿ ಬಂದರು ರಾತ್ರಿಯೊಂದಿನ । ತಲೆಯ ಕೊಯ್ದರು ಹಣವನಪಹರಿಸಿದರು ಚೋರರಲಾ ॥10॥

ಚೋರರೀಪರಿ ಭೂಸುರನ ಸಂ । ಹಾರ ಮಾಡಲು ಭಕ್ತವತ್ಸಲ । ಹಾರಿಬಂದನು ಕೆಂಜೆಡೆಯ ಭಸ್ಮಾಂಕಿತಾನನದಿ ॥
ಕ್ರೂರ ಖಡ್ಗಾಂಗತ್ರಿಶೂಲವ । ಧಾರಣವ ಮಾಡುತ್ತಲಂತಕ । ನೂರವರ ಮಾಡಿದನು ಶೂಲದಿ ವಧಿಸಿ ತಸ್ಕರರಾ ॥11॥

ಅವರೊಳೊಬ್ಬನು ನಿರಪರಾಧಿಯು । ವದಗಿ ಕಾಲಿಂಗೆರಗಿ ಪೇಳ್ದನು । ಸದಯ ಮೂರ್ತಿಯೆ ನೀನು ಸರ್ವಜ್ಞನು ಕಣಾ ಜಗಕೆ ॥
ವಿದಿತ ವಾಗದೆ ಬಂದೆನಿವರೊಳು । ವಧಿಸಲಾಗದು ತನಗೆನುತ ಗುರು । ಪದದಿ ಬೀಳಲು ನುಡಿದನಾ ಶ್ರೀಪಾದವಲ್ಲಭನು ॥12॥

ಕರೆದು ತಲೆಯನು ಜೋಡಿಸೆಂದಾ । ಗುರುವರನು ಪೇಳಲ್ಕೆ ಜೋಡಿಸೆ । ಕರದಿ ಮಂತ್ರಿಸಿ ಪ್ರೋಕ್ಷಿಸಿದನು ವಿಭೂತಿಯನು ಶವದಿ ॥
ಮರಳಿ ಜೀವವು ಬಂತು ರಾತ್ರಿಯು । ಹರಿದು ಸೂರ್ಯೋದಯವದಾಯಿತು । ಅರರೆ ಅಂತರ್ಧಾನವಾಯಿತು ದಿವ್ಯ ಮೂರ್ತಿಯದು ॥13॥

ನೋಡಿ ವಿಸ್ಮಯ ಪಟ್ಟು ಭೂಸುರ । ನಾಡಿದನು ಮಿತ್ರನಿಗೆ ಕೇಳ್ಕಾ । ದಾಡಿದರು ಪೇಳಾರು ಚೋರರ ಕೊಂದರಾರೆನುತಾ ॥
ಆಡಿದನು ಮೇಣವನು ತಾ ಕಾ । ಪಾಡಿದಾತನು ನಿನ್ನನೀಶ್ವರ । ನೋಡಿಬಂದನು ಕೊಂದನ್ಯೆ ತಸ್ಕರರ ಶೂಲದಲಿ ॥14॥

ನಿನ್ನ ದೆಸೆಯಿಂದವನು ಯೆನ್ನನು । ಭಿನ್ನ ಮಾಡದೆ ಬಿಟ್ಟ ನೀನೇ । ಧನ್ಯನಲ್ಲಾ ಬಂದು ರಕ್ಷಿಸಿದನು ತ್ರಿಶೂಲಿಯಲಿ ॥
ನಿನ್ನ ಭಕ್ತಿಯಗಾಧ ಗುಣಸಂ । ಪನ್ನ ನೀನೆಂದರಿತು ಬಂದನು । ತನ್ನ ಭಕ್ತರ ಬೆಂಬಲಕೆ ಸಂತಸದೊಳಿರುತಿಹನು ॥15॥

ಎಂದು ಪೇಳಿದ ನುಡಿಯ ಕೆಳ್ದನು । ಚಂದದಿಂದಲಿ ಭೂಸುರನು ಮೇಣ್ । ಬಂದನಾ ಶ್ರೀಪಾದಶ್ರೀವಲ್ಲಭನ ಪಟ್ಟಣಕೆ ॥
ತಂದ ದ್ರವ್ಯವನೆಲ್ಲ ಬ್ರಾಹ್ಮಣ । ವೃಂದ ಸಂತರ್ಪಣೆಗೆ ಖರ್ಚಿಸಿ । ಬಂಧುರದ ಭಕ್ತಿಯಲಿ ಗುರುವನು ಪೂಜಿಸಿದವನು ॥16॥

ದೋಷಿಯಾಗಿಹೆ ನಾನು ನೀ ನಿ । ರ್ದೋಷ ಪಾವನಚರಿತ ನಿನಗಾ । ಯಾಸವಾಯಿತು ಯೆನ್ನ ದೆಸೆಯಿಂದೇನ ಹೇಳುವೆನು ॥
ತ್ರಾಸವನು ಕ್ಷಮಿಸುವುದು ಮನದಲಿ । ತೋಷದಿಂದಲಿ ಯೆನ್ನ ತಾರಿಸು । ಯೇಸು ಧನ್ಯನೊ ಯೆನ್ನ ಮಿತ್ರನು ನಾನಭಾಗ್ಯನಲಾ ॥17॥

ಸಗುಣರೂಪವದೆನ್ನ ಮಿತ್ರಗೆ । ಸುಗಮವಾಯಿತು ನಿನ್ನ ದಯೆಯಲಿ । ನಿಗಮಕದು ಗೋಚರವೆ ? ಮಿತ್ರನ ಭಾಗ್ಯವೇನೆಂಬೆ ॥
ಸಗುಣರೂಪದಿ ಬಂದು ಯೆನಗೀ । ಬಗೆಯಲೇತಕೆ ಜೀವ ತರಿಸಿದಿ । ಜಗವು ಪ್ರಳಯಕೆ ಹೋಗುವುದೆ ಪೇಳೆನ್ನ ಮರಣದಲಿ ॥18॥

ನಿನ್ನ ಸೇವೆಯ ಮಾಡುವರೆ ನಾ । ಸನ್ನುತಾಶೆಯೊಳಿಲ್ಲಿ ಬಂದೆನು । ಯೆನ್ನಲಾ ತಸ್ಕರರು ಕೊಲ್ಲುವ ಸಮಯದಲಿ ಬರಿದೆ ॥
ನಿನ್ನ ಚರಣದ ಧ್ಯಾನವಾಯಿತು । ನಿನ್ನ ಸೇವೆಯು ತಪ್ಪಿತೆಂದೇ । ಖಿನ್ನನಾದೆನು ಮನದಿ ಮರಣಕ್ಕಂಜಿಪೆನೆ ನಾನು ॥19॥

ನಾನು ನಿನ್ನಯ ಸೇವೆ ಮಾಡದೆ । ನೀನು ಯೆನಗೊಲಿದಿರುವ ಕಾರಣ । ವೇನು ಕಾಣೆನು ಹಿಂದೆ ಭಕ್ತರು ನಿನ್ನ ನೊಲಿಸುವರೇ ॥
ಕ್ಷೀಣವನು ಮಾಡಿದರು ದೇಹವ । ಸಾನುರಾಗದಿ ಜಪತಪಾನು । ಷ್ಠಾನದಿಂದಲೆ ನಾನು ಆಪರಿ ಸಾಧನವನರಿಯೆ ॥20॥

ತಾಯಿ ತನ್ನಯ ಪ್ರೇಮದಿಂದಲಿ । ಕಾಯುವಳು ನಿಜಬಾಲನನು ಯಿದು । ನ್ಯಾಯವಾಯಿತು ನೀನು ಗುರು ನಿಜತಾಯಿ ಶರಣರಿಗೆ ॥
ಬಾಯ ಬಿಟ್ಟರೆ ಕೂಸನೆನ್ನನು । ಜೀಯ ಪ್ರೇಮದಿ ಬಂದು ಸಲಹಿದೆ । ತಾಯಿಯಂದದಿ ನಿನ್ನ ಚರಣಕೆ ನಮಿಪೆ ನಾನಿಗಾ ॥21॥

ತರಳಧ್ರುವನಂದದಿ ತಪವನಾ । ಚರಿಸಲಿಲ್ಲ್ಯ ಬಾಲ್ಯತನದಲಿ । ತರುಣಿ ದ್ರೌಪದಿಯಂತೆ ಭಕ್ತಿಯನರಿಯೆ ನಾ ನಿನ್ನಾ ॥
ತರಳ ಪ್ರಹ್ಲಾದನ ತೆರದಿ ಯೆನ । ಗರಿಯದ್ಯೈ ನಿಸ್ಸೀಮ ನಿಷ್ಠೆಯು । ವರ ವಿಭೀಷಣನಂತೆ ನಾನು ಸಹಾಯ ಮಾಡದಲೆ ॥22॥

ಎನಗೆ ನೀನೊಲಿದೀಗ ನವಜೀ । ವನವನಿತ್ತೆಯೊ ಕರುಣ ಸಾಗರ । ಮನದೊಳಾಗುವುದೆನಗೆ ದುಃಖವು ಕಷ್ಟ ನಿನಗಿತ್ತೆ ॥
ನಿನಗೆ ಪ್ರತ್ಯುಪಕಾರ ಮಾಡುವು । ದೆನಗಸಾಧ್ಯವು ವಿಶ್ವಕರ್ತನೆ । ಯೇನಗೆ ನಿನ್ನಯ ಪಾದಕಮಲದ ಸೇವೆ ಕೊಡು ಮಾತ್ರ ॥23॥

ಸೇವೆಯನು ಮಾಡುವ ಗುಣವ ನೀ । ನೀವುದ್ಯೆ ಯೆನೆಗಿನ್ನು ಚರಣದ । ಸೇವೆಯಿಂದಲೆ ಮುಂದೆ ಮೋಕ್ಷವು ಸಿಗುವುದಿದು ನಿಜವು ॥
ಸೇವ್ಯ ನಿನ್ನಯ ಚರಣವದಕಾಂ । ಸೇವಕನು ನಾನಿಹೆನು ಪಾಮರ । ನೀವಿನಂತಿಯ ಮನ್ನಿಸೆಂದನು ದ್ವಿಜನು ಭಕ್ತಿಯಲಿ ॥24॥

ಇಂತು ಸ್ತುತಿಸಲು ಭೂಸುರನು ಬಹು । ಸಂತಸದಿ ಶ್ರೀಪಾದವಲ್ಲಭ । ನಿಂತು ತೋರಿಸಿದನು ಸಗುಣ ರೂಪವನು ಭೂಸುರಗೆ ॥
ಚಿಂತೆಯಡಗಿತು ವಿಪ್ರನಿಗೆ ಭವ । ಕಿಂತು ಸುಟ್ಟಿತು ದರ್ಶನದಿ ಮನ । ಶಾಂತಿಯಾಯಿತು ಧನ್ಯನೆಂದನು ಗುರುಚರಣಕೆರಗಿ ॥25॥

ನಾಮಧಾರಕ ಕೇಳು ಗುರುನಿ । ಸ್ನೀಮ ಭಕ್ತಿಯ ಮಹಿಮೆಯನು ನೀ । ಕಾಮುಕರು ತುಡುಗರು ಸಹಿತ ನರಕವನು ಗೆದ್ದರಾಲಾ ॥

ಭೂಮಿಸುರ ಸದ್ಭಕ್ತ ಗುರುವಿನ ಪ್ರೇಮಪಾತ್ರವು ಅವನ ಮೈತ್ರಿಯ । ನಾಮಹಾತುಮ ಮಿತ್ರ ಕಂಡನು ಸಗುಣ ಮೂರುತಿಯಾ ॥26॥

ತುಡುಗರಾದರು ಭಕ್ತಸಂಗದಿ । ಪಡೆದರ್ೈ ಮರಣವನು ಗುರುವಿನ । ಹೊಡೆತದಲಿ ಮೇಣವರು ಗೆದ್ದರು ನರಕ ಯಾತನೆಯಾ ॥

ಪಡೆದರಾನಂದವನು ಮರಣದೊ । ಳಡಗಿ ಹೋಯಿತು ಪೂರ್ವ ಪಾಪವು । ಪಡೆದರೆರಡನೆ ಜನ್ಮವನು ಗುರುಭಕ್ತಿ ಯುತರಾಗಿ ॥27॥

ಕುರವಪುರದ ಮಹಾತ್ಮೆ ಹೆಚ್ಚಿತು । ಶರಣರ್ೈತಂದರು ಕೃಪಾಸಾ । ಗರನನಾ ಕಾಮಿತವನೀಯುವ ಸುರತರುವೆ ಗುರುವು ॥

ನರಹರಿ ಸರಸ್ವತಿಯು ಮುಂದವ । ತರಿಸಿ ಲೋಕೋದ್ಧಾರ ಗೈದಿಹ । ಪರಿಯ ಪೇಳ್ವೆನು ವಿಷ್ಣುದಾಸನು ಭಾವಭಕುತಿಯಲಿ ॥28॥

॥ ಅಧ್ಯಾಯ 10 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 11

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಶನಿ ಪ್ರದೋಷದಿ ಹರನ ಪೂಜೆಯ । ವನಿತೆ ಮಾಡಲು ಮೆಚ್ಚಿ ಭಕ್ತಿಗೆ । ತನಯನಾದನು ಗುರುವು ಧರೆಯಲಿ ಮನುಜ ರೂಪದಲಿ॥

ಗುರು ವೊಲಿದರಾರಿಹರು ಕೊಲುವರು । ಗುರು ಮುನಿದರಾರಿಹರು ಕಾಯ್ವರು । ಗುರುವೆ ಕೋಲುವನು ಗುರುನೆ ಸಲಹುವನ್ನೆದೆ ಯೀಜಗದಿ ॥

ಗುರುಕೃಪಾಛತ್ರದಲಿ ಕುಳಿತರೆ । ಮರಣಬಿಸಿಲಿನ ಭೀತಿ ಯೇತಕೆ । ಗುರುವ ನಂಬಲು ಜಗದಿ ಸಿದ್ಧಿಯ ಮಂತ್ರವದೆ ನೋಡು ॥1॥

ನಾಮಧಾರಕ ಕೇಳು ಶಿಷ್ಯಶಿ । ರೋಮಣಿಯೆ ನಾ ನಿನಗೆ ಗುರುಚರಿ- । ತಾಮೃತವ ಪಾನವನು ಶ್ರವಣಂಗಳಿಗೆ ಕುಡಿಸುವೆನು ॥

ಈ ಮಹಿಯೊಳಾನಂತರದಿ ಸ । ಪ್ರೇಮದಿಂದವತರಿಸಿ ಭಕ್ತರ । ಕಾಮಿತಾರ್ಥವನಿತ್ತ ಪರಿಯನೆನುತ್ತ ಮುನಿ ನುಡಿದಾ ॥2॥

ಹಿಂದೆ ನಾ ಪೇಳಿರ್ದ ಕಥೆಯಲಿ । ಮುಂದೆ ಸಿಗುವನು ಲೋಕಮಾನ್ಯನು । ಕಂದನೆಂದಾ ವಿಪ್ರನನಿತೆಗೆ ಕೊಟ್ಟ ವರ ನೆನಿಸು ॥

ಮಂದವಾರ ಪ್ರದೋಷಪೂಜೆಯ । ಕುಂದವಿಲ್ಲದೆ ಮಾಡೆನಲು ಗುರು । ವಿಂದುಮುಖಿಯಾಚರಿಸಿದಳು ತದ್ವ್ರತವ ಭಕ್ತಿಯಲಿ ॥3॥

ಗುರುವಿನುಪದೇಶದಲಿ ವ್ರತವನು । ಮರೆಯದಾ ಸ್ತ್ರೀ ಮಾಡಿದಳು ನಂ- । ತರದೊಳಾಯಿತು ನಿಧನವಾಕೆಗೆ ಆಶೆಯುಳಿಯಿತಲಾ ॥
ತಿರುಗಿ ನರಲೋಕದಲಿ ಜನ್ಮವು । ದೊರೆಯಿತವಳಿಗೆ ಬಡಗ ದೇಶದಿ । ಪುರಕರಂಜದಿ ವಿಪ್ರಕುಲದಲಿ ಕರ್ಮವಶದಿಂದಾ ॥4॥

ಶಾಖೆ ವಾಜಸನೇಯವೆಂಬುದು । ಲೋಕಮಾನ್ಯರು ಭೂಸುರರು ಮೇ- । ಣಾಕೆಗಾಯ್ತು ಭವಾನಿಯಂಬಾಬಾಯಿ ಪೆಸರೆರಡು ॥
ನೂಕಿದಳು ಬಾಲ್ಯ ವನು ಮೇಣಾ । ಲೋಕವೆಲ್ಲವು ಮೆಚ್ಚು ವಂದದೊ- । ಳೇಕಮನದಲಿ ಮದುವೆ ಮಾಡಿದರೈಯದೇ ಪುರದಿ ॥5॥

ಶಿವನ ಪೂಜಕನವನು ಕೇಳ್ಕಾ । ಧವನು ಸಜ್ಜನವಿನುತಚರಿತನು । ಇವಳಿಗಾಯಿತು ಶಿವನ ಭಕ್ತಿಯು ಪೂರ್ವಸಂಸ್ಕಾರಾ ॥
ಇವರು ಕೇಳ್ದಂಪತಿಗಳೊಂದೇ । ಸವನೆ ಹರ ಪೂಜೆಯನ್ನು ಮಾಡಿದ । ರವನಿಯಲಿ ದುರ್ಲಭಕಣಾಯಿಪರಿಯ ದಾಂಪತ್ಯ ॥6॥

ಮಂದವಾರ ತ್ರಯೋದಶಿಯ ದಿನ- । ವಿಂದುಮುಖಿ ಶಿವಪೂಜೆಯನು ನಲ- । ವಿಂದ ಮಾಡಿದಳಿಂತು ಹದಿನಾರಬುದ ನಡೆಯಿತಲಾ ॥
ಮುಂದೆ ಗರ್ಭವನಾಂತಳಾ ರಾ- । ಕೇಂದುಮುಖಿಗಾಯಿತ್ತು ಸಂತಸ । ಚಂದದಿಂದಾಡಿದಳು ಬ್ರಹ್ಮಜ್ಞಾನ ಜಗವರಿಯೆ ॥7॥

ಮಾಸವೇಳಾಗಲು ಸಿಮಂತನ । ಭೂಸುರರ ಕುಲಕನುಸರಿಸಿ ಸಂ- । ತೋಷದಿಂದುತ್ಸವವ ಮಾಡಿದರೇಕಭಾವದಲಿ ॥
ಮಾಸವೇಳಾಗಲು ಸಿಮಂತನ । ಭೂ ಸುರನು ಮಾಡಿದನು ಸರ್ವಸು- । ವಾಸಿನಿಯರಿಂಗಿತ್ತಳಕ್ಷಯವಾಯಣಂಗಳನು ॥8॥

ತಿಂಗಳೊಂಬತ್ತಾದವಾಕೆಗೆ । ಮಂಗಳಾಂಗಿಯು ತ್ರಿಜಗವಂದ್ಯನ । ಸಂಗರಹಿತನ ಶುಭಮುಹೂರ್ತದ ಜನ್ಮವಿತ್ತಳಲಾ ॥
ಮಂಗಳಾತ್ಮನ ಜನನದಲಿ ಮನ । ಸಿಂಗೆ ಕೇಳಾನಂದವಾಯಿತು । ಭಂಗವಾಯಿತು ಕಲಿಯಪಾಶವು ಜಗದೊಳಗೆ ನಿಜದಿ ॥9॥

ಧಾರುಣಿಯೊಳವತರಿಸಲವನೋಂ । ಕಾರ ಶಬ್ದವನುಚ್ಚರಿಸಿದನು । ಧಾರುಣೀಸುರರದನು ಕೇಳ್ದ ಚ್ಚರಿಯ ಪಟ್ಟರಲಾ ॥
ಭಾರಿ ಮುದದಲಿ ಜಾತಕರ್ಮವ । ಸಾರಿ ಮಾಡಿದರವರು ಬಾಲನು । ಕಾರಣಿಕನಹನೆಂದು ಫಲವನು ವರ್ತಿಸಿದರಾಗಾ ॥10॥

ಬಾಲನಿವ ಕಾರುಣ್ಯಸಿಂಧುವು । ಬಾಲನೀತನು ಜಗಕೆ ಗುರುವಿಹ- । ನಾಲಿಸ್ಯೆ ಬಾಲಕನ ದೃಷ್ಟಿಯು ಪರುಷಪರಿಯಹುದು ॥
ಬಾಲಕನ ಪದ ಕಾಮಧೇನುವು । ಓಲಗದ ದಾಸಿಯರು ನವನಿಧಿ । ಪೇಳಲೇನೀ ಭಾಗ್ಯ ಪುರುಷನು ಭವದಿ ನೌಕೆಯಲಾ ॥11॥

ತರುಣಿಯಂಗಸ್ಪರ್ಶ ಸಲ್ಲದು । ಧರೆಯೊಳಿವನಿಗೆ ಕುವರರಿಲ್ಲೈ । ಪರಮ ಪೂಜ್ಯನು ತ್ರಿಭುವನದೊಳವಗಿಲ್ಲ ಜೋಡಿನ್ನು ॥
ಚರಣ ದರ್ಶನದಿಂದ ಪತಿತರು । ಪರಮ ಪಾವನರಾಗುವರು ನಿಜ । ದರುಹುತೀಪರಿ ಚರಣಕೆರಗಿದರಾಗ ಭೂಸುರರು ॥12॥

ಬಾಲನವತಾರಿಕನು ಜೀತನು । ಲೀಲೆ ಮಾಡಲು ನಿಮ್ಮ ಮನೆಯಲಿ । ಕಾಲವಶದಲಿ ಬಂದಿಹನು ಸಾಮಾನ್ಯನೇ ಯಿವನು ? ॥
ಪಾಲನದಿ ಪೋಷಣದಿ ನಿಮಗಿಹು- । ದೇಳಿಗೆಯು ದಾರಿದ್ರನಾಶವು । ಭಾಲಲೋಚನನಿವನು ಕಾಮಿತವೆಲ್ಲ ಕೊಡುತಿಹನು ॥13॥

ಭೂಸುರರ ನುಡಿಗಳನ್ನು ಕೇಳುತ । ಶೇಷಭೂಷಣನೊಲಿದನೆಂದರು । ಲೇಸಿನಿಂದಲಿ ಭೂರಿ ದಕ್ಷಿಣೆಯಿತ್ತು ದ್ವಿಜರಿಂಗೆ ॥
ಕೂಸನೆತ್ತುತ ಮುದ್ದಿಸಿದರೈ । ತಾಸುತಾಸಿಗೆ ಜನರ ದೃಷ್ಟಿಯು । ಮಾಸಲಿ ಕೆಯಂಗಾರ ಹಚ್ಚು ವರೇನ ಹೇಳುವೆನು ॥14॥

ಕೇಳಿ ಪುರಜನರೆಲ್ಲ ಸಂತಸ । ತಾಳಿ ಬಾಲನ ನೋಡಲೋಸುಗ । ಧಾಳಿ ಯಿಟ್ಟರು ದ್ವಿಜನ ಮನೆಗೇನೆಂಬೆನದ್ಭುತವಾ ॥
ಬಾಲನಿಂಗಾ ದೃಷ್ಟಿ ಸೋಂಕಲು । ಮೇಲೆ ತಮಗಾಯಾಸವೆಂದಾ- । ಲೋಲಲೋಚನೆ ತೋರಿಸಳು ಬಾಲಕನ ಹೊರತಂದು ॥15॥

ತಂದೆತಾಯ್ಗಳು ಜನರ ದೃಷ್ಟಿಯು । ಕಂದನಿಗೆ ಬಾಧಿಸುವುದೆನುತಲಿ । ತಂದು ರಕ್ಷಾಮಂತ್ರವಂಗಾರವನು ಹಚ್ಚುವರು ॥
ಇಂದುಶೇಖರನವತರಿಸಲವ- । ಗಂದು ದೃಷ್ಟಿಯ ಭಯವ ಕೇಳಾ । ಮಂದಮತಿಗಳು ತಿಳಿಯಲಾರರು ತಮ್ಮ ಬಾಲಕನಾ ॥16॥

ಹತ್ತು ದಿವಸಗಳಾಗೆ ಭೂದಿವಿ । ಜೋತ್ತಮನು ಸಂಸ್ಕಾರ ಮಾಡಿದ । ಚಿತ್ತ ಸಂತೋಷದಲಿ ಮಾಡಿದ ನಾಮಕರಣವನು ॥
ಧಾತ್ರಿಯಲಿ ಜೋಯಿಸರ ಮತದಿಂ । ದಿತ್ತನಾ ಬಾಲನಿಗೆ ನರಹರಿ । ಉತ್ತಮದ ನಾಮವನು ತಂದೆಯ ಮೋಹವೇನೆಂಬೆ ॥17॥

ಮಾತೆ ತನ್ನಯ ಮಗನ ನೋಳ್ಪಳು । ಪ್ರೀತಿಯಲಿ ನಾನೆಂತು ಪೊಗಳಲಿ । ಭೀತಳಾದಳು ಸಾಲದೀ ಮೈ ಹಾಲು ಬಾಲನಿಗೆ ॥
ಮಾತೆ ಪೇಳ್ದಳು ಪತಿಗೆ ಗೋವನ । ದಾತತೂಕ್ಷಣ ತರಿಸಬೇಕೈ । ಯಾತರಿಂದಲಿ ಕೂಸ ಹಸಿವೆಯು ಶಮಿಸಬೇಕೆಂದು ॥18॥

ಕೇಳಿ ತಾಯಿಯ ನುಡಿಯನೀಪರಿ । ಬಾಲಕನು ಮನದೊಳಗೆ ನಕ್ಕನು । ಮೇಲೆ ದಕ್ಷಿಣಕರದಿ ತಾಯಿಯ ಮೊಲೆಯ ಮುಟ್ಟಿದನು ॥
ಬೀಳುತಿದ್ದುದು ಧಾರೆಯಲಿ ಮೊಲೆ । ಹಾಲು ಭೂಮಿಯ ಮೇಲೆ ಹರಿದುದು । ಹೇಳಲಾರದೆ ತಾಯಿ ವಿಸ್ಮಿತಳಾದಳಿದ ನೋಡಿ ॥19॥

ಎತ್ತಿ ಕೂಸನು ಮುದ್ದಿಸುತ ತಾಯ್ । ಗುಪ್ತ ರೀತಿಯಲಿವನ ಮಹಿಮೆ ಮ- । ಹತ್ವವನು ನೆನೆನೆನೆದು ಕೊಂಡಾಡಿದಳು ಮನದೊಳಗೆ ॥
ಅತ್ತರವನನು ತೊಟ್ಟಿಲಲಿ ಹಾ- । ಕುತ್ತ ಜೋಗಳ ಹಾಡಿದಳು ಬಳಿ- । ಕಿತ್ತ ಬಾಲನು ನೆಲದ ಮೇಲಾಡಿದನು ಮೋದದಲಿ ॥20॥

ಬೆಳೆದನಾ ಸಿತ ಪಕ್ಷಚಂದ್ರನ । ಕಲೆಯ ವೋಲ್ನರಹರಿಯು ಕೇಳ್ವಾ । ಯೊಳಗೆ ಓಂಕಾರ ಸ್ವರವ ಸಂತತದಿ ನುಡಿಯುವನು ॥
ಸೆಳೆದು ಬಿಗಿಯಪ್ಪುವಳು ಬಾಲನ । ನೊಲಿಸುವಳು ಮಾತಾಡುಯೆಂಬಳು । ಬೆಳೆದನೀಪರಿಯೈದು ವರುಷಗಳಾದವೇನೆಂಬೆ ॥21॥

ಮೂಕನೆಂದೇ ತಿಳಿದು ತಾಯಿಯು । ವ್ಯಾಕುಲತೆಯನು ತಾಳಿ ಪುತ್ರಗೆ । ಯಾಕೆ ನೀ ಮಾತಾಡದಿರುವೆ ಯೆನುತ್ತ ಕೇಳುವಳು ॥
ಜೋಕೆಯಿಂದಲಿ ಜೋಯಿಸರ ಕರೆ- । ದಾಕೆ ಹುಡುಗನ ತೋರಿಸುವಳೈ । ಯಾಕೆ ಹುಡುಗನು ಮಾತನಾಡನೆನುತ್ತ ಕೇಳುವಳು ॥22॥

ಪೇಳಿದರು ಜೋಯಿಸರು ತಾಯಿಗೆ । ಆಲಿಸೌ ಕುಲದೇವತೆಗೆ ನೀ । ಹೇಳಿಕೊಳ್ಳೌ ನವಸ ಪಿಂಪಳದೆಲೆಯ ಮೇಲವಗೆ ॥
ಕೂಳ ಹಾಕಿಸು ಮೂರು ವಾರಕೆ । ಬಾಲನಿವ ಕೇಳುತ್ತ ನಗುವನು । ಮೇಲೆ ಮೇಲೋಂಕಾರ ಶಬ್ದವನುಚ್ಚರಿಸುತಿರುವಾ ॥23॥

ಅನ್ನುವರು ಕೆಲಕೆಲರು ಮೂಕನು । ಚಿಣ್ಣನಿಹನೆಂದೆನುತ ಕೆಲವರು । ಸೂಜ್ಞನಿಹನಿವ ಕಲಿಸಬೇಕೈ ಸೂಜ್ಞತನದಿಂದಾ ॥
ಕಣ್ಣುಣ ತಾಗಿತೆನುತ್ತ ಕೆಲವರು । ಮನ್ನಿಪರು ಬಾಲಾವತಾರವ । ಬಣ್ಣಿಸಲಿಕಸದಳವಲಾ ಜನರೆಲ್ಲ ಮೂಢರಲಾ ॥24॥

ಕೆಲರ ಮತವಾಯ್ತಾತ ಕಿವುಡನು । ತಿಳಿಯಲಾರನು ಮಾತನಾಡಿದ । ರುಳಿದುಪಾಯವಿದೇನು ಮೂಕನು ಜನ್ಮಸಿದ್ಧನಲಾ ॥
ಕೆಲಕೆಲರು ತಂತಮ್ಮ ಪರಿಯಲಿ । ತಿಳುವಳಿಕೆಯನು ಮಾಡಿಕೊಂಡರು । ಬಳಲಿದರು ತಾಯ್ತಂದೆಗಳು ಮಗ ಮೂಕ ನಿಜವೆನುತಾ ॥25॥

ಏಳು ವರುಷಗಳಾದವೀಪರಿ । ಕೇಳಿದರು ಜೋಯಿಸರ ಮನ್ನಿಸಿ । ಪೇಳಿರೈ ಮುಂದಿನ್ನುಪಾಯವ ಹುಡಗ ಮೂಕನಲಾ ॥
ಆಲಿಸಿರಿ ಬ್ರಹೋಪದೇಶವ । ಪೇಳಿದರೆ ಮೂಕನಿಗೆ ಫಲವೇ । ನಾಲಿಸೆಂದರು ನೆರೆದ ವಿಪ್ರರವೃಂದ ದುಗುಡದಲಿ ॥26॥

ಭೂಸುರರ ಕುಲದೊಳಗೆ ಬ್ರಹ್ಮಪ- । ದೇಶವೇ ನಿಜ ಜನ್ಮ ಮುಂಜಿಯ । ಲೇಸಿನಿಂ ಮಾಡಿಸಿರಿ ಶಾಸ್ತ್ರಪ್ರಸಿದ್ಧ ಮಾರ್ಗದಲಿ ॥
ಈಸುಪರಿಯಲಿ ಮುಂಜಿಯಾಗಲು । ಕೂಸು ಮಾತಾಡುವದು ಯೆಂದು- । ಲ್ಲಾಸದಿಂದಲಿ ಪೇಳ್ದರೈ ದೈವಜ್ಞರದರೊಳಗೆ ॥27॥

ಹರನ ವರದಿಂದಾದ ಕೂಸಿದು । ಸ್ಮರನ ಸರಿಮಿಗಿಲೆಂಬ ಕಾಂತಿಯು । ದೊರೆಯಿತಿವನಿಗೆ ಮೂಕತನವೇನೆಂಬೆ ವಿಧಿವಶದಿ ॥
ಹರನ ಪೂಜೆಯ ಫಲದ ಬಾಲಕ । ತಿರುಕುಳನೆ ಮೂಕನೆ ಕಣಾ ನಮ । ಗರರೆಯೊಂದೇ ಕೂಸು ಯೆನುತಲಿ ತಾಯಿ ಮರುಗಿದಳು ॥28॥

ಹುಡುಗನಿದ ಕೇಳಿದನು ಮನದಲಿ । ನುಡಿದನೀತಾಯ್ತಂದೆಗಳು ಯೆನ । ಗಡಚಣಿಯ ಮಾಡುವರೆನುತ್ತಲಿ ಮನದಿ ಯೋಚಿಸುತಾ ॥
ಪಿಡಿದು ಕೈಯಲಿ ಲೋಹಹಾರೆಯ । ನಡುವಿನಂಗಳ ಕೆತ್ತಿ ಬಿಸುಟನು । ವೊಡನೆ ಲೋಹವು ಚಿನ್ನವಾಯಿತು ಹಸ್ತ ಸ್ಪರ್ಶದಲಿ ॥29॥

ನೋಡಿ ದ್ವಿಜಸತಿ ಹಿಗ್ಗಿದಳು ಪತಿ । ಕೂಡಯಾಡಿದಳೀಪರಿಯ ಗುಣ । ಕೂಡಿರುವ ಬಾಲನು ಕಣಾ ಅವತಾರಪುರುಷನಲಾ ॥
ಬೇಡ ಸಂಶಯವೆಂದು ಯೆರಡನೆ । ಗಾಢಲೋಹವ ತಂದು ಕೊಡಲದ । ನೋಡಿದನು ಬಂಗಾರವಾಯಿತು ದೃಷ್ಟಿ ಮಾತ್ರದಲಿ ॥30॥

ಮಗನನೆತ್ತುತ ತಂದೆತಾಯ್ಗಳು । ಬಿಗಿದು ಚುಂಬನ ಕೊಟ್ಟು ನುಡಿದರು । ಮಗನೆ ನಿನ್ನಯ ಲೀಲೆಯರಿಯೆವು ಮಾಯೆಯಲಿ ಸುತ್ತಿ ॥
ಜಗದಿ ನಿನ್ನನು ಮೂಕನೆನುವರು । ನಗುವರೆಮ್ಮನು ನೋಡಿ ನೀನೇ । ಬಗೆಯ ತೋರಿಸು ಯೆಂದು ಪೇಳ್ದರು ಮಗನ ತಾಯ್ತಂದೆ ॥31॥

ನಿನ್ನ ಬಾಯಿಯ ಶಬ್ದಗಳ ನೆಮ । ಗಿನ್ನು ಕೇಳುವ ಬಯಕೆಯಾಗಿದೆ । ಧನ್ಯರೆಂಬುವೆ ಕೇಳುವೆವು ತವ ತೊದಲು ಮಾತುಗಳಾ ॥
ಮನ್ನಿಸೀ ಬಯಕೆಯನು ಬಾಲಕ । ನೆನ್ನ ಮರಿಯಾನೆಯೆ ಜಗತ್ರಯ- । ಮಾನ್ಯಪುರುಷನೆ ನೀನೆನುತ ಕೊಂಡಾಡಿದಳು ಜನನಿ ॥32॥

ಎಂದ ನುಡಿಯನು ಕೇಳಿ ನರಹರಿ । ಮಂದಹಾಸ್ಯದಿ ಕಟಿಯ ತೋರಿಸಿ । ಬಂಧನವ ಮಾಡಲ್ಕೆ ನುಡಿವೆನೆನುತ್ತ ಸಂಜ್ಞೆಯಲಿ ॥
ತಂದೆತಾಯ್ಗಳ ಮುಂದೆ ತೋರಿಸ । ಲಿಂದು ಮಹದಾಶ್ಚರ್ಯದಿಂದಲಿ । ಮುಂದೆ ವ್ರತಬಂಧದ ಸಮಾರಂಭವನು ಯೋಚಿಸುತಾ ॥33॥

ಕರೆದರಾ ಪಂಡಿತರ ಜೋಯ್ಸರ । ತರಳನುಪನಯನವನು ಯೋಚಿಸಿ । ಭರದಿ ಮಾಡಿದರೈ ಮಹಾಸಂಭ್ರಮದಿ ಸಾಹಿತ್ಯ ॥
ಮರುಳನೀ ಮೂಕನಿಗೆ ಸಂಭ್ರಮ । ವಿರಚಿಸುವ ಭ್ರಮವೇಕೆ ಬಾಲನು । ತೆರೆಯಲಾರನು ಬಾಯ ಮಂತ್ರೋಚ್ಚಾರ ಪರಿ ಹೇಗೆ ॥34॥

ಕೆಲರು ಪೇಳ್ದರು ತಮಗೆ ಹೋಳಿಗೆ । ಗಳಲಿ ತೃಪ್ತಿಯು ಸಿಕ್ಕರಾಯಿತು । ಕೆಲರು ದಕ್ಷಿಣೆಯಾಶೆಯಲಿ ಕೆಲಕೆಲರು ಭೋಜನವಾ ॥
ಮೆಲುವ ಬಯಕೆಯೊಳಲ್ಲಿ ಬಂದರು । ಕಲಶಕನ್ನಡಿ ಗುಡಿಪತಾಕಾ । ವಳಿಗಳನು ನಿಲ್ಲಿಸುತ ಸಂಭ್ರಮ ಮಾಡಿದನು ದ್ವಿಜನು ॥35॥

ಬಂದರೈ ಬ್ರಾಹ್ಮಣರು ದೇಶಗ- । ಳಿಂದ ನಾನಾ ಗ್ರಾಮದಿಂದಲೆ । ಬಂದರೈ ವೈದಿಕರು ಶಾಸ್ತ್ರಿಪುರಾಣಿಕರು ಭರದಿ ॥
ಚಂದದಿಂದಲಿ ಚೌಲ ಕರ್ಮವ । ನಂದು ಮಾಡುತಲೆರಡು ಸಾರಿಗೆ । ಮಿಂದು ಸಹಭೋಜನಕೆ ತಂದರು ಮೂಕ ಬಾಲನನು ॥36॥

ತೀರಿಸುತ ಸಹಭೋಜನವ ತಾ । ದಾರಿ ಹಿಡಿದನು ತಂದೆಯಿದ್ದೆಡೆ । ತೋರಿಸಿದನೀ ಪರಿಯೊಳಗೆ ಮೇಖಲೆಯ ಕಟ್ಟೆನುತಾ ॥
ಧಾರುಣೀಸುರವರರ ಮಂತ್ರದಿ । ಕಾರಣಿಕ ಪುರುಷನಿಗೆ ಮುಂಜಿಯ । ನೋರೆಯಲಿ ಕಟ್ಟಿದನು ಬಂತಾ ವೇಳೆ ಸುಮುಹೂರ್ತಾ ॥37॥

ತೆಗೆದು ಬಾಲನ ತೊಡೆಯೊಳೇರಿಸಿ । ಮಗನಿಗುಪದೇಶಿಸಿದನಾಕ್ಷಣ । ಮಗನು ಗುಣಗುಟ್ಟಿದನು ಮನದಲಿ ಮಂತ್ರ ಗಾಯತ್ರಿ ॥
ಮುಗುದೆ ವಟುವಿನ ತಾಯಿ ನಂತರ । ವಿಗಡ ಪ್ರೇಮದಿ ಭಿಕ್ಷೆ ತಂದಳು । ಮಗಗೆ ಕೊಟ್ಟಳು ಭಿಕ್ಷೆ ವಸ್ತ್ರಾಭರಣವಸ್ತುಗಳಾ ॥38॥

ಮೊದಲನೆಯ ಭಿಕ್ಷೆಯನು ಕೊಡಲಾ । ಸುದತಿಯಾಶೀರ್ವಚನ ಹರಸಲು । ವದನದಿಂ ಋಗ್ವೇದ ಹೊರಟಿತು ಸಭೆಯು ಬೆರಗಾಗೆ ॥
ಸುದತಿ ಯೆರಡನೆ ಭಿಕ್ಷೆನೀಡಲು । ವದನದಿಂದುಚ್ಚಾರವಾಯಿತು । ಮದದೊಳೆರಡನೆ ವೇದ ಮೂರನೆ ಭಿಕ್ಷೆಯಲಿ ಮೂರು ॥39॥

ಸಾಮವೇದವ ವಟುವು ತಾ ಸ- । ಪ್ರೇಮದಿಂದಲಿ ಹಾಡಿ ತೋರಿಸೆ । ಭೂಮಿಯಲಿ ಬಹು ಚೋದ್ಯವಾಯಿತು ಬುಧರ ಮನಮೆಚ್ಚೆ ॥
ಈ ಮಹಾತ್ಮನು ಕಾರಣಿಕನಿಹ । ರಾಮಣೀಯಕ ಗಾಯನವನಾ । ಸಾಮವೇದವನೆಂತು ಪೇಳ್ವನು ಮೂಕ ಬಾಲನಲಾ ॥40॥

ನೆರದ ವಿಪ್ರ ಸಮಸ್ತರೀ ಬಂ- । ಧುರದ ಕೃತಿಯನು ನೋಡಿ ವಟುವವ- । ತರಿಸಿದನು ತ್ರೈಮೂರ್ತಿಯಿರಬೇಕೆಂದು ನಿಶ್ಚೈಸಿ ॥
ಚರಣಕೆರಗಿದರಾಗ ಬಾಲನ । ಗುರುಮಹಿಮೆಯಿನ್ನಾರು ಬಲ್ಲರು । ಗುರುಕೃಪೆಯು ಮೂಕನನು ಮಾಳ್ಪುದು ಪರಮ ವಾಚಾಳಾ ॥41॥

ನರಹರಿಯು ಪ್ರೇಮದಲಿ ತಾಯಿಯ । ಕರೆದು ಮಗುಳಿಂತೆಂದ ತಾಯಿಯೆ । ಅರುಹಿದೀಗಲೆ ಭಿಕ್ಷೆಯನು ಬೇಡೆಂದು ನೀನೆನಗೆ ॥
ತೊರೆಯಲಾರೆನು ನಿನ್ನ ಮಾತನು । ಕರುಣದಿಂದ ನಿರೋಪ ಕೊಡು ನಾ- । ಚರಿಸುವೆನು ತೀರ್ಥಂಗಳನು ವಟುವೇಷದಲಿ ಜಗದಿ ॥42॥

ಮನದಿ ನಿಶ್ಚಯವಾಯ್ತು ಕೇಳೌ । ಯೆನಗೆ ಸನ್ಯಾಸಾಶ್ರಮವೆ ಪ್ರಿಯ । ಮನೆಮನೆಯೊಳಾಂ ಹೋಗಿ ಭಿಕ್ಷಾಟಣೆಯ ಮಾಡುವೆನು ॥
ಎನಗೆ ವೇದಾಭ್ಯಾಸ ಮಾಡುವ । ಘನತರದ ವಾಂಛನೆಯು ಹಿಡಿದದೆ । ಮನದೊಳಂಜದೆ ಕೊಡು ನಿರೋಪವನೆಂದನಾ ವಟುವು ॥43॥

ಬಾಲನಾಡಿದ ನುಡಿಯು ಕರ್ಣದಿ । ಬೀಳೆ ವಿದ್ಯುತ್ಪಾತದಂದದಿ । ಬಾಲೆ ಬಿದ್ದಳು ನೆಲದಿ ಕರ್ಣಕಠೋರ ಶಬ್ದಗಳು ॥
ಆಲಿಸ್ಯೆ ಬಾಲಕಶಿರೋಮಣಿ । ಕೇಳಲಾರದ ನಿನ್ನ ನುಡಿಯನು । ಕೇಳಿಜೀವಿತದಾಶೆಲತೆಬಾಡಿದುದು ಸುಕುಮಾರಾ ॥44॥

ಬಾಲನೀ ನೀವರೆಗೆ ಮೂಕನು । ಪಾಲಿಸಿದೆವೈ ಪ್ರೀತಿಯಲಿ ತಾ । ಪಾಲಿಸುವೆ ವಾರ್ಧಕ್ಯದಲಿ ನೀನೆಂದು ಬಯಸಿದೆವು ॥
ಕೇಳಲಿಲ್ಲೈ ನಿನ್ನ ಸವಿನುಡಿ । ಕೇಳಿದೆನು ನಾನೀಗ ಕಹಿನುಡಿ । ತಾಳಲಾರೆನು ಬಾಳಲಾರೆನು ನಿನ್ನ ಬಿಟ್ಟೀಗಾ ॥45॥

ಎಂದ ತಾಯಿಯ ನುಡಿಯ ಕೇಳಿಂ- । ತೆಂದನಾ ನರಹರಿಯು ಮಾತೆಯೆ । ಮುಂದೆ ನಿನ್ನುದರದಲಿ ಬರುವರು ನಾಲ್ಕು ಬಾಲಕರು ॥
ಚಂದದಿಂದಲಿ ನಾಲ್ಕು ಪುತ್ರರು । ತಂದೆ ತಾಯ್ಗಳ ಸೇವೆ ಮಾಳ್ಪರು । ನಂದನರು ನಿನಗಹರು ಸಂಶಯ ಬೇಡ ಬೇಡೆಂದಾ ॥46॥

ಮಂದವಾರ ಪ್ರದೋಷಕಾಲದೊ- । ಳಿಂದುಶೇಖರ ಪೂಜೆ ಮಾಡಿದೆ । ಯೆಂದು ನಿನಗೀರೆರಡು ನಂದನರಾಗುವರು ನಿಜದಿ ॥
ಎಂದು ಮಾತೆಯ ಶಿರದಿ ನರಹರಿ । ಚಂದದಿಂ ಕರವಿಡಲು ತಾಯಿಗೆ । ಹಿಂದೆ ನಡೆದಿಹ ಪರಿಯು ಸರ್ವವು ಬಂತು ಮನದೊಳಗೆ ॥47॥

ಮರೆತಪರಿ ನೀನರಿತೆ ಯೀಗಲು । ಪೊರೆವೆ ನಾ ನಿನಗೊಂದು ಸಂಗತಿ । ಯುಸಿರಬಾರದು ಬೇರೆಯವರಿಗೆ ಗುಪಿತವಿಡಬೇಕು ॥
ಧರೆಯೊಳಗೆ ಸನ್ಯಾಸಧರ್ಮವ । ಚರಿಸುವವರಾವ್ ನೀನು ದಯೆಯಲಿ । ಕರುಣಿಸೆನಗೆ ನಿರೋಪವೆಂದನು ತಾಯಿಗಾವಟುವು ॥48॥

ತೊಲಗಿ ನಮ್ಮನು ನೀನು ಪೋದರೆ । ತೋಲಗುವೆನು ಜೀವವನು ನಿಶ್ಚಯ । ವಿಳೆಯೊಳೆಂತಿಸುತವಿಯೋಗದಿ ಕಾಲ ಕಳೆಯುವೆವು ॥
ತಿಳಿಯೆ ನಿನ್ನಯ ಮನದ ಬಗೆಯನು । ತಿಳಿದು ನೋಡಲು ತಾಪಸಾಶ್ರಮ- । ಎಳೆಯ ಬಾಲಕನಿಂಗೆ ಯೋಗ್ಯವೆ ನೀನೆ ನೋಡಿದನ ॥49॥

ಆಗಲಾ ವ್ರತಬಂಧ ವಟುವಿಗೆ । ಯೋಗ್ಯವಾಶ್ರಮ ಬ್ರಹ್ಮಚರ್ಯವು । ಸಾಗಿ ಹದಿನೆರಡಬುದ ಗುರುಕುಲವಾಸ ನಂತರದಿ ॥
ಹೋಗಬೇಕು ವಿವಾಹಧರ್ಮಕೆ । ಯೋಗ್ಯವಾಧಾರವು ಗೃಹಸ್ಥನ । ಯಾಗಯಜ್ಞಾದಿಗಳು ಪೊರೆವವು ಸರ್ವಧರ್ಮಗಳು ॥50॥

ನಂತರದಿ ಸನ್ಯಾಸಧರ್ಮವು । ಯಿಂತು ಪೇಳ್ವುದು ವೇದಶಾಸ್ತ್ರವು । ಸಂತತಿಯ ಸುಖ ಭೋಗಿಸದೆ ಸನ್ಯಾಸ ನಿಷ್ಫಲವು ॥
ನಿಂತು ಸಂಸಾರದಲಿ ಯಜ್ಞವ । ನಂತ ಮಾಡುವ ಮುಂದೆ ತಾಪಸ । ಪಂಥವಾ ಚರಿಸಲ್ಕೆ ಪೇಳ್ವವು ವೇದಶಾಸ್ತ್ರಗಳು ॥51॥

ಬಾಲತನದಲಿ ತಂದೆ ತಾಯ್ಗಳ । ಖೂಳತನದಲಿ ಬಿಡುವ ತಾಪಸ । ದೇಳಿಗೆಯು ಸರಿಯಲ್ಲ ಶಾಸ್ತ್ರ ವಿರುದ್ಧವಿದು ನೋಡು ॥
ಬಾಲೆಯರನು ವಿವಾಹಗೈದತಿ । ಲೀಲೆಯಿಂತಿಳಿದಿಂದ್ರಿಯಂಗಳ । ಮೇಳವನು ಸಂತೈಸಲಾರದೆ ಮೋಕ್ಷ ದೊರಕುವುದೆ ॥52॥

ಇಂತು ತಾಯಿಯ ವಚನಗಳನಾ । ಸಂತಸದಿ ಮನಗೊಟ್ಟು ಕೇಳ್ದನು । ಪಿಂತೆ ತಾಯಿಗೆ ಪೇಳ್ದನಾ ವೇದಾಂತ ಮಾರ್ಗವನು ॥

ಸಂತರೀ ಸುಕಥಾಮೃತವನಿ- । ಶ್ಚಿಂತಮಾನಸರಾಗಿ ಕೇಳಲು । ಸಂತಸದಿ ಕಾಮಿತವ ಕೊಡುವನು ವಿಷ್ಣು ಗುರುಮೂರ್ತಿ ॥53॥

॥ ಅಧ್ಯಾಯ 11 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 12

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ತನುವು ಶಾಶ್ವತವಲ್ಲ ಧರ್ಮವ । ನನುಕರಿಸಬೇಕೆಂದು ನರಹರಿ । ಜನನಿಯನುಮತದಿಂದ ಸ್ವೀಕರಿಸಿದನು ಸನ್ಯಾಸ ॥

ಶ್ಲೋಕ ॥ ಅನಿತ್ಯಾನಿ ಶರೀರಾಣಿ ವೈಭವೋ ನೈವ ಶಾಶ್ವತಃ । ನಿತ್ಯಹ್ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ॥

ಕೇಳು ತಾಯಿಯೆ ನಿನ್ನ ಮಾತಿದು । ಕಾಲವಶವಹ ನರಗೆ ಸಲ್ಲದು । ಪೇಳು ದೇಹದ ಭರವಸವನಿನ್ನಾರು ಪೇಳುವರು ॥
ನಾಳೆ ನಮಗಾಧೀನವಾಗದು । ಗೋಳೆ ಮಾಡೀಗಲೆ ಸುಧರ್ಮದ । ಆಲಿಸ್ಯೆ ಯಮನಿಹನು ಹತ್ತರ ಹಾದಿ ನೋಡುವನು ॥1॥

ನಾಳೆ ಧರ್ಮವ ಮಾಳ್ಪೆನೆನುತಲಿ । ಕಾಲಹರಣವ ಮಾಡಬಾರದು । ನಾಳೆ ನಾವಿನ್ನಾರು ನೀವಾರೆಂದು ನಿಜವಹುದೇ ? ॥
ನಾಳೆ ನಮ್ಮದು ನಿಜವಿದೆಂಬುವ । ಖೂಳನಿಗೆ ಪರಲೋಕ ಸಲ್ಲದು । ಕೇಳು ನಿನ್ನಯ ಮಾತ ನಂಬೆನು ಜಗವು ಶಾಶ್ವತವೇ ॥2॥

ಸ್ಥಿರವಿದಾರಿಗೆ ದೇಹ ಸಿಕ್ಕಿತು । ಪರಮ ಋಷಿಗಳು ಸಿದ್ಧ ಕಿಂಪುರು । ಷರು ಕಣಾ ಯಮನೂರ ಸೇರ್ದರು ಜವಗೆ ದಯೆಯಿಲ್ಲಾ ॥
ನರಶರೀರವು ದೃಢವಿರಲು ತಾ । ಭರದಿ ಧರ್ಮಾಚರಣೆ ಮಾಡೆಂ- । ದರುಹಿದನು ನರಹರಿಯು ತನ್ನಯ ಜನನಿಗೊಲಿವಿನಲಿ ॥3॥

ದಿನಮಣಿಯು ಬೇಗದಲಿ ಗಗನದಿ । ಮುಳುಗಬೇಕಾದರೆ ಕಣಾ ಚರಿ- । ಪನು ನಿಮಿಷಕಿಪ್ಪತ್ತು ಸಾವಿರವೂರನದರಂತೆ ॥
ಕ್ಷಣಕ್ಷಣದೊಳಾಯುಷ್ಯ ಕ್ಷೀಣತೆ । ಗಣನೆಯಿಲ್ಲದೆ ಸಂಭವಿಸುವುದು । ಎಣಿಸಬೇಡಾ ತಾಯೆ ದೇಹವು ಶಾಶ್ವತವಿದೆಂದು ॥4॥

ಮೀನಿಗಲ್ಲೋದಕವು ಮರಣವ । ತಾನೆ ತರುವುದು ಅದರ ತೆರದಲಿ । ಮಾನನನು ಕ್ಷೀಣಾಯುವಿಹನೀ ಜಗದಿ ತಿಳಿಯವ್ವಾ ॥
ಪ್ರಾಣ ದೇಹದೊಳಿರುವ ತನಕವೆ । ನೀನು ಧರ್ಮವನಾಚರಿಸು ಯೆ- । ನ್ನಾಣೆ ಸಟೆಮಾತಲ್ಲ ಮನದಲಿ ತತ್ವವಿದ ನಂಬು ॥5॥

ಮಳೆಯು ಬೀಳಲು ಮರದ ತಲೆಯಲಿ । ಎಲೆಯೊಳಿರದಾ ನೀರು ಬೀಳ್ವುದು । ನೆಲದ ಮೇಲಿದರಂತೆ ಜೀವವು ಸ್ಥಿರವು ನಿಲ್ಲುವುದೆ ॥
ಇಳೆಯೊಳೀ ಜೀವತ್ವ ಯೌವನ । ತಿಳಿಯೆ ನಶ್ವರ ಜರೆಯು ಮರಣವು । ಪಳಪಳದಿ ದೇಹವನು ನುಂಗುವವೇನ ಹೇಳುವೆನು ॥6॥

ಹುಟ್ಟಿದವನಿಗೆ ಮರಣ ತಪ್ಪದು । ಸೃಷ್ಟಿನೇಮವಿದೆಂದು ತಿಳಿ ನಿನ- । ಗೆಷ್ಟು ಹೇಳಲಿ ಮೃತ್ಯು ಚೋರನ ತೆರದೊಳಡಗಿಹುದು ॥
ಕಷ್ಟಮಯ ಸಂಸಾರದಲಿ ನಿನ- । ಗಿಷ್ಟು ಪೇಳುವೆ ತಾಯೆ ಧರ್ಮವ । ನಿಷ್ಠೆಯಿಂದಲಿ ಮಾಡು ನೀ ನಂಬದಿರು ದೇಹವನು ॥7॥

ಎಲೆಯು ಹಣ್ಣಾಗಿರಲು ಮರದಲಿ । ನೆಲಕೆ ಬೀಳುವುದೆಂದು ನೇಮವು । ತಿಳಿದು ನೋಡೌ ತಾಯೆ ಕೇಳೀಪರಿಯ ದೇಹವಿದು ॥
ನೆಲೆಯು ಹತ್ತದಿದೆಂದು ಬೀಳ್ವುದು । ಇಳೆಯೊಳೀ ಸಂಸಾರವೆಂಬುದು । ಜಲದ ಮೇಲಿನ ಗುಳ್ಳೆಯಂದದಿ ತೋರಿಯಡಗುವದು ॥8॥

ಹಣದ ಸಾಲವ ಕೊಟ್ಟು ಪರರಿಂ- । ಗೆಣಿಸುವಂದದಿ ಕೃಪಣ ದಿನಗಳ । ಗಣನೆ ಮಾಳ್ಪನು ದುಷ್ಟಯಮನಾಯುಷ್ಯ ದಿನಗಳನು ॥
ಗಣನೆಯಿಲ್ಲದೆ ನದಿಗಳುದಕದ । ವನಧಿ ಕಡೆಗೆ ಪ್ರವಾಹವಪ್ಪುದು । ಹನಿಜಲವು ಹಿಂದಾಗಿ ಹರಿವುದೆ ? ಆಯುವದರಂತೆ ॥9॥

ಪೋದ ವರುಷವು ಮರಳಿ ಬಾರದು । ಹೋದ ರಾತ್ರಂದಿವಸ ವರುಷವು । ಸಾಧಿಸಲು ಮರಳುವುದೆ ಯೊಂದೇ ಕ್ಷಣವು ಕೇಳ್ತಾಯೆ ॥
ಮೇದಿನಿಯೊಳೀ ನರರು ಪುಣ್ಯವ । ಸಾಧಿಸಲು ಬೇಕೀಗ ಮುಂದಿನ । ಬಾಧ್ಯತೆಯನಾರೀಗ ಪೇಳ್ವರು ತಾಯೆ ನೀನೋಡು ॥10॥

ಪುಣ್ಯ ಮಾಡದ ದಿವಸ ವ್ಯರ್ಥವಿ- । ದೆನ್ನುತಲಿ ತಿಳಿ ನೀನು ಯಮನಿಗೆ । ಕಣ್ಣಿನಲಿ ದಯೆಯಿಲ್ಲ ಪುಣ್ಯವ ಮಂದರಿಸಬೇಡಾ ॥

ಹೆಣ್ಣು ಗೃಹಸುತಗೋಧನಾದಿಯು । ಹೊನ್ನು ಭೂಧನವೆಂಬ ಸಂಪತಿ । ಮನ್ನಿಸಲು ನೀ ಬೇಡ ಶಾಶ್ವತವೆಂದು ಜಗದೊಳಗೆ ॥11॥

ಮಾನಿಸುವರೀ ಪರಿಯ ಸಂಪತ್ । ತಾನೆ ಶಾಶ್ವತವೆಂದು ಧರೆಯಲಿ । ಮಾನವರು ಕೇಳವರು ಪಶುವಿನ ಸರಿಯಲಾ ನೋಡು ॥

ಮಾನಿಸೌ ವಾರ್ಧಕ್ಯ ಮೊಸಳೆಯು । ಹೀನಪುಣ್ಯರ ನುಂಗುವದು ಮೇಣ್ । ನೀನೆನಗೆ ಪೇಳವ್ವ ಬುದ್ಧಿಯ ವಾದವನು ನಮಿಪೆ ॥12॥

ಯಾರು ಯವಕಿಂಕರರ ನೆಂಟರು । ಧಾರುಣಿಯೊಳಿರುತಿರ್ಪರವರಿಗೆ । ಸೇರುವದು ನೀ ಪೇಳ್ದ ಮಾತಿದು ಸೇರದನ್ಯರಿಗೆ ॥

ಯಾರು ಭವಸಾಗರವ ದಾಟುವ । ತಾರಣವ ಹುಡುಕುವರು ಅವರೇ । ಆರಿಸಲು ಬೇಕೀಗ ಪುಣ್ಯದ ಪಂಥವಿದನೆಂದಾ ॥13॥

ನಾರಿ ಕೇಳೌ ಸ್ವಪ್ನವಿದು ಸಂ- । ಸಾರ ಶಾಶ್ವತವಲ್ಲ ನರನ ಶ । ರೀರ ಮಲ್ಲಿಗೆ ಹೂವು ಬಾಡುವುದೆರಡನೆಯ ದಿವಸ ॥

ತೋರಿಯಡಗುವ ಮಿಂಚಿನಂದದಿ । ಧಾರುಣಿಯೋಳೀ ದೇಹನಂಬಿರ- । ಬಾರದಿದ ನೀನೆಂದು ಬೋಧಿಸಿದನು ಕುಮಾರಕನು ॥14॥

ಏಳು ವರುಷದ ಮೂಕಬಾಲನು । ಪೇಳುವನು ವೇದಾಂತ ತತ್ವವ । ನಾಲಿಸಿದರಾ ಸಭೆಯ ವಿದ್ವಜ್ಜನರು ತಲೆದೂಗಿ ॥

ಲೋಲಲೋಚನೆ ನಮಿಸಿ ನುಡಿದಳು । ಬಾಲ ನಿನ್ನೀ ಜ್ಞಾನ ತಿಳಿದೆನು । ಬಾಲರಾಗುವರೆನಗೆನುತ್ತಲಿ ಪೇಳ್ದ ವಚನದಲಿ ॥15॥

ಭರವಸವ ನಾನಿಡೆನು ಕುಲದೇ । ವರು ಕಣಾ ನೀನೆಮಗೆ ಮಗನೇ । ಇರಲುಬೇಕೈ ನೀನು ಪುತ್ರೋತ್ಸವದ ಪರಿಯಂತ ॥

ತೊರೆದರಾ ಪರಿಯಂತ ನಮ್ಮನು । ಪುರವ ಬಿಟ್ಟರೆ ನಾನಿದೀಗಲೆ । ಉರಲು ಹಾಕುವೆ ಕೊರಳಿಗೀಗಲೆ ನಿಶ್ಚಯದ ಮಾತು ॥16॥

ನೀನು ಸುತನೆಮಗಲ್ಲ ನಿಜವಿದು । ಕ್ಷೋಣಿಯಲಿ ಕಾರಣಿಕ ಪುರುಷನು । ನೀನೆ ಯೆನ್ನಯ ಕುಲದ ದೈವತ ಭೇದವೇನಿದಕೆ ॥

ಸಾನುರಾಗದಿ ನಿನ್ನ ವಚನವ । ನೀನೆ ಪಾಲಿಸು ಪುತ್ರರಾದರೆ । ನಾ ನಿರೋಪವ ಕೊಡುವೆನೆಂದಳು ಜನನಿ ಕಣ್ತುಂಬಿ ॥17॥

ಮಾತೆಯಾಡಿದ ನುಡಿಯ ಕೇಳ್ದನು । ಆ ತತೂಕ್ಷಣ ಜನನಿಗೆಂದನು । ಮಾತೆಯೊಂದೇ ವರುಷವಿರುವೆನು ನಿನ್ನ ಮನೆಯೊಳಗೆ ॥
ಆತನಕ ನಿನಗೆರಡು ಮಕ್ಕಳ । ಭೂತನಾಥನು ದಯವ ಪಾಲಿಪ । ಪ್ರೀತಿಯಲಿ ನೀನವರ ಪಾಲಿಸು ಮಾತ ಸಲಿಸೆನ್ನಾ ॥18॥

ಎರಡು ಮಕ್ಕಳು ಜನಿಸಿದಾಕ್ಷಣ- । ಕಿರೆನು ನಾನರೆನಿಮಿಷವಾದರು । ತೆರಳುವೆನು ತೀರ್ಥಾಟಣಕ್ಕಾಶ್ರಮದ ಧರ್ಮದಲಿ ॥
ಮರಳಿ ನಿನ್ನಾ ಗ್ರಹವ ಕೇಳೆನು । ಪರಿಕಿಸೆನ್ನೀ ಮಾತನೆನ್ನುತ । ಚರಣಕೆರಗುತ ಮಾತೆಯನು ಸಂತೈಸಿದನು ಮುದದಿ ॥19॥

ವರುಷದವಧಿಯ ಕೊಟ್ಟು ತಾಯಿಗೆ । ನರಹರಿಯು ಪಿತೃಗೃಹದೊಳಿದ್ದನು । ಪರಮ ಸಂತೋಷದಲಿ ತಾಯಿಯು ಹರಿಸಿ ಹಾಡಿದಳು ॥
ಪುರದ ಭೂಸುರವೃಂದವೆಲ್ಲವು । ಬರುತಲಿದ್ದುದು ವೇದಪಠಣಕೆ । ನರಹರಿಯು ವೇದಾಧ್ಯಯನದಲಿ ವರುಷ ನೂಕಿದನು ॥20॥

ಏಳು ವರುಷದ ತನಕ ಮೂಕನು । ಬಾಲನೆಂತೀ ವೇದಪಠಣವ । ಹೇಳುವನು ಬಹುಚೋದ್ಯವಿದು ವೇದಾಂತ ನುಡಿಯುವನು ॥
ಭಾಳಲೋಚನ ಬಂದನೋ ಜಗ- । ದೇಳಿಗೆಯ ವ್ರತ ಧರಿಸಿ ಯೆನುತಲಿ । ಲೀಲೆಯನು ಮಾತಾಡುವರು ತಮ್ಮೊಳಗೆ ಬುಧನಿಕರ ॥21॥

ನಾಕು ವೇದವನಾರು ಶಾಸ್ತ್ರವ । ನೇಕ ಭಾವದಿ ಪಾಠ ಕಲಿಪ ವಿ- । ವೇಕತನಕೇನೆಂಬೆ ಬಂದರು ಸಕಲ ಬುಧಜನರು ॥
ಜೋಕೆಯಿಂದ ತ್ರಿಕಾಲಪಠಣವ । ಸಾಕು ಸಾಕೆಂಬುವ ತನಕ ಕೇ- । ಳಾ ಕರುಣನಿಧಿ ಬೋಧಿಪನು ವಿದ್ವಜ್ಜನರ ಮುಂದೆ ॥22॥

ತಂದೆತಾಯ್ಗಳು ಮನದಿ ಹಿಗ್ಗುತ । ಕಂದನಿವನ ಸಮಾನ ಪುರುಷನು । ಇಂದುಮೌಳಿಯ ಪೂಜೆ ಫಲಿಸಿತು ಜನ್ಮವೆರಡರಲಿ ॥
ಎಂದು ಮನದಲಿ ನೆನಿಸಿ ಮಾನಸ । ದಿಂದ ಪೂಜೆಯ ಮಾಡುತಿದ್ದರು । ನಂದನನ ಮುದ್ದಾಡುತಿದ್ದರು ವರುಷದವಧಿಯಲಿ ॥23॥

ಧರಿಸಿದಳು ಗರ್ಭವನು ತಾಯಿಯು । ಗುರುಪ್ರಸಾದದ ಫಲವು ತಿಂಗಳು । ಭರಣವಾಗಲು ತಾಯಿ ಹಡೆದಳು ಪುತ್ರಯುಗ್ಮವನು ॥
ಹರುಷವನು ನಾನೆಂತು ಬಣ್ಣಿಪೆ । ಹರಸಿದಳು ಬಾಲನನು ತನ್ನಯ । ನರಹರಿಯು ನರವೇಷಧಾರಿ ಪಿನಾಕಿ ಹರಿ ಯೆಂದು ॥24॥

ಗುರುವಚನ ಸಟೆಯಲ್ಲಿ ಭಾವದ । ಪರಿಯಲ್ಲೈ ಸತ್ಫಲವು ಬರುವುದು । ವರುಷವಾಯಿತು ಮೇಣು ತಿಂಗಳು ಮೂರು ಹೋದುವಲಾ ॥
ತರಳ ನರಹರಿ ಯೆಂಟು ವರುಷದ । ಪರಮವಟು ತಾಯಡಿಗೆ ಬಂದನು । ಸ್ಮರಣೆ ಕೊಟ್ಟನು ತನ್ನ ಪೂರ್ವದ ಭಾಷಣದ ಪರಿಯಾ ॥25॥

ಜನನಿ ಕೇಳೌ ನಿನ್ನ ಬಯಕೆಯ । ತನುಜರಾದರು ಯುಗಳರೀ ನಂ- । ದನರು ಪೂರ್ಣಾಯುಷಿಗಳೈ ಮೇಣೆಬ್ಬರಾಗುವರು ॥
ತನುಜೆಯೊಬ್ಬಳು ನಂತರದಿ ಸಂ- । ಜನಿಸುವಳು ನೀವಿಲ್ಲಿ ಸೌಖ್ಯವ- । ನನುಭವಿಸುವಿರಿ ಪುತ್ರಪೌತ್ರಾದಿಗಳ ಸಂಪತ್ತಾ ॥26॥

ಕೊಡು ನಿರೋಪವನೀಗಲೆನಗೀ । ಜಡಶರೀರದ ಸಾರ್ಥಕವನಾ । ಹುಡುಕುವೆನು ತೀರ್ಥಾಟಣದಿ ಮೇಣ್ ಬ್ರಹ್ಮಚರ್ಯದಲಿ ॥
ಮಡದಿಮಕ್ಕಳ ಮಮತೆಯಿಲ್ಲದೆ । ಬೆಡಗಿನಿಂ ಭಕ್ತರನು ರಕ್ಷಿಪೆ । ಪೊಡವಿಯಲಿ ನಾ ದೇಶಸಂಚಾರವನು ಮಾಡುವೆನು ॥27॥

ಎಂದು ಪೇಳಿದ ನುಡಿಯ ಕೇಳ್ದರು । ತಂದೆತಾಯ್ಗಳು ತುಂಬಿ ಕಂಬನಿ । ಯೆಂದರನನಿಗೆ ಸುತ ಶಿರೋಮಣಿಯೆಮ್ಮ ಮರಿಯಾನೆ ॥
ನಂದನನೆ ನೀನೆಮ್ಮ ಕುಲಗುರು । ಕಂದನಲ್ಲಾ ಕುಲಗಳೆರಡನು । ಮುಂದೆ ತರುತಿಹ ಜ್ಯೋತಿ ವರ್ಣಿಸಲಾರೆವೈ ನಿನ್ನಾ ॥28॥

ತಿಳಿಯಲಾರೆವು ನಿನ್ನ ರೂಪವ । ತಿಳಿಯಲಾರೆವು ನಿನ್ನ ಮಹಿಮೆಯ- । ನಿಳೆಯೊಳಗೆ ಮಾಯಾನುವೇಷ್ಟ ನರರರೆ ನಾವಿನ್ನು ॥
ಎಳೆಮಗುವು ನೀನೆಂದು ನಿನ್ನನು । ಭಲಭಲತೆ ಮಾತಾಡಿ ಹೊಡೆದೆವು । ಕುಳಿತೆವೈ ಭೂಮಿಯಲಿ ನಿನ್ನನು ಕಡೆಯಲೇರಿಸದೆ ॥29॥

ಶಿವನಪೂಜಿಸಿ ಪಡೆದೆ ನಿನ್ನನು । ಕುವರ ತ್ರಿಜಗಕೆ ವಂದ್ಯಮೂರ್ತಿಯ । ಭವವಿಷಾಹಿಗೆ ಗರುಡನಂತಿಹ ಪುಣ್ಯಪಾವನನಾ ॥
ಜವನನೋಡಿಪ ನಿನ್ನ ನಾಮವ । ಕವಚಧಾರಿಯ ಕೇಳು ನಿನ್ನನು । ಶಿವ-ಶಿವಾ ನಾ ಬೈದೆ ಮೂಕನೆನುತ್ತ ಬಾಲ್ಯದಲಿ ॥30॥

ಸಗರಪುತ್ರರನುದ್ಧರಿಸಲಾ । ಜಗಕೆ ಪಾಪವಿನಾಶಿ ಗಂಗೆಯು । ಸಗುಣ ರೂಪದಿ ಬಂದು ಜಗದುದ್ಧಾರ ಮಾಡಿದಳು ॥
ಮಗನೆ ನೀನದರಂತೆ ಬಂದೀ । ಜಗದುದ್ಧಾರವನು ಮಾಡುವ । ಸಗುಣರೂಪ ತ್ರಿಮೂರ್ತಿಯವತಾರವೆ ಕಣಾ ನೀನು ॥31॥

ನಿನ್ನ ಪಾವನ ಚರಣ ಕಂಡೆವು । ಯಿನ್ನು ಮುಕ್ತಿಯ ಕೊಟ್ಟು ಸಲಹೈ । ಬನ್ನ ಬಟ್ಟೆವು ಬಂದು ನಾನಾ ಯೋನಿಜನ್ಮದಲಿ ॥
ಸನ್ನುತಾತ್ಮನೆ ಮುಂದೆ ನಮಗತಿ- । ಖಿನ್ನತೆಯ ಮಾಡದಲೆ ಪೇಳೈ । ಇನ್ನು ದರ್ಶನವೆಂದಿಗಾಗುವುದೆಂದಳಾ ಜನನಿ ॥32॥

ಜನನಿಯಾಡಿದ ನುಡಿಯ ಕೇಳ್ದನು । ಮನದಿ ಹರುಷವ ತಾಳಿ ಪೇಳ್ದನು । ಜನನಿ ಯೆನ್ನಯ ಸ್ಮರಣಮಾತ್ರದಿ ದರ್ಶನವನೀವೆ ॥
ನಿನಗೆ ಮೂರರ್ಭಕರು ಪುಟ್ಟುವ- । ರಿನಿತು ಸಂದೇಹವನು ಮಾಡದೆ । ಮನದಿ ನಿಶ್ಚಯ ಧರಿಸಿ ಕೊಡು ಯೆನಗೀಗ ಸಮ್ಮತಿಯಾ ॥33॥

ಹರನ ಪೂಜೆ ಪ್ರದೋಷಕಾಲದಿ । ವಿರಚಿಸಿದ ಕಾರಣದಿ ನಾನೀ- । ಧರೆಯೊಳವತಾರವನು ತಾಳ್ದೆನು ನಿನ್ನ ಭಾಗ್ಯವಿದು ॥
ಮರೆಯದಿರು ವಂಶದಲಿ ನಿನ್ನಯ । ನಿರತ ಲಕ್ಷ್ಮಿಯ ವಾಸ ದೈನ್ಯದ । ಹರಣ ಹರ ಪೂಜನದ ಫಲಗಳು ಜನುಜನುಮದಲಿ ॥34॥

ಸ್ಮರಣ ಮಾಡಲು ನಿನ್ನಹತ್ತರ । ಬರುವೆನಾಕ್ಷಣ ನಿಜದಿ ತಾಯಿಯೆ । ಬರುವೆನಿಪ್ಪತ್ತೊಂದು ವರುಷಕೆ ನಿನ್ನ ದರ್ಶನಕೆ ॥
ತೆರಳುವೆನು ನಾನೀಗ ಕೇಳೌ । ಪರಮಪಾವನ ಬದರಿಕಾಶ್ರಮ- । ಕಿರದೆ ನೋಡುವೆನಲ್ಲಿ ಸಿದ್ಧನ ಪರಮಪಾವನನಾ ॥35॥

ಎನುತ ಪೇಳ್ದ ಜನನಿಜನಕಗೆ । ತನುಜ ಪುರದಿಂ ಪಯಣ ತೆಗೆದನು । ಮನುಜರೆಲ್ಲರು ಹಿಂದೆಬಂದರು ಪ್ರೇಮಭಾವದಲಿ ॥
ಅಣುಗನನು ಕಳುಹಿಸುವ ತಾಯಿಗೆ । ಮುನಿದು ಬೈದರು ಬಾಲ ಬದರೀ । ವನದ ಯಾತ್ರೆಯನೆಂತು ಮಾಳ್ಪನೆನುತ್ತ ಬೆದರಿಸುತಾ ॥36॥

ಏಳುವರುಷದ ಮೂಕ ಬಾಲನು । ಪೇಳಿದನು ವೇದಗಳಚೋದ್ಯವು । ಲೀಲೆ ತೋರುವ ಭಾಳಲೋಚನನೋ ವಿನಾಯಕನೋ ॥
ಬಾಲಕನು ಸಾಮಾನ್ಯ ಪುರುಷನೆ । ಕಾಲನನು ಜಯಿಸನೆ ಕಣಾ ಕರು । ಣಾಳು ಮೂರ್ತಿಯಿದೆಂದು ಕೊಂಡಾಡಿದುದು ಬುಧನಿಕರಾ ॥37॥

ಕೆಲರು ತಾಯ್ತಂದೆಗಳ ಬೈದರು । ಎಳೆಮಗನ ನೂಕುವರು ವನಕೆಂ- । ದುಳಿದವರು ಚೋದ್ಯವನು ತೋರಿಸಿ ಚಿಂತಿಪರು ಮನದಿ ॥
ಕೆಲರು ಬಾಲನ ಕರೆದು ಮುದ್ದಿಸಿ । ತೊಲಗುವರು ಕಣ್ಣೀರ ಸುರಿಸುತ । ಕೆಲರು ಸಾಷ್ಟಾಂಗಪ್ರಣಾಮವ ಮಾಡುವರು ಮುದದಿ ॥38॥

ಪುರದ ಜನರನ್ನು ಬೀಳು ಕೊಟ್ಟನು । ನರಹರಿಯು ಮುಂದಕ್ಕೆ ನಡೆಯಲು । ಪರಮ ದುಗುಡದಿ ತಂದೆತಾಯ್ಗಳು ಮುಂದರಿಸಿ ಬರಲು ॥
ಮರಳಿ ಕಳುಹಿಸಿ ಕೊಡುವ ಸಮಯದಿ । ಧರಿಸಿದನು ನಿಜರೂಪವನು ಮನ । ಹರುಷವಾಯಿತು ಧನ್ಯರೆಂತೋ ಜನಕಜನನಿಯರು ॥39॥

ನೋಡಿದರು ಶ್ರೀಪಾದವಲ್ಲಭ । ರೂಢಿಗವತರಿಸಿದ ತ್ರಿಮೂರ್ತಿಯ । ಮಾಡಿದರು ನಮನವನು ಮೃಡನಿಗೆ ಬಾಲರೂಪನಿಗೆ ॥
ಮೂಡಿದುದು ಪೂರ್ವಾರ್ಜಿತವು ಯೆಮ । ಗಾಡಲಸದಳ ನಿನ್ನ ಮಹಿಮೆಯ । ನೋಡಿದೆವು ತವ ಚರಣಕಮಲವನೆಂದು ಹಾಡಿದರು ॥40॥

ತಾರಕನಲಾ ಸರ್ವವಿಶ್ವೋ । ದ್ಧಾರನಲ್ಲಾ ನೀನು ಸಗುಣದ । ಮೂರುತಿಯ ತೋರಿಸಿದಿ ಭವಸಾಗರನ ದಾಟಿಸಿದೆ ॥
ಭಾರಿ ಭಾಗ್ಯವಿದೆಮ್ಮದಿಂದೀ । ಧಾರುಣಿಯೊಳವತರಿಸಿ ನೀನು ಕು । ಮಾರನಾದ್ಯೆ ಕೊಡು ನಮಗೆ ದರ್ಶನವ ತಿರುತಿರುಗಿ ॥41॥

ಎಂದು ತಾಯ್ತಂದೆಗಳ ನುಡಿಯನು । ಕಂದನಾಲಿಸುತೆಂದ ಜನನಿಯೆ । ಮುಂದೆ ದರ್ಶನ ಕೊಡುವೆ ಸಂಶಯಬೇಡ ನಿನಗೀಗ ॥
ಮಂದಿರಕೆ ನೀವೀಗ ತೆರಳಿರಿ । ಯೆಂದು ಬಿಗಿದಪ್ಪಿದನು ಜನನಿಯ । ಸುಂದರಾಂಗನು ಯೆಂಟು ವರುಷದ ಹಸುಳೆ ಮನಮರುಗೆ ॥42॥

ಇಂತು ನರಹರಿ ತಂದೆತಾಯ್ಗಳ । ಸಂತವಿಟ್ಟನು ಬಳಿಕ ವೇಗದಿ । ಪಂಥವಿಡಿದನು ಮುಂದೆ ನಡೆದನು ಪುರನ ಹೊರವಂಟು ॥
ಚಿಂತಿತವ ಕೊಡುತಿರುವ ಪಾಪದ । ನಂತರಾಶಿಯ ಹತ್ತಿಗಾ ಶಿಖಿ- । ಯಂತೆಸೆವ ಆನಂದಕಾನನಕಾಗಿ ನಡೆತಂದ ॥43॥

ಧಾರುಣಿಯೊಳೀ ವಾರಣಾಸಿಯು । ಭೂರಿದುರಿತವಿನಾಶಿ ಸ್ನಾನದಿ । ತೋರಿಪುದು ಸನ್ಮುಕ್ತಿ ಪುಣ್ಯದರಾಶಿ ಭವದ್ವೇಷಿ ॥
ಮಾರಹರ ವಿಶ್ವೇಶ್ವರನು ಕೃಪೆ । ದೋರಿ ವಾಸಿಪನಿಲ್ಲಿ ಜಗದು- । ದ್ಧಾರಕಾಗಿಯೆ ನಡೆದನಲ್ಲಿಗೆ ನರಹರಿಯು ಮುದದಿ ॥44॥

ನರಹರಿಯು ಕೆಲಕಾಲ ವಿಶ್ವೇ- । ಶ್ವರನ ದರ್ಶನದಿಂದ ತಪವಾ- । ಚರಿಸಿದನು ಭಕ್ತಿಯಲಿ ಕೇಳಷ್ಟಾಂಗ ಯೋಗದಲಿ ॥
ಇರುವರಾಸ್ಥಾನದಲಿ ನಾನಾ । ಪರಿಯ ಸನ್ಯಾಸಿಗಳು ತಾಪಸ । ವರರು ಕೇಳವಧೂತಪಂಥರು ಯೋಗಸಾಧಕರು ॥45॥

ಕಾಶಿಪುರದೊಳಗಿರುವ ವರಸ । ನ್ಯಾಸವರ್ಗದೊಳೀತನೇ ಸ- । ನ್ಯಾಸಿ ಬಾಲಬ್ರಹ್ಮಚಾರಿಯು ಬಾಲರವಿತೇಜಾ ॥
ಕೂಸಿವನು ಮಾಡುವನು ಯೋಗಾ- । ಭ್ಯಾಸವೆಂತುಟೊ ಯೆನುತ ಮನದಿ ವಿ- । ಶೇಷವಚ್ಚರಿಪಟ್ಟರೈ ಸನ್ಯಾಸಿವೃಂದವದು ॥46॥

ಬಾಲನಿವನೀ ಭೂಮಿಯೊಳಗಾ- । ಬಾಲರವಿಯಂತಿಹನು ನೋಡು ತ್ರಿ- । ಕಾಲ ಗಂಗಾಸ್ನಾನಮಾಳ್ಪನು ಯೋಗಿರಾಜನಲಾ ॥
ಶೀಲದಲಿ ವೈರಾಗ್ಯ ಮೂರ್ತಿಯು । ಬಾಲಸನ್ಯಾಸಿಯು ಯೆನುತ್ತಲಿ । ಬಾಲಕನ ಕೊಂಡಾಡಿ ಸ್ತುತಿಸಿದರೆಲ್ಲ ಯತಿವರರು ॥47॥

ಆ ತಪಸ್ವಿಯರೊಳಗೆ ಸುವಯಾ- । ತೀತ ಕೃಷ್ಣ ಸರಸ್ವತಿಯು ಮುನಿ- । ವ್ರಾತಕೆಂದ್ರನು ಬಾಲನಲ್ಲಾ ಯೋಗಿರಾಜನಿವಾ ॥
ಭೂತಳದಿ ನರವೇಷಧಾರಿಯು । ಭೂತಪತಿಯವತಾರ ಭಕ್ತ । ವ್ರಾತಸಂರಕ್ಷಕನು ನಮಿಸಿರಿ ಪ್ರೇಮಭಾವದಲಿ ॥48॥

ನಾನಹುದು ವಯಸಿನಲಿ ವೃದ್ಧನು । ಕ್ಷೋಣಿಯಲ್ಲೀ ಬಾಲನಿವನ ಸ- । ಮಾನರನು ನಾ ಕಾಣೆ ಜ್ಞಾನದಿ ಬಾಲ ವಂದ್ಯನಿವಾ ॥
ಮಾನ್ಯನಿಹನೀ ಬಾಲನೆನಗೈ । ಮಾನಿಸುವೆ ವಂದಿಸುವೆ ತ್ರಿಭುವನ । ಮಾನ್ಯನಿಗೆ ತಾನೆಂದು ನುಡಿದನು ಕೃಷ್ಣಸರಸತಿಯು ॥49॥

ಗುರುವಿವನು ತ್ರಿಭುವನಕೆ ಕೇಳಿರಿ । ಪರಮಪಾವನಮೂರ್ತಿ ಪತಿತರು । ದರುಶನದ ಮಾತ್ರದಲಿ ಪಾವನರಾಗುವರು ನಿಜವು ॥
ತೆರಳಿ ನೀವೆಲ್ಲರು ನುಡಿಯಿರಾ । ಗುರುಚರಣಕಭಿನಂದಿಸಿರಿ ನೀ । ವಿರದೆ ಬಾಲಬ್ರಹ್ಮಚಾರಿಗೆ ಯೆಂದನಾ ಯತಿಯು ॥50॥

ಎಂದು ಕಾಶಿಯೊಳಿರುವ ತಾಪಸ । ವೃಂದವೆಲ್ಲವು ಬಾಲನರಹರಿ । ಗೆಂದರೈ ಸನ್ಯಾಸವನು ನೀ ಕೊಳ್ಳು ಪ್ರೀತಿಯಲಿ ॥
ವಂದಿಸುವೆವಾವೆಲ್ಲ ತ್ರಿಜಗ- । ದ್ವಂದ್ಯ ಮೂರುತಿ ನೀನು ಲೋಕಾ- । ನಂದ ಕಾರಣ ನೀನು ಉದ್ಧರಿಸೆಮ್ಮ ನೀ ಭವದಿ ॥51॥

ಕಲಿಯುಗದೊಳು ನಿಷಿದ್ಧವೆಂಬರು । ಕೆಲರು ಸನ್ಯಾಸವನು ಹಳಿವರು । ತಿಳಿದರೀ ಸನ್ಯಾಸ ನಿಗಮಾಗಮಕೆ ಸಂಮತವು ॥
ಇಳೆಯೊಳಾಚಾರ್ಯ ಶ್ರೀಶಂಕರ । ರೊಲಿದು ಸನ್ಯಾಸವನು ಸ್ಥಾಪಿಸೆ । ಕಲಿಯ ಪ್ರಾಬಲ್ಯದಲಿ ಪುನರಪಿ ನಿಂದ್ಯವೆನ್ನುವರು ॥52॥

ಯತಿಗಳಾಡಿದ ನುಡಿಯ ಕೇಳ್ದನು । ನುತಚರಿತ ನರಹರಿಯು ದೀಕ್ಷೆಯ । ಪತಿಕರಿಸಿದನು ವೃದ್ಧ ಕೃಷ್ಣಸರಸ್ವತಿಯ ಕರದಿ ॥
ಕ್ಷಿತಿಯೊಳಾನಂತರದೊಳವನಿಗೆ । ನುತಿಸಿದರು ನರಹರಿಸರಸ್ವತಿ । ಯತಿಯೆನುತ ಪೆಸರಿಟ್ಟರವನಿಗೆ ಪ್ರೇಮಪೂರ್ವಕದಿ ॥53॥

ಸಿದ್ಧನೀ ಪರಿ ಪೇಳ್ದ ವಚನವ । ಕೇಳುದ್ದ ಸಂಶಯದಿಂದ ಶಿಷ್ಯನು । ಬಿದ್ದನಾಚರಣದಲಿ ಸಂಶಯ ದೂರಮಾಡೆನುತಾ ॥
ಶುದ್ಧ ಪುರುಷನು ನರಹರಿಯು ಜಗ । ವುದ್ಧರಿಸುವವತಾರವಿರಲಾ । ವೃದ್ಧ ಯತಿವರನಿಂದ ದೀಕ್ಷೆಯನೇಕೆ ಕೈಕೊಂಡಾ ॥54॥

ಕೇಳು ಶಿಷ್ಯೋತ್ತಮನೆ ಹಿಂದಿನ । ಕಾಲದಲಿ ಶ್ರೀರಾಮ ರಘುಕುಲ । ಮೌಳಿಗಾದನು ಗುರು ವಶಿಷ್ಠನು ಜಗಪ್ರಸಿದ್ಧವಲಾ ॥
ಮೇಲೆ ಸಂದೀಪನಿಯು ಗುರು ಗೋ- । ಪಾಲಕೃಷ್ಣಂಗಾದನೀಪರಿ । ಬಾಲನರಹರಿಗಾದನ್ಯೆ ಗುರು ಕೃಷ್ಣ ಸರಸತಿಯು ॥55॥

ಎಂದು ಪೇಳಿದ ನುಡಿಯ ಕೇಳ್ದನು । ಚಂದದಿಂದಾ ನಾಮಧಾರಕ । ಮುಂದೆ ಕೇಳ್ದನು ಕೃಷ್ಣಸರಸತಿಗಾರು ಗುರುವೆಂದು ॥
ಹಿಂದಿನಾ ಗುರುಪೀಠಸರಣಿಯ । ನಂದದಿಂ ಪೇಳೆನಲು ನುಡಿದನು । ಚಂದದಿಂದಲಿ ನಾಮಧಾರಕ ಕೇಳು ಪೇಳುವೆನು ॥56॥

ಆದಿಗುರು ಶಂಕರನು ನಂತರ । ಕಾದನಾ ಗುರು ವಿಷ್ಣು ನಂತರ । ವೇದಮೂರ್ತಿ ವಿರಂಚಿ ತದನಂತರ ವಶಿಷ್ಠ ಗುರು ॥
ಆದನಾ ನಂತರಕೆ ಶಕ್ತಿಯು । ವೇದಮೂರ್ತಿ ಪರಾಶರ ವ್ಯಾ- । ಸಾದಿ ಶುಕಮುನಿ ಗೌಡಪಾದನು ಸುಪ್ರಸಿದ್ಧವಲಾ ॥57॥

ಮುಂದೆ ಗುರುಗೋವಿಂದಯತಿಯವ । ನಿಂದಲೇ ಆಚಾರ್ಯಶಂಕರ । ಮುಂದೆ ಪೀಠದಿ ಗುರುವು ಬಂದನು ವಿಶ್ವರೂಪವರ್ಯ ॥
ಮುಂದೆ ಗುರುವಾಜ್ಞಾನಬೋಧನು । ಮುಂದೆ ಶಿಷ್ಯನು ಸಿದ್ಧಗಿರಿಯನು । ಮುಂದೆ ಈಶ್ವರತೀರ್ಥ ನರಹರಿ ತೀರ್ಥರೆಂಬವರು ॥58॥

ಮುಂದೆ ವಿದ್ಯಾತೀರ್ಥ ನಂತರ । ಬಂದ ಶಿವತೀರ್ಥ ಮುಂದಕೆ । ಬಂದ ಭಾರತಿತೀರ್ಥ ನಿದುವೇ ಗುರು ಪರಂಪರೆಯು ॥
ಮುಂದೆ ವಿದ್ಯಾರಣ್ಯ ಶ್ರೀಪದ । ಮುಂದೆ ವಿದ್ಯಾತೀರ್ಥ ಮಲಯಾ- । ನಂದರಾದರು ದೇವ ತೀರ್ಥ ಸರಸ್ವತೀ ವೃದ್ಧ ॥59॥

ಆದನ್ಯೆ ನಂತರಕೆ ಶಿಷ್ಯನು । ಯಾದವೇಂದ್ರಸರಸ್ವತಿಯು ಮೇ । ಣಾದನವನಿಗೆ ಶಿಷ್ಯ ಕೃಷ್ಣ ಸರಸ್ವತಿಯೆ ಇವನು ॥
ಆದನ್ಯೆ ಗುರು ನರಹರಿಗೆ ಕೇಳ್ । ಮೇದಿನಿಯೊಳೀತೆರದ ಸರಣಿಯು । ಆದುದ್ಯೆ ಸಂಸ್ಥಾಪನೆಯು ಸನ್ಯಾಸಗುರುಪೀಠಾ ॥60॥

ಕಾಶಿಯಲ್ಲಿಯ ಯತಿಗಳೊಳು ಸ- । ನ್ಯಾಸ ದೀಕ್ಷೆಗೆ ವೃದ್ಧಯೋಗ್ಯನು । ಭೂಷಣನು ಯತಿಕುಲಕೆ ಕೃಷ್ಣ ಸರಸ್ವತಿಯು ನಿಜವು ॥
ತೋಷದಿಂದವನಿಂದ ದೀಕ್ಷೆಯ । ನ್ಯಾಸವನು ಕೈಕೊಳಲು ಖ್ಯಾತಿಯು । ದೇಶದೇಶದೊಳಾಯ್ತು ಬಂದರು ಹಲವರವನೆಡೆಗೆ ॥61॥

ವೇದಶಾಸ್ತ್ರವನರ್ಥಭಾಷ್ಯವ । ಮೋದದಿಂದಲಿ ಪೇಳುವನು ನಿಜ । ಬೋಧ ತತ್ವಾರ್ಥವನು ವಿವರಿಸಿ ಹೇಳುವನು ಮೇಣು ॥
ಆದರೈ ಬಹು ಶಿಷ್ಯರವನಿಗೆ । ಹೋದನ್ಯೆ ಬಳಿಕವನು ಶಿಷ್ಯರ- । ನಾದರದಿ ಕೂಡುತ್ತ ಬದರೀವನಕೆ ಉತ್ತರಕೆ ॥62॥

ಮೇರುಗಿರಿ ಸುತ್ತಲು ಪ್ರದಕ್ಷಿಣೆ । ಭಾರಿಭಕ್ತಿ ಪುರಃಸರದಿ ತಾ । ತೀರಿಸಿದರೆ ಮುಂದೆ ಗಂಗಾಸಾಗರ ಕೆ ಬಂದು ॥
ಧಾರುಣಿಯೊಳಿಹ ಸರ್ವತೀರ್ಥವ । ಸೇರಿ ಸ್ನಾನವ ಮಾಡಿ ಬಂದರು । ಚಾರುಗುಣಸಂಪನ್ನ ಶಿಷ್ಯರ ಕೂಡಿ ನರಹರಿಯು ॥63॥

ಸಾಗರದ ಮೇಲಿಂದ ಬರಲು ಪ್ರ । ಯಾಗ ಪುಣ್ಯ ಕ್ಷೇತ್ರವನು ನಿಗ । ಮಾಗಮೋಕ್ತದಿ ಮಾಡಿ ಕೆಲದಿನರಿದ್ದರವರಲ್ಲಿ ॥
ಆಗ ಬಂದನು ಭೇಟಿಯಾದನು । ಶ್ರೀಗುರುವನೋಲೈಸಿ ದೀಕ್ಷೆಯ । ವೇಗದಿಂದಲಿ ಮಾಧವಾಖ್ಯನು ದ್ವಿಜನು ಪಡೆದನಲಾ ॥64॥

ಧರಣಿಯಲಿ ತೀರ್ಥಾಟಣವ ತಾ । ವಿರಚಿಸುತ ಯಾತ್ರೆಯನು ಮಾಡಲು । ನರಹರಿಗೆ ಬಹು ಶಿಷ್ಯರಾದರು ದೇಶದೇಶದಲಿ ॥
ಇರುವನೀ ಮಾಧವಸರಸ್ವತಿ । ಪರಮ ಶಿಷ್ಯೋತ್ತಮನು ಕಥೆಯಿದ- । ನರುಹಿ ಕೇಳ್ದರೆ ಸಿದ್ಧಿಯಪ್ಪುದು ವಿಷ್ಣು ವಚನದಲಿ ॥65॥

॥ ಅಧ್ಯಾಯ 12 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 13

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ತಿರುಗಿ ನಾನಾ ತೀರ್ಥಗಳ ನರ- । ಹರಿಯು ಕಂಡನು ತಂದೆತಾಯ್ಗಳ । ಪರಿಹರಿಸಿದನು ದ್ವಿಜನ ಕುಕ್ಷಿವ್ಯಥೆಯ ಬಾಧೆಯನು॥

ಕರಗಳೆರಡನು ಜೋಡಿಸುತ ಪದ- । ಕೆರಗಿ ಬಿನ್ನೈಸಿದನು ಸಿದ್ಧಗೆ । ಪರಮ ಶಿಷ್ಯಶಿರೋಮಣಿಯು ತಾ ನಾಮಧಾರಕನು ॥
ಪರಮ ಧನ್ಯನು ನಾನು ಭವಸಾ- । ಗರದಿ ಜ್ಞಾನಾಮೃತವನುಣಿಸಿದೆ । ದೊರೆಯಿತೈ ಸುಖದಾಗರವು ಶ್ರೀಗುರುಚರಿತ್ರವಿದು ॥1॥

ಗುರುಚರಿತ್ರಪಿಯೂಷಸೇವನ । ವರರೆ ತೃಷ್ಣೋದ್ದೀಪಕವಲಾ । ತಿರು ತಿರುಗಿ ಕುಡಿಸುವ ಮಹಾತ್ಮನು ನೀನೆ ಈ ಜಗದಿ ॥
ಗುರುಚರಿತ ಸುರಧೇನು ನೀನೆನ । ಗರುಹಿದೆಯಲಾ ತೃಷ್ಣೆ ಮುಂದಕೆ । ಹರಿಯುವದು ಉಪಶಮನವಾಗದು ಚೋದ್ಯವಿದನೋಡು ॥2॥

ಹೊಟ್ಟೆ ಹಸಿವೆಯ ತಾಪದಿಂ ಕಂ- । ಗೆಟ್ಟು ಬಳಲುವ ಬಡ ದನಗಳಿಗೆ । ದೃಷ್ಟಿ ಬೀಳಲು ತೃಣ ಸಮೃದ್ಧಿಯ ಬಿಟ್ಟು ಪೋಗುವುವೆ ? ॥
ದೃಷ್ಟಿಗೋಚರವಿಲ್ಲ ಮಜ್ಜಿಗೆ । ಥಟ್ಟನವನಿಗೆ ಹಾಲುಗಡಿಗೆಯ । ಕೊಟ್ಟರನ ಕೈಯಿಂದ ಬಿಡುವನೆ ಹಾಲುಗಡಿಗೆಯನು ॥3॥

ಗುರುಚರಣ ಸದ್ಭಕ್ತಿಯನು ನಾ- । ನರಿಯದಿದ್ದೆನು ತಿಮಿರಜಲಧಿಯೊ- । ಳರರೆ ಮುಳುಗುತ ತೇಲುತ್ತಿದ್ದೆನು ದಿಶೆಯ ಕಾಣದಲೆ ॥
ಮರುಗುತಿದ್ದೆನು ನಾನು ಮಾಯಾ- । ವರಣವೇಷ್ಟಿತನಾಗಿ ತವ ಸಂ- । ದರುಶನವು ಯೆನಗಾಯ್ತು ಭಾಗ್ಯೋದಯದ ಶುಭಚಿಹ್ನ ॥4॥

ತರಣಿನೀನಜ್ಞಾನ ರಜನಿಗೆ । ಪರಮ ಚಿಜ್ಯೋತಿಸ್ವರೂಪದ । ಗಿರಿಯಲಾ ಸದ್ಗುರುಸ್ವರೂಪವ ನೀನೆ ಬೋಧಿಸಿದೆ ॥
ತಿರುಗಿ ಪ್ರತ್ಯುಪಕಾರ ಮಾಡುವ । ಪರಿಯ ಕಾಣೆನು ನಾನು ಕೇಳೈ । ಸುರತರುವನಿತ್ತವಗೆ ನಾ ಕೊಡಲೇನು ಪ್ರತಿದಾನಾ ॥5॥

ಬಿಡದೆ ಚಿಂತಾಮಣಿಯನಿತ್ತವ । ಗುಡುಗೊರೆಯ ನಾನೇನು ಮಾಡಲಿ । ಪೊಡವಿಯಲಿ ಸರಿಯಹುದೆ ಚಿಂತಾಮಣಿಗೆ ಬೇರಿನ್ನು ॥
ಸಡಗರದ ನಿನ್ನುಪಕೃತಿಗೆ ನಾ । ಕೊಡುವ ಸಾಧನವೇನು ಕಾಣೆನು । ಕೊಡುವೆನೊಂದೇ ಹಣೆಯ ನಿನ್ನಯ ಚರಣಕಮಲದಲಿ ॥6॥

ಇಂತು ಮಾಡಿದ ಸ್ತುತಿಯ ಕೇಳುತ । ಸಂತಸದಿ ಬಿಗಿದಪ್ಪಿ ಸಿದ್ಧನು । ಪಿಂತೆ ತನ್ನಯ ಕರವನಿಟ್ಟನು ಶಿಷ್ಯ ಮಸ್ತಕದಿ ॥
ಸಂತಸವು ಯೆನಗಾಯ್ತು ಕೇಳ್ನಿ । ನ್ನಂಥ ಶಿಷ್ಯರ ಕಾಣೆ ಮುಂದಿನ । ಚಿಂತಿತಾರ್ಥವನೀವ ಕಥೆಯನು ಪೇಳ್ವೆ ಮೋದದಲಿ ॥7॥

ಧನ್ಯ ನೀನೇ ಶಿಷ್ಯ ಸಗುಣ ಭ- । ವಾರ್ಣವವ ದಾಟುವ ಮಹಾತ್ಮನು । ನಿನ್ನ ಸಂಸರ್ಗದಲಿ ನನಗಾನಂದವಾಯಿತಲಾ ॥
ಮುನ್ನ ಕೇಳು ಪ್ರಯಾಗ ಕ್ಷೇತ್ರದಿ । ತನ್ನ ತಾನೇ ಕೀರ್ತಿ ಹಬ್ಬಿತು । ಬಣ್ಣಿಸೆನು ನಾನೆಷ್ಟು ಶಿಷ್ಯರು ಬಂದರೆಂಬುದನು ॥8॥

ಲೆಕ್ಕವಿಲ್ಲದೆ ಶಿಷ್ಯರಾದರು । ಶಕ್ಯವಲ್ಲಾ ಹೆಸರನೆಲ್ಲವ । ಲೆಕ್ಕಿಸಲು ಕೇಳ್ನಾಮಧಾರಕ ಗುರು ಮಹಿಮೆಯೆಂತೊ ॥
ಸಕ್ಕರೆಯು ತಿನುವುದಕೆ ಸವಿಯಿರ- । ಲಿಕ್ಕುವವು ಮುತ್ತಿಗೆಯನಿರುವೆಗ । ಆಕ್ಕರದ ವಸ್ತುಗಳ ಬಿಡುವರೆ ಮಾನವರು ಜಗದಿ ॥9॥

ಏಳು ಶಿಷ್ಯರ ಹೆಸರ ಪೇಳ್ವೆನು । ಬಾಲಸರಸತಿ ಕಷ್ಣಸರಸತಿ । ಮೇಲೆ ಕೇಳಲುಪೇಂದ್ರಮಾಧವ ಸರಸತಿಯರಿಂತು ॥
ಮೇಲೆ ಜ್ಞಾನಜ್ಯೋತಿ ಸಂಸತಿ । ಮೇಲೆ ಏಳ್ವರೊಳೊಬ್ಬ ನಾನೇ । ಏಳನೆ ಸದಾನಂದ ಸರಸತಿ ಶಿಷ್ಯರಾದರಲಾ ॥10॥

ಶಿಷ್ಯರನ್ನೊಡಗೂಡಿ ಗುರುಸಂ । ಪ್ರೇಕ್ಷ್ಯ ತೀರ್ಥಂಗಳನು ತೀರಿಸಿ । ಕಶ್ಯಪಾದಿ ಸಮಸ್ತಋಷಿಯಾಶ್ರಮವ ನೋಡುತಲೆ ॥
ಪ್ರೇಕ್ಷಕರ ಪಾತಕದ ರಾಶಿಯ । ನಿಶ್ಚಯದೆ ಸುಡುಸುಡುತ ತಮ್ಮಯ । ದೀಕ್ಷೆಗನುಸರಿಸುತ್ತ ಬಂದರು ಪುರಕರಂಜಕ್ಕೆ ॥11॥

ಬಂದು ತಾಯ್ತಂದೆಗಳು ಮಗನಿಗೆ । ವಂದಿಸುತ ನರಹರಿ ಸರಸ್ವತಿ- । ಗೆಂದರೈ ಕುಲತಿಲಕ ಬಂದ್ಯೆ ದೇವ ಬಂದೆಯಲಾ ॥
ಬಂಧುಭಗಿನಿಯರೆಲ್ಲ ಬಂದರು । ವಂದಿಸಿದರ್ರೈ ಪ್ರೇಮಭಾವದಿ । ಮಂದಿ ಬಂದರು ಪುರದ ಜನರಾನಂದಭಕ್ತಿಯಲಿ ॥12॥

ನರಹರಿ ಸರಸ್ವತಿಯ ನೋಡಲು । ಪುರದ ಜನರ್ರೈ ತಂದು ಭಕ್ತಿಯೊ- । ಳೆರಗಿ ಪೂಜೆಯ ಮಾಡಿದರು ಸದ್ಭಕ್ತಿಭಾವದಲಿ ॥
ಕರೆದರ್ರೈ ಸ್ವಾಮಿಯನು ತಮ್ಮಯ । ಪರಿಪರಿಯ ಭಿಕ್ಷೆಯನು ಕೊಟ್ಟರು । ಪರಮಪುರುಷನು ವಿಷ್ಣುವೆಂದೇ ಮನದಿ ಭಾವಿಪರು ॥13॥

ಧರಣಿಯೊಳವತರಿಸಿ ವಿಷ್ಣುವು । ಶರಣರನು ಕಾಯುವನು ನರಹರಿ । ನರನಪರಿಯಂತಲ್ಲ ಸಂಶಯ ಬೇಡ ಮನದೊಳಗೆ ॥
ನರಹರಿಯು ನರನೆಂದು ಹೇಳುವ । ನರರು ಜನ್ಮಾಂತರದಿ ಸುಳಿವರು । ನರಕ ಭಾಜನರಾಗಿ ಜಗದಲಿ ನಂಬಿರೀಮಾತಾ ॥14॥

ವಾರಿಜಾಸನ ವಿಷ್ಣು ಹರರೀ । ಮೂರು ಮೂರುತಿ ಸಗುಣ ರೂಪದಿ । ಧಾರುಣಿಯೊಳವತಾರ ಪಡೆದರು ನರಹರಿಯೆಯವರು ॥
ಬೇರೆ ಬೇರೀ ತೆರದಿ ನಿಜ ಸುಕು- । ಮಾರನನು ಪೂಜಿಸಿದರಾಕ್ಷಣ । ತೋರಿ ಬಂತ್ಯೆ ಮನದಿ ತಾಯಿಗೆ ಪೂರ್ವ ಸೂಚಿತವು ॥15॥

ಹರನ ಪೂಜೆ ಪ್ರದೋಷಕಾಲದಿ । ಮರೆಯದಲೆ ಮಾಡೆಂದು ಸೂಚಿಸಿ । ವರದ ಪುತ್ರನ ಲಭಿಪ ವರವನು ಕೊಟ್ಟ ಮೂರುತಿಯ ॥
ಪರಮ ಗುರು ಶ್ರೀಪಾದ ವಲ್ಲಭ । ಚರಣ ಕಮಲವ ನೆನೆದು ಮನದಲಿ । ಸುರಿಸಿದಳು ಸಂತೋಷಬಾಷ್ಪವ ಸತಿಯು ನುಡಿಸುತಲಿ ॥16॥

ಪತಿಯೆ ಕೇಳಾ ಪೂರ್ವಸುಕೃತದ । ಯತಿಯ ವರವನು ಪೇಳ್ವೆಯನಗೀ । ಕ್ಷಿತಿಯೊಳಗೆ ಜಗಮಾನ್ಯ ಪುತ್ರನ ಬೇಡಿದೆನು ಮನದಿ ॥
ಯತಿವರ ಶ್ರೀಪಾದ ವಲ್ಲಭ । ನತಿವಿಲಾಸದಿ ವರವನಿತ್ತನು । ಸುತನಿವನು ತ್ರೈಮೂರ್ತಿ ತ್ರಿಜಗದ್ವಂದ್ಯ ಚರಿತನಲಾ ॥17॥

ಹರುಷದಿಂದಾ ಜನನಿ ಜನಕರು । ಚರಣಕೆರಗಿದರಾಗ ಬೇಡಿದ- । ರರರೆ ಕುಲದೀಪಕನೆ ದಾಟಿಸಬೇಕು ಭವಜಲಧಿ ॥
ನರಹರಿಯು ಕೇಳ್ದಾಗ ನುಡಿದನು । ಬರಿದೆ ಸಂಶಯ ಬೇಡ ಭವಸಾ- । ಗರವ ದಾಟಿದಿರೆನ್ನ ಸನ್ಯಾಸಾಶ್ರಮದ ಫಲದಿ ॥18॥

ನಾಲಕನೆಯಾಶ್ರಮವನೋರ್ವನು । ಬಾಲತನದಲಿ ಸ್ವೀಕರಿಸಲಾ । ಬಾಲನುದ್ಧರಿಸುವನು ನಲುವತ್ತೆರಡುಪಿಢಿಕುಲವಾ ॥
ಕಾಲನನು ಜಯಿಸಿದಿರಿ ಪೂರ್ವಜ । ರೇಳುವರು ಸ್ವರ್ಗಕ್ಕೆ ನರಕದ । ಬಾಳುವೆಯು ತಪ್ಪುವುದು ಸಿಗುವುದು ಬ್ರಹ್ಮಪದವಚಲಾ ॥19॥

ಆದಕಾರಣ ನಾನು ಬಾಲ್ಯ ದೊ- । ಳಾದರಿಸಿದೆನು ದೀಕ್ಷೆಯನು ಕೇಳ್ । ಬಾಧೆ ತಪ್ಪಿತು ನಿಮಗೆ ಶಾಶ್ವತ ಬ್ರಹ್ಮಪದವಹುದು ॥
ಸೋದರರರು ದೀರ್ಘಾಯುವಪ್ಪರು । ಮೇದಿನಿಯೊಳಿದೆ ನೀವು ನೋಡುವಿ- । ರಾದರದ ಸಂತಾನಸಕಲೈಶ್ವರ್ಯವೃದ್ಧಿಯನು ॥20॥

ಅಂತಕಾಲದಿ ಮೋಕ್ಷದಾಯಕ । ಕಂತುಹರ ವಿಘ್ನೇಶ್ವರನ ನಿ- । ಶ್ಚಿಂತೆಯಿಂದಲಿ ನೋಡುವಿರಿ ಕಾಶೀಪುರದಿ ನೀವು ॥
ಇಂತು ಪೇಳುತ ತಂದೆತಾಯ್ಗಳ । ಸಂತವಿಸಲಾ ಭಗಿನಿ ಪಾದದಿ । ಚಿಂತೆಯಿಂದಲಿ ಹೊರಳಿ ಬಿನ್ನಹ ಮಾಡಿದಳು ಹದನಾ ॥21॥

ಕನ್ಯೆ ಬಂದಳು ಗುರುವಿನೆದುರಿಗೆ । ರನ್ನೆ ಯೆಂಬುವ ಹೆಸರಿನಾಕೆಯು । ಬಿನ್ನವಿಸಿದಳು ನರಹರಿಯ ನೋಡುತಲಿ ಪ್ರೇಮದಲಿ ॥
ಅಣ್ಣ ನೀ ಭವಸಾಗರದಿ ನಾ । ಬನ್ನ ಬಟ್ಟೆನು ಕರುಣದಲಿ ನೀ । ನೆನ್ನ ರಕ್ಷಿಸು ತಪವನಾಚರಿಸುವೆನು ನಿನ್ನಂತೆ ॥22॥

ನಗುತ ನರಹರಿ ಪೇಳ್ದನುತ್ತರ । ಭಗಿನಿ ನಿನಗೀ ತಪವು ಸಲ್ಲದು । ಜಗದಿ ತಪ ಪತಿಸೇವೆ ಸ್ತ್ರೀಯರಿಗನ್ಯ ಗತಿಯಿಲ್ಲಾ ॥
ಮುಗುದೆ ಪತಿಸೇವೆಯಲಿಮೋಕ್ಷದ । ಸುಗಮ ಮಾರ್ಗವು ಕೇಳುಯರಡನೆ । ಬಗೆಯ ಕಾಣೆನು ಪತಿಯಸೇವಿಸು ಶಿವನೆನುತ ಮನದಿ ॥23॥

ಸತಿಯ ಭವಸಾಗರದ ತಾರಕ । ಪತಿ ಕಣಾ ಬೇರಿಲ್ಲ ತಾರಣ । ಶ್ರುತಿ ವಚನವಿದು ಯೆನ್ನ ಮತವಿದು ನಂಬು ನೀನಿದನು ॥
ಗತಿಯು ದೊರೆವುದು ನಿನಗೆ ತಪ್ಪದೆ । ಪತಿಯ ಪೂಜಿಸು ಪತಿಯ ವಂದಿಸು । ಪತಿಹೊರತು ಗತಿಯಿಲ್ಲವೆಂದನು ನಗುತ ಸೋದರಿಗೆ ॥24॥

ಗುರುವಚನ ರನ್ನವ್ವೆ ಕೇಳುತ । ಕರಮುಗಿದು ಬೇಡಿದಳು ಕರುಣಾ । ಶರಧಿಯೇ ನೀನಣ್ಣ ಭೂತ ಭವಿಷ್ಯ ತಿಳಿದವನು ॥
ಅರುಹಬೇಕೆನಗೀಗಳೆನ್ನಯ । ದುರಿತ ದೋಷಗಳಿದ್ದರೆನಗದ । ಪರಿಹರಿಪ ಬಗೆ ಹೇಳಬೇಕೆಂದಳು ಸಹೋದರಗೆ ॥25॥

ಭಗಿನಿ ಕೇಳೌ ಕಾಲಲೊದ್ದುತ । ಮುಗುಧೆ ಧೇನುವ ಹೊರಗೆ ನೂಕಿದೆ । ಜಗಳ ಹಚ್ಚಿದೆ ಗಂಡಹೆಂಡರಿಗೇನ ಹೇಳುವೆನು ॥

ಜಗದೊಳದರಿಂ ನಿನ್ನ ಗಂಡನು । ವಗದು ಸಂಸಾರವನು ತಾಪಸ । ಬಗೆಯ ಹಿಡಿವನು ನಿನ್ನ ತಾಪಸ ವೃತ್ತಿಗಿದು ಫಲವು ॥26॥

ಧೇನುವನು ಕಾಲಿಂದಲೊದೆದವ । ಮಾನಮಾಡಿದ ಕಾರಣದಿ ನಿನ । ಗೂನ ಬರುವುದು ದೇಹವೆಲ್ಲವು ಕುಷ್ಟಮಯವಹುದು ॥

ನೀನು ಮಾಡಿದ ಪಾಪ ಕರ್ಮ ಫ । ಲಾನುಸಾರದಿ ನಿನ್ನ ವೃತ್ತಿಯು । ನಾನು ಹೇಳಿದೆನೆಂದು ಮನದೊಳು ಮುನಿಸು ಬೇಡವ್ವಾ ॥27॥

ನುಡಿಯ ಕೇಳುತ ಗುರುವು ಪೇಳಿದ । ನಡುಗಿ ಭಯದಲಿ ಮನದದುಗುಡದೊ । ಳಡಿಗೆರಗಿ ಬಿನ್ನೈಸಿದಳು ನೀನಣ್ಣನಿರಲೆನಗೆ ॥

ಪೊಡವಿ ಸಕಲೋದ್ಧಾರ ಮಾಡುವ । ಮೃಡನಿರಲು ಬೆಂಬಲಕೆ ತಂಗಿಯ । ಬಿಡುವನೇ ನರಕದಲಿ ದೀನೋದ್ಧಾರ ನೀನಿರಲು ॥28॥

ಕೇಳಿದನು ಗುರುರಾಯ ತಂಗಿಯು । ಪೇಳಿದುದನೆಲ್ಲವನು ನಗುತಲಿ । ಬಾಲೆ ಕೇಳೌ ಕೆಲವುದಿನ ಸೌಖ್ಯದಲ್ಲಿ ಕಳೆಯುತಲಿ ॥

ಕಾಲ ಕ್ರಮಿಸಲು ನಿನ್ನ ಪತಿ ಯತಿ- । ಬಾಳುವಿಕೆ ಪತಿಕರಿಸುವನು ನೀ- । ನಾಲಿಸ್ಯೆ ನಂತರದಿ ಕುಷ್ಟವು ಬರುವುದೈ ನಿನಗೆ ॥29॥

ನಂತರದಿ ನೀನೆನ್ನ ದರ್ಶನ । ಕೆಂದು ಬಂದರೆ ದೇಹ ಶುದ್ದಿಯು । ಬಂತೆನುತ ನೀ ನಂಬು ಪಾಪದ ರಾಶಿಯನು ಸುಡುವೆ ॥

ಚಿಂತೆ ಬೇಡೌ ಕ್ಷೇತ್ರ ಮಹಿಮೆಯ । ನೆಂತು ಬಣ್ಣಿಪೆನಲ್ಲಿ ನೀ ಜ । ನ್ಮಾಂತರದ ಪಾಪವನು ತೊಲಗುವೆ ತೀರ್ಥಮಹಿಮೆಯಲಿ ॥30॥

ಇರುತಿಹುದು ದಕ್ಷಿಣದಿ ಗಾಣಗ- । ಪುರವು ಪುಣ್ಯ ಕ್ಷೇತ್ರ ಭೀಮಾ- । ಮರಜೆಸಂಗಮ ಪುಣ್ಯ ಭೂಮಿಯು ರಮ್ಯವಾಸ್ಥಾನಾ ॥

ದುರಿತನಾಶ ಸುತೀರ್ಥವಿಹುದಾ- । ಧರೆಗೆ ಯರಡನೆ ಕಾಶಿಯಂಬುದ- । ನರಿತುಕೋ ನೀನೆಂದು ತಂಗಿಗೆ ನುಡಿದನುತ್ತರವಾ ॥31॥

ಇಂತು ತಂಗಿಯನೊಡಬಡಿಸಿ ಗುರು । ಸಂತಸದಿ ದಕ್ಷಿಣಕೆ ನಡೆದನು । ಕಂತುಹರ ತ್ರ್ಯಂಬಕನ ಪುಣ್ಯಕ್ಷೇತ್ರ ನಾಶಿಕಕೇ ॥

ಕಂತುಹರ ನರ ವೇಷ ಧರಿಸುತ । ಶಾಂತ ಮೂರು ತಿಯಾಗಿ ಸಂಚರಿ- । ಪಂತೆ ನಡೆದನು ತೀರ್ಥ ತೀರ್ಥ ಕೆ ಬಾಲರವಿಯಂತೆ ॥32॥

ಇರುವುದುಗಮವು ಕೇಳು ಗೋದಾ- । ವರಿಯ ನದಿಯಲ್ಲಿಂದ ಪೂರ್ವಕೆ । ಹರಿಯುವುದು ಪಾವನೆ ಪುರಾಣಪ್ರಸಿದ್ಧವಾಸ್ಥಾನಾ ॥
ಹರನ ಜಟೆಯಿಂದುದ್ಭವಿಸಿದಳು । ಧರೆಗೆ ಬಂದಳು ಪುಣ್ಯಪಾವನ । ಸುರನದಿಯ ತೆರನಂತೆ ದಕ್ಷಿಣದೇಶಕಿದು ಗಂಗೆ ॥33॥

ಗೌತುಮಾಶ್ರಮವಿತ್ತು ಪೂರ್ವದಿ । ಖ್ಯಾತಿಯಾಯಿತು ಸರ್ವರಾಷ್ಟ್ರದೊ- । ಳೀತನೇ ಹರಜಟೆಯ ಗಂಗೆಯನಿಳಿಪ ಋಷಿಯೆನುತಾ ॥
ಕೂತು ನಿಶ್ಚಯಿಸಿದರು ಮುಂದಿನ । ಚೇತನೆಲ್ಲವ ರಚಿಸಿ ಋಷಿಗಳು । ಗೌತುಮನ ವಂಚಿಸಿದರೈ ಜಗಕಾಯ್ತು ಕಲ್ಯಾಣ ॥34॥

ಋಷಿಗಳೆಲ್ಲರು ತಮ್ಮ ತಮ್ಮಯ । ಹಸನ ಮಾಳ್ಪರು ಗದ್ದೆಗಳ ತಾ- । ಪಸಿಯು ಗೌತುಮ ನೆಲ್ಲು ಬಿತ್ತಿದನಾ ಪ್ರಕಾರದಲಿ ॥
ವಿಷಮ ಸಂಕಟವವಗೆ ಹಾಕಲು । ಪಶುಪತಿಯ ಗಂಗೆಯನು ತರುವನು । ಅಸಮವಿಕ್ರಮನಿವನು ಬೇರೆಮಗಿಲ್ಲ ಸಾಧನವು ॥35॥

ಎನುತ ಮನದಲಿ ನೆನಿಸಿ ಸರ್ವರು । ಮುನಿಗಳೊಂದೇ ಮನವಿ ಕಲ್ಪಿತ । ದನವ ಕಳುಹಿದರಾಗ ಭತ್ತದ ಬೆಳೆಯ ತಿನಲೆನುತಾ ॥
ಮುನಿಯು ಗೌತುಮ ಮಾಡುತಿದ್ದನು । ದಿನದನುಷ್ಠಾನವನು ಬೆಳೆಯನು । ತಿನುವುದನು ಕಂಡಾಕ್ಷಣದಿ ದರ್ಭದಲಿ ಹೊಡೆದನಲಾ ॥36॥

ಸಹಿಸಲಾರದೆ ದರ್ಭಹತಕವ । ನಹಹ ಧೇನುವು ಸತ್ತು ಬಿದ್ದಿತು । ಮಹಿಯೊಳಗೆ ಗೌತಮಗೆ ಗೋಹತ್ಯವು ಘಟಿಸಿತಲ್ಲೈ ॥
ಕುಹಕಿ ಮುನಿಗಳು ಕೂಡಿ ಸರ್ವರು । ವಿಹಿತ ಕಾರ್ಯವ ಪೇಳ್ದರಾತಗೆ । ಮಹಿಗೆ ಗಂಗೆಯ ತಂದರಪ್ಪುದು ದೋಷ ಪರಿಹಾರಾ ॥37॥

ಆದ ಕಾರಣದಿಂದ ಗೌತಮ- । ನಾದಯಾಂಬುಧಿ ಹರನ ಮೆಚ್ಚಿಸಿ । ಮೇದಿನಿಗೆ ಗಂಗೆಯನು ತಂದನು ಚೋದ್ಯವಾಯಿತಲಾ ॥
ಆದರಿಂದಾ ನದಿಗೆ ಗೌತಮಿ । ಮೇದಿನಿಯೊಳೀ ಹೆಸರನಿಟ್ಟರು । ಸಾಧಿಸಿದರಾ ಋಷಿಗಳೆಲ್ಲರು ಜಗದ ಕಲ್ಯಾಣಾ ॥38॥

ನದಿಯು ಗೋದಾವರಿಯು ದಕ್ಷಿಣ । ಕದುಭುತದ ಯರಡನೆಯ ಗಂಗೆಯು । ಸದೆವುದೈ ಜನ್ಮಾಂತರದ ದುರಿತವನು ಸ್ನಾನದಲಿ ॥
ವಿದಿತವಿಹುದೀ ತತ್ವ ಲೋಕಕೆ । ಅದರಿದನಾ ಗುರುಶಿಷ್ಯರೆಲ್ಲರು । ವದಗಿದರು ಗೌತಮಿಯ ತೀರಕೆ ತೀರ್ಥರಾಜನಿಗೆ ॥39॥

ಗೌತಮೀ ತೀರದಲಿ ಶಿಷ್ಯ । ವ್ರಾತ ಸಹಿತಾ ಗುರುವು ತೀರ್ಥದ । ಯಾತ್ರೆಯನು ಮಾಡುತ್ತ ನಡೆದನು ಲೋಕಸಂಗ್ರಹಕೆ ॥
ಆ ತಟಾಕದಿ ಮುಂದೆ ಬಂದರು । ಮಂಜರಿಕೆ ತೀರ್ಥಕ್ಕೆ ಸದ್ವಿ- । ಖ್ಯಾತ ಮಧ್ವಾರಣ್ಯ ಮುನಿದರ್ಶನವ ಮಾಡಿದರು ॥40॥

ಮುನಿಯು ಮಧ್ವಾರಣ್ಯ ಮಾಳ್ಪನು । ಮನಸಿನೊಳು ನರಹರಿಯ ಮೂರ್ತಿಯ । ನೆನೆದು ಪೂಜೆಯ ಪ್ರತಿದಿನಕೆ ದೃಢಭಾವಭಕುತಿಯಲಿ ॥
ಮನದಿ ಪೂಜಿಪ ಮೂರ್ತಿ ಕಣ್ಣಿಗೆ । ಮಿನುಗಲಾಕ್ಷಣ ವಿಸ್ಮಯದೊಳಾ । ಮುನಿ ನೃಸಿಂಹಗೆ ಭಕ್ತಿಭಾವದಿ ಪೊಗಳತೊಡಗಿದನು ॥41॥

ಯದ್ದ್ವಿ ವ್ಯಪಾದದ್ವಯಮೇವ ಲಕ್ಷಿತಂ । ದೇವೈರ್ನ ದೃಷ್ಟಂ ತದಿದಂ ಸಮೀಪೇ ॥
ಯದುತ್ತರೇ ತೀರನಿವಾಸಮಾನಂ । ಲಕ್ಷ್ಮೀಸಮೀಪೇ ನಿವಸದ್ವಿನೀತಂ॥

ರೂಢಿಯೊಳಗೀ ಪಾದವೆರಡನು । ನೋಡಿದೆನು ನಾನತಿ ಸಮೀಪದಿ । ಗೂಢವಾಗಿಹುವೀ ಪದಂಗಳು ದಿವಿಜ ವೃಂದಕ್ಕೆ ॥
ನೋಡಿದೆನು ವೈಕುಂಠದಲ್ಲಿ ಸ । ಗಾಢ ಲಕ್ಷ್ಮಿಯ ಸನ್ನಿಧಿಯೊಳೋ । ಡಾಡುತಿಹ ಪಾದವನು ಗೋದಾವರಿಯ ತೀರದಲೀ ॥42॥

ಅತ್ಯಂತ ಮಾರ್ಗಸ್ಥಿತಮಾರ್ಗರೂಪಂ । ಅತ್ಯಂತಯೋವೈರಧಿಗಮ್ಯ ತತ್ವಂ ॥
ಮಾರ್ಗಪ್ರದಂ ಮಾರ್ಗವಿಚಿನ್ವತೇ ಮೇ । ಮಾರ್ಗೋದಯೋ ಮಾಧವದರ್ಶನಂ ಚ॥

ವೇದಗೋಚರವಾದ ತತ್ವದ । ಮೇದಿನಿಯೊಳತ್ಯಂತ ದುರ್ಗಮ । ವಾದ ಹಾದಿಯ ತೋರಿಸುವ ಕೈಗಂಬನುರುಚರಣ ॥
ಹಾದಿಯನು ಕೇಳುತ್ತ ನಡೆದಿಹ । ಹಾದಿ ತಪ್ಪಿದ ನನಗೆ ಕೇಳ್ಳೈ । ಮಾಧವನ ದರ್ಶನದಿ ಮಾರ್ಗೋದಯವು ಸಿಕ್ಕಿತಲಾ ॥43॥

ಗುರುವು ನಿಜರೂಪವನ್ನು ತೋರಿಸಿ । ಪರಮ ಸಂತೋಷದಲಿ ಭಕ್ತನ । ಶಿರವ ಕೈಯಿಂದೆತ್ತುತಾಶ್ವಾಸಿಸಿದ ಪ್ರೇಮದಲಿ ।
ಗುರು ಸ್ವರೂಪವ ನೋಡಿ ಮಾಧವ । ಗುರುತರದ ಸಂತೋಷವಾಯಿತು । ಕರಗಳೆರಡನು ಜೋಡಿಸುತ ಸಂಸ್ತುತಿಯ ಮಾಡಿದನು ॥44॥

ಜಯ ಜಗದ್ಗುರು ನೀನು ಮೂ- । ರ್ತಿಯ ವಿನುತವವತಾರ ಭಕ್ತರ । ಜಯದ ಕೀಲಿಯು ನೀನು ಮಾನವವೇಷಧಾರಿಯಲಾ ॥
ಜಯ ಜಗನ್ನಾಥನೆ ಕೃಪಾನಿಧಿ । ಜಯ ಭವಾರ್ಣವ ತಾರಕನೆ ಜಯ । ಜಯತು ನಿನ್ನಯ ಕೀರ್ತಿ ಧನ್ಯನು ನಾನೆ ದರ್ಶನದಿ ॥45॥

ಎಂದು ಮಾಡಿದ ಸ್ತುತಿಯ ಕೇಳ್ದಾ । ನಂದದಿಂದಾ ಗುರುವು ನುಡಿದನು । ಇಂದಿಗಾಯಿತು ಸಿದ್ಧಿ ನಿನ್ನಯ ಮಂತ್ರಸಾಧನಕೆ ॥
ಇಂದು ವರೆಗದು ಪೂಜೆ ಮಾಡಿದ । ಇಂದಿರಾಪತಿ ಮೂರ್ತಿ ನರಹರಿ । ಮುಂದೆ ಸಗುಣಾಕಾರದಲಿ ಪ್ರತ್ಯಕ್ಷ ಕಾಣುವುದು ॥46॥

ಎಂದು ಮಧ್ವಾರಣ್ಯನನುಮತಿ । ಯಿಂದ ಶ್ರೀಗುರು ಸರ್ವಶಿಷ್ಯ । ವೃಂದ ಗಂಗಾತೀರ ಬ್ರಹ್ಮೇಶ್ವರಕೆ ಬಂದರಲಾ ॥
ಮಿಂದು ನದಿಯಲಿ ನಿತ್ಯದಾಹ್ನಿಕ- । ವಂದು ಮಾಡುವ ಸಮಯದಲ್ಲಿ ವಿ-। ಪ್ರೇಂದ್ರನೋರ್ವನು ಬಂದು ತೀರದಿ ನರಳಿ ಹೊರಳಿದನು ॥47॥

ಅನ್ನ ತಿಂದರೆ ಹೊಟ್ಟೆಶೂಲದಿ । ಬನ್ನ ಬಡುತಿಹ ವಿಪ್ರನೋರ್ವನು । ತನ್ನ ಪ್ರಾಕ್ತನ ನೆನೆನೆನೆದು ಬಳಲಿದನು ತೀರದಲಿ ॥
ಅನ್ನ ವರ್ಜಿಸಿ ನಿತ್ಯ ಫಲಗಳ । ತಿನ್ನು ತುಪವಾಸವನು ಮಾಡುವ । ನನ್ನ ವೈರಿಯು ಯೆಂತ ಜೀವಿಪನನ್ನ ಮಯ ಜಗವು ॥48॥

ಒಂದು ಬಾರಿಗೆ ಪಕ್ಷಮಾಸಕೆ । ತಿಂದರನ್ನವನವನು ಲೋಭದೊ । ಳಂದು ಪ್ರಾಣಾಂತಿಕದ ಕುಕ್ಷಿವ್ಯಥೆಯು ಬಾಧಿಪುದು ॥
ಅಂದು ಗುರುವರ ಬರುವ ದಿವಸದ । ಹಿಂದಿನಾದಿನ ಭೋಜನವನವ । ಚಂದದಿಂ ಮಾಡಿರಲು ಕುಕ್ಷಿವ್ಯಥೆಯು ಸುರುವಾಯ್ತು ॥49॥

ತೀರದಲಿ ಭೂಸುರನು ವ್ಯಥೆಯಿಂ । ಭಾರಿ ಸಂಕಟದಿಂದಲುಸುಕಿಲಿ । ಮಾರಮಣ ಹರಿ ಯೆಂದು ಹೊರಳಾಡಿದನು ದುಃಖದಲಿ ॥
ಭಾರಿ ಸಂತಾಪದಲಿ ಬೇಡ ಶ । ರೀರ ವಿದನಾ ತ್ಯಜಿಪೆ ನೀ ಸಂ- । ಸಾರದೊಳಗೇನರ್ಥ ತಾಳೆನು ಹೊಟ್ಟೆಶೂಲೆಯನು ॥50॥

ಅನ್ನವೇ ಜೀವನವು ಜಗದಲಿ । ಅನ್ನವೇ ಪ್ರಾಣಂಗಳಿರಲಾ । ಅನ್ನವನ್ನು ಬಿಟ್ಟಾರು ಜೀವಿಪರೆಲ್ಲವೀ ಜಗದಿ ॥
ಅನ್ನವೆನಗೀ ವೈರಿಯಾಗಿರ । ಲಿನ್ನು ಮರಣವೆ ಲೇಸು ಕೇಳೇ- । ಕಿನ್ನು ಜೀವವ ತೊರೆವೆ ಬದುಕಿನ್ನೇನು ಫಲವಿಹುದು ॥51॥

ಮಾಡಲಿಲ್ಲೈ ದಾನಧರ್ಮವ । ಮಾಡಲಿಲ್ಲ ಪರೋಪಕಾರವ । ಮಾಡಲಿಲ್ಲೈ ಯನ್ನ ಸಂತರ್ಪಣ ವಿಧಾನವನು ॥
ರೂಢಿಗಾದೆನು ಭಾರವೆನ್ನಯ । ಪಾಡು ಈಪರಿಯಾಯ್ತು ಯೆನ್ನನು । ಕಾಡುತಿಹುದೀ ವ್ಯಾಧಿ ಪೂರ್ವಾರ್ಜಿತದ ಭೋಗವಲಾ ॥52॥

ಹರನ ಪೂಜೆಯ ತ್ಯಜಿಸಿದೆನೊ ಗುರು- । ವರನ ನಿಂದೆಯ ಮಾಡಿದೆನೊ ಹರಿ- । ಯರನವಜ್ಞೆಯ ಮಾಡಿ ಧಿಕ್ಕರಿಸಿದೆನೊ ಪೂರ್ವದಲಿ ॥
ತರುಣಿ ಮಾತನು ಕೇಳಿ ತಾಯಿಯ । ಹೊರಗೆ ಹಾಕಿದೆನೋ ಮದಾಂಧದಿ । ತುರುಕರುವ ನಾ ಕೊಂದೆನೊ ಸುಟ್ಟೆನೊ ವನಾದಿಗಳಾ ॥53॥

ತಂದೆ ತಾಯ್ಗಳ ತೊಲಗಿ ನಾನಾ- । ನಂದದಿಂದಲಿ ಹೊಟ್ಟೆ ತುಂಬಿದೆ । ಹಿಂದು ಮುಂದನು ನೋಡದಲೆ ಮಧ್ಯಾಹ್ನದಲಿ ಮನೆಗೆ ॥
ಬಂದ ಅತಿಥಿಗೆ ಹಿಂದೆ ಕಳುಹಿಸೆ । ಬಂದುದೀವ್ಯಥೆ ಯೆನುತ ಮನದಲಿ । ನೊಂದು ಗೋಳಾಡಿದನು ಭೂಸುರನಾನದೀತಟದಿ ॥54॥

ಪರಿಪರಿಯೊಳೀ ಪಾಪಗಳ ಸಂ- । ಸ್ಮರಿಸುತಲಿ ತಾಪವನು ತಾಳದೆ । ಮರಣವೇ ಲೇಸೆಂದು ಗಂಗೆಯೊಳಿಳಿದನಾ ವಿಪ್ರಾ ॥
ಗುರುವರನು ಕೇಳುತಲೆ ಪೇಳ್ದನು । ಕರೆಯಿರಾ ಭೂಸುರನನೀಕ್ಷಣ । ದುರಿತವಲ್ಲೈ ? ಆತ್ಮಹತ್ಯವು ಯಾಕೆ ಸಾಯುವನು ॥55॥

ಗುರುವಚನ ಕೇಳುತಲೆ ನಡೆದರು । ಭರದಿ ಶಿಷ್ಯರು ಹಿಡಿದು ತಂದರು । ಮರಣಕಭಿಮುಖನಾಗಿ ನಡೆಯುವ ಭೂಸುರನ ಬಳಿಕಾ ॥
ಸುರತರುವು ದೀನರಿಗೆ ಕರುಣಾ- । ಶರಧಿ ದುಃಖಿತರಿಂಗೆ ಗುರುವರ । ನರಹರಿಸರಸ್ವತಿಯು ಕೇಳ್ದನು ವಿಪ್ರನಿಗೆ ಮುದದಿ ॥56॥

ಕಲ್ಲ ಕೊರಳಲಿ ಕಟ್ಟಿ ನೀ ನದಿ- । ಯಲ್ಲಿ ಪ್ರಾಣವ ಬಿಡುವೆ ಯಾತಕೆ । ಬಲ್ಲೆಯಲ್ಲಾ ಸ್ವಾತ್ಮಹತ್ಯವು ಪಾಪಕರವೆಂದು ॥
ಸೊಲ್ಲ ಪೇಳ್ವೆ ಯೆನಗೆ ಮೃತ್ಯುವಿ- । ನಲ್ಲಿ ಯೇನಭಿರುಚಿಯು ಯೆನುತಲಿ । ಮೆಲ್ಲನಾ ಯತಿವರನು ಕೇಳಲು ಕೊಟ್ಟನುತ್ತರವಾ ॥57॥

ಅನ್ನ ವುಂಡರೆ ಕುಕ್ಷಿವ್ಯಥೆಯು- । ತ್ಪನ್ನವಾಗುವುದೆನಗೆ ಯದರಿಂ । ತಿನ್ನಲಾರೆನು ಕೂಳ ವಿಷವದು ಯೆನ್ನ ಜೀವಕಲಾ ॥
ನಿನ್ನೆ ನಾನುಂಡೆನು ಯಥಾಮತಿ- । ಯನ್ನವದರಿಂ ಕಕ್ಷಿವ್ಯಥೆಯೆನ- । ಗಿನ್ನು ಬಾಧಿಪುದೇನು ಮಾಡಲಿ ಯೆನ್ನ ದುರ್ದೈವಾ ॥58॥

ನುಡಿಯ ಕೇಳ್ದಾ ಗುರುವರನು ತಾ । ನುಡಿದನೈ ಭೂಸುರನೆ ವ್ಯಾಧಿಯ । ಯೆಡರು ಪೋಯಿತು ಯಿಂದಿನಿಂದಾಶ್ಚರ್ಯ ಪಡಬೇಡ ॥
ನಡೆ ಮನೆಗೆ ಸಂತೋಷದಿಂದಲಿ । ಸಡಗರದೊಳೂಟವನು ಮಾಡೈ । ಮೃಡನ ದಯೆಯಿಂದನ್ನವೇ ಸಿದ್ಧೌಷಧವು ನಿನಗೆ ॥59॥

ಅನಿತರೊಳು ಗ್ರಾಮಾಧಿಕಾರಿಯು । ದಿನದ ಪರಿಯಲಿ ಸ್ನಾನಕೈದಿರೆ । ವಿನುತಚರಿತನ ಗುರುವರನ ಚರಣಗಳ ಕಂಡನಲಾ ॥
ಮನದಿ ಸಂತಸತಾಳಿ ಗುರುಪದ- । ವನು ವಿನೋದದಿ ನಮಿಸಿ ಸ್ತುತಿಸಲು । ಘನ ತರದಿ ತೋಷದಲಿ ಕೇಳ್ದನು ಗುರುವು ಶಿಷ್ಯರಿಗೆ ॥60॥

ಏನು ಹೆಸರೈ ನಿನಗೆ ದ್ವಿಜವರ । ಯೇನು ಕಾರಣ ಬಂದೆ ಇಲ್ಲಿಗೆ । ನೀನು ಪೇಳೈ ನಿನ್ನ ಊರಿನ ಹೆಸರ ಬೇಗದಲಿ ॥
ಈ ನಿರೋಪವ ಕೇಳ್ದು ಶಿಷ್ಯನು । ಸಾನುರಾಗದಿ ಮರಳಿ ನುಡಿದನು । ನಾನು ಸಾಯಂದೇವ ನಾಪಸ್ತಂಬ ಶಾಖೆಯಲಿ ॥61॥

ಹುಟ್ಟಿದೆನು ಕೌಂಡಿನ್ಯ ಗೋತ್ರದಿ । ಹೊಟ್ಟೆಗೋಸುಗ ಬಂದೆನಿಲ್ಲಿಗೆ । ಶ್ರೇಷ್ಠವಹ ಶ್ರೀಕಾಂಚಿಯೂರಲಿ ಜನ್ಮವೆನಗಾಯ್ತು ॥
ಭ್ರಷ್ಟಯವನರ ಸೇವೆಯಲಿ ನಾ । ನಿಷ್ಟು ದಿವಸವ ಕಳೆದೆ ಕೇಳೈ । ಕಷ್ಟಮಯ ಸಂಸಾರವಿಲ್ಲಿಗೆ ಬಂದೆ ನೀವರುಷ ॥62॥

ನಿನ್ನ ಪದಕಮಲವನು ಕಂಡೆನು । ಧನ್ಯನಾದೆನು ದುರಿತಗಿರಿ ಸಂ- । ಭಗ್ನವಾಯಿತು ಜನ್ಮ ಜನ್ಮಾಂತರದ ಸುಕೃತವಿದು ॥
ಯೆನ್ನ ಕಾಯೈ ಶರಣವತ್ಸಲ । ನಿನ್ನ ಮಹಿಮೆಯಗಾಧ ನೀನು ಭ- । ವಾರ್ಣವದ ಸಂತಾರಕನೆ ವಂದಿಪೆನು ನಿನಗಿನ್ನು ॥63॥

ಗಂಗಾ ಪಾಪಂ ಶಶೀ ತಾಪಂ ದೈನ್ಯಂ ಕಲ್ಪತರುಸ್ತಥಾ । ಪಾಪಂ ತಾಪಂ ಚ ದೈನ್ಯಂ ಚ ಸದ್ಯಃ ಸಾಧು ಸಮಾಗಮಃ॥

ಪಾಪವನು ಜಾಹ್ನವಿಯು ಹರಿಪಳು । ತಾಪವನ ಶಶಿ ದೈನ್ಯ ಸುರತರು- । ವೀ ಪರಿಯೊಳೊಂದೊಂದು ಗುಣ ಒಂದೊಂದು ಸಾಧನಕೆ ॥
ಭಾಪು ನಿನ್ನಯ ದರ್ಶನವು ನಿಜ । ಪಾಪಹಾರಕ ವಿತ್ತಕಾರಕ । ತಾಪಶಾಂತಕ ಸಾಧುಸಂದರ್ಶನದ ಫಲವಿದಲಾ ॥64॥

ಎಂದು ಸ್ತುತಿಸುವ ವಿಪ್ರವರಗಿಂ- । ತೆಂದನಾ ಗುರುವರ್ಯ ಕೇಳ್ಳೈ । ಮಂದಿರಕ್ಕೆ ಕರೆದೊಯ್ದು ಜಠರವ್ಯಥೆಯ ವಿಪ್ರನಿಗೆ ॥
ಚಂದದಿಂದಲಿ ಭೋಜನವನವ । ಗಿಂದು ಹಾಕಿರಿ ಬೆದರ ಬೇಡಿರಿ । ಮುಂದೆ ವ್ಯಾಧಿಗೆ ರಾಮಬಾಣೌಷಧಿಯು ವಿಷ್ಟಾನ್ನ ॥65॥

ಗುರುವರನ ನುಡಿ ಕೇಳಿ ವಿಪ್ರನು । ಕರಗಳೆರಡನು ಜೋಡಿಸುತಲಾ- । ದರದಿ ಪ್ರತ್ಯುತ್ತರವನಿತ್ಯನು ಸಾವಧಾನದಲಿ ॥
ಕರೆದು ಭೋಜನ ಹಾಕಿದರೆ ಭೂ- । ಸುರನು ಸಾಯ್ವನು ಬ್ರಹ್ಮ ಹತ್ಯೆಯು । ಬರುವುದೆಮಗ್ಯೆ ನಿನ್ನೆ ಯುಂಡನು ತಿಂಗಳೊಂದರಲಿ ॥66॥

ಗುರುವಿದನು ಕೇಳುತ್ತ ನಗುತಲಿ । ಮರಳಿಯುತ್ತರವಿತ್ತನವನಿಗೆ । ಪರಮ ಸಿದ್ಧೌಷಧವ ಪೇಳ್ವೆನು ಮಾಡು ನೀನದನು ॥
ಕರೆದು ತುಪ್ಪದೊಳನರಸಂಗಳ । ಮರೆಯದೆಯೆ ಹಾಲನ್ನು ಕೊಡು ನೀ । ನರೆಘಳಿಗೆಯಲಿ ವ್ಯಾಧಿ ದೇಹವ ಬಿಟ್ಟು ಹೋಗುವುದು ॥67॥

ಎಲೆ ಹಸಾದವೆನುತ್ತ ಗುರುಪದ । ದಲಿ ಶಿರವ ತಾನಿಟ್ಟು ಗುರುವ । ನ್ನೊಲಿವಿನಿಂದಲಿ ಭಿಕ್ಷೆಗೆಂದೇ ಕರೆದರಾದಿವಸ ॥
ವಲಿದು ಭಕ್ತಿಗೆ ಗುರುವರನು ದ್ವಿಜ । ನಿಳಯಕ್ಕೈತಂದನು ವಿನೋದದಿ । ನಲಿದು ಸಂತೋಷದಲಿಯಾವಿಪ್ರ ಮನ್ನಿಸಿದಾ ॥68॥

ನಾಮಧಾರಕ ಕೇಳು ಶಿಷ್ಯಶಿ । ರೋಮಣಿಯೆ ಜಾಖಾಯಿ ಹೆಸರಿನ । ಭಾಮಿನಿಯು ತದ್ವಿಪ್ರನಿಗೆ ಸತಿಯರ ಶಿರೋಮಣಿಯು ॥
ಸಾಮವೇದದ ಘೋಷದಲಿ ನಿ- । ಸ್ಸೀಮಭಕ್ತಿ ಪುರಸ್ಸರದಿ ಗುಣ । ಧಾಮ ಮಂಗಳಮೂರ್ತಿ ಗುರುವಿಗೆ ಪೂಜೆಮಾಡಿದರು ॥69॥

ಗಂಧಪುಷ್ಪಾದಿಯ ಸಮರ್ಪಿಸಿ । ಚಂದದಿಂದಲಿ ಪೂಜೆಮಾಡಿದ । ರಂದು ಕೇಳ್ವಿವಿಧೋಪಚಾರದಿ ಗುರುವ ಸಂತೈಸಿ ॥
ಮುಂದಲೆಯ ಗುರುಪಾದಕರ್ಪಿಸಿ । ಮಿಂದರಾಗುರುಪಾದತೀರ್ಥದಿ । ಚಂದವಾಯಿತು ಗುರುಚರಣಸತ್ಪೂಜೆ ವಿಧಿಯುಕ್ತಾ ॥70॥

ಬೇರೆ ಬೇರೆ ವಿಚಿತ್ರರಂಗದ । ಚಾರುತರ ಕಮಲಾಸನಂಗಳ । ನಾರಿಯರು ಮಾಡಿದರು ಶಿಷ್ಯರಿಗೆನುತ ಮೋದದಲಿ ॥
ಬೇರೆ ಮಾಡಿದರೆಂಟು ದಳದ ಸು- । ವಾರಿಜವನಾ ಪಂಚರಂಗದಿ । ಚಾರು ಭಕ್ತಿಯೊಳಲ್ಲಿ ಗುರುವನು ಕೂಡಿಸಿದರವರು ॥71॥

ಆರತಿಯ ಮಾಡಿದರು ಬಳಿಕು । ಪ್ಪಾರತಿಯ ಬೆಳಗಿದರು ಮಂಗಲ- । ನಾರಿಯರು ಪದಕೆರಗಿ ಮಹಿಮೆಯ ನಾಡಿದರು ಮುದದಿ ॥
ಧಾರುಣೀ ಸುರವರರ ಮಂತ್ರದಿ । ಚಾರುತರ ಸಂಘೋಷ ಗಾಯನ । ಯಾರು ಬಣ್ಣಿಪರಿದನು ವಾದ್ಯ ನಿನಾದ ಸಂಘೋಷ ॥72॥

ಗುರುವು ಸಂತಸ ತಾಳಿ ದ್ವಿಜನಿಗೆ । ವರವನಿತ್ತನು ನಿನ್ನ ವಂಶವು । ಪರಮ ಗುರುಭಕ್ತಿಯಲಿ ಜಗವಿಖ್ಯಾತವಾಗುವುದು ॥
ಧರೆಯೊಳಗೆ ಧನಧಾನ್ಯ ಸಂಪತ್ । ಪರಮ ಸುತಸಂತಾನ ಸೌಖ್ಯವು । ದೊರೆಯುವುದು ಗುರುಭಕ್ತಿಯಿಂದಾ ನಿನ್ನ ವಂಶದಲಿ ॥73॥

ಹಾಕಿ ಎಲೆಗಳ ಬಡಿಸಿದರು ತಾ । ಶಾಕಪಾಕಗಳೇನ ಹೇಳಲ- । ನೇಕ ಪಕ್ವಾನ್ನಗಳು ಪರಮಾನ್ನಗಳ ವಿಧವೆಂಟು ॥
ಸಾಕುಸಾಕೆಂಬುವ ತನಕ ದ್ವಿಜ- । ರೇಕವಿಧದಲಿ ಬಡಿಸುತಿದ್ದರು । ಜೋಕೆಯಿಂದಲಿ ಭೋಜನವ ಮಾಡಿದರು ತೋಷದಲಿ ॥74॥

ಉದರನೋವಿನ ದ್ವಿಜನು ಸರ್ವವ । ಮುದದಿ ತಿಂದನು ವ್ಯಾಧಿ ಹೋಯಿತು । ಸದಮಲಾಂತಃಕರಣ ಗುರುವಿನ ದೃಷ್ಟಿಯೌಷಧದಿ ॥
ಉದಯವಾಗಲು ದಿನಕರನು ತಮ- । ವಿದಿರು ನಿಂದಿರುವುದೆ ಪರುಷಸಂ- । ಘದಲಿ ಲೋಹಕೆ ನೀಚತನ ನಿಂದಿರುವುದೇ ಹೇಳು ॥75॥

ಮುಗಿಸಿದರು ಭೋಜನವನೆಲ್ಲವ । ಸಗುಣ ಮೂರುತಿ ನರಹರಿಯು ಕೇಳ್ । ಜಗಕೆ ಚೋದ್ಯವಿದಾಯ್ತು ಕುಕ್ಷಿವ್ಯಥೆಯ ಬ್ರಾಹ್ಮಣಗೆ ॥
ಮಿಗಿಲು ಪಕ್ವಾನ್ನಗಳ ಸೇವಿಸೆ । ಬಗೆಬಗೆಯ ಸಿದ್ಧೌಷಧಿಗಳಾ । ಜಗದ ಧನ್ವಂತರಿಯು ಸದ್ಗುರುದೃಷ್ಟಿ ನಿಜನಿಜವು ॥76॥

ಗುರುಕೃಪಾಮೃತವರ್ಷಧಾರೆಗೆ । ದುರಿತರಾಶಿಯು ನಿಲದು ಜನ್ಮಾಂ । ತರದ ಪಾಪದ ರಾಶಿ ಕ್ಷಾಲನವಾಗುವುದು ನಿಜವು ॥
ಬರುವುದೆಂತಾ ವ್ಯಾಧಿಯವನಿಗೆ । ಗುರುಕೃಪಾ ಸಿದ್ಧೌಷಧವು ಮೇ । ಣಿರಲು ಹತ್ತರ ದೇಹಪೀಡೆಯ ದೋಡಿಹೋಗುವುದು ॥77॥

ಮುದದೊಳೀ ಕಥೆ ಭಕ್ತಿ ಭಾವದಿ । ವದಗಿ ಘಠಣವ ಮಾಡಲಾತಗೆ । ವಿಧವಿಧದ ಸುಖ ಸೌಖ್ಯವೀವನು ದತ್ತಗುರುರಾಯಾ ॥
ಇದು ಸಕಲ ಪೀಡಾಪಹಾರವು । ಇದು ಸಕಲ ಕಾಮಿತವನೀವುದು । ಇದುವೆ ಮಂಗಲಧಾಮ ಪಾವನ ವಿಷ್ಣುವಚನವಿದು ॥78॥

॥ ಅಧ್ಯಾಯ 13 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 14

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ದುಷ್ಟಯವನನ ಶಿಕ್ಷಿಸುತಲಾ । ಶಿಷ್ಟ ಸಾಯಂದೇವ ದ್ವಿಜನಿಗೆ । ಕೊಟ್ಟು ವರವನು ಮುಂದೆ ನಡೆದನು ಗುರು ನೃಸಿಂಹಮುನಿ॥

ಸಿದ್ಧಯೋಗೀಶ್ವರನೆ ಕೇಳು ಪ್ರ- । ಸಿದ್ಧವಾಯಿತು ಕೀರ್ತಿ ಕುಕ್ಷಿಯೊ- । ಳಿದ್ದ ಬೇನೆಯು ದೂರವಾಯ್ತಾ ದ್ವಿಜನ ಕಥೆ ಕೇಳ್ದ ॥
ಮುದ್ದು ಮಗನಂದದಲಿ ಮುಂದಿನ । ಶುದ್ಧ ಚರಿತಾಮೃತವ ಕೇಳ್ವರೆ । ಸಿದ್ಧನಾಗಿಹೆ ಹೇಳು ಯೆನಗಾ ಗುರುಕಥಾಮೃತವ ॥1॥

ಎಂದು ಶಿಷ್ಯನು ಪೇಳ್ದ ನುಡಿಯನು । ಚಂದದಿಂದಲಿ ಕೇಳ್ದು ಸಿದ್ಧನು । ಮುಂದೆ ಪೇಳ್ದನು ಶಿಷ್ಯ ಕರ್ಣಪಿಯೂಷಕಥನವನು ॥
ಮುಂದೆ ಭೋಜನವಾದ ಮೇಲಾ- । ನಂದದಿಂದಲಿ ಕರೆದು ಪೇಳ್ದನು । ಮುಂದೆ ವಂಶೋವಂಶದಲಿ ಜನಿಸುವರು ತವಕುಲದಿ ॥2॥

ಗುರುಚರಣ ಸದ್ಭಕ್ತಿವಂತರು । ಪರಮ ಲಕ್ಷ್ಮೀಸಂಯುತರು ನಿನ- । ಗರುಹುವೆನು ನೀನೆಮ್ಮ ಪ್ರೀತಿಗೆ ಪಾತ್ರನಧಿಕದಲಿ ॥
ಗುರುವಚನವಿದ ಕೇಳ್ದು ಭೂಸುರ । ನಿರದೆ ಗುರುಚರಣದಲಿ ತನ್ನಯ । ಶಿರವನಿಟ್ಟನು ಸ್ತುತಿಸಲಾರಂಭಿಸಿದನೈ ಮುದದಿ ॥3॥

ಮಾನವನು ನೀನಲ್ಲ ದುಷ್ಟರ । ಹಾನಿ ಮಾಡಲು ಧರೆಗೆ ಬಂದಿಹ । ಶ್ರೀನಿವಾಸನು ಮೂರು ಗುಣಗಳ ಮೂರುಮೂರ್ತಿಯಲಾ ॥
ನಾನು ಬಣ್ಣಿಸಲಾರೆ ತವ ಗುಣ- । ಶ್ರೇಣಿಯನು ವೇದಗಳು ಸೋತವು । ನಾನು ಬೇಡುವೆನೊಂದು ಕಾಮಿತವೀಯೊ ಗುರುರಾಯಾ ॥4॥

ಎನ್ನ ವಂಶಪರಂಪರೆಯ ಸುತ । ರಿನ್ನು ಗುರು ಸದ್ಭಕ್ತಿಸಂಯುತ । ರೆನ್ನುತಲಿ ಸತ್ಕೀರ್ತಿ ಪಡೆಯಲು ಬೇಕು ಜಗದೊಳಗೆ ॥
ಮುನ್ನ ಪರಲೋಕದಲಿ ಸದ್ಗತಿ । ಯನ್ನು ಪಡೆಯಲು ಬೇಕು ಯಿಂತೀ । ಯೆನ್ನ ಬಯಕೆಯ ತೀರಿಸೈ ಗುರುರಾಯ ಪ್ರೇಮದಲಿ ॥5॥

ಎಂದು ಸಾಯಂದೇವ ನುಡಿದನು । ಮುಂದೆ ಬಿನ್ನಹ ಮಾಡಿದನು ನಾ- । ನಿಂದು ಯವನನ ಕಡೆಗೆ ಹೋಗೆನು ಸೇವೆಯನು ಬಿಡುವೆ ॥
ಇಂದು ನಿನ್ನಯ ಚರಣದರ್ಶನ । ದಿಂದ ಯಮಕಿಂಕರರ ಜಯಿಸಿದೆ । ಬಂಧಮೋಚನವಾಯ್ತು ಭವಸಾಗರದಿ ತವಕೃಪೆಯೂ ॥6॥

ಕ್ರೂರನಿರುವನು ಯವನರಾಜನು । ಧಾರುಣಿಯೊಳಿಂತವನ ತೆರದಲಿ । ಯಾರಿಹರು ಘಾತಕರು ಪ್ರಾಣವ ಕೊಳ್ಳದಿರನೆನ್ನ ॥
ಚಾರು ತವ ಚರಣಗಳ ನಂಬಿದೆ । ದೂರವಗಲಿಸಬೇಡ ತವ ಚರ- । ಣಾರವಿಂದದ ಭೃಂಗನೆನ್ನನು ಕಾಯೊ ನೀನೀಗ ॥7॥

ಎಂದ ವಚನವ ಕೇಳಿ ಗುರುವರ । ನೆಂದ ಸಾಯಂದೇವ ಯೀಗಲೆ । ಮುಂದೆ ಹೋಗಾಯವನರಾಜನ ಕಡೆಗೆ ಬೆದರದಿರು ॥
ಇಂದು ನೀ ಬರುವನಕ ನಾನಿ- । ಲ್ಲಿಂದ ಹೊರಡೆನು ಬಂದ ಬಳಿಕಾ- । ನಂದದಿಂದಲಿ ಮುಂದೆ ಹೋಗುವೆನೆಂದನಾ ಗುರುವು ॥8॥

ವರವ ಸಾಯಂದೇವಗಿತ್ತನು । ದೊರಕುವುದು ಲಕ್ಷ್ಮೀಕಟಾಕ್ಷವು । ನಿರತ ಸುತಸಂತಾನದಭಿವೃದ್ಧಿಯು ನಿಜದಿ ನಿನಗೆ ॥
ಗುರುಚರಣ ಸದ್ಭಕ್ತಿಯಿಂದಲಿ । ಪರಮ ಸುಖಸೌಖ್ಯಗಳ ಭೋಗಿಸಿ । ಮೆರೆವರ್ಯೆ ಮೋಕ್ಷದಲಿ ಜನನದ ಚಕ್ರ ತಪ್ಪಿತಲಾ ॥9॥

ಪಡೆದನೀಪರಿ ಗುರುವರನ ವರ । ನಡೆದ ಸಾಯಂದೇವ ರಾಜನ । ಕಡೆಗೆ ನಿರ್ಭಯದಿಂದ ಗುರುವರಕವಚವನು ಧರಿಸಿ ॥
ಗಡಬಡಿಸಿ ಭೂಸುರನು ಬರುವುದ । ಪೊಡವಿಪತಿಯಾ ಯವನರಾಜನು । ತಡೆಯಲಾರದೆ ಫಡಫಡಿಸಿ ಮನೆಯೊಳಗೆ ಸೇರಿದನು ॥10॥

ನೋಡಿದನು ಭೂಸುರನು ರಾಜನ । ಕಾಡುಬೆಂಕಿಯ ತೆರದ ಮುಖ ಕೊಂ- । ಡಾಡಿದನು ಮನದೊಳಗೆ ಗುರುವಿನ ಚರಣಕಮಲವನು ॥
ಮಾಡುವನು ಯೇನವನು ಹತ್ತಿಯು । ಮಾಡುವುದೆ ಜ್ವಲನಂಗೆ ಸ್ಪರ್ಶವ । ಕಾಡುವುದೆ ಗರುಡನಿಗೆ ಸರ್ಪದಮರಿಯು ನೋಡಿದೆಯಾ
॥11॥

ಹರಿಯ ಮರಿಗಾ ಗಜದ ಭಯವೇ?। ಗುರುಕೃಪೆಯು ವೊಂದಿರಲು ಕಲಿಭಯ । ವಿರುವುದೇ? ಅಪಮೃತ್ಯು ಸೋಂಕದು ಮೃತ್ಯುವಂಜುವುದು ॥

ಮರಣ ಭಯವಿಲ್ಲದ ಮನುಷ್ಯಗೆ । ನರಪಶುವು ತಾನೇನ ಮಾಳ್ಪನು । ಗುರುಕೃಪಾಛತ್ರನನು ದುರುಳನ ಬಿಸಿಲು ಕಾಡುವುದೆ ? ॥12॥

ಮುನಿದು ಯವನನು ದ್ವಿಜನ ಬೈಯುತ । ಮನೆಗೆ ಹೋದನು ಭ್ರಮೆಯು ಹಿಡಿಯಿತು । ಘನತರದ ನಿದ್ರೆಯಲಿ ದೇಹಸ್ಮರಣವೇ ಹೋಯ್ತು ॥

ಕನಸಿನಲಿ ನೋಡಿದನು ತನ್ನನು । ಮುನಿದುಹೊಡೆಯುವ ದ್ವಿಜನನೋರ್ವನ । ಕನಸುಮುಗಿಯಲು ಜ್ವಾಲೆಹೊರಟಿತು ದೇಹದಲಿ ಬಿಡದೆ ।13।

ಸ್ಮರಣವಾಯಿತು ದ್ವಿಜನು ತನ್ನನು । ಮರಣವಾಗುವ ತನಕ ಹೊಡೆಯುವ । ಪರಿಯ ನೆನೆದನು ಭೀತಿಯಾಯಿತು ಮನದಿ ಯವನನಿಗೆ ॥

ಮರಳಿ ಸಾಯಂದೇವನಿದ್ದೆಡೆ । ತ್ವರಿತದಲಿ ಬಂದವನ ಚರಣ- । ಕ್ಕೆರಗಿ ಬಿನ್ನೈಸಿದನು ಯವನರ ರಾಜನೀ ತೆರದಿ ॥14॥

ತಪ್ಪು ಯೆನ್ನಿಂದಾಯ್ತು ನಿನಗಾ- । ನರ್ಪಿಸುವೆನಾಭರಣವಸ್ತ್ರವ । ವಪ್ಪು ಕೊಳ್ಳೈ ನೀ ಮಹಾತುಮನಹುದು ಗುರುಕೃಪೆಯಾ ॥

ಸರ್ಪಭೂಷಣವರವು ನಿಜ ನಿನ- । ಗಪ್ಪುದೆಂದೀ ಮಾತನೆನೆಯದೆ । ತಪ್ಪು ಮಾಡಿದೆ ಕ್ಷಮಿಸು ಯೆನುತಲಿ ರಾಜ ಬಿಸುಸುಯ್ದ ॥15॥

ದುರುಳ ಯವನನ ನುಡಿಯನಾಲಿಸಿ । ಮರಳಿ ಸಾಯಂದೇವ ಬಂದನು । ಗುರುವರಂಗೆರಗಿದನು ಗಂಗಾತೀರದಲಿ ಮುದದಿ ॥

ತಿರುತಿರುಗಿ ಭೂಸುರನು ಶ್ರೀನರ- । ಹರಿಯ ಪದದಲಿ ಹೊರಳುತಿದ್ದನು । ಚರಣಕಭಿಷೇಕವನು ನಯನದ ಜಲದಿ ಮಾಡಿದನು ॥16॥

ಗುರುವರನು ಸಂತವಿಸಿ ನುಡಿದನು । ಕರವನಿಟ್ಟನು ಮಸ್ತಕದಿ ರಸ- । ಭರಿತವಚನದಿ ಪೇಳ್ದ ಸಾಯಂದೇವಗುತ್ತರವಾ ॥
ಧರಣಿಯಲಿ ದಕ್ಷಿಣಪ್ರದೇಶದಿ । ತಿರುಗಿ ಸಂಚಾರವನು ಮಾಳ್ಪೆನು । ನಿರತವಿರು ಸಂಸಾರ ಸುಖದಲಿ ಗುರುಚರಣ ನೆನೆದು ॥17॥

ಮರಳಿಯುತ್ತರವಿತ್ತ ದ್ವಿಜನಾ- । ನರಿಯೆ ಸಂಸಾರವನು ನಿನ್ನಯ । ಚರಣವೇ ಸಂಸಾರ ಹಿಂಬಾಲಿಸುವೆ ನಾನಿನ್ನಾ ॥
ಕರುಣಸಾಗರ ಭಕ್ತವತ್ಸಲ । ದುರಿತಹರ ನಿನ್ನಂಘ್ರಿದರ್ಶನ । ಧರೆಗೆ ಬಂದುದ್ಧರಿಸಿದೆಯಲಾ ಗಂಗೆಯೋಪಾದಿ ॥18॥

ಎಂದ ನುಡಿಯನು ಕೇಳಿ ಗುರುವರ । ನೆಂದ ಸಾಯಂದೇವ ನಿನ್ನಯ । ಬಂಧುರದ ಭಾವಕ್ಕೆ ಮೆಚ್ಚಿದೆ ನನ್ನ ನುಡಿ ಕೇಳು ॥
ನಿಂದು ಸಂಸಾರದಲಿ ಭಕ್ತಿಯ । ಚಂದದಿಂ ಮಾಡಲ್ಕೆ ನಮಗದು । ಸಂದು ಬರುವುದು ತ್ಯಜಿಸಬೇಡೈ ನಿನ್ನ ಸಂಸಾರ ॥19॥

ತೀರ್ಥಯಾತ್ರೆಯ ತೀರಿಸುತ ನಾ- । ನರ್ಥಿಯಿಂದಲಿ ಮರಳಿ ಬರುವೆನು । ತೀರ್ಥದಲಿ ವಾಸಿಪೆನು ನಿನ್ನಯ ಮನೆಸಮೀಪದಲಿ ॥
ಪುತ್ರ ಮಿತ್ರ ಕಳತ್ರ ಸಹಿತಾ । ತೀರ್ಥದಲಿ ಬಂದೆನ್ನ ನೋಡೈ । ಹತ್ತು ಐದೇವರುಷದಲಿ ಸಂದರ್ಶನದ ಲಾಭ ॥20॥

ದುರಿತ ತಾಪತ್ರಯಗಳೆಲ್ಲವು । ಪರಿಹರಿಸಿದಂತಾಯ್ತು ನಿನ್ನಯ । ಪರಮ ಸಂತೋಷದಲಿ ನೀನಿರು ಕೊಡುವೆನೀವರವ ॥
ಹರಿಸಿ ಸಾಯಂದೇವಗೀಪರಿ । ಗುರುವರನು ಮುಂದಕ್ಕೆ ನಡೆದನು । ವರಮಹಾಕ್ಷೇತ್ರಕ್ಕೆ ಕೇಳಾ ವೈಜನಾಥನಿಗೆ ॥21॥

ಗುರುವರನು ಶಿಷ್ಯರನು ಕೂಡಿಸಿ । ಬರಲು ಕೇಳೀ ಪುಣ್ಯಕ್ಷೇತ್ರಕೆ । ಹೊರಗೆ ಬೀಳದೆ ಗುಪ್ತ ರೀತಿಯಲ್ಲಿದ್ದನೈ ಮುದದಿ ॥
ಗುರುಚರಿತ ಸುರಧೇನು ಸಿದ್ಧನು । ಕರೆಯುವೆನು ಕ್ಷೀರವನು ಶಿಷ್ಯನು । ಕರುವಲಾ ಸೇವಿಸಿರಿ ಹಾಲನು ವಿಷ್ಣುಸೇವಕರು ॥22॥

॥ ಅಧ್ಯಾಯ 14 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 15

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಧರೆಯೊಳಿರುತಿಹ ತೀರ್ಥಗಳ ವಿ- । ಸ್ತರಿಸಿ ಶಿಷ್ಯರಿಗರುಹಿ ಕಳುಹುತ । ನರಹರಿಸರಸ್ವತಿಯು ಗುಪ್ತ ದೊಳಿದ್ದ ಕೆಲದಿವಸ॥

ಗುರುವರನೆ ಕೇಳ್ ಸಿದ್ಧಯೋಗಿಯೆ । ಕರುಣದಿಂದೆನಗರುಹು ಗುರುವರ । ನಿರುವ ಕಾರಣವೇನು ಗುಪ್ತದಿ ವೈಜನಾಥದಲಿ ॥
ತಿರುಗಿ ಮನದಿ ವಿಚಾರಿಸುತ ಗುರು- । ಚರಿತವನು ಮುದದಿಂದ ಪೇಳೆನ- । ಲರುಹಿದನು ತಾ ಸಿದ್ಧ ಯೋಗೀಶ್ವರನು ಶಿಷ್ಯನಿಗೆ ॥1॥

ನಾಮಧಾರಕ ಕೇಳು ಶಿಷ್ಯಶಿ । ರೋಮಣಿಯೆ ನಿನ್ನಂಥ ಶಿಷ್ಯನ । ನೀ ಮಹಿಯೊಳಾಂಕಾಣೆ ನಿನ್ನದು ಧನ್ಯ ಜೀವನವು ॥
ಕಾಮಿತಾರ್ಥವನೀವ ಸದ್ಗುಣ- । ಧಾಮವಹ ಶ್ರೀಗುರುಚರಿತ್ರವ । ಭೂಮಿಗೆಲ್ಲವ ತಿಳಿವ ತೆರದಲಿ ಪೇಳ್ವೆ ನಾ ನಿನಗೆ ॥2॥

ಖ್ಯಾತಿಯಾಯಿತು ದೇಶದೇಶದಿ । ಮಾತು ಮಾತಿಗೆ ಜನರು ಬಂದಾ । ಘಾತಪಾತವ ಹೇಳಿ ಗುರುವನು ತ್ರಾಸಿಸಿದರೆಲ್ಲಾ ॥
ಧೂರ್ತರಾಗಲಿ ಸಾಧುವಾಗಲಿ । ಸಾತ್ವಿಕರು ಮೇಣಾಗಲೆಲ್ಲರು । ಭೂತಳದ ಜನರೆಲ್ಲ ಬಂದರು ಸ್ವಾಮಿದರ್ಶನಕೆ ॥3॥

ಕೆಲರು ಧನದಾಶೆಯಲಿ ಕೆಲವರು । ಕೆಲಸದುದ್ಯೋಗದ ನಿಮಿತ್ತದಿ । ಕೆಲರು ಪುತ್ರಕಳತ್ರದಾಶೆಯ ಮಾಡಿ ಬರುತಿಹರು ॥
ಖಳರು ಬರಿದೆ ವಿನೋದದಿಂದಲಿ । ಹಲವರೀಪರಿ ಹಲವು ಕಾರ್ಯಕೆ । ಬಳಲಿಸಿದರ್ರೈ ಬಂದು ಸದ್ಗುರುನಾಥನಿಗೆ ಬರಿದೆ ॥4॥

ಕ್ಷೋಣಿಯನು ನಿಃ ಕ್ಷಾತ್ರ ಮಾಡುತ । ದಾನವಿತ್ತನು ಪರಶುರಾಮನು । ತಾನು ಮಾಡಿದನೆರಡನೆಯ ಸೃಷ್ಟಿಯನು ಸಾಗರದಿ ॥
ಕ್ಷೋಣಿಸುರರಿನ್ನಾಶೆಯಿಂದ ನ- । ವೀನ ಸೃಷ್ಟಿಯ ಬೇಡಲಾದ್ವಿಜ- । ರೇನು ಬೇಡರು ಸಾಕು ದರ್ಶನವೆಂದು ಭಾರ್ಗವನು ॥5॥

ಸಾಗರದ ಮಧ್ಯದಲಿ ಗುಪ್ತದಿ । ಹೋಗಿ ವಾಸವ ಮಾಡಿದನು ಮೇ- । ಣೀಗೆ ಸದ್ಗುರುನಾಥನೀಪರಿ ಗುಪ್ತನಾದನಲಾ ॥
ಯೋಗ್ಯನಾರು ಅಯೋಗ್ಯನಾರು ಸ- । ರಾಗನಾರು ವಿರಾಗನಾರೆಂ- । ದೀಗ ಯೋಚನೆ ಮಾಡುತಲೆ ಉದ್ಧರಿಪನೀ ಜಗವಾ ॥6॥

ಗುರುವರನು ತಾ ಗುಪ್ತರೂಪದೊ- । ಳಿರುವ ಯೋಚನೆ ಮಾಡಿ ಶಿಷ್ಯರ । ಕರೆದು ಸಕಲರಿಗಾಜ್ಞೆಯಿತ್ತನು ಪ್ರೇಮಭಾವದಲಿ ॥
ತೆರಳಿರೈ ತೀರ್ಥಾಟಣವನಾ । ಚರಿಸಿ ಭೂಮಿಯ ತಿರುಗಿ ಶೈಲ್ಯಾ । ಚಲಕೆ ಭೇಟಗೆ ಬನ್ನಿ ರೈ ನೀವೆಲ್ಲ ಪ್ರೇಮದಲಿ ॥7॥

ಎಂದು ಗುರುವಚನವನು ಶಿಷ್ಯ । ವೃಂದ ಕೇಳುತ ದುಗುಡದಲಿ ಮನ । ನೊಂದು ಬಿನ್ನೈಸಿದರು ಗುರುಚರಣದಲಿ ಶಿರವಿಟ್ಟು ॥
ತಂದೆ ತಾಯಿಗಳೆಲ್ಲ ನೀನೇ । ಬಂಧು ಬಳಗವು ನೀನೆ ಕರುಣಾ- । ಸಿಂಧು ಯಾಕೆಮಗೀಗ ತೊಲಗುವೆ ಗತಿಯು ಯಾರೆಮಗೆ ॥8॥

ಚರಣದಲಿ ಯಡಗಿಹವು ನಿನ್ನಯ । ಪರಮಪಾವನ ತೀರ್ಥವೆಲ್ಲವು । ಬರಿದೆ ಯೆಮಗಿನ್ನೆಲ್ಲಿ ಕಳುಹಿಸಿ ಕೊಡುವೆ ಗುರುವರನೆ ॥
ಚರಣಗಳ ನಾಂ ಬಿಡೆವು ನಿನ್ನಯ । ಪರಮಪಾವನ ತೀರ್ಥವಿದುಯೆಂ- । ದರುಹುವವು ಶ್ರುತಿಶಾಸ್ತ್ರಪೌರಾಣಗಳು ನಿಜವಾಗಿ ॥9॥

ಸುರತರುವ ತಾ ಬಿಟ್ಟು ಜಾಲಿಯ । ಮರವನಾಶ್ರೈಸುವರು ಯಾರಿಹ । ರರರೆ ಮೂರ್ಖರು ಕೈಗೆ ಸಿಕ್ಕಿದ ನಿಧಿಯ ತಾ ಬಿಟ್ಟು ॥
ತಿರುಗುವರು ಯಾರಿಹರು ದೇಶಾಂ- । ತರದೊಳಿದರಂದದಲಿ ನಿನ್ನಯ । ಚರಣಕಮಲವ ಬಿಡೆವು ರಕ್ಷಿಸು ರಕ್ಷಿಸೈ ಗುರುವೇ ॥10॥

ಕೇಳಿ ಶಿಷ್ಯರ ವಚನವನು ಗುರು । ಪೇಳಿದನು ಶಿಷ್ಯರಿಗೆ ನಿಮ್ಮಯ । ಹೇಳಿಕೆಯು ನಿಜವಿಹುದು ಹಿತವನು ಹೇಳುವೆನು ನಿಮಗೆ ॥
ನಾಲಕನೆಯಾಶ್ರಮವು ಯೆಮ್ಮದು । ಮೂಲತತ್ವವ ಪೇಳ್ವೆನೊಂದೇ । ವೇಳೆ ನಾವಿರಬಾರದೊಂದೇ ಸ್ಥಾನ ದಿನವೈದು ॥11॥

ಧರೆಯ ತೀರ್ಥಾಟಣೆಯ ತೀರಿಸಿ । ಮರಳಿ ನಾ ಬಹೆನೊಂದು ತೀರ್ಥದೊ- । ಳಿರುವೆ ತದನಂತರದಿ ಬರಬೇಕಲ್ಲಿ ನೀವೆಲ್ಲಾ ॥
ಬರುವೆ ನಾ ಶ್ರೀಶೈಲಪರ್ವತ । ಕಿರದೆ ಕೇಳ್ ಬಹುಧಾನ್ಯಸಂವ । ತ್ಸರಕೆ ಬರಬೇಕಲ್ಲಿ ಭೇಟಿಗೆ ಮರೆಯದೀ ಸ್ಥಳಕೆ ॥12॥

ಗುರುವಚನವಿದ ಕೇಳಿ ಶಿಷ್ಯರು । ಚರಣಕಭಿವಂದಿಸುತ ಪೇಳ್ದರು । ಚರಿಸುವೆವು ತೀರ್ಥಾಟಣಂಗಳ ನೀವು ಪೇಳ್ವಂತೆ ॥
ಗುರುವಚನವೇ ಸುಪ್ರಮಾಣವು । ಗುರುವಚನವುಲ್ಲಂಘಿಪನಿಗಾ । ನರಕ ರೌರವವೆಂದು ಪೇಳ್ವರು ಶಾಸ್ತ್ರ ಕೋವಿದರು ॥13॥

ಯಾವ ಪರಿಯಲಿ ಯಾವ ತೀರ್ಥವ । ನಾವು ಸಂಚಾರಿಸಲಿ ಬೇಕೈ । ಸಾವಧಾನದಿ ಪೇಳಬೇಕೆಮಗೆನುತ ನಮಿಸಿದರು ॥
ಭಾವ ಭಕುತಿಯ ಶಿಷ್ಯ ವಚನವ । ಸಾವಧಾನದಿ ಕೇಳಿ ಗುರುವರ । ನೀ ವಿವರವನು ಪೇಳ್ದನೈ ಶಿಷ್ಯರಿಗೆ ಸಂತಸದಿ ॥14॥

ಪೊಡವಿಯೊಳು ಮೊದಲನೆಯ ತೀರ್ಥವು । ಮೃಡನ ಜಟೆಯಿಂದೊಡೆದು ಬಂದಿಹ । ಕಡುಪವಿತ್ರದ ಗಂಗೆ ಕಾಶೀಪುರವು ಮೇಣಲ್ಲಿ ॥
ನಡೆಯಿರೈ ನೀವಲ್ಲಿ ಮೊದಲಿಗೆ । ಬಿಡದೆ ಮೂರಿಪ್ಪತ್ತು ಯೋಜನ- । ವಡರಿ ತೀರ್ಥಾಟಣೆಯ ಮಾಡಲು ಕೃಚ್ಛ್ರಫಲವಿಹುದು ॥15॥

ಮುಂದೆ ಹೋಗೆ ಪ್ರಯಾಗವಿಮ್ಮಡಿ । ಸಂದುಫಲ ದ್ವಿಗುಣವನು ಕೊಡುವುದು । ಮುಂದೆ ಯಮುನಾನದಿಯೊಳಿಪ್ಪತ್ತೈದು ಊರಿಹವು ॥
ಮಿಂದರಲ್ಲಿಯು ಕೃಚ್ಛ್ರಫಲವಿಹು-। ದಂದು ಬರುವುದು ಕೇಳ್ ಸರಸ್ವತಿ । ಸುಂದರದ ಶಾಶ್ವತದ ಗತಿ ಕೊಡುತಿಹುದು ಬ್ರಹ್ಮನಲಿ ॥16॥

ವರುಣೆ ಕೃಷ್ಣಾ ವೇಣಿ ಕುಶವತಿ । ಶರಯು ಮಧುಮತಿ ಘೃತವತೀನದಿ । ಯಿರುವವೈ ಮೇಣ್ ದೇವನದಿ ಹದಿನೈದು ತೀರ್ಥಗಳು ॥
ದುರಿತಹರವಿವು ಸ್ನಾನಮಾತ್ರದಿ । ಧರಿಸದಿರಿ ಸಂದೇಹವಿದರಲಿ । ಕರಗಿಸುವವಿವು ಬ್ರಹ್ಮಹತ್ಯಾದಿಗಳ ಪಾಪಗಳಾ ॥17॥

ಶರಯು ಗೌತಮಿ ವೇದಿಕಾನದಿ । ಮರಳಿ ರೇವತಿ ಚಂದ್ರಭಾಗಾ । ಪರಮಪಾವನ ಕೌಶಕೀ ನದಿ ಯೆಂಬ ನದಿಗಳಿಗೆ ॥
ಸುರನದಿಯು ಜಾಹ್ನವಿಯು ದಿನದಿನ । ಬರುವುದೆಂಬುದು ನಿಜವು ನೀವಾ । ಚರಿಸಿರೈ ತೀರ್ಥಾಟಣೆಯ ನೀವೆಲ್ಲ ನದಿಗಳಲಿ ॥18॥

ನದಿಯ ಸಂಗಮ ಪರಮಪಾವನ- । ವದರೊಳಗೆ ಮೂನದಿಯ ಸಂಗಮ- । ವದುಭುತದ ಫಲ ಕೊಡುವುದಿದನಾಚರಿಸಿರೈ ಮುದದಿ ॥
ಬದರಿ ನಾರಾಯಣನ ಭಜಿಸಿರಿ । ಪದಮನಾಭೇಶ್ವರನ ಪೂಜಿಸಿ । ಮುದದಿ ನೀವ್ ಶ್ರೀರಂಗ ಭೀಮೇಶ್ವರಿಯ ವಂದಿಸಿರಿ ॥19॥

ನೈಮಿಷಾರಣ್ಯವು ದುರಿತನಿ- । ರ್ನಾಮ ಮಾಡುವ ತೀರ್ಥ ನೋಡಿರಿ । ಆ ಮಹಾಲಯ ತೀರ್ಥವಿದರಲಿ ತರ್ಪಣವ ಕೊಡಲು ॥
ಕ್ಷೇಮದಿಂ ನಲುವತ್ತೆರಡು ಪಿಡಿ । ವ್ಯೋಮಲೋಕಕೆ ಪೋಗುವುದು ನಿಜ । ಕಾಮಿತವ ಕೊಡುತಿಹುದು ತೀರ್ಥಾಟಣವು ಭೂಮಿಯಲಿ ॥20॥

ಧರೆಯೊಳಗೆ ಕೇದಾರ ತೀರ್ಥವು । ಮರಳಿ ಪುಷ್ಕರ ತೀರ್ಥಪಾವನ । ವಿರುವ ಕೋಕಾಮುಖಿಯು ನರ್ಮದೆ ಮಾತೃಕೇಶ್ವರವು ॥
ಪರಮ ಕೋಟಿತೀರ್ಥಕುಬ್ಜವು । ಮುರಳಿ ವಿಜಯಾತೀರ್ಥವಿನ್ನಾ । ಪುರಿಯು ಇಂದ್ರಾದಿಗಳ ತೀರ್ಥಗಳುತ್ತಮವು ಜಗದಿ ॥21॥

ಗೋಕರಣ ಶಂಖರ್ಣವೆಂಬಿವು । ಮೋಕ್ಷದಾಯಕ ತೀರ್ಥಗಳು ಜಗ । ದೇಕಪಾವನ ಮಥುರೆ ಕಾಂಚೀ ದ್ವಾರವತಿ ಗಯೆಯು ॥
ಸಾಕೇತಾಖ್ಯವಯೋಧ್ಯೆಯದು ವಿ- । ವೇಕಭಾವದೊಳಾಚರಿಸಿರೈ । ಶೋಕಹರರಾಗುವಿರಿ ದೋಷವ ಸುಡುವುದೈ ತೀರ್ಥಾ ॥22॥

ಆರುಯೋಜನ ಸ್ನಾನದಿಂ ಪರಿ- । ಹಾರವಪ್ಪುದು ಪಾಪಗೋದಾ- । ನೀರಿಗಿಹುದೈ ವಾಜಪೇಯದ ಪುಣ್ಯವೇನೆಂಬೇ ॥
ಮೂರುಬಾರಿ ತಟಾಕಯಾತ್ರೆಯ- । ನಾರು ಮಾಳ್ವರು ಗ್ರಹಣ ಕಾಲದಿ । ಘೋರ ಪಾತಕ ಸುಟ್ಟು ಸುಜ್ಞಾನವನು ಲಭಿಸುವರು ॥23॥

ಇನ್ನೆರಡು ತೀರ್ಥಗಳ ಪೇಳ್ವೆನು । ಸನ್ನುತ ಪ್ರಯಾಗದ ಸಮಾನವಿ- । ದೆನ್ನುವರು ಭೀಮೇಶ್ವರವು ಕುಶತೀರ್ಥ ಪ್ರಖ್ಯಾತಾ ॥
ಪೂರ್ಣನದಿಯ ತಟಾಕ ಯಾತ್ರೆಯು । ಕೃಷ್ಣವೇಣಿಯು ತುಂಗಭದ್ರಾ । ಮುನ್ನಿ ಹುದು ಪಂಪಾಸರೋವರ ಹರಿಹರ ಕ್ಷೇತಾ ॥24॥

ಹರಿಹರಕ್ಷೇತ್ರವು ಕಣಾ ಬಹು । ದುರಿತ ನಾಶವಗೈದು ಸುಖವಿಹ- । ಪರವ ಕೊಡುವುದು ಭೀಮರಥಿಯದರಂತೆ ಪಾವನವು ॥
ಇರುವುದದರೋಲ್ ಪಾಂಡುರಂಗವು । ಮರಳಿ ಕೇಳ್ಳೈ ಮಾತುಲಿಂಗವು । ಪುರಿಯು ಗಾಣಗವಲ್ಲಿ ತೀರ್ಥಗಳಿರುವವ್ವೈಯೆಂಟು ॥25॥

ಅಮರಜಾಸಂಗಮದೊಳಿರುವುದು- । ವಿಮಲ ತೀರ್ಥವು ಕೋಟಿ ತೀರ್ಥವು । ದ್ರುಮವಿರುವದಶ್ವತ್ಥವದುವೆ ಕಲ್ಪವೃಕ್ಷವಲಾ ॥
ವಿಮಲ ನರಹರಿ ವಾರಣಾಶಿಯು । ಸುಮನ ಪಾಪವಿನಾಶಿ ಕೇಳು । ದ್ರುಮದ ಮನ್ಮಥತೀರ್ಥ ಮತ್ತಾ ಚಕ್ರತೀರ್ಥವಲಾ ॥26॥

ಕ್ಷೋಣಿಯಲಿ ಪರಮಾರ್ಥ ಸಾಧನ । ಗಾಣಗಾಪುರವರವು ದೇವ । ಸ್ಥಾನ ಕಲ್ಲೇಶ್ವರನ ಪೂಜಾಸ್ಥಾನ ನಿರುಪಮವು ॥
ಜ್ಞಾನಸಾಧನ ಜಪತಪಾನು- । ಷ್ಠಾನ ಮಾಳ್ಪರಿಗಿರುವುದೈ ಸುರ । ಧೇನು ಬಣ್ಣಿಸಲಾರೆನೀ ಕ್ಷೇತ್ರದ ಮಹಾತುಮೆಯ ॥27॥

ಇರುವುದೈ ಕಾಂಕಿಣಿಯ ಸಂಗಮ । ಪರಮ ಭೀಮಾತೀರ ತೀರ್ಥವು । ಪರಮ ತೀರ್ಥವನಂತವಿದುವೆ ಪ್ರಯಾಗಸಮನಿಹುದು ॥
ವರದೆ ತುಂಗಾಭದ್ರೆ ಯಿರುವಳು । ದುರಿತನಾಶ ಮಲಪ್ರಭಾನದಿ । ಹರಿಸುವಳು ಜನ್ಮಾಂತರದ ಪಾಪಗಳ ಸಂಗಮದಿ ॥28॥

ಭೂಸುರರ ಹತ್ಯವನು ಮಾಡಿದ । ದೋಷಹರ ನಿವೃತ್ತಿ ಸಂಗಮ । ಲೇಸಿನಿಂ ನೀವಲ್ಲಿ ಹೋಗಿರಿ ವೇಳೆಗಳೆಯದಲೇ ॥
ವಾಸವನ ಗುರು ಬರಲು ಸಿಂಹದ । ರಾಶಿಗಾಕ್ಷಣ ತೀರ್ಥಗಳು ಸಂ- । ತೋಷ ತಾಳ್ವವು ಭಾಗಿರಥಿ ಬಂದೈಕ್ಯವಾಗುವಳು ॥29॥

ಸುರಗುರುವು ಕನ್ಯಾಗತನು ತಾ । ನಿರಲು ಭಾಗೀರಥಿಯು ಕೃಷ್ಣೆಗೆ । ಬರುವಳೈ ತುಲೆಗಿರಲ ತುಂಗಾಭದ್ರೆನದಿಗವಳು ॥
ತರಣಿ ಕರ್ಕಕ್ಕೆ ಬರಲು ನೀವಾ । ಚರಿಸಿರೆ ಕೃಷ್ಣಾ ಮಲಪ್ರಭೆ । ಪರಮ ಸಂಗಮಸ್ನಾನ ದ್ವಿಜಹತ್ಯವನು ನಾಶಿಪುದು ॥30॥

ಅಂಗ ತೊಳೆಯಲು ಕೃಷ್ಣ ಭೀಮಾ- । ಸಂಗಮದಿ ನೀವೇಳು ಜನ್ಮಕೆ । ಸಂಗತಿಯು ದ್ವಿಜಜನ್ಮವಿರುವದು ನಂಬಿ ನೀವಿದನು ॥
ತುಂಗಭದ್ರಾ ಸಂಗಮದ ಫಲ । ಕಂಗೊಳಿಸುವುದು ತ್ರಿಗುಣ ನಿವೃತಿಯ । ಸಂಗಮದ ಫಲವಿಹುದು ನಂಬಿರಿ ನಾಲ್ಕು ಮಡಿಯಧಿಕಾ ॥31॥

ಸಲ್ಲಲಿತ ಪಾತಾಳಗಂಗೆಯೋ- । ಳಲ್ಲಿ ಸ್ನಾನವ ಮಾಡುತಲಿ ನೀವ್ । ಮಲ್ಲಿಕಾರ್ಜುನದರ್ಶನದ ಫಲವಾರುಗುಣವಿಹುದು ॥
ಇಲ್ಲ ಪುನರಾವೃತ್ತಿಯವನಿಗೆ । ಬಲ್ಲಿದರು ಪೇಳುವರು ಸ್ನಾನದೋ । ಳಲ್ಲಿ ಕೃಷ್ಣಾ ಸಾಗರದ ಸಂಗಮದಿ ಫಲವಮಿತಾ ॥32॥

ಪುಣ್ಯ ಲಿಂಗಾಲಯದೋಳಿಮ್ಮಡಿ । ಯಿನ್ನು ಕಾವೇರೀ ಸಮಾಗಮ । ಪುಣ್ಯವಿದೆ ಹದಿನೈದು ಮಡಿ ನೀವ್ ಸ್ನಾನಮಾಡಿದೊಡೆ ॥
ಪುಣ್ಯವಿಹುದೌ ತಾಮ್ರಪರ್ಣಿಯ । ಸನ್ನುತದ ಸ್ನಾನವನು ಮಾಡಲು । ಪುಣ್ಯವಿಹುದಾ ಭವವಿನಾಶಿಪಯಶ್ವಿನೀ ಸ್ನಾನಾ ॥33॥

ಶೇಷಗಿರಿ ಶ್ರೀರಂಗನಾಥನ । ಭಾಸುರದ ಶ್ರೀಪದ್ಮನಾಭನ । ದೋಷರಹಿತಾನಂತಶಯನನ ಪೂಜಿಸುತ ಮುಂದೆ ॥
ಲೇಸಿನಿಂ ತ್ರಣಮಲ್ಲಿ ಕ್ಷೇತ್ರಕೆ । ತೋಷದಿಂದಾ ಕುಂಭಕೋಣಕೆ । ಭಾಸುರದ ಕನ್ಯಾಕುಮಾರೀ ಕ್ಷೇತ್ರವಿದೆ ನೋಡಿ ॥34॥

ಸ್ನಾನ ಮಾಡಿರಿ ಮಚ್ಛ ತೀರ್ಥದಿ । ಮೇಣು ಕೇಳಾ ಪಾಕ್ಷಿ ತೀರ್ಥದಿ । ಸ್ನಾನ ಮಾಡಿರಿ ರಾಮನಾಥಧನುಷ್ಯ ಕೊಟಿಯಲಿ ॥
ಆ ನದೀಕಾವೇರಿ ತೀರ್ಥದಿ । ಸ್ನಾನವನು ಶ್ರೀರಂಗನೆದುರಲಿ । ಕ್ಷೋಣಿಯಲಿ ಕರವೀರ ದಕ್ಷಿಣಕಾಶಿಯೆನಿಸುವುದು ॥35॥

ಇರುವನೈ ನರಸಿಂಹ ದೇವನು । ಮೆರೆವ ಕೋಲ್ಹಾ ಗ್ರಾಮದಲಿ ಮೇ । ಣಿರುವನಿವನೆ ಸದಾಶಿವನು ಪರಮಾತ್ಮ ಮೂರ್ತಿಯಲಾ ॥
ಮೆರೆವುದೈ ಕೃಷ್ಣಾ ತಟಾಕದಿ । ಪರಮ ಮಂಗಲ ಶಕ್ತಿ ಭುವನೇ । ಶ್ವರಿಯು ದೊರೆವುದು ತಪದೊಳಲ್ಲಿಯೆ ಹರನ ಸಾಯುಜ್ಯ ॥36॥

ವರುಣೆ ಸಂಗಮವಿರುವುದೀಪರಿ । ಪರಮಪಾವನೆ ತೀರ್ಥ ನೀವಾ । ಚರಿಸಿರೈ ಸ್ನಾನವನು ಮಾರ್ಕಾಂಡೇಯ ಪೂಜಿಸಿರಿ ॥
ಇರುವವೈ ಹಲವಾಶ್ರಮಂಗಳು । ಪರಮ ಕೃಷ್ಣಾ ತೀರದಲಿ ನೀವ್ । ಭರದಿ ಸ್ನಾನವ ಮಾಡಲಪ್ಪುದು ಜ್ಞಾನವೈರಾಗ್ಯಾ ॥37॥

ಅಮರಪುರ ವಿಖ್ಯಾತತೀರ್ಥವು । ವಿಮಲ ಕೃಷ್ಣಾ ಪಂಚಗಂಗೆಯ । ವಿಮಲ ಸಂಗಮವಿದುಕಣಾ ಪುಣ್ಯ ಪ್ರಯಾಗವಲಾ ॥
ಸುಮನದಲಿ ತಪವೆಸಗಲಲ್ಲಿಯೆ । ಶ್ರಮವ ಮಾಡದೆ ಕಾಮಿತಾರ್ಥದ । ದ್ರುಮವು ಫಲಿಪುದು ನಿಜವು ಮೂರೇ ದಿವಸದವಧಿಯಲಿ ॥38॥

ಜುಗಲ ತೀರ್ಥವು ಪುಣ್ಯಪಾವನ । ದ್ವಿಗುಣ ಶೂರ್ಪಾಲಯವು ಮುಂದಕೆ । ಭಗವತಿಯು ಶ್ರೀಗಾಧಿಜಾಶ್ರಮ ತೀರ್ಥಮಂಗಲವು ॥
ವಿಗತಕಲ್ಮಷ ಕಪಿಲತೀರ್ಥವು । ಸೊಗಸಿನಿಂದುತ್ತರಕೆ ಹರಿವುದು । ಮುಗುದೆ ಶ್ರೀಗಾಯತ್ರಿ ಶ್ವೇತಶ್ರುಂಗಿ ವಶವಹುದು ॥39॥

ಹರಿಯ ಮೂರ್ತಿಯೆ ಕಪಿಲ ಋಷಿ ನೀ । ವರಿಯಿರಾ ಸ್ಥಾನದಲ್ಲಿ ಸ್ನಾನವು । ಪರಮಪಾವನ ಕಾಶಿಗಿಂತಲು ಪುಣ್ಯವಧಿಕವಲಾ ॥
ಪರಮ ಭಕ್ತಿಯೊಳೊಂದು ಮಂತ್ರೋ- । ಚ್ಚರಣೆ ಮಾಡಲು ಕೋಟಿ ಗುಣವೆಂ । ದರುಹುವವು ನಿಗಮಾಗಮಂಗಳು ಬೇಡಸಂದೇಹಾ ॥40॥

ಮುಂದೆ ಕೇದಾರೇಶ್ವರಂಗಭಿ-। ವಂದಿಸಿರಿ ನೀವ್ ಹೋಗಿ ತ್ರಿಪುರಕೆ । ಬಂದು ವಾಸಿಸುತಿಹನು ದತ್ತಾತ್ರೇಯ ನವಧೂತಾ ॥
ಮುಂದೆ ಹೋಗಿರಿ ಮಣಿಗಿರಿಗೆ ನೀ- । ವಂದದಿಂದಲಿ ನೋಡಿ ಏಳ್ಋಷಿ- । ವೃಂದವಾಚರಿಸಿದರು ತಪವನು ಚಂದದಿಂದಲ್ಲಿ ॥41॥

ವೃಷಭಗಿರಿ ಕಲ್ಯಾಣನಗರವು । ವಸುಧೆಯೊಳು ಬಹು ಪುಣ್ಯದಾಯಕ । ನುಸುಳಲಾರರು ಜನ್ಮದಲಿ ಕೇಳ ಸ್ನಾನಮಾತ್ರದಲಿ ॥
ಅಸಮಪುಣ್ಯ ಮಹಾಬಲೇಶ್ವರ । ಮಿಸುಕಲಾರದು ಪಾಪ ಶ್ರೀಗಿರಿ । ಯಶವು ಕೊಡುವುದು ಷಷ್ಟಿ ಯಜ್ಞದ ಫಲವ ದರ್ಶನದಿ ॥42॥

ಮುಟ್ಟುದೋಷದ ತೀರ್ಥಗಳ ನೀವ್ । ಮುಟ್ಟಬೇಡಿರಿ ತೀರ್ಥನದಿಗಳ । ಮುಟ್ಟಬಾರದು ನದಿಗಳೆಲ್ಲವ ಕರ್ಕಸಿಂಹದಲಿ ॥
ಮುಟ್ಟಲಾರದು ದೋಷ ತೀರದ । ಹುಟ್ಟುರಹಿವಾಸಿಗಳನಿವರಿಗೆ । ಮುಟ್ಟ ದೋಷವು ಮೂರುದಿನ ಕೇಳೆಂದನಾ ಗುರುವು ॥43॥

ಕಾಶಿಭಾಗೀರಥಿಯು ಗೌತಮಿ । ಯಾಸರಯು ನರ್ಮದೆಯು ಸಿಂಧುವು । ಆಸರಿತ್ ಕೇಳ್ ಚಂದ್ರಭಾಗೆ ಮಹಾನದಿಗಳಾರು ॥
ಮಾಸವೆರಡರ ನೇಮವಿಲ್ಲದೆ । ನೀವ್ ಸದಾ ಮೂರ್ದಿವಸ ತ್ಯಜಿಸಿರಿ । ದೋಷವಿಹುದೈ ಹತ್ತು ದಿನಗಳು ಗ್ರೀಷ್ಮ ಕಾಲದಲಿ ॥44॥

ಒಂದೆರಾತ್ರಿಯು ಭಾವಿಕೆರೆಗಳ । ಸಂದು ಮುಟ್ಟಿನ ದೋಷ ಹೊಸ ಜಲ । ಬಂದ ದಿವಸವೆ ತಿಳಿಯಬೇಕಾ ನದಿ ರಜಸ್ವಲೆಯೂ ॥
ಮಿಂದರಾದಿನ ದೋಷ ಬರುವುದು । ಎಂದು ತಿಳುಹಿಸಿಕೊಟ್ಟು ಶಿಷ್ಯ । ವೃಂದಕಪ್ಪಣೆ ಕೊಟ್ಟ ನಾತೀರ್ಥಾಟಣಕೆ ಮುದದೀ ॥45॥

ಗುರುಚರಣಕಭಿನಮಿಸಿ ಶಿಷ್ಯರು । ಪೊರಟರೈ ತೀರ್ಥಾಟಣಕೆ ನಂ- । ತರಕೆ ಗುರುವರನಿದ್ದನಲ್ಲಿಯೆ ಗುಪ್ತ ರೂಪದಲಿ ॥

ಗುರುಕಥಾಮೃತಪಾನದಿಂ ಕಿವಿ- । ಗಿರದು ತೃಪ್ತಿಯು ಕೇಳಿ ಮತ್ತಿ । ಷ್ಟಿರದೆ ಬೇಡುವುದೇನಿದಚ್ಚರಿ ವಿಷ್ಣು ಮಹಿಮೆಯಲಾ ॥46॥

॥ ಅಧ್ಯಾಯ 15 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 16

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುಚರಣಸದ್ಭಕ್ತಿ ಮಾಡುವ । ಪರಿಯ ಶಿಷ್ಯನಿಗರುಹಿ ಭುವನೇ । ಶ್ವರಿಗೆ ಕೃಷ್ಣಾ ನದಿತಟಾಕಕೆ ಬಂದನಾ ಗುರುವು॥

ಗುರುವರನು ತೀರ್ಥಾಟಣಕೆ ತಾ । ತೆರಳಿ ಪೋದನದೆಲ್ಲಿ ಶ್ರೀಗುರು- । ವರನು ಯಾರೊಡನಿದ್ದನೈ ಶಿಷ್ಯತ್ವವನು ಪಡೆದು ॥
ಕರುಣದಿಂದೆನಗರುಹು ಕಥೆಯನು । ಗುರುಕೃಪಾಸತ್ಪಾತ್ರ ನಿನ್ನಯ । ಚರಣಕಭಿವಂದಿಸುವೆನೆಂದನು ನಾಮಧಾರಕನು ॥1॥

ಎಂದು ಶಿಷ್ಯನ ನುಡಿಯ ಕೇಳ್ದಾ- । ನಂದದಿಂದಲಿ ಸಿದ್ಧ ಶಿಷ್ಯನಿ- । ಗೆಂದ ನೀ ಬಹು ಧನ್ಯ ಸದ್ಗುರುಭಕ್ತ ಪುಂಗವನು ॥
ನೊಂದು ಬಳಲಿದೆ ನಾನು ಮಾಯಾ- । ಸುಂದರಸುಷುಪ್ತಿಯಲಿ ಕೇಳ್ನಿ- । ನ್ನಿಂದ ಜಾಗೃತವಾಯ್ತು ಜ್ಞಾನಜ್ಯೋತಿಯುದಯಿಸಿತು ॥2॥

ನೀನೆ ಯೆನ್ನಯ ನಾಮಧಾರಕ । ಪ್ರಾಣಸಖ ನಿನ್ನಿಂದ ಗುರುಚರಿ- । ತ್ರಾನುಭವ ನೆನಪಾಯ್ತು ಸುಖ ನಿನ್ನಿಂದ ದೊರೆಯಿತಲಾ ॥
ನಾನು ಕೇಳಜ್ಞಾನತಿಮಿರದ । ಬೇನೆಯೆಂಬುವ ಬಿಸಿಲಿನಲಿ ಕಂ- । ಗಾಣದಾದೆನು ನೀ ಸುಧಾಮೃತ ಪಾನವೆನಗಿತ್ತೆ ॥3॥

ನೀನು ಮಾಡಿದುರ್ಪಕೃತಿಗೆ ಕೇಳ್ । ಮಾನಸದಿ ಸಂತುಷ್ಟನಾದೆನು । ಹಾನಿಯಾಯಿತು ನಿನ್ನ ದೈನ್ಯವು ವಂಶವಂಶದಲಿ ॥
ನೀನು ಸುತಸಂತಾನವೃದ್ಧಿಯ । ಸಾನುರಾಗದಿ ಪಡೆದು ಸುಖಧನ । ಧಾನ್ಯ ಸಂಪತ್ತಿಯನು ಪಡೆಯುವೆ ನಂಬು ನೀನಿದನು ॥4॥

ಗುರುಕೃಪೆಯ ಬಾಲಕನು ನೀನಿರೆ । ಧರೆಯೊಳೆಲ್ಲರು ಮಾನಕೊಡುವರು । ಗುರುಚರಿತ ಸುರತರುವು ಪೇಳ್ವೆನು ಗುಹ್ಯ ತತ್ವವಿದು ॥
ಗುರುವರನು ಗೌಪ್ಯದಲಿ ವೈಜೇ- । ಶ್ವರನ ಸನ್ನಿಧಿಯಲ್ಲಿ ಬಹುದಿನ- । ವಿರಲು ನಾನಿದ್ದೆನು ಕಣಾ ಗುರುಚರಣ ಸೇವೆಯಲಿ ॥5॥

ವರುಷವೊಂದಾ ಸ್ಥಾನಕಿದ್ದೆವು । ಹರುಷದಿಂ ಗೌಪ್ಯದಲಿ ಕೇಳಾ । ಪರಮ ಮಂಗಲಸ್ಥಾನ ಬಣ್ಣಿಸಲಾರೆ ಮಹಿಮೆಯನು ॥
ಇರುವಳಲ್ಲಿ ಭವಾನಿಯಂಬೆಯು । ಶರಣರಿಂಗಾರೋಗ್ಯವೀವಳು । ಗುರುವರನ ದರ್ಶನಕೆ ಬಂದನದೊಬ್ಬ ಮುನಿವರರು ॥6॥

ಗುರುವರನ ನೋಡಿದನು ಚರಣದಿ । ಶಿರವನಿಟ್ಟನು ಭಕ್ತಿಭಾವದಿ । ತಿರುತಿರುಗಿ ಸಂತೋಷದಿಂದಲಿ ಸ್ತುತಿಸತೊಡಗಿದನು ॥
ಶರಣವತ್ಸಲ ರಕ್ಷಿಸೆನ್ನನು । ಮರೆಯಬೇಡಜ್ಞಾನವೆಂಬುವ । ಶರಧಿಯಲಿ ಮುಳುಗಿಹೆನು ರಕ್ಷಿಸು ರಕ್ಷಿಸೈ ನೀನು ॥7॥

ಮಾನಸವು ಸ್ಥಿರವಾಗಲೊಲ್ಲದು । ಜ್ಞಾನವಿಲ್ಲದೆ ಸ್ಥಿರವದಾಗದು । ಜ್ಞಾನಮೂರುತಿ ನಿನ್ನ ಕಂಡೆನು ಮಾರ್ಗದಾಯಕನಾ ॥
ಜ್ಞಾನವಿಲ್ಲದೆ ತಪವು ವ್ಯರ್ಥವು । ಮಾನನಿಧಿ ಕೇಳ್ನಿನ್ನ ನೋಡಿಯೆ । ಮಾನಸದಿ ಸಂತೋಷವಾಯಿತು ತೋರಿಸೈ ಕೃಪೆಯಾ ॥8॥

ಗುರುಚರಣ ಸೇವೆಯನು ಬಹುದಿನ- । ವಿರದೆ ಮಾಡದೆ ತಿರುಗುತಿಹೆ ನಾ । ಸ್ಥಿರವಿದಾಗದು ಮನವು ಕೇಳದರಿಂದಜ್ಞಾನದಲಿ ॥
ಧರೆಗೆ ತಾರಕ ನೀನು ನಿನ್ನಯ । ದರುಶನವು ಮೇಣಾಯ್ತು ಮುಂದೆನ । ಗರುಹು ಸಂತೋಷದಲಿ ತಾರಕ ಮಂತ್ರದುಪದೇಶ ॥9॥

ಮುನಿಯ ವಚನವ ಕೇಳಿ ನಗುತಾ- । ಕ್ಷಣಕೆ ಶ್ರೀಗುರುವರನು ಪೇಳ್ದನು । ಮುನಿತನವು ಗುರುಹೊರತು ಸಾಧ್ಯವೆ ಗುರುವೆ ತಾರಕನು ॥
ಮುನಿಯು ಗುರುವಚನವನು ಕೇಳುತ । ಮನದೊಳಗೆ ದುಃಖಾತಿರೇಕದಿ । ಘನತರದ ವಿನಯದಲಿ ಬಿನ್ನೈಸಿದನು ಗುರುವರಗೆ ॥10॥

ಗುರುವು ಯೆನಗಿದ್ದನು ಕಣಾ ನಿ । ಷ್ಠೂರನು ಬಹು ಸಂತಾಪಕಾರಕ । ನರುಹಲಾರನು ವೇದಶಾಸ್ತ್ರ ಪುರಾಣವ್ಯಾಕರಣಾ ॥
ಸ್ಥಿರವು ಮಾನಸವಿಲ್ಲವೆನಗೆಂ- । ದರುಹಿ ವಿದ್ಯಾದಾನ ನಿಷ್ಫಲ- । ಕರವೆನುತ ಪೇಳುವನು ಯೆನ್ನನು ಬೈದು ದೂಷಿಪನು ॥11॥

ಹೇಳುವನು ಬಹು ಕಷ್ಟ ಕೆಲಸವ । ಕೇಳಲಾರನು ಯೆನ್ನ ಮಾತನು । ಕಾಲ ಕಳೆದೆನು ಬಹು ದಿವಸ ನಿಜಸೌಖ್ಯ ಮಾನಿಸರೇ ॥
ಹೇಳಲಾರೆನು ಕೊಟ್ಟ ತ್ರಾಸವ । ತಾಳಲಾರೆನು ಗುರುವಿನುಪಟಳ । ಬೀಳುಕೊಟ್ಟೆನು ಮನದಿ ನೊಂದೆನು ಯೆಂದನಾ ಮುನಿಯು ॥12॥

ಮುನಿವಚನವನು ಕೇಳಿ ಗುರುವರ । ಮನದಿ ನಗುತಿಂತೆಂದನಚ್ಚರಿ । ಯೆನಗೆ ತೋರ್ಪುದು ನಿನ್ನ ವರ್ತನ ನೀನೆ ಮೂರ್ಖನಲಾ ॥
ಮನೆಯೊಳಗೆ ತಾ ಹೇತು ಪೂರ್ವಾ । ರ್ಜನಕೆ ಬೈಯುವ ತೆರದಿ ನಿನ್ನಯ । ಗುಣವು ತೋರುವುದೆಂದು ಗುರುವರ ಪೇಳ್ದನಾ ಮುನಿಗೆ ॥13॥

ಪರರಿಗಪಶಕುನವನು ಮಾಡುವ । ಭರದಿ ತನ್ನಯ ಮೂಗ ಕೊಯ್ಯುವ । ನರನ ಪರಿಯಲಿ ನೀನು ನಿಜ ಕೇಳಾತ್ಮಘಾತಕಿಯು ॥
ಗುರವ ನಿಂದಿಸಿ ತನ್ನ ಗುಣವು- । ಚ್ಚರಿಸಿದರೆ ನಿನಗೆಂತು ಜ್ಞಾನವು । ಬರುವುದೈ ಸ್ಥಿರವೆಂತು ಮನವಾಗುವುದು ಪೇಳೆನಗೆ ॥14॥

ಗುರುವೆ ಸುರತರು ಗುರುವು ಹತ್ತರ- । ವಿರಲು ಗುರುವನು ಬಿಟ್ಟು ದೇಶಾಂ- । ತರಕೆ ತಿರುಗುವ ನಿನ್ನ ನೋಡಲು ವಿಸ್ಮಯವದಾಯ್ತು ॥
ಕರತಳದಿ ಸಿಕ್ಕಿರ್ದ ನಿಧಿಯನು । ಮರುಳೆ ಬಿಡುವರೆ ಮತ್ತೆ ದೇಶಾಂ- । ತರಕೆ ಹುಡುಕುತ ಪೋಗುವರೆ ನೀ ಮೂರ್ಖರಾಜನಲಾ ॥15॥

ಗುರುವೆ ವಿದ್ಯಾಮೂಲಪೀಠವು । ಗುರುವೆ ನಿಗಮಾಗಮದ ಬೀಜವು । ಗುರುವೊಲಿದರೈ ಶಾಸ್ತ್ರವಿದ್ಯಾ ಸಾಧ್ಯವಾಗುವದು ॥
ಗುರುವಿನಾಶೀರ್ವಾದವಾಗಲು । ಪರಮ ಸಿದ್ಧಿಗಳೆಂಟು ನಿನ್ನಯ । ಪರಮ ದಾಸಿಗಳಾಗಿ ವರ್ತಿಪರೇನ ಹೇಳುವೆನು ॥16॥

ಗುರುವರನ ನುಡಿ ಕೇಳಿ ಮುನಿವರ । ಚರಣಕಭಿವಂದಿಸುತ ಪೇಳ್ದನು । ಗುರುವೆ ಕೇಳೈ ನೀನೆ ವಿದ್ಯಾಜ್ಞಾನಸಾಗರನು ॥
ಗುರುವೆ ನಿರ್ಗುಣ ಮೂರ್ತಿ ನೀನೇ । ಗುರುವೆ ನೀನು ವಿಕಾರಹೀನನು । ಗುರುವೆ ರಕ್ಷಿಸು ರಕ್ಷಿಸೆನ್ನನು ದಯದಿ ಮೂಢನನು ॥17॥

ಗುರುವ ತಿಳಿಯುವ ಪರಿಯದಾವುದು । ಗುರುವ ಸೇವಿಪ ರೀತಿ ಯಾವುದು । ಗುರುವನರಿಯೆನು ಮಾಯೆಯಲಿಮುಳುಗಿಹೆನು ಗುರುರಾಯ ॥
ಗುರುವ ತಿಳಿದರೆ ಯೆನ್ನ ಮಾನಸ । ಸ್ಥಿರವದಾಗುವದೆಂದು ತಿಳಿವೆನು । ಕರುಣದಿಂ ನೀ ದಾಟಕ್ಕೆ ಸಂಸಾರ ಶರಧಿಯನು ॥18॥

ಎಂದ ನುಡಿಯನು ಕೇಳಿ ಗುರುವರ । ನೆಂದನಾ ಮುನಿವರಗೆ ಕೇಳೈ । ತಂದೆತಾಯ್ಗಳು ಗುರುವಲಾ ಉಪದೇಶ ಕೊಡುವವನು ॥
ಮುಂದೆ ಹರಿಹರ ಬ್ರಹ್ಮರಿಗೆ ಗುರು- । ವೆಂದು ಸಂಬೋಧಿಪರು ಜಗದಲಿ । ಯೊಂದೆ ಮನದಲಿ ಸೇವಿಸವರನು ವಿಷ್ಣುರೂಪರಲಾ ॥19॥

ಮುನಿವರನೆ ಕೇಳ್ ಪೇಳುವೆನು ನಾ । ನಿನಗೆ ಕಥೆಯನು ಭಾರತದ ಮೊದ- । ಲನೆಯ ಪರ್ವದಿ ವಿಸ್ತರಿಸಿದನಾ ಧೌಮ್ಯ ಗುರುವರನಾ ॥
ಮುನಿವರನೆ ಕೇಳ್ ಧೌಮ್ಯ ನಾಮದಿ । ವಿನುತ ದ್ವಾರಾವತಿಯೊಳಿದ್ದನು । ಮುನಿಗೆ ವೇದಾಭ್ಯಾಸ ಮಾಡುವ ಮೂರು ಶಿಷ್ಯರಲಾ ॥20॥

ಅರುಣನೆಂಬುವ ಪ್ರಥಮ ಶಿಷ್ಯನು । ಎರಡನೇಯನ ಬೈದನೆಂಬುವ । ಮರಳಿ ಮೂರನೆಯವನು ಕೇಳುಪಮನ್ಯುಯೆಂಬವನು ॥
ಗುರುವರನ ಮನೆಯಲ್ಲಿ ಸೇವಾ- । ಪರರು ವಿದ್ಯಾಭ್ಯಾಸಿಗಳು ತಾ । ಪರಮ ಭಕುತಿಯಲಿವರು ಧೌಮ್ಯನ ಸೇವಿಸುತ್ತಿಹರು ॥21॥

ಮನೆಯೊಳಗೆ ಶಿಷ್ಯರನು ನಿಲ್ಲಿಸಿ । ಮನದ ಸತ್ವವ ಪರಿಕಿಸುತ ಗುರು । ತನಗೆ ಮನಬಂದಂತೆ ಯೋಲಿವನು ಶಿಷ್ಯಗುಣದಂತೆ ॥
ಮನವ ವರೆ ಹಚ್ಚು ವನು ಶಿಷ್ಯನ । ಮನದಿ ಮೆಚ್ಚಲು ಗುರುವು ಶಿಷ್ಯಗೆ । ಕ್ಷಣದೊಳೋಂದೇ ಕಾಮಿತಾರ್ಥವ ಕೊಡುವನೈ ಗುರುವು ॥22॥

ಜಲವು ಹರಿವುದು ಕೆಳಗೆ ಧೌಮ್ಯನ । ಹೊಲವಿಹುದು ಮೇಲಕ್ಕೆ ಭತ್ತದ । ಬೆಳೆಯು ನೀರಿನಭಾವದಿಂದೊಣಗಿದುದು ಹೊಲದೊಳಗೆ ॥
ಹೊಲಕೆ ಕರೆದೊಯ್ದೆಂದನರುಣಗೆ । ಬೆಳೆಯೊಣಗಿ ಹೋಗುವುದು ಮುಂದಿನ । ಕೆಲಸನಿನ್ನದೆನುತ್ತ ನುಡಿದನು ಶಿಷ್ಯನಿಗೆ ಧೌಮ್ಯ ॥23॥

ನೋಡಿದನು ನೀರಿನ ಪ್ರವಾಹವ । ಮಾಡಿದನು ಯತ್ನವನು ಮೇಲ- । ಕ್ಕೋಡಲಾಗದು ನೀರು ಕಾಲುವೆಯಲ್ಲಿ ಹರಿಯುವದು ॥
ಬಾಡಿ ಹೋಗುವ ಬೆಳೆಗೆ ನೀರನು । ಹೂಡುವುದು ಹ್ಯಾಗೆಂದು ಯೋಚಿಸಿ । ಕೂಡಿಸಿದನಾ ಕಲ್ಲಬಾಂದನು ಹಾಕಿದನು ಜಲದಿ ॥24॥

ನಿಲ್ಲಲಾರದು ಕಲ್ಲು ಕಾಲುವೆ । ಯಲ್ಲಿ ಹರಿಯುತ ಘಡಘಡನೆ ಜಲ- । ವೆಲ್ಲ ಹರಿಯಿತು ಬೆದರಿದನು ಮನದೆ ತಾ ನಾರುಣಿಯು ॥
ಬಲ್ಲ ತೆರದಲಿ ಯತ್ನ ಮಾಡಲು । ಸಲ್ಲದಪಯಶ ಬರಲು ಮಾನಸ । ದಲ್ಲಿ ಗುರುಚರಣವನು ಧ್ಯಾನಿಸಿ ಮುಂದೆ ಯೋಚಿಸಿದಾ ॥25॥

ಗುರುವಚನ ಮಾಡದವ ರೌರವ । ನರಕಭಾಜನನಹನು ನಾನೀ- । ಪರಿಯ ದುಷ್ಕೀರ್ತಿಯನು ತಾಳೆನು ಪ್ರಾಣ ತ್ಯಜಿಸಿದರು ॥
ಗುರುವಿನಾಜ್ಞೆಯೆ ವೇದವಾಕ್ಯವು । ಮರಣ ಬಂದರೆ ಲೇಸು ಕರ್ಮದಿ । ಗುರುವೆ ರಕ್ಷಿಸು ರಕ್ಷಿಸೆಂದನು ದುಗುಡದಲಿಯರುಣಿ ॥26॥

ಎಂದು ಮನದಲಿ ನಿರ್ಧರಿಸಿ ತಾ । ಬಂದನಾ ಕಾಲುವೆಯ ಬಾಯಿಗೆ । ನಿಂದು ಕಾಲಿಂದೆರಡು ದಿಕ್ಕಿಗೆ ಘಟ್ಟಿಯೊತ್ತಿದನು ॥
ಮುಂದೆ ಕೈಯಿಂದೆರಡು ಬದಿಗಳ । ಚಂದದಿಂದಲಿ ಹಿಡಿದು ನೀರಿನ । ಬಾಂದಿನಂದದಿ ತನ್ನ ದೇಹವ ಮಾಡಿದನು ಜಲದಿ ॥27॥

ಇಂತು ನೀರಿನ ಬಾಂದು ಕಟ್ಟಿದ । ನೆಂತು ವರ್ಣಿಪೆ ಶಿಷ್ಯಯುಕ್ತಿಯ । ನಿಂತನಾ ನೀರಿನಲಿ ಸಂತಸದಿಂದ ತಾ ನರುಣಿ ॥
ಬಂತು ಧೌಮ್ಯನ ಸ್ವಾರಿ ನೀರಿನ । ಪಂಕ್ತಿಯಿಂದಲಿ ಹೊಲವು ನೀರುಂ- । ಡಂತೆಯಾಯಿತು ಬೆಳೆಗೆ ಬಂತಾ ಲವಲಲಿಕೆ ಕೇಳ್ಕೈ ॥28॥

ಹೊತ್ತು ಮುಳುಗಿತು ಶಿಷ್ಯ ಬಾರದೆ । ಚಿತ್ತದಲಿ ಧೌಮ್ಯನಿಗೆ ಕಳವಳ । ಹತ್ತಿತೈ ನಡೆತಂದನಾ ಹೊಲದೆಡೆಗೆ ಧೌಮ್ಯ ಮುನಿ ॥
ಮತ್ತೆ ಹೊಲದಲಿ ನೋಡಲಾಕ್ಷಣ । ಹತ್ತಿರುವ ನೀರಿನ ಪ್ರವಾಹವ । ಸುತ್ತುಮುತ್ತಲು ನೋಡಿ ಮನಕಾನಂದವೆನಿಸಿತಲಾ ॥29॥

ಸುತ್ತುಮುತ್ತಲು ನೋಡಿದನು ಮುನಿ- । ಸತ್ತಮನು ಶಿಷ್ಯನನು ಕಾಣದೆ । ಯೆತ್ತ ಹೋದನೊ ಹುಲಿಗೆ ತುತ್ತಾದನೊ ವನದಿ ಶಿಷ್ಯ ॥
ಉತ್ತರೋತ್ತರ ಪ್ರೇಮಸ್ವರದಲಿ । ಮತ್ತೆ ಕರೆದನು ಮಗನೆ ಬಾಬಾ । ಯೆತ್ತ ಹೋದಿಯೊ ಎಂದು ಗೋಳಾಡಿದನು ಧೌಮ್ಯ ಮುನಿ ॥30॥

ಗುರುವಚನವನು ಕೇಳ್ದು ಶಿಷ್ಯನು । ಪರಮ ಸಂತೋಷದಲಿ ಬಂದನು । ಚರಣಕೆರಗುತ ವಿವರಿಸಿದನಾ ತನ್ನ ಸಾಹಸವಾ ॥
ಹರುಷದಿಂದಾ ಶಿಷ್ಯನನು ಗುರು- । ವರನು ಬಿಗಿದಪ್ಪಿದನು ಮುದ್ದಿಸಿ । ವರವನಿತ್ತನು ಶುದ್ಧ ಭಾವದೊಳೇನ ಹೇಳುವೆನು ॥31॥

ವೇದಶಾಸ್ತ್ರ ವ್ಯಾಕರಣ ಮೊದ । ಲಾದ ವಿದ್ಯಾಸಾಗರವನೀ । ನೋದಿ ಪಾರಂಗತ್ವವನು ಪಡೆ ಸುಲಭಮಾರ್ಗದಲಿ ॥
ಆ ದಯಾನಿಧಿ ಧೌಮ್ಯಮುನಿ ಕರೆ । ದಾದರದೋಳಾಶ್ರಮಕೆ ಶಿಷ್ಯನ । ಭೇದವಿಲ್ಲದೆ ಸತ್ಕರಿಸಿದನು ಶಿರದಿ ಕರವಿಡುತಾ ॥32॥

ಮಗುವೆ ನಿನಗಾಯಾಸವಾಯಿತು । ಜಗದಿ ಗುರುಸೇವೆಯ ಮಹತ್ವದ । ಬಗೆಯ ತೋರಿಸಿ ಧನ್ಯನಾದ್ಯೆ ವಿದ್ಯೆ ತೀರಿಸಿದೆ ॥
ಮಗನೆ ನೀನು ವಿವಾಹ ಮಾಡುತ । ಸುಗುಣೆ ಭಾರ್ಯೆಯ ಸಹಿತ ಯೆರಡನೆ । ಬಗೆಯಲಾಶ್ರಮ ಸ್ವೀಕರಿಸು ನೀನೆಂದನಾ ಧೌಮ್ಯ ॥33॥

ಗುರುನಿರೋಪವ ಪಡೆದು ನಡೆಯ । ಲ್ಕರುಣಿ ತನ್ನಯ ಮನೆಗೆ ಮೇಣಿ- । ಬ್ಬರು ಕಣಾ ಗುರುಮನೆಯೊಳಿದ್ದರು ಕೇಳು ಚರಿತವನು ॥
ಕರೆದು ಬೈದನ ಪೇಳ್ದನಾಗುರು- । ವರನು ಮಗನೇ ಹೋಲಕೆ ಪೋಗೈ । ತ್ವರದಿತಾರ್ಯೆ ಮನೆಗೆ ಬೆಳೆಯನು ನೋಡಿ ಸ್ಥಿತಿಗತಿಯಾ ॥34॥

ಗುರುನುಡಿಯ ತಾ ಕೇಳಿ ಬೈದನು । ತ್ವರದಿ ಹೋದನು ಹೊಲಕೆ ಬಹುದಿನ- । ವಿರುತ ಹೊಲದಲಿ ಬೆಳೆಯ ಕೊಯ್ದನು ರಾಶಿಮಾಡಿದನು ॥
ಮರಳಿ ಬಂದಾ ಮನೆಗೆ ಗುರುವಿಂ- । ಗೆರಗಿ ಬಿನ್ನಹ ಮಾಡಿದನು ಗುರು- । ವರನು ಕೊಟ್ಟನು ಗಾಡಿಯೆತ್ತನು ಧಾನ್ಯ ತರುವುದಕೆ ॥35॥

ಎತ್ತು ಗಾಡಿಯನೊಯ್ದು ಶಿಷ್ಯನು । ಭತ್ತವನು ಹೇರಿದನು ಗಾಡಿಯ । ಲಿತ್ತು ಕೇಳಾ ಹೊಲದಿ ಭತ್ತದ ಖಂಡಿ ಯೆರಡಲ್ಲಿ ॥
ಎತ್ತು ಕಟ್ಟಿದನೊಂದು ಕಡೆಯಲಿ । ಮತ್ತು ತಾನೆರಡನೆಯ ಕಡೆಯಲಿ । ಯೆತ್ತಿ ಯೆಳೆಯುವನವನು ಹೇರಿದ ಗಾಡಿಯನು ಮನೆಗೆ ॥36॥

ತ್ವರೆಯೊಳೋಡುವುದೆತ್ತು ಯಷ್ಟೋ । ತ್ವರದಿ ಹೆಜ್ಜೆಯನಿಡಲು ಸಲ್ಲದೆ । ಕೊರಳಿಗಿಕ್ಕಿದನವನು ಹುರಿಕಟ್ಟೆ ಯನು ಸತ್ವರದಿ ॥
ಮರಳಿ ಗಾಡಿಯನೆಳೆವ ವೇಳೆಗೆ । ಧರಣಿಯಲಿ ಕೆಸರೊಳಗೆ ಚಕ್ರವು । ತಿರುಗಲಾರದು ಕೆಸರು ನುಂಗಿತು ಚಕ್ರಗಳನಾಗಾ ॥37॥

ಕೆಸರೊಳಗೆ ಸಿಲುಕಿರ್ದ ಗಾಡಿಯ । ನಸಮಬಲದಲಿ ಶಿಷ್ಯನೆಳೆದನು । ಉಸುರುಗಟ್ಟಿತು ಕೊರಳ ಪಾಶದಿ ತ್ರಾಣದಿಂದೆಳೆದು ॥
ಅಸುವಳಿದ ಸಂಕಟವು ಬಂತೈ । ಬಸವಳಿವ ಶಿಷ್ಯನನು ನೋಡಲು । ಋಷಿಯ ಧೌಮ್ಯನು ಬಂದು ನೋಡಿದನಾಗ ಶಿಷ್ಯನನು ॥38॥

ನೋಡಿದನು ಶಿಷ್ಯನನು ಧೌಮ್ಯನು । ಪಾಡಿದನು ಶಿಷೋತ್ತಮನ ಗುಣ । ಗಾಢಪ್ರೇಮಾಲಿಂಗನವ ತಾನಿತ್ತು ಶಿಷ್ಯನಿಗೆ ॥
ಮೂಢತನವದು ಗುಟ್ಟು ನಿನಗೀ । ರೂಢಿಯಲಿ ಜ್ಞಾನೋದಯವು ಬಹು । ಗಾಢತರದಲಿ ಬರಲೆನುತ ವರವಿತ್ತನಾ ಗುರುವು ॥39॥

ಗುರುವು ಕೊಟ್ಟಿಹ ವರದಿ ವಿದ್ಯಾ । ಶರಧಿಯನು ದಾಟಿದನು ಬೈದನು । ಗುರುನಿರೋಪವ ಪಡೆದು ಮನೆಗೈತಂದನಾ ಕ್ಷಣಕೆ ॥
ಗುರುವರನ ಮೂರನೆಯ ಶಿಷ್ಯನು । ಪರವು ಸೇವಾಸಕ್ತನಾದನು । ಪರಿ ಕಿಸಲು ಕರೆದವನ ಧೌಮ್ಯನು ಚಿಂತಿಸಿದನಾಗ ॥40॥

ಬಾರೊ ಶಿಷೋತ್ತಮನೆ ನಿನಗಾ- । ಹಾರದಲಿ ಮಿತಿಯಿಲ್ಲವದರಿಂ । ಬಾರದೆ ಮನ ನಿನಗೆ ವಿದ್ಯಾ ಪಠಣದಲಿ ನಿಜವು ॥
ತೋರಿಸುವೆ ನಿನಗೊಂದುಪಾಯವ । ಚಾರಗೋಧನವೆಲ್ಲ ಮೇಯಿಸೆ । ದೂರ ವನದಲ್ಲಿ ಪ್ರತಿದಿನ ಬಿಡದೊಯ್ಯಬೇಕೆಂದಾ ॥41॥

ಗುರುವಿನಾಜ್ಞೆಯ ಕೇಳಿ ಶಿರದಲಿ । ಧರಿಸಿ ನಡೆದನು ವನಕೆ ಹಸಿವೆಯ । ಭರಕೆ ಬೇಗನೆ ಮರಳಿ ಬಂದನು ಮನೆಯಲುಪಮನ್ಯು ॥
ಗುರುವು ಕೋಪದಿ ಮರಳಿ ಕಳುಹಿದ । ನರುಹಿದನು ವನದಲ್ಲಿ ರಾತ್ರಿಯ- । ವರೆಗೆ ನೀನಿರಬೇಕೆನುತ ಬೆದರಿಸಿದನಾ ಧೌಮ್ಯ ॥42॥

ಇಂತು ಗುರುವಚನವನು ಕೇಳುತ । ಚಿಂತಿಸಿದನುಪಮನ್ಯು ಹಸಿವೆಯ- । ನೆಂತು ತಾಳಲಿ ಯೂಟವಿಲ್ಲದೆ ಸಂಜೆತನಕೆನುತ ॥
ನಿಂತು ವನದಲಿ ಕಾಯ್ದು ಗೊವ್ಗಳ । ಸಂತಸದಿ ಭಿಕ್ಷೆಯನು ಬೇಡುತ । ಶಾಂತಿಮಾಳ್ಪನು ಹೊಟ್ಟೆ ಹಸಿವನು ಗುರುವ ಕೇಳದಲೆ ॥43॥

ಹಲವು ದಿವಸಗಳಾಗಲೀ ಪರಿ- । ಯಲಿ ಮಹಾಶ್ಚರ್ಯದಲಿ ಧೌಮ್ಯನು । ಯೆಲೆ ಮಗನೆ ನೀನೆಂತು ದೇಹದ ಪುಷ್ಟಿಯಾಂತಿರುವೆ ॥
ತಿಳಿಸಿದನು ತಾನಾಗ ಶಿಷ್ಯನು । ನಲಿವಿನಿಂದಾ ಭಿಕ್ಷೆ ಬೇಡುತ । ಮೆಲುತಿಹೆನು ಭೋಜನವನೆಂದನು ಧೌಮ್ಯಮುನಿವರಗೆ ॥44॥

ಕೇಳಿ ನುಡಿಯನು ಧೌಮ್ಯಮುನಿವರ । ತಾಳಿದನು ಕ್ರೋಧವನು ಮಗನೇ । ಹೇಳು ಯೆನ್ನನು ಬಿಟ್ಟು ಭೋಜನ ಹೇಗೆ ಮಾಡುವಿಯೋ ॥
ತಾಳಲಾರೆನು ನಿನ್ನ ವರ್ತನ । ಕೂಳ ನೀ ತಿನಬಾರದೈ ಕೇ । ಳಾಲಿಸೈ ಭಿಕ್ಷಾನ್ನವನು ನೀ ಮನೆಗೆ ತರಬೇಕು ॥45॥

ಎಂದ ನುಡಿಯನು ಕೇಳಿ ಶಿಷ್ಯನು । ಬಂದನೈ ತಾನೆರಡು ಭಿಕ್ಷೆಗೆ । ಒಂದು ಸಮಯದಿ ದೊರೆತ ಭಿಕ್ಷೆಯ ತರುವನೈ ಮನೆಗೆ ॥
ಹಿಂದೆ ಯೆರಡನೆ ಸಾರಿ ಭಿಕ್ಷೆಯ । ತಂದು ತನ್ನುದರವನು ಪೋಷಿಪ । ಸಂದಿತೈ ಈ ರೀತಿಯಲ್ಲಿ ಕೆಲಕಾಲ ಪರಿಯಂತಾ ॥46॥

ಗುರುವರನು ನೋಡಿದನು ಶಿಷ್ಯನ । ಪರಿಯ ದೇಹದ ಪುಷ್ಟಿ ಪೂರ್ವದ । ತೆರದಲಿರುವದ ಕಂಡು ಮಹದಾಶ್ಚರ್ಯವಾಯಿತಲಾ ॥
ಮರಳಿ ಪೇಳ್ದನು ನಿನ್ನ ದೇಹವು । ಕರಗಲಾರದೆ ಪುಷ್ಟಿಯಾಗಿಹ । ಪರಿಯದಾವುದೆನುತ ಧೌಮ್ಯನು ಮನದ ದುಗುಡದಲಿ ॥47॥

ಎರಡು ಸಮಯದ ಭಿಕ್ಷೆ ಬೇಡುತ । ತರುವೆ ಮೊದಲನೆ ಭಿಕ್ಷೆ ಮನೆಗಾಂ । ಮರಳಿ ಭಿಕ್ಷೆಯ ಬೇಡಿಯುದರಂಭರಣ ಮಾಡುವೆನು ॥
ಗುರುವು ಶಿಷ್ಯನ ವಚನ ಕೇಳುತ । ಭರದಿ ಕೋಪದೊಳೆಂದ ಮಗನೇ । ತರಲುಬೇಕೈ ಭಿಕ್ಷೆಯೆಲ್ಲವ ಮನೆಗೆ ತಪ್ಪದಲೆ ॥48॥

ಎಂದ ವಚನವ ಕೇಳಿ ಶಿಷ್ಯನು । ತಂದನಾ ಗೋಗಳನು ವನಕಾ- । ನಂದದಿಂದಲಿ ಯೋಚಿಸಿದನೆರಡನೆಯ ಯುಕ್ತಿಯನು ॥
ಚಂದದಿಂದಲಿ ತಾಯಿಕರುವಿಗೆ । ಬಂದು ಮೊಲೆಯುಣಿಸುವಳು ಕರುಬಾ । ಯಿಂದಸುರಿವುದು ಹಾಲು ತತ್ ಕ್ಷೀರವನು ಕುಡಿಯುವನು ॥49॥

ದಿನಗಳಾದವು ಕೆಲವು ಶಿಷ್ಯನ । ತನುವು ಪುಷ್ಟಿಯ ಪಡೆದು ಬೆಳೆವುದು । ಮುನಿಯು ಕಂಡನು ಕೇಳಿದನು ಶಿಷ್ಯನಿಗೆ ಕೌತುಕದಿ ॥
ವಿನಯದಿಂದುಪಮನ್ಯು ಪೇಳ್ದನು । ವನದೊಳೆಂಜಲ ಹಾಲು ಕುಡಿಯುತ । ತನುವ ಸಂರಕ್ಷಿಪೆನು ಕ್ಷಮಿಸೈ ಗುರುಮಹಾತುಮನೆ ॥50॥

ಕ್ಷೀರವೀಪರಿ ನೀನು ಕುಡಿಯಲು । ಬಾರದೈ ನಿನ್ನೆಂಜಲಿನ ಗೋ । ಕ್ಷೀರ ಕುಡಿಯುವ ಸಮಯ ಬಂತೇ ಯೆಂದನಾ ಧೌಮ್ಯಾ ॥
ಚಾರು ಕ್ರೋಧಾಶ್ಚರ್ಯದಲಿ ಬಹು । ಸಾರಿ ಸಾರಿದನೇನ ಹೇಳುವೆ । ಬೇರೆ ಯುಕ್ತಿಯ ಚಿಂತಿಸಿದನಾ ಶಿಷ್ಯನುಪಮನ್ಯು ॥51॥

ಎರಡನೆಯ ದಿವಸದಲಿ ಶಿಷ್ಯನು । ಬರುತ ವನದಲಿ ಗೋಸಹಿತ ಬಹು- । ಪರಿಯೊಳಾದಿನ ಕ್ಷುತ್ಪಿಪಾಸದಿ ಬೆಂದು ಬಳಲಿದನು ॥
ಬರುತ ಯೆಕ್ಕೆಯ ಗಿಡದ ಕ್ಷೀರವು । ಸುರಿಯುವುದ ತಾ ಕಂಡು ಹಿಗ್ಗಿದ । ನರರೆ ಕ್ಷೀರವಿದೆಂಜಲಲ್ಲಾ ಕುಡಿವೆನಿದನೆಂದಾ ॥52॥

ಹರಿದನೆಲೆಯನು ದೊನ್ನೆ ಮಾಡುತ । ಸುರಿದನದರಲಿ ಯೆಕ್ಕೆ ಹಾಲನು । ಭರದಿ ಕುಡಿದನು ಕ್ಷುತ್ಪಿಪಾಸಾಪೀಡೆಯಿಂದವನು ॥
ಕರದಿ ಪಿಡಿದಾ ಹಾಲುಕಣ್ಣೊಳು । ಸುರಿಯೆ ದೃಷ್ಟಿಯು ಹೋಯಿತಾಕ್ಷಣ । ಕುರುಡನಾದನು ತಿರುಗುತ್ತಿದ್ದನು ವನದಿ ಕಾಣದಲೆ ॥53॥

ಕಣ್ಣು ಕಾಣದೆ ಬಿದ್ದನಾಉಪ- । ಮನ್ಯು ಶಿಷ್ಯನು ಬಾವಿಯಲಿ ಬಲು । ಬನ್ನಬಟ್ಟನು ಗುರುಚರಣ ನೆನೆನೆನೆದು ಬಾವಿಯಲಿ ॥
ಮುನ್ನ ಗೋವುಗಳೆಲ್ಲ ತಿರುಗುತ । ಭಿನ್ನ ಮಾರ್ಗದಿ ನಡೆದವೈ ಉಪ- । ಮನ್ಯು ಬಾರದೆ ಮರುಗಿದನು ಮನದೊಳಗೆ ಧೌಮ್ಯ ಮುನಿ ॥54॥

ಅಸ್ತಮಾನದ ಸಮಯವಾಗಲು । ನಿತ್ಯದಲಿ ಬರುವಂತೆ ಗೋಗಳ । ಮೊತ್ತವನು ತರದಿರಲು ಶಿಷ್ಯನು ಮನೆಗೆ ರಾತ್ರಿಯಲಿ ॥
ಚಿತ್ತದಲಿ ತಾ ಮರುಗಿ ಧೌಮ್ಯನು । ಸುತ್ತು ಮುತ್ತಲು ಶಿಷ್ಯನನು ಹುಡು-। ಕುತ್ತ ನಡೆದನು ಮಗನೆ ಬಾಬಾರೆಂದು ಕರೆಯುತಲಿ ॥55॥

ಕಂದ ಬಾಬಾ ಮಗನೆ ಬಾಬಾ । ರಿಂದು ಮೋರೆಯ ತೋರು ತೋರೆಲೆ । ಯಂಧಕಾರದಿ ಹಾದಿ ತಪ್ಪಿತೆ ಮನೆಗೆ ಬರುವುದಕೆ ॥
ಬೆಂದು ನೀನುಪವಾಸದಲಿ ವನ- । ದಿಂದ ಬರುವರೆ ಶಕ್ತಿ ಪೋಯಿತೆ । ಬಂದು ನೀನೆಮಗೊಮ್ಮೆ ಮೋರೆಯ ತೋರಿಸೈ ಜವದಿ ॥56॥

ಎಂದು ಗುರುವಚನವನು ಕೇಳುತ । ನೊಂದನೈ ಮಾನಸದಿ ಶಿಷ್ಯನು । ತಂದೆ ಬಾ ನಾನೀಗ ಬಿದ್ದಿಹೆ ಬಾವಿಯಲಿ ವನದಿ ॥
ಕಂದಿದಾನನದಿಂದ ಧೌಮ್ಯನು । ಬಂದಾಕ್ಷಣ ಶಿಷ್ಯ ಭಾಷಣ- । ದಿಂದ ಬಾವಿಯಕಡೆಗೆ ಕೇಳಿದನೆಲ್ಲ ಸಂಗತಿಯಾ ॥57॥

ಹೊಟ್ಟೆ ಹಸಿವೆಗೆ ಯೆಕ್ಕೆಹಾಲಿನ । ಕೆಟ್ಟ ರಸವನ್ನು ಕುಡಿದೆ ಕಣ್ಣಿಗೆ । ಥಟ್ಟನದು ಬೀಳಲ್ಕೆ ದೃಷ್ಟಿಯು ಪೋಯಿತೈ ಯೆನಗೆ ॥
ಬಟ್ಟೆಗಾಣದೆ ಬಿದ್ದೆ ಬಾವಿಲಿ । ಕಷ್ಟವನು ನಾ ಪಟ್ಟೆನೆನ್ನಯ- । ದೃಷ್ಟ ವೀಪರಿ ಕಾಯೊ ಶ್ರೀಗುರುರಾಯ ಮೂಢನನು ॥58॥

ನುಡಿದಮಾತನು ಕೇಳಿ ಗುರುವಿಂ- । ಗೊಡಲೊಳಗೆ ಕನಿಕರವು ಪುಟ್ಟಿತು । ಸಡಗರದಿ ಶಿಷ್ಯನನು ಮೇಲಕ್ಕೆತ್ತಿ ತೆಗೆದನಲಾ ॥
ಒಡನೆ ಮಂತ್ರವ ಕೊಟ್ಟನವನಿಗೆ । ದೃಢದಿ ನೀನಶ್ವಿನೀಕುಮಾರರ- । ನೆಡೆಬಿಡದೆ ಭಜಿಸಿದರೆ ದೃಷ್ಟಿಯು ಬರುವುದೈ ನಿಜವು ॥59॥
ಗುರುವಚನವನು ಕೇಳಿ ಶಿಷ್ಯನು । ಪರಮ ಭಕ್ತಿಯೋಳಾಗ ಮಂತ್ರವ । ಗುರುಚರಣಸನ್ನಿಧಿಯಲೇ ಧ್ಯಾನಿಸಿದನಾಕ್ಷಣಕೆ ॥
ಸುರರ ವೈದ್ಯರು ಬಂದು ಶಿಷ್ಯಗೆ । ಹರಸಿ ದೃಷ್ಟಿಯನಿತ್ತರೈ ಗುರು- । ವರನ ಮಹಿಮೆಯ ನೇನ ಹೇಳಲಿ ಸರ್ವಸಿದ್ಧಿಯಲಾ ॥60॥
ವರದ ಹಸ್ತವ ಧೌಮ್ಯ ಶಿಷ್ಯನ । ಶಿರದೊಳಿಟ್ಟಾಶೀರ್ವಚನವನು । ಕರುಣದಿಂದುಚ್ಚರಿಸಲಾಕ್ಷಣ ಜ್ಞಾನವುದಯಿಸಿತು ॥
ಮರಳಿ ಶಿಷ್ಯನ ಕರೆದು ಧೌಮ್ಯನು । ಕರುಣದಿಂದ ನಿರೋಪ ಕೊಟ್ಟನು । ತೆರಳು ನೀ ಮನೆಗೀಗ ಸಂಸಾರವನು ಮಾಡೆನುತಾ ॥61॥
ಭೂತಳದಿ ಬಹು ಶಿಷ್ಯವರ್ಗದ । ಕೀರ್ತಿ ಬರುವದು ನಿನಗೆ ಬಹು ವಿ- । ಖ್ಯಾತ ಶಿಶ್ಯೋತ್ತಂಕನಿಂದಲಿ ಧನ್ಯತೆಯ ಹೊಂದಿ ॥
ಸೋತು ಶೇಷನು ಕುಂಡಲಂಗಳ- । ನೀತಗೀವನು ದಕ್ಷಿಣೆಗೆ ನಿನ- । ಗೀತನಾ ಕುಂಡಲವನೀವನು ಕೀರ್ತಿ ಪಡೆಯುವನು ॥62॥
ರಾಯ ಜನಮೇಜಯಗೆ ಪೇಳ್ದ ನು- । ಪಾಯವನು ಸರ್ಪಗಳ ಯಜ್ಞದ । ಬಾಯಿಗಿಕ್ಕುವ ಹದನ ಮಾಡಿದನೇನ ಹೇಳುವೆನು ॥
ಆ ಯಜನದಲಿ ತಕ್ಷಕನ ಸುರ- । ರಾಯ ಸಹಿತವೆ ತರಿಸಿದನು ಗುರು- । ರಾಯ ನೊಲಿದ ಪ್ರತಾಪವೀಪರಿ ಯೆಂದನಾ ಗುರುವು ॥63॥
ಗುರುವ ನಿಂದಿಪ ನರಗೆ ಬರುವುದು । ದುರಿತವಿಹಪರವಿಲ್ಲ ಕಡೆಗವ । ನರಕಕುಂಭೀ ಪಾಕದಲಿ ಬೀಳುವನು ಶ್ರುತಿಮತದಿ ॥
ಗುರುವ ಭಜಿಸಲು ಭಕ್ತಿಯುತ ತ- । ನ್ನರಗಸಾಧ್ಯವಿದೇನು ಜಗದಲಿ । ತ್ವರದಿ ಬರುವುದು ವೇದಶಾಸ್ತ್ರದ ಜ್ಞಾನರಾಶಿಯದು ॥64॥
ಮೂಢತನದಲಿ ಗುರುವ ನಿಂದಿಸಿ । ರೂಢಿಯಲಿ ನೀ ಬರಿದೆ ಭ್ರಮಣವ । ಮಾಡುವೆಯಲಾ ಕೈಗೆ ಸಿಕ್ಕಿದ ನಿಧಿಯ ಬಿಸುಡುವೆಯಾ ॥
ಓಡು ನಿನ್ನಯ ಗುರುವರನ ಕಡೆ । ಹಾಡಿ ಹರಿಸೈ ಗುರುಚರಿತ್ರವ । ಕೂಡುವುದು ಸರ್ವಾರ್ಥಸಿದ್ಧಿಯು ಗುರು ಪ್ರತಾಪದಲಿ ॥65॥

ಗುರುವೆ ತಾರಕ ಗುರುವೆ ಮಾರಕ । ಗುರುವೆ ಮಂತ್ರದ ಸಿದ್ಧಿಬೀಜವು । ಗುರುವರನ ಸಂತೈಸು ಮಾಯೆಯ ಹರಿದು ನೀ ನೋಡು ॥
ತ್ವರದಿ ಗುರುವನು ಬಿಡದೆ ಮೆಚ್ಚಿಸ । ಲರುಹಿದನು ಮುನಿವರಗೆ ಕೇಳಾ । ನರಹರಿ ಸರಸ್ವತಿಯು ಪ್ರೇಮದಿ ಸದ್ವಿಚಾರವನು ॥66॥

ಎಂದ ಗುರುವಚನವನು ಕೇಳುತ । ನೊಂದನಾ ಮುನಿ ಮನದಿ ಮಗುಳಿಂ- । ತೆಂದನಾ ಗುರುವರನ ಚರಣದಿ ಮಸ್ತಕವನಿಟ್ಟು ॥
ತಂದೆ ಕಾಯೋ ಗುರುವರನೆ ನೀ- । ನೆಂದು ಬಿನ್ನೈಸುವೆನು ನಾ ಗುರು- । ನಿಂದಕನು ನಿಜ ಸದ್ಗತಿಯನಾ ಕಾಣೆನೀ ಜಗದಿ ॥67॥

ಧನ್ಯನಾದೆನು ನಿನ್ನ ವಚನದಿ । ಮನ್ನಿಸಿದೆ ತತ್ವಾರ್ಥಬೋಧನ । ಕಣ್ಣಿಗಂಜನ ಸುರಿದು ದೋಷವ ತೋರಿಸಿದೆ ಯೆನಗೆ ॥
ಮುನ್ನ ಗುರುವಪರಾಧವನು ಯೆನ । ಗಿನ್ನು ಕ್ಷಮಿಸಿನು ಬರಿದೆ ಜಗದಲಿ । ಯೆನ್ನ ಜೀವದ ಸಾರ್ಥಕವ ನಾ ಕಾಣೆ ನೋಡಿದರೆ ॥68॥

ಚಿನ್ನ ಬೆಳ್ಳಿಯ ವಸ್ತುಗಳು ತಾ । ಭಿನ್ನವಾದರೆ ಕೂಡಿಸಲು ಬಹು- । ದಿನ್ನು ಮುತ್ತುಗಳಾ ತೆರದಿ ಕೂಡುವವೆ ಪುಡಿಯಾಗೆ ॥
ಭಿನ್ನವಂತಃಕರಣವಾಗಲು । ಚಿನ್ನದಂದದಿ ಕೂಡಲಾಗದು । ಯೆನ್ನ ಜೀವನ ತೊರೆವೆ ಕಾಣೆನು ಸಾರ್ಥಕವನೀಗ ॥69॥

ಎಂದು ವೈರಾಗ್ಯದಲಿ ತಾ ಮನ । ನೊಂದು ಶ್ರೀಗುರುವರನ ಪಾದಕೆ । ವಂದಿಸುತ ಹೊರವಂಟನಾ ನದಿಯೆಡೆಗೆ ತನ್ಮುನಿಯು ॥
ಬೆಂದು ಹೋಯಿತು ಪಾಪವಗ್ನಿಯ । ಮುಂದೆ ನಿಲುವುದೆ ತೃಣದ ರಾಶಿಯು । ಸಂದು ನಿಲುವುದೆ ಹತ್ತಿರಾಸಿಯು ಬೆಂಕಿ ಸ್ಪರ್ಶದಲಿ ॥70॥

ನರನಿಗುಪರತಿಯಾಗೆ ಜನ್ಮಾಂ- । ತರದ ಪಾಪದ ರಾಶಿ ಸುಡುವದು । ಗುರುವರನು ಮುನಿವರನ ನಿರ್ಧಾರವನು ನೋಡಿದನು ॥
ಕರೆದು ತನ್ನಯ ಬಳಿಗೆ ಮುನಿಯನು । ಶಿರದಿ ತನ್ನಯ ಕರವನಿಟ್ಟನು । ಬರಿದೆ ಚಿಂತಿಸಬೇಡ ನೀನು ವಿರಕ್ತಿಶುದ್ಧನಲಾ ॥71॥

ಸುಟ್ಟು ಹೋದವು ನಿನ್ನ ಪಾಪದ । ಬೆಟ್ಟಗಳು ವೈರಾಗ್ಯವಹ್ನಿಯ । ದೃಷ್ಟಿಯಲಿ ನೀ ಪ್ರಾಣ ತ್ಯಜಿಸಲು ಬೇಡ ನೀ ನೋಡು ॥
ಸ್ಪಷ್ಟ ಮನದಲಿ ನಿನ್ನ ಗುರುವನು । ಕಷ್ಟವಿಲ್ಲದೆ ನೆನಿಸು ಗುರು ಸಂ- । ತುಷ್ಟನಾಗಲು ಪಾಪತಿಮಿರಕೆ ಸೂರ್ಯನಂತಿಹನು ॥72॥

ನುಡಿಯ ಕೇಳುತ ಮುನಿವರನು ಗುರು- । ವಡಿಯ ಮೇಲ್ಮಸ್ತಕವನಿಟ್ಟನು । ನಡುಗಿ ರೋಮಾಂಚದಲಿ ಕೇಳ್ ಸದ್ಗದಿತಕಂಠದಲಿ ॥
ಒಡನೆ ಗುರುಸಂಸ್ತುತಿಯ ಮಾಡಿದ । ನಡುಗಿ ಪೋಯ್ತೈ ದುರಿತವೆಲ್ಲವು । ಕಡುಮಮತೆಯಲಿ ವರವನಿತ್ತನು ಗುರುವು ಮುನಿವರಗೆ ॥73॥

ಗುರುಪ್ರಸಾದದಲಾಯಿತಾ ಮುನಿ- । ವರಗೆ ವೇದಜ್ಞಾನ ಮಂತ್ರದ । ಪರಮ ಸಿದ್ಧಿಯು ಪರುಷ ಸ್ಪರ್ಶದ ಲೋಹದಂದದಲಿ ॥
ಪರಮ ಸಂತೋಷದಲಿ ಕರೆದವ । ಗರುಹಿದನು ನೀನೀಗ ಪೋಗೈ । ತ್ವರದಿ ನಿನ್ನಯ ಗುರುವೆಡೆಗೆ ನಿನಗವನೆ ತಾರಕನು ॥74॥

ಮುನಿಯನೀಪರಿ ಬೀಳುಕೊಟ್ಟನು । ಮನದಿ ಸಂತಸ ತಾಳಿ ಗುರುವರ । ನನುನಯದಿ ನಡೆತಂದನಾ ಭುವನೇಶ್ವರಿಯ ಸ್ಥಳಕೆ ॥
ಎನುತ ಕೃಷ್ಣಾ ನದಿಯ ಬಹುಪಾ- । ವನದ ಪಶ್ಚಿಮ ತೀರದಲಿ ಕೇ । ಳನಿಮಿಷರ ತರುವಿಹುದ ದೌದುಂಬುರವು ಮೇಣಲ್ಲಿ ॥75॥

ಬಂದನಾ ಗುರುವರನು ಕೇಳಾ- । ನಂದದಿಂದಲಿ ಗುಪ್ತರೂಪದಿ । ಮುಂದೆ ಕಾಲವ ಕಳೆದನಲ್ಲಿಂ ಕೀರ್ತಿ ಪಸರಿಸಿತು ॥
ಚಂದದಿಂದೀ ಕಥೆಯ ಭಕ್ತಿಯೊ- । ಳೊಂದೆ ಮನದೊಳು ಪಠಣ ಮಾಡಲು । ಬಂದು ಸಿದ್ಧಿಗಳೆಲ್ಲ ವೊಲಿವವು ವಿಷ್ಣುವಚನವಿದು ॥76॥

॥ ಅಧ್ಯಾಯ 16 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 17

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಜಡಮತಿಯ ಬ್ರಾಹ್ಮಣನು ಶ್ರೀಗುರು- । ವಡಿಗೆ ವಂದಿಸಿ ಶರಣು ಪೋಗಲು । ಜಡಮತಿಯ ತಾ ಬಿಟ್ಟು ಪಂಡಿತನಾದ ನೃ ದ್ವಿಜನು॥

ಹೃದಯವೆಂಬುವ ಕ್ಷೇತ್ರದಲ್ಲಿ ಗುರು- । ಪದದ ಭಕುತಿಯ ಬೀಜದಿಂ ಫಲ । ದುದಯವಾಗುವ ಮೊದಲು ಷಡ್ರಿಪು ಸುಟ್ಟುಗೊಬ್ಬರವಾ ॥
ಒದಗಿಸುತ ಕೇಳ್ ಸ್ವಾರ್ಥ ಹುಲ್ಲನು । ಮುದದಿ ಕೀಳುತ ಸ್ವಚ್ಛ ಮಾಡಲು । ಅದರ ಮೇಲೆ ಕೃಪಾತುಷಾರವು ಬೇಕು ಬೆಳೆಯುವರೆ ॥1॥

ಕೇಳು ಶಿಷ್ಯೋತ್ತಮನೆ ಭಕ್ತರ । ಮೌಳಿ ನಿನ್ನಯ ಭಕ್ತಿ ಸದ್ಗುರು । ಮೇಲೆ ದೃಢವಾಗಿಹುದು ನೀನೇ ಧನ್ಯ ನೀಜಗದಿ ॥
ಏಳುವುದು ಮಳೆ ಚಿಹ್ನದಿಂ ಬಿರು । ಗಾಳಿ ನಂತರ ವೃಷ್ಟಿಯಪ್ಪುದು । ಕೇಳು ನೀ ಗುರುಚರಿತಸೌಖ್ಯದ ಮಳೆಯ ಬಿರುಗಾಳಿ ॥2॥

ಗುರುಚರಿತ್ರವು ಭಕ್ತಜನರಿಗೆ । ಸುರತರುವು ದೈನ್ಯಾಪಹಾರವು । ಕರುಣದಿಂ ನಿನಗೊರೆವೆ ಕೇಳೈ ಭಕ್ತ ಪುಂಗವನೆ ॥
ಪರಮಕೃಷ್ಣಾಣವೇಣಿ ಭುವನೇ । ಶ್ವರಿಯ ಪಶ್ಚಿಮ ದಿಶೆಯೊಳೌದುಂ । ಬರದ ವೃಕ್ಷದ ಕೆಳಗೆ ವಾಸವ ಮಾಡಿದನು ಗುರುವು ॥3॥

ಪರಮ ಮಂಗಲಧಾಮ ಭುವನೇ । ಶ್ವರಿಯ ಪಾವನ ತೀರ್ಥವೌದುಂ । ಬರದ ಸಿದ್ಧ ಸ್ಥಾನ ತಾಪಸಪುಣ್ಯದಾಗರವು ॥
ಧರೆಯೊಳೀಸ್ಥಳವಿತ್ತು ಗೋಚರ । ಗುರುವು ಚಾತುರ್ಮಾಸ್ಯ ಕಳೆದನು । ಮೆರೆಯಿತದರಿಂ ಕ್ಷೇತ್ರಮಹಿಮೆಯು ಕೀರ್ತಿ ಪಸರಿಸಿತು ॥4॥

ಎಂದ ನುಡಿಯನು ಕೇಳ್ದು ಸಿದ್ಧ ನಿ- । ಗೆಂದನೈ ಯೋಗೀಶ ಗೌಪ್ಯದೊ- । ಳಂದು ಭಿಕ್ಷೆಯ ಬೇಡಿ ತಿರುಗುವ ಕಾರಣವದೇನು ॥
ಬಂದ ಸಂದೇಹವನು ಕೇಳಿದೆ- । ನಿಂದು ಸಂದೇಹವ ನಿವಾರಿಸು । ಯೆಂದು ಪೇಳಲು ನಾಮಧಾರಕಗಿತ್ತನುತ್ತರವಾ ॥5॥

ಧರೆಯೊಳಗೆ ಭಿಕ್ಷುಕನ ವೇಷದಿ । ತಿರುಗುತಿಹನೈ ದತ್ತಗುರುವರ । ಶರಣರನು ಕಾಯುವ ನಿಮಿತ್ತದಿ ನಾಮಧಾರಕನೆ ॥
ಕರುಣಸಾಗರ ದತ್ತರಾಯನು । ಪರಮಪಾವನಮೂರ್ತಿ ತೀರ್ಥದ । ದುರಿತ ಸಂಹರಿಸುವ ನಿಮಿತ್ತದಿ ಜಗದಿ ಚರಿಸುವನು ॥6॥

ಭೂತಳದೊಳಿರುತಿಹವು ತೀರ್ಥ- । ವ್ರಾತಗಳು ಗುಪ್ತದಲಿ ತೀರ್ಥದ । ವ್ರಾತಕುಪಕಾರವನು ಮಾಳ್ಪನು ದರ್ಶನದೊಳೆಂದೆ ॥
ಆ ತಪೋನಿಧಿ ಬಿಲ್ಲವಡಿಯಲಿ । ಕೂತನೈ ಗುಪ್ತದಲಿ ನಾನಾ । ಜಾತಿ ಭಕ್ತರು ಬಂದು ಕೊಡುವರು ತ್ರಾಸ ತನಗೆನುತಾ ॥7॥

ತರಣಿಯನು ಬಚ್ಚಿಡಲು ತರಣಿಯ । ಕಿರಣ ಬಚ್ಚಿಡಬಹುದೆ ಕೇಳ್ಕ- । ಸ್ತುರಿಯ ಬಚ್ಚಿಡಲದರ ಪರಿಮಳ ಗುಪ್ತ ವಿಡಬಹುದೆ ? ॥
ಸುರತರುವು ಕಲ್ಪಿತಸುವಸ್ತು ವ । ಕರುಣಿಸಲು ಬರಲಾರರೇ ಬಹು । ಶರಣರೈ ಕಾಮಿತನ ಪಡೆಯಲು ಕಾಮಿತಾರ್ಥಿಗಳು ॥8॥

ಗುರುನೃಸಿಂಹಸರಸ್ವತಿಯು ಪರಿ- । ಪರಿಯ ಲೀಲೆಯ ತೋರಿ ಭಕ್ತೋ- । ದ್ಧರಣನೆಂಬಿಹ ಬಿರುದ ಮೆರೆವನು ಕಾಲಕಾಲದಲಿ ॥
ಕರುಣದಿಂದೀ ಪರಿಯ ಲೀಲೆಯ- । ನರುಹುವೆನು ನಾನೀಗ ಕೇಳ್ಕೈ । ಶರಣಜನರ ಶಿರೋಮಣಿಯೆ ನೀ ನಾಮಧಾರಕನೇ ॥9॥

ಧರೆಯೊಳಗೆ ದಕ್ಷಿಣದ ಕಾಶೀ- । ಪುರವೆನುತ ಪ್ರಖ್ಯಾತಿ ಕೊಲ್ಲಾ- । ಪುರಕೆ ಬಂದಿಹುದಲ್ಲಿ ಭೂಸುರನೊರ್ವ ಋಗ್ವೇದಿ ॥
ಇರುವನೈ ಷಟ್ಕರ್ಮನಿರತನು । ಪರಮಶಾಸ್ತ್ರ ಪುರಾಣ ಪಂಡಿತ । ನರಿದು ತರ್ಕವ್ಯಾಕರಣವನು ಕರ್ಮನಿಷ್ಠನಲಾ ॥10॥

ಕಂದನೊರ್ವನು ಸಂಭವಿಸಿದನು । ಮಂದಮತಿ ಕೇಳಾ ದ್ವಿಜಗೆ ಮೇಣ್ । ತಂದೆತಾಯಿಗಳೆಲ್ಲ ತೀರಲನಾಥನವನಾದಾ ॥
ಮುಂದೆ ಕೇಳಾ ಕೂಸು ಬೆಳೆಯಲು । ಮಂದಿಯರೊಳು ಕೂಡಿ ತಾನಲ- । ವಿಂದ ವ್ರತಬಂಧವನು ಮಾಡಿದರಾಗ ಬಾಲನಿಗೆ ॥11॥

ಸ್ನಾನ ಸಂಧ್ಯೆಯ ಮಾಡಲಾರನು । ತಾನು ಗಾಯತ್ರಿಯನು ಪಠಿಸನು । ಯೇನು ಬರುವವು ವೇದಶಾಸ್ತ್ರಗಳವಗೆ ಮೂಢನಿಗೆ ॥
ಆನೆಯುದರದಿ ಕತ್ತೆ ಬಂದಿಹು- । ದೇನು ಪೂರ್ವಾರ್ಜಿತವೊ ಯೆಂದಾ । ಮಾನನಿಧಿಗಳು ನಿಂದೆ ಮಾಳ್ಪರು ಮೂಢ ಬಾಲನಿಗೆ ॥12॥

ನಿನ್ನ ತಂದೆಯು ಸಕಲಗುಣ ಸಂ- । ಪನ್ನ ಪಂಡಿತ ತರ್ಕವ್ಯಾಕರ- । ಣಜ್ಞ ನೆನುತಲಿ ಪೊಗಳುತಿದೆ ಜಗವೆಲ್ಲ ನೀನೋಡೆ ॥
ಅಜ್ಞ ಮೂಢನೆನುತ್ತ ಮಂದಿಗ- । ಳಿನ್ನು ನಿಂದಿಪರೀಗ ಸುಡು ಸುಡು । ನಿನ್ನ ಜನ್ಮವೃಥಾ ಕಣಾ ಪಾಷಾಣವೆನ್ನುವರು ॥13॥

ಪಸುಳೆ ನಿನ್ನಯ ಮೂಢತನದಲಿ । ಹೆಸರ ತಂದೆಯ ಮುಳುಗಿಸಿದೆ ನೀ । ಪಶುಸಮಾನನಲಾ ಧರೆಗೆ ನೀ ಭಾರವಾಗಿರುವೆ ॥
ವಸುಮತಿಯೊಳೀ ಮೋರೆ ನೀ ತೋ- । ರಿಸದೆ ಕೊರಳಿಗೆ ಕಲ್ಲ ಕಟ್ಟುತ । ಅಸುವ ತೊರೆಯ್ಯೆ ಬಾವಿಕೆರೆಯಲಿ ಧುಮುಕಿ ಲೇಸಹುದು ॥14॥

ವಿದ್ಯೆಯೊಂದೇ ನರಗೆ ಭೂಷಣ । ವಿದ್ಯೆ ಚಿಂತಾಮಣಿಯು ನರನಿಗೆ । ವಿದ್ಯೆಯಿಂದಲಿ ನರಗೆ ದೊರೆವವು ಸಕಲ ಭೋಗಗಳು ॥
ವಿದ್ಯೆ ಪೂಜಾಸ್ಥಾನ ಸಂತತ । ವಿದ್ಯೆ ಸುಖಸಂಪತ್ತನೀವುದು । ವಿದ್ಯೆ ನೋಡು ಯಶಸ್ವಿಗಿರುವುದು ಕಿಲ್ಲಿ ಗುರುಕಿಲ್ಲಿ ॥15॥

ದೇಶವನು ತೊಳಲಿದರು ವಿದ್ಯಾ । ಭ್ಯಾಸಿಗನ್ಯ ವಿದೇಶವಾಗದು । ದೇಶ ಮೇಣ್ ಪರದೇಶ ಭೇದವ ವಿದ್ಯೆಯೋರಸುವುದು ॥
ಭಾಸುರದ ಬುದ್ಧಿಯನು ಕೇಳು ವಿ । ಕಾಶಿಸುವ ಸಾಧನವು ವಿದ್ಯೆಯು । ಯೇಸು ಪರಿಯಲಿ ಪೊಗಳಲ್ಯೆ ವಿದ್ಯಾ ಪ್ರಭಾವವನು ॥16॥

ವಿದ್ಯೆಯೇ ಪೂಜ್ಯತೆಯ ಸಾಧನ । ವಿದ್ಯೆಯಿಲ್ಲದೆ ಧನವಯಸ್ಸದು । ಯಿದ್ದರೇನದು ಪೂಜ್ಯವಾಗದು ವಿದ್ಯೆ ಪೂಜ್ಯ ವದು ॥
ವಿದ್ಯೆ ನರನಿಗೆ ಬಂಧುಬಳಗವು । ವಿದ್ಯೆ ಗುಣದಾಗರವು ಜ್ಞಾನದ । ಶುದ್ಧ ಬೀಜವು ವಿದ್ಯೆಯೆಂಬುದೆ ಸಕಲ ಧನಧಾನ್ಯಾ ॥17॥

ವಿದ್ಯೆಯೆಂಬುದೆ ಪೂಜ್ಯ ದೈವತ । ವಿದ್ಯೆ ಕೊಳುವುದು ಸಕಲಪೂಜೆಯ । ವಿದ್ಯೆಗಾದರ ಮಾಡುತಿಹವ್ಯೆ ಸರ್ವಲೋಕಗಳು ॥
ವಿದ್ಯೆ ಗರಸನು ತಲೆಯ ಬಾಗಿಪ । ವಿದ್ಯೆ ಬಾಗಿಸದರಸನಿಗೆ ತಲೆ । ವಿದ್ಯೆಯದರಿಂ ಶ್ರೇಷ್ಠ ವೀಜಗದಲ್ಲಿ ನಿಜವಾಗಿ ॥18॥

ವಿದ್ಯೆ ನಿರ್ಧನನಿಂಗೆ ಧನವೈ । ವಿದ್ಯೆಯದರಿಂ ಕಲಿಯಬೇಕೈ । ಉದ್ಧಸುವುದು ಕುಲವನೆಲ್ಲವ ವಿದ್ಯೆ ಗಂಗೆಯಲಾ ॥
ವಿದ್ಯೆ ಮೋಕ್ಷಕೆ ಸುಲಭ ಹಾದಿಯು । ವಿದ್ಯೆಯೇ ನರರಿಂಗೆ ರೂಪವು । ವಿದ್ಯೆಯಿಲ್ಲದ ನರನು ಕೇಳೈ ಶುದ್ದ ಪಶುವಹನು ॥19॥

ಎಂದು ನಾನಾ ಪರಿಯೋಳಾ ದ್ವಿಜ । ವೃಂದವಾ ಬ್ರಾಹ್ಮಣನ ಬಾಲಕ । ಗೆಂದರೈ ಬಾಲಕನು ಮನದಲಿ ನೊಂದು ಬಿಸುಸುಯ್ದು ॥
ಹಿಂದೆ ವಿದ್ಯಾದಾನ ಮಾಡದದೆ । ಮುಂದೆ ವಿದ್ಯೆಯು ತನಗೆ ಸಿಗುವರೆ । ಯಿಂದುಪಾಯವ ಪೇಳಿರೆಂದನು ದ್ವಿಜರಿಗೆಲ್ಲರಿಗೆ ॥20॥

ಎರಡು ಕಾಲಿನ ನರಪಶುವು ಸಂ- । ಚರಿಸುವನು ವಿದ್ಯಾವಿಹೀನನು । ಹೊರೆತಿರುವೆ ಹೊಟ್ಟೆಯನು ಭಿಕ್ಷೆಯಲೇನು ಸಾರ್ಥಕವು ॥
ಅರರೆ ನೀನೇ ಕುಲಕಲಂಕನು । ಮರೆತೆಯಾ ಪಿತೃ ಕೀರ್ತಿಯನು ನಿನ- । ಗರಿಯದಿಹುದೇ ವಿದ್ಯೆಯೆಂದರು ಬಾಲನಿಗೆ ದ್ವಿಜರು ॥21॥

ಎಂದು ಕೇಳ್ದಾ ಬಾಲಕನು ಮನ । ನೊಂದು ವೈರಾಗ್ಯದಲಿ ಹೊರಟನು । ಮುಂದೆ ತಾನೀ ಜೀವ ತ್ಯಜಿಸುವೆನೆಂಬ ಮನಸಿನಲಿ ॥
ನಿಂದಿಪರು ದ್ವಿಜರೆಲ್ಲ ಜೀವಿತ । ದಿಂದ ಫಲವನು ಕಾಣೆ ಸುಡು ಸುಡು । ಯೆಂದು ಮನದಲಿ ಖಿನ್ನನಾದನು ಮೂಢ ಬಾಲಕನು ॥22॥

ಬಂದನಾ ಬಾಲಕನು ಮನದಲಿ । ನೊಂದು ಭುವನೇಶ್ವರಿಯ ಸುಂದರ । ಮಂದಿರಕೆ ಭಿಲವಡಿಯ ಗ್ರಾಮಕೆ ರಾತ್ರಿ ಸಮಯದಲಿ ॥
ವಂದಿಸುತ ಜಗದಂಬೆಗಾಕ್ಷಣ । ಮುಂದೆ ದಂಡಾಕಾರಬಿದ್ದನು । ಬೆಂದು ಬಳಲಿದನವನು ಕೇಳನ್ನೋದಕವ ತ್ಯಜಿಸಿ ॥23॥

ತೊರೆದನನ್ನೋದಕವ ಬಾಲನು । ತೊರೆದು ಸಂಧ್ಯಾಸ್ನಾನವಿಧಿಗಳ । ಧರಣೆ ಕೂತನು ದೇವಿಯಳ ಸನ್ಮುಖದಿ ಮೂರ್ದಿವಸಾ ॥
ಕರುಣೆ ಬಾರದು ದೇವಿಗೆನುತಲಿ । ಕರದಿ ಶಸ್ತ್ರವ ಧರಿಸಿ ಕೇಳ್ಕ- । ತ್ತರಿಸಿ ನಾಲಿಗೆಯನ್ನು ದೇವಿಯ ಪಾದಕರ್ಪಿಸಿದಾ ॥24॥

ನಾಲಿಗೆಯನರ್ಪಿಸಿದೆ ನೀ ಕರು- । ಣಾಳಿಯೆಂಬುದು ಕೀರ್ತಿ ಯೆನ್ನಯ । ಮೇಲೆ ಕರುಣೆಯು ಬಾರದೊಡೆ ನಾ ಶಿರವನರ್ಪಿಸುವೆ ॥
ಬಾಲನಾ ನಿರ್ಧಾರ ಮಾಡಿದ- । ನಾಲಿಸಿದಳೈ ಜಗದ ತಾಯಿಯು । ತಾಳುವಳೆ ನಿಜಭಕ್ತ ದುಃಖನಿವಾರಿಯೆಂಬರಲಾ ॥25॥

ಬಾಲ ತಾಪಸಿ ಮಾತನಾಲಿಸು । ಖೂಳತನದಲಿ ದೂರದೆನ್ನನು । ನಾಳೆ ತೆರಳ್ವೈ ಪಶ್ಚಿಮಾ ತೀರದಲಿ ವಾಸಿಪನು ॥

ಭಾಲಲೋಚನ ನರನ ರೂಪದಿ । ಬಾಲಸನ್ಯಾಸಿಯು ಮಹಾತುಮ । ಪಾಲಿಸುವನವ ನಿನ್ನ ಕಾಮಿತ ಸಟೆಯ ಮಾತಲ್ಲ ॥26॥

ಎಂದು ಭುವನೇಶ್ವರಿಯು ಸ್ವಪ್ನದೊ- । ಳೆಂದಳಾ ಬಾಲಕಗೆ ತತ್ ಕ್ಷಣ । ಬಂದನಾ ಬಾಲಕನು ನದಿಯನು ದಾಟಿದನು ತ್ವರದಿ ॥

ಮುಂದೆ ನೋಡಿದನವನು ಶ್ರೀಗುರು । ಸುಂದರ ಸುಮೂರ್ತಿಯನು ಕೇಳಾ- । ನಂದದಿಂದಲಿ ಚರಣಕೆರಗಿದನೇಕ ಭಾವದಲಿ ॥27॥

ಗುರುವರನ ಪದಕಮಲಕೆರಗುತ । ಪರಿಪರಿಯಲವ ಸ್ತುತಿಸಿದನು ಗುರು- । ವರಗೆ ಕರುಣೆಯು ತೋರಿತಾಕ್ಷಣ ಬಾಲಕನ ಮೇಲೆ ॥

ವರದಹಸ್ತವನೆತ್ತಿ ಬಾಲನ । ಶಿರದೊಳಿಟ್ಟನು ಬಾಲನಿಂಗಂ । ಕುರಿಸಿ ನಾಲಿಗೆಯು ವಿದ್ಯಾಜ್ಞಾನ ಲಭಿಸಿತಲಾ ॥28॥

ಕಾಗೆ ಮಾನಸ ಕೆರೆಗೆ ಪೋದರೆ । ಆಗುವುದು ಕೇಳ್ರಾಜಹಂಸವು । ತಾಗಿ ಪರುಷಕೆ ಲೋಹವೇ ಬಂಗಾರವಾಗುವುದು ॥

ಸಾಗಲಾ ಜಾಂಬೂನದಿಗೆ ಮೇ- । ಣಾಗುವುದು ಮೃತ್ತಿಕೆಯೆ ಚಿನ್ನವು । ಹೇಗೆ ಪೊಗಳಲಿ ಗುರುಮಹಿಮೆಯನು ಬಾಯಿಸಾಗದಲಾ ॥29॥

ಗುರುವರನ ಕರಸ್ಪರ್ಶಮಾತ್ರದಿ । ತರುಣಗಾಯಿತು ಜ್ಞಾನ ಬ್ರಹ್ಮನ । ಸರಸತಿಯು ಕುಣಿದಾಡಹತ್ತಿದಳವನ ಜಿಹ್ವೆಯಲಿ ॥

ಅರಿತನಾಕ್ಷಣ ವೇದಶಾಸ್ತ್ರದ । ಸರಣಿಯನು ಭಾಷ್ಯದ ರಹಸ್ಯವ । ನರಿತನೈ ವ್ಯಾಕರಣ ತರ್ಕವನೇನಹೇಳುವೆನು ॥30॥

ಧರೆಯೊಳಿತೆರವಿಹುದು ಶ್ರೀಗುರು- । ವರನ ಮಹಿಮೆಯು ಮೂಢಬ್ರಾಹ್ಮಣ । ಪರಮ ಪಂಡಿತನಾದನೈ ಗುರುವರನ ಕರುಣದಲಿ ॥

ದೊರೆಯುವುದು ಸರ್ವಾರ್ಥಸಿದ್ಧಿಯು । ಬರುವುದೈ ಸುಜ್ಞಾನವೀಪರಿ । ಚರಿತಪಠಣದೊಳೆಂದು ನಂಬಿರು ವಿಷ್ಣುವಚನವಿದು ॥31॥

॥ ಅಧ್ಯಾಯ 17 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 18

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಬಡವನಲಿ ಭಿಕ್ಷೆಯನ್ನು ಶ್ರೀಗುರು । ಪಡೆದು ಬಳ್ಳಿಯ ಕಿತ್ತಿಹಾಕಲು । ಪಡೆದನಷ್ಟೈಶ್ವರ್ಯಗಳ ದ್ವಿಜ ಗುರುಪ್ರಸಾದದಲಿ॥

ತೋರಿಸೈ ಕರುಣೆಯನು ನೀ ಸಂ- । ಸಾರಸಾಗರನೌಕೆ ಯಿರುವೆ ಸು- । ಧಾರಸವನೀನುಣಿಸಿದೈ ಶ್ರವಣೇಂದ್ರಿಯಂಗಳಿಗೆ ॥
ಚಾರು ಗುರುಚರಿತವನು ಕೇಳ್ವರೆ । ಕೋರುತಿದೆ ಮನ ತೃಪ್ತಿಯಾಗದು । ಪೂರಿಸೈ ಮನದಿಚ್ಛೆಯನು ನೀ ಸಿದ್ಧಯೋಗೀಶಾ ॥1॥

ಗುರುಚರಿತವನು ಕೇಳಿ ಮನದಲಿ । ಪರಮ ಸಂತಸವಾಯ್ತು ಸುರತರು । ಗುರುಚರಿತವೇ ಜಗದೊಳೆಂದೀ ಮನವು ಪೇಳುವುದು ॥
ಗುರುವರನು ಮುಂದೇನು ಮಾಡಿದ । ಪರಿಯನೆಲ್ಲವ ಹೇಳು ನೀ ತ । ತ್ವರವಹುದು ಮನವೆಂದು ನುಡಿದನು ನಾಮಧಾರಕನು ॥2॥

ಇಷ್ಟು ಪೇಳುತ ಚರಣದಲಿ ಶಿರ- । ವಿಟ್ಟು ಬಿನ್ನೈಸಿದನು ಸಿದ್ಧಗೆ । ತುಷ್ಟಿಯಾಯಿತು ಸಿದ್ಧಯೋಗಿಯ ಮನವು ಪ್ರೇಮದಲಿ ॥
ಶ್ರೇಷ್ಠ ನೈ ನೀ ನಾಮಧಾರಕ । ಯೆಷ್ಟು ಬಣ್ಣಿಪೆ ನಿನ್ನ ಭಕ್ತಿಯ । ಸೃಷ್ಟಿಯಲಿ ನಿನ್ನಂತೆ ಭಕ್ತನ ಕಾಣೆ ನಾ ನಿಜವು ॥3॥

ಗುರುವರನು ಭಿಲವಡಿಯ ಗ್ರಾಮದೋ- । ಳಿರಲು ಕೀರ್ತಿಯು ಪಸರಿಸಿತು ಬಹು । ನರರು ಬರುವರೆನುತ ಬಿಟ್ಟನು ಮುಂದೆ ತೆರಳಿದನು ॥
ವರುಣೆ ಸಂಗಮ ಪುಣ್ಯ ಪಾವನ । ವೆರಡನೆಯ ಕಾಶೀನಗರವೆಂ- । ದರುಹುವರು ಕೃಷ್ಣಾ ತಟಾಕದಿ ಯಾತ್ರೆ ಮಾಡಿದನು ॥4॥

ಬಂದು ನಿಂತನು ಪಂಚಗಂಗಾ- । ಸುಂದರರದ ಸಂಗಮದಿ ಕೃಷ್ಣಾ- । ಸಿಂಧುವಿಗೆ ಕೂಡಿಹುದು ಕೇಳು ಪ್ರಯಾಗವೆನಿಸುವದು ॥
ಬೆಂದು ಪೋಪುದು ನಿಜದಿ ಪಾಪದ । ವೃಂದವೆಲ್ಲವು ಸ್ನಾನಮಾತ್ರದಿ । ನಿಂದನಾಗುರುವರನು ಹನ್ನೆರಡಬುಧ ಸಂಗಮದಿ ॥5॥

ಕುರವಪುರವೆಂಬುವದು ದಕ್ಷಿಣ- । ಕಿರುವುದು ಕುರುಕ್ಷೇತ್ರವದರಿಂ । ಪರಮಪಾವನ ತೀರ್ಥ ಭಕ್ತರ ಕಾಮಧೇನುವಿದು ॥
ಇರುವುದಮರಾಪುರವು ಸಂಗಮ । ಮೆರೆವುದೈ ಅವಿಮುಕ್ತ ಕಾಶೀ । ಪುರವು ಗುಪ್ತಪ್ರಯಾಗಯೆಂಬರು ಗುರುಪ್ರಸಾದದಲಿ ॥6॥

ಶಿವೆಯು ಭದ್ರೆಯು ಕುಂಭಿ ಮೇಣ್ ಭೋ- । ಗವತಿ ಸರಸತಿಯೆಂಬ ನದಿಗಳು । ಜವದಿ ಕೂಡಲು ಪಂಚಗಂಗಾ ನದಿಯು ಸಂಭವಿಸಿ ॥
ಅಮರಪುರಹತ್ತರದಿ ಕೃಷ್ಣೆಗೆ । ತವಕದಿಂ ಕೂಡಿಹುದು ಸಂಗಮ । ಸವರುವುದು ಪಾಪವನು ಕೇಳೈ ಸ್ನಾನಮಾತ್ರದಲಿ ॥7॥

ಇರುವುದೌದುಂಬರದ ವೃಕ್ಷವು । ಸುರತರುವು ಕೇಳಲ್ಲಿಯಮರೇ । ಶ್ವರನಿಹನು ಸಂಗಮದಿ ಕಾಶೀಪುರ ಸಮಾನವಿದು ॥
ಇರುವರೈ ಚೌಷಷ್ಟಿ ಯೋಗಿನಿ । ಯರು ಸದಾ ನಿರ್ಗುಣ ಸ್ವರೂಪದಿ । ಧರೆಯೊಳಮರೇಶ್ವರನ ಸನ್ನಿಧಿಯಲ್ಲಿ ಕೇಳಿದನು ॥8॥

ಸಂಗಮದಿ ಸ್ನಾನವನು ಮಾಡುತ । ಲಿಂಗವಮರೇಶ್ವರನ ಪೂಜಿಸೆ । ತುಂಗವಿಕ್ರಮನಮರನಪ್ಪನು ಭೇದವೇನಿದಕೆ ॥
ಸಂಗಮದೊಳಲ್ಲೊಮ್ಮೆ ಮಿಂದರೆ । ಗಂಗೆಯಲಿ ಶತ ಮಾಘಸ್ನಾನಗ- । ಳಿಂಗೆ ಸಮವಿಹುದೆಂದು ನಂಬೀ ತೀರ್ಥ ಮಹಿಮೆಯನು ॥9॥

ಅಮರಪುರ ಪುಣ್ಯಪ್ರಯಾಗವು । ವಿಮಲನಮರೇಶ್ವರ ಪರಾತ್ಪರ । ಕಮಲನಾಭನ ಮೂರ್ತಿ ನಿರ್ಗುಣ ಕೋಟಿತೀರ್ಥಗಳು ॥
ಅಮಿತ ರೂಪದೊಳಿರುವವೈ ಸಂ- । ಗಮದಹತ್ತರ ಪೇಳಲಸದಳ । ವಮರನಾಥನೆ ಕಾಶಿವಿಶ್ವೇಶ್ವರಸಮಾನನಲಾ ॥10॥

ಪಡುವಣಭಿಮುಖವಾಗಿ ಕೃಷ್ಣೆಯು । ನಡೆಯುವಳು ಕೇಳ್ ಶುಕ್ಲ ತೀರ್ಥವು । ಕಡಿದು ಬಿಡುವುದು ಬ್ರಹ್ಮಹತ್ಯಾದಿಗಳ ಪಾತಕವಾ ॥
ನುಡಿಯಲಾರೆನು ಸರ್ವ ತೀರ್ಥದ । ಸಡಗರವ ವಿಸ್ತಾರ ಭಯದಿಂ- । ದೊಡನೆ ಪೇಳುವೆನೆಂಟು ತೀರ್ಥದ ಮಹಿಮೆ ಗುಣಗಣವಾ ॥11॥

ಅತ್ತಿಗಿಡದ ಸಮೀಪಕಿರುವವು । ಮತ್ತೆ ಮೂತೀರ್ಥಗಳ ಹೆಸರನು । ವಿಸ್ತರಿಪೆನಾ ಪಾಪನಾಶಕ ಕಾಮ್ಯ ತೀರ್ಥಗಳು ॥
ಮತ್ತೆ ಮೂರನೆ ಸಿದ್ಧವರದ ವೆ- । ನುತ್ತ ತೀರ್ಥವು ಬಹಳ ತೀರ್ಥಗ- । ಳುತ್ತ ಮೊತ್ತ ಮಲಿರುವವ್ವೈಯಮರೇಶ್ವರನ ಮುಂದೆ ॥12॥

ಮೂರು ತೀರ್ಥಗಳಿಹವು ಸಂಗಮ । ತೀರದಲಿ ಮೊದಲನೆಯ ಶಕ್ತಿಯ । ತೀರಥವು ಕೇಳಮರ ತೀರ್ಥವು ಕೋಟಿತೀರ್ಥವದು ॥
ಕಾರಣದಿ ಗುರುವರನು ಸಂಗಮ- । ತೀರಕಿದ್ದನು ದ್ವಾದಶಾಬ್ದದಿ । ಭಾರಿ ಮಹಿಮೆಯ ಸಂಗಮವು ನದಿಪಂಚಕಗಳಿಹವು ॥13॥

ಕಾಣೆನುಪಮೆಯ ತೀರ್ಥಮಹಿಮೆಯ- । ನೇನ ಬಣ್ಣಿಪೆ ಸಾಧ್ಯವಿಲ್ಲ ಮ- । ಹಾನುಭಾವನ ಶರಣವತ್ಸಲ ಗುರುವಿನಾಸ್ಥಾನ ॥
ಕ್ಷೋಣಿಯಲಿ ದರ್ಶನದ ಮಾತ್ರದಿ । ಹಾನಿಯಪ್ಪುದು ಸಕಲ ಪಾಪವು । ಸ್ಥಾನದಲಿ ರಂಜಿಸುವದೌದುಂಬರ ಸ್ವಯಂಭುವದು ॥14॥

ಶ್ರೀಗುರುವು ಮಧ್ಯಾಹ್ನ ಸಮಯಕೆ । ಹೋಗುವನು ಭಿಕ್ಷೆಯನು ತರಲು ಸ- । ರಾಗದಿಂ ಭಕ್ತರ ಮನೆಗೆ ಭಕುತಿಯನು ಪರಿಕಿಸಲು ॥
ಶ್ರೀಗುರುವು ಪ್ರತಿದಿವಸ ಭಿಕ್ಷುಕ । ನಾಗಿ ಹೋಗುವನೋರ್ವ ವಿಪ್ರನ । ಬಾಗಿಲಿಗೆ ಸದ್ಧರ್ಮಶೀಲನ ಬಡವ ಬ್ರಾಹ್ಮಣನಾ ॥15॥

ಗಂಡಹೆಂಡಿರು ಶುಷ್ಕ ಭಿಕ್ಷೆಯ- । ನುಂಡು ಕಾಲವ ಕಳೆವರೈ ಮನ- । ಗೊಂಡು ಪೂಜಿಸರತಿಥಿ ಯಭ್ಯಾಗತರ ಬಡತನದಿ ॥
ಹೆಂಡತಿಯು ಪತಿವ್ರತೆಶಿರೋಮಣಿ । ಗಂಡ ವೇದಾಭ್ಯಾಸತತ್ಪರ । ದಂಡಧಾರಿಯು ಗುರುವು ಹೋಗುವನಲ್ಲಿ ಪ್ರತಿದಿವಸಾ ॥16॥

ಬಳ್ಳಿಯೊಂದಾ ದ್ವಿಜನ ಅಂಗಣ । ದಲ್ಲಿ ಬೆಳೆದಿಹುದದರ ಶ್ರಂಗವ । ಮೆಲ್ಲುವರು ಪ್ರೀತಿಯಲಿ ಭಿಕ್ಷೆಯಭಾವಕಾಲದಲಿ ॥
ಹಳ್ಳಿಯೊಳಗಾ ತೆರದಿ ಬಡತನ । ದಲ್ಲಿ ಕಾಲವ ಕಳೆವ ಬ್ರಾಹ್ಮಣ- । ನಲ್ಲಿ ಶ್ರೀಗುರು ಭಿಕ್ಷೆಬೇಡುತ ಗುಣಕೆ ಮೆಚ್ಚಿದನು ॥17॥

ಒಂದು ದಿನ ತದ್ವಿಪ್ರವರ ಕರೆ । ತಂದನಾ ಶ್ರೀಗುರುವ ಭಿಕ್ಷೆಗೆ । ಬಂದು ಭಿಕ್ಷೆಯ ಸ್ವೀಕರಿಸಿದನು ಗುರುವರನು ಮುದದಿ ॥
ಎಂದನೈ ತದ್ ದ್ವಿಜಗೆ ಗುರುವಾ । ನಂದದಿಂದಲಿ ಹರಿಸಿ ಪೇಳಿದ । ನಿಂದು ನಿನ್ನ ದರಿದ್ರದೋಷಗಳೆಲ್ಲ ಸುಟ್ಟವಲಾ ॥18॥

ಹೊರಗೆ ಬಂದಾಕ್ಷಣಕೆ ಮುಂದಕೆ । ಹರಿನ ಘೇವಡೆ ಬಳ್ಳಿಯನು ನಿಜ । ಕರದಿ ಕಿತ್ತಿ ಸಮೂಲ ಚಲ್ಲಿದನಂಗಣದಿ ದ್ವಿಜನಾ ॥
ತಿರುಗಿದನು ಸಂಗಮಕೆ ಶ್ರೀಗುರು- । ವರನು ಮೇಣಾ ಸುದತಿ ನೋಡಿದ- । ಳರರೆ ಘಾತವ ಯತಿಯು ಮಾಡಿದನೆಂದು ಹಲುಬಿದಳು ॥19॥

ಯಾತಕೀಯತಿವರನು ಯಮಗೀ । ಘಾತ ಮಾಡಿದನೆಂತು ಸೈರಿಪೆ- । ವೀತಗೇನಪಕಾರವನು ಮಾಡಿದೆವು ನಾವಿನ್ನು ॥
ಭೂತಳದೊಳುಪವಾಸ ಮಾಡುವ । ರೀತಿ ಬಂದೊದಗಿಹುದು ದುರಿತ । ವ್ರಾತಬೆಂಬಲಕಿಹುದು ಬಿಡದೀ ನಮಗೆ ಪ್ರಾರಬ್ಧ ॥20॥

ಎಂದು ಹಲಬುವ ಸತಿಗೆ ವಿಪ್ರನು । ಚಂದದಿಂ ತತ್ವವನು ಪೇಳ್ದನು । ಸುಂದರಾಂಗಿಯೆ ಮರುಗಿ ಫಲವೇನಿನ್ನು ಪೇಳೆನಗೆ ॥
ಬಂದುದಕೆ ತಲೆಯೊಡ್ಡಬೇಕಾ- । ನಂದದಿಂದಲಿ ದುಃಖ ಬಿಟ್ಟಾ । ಚಂದ್ರಮೌಳಿಯಧೀನವೀಜಗವೆಲ್ಲ ನೀ ತಿಳಿಯೌ ॥21॥

ಹುಟ್ಟಿಸುವ ಬೆಳಿಸುವನು ಕೊಲ್ಲುವ । ಸೃಷ್ಟಿ ಗೊಬ್ಬನೆ ವಿಶ್ವವ್ಯಾಪಕ । ನಿಷ್ಠುರತೆಯವಗುಂಟೆ ಕರುಣಾಸಿಂಧು ದೇವನಲಾ ॥
ಕಷ್ಟ ನೀ ಪಡಬೇಡ ಸರ್ವರಿ- । ಗಿಷ್ಟ ಭೋಜನ ಕೊಡುವನವನೇ । ಸೃಷ್ಟಿ ಸಂರಕ್ಷನು ಯೋಚನೆಯವಗೆ ನಿನಗೇನು ॥22॥

ಆಯುರನ್ನಂ ಸಂಪ್ರಯಚ್ಛತಿ । ಬಾಯಿಯಲಿ ಹೇಳುವವು ವೇದಗ । ಳಾಯತಾಂಬಕಿ ಸಿಂಹನಿಂಗಾಹಾರವಾನೆಯನು ॥
ಬೀಯವಿಲ್ಲದೆ ಸೃಷ್ಟಿಸಿರುವನು । ರಾಯ ಶಂಕರನೊಂದೆ ಪರಿಯಲಿ । ಕಾಯುವನು ಸರ್ವರನು ಚಿಂತಿಸಬೇಡ ರಕ್ಷಿಪನು ॥23॥

ಹಿಂದೆ ಮಾಡಿದ ಸುಕೃತ ದುಷ್ಕೃತ । ಬಂದಪುದು ಬೆಂಬಲಕೆ ಯೆಮ್ಮಯ । ನಿಂದಿಸಲು ನೀ ಬೇಡ ಪರರಿಗೆ ನಮ್ಮ ಪ್ರಾರಬ್ಧ ॥
ಕುಂದಿರಲು ದೂಷಣವ ಪರರಿಗೆ । ತಂದು ನಿಂದಿಸಬೇಡ ಬಿತ್ತುದು । ನಿಂದು ಕೊಯ್ಯಲು ಬೇಕು ಬೀಜಕೆ ತಕ್ಕಫಲವಿಹುದು ॥24॥

ನಾವು ಮಾಡಿದ ಪಾಪ ಪುಣ್ಯಗ । ಳಾವಗಂ ಬೆಂಬಲಕೆ ಬರುವವು । ಕಾವನೈ ಯತಿವರನು ಪಾಪವನೆಲ್ಲ ಸಂಹರಿಸಿ ॥
ಭಾವಿಸೀಪರಿ ಮನದೊಳೆನುತಲಿ । ಕೋವಿದನು ತದ್ ದ್ವಿಜನು ಪೇಳ್ದನು । ಕಾನನೀಶ್ವರನವನೆ ಯತಿವರ ಭಕ್ತವತ್ಸಲನು ॥25॥
ಸಂತವಿಸಿದನು ಭಾರ್ಯೆಯನು ಬಹು । ಸಂತಸದೋಳಾ ವಿಪ್ರವರ್ಯನು । ನಂತರದಿ ಹೊರಬಂದು ಬಳ್ಳಿಯ ಕೀಳ್ವೆ ತಾನೆನುತ ॥
ಚಿಂತಿಸುತಲಾ ಬಳ್ಳಿಯಗಿಯಲು । ಬಂತು ನಿಧಿಯೊಂದವನ ಕೈಗೆ ಸು- । ಸಂತಸದಿ ಕೊಪ್ಪರಿಗೆ ತಂದನು ಮನೆಯೊಳಗೆ ತ್ವರದಿ ॥26॥
ದೈನ್ಯ ಹರಣವ ಮಾಡಲೋಸುಗ । ಭಿನ್ನ ಮಾಡಿದನೆಮ್ಮ ಬಳ್ಳಿಯ । ಬನ್ನ ಬಟ್ಟೆವು ನಮ್ಮ ರಕ್ಷಿಸಿದಾತ ಯತಿವರನು ॥
ಇನ್ನು ಯತಿವರ ನರನೆನುತ್ತಲಿ । ಭಿನ್ನ ಭಾವವ ತಾಳಲಾರೆವು । ಚನ್ನ ಶ್ರೀಪರಮೇಶ್ವರನೆ ಕೇಳಾ ಯತೀಶ್ವರನು ॥27॥
ಗುರುಚರಣಕೆರಗುವೆವು ಪೂಜಿಸಿ । ದುರಿತವನು ಸಂಹರಿಸಿ ಸದ್ಗತಿ । ಕರುಣಿಸೈ ಯೆಮಗೆಂದು ಭಕ್ತಿಯೋಳವನ ಬೇಡುವೆವು ॥
ಪರಿಯೊಳಾ ದಂಪತಿಯರಾಕ್ಷಣ । ತೆರಳಿದರು ಸಂಗಮದಿ ಕಂಡರು । ಪರಮ ಪಾವನ ಮೂರ್ತಿ ಸದ್ಗುರುರಾಯನನು ಮುದದಿ ॥28॥
ಗುರುವರನೆ ಕೇಳ್ನಿನ್ನ ಕರುಣದಿ । ದೊರೆಯಿತೈ ನಿಧಿಯಂಗಣದಿ ನೀ । ನರಿತು ಘೇವಡೆ ಬಳಿ ಕಿತ್ತು ಬಿಸಾಡಿ ಬಂದೆಯುಲಾ ॥
ಅರರೆ ನಿನ್ನಯ ಮಹಿಮೆಯನು ಕಂ- । ಡರು ಧರಿತ್ರಿಯೊಳಾರು ಶ್ರುತಿತತಿ- । ಯರಿಯವೈ ಬೇರಾರು ಶಕ್ಯರು ಯೆಂದನಾ ವಿಪ್ರಾ ॥29॥
ಹೇಳಬೇಡೀ ತೆರದಿ ಜಗದಲಿ । ಖೂಳ ನಂದದಿ ನೀನು ವಿಧಿಯನು । ಕೂಲ ನಿನಗಾಯ್ತೀಗ ನಿಧಿಯನುಭವಿಸು ಶಾಶ್ವತದಿ ॥
ಭಾಳಲೋಚನ ಕರುಣೆಯಿಂದಲಿ । ಬಾಳುವುದು ತವ ವಂಶ ಶಾಶ್ವತ । ದೇಳಿಗೆಯನನುಭವಿಸು ಸಂತತಿ ಸೌಖ್ಯ ಧನ ಧಾನ್ಯಾ ॥30॥
ವರವನೀಪರಿ ಪಡೆದು ವಿಪ್ರನು । ತೆರಳಿದನು ನಿಜ ಮಂದಿರಕೆ ಗುರು । ವರನ ದರ್ಶನ ಮಾತ್ರದಿಂದಲೆ ದೈನ್ಯ ಸಂಹರಣ ॥
ಗುರುಕೃಪಾ ಸಂಪನ್ನರಿಗೆ ಕೇ । ಳಿರುವುದೇ ದಾರಿದ್ರ್ಯದೋಷವು । ಸುರುತರುವಿಗಿಹುದೇ ದರಿದ್ರವು ಹೇಳು ನೀ ತ್ವರದಿ ॥31॥

ದೈವಹೀನನು ಗುರುವ ಭಜಿಸಲು । ಕಾವನೈ ಗುರುರಾಯನವನನು । ದೈವವನು ಸೋಲಿಸುತಲಿಹ ಪರಮಪೂಜ್ಯನೆನಿಸುವನು ॥
ಭಾವ ಭಕುತಿಯ ಶರಣನಿಗೆ ಗುರು- । ರಾವನೀವನಖಂಡಲಕ್ಷ್ಮಿಯ । ಕಾವನಷ್ಟೈಶ್ವರ್ಯ ಶ್ರೀಗುರುವಿಷ್ಣುವಚನವಿದು ॥32॥

॥ ಅಧ್ಯಾಯ 18 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 19

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥
॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥
॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಮೆರಸುತಮರಾಪುರದ ಮಹಿಮೆಯ । ಗುರುವರನು ಲೀಲಾವತಾರಿಯು । ತೆರಳಿದನು ಗಂಧರ್ವಪುರಕಾ ಸಗುಣರೂಪದಲಿ॥

ಮನವು ಮದಯುತ ಕಪಿಯು ಹಾರುತ । ಕುಣಿವ ದಿಂದ್ರಿಯಶಾಖೆಗಳ ಮೇಲ್ । ತಿನುತಿಹುದು ವಿಷಯಂಗಳೆಂಬುವ ಫಲಗಳನು ಮುದದಿ ॥
ಮನವ ಕಟ್ಟಲು ಬೇಕು ಶ್ರೀಗುರು- । ವಿನ ಚರಣಸದ್ಭಕ್ತಿಪಾಶದಿ । ಮನವೆ ಮಾರುತಿ ಗುರುಸ್ವರೂಪವದಾಗುವುದು ನಿಜವು ॥1॥

ಚರಣಕೆರಗುತ ನಾಮಧಾರಕ । ನರುಹಿದನು ಯೋಗೀಶಗೆ ನೀ । ತರಣಿಯಂದದೊಳೆನ್ನ ತಿಮಿರವ ಸಂಹರಿಸಿ ಮುದದಿ ॥
ಶರಣರಿಗೆ ನೀ ಚಿತ್ತರಂಜನ । ಕರನು ಭವಸಾಗರದ ತಾರಕ । ನಿರಲಿ ಜಯಜಯಕಾರ ನಿನ್ನುಪಕಾರ ಬಹಳಾಯ್ತು ॥2॥

ಮಲಗಿ ನಾನಜ್ಞಾನಕತ್ತಲೆ- । ಯಲಿ ಮಹಾರಾತ್ರೆಯಲಿ ಮದದಲಿ । ಕಳೆದೆನಾಯುಷ್ಯವನು ಮರೆತೆನು ಗುರುಪದವ ನಾನು ॥
ಒಲಿದು ನೀನೆನಗೀ ಚರಿತ್ರವ । ತಿಳುಹಿಸಿದಿ ಪೀಯೂಷಪಾನವ । ಸುಲಭದಿಂದೆನಗೆಸಗಿ ಧನ್ಯತೆಯಿತ್ತೆ ನೀನೆನಗೆ ॥3॥

ಜ್ಞಾನಸೂರ್ಯ ಪ್ರಕಾಶವಾಗಲು । ಹಾನಿಯಾಯಿತು ತಿಮಿರಮಾಯೆಯು । ಕ್ಷೋಣಿಯಲಿ ನಾ ಧನ್ಯನಾದೆನು ನಿನ್ನ ದಯೆಯಿಂದಾ ॥
ಸಾನುರಾಗದಿ ಪೇಳು ಮುಂದಿನ । ಜ್ಞಾನದಾಯಕ ಗುರುಚರಿತ್ರವ । ದೀನಭಕ್ತನು ನಾನು ಯೆನಗುದ್ಧರಿಸಬೇಕೆಂದಾ ॥4॥

ಇಂತು ಪೇಳಿದ ನುಡಿಯ ಕೇಳ್ದನು । ಸಂತಸವ ತಾನಂತು ಸಿದ್ಧನು । ಸಂತವಿಸುತಾ ನಾಮಧಾರಕಗೆಂದನಾ ಯೋಗಿ ॥
ನಿಂತನೌದುಂಬರದ ಛಾಯೆಗೆ । ಸಂತಸದೊಳಾ ಗುರುವರನು ನಿನ- । ಗೆಂತು ಪೇಳುವೆನಿದರ ಮಹತಿಯನೆಂದನಾ ಯೋಗಿ ॥5॥

ಮರಗಳೆಲ್ಲವ ಬಿಟ್ಟು ಔದುಂ- । ಬರವನಾಶ್ರೈಸಿದನು ಶ್ರೀಗುರು । ಕರುಣದಿಂದೆನಗರುಹು ಕಾರಣ ಸಿದ್ಧ ಯೋಗೀಶಾ ॥
ಮರಗಳೊಳು ಪಿಂಪಳದ ಮರವೇ । ಪರಮಪಾವನವೆಂದು ಶ್ರುತಿಗಳು । ಪರಿಪರಿಯೊಳರಹುವವು ಯಾತಕೆ ಬಿಟ್ಟನಶ್ವತ್ಥಾ ॥6॥

ನುಡಿಯ ಕೇಳುತ ಸಿದ್ಧ ಯೋಗಿಯು । ನುಡಿದನಾಕ್ಷಣ ಶಿಷ್ಯನಿಗೆ ಬಹು । ಸಡಗರದಿ ನೀ ಕೇಳು ಶಿಷ್ಯೋತ್ತಮನೆ ಪೇಳುವೆನು ॥
ಹುಡುಗ ಪ್ರಹ್ಲಾದನನು ಕಾಯ್ವರೆ । ಯೊಡೆದು ಕಂಬದಿ ಮೂಡಿ ಬಂದನು । ಜಡಜನಾಭನು ಕರುಳ ಹರಿದನು ನಖದಿ ದಾನವನ ॥7॥

ದುರುಳ ರಕ್ಕಸ ಕರುಳೊಳಗೆ ವಿಷ- । ವಿರಲು ತದ್ವಿಷವೇರಿತ್ತೈ ನಖ- । ದುರುಬೆಯನು ತಾ ತಾಳಲಾರದೆ ಯೊದರೆ ನರಹರಿಯು ॥
ಶರನಿಧಿಯ ಸಂಜಾತೆ ಲಕ್ಷ್ಮಿಯು । ಕರದೊಳೌದುಂಬರದ ಫಲಗಳ । ತರಲು ನರಹರಿ ನಖಗಳನು ತತ್ಫಲದೊಳೂರಿದನು ॥8॥

ಅತ್ತಿಫಲಸ್ಪರ್ಶದಲಿ ನರಹರಿ । ಮೂರ್ತಿಯುಗ್ರವು ಶಾಂತವಾಯಿತು । ಮತ್ತೆ ತೆಗೆದಪ್ಪಿದನು ಲಕ್ಷ್ಮಿಯನೇನ ಹೇಳುವೆನು ॥
ಇತ್ತರಾಕ್ಷಣ ವರವನುಭಯರು । ಚಿತ್ತದಾನಂದದಲಿ ಸುರನರ- । ಮೊತ್ತ ಬೆರಗಾದರು ಕಣಾ ನರಸಿಂಹರೂಪನಿಗೆ ॥9॥

ನಿರುತ ಫಲವಿರಲೈ ನಿನಗೆ ನೀ । ಸುರತರುವೆ ಭೂಮಿಯಲಿ ನಿನ್ನಯ । ಶರಣರಿಗೆ ದರ್ಶನದ ಮಾತ್ರದಿ ಕಾಮ್ಯಫಲ ಕೊಡುವೆ ॥
ದುರಿತ ನಾಶನ ನಿನ್ನ ಪೂಜನ । ಪರಮ ಸಿದ್ಧಿಯ ಸುಲಭಸಾಧನ । ಧರೆಯೊಳೌದುಂಬರವು ನರನಿಗೆ ಮುಕ್ತಿಸೋಪಾನಾ ॥10॥

ದೀನನೌದುಂಬರದ ಸೇವೆಯ । ತಾನು ಮಾಡಲು ಲಕ್ಷ್ಮಿಯುತನಹ । ಮಾನಿನಿಗೆ ಪುತ್ರೋತ್ಸವವು ಕೇಳ್ ಬಂಜೆತನವಿರಲು ॥
ಸ್ನಾನ ಮಾಡಲು ನಿನ್ನ ಛಾಯೆಯೊ- । ಳೇನ ಹೇಳುವೆನದರ ಪುಣ್ಯವ । ಸ್ನಾನ ಭಾಗೀರಥಿಸಮಾನವದೆಂದು ನೀನಂಬು ॥11॥
ಕೂತು ನಿನ್ನಯ ಛಾಯೆಯಲಿ ಭಾ- । ವಾತಿಶಯದಲಿ ಜಪತಪವ ತಾ । ಭೂತಳದಿ ಮಾಡಿ ಫಲವದನಂತಗುಣವಹುದು ॥
ಪಾತಕದ ನಿರ್ಮೂಲ ನಾಶವು । ಭೀತಿ ತಟ್ಟಿದು ವ್ಯಾಧಿಹರಣ ಪು- । ನೀತರಪ್ಪರು ದೋಷಿಗಳು ತವ ಛಾಯೆ ಸ್ಪರ್ಶದಲಿ ॥12॥
ಸುರತರುವೆ ನೀನಿರುವೆ ಧರೆಯಲಿ । ಶರಣರಿಷ್ಟಾರ್ಥವನು ಕರುಣಿಪ । ಬಿರುದು ನಿನ್ನದು ನಿರತ ವಾಸಿಪೆ ನಿನ್ನ ಛಾಯೆಯಲಿ ॥
ವರವನೀಪರಿ ಕೊಟ್ಟ ನಾ ನರ- । ಹರಿಯು ಲಕ್ಷ್ಮಿಯ ಸಹಿತವದರಿಂ । ಪರಮ ಯೋಗ್ಯತೆಯಾಯ್ತು ಔದುಂಬರಕೆ ಮೂಜಗದಿ ॥13॥
ಉಗ್ರನರಸಿಂಹನಿಗೆ ಶಾಂತಿಯ । ನಿಗ್ರಹವನೌದುಂಬರದ ಮರ । ಶೀಘ್ರದಿಂದಲಿ ಮಾಡಿತೆಂದಾ ನಂದದಿಂದಲಿ ಗುರುವು ॥
ಅಗ್ರತೆಯನೀಮರಕೆ ಕೊಟ್ಟು ಸ- । ಮಗ್ರಶಿಷ್ಯರ ಕಾಯ್ವ ಬಿರುದಿನ । ವಿಗ್ರಹವಲಾ ಗುರುಪರಾತ್ಪರಮೂರ್ತಿ ವಾಸಿಸಿದಾ ॥14॥
ಬಾಲಪ್ರಹ್ಲಾದನನು ಕಾಯ್ದ ವಿ- । ಶಾಲ ಮಹಿಮನು ಮಾನವಾಕೃತಿ । ತಾಳಿ ಧರೆಯೊಳು ಸಂಚರಿಸುವನು ಭಕ್ತ ಸಂಸಾರಿ ॥
ಆಲಿಸೈ ಸುರತರುವು ಯೀಮರ । ಮೇಲೆ ಸದ್ಗುರುವಾಸವದರಿಂ । ಪೇಳಲಾರೆನು ಮಹಿಮೆ ಕೇಳೈ ಕ್ಷೇತ್ರರಾಜನಲಾ ॥15॥
ಹರಿಹರ ವಿರಂಚಿಗಳು ನರತನು । ಧರಿಸಿ ಯತಿವೇಷದಲಿ ತೀರ್ಥವ । ತಿರುಗುತಿಹರೈ ಶರಣರನು ಕಾಯುವರೆ ಮೂಜಗದಿ ॥
ಗುರುವರನ ದರ್ಶನದಿ ತೀರ್ಥದ । ದುರಿತ ದೋಷಗಳೆಲ್ಲ ಸುಟ್ಟವು । ಗುರುವಿಗೇಕೀ ತೀರ್ಥಯಾತ್ರೆಯ ಡಂಭ ಸೌರಂಭಾ ॥16॥
ಗುರುವರನು ಗುಪ್ತದಲೆಯೌದುಂ । ಬರದ ಸನ್ನಿಧಿಯಲ್ಲಿ ವಾಸಿಸೆ । ದರದಿವಸ ಮಧ್ಯಾಹ್ನ ಕಾಲದೊಳಾಯಿತುತ್ಸವವು ॥
ಬರುವರೈ ಚೌಷಷ್ಟಿ ಯೋಗಿನಿ । ಯರು ಗುರುವ ಪೂಜಿಸಲು ನಿತ್ಯ ದೊ- । ಳಿರುವ ಯೋಗಿನಿಯರಮರೇಶ್ವರನ ಹತ್ತರದಿ ॥17॥

ಬಂದು ಮಧ್ಯಾಹ್ನದಲಿ ಯೋಗಿನಿ । ವೃಂದವೆಲ್ಲವು ಗುರುವ ವಂದಿಸಿ । ಮಂದಿರಕೆ ಕರೆದೊಯ್ದುಪೂಜಿಪರೇಕಭಾವದಲಿ ॥
ಗಂಧಪುಷ್ಪಾದಿಗಳ ಯೋಗಿನಿ- । ವೃಂದದಿಂದುಪಚಾರ ಕೋಳ್ಳುತ । ತಿಂದು ನೈವೇದ್ಯವನು ಬರುವನು ತಿರುಗಿ ನಿಜಸ್ಥಳಕೆ ॥18॥

ಪರಿಯೊಳೀ ಗುರುವರನು ಕ್ರಮವಾ- । ಚರಿಸುತಿರ್ದನು ನೋಡಿ ದ್ವಿಜರ । ಚ್ಚರಿಯಪಟ್ಟರು ಯತಿಯು ಭಿಕ್ಷೆಯನೆಲ್ಲಿ ತೀರಿಪನು ॥
ಪರಿಕಿಸಲು ಬೇಕೆನುತ ಪುರದೊಳು । ಗಿರುವ ಬ್ರಾಹ್ಮಣರೊಳಗೆ ಹಲವರು । ಬರಲು ಮಧ್ಯಾಹ್ನದಲಿ ಯತಿವರನಿರುವ ಸ್ಥಾನದಲಿ ॥19॥

ಮನದೊಳತಿಭಯವಾಗಿ ನಡುಗುತ । ಲಿನತನುಜಯಮರಾಜನರಮನೆ- । ಯನು ದ್ವಿಜರು ಸೇರಿದರು ಬಂದರು ಮರಳಿ ಕೆಲರಾಗಾ ॥
ಮುನಿವರನ ಕೇಳಂತ್ಯ ನೋಡುವ । ಮನುಜರಂತ್ಯವ ತಾವೆಕಂಡರು । ಚಿನುಮಯಾತ್ಮಕಮೂರ್ತಿಶ್ರೀಗುರು ಮಹಿಮೆಯನುಪಮವು ॥20॥

ನದಿಯ ತೀರದೊಳೊರ್ವ ಹೊಲದಲಿ । ಮುದದಿ ನೋಡಿದನಂದು ಗುರುವರ । ನದಿಯ ತೀರಕೆ ಬರಲು ಹಾದಿಯ ಕೊಟ್ಟಿತಾನದಿಯು ॥
ಉದಕವೆರಡಾದುದುವೊಡೆದು ಗುರು । ಯೆದುರುಗಾಣಿಸಿಕೊಂಡು ಯೋಗಿನಿ । ಸುದತಿಯರು ಗುರುವರನ ಕರೆದರು ತಮ್ಮಮಂದಿರಕೆ ॥21॥

ತೋರಿತಚ್ಚರಿ ಯೊಕ್ಕಲಿಗನಿಗೆ । ಸಾರಿದನು ಹಿಂದಕ್ಕೆ ಯೋಗಿನಿ । ನಾರಿಯರ ಪೂಜೆಯನ್ನು ಸ್ವೀಕರಿಸಿದನು ಗುರುವರನು ॥
ಕಾರಣಿಕ ಯತಿವರನು ಮನುಜಾ । ಕಾರದಲಿ ಧರೆಗಿಳಿದ ಹರಿಹರ- । ವಾರಿಜಾಸನಮೂರ್ತಿಯಿರಬೇಕೆಂದು ತರ್ಕಿಸಿದಾ ॥22॥

ಆರತಿಯ ಬೆಳಗಿದರು ಯೋಗಿನಿ । ನಾರಿಯರು ಶ್ರೀಗುರುವಿನಂಘ್ರಿಗೆ । ತೋರಿಸಲು ನೈವೇದ್ಯ ತಿಂದನು ಗುರುವು ಮೋದದಲಿ ॥
ತೀರಲೀಪರಿ ಪೂಜೆ ಗುರುವರ । ನಾರಿಯರ ಸಂಗಾತದಲಿ ನದಿ- । ತೀರಕ್ಕೈ ತಂದಾಗ ಕೊಟ್ಟಿತು ಹಾದಿ ಯತಿವರಗೆ ॥23॥

ಬಂದನಾ ಒಕ್ಕಲಿಗ ಗುರುವರ । ಹಿಂದೆ ನೋಡದೆ ಮುಂದೆ ನಡೆಯಲು । ಮುಂದೆ ರಂಜಿ ಪುತಿರ್ದುದೊಂದಾ ನಗರವಾಸ್ಥಳದಿ ॥
ಇಂದ್ರನಗರಿಯ ತೆರದಿ ರಂಜಿಪ । ಮಂದಿರದ ಸಾಲುಗಳು ದಿನಕರ । ನಂದದಲಿ ಶೋಭಿಸುವುದೇನೆಂಬೆನು ಮಹಾದ್ಭುತವಾ ॥24॥

ಪುರದ ಜನರಾರತಿಯ ತೋರಿಸಿ । ಭರದಿ ಮಂದಿರ ಕೋಯ್ದ್ರಾ ಗುರು । ವರನ ಕೂಡಿಸಿದರು ಮಹಾಸಿಂಹಾಸನದೊಳಾಗಾ ॥
ತಿರುಗಿ ಷೋಡಶವಿಧಿಗಳಲಿ ಗುರು- । ವರನ ಪೂಜಿಸಿ ಷಡ್ರಸಾನ್ನದ । ಪರಮ ಭೋಜನ ಮಾಡಿಸಿದರಾ ಯತಿಗೆ ಪ್ರೀತಿಯಲಿ ॥25॥

ಉಂಡನಂತರ ಒಕ್ಕಲಿಗನಿಗೆ । ಕಂಡನಾ ಗುರುವರನು ಕೇಳಿದ । ದಂಡೆಯಿಂದಿಳಿದಿಲ್ಲಿ ಬಂದಿಹ ಕಾರಣವದೇನು ॥
ದಂಡದಾಕಾರದಲಿ ಯತಿಗು- । ದ್ದಂಡ ಪ್ರಣತಿಯ ಮಾಡಿದನು ಭಯ- । ಗೊಂಡು ಬಿನ್ನೈಸಿದನು ರಕ್ಷಿಸು ರಕ್ಷಿಸೆಂದೆನುತಾ ॥26॥

ನಿನ್ನ ಚರಣಾಬ್ಜವನು ಕಂಡೆನು । ಧನ್ಯನಾದೆನು ದುರಿತ ದೋಷಗ । ಳನ್ನು ಸಂಹರಿಸಿದೆನು ನಿನ್ನಯ ದರ್ಶನದಲಾನು ॥
ನಿನ್ನ ಮಹಿಮೆಯನಾರು ತಿಳಿವರು । ಯೆನ್ನ ರಕ್ಷಿಸಬೇಕು ನೀನು ಭ- । ವಾರ್ಣವದಿ ಸಂತಾರಕನು ತವ ಪಾದಕೆರಗುವೆನು ॥27॥

ಅರಿಯಲಾರದೆ ನಿನ್ನ ರೂಪವ । ನರರು ಮಾಯಾವೇಷ್ಟನದಿ ಬಹು । ಮರುಗುವರು ನೀ ನಿಜಕೆ ಗಿರಿಜಾರಮಣನಿಹ ತಿಳಿಯೆ ॥
ಧರೆಯೊಳೀ ನರರೂಪದಲಿ ಯವ- । ತರಿಸಿ ವಿಶ್ವೋದ್ಧಾರನಾಗಿಯೆ । ಹರಿಸಿದೈಯಜ್ಞಾನ ತಿಮಿರವ ಜ್ಞಾನಜ್ಯೋತಿಯಲಿ ॥28॥

ನಿನ್ನ ದರ್ಶನವಾಗಲವನಿಗೆ । ಮನ್ನಿಪರು ಮೂರ್ಲೋಕದಲಿ ತವ । ಚಿನ್ಮಯಾತ್ಮಕ ಪರುಷಸ್ಪರ್ಶದೊಳೆಲ್ಲ ಬಂಗಾರ ॥
ನಿನ್ನ ಕೃಪೆಯಲಿ ದೊರೆವುದಿಹಪರ । ಚೆನ್ನಗಿಹ ಸಂಪತ್ತಿ ಸೌಖ್ಯವು । ಯೆನ್ನುತೀಪರಿ ಸ್ತುತಿಸಿದನು ಗುರುವರನ ಮಹಿಮೆಯನು ॥29॥

ಸ್ತುತಿಗೆ ಮೆಚ್ಚುತ ಒಕ್ಕಲಿಗನಿಗೆ । ಯತಿವರನು ಸಂತೈಸಿ ಪೇಳ್ದನು । ಗತವು ದುಃಖವು ಗತವು ಪಾಪವು ಗತವು ದಾರಿದ್ರ್ಯ ॥
ಕೃತಿಯೊಳಗೆ ಕಾಮಿತವ ನೀ ಪಡೆ- । ಯುತಲಿ ಸೌಖ್ಯದೊಳಿರುವೆ ನೋಡಿದ । ಸ್ಥಿತಿಯನಿದ ಗುಪ್ತವಿಡು ಪೇಳದಿರು ಜನರಿಂಗೆ ॥30॥

ನಾನು ಹೇಳಿದ ಮಾತನಿದನೀ । ಮಾನಿಸದೆ ಬಹಿರಂಗ ಮಾಡಲು । ಹಾನಿಯಪ್ಪುದು ನಿನಗೆ ತತ್ ಕ್ಷಣ ಮರಣವೇ ಬಹುದು ॥
ಈ ನಿರೋಪವ ಕೊಟ್ಟು ಭಕ್ತಗೆ । ಸಾನುರಾಗದಿ ತಿರುಗಿ ಬಂದನು । ಯೇನ ಹೇಳುವೆ ಗುರುಮಹಿಮೆಯನು ನದಿಯ ದಾಟಿದನು ॥31॥

ಗುರುವರನ ಸದ್ವರ ಪ್ರತಾಪದಿ । ದೊರೆಯಿತ್ತೈ ನಿಧಿವಿತ್ತವವನಿಗೆ । ಕರುಣಿಸಿದನಾ ಗುರುವು ಸಂತತಿ ಸೌಖ್ಯ ಧನಧಾನ್ಯಾ ॥
ಗುರುಪ್ರಸಾದದೊಳಾದನಾ ನರ । ಪರಮ ಜ್ಞಾನಿಯು ಪ್ರತಿದಿವಸದಲಿ । ಬರುತ ಸೇವೆಯ ಮಾಡುವನು ಗುರುಚರಣಕಭಿನಮಿಸಿ ॥32॥

ಭಾವಭಕುತಿಯೊಳವನು ಪ್ರತಿದಿನ । ಸೇವೆಯನು ಮಾಡುವನು ಗುರುವಿಗೆ । ಭಾವಭಕುತಿಯೊಳವನು ಪುತ್ರಕಳತ್ರರನು ಕೂಡಿ ॥
ಸೇವೆ ಈಪರಿ ನಡೆಯಲವನಿಗೆ । ದೇವನೇ ಯತಿವರನೆನುತ ಸಂ- । ಭಾವನೆಯ ಮಾಡುವನು ಭಕ್ತಿಯನೆಂತು ಬಣ್ಣಿಪೆನು ॥33॥

ಬಂದುದಾಗಲೆ ಮಾಘಮಾಸದ । ಚಂದವಾಗಿಹ ಪೂರ್ಣಿಮೆಯು ತಾ । ಬಂದು ಬಿನ್ನೈಸಿದನು ಗುರುವರಚರಣಕಭಿನಮಿಸಿ ॥
ಇಂದು ಕಾಶೀಪುರ ಪ್ರಯಾಗದಿ । ಮಿಂದರಗಣಿತ ಪುಣ್ಯವೆಂಬರು । ಎಂದಿಗೆನಗೀ ಪಾರಗೆ ತಪ್ಪುಣ್ಯ ದೊರೆಯುವುದು ॥34॥

ನುಡಿಯ ಕೇಳುತ ಶಿಷ್ಯಗೆಂದನು । ಪೊಡವಿಯೊಳು ಸಂಗಮವು ಕೃಷ್ಣೆಯ । ದೃಢದಿ ನಂಬಿರು ಕೇಳ್ ಪ್ರಯಾಗವು ಕಾಶಿಗುರುಸ್ಥಳವು ॥
ಸಡಗರದ ಕರವೀರ ದಕ್ಷಿಣ । ಪೊಡವಿಗಿಹುದು ಪ್ರಯಾಗ ಮೂರೀ । ಕಡು ಸುಪುಣ್ಯಸ್ಥಳಗಳಿಹವಿದ ನಿನಗೆ ತೋರಿಸುವೆ ॥35॥

ಗುರುವರನು ವ್ಯಾಘ್ರಾಸನದಿ ಕೂ- । ತಿರಲು ಕರೆದನು ಶಿಷ್ಯನಿಗೆ ನೀ । ಕರದಿ ದೃಢದಿಂ ಹಿಡಿಯೊ ವ್ಯಾಘ್ರಾಸನವ ಕಣ್ಮುಚ್ಚಿ ॥
ಅರುಹಿ ಈ ಪರಿ ಮಾಡಲಾಕ್ಷಣ । ಭರದಿ ನಡೆದನು ಶಿಷ್ಯ ಸಹಿತಲಿ । ಬರುತ ಕಂಡನು ಸುಪ್ರಯಾಗವ ಮೊದಲ ಜಾವದಲಿ ॥36॥

ತೀರಿಸುತ ಸ್ನಾನವ ಪ್ರಯಾಗದಿ । ಸಾರಿಹರು ಮಧ್ಯಾಹ್ನ ಕಾಲಕೆ । ಸೇರಿದರು ಕಾಶೀಪುರವನು ಮನೋನುವೇಗದಲಿ ॥
ತೋರಿಸುತಲಾ ವಿಶ್ವನಾಥಗೆ । ಸಾರಿದರು ಗಯೆಗಾಗಲೀಪರಿ । ಮೂರು ಸ್ಥಳಗಳ ನೋಡಿ ಸಂಜೆಗೆ ಬಂದರೈ ಸ್ಥಳಕೆ ॥37॥

ನೋಡುತಾವಕ್ಕಲಿಗಶಿಷ್ಯನು । ಮಾಡಿದನು ದಂಡಪ್ರಣಾಮವ । ರೂಢಿಗಚ್ಚರಿ ಕೀರ್ತಿಯಾಯಿತು ವಿಶ್ವನಾಟಕನಾ ॥
ಗೂಢವಾಗಿರಬೇಕೆನುತ ಮನ । ಮಾಡಿದನು ಗುರುಮೂರ್ತಿ ಪೂಜೆಯ । ಮಾಡುತಮರೇಶ್ವರಗೆ ಹೊರಟನು ಗುಪ್ತ ರೂಪದಲಿ ॥38॥

ಹೊರಡುವಾಗಲೆ ಬಂದು ಯೋಗಿನಿ । ಯರು ವಿನಂತಿಯ ಮಾಡಿ ಕೊಂಡರು । ನಿರತ ನಿನ್ನಯ ದರ್ಶನದಿ ತಾಪತ್ರಯಾದಿಗಳು ॥
ಹರಿದು ಹೋಗುವ ಪರಿಯ ಕಂಡೆವು । ಗುರುವೆ ಯೆಮ್ಮನು ಬಿಟ್ಟು ಪೋದರೆ । ಮರುಗುವದು ನಿನ್ನ ಚರಣವನಗಲಲಾರೆವಲಾ ॥39॥
ಅನ್ನಪೂರ್ಣಾವಾಸಿಪಳು ತವ । ಸನ್ನಿಧಿಯಲ್ಲಿ ಸದಾ ಸಕಲ ಸಂ- । ಪನ್ನರಪ್ಪರು ನಿನ್ನ ದರ್ಶನದಿಂದಲೀ ಜಗದಿ ॥
ಇನ್ನು ನೀ ಹೋಗಲು ಯ ಮಗೆ ಯಾ- । ರಿನ್ನು ಗತಿ ಜೀವಿತದ ಸಾಧನ । ವನ್ನು ಕಾಣೆವೆನುತ್ತ ಮರುಗಿದರಾಗ ವಿಧವಿಧದಿ ॥40॥
ನುಡಿಯ ಕೇಳುತ ಕರುಣದಿಂದೊಡ । ಬಡಿಸಿದನು ಯೋಗಿನಿಯ ವೃಂದವ । ಮೃಡನ ಮೂರುತಿ ಶ್ರೀಗುರುವು ನೀವಾಲಿಸಿರಿ ಮುದದಿ ॥
ದೃಢದಿ ನಂಬಿರಿ ನಾನು ಈ ಸ್ಥಳ । ಬಿಡೆನು ಕೇಳೌದುಂಬರವು ಯಿದು । ಪೊಡವಿಯೊಳು ರಮ್ಯ ಸ್ಥಳವು ಕೇಳ್ವಾಡಿ ಯೆಮ್ಮದಿದು ॥41॥
ಪ್ರಗಟವಾಗಲು ಬೇಕು ಪೂರ್ವದಿ । ಸಗುಣ ರೂಪದೊಳಲ್ಲಿ ಹೋಗುವೆ । ಬಗೆಬಗೆಯ ಲೀಲೆಯನು ತೋರಿಸಿ ನಿರ್ಗುಣತ್ವದಲಿ ॥
ಜಗದೋಳಿ ವಾಡಿಯಲಿ ವಾಸಿಪೆ । ಭಗತರಿಂಗೌದುಂಬರದ ಮರ । ಸಗುಣ ಸುರತರು ಕಾಮಿತಾರ್ಥನನಿತ್ತು ಸಲಹುವುದು ॥42॥
ಅಮರಪುರ ಪಶ್ಚಿಮದ ತೀರದ । ವಿಮಲ ವಾಡಿ ಕ್ಷೇತ್ರವಿಲ್ಲಿಯ । ದ್ರುಮದಿ ವಾಸಿಪಳನ್ನಪೂರ್ಣೆಯು ಯೆನ್ನ ವರದಿಂದಾ ॥
ಅಮಿತಲೀಲೆಯತೋರಿ ಕೀರ್ತಿಯ। ಕಮಲಿನಿಯು ಬೆಳೆಯುವಳು ಪರಿಮಳ । ಸುಮನಸರು ಮೆಚ್ಚುವತೆರದಿ ಹಬ್ಬುವುದು ಮೂಜಗದಿ ॥43॥
ಪಾದುಕವ ನಾನಿಡುವೆನಿಲ್ಲಿಯೆ । ಸಾದರದಿ ಪೂಜೆಯನು ಮಾಳ್ಪರು । ಸಾಧಿಪರು ಸಕಲಾರ್ಥಸಿದ್ಧಿಯ ನಿಮ್ಮ ದಯೆಯಿಂದಾ ॥
ಮೋದದಿಂದಲಿಯನ್ನ ಪೂರ್ಣಾ । ರಾಧನೆಯ ಮಾಡುವ ಮನುಷ್ಯರು । ಭೇದವಿಲ್ಲದೆ ಸಾಧಿಪರು ಪುರುಷಾರ್ಥವೆಲ್ಲವನು ॥44॥
ಮೂರು ತೀರ್ಥದಿ ಸ್ನಾನ ಮಾಡುತ । ಲಾರು ಮತ್ತೊಂದನೆಯ ಸಾರಿಗೆ । ನಾರಿಯರು ಔದುಂಬರಕೆ ಸ್ನಾನವನು ಹಾಕುವರೋ ॥
ಮೂರುಯಿಪ್ಪತ್ತೋರುಷದಲಿ ಸುತ । ನೇರುವನು ತೋಡೆಯಲಿ ಪಾಪ । ಬೇರುಸಹಿತವೆ ಕೀಳುವುದು ಬಹುದೊಡ್ಡ ಪಾತಕವಾ ॥45॥

ಸುರನದಿಯ ತೀರದಲಿ ಬೆಳ್ಳಿಯ । ಖುರದ ಚಿನ್ನದ ಕೋಡಿನಿಂ ಭೂ- । ಸುರರಿಗಿತರೆ ಕಪಿಲಧೇನುಸಹಸ್ರವಾ ಫಲವು ॥
ಬರಿದೆ ಸ್ನಾನವ ಮಾಡಿದರೆ ಫಲ । ಬರುವುದೀಕ್ಷೇತ್ರ ಪ್ರಭಾವವ- । ನರಿಯರೀ ಮಾನವರು ಕುರುಡರು ಹೇಳಲೇನಿದನು ॥46॥
ಭಾವಭಕುತಿಯೊಳಿಲ್ಲಿ ಯನ್ನವ । ನೊರ್ವದ್ವಿಜನಿಗೆ ಹಾಕಲಿದರ ಫ- । ಲಾವಳಿಯು ಕೇಳ್ ಕೋಟಿ ಬ್ರಾಹ್ಮಣ ಭೋಜನದ ಫಲವು ॥
ಯಾವನಂತಃಕರಣ ಶುದ್ಧನು । ಪಾವನ ಶ್ರೀಕ್ಷೇತ್ರವಿದರಲಿ । ಭಾವಿಕನು ಜಪತಪವ ಮಾಳ್ಪನು ಹೋಮವದರಂತೆ ॥47॥
ಬರುವುದೈ ಫಲ ಕೋಟಿಗುಣವೀ । ಪರಿಯೊಳೇಕಾದಶ ಶಿವನ ಜಪ । ವಿರಚಿಸುತ ಪೂಜೆಯನು ಮಾಡಲು ಫಲದೊಳತಿರುದ್ರಾ ॥
ಪರಮ ಭಕ್ತಿಯೊಳಿಲ್ಲಿ ಸ್ನಾನವ । ವಿರಚಿಸುತ ಮುಂದಕ್ಕೆ ಔದುಂ । ಬರ ಪ್ರದಕ್ಷಿಣೆ ಮಂದಗತಿಯಲಿ ಮಾಡಿದರೆ ಫಲವು ॥48॥
ಕರುಣದಿಂ ಪೇಳುವೆನು ನಿಮಗೀ । ಪರಿ ಪ್ರದಕ್ಷಿಣೆ ವಾಜಪೇಯದ । ಪರಮ ಯಜ್ಞದ ಫಲವ ಕೊಡುವುದು ಹೆಜ್ಜೆ ಹೆಜ್ಜೆಯಲಿ ॥
ಎರಡು ನಾಲ್ಕು ಪ್ರದಕ್ಷಿಣೆಯನಂ- । ತರಕೆ ದಂಡಪ್ರಣತಿ ಮಾಳ್ಪುದು । ಬರುವುದದರಿನನಂತ ಪುಣ್ಯ ಸ್ಥಾನ ಮಹಿಮೆಯಿದು ॥49॥
ತೆರದೊಳೀ ವೃಕ್ಷಪ್ರದಕ್ಷಿಣೆ । ವಿರಚಿಸಲು ಕೇಳಂಗಹೀನನು । ನರನು ಕುಷ್ಟಿಯು ದೇಹಕಾಂತಿಯ ಪಡೆಯುವನು ನಿಜವು ॥
ಧರೆಯೊಳಿ ಪುಣ್ಯ ಪ್ರಭಾವದ । ಪರಮಪಾವನ ತೀರ್ಥವಹಿಮೆಯ-। ನರಿಯದೆಲ್ಲರು ಕೆಡುವರಲ್ಲದೆ ಯಾತ್ರೆ ಮಾಡದಲೆ ॥50॥
ಸೋಮಸೂರ್ಯಗ್ರಹಣಕಾಲದಿ । ಸೋಮವಾರದಮಾಸ್ಯೆ ದಿವಸದೊ- । ಳಾ ಮಹಾವ್ಯತಿಪಾತ ಮೊದಲಾ ಪರ್ವಕಾಲದಲಿ ॥
ಆ ಮಹಾಸಂಕ್ರಮಣಕಾಲದೊ-। ಳೀ ಮಹಾ ಕ್ಷೇತ್ರದಲಿ ಯಾವನು । ಪ್ರೇಮಭಾವದಿ ಸ್ನಾನ ಮಾಳ್ಪನೊ ಪಡೆವನಮಿತಫಲಾ ॥51॥
ಲಕ್ಷಸಾರಿಯೊಳತ್ತಿಗಿಡಕೆ ಪ್ರ । ದಕ್ಷಿಣೆಯ ಮಾಡಲು ನರನು ಪ್ರ- । ತ್ಯಕ್ಷ ದೇವಸಮಾನನಪ್ಪನು ರೋಗಗಳ ತ್ಯಜಿಸಿ ॥
ಸಾಕ್ಷಿಯಪ್ಪುದು ನಿಮಗೆ ಪೇಳ್ವುದ । ಲಕ್ಷ್ಯದಲ್ಲಿಡಿರೆಂದು ಗುರುವರ । ನೀಕ್ಷಿಸಿದನಾ ಯೋಗಿನಿಯರ ಪಿಯೂಷದೃಷ್ಟಿಯಲಿ ॥52॥

ಎಂದು ಕೊಟ್ಟು ನಿರೋಪ ಯೋಗಿನಿ- । ವೃಂದಕೆಲ್ಲಕೆ ಗುರುವರನು ತಾ । ಮುಂದೆ ನಡೆದನು ಗಾಣಗಾಪುರ ಕಡೆಗೆ ಪ್ರೀತಿಯಲಿ ॥
ಒಂದು ಕಡೆಯಲಿ ಗುಪ್ತ ರೀತಿಯೊ- । ಳೊಂದುಕಡೆಯಲಿ ಸಗುಣ ಮೂರ್ತಿಯು । ಚಂದದಿಂ ಲೀಲೆಯನು ಮಾಳ್ಪನು ವಿಶ್ವನಾಟಕನು ॥53॥

ಮನದಿ ಯೋಚನೆ ಮಾಡಿ ನೋಡಲು । ತೃಣಸುಕಾಷ್ಟದಿ ರೇಣುವಣುವಿಲಿ । ಘನತರದಿ ವಾಸಿಪನು ಸದ್ಗುರುಮೂರ್ತಿ ನಿಜವಾಗಿ ॥
ವಿನುತ ಭಕ್ತರ ಕಾರ್ಯ್ವ ಬಿರುದಲಿ । ಗುಣವಿಗುಣ ರೂಪದಲಿ ಲೀಲೆಯ । ತನು ಧರಿಸುವನು ಭಕ್ತವತ್ಸಲ ಯುಗಯುಗಕೆ ಮುದದಿ ॥54॥

ಗುರು ಮಹಿಮೆ ಯೀತೆರವು ಔದುಂ- । ಬರವು ಪ್ರೀತಿಯವಾಸ ಸದ್ಗುರು । ವರನು ವಾಸಿಪನಿಲ್ಲಿ ಭಜಿಸಿರಿ ಭಜಿಸಿರೀ ಮರನ ॥
ಗುರು ಚರಿತ್ರವೆ ಕಾಮಧೇನುವು । ಶರಣರಿಗೆ ಕಾಮಿತವನೀವುದು । ಮರೆಯದಿರಿ ನೀವಿದನು ಸಿದ್ಧಿಯ ವಿಷ್ಣುವಚನವಿದು ॥55॥

॥ ಅಧ್ಯಾಯ 19 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 20

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುವರನ ಸದ್ವರ ಪ್ರಸಾದದಿ ತರುಣಿಗಾಯಿತು ಪುತ್ರರತ್ನವು । ಮರಣವಶವಾಗಲ್ಕೆ ಗುರು ಬಂದನು ಕೃಪಾನಿಧಿಯು॥

ಇರುವುದೀ ಸಂಸಾರಶರಧಿಯೊ- । ಳಿರುವುದೈ ಮದವೆಂಬ ಬಂಡೆಯು । ತಿರುಗುತಿಹವದರೊಳಗೆ ಕ್ರೋಧಾದಿಗಳು ಹಾವುಗಳು ॥
ಪರಿಪರಿಯ ಜನ್ಮದಲಿ ಮುಳುಗುತ । ಮರಳಿ ಯೇಳುತ ಬೆಂದು ಬಳಲುವ । ನರಗೆ ಗುರು ಸದ್ಭಕ್ತಿ ನೌಕೆಯು ಪಾರಗಾಣಿಪುದು ॥1॥

ಗುರುವೆನಗೆ ನೀ ಸಿದ್ಧ ಯೋಗೀಶ್ವರನೆ ನಿನ್ನಯ ಚರಣಕೆರಗುವೆ । ನರುಹು ಮುಂದಿನ ಗುರುಚರಿತ್ರವ ಕರುಣದಿಂದೆನಗೆ ॥
ಗುರುವು ನಡೆದನು ಮುಂದೆ ಗಾಣಗ । ಪುರಕೆನುತ ನೀ ಪೇಳ್ದೆ ಯೌದುಂ- । ಬರದಿ ನಿರ್ಗುಣ ರೂಪದಿಂದಲಿ ವಾಸಿಸುವನೆನುತಾ ॥2॥

ವರವನಿತ್ತನು ಯಕ್ಷಯೋಗಿನಿ- । ಯರಿಗೆನುತ ನೀ ಪೇಳ್ದೆ ಕೀರ್ತಿಯು । ಧರೆಯೊಳಗೆ ವಿಸ್ತಾರವಾಯಿತೆನುತ್ತ ನೀ ಮುದದಿ ॥
ಸುರತರುವು ನಿಜವಿಹುದು ಔದುಂ- । ಬರವೆನುತ ನಾ ಕೇಳ್ದೆ ನೀನೆನ । ಗರುಹು ಯಾರಿಗೆ ಸಾಕ್ಷಿಯಾಯಿತು ಪುಣ್ಯಕ್ಷೇತ್ರದಲಿ ॥3॥

ಎಂದ ಶಿಷ್ಯನ ವಚನ ಕೇಳ್ದಾ- । ನಂದದಿಂದಲಿ ಸಿದ್ಧ ಯೋಗಿಯು । ಯೆಂದನಾಕ್ಷಣ ನಾಮಧಾರಕ ಕೇಳು ಗುರುಮಹಿಮೆ ॥
ಕಂದ ನಿನಗಾನೆಂತು ಪೇಳಲಿ । ಚಂದದಿಂದ ಸಮಸ್ತ ಲೀಲಾ- । ವೃಂದವನು ಗುರು ಮಹಿಮೆಯನು ಯೆನಗಸದಳವು ತಿಳಿಯ ॥4॥

ವಾಸವೌದುಂಬರದಿ ಸಂತತ । ಲೇಸನೀವನು ಭಕ್ತಜನರಿಗೆ । ನಾಶವಪ್ಪುದು ದುರಿತ ತಾಪತ್ರಯವು ದರ್ಶನದಿ ॥
ಸಾಕ್ಷಿಯಾಗಿಹ ಕಥೆಯನೊಂದನು । ಭಾಸುರದ ಪಾದುಕೆಯ ಮಹಿಮೆಯ । ತ್ರಾಸವಿಲ್ಲದೆ ನಿನಗೆ ಪೇಳುವೆನೆಂದನಾ ಯೋಗಿ ॥5॥

ಕೇಳು ಶಿಷ್ಯೋತ್ತಮನೆ ಗ್ರಾಮ ಶಿ- । ರೋಳವೆಂಬುವದಿರುವುದದರಲಿ । ಬಾಳುವೆಯ ಮಾಡುವನು ಭೂಸುರನೊರ್ವ ಸದ್ಗುಣದಿ ॥
ಪೇಳುವನು ವೇದವನು ತಾನು ತ್ರಿ- । ಕಾಲಸಂಧ್ಯಾ ಸ್ನಾನರತನು ಸು- । ಶೀಲೆಯಾತನ ಭಾರ್ಯೆ ಶಾಂತಸ್ವರೂಪ ಪತಿನಿರತೆ ॥6॥

ಪುತ್ರರಾದರೆ ಮತ್ತೆ ತಾವಪ- । ಮೃತ್ಯುವಿಗೆ ತುತ್ತಾಗುವವರು ಪಂ- । ಚತ್ವ ಪಡೆದರು ಪಂಚಪುತ್ರರು ಬಾಲ್ಯತನದೊಳಗೆ ॥
ಯೆತ್ತಣಿಂದೀ ಪುತ್ರಶೋಕದ । ನಿತ್ಯ ಸುಡುತಿಹ ಬೆಂಕಿ ಬಿಡುವುದೆ- । ನುತ್ತ ಚಿಂತಿಸಿ ಯೋಚನೆಯ ಕೇಳಿದಳು ವಿಪ್ರರಿಗೆ ॥7॥

ಭೂಸುರರರು ಪೇಳಿದರು ಕರ್ಮವಿ- । ಕಾಸವನು ಪೂರ್ವಾರ್ಜಿತದ ಗುಣ- । ದೋಷಗಳನೆಲ್ಲವನು ವಿಸ್ತರಿಸಿದರು ದ್ವಿಜಸತಿಗೆ ॥
ದೋಷ ಪೂರ್ವಾರ್ಜಿತವು ಗರ್ಭವ । ನಾಶಮಾಡಲು ಬಂಜೆಯಪ್ಪರು । ಭೂಸುರರ ದ್ರವ್ಯಾಪಹಾರದಿ ಬಂಜೆಯಾಗುವರು ॥8॥

ತುರಗಗೋವಧ ಮಾಡಿದವರಿಗೆ । ದೊರೆಯಲಾರದು ಪುತ್ರಸಂತತಿ । ಯರುಹಲಾರೆವು ನಿನ್ನ ಪೂರ್ವದ ದುರಿತಕಾರಣವಾ ॥
ತರುಣಿ ಕೇಳು ವಿಚಾರ ಮಾಡಲು । ದುರಿತವಿದು ಕಾಣುವುದು ವಿಪ್ರನ । ಮರಣ ದೋಷವು ನಿನ್ನ ಹಿಂಬಾಲಿಪುದು ನಿಜವಾಗಿ ॥9॥

ಬಾಲೆ ಶೌನಕ ಗೋತ್ರವಿಪ್ರನ । ಸಾಲವನು ನೀ ತಂದಿ ರಿಣವನು । ಕೇಳಲಾತನ ಕೊಡದೆ ದ್ರವ್ಯವ ವಂಚಿಸಿದೆ ಮುದದಿ ॥
ಮೇಲೆ ತದ್ ಬ್ರಾಹ್ಮಣನು ಲೋಭದಿ । ಕೇಳು ಪ್ರಾಣವ ಸಂತ್ಯಜಿಸಿದನು । ತಾಳಿದನು ಜನ್ಮವನು ಮೇಣು ಪಿಶಾಚಯೋನಿಯಲಿ ॥10॥

ಭೂಸುರನು ಕೇಳಾತನೇ ತವ । ಕೂಸುಗಳ ಸಂಹರಿಸಿ ನಿನಗತಿ । ತ್ರಾಸವನು ಕೊಡುತಿಹನು ಕರ್ಮದ ಫಲವು ಗ್ರಾಹ್ಯವಲಾ ॥
ಈಸು ಪರಿಯಲಿ ವಿಪ್ರನನಿತೆಯು । ಭೂಸುರರ ನುಡಿ ಕೇಳ್ದು ಮನದಲಿ । ಕ್ಲೇಶವನು ತಾಳಿದಳು ಪೇಳ್ದಳು ಮುರುಗಿಯುತ್ತರವಾ ॥11॥

ಕರಗಳನು ಜೋಡಿಸುತಲಬಲೆಯು । ಚರಣದಲಿ ಶಿರವಿಟ್ಟು ವಿಪ್ರರಿ- । ಗರುಹಿದಳು ನಾ ಪಾಪಿ ಭವಸಾಗರದಿ ಮುಳುಗಿಹೆನು ॥
ಕರುಣದಿಂದೆನಗಿನ್ನುಪಾಯವ । ನರುಹಿ ರಕ್ಷಿಸಬೇಕು ಪಾಪದ । ಗರಳದಿಂ ಭಕ್ಷಿಸಿದೆ ಮಕ್ಕಳನೌಷಧದ ಕೊಡಿರಿ ॥12॥

ಎಂದ ನುಡಿಯನು ಕೇಳಿ ಭೂಸುರ- । ವೃಂದ ವಿಪ್ರಸ್ತ್ರೀಗೆ ಪೇಳಿದ- । ರಂದು ನೀ ಕೊಲೆಪಾತಕವ ಮಾಡಿದಿಯ ನೀ ತಿಳಿಯೆ ॥
ತಿಂದು ಬ್ರಾಹ್ಮಣ ದ್ರವ್ಯವನು ನೀ । ಕೊಂದೆ ಭೂಸುರವರನ ಕೇಳದ- । ರಿಂದಲಿವನು ಪಿಶಾಚನಾದನು ತ್ರಾಸಿಪನು ನಿನಗೆ ॥13॥

ಮರಣದಾರಭ್ಯದಿ ಕಣಾ ಭೂ- । ಸುರನಿಗುತ್ತರಕ್ರಿಯೆಯ ಮಾಡದೆ । ಧರಿಸಿದನು ಪೈಶಾಚಯೋನಿಯ ಭಗಿನಿ ನೀ ಕೇಳು ॥
ಭರದಿ ನೀ ತದ್ವಿಪ್ರನಿಂಗು- । ದ್ಧರಿಪ ಸತ್ಕ್ರಿಯೆ ಮಾಡಿ ತದ್ ಗೋ । ಚರದ ದ್ವಿಜನಿಗೆ ಕೊಡಲುಬೇಕೌ ನೂರು ಹೊನ್ನುಗಳಾ ॥14॥

ಲೇಸು ನಿನಗಾಗುವುದು ದ್ರವ್ಯದ । ವಾಸನೆಯ ಪೂರಿಸಲು ದ್ವಿಜನಿಗೆ । ವಾಸ ಮಾಡಲುಬೇಕು ಗಂಗಾಕೃಷ್ಣೆ ಸಂಗಮದಿ ॥
ಮಾಸವೊಂದುಪವಾಸ ಮಾಡುತ । ವಾಸವೌದುಂಬರದಿ ಮಾಡುತ । ಲೇಸಿನಿಂದಭಿಷೇಕ ಮಾಡಾ ಕಾಮಧೇನುವಿಗೆ ॥15॥

ಸ್ನಾನ ಮಾಡುತ ಪಾಪನಾಶದಿ । ನೀನು ಮಾಡಭಿಷೇಕ ಶ್ರೀಗುರು । ರಾಣಪಾದುಕಕಾಗ ಬ್ರಾಹ್ಮಣ ಭೋಜನವ ಹಾಕಿ ॥
ಸ್ನಾನ ಮಾಡೌ ಕಾಮ್ಯ ತೀರ್ಥದಿ । ನೀನು ಶ್ರೀಗುರು ಚರಣ ಪೂಜಿಸಿ । ಧ್ಯಾನಿಸೌ ವಿಧಿಪೂರ್ವಕವು ನೀನೇಕಭಾವದಲಿ ॥16॥

ಸ್ಥಾನವಿಹುದೀ ಗುರುವರನದಿದು । ಶ್ರೀನೃಸಿಂಹಸರಸ್ವತಿಯ ಬಹು । ಮಾನ್ಯ ಪಾವನಸ್ಥಳವು ಪಾಪವಿನಾಶಕರವಿಹುದು ॥
ಶೌನಕನ ಗೋತ್ರದಲಿ ಹುಟ್ಟಿದ । ಮಾನ್ಯ ವಿಪ್ರಗೆ ದ್ರವ್ಯಶತವನು । ದಾನ ಮಾಡಲು ಸರ್ವಪಾಪವು ಸುಟ್ಟು ಹೋಗುವದು ॥17॥

ಗುರುಚರಣ ಸ್ಮರಣವನು ಮಾಡಲು । ದುರಿತರಾಶಿ ವಿನಾಶವಪ್ಪುದು । ಗುರುವೆ ನಿನಗುದ್ಧರಿಸುವನು ಸಂದೇಹಬೇಡಿದಕೆ ॥
ಪರಿಹರಿಪನು ಪಿಶಾಚಬಾಧೆಯ । ಗುರುಕೃಪಾವರವಜ್ರಪಂಜರ- । ವಿರಲು ತಾಪತ್ರಯವು ಬಾಧಿಸಲಾರದೌ ನರಗೆ ॥18॥

ನೂರು ಹೊನ್ನಿನ ಸಂಚಯವು ಸಿಗ । ಲಾರದೆನಗೀ ಜನ್ಮದಲಿ ಶ । ರೀರ ಕಷ್ಟವ ಮಾಡಿ ನಾನುಪವಾಸ ಮಾಡುವೆನು ॥
ಚಾರು ಶ್ರೀಗುರುಚರಣಸೇವೆಯ । ಬೇರೆಭಾವವಿಹೀನೆ ಮಾಡುವೆ । ತಾರಿಸಲಿ ಗುರುವೆನ್ನನೆಂದಳು ಮರುಗಿ ಭಾಮಿನಿಯು ॥19॥

ನಾರಿಯಾಡಿದ ನುಡಿಯನಾ ನಿ- । ರ್ಧಾರಮಾನಸದೃಢತೆಯನ್ನು ವಿ- । ಚಾರ ಮಾಡುತ ತಿರುಗಿ ನುಡಿದರು ಭೂಸುರರು ಸತಿಗೆ ॥
ನಾರಿ ನೀನಂಜದಿರು ನಿನ್ನಯ । ತಾರಕನು ಗುರುವಿಹನು ಸಂಶಯ । ತಾರದಿರು ಮನದಲ್ಲಿ ಗುರುವನು ನಂಬು ಪದಕೆರಗು ॥20॥

ನೂರು ಹೊನ್ನಿನ ಸಂಚಯವು ಸಿಗ । ಲಾರದಿರೆ ದ್ರವ್ಯವನು ಶಕ್ತಿಗೆ । ಮೀರದಂದದಿ ದಾನ ಮಾಡೌ ಭಾವಭಕುತಿಯಲಿ ॥
ನಾರಿಮಣಿಯೌದುಂಬರದ ಮರ । ಸೇರಿ ಸದ್ಗುರು ಪಾದ ಪೂಜಿಸೆ । ಧಾರುಣಿಯೊಳೀ ದುರಿತನಾಶವು ಭಯವು ನಿನಗೇಕೆ ॥21॥

ವಾಸವೌದುಂಬರದಿ ಗುರುವಿನ । ಕ್ಲೇಶವನು ಸಂಹರಿಪನಿಲ್ಲಿ ವಿ- । ನಾಶವಪ್ಪವು ಬ್ರಹ್ಮಹತ್ಯಾದಿಗಳು ಸ್ನಾನದಲಿ ॥
ತಾಸವಿಲ್ಲದೆ ನೀನು ವ್ರತವುಪ- । ವಾಸ ಮಾಡಲು ಶ್ರೀಗುರುವು ಸಂ- । ತೋಷದಲಿ ಮೋಕ್ಷವೀನನು ನಿನಗೆ ಬೆದರಿದರು ॥22॥

ಭೂಸುರರ ನುಡಿ ಕೇಳಿ ನಾರಿಯು । ತೋಷದಿಂದಲಿ ನಡೆದಳಾಗುರು- । ವಾಸ ಕೌದುಂಬರಕೆ ಸದ್ಗುರು ಚರಣ ಧ್ಯಾನಿಸುತ ॥
ಲೇಸಿನಿಂ ಸಂಗಮದಿ ಪಾಪವಿ । ನಾಶತೀರ್ಥದಿ ಸ್ನಾನ ಮಾಡಿದ । ಳಾಸುವಾಸಿನಿ ಯೇಳು ಬಾರಿಗೆ ದಿವಸ ದಿವಸದಲಿ ॥23॥

ಅತ್ತಿ ಮರಕೆ ಪ್ರದಕ್ಷಿಣೆಯನು ತಾ- । ನರ್ಥಿಯಿಂದಲಿ ಹಾಕಿ ಕಾಮ್ಯದ । ತೀರ್ಥದಲಿ ತಾಮಿಂದು ಗುರುಚರಣವನು ಪೂಜಿಪಳು ॥
ಸುತ್ತುವಳು ಬಲ ಬಂದು ಚರಣಕೆ । ಮತ್ತೆ ದಂಡಪ್ರಣತಿ ಮಾಳ್ಪಳು । ಭಕ್ತಿಭಾವದೊಳೇನ ಹೇಳುವೆ ಸಾಧ್ವಿಯಳ ನಿಷ್ಠೆ ॥24॥

ಮೂರುದಿನವೀಪರಿಯೋಳಾದ್ವಿಜ । ನಾರಿ ಸೇವೆಯ ಮಾಡಲಾಕ್ಷಣ । ತೋರಿದನು ಸ್ವಪ್ನದಲಿ ತದ್ ದ್ವಿಜ ಬೇಡಿದನು ಹಣವಾ ॥
ನೂರು ಹೊನ್ನಿನ ಸಾಲವನು ನೀ । ತೀರಿಸದೆ ನಾ ಬಿಡೆನು ನಿನ್ನ ಶ- । ರೀರವನು ವ್ಯರ್ಥದಲಿ ದಂಡಿಪ ಕಾರಣವದೇನು ॥25॥

ಅರ್ಥವನು ನೀನೆನಗೆ ಕೊಡದಿರೆ । ವ್ಯರ್ಥ ವಹುದೀ ನಿನ್ನ ಯತ್ನವು । ಸತ್ಯವೆನ್ನಯ ವಚನ ನಿನ್ನಯ ವಂಶ ಛೇದಿಸುವೆ ॥
ಪುತ್ರಸಂತತಿಯಾಶೆಯನು ಬಿಡು । ಕತ್ತರಿಪೆನಾ ನಿನ್ನ ನೆನುತಲಿ । ಚಿತ್ತ ಸಂತಾಪದಲಿ ನಾರಿಯ ದ್ವಿಜನುಬೆದರಿಸಿದಾ ॥26॥

ನೋಡಿದಾಕ್ಷಣ ದ್ವಿಜನ ಭಾಮಿನಿ- । ಯೋಡಿದಳು ಕೇಳತ್ತಿಗಿಡದ ನಿ- । ಗೂಢ ಛಾಯೆಯೊಳಲ್ಲಿ ಶ್ರೀಗುರುನಾಥನನು ಕಂಡು ॥
ಹಾಡುತಲಿ ಹರಸುತಲಿ ಗುರುವನು । ಬೇಡಿಕೊಂಡಳು ಬೆನ್ನ ಹಿಂದ- । ಕ್ಕೋಡಿದಳು ಭೀತಿಯಲಿಯಬಲೆಯ ದೇಹ ನಡುಗಿದುದು ॥27॥

ನಾರಿಗಭಯವನಿತ್ತು ದ್ವಿಜನ ವಿ- । ಚಾರಿಸಿದನಾ ಯತಿವರೇಣ್ಯನು । ಕಾರಣವಿದೇನಿಹುದು ನಾರಿಯ ಬೆದರಿಸುವೆ ಯಾಕೆ ॥
ಕ್ರೂರತನವನು ಬಿಡು ಬಿಡೆನಲಾ । ನಾರಿಯನು ಹಿಂಬಾಲಿಸುವ ದ್ವಿಜ- । ನಾರಭಿಸಿದನು ತನ್ನ ದುಃಖದ ಕಥನ ಹೇಳಲಿಕೆ ॥28॥

ನೂರುಹೊನ್ನಿನ ಸಾಲವನು ಕೇಳ್ । ನಾರಿಗೀಕೆಗೆ ಕೊಟ್ಟೆ ವಂಚಿಸಿ । ತೀರಿಸಳು ತದೃಣವನದರಿಂ ಮೃತ್ಯುವೆನಗಾಯ್ತು ॥
ವೈರಿಯೆನಗಿಹಳಿವಳು ನೀ ಕೈ- । ವಾರಿಯಾಗೀ ಪಕ್ಷಪಾತವ । ತೋರಬಾರದು ಯತಿವರಗೆ ಪೇಳುಚಿತವೇನಿದುವೆ ॥29॥

ಎಂದ ನುಡಿಯನು ಕೇಳಿ ಕೋಪದೊ- । ಳೆಂದನಾ ವಿಪ್ರನಿಗೆ ಗುರುವರ । ನಿಂದು ಯೆನ್ನನು ಶರಣು ಹೊಕ್ಕಳು ನಾರಿ ಭೀತಿಯಲಿ ॥
ಇಂದು ಶಿಕ್ಷಿಪೆ ನಿನ್ನ ನೀಕ್ಷಣ । ಮುಂದೆ ಭಕ್ತರ ತ್ರಾಸಮಾಡದ । ಲಂದುದನು ನಾ ಕೇಳು ಹಿಂಗೋಷ್ಟಿಯನು ಪೇಳುವೆನು ॥30॥

ವನಿತೆ ಭಕ್ತಿಯೊಳೇನ ಕೊಡುವಳು । ಮನವಿರಲು ನೀನದನು ಕೊಳ್ಳಲೆ । ನಿನಗೆ ಸಮ್ಮತವಿಲ್ಲದಿರೆ ನೀ ನಡಿಯೊ ನಡಿ ನಡಿಯೊ ॥
ಯೆನಗೆ ಶರಣಾಗತರ ರಕ್ಷಿಪ । ವಿನುತ ಬಿರುದಿರೆ ರಕ್ಷಿಸುವೆನೀ- । ವನಿತೆಯನು ಧನಧಾನ್ಯ ಪುತ್ರರ ಕೊಟ್ಟು ಸಂತಸದಿ ॥31॥

ನಾನು ಹೇಳಿದ ಮಾತು ಕೇಳ್ದರೆ । ಹಾನಿಯಪ್ಪುದು ನಿನ್ನ ಪಾಪವು । ಹೀನ ಪೈಶಾಚತ್ವ ಪೊಪುದು ಗತಿಯು ಸಿಗುವುದಲಾ ॥
ಈ ನಿರೋಪವ ಕೇಳದಿದ್ದರೆ । ನೀನು ಶಿಕ್ಷಾಪಾತ್ರನಾಗುವೆ । ಯೇನು ನಿನ್ನ ವಿಚಾರವೆಂದನು ನಗುತ ಗುರುರಾಯಾ ॥32॥

ಗುರುವಚನವನು ಕೇಳುತಾ ಭೂ- । ಸುರನು ವಂದಿಸಿ ಪೇಳ್ದನುತ್ತರ । ಚರಣಗಳ ನಾ ಕಂಡೆ ನಿನ್ನಯ ಕೊಡು ಯೆನಗೆ ಗತಿಯಾ ॥
ಪರಿಯ ಹೇಳ್ಳೈ ಯೆನಗೆ ಸದ್ಗತಿ । ಬರುವ ತೆರದಲಿ ಮಾಡಲಂಗೀ- । ಕರಿಸುವೆನು ನೀ ಪೇಳ್ದ ಮಾತನು ಸ್ವಾಮಿ ಗುರುರಾಯಾ ॥33॥

ಹತ್ತು ದಿವಸದಿ ವಿಪ್ರವನಿತೆಯು । ಭಕ್ತಿಯಲಿ ಸತ್ಕರ್ಮ ಮಾಡಲು । ಮುಕ್ತಿಯಹುದ್ಯೈ ನಿನಗೆನುತ್ತಲಿ ಪೇಳ್ದನಾ ದ್ವಿಜಗೆ ॥
ಮತ್ತೆ ಹಿಂದಕೆ ತಿರುಗಿಯಬಲೆಗೆ । ಯಿತ್ತನಭಯವ ತಾಯೆ ಕೇಳೌ । ವಿತ್ತವೇನಿಹುದದನು ಸರ್ವಸ್ವವನು ಕೊಡು ಯಿವಗೆ ॥34॥

ಸ್ನಾನಮಾಡುತಲಷ್ಟತೀರ್ಥದಿ । ದಾನ ಮಾಡೌ ವಿಪ್ರನಾಮದಿ । ಸ್ನಾನಮಾಡೌ ಹತ್ತು ದಿವಸದೊಳತ್ತಿ ಮರವಿದಕೆ ॥
ನೀನು ಕೇಳಿ ಪರಿಯ ಮಾಡಲು । ಹಾನಿಯಪ್ಪುದು ಬ್ರಹ್ಮಹತ್ಯವು । ಸಾನುರಾಗದ ಪುತ್ರ ಕನ್ಯಾ ಲಾಭ ನಿನಗಹುದು ॥35॥

ಈ ತೆರದೆ ಸ್ವಪ್ನವನು ಕಂಡಳು । ಭೀತಳಾದಳು ಮನದಿ ಭಾಮಿನಿ । ಯಾ ತತೂಕ್ಷಣ ಮಾಡಿದಳು ಸ್ವಪ್ನದಲಿ ಪೆಳ್ದಂತೆ ॥
ಆತಗಾಯಿತು ಮುಕ್ತಿ ದ್ವಿಜ ಕೊಲೆ- । ಪಾತಕವು ಸಂಹರಿಸಿದುದು ಗುರು- । ನಾಥನಾದಿನ ರಾತ್ರಿ ಸ್ವಪ್ನದಿ ಬಂದು ಪೇಳಿದನು ॥36॥

ನಾರಿಮಣಿ ನೀನೀಗ ಕೊಳ್ಳೀ । ನಾರಿಕೇಳುಫಲದ್ವಯಂಗಳ । ಹಾರಿಹೋಯಿತು ದುರಿತ ನಿನ್ನದೆನುತ್ತ ವುಡಿ ತುಂಬಿ ॥
ಭಾರಿಪ್ರೇಮದಿ ಪುತ್ರಸಂತತಿ । ತೋರುವುದು ನಿನಗೆಂದು ಹರಸುತ । ಕಾರಣಿಕ ಗುರುನಾಥ ಭಕ್ತೋದ್ಧರಣ ಪೇಳಿದನು ॥37॥

ಗುರುವರನ ವಚನದಲಿ ಸೇವೆಯ । ಭರದಿಮಾಡಲು ದಂಪತಿಗಳಾ । ಗುರುವು ವೊಲಿವನು ದಂಪತಿಗಳಿಗೆ ದುರಿತನಾಶಕನು ॥
ಪರುಷ ಸ್ಪರ್ಶದಿ ಲೋಹವದು ಸುಂ- । ದರಸ್ವರೂಪದ ಚಿನ್ನವಪ್ಪುದು । ತ್ವರಿತದಿಂದಾ ವನಿತೆಯಾದಳು ಪಾಪವಿರಹಿತಳು ॥38॥

ಮುಂದೆ ಕೇಳಾ ವನಿತೆಗಾದವು । ದ್ವಂದ್ವಸುತರತ್ನಗಳು ಗುರುಕೃಪೆ । ಯಿಂದ ಹಿರಿಮಗನಿಂಗೆ ಮಂಜಿಯ ಮಾಡಿದರು ಮುದದಿ ॥
ಕಂದನಿಗೆ ಕಿರಿಯನಿಗೆ ಬಹಳಾ । ನಂದದಿಂದಲಿ ಚೌಲಕರ್ಮವ । ಸಂದಣಿಸಿ ಮಾಡುವರೆ ಸನ್ನಾಹವನು ಮಾಡಿದರು ॥39॥

ಚೌಲಕರ್ಮದ ಪೂರ್ವದಿವಸದೆ । ಬಾಲಕಂಗಾ ಮಧ್ಯರಾತ್ರಿಗೆ । ತಾಳಲಾರದ ಬೇನೆ ಬಂತೇನೆಂದು ಪೇಳುವೆನು ॥

ಕಾಲುಕೈಗಳ ಸೆಟಿಸಿ ಹಿಂದಕೆ । ನಾಲಿಗೆಯ ಹೊರಹಾಕುತಲಿ ಕ । ಣ್ಣಾಲಿಗಳ ತಿರುಗಿಸುತ ಮೋರೆ ಭಯಾನಕವು ನೋಡೆ ॥40॥

ಧನುಷಿನಾಕಾರದಲಿ ದೇಹವು । ಮಣಿದು ಬಿದ್ದುದು ಮೂರುದಿವಸದಿ । ತನಯನಿಂಗೀ ತೆರದಿ ಬಂದಿಹ ವ್ಯಾಧಿ ನೋಡಿದಳು ॥

ಜನನಿ ಮರುಗುತಲಿರಲು ಮುಂದಕೆ । ದಿನಕರನು ಪಶ್ಚಿಮದಿ ಮುಳುಗಲು । ತನಯ ಪಂಚತ್ವವನು ಪಡೆದನು ವ್ಯಾಧಿವಶ ದಿಂದಾ ॥41॥

ಸುತನು ಸತ್ತುದ ನೋಡಿ ಭಾಮಿನಿ । ಕ್ಷಿತಿಗೆ ತಲೆಯಪ್ಪಳಿಸಿ ಶೋಕದಿ । ಸತಿಯು ಕಲ್ಲಿಂದೆದೆಯಬಡ ಕೊಂಡಳು ಕಣಾ ಮರುಗಿ ॥

ಕ್ಷಿತಿಯೊಳಗೆ ತಾ ಹೊರಳಿ ನಿಶ್ಚೇ । ಷ್ಟಿತಳು ಮುಂದಾದಳು ಕಣಾ ದುಃ । ಖಿತಳ ಕಣ್ಣಿಂದಿಳಿಯುತಿದ್ದುದು ನೀರು ಮಳೆಯಂತೆ ॥42॥

ಪ್ರೇತ ಪುತ್ರನ ಮೇಲೆ ಬಿದ್ದಳು । ಪ್ರೀತಿಯಿಂದದನಪ್ಪಿ ಬಹು ದುಃ- । ಖಾತಿರೇಕದಿ ಮರುಗಿದಳು ಸುತಗುಣವ ನೆನೆನೆನೆದು ॥

ತಾತನೇ ಸುಕುಮಾರರಾಯನೆ । ಮಾತೆಯನು ನೀ ಬಿಟ್ಟು ನಡೆದಿಯೊ । ಘಾತ ಮಾಡಿದೆ ಯೆನ್ನ ರಕ್ಷಿಪರಾರು ಈ ಜಗದಿ ॥43॥

ಎಲ್ಲಿ ನಡೆದಿಯೊ ಆಟ ಮಾಟವ । ನೆಲ್ಲಿ ಮಾಡುವೆ ಹಾಲು ಈ ಮೊಲೆ । ಯಲ್ಲಿ ಬತ್ತಿತು ಕುಡಿಯೊ ಬಾ ಬಾ ಮಗನೆ ಬಾ ಕಂದಾ ॥

ಸಲ್ಲಲಿತ ತವಗುಣಗಣವನಾ । ನೆಲ್ಲಿ ಮರೆಯುವೆ ಪುತ್ರರಾಯನೆ । ಮಲ್ಲಿಗೆಯ ಪರಿಮಳದ ಮುದ್ದನು ಯೆಂತು ಮರೆಯುವೆನು ॥44॥

ತೊದಲ ನುಡಿಯನು ಕೇಳಿ ನಿನ್ನಯ । ವದನವನು ಮುದ್ದಾಡುತಿದ್ದೆನು । ಸದನವೆನ್ನದು ಕೇಳರಣ್ಯೋಪಾದಿಯಾಯಿತಲಾ ॥

ನಿಧಿಯು ಸ್ವಪ್ನದಿ ಸಿಕ್ಕಿತೆನ್ನುತ । ಮುದದಿ ಕುಣಿದರೆ ಸ್ವಪ್ನಹೋಗಲು । ರುದನ ಮಾಡುವ ತೆರದೊಳಾಯಿತು ಯೆನ್ನ ಸಂಗತಿಯು ॥45॥

ಬಾಲಾರ್ಕವರ ಹಡೆದೆನದರೊಳು । ಬಾಲನಿವನೆ ಶಿರೋಮಣಿಯು ಕರು- । ಣಾಳು ಶ್ರೀಗುರುವಿತ್ತ ವರವಿದು ಪಿಂಡವುತ್ತಮವು ॥

ಘೋಳೆಯುತ್ತಮವಾಯಿತೆನಗೆ ವಿ । ಶಾಲ ಸಂತಸವಾಯ್ತು ಯೆನ್ನನು । ಪಾಲಿಸುವೆ ನೀನೆಂದು ಮಾಯಾಪಾಶದಲಿ ಬಿದ್ದೆ ॥46॥

ಬಾಲನೆಮ್ಮನು ಮುಪ್ಪಿನಲಿ ಸಂ- । ಭಾಳಿಪನು ನಿಜವೆನುತ ನಂಬಿದೆ । ಹಾಳುಬಾವಿಗೆ ಬಿದ್ದ ತೆರನಾಯ್ತೆನಗೆ ಗತಿಯೇನು ॥
ಬಾಲಕನೆ ನಿನಗುಚಿತವಲ್ಲಿದು । ತಾಳಲಾರೆನು ನಿನ್ನ ವಿರಹವ- । ನೇಳು ನೀನೇಳೆಂದು ಮಗನನು ಹಲುಬಿ ಮರುಗಿದಳು ॥47॥

ಎಂದ ನುಡಿಗಳ ಕೇಳಿ ಭೂಸುರ- । ವೃಂದ ಸಂತೈಸಿದರು ನಿನ್ನಯ । ಕಂದನಿಂಗಾಯುಷ್ಯ ತೀರಲು ಸತ್ತನಚ್ಚರಿಯೆ ? ॥
ಮುಂದೆ ಯಾರಿದಕೇನ ಮಾಳ್ಪರು । ಬಂದುದಕೆ ತಲೆಯೊಡ್ಡಿ ಭವಬಲೆ । ಯಿಂದ ನೀ ಪಾರಾಗಬೇಕಿದಕೇನುಪಾಯವದೆ ? ॥48॥

ಮರಣ ತಪ್ಪದು ದೇವದಾನವ । ಪರಮಋಷಿವರ್ಯರ್ಗೆ ಮಿಕ್ಕಾ । ನರರ ಪಾಡೇನಿನ್ನು ಸರ್ವರು ಮೃತ್ಯುವಿಗೆ ತುತ್ತು ॥
ಹರಿಹರರು ಬಂದೀ ಧರೆಯೊಳವ । ತರಿಸಿದರು ಮೇಣಿಹರೆ ಶಾಶ್ವತ । ಬರಿದೆ ನೀ ಮರುಗಿದರೆ ಬರುವನೆ ಸತ್ತ ಮಗ ನಿನಗೆ ॥49॥

ಎಂದ ನುಡಿಯನು ಕೇಳ್ದು ನುಡಿದಳು । ಸುಂದರಾಂಗಿಯು ದ್ವಿಜಸಮೂಹಕೆ । ತಂದು ಕೊಟ್ಟನು ಫಲಗಳೆರಡನು ಹರಸಿ ಗುರುವರನು ॥
ಕಂದನಾಗುವನೆನಗೆ ಶಾಶ್ವತ । ನೆಂದು ವರವಿತ್ತೆನ್ನ ಹರಸಿದ- । ನಿಂದು ತದ್ವರ ಸಟೆ ಯೆನುತ ನಾನೆಂತು ಪೇಳುವೆನು ॥50॥

ಶ್ರೀನೃಸಿಂಹ ಸರಸ್ವತಿಯ ವರ- । ದಾನದಿಂದಲಿ ಪಡೆದೆ ಸುಂದರ । ಸೂನುಗಳ ದೀರ್ಘಾಯುಗಳ ತದ್ವರದ ಬಲದಿಂದ ॥
ಏನು ಮಾಳ್ಪನು ಯಮನು ಯೆನಗನು- । ಮಾನವಿಲ್ಲಾ ಯತಿಯ ವಚನದಿ । ಮಾನನಿಧಿಗಳೆ ಕೇಳಿರೆಂದಳು ಮರುಗಿ ಭಾಮಿನಿಯು ॥51॥

ನಿನ್ನ ಚರಣವ ನಂಬಿದೆನು ನೀ । ನೆನ್ನ ಘಾತವ ಮಾಡಿದಿಯೆ ಸುತ । ನೆನ್ನ ಪ್ರಾಣಪ್ರಿಯನ ನೀನಗಲಿಸಿದೆ ಪ್ರಾಣವನು ॥
ನಿನ್ನ ವಾಕ್ಯವು ಸತ್ಯವಾಗುವು- । ದೆನ್ನುತಲಿ ಭರವಸವನಿಟ್ಟೆನು । ಯಿನ್ನು ಭರವಸವಿಲ್ಲ ನೀ ವಿಶ್ವಾಸಘಾತಕಿಯೆ ॥52॥

ನೀ ನೃಸಿಂಹಸರಸ್ವತೀಯತಿ । ಮಾನವನ ರೂಪಿನಲಿ ಬಂದಿಹೆ । ಕ್ಷೋಣಿಯಲಿ ತ್ರೈಮೂರ್ತಿಗಳು ನೀನೆಂದು ಭಜಿಸುವರು ॥
ನೀನು ಧ್ರುವಗೆ ವಿಭೀಷಣಗೆ ವರ । ಮಾನಿಸಿದೆ ಯೆಂದೆನ್ನುವರು ಯೆನ । ಗೇನು ಭರವಸವಿಲ್ಲ ತದ್ವರ ಸಟೆಯೊ ದಿಟವೆಂದು ॥53॥

ವರವು ನಿನ್ನದು ನಿಜವೆನುತ ಬಹು । ಭರವಸದೊಳಾನಿದ್ದೆ ಯೆನ್ನನು । ಮರೆತೆಯಾ ವರವೆನ್ನ ವೈರಿಯ ತೆರದಿ ಕಾಡಿತಲಾ ॥
ಮರಣವೇ ಲೇಸೆನಗೆ ನಾ ಬದು- । ಕಿರೆನು ಮುಂದಕೆ ಪ್ರಾಣ ತ್ಯಜಿಸುವೆ । ಬರಲಿ ನಿನಗೀ ಕೀರ್ತಿ ಜಗದಲಿ ಶರಣವತ್ಸಲನೆ ॥54॥

ಬರುವರೀ ಔದುಂಬರಕೆ ಗುರು- । ಚರಣದಲಿ ವಿಶ್ವಾಸವಿಡುವರು । ನರರು ಕೇಳು ಪುರಶ್ಚರಣ ಮಾಡುವರು ನಿನ್ನೆದುರು ॥
ಧರಣಿಯಲಿ ಸರ್ವಾರ್ಥಸಾಧನ । ಗುರುಚರಣವೀ ಸ್ಥಾನವೆಂಬುದು । ಬರಿದೆ ಮಿಥ್ಯಾವಾದವಾಯಿತು ನಂಬಿ ಕೆಟ್ಟೆನಲಾ ॥55॥

ನಾನು ಭರವಸದಿಂದ ಬಂದೆನು । ಸ್ಥಾನದಲ್ಲೀ ಸೇವೆ ಮಾಡಿದೆ । ದೀನಳೆನಗೀ ಸ್ಥಾನದಲಿ ಸಿಕ್ಕಿತು ಮಹಾಶುದ್ಧಿ ॥
ಪ್ರಾಣವನು ನಾನಿಲ್ಲಿ ಬಿಡುವೆನು । ಕ್ಷೋಣಿಯಲಿ ತವಕೀರ್ತಿ ಪಸರಲಿ । ಯೇನು ಭರವಸದಿಂದ ಭಕ್ತರು ನಿನ್ನ ಭಜಿಸುವರು ॥56॥

ಹುಲಿಯು ತಿನುವುದೆನುತ್ತಲಂಜಿಕೆ- । ಯಲಿ ಬೆದರಿ ಬಡ ಧೇನು ಕಾಟಕ- । ನಲಿ ಶರಣು ಹೋಗಿ ಕಾಟಕ ಕೊಂದು ತಿಂದಂತೆ ॥
ಒಲಿಸುವರೆ ದೇವರಿಗೆ ತಾ ದೇ- । ಗುಲದಿ ಪೂಜೆಯ ಮಾಡುತಿರೆ ದೇ- । ಗುಲವೆ ತಲೆಯಲಿ ಬಿದ್ದು ಕೊಂದಂತಾಯ್ತು ಪರಿಯೆನಗೆ ॥57॥

ಭೂಸುರನ ಕೊಲೆಪಾತಕವು ಬಹು । ತ್ರಾಸ ಕೊಡುವದೆನುತ್ತ ತವ ಚರ- । ಣಾಶ್ರಯಕೆ ನಾ ಬಂದೆ ನೀವರವಿತ್ತೆ ಪ್ರೀತಿಯಲಿ ॥
ಈ ಸುಪರಿಯಲಿ ಯೆನಗೆ ನೀವಿ- । ಶ್ವಾಸ ತೋರಿಸಿ ಈಗ ಯೆನ್ನನು- । ಪೇಕ್ಷಿಸುವುದುಚಿತವೆ ಯತಿಗೆ ಸದ್ಭಕ್ತವತ್ಸಲಗೆ ॥58॥

ಎಂದು ನಾನಾ ತೆರದಿ ದುಃಖದಿ । ಬೆಂದು ತಾಯಿಯು ಮರುಗುತಿದ್ದಳು । ಸಂದುದೀಪರಿ ರಾತ್ರಿ ಮೈಯಲಿ ಭಾನವಿಲ್ಲದಲೆ ॥
ಬಂದು ವಿಪ್ರರು ಸಂತವಿಸಿದರು । ಮುಂದೆ ಮಾಡುವುದೇನು ವಿಧಿಲಿಪಿ- । ಯಿಂದ ತಪ್ಪಿಸಬಹುದೆ ನಾವೇನಮರರೇ ನೋಡು ॥59॥

ಪ್ರೇತಸಂಸ್ಕಾರವನು ಮಾಡುವ । ರೀತಿಯಿಹುದಾ ಪರಿಯೊಳೀತನ । ಪ್ರೇತವನು ಯೆಮಗರ್ಪಿಸೌ ನಾವ್ ನದಿ ಕಡೆಗೆ ಹೋಗಿ ॥
ಈ ತತೂಕಣ ದಹನವಿಧಿಯನು । ಯಾತನೆಯ ಕೊಡದೀಗ ಮಾಡುವೆ । ವೇತಕೀ ಪರಿ ದುಃಖ ಮಾಡುವೆ ಯೆಂದರಾ ದ್ವಿಜರು ॥60॥

ನುಡಿಯ ಕೇಳುತ ವಿಪ್ರವನಿತೆಯು । ಕಡು ವಿಷಾದದಿ ಬೊಬ್ಬಿರಿದು ಮಗು । ಹಿಡಿದು ಹೊಟ್ಟೆಯ ಕೆಳಗೆ ನುಡಿದಳು ದೀರ್ಘಸ್ವರದಿಂದಾ ॥
ಬಿಡೆನುತಾ ಬಿಡೆ ಪುತ್ರರಾಯನ । ವೊಡಲೊಳಗೆ ಜ್ವಾಲಾಮುಖಿಯ ಪರಿ । ಸುಡುಹುದುಲಾ ಪುತ್ರಶೋಕ ವಗಾಧತೆರವಾಗಿ ॥61॥

ಬಿಡೆನು ನಾ ನೀ ಪ್ರೇತವನು ಮಗ- । ನೊಡನೆ ಯೆನ್ನನು ಚಿತಿಯೋಳೇರಿಸಿ । ಸುಡಿರಿ ಸುಡಿರೆಂದೊದರಿ ಪ್ರೇತವನಪ್ಪಿದಳು ಹಲುಬಿ ॥
ಬಿಡಿಸಲಾರದೆ ಪ್ರೇತವನು ದ್ವಿಜ । ರೊಡನೆ ಸಾಂತ್ವನ ಮಾಡುವರೆ ದ್ವಿಜ । ಮಡದಿಯೊಡನಾಡಿದರು ತತ್ವವಿಚಾರ ಪೂರ್ವಕದಿ ॥62॥

ನಾರಿಮಣಿ ನಾವರಿಯೆವೀಪರಿ । ಯಾರು ಮಗನೊಡಗೂಡಿ ಸತ್ತರು । ಯಾರಿಗೌ ತಪ್ಪಿಸಲು ಬಹುದೀ ಯಮನ ಪಾಶವನು ॥
ಭಾರಿ ಪಾತಕವಾತ್ಮಹತ್ಯೆಯು । ಸಾರುತಿವೆ ನಿಗಮಾಗಮಂಗಳು ಧಾರು । ಣಿಯೊಳೀ ಮೂರ್ಖಪಂಥವ ಬಿಟ್ಟು ಬಿಡಬೇಕು ॥63॥

ಅರುಹಿದರು ಭೂಸುರರು ನಾನಾ । ಪರಿಯೋಳಾ ದ್ವಿಜವನಿತೆಗಾಕ್ಷಣ । ತರಣಿ ನಡೆದನು ಗಗನಮಾರ್ಗದಿ ಪ್ರಹರವೆರಡಾಯ್ತು ॥
ತರುಣಿ ಪ್ರೇತವ ಕೊಡಳು ನದಿಗೈ- । ತರಲು ಬಿಡಳೀಪರಿಯ ಸ್ಥಿತಿಯಲಿ । ತ್ವರೆಯೊಳಲ್ಲಿಗೆ ಬಂದ ಕೇಳೊರ್ವ ದ್ವಿಜವಟುವು ॥64॥

ನರನವನು ಸಾಮಾನ್ಯ ಪುರುಷನೆ । ಗುರುವರನೆ ನರವೇಷ ಧರಿಸುತ । ಶರಣರಕ್ಷಕ ಬಂದನಾ ನರಸಿಂಹಸರಸ್ವತಿಯು ॥
ಬರುತ ಕಂಡನು ನಾರಿಮಣಿಯನು । ಕರುಣಿಸಿದ ತತ್ವಬೋಧವ । ಪರಮದುಃಖ ನಿವಾರಣಾರ್ಥಕ ಕರ್ಣಪೀಯೂಷಾ ॥65॥

ಯಾವನೋದುವನೀ ಚರಿತ್ರವ- । ನಾರು ಭಕ್ತಿಯೋಳಿ ದರು ಕೇಳುವ । ನಾರು ಶುದ್ಧ ಮನಸ್ಸಿನಲಿ ಪಾಠವನು ಮಾಡುವನೋ ॥
ನೂರು ವರುಷಾಯುಷ್ಯವವನಿಗೆ । ಸೇರುವುದು ಪೀಡಿಸದು ವ್ಯಾಧಿಶ । ರೀರವನು ಶ್ರೀಗುರುಪ್ರಸಾದದಿ ವಿಷ್ಣುವಚನವಿದು ॥66॥

॥ ಅಧ್ಯಾಯ 20 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 21

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಮೃತ್ಯುವಿಗೆ ತುತ್ತಾದ ಕೂಸಿಂ- । ಗಿತ್ತನೈ ಜೀವವನು ಶ್ರೀಗುರು । ಭಕ್ತವತ್ಸಲನೆಂಬ ಬಿರುದನು ಕಾಯ್ದ ನೀಜಗದಿ॥

ಗುರುಕೃಪಾದೃಢಕವಚ ಧರಿಸಲು । ನರಗೆ ತಾಪತ್ರಯದ ಬಾಣದ । ಭರದ ಧಾರೆಗೆ ಬೆದರುವವರಾರಿಹರು ಮೂಜಗದಿ ॥
ಕರದಿ ಮಣ್ಣನು ಪಿಡಿಯೆ ತತ್ ಕ್ಷಣ । ತಿರುಗಿ ಹೊನ್ನಾಗುವುದು ಗುರುಕೃಪೆ । ಪರುಷವಲ್ಲಾ ಲೋಹವನು ಮಾಡುವುದು ಬಂಗಾರಾ ॥1॥

ಕಾರಣಿಕನಾ ಬ್ರಹ್ಮಚಾರಿಯು । ನಾರಿಮಣಿಗಿಂತೆಂದ ತಾಯಿಯೆ । ಯಾರಿಗೋಸುಗ ದುಃಖದಲಿ ನೀ ಮುಳುಗಿದೆಯೊ ಬರಿದೆ ॥
ಯಾರಿಗಿಹುದೀ ಜೀವಿತವು ಸ್ಥಿರ । ಯಾರು ಹುಟ್ಟಿದರಾರು ಸತ್ತರು । ಯಾರಿಗೀಸಂಸಾರ ನಿತ್ಯವು ಸೌಖ್ಯದಾಯಕವು ॥2॥

ನೀರಮೇಲಣ ಗುಳ್ಳೆಯೀ ಸಂ- । ಸಾರವೆಂದಿನತನಕ ಸ್ಥಿರವಿಹು- । ದಾರಿಹರು ಧಾರುಣಿಯೊಳಮರರು ನೀ ವಿಚಾರಿಸಲು ॥
ಮೂರುದಿನ ಬಾಳಿಕೆಯ ಬಹುನಿಃ- । ಸಾರವಿಹಸಂಸಾರವಿದು ಬಹು । ಸಾರವೆಂಬುವರಾರು ಮೂರ್ಖರ ಹೊರತು ಬೇರಾರು ॥3॥

ಭೂತವೈದರ ಮಿತ್ರವಾಗಿರು- । ವಾತುಮನ ಗೃಹವೆಂಬ ದೇಹವು । ಭೂತಗಳು ಬೇರಾಗಲಾಕ್ಷಣ ಮರಣವೆಂಬುವರು ॥
ಭೂತಪಂಚಕಕಿರುವ ಗುಣಗಳು । ಭೂತಳದಿ ಭ್ರಾಂತಿಯಲಿ ದೇಹದ । ಯಾತನೆಗಳಾಗುವವು ತ್ರಿಗುಣಾತ್ಮಕ ಶರೀರವಿದು ॥4॥

ಗುಣಗಳಿರುವವು ಪಂಚಭೂತಕೆ । ಗುಣವಿಹೀನನು ಜೀವನೀ ಲ- । ಕ್ಷಣವನರಿಯದೆ ಜೀವದೇಹವ ಭೇದವರಿಯಿರಲಾ ॥
ಗುಣಗಳಿರುವವು ಮೂರು ವದರಿಂ- । ದೆಣಿಸಲಾರದ ಕರ್ಮಗಳು ಸಂ- । ಜನಿಸುವವು ಕೇಳ್ ಸತ್ವರಜತಮವೆಂಬ ತತ್ವಗಳು ॥5॥

ಗುಣವು ಸಾತ್ವಿಕ ದೇವತೆಯರಲಿ । ಗುಣವು ರಾಜಸವಿಹುದು ನರರಲಿ । ಗುಣವು ತಾಮಸ ದೈತ್ಯಗಣದಲಿ ತ್ರಿಗುಣವೀಪರಿಯೂ ॥
ಗುಣಕೆ ತಾನನುಸರಿಸಿ ಕರ್ಮದ । ಜನನವಪ್ಪುದು ಕರ್ಮಧರ್ಮ- । ಕ್ಕನುಸರಿಸಿ ಫಲ ಪ್ರಾಪ್ತಿಯಪ್ಪುದು ಬೀಜದೊಲ್ ಫಲವು ॥6॥

ಗುಣದ ಪರಿಯಲಿ ಕರ್ಮವಾಸನೆ । ಜನಿಸುವದು ಕೇಳಿಂದ್ರಿಯಂಗಳ । ಗಣವು ತಾದ್ವಾಸನೆಗಧೀನವು ಸರ್ವಮಾಯೆಯಿದು ॥
ನೆನಿಸದಿರು ಸುಖದುಃಖವೆಲ್ಲವು । ಗಣನೆ ಇಲ್ಲದ ಕರ್ಮಸಂಗದಿ । ದಣಿಸುವುದು ದೇಹವನು ಜೀವವು ನಿರ್ವಿಕಲ್ಪವಲಾ ॥7॥

ತಾನು ಮಾಡಿದ ಪಾಪಪುಣ್ಯ ಫ- । ಲಾನುಸಾರವು ಕರ್ಮ ತತ್ಕ- । ರ್ಮಾನುಸಾರವು ದುಃಖಸೌಖ್ಯವು ಪ್ರಾಣಿಸಕಲರಿಗೆ ॥
ಮಾನವರ ಪಾಡೇನು ಕಲ್ಪಶ- । ತಾನು ಶತಾಯುಷ್ಯವಿದ್ದ ಮ- । ಹಾನುಭಾವರ ಬಿಡದು ಕರ್ಮವು ಕರ್ಮಗತಿ ಗಹನಾ ॥8॥

ನರನು ದೇಹಾಧೀನವಾಗಲು । ಪರಿಪರಿಯ ಕರ್ಮದಲಿ ತನ್ನಯ । ಕರಣೆಯಿಂದಲಿ ತಾನು ಕಾಲಾಧೀನನಾಗುವನು ॥
ಸ್ಥಿರವಿದೀಗ ಶರೀರವೆಂಬುವ । ಭರವಸವನಿಡಬೇಡ ದೇಹದಿ । ದುರಿತ ಪುಣ್ಯವಿಕಾರಗಳು ಬಹು ದೇಹಕಿರುತಿಹವು ॥9॥

ಜನನವಾಗಲು ಮನದಿ ಹಿಗ್ಗದೆ । ಹನನವಾಗಲು ದುಃಖವೆಣಿಸದೆ । ಮನದೊಳೊಂದೇ ಭಾವ ಪಿಡಿದಿರಬೇಕು ಮಾನವನು ॥
ಜನನಿಯುದರದಿ ಗರ್ಭವದು ಸಂ- । ಜನಿಸೆ ವ್ಯಕ್ತತೆಯಿಲ್ಲದೀನರ- । ತನುವು ವ್ಯಕ್ತತೆ ರೂಪವಾಯಿತು ಕಾಲವಶವಾಗಿ ॥10॥

ನೀರ ಮೇಲಣ ಗುಳ್ಳೆಯದುವೆ ಶ- । ರೀರ ಶಾಶ್ವತವಲ್ಲ ಗರ್ಭದ । ಧಾರಣವು ತಾನಾಗೆ ಮರಣವದಾಯ್ತೆನುತ ನಂಬು ॥
ತಾರತಮ್ಯವು ಕರ್ಮಫಲಕನು- । ಸಾರವಪ್ಪುದು ದೇಹಗತಿಯಲಿ । ದೂರಹತ್ತರ ಮರಣವಿದು ಕರ್ಮಾನುಸಾರದಲಿ ॥11॥

ಕೆಲರು ಸಾಯ್ವರು ಪೂರ್ವವಯದಲಿ । ಕೆಲರು ವಾರ್ಧಿಕ್ಯದಲಿ ಮತ್ತಾ । ಕೆಲರು ಮಧ್ಯಮಕಾಲದಲಿ ಕರ್ಮಾನುಸಾರದಲಿ ॥
ತಿಳಿಯುವರು ಮಾಯಾನುವೇಷ್ಟನ- । ದಲಿ ಸಿಲುಕಿ ತಾಯ್ತಂದೆಮಕ್ಕಳ । ವೊಲಿದು ನನ್ನವರೆಂದು ಮೂಢರು ತತ್ವ ತಿಳಿಯದಲೆ ॥12॥

ತಿಳಿಯಬಾರದು ದೇಹವಿದು ನಿ- । ರ್ಮಲವೆನುತ ನೀ ನೋಡು ಮಾಂಸದಿ । ಮಲದಿ ಸಂಭವಿಸಿರುವದಲ್ಲದೆ ವೊಳಗೆ ಮಲಮಾಂಸಾ ॥
ನಳಿನಸಂಭವ ಪೂರ್ವಜನ್ಮದ । ಫಲಕೆ ಯೋಗ್ಯದ ಕರ್ಮವನು ಹಣೆ- । ಯಲಿ ಬರೆವನೌ ಸುಕೃತ ದುಷ್ಕೃತ ಸ್ವಾರ್ಜಿತವೆ ಫಲವು ॥13॥

ಕಾಲನಿಗೆ ಬಿಟ್ಟಿಲ್ಲ ಕರ್ಮವು । ಹೇಳಲೇನದ ಮಿಕ್ಕ ಮಾನವ । ರೂಳಿಗದ ನಿಜ ಬಂಟರ್ರೈ ಕೇಳ್ ಕರ್ಮಸ್ವಾರ್ಜಿತಕೆ ॥
ಗಾಳಿಗೊಡ್ಡಿದ ಸೊಡರು ದೇಹವು । ಹೇಳಲಾಗದು ಭರವಸವ ನಿಜ । ಕಾಲವಶವಾಗಿಹುದು ಕಾಲವು ನಮ್ಮ ವಶವಲ್ಲಾ ॥14॥

ಕನಸಿನಲಿ ಕಂಡಿರುವ ಗಂಟನು । ನೆನಿಸಬಹುದೇ ಶಾಶ್ವತದ ನಿಜ । ಧನವೆನುತಲಾರೀತಿಯಲಿ ಸಂಸಾರ ಸಂಗತಿಯೂ ॥
ಮಿನುಗುವುದು ಸಂಸಾರ ಗಾರುಡಿ- । ತನವು ಕೇಳೌ ಯಿಂದ್ರಜಾಲವು । ಮನಸಿಗಾನಂದವನು ಮಾಳ್ಪುದು ಸತ್ಯತೆಯೆಯಿಲ್ಲಾ ॥15॥

ತರುಣಿ ನೀನೆ ಹೇಳು ಜನ್ಮಾಂ- । ತರದಿ ನಿನ್ನಯ ಸ್ಥಿತಿಗತಿಯ ಪಶು । ನರನೊ ಕ್ರಿಮಿಯೊ ಪಕ್ಷಿಯೋನಿಯೊ ನಿನಗೆ ನೆನಪಿಹುದೇ ॥
ನರಜನುಮದಲಿ ಹಿಂದೆ ಬಂದರೆ । ಸ್ಮರಣ ಮಾಡೌಯಾರ ತಾಯಿಯು । ಧರೆಯೊಳೆಲ್ಲಿಯ ಜನ್ಮ ನಿನ್ನಯ ಗಂಡನವನಾರು ॥16॥

ತಂದೆತಾಯಿಯು ಯಾರು ನಿನ್ನಯ । ಬಾಂಧವರು ಯಾರಿದ್ದರೆಂಬುದ । ನಿಂದು ಹೇಳಲು ಬಹುದೆ ದುಃಖವ ವ್ಯರ್ಥ ಮಾಡುವೆಯಾ ॥
ಸಂದು ಭೂತಗಳೈದು ಕೂಡಲು । ಮುಂದೆ ಮಜ್ಜಾ ಚರ್ಮಮಾಂಸಗ- । ಳಿಂದಲೀ ತನುವಾಯ್ತು ವಿಷ್ಣ್ವಾಯಂತ್ರ ನೋಡಿದರೆ ॥17॥

ಪುತ್ರನಾರಿವನಿಹನು ಬಂದುದೇ । ಮೃತ್ಯುವವನಿಗೆ ಜನನಮರಣವು । ಮಿಥ್ಯವಲ್ಲಾ ನೋಡಿದರೆ ಭ್ರಮೆ ನಿನಗೆ ಹಿಡಿದಿಹುದು ॥
ವ್ಯರ್ಥ ಹಟವನು ಹಿಡಿಯದೀ ಹೆಣ- । ವಿತ್ತು ಬಿಡು ಸಂಸ್ಕಾರ ಮಾಳ್ಪರೆ- । ನುತ್ತ ಬೋಧಿಸಿ ಬ್ರಹ್ಮಚಾರಿಯು ಪೇಳಿದನು ಸತಿಗೆ ॥18॥

ನುಡಿಯ ಕೇಳುತ ವನಿತೆ ಪೇಳ್ದಳು । ದೃಢವದಾಗದು ಮನವು ಹೇಳ್ಕೆ । ಮೃಡನ ಭಜಿಸಲದೇಕೆ ? ಪ್ರಾರಬ್ಧ ಪ್ರಮಾಣವಿರೆ ॥
ಪೊಡವಿಯೊಳು ಲೋಹಕ್ಕೆ ಪರುಷವು । ಹಿಡಿದರಾ ಸ್ಪರ್ಶದಲಿ ಲೋಹವು । ಬಿಡದಿಹುದೆ ಲೋಹತ್ವವಿದ ನೀ ಮರೆಯಲಾಗದಾ ॥19॥

ದೈವಹೀನರು ನಾವೆನುತ ಗುರು- । ಸೇವೆಯನು ಮಾಡಿದೆವು ಗುರುವರ । ಕಾವನೆನುತಲಿ ಸಂತಸದಿ ತಾನಿತ್ತನಭಯವನು ॥
ಸಾವ ತಪ್ಪಿಸಬೇಕೆನುತ ಜ್ವರ । ಭಾವದಿಂದಲಿ ನರಳುವಾತನು । ಸೇವಿಪನು ವೈದ್ಯನನು ವೈದ್ಯನು ಕಾವನಾ ಜ್ವರದಿ ॥20॥

ಧಾರುಣಿಯೊಳೀ ನರನ ರೂಪದಿ । ಮೂರು ಮೂರ್ತಿಗಳವತರಿಸಿದರು । ನಾರಸಿಂಹಸರಸ್ವತಿಯ ರೂಪದಲಿ ಭಕ್ತರಿಗೆ ॥
ಕಾರುಣಿಕನಿವನಿತ್ತವರದಲಿ । ಚಾರುಪುತ್ರರು ಸಂಭವಿಸಿದರು । ಯಾರು ನಂಬುವರೀಪರಿಯ ನಿರ್ವಾಣಬಹುದೆಂದು ॥21॥

ಮಾನಿನಿಯು ನಾ ಮೂರ್ಖತನದಲಿ । ಮಾನಿಸಿದೆ ದೇವನೆನುತಲಿ । ಯೇನುಫಲವಾಯ್ತವನ ಫಲದಾನದಲಿ ನೋಡಿದರೆ ॥
ಪ್ರಾಣವನು ತ್ಯಜಿಸುವೆನು ಕೀರ್ತಿಯ । ಕ್ಷೋಣಿಯಿಂದಲೆ ಸ್ವರ್ಗ ಕೊಯ್ಯುವೆ । ದೀನೆಯಬಲೆಯ ವಂಚಿಸಿದನೈ ತಾನು ಯತಿವರನು ॥22॥

ಆ ವನಿತೆ ಈ ಪರಿಯೋಳಾಡಿದ । ಭಾವಭಕುತಿಯ ದೃಢತೆ ನೋಡಿ ಕೃ । ಪಾವಲೋಕನದಿಂದ ನುಡಿದನು ವಟುವು ಭಾಮಿನಿಗೆ ॥
ಭಾವವೀಪರಿ ನಿನಗೆ ದೃಢವಿರೆ । ಕಾವನೈ ಗುರುನಾಥ ಪ್ರೇತವ । ನೀ ವಹಿಲದಲಿ ವಯ್ಯು ಔದುಂಬರದ ಮರದಡಿಗೆ ॥23॥

ವರವನಿನಗಾ ಗುರುವರನು ಕೊ- । ಟ್ಟಿರುವ ಸ್ಥಾನಕೆ ಹೋಗಿ ನೀನಾ । ಗುರುವ ಕೇಳೌ ಗುರುವು ನಿನಗುದ್ಧರಿಸುವನು ನಿಜವು ॥
ಸುರತರುವೆ ಔದುಂಬರವು ಗುರು- । ಚರಣವಿರುವಾಸ್ಥಾನ ಕಾಮಿತ । ತ್ವರದೊಳೀಯುವ ನಿಧಿಯ ಕೃಷ್ಣಾ ಗಂಗೆ ಸಂಗಮವು ॥24॥

ಎಂದ ನುಡಿಯನು ಕೇಳಿ ಬಾಲಿಕೆ । ಬಂದಳಾ ಗುರುಚರಣಸ್ಥಾನಕೆ । ತಂದಳಾ ಶವವನ್ನು ಹೊಟ್ಟೆಗೆ ಕಟ್ಟಿಕೊಂಡವಳು ॥
ಬಂದು ಪಾದುಕೆಯಲ್ಲಿ ತಲೆಯನು । ಹಿಂದೆ ಮುಂದಕೆ ನೋಡದಲೆ ಸಿ- । ಟ್ಟಿಂದ ಬಡೆದಳು ಪಾದುಕೆಯ ಮೇಲಾಯ್ತು ಬಹುರಕ್ತಾ ॥25॥

ಶೋಕಗಳು ಬಹುವಿರುವವದರೊಳು । ಶೋಕವೇ ನಿಜ ಪುತ್ರಶೋಕವು । ಲೋಕದಲಿ ಬೇರಿಲ್ಲ ತತ್ಸಮ ಶೋಕ ದಾರುಣವು ॥
ಶೋಕವಿದು ಕ್ಷಯರೋಗವಿರುವದು । ನೂಕುವದು ತಾಯ್ತಂದೆಗಳನತಿ-। ರೇಕ ದುಃಖಾಂಬುಧಿಯೊಳಗೆ ಕೇಳ್ ಮರಣಪರಿಯಂತಾ ॥26॥

ಭೂಸುರರು ಸಂಸ್ಕಾರ ಮಾಡಲಿ- । ಕಾಶವವ ಬೇಡಿದರೆ ಕೊಡಳಾ- । ಕ್ರೋಶದಿಂದಲಿ ತನ್ನ ಕೂಡಿಸಿ ಸುಡುಸುಡೆನ್ನುವಳು ॥
ಕೂಸ ಹಿಡಿದಪ್ಪುತಲಿ ನಾರಿಯು । ಕ್ಲೇಶದಿಂ ಪಾದುಕೆಯ ಮೇಲೆ ಸ- । ರೋಷದಿಂ ಹೊರಳಿದಳು ಪ್ರೇತವ ಬಿಡಳು ಸಂಸ್ಕೃತಿಗೆ ॥27॥

ದಿನಪನಸ್ತಾಚಲಕೆ ನಡೆಯಲು । ಘನತರದ ಕಗ್ಗತ್ತಲೆಯಲಾ- । ಜನನಿಕರ ಸಿಲುಕಿದುದು ಮಾಯೆಯೊಳಾತ್ಮನಿದ್ದಂತೆ ॥
ವನಿತೆಯನು ಬಿಟ್ಟವರು ತಮ್ಮಯ । ಮನೆಗೆ ನಡೆದರು ಬೆಂದು ಬಳಲುತ । ದಿನಸಮಗ್ರವುಪಾಸವವರಿಂಗಾಯ್ತು ವ್ಯರ್ಥದಲಿ ॥28॥

ಕಾಳರಾತ್ರಿಯೊಳಿಲ್ಲಿ ಯಮಗನು । ಕೂಲವಿಲ್ಲ್ಯ ಪ್ರೇತತಸ್ಕರ- । ರಾಳಿಕೆಯು ಸುರುವಿಲ್ಲಿ ನಾವಿರಲಿಲ್ಲಿ ರಾತ್ರಿಯಲಿ ॥
ನಾಳೆ ಪ್ರಾತಃಕಾಲ ಬರುವೆವು । ಕಾಲಗತಿಯಲಿ ದಹನಮಾಡುವೆ- । ವೇಳು ಏಳೆಂದೆನುತ ನಡೆದರು ಭೂಸುರರು ಮನೆಗೆ ॥29॥

ಮರುದಿವಸ ಕೊಳೆಯುವುದು ಪ್ರೇತವು । ಬರುವದ್ಯೆ ದುರ್ಗಂಧವದರಿಂ । ತರುಣಿ ಕೊಡುವಳು ಪ್ರೇತವೆನುತಲಿ ಹೇಸಿ ವಾಸನೆಗೆ ॥
ಪರಿಪರಿಯ ಬೋಧನೆಯ ಕೇಳದೆ । ತರುಣಿ ಕೂಸನ ಕೊಡದೆ ತಾ ಧಿಃ । ಕ್ಕರಿಸಿದಳು ಭೂಸುರರ ಹುಲಿಯಂದದಲಿಯಾಸತಿಯೂ ॥30॥

ಜನನಿಜನಕರ ಬಿಟ್ಟರಣ್ಯದಿ । ಮನೆಗೆ ನಡೆದರು ಭೂಸುರರು ಕೇಳ್ । ವನದೊಳಾಯಿತು ರಾತ್ರೆ ಕಗ್ಗತ್ತಲೆ ಭಯಾನಕವು ॥
ಮನದಿ ಕಡುದುಃಖವನು ಮಾಡುತ । ಜನನಿಜನಕರು ಪ್ರೇತವನು ಹಿಡಿ- । ದನಿತು ಕೂತರು ಮೂರು ಯಾಮವು ನಡೆಯಿತಾ ರಾತ್ರಿ ॥31॥

ತನುಜದೇಹಸ್ವಾಸ್ಥ್ಯವಿಲ್ಲದೆ । ದಿನವೆರಡು ಜಾಗರಣೆಯಾಯಿತು । ವನದಿ ದುಃಖದಿ ರಾತ್ರಿಯಲಿ ಮೂರ್ ಯಾಮವಾಯಿತಲಾ ॥
ವನಿತೆಗಾಗ ಸುಷುಪ್ತಿಯಾಯಿತು । ಕನಸಿನಲಿ ಗುರುರಾಯ ಬಂದನು । ವಿನಯದಿಂದಲಿ ಕೇಳ್ದನೀ ಮಾನಿನಿಗೆ ನಸುನಗುತಾ ॥32॥

ಶಿರದಿ ಜಟೆ ಭಸ್ಮಾಂಗಭೂಷಿತ । ಪರಮತನುಕಾಂತಿಯ ಸುವ್ಯಾಘ್ರಾಂ । ಬರದ ವೇಷ್ಟನ ಧರಿಸಿ ರುದ್ರಾಕ್ಷವನು ದೇಹದಲಿ ॥
ಕರದಿ ದಂಡ ತ್ರಿಶೂಲ ಪಿಡಿಯುತ । ತ್ವರಯೊಳೌದುಂಬರಕೆ ನಡೆಯುತ । ಬರುವ ಮೂರ್ತಿಯ ಕಂಡು ಬೆರಗಾದಳು ಸುವಾಸಿನಿಯ ॥33॥

ನೋಡಿದಳು ಶ್ರೀಗುರುವನೀಪರಿ । ಮಾಡಿದಳು ದಂಡಪ್ರಣಾಮವ । ನೋಡಿ ವನಿತೆಯ ಕರುಣಮೂರುತಿಯಾಡಿದನು ನುಡಿಯಾ ॥
ಕೇಡು ಬಂದುದೆ ನಿನ್ನ ಕುವರಗೆ । ಮಾಡುವೆನು ನಾನದಕುಪಾಯನ । ಬೇಡ ಸಂಶಯ ತೋರಿಸೌ ಯೆನಗೀಗ ಬಾಲಕನಾ ॥34॥

ತೆಗೆದು ಭಸ್ಮವ ಪ್ರೇತದೇಹಕೆ । ಸಗುಣಸದ್ಗುರುಮೂರ್ತಿ ಹಚ್ಚಿದ । ಮೊಗವ ಪಸರಿಸಿ ವಾಯುತುಂಬುವೆನೆನುತ ಪೇಳಿದನು ॥
ಮುಗುದೆ ಕೇಳಿ ಪ್ರಾಣವಾಯುವ । ಹೊಗಿಸುವೆನು ದೇಹದಲಿ ಜೀವವು । ಹೊಗಲು ದೇಹ ಸಜೀವವಪ್ಪುದು ವಾಯುವೇ ಪ್ರಾಣಾ ॥35॥

ಪ್ರೇತ ಜನನಿಯು ನೋಡುತೀಪರಿ । ಭೀತಳಾದಳು ಮನದಿ ನಾನೀ । ಪ್ರೇತ ದೇಹದ ಮೇಲೆ ಬಿದ್ದೆನು ಸ್ವಪ್ನ ವೆನಗಾಯ್ತು ॥
ಯಾತಕೀ ಸನ್ಯಾಸಿ ಬರುವನು । ಪಾತಕಿಯು ನಾನಿಹೆನು ಸುಮ್ಮನೆ । ಯಾತಕಾಸಾಧುವನು ನಿಂದಿಸಿ ಪಾಪ ಘಳಿಸಿದೆನು ॥36॥

ಮನಸಿನಲಿ ಚಿಂತಿತವೆ ಬರುವುದು । ಕನಸಿನಲಿ ತಾನೆಂದು ಪೇಳ್ವರು । ಮುನಿಸಿನಲಿ ಶ್ರೀಗುರುವ ಬೈದರೆ ಫಲವದೇನಿಹುದು ॥
ಯೆನಗೆ ಭ್ರಾಂತಿವಿಕಾರವಾಯಿತು । ಯೆನುತ ಬಾಲನನೆತ್ತಿ ನೋಡಲು । ತನುವಿನಲ್ಲಿ ಸಂಚಾರವಾಯ್ತುಷ್ಣತೆಯ ನೋಡಿದಳು ॥37॥

ಪ್ರೇತ ದೇಹದಿ ಜೀವ ಚಲಿಸಲಿ- । ಕಾತಳೋದರಿ ಬೆದರಿದಳು ಮೇಣ್- । ಭೂತ ಸಂಚರಿಸಿದುದೊ ಜೀವವು ಬಂತೊ ನಿಜವೇನು ॥
ಆ ತತೂಕ್ಷಣ ಬಾಲನೆದ್ದನು । ಮಾತೆಯನು ಕರೆದೊ ದರಿದನು ಹಸಿ- । ವಾಯ್ತೆನಲು ಸ್ತನಬಾಯೊಳಿಕ್ಕಲು ಹಾಲು ವೊಸರಿಸಿತು ॥38॥

ನಾರಿಗಚ್ಚರಿ ಭೀತಿಯಾಯಿತು । ಯೇರಿಸಿದಳಾ ತೊಡೆಯ ಮೇಲಾ- । ಚಾರುಬಾಲನನೆತ್ತಿ ಮುದ್ದಿಸಿ ಪತಿಯನೆಬ್ಬಿಸುತಾ ॥
ಭಾರಿ ಕೌತುಕದಿಂದ ಕನಸನು । ನಾರಿಪೇಳ್ದಳು ಪತಿಗೆ ಸಂತಸ- । ವೇರಿಸದ್ಗುರುಮಹಿಮೆಯನು ಕೊಂಡಾಡಿದರು ಮುದದಿ ॥39॥
ಗಂಡಹೆಂಡರು ಕೂಡಿ ನಡೆದು । ದ್ದಂಡನಮನವ ಮಾಡಿ ಚರಣದಿ । ಮಂಡೆಯಿಟ್ಟರು ಅತ್ತಿಮರಕೆ ಪ್ರದಕ್ಷಿಣೆಯ ಮಾಡಿ ॥
ಕಂಡೆವೈತವ ಮಹಿಮೆಯನು ಭೂ । ಮಂಡಲದಿ ತ್ರೈಮೂರ್ತಿ ಬಂದುದ । ಕಂಡತೆರದಲಿ ನಿನಗೆ ಬೈದೆವು ಭಂಡತನವಾಯ್ತು ॥40॥
ವರದಮೂರುತಿ ನೀನು ಜಗದಲಿ । ಹರಿಹರವಿರಂಚಿಗಳು ನೀನೇ । ಶರಣರಿಗೆ ಸುರಧೇನು ಖ್ಯಾತಿಯು ಜಗದಿ ಪಸರಿಸಿತು ॥
ಅರಿಯೆ ನಿನ್ನಯ ಲೀಲೆಯನು ನಾ- । ನರಿಯೆ ನಿನ್ನಯ ಕೀರ್ತಿ ಪೊಗಳಲು । ಧರೆಯೊಳೀ ನರದೇಹದಲಿ ಭಕ್ತರನು ರಕ್ಷಿಸುವೆ ॥41॥
ತಿಳಿಯಲಾರದೆ ನಿನ್ನ ಮಹಿಮೆಯ- । ಸಲುಗೆಯಲಿ ನಿಷ್ಠುರವಚನದಲಿ । ಛಲಿಸಿದೆವು ನಾವ್ ನಿನ್ನ ಕ್ಷಮಿಸಲುಬೇಕು ನೀ ದಯದಿ ॥
ಬಳಲಿ ಬಾಲಕ ಕೋಪದಲಿ ಬೈ- । ಯಲು ವಿನೋದದಿ ತಾಯಿ ಬಾಲನ । ನಲಿಸುವಳು ಮುದ್ದಾಡುವಳು ಕೋಪವನು ಲೆಕ್ಕಿಸದೆ ॥42॥
ಎಂದು ನಾನಾಪರಿಯೊಳಾ ಶಿಶು- । ತಂದೆತಾಯ್ಗಳು ಸ್ತುತಿಸಿದರು ಗುರು- । ವೆಂದು ಭಾವದಿ ಹೊರಳಿದರು ಚರಣದಲಿ ಭಕ್ತಿಯಲಿ ॥
ಬಂದರಾನಂತರಕೆ ಸ್ನಾನಕೆ । ಮಿಂದು ನದಿಯಲಿ ಕೂಸುಸಹಿತಲಿ । ತಂದು ನೀರನು ಪಾದುಕದ ರಕ್ತವನ್ನು ತೊಳೆಯುತಲಿ ॥43॥
ಗಂಧಪುಷ್ಪಾಕ್ಷತೆಯನೇರಿಸಿ- । ಚಂದದಿಂ ಪಾದುಕದ ಪೂಜೆಯ । ನಂದು ತೀರಿಸಿ ದೀಪನೀರಾಂಜನವ ಬೆಳಗಿದರು ॥
ಮುಂದೆ ಗಾಯನಮಾಡಿ ಭಕ್ತಿಯೊ- । ಳಿಂದುವದನೆಯು ಸ್ತುತಿಸಿದಳು ಗುರು । ವೆಂದು ಭಕ್ತಿಪುರಸ್ಸರದಿ ಹೊರಳಿದಳು ಧರಣಿಯಲಿ ॥44॥
ಉದಯವಾಯಿತು ರಾತ್ರಿ ಹೋಯಿತು । ಮುದದಿ ಭೂಸುರರೆಲ್ಲ ಬಂದರು । ವೊದಗಿ ಸಂಸ್ಕಾರವನು ಮಾಡುವೆವೆಂದು ನಿಶ್ಚೈಸಿ ॥
ಸುದತಿಯನು ನೋಡಿದರು ಹತ್ತಿಲಿ । ಮುದದೊಳಾಡುವ ಬಾಲಕನ ಕ- । ಣ್ಣೆದುರಿನಲಿ ನೋಡುತ್ತ ನಲಿದರು ಚೋದ್ಯದಲಿ ದ್ವಿಜರು ॥45॥

ಗುರುಮಹಿಮೆಯಿದು ಚೋದ್ಯವಲ್ಲವೆ । ದೊರೆಯುವುದು ಪುರುಷಾರ್ಥವೆಲ್ಲವು । ಗುರುಚರಣದೀಸ್ಥಾನ ಮಹಿಮೆಯಗಾಧ ಧರಣಿಯಲಿ ॥
ತರುಣಿಬಂಜೆಗೆ ಪುತ್ರ ಸಂತತಿ । ದೊರೆಯುವದು ನಿರ್ಧನಗೆ ಧನ ದು- । ರ್ಮರಣಭೀತಿಯನೊಡಿಸುವುದೈ ಗುರುಚರಣಸೇವೆ ॥46॥

ರೋಗಿ ಸೇವೆಯ ಮಾಡಲೈ ನಿಜ । ರೋಗ ಪೋಪುದು ವೃದ್ಧಿಯಪ್ಪುದು । ಭಾಗ್ಯಸುಖಸಂಪತ್ತಿ ಶ್ರೀಗುರುವರಪ್ರಸಾದದಲಿ ॥
ಶ್ರೀಗುರುವು ಸಂತತದಿ ವಾಸಿಪ । ನೀಗಲಾದರು ವಾಡಿಕ್ಷೇತ್ರದಿ । ಸಾಗಲಾರದು ಯೆನ್ನ ಮತಿ ಸಂಕ್ಷೇಪವಿದು ಚರಿತಾ ॥47॥

ಗುರುಚರಣ ಸೇವೆಯಲಿ ನಾನಾ- । ಪರಿಯ ವ್ಯಾಧಿಗಳೆಲ್ಲ ನಿಜಸಂ- । ಹರಣೆಯಪ್ಪುದು ಹೃದಯಶೂಲವು ಗಂಡಮಾಲೆಗಳು ॥
ಬರುವುದೈ ಮೂಕನಿಗೆ ವಾಚೆಯು । ಕುರುಡನಿಗೆ ಸಂಪ್ರಾಪ್ತಿ ದೃಷ್ಟಿಯು । ಬರುವುದೈ ಬಧಿರಂಗೆ ಕಿವಿ ಮೂಡಂಗೆ ವಿಜ್ಞಾನಾ ॥48॥

ಕಲ್ಪಿತಾರ್ಥವ ಕೊಡುವ ಗುರುವರ । ಕಲ್ಪತರುವೈ ಮರ್ತ್ಯಲೋಕಕೆ । ಅಲ್ಪಮತಿಯವ ನಾನು ಬಣ್ಣಿಸಲೇನು ಶಕ್ಯವಿದು ॥
ಅಲ್ಪಮತಿ ನಾನೆಂದು ಯೆನ್ನಯ । ಜಲ್ಪಿತವ ದುರ್ಲಕ್ಷ ಮಾಡದೆ । ಯೊಪ್ಪಿ ಕೊಂಡರೆ ರಕ್ಷಿಪನು ಗುರುನಾಥ ಸಂತಸದಿ ॥49॥

ಇದು ಸಕಲ ಪುರುಷಾರ್ಥಸಾಧನ- । ವಿದು ಪರಮ ಸದ್ಭಕ್ತಿಯಾಶ್ರಮ । ವಿದುವೆ ಪಾಪವಿನಾಶಗಂಗಾಸ್ನಾನ ಗುರುಚರಿತಾ ॥
ಇದುವೆ ಮುಕ್ತಿಯ ಸುಲಭಸಾಧನ । ವಿದುವೆ ತತ್ವ ವಿಚಾರಸಾರವು । ಇದುವೆ ಮಂಗಳಧಾಮ ಚರಿತವು ವಿಷ್ಣುವಚನವಿದು ॥50॥

॥ ಅಧ್ಯಾಯ 21 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 22

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಮನೆಯೊಳಿರುತಿಹ ಯೆಮ್ಮೆ ಗೊಡ್ಡೆಂ । ದೆನಲು ಭಾಮಿನಿ ಗುರುವು ನಗುತಲಿ । ವಿನಯದಿಂ ಹಿಂಡಿಸಿದ ಹಾಲನು ಚೋದ್ಯವೇನೆಂಬೆ॥

ಗುರುಚರಣ ಸೇವೆಯಲ್ಲಿ ತನು ತ । ತ್ಪರವಿರಲು ಸರ್ವೇಂದ್ರಿಯಂಗಳು । ಮರೆಯುವವು ತಂತಮ್ಮ ಕರ್ತವ್ಯಗಳ ದೇಹದಲಿ ॥
ತರಣಿಕಾಣದ ಕರಣಿಕವಿ ವಿ । ಸ್ತರಿಸಲಾರದ ಕಲ್ಪನೆಯ ಬಹು- । ತರದಿ ಸೃಷ್ಟಿಸಿ ಕೇಳುತಿಂದ್ರಿಯ ಬೆಳೆಯುವುದು ನಿಜವು ॥1॥

ನಾಮಧಾರಕ ಶಿಷ್ಯರಾಯನು । ಪ್ರೇಮದಿಂದಲಿ ಸಿದ್ಧ ಯೋಗಿಯ । ತಾಮರಸ ಚರಣಕ್ಕೆ ವಂದಿಸಿ ಪೇಳ್ದನೀ ಪರಿಯಾ ॥
ನೀ ಮಹಾತುಮ ನಿನ್ನ ದರ್ಶನ । ಕಾಮಿತಾರ್ಥವನೀವಸುರತರು । ಕಾಮಧೇನುವೆ ನಿನ್ನ ಚರಣವು ಧನ್ಯನಾದೆನಲಾ ॥2॥

ಜ್ಞಾನವಿತ್ತಾ ನಿನ್ನ ದರ್ಶನ । ಭಾನುವೇಯಜ್ಞಾನತಿಮಿರಕೆ । ಮಾನದಿಂದೆನಗಿತ್ತೆ ಪರಮಾರ್ಥದಲಿಯಭಿರುಚಿಯಾ ॥
ನೀನು ಶ್ರೀಗುರುರೂಪಕಿಲ್ಲಿಯ । ಸಾನುರಾಗದೊಳಿತ್ತೆ ಮೋಕ್ಷೋ- । ದ್ಯಾನತೆರೆಯಿತು ಬೀಗಮುದ್ರೆಯು ಹಸ್ತಗತವಾಯ್ತು ॥3॥

ಗುರುಚರಿತ ನಾನಾವಿಧದಿ ವಿ- । ಸ್ತರಿಸಿ ಪೇಳಿದೆ ಕಾಮಧೇನುವ । ಕರುಣಿಸಿದೆ ನೀ ಯೆನಗೆ ಪ್ರೇಮದ ವೃಷ್ಟಿ ಸಿಂಚಿಸಿದೆ ॥
ಅರಿಯಲಾರದು ಮನವು ತೃಪ್ತಿಯ । ತಿರುತಿರುಗಿ ಶ್ರವಣೇಚ್ಛೆಲತೆಯಂ । ಕುರಿಸುವುದು ಪೇಳೆನಗೆ ಮುಂದಿನ ಗುರುಚರಿತ್ರನನು ॥4॥

ಗಾಣಗಾಪುರವರದೊಳಾ ಗುರು- । ರಾಣಬಂದನು ನಂತರದೊಳವ- । ನೇನಮಾಡಿದನಲ್ಲಿ ಪೇಳೆನಗೀಗ ಯೋಗೀಶಾ ॥
ಈ ನಿರೋಪನ ಕೇಳಿ ಯೋಗಿಯು । ಸಾನುರಾಗದಿ ಪೇಳ್ದ ನುತ್ತರ । ನೀನು ಧನ್ಯನು ನಾಮಧಾರಕ ಶಿಷ್ಯಪುಂಗವನು ॥5॥

ಗುರುಕೃಪಾಮೃತ ಕುಡಿದ ಬಾಲಕ । ಧರೆಯೊಳಗೆ ನಿನ್ನಂತೆ ಪೂಜ್ಯರ । ಶರಣರೊಳು ನಾ ಕಾಣೆ ಸಾರ್ಥಕವಾಯ್ತು ತವ ಜನ್ಮ ॥
ಹರುಷವಾಯಿತು ಮನದಿ ನಿನಗಾ- । ನರುಹುವೆನು ಸಂತೋಷದಲಿ ಗುರು- । ಚರಿತವನು ನಿಜ ಕಾಮಧೇನುವ ನಿನಗೆ ನಾನೀವೆ ॥6॥

ಗಾಣಗಾಪುರಕಾಗಿ ಶ್ರೀಗುರು- । ರಾಣಬಂದನು ಮಹಿಮೆ ಯದುಭುತ । ಕ್ಷೋಣಿಯಲಿ ಪಸರಿಸಿತು ಕೀರ್ತಿಯನಂತ ಪರಿಯಾಯ್ತು ॥
ತಾನು ಸಂಗಮಕೈದಿ ಗುಪ್ತದಿ । ಶ್ರೀನೃಸಿಂಹಸರಸ್ವತಿಯು ಯಿರ । ಲೇನ ಹೇಳಲಿ ಲೀಲೆಯನು ನೀನಾಲಿಸೈ ಮಗುವೆ ॥7॥

ನದಿಯು ಭೀಮಾ ಪುಣ್ಯ ಪಾವನ- । ವದರೊಳಗೆ ಕೂಡಿರ್ಪುದಮರಜೆ । ನದಿಯು ಕೇಳುತ್ತರಕೆ ಹರಿವುದು ಭೀಮೆ ವಹಿಲದಲಿ ॥
ಉದುಭವಿಸಿತೀ ಸಂಗಮವು ಕೇಳ್ । ಬದರಿಕಾಶಿಸಮಾನ ತೀರ್ಥಗ । ಳದುಭುತದಿ ರಂಜಿಪವು ತೀರ್ಥಾಷ್ಟಕವು ಮೇಣಿಲ್ಲಿ ॥8॥

ತೀರ್ಥಮಹಿಮೆಯಗಾಧವಿಹುದದ । ವಿಸ್ತರಿಸಲಳವಲ್ಲ ಮುಂದಕೆ । ವಿಸ್ತರಿಪೆ ನಾ ಯೋಗ್ಯರೀತಿಯಲೀಗ ಸವಡಿಲ್ಲ ॥
ಗುಪ್ತರೀತಿಯೊಳಲ್ಲಿ ಶ್ರೀಗುರು । ಮೂರ್ತಿ ವಾಸಿಸೆ ತೀರ್ಥಮಹಿಮೆಯು । ಸುತ್ತ ಮುತ್ತಲು ಹಬ್ಬಿದುದು ಭಕ್ತರನು ಹುಡುಕುತಲಿ ॥9॥

ಗುರುಚರಣದಲಿಯಡಗಿಹವು ಪರಿ- । ಪರಿಯ ಪಾವನತೀರ್ಥಗಳು ಗುರು- । ವರನು ತೀರ್ಥದ ಮಹಿಮೆಯನು ವರ್ಧಿಸುವುದಚ್ಚರಿಯೆ ॥
ಶರಣರಿಗೆ ಸಂತರಣನೆಂಬೀ । ಬಿರುದ ಕಾಯುತ ವಿವಿಧ ತೀರ್ಥದಿ । ತಿರುಗುತಿಹನೀ ಶ್ರೀಗುರುವು ಕಲಿಯುಗದಿ ಸಂತಸದಿ ॥10॥

ಇರುವುದಾ ಸಂಗಮವು ಸುಮನೋ- । ಹರವು ಗುರುವಾಸ್ತವ್ಯದಿಂದಲಿ । ಧರೆಯೊಳಗೆ ಪಸರಿಸಿತು ಗುಪ್ತದಿ ತೀರ್ಥಮಹಿಮೆಯದು ॥
ಗುರುವರನು ತ್ರೈಮೂರ್ತಿಯಿರಲಿಕೆ । ಯಿರುವನೆಂತವ ಗೌಪ್ಯರೂಪದಿ । ತರಣಿ ಗೌಪ್ಯದೊಳಿಹನೆ ಲೋಕಕ ತೇಜ ಕೊಡದಿಹನೆ ॥11॥

ಗುರುವರನ ವಾಸ್ತವ್ಯ ಸಂಗಮ । ಬರುವನೈ ಪ್ರತಿದಿವಸ ಗಾಣಗ- । ಪುರಕೆ ಮಧ್ಯಾಹ್ನದಲಿ ಭಿಕ್ಷೆಗೆ ಭೂಸುರರ ಮನೆಗೆ ॥
ಇರುವವಾಪುರದಲ್ಲಿ ಶತ ಭೂ- । ಸುರರ ಮನೆಗಳು ವೇದಪಾಠಕ । ನಿರುವನೊರ್ವನು ದ್ವಿಜನು ದಾರಿದ್ರ್ಯದಲಿ ಪೀಡಿತನು ॥12॥

ಪತಿಯೇ ದೈವತವೆಂದು ಮನ್ನಿಸಿ । ಸತಿಯು ದಾರಿದ್ರ್ಯದಲಿ ಗಂಡನ । ಸತತ ಪೂಜಿಪ ಭಾರ್ಯೆಯಾತಗೆ ಮನೆಯೊಳಿರುತಿರಲು ॥
ಅತಿಥಿಯಭ್ಯಾಗತರ ಪೂಜಿಪ । ಸತಿಪತಿಯ ಭಾವವನು ನೋಡುತ । ಯತಿವರೇಣ್ಯನು ಬರುವನಾ ಮನೆಗ ತಿವಿನೋದದಲಿ ॥13॥

ಇರುವುದಾದ್ವಿಜಗೃಹದೊಳೆಮ್ಮೆಯು । ಪರಿಕಿಸಲು ಬಹು ವೃದ್ಧ ಗೊಡ್ಡದು । ಯಿರದು ಬಾಯಲಿ ಹಲ್ಲುವೊಂದಾದರು ಕಣಾ ನೋಡೆ ॥
ದರದಿವಸ ನದಿ ತೀರದಲಿ ವೊ- । ಯ್ವರು ಸದಾ ಮೂಗಿನಲಿ ವೇಸಣ- । ವಿರಲು ಮೃತ್ತಿಕೆ ಹೊರುವ ಕೆಲಸಕೆ ಕೊಳ್ಳುವರು ಜನರು ॥14॥

ಹಣವನೀವರು ಬ್ರಾಹ್ಮಣಂಗಾ । ಜನರು ವಂಧ್ಯಾಮಹಿಷಿಯೆನ್ನುತ । ಗಣನೆ ಮಾಡುವರದನು ಯೆತ್ತಿನ ಜಾತಿಯಲಿ ನಿಜವು ॥
ಹಣವನೀಪರಿ ಗಳಿಸಿ ಬಡ ಬ್ರಾ- । ಹ್ಮಣನು ಕಾಲಕ್ರಮಣ ಮಾಡುವ । ನನುದಿನದಲಿ ಶ್ರೀಗುರುವು ಬರುವನು ಭಿಕ್ಷೆಗಾಮನೆಗೆ ॥15॥

ಬಡವನಾ ಬ್ರಾಹ್ಮಣನು ಭಿಕ್ಷುಕ । ನಡೆವನಲ್ಲಿಯೆ ಶ್ರೀಗುರುವು ನ- । ಮ್ಮೆಡೆಗೆ ಬರನೇನಿದು ವಿಚಿತ್ರವು ಶಾಕಪಾಕಗಳಾ ॥
ಬಡಿಸುವೆವು ಯತಿವರಗೆ ನಮ್ಮಯ । ಕಡೆಗವನು ಬರಲಾರನೈ ದ್ವಿಜ । ಗಡಣವೀಪರಿಯಾಡುತಿದ್ದುದು ತಮ್ಮ ತಮ್ಮೊಳಗೆ ॥16॥

ಗುರುವರನ ಮಹಿಮೆಯನು ಭೂಸುರ । ರರಿಯಲಾರರು ಚಿತ್ತದಲಿ ತಾ । ಶರಣರನು ರಕ್ಷಿಸುವ ಬಗೆಯನು ತಿಳಿವರೆಂತವರು ॥
ಮರೆತರೈ ಗೋಪಾಳಕೃಷ್ಣನು । ಕುರುವರನ ಸತ್ಕಾರ ತ್ಯಜಿಸುತ । ಬರವ ಮಾಡಿದನಯ್ಯ ವಿದುರನ ಮನೆಗೆ ಭೋಜನಕೆ ॥17॥

ಭಾವ ಸಾತ್ವಿಕವಿರಲು ಸದ್ಗುರು- । ರಾವ ಮೆಚ್ಚುವನಯ್ಯ ಭಕ್ತಿ ಪ್ರ- । ಭಾವವನು ಬಣ್ಣಿಸಲು ಶಕ್ಯವೆ ಭಕ್ತಿಯೇ ಮುಕ್ತಿ ॥
ಈವನೈಹಿಕ ಪರದ ಸೌಖ್ಯ ವ । ನಾವಗಂಬೆಂಬಲಕೆ ಸದ್ಗುರು । ರಾವನಿರುವನು ಭಾವ ಭಕುತಿಯ ಶರಣ ಜನರಿಂಗೆ ॥18॥

ಗುರುವು ಕರುಣಾನಿಧಿಯು ವೊಲಿದರೆ । ಶರಣರನು ಸಪ್ರೇಮಹರುಷದ । ಶರಧಿಯಲಿ ತೇಲಿಸುವನೈ ಬಡತನವ ನೋಡನಲಾ ॥
ಕರುಣಿಪನು ಸಾಮ್ರಾಜ್ಯರಜಕಗೆ । ಹರಿಪನೈ ರಾಜಾಧಿರಾಜರ । ಪರಮ ವಿಭವವನೊಂದೆ ನಿಮಿಷದಿ ಗುರುಕಟಾಕ್ಷವಿದು ॥19॥

ಸಿಟ್ಟು ಬಂದರೆ ಜಗವನೆಲ್ಲವ । ಸುಟ್ಟು ಬಿಡುವನು ಶ್ರೀಗುರುವು ಮನ- । ವಿಟ್ಟನಾದರೆ ಕೊಡುವನಷ್ಟೈಶ್ವರ್ಯ ಬಡವನಿಗೆ ॥
ಸೃಷ್ಟಿಕರ್ತನು ಬರೆದಲಿಪಿಯದು । ಕೆಟ್ಟದಿರಲಿದ ಸುಷ್ಟು ಮಾಡುವ । ಸುಷ್ಟುಲಿಖಿತವ ಕೆಡಿಪಶಕ್ತಿಯ ದತ್ತ ಗುರುರಾಯಾ ॥20॥

ಗುರುಮಹಿಮ ಈ ಪರಿಯೊಳಿರುವುದು । ಬರೆಯಲಾರೆನು ಪೂರ್ಣಮಹಿಮೆಯ । ಧರೆಯೊಳಾದ್ವಿಜವರನ ಭಾಗ್ಯವನೆಂತು ವರ್ಣಿಸಲಿ ॥
ಗುರುವು ಕೇಳ್ ವೈಶಾಖಮಾಸದಿ । ತಿರುತಿರುಗಿ ಮಧ್ಯಾಹ್ನ ಕಾಲದಿ । ಪರಮಕ್ಷುಧೆಯಿಂ ತೊಳಲಿ ಬಂದನು ದ್ವಿಜನ ಮನೆಗಾಗಿ ॥21॥

ಮನೆಯೊಳಿಲ್ಲಾ ದ್ವಿಜನು ಬಿಕ್ಷೆಗೆ । ಮನೆಮನೆಗೆ ಹೋಗಿಹನು ಮನೆಯಲಿ । ವನಿತೆಯೊಬ್ಬಳು ಪತಿಯ ಹಾದಿ ನಿರೀಕ್ಷಿಸುತ್ತಿಹಳು ॥
ಮುನಿವರನು ಹೊರಬಂದು ಭಿಕ್ಷೆಯ । ವಿನಯದಿಂ ಬೇಡಲ್ಕೆ ವನಿತೆಯು । ಮಣಿದು ಚರಣಕೆ ಭಕ್ತಿಭಾವದಿ ಬೇಡಿದಳು ಯತಿಯ ॥22॥

ಪತಿಯು ಯಾಚಕವೃತ್ತಿಗೋಸುಗ । ಗತಿಸಿರುವನೈ ಬೇಗ ಬರುವನು । ಯತಿವರನೆ ಕೇಳೀಗ ಕುಳ್ಳಿರು ಪತಿಯು ಬರಲೆನ್ನಾ ॥
ಸತಿಯು ಪೇಳುತಲೀಪರಿಯೋಳಾ । ಯತಿವರಂಗಾಸನವ ಕೊಟ್ಟಳು । ಯತಿವರನು ಮಂದಸ್ಮಿತದಿ ಪೇಳಿದನು ಭಾಮಿನಿಗೆ ॥23॥

ದ್ವಾರದೊಳಗಿಹುದೆಮ್ಮ ನಿನ್ನಯ । ಕ್ಷೀರವನು ನೀನೀಡೆ ಭಾಮಿನಿ । ನೀರಡಿಸಿ ಬಂದಿಹೆನು ಬಿಡು ಬಿಡು ನೀ ವಿನೋದವನು ॥
ನಾರಿಯಾಲಿಸಿ ಯಿತ್ತಳುತ್ತರ । ಕ್ಷೀರವೆಲ್ಲಿಹುದೆಮ್ಮ ಬಂಜೆಯು । ಕ್ಷಾರಮೃತ್ತಿಕೆ ಹೊರುವುದಿದು ಬಾಡಿಗೆಗೆ ಕೊಡುತಿಹೆವು ॥24॥

ಮೂಗಿನಲಿ ವೇಸಣವ ನೋಡಿರಿ । ಸಾಗುವುದು ಬಾಡಿಗೆಯಲೆಮ್ಮೆಯ । ಯೋಗಕ್ಷೇಮವು ಕೇಳು ಯೆಮ್ಮೆಗೆ ಗಬ್ಬ ಹೋಗದಲಾ ॥
ಈಗ ವಂದ್ಯಾ ವೃದ್ಧ ಮಹಿಷಿಯು । ಹೇಗೆ ಕೊಡುವಳು ಹಾಲ ಕ್ಷಮಿಸೈ । ಶ್ರೀಗುರುವೆ ಹಾಲಿರದು ಮನೆಯಲಿ ಯೇನ ಹೇಳುವೆನು ॥25॥

ಸತ್ಯ ಕಾಣದು ನಿನ್ನ ಮಾತಿದು । ಸತ್ವರದಿ ನೀ ಹಿಂಡಿ ಹಾಲನು । ಯಿತ್ತರೆನಗಾನಂದವಾಗುವುದೆಂದನಾ ಗುರುವು ॥
ಪಾತ್ರೆ ತಂದಳು ಗುರುಚರಣ ಸ್ಮರಿ- । ಸುತ್ತ ಹಾಲನು ಹಿಂಡಿದಳು ನಾ । ವಿಸ್ತರಿಸಲೇನೆಂತು ಗುರುವಿನ ಮಹಿಮೆ ಚೋದ್ಯವಲಾ ॥26॥

ಗುರುವಚನವೇ ಕಾಮಧೇನುವು । ಗುರುವಚನದಲಿ ಬಂಜೆಯೆಮ್ಮೆಯು । ಯೆರಡು ಭರಣಿಯ ತುಂಬಿ ಹಾಲನು ಕೊಟ್ಟಿತ್ತೈ ನಿಜವು ॥
ಹರುಷವಾಯಿತು ವಿಪ್ರವನಿತೆಗೆ । ಹರನೆ ಯತಿವರನೆಂದು ಭಾವಿಸಿ । ಪರಮ ಚೋದ್ಯವ ನೆನೆನೆನೆದು ಮೈಮರೆದಳಾಸತಿಯು ॥27॥

ಕಾಸಿ ಕೊಡುವೆನು ಹಾಲನೆನಲು ಯ- । ತೀಶನೆಂದನು ತಾಯೆ ಯೆನಗವ । ಕಾಶವಾಗದು ಹೋಗಬೇಕೌ ಸಂಗಮಕೆ ತ್ವರದಿ ॥
ಆ ಸರೋಜಾನನೆಯು ಕೊಟ್ಟಳು । ಕಾಸದಾಕ್ಷೀರವನು ತ್ವರೆಯಲಿ । ಪ್ರಾಶನವ ಮಾಡಿದನು ಗುರುವರ ಹಾಲನಾಕ್ಷಣಕೆ ॥28॥

ಹರುಷದಿಂದಾ ಭಾಮಿನಿಗೆ ಗುರು- । ವರನು ವರವನು ಕೊಡುತಲಂತಃ । ಕರಣಪೂರ್ವಕವಾಗಿ ಹರಸಿದನಾ ಪತಿವ್ರತೆಗೆ ॥
ಬರಲಿ ನಿನ್ನಯ ಮನೆಗೆ ಲಕ್ಷ್ಮಿಯು । ಮೆರೆಯುತಾ ತವಪುತ್ರ ಪೌತ್ರರು । ನಿರುತ ಲಕ್ಷ್ಮಿಯುಕ್ತರಾಗಲಿ ನಿನ್ನ ಸಂತತಿಯು ॥29॥

ಎಂದು ಶ್ರೀಗುರು ಕೊಟ್ಟನಾವರ । ಮುಂದೆ ನಡೆದನು ಸಂಗಮಕೆ ದ್ವಿಜ । ಬಂದನಾ ನಿಜಮಂದಿರಕೆ ಕೇಳಿದನು ಸಂಗತಿಯಾ ॥
ಇಂದುಧರನಿವ ನರನು ತಾನ- । ಲ್ಲೆಂದು ಮನದಲಿ ನಿರ್ಧರಿಸಿ ನಡೆ । ತಂದರಾ ದಂಪತಿಗಳಾ ಸಂಗಮಕೆ ತ್ವರಿತದಲಿ ॥30॥

ಆರತಿಯ ಪಿಡಿದವರು ಕೈಯಲಿ । ಸೇರಿದರು ಸಂಗಮಕೆ ಗುರುವಿಗೆ । ಭಾರಿಪೂಜೆಯ ಮಾಡಿದರು ತಾ ಧೂಪದೀಪದಲಿ ॥
ಏರಿಸುತ ಗಂಧಾಕ್ಷತೆಯ ತಾ । ಚಾರು ಸುಮನೋಭಾವದಿಂದಲಿ । ತೋರಿಸುತ ನೈವೇದ್ಯ ತಾಂಬೂಲವನು ಭಕ್ತಿಯಲಿ ॥31॥

ಗುರುವರನ ಕರುಣದಲಿ ಕೇಳ್ ದ್ವಿಜ- । ವರಗೆ ಕನ್ಯಾಪುತ್ರರಾದರು । ಕರುಣದಿಂದಾ ಲಕ್ಷ್ಮಿ ಬಂದಳು ಗುರುವಚನದಾಸಿ ॥

ಗುರುಕೃಪೆಯ ಸತ್ಪಾತ್ರ ಶಿಷ್ಯಗೆ । ಬರುವದೆಲ್ಲಿಂದ್ಯೈನ್ಯವಿದನಾ । ದರಿಸಿ ಕೇಳ್ದರೆ ಸಕಲ ಸಿದ್ಧಿಯು ವಿಷ್ಣುವಚನವಿದು ॥32॥

॥ ಅಧ್ಯಾಯ 22 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 23

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಧರಣಿಪತಿ ಬಿನ್ನವಿಸಿ ಶ್ರೀಗುರು- । ವರನು ಸಂಗಮದಿಂದ ಗಾಣಗ- । ಪುರಕೆ ಬಂದಾ ಮಠದಿ ವಾಸಸ್ಥಾನ ಮಾಡಿದನು॥

ದತ್ತನಾಮೋಚ್ಚರಣೆ ಭವಕ- । ಕಗ್ಗತ್ತಲೆಗೆ ಸೂರ್ಯಪ್ರಕಾಶವು । ಸತ್ತ ಭೂತಪಿಶಾಚಿಗಳಿಗುಚ್ಚಾಟಣೆಯ ಮಂತ್ರ ॥
ದತ್ತ ವೆಂಬೆರಡಕ್ಷರಂಗಳು । ಕತ್ತರಿಯು ಸಂಸಾರ ಪಾಶ- । ಕುತ್ತರೋತ್ತರ ವೃದ್ಧಿ ಬೀಜವು ದತ್ತಗುರುರಾಯಾ ॥1॥

ಮುಂದೆ ನಡೆದ ಕಥಾನಕವ ಬಹು । ಚಂದದಿಂದಲಿ ವಿಸ್ತರಿಸಬೇ- । ಕೆಂದು ಬಿನ್ನೈಸಿದನು ಸಿದ್ಧಗೆ ನಾಮಧಾರಕನು ॥
ವಂದ್ಯೆ ಮಹಿಷಿಯ ಹಾಲನಾಯತಿ- । ಸುಂದರನು ಹಿಂಡಿದನು ಚಿತ್ರವಿ । ದೆಂದು ವಿಪ್ರನು ಗುರುಮಹಿಮೆಯನು ಪ್ರಕಟ ಮಾಡಿದನು ॥2॥

ಎರಡನೆಯ ದಿನ ಬಂದು ವಿಪ್ರಗೆ । ನೆರೆಕರೆಯ ವೊಕ್ಕಲಿಗರೆಲ್ಲರು । ಕರೆದು ಬೇಡಿದರೆಮಗೆ ಮಹಿಷಿಯ ಕೊಡಲು ಬೇಕೆನುತಾ ॥
ಭರಣಿ ಯರಡರ ಹಾಲು ತೋರಿಸಿ । ಕರೆವ ಯೆಮ್ಮೆಯ ಕ್ಷಾರಮೃತ್ತಿಕೆ । ಹೊರುವ ಕೆಲಸಕೆ ಕೊಡೆವೆನುತ್ತಲಿ ವಿಪ್ರಪೇಳಿದನು ॥3॥

ಜನರಿಗಚ್ಚರಿಯಾಯ್ತು ಕೇಳ್ನಿ- । ನ್ನಿನ ತನಕ ಗರ್ಭಿಣಿಯು ಇಲ್ಲದೆ । ಮನಕೆ ಬಂದೀ ತೆರದಿ ಹಾಲನು ಕೊಟ್ಟಿತೆಂದೆನುತಾ ॥
ವಿನುತಯತಿವರಮಹಿಮೆಯದುಭುತ । ವೆನುತ ಹಬ್ಬಿತು ವಾರ್ತೆ ಕೇಳಾ- । ಕ್ಷಣಕೆ ಬಂದನು ಗ್ರಾಮದಧಿ ಪತಿ ವಿಪ್ರನಿದ್ದೆಡೆಗೆ ॥4॥

ಹೇಳಿದನು ಗ್ರಾಮಾಧಿಪತಿಗಾ । ಲೀಲೆಯನು ಯತಿವರನ ಮಹಿಮೆಯ । ಪೇಳಲಸದಳವೆನುತ ವಿಪ್ರನು ರೋಮ ಪುಳಕದಲಿ ॥
ಆಲಯಕೆ ದಿನದಿನಕೆ ಬರುವನು । ಕೇಳಿದನು ಭಿಕ್ಷೆಯನು ಮನೆಯೊಳು । ಹಾಲನೀಡೆಂದೆನ್ನ ಸುದತಿಗೆ ಬೇಡಿದನು ನಿನ್ನೆ ॥5॥

ವಂದ್ಯೆ ಮಹಿಷಿಯು ಕೊಡಳು ಹಾಲನು । ಎಂದು ಸುದತಿಯು ನುಡಿಯೆ ಗುರುವಿಗೆ । ಬಂದು ಕೋಪವು ಪೇಳ್ದನಾಕ್ಷಣ ಹಾಲಹಿಂಡೆನುತಾ ॥
ಎಂದ ಮಾತನು ಕೇಳಿ ಸುದತಿಯು । ಬಂದಳಾಕ್ಷಣ ಯೆಮ್ಮೆಯಿದ್ದೆಡೆ । ಚಂದದಿಂದಲಿ ಹಾಲು ಕೊಟ್ಟಿತು ಕಾಮಧೇನುವೊಲು ॥6॥

ನುಡಿಯ ಕೇಳುತ ಗ್ರಾಮದಧಿಪತಿ । ನಡೆದನಾ ಸಂಗಮಕೆ ತೋಷದಿ । ಮಡದಿ ಮಕ್ಕಳ ಸಹಿತ ದಳಭಾರವನು ಮುಂದಿಡುತಾ ॥
ಪೊಡವಿಯಧಿಪತಿ ಗುರುವ ಕಂಡನು । ದೃಢಭಕುತಿಯಲಿ ಗುರುಚರಣದಲಿ । ಕೆಡಹಿದನು ದೇಹವನು ಲೋಟಾಂಗಣವಹಾಕಿದನು ॥7॥

ನೀನು ತ್ರಿಜಗಕ್ಕೊಡೆಯ ನೀ ಗುರು- । ರಾಣ ನೀ ತ್ರೈಮೂರ್ತಿ ಜಗದಲಿ । ಮಾನವನ ರೂಪಿನಲಿ ಭಕ್ತೋದ್ಧ ರಣನೈ ತಂದೆ ॥
ಹೀನಮತಿಯವರಾವು ಬಣ್ಣಿಸ । ಲೇನು ಶಕ್ಯವೆ ನಿನ್ನ ಮಹಿಮೆಯ । ನೀನು ಭವತಾರಕನು ತ್ರಿಜಗಜ್ಯೋತಿರೂಪಕನ ॥8॥

ಮಾಯೆಯೆಂಬುವ ಮೋಹತಿಮಿರದಿ । ಸಾಯುವೆವು ನಾವಂಧಕಾರದಿ । ಕಾಯುವವ ನೀನೆಮ್ಮ ರಕ್ಷಿಸು ದೀನಬಾಂಧವನೆ ॥
ಜೀಯ ಮುಳುಗಿದೆ ನಾನವಿದ್ಯಾ । ಮಾಯೆಯೆಂಬುವ ಸಾಗರದೊಳಾ । ಹಾ ಯೆನುತ ಘೋಳಿಡುವೆ ರಕ್ಷಿಸು ಕಾಲ ಹಿಡಿಯುವೆನು ॥9॥

ಮಾನವನ ರೂಪದಲಿ ಚರಿಸುವೆ । ನೀನು ನಿಜ ನೋಡಿದರೆ ಭಕ್ತಾ । ಧೀನನಿಚ್ಛಾ ಮಾತ್ರದಲಿ ವಿಶ್ವವನು ಸೃಷಿಸುವೆ ॥
ನಾನು ವರ್ಣಿಸಲಾರೆ ತವ ಮಹಿ । ಮಾನುಗುಣವನು ಚಿನ್ಮಯಾತ್ಮಕ । ನೀನು ಸಕಲಜಗದ್ಗುರುವು ಜನದಾತ್ಮನೀನಹುದು ॥10॥

ಇಂತು ನಾನಾಪರಿಯೊಳಾ ಭೂ- । ಕಾಂತ ಪೊಗಳಿದನಾಗ ಯತಿವರ । ಸಂತಸದಿ ಕೇಳಿದನು ಪೇಳ್ಳೈ ಬಂದಕಾರಣವಾ ॥
ಸಂತಸದಿ ನಾನಿಹೆನು ಕೇಳು ವ । ನಾಂತರವು ನಿಜ ವಾಸವೆಮ್ಮದು । ಕಾಂತೆ ಮಕ್ಕಳು ಬಲಸಹಿತ ನೀನೇಕೆ ಬಂದಿರುವೆ ॥11॥

ಕೇಳುತಾ ಯತಿವಚನವನು ಭೂ- । ಪಾಲ ಪೇಳ್ದನು ಯತಿವರನೆ ನೀ । ನಾಲಿಸೈ ಭಕ್ತರನು ಪಾಲಿಪ ಬಿರುದು ನಿನ್ನ ದಲಾ ॥
ಪೇಳುವೆನು ನಾನೊಂದು ಮಾತನು । ಪಾಲಿಸೆನಗ ಭಯವನು ಭಕ್ತರ । ಪಾಲಕನೆ ಭವಸಾಗರದ ತಾರಕನೆ ಗುರುರಾಯಾ ॥12॥

ಗಾಣಗಾಪುರ ಪುಣ್ಯಪಾವನ । ಸ್ಥಾನ ಬರಬೇಕಲ್ಲಿ ಮುದದಲಿ । ನೀನು ವಾಸವಮಾಡನುಷ್ಠಾನದಲಿ ನಿತ್ಯದಲಿ ॥
ಮಾನಿಸಲು ಬೇಕೆನ್ನ ವಚನವ । ನೀನು ಸದ್ಗುರುರಾಯನೆನುತಾ । ಕ್ಷೋಣಿಪತಿ ಚರಣದಲಿ ಬಿನ್ನೈಸಿದನು ಯತಿವರಗೆ ॥13॥

ಅರೆಗಳಿಗೆ ಚಿಂತಿಸುತ ಗುರುವರ । ನರುಹಿದನು ಭೂಪಾಲಕಗೆ ನಾ- । ಬರುವೆ ನೀ ಪೇಳ್ದಂತೆ ಗ್ರಾಮದೊಳಿರುವೆ ಕೆಲದಿನಸಾ ॥
ಶರಣಜನವತ್ಸಲನು ಶ್ರೀಗುರು- । ವರನು ಧರೆಯೊಳವತರಿಸಿದನು । ಕರುಣದಿಂ ಧರಣಿ ಪನ ಮನದಿಚ್ಛೆಯನು ತೀರಿಸಿದಾ ॥14 ॥

ಹೊರಟನಾ ಭೂಪಾಲ ಶ್ರೀಗುರು- । ವರನ ಪಲ್ಲಕ್ಕಿಯಲ್ಲಿ ಕೂಡ್ರಿಸಿ । ತುರಗಗಜರಥಕಾಲುದಳವನು ಮುಂದಿಡುತ ಮುದದಿ ॥
ತರುಣಿಪುತ್ರರ ಕೂಡಿ ತಾ ಹಿಂ- । ದಿರುತ ನಡೆದನು ತಿರುಗಿ ಗಾಣಗ- । ಪುರಕೆ ಹೊರವಂಟನು ನರಾಧಿಪ ರಾಜವೈಭವದಿ ॥15॥

ವಿಧವಿಧದ ಮಂಗಲಸುನಾದದಿ । ವೊದರುತಿಹ ಬಹು ಕೊಂಬುಕಹಳೆಯ ಮುದದ ಮಂಗಲವಾದ್ಯ ರಭಸದಿ ರಾಜಶೀವಿಯಲಿ ॥
ಮುದದ ವಿಪ್ರರ ವೇದಘೋಷದಿ । ಮುದದಿ ಗೀತಮೃದಂಗತಾಳದಿ । ಮುದದ ಕರ್ಣ ಮನೋಹರದ ಯತಿವರನ ಸ್ತೋತ್ರದಲಿ ॥16॥

ಊರಸೇರಲು ಮಂದಿ ಬಂದರು । ಆರತಿಯ ಬೆಳಗಿದರು ಗುರುವಿಗೆ । ಭಾರಿ ಸಂತಸವಾಯ್ತು ಗುರುವಿಗೆ ನಗರಮಧ್ಯದಲಿ ॥
ಧಾರುಣೀಪತಿಗತುಳಸಂತಸ । ವೇರಿ ಗಾಣಗಪುರವ ಸೇರಲು । ಭಾರಿಯದ್ಭುತವಾಯ್ತು ಕೇಳ್ಳೈ ನಾಮಧಾರಕನೆ ॥17॥

ಮರವಿರುವುದಶ್ವತ್ಥ ಗಾಣಗ । ಪುರದ ಪಶ್ಚಿಮ ಭಾಗದಲಿ ಕೇ- । ಳಿರುವನದರಲಿ ಬ್ರಹ್ಮರಾಕ್ಷಸ ನೊರ್ವನತಿಕ್ರೂರಾ ॥
ನೆರೆಹೊರೆಯ ಮನೆಯೊಂದು ನಿರ್ಜನ । ವಿರುವುದಾರಾಕ್ಷಸನ ಭೀತಿಯೊ- । ಳರರೆ ಶ್ರೀಗುರುವರನು ತದ್ಗೃಹಬೇಡಿದನು ತನಗೆ ॥18॥

ಮನೆಯ ಹೊಗಲಾರಕ್ಕಸನು ಗುರು- । ವಿನ ಚರಣಕೆರಗಿದನು ಭಕುತಿಯೊ- । ಳೆನಗೆ ಭವಸಾಗರವ ದಾಟಿಸಬೇಕೆನುತ ನುಡಿದಾ ॥
ಘನತರದ ಮಾಯಾಂಧಕಾರದಿ । ಜನುಮಜನುಮದಿ ಮುಳುಗಿಹೆನು ನೀ- । ನೆನಗೆ ತಾರಕನಹುದು ತವದರ್ಶನವು ರವಿತೇಜಾ ॥19॥

ನಿನ್ನ ದರ್ಶನ ಮಾತ್ರದಲಿ ಕೇ- । ಳೆನ್ನ ಪಾಪದ ರಾಶಿಗಳು ತಾ- । ಛಿನ್ನವಾದವು ನೀ ದಯಾನಿಧಿಯುದ್ಧರಿಸೊ ಯೆನ್ನಾ ॥
ಯೆನ್ನು ತೀಪರಿ ಬೇಡಲಾಗುರು । ತನ್ನ ಹಸ್ತದಿ ರಕ್ಕಸನ ಶಿರ- । ವನ್ನು ಮುಟ್ಟಲು ರಕ್ಕಸನು ನರರೂಪನಾದನಲಾ ॥20॥

ಹೊರಳಿದನು ಗುರುಚರಣಕಮಲದಿ । ಧರಿಸಿ ನರರೂಪವನು ಕೇಳು- । ದ್ಧರಿಸಿದನು ತದ್ರಕ್ಕಸನ ಗುರುಮಹಿಮೆ ಚೋದ್ಯವಲಾ ॥
ತ್ವರಿತದಲಿ ಸಂಗಮಕೆ ಮೋದದಿ । ತೆರಳು ಸ್ನಾನವ ಮಾಡಿದರೆ ನಿನ- । ಗಿರದು ಪುನರಾವೃತ್ತಿ ಮೋಕ್ಷವ ಪಡೆದೆ ನೀನೆಂದಾ ॥21॥

ಗುರುವಚನವನು ಕೇಳಿ ನಡೆದನು । ಪರಮಪಾವನಸಂಗಮಕೆ ಗುರು- । ವರನು ಪೇಳ್ದಂದದಲಿ ಸ್ನಾನವ ಮಾಡಲಾಕ್ಷಣಕೆ ॥
ನರತನುವ ಬಿಟ್ಟವನು ಮೋಕ್ಷದ । ವರಸಮಾಧಿಯ ಪಡೆದನೈ ಗುರು- । ವರನ ಲೀಲೆಯ ನೋಡಿ ಕೊಂಡಾಡಿದರು ವಿಸ್ಮಯದಿ ॥22॥

ತ್ರಿಗುಣಮೂರುತಿ ನೀನು ಜಗದಲಿ । ಬಗೆಬಗೆಯ ಲೀಲೆಯನು ತೋರಿಸಿ । ಸಗುಣರೂಪದಿ ಭಕ್ತರನು ರಕ್ಷಿಸುವೆ ಯುಗಯುಗದಿ ॥
ಅಗಣಿತವು ತವ ಮಹಿಮೆಯೆಂದಾ । ನಿಗಮಗಳು ಘೋಷಿಪವು ನಿನ್ನಯ । ಬಗೆಯ ಕಾಣಲಸಾಧ್ಯವೆನುತಲಿ ಸ್ತುತಿಸಿದರು ಜನರು ॥23॥

ಗಾಣಗಾಪುರದಲ್ಲಿ ಶ್ರೀಗುರು । ಸ್ಥಾನವನು ಮಾಡಿದನು ಗುರುವಿಗೆ । ಕೈಣಿಪತಿ ಮಾಡಿಸಿದನಾ ಮಠವನ್ನು ಗ್ರಾಮದಲಿ ॥
ಸ್ನಾನಗೋಸುಗ ದಿನದಿನಕೆ ಗುರು । ಭಾನುವುದಯಕೆ ಪೋಗುವನು ಮ- । ಧ್ಯಾಹ್ನ ಕಾಲಕೆ ಮಠಕೆ ಬರುವನು ಭಿಕ್ಷೆಗೋಸುಗವೆ ॥24॥

ಮೇಲೆ ಮೇಲಿಂದೊಮ್ಮೆ ನೃಪನಾಂ- । ದೋಲಿಕೆಯನೇ ಕೊಡುವನ್ಯೆ ನೃಪ- । ನೇಳುವನು ದಳ ಭಾರಸಹಿತವೆ ಮೇಲೆಮೇಲೊಮ್ಮೆ ॥
ಮೇಲೆ ಮೇಲಿಂದೊಮ್ಮೆ ತಾ ಹಿಂ- । ಬಾಲಿಸುವನ್ಯೆ ಯತಿವರನನಾ । ಹೇಳಲೇನದ ರಾಜಠೀವಿಯ ಯತಿಯ ಸಂಭ್ರಮವಾ ॥25॥

ಭಕ್ತ ಜನರಾಧೀನ ಶ್ರೀಗುರು । ಭಕ್ತ ಜನರಿಚ್ಛೆಯಲಿ ನಡೆಯುವ । ನಿತ್ಯವೀಪರಿ ರಾಜಠೀವಿಯ ಭೋಗಿಪನು ಮುದದಿ ॥
ವಿಸ್ತರಿಸಿತೀ ವಾರ್ತೆಗ್ರಾಮದ । ಸುತ್ತುಮುತ್ತಲು ಕುಮಸಿಗ್ರಾಮದಿ । ವರ್ತಮಾನವು ಬಂತು ಕೇಳಾ ಗ್ರಾಮದಲಿ ಯತಿಯು ॥26॥

ಇರುವನೊರ್ವ ತ್ರಿವಿಕ್ರಮಾಭಿದ । ವರಯತಿಯು ಮೂರ್ವೇದ ಪಠಿಸುತ । ನರಹರಿಯ ಪೂಜಿಪನು ಮನದಲಿ ನಿತ್ಯನೇಮದಲಿ ॥
ಗುರುವರನ ಸುದ್ದಿಯನು ಕೇಳುತ । ಲರರೆ ದಾಂಭಿಕನಿವನು ವರಯತಿ । ಯಿರಲು ವೈಭವವೇಕೆ ರಾಜನಠೀವಿ ಮತ್ತೇಕೆ ॥27॥

ನಿಂದೆಯನು ಬಹುಮಾಡಿದನು ಮದ- । ದಿಂದಲಾಗ ತ್ರಿವಿಕ್ರಮನು ಗುರು । ವೆಂದು ತಿಳಿಯದೆ ಗುರುವು ದಾಂಭಿಕನೆಂದು ಬಗೆದನಲಾ ॥
ಮುಂದೆ ಶ್ರೀಗುರು ಜ್ಞಾನಚಕ್ಷುವಿ- । ನಿಂದ ನೋಡಿದನಿವನ ಪರಿಯನು । ಮುಂದಿವಗೆ ನಿಜರೂಪ ತೋರಿಪೆನೆಂದು ಗುರು ಬಗೆದಾ ॥28॥

ಶುದ್ಧ ಮನದಲಿ ಕಥೆಯ ಕೇಳ್ವರೆ । ಬಿದ್ದು ಹೋಗುವವೆಲ್ಲದುರಿತಗ- । ಳೆದ್ದು ಬರುವವು ಸರ್ವಸಿದ್ಧಿಗಳೀ ಜಗದಿ ತಿಳಿಯೆ ॥
ಸಿದ್ಧ ಮಂತ್ರವು ಗುರುಚರಿತ್ರವು । ಸದ್ಯ ಕಿಹುದಿದು ಕಾಮಧೇನುವು । ಶುದ್ಧ ಭಾವದಿ ಭಜಿಸಿರ್ಯೆ ಗುರು ವಿಷ್ಣುರೂಪನಲಾ ॥29॥

॥ ಅಧ್ಯಾಯ 23 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 24

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ನಿಂದೆ ಮಾಡುವ ಮುನಿ ತ್ರಿವಿಕ್ರಮ । ನಿಂದ ಶ್ರೀಗುರುವರನು ಕುಮಸಿಲಿ । ವಂದನೆಯ ಪಡಕೊಂಡು ಬಂದನು ಗಾಣಗಾಪುರಕೆ॥

ಗುರುಚರಣಸದ್ಭಕ್ತಿ ಮೋಕ್ಷದ । ಪರಮ ಸುಲಭದ ಯುಕ್ತಿ ಭವಸಾ- । ಗರ ಪ್ರಯಾಣದ ಬುತ್ತಿಯಬಲರಶಕ್ತಿ ವೇದೋಕ್ತಿ ॥
ಗುರುವೆ ನೀನು ಸುಮೂರ್ತಿ ಜಗದೊಳು । ಮೆರೆಯುವುದು ತವಕೀರ್ತಿ ನಂಬಿದೆ । ಚರಣಕಮಲದ ಪ್ರೀತಿ ಶರಣನಿಗೀಯೊ ಸನ್ಮುಕ್ತಿ ॥1॥

ಮುನಿ ತ್ರಿವಿಕ್ರಮಭಾರತಿಯು ಗುರು । ವನು ಯಥೇಚ್ಛಾನಿಂದಿಪನು ತಾ- । ನೆನುತ ಮನದಲಿ ತಿಳಿದನು ನರಹರಿಸರಸ್ವತಿಯು ॥
ಮನದಿ ಕುತ್ಸಿತನಾ ತ್ರಿವಿಕ್ರಮ । ಮುನಿಯು ನರಹರಿ ದಾಂಭಿಕನು ತಾ-। ನೆನುತ ಜನರೊಳು ನಿಂದೆಗೈದನು ತಿಳಿಯದೀ ಗುರುವಾ ॥2॥

ಜ್ಞಾನಿ ಶ್ರೀಗುರುನಾಥ ತಿಳಿದನು । ಕ್ಷೋಣಿಪತಿಯನು ಕರೆದು ಪೇಳ್ದನು । ನೀನರಿಯಲಾ ನಿಂದಿಪನು ಕುಮಸಿಯಲಿ ಯತಿವರನು ॥
ನಾನು ಹೋಗುವೆನಲ್ಲಿ ನೀನು ಪ್ರ- । ಯಾಣ ಮಾಡೀಗೆನ್ನೊಡನೆಯೆನ । ಲಾನರಾಧಿಪ ಹಿಗ್ಗಿದನು ಸಂತಸದಿ ಹೋಗುವರೆ ॥3॥

ಕರಿತುರಗಕಾಲಾಳು ಮೊದಲಾ- । ಗಿರುವ ವೈಭವವನ್ನು ಸಿದ್ಧೀ । ಕರಿಸಿದನು ವಿಧವಿಧದಲಂಕಾರದಲಿ ಪಡೆಸಹಿತಾ ॥
ತೆರಳಿದನು ಗ್ರಾಮಾಧಿಪನು ಗುರು- । ವರನ ಕೂಡಿಸಿ ಪಲ್ಲಕಿಯಲೇ । ಮೆರಿಸಿದನು ಮೆರವಣಿಗೆ ನಾನಾ ವಾದ್ಯಮೇಳದಲಿ ॥4॥

ಕುಮಸಿಯಲಿ ಕೇಳಾ ತ್ರಿವಿಕ್ರಮ । ವಿಮಲ ಮಾನಸ ಪೂಜೆಮಾಡಲು । ಸಮನಿಸದು ನರಹರಿಯ ಮೂರುತಿ ಮನದಿ ಚೋದ್ಯವಲಾ ॥
ಕುಮತಿಯೆನ್ನಯ ತಪದ ಬಲವಿದ । ಗಮಿಸಿದಂತಾಯ್ತೆನುತ ಮನದಲಿ । ಭ್ರಮತೆಯಾಯಿತು ಯತಿಗೆ ಕಾರಣ ತಿಳಿಯದೇನಾಯ್ತು ॥5॥

ನರಹರಿಯ ಬಹುದಿವಸ ಪೂಜಿಸಿ । ಪರಿಯಿದಾಯಿತೆ? ಮೂರ್ತಿ ಬಾರದೆ । ಬರಿದೆ ಯೆನ್ನಯ ತಪದ ಭಂಗವಿದೀಗ ಬಂತೇನು ? ॥
ಅರರೆ ಮುಂದೆನಗೇನುಗತಿ ನರ- । ಹರಿಯು ಯೆನ್ನನುಪೇಕ್ಷಿಸಿದನ್ಯೆ । ಚರಣಕೆರಗುವೆನೆನುತ ಚಿಂತಿಸಿದನು ತ್ರಿವಿಕ್ರಮನು ॥6॥

ಅನಿತರಲಿ ದೂರದಲಿ ಕಂಡನು । ಮನಸಿಯೊಳಗಿಹ ಮೂರ್ತಿಯಂದದ । ವಿನುತ ಶ್ರೀಗುರುವರನ ಕೇಳಾ ನದಿಯ ತೀರದಲಿ ॥
ಮನದಿ ವಿಸ್ಮಯಪಟ್ಟನಾಕ್ಷಣ । ಪ್ರಣತಿಯನು ಮಾಡುತ್ತ ಹೊರಟನು । ಪುನಹ ನೋಡಲು ದಂಡಧಾರಿಗಳೆಲ್ಲ ತೋರಿದರು ॥7॥

ಕಂಡನಾ ಯತಿವರನು ರಾಯನ । ದಂಡನೆಲ್ಲವನರಿಯನಲ್ಲಾ । ದಂಡಧಾರಿಗಳೆಲ್ಲ ಬರುತಿಹ ಪರಿಯ ನೋಡಿದನು ॥
ಕಂಡನೆಲ್ಲರನೇಕರೂಪದಿ । ಕಂಡು ವಿಸ್ಮಿತನಾಗಿ ತನ್ನಯ । ಮಂಡೆಯನು ಬಗ್ಗಿ ಸುತ ವಂದಿಸಿ ಬೇಟಿಗೈತಂದಾ ॥8॥

ಯಾರು ಹಿರಿಯರು ಯಾರು ಕಿರಿಯರು । ಬಾರದಾಗಲೆ ಯತಿಯ ಮನಸಿಗೆ । ತೋರುತಿಹೆ ಮಾನಸದ ಪೂಜೆಯ ಮೂರುತಿಯ ಮುಂದೆ ॥
ಭಾರಿ ವಿಸ್ಮಯದಿಂ ತ್ರಿವಿಕ್ರಮ । ಭಾರತಿಯು ಗುರುಚರಣ ಕಮಲದಿ । ಜಾರು ಭಕುತಿಯಲೀಕಭಾವದಿ ಹೊರಳುತ್ತಿದ್ದನಲಾ ॥9॥

ನೋಡಿದನು ಯತಿವರನ ಮಹಿಮಯ । ಹಾಡಿದನು ಗುರುಮೂರ್ತಿಯನು ಕೊಂ । ಡಾಡಿದನು ವಿಧವಿಧದಿ ನೆಲದಲಿ ಬಿದ್ದು ಭಕ್ತಿಯಲಿ ॥
ರೂಢಿಗವತರಿಸಿರ್ದ ಶ್ರೀಗುರು । ಮೂಢನೆನ್ನನು ವಂಚಿಸದೆ ತವ । ಗೂಢ ರೂಪವನಡಗಿಸ್ಯೆ ನಿಜರೂಪ ತೋರಿಸಲಾ ॥10॥

ನಿನ್ನ ಮಹಿಮೆಯನರಿಯಲಾರದೆ । ಬನ್ನ ಬಟ್ಟವು ವೇದಶಾಸ್ತ್ರಗ । ಳೆನ್ನ ಬಗೆಯಿನ್ನೇನು ತವಗುಣಗಣವ ಬಣ್ಣಿಪರೆ ॥
ಚಿನ್ಮಯಾತ್ಮಕ ನೀನೆ ಸದ್ಗುರು । ವಿನ್ನು ತಿಳಿಯದು ನಿನ್ನ ರೂಪವು । ಕಣ್ಣಿಗಸದಳ ನಿನ್ನ ನಿಜರೂಪವನು ನೋಡುವರೆ ॥11॥

ಧರಣಿಯಲಿ ನರಸಿಂಹಮೂರುತಿ । ಮೆರೆದು ಯತಿರೂಪದಲಿ ಶರಣೋ- । ದ್ಧರಣನಾಗಿಯೆ ಬಂದಿರುವೆ ನೀ ಸರ್ವವ್ಯಾಪಿಯಲಾ ॥
ಮೆರೆವರೈಯೆನ್ನೆದುರಿನಲಿ ಯತಿ- । ವರರೆ ಸರ್ವರು ನಿನ್ನ ರೂಪರು । ಕರಗಿಸೈತವ ಮಾಯೆಯನು ನೀವಾರು ತೋರಿಸೆಲಾ ॥12॥

ಮಾನಸದಿ ಪೂಜೆಯನು ಭಕ್ತಿಯೊ- । ಳಾನು ಮಾಡಿದೆ ಬಹಳದಿವಸಕೆ । ಸಾನುರಾಗದಿ ಬಂದು ನಿಜರೂಪವನು ತೋರಿಸಿದೆ ॥
ನಾನು ಮಾಡಿದ ಕರ್ಮ ಫಲಿಸಿತು । ನೀನು ವಿಶ್ವಕೆ ತಾರಕನು ನಿನ- । ಗೇನ ಹೇಳಲಿ ಯೆನ್ನನುದ್ಧರಿಸಲ್ಕೆ ಬಂದಿರುವೆ ॥13॥

ಸ್ತುತಿಯ ಮಾಡಿದನೀಪರಿಯೊಳಾ । ಯತಿಯು ಸಾಷ್ಟಾಂಗ ಪ್ರಣಾಮವ- । ನತಿ ವಿನಯದಿಂ ಮಾಡಲಾಕ್ಷಣ ಮಾಯೆ ಕರಗಿತಲಾ ॥
ಕ್ಷಿತಿಪತಿಯದಳಭಾರ ತೋರಿತು । ಯತಿನೃಸಿಂಹಸರಸ್ವತಿಯ ಮೂ- । ರುತಿಯು ಬೆಳಗಿತು ಚಂದ್ರಮೌಳಿಯ ತೆರದಿ ಮಧ್ಯದಲಿ ॥14॥

ಭಕ್ತ ವರದನು ಮುಂದೆ ಸೈನ್ಯದಿ । ವ್ಯಕ್ತನಾದನು ಕೇಳ್ ತ್ರಿವಿಕ್ರಮ । ನಿತ್ತ ಬಾರೆಂದಪ್ಪಿ ಕೊಂಡನು ಶರಣವತ್ಸಲನು ॥
ನಿತ್ಯದಲಿ ನೀನೆನ್ನ ನಿಂದಿಪ । ಸ್ತುತ್ಯ ಕೆಲಸವ ನಡಿಸಿರುವೆ ನಾ । ನಿತ್ತ ಬಂದೆನು ನಿನ್ನ ಭಕ್ತಿಗೆ ಮೆಚ್ಚಿದೆನು ಮನದಿ ॥15॥

ನೀನು ಪ್ರತಿದಿನ ಭಾವ ಭಕುತಿಯ- । ಲಾ ನೃಸಿಂಹನ ಪೂಜೆಯನು ಕೇಳ್ । ಮಾನಸದಿ ಮಾಡಿರುವೆಯಾತನೆ ನಿನಗೆ ಪ್ರೇರಿಸಲಿ ॥
ನಾನು ದಾಂಭಿಕಯ ತಿಯೆನುತ ನೀ । ಮಾನವರ ಮುಂದಾಡುತಿರುವೆಯೊ । ಆ ನೃಸಿಂಹನ ಸ್ಮರಿಸಿ ನಿಜಮಾತಾಡು ಯೆನ್ನೊಡನೆ ॥16॥

ಎಂದ ಶ್ರೀಗುರುವಚನ ಕೇಳುತ । ಲೆಂದನಾಗ ತ್ರಿವಿಕ್ರಮನು ನಾ । ಮಂದಮತಿ ಮಾಯಾನುವೇಷ್ಟನದಿಂದ ಬಳಲಿದೆನು ॥
ತಂದೆ ನೀ ಜಗಕೆಲ್ಲ ನಾ ತವ । ಕಂದನಲ್ಲಾ ಕ್ಷಮಿಸು ಕ್ಷಮಿಸೈ । ಕಂದೆರದು ನೀ ನೋಡು ಬಾಲನ ಕುಂದನೀಕ್ಷಿಸದೆ ॥17॥

ಮಾಯೆ ಮೋಹದಿ ಕಣ್ಣು ಕಾಣದೆ । ಸಾಯುವೆನು ನಾ ತಿಮಿರವನದಲಿ । ಜೀಯ ನಾನಜ್ಞಾನಸಾಗರದಲ್ಲಿ ಮುಳುಗಿದೆನು ॥
ಕಾಯುವವದಾತಾರ ತಿಮಿರಕೆ । ಸೂರ್ಯ ನೀನು ರಕ್ಷಿಸೈ ಗುರು- । ರಾಯ ತ್ರಿಜಗೋದ್ಧಾರ ದರ್ಶನವಾಯ್ತು ತವ ಚರಣ ॥18॥

ನಾನವಿದ್ಯಾಸಾಗರದಿ ಬಲ- । ಹೀನನಂದದೆ ತೇಲಿ ತೀರವ । ಕಾಣದಾದೆನು ಮುಳುಗುತಿದ್ದೆನು ನಿನ್ನ ದರ್ಶನದಿ ॥
ಜ್ಞಾನನೌಕೆಯೊಳೆನ್ನ ನೆತ್ತಿದೆ । ನೀನು ಕರುಣಾವಾಯು ಹುಟ್ಟಿಸಿ । ಸಾನುರಾಗದಿ ಸಾಗರವ ನೀ ಪಾರಗಾಣಿಸಿದೆ ॥19॥

ನಿನ್ನ ಕೃಪೆಯಾಗಲು ಸದಾ ಸಂ- । ಪನ್ನರಪ್ಪರು ನಿನ್ನ ದಯೆಯಿರೆ । ದೈನ್ಯ ದುಃಖಗಳೆಲ್ಲ ಪೋಪವು ಕಾಡುಪಾಲಾಗಿ ॥
ನಿನ್ನ ಸತ್ಕೃಪೆಯಿರಲು ಯಮನಿಗೆ । ಬೆನ್ನ ತೋರುವವರಾರು ಸದ್ಗುರು । ಚಿನ್ಮಯಾತ್ಮಕ ನಿನ್ನ ದರ್ಶನ ಸರ್ವಸಿದ್ಧಿಯಲಾ ॥20॥

ಭಾರತದಿ ನಾನೋದಿ ಬಲ್ಲೆನು । ತೋರಿದನು ಶ್ರೀಹರಿಯು ಪಾರ್ಥಗೆ । ಚಾರುತರ ಸದ್ವಿಶ್ವರೂಪವನೆನುತ ಪೂರ್ವದಲಿ ॥
ತೋರಿಸಿದೆ ತದ್ವಿಶ್ವರೂಪವ । ಕಾರಣಿಕ ನೀನಹುದು ನಿನ್ನನು । ಯಾರು ಬಣ್ಣಿಸಬಹುದು ಮಹಿಮೆಯಗಾಧ ನಿನ್ನದಲಾ ॥21॥

ಚರಣದರ್ಶನವಾಯ್ತು ಭವಸಾ- । ಗರದ ನೌಕೆಯು ಸುಲಭತರದಲಿ । ದೊರೆಯಿತಿಂದೀ ಭಾಗ್ಯವೆನ್ನದು ಧನ್ಯನಾದೆನಲಾ ॥
ಗುರುವೆ ನೀ ನರರೂಪದಲಿ ಸಂ- । ಚರಿಸುತಿಹ ತ್ರೈಮೂರ್ತಿ ಭಕ್ತೋ- । ದ್ಧರಣ ನಿನ್ನಯ ಬಿರುದು ಚಿಂತಾಮಣಿಯು ತವದೃಷ್ಟಿ ॥22॥

ಹಿಂದೆ ಶ್ರೀಹರಿ ವಿದುರ ಗೃಹಕ್ಕೈ- । ತಂದಪರಿಯಲಿ ದಿವ್ಯ ಗಂಗೆಯು । ಬಂದು ಸಗರಾತ್ಮಜರನುದ್ಧರಿಸಿರ್ದಪರಿಯಂತೆ ॥
ಇಂದು ದರ್ಶನವಿತ್ತು ಯೆನ್ನನು । ಕಂದೆರದು ನೋಡಿದೆಯೊ ತವ ಕೃಪೆ- । ಯಿಂದ ಯೆನ್ನಯ ಜನ್ಮ ಸಾರ್ಥಕವಾಯ್ತು ನಿಜನಿಜವು ॥23॥

ಈ ತೆರದಿ ಸ್ತುತಿಸುವುದ ಕೇಳುತ । ಪ್ರೀತಿಯಿಂದ ತ್ರಿವಿಕ್ರಮಗೆ ಮನ । ಸೋತು ಶ್ರೀಗುರುವಿತ್ತನೈ ವರ ಮೋದದಿಂದಾಗಾ ॥
ಕೂತಿತೈ ಸತ್ಪ್ರೇಮ ನಿನ್ನಲಿ । ಭೂತಳದಿ ನೀ ಮೋಕ್ಷ ಹೊಂದಿದೆ । ಭೀತಿ ಬೇಡೈ ನಿನಗೆ ಪುನರಾವೃತ್ತಿ ಮುಂದಿಲ್ಲಾ ॥24॥

ವರವನಿತ್ತಾ ಭಾರತಿಗೆ ಗುರು- । ವರನು ಹಿಂತೆರಳಿದನು ಗಾಣಗ । ಪುರಕೆ ಬಂದನು ಶೀಘ್ರದಲಿ ಕೇಳ್ವಾಯುವೇಗದಲಿ ॥
ಗುರುವರನು ತ್ರೈಮೂರ್ತಿಯಲ್ಲವೆ । ನರನೆ ಸಾಮಾನ್ಯನೆ ಕಣಾ ಯಿದ । ನರಿಯದವರಿಗೆ ಯಮನ ಪುರವಿದು ನಿತ್ಯವಾಸವಲಾ ॥25॥

ಜಗವ ಸೃಷ್ಟಿಪ ಬ್ರಹ್ಮ ಮೂರ್ತಿಯು । ಜಗವ ರಕ್ಷಿಪ ವಿಷ್ಣು ಮೂರ್ತಿಯು । ಜಗವ ಸಂಹರಿಸುವ ಮಹೇಶನ ಮೂರ್ತಿ ಗುರುವಾಗಿ ॥
ತ್ರಿಗುಣದಲಿ ವಿಶ್ವವನು ವ್ಯಾಪಿಸಿ । ಭಗತರಿಗೆ ಸುರಧೇನು ಗುರುವಿನ । ಬಗೆಯ ಕಂಡವರಾರು ಗುರುಚರಣಗಳ ವಂದಿಸಿರಿ ॥26॥

ಭಾಸುರದ ಅರವಟಕಯಲಿ ಪೀ । ಯೂಷ ತುಂಬಿಹುದಿದನು ಸೇವಿಸಿ । ಲೇಸು ಸಂಪಾದಿಸಿರಿ ಭವಶರಧಿಯನು ದಾಟುತಲಿ ॥
ಪ್ರಾಶನವ ಮಾಡಿರಿ ಕಥಾಪೀ- । ಯೂಷ ಕುಡಿಯಿರಿ ಗುರುಚರಿತ್ರದ । ತೋಷಕಾರಕ ಕಾಮಧೇನು ಕ್ಷೀರ ಸೇವಿಸಿರಿ ॥27॥

ಭಾವಭಕುತಿಯೊಳಿದನು ನಿತ್ಯದಿ । ಸೇವಿಸಲು ಪುರುಷಾರ್ಥಸಾಧನ- । ವೀವ ಶ್ರೀಗುರುರಾಯ ಸಂಶಯ ಬೇಡ ತಿಲಮಾತ್ರ ॥
ಕಾವನೈ ಭಕ್ತರನು ಸದ್ಗುರು । ರಾವ ಬೆಂಬಲಕಿರುವ ಸಂಸ್ಕೃತಿ । ಹಾವ ಹಿಡಿವನು ದತ್ತಗಾರುಡಿ ವಿಷ್ಣುವಚನವಿದು ॥28॥

॥ ಅಧ್ಯಾಯ 24 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 25

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ವಿಪ್ರರಿಬ್ಬರು ವೇದಪಠಣದ । ದರ್ಪದಲ್ಲಿ ಗುರುವರನ ಕೈಯಿಂ- । ಕಪ್ಪಕಾಣಿಕೆ ಕೊಳ್ಳುವರೆ ನಡೆತಂದರೈ ಮುದದಿ॥

ವೇದಪಠಣದ ಮದದಿ ನಿನ್ನೊಳು । ನಾದಮಾಡಲು ಬರಲು ಬುದ್ಧಿಯ । ವಾದವನು ಪೇಳಿ ಕೇಳರು ಅಂತ್ಯಜನ ಮುಖದಿ ॥
ವೇದ ನುಡಿಸಿದೆ ದ್ವಿಜರ ಯಮಪುರ । ಹಾದಿ ತೋರಿಸಿ ಗರ್ವ ಹರಿಸಿದೆ । ನೀ ದಯಾಂಬುಧಿ ನಿನ್ನ ಮಹಿಮೆಯಗಾಧ ಗುರುರಾಯಾ ॥1॥

ಗುರುಶಿರೋಮಣಿ ಸಿದ್ಧ ಮುನಿನಾ । ನರಿತೆನಂತಃಕರಣದಲಿ ಗುರು- । ಚರಿತವನು ಯೆನಗರುಹಿ ಪರಮಾರ್ಥವನು ಬೋಧಿಸಿದೆ ॥
ನರನ ರೂಪವ ಧರಿಸಿ ತಾ ಸಂ । ಚರಿಸುತಿಹ ತ್ರೈಮೂರ್ತಿ ಶ್ರೀಗುರು । ವರನ ನಿಜರೂಪವನು ತಿಳಿಯರು ಮೂಢರೇನೆಂಬೆ ॥2॥

ತೋರಿದನು ಶ್ರೀಗುರು ತ್ರಿವಿಕ್ರಮ । ಭಾರತಿಗೆ ಕೇಳ್ವಿಶ್ವರೂಪವ । ಶ್ರೀರಮಾವರ ಹಿಂದೆ ಪಾರ್ಥಗೆ ತೋರಿಸಿದ ತೆರದಿ ॥
ಭಾರಿ ಸಂತಸವಾಯ್ತು ಕೇಳ್ದನು । ಕಾರಣಿಕ ನೀನಹುದು ಮುಂದಿನ । ಚಾರುಚರಿತವನರುಹ ಬೇಕೆಂದೆರಗಿದನು ಪದಕೆ ॥3॥

ನುಡಿಯ ಕೇಳುತ ಸಿದ್ಧ ಮುನಿ ತಾ । ಸಡಗರದಿ ಶಿಷ್ಯನಿಗೆ ಪೇಳ್ದನು । ನುಡಿಯಲಾರೆನು ಸರ್ವಮಹಿಮೆಯ ಗುರುಚರಿತ್ರವನು ॥
ಪೊಡವಿಯಲಿ ಗುರುಲೀಲೆಯನುಪಮ । ನುಡಿವೆ ಮೇಲಿಂಮೇಲೆ ಧ್ಯಾನಕೆ । ಬಿಡದೆ ಬರುವ ಸುಲೀಲೆ ಕೇಳ್ಳೈ ನಾಮಧಾರಕನೆ ॥4॥

ವಿದುರನಾಮದ ನಗರವಿರುವದು । ಅದರೊಳಗೆ ನೃಪ ಯವನನೋರ್ವನು । ಮದದಿ ರಾಜ್ಯವನೆಸಗುವನು ಕೇಳ್ವಿಪ್ರನಿಂದಕನು ॥
ವಿದಯನಂತಃಕರಣಹೀನನು । ವಧಿಸುವನು ಪ್ರಾಣಿಗಳ ನಿರ್ದಯ । ನಧಮವಿಪ್ರರ ಕರೆದು ವೇದೋಚ್ಚಾರಗೈಸುವನು ॥5॥

ಯಾರು ಭೂಸುರರೆನ್ನ ಭರ ದರ- । ಬಾರದಲಿ ಬಂದೆನ್ನ ಮುಂದೆ ವಿ । ಚಾರಪೂರ್ವಕ ವೇದಪಠಿಸುವರವರ ಮನ್ನಿಪೆನು ॥
ಭೂರಿ ಧನಧಾನ್ಯಾದಿ ಬಹು ಸ । ತ್ಕಾರವನು ಮಾಡುವೆನೆನುತ್ತಲಿ । ಧಾರುಣೀಪತಿ ಸರ್ವ ದ್ವಿಜರಿಗೆ ಕರೆದು ಪೇಳಿದನು ॥6॥

ಹಣವ ಕಂಡರೆ ಬಾಯಿ ಬಿಡುವುದು । ಹೆಣವೆನುತ ನಾಣ್ಣುಡಿಯು ಸಟೆಯೇ । ಹಣದ ಲೋಭದಿ ಮೂರ್ಖ ವಿಪ್ರರು ಯವನನೆದುರಿನಲಿ ॥
ಕುಣಿಕುಣಿದು ವೇದವನು ಪೇಳ್ವರು । ಗಣಿಸಲಾರರು ರಾಯನಾಜ್ಞೆಯ । ವಿನುತ ಗುಣಸಂಯುತರು ವಿಪ್ರೋತ್ತಮರು ಮಾನಿಗಳು ॥7॥

ಪ್ರಾಣಿಗಳ ವಧಿಸುವರು ಯಜ್ಞದೊ- । ಳೇನ ಹೇಳಲಿ ಬ್ರಾಹ್ಮಣರು ಮತಿ- । ಹೀನರೆಮ್ಮನು ನಿಂದಿಪರು ಪಶುಹಿಂಸಕರು ಯೆನುತಾ ॥
ಕಾಣರೈ ನಿಜದೋಷ ಕುಂಬಳ । ಕಾಣುವರು ಪರದೋಷಸಾಸಿವೆ । ಮಾನವರ ಗುಣಧರ್ಮವಿದು ನಿಜವೆಂದನಾ ನೃಪನು ॥8॥

ಭೂದಿವಿಜರೈತಂದು ನೃಪನೊಳು । ವೇದವನು ಪಠಿಸುವರು ಮೂರ್ಖರು । ಮೋದದಿಂದಲಿ ನೃಪನು ಧನಧಾನ್ಯವನು ಕೊಡುತಿಹನು ॥
ವೇದವಿಕ್ರಯವೀಪರಿಯೊಳಾ । ಭೂದಿವಿಜರೆಸಗುವರು ಧನಲೋ । ಭಾದಿದುರ್ಗುಣದಿಂದ ರಂಜಿತರೈ ದ್ವಿಜಾಧಮರು ॥9॥

ಮೂಢದ್ವಿಜರೀಪರಿಯೊಳಾ ನೃಪ- । ನಾಡುತಿಹ ನಿಂದೆಯನು ಕೇಳದೆ । ಮಾಡುವರು ಸನ್ಮಾನವಿಕ್ರಯವನ್ನು ರಾಜನಲಿ ॥
ರೂಢಿಯಲಿ ಕೇಳಿದರೆ ಯಮಪುರ- । ಕೋಡುವರು ಸನ್ಮುಕ್ತಿ ಬಾಹಿರ । ರಾಡಲೇನದು ಕಲಿಯ ಪುತ್ರರು ಜ್ಞಾನದಾಂಭಿಕರು ॥10॥

ಸಂದವೈ ಬಹು ದಿನಗಳೀಪರಿ- । ಯೋಂದು ದಿನ ತದ್ಯವನ ರಾಜನ । ಮುಂದೆ ಬ್ರಾಹ್ಮಣರಿಬ್ಬರೈತಂದರು ಸಗಾಢದಲಿ ॥
ಮಂದಭಾಗ್ಯರು ವೇದಶಾಸ್ತ್ರದ । ಲಿಂದು ಪಾರಂಗತರು ತರ್ಕದೊ- । ಳಿಂದು ಯೆನ್ನಯ ಜೋಡಿ ಕಾಣೆವೆನುತ್ತ ಪೇಳಿದರು ॥11॥

ವೇದಶಾಸ್ತ್ರದಿ ಯೆಮ್ಮೊಡನೆ ನಿಜ । ವಾದ ಮಾಡುವ ದ್ವಿಜರ ಕರಿಸೈ । ಮೋದದಿಂದಲಿ ಜಯಿಸುವೆವು ನಾವವರ ಕ್ಷಣದೊಳಗೆ ॥
ಮೇದಿನೀಸುರರಿಲ್ಲದಿದ್ದರೆ । ಕಾದಲಾರದೆ ಹಾರಿ ಪತ್ರವ । ನಾದರದಿ ಕೊಡಬೇಕು ಡಂಗುರ ಹೊಡಿಸು ನೀನೆಂದು ॥12॥

ಅರಸನಿಗೆ ಪೇಳಿದರು ದ್ವಿಜರಾ । ಪರಮದರ್ಪೋಕ್ತಿಯಲಿ ರಾಜನು । ಕರಿಸಿದನು ಬ್ರಾಹ್ಮಣರನೆಲ್ಲರ ಪೇಳಿದನು ಹದನಾ ॥
ಅರಸನಾಡಿದ ನುಡಿಗೆ ಮಾರು- । ತರವನಿತ್ತರು ಭೂಸುರರು ಬಹು- । ಪರಿಯಲಾ ವಿಪ್ರರಿಗೆ ಪೇಳ್ದರು ನೀತಿಬೋಧೆಯನು ॥13॥

ಖೂಳರಾ ದ್ವಿಜರವರು ಹೇಳಿದ- । ನಾಲಿಸರು ಗರ್ವದಲಿ ಭೂಪಗೆ । ಪೇಳಿದರು ರಾಷ್ಟ್ರದಲಿ ನಿನ್ನಯ ಮೂಢರೇ ಜನರು ॥
ಪಾಲಿಸೈ ಯೆಮಗೀಗ ಮಾನವ । ಮೇಲೆ ದ್ರವ್ಯಾಭರಣವನು ನೀ । ಬೀಳುಗೊಡುವೆವು ಮುಂದೆ ನಡೆವೆವು ಯೆಂದರಾ ದ್ವಿಜರು ॥14॥

ಈ ನುಡಿಯ ಕೇಳಿದನು ರಾಜನು । ಮಾನಪತ್ರವನಿತ್ತನವರಿಗೆ । ಮೇಣು ದ್ರವ್ಯಾಭರಣವಿತ್ತನು ವಸ್ತ್ರಭೂಷಣವಾ ॥
ಆನೆಬೆನ್ನಿನ ಮೇಲೆ ಕೂಡ್ರಿಸು- । ತಾ ನಗರದಲಿ ಮೆರಿಸಿದನು ದ್ವಿಜ- । ರೇನ ಹೇಳಲಿ ಸೊಕ್ಕಿದರು ಸನ್ಮಾನ ದಾನದಲಿ ॥15॥

ಅರಸನೆದುರಿಲಿ ವೇದ ಪೇಳ್ದರು । ಮರೆತರೈ ಗರ್ವದಲಿ ಶಾಸ್ತ್ರದ । ಪರಿಯ ಕೇಳಾ ದ್ವಿಜರು ತಾಮಸವೃತ್ತಿ ಸಂಯುತರು ॥
ಅರಸನಿತ್ತನು ಮಾನವನು ಭೂ- । ಸುರರ ವೃಂದಕೆ ರಾಜರೀ ದ್ವಿಜ । ರಿರುವರೈ ಮಾನಿಸುವುದೆಲ್ಲರು ರಾಜಶಾಸನವಾ ॥16॥

ಭೂಸುರರರು ವೇದವನು ತಿಳಿಯರು । ದೋಷವಿದು ಕೇಳ್ ಬ್ರಹ್ಮಕುಲಕಾ- । ಯಾಸದಿಂದಲಿ ನಾವು ಕಲಿತೆವು ವೇದಶಾಸ್ತ್ರಗಳಾ ॥
ಈಸು ನಿನ್ನಯ ರಾಜ್ಯದಲಿ ಬಹು- । ತೋಷದಿಂದಲಿ ತಿರುಗಿ ನೋಳ್ಪೆವು । ಭೂಸುರರನೆಲ್ಲರನು ಸೋಲಿಸಿ ಬರುವೆವೈ ತಿರುಗಿ ॥17॥

ಇಂತು ದ್ವಿಜರು ಮದಾನ್ವಿತರು ಭೂ- । ಕಾಂತನಾಜ್ಞೆಯನಾಂತು ರಾಷ್ಟ್ರದಿ । ಸಂತಸದಿ ಪರ್ಯಟನ ಮಾಡಿದರೇನ ಹೇಳುವೆನು ॥
ಎಂತು ತಿಳಿಯರು ಗರ್ವ ವರ್ಧಿಸ- । ಲಂತಕನು ಬರುವನು ಸಮೀಪಕೆ । ಭ್ರಾಂತಿಯನು ಬಿಡಲಾರರೈ ಗರ್ವದಲಿ ದಾಂಭಿಕರು ॥18॥

ತಿರುಗಿ ನಾನಾ ಗ್ರಾಮಗಳ ಭೂ- । ಸುರರು ಜಯಪತ್ರವನು ಪಡೆದರು । ಬರಿದೆ ಹೆಸರನು ಕೇಳಿ ಮುಂದಕೆ ಬಾರರೈ ದ್ವಿಜರು ॥
ತಿರುಗಿ ಬಂದರು ದಕ್ಷಿಣಕೆ ಗುರು- । ವರನ ಲೀಲಾ ಸ್ಥಾನ ಕುಮಸಿಗೆ । ಮೆರೆವುದೀಪುರವರವು ಭೀಮಾನದಿಯ ತೀರದಲಿ ॥19॥

ಮುನಿ ತ್ರಿವಿಕ್ರಮ ಭಾರತಿಯು ಬಹು- । ವಿನುತವರ್ತನನಿಹನು ಗ್ರಾಮದಿ । ಜನರು ಪೇಳ್ದರು ವೇದಶಾಸ್ತ್ರದಿನಿಪುಣನೆಂದೆನುತಾ ॥
ಅನವರವ ಮೂರ್ವೇದ ಪೇಳ್ವನು । ಯೆನುತ ಜನರಾಡಿದುದ ಕೇಳುತ । ಮನದಿ ಸಂತಸದಿಂದ ನಡೆದರು ದ್ವಿಜರು ಮುನಿಕಡೆಗೆ ॥20॥

ವೇದಮೂರನು ಕಲಿತು ನೀನು ವಿ- । ವಾದಮಾಡಲು ಯೋಗ್ಯನೆನುತ ವಿ- । ನೋದದಿಂದಲಿ ಬಂದೆವೈ ನಿನ್ನೆಡೆಗೆ ನಾವೀಗ ॥
ವಾದಮಾಡಲು ಬೇಕು ಯಿಲ್ಲವೆ । ಭೇದವಿಲ್ಲದೆ ಹಾರಿಪತ್ರವ । ಸಾದರದಿ ಕೊಡಬೇಕೆನುತ ಬಿನ್ನೈಸಿದರು ದ್ವಿಜರು ॥21॥

ಕೇಳುತಾದ್ವಿಜ ದರ್ಪವಚನವ । ಪೇಳ್ದನಾಗ ತ್ರಿವಿಕ್ರಮನು ನಾ । ಪೇಳಲಾರೆನು ವೇದ ಮೂರನು ವೇದ ವೊಂದನ್ನು ॥
ಭೂಲಲಾಮರು ನಿಮ್ಮ ವಂದಿಸಿ । ಪಾಲಿಸುವರೈ ಮಾನ ಪತ್ರವ । ಕೇಳು ವನವಾಸಿಗಳು ನಾವೀ ತಾಪಸಿಗಳಿಹೆವು ॥22॥

ಪಂಡಿತರು ನಾವೆನಲಿಕೀ ಪರಿ । ಭಂಡತನವೇ ಕೆಮಗೆ ಜಗದು- । ದ್ದಂಡ ಪಂಡಿತರೈ ನಿಮಗೆ ಸಾಷ್ಟಾಂಗ ವಂದಿಪೆನು ॥
ದಂಡಧಾರಿಯ ವೇಷದಲಿ ನಾ । ನುಂಡು ಸುಖದಲಿ ಕಾಲ ಕಳೆವೆನು । ಪಂಡಿತರ ಗುಣವೆಲ್ಲಿ ನಾವೀ ತಾಪಸಿಗಳೆಲ್ಲಿ ॥23॥

ವಾದದಲಿ ನಿಮ್ಮೊಡನೆ ಜಯಸಂ । ಪಾದನೆಯ ಮಾಡಿದರೆ ಯೆನಗೆ ವಿ- । ನೋದವಾಗದು ಸೋಲಲೆನಗೆ ವಿಷಾದವಾಗದಲಾ ॥
ವಾದನಿಪುಣರು ನೀವು ಶಾಸ್ತ್ರದ । ಭೇದವನು ತಿಳಿದವರು ತರ್ಕದಿ । ಕಾದಲಾರೆವು ನಿಮ್ಮೊಡನೆ ನಾವಜ್ಞ ಹೇಡಿಗಳು ॥24॥

ಎಂದ ಮುನಿವಚನವನು ಕೇಳ್ದರು । ಮಂದಭಾಗ್ಯರು ದ್ವಿಜರು ಬಳಿಕಿಂ- । ತೆಂದರಾ ಮುನಿಯೊಡನೆ ದರ್ಪೋಕ್ತಿಯಲಿ ಮಾತುಗಳಾ ॥
ಇಂದು ಕೇಳೀ ರಾಷ್ಟ್ರ ಸರ್ವವ । ಬೆಂದು ಬಳಲುತ ತಿರುಗಿದೆವು ನಾ- । ವೆಂದು ಕಾಣೆವು ನಾದನಿಪುಣರನೆಮ್ಮ ಸರಿಯವರಾ ॥25॥

ನೋಡಿರಗಣಿತ ಹಾರಿಪತ್ರಗ- । ಳಾಡಲೇನದು ನಿಮ್ಮೊಡನೆ ಬಹು । ಗಾಢವಿಹುದ್ಯೆ ವೇದತರ್ಕಜ್ಞಾನವೆಮ್ಮೊಡನೆ ॥
ಬೇಡುವೆವು ನಿಮ್ಮೊಡನೆ ವಾದವ । ಬೇಡವಾದರೆ ಹಾರಿಪತ್ರವ । ನೀಡು ನಿನ್ನ ಭಿಮಾನಕಾಂಬೆನು ಯೆಂದರಾದ್ವಿಜರು ॥26॥

ಪರಿಪರಿಯೊಳಾ ದ್ವಿಜರಿಗಾ ಮುನಿ- । ವರನು ಹಿತಗೋಷ್ಟಿಗಳ ಪೇಳ್ದರೆ । ತಿರುತಿರುಗಿ ಗರ್ವದಲಿ ವಿಪ್ರರು ಪತ್ರಬೇಡಿದರು ॥
ಉರಿವದೀಪದ ಜ್ವಾಲೆಯುರುಬೆಯ । ನರಿಯಲಾರದು ಬಡ ಪತಂಗವು । ಮರಣವನು ಕರೆಯುವದು ದೀಪವನುಂಗಲೆತ್ನಿಸಲು ॥27॥

ಅರೆಗಳಿಗೆ ಯೋಚಿಸುತಲಾ ಮುನಿ- । ವರನುಪಾಯವ ಚಿಂತಿಸುತ ಭೂ- । ಸುರರಿಗೆಂದನು ಮಾನಪತ್ರವ ನಿಮಗೆ ನಾನೀವೆ ॥
ಭರದಿ ನೀವೆಮ್ಮೊಡನೆ ಗಾಣಗ- । ಪುರಕೆ ನಡೆಯಿರಿಯಲ್ಲಿ ಯೆನ್ನಯ । ಗುರುವರನು ವಾಸಿಪನು ಗುರುಸನ್ನಿಧಿಯೊಳಾನೀವೆ ॥28॥

ಹಾರಿಪತ್ರವ ಕೊಡುವೆನಥವಾ । ತೋರಿಸುವೆ ನಾ ವಾದಶಕ್ತಿಯ । ಧಾರುಣಿಯೋಳಾ ಗುರುವರನ ಮಹಿಮೆಯನು ಬಣ್ಣಿಸೆನು ॥
ಭಾರಿ ಸಂತಸವಾಯ್ತು ದ್ವಿಜರಿಗೆ । ದಾರಿ ಹಿಡಿದರು ಗಾಣಗಾಪುರ- । ಕೇರಿದರು ದಂಡಿಗೆಯಲಾ ಮದಯುತರು ಬ್ರಾಹ್ಮಣರು ॥29॥

ಕಾಲುನಡೆಯಲಿ ತೆರಳಿದನು ಮುನಿ । ಲೋಲ ಹಿಂದಕೆ ದ್ವಿಜರು ಕೇಳಾಂ- । ದೋಲಿಕೆಯಲೇ ಕುಳಿತು ಬಂದರು ಗಾಣಗಾಪುರಕೆ ॥
ಕೇಳುಶಿಷೋತ್ತಮನೆ ಮುನಿಯನು । ಕಾಲುನಡೆಸಲಿ ನಡಿಸಲಾ ಯಮ-। ನಾಲಯದ ಹಾದಿಯನು ಹಿಡಿದರು ದ್ವಿಜರು ಮದಯುತರು ॥30॥

ಆ ನೃಸಿಂಹಸರಸ್ವತಿಯ ಸು- । ಸ್ಥಾನ ಭೀಮಾ ತೀರದಲ್ಲಿಹ । ಗಾಣಗಾಪುರವರಕೆ ಬಂದನು ಮುನಿ ತ್ರಿವಿಕ್ರಮನು ॥
ತಾನು ಗುರುಚರಣಕ್ಕೆ ವಂದಿಸಿ । ಸಾನುರಾಗದಿ ಸ್ತುತಿಸತೊಡಗಿದ- । ನೇನಹೇಳುವೆನವನ ಭಕ್ತಿಯ ಭಾವಸಂಕಲ್ಪ ॥31॥

ಜಯತುಜಯತು ಜಗದಾದಿಪುರುಷನೆ । ಜಯತು ನಿರ್ಗುಣ ನಿರ್ವಿಕಾರನೆ । ಜಯತು ತ್ರೈಮೂರ್ತಿಯೆ ಸದಾ ನೀ ಭಕ್ತವತ್ಸಲನೆ ॥
ಜಯತು ದೀನರ ರಕ್ಷಕನೆ ಭವ । ಭಯದ ರೋಗದ ಸರ್ಪಗಾರುಡಿ । ಜಯತು ನಿನ್ನಯ ಚರಣದರ್ಶನ ದುರಿತಸಂಹರಣ ॥32॥

ಮೂಢತನದಲಿ ನಿನ್ನ ಮಹಿಮೆಯ । ನೋಡಲಾರರು ಮಂದಭಾಗ್ಯರು । ರೂಢಿಯಲಿ ಕೇಳವರೆ ನರಕಕೆ ಪಾತ್ರರಾಗುವರು ॥
ಹಾಡಲಾರೆನು ನಿನ್ನ ಮಹಿಮೆಯ । ನಾಡಲಾರೆನು ನಿನ್ನ ಲೀಲೆಯ । ಜೋಡಿಸುವೆ ಮಸ್ತಕವ ನಿನ್ನಯ ಚರಣ ಕಮಲದಲಿ ॥33॥

ಕೊರಳ ಸೆರೆ ಹಿಗ್ಗಿದವು ಕಣ್ಣಲಿ । ಸುರಿಯಿತಾನಂದಾಶ್ರುಧಾರೆಯು । ಚರಣಸ್ಪರ್ಶದಿ ರೋಮಪುಳಕವು ಜನಿಸಿದುದು ಮುನಿಗೆ ॥
ಗುರುವನು ಭಾರತಿಯ ತಾ ಬಹು । ಕರುಣದಲಿ ತಾನೆತ್ತಿಯಪ್ಪುತ । ತಿರುತಿರುಗಿ ಕೇಳಿದನು ಯೋಗಕ್ಷೇಮ ಸಂತಸದಿ ॥34॥

ಗುರುವರನ ನುಡಿ ಕೇಳಿ ಮುನಿವರ- । ನರುಹಿದನು ಕೇಳಿವರು ವಿಪ್ರರು । ಗರುಹದಲಿ ಬಂದಿಹರು ವೇದಾರ್ಥದಲಿ ಪಂಡಿತರು ॥
ಬರುವುದಿವರಿಗೆ ತರ್ಕಭಾಷ್ಯವು । ಯಿರುವುದೈ ಜಿಹ್ವೆಯಲಿ ವಾದವು । ಧರೆಯೊಳಿವರ ಸಮಾನರನು ನಾ ಕಾಣೆ ವಾದದಲಿ ॥35॥

ಹಲವು ಜಯಪತ್ರಗಳ ತಂದಿಹ- । ರಲಘುವಿದ್ಯಾವಾದ ನಿಪುಣರು । ತೊಲಗರೆನ್ನನು ಹಾರಿ ಪತ್ರವ ಬೇಡುವರು ನಿಜದಿ ॥
ತಲೆಗೆ ಮದವೇರಿಹುದು ವಾದದ । ಬಲೆಗೆಯನ್ನನು ಹಿಡಿದೆಳೆವರೈ । ತಿಳಿಯದವರೊಳು ವಾದ ಮಾಡಲಿಕೊಲ್ಲೆನಾನೆಂದು ॥36॥

ಕರೆದು ಕೊಂಡೀದ್ವಿಜರ ಬಂದಿಹೆ । ಗುರುವರನ ಚರಣದಲಿ ಮುಂದಿನ । ಪರಿಯ ನೀನೇ ಬಲ್ಲೆ ವಾದವೊ ಹಾರಿ ಪತ್ರಿಕೆಯೊ ? ॥
ಪರಮ ಸಂತೋಷದಲಿ ಶ್ರೀಗುರು- । ವರನು ದ್ವಿಜರಿಗೆ ನಗುತ ಪೇಳ್ದನು । ಬರಿದೆ ಗರ್ವವು ಸಲ್ಲದೈ ಗರ್ವದಲಿ ಕೆಡಹುದು ॥37॥

ವಾದಮಾಡಲುಬೇಡ ನೀವ್ ಸಂ- । ಪಾದಿಸುವಿರೈ ಯೆಮ್ಮೊಡನೆ ನಾವ್ । ಹಾದಿಗೆಟ್ಟೀವನದಿ ಸಂಚಾರಿಸುವ ಯತಿವರರು ॥
ವಾದದಲಿ ಸೋತರೆಯು ಗೆದ್ದರು । ಭೇದವೆಳ್ಳನಿತಿಲ್ಲಯೆಮಗೆ ವಿ । ವಾದದಿಂ ಯತಿಯೊಡನೆ ಲಾಭವದೇನು ನಿಮಗಿಹುದು ॥38॥

ಗುರುವಚನ ಕೇಳಿದರು ವಿಪ್ರರು । ಭರದಿ ಪ್ರತ್ಯುತ್ತರವನಿತ್ತರು । ಧರೆಯೊಳಗೆ ಸಂಚಾರ ಮಾಡೀ ಪತ್ರ ಗಳಿಸಿದೆವು ॥
ಸರಿಯವರ ನಾ ಕಾಣೆ ವಾದದಿ । ತೆರೆದು ನೋಡಿ ಪತ್ರಗಳನೀ । ತೆರದಿ ಪತ್ರವನೊಂದ ಬೇಡಲು ಮುನಿಯು ಮುನಿಸಿನಲಿ ॥39॥

ಕರೆದು ಯೆಮ್ಮನು ತಂದಿಹನು ಪುರ- । ವರದಿ ನಿನ್ನಯ ಸನ್ನಿಧಿಯಲಾ- । ನೊರೆವೆ ನಿನಗಭಿಮಾನವುಳ್ಳರೆ ವಾದ ಮಾಡುವುದು ॥
ತೊರೆದರಭಿಮಾನವನು ನೀವಾ- । ಪರಿಯಲೀವುದು ಹಾರಿ ಪತ್ರವ । ಬರಿದೆ ಕಾಲ ಕಳೆಯುವರೆ ಸವಡಿಲ್ಲ ಯೆಮಗೀಗಾ ॥40॥

ವೇದ ನಾಲ್ಕನು ಶಾಸ್ತ್ರವ್ಯಾಕರ- । ಣಾದಿಗಳ ನಾವ್ ಬಲ್ಲೆವೈ ನೀ । ನಾದರದಿ ಯೆಮ್ಮೊಡನೆ ವಾದವ ಮಾಡಬೇಕೆಂದು ॥
ಸಾದರವ ಮಾಡುವೆವು ನಿಮಗೆ ವಿ । ಷಾದವಾದರೆ ಹಾರಿ ಪತ್ರದ । ಹಾದಿಯನು ನೋಡುವೆವು ವೇದಾಂತವನು ಕಲಿತಿಹೆವು ॥41॥

ಗುರುವರನು ದ್ವಿಜವಚನ ಕೇಳುತ । ಅರುಹಿದನು ಕರುಣದಲಿ ನಿಮಗೀ । ಗರುವ ಸಲ್ಲದು ಗರ್ವ ಸರ್ವರ ಹಾನಿಕಾರಕವು ॥
ಗರುವದಲಿ ಬಲಿ ನಾಶವಾದನು । ಗರುವದಲಿ ದಶಶಿರನು ಕೆಟ್ಟನು । ಗರ್ವದಲಿ ದುರ್ಯೋಧನನು ಯಮನೂರ ಸೇರಿದನು ॥42॥

ಗರುವದಲಿ ಬಾಣಾಸುರನು ಯಮ । ಪುರವ ಹೊಕ್ಕನು ಧರಣಿಯಲಿ ಯಾ- । ರಿರುವರೈ ವೇದಾಂತವನು ಬಲ್ಲವರು ನಿಜವಾಗಿ ॥
ಸರಸಿಜಾಸನನರಿಯನಿದ ಮಿ- । ಕ್ಕಿರುವ ಮಾನವರೇನ ಬಲ್ಲರು । ಗರುವದಲಿ ಕೆಡಬೇಡಿ ಹಿತವನು ಪೇಳ್ವೆ ನಾ ನಿಮಗೆ ॥43॥

ಕೇಳಿದರೆ ನಿಮಗೊಂದು ಮಾತನು । ಪೇಳುವೆನು ಸಿಟ್ಟಾಗದಿರಿ ನಿ- । ಮ್ಮಾಲಯಕೆ ಸಂಭ್ರಮದಿ ನಡೆಯಿರಿ ವಾದದಿಚ್ಛೆಯನು ॥
ತಾಳದಿರಿ ಮನದಲ್ಲಿ ಹಿತವಿದ- । ನಾಲಿಸಿರಿ ನೀವೇಳಿ ನಡೆಯಿರಿ । ಕಾಲನನು ಕೆಣಕದಿರಿ ತಾಪಸಮನದ ಕೋಭದಲಿ ॥44॥

ಪಥ್ಯವಾಗದೆ ಗುರುವಚನವಿದು । ವ್ಯರ್ಥದಲಿ ದಂಭವನು ಹೊಡೆದರು । ಗೊತ್ತಿಹುದು ಮೂರ್ವೇದ ಭಾಷ್ಯವು ತರ್ಕವ್ಯಾಕರಣಾ ॥
ಮತ್ತೆ ಸಾಂಗೋಪಾಂಗ ಸಂಹಿತೆ । ಗೊತ್ತಿಹುದು ತಮಗೆಂದು ಗುರುವಿಂ- । ಗುತ್ತರವನಾದ್ವಿಜರು ದರ್ಪೋಕ್ತಿಯಲಿ ಕೊಟ್ಟರಲಾ ॥45॥

ಎಂದು ಗರ್ವೋಕ್ತಿಯನು ಕೇಳುತ । ಮಂದಹಾಸದಿ ಗುರುವು ದ್ವಿಜರಿಗೆ । ಚಂದದಿಂದಲಿ ವೇದಗಳ ಬಣ್ಣಿಸಿದನೇನೆಂಬೆ ॥

ಮುಂದಿನಧ್ಯಾಯದಲಿ ವಿಸ್ತರ- । ದಿಂದ ಪೇಳುವೆನದನು ಸಂತಸ- । ದಿಂದ ಕೇಳುವುದೆಂದು ಪೇಳ್ದನು ವಿಷ್ಣು ಗುರುಮೂರ್ತಿ ॥46॥

॥ ಅಧ್ಯಾಯ 25 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 26

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ವಾದ ಮಾಡಲು ಬಂದ ದ್ವಿಜರಿಗೆ । ವೇದರಚನೆಯ ಹೇಳಿ ಬುದ್ಧಿಯ । ವಾದವನು ಪೇಳಿದನು ಶ್ರೀಗುರು ವಾದ ಬೇಡೆಂದು॥

ಗುರುಚರಣಸದ್ಭಕ್ತಿ ಸಕ್ಕರೆ- । ಯರಿಯಿರೈ ಸವಿಯಿರುವದೆಂಬುದ । ನರರು ಕಾಮಕ್ರೋಧಲೋಭಜ್ವರದಿ ಪೀಡಿತರು ॥
ಗುರುಕೃಪಾಂಜನ ಸುರಿಯೆ ಕಣ್ಣಿಲಿ । ಹರಿಸುವುದು ಮೂರ್ದೋಷಗಳ ನಿಜ । ಬರುವುದೈ ನಾಲಿಗೆಗೆ ಸವಿರುಚಿ ಗುರುಪ್ರಸಾದದಲಿ ॥1॥

ಭ್ರಾಂತಿ ಯೇತಕೆ ನಿಮಗೆ ನಿಜ ವೇ । ದಾಂತ ಬಲ್ಲವರಾರು ತ್ರಿಜಗದೊ- । ಳಂತವಿಲ್ಲ್ಯ ವೇದಶಾಸ್ತ್ರಕೆ ನೀವ್ ವಿಚಾರಿಸಿರಿ ॥
ಅಂತವನು ಕಾಣನು ವಿರಂಚಿಯು । ಯೆಂತು ಬಲ್ಲಿರಿ ಸಕಲ ವೇದವ । ನೆಂತು ವಾದವ ಬಯಿಸುವಿರಿ ನೀವೆಂದನಾ ಗುರುವು ॥2॥

ಧರಣಿಯಲಿ ಶ್ರೀವಿಷ್ಣು ತಾನವ- । ತರಿಸಿದನು ಶ್ರೀವ್ಯಾಸನಾಮದಿ । ತರಿಸಿದನು ವೇದಗಳ ವೇದವ್ಯಾಸನೆನಿಸಿದನು ॥
ಹರಿಯಲಾಗದು ಬಗೆಯುವಗೆ ವಿ । ಸ್ತರಿಸಲಾರನು ಸಕಲ ವೇದವ- । ನರುಹಿದನು ಸಾಧಾರಣದಿ ವೇದಾರ್ಥಸಾರುವನು ॥3॥

ಇದ್ದರಾ ವ್ಯಾಸನಿಗೆ ನಾಲ್ವರು । ಮುದ್ದು ಶಿಷ್ಯರು ಪೈಲ ಮೊದಲನೆ । ಯಿದ್ದನೆರಡನೆಯವನು ವೈಶಂಪಾಯನೆಂಬವನು ॥
ಶುದ್ಧ ಜೈಮಿನಿ ಮೂರನೆಯವ । ನಿದ್ದನೈ ನಾಲ್ಕನೆ ಸುಮಂತನು । ಬುದ್ಧಿವಂತರು ವೊಬ್ಬರಿಂದೊಬ್ಬರು ಕಣಾ ತಿಳಿಯೆ ॥4॥

ವೇದಗಳನೆಲ್ಲವನು ಕಲಿಯಲು । ಸಾಧಿಸದು ನಿಮ್ಮೆಲ್ಲರಿಗೆ ನಾ । ಬೋಧಿಪೆನು ಒಂದೊಂದು ವೇದವ ಕಲಿತುಕೊಳಬೇಕು ॥
ಆದಿ ಅಂತ್ಯವಿಹೀನವಿದು ನಿಜ । ವೇದವೆಂಬುದಪಾರಸಾಗರ । ವಾದ ಮಾಡಲು ಶಕ್ಯವೇ ನಿಗಮಾಗಮದ ಸಾರಾ ॥5॥

ಕೋಟಿಕಲ್ಪಾಯುಷ್ಯವಾದರು । ಪಾಠವನು ದಿನದಿನಕೆ ಮಾಡಲು । ಕೋಟಿ ಕಲ್ಪಾಂತ್ಯದವರೆಗೆ ಬ್ರಹ್ಮಾಶ್ರಮದೊಳಿರಲು ॥
ಪಾಠ ಮಾಡಲಶಕ್ಯ ವೇದಗ- । ಳೈಟಿನಿಂದಲಿ ಹೇಳಬೇಡಿರಿ । ಯಾಟವಲ್ಲಾ ಸರ್ವವೇದಾಭ್ಯಾಸ ಮಾನವಗೆ ॥6॥

ಭಾಸುರದ ವೇದಗಳನವನ । ಭ್ಯಾಸಮಾಡಲು ಯತ್ನಿಸಿದಯೋ । ಗೀಶ ಭಾರದ್ವಾಜನತಿ ವಿಖ್ಯಾತ ನೀ ಜಗದಿ ॥
ಲೇಶವಾದರು ಬಾರದವನು ನಿ- । ರಾಶನಾದನು ಮೇಣು ಬಹಳಾ- । ಯಾಸದಿಂದಲಿ ಬ್ರಹ್ಮನನು ವೊಲಿಸಿದನು ತಪವೆಸಗಿ ॥7॥

ವರವ ಬೇಡೆನಲಾ ವಿರಂಚಿಯು । ವರವ ಬೇಡಿದನಾ ಮುನೀಶ್ವರ । ಕರುಣಿಸೆನಗೈ ಬುದ್ಧಿ ಶಕ್ತಿಯ ಸರ್ವವೇದಗಳಾ ॥
ಚರಣಕೆರಗುವೆ ನಿನಗೆ ಸುಲಭದಿ । ಪರಮ ವೇದಾಂತವನು ತಿಳಿಯುವ । ಪರಿಯ ಬೆಸಗೊಳಬೇಕೆನುತ ಮುನಿನುಡಿದನುತ್ತರವಾ ॥8॥

ನಸುನಗುತ ಮಾರುತ್ತರವನಾ । ಋಷಿಗೆ ಕೊಟ್ಟನು ವಾರಿಜಾಸನ । ಮಿಸುಕಲಾರದು ನಿನಗೆ ವೇದಾಭ್ಯಾಸವೀ ತೆರದಿ ॥
ಅಸದಳವು ಪಶುಪತಿಗೆ ಸರ್ವವ । ನುಸುರಲಾರೆನು ಕಾಣೆನಂತ್ಯವ । ತುಸುವೆನುತ ಮನಮಾಡಿದೆಯೊ ನಾ ತೋರಿಸುವೆ ನಿನಗೆ ॥9॥

ತೋರಿಸುವೆ ನಾ ಸಕಲವೇದವ । ಪಾರಗಾಣದ ಸಾಗರವು ಕೇ । ಳಾರಿಗಿದು ಸಾಧ್ಯವೆ ಕಣಾ ನೀ ನೋಡು ಮನದಣಿಯೆ ॥
ತೋರಿಸಿದನಾ ವೇದರಾಶಿಯ । ಮೇರುಪರ್ವತದೋಲು ಕಂಡನು । ಮೂರುವೇದಗಳೆಸಗಿದವು ಕೇಳ್ಮೂರುಗಿರಿಯಾಗಿ ॥10॥

ತರಣಿಶತ ಕೋಟಿಪ್ರಕಾಶದಿ । ಮೆರೆಯುವವು ಗಿರಿಮೂರು ಮನದಲಿ । ಬೆರಗಿದನು ಬೆಂಡಾಗಿ ನುಡಿದನು ಮುನಿಯು ಬ್ರಹ್ಮನಿಗೆ ॥
ಗಿರಿಮಯಗಳಾಗಿಹವು ವೇದಗ- । ಳರರೆ ಕಲಿಯಲಸಾಧ್ಯವೆನಗಿದು । ತೆರೆಯಲಾರೆನು ಕಣ್ಣನೆಂದನು ಮುನಿ ಭರದ್ವಾಜಾ ॥11॥

ನೂರುಬ್ರಹ್ಮನ ಕಲ್ಪತನಕ ವಿ- । ಚಾರ ಮಾಡಲು ಬ್ರಹ್ಮಚರ್ಯದಿ । ತೋರಲಾರದು ವೇದಗಳ ಕೊನೆ ನಿಜದಿ ಕಲಿಯುವರೆ ॥
ಯಾರಿಗಾದರುಯಿಹುದೆ ಸಾಧ್ಯವು । ವಾರಿಜಾಸನ ನೀನೆ ಬಲ್ಲೆ ವಿ- । ಚಾರವಾಗದದೆನಗೆ ಮೂಢನಿಗೇನು ಹೇಳುವೆನು ॥12॥

ನಾನು ತಿಳಿಯದೆ ವೇದಮಹಿಮೆಯ । ಮಾನನಿಧಿ ಬೇಡಿದೆನು ನಾನ । ಜ್ಞಾನಿ ಮೂಢನು ಬಾಲ ಬೇಡುವ ತೆರದಿ ಶಶಿಮಣಿಯಾ ॥
ನೀನು ಶರಣಾಗತರ ವತ್ಸಲ । ಕಾಣೆ ನಿನ್ನಿಂ ಹೊರತು ದೇವರ । ನೀನು ಕ್ಷಮಿಸಲುಬೇಕು ಬಾಲನ ದರ್ಪವಚನಗಳಾ ॥13॥

ಭೀತಿಯಾಯಿತು ಮನದೊಳೆನಗಿ- । ನ್ನೇತಕ್ಕೆ ಹವ್ಯಾಸ ವೇದದ । ಪ್ರೀತಿಯಲಿ ನೀನಿತ್ತುದನು ನಾ ಕೊಳ್ಳುವೆನು ಮುದದಿ ॥
ಸೋತೆ ನಿನ್ನಯ ಮಹಿಮೆಯಗಣಿತ । ಮಾತನಾಡನು ಸರ್ವವೇದದ । ದಾತ ನೀನೇ ಯೆನುತ ಭಾರದ್ವಾಜಮುನಿ ನುಡಿದಾ ॥14॥

ನುಡಿಯ ಕೇಳುತ ಬ್ರಹ್ಮದೇವನು । ಕಡು ಮಮತೆಯಲಿ ಮುನಿಗೆ ಕೊಟ್ಟನು । ಹಿಡಿ ಯೆನುತ ಮುಷ್ಟಿಗಳ ಮೂರನು ವೇದಮಂತ್ರಗಳಾ ॥
ಪೊಡವಿಯೊಳು ಮೂರ್ವೇದಗಳು ಕೇ । ಳ್ಜಡಜಭವನಾಜ್ಞೆಯಲಿ ಬಂದವು । ಬಿಡದೆ ಭಾರದ್ವಾಜನಾಗಳೆ ಪಠಣ ಮಾಡಿದನು ॥15॥

ಮುನಿ ಭಾರದ್ವಾಜನಿಗೆ ಪೂರ್ಣತೆ । ಜನಿಸಲಾರದು ವೇದಪಠಣದಿ । ಮನುಜರನ್ಯರಿಗಸದಳವು ವೇದಾಂತ ಕಾಣುವರೆ ॥
ಮನದಿ ಯೋಚಿಸಿ ನಾನು ಪೇಳುವೆ । ನಿನಿತು ವೇದಚತುಷ್ಟಯವ ನೀಂ । ಮನದಿ ತಾರದಲೊಬ್ಬನೊಂದೇ ವೇದ ಪಠಿಸುವುದು ॥16॥

ಕಲಿಯುವರೆ ಕೇಳೊಂದು ವೇದವ- । ನಲಘುಯತ್ನವು ಬೇಕು ಮನದಲಿ । ವೊಲಿದು ವಿಸ್ತರಿಸುವೆನು ಸಂಕ್ಷೇಪದಲಿ ವೇದಗಳಾ ॥
ತಿಳಿಸಿಕೊಡುವೆನೆನುತ್ತ ತಾಪಸ । ಕುಲತಿಲಕ ಶ್ರೀವ್ಯಾಸ ಪೇಳ್ದನು । ನಲಿದರಾಗಲೇ ಶಿಷ್ಯನಾಲ್ವರು ತಿಳಿಸಬೇಕೆನುತಾ ॥17॥

ಕರುಣದಲಿ ಮೊದಲನೆಯ ಶಿಷ್ಯಂ- । ಗರುಹಿದನು ಪೈಲನಿಗೆ ವ್ಯಾಸನು । ಸರಸದಲಿ ಋಗ್ವೇದವನು ಋಗ್ವೇದ ಮಹಿಮೆಯನು ॥
ಅರುಹಿದನು ಧ್ಯಾನವನು ಪೈಲಗೆ । ವರಮುನೀಶ್ವರ ವ್ಯಾಸನತಿ ವಿ । ಸ್ತರದಲಾ ಪೈಲನಿಗೆ ಮಹದಾನಂದವಾಯ್ತಾಗ ॥18॥

ಪೇಳಿದನು ವ್ಯಾಸನಿಗೆ ಪೈಲನು । ಹೇಳು ನೀ ಗುರುಮೂರ್ತಿ ಯೆಮ್ಮ ವಿ- । ಶಾಲ ಸುರತರು ನೀನು ಮೊದಲಿನ ವೇದ ಪೇಳೀಗಾ ॥
ಪೈಲವಚನವ ಕೇಳ್ದು ತಾಪಸ । ಲೋಲ ವೇದವ್ಯಾಸ ಪೇಳ್ದನು । ಮೂಲ ಋಗ್ವೇದವನು ಮೂರ್ತಿಸ್ವರೂಪವರ್ಣಗಳಾ ॥19॥

ಇರುವುದೈ ಋಗ್ವೇದ ಮೊದಲನೆ । ಸರಸ ವೇದವು ಕೇಳು ಮತ್ತದ- । ಕಿರುವುದಾಯುರ್ವೇದವೆಂಬುಪವೇದ ಪ್ರಖ್ಯಾತಾ ॥
ಇರುವುದಾ ವೇದಕ್ಕೆ ಯತ್ರಿಯ । ಪರಮ ಶುದ್ಧಿಯ ಗೋತ್ರ ದೇವತೆ । ಸರಸಿಜಾಸನ ಬ್ರಹ್ಮ ಛಂದಸ್ಸಿಹುದು ಗಾಯತ್ರಿ ॥20॥

ರಕ್ತ ವರ್ಣದ ವೇದವಿದು ಕೇಳ್ । ನೇತ್ರಗಳು ಬಿಸರುಹದ ಕೋಮಲ । ಪತ್ರದಂದದಿ ಕಂಬುಕಂಠವು ಗ್ರೀವವಿಸ್ತೀರ್ಣಾ ॥
ಮಸ್ತಕದೊಳಾಕುಂಚ ಕೇಶವ । ಹೊತ್ತಿಹುದು ಸ್ಮಶ್ರುಪ್ರಮಾಣವು । ಮೂರ್ತಿಯಿಹುದೀ ಪರಿಯು ಋಗ್ವೇದಕ್ಕೆ ನೋಡಿದಡೆ ॥21॥

ಭೇದ ಹದಿನೆರಡಿಹವು ಈ ಋ- । ಗ್ವೇದಕಾಶ್ರಾವಕ ಶ್ರವಣ ಮೊದ- । ಲಾದೆರಡು ಭೇದಗಳು ಕೇಳು ಪರಾಕ್ರಮಿಗಳೆರಡು ॥
ಐದನೆಯ ಆರನೆಯ ಶಾಖಾ । ಭೇದ ಷಟ್ಕ್ರಮವೆಂದು ಪೇಳ್ವರು । ಭೇದವೇಳನೆ ದಂಡವೆಂತೀ ಯೇಳು ಶಾಖೆಗಳು ॥22॥

ಇರುವುದೆಂಟನೆಯಾಶ್ವಲಾಯನ । ತಿರುಗಿ ಶಾಖಾಯನ ನವಮ ವಿ- । ಸ್ತರಿಸುವೆನು ಮೇಣೆರಡು ಶಾಕಲಬಾಷ್ಕಲಾಶಾಖಾ ॥
ಇರುವುದೈ ಮಾಂಡೂಕ ಮೇಣ್ ಹದಿ- । ನೆರಡನೆಯ ಭೇದವು ಕಣಾ ನಿಮ- । ಗರುಹುವೆನು ಭೇದಗಳನೆಲ್ಲವತಿಳಿಯುವಂದದಲಿ ॥23॥

ಕಲಿಯುಗದೋಳೀ ಭೇದವೆಲ್ಲವ । ತಿಳಿದವರು ಯಾರಿಹರು ವೊಂದನು । ಕಲಿತವರ ನಾ ಕಾಣೆ ಲಕ್ಷಣರೂಪಸಂಯುಕ್ತ ॥
ಇಳೆಯೊಳಗೆ ವೇದಗಳ ನಾಲ್ಕನು । ಕಲಿತಿಹೆವು ತಾವೆನುತ ಪೇಳ್ವಿರಿ । ಫಲವ ಕಾಣೆನು ದರ್ಪವಚನದಿ ಮನದಿ ಯೋಚಿಸಿರಿ ॥24॥

ತೋಷದಿಂದಲಿ ಪೈಲ ಶಿಷ್ಯಗೆ । ವ್ಯಾಸರೂಪನು ವಿಷ್ಣುವೀಪರಿ । ಲೇಸಿನಿಂ ವಿಸ್ತರಿಸಿದನು ಋಗ್ವೇದಶಾಖೆಗಳಾ ॥
ಈಸುಪರಿಯಲಿ ಪೇಳ್ದ ದ್ವಾದಶ । ಭಾಸುರದ ಭೇದಗಳ ಸರ್ವ । ನ್ಯಾಸ ಪೂರ್ವಕ ಕಲಿಯುವರೆ ಜಗದೀಶನೇ ಬಲ್ಲಾ ॥25॥

ಸಾದರದಿ ನೀವ್ ಕೇಳಿರೆಂದಾ । ಬಾದರಾಯಣ ವಿಸ್ತರಿಸಿದನು । ವೇದವೆರಡನೆ ಕೇಳ್ ಯಜುರ್ವೇದವನು ಮೋದದಲಿ ॥
ವೇದಕಿದಕುಪವೇದ ಧಾನುಷ । ವೇದ ಭಾರದ್ವಾಜಗೋತ್ರವು । ಆದಿದೈವತ ರುದ್ರ ತ್ರಿಷ್ಟುಪ ಛಂದವಿದಕಿಹುದು ॥26॥

ಸ್ಥೂಲ ಕಿಂಚಿತ್ ಕೇಶ ಕರದಿ ಕ- । ಪಾಲಕಾಂಚನವರ್ಣ ಸುಮನೋ- । ಲೋಲ ಪಿಂಗಟ ನೇತ್ರ ದೇಹ ಶ್ವೇತ ಕೆಂಪಿಹುದು ॥
ಕೇಳು ವೈಶಂಪಾಯ ದೇಹ ವಿ- । ಶಾಲ ವೈದಾರತ್ನಿಯಿರುವುದು । ಪೇಳುವೆನು ಭೇದಗಳ ನೆಂಭತ್ತಾರು ಶಾಖೆಗಳು ॥27॥

ಚರಕೆಯಾಹೊರಕೇಯು ಮೂರನೆ । ಯಿರುವದೈ ಕಠೆ ಪ್ರಾಚ್ಯಕಠೆ ಮೇ- । ಣಿರುವುದು ಕಪಿಷ್ಠಲೆಯು ಕೇಳಾರನೆಚರಾಯಣಿಯೂ ॥
ಇರುವುದೇಳನೆ ವಾರತಂತ್ವಿಯು । ಇರುವುದೆಂಟನೆ ಶ್ವೇತತದನಂ- । ತರ ಕಿರುವುದೈ ಶ್ವೇತತರ ಮೈತ್ರಾಯಣಿಯು ದಶಮ ॥28॥

ಕೇಳು ಮೈತ್ರಾಯಣಿಯ ಶಾಖೆಗೆ । ಏಳು ಭೇದಗಳಿಹವು ನಿಮಗಿದ । ಪೇಳುವೆನು ಮಾನವಿಯು ದುಂದುಭಿ ಮೇಣು ಐಕೇಯಾ ॥
ಕೇಳಿರೈ ನಾಲ್ಕನೆ ವರಾಹೆಯು । ಬೀಳುವುದು ಹರಿದ್ರವೈ ಪಂಚಮ । ಕೇಳಿರಾರನೆಯ ಶ್ಯಾಮವೇಳನೆ ಶ್ಯಾಮಪಣಿಯೆನುತಾ ॥29॥

ಮೇಲೆ ವಾಜಸನೇಯ ಶಾಖೆಗೆ । ಕೇಳಿರೈ ಹದಿನೆಂಟು ಭೇದಗ- । ಳ್ಹೇಳುವೆನು ವಿಸ್ತರಿಸಿ ಭೇದಗಳೆಲ್ಲವನು ತಿಳಿದು ॥
ಕೇಳಿ ವಾಜಸನೇಯ ಮೇಣ್ಜಾ । ಬಾಲಕವು ಬಹುಧೇಯ ಮೂರನೆ । ನಾಲಕನೆ ವಿಖ್ಯಾತ ಶಾಖೆಯು ಕಣ್ವ ನಾಮಕವು ॥30॥

ಐದನೆಯ ಮಾಧ್ಯಂದಿನವು ಕೇ । ಳಾದುದೈ ಶಾವೀಯವಾರನೆ । ಭೇದಸ್ಥಾಪಾಯನಿಯು ಯೇಳನೆ ಎಂಟು ಕಾಪಾಲಾ ॥
ಭೇದವಾದವು ಪೌಂಡ್ರವತ್ಸವು । ಭೇದ ಹತ್ತನೆಯಾವಟಿಕೆ ಮೇಣ್ । ಭೇದ ಪರಮಪ್ರಿತ ಹನ್ನೊಂದನೆಯ ಭೇದವದು ॥31॥

ಮೆರೆವ ಪಾರಾಶರ್ಯ ಕೇಳ್ ಹದಿ- । ನೆರಡನೆಯ ಭೇದವು ಕಣಾ ಮೇ- । ಣಿರುವುದೈ ವರ್ಧೇಯ ಹದಿಮೂರನೆಯ ಭೇದ ಕಣಾ ॥
ಇರುವುದೈ ಮೇಲ್ ವೈನತೇಯವು । ಪರಮಔಖೆಯು ಗಾಲವವು ವೈ- । ಜರೆಯು ಹದಿನೆಳನೆ ತನಕ ವೀಪರಿಯ ಶಾಖೆಗಳು ॥32॥

ಕೇಳಿ ಹದಿನೆಂಟನೆಯ ಬೈಜವು । ಮೇಲೆ ವಾಜಸನೇಯ ಶಾಖೆಗೆ । ಮೇಲೆ ಪೇಳ್ ಹದಿನೆಂಟು ಶಾಖೆಗಳಿಹವು ತಿಳಿಯುವುದು ॥
ಮೇಲೆ ತೈತ್ತಿರೀಯ ಶಾಖೆಗೆ । ಕೇಳು ಭೇದಗಳೆರಡು ಮುಂದೆ ವಿ- । ಶಾಲ ಭೇದಗಳೌಖ್ಯ ಖಾಂಡಿಕ್ಯಗಳು ವಿಖ್ಯಾತಾ ॥33॥

ಇದಕೆ ಭೇದಗಳೈದು ಪೇಳುವೆ । ಮೊದಲಿಗಾಪಸ್ತಂಬ ವಿದರೊಳ- । ಗುದಿಸಿತೈ ಯಜ್ಞಾದಿಕರ್ಮವು ಜ್ಞಾನವಿಜ್ಞಾನಾ ॥
ಇದರ ಮೇಲ್ ಬೌಧಾಯನಿಯು ಮೇಣ್ । ಮುದದ ಸತ್ಯಾಷಾಢಿ ಮೂರನೆ । ಯದುಕಣಾ ಅಘನಾಶಿನಿಯು ನಾಲ್ಕನೆ ಹಿರಣ್ಯಕೇಶಿ ॥34॥

ಐದನೆಯದೌಖೇಯನಾಮಕ । ಭೇದವೀಪರಿ ಪಂಚಶಾಖೆಯು । ಮೇದಿನಿಯೊಳಾದವು ಕಣಾ ನೀಂ ಪಠಿಸು ಕ್ರಮವಾಗಿ ॥
ಆದವಿದಕೆ ಷಡಂಗಗಳು ನೀ- । ನಾದರದಿ ಪಠಿಸುವರೆ ಪೇಳ್ವೆನು । ಸಾಧಿಸಲಿಕಸದಳವು ಸರ್ವಾಭ್ಯಾಸ ವೇದಗಳಾ ॥35॥

ಇರುವವಾರಂಗಗಳು ಕೇಳ್ ವ್ಯಾ । ಕರಣ ಕಲ್ಪ ನಿರುಕ್ತ ಛಂದಸು । ಸರಸ ಜ್ಯೋತಿಷ ಶಿಕ್ಷೆ ವೇದಾಂಗಗಳು ಕಲಿಯುವರೆ ॥
ಇರುವವಿದಕೆ ಉಪಾಂಗವಷ್ಟಕ । ಪರಮ ಪ್ರತಿಪದ ಅನುಪದಾದಿಗ । ಳಿರುವವೈ ಛಂದಸ್ಸು ಭಾಷಾ ಧರ್ಮಮೀಮಾಂಸಾ ॥36॥

ಕರ್ಮಸಂಹಿತೆ ನ್ಯಾಯವೆಂಬೀ । ವರ್ಮಗಳ ನೀಂ ಬಲ್ಲಿರೇ ಸ- । ದ್ಧರ್ಮನಿಷ್ಠರೆಯಿರುವುದಷ್ಟಾವಿಂಶ ಪರಿಶಿಷ್ಟ ॥
ಹೆಮ್ಮೆಸಲ್ಲದು ಸರ್ವಥಾ ನೀ- । ವೊಮ್ಮೆ ನಡೆಯಿರಿ ಮನೆಗೆ ವೇದವ । ಬೊಮ್ಮನೊರ್ವನೆ ತಿಳಿವನಾದ್ಯಂತವನು ನಿಮಗರಿವೆ ॥37॥

ಮೇರುಪರ್ವತದೋಲು ಪೂರ್ವದಿ । ಭಾರಿ ವೇದದ ರಾಶಿಯತಿವಿ- । ಸ್ತಾರವಾಗಿರಲಿದನು ಕಲಿವವುಪಾಯ ಕಾಣದಲೆ ॥
ಬೇರೆಬೇರೀ ಶಾಖೆ ಭೇದವ । ತೋರಿಸಿದನೈ ವ್ಯಾಸ ತಾನು ಪ- । ಕಾರವನು ಮಾಡಿದನು ವೇದಾಧ್ಯಯನಮಾರ್ಗದಲಿ ॥38॥

ಕೇಳಿ ವೈಶಂಪಾಯ ನುಡಿದನು । ಕೇಳಿದೆನು ಗುರುವರ್ಯ ಸರ್ವವ । ಹೇಳಬೇಕೀ ವೇದಕಿರುತಿಹ ಶಾಖೆಭೇದದಲಿ ॥

ಮೂಲಶಾಖೆಯು ಯಾವುದಿರುವುದು । ಮೇಲೆ ಹೇಗಾಯ್ತೆಂಬ ಪರಿಯನು । ಹೇಳಬೇಕೆಂದೆರಗಿದನು ಮುನಿವ್ಯಾಸಚರಣದಲಿ ॥39॥

ಇಂತು ಪೇಳಿದ ವಚನವನು ಮುನಿ । ಸಂತಸದಿ ಕೇಳಿದನು ಬಳಿಕದ- । ಕಿಂತು ಪ್ರತ್ಯುತ್ತರವನಿತ್ತನು ಶಿಷ್ಯರಾಜನಿಗೆ ॥

ಮಂತ್ರ ಬ್ರಾಹ್ಮಣ ಸಂಹಿತೆಗಳೇ । ಕಾಂತವಾಗಲು ಮೂಳ ಶಾಖೆಯ । ಬಂತಿದಕೆ ಕೇಳ್ನಾಮ ಯಜ್ಞಾದಿಗಳ ಬೀಜವಿದು ॥40॥

ಕೇಳು ಗ್ರಂಥತ್ರಯಗಳಿರುವವು । ಮೇಲೆ ಸಂಹಿತೆಗಿರುವವಷ್ಟಕ । ಪೇಳು ವಿಸ್ತಾರಿಸುವೆನೆಲ್ಲವ ನಿಮಗೆ ಮೋದದಲಿ ॥

ಹೇಳುತೀಪರಿ ಬಾದರಾಯಣ । ಪೇಳಿದನು ವಿಸ್ತರದಿ ವೇದದ । ಮೂಲ ಪ್ರಶ್ನಗಳನ್ನು ಅನುವಾಕಗಳನೆಲ್ಲವನು ॥41॥

ಮೂರನೆಯ ವರಶಿಷ್ಯ ಜೈಮಿನಿ- । ಯಾರಿಸಿದನಾ ಸಾಮವೇದವ । ಭೂರಿ ಸಂತಸದಿಂದ ವ್ಯಾಸನು ವಿಸ್ತರಿಸಿದನಲಾ ॥

ತೋರುವುದು ಉಪವೇದ ಗಾಯನ । ಚಾರು ಕಶ್ಯಪಗೋತ್ರವಿದಕಾ- । ಧಾರದೈವತ ವಿಷ್ಣು ಪರಮಪವಿತ್ರ ನೋಡಿದರೆ ॥42॥

ಇರುವದೈ ಛಂದಸ್ಸು ಜಗತಿಯು । ತಿರುಗಿ ನಿತ್ಯಸ್ರಗ್ವಿ ಛಂದವು । ಧರಿಸಿಹುದು ಶುಚಿವಸ್ತ್ರ ಪ್ರಾವರ್ಣವನು ಕ್ಷೌಮವನು ॥

ಕರದಿ ದಂಡವ ಧರಿಸಿ ಮೇಣಾ । ಕರಿಯ ಚರ್ಮವ ಹೊದ್ದು ಸೂರ್ಯನ । ಕಿರಣದಂದದಿ ಮೆರೆಯುತಿದೆ ಕೇಳ್ ವರ್ಣಕಾಂಚನವು ॥43॥

ಕರ್ಣಪರ್ಯಂತಿರುವ ನಯನದ । ರತ್ನಿಯಾರರ ದೀರ್ಘಮಾನದ । ವರ್ಣ ರೂಪವ ಸಾಮವೇದದ ತಿಳಿಯಿರೈ ನೀವು ॥

ವರ್ಣಸಲಿಕ ಸದಳವು ಭೇದವ । ನಿರ್ಣಯಿಸಲಾರಿಹರು ಶಕ್ಯರು । ವಿಷ್ಣು ನಿನ್ನ ಹೊರತಿದನು ತಿಳಿಯರು ವೇದಭೇದಗಳಾ ॥44॥

ಅರಿಯಿರಿದನೆಲ್ಲವನು ನಾ ನಿಮ- । ಗರುಹುವೆನು ಸಂಕ್ಷಿಪ್ತ ಪರಿಯಲಿ । ಮೆರೆವವಖಿಲ ಸಹಸ್ರ ಭೇದಗಳೆಂದು ಪೇಳುವರು ॥

ಇರುವುವಸುರಾಯಣಿಯು ಮೊದಲಾ-। ಗಿರುವ ಭೇದಗಳೇಳು ಯಿದರೊಳು । ಯಿರುವವಾರಾಯಣಿಯ ಭೇದಕೆ ಹತ್ತು ಭೇದಗಳು ॥45॥

ಪೂರ್ಣತೆಯಲೀ ಸಾಮವೇದವ । ಕ್ಷೋಣಿಯಲಿ ಬಲ್ಲವರ ಕಾಣೆನು । ಜಾಣತನವನು ತೋರಿಸುವಿರ್ರೈ ನಾಲ್ಕು ವೇದದಲಿ ॥
ಕೇಣವಿಲ್ಲದೆ ಮನೆಗೆ ನಡೆಯಿರಿ । ಮಾನಿಸಿರಿ ನಾ ಪೇಳ್ವ ನುಡಿಯೆ- । ನ್ನಾಣೆ ಗರ್ವವು ಸರ್ವ ಹರಿಪುದು ಯೆಂದನಾ ಗುರುವು ॥46॥

ಇರುವುದೈ ನಾಲ್ಕನೆಯಥರ್ವಣ । ಇರುವುದಿದಕು ಪವೇದ ಮಂತ್ರದ । ಸರಣಿಯಧಿದೈವತವು ಯಿಂದ್ರನು ಗೋತ್ರ ವೈಜ್ಞಾನ ॥
ಇರುವುದೈ ಛಂದಸ್ಸನುಷ್ಟುಪು । ಮೆರೆವುದೈ ಬಹುಕ್ರೂರ ಕಣ್ಣುಗ- । ಳಿರುವ ಬಹುಕೃಷ್ಣವರ್ಣ ಶರೀರ ನೋಡಿದರೆ ॥47॥

ನಿರತ ಕರ್ಮವು ಕ್ಷುದ್ರ ಬಹು ಸುಂ- । ದರನು ಕಾಮನ ರೂಪವಿದಕಿ- । ನ್ನಿರುವದಿದಕೆ ಸ್ವದಾರವೆಂಬುವ ಹೆಸರು ಲೋಕದಲಿ ॥
ಧರೆಯೊಳಗೆ ಜಲಮೂರ್ಧ್ನಿ ಗಾಲವ । ಕರೆವರಿದನಾ ವಿಶ್ವಸೃಜಕದ । ಪರಮ ಸಾಧಕಕರ್ಮವೀ ವೇದಕ್ಕೆ ನೋಡಿದರೆ ॥48॥

ಇರುವವಿದಕೊಂಭತ್ತು ಭೇದಗ- । ಳರುಹಿದನು ವ್ಯಾಸನು ಸುಮಂತಗೆ । ಅರಿಯಿರೈ ಭೇದಗಳ ಪೈಪಲ ದತ್ತ ಪ್ರಾದಾಂತಾ ॥
ತಿರುಗಿ ಸ್ತೋತಾ ಬ್ರಹ್ಮದಬಲದ । ಇರುವುದೌತಾ ಭೇದ ಸೌನಳಿ । ಮರಳಿ ಶೌನಕದೇವ ಕಡೆಗಿದು ಚರಣವಿದ್ಯೆಯಿದು ॥49॥

ವ್ಯಾಸನೀಸರಿ ಶಿಷ್ಯರಿಂಗು- । ಲ್ಲಾಸದಿಂ ವೇದಗಳನೆಲ್ಲ ಪ್ರ- । ಕಾಶಿಸಿದನೈ ಭರತಖಂಡದಿ ಪುಣ್ಯಭೂಮಿಯಲಿ ॥
ಭಾಸಿಸಿತು ವರ್ಣಾಶ್ರಮದ ಕ್ರಮ । ಭೂಸುರರು ಕಲಿಯುಗದಿ ಮರೆತರು । ನಾಶವಾಯಿತು ಧರ್ಮಕರ್ಮವು ವೇದದಭ್ಯಾಸಾ ॥50॥

ಭ್ರಷ್ಟರಾದರು ದ್ವಿಜರು ಮದದಲಿ । ಕೊಟ್ಟರಾ ಯವನರಿಗೆ ವೇದದ । ಯಿಷ್ಟ ಬೀಜವ ದ್ವಿಜರ ಸತ್ವವು ನಷ್ಟವಾಯಿತಲಾ ॥
ನಷ್ಟವಾಯಿತು ತೀಕ್ಷ್ಣಬುದ್ಧಿಯು । ಶ್ರೇಷ್ಠತನವೀ ವೇದಬಲದಲಿ । ಸೃಷ್ಟಿಯಲಿ ಬ್ರಾಹ್ಮಣರಿಗಾಯಿತು ಪೂರ್ವಕಾಲದಲಿ ॥51॥

ಭೂಸುರರು ದ್ವಿಜರೆಂದು ಸರ್ವರು । ಘೋಷಿಪರು ಮೂಜಗದೊಳದರಿಂ । ತೋಷಿಸುವರಾ ದ್ವಿಜರನೆಲ್ಲರು ರಾಜವಲ್ಲಭರು ॥
ಭೂಸುರರು ದಕ್ಷಿಣೆಯ ದಾನದ । ಪಾಶದಲಿ ಸಿಕ್ಕವರ ಲೋಭದಿ । ನಾಶ ಮಾಡಿದರೇನ ಹೇಳಲಿ ವಿಪ್ರಮಹಿಮೆಯನು ॥52॥

ಚರಣವನು ಪೂಜಿಪರು ವಿಪ್ರರ । ಸುರವರರು ಕೇಳಂಜುವರು ಭೂ- । ಸುರರ ವಶವಿದ್ದರು ಕಣಾ ಹರಿಹರವಿರಂಚಿಗಳು ॥
ಸುರತರುವು ಸುರಧೇನು ವಿಪ್ರರ । ಪರಮ ವಾಕ್ಯವಿದೆಂದು ತಿಳಿ ಕೇ- । ಳರರೆ ಗುಡ್ಡವ ಕಡ್ಡಿ ಮಾಳ್ಪರು ಕಡ್ಡಿ ಗುಡ್ಡವನು ॥53॥

ಆದಿನಾರಾಯಣನು ವಿಪ್ರರ । ಪಾದವನು ಪೂಜಿಪನು ಭಕ್ತಿಯ । ಲಾದರದಿ ಪೇಳುವನು ವಿಪ್ರರೆ ದೈವ ನಿಜವೆಂದು ॥
ವೇದಮಾರ್ಗವ ಬಿಟ್ಟು ಜ್ಞಾನದ । ಹಾದಿಯನು ಸಂತ್ಯಜಿಸಿ ಯವನರ । ಪಾದಸೇವೆಯ ಮಾಳ್ಪರೀಗಿನ ವಿಪ್ರಸಂದೋಹಾ ॥54॥

ಜಗವು ದೇವಾಧೀನವಿರುವುದು । ಜಗದಿ ಮಂತ್ರಾಧೀನ ದೈವತ । ನಿಗಮ ದ್ವಿಜರಾಧೀನವದರಿಂ ದ್ವಿಜರೆ ದೈವತವು ॥
ಬಗೆಯದೀಪರಿ ವಿಪ್ರಮಹಿಮೆಯ-। ನುಗುಳ ಕೈಯಲಿ ಜೋಲಿಸುವರಾ । ನಿಗಮಗಳ ಪಠಿಸುವರು ಲೋಭದಿ ಯವನರೆದುರಿನಲಿ ॥55॥

ಹೀನ ಜಾತಿಯ ಸೇವೆ ಮಾಡುವ । ಮಾನವನ ಮೊಗ ನೋಡಬಾರದು । ಕ್ಷೋಣಿಯಲಿ ಬಹು ಪಾತಕವು ಕೇಳ್ ವೇದವಿಕ್ರಯವು ॥
ಹೀನಗತಿಯನು ಪಡೆಯುವರು ಮತಿ । ಹೀನರಪ್ಪರು ಬ್ರಹ್ಮರಾಕ್ಷಸ । ಯೋನಿಯಲಿ ಜನ್ಮವನು ಪಡೆವರು ವೇದಬಾಹಿರರು ॥56॥

ಧಾರುಣಿಯೊಳೀ ವೇದಶಾಖೆಯ- । ನಾರು ಬಲ್ಲರು ನಾಲ್ಕು ವೇದದ- । ಪಾರವನು ಕಂಡವರು ನೀವೇ ಹೇಳಿರೆನಗೀಗಾ ॥
ಹಾರಿಪತ್ರವಿಧಾನ ವಾದದ । ಕಾರಣವ ನಾನರಿಯೆ ನೀವು ವಿ । ಚಾರ ಮಾಡಿರಿ ವಾದ ಶಕ್ಯವೆ ವೇದಶಾಸ್ತ್ರದಲೀ ॥57॥

ಏನು ಲಾಭವು ಯತಿಯ ವಾದದಿ । ಹಾನಿಯಪ್ಪುದು ದ್ವಿಜರಕ್ಷೋಭದಿ । ಜ್ಞಾನವಿದ್ದರೆ ಹಾದಿ ಹಿಡಿಯಿರಿ ಮನೆಗೆ ತೀವ್ರದಲಿ ॥
ತಾನು ತನ್ನಯ ಸ್ತುತಿಯ ಮಾಡಿದ । ಹೀನವೃತ್ತಿಯು ದುರಿತಕಾರಕ । ನಾನು ಪೇಳುವ ಬುದ್ಧಿ ವಾದವ ಕೇಳಿರೈ ಮುದದಿ ॥58॥

ನಾನು ಹೇಳಿದ ಮಾತು ಕೇಳುತ । ಕೇಣವಿಲ್ಲದೆ ಮನೆಗೆ ತೆರಳಲು । ಹಾನಿಯಾಗದು ಗರ್ವಮದದಲಿ ಸಾಯಲೆಸಳುವರೆ ? ॥
ಪ್ರಾಣಗಳ ಬಿಡಬೇಡಿ ನಿಮಗಿದ । ಸಾನುರಾಗದಿ ಪೇಳ್ವೆ ಮುಂದಿ- । ನ್ನೇನು ನಿಮ್ಮ ವಿಚಾರವೆಂದನು ನಗುತ ಗುರುರಾಯಾ ॥59॥

ಎಂದು ನಾನಾಪರಿಯೊಳಾ ಗುರು- । ವೆಂದ ನುಡಿಯನು ಕೇಳಲಾರದೆ । ಮಂದಭಾಗ್ಯರು ದ್ವಿಜರು ಮಾರುತ್ತರವ ಕೊಟ್ಟರಲಾ ॥
ಇಂದು ನಿಮ್ಮೊಳು ವಾದಮಾಡದೆ । ಮುಂದೆ ತೆರಳಲು ಮನೆಗೆ ಭೂಪತಿ । ಕುಂದನೆಣ್ಣಿಯ ಮೇಲೆ ಹೇರುವರೀ ಜನರು ಬರಿದೆ ॥60॥

ಬರೆದು ಜಯಪತ್ರವನು ಕೊಟ್ಟರೆ । ತೆರಳುವೆವು ನಾವ್ ಮನೆಗೆ ಯಲ್ಲದೆ । ಬರುವುದೆಮಗಪಕೀರ್ತಿ ಯೆಂದರು ಗುರುವಿನೆದುರಿನಲಿ ॥
ಮರಣಮುಖದಲಿ ಸಿಕ್ಕಿಬಳಲುವ । ನರನಿಗಮೃತವ ಕೊಡಲು ತಾಧಿ-। ಕ್ಕರಿಸುವಂದದೊಳಾಯ್ತು ಗುರುಮಹಿಮೆಯನು ತಿಳಿಯರಲಾ ॥61॥

ಪರಿ ಪರಿಯೋಳಾ ವಿಪ್ರರಿಂಗತಿ- । ಹರುಷದಲಿ ವೇದಾರ್ಥಬೋಧವ । ನರುಹಿದನು ಗುರುರಾಯ ಹಿತವನು ಬಯಿಸಿ ವಿಪ್ರರಿಗೆ ॥
ಧರೆಯೊಳೀ ಪಾವನ ಚರಿತ್ರವ । ಪರಮ ಭಕುತಿಯಲೋದಿ ಕೇಳುವ । ನರಗೆ ಸಕಲಾಭಿಷ್ಟ ಸಾಧನ ವಿಷ್ಣು ವಚನವಿದು ॥62॥

॥ ಅಧ್ಯಾಯ 26 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 27

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಹಾದಿ ನಡೆಯುವ ಪತಿತಮುಖದಿಂ । ವೇದಗಳ ನುಡಿಸುತಲಿ ಯಮಪುರ- । ಹಾದಿಯನು ತೋರಿಸಿದನಾ ದ್ವಿಜರಿಂಗೆ ಶ್ರೀಗುರುವು॥

ಗುರುಕೃಪಾಂಜನವನ್ನು ಕಣ್ಣಿಲಿ । ಸುರಿಯಲಂಜನದ ಪ್ರಭಾವದಿ । ಬರುವುದಂತಃಕರಣಭಾವನೆ ದೃಶ್ಯರೂಪದಲಿ ॥
ಹೊರಗೊಳಗೆ ಸಂಭವಿಸುವುದು ಸಮ- । ಕರಣ ಸದ್ಗುರುಚರಣಭಕ್ತಿಯ । ಪರಮ ಸತ್ಪರಿಣಾಮವನು ಬಲ್ಲವರೆ ಜಾಣರಲಾ ॥1॥

ವಿನಯವಚನದಿ ನಾಮಧಾರಕ । ವಿನತಿಯನು ಮಾಡಿದನು ಸಿದ್ಧಗೆ । ಯೆನಗೆ ಜ್ಞಾನಾಮೃತದ ಪ್ರಾಶನ ಕೊಡಲು ಬೇಕೆನುತಾ ॥
ಮುನಿಯೆ ದರ್ಶನವಿತ್ತು ಸಂಸೃತಿ । ವನಧಿಯನು ದಾಟಿಪ ನಿಮಿತ್ತದಿ । ಯೆನಗೆ ಮಹದುಪಕಾರ ಮಾಡಿದೆ ಕರುಣಸಾಗರನೆ ॥2॥

ಗುರುವರನು ವೇದಗಳ ತಾ ವಿ- । ಸ್ತರಿಸಿದನು ಮದಯುಕ್ತ ದ್ವಿಜರಿಗೆ । ಚರಿತ ಮುಂದೇನಾಯ್ತು ಪೇಳೆಂದೆರಗಲಾ ಶಿಷ್ಯಾ ॥
ಹರುಷದಿಂದಾ ಸಿದ್ಧ ಯೋಗೀ- । ಶ್ವರನು ಪೇಳ್ದನು ಮುಂದೆ ಚರಿತವ । ಶರಣರಿಗೆ ಸುರತರುವಿನಂದದ ಪುಣ್ಯ ಚರಿತವನು ॥3॥

ಪರಿಪರಿಯೊಳಾ ವಿಪ್ರರಿಗೆ ಶ್ರೀ । ಗುರುವು ಬೋಧಾಮೃತವ ಕುಡಿಸಲು । ದುರಭಿಮಾನಿಗಳಿಂಗೆ ಬೋಧಾಮೃತವು ಕಟುವಾಯ್ತು ॥

ತಿರುಗಿ ಗುರುವಿಂಗುತ್ತರವನಿ- । ತ್ತರು ಕಣಾ ನಾ ವೊಲ್ಲೆ ಬೊಧವ । ಕರುಣಿಸೈ ಜಯಪತ್ರವಥವಾ ವಾದ ಮಾಡೆಂದು ॥4॥

ಉತ್ತರವ ಕೇಳಿದನು ಶ್ರೀಗುರು- । ಸತ್ತವನು ಮನದಲ್ಲಿ ಕೋಪಿಸಿ । ಚಿತ್ತದಲಿ ನಿಮಗಿದ್ದ ಭೀಷ್ಟವ ಕೊಡುವೆ ನಾನೆಂದಾ ॥

ಮೃತ್ಯು ಮುಖವಾಗಿರ್ದ ಮೂಷಕ । ಹುತ್ತವನು ಹೋಗುವಂತೆ ಸರ್ಪನ । ಕಿತ್ತಿ ಬೀಳುವವೊಲ್ ಪತಂಗವು ದೀಪಜ್ವಾಲೆಯಲಿ ॥5॥

ಈ ತೆರದೊಳಾ ದ್ವಿಜರು ಶ್ರೀಗುರು । ಮೂರ್ತಿಮಹಿಮೆಯ ತಿಳಿಯದಲೆ ನಿಜ । ಘಾತವನು ತಾವ್ ಮಾಡಿಕೊಂಡರು ದೈವವಶದಿಂದಾ ॥

ಆತಪವ ತಾನೆಂತು ಗೂಬೆಯ । ಪೋತವರಿವುದೆ ಗುರುವರನ ನಿಜ- । ಮೂರ್ತಿಸೂರ್ಯನನರಿಯರಾ ಜಡಮತಿಯ ವಿಪ್ರರಲಾ ॥6॥

ದೂರದಲಿ ನೋಡಿದನು ಗುರುವರ । ದಾರಿಯಲಿ ಪಾಂತಸ್ಥನನು ಕರೆ । ತಾರೆನುತ ಶಿಷ್ಯನನು ಕಳುಹಿದನಾಗ ವಹಿಲದಲಿ ॥

ದೂರದಲಿ ಬಂದವನು ನಿಂತನು । ಧಾರುಣಿಯಲಿ ಪ್ರಮಾಣ ಮಾಡಿದ- । ನಾರು ನೀ ಪೇಳೆನೆಗೆ ಜನ್ಮವು ಯಾವ ಜಾತಿಯಲಿ ॥7॥

ಗುರು ವಚನವಿದ ಕೇಳಿ ಪೇಳ್ದನು । ಕರುಣಸಾಗರನೆನುತಲೆನ್ನನು । ಕರೆದು ಕೇಳಿದರೆ ಧನ್ಯವೆನಗೀ ಜನ್ಮವೀದಿನದಿ ॥

ಅರುಹುವೆನು ನಾ ಮಾದಿಗನು ನೀ । ಕರುಣದಿಂದೆನಗುದ್ಧರಿಸು ಗುರು- । ವರನೆ ದೀನೋದ್ಧರಣನೆಂದು ಪ್ರಮಾಣ ಮಾಡಿದನು ॥8॥

ಗುರುವರನು ಕರುಣಾರ್ದ್ರದೃಷ್ಟಿಯ- । ಲರೆಗಳಿಗೆ ಯಂತ್ಯಜನ ನೋಡುತ । ಕರೆದು ಶಿಷ್ಯನಿಗೆಂದ ನೀ ದಂಡದಲಿ ಭೂಮಿಯಲಿ ॥

ಗೆರೆಗಳೇಳನು ತೆಗೆ ಯೆನುತ ಗುರು- । ವರನು ಪೇಳ್ದನು ಮಾದಿಗನಿಗಾ । ಗೆರೆಗಳನು ದಾಟೆನುತ ಹರುಷದಿ ಪೇಳ್ದ ನಾಕ್ಷಣಕೆ ॥9॥

ಪರುಷಸ್ಪರ್ಶದಿ ಲೋಹವಾಗುವ- । ದರೆ ಗಳಿಗೆಯಲಿ ಚಿನ್ನವೀಪರಿ । ಗುರುವರನ ಪೀಯೂಷ ದೃಷ್ಟಿಯಲಾದನಂತ್ಯಜನು ॥

ಅರಿವರಾರೀ ಗುರುಮಹಿಮೆಯನು । ಗೆರೆಗಳನು ದಾಟುತ್ತಲಂತ್ಯಜ । ಬರಲು ಜ್ಞಾನೋದಯವು ಬಂತಾ ಮೂಢ ಮಾದಿಗಗೆ ॥10॥

ಗೆರೆಯನೊಂದನು ದಾಟಲಾಕ್ಷಣ । ಗುರುವರನು ಕೇಳಿದನು ಮೇಣು । ತರವನಿತ್ತನು ಭಿಲ್ಲವಂಶದೊಳಾಯ್ತು ನಿಜಜನ್ಮ ॥
ಎರಡನೆಯ ಗೆರೆಯನ್ನು ಹಾಕಲು । ತಿರುಗಿ ಜ್ಞಾನಾಧಿಕ್ಯವಾಗುತ- । ಅರುಹಿದನು ನಾನಾ ಸುಗೋಷ್ಠಿಯನೇನಬಣ್ಣಿಸಲಿ ॥11॥

ಮೂರನೆಯ ಗೆರೆಯನ್ನು ಲಂಘಿಸೆ । ಸೇರಿದುದು ಜಾತಿಸ್ಮೃತಿಯು ತಾ । ನಾರೆನುತ ಪೇಳಿದನು ಗಂಗಾಪುತ್ರ ಜಾಹ್ನವಿಯಾ ॥
ತೀರದಲಿ ವಾಸಿಪನೆನುತ್ತಲಿ । ಬೇರೆಯೊಂದಾ ರೇಘೆಲಂಘಿಸೆ । ಊರೊಳಗೆ ನಾ ಶೂದ್ರ ಹೋಗುವನಿದ್ದೆ ಹೊಲಕೀಗಾ ॥12॥

ಕರೆದಿರೆನ್ನನೆನುತ ಪೇಳ್ದನು । ಗೆರೆಯನೈದನೆ ದಾಟಲವನತಿ- । ಭರದಿ ಪೇಳ್ದನು ವೈಶ್ಯ ವಂಶದಿ ಜನ್ಮವೆನಗಾಯ್ತು ॥
ಗೆರೆಯನಾರನೆ ಲಂಘಿಸಲು ಮೇ । ಣರುಹಿದನು ತಾ ಕ್ಷಾತ್ರವಂಶದಿ । ಧರಿಸಿದೆನು ಜನ್ಮವನು ಗೋದಾವರಿಯ ಹೆಸರೆನ ॥13॥

ಏಳನೆಯಗೆರೆಯನ್ನು ದಾಟಲು । ಪೇಳಿದನು ಬ್ರಾಹ್ಮಣರ ಕುಲದಲಿ । ತಾಳಿದೆನು ಜನ್ಮವನು ಕಲಿತಿಹೆ ವೇದಶಾಸ್ತ್ರಗಳಾ ॥
ಕೇಳಿ ಮನದಲಿ ನಗುತ ಶ್ರೀಗುರು । ಪೇಳಿದನು ದ್ವಿಜರಿಬ್ಬ ರೈದಿಹ- । ರೇಳು ವಾದನ ಮಾಡು ನಿಗಮಾಗಮದ ಸಾರದಲಿ ॥14॥

ಆ ತತೂಕ್ಷಣ ಮಂತ್ರಿಸಿದನು ವಿ- । ಭೂತಿಯವನಿಗೆ ಹಚ್ಚಿದನೈ । ಜ್ಯೋತಿಯಾಯಿತು ಜ್ಞಾನದೀಪಕೆ ಚೋದ್ಯವೇನೆಂಬೆ ॥
ಜಾತಿಯ ಯಾತರ ನೀತಿ ಸದ್ಗುರು । ಪ್ರೀತಿಯೆಂದಾದರೆ ಕಣಾ ನಿಜ । ಜಾತಿ ಕಾಗೆಯು ಹಂಸವಾಗದೆ ಮಾನಸಕೆ ಹೋಗೆ ॥15॥

ಗುರುನೃಸಿಂಹಸರಸ್ವತಿಯು ಜಗ । ಕಿರುವ ಸದ್ಗುರುವು ಧರೆಯಲಿ । ಧರಿಸಿ ನರದೇಹವನು ತ್ರೈಮೂರ್ತಿಗಳು ಬಂದಿಹವು ॥
ನರನಿವನು ಸಾಮಾನ್ಯನೆನುತಲಿ । ಅರುಹುವನು ಯಾರವನೆ ಮೂಢನು । ನರಕ ಭಾಜನನಹನು ಕೇಳ್ಕೆ ನಾಮಧಾರಕನೆ ॥16॥

ಏನ ಹೇಳಲಿ ಗುರುಮಹಿಮೆಯನು । ಜ್ಞಾನಿಯಾದನು ಪತಿತನವನೆ ಪ್ರ- । ವೀಣನಾದನು ವೇದಶಾಸ್ತ್ರಾದಿ ತರ್ಕಭಾಷ್ಯದಲಿ ॥
ಕ್ಷೀಣಚೇತನರಾಗಿ ವಿಪ್ರರು । ತ್ರಾಣವಿಲ್ಲದೆ ಭಯದಿ ನಡುಗಿದ । ರೇನ ಹೇಳಲಿ ಬಿತ್ತು ನಾಲಿಗೆ ತಣ್ಣಗೆದೆಯಾಯ್ತು ॥17॥

ಏನು ಗತಿ ತಮಗೆಂದು ಮನದಭಿ- । ಮಾನ ತೊರೆದರು ಗುರುಚರಣದಲಿ । ದೀನತನದಿಂ ಹೊರಳಿದರು ಗುರು ಕಾಯಬೇಕೆನುತ ॥
ಕ್ಷೀಣಮತಿಗಳು ನಾವು ವಿಪ್ರರ । ಮಾನಿಸದೆ ಧಿಕ್ಕರಿಸಿದೆವು ಯೆ- । ಮ್ಮಾಣೆ ನಿಮ್ಮಯ ಮಹಿಮೆಯನರಿಯದೆ ಭ್ರಾಂತರಾದೆವೆಲಾ ॥18॥

ನಾವು ಶ್ರೀಗುರುದ್ರೋಹಿಗಳು ನಿಮ- । ಗಾವ ತೆರದಲಿ ಕ್ರಮೇಯ ಬೇಳ್ವೆವು । ಪಾವನಾತ್ಮಕ ನೀನು ಗೌರೀರಮಣನವತಾರಾ ॥
ಕಾವವನು ನೀನಹುದು ನಿನ್ನನು । ಭಾವಭಕುತಿಯಲೀಗ ವಂದಿಪೆ । ವಾವಗಂ ಮುಂದಿನ್ನು ನಿನ್ನೀ ಚರಣ ಸ್ಮರಿಸುವೆವು ॥19॥

ಕರುಣಸಾಗರ ನೀನು ಸರ್ವರ । ದುರಿತಹಾರಕ ಯೆಮ್ಮ ದೋಷವ । ಮರೆತು ಯೆಮಗುದ್ಧರಿಸು ಶರಣಾಗತರ ವತ್ಸಲನೆ ॥
ಚರಣ ಕೆರಗುವೆ ವಾವು ನಿನ್ನಯ । ಕರುಣೆಯಾದರೆ ಗುಡ್ಡ ಕಡ್ಡಿಯ । ತೆರದೊಳಾಗುವುದಿಲ್ಲದಿದ್ದರೆ ಕಡ್ಡಿಯೇ ಗುಡ್ಡಾ ॥20॥

ನೀನು ವಿಶ್ವವನೆಲ್ಲ ಸೃಷ್ಟಿಸಿ । ನೀನು ಸರ್ವವ ಪೋಷಿಸುವೆ ಮೇಣ್ । ನೀನು ಜಗವನು ಸಂಹರಿಸುವೀ ಪ್ರಳಯರೂಪದಲಿ ॥
ನೀನು ತ್ರೈಮೂರ್ತಿಯೆ ಜಗದ್ಗುರು । ದೀನವತ್ಸಲ ನಿನ್ನ ಮಹಿಮೆಯ- । ನೇನ ವರ್ಣಿಸಬಹುದು ಶರಣಾಗತರ ವರದಾತಾ ॥21॥

ಎಂದ ವಿಪ್ರರ ನುಡಿಯ ಕೇಳಿಂ- । ತೆಂದನಾ ಗುರುವರನು ಗರ್ವದೊ । ಳಿಂದು ಕ್ಷೋಭಿಸಿದಿರಿ ತ್ರಿವಿಕ್ರಮಭಾರತಿಯ ನೀವು ॥
ನಿಂದಿಸಿದಿರೈ ಸರ್ವಭೂಸುರ । ವೃಂದವನು ಸ್ವಾರ್ಜಿತದ ಕರ್ಮದಿ । ಹೊಂದುವಿರಿ ಜನ್ಮವನು ನಿಜವಿದು ಬ್ರಹ್ಮರಾಕ್ಷಸನಾ ॥22॥

ತಾನು ಮಾಡಿದ ಪಾಪಪುಣ್ಯದ ತಾನೆ । ಫಲವನು ಭುಜಿಸಬೇಕೈ । ಕಾಣೆನಿದಕಿಹುದನ್ಯಗತಿಯನು ಕರ್ಮಪಾಕದಲಿ ॥
ಈ ನಿರೋಪವ ಕೇಳ್ದು ವಿಪ್ರರು । ದೀನತೆಯಲಾ ಗುರುವಿಗೆರಗಿದ- । ರೇನ ಹೇಳಲಿ ದ್ವಿಜರ ಪಶ್ಚಾತ್ತಾಪಮಹಿಮೆಯನು ॥23॥

ಗುರುವರನು ದ್ವಿಜರಿಂಗೆ ದಯೆಯಿಂ- । ದರುಹಿದನು ಹನ್ನೆರಡು ವರುಷಕೆ । ಪರಿಹರಿಸುವಿರಿ ಪಾಪಫಲವನು ನೀವು ನಿಜವಾಗಿ ॥
ತ್ವರದಿ ಪಶ್ಚಾತ್ತಾಪ ನಿಮಗಾ । ಗಿರುವ ಕಾರಣ ಶಾಂತರೂಪದೋ- । ಳಿರುವಿರೈ ನಿಮಗಾರು ಶುಕ ನಾರಾಯಣೆಂಬುವರು ॥24॥

ಶುದ್ಧ ವಾಗಲು ನಿಮ್ಮ ಪಾಪವು । ಬುದ್ಧದ್ವಿಜರ್ಯೆ ತಂದು ನಿಮಗಾ । ಶಬ್ದವನು ಬೋಧಿಪರು ದ್ವಾದಶನರುಷದವಧಿಯಲಿ ॥
ಉದ್ಧರಿಪರವರ್ಯೆ ನಿಮಗೆ ನೀವೇ । ಕ್ರುದ್ಧ ತನವನು ಬಿಟ್ಟು ಗಂಗಾ । ಶುದ್ಧ ಜಲದಲಿ ಸ್ನಾನ ಮಾಡಿರಿ ಯೆಂದರಾ ಗುರುವು ॥25॥

ಊರಹೊರಗವರ್ಯೆತರಲು ಬಹು । ದೂರ ಹೋಗದ ಮುನ್ನ ಗಂಗಾ- । ತೀರದಲಿ ಪಂಚತ್ವ ಪಡೆದರು ಹೃದಯಶೂಲದಲಿ ॥
ಧಾರುಣಿಯೊಳಿ ಗುರು ಮಹಿಮೆಯನು । ಯಾರರಿವರ್ಯೆ ನೋಡೆ ಸಾಗರ । ಪಾಪವಿಲ್ಲಿದ ಕೇನನೆಂಬೆನು ನಾಮಧಾರಕನೆ ॥26॥

ಗತಿಯ ಪಡೆದರು ದ್ವಾದಶಾಬ್ದದಿ । ಕ್ಷಿತಿಯಮರರಾ ಶಾಪದಲಿ ಗುರು-। ಕೃತಿಯಗಾಥವಲಾ ಕಥಾನಕವಿತ್ತಲೀ ಕಡೆಗೆ ॥
ಪತಿತನಾದನು ಜ್ಞಾನಿ ಜ್ಞಾತಿ- । ಸ್ಮೃತಿಯು ಬಂತಾ ಸಪ್ತಜನ್ಮದ । ಕ್ಷಿತಿಯೊಳಗೆ ತಾ ವಿಪ್ರ ಪೂರ್ವಾಪಾರದವನೆಂದು ॥27॥

ಮನದೊಳಗೆ ನೆನಿಸಿದನು ಶ್ರೀಗುರು- । ದಿನಕರೋದಯವಾಗೆ ತಿಮಿರದ । ಮನೆಯು ಕೀಳುವುದಲ್ಲವೇ ಗುರು ಪತಿತಪಾವನನು ॥
ವಿನಯದಿಂ ಗುರುಚರಣಕಭಿವಂ । ದನೆಯ ಮಾಡುತ ಕೇಳ್ದನೀಪರಿ । ಯೆನಗೆ ಮಾದಿಗ ಜನ್ಮವಾಯಿತು ಯೆಂತು ಪೇಳೆಂದು ॥28 ॥

ಹಿಂದೆ ಬಹು ಜನ್ಮಾಂತರಗಳಲಿ । ಬಂದೆನ್ಯೆ ದ್ವಿಜ ಜನ್ಮದಲಿ ನಾ- । ನಿಂದ ಮಾದಿಗನಾದೆನೆಂತೀ ಪರಿಯ ಪೇಳೆನೆಗೆ ॥
ಕುಂದನೆನ್ನಯ ಹೇಳು ಸುಗುಣ- । ವೃಂದ ನೀನು ತ್ರಿಕಾಲಜ್ಞಾನಿಯು । ಹಿಂದೆ ಮಾಡಿದ ದೋಷ ವಾವುದು ಮರೆತೇನೇ ಹರನಾ ॥29॥

ನಸುನಗುತ ಶ್ರೀಗುರುವು ಪತಿತನಿ- । ಗುಸುರಿದನು ಪ್ರೇಮದಲಿ ಪಾಪದ । ವಿಷಮ ಪರಿಣಾಮಗಳ ವಿಸ್ತಾರದಲಿ ತಿಳಿವಂತೆ ॥
ವಸುಮತಿಯೊಳೀ ಕಥೆಯ ಕೇಳ್ದರೆ । ವ್ಯಸನ ದುಃಖದ ರಾಶಿ ಸುಡುವುದು । ಯಶವು ಧನ ಸಂಪತ್ತಿ ಸಿಗುವುದು ವಿಷ್ಣುವಚನವಿದು ॥30॥

॥ ಅಧ್ಯಾಯ 27 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 28

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುವರನು ಕರುಣದಲಿ ಪತಿ ತನಿ- । ಗರುಹಿದನು ಬಾಂಡಾಲಜನ್ಮವು । ಬರುವ ಕರ್ಮವಿಪಾಕವನು ವಿಸ್ತರಿಸಿ ಹೇಳಿದನು॥

ಗುರುಚರಣ ಸದ್ಭಕ್ತಿಯೆಂಬುವ । ಮೆರೆವ ಮಸಿಯಲಿ ತುಂಬಿ ಲೇಖಣಿ । ಕರದಿ ಪಿಡಿದರೆ ವ್ಯಕ್ತವಪ್ಪುದು ವ್ಯಕ್ತಹೀನವದು ॥
ಮರಳಿ ಪಂಚೇದ್ರಿಯಕೆ ತಾಗದ । ಪರಿಪರಿಯ ಸಾಧನವತೀಂದ್ರಿಯ- । ಕಿರದೆ ಗೋಚರಮೆನಿಸಿ ನಲಿವುದು ಗುರುರಚಿತ ಸೃಷ್ಟಿ ॥1॥

ಕರಯುಗಳ ಜೋಡಿಸುತ ಸಿದ್ಧನ । ಚರಣಕೆರಗುತ ನಾಮಧಾರಕ । ಪರಮ ಸಂತೋಷದಲಿ ಬಿನ್ನೈಸಿದನು ಯತಿವರೆಗೆ ॥
ಗುರುಚರಿತ್ರಾಮೃತದ ಸವಿರುಚಿ । ಮರುಳ ಮಾಳ್ಪುದು ಯೆನ್ನ ಮನವನು । ಭರದಿ ಮುಂದಿನ ಕಥೆಯ ಪೇಳೆಂದೆರಗಿದನು ಪದಕೆ ॥2॥

ನುಡಿಯನೀಪರಿ ಕೇಳಿ ಸಿದ್ಧನು । ನುಡಿದನಾಕ್ಷಣ ನಾದುಧಾರಕ । ಪೊಡವಿಯೊಳು ಗುರುಚರಿತ ಕಥೆಯಿದು ಬಹುವಿಶೇಷವಲಾ ॥
ಸುಡುತಿಹುದು ಕೇಳ್ ದೋಷರಾಶಿಯ । ನುಡಿಯಲಾರೆನು ಮಹಿಮೆಯನುಗುರು । ಕೊಡುವನೈ ಸುಜ್ಞಾನಜ್ಯೋತಿಯ ದೃಡಪ್ರಕಾಶವನು ॥3॥

ಹಿಂದಿನಧ್ಯಾನದಲಿ ಪತಿತನು । ಕುಂದ ತನ್ನಯ ಪೇಳೆನುತಲಾ । ನಂದದಿಂದಲಿ ಗುರುಚರಣಕೆರಗಿದನು ಭಕ್ತಿಯಲಿ ॥

ಬಂದುದಾತನ ಮೇಲೆ ಗುರುಕೃಪೆ । ಯೆಂದನಾ ಗುರುವರನು ಪತಿ ತನಿ- । ಗಿಂದು ಪೇಳುವೆ ಜನ್ಮ ಕಾರಣಾ ಕರ್ಮ ಬಂಧವನು ॥4॥

ತಾನು ಮಾಡಿದ ಪಾಪಪುಣ್ಯ ಫ- । ಲಾನುಸಾರದಿ ಜನ್ಮ ಬರುವುದು । ತಾನು ಮಾಡಿದ ಕರ್ಮಕನುಸರಿಸುವುದು ಬುದ್ಧಿಯದು ॥

ತಾನು ಬಿತ್ತಿದ ಬೀಜದಂದದಿ । ಕ್ಷೋಣಿಯಲಿ ಬೆಳೆ ಬರುವದಲ್ಲದೆ । ಹೇನು ಮಾಳ್ಪದೆ ಜೇನು ? ಬೇವಿನ ಮರಕೆ ಮಾವಹುದೆ ? ॥5॥

ಬ್ರಹ್ಮ ಕೃತ್ರಿಯವೈಶ್ಯ ಶೂದ್ರರು । ಜನ್ಮ ಕಾರಣ ಮಾದಿಗರಿಗಾ- । ಕರ್ಮಹೀನರು ಜಾತಿಹೀನರು ಕೇಳು ಮಾದಿಗರು ॥

ಬ್ರಹ್ಮಕುಲ ಸಂಜಾತೆವನಿತೆಗೆ । ಕರ್ಮವಶದಲಿ ಶೂದ್ರ ಸಂಗದಿ । ಜನ್ಮ ಕೈತರಲಾ ಶಿಶುವು ಚಾಂಡಾಲ ನೆನಿಸುವನು ॥6॥

ಮೂಲವಿದು ಚಾಂಡಾಲ ಜನ್ಮಕೆ । ಮೇಲೆ ವಿಪ್ರರು ಪರಿಪರಿಯ ದುರಿ- । ತಾಳಿಗಳನಾಚರಿಸಲದರಿಂ ಹೀನ ಜನ್ಮವಲಾ ॥

ಹೇಳಲಾರೆನು ವಿಸ್ತರಿಸಲನು- । ಕೂಲವಾಗದು ವೇಳೆ ಸಾಲದು । ಮೇಲೆ ಮೇಲಿಂದೀಗ ಪೇಳೆನು ಪಾಪಲಕ್ಷಣವಾ ॥7॥

ಗುರುಹಿರಿಯರನು ತಂದೆತಾಯ್ಗಳ । ತೊರೆವನಾವನೊ ಸ್ವಕುಲತರುಣಿಯ । ಬರುವನವ ಚಾಂಡಾಲ ಯೋನಿಯೊಳಿದುವೆ ನಿಜಮಾತು ॥

ಮರೆತು ಕುಲದೇವತೆಯ ಪೂಜಿಪ । ನೆರಡನೆಯ ದೈವತವ ಸತ್ಯಾ- । ಚರಣವನು ತ್ಯಜಿಸುವನು ಚಾಂಡಾಲನು ಕಣಾ ನಿಜವು ॥8॥

ನಿರತ ಜೀವದ ಹಿಂಸೆ ಮಾಡುವ । ನರನು ಕನ್ಯಾ ವಿಕ್ರಯವ ಬಹು । ಪರಿಯೊಳನೃತಪ್ರಮಾಣ ಮಾಳ್ಪನು ನಿಜದಿ ಚಾಂಡಾಲಾ ॥

ತುರಗವಿಕ್ರಯ ಮಾಳ್ಪಬ್ರಾಹ್ಮಣ । ನಿರದೆ ಶೂದ್ರಾನ್ನವನು ಭುಂಜಿಸೆ । ಬರುವುದೈ ಚಾಂಡಾಲ ಜನ್ಮವು ಶಾಸ್ತ್ರಸಿದ್ಧ ವಿದು ॥9॥

ವೇದ ಪಿತೃಕರ್ಮವನು ತ್ಯಜಿಪಗೆ । ಶೂದ್ರಸ್ತ್ರೀಯಳ ಸಂಗ ಮಾಳ್ಪಗೆ । ಮೋದದಿಂದಲಿ ದಾಸಿಸಂಭೋಗವನು ಮಾಳ್ಪನಿಗೆ ॥

ಹಾದಿಯಲಿ ಕಾಡ್ಗಿಚ್ಚ ನೀವಗೆ । ಭೇದವಿಲ್ಲದೆ ಮನೆಯ ಪಾತ್ರೆಯ । ಖೇದವಿಲ್ಲದೆ ಮಾರುವವನಿಗೆ ಹೀನಜನ್ಮ ವಲಾ ॥10॥

ದಾನ ಪ್ರತಿ ಗ್ರಹಣವನು ಮಾಡಿ ಪ । ರಾನ್ನವನು ಸ್ವೀಕಾರ ಮಾಳ್ಪಗೆ । ಧೇನು ಕಪಿಲೆಯ ಕ್ಷೀರವನ್ನಭಿಷೇಕ ಮಾಡದಲೆ ॥
ಪಾನ ಮಾಳ್ಪಗೆ ಶಾಲಿಗ್ರಾಮವ । ಹೀನ ಜಾತಿಯ ನರನು ಪೂಜಿಸೆ । ತಾನು ತುಳಸಿ ಗಿಡದ ಪತ್ರವ ಕಿತ್ತಿ ತೆಗೆಯುವಗೆ ॥11॥

ಮಡದಿ ಮಕ್ಕಳ ಮಮತೆ ಯಿಲ್ಲದೆ । ಬಿಡುವವಗೆ ತಾಯ್ತಂದೆಗಳನತಿ । ಹೊಡೆವವಗೆ ಮೇಣೆತ್ತಿನಾರೋಹಣವ ಮಾಳ್ಪನಿಗೆ ॥
ಪೊಡವಿಯಲಿ ತೀರ್ಥಕ್ಕೆ ಪೋಗಲು । ಸಡಗರದಿ ಶ್ರಾದ್ಧವನು ಮಾಡದೆ । ಬಿಡುವವಗೆ ಚಾಂಡಾಲ ಯೋನಿಯು ಬರುವುದೈ ನಿಜವು ॥12॥

ತಂದೆತಾಯ್ಗಳ ಸೇವೆ ಮಾಡದೆ । ನಿಂದಿಸುತ ಮೇಣವರ ತ್ಯಜಿಸಲು । ಮುಂದೆ ಬರುವನು ಸಪ್ತ ಜನ್ಮದಿ ಕ್ರಿಮಿಯ ಯೋನಿಯಲಿ ॥
ಬಂಧತಿಥಿಯು ಮನೆಗೆ ಶ್ರಮದಲಿ । ಮುಂದೆ ವೇದವ ನುಡಿಸಿ ಭೋಜನ । ತಂದು ಹಾಕುವ ನರನು ಕೇಳ್ಕೆ ನೀಚ ಚಾಂಡಾಲಾ ॥13॥

ತರುಣಿಯೋರ್ವಳು ಲಗ್ನದಾಕೆಯು । ಯಿರಲು ಬಿಟ್ಟವಳನ್ನೆಯೆರಡನೆ । ತರುಣಿಯನು ಸ್ವೀಕಾರ ಮಾಡುವಗಧಮ ಜಾರನಿಗೆ ॥
ಪರಮ ಪಾವನ ದ್ವಿಜರ ನಿಂದಿಸು- । ತೆರಡನೆಯ ಜಾತಿಯರ ಪೂಜಿಪ । ನೆರಗೆ ಪರವೃತ್ತಿಯನು ಲೋಪವ ಮಾಳ್ಪ ನೀಚನಿಗೆ ॥14॥

ಭಾವಿಯನು ತಾ ಹಾಳು ಮಾಡಿ ಸ- । ರೋವರವ ವಿಧ್ವಂಸ ಮಾಳ್ಪಗೆ । ದೇವ ಪೂಜೆಯ ಮುರಿದು ಶಿವಮಂದಿರವ ಮುರಿವವಗೆ ॥
ಹೇಯವಿಲ್ಲದೆ ಬ್ರಾಹ್ಮಣರ ಮನೆ । ಯಾವನೈ ಕಿಚ್ಚಿಟ್ಟು ಸುಡುವನೋ । ಆವಗಂ ಚಾಂಡಾಲಜನ್ಮವು ಸಿಗವುದಿದುನಿಜವು ॥15॥

ದನಕರುಗಳನು ವಿಂಗಡಿಸಿದಡೆ । ಜನನಿಯರ್ಭಕರೊಳಗೆ ಭೇದವ । ಮನದಿ ಬಿತ್ತಿದರವನು ಗುರುಸ್ವಾಮಿಯರ ಸ್ತ್ರೀಯರೊಳು ॥
ತನಗೆ ವಿಶ್ವಾಸದಲಿ ನಂಬಿದ । ವನಿತೆಯಲಿ ವ್ಯಭಿಚಾರ ಮಾಡಲು । ಜನಿಸುವನು ಚಾಂಡಾಲಯೋನಿಯೊಳವನು ಸಂತತದಿ ॥16॥

ಎರಡು ಲಗ್ನದ ಸ್ತ್ರೀಯರಲಿ ತಾ- । ಚರಿಸುವನು ಪಂಕ್ತಿ ಪ್ರಪಂಚವ । ಬರಲು ಸೂರ್ಯಾಸ್ಪದಲಿಯ ತಿಥಿಯು ಮನೆಗೆ ಹಸಿವೆಯಲಿ ॥
ಕರೆದು ಭೋಜನ ಕೊಡದವನು ತಾ । ನಿರದೆ ತಿನ್ನುವ ಹೊಟ್ಟೆ ತುಂಬುವ । ತೆರದೊಳಾತನು ಜನ್ಮಜನ್ಮಕೆ ಪತಿತನಾಗುವನು ॥17॥

ಕೊಟ್ಟ ವಚನವ ಮರೆತು ವಚನ । ಭ್ರಷ್ಟನಾದರೆ ಭೂಪತಿ ತಾ । ಕೊಟ್ಟ ಭೂದಾನವನು ಕಸುಕೊಂಡರೆ ಧರಿತ್ರಿಯಲಿ ॥
ಭ್ರಷ್ಟ ತನದಲಿ ಸಿದ್ಧಿಗೈದು ವಿ । ಶಿಷ್ಟ ಸಂಧ್ಯಾ ಕಾಲ ಕಳೆದರೆ । ಹುಟ್ಟುವನು ಚಾಂಡಾಲಜಾತಿಯಲವನು ಸಂತತವು ॥18॥

ವಿಶುವದೇವದ ಯಜ್ಞಸಮಯದಿ । ಹಸಿವೆಯಲಿ ಬಂದತಿಥಿಗತಿ ಸಂ- । ತಸದೊಳನ್ನವನೀಯದೂಟವ ತಾನು ಮಾಡುವನು ॥
ವಸುಧೆಯಲಿ ನಿಂದಿಪನು ಗಂಗೆಯ । ವಿಷಮ ರಣರಂಗದಲ್ಲಿ ಸ್ವಾಮಿಯ । ನುಸುರದಲೆ ಸಂತ್ಯಜಿಸುವವನೇ ನೀಚ ಚಾಂಡಾಲ ॥19॥

ತಿರುಗಿ ಪುಣ್ಯ ಕ್ಷೇತ್ರತೀರ್ಥದಿ । ಗುರುಹಿರಿಯರಿಗೆ ಶ್ರಾದ್ಧ ಮಾಡದೆ । ಮರಳಿ ಬರುವವನಿರದೆ ಏಕಾದಶಿಯ ದಿವಸದಲಿ ॥
ಹರಿಯ ನೆನೆಯದೆ ಹೊಟ್ಟೆ ತುಂಬುವ । ತೆರದಿ ಭೋಜನ ಮಾಡುವವ ತಾ । ಬರುವನೈ ಚಾಂಡಾಲಜನ್ಮದಿ ಶಾಸ್ತ್ರಸಿದ್ಧವಿದು ॥20॥

ಹರಿಯ ದಿವಸದಿ ಪರ್ವಕಾಲದಿ । ತರುಣಿ ಸಂಭೋಗವನು ಮಾಳ್ಪವ । ಮರಣ ದಿನಸವ ಬಿಟ್ಟು ಶ್ರಾದ್ಧವ ಮಾಳ್ಪ ಮೂರ್ಖನಿಗೆ ॥
ಹರುಷದಲಿ ಶೂದ್ರನಿಗೆ ವೇದವ । ನರುಹುವವನಿಗೆ ಸ್ನೇಹದಲಿ ಮು- । ತ್ತಿರದೆ ಭೇದವ ಬಿತ್ತುವವನಿಗೆ ಪತಿತ ಜನ್ಮವಲಾ ॥21॥

ಬಿಸಿಲು ಕಾಲದಿ ನೀರಡಿಕೆಯಲಿ । ಬಸವಳಿದು ಬರುತಿರುವ ಪಥಿಕರಿ- । ಗೆಸಗುತಿಹ ಸೋಯಿಯನು ಮುರಿದರೆ ಪತಿತನಾಗುವನು ॥
ಭಿಷಜ ವೃತ್ತಿಯ ನಾಡಿಯನು ಪರಿ- । ಕಿಸದೆ ಮಾಡುವವನು ಏಕಾ- । ದಶಿಯದಿನ ಭೋಜನವ ಮಾಳ್ಪನು ಪತಿತನಾಗುವನು ॥22॥

ಮಂತ್ರ ಜಾರಣಮಾರಣಾದಿಗ- । ಳೆಂತು ತಂತ್ರ ಕುಮಾರ್ಗ ಗತಿಯನು । ಸಂತಸದಿ ಪತಿಕರಿಸುವನು ವೇದವನು ತ್ಯಜಿಸುವನು ॥
ಚಿಂತಿಪನು ಹರಿಹರರ ನಿಂದೆಯ- । ನಿಂತು ಶ್ರೀಗುರು ನರನು ಯೆಂಬುವ । ಭ್ರಾಂತಿಯನು ತಾಳ್ವವನು ಬರುವನು ಪತಿತಜನ್ಮದಲಿ ॥23॥

ಹರಿಹರರ ಸಂತ್ಯಜಿಸಿ ಪೂಜಿಪ । ನೆರಡನೆಯ ದೈವತವ ನಾಲುಕು । ಪರಿಯ ವರ್ಣಾಶ್ರಮದ ಧರ್ಮವ ಬಿಟ್ಟು ಬಿಡುವವನು ॥
ಎರಡನೆಯ ಧರ್ಮವನು ತಾ ಸ್ವೀ- । ಕರಿಸುವಾತನು ಧರ್ಮಬಾಹಿರ । ನರನು ಬರುವನು ಹೀನ ಚಾಂಡಾಲರಲಿ ಜನ್ಮದಲಿ ॥24॥

ಕಲಿವವನು ಶೂದ್ರರಲಿ ಮಂತ್ರವ । ನೊಳಗಹನು ಪಾತಕಕೆ ನಾಯಿಯ । ಕೊಳಕು ಚರ್ಮದಿ ಕ್ಷೀರ ಗಂಗಾಜಲವನಿಟ್ಟಂತೆ ॥
ವೊಲಿದು ವಿಧವೆಗೆ ಸಂಗ ಮಾಳ್ಪನು । ಹಳಿವವನು ತಾಯ್ತಂದೆಗುರುಗಳ- । ನೊಳಗೆ ಬಂದತಿಥಿಗಳ ಬೈಯುತ ಅನ್ನ ಹಾಕುವನು ॥25॥
ಶ್ರಾದ್ಧ ದಿನದಲಿ ಪಿಂಡ ಹಾಕದೆ । ಬುದ್ಧಿ ಯಿಲ್ಲದೆ ಗುರುವ ನಿಂದಿಪ । ಶುದ್ಧ ನರಪಶುವವನು ಜನ್ಮದಿ ಬ್ರಹ್ಮರಾಕ್ಷಸನು ॥
ಉದ್ಗುರುಟತನದಿಂದ ವೇದದ । ಶಬ್ದಸ್ಖಲನವ ಮಾಡುವವನು ವಿ- । ಶುದ್ಧ ಶ್ರೀಗುರುಚರಣಸೇವೆಗೆ ಪತಿತನಾಗವನು ॥26॥
ಗುರುಚರಣಸೇವೆಯನು ಮಾಡದೆ । ಲೆರಡನೆಯ ದೈವತವ ನಿಂದಿಪ । ನರನು ದಾರಿದ್ರ್ಯದಲಿ ಪೀಡಿತನಾಗಿ ಕಷ್ಟಿಪನು ॥
ಬರುವದವನಿಗೆ ಸೆಟೆಯ ಬೇನೆಯು । ಗುರುಹಿರಿಯರನು ಬಿಟ್ಟು ಹೆಂಡತಿ- । ಗಿರುವನ್ನೈ ವಶವಾಗಿ ಹುಟ್ಟುವನವನು ಬೇಡರನು ॥27॥
ದ್ವೇಷಿಪನು ವೇದಗಳ ಸಂತತ । ದೂಷಿಪನು ವಿಪ್ರರನು ಕರ್ಮ- । ದ್ವೇಷಕನು ಭೋಗಿಪನು ಮೂತ್ರ ಕೃಚ್ಛ್ರರೋಗವನು ॥
ದೋಷವನು ತೆಗೆತೆಗೆದು ಪರರನು । ದೂಷಿಪನು ಹೃದ್ರೋಗಪೀಡೆಯ । ದೋಷದಿಂ ಬಳಲುವನು ಕಷ್ಟವನೇಕ ಪರಿಯಿಂದಾ ॥28॥
ಗರ್ಭಪಾತವ ಮಾಡಿ ಪಾತದೊ- । ಆರ್ಭಕರ ಕೊಲಿಸುವಳು ನೀಚೆಯು । ಉದ್ಭವಿಪಳ್ಳೈ ಬಂಜೆರೂಪದಿ ಜನುಮಜನುಮದಲಿ ॥
ಅರ್ಭಕರು ಪುಟ್ಟಿದರೆ ಬಾಲ್ಯದೊ- । ಳೆಬ್ಬಿಸುತ ಯಮನೊಯ್ವನವರನು । ಗರ್ಭಪಾತವ ಮಾಡಬಾರದು ಜಾಣರೀಜಗದಿ ॥29॥
ಶಿವನ ಕಥನಪುರಾಣಧರ್ಮ- । ಶ್ರವಣವನು ಕೇಳಲ್ಕೆ ದ್ವೇಷಿಪ- । ನವನು ಪರರೂಟವನು ನೋಡಿಯಸೂಯೆ ಪಡುವವನು ॥
ಕಿವುಡರಾಗೀ ಜಗದಿ ಕೇಳ್ಸಂ । ಭವಿಸುವರಲಾ ಔಷಧವನಾ- । ಯವನರಿಂ ಕೊಂಡವರು ಮೃಗಯೋನಿಯಲಿ ಬರುವರಲಾ ॥30॥
ಪತಿತನೊಳು ತಂಟೆಯನು ಮಾಳ್ಪಗೆ । ಗತಿಯು ಗರ್ದಭಯೋನಿಯಲಿ ದ್ವಿಜ । ಹತಿಯವನು ಕ್ಷಯರೋಗಿಯಾಗುವನೇನಹೇಳುವೆನು ॥
ಕೃತಸುರಾಪಾನನು ಜನಿಸುವನು । ಪತಿತಕುಲದಲಿ ದರಿತದೋಷದ । ಕೃತಿಯು ಬಹುಚೋದ್ಯವು ಕಣಾ ಕಪ್ಪಹವು ಹಲ್ಲುಗಳು ॥31॥

ಸ್ವರ್ಣಚೋರಿಯ ಮಾಡುವಾತನು । ವರ್ಣಹೀನ ಕುರೂಪಿ ಪಾಪದ । ಕಣ್ಣನೆತ್ತಲು ಗುರುವನಿತೆಯಲಿ ಕುಷ್ಟಿಯಾಗುವನು ॥
ಚನ್ನಗಿಹ ದನ ಕುದುರೆಗಳ ವಧೆ- । ಯನ್ನು ಮಾಳ್ಪನು ಬಂಜೆಯಪ್ಪನು । ಮುನ್ನ ಪಶ್ಚಾತಾಪವಾಗಲು ದುರಿತ ಕರಗುವುದು ॥32॥

ಕೊಟ್ಟ ಭಾಷೆಯ ತಪ್ಪುವವ ಸಂ- । ಕಷ್ಟದಲಿ ಜನಿಸುವನು ತನ್ನಯ । ಇಷ್ಟಮಿತ್ರರಿಗನ್ನದಾನವ ಮಾಡದವ ಪಾಪಿ ॥
ಭ್ರಷ್ಟ ರುಚಿಯಾಗುವನು ಪರರೊಳ । ಗಿಟ್ಟ ಸೇವಕರನ್ನು ಓಡಿಸ- । ಅಟ್ಟಹಾಸದಿ ತಾನು ಬಂಧನದಲ್ಲಿ ಬೀಳುವನು ॥33॥

ಹಾವ ಕೊಲ್ಲಲು ಹುಟ್ಟುವನು ನಿಜ । ಹಾವಿನಾ ಜನ್ಮದಲಿ ಸ್ತ್ರೀಯರ । ಹೇಯವಿಲ್ಲದೆ ತುಡುಗುಮಾಡಲು ಹುಚ್ಚನಾಗುವನು ॥
ಆವಗಂ ಕ್ಲೇಶದಲ್ಲಿ ದುಃಖಿಸಿ । ಜೀವವನು ಮೇಣ್ತೊರೆದು ನರಕದಿ । ಸಾವನ್ಯೆ ಬಹುವಿಧದ ಯಾತನೆಯಲ್ಲಿ ಪಾಪಿಯಲಾ ॥34॥

ಕಣ್ಣು ಕುರುಡಾಗುವನು ಪುಸ್ತಕ । ವನ್ನು ಕದ್ದರೆ ಝುಗಝುಗಿಸುವ ಸು- । ವರ್ಣವನು ಕದ್ದರೆ ಮಹಾವ್ಯಾಧಿಸ್ಥನಾಗುವನು ॥
ಅನ್ನ ಚೋರಗೆ ಗುಲ್ಮವ್ಯಾಧಿಯು । ಧಾನ್ಯ ಚೋರಗೆ ರಕ್ತ ದೋಷದ- । ವರ್ಣನೀಯದ ಹೊಲಸುರೋಗವು ಬರುವುದೈ ನಿಜವು ॥35॥

ಪರರ ದ್ರವ್ಯವನಪರಿಹರಿಸಿದೊಡೆ । ತಿರುಗಿ ಪರದತ್ತಾಪಹಾರವ । ನಿರದೆ ಮಾಡಲು ಪರರದ್ವೇಷಿ ಪರಿವರು ಮೂವರಿಗೆ ॥
ಬರುವುದೈ ನಿಜ ಪುತ್ರಹೀನತೆ । ನರಗೆ ಶ್ವಾಸೋಶ್ವಾಸ ಸಂಕಟ । ವಿರಲು ತದ್ಧನ ಕದ್ದರವನಿಗೆ ಬಂಧನಪ್ರಾಪ್ತಿ ॥36॥

ಎಣ್ಣೆಯನು ಕದ್ದವನು ಮೈಯಲಿ । ಹುಣ್ಣಿನಿಂದ ಕೊಳೆಯುವನು ಪರ- । ಹೆಣ್ಣು ಬ್ರಹ್ಮಸ್ವವನು ಕದ್ದವ ಬ್ರಹ್ಮರಾಕ್ಷಸನು ॥
ರತ್ನಮಾಣಿಕಮುತ್ತು ಕದ್ದವ । ಗಿನ್ನು ಜನ್ಮವು ಹೀನ ಜಾತಿಯೊ । ಳನ್ನು ವರು ಋಷಿಗಳು ಸದಾ ಗುಣಯುತರು ನಿಜವೆಂದು ॥37॥

ಪತ್ರ ಶಾಖಫಲಾದಿ ಕದ್ದರೆ । ಹತ್ತುವುದು ಬಹು ವಿಧದ ಖಜ್ಜಿಯು । ರಕ್ತಪಾನಿಯು ಹುಟ್ಟುವನು ಗೋಚೀಡಯೋನಿಯಲಿ ॥
ಹತ್ತಿ ಕಬ್ಬಿಣಲವಣಕಂಚನು । ಯೆತ್ತಿ ಹಾಕಲು ಶ್ವೇತ ಕುಷ್ಟದೊ । ಳೆತ್ತುವನು ಜನ್ಮವನು ಶಾಸ್ತ್ರ ಪ್ರಸಿದ್ಧ ಫಲವಿದಲಾ ॥38॥

ದೇವದ್ರವ್ಯವನಪರಿಹರಿಸಿದರೆ । ದೇವಕಾರ್ಯವ ನಾಶಿಸಿದರಾ । ಹೇವವಿಲ್ಲದಭಕ್ಷ್ಯಭಕ್ಷಣ ಮಾಡಿದರೆ ನಿಜದಿ ॥
ಮೂವರಿವರಿಗೆ ಪಂಡುರೋಗವು । ಆವಗಂ ಬರುತಿಹುದು ಒಂಟೆಯ । ಜೀವದಲಿ ಬರುತಿಹನು ಧನತಸ್ಕರನು ಭೂಮಿಯಲಿ ॥39॥

ಫಲವ ಕದ್ದರೆ ವನಚರನು ಮೇಣ್ । ಜಲವ ಕದ್ದರೆ ತೋಳನಾಗುವ । ನಿಲಯದೊಳಗಿನ ಪಾತ್ರೆಕದ್ದರೆ ಕಾಗೆಯಾಗುವನು ॥
ವೊಲಿದು ಜೇನನು ಕದ್ದರಾತನು । ಇಳೆಯೊಳಗೆ ಹದ್ದಾಗಿ ಬರುವನು । ಮೆಲುವ ರಸರಂಗವನು ಕದ್ದರೆ ಕುಷ್ಟಿಯಾಗುವನು ॥40॥

ಇಂತು ಚಾಂಡಾಲನಿಗೆ ಶ್ರೀಗುರು । ಸಂತಸದಿ ಪೇಳಿದನು ಕರ್ಮದ । ಪಂಥವನು ಪರಿಣಾಮವನು ವಿಸ್ತಾರಪೂರ್ವಕದಿ ॥
ಬಂತು ಪತಿತಗೆ ಜ್ಞಾನ ಮುಂದಾ । ಶಾಂತಿಪರ್ವದಿ ಪೇಳ್ದ ಧರ್ಮದ । ಪಂತಿಯನು ವ್ಯಭಿಚಾರಫಲವನು ಪೇಳ್ದನಾ ಗುರುವು ॥41॥

ಪರವನಿತೆಯಾಲಿಂಗಿಸಿದರವ । ಬರುವನೈ ಶತ ಜನ್ಮ ನಾಯಿಯ । ನರಕ ಭಾಜನಜನ್ಮದಲಿ ಮೇಣ್ ಸರ್ಪ ಯೋನಿಯಲಿ ॥
ಪರವನಿತೆಯರ ಯೋನಿ ಕಣ್ಣಿಗೆ । ಬರಲು ಹುಟ್ಟುವನವನು ಜನ್ಮಾಂ । ತರದೊಳುಂಧತ್ವದಲಿ ಕರ್ಮದ ದುರ್ವಿಪಾಕವಿದು ॥42॥

ಬಂದಭಾರ್ಯೆಯ ಸಂಗಮಾಡಲು । ಮುಂದೆ ಗರ್ದಭಜನ್ಮ ಬರುವುದು । ಮುಂದೆ ಸರ್ಪದ ಯೋನಿಯಲಿ ಬಹು ದಿವಸ ಕಳೆಯುತಲಿ ॥
ಬಂದು ನರಕದಿ ಬೀಳುವನು ಬಹು । ಬೆಂದು ಕಷ್ಟದಿ ನೆರಳುವನು ಮುದ- । ದಿಂದ ನೋಡೀ ಪಾಪಕರ್ಮದ ದುರ್ವಿಪಾಕವನು ॥43॥

ಮಿತ್ರಭಾರ್ಯಾಸಂಗ ಮಾತುಳ । ಪತ್ನಿಸಂಗ ವಿಶೇಷ ಪಾತಕ । ಮರ್ತ್ಯರಿಗೆ ದೂಡುವುದು ನಾಯಿಯ ಹೀನ ಜನ್ಮದಲಿ ॥
ಎತ್ತಲಾಗದ ಪಾಪದೃಷ್ಟಿಯ- । ನುತ್ತಮಾಂಗನೆಯೆಂದು ದೃಷ್ಟಿಯ-। ನೆತ್ತಿದರೆ ಕಣ್ಣೆರಡು ಹೋಗಿಯೆ ಕುರುಡನಾಗುವನು ॥44॥

ಜಾತಿಯಲಿ ತಾ ಶೂದ್ರ ವಿಪ್ರರ । ಜಾತಿಸ್ತ್ರೀಯರ ಭೋಗಿಸಲು ಬಹು । ಪಾತಕಿಗಳಿಬ್ಬರು ಕೃಮಿಗಳಾಗುವರು ವಿಷ್ಠೆಯಲಿ ॥
ಈ ತೆರದೊಳಾ ಗುರುವು ಪತಿತಗೆ । ಜಾತಿಸಂಕರಫಲಗಳೆಲ್ಲವ । ಪ್ರೀತಿಯಿಂದಲಿ ಪೇಳ್ದನೆಲ್ಲರು ತಿಳಿವ ರೀತಿಯಲಿ ॥45॥

ಗುರುವು ಪತಿತನಿಗರುಹಿದೆಲ್ಲವ । ನರಿತು ಪ್ರಶ್ನವ ಮಾಡಿದನು ಗುರು- । ವರನೆ ಪೇಳಿದೆ ಯೀಗಪಾಪದ ದುರ್ವಿಪಾಕವನು ॥
ದುರಿತವೊಂದಾವರ್ತಿ ಸಂಭವಿ- । ಸಿರಲು ಪೋಗುವ ಬಗೆಯದಾವುದು । ಕರುಣಿಸೈ ಪರಿಹಾರವೆಂದನು ಮುನಿತ್ರಿವಿಕ್ರಮನು ॥46॥

ನಗುತಲಾ ಗುರುವೆಂದ ಪತಿತಗೆ । ಮಗನೆ ಪಶ್ಚಾತ್ತಾಪವಾಗಲು । ವಿಗಡಪಾಪಗಳೆಲ್ಲ ಭಸ್ಮೀಭೂತವಾಗುವವು ॥
ಮಿಗಿಲು ಪಾತಕ ಮಾಡಿಯಾದರು । ಹೊಗಲು ಪಶ್ಚಾತ್ತಾಪ ಮನದಲಿ । ನಗಗಳಾದರು ಬೆಂದು ಹೋಗುವವಿದಚಮತ್ಕೃತಿಯೂ ॥47॥

ಹಲವು ಋಷಿಗಳ ವಚನಸಾರವ । ನುಳಿದ ನಿಗಮದ ಮತವ ನಾ ಬಹು । ಚೆಲುವಿನಲಿ ನಿಮಗರುಹುವೆನು ಪರಿಹಾರ ಪ್ರಕರಣವಾ ॥
ಬೆಳೆವ ಪಾತಕರಾಶಿಗಳ ತಾ- । ನಳಿಸಲಿಕೆ ಕೇಳ್ ಬ್ರಹ್ಮದಂಡವು । ಚೆಲುವಿನಲಿ ಗೋದಾನ ಸಾಲಂಕೃತವ ಕೊಡಬೇಕು ॥48॥

ಕೊಡಲಿಕಾ ಗೋದಾನವನು ಬಹು । ಬಡತನವು ಬಂದೊದಗಿದರೆ ನಿಜ । ಕೊಡಲು ಬೇಕೆ ದ್ರವ್ಯ ಶಕ್ತ್ಯನುಸಾರ ಪರಿಹಾರ ॥
ಕೊಡಲು ನಿಷ್ಕ್ರವನರ್ಧನಿಷ್ಕ್ರ ವ । ಬಿಡುಗಡೆಯು ಕೇಳಹುದು ಪಾಪವು । ಕೊಡಲು ಬೇಕೈ ದ್ರವ್ಯವನು ಪಾತಕದ ಮಾನದಲಿ ॥49॥

ತಿಳಿಯದಜ್ಞಾನದಲಿ ಮಾಡಲು । ಅಳಿಯುವುದು ಪಾತಕವು ಮನವಲಿ । ಬೆಳಗಲಗ್ನಿಯು ಕೇಳು ಪಶ್ಚಾತ್ತಾಪ ರೂಪದಲಿ ॥
ಇಳೆಯೊಳಗೆ ಗುರುಸೇವೆ ಮಾಡಲು । ತೊಲಗುವುದು ಪಾತಕವು ಗುರುಕೃಪೆ । ಯಲಿ ಕಣಾ ಸೂರ್ಯ ಪ್ರಕಾಶದಿ ಕತ್ತಲೆಯ ಪಾಡೆ ॥50॥

ತಿಳಿಯದಾಗಿಹ ಪಾಪಕರ್ಮಕೆ । ತೊಳೆದರೈ ಮೈ ಪುಣ್ಯ ತೀರ್ಥಂ- । ಗಳಲಿ ಹತ್ತಾವರ್ತಿ ಪ್ರಾಣಾಯಾಮವೆರಡು ಶತಾ ॥
ಕಳೆಯುವುದು ತತ್ಪಾತಕಂಗಳ । ಬಳಿಕ ಮೂರೇ ಗುಂಜಿ ತೂಕದ । ಹೊಳೆವ ಬಂಗಾರವನು ಕೊಟ್ಟರೆ ಪಾಪಶುದ್ಧಿಯಲಾ ॥51॥

ನದಿಯ ತೀರದೊಳೆರಡು ಗ್ರಾಮದೊ- । ಳುದ ಕದಲಿ ಮೈ ತೊಳೆಯೆ ಚಿಲ್ಲರೆ । ವಿದಿತ ಪಾತಕ ಸುಟ್ಟು ಹೋಗುವುದಿದಕೆ ಭಯವಿಲ್ಲ ॥
ಸುದತಿಪುರುಷರು ಕೂಡಿ ಮಾಡಿದ । ಅಧಮ ಪಾತಕವಿಬ್ಬರಿಗೆ ಸಮ- । ಹದನ ಸಿಗುವುದು ಬೇಕು ಪ್ರಾಯಶ್ಚಿತ್ತವಿಬ್ಬರಿಗೆ ॥52॥

ಪೇಳುವೆನು ಬೇರೆ ಪ್ರಕಾರವ । ಪೇಳ ಬೇಕ್ಕೈ ಹತ್ತುಸಾವಿರ । ವೇಳೆಯಲಿ ಗಾಯತ್ರಿ ಮಂತ್ರವ ಮನದ ಶುದ್ಧಿಯಲಿ ॥
ಗೋಳಿಡುವವ್ವೈ ಪಾತಕಂಗಳು । ಜ್ವಾಲೆಯಲಿ ತಾ ಬೆಂದು ಸುಡುವವು । ಕೇಳಿರೈ ಗಾಯತ್ರಿ ಕೃಚ್ಛ್ರವಿದೆಂದು ಹೆಸರಿದಕೆ ॥53॥

ಚರಿಸಿದರೆ ಗಾಯತ್ರಿ ಕೃಚ್ಛ್ರವ । ಪರಿಹರಿಸುವುದು ಪಾಪವೆಲ್ಲವ । ತರಿಸಿ ಕೊಡುವುದು ಸಕಲಪುರುಷಾರ್ಥಗಳ ಶುಲಭದಲಿ ॥
ತಿರುಗಿ ಪ್ರಾಜಾಪತ್ಯ ಕೃಚ್ಛ್ರವ- । ನರುಹುವೆನು ದಿನಕೊಂದು ಭೋಜನ- । ವಿರಲಿ ಯಥವಾ ಬೇಡಲಾರದೆ ಭಿಕ್ಷೆಯುಣ್ಣುವುದು ॥54॥

ಮೂರು ದಿನ ವುಪವಾಸ ಮಾಡುತ । ಚಾರು ಗುರುಪದಸ್ಮರಣದಲಿ ಸಾ । ಧಾರಣದ ಪಾತಕಗಳೆಲ್ಲವು ಬೂದಿಯಾಗುವವು ॥
ಮೂರನೆಯದತಿಕೃಚ್ಛ್ರವೆಂಬುದು । ಯಾರನಾದರು ಭಿಕ್ಷೆ ಕೇಳದೆ । ಮೂರು ಏಳಾಗ್ರಾಸ ನೂಟವ ಮಾಡಲೇ ಬೇಕು ॥55॥

ಹತ್ತು ಎರಡಾ ರಾತ್ರಿ ಭೋಜನ । ತ್ಯಕ್ತನಾಗಿರಬೇಕು ಜನರಲಿ । ಮತ್ತೆ ಭಿಕ್ಷೆಯ ಬೇಡಬಾರದು ಹೊಟ್ಟೆಗೋಸುಗವೆ ॥
ಮತ್ತೆ ವುಪವಾಸವನು ಮಾಡುವ । ನಿತ್ಯನೇಮವ ಹೇಳುವೆನು ನಿಜ । ಚಿತ್ತಶುದ್ಧಿಯ ಪರಿಯ ಪೇಳ್ವೆನು ಮುನಿವರನೆ ಕೇಳ್ಳೈ ॥56॥

ಒಂದು ಮಾಸದ ನೇಮವನು ನಾ । ನಿಂದು ಪೇಳ್ವೆನು ದರದಿವಸದಲಿ । ಯೊಂದು ಮುಷ್ಟಿಯ ಹಾರದಲಿ ಸಂತೃಪ್ತನಿರಬೇಕು ॥
ಒಂದು ವೇಳೆಯಶಕ್ತನಾಗಲು । ತಿಂದರಾ ತಿಳಗುಳವನಳ್ಳಿ- । ಟ್ಟೋಂದೆರಡು ವೇಳ್ಯಕ್ಕೆ ಬಾಧಿಸದಿದು ಕಣಾ ದೋಷಾ ॥57॥

ಮೂರುದಿನ ಮೊದಲಿಂಗೆನೆ ನಿರಾ- । ಹಾರ ತದನಂತರ ಘೃತದಾ- । ಹಾರ ನಂತರ ಮೂರುದಿವಸಕೆ ಕ್ಷೀರದಾಹಾರಾ ॥
ಮೂರುದಿನ ನಂತರ ಅನಲಾ- । ಹಾರ ನಂತರ ಕ್ಷೀರವೀಪರಿ । ಮೂರು ಏಳಾವರ್ತಿ ಚರಿಸಲು ಪಾಪಕ್ಷಾಲನವು ॥58॥

ಇನ್ನೊರೆವೆನಾ ಪೂರ್ಣಕೃಚ್ಛ್ರವ । ಪೂರ್ಣಜಲ ದಿನವೊಂದು ಕುಡಿದರೆ । ಮುನ್ನ ಮಾಡಲು ಬೇಕುಪೋಷಣವಷ್ಟೆ ಕಾಲಕ್ಕೆ ॥
ಬನ್ನ ಬಡುವವು ಪಾತಕಂಗಳು । ನಿರ್ಣಯವ ನಾ ಪೇಳ್ವೆ ಮನದಲಿ । ಚೆನ್ನ ಪಶ್ಚಾತ್ತಾಪವಾಗಲು ಪಾಪ ಸುಡುತಿಹುದು ॥59॥

ಬೇಲನೇರಲಪಿಂಪಳದ ಕುಶ । ಸಾಲಿನಲಿ ಜಲ ಕುಡಿಯೆ ನಿತ್ಯದಿ । ಕೇಳ ಪರ್ಣಕೃಚ್ಛ್ರವಾಚರಿಸಿರ್ದ ಪರಿಯಹುದು ॥
ಹೇಳುವೆನು ಚಾಂದ್ರಾಯಣದ ಸುವಿ- । ಶಾಲ ಪ್ರಾಯಶ್ಚಿತ್ತವನು ಬಹು । ಕೀಳು ಪಾತಕ ಕಿದುವೆ ಪ್ರಾಯಶ್ಚಿತ್ತಪಾಡಹುದು ॥60॥

ಕೋಳಿ ತತ್ತಿಯ ಮಾನ ತುತ್ತನು । ಮೇಲೆ ಕೆಳಗಿಳಿಸುತ್ತ ಶಶಿಕಲೆ- । ಯೋಲು ತಾನಾಹಾರ ಕೊಳ್ಳಲು ಬೇಕು ನೇಮದಲಿ ॥
ಆಲಿಸೈ ಯಮವಾಸ್ಯೆ ದಿವಸದಿ । ಕೂಳ ತುತ್ತನ್ನೊಂದು ಹುಣ್ಣಿಮೆ । ವೇಳೆಯಲಿ ಹದಿನೈದು ನೇಮದೊಳಿಳಿಸುವುದು ಭರದಿ ॥61॥

ತಾನು ಮಾಡಿದ ಪಾಪವನ್ನಭಿ । ಮಾನವಿಲ್ಲದೆ ಪ್ರಗಟರೂಪದಿ । ಮಾನವರ ಮುಂದೊದರಿ ಪೇಳಲು ಸಭೆಯ ಮಧ್ಯದಲಿ ॥
ಹಾನಿಯಪ್ಪುದು ಸುಟ್ಟು ಪಾಪವು । ಮಾನಸಿಕ ಸಂತಾಪ ದೊಡ್ಡದು । ಭಾನುವಿನ ಸಮ್ಮುಖದಲಿ ಹಿಮದಬ್ಬರಣೆ ನಡೆಯುವದೆ ? ॥62॥

ತೀರ್ಥಕೃಚ್ಛ್ರವ ಪೇಳುವೆನು ಸುಪ- । ವಿತ್ರ ತೀರ್ಥಂಗಳಲಿ ಯಾತ್ರೆಯ । ನುತ್ತಮಾತಂಗನೆ ಮಾಡಬೇಕೈ ಪಾಪವಳಿಯುವುದು ॥
ಶ್ವೇತಪರ್ವತ ವಾರಣಾಸಿಯು । ಕ್ಷೇತ್ರಗಳು ಸುಪವಿತ್ರ ಧರೆಯೊಳು । ಮುಕ್ತನಾಗುವನೊಂದೆ ಕ್ಷಣದಲ್ಲಿ ಸ್ನಾನಮಾತ್ರದಲಿ ॥63॥

ಉಳಿದ ಕ್ಷೇತ್ರಗಳಲ್ಲಿ ಪಾಪವ । ತೊಳೆಯುವುದು ಗಾಯತ್ರಿ ಜಪವೇ । ಅಳಿಯುವುದು ವಿಶ್ವಾಸಘಾತಕಪಾತಕವು ಜವದಿ ॥
ಜಲಧಿಯಲಿ ತಾ ಸೇತುಬಂಧದಿ । ಕೊಳಲು ಜಪಗಾಯತ್ರಿ ಸಾವಿರ- । ವಳಿವುದೈ ಶಿಶುಹತ್ಯ ನಿಜವಿದಗಸ್ತ್ಯಮತವಿಹುದು ॥64॥

ರೀತಿಪೂರ್ವಕ ಶುದ್ಧ ಮನದಲಿ । ತಾತ ಕೇಳ್ಗಾಯತ್ರಿ ಜಪವನು । ಭೂತಳದಿ ಮಾಳ್ಪನಿಗೆ ದ್ವಿಜಕೊಲೆ ಸುಟ್ಟು ಹೋಗುವುದು ॥
ರೀತಿಯಿಂ ಜಲಪಕ್ಷ ಮಾಡಲು । ಪಾತಕ ಸುರಾಪಾನವಳಿವುದು । ಭೀತಿಯೇತಕೆ ಸೊನ್ನೆ ಚೋರನಿಗೇಳು ಲಕ್ಷ ಜಪಾ ॥65॥

ಅಷ್ಟಲಕ್ಷವ ಜಪಿಸಿದರೆ ನಿಜ । ನಷ್ಟವಪ್ಪುದು ಸರ್ವ ಪಾಪವು । ಶಿಷ್ಟಸಮ್ಮತ ಪಾಪನಾಶಕ ವೇದಮಂತ್ರಗಳು ॥
ಇಷ್ಟತನದಲಿ ನಿಮಗೆ ಪೇಳುವೆ । ಕೊಟ್ಟು ಲಕ್ಷವ ಕೇಳ್ ತ್ರಿವಿಕ್ರಮ । ಮುಟ್ಟಲಾರದು ಪಾಪಬಂಧನ ವೇದಪಠಿಸಿದರೆ ॥66॥

ಹಾನಿಯಪ್ಪುದು ದ್ವಿಜರ ಕೊಲೆ ಪವ । ಮಾನಸೂಕ್ತವ ನಾಲ್ಕು ಪಠಿಸಲು । ಪಾನವನು ಮಾಡಲು ಕೇಳಿಂದ್ರಮಿತ್ರಿನಲಿ
ಧ್ಯಾನಪೂರ್ವಕ ಮಾಸವೊಂದಕೆ । ತಾನು ಜಪಿಸಲು ಪಾಪವೆಲ್ಲವು । ಹಾನಿಯಪ್ಪುದು ಕೇಳ್ಮಹಾಪಾತಕವು ಪಂಚಕವು ॥67॥

ನಾಶವಹುದು ಸುವರ್ಣ ಚೋರನ । ದೋಷ ಪವಮಾನಾನ್ಯ ಸೂಕ್ತದೊ- । ಳಾ ಶುನಃಶೇಪೆಂಬ ಮಂತ್ರದ ಜಪದ ಮಹಿಮೆಯಲಿ ॥
ವಾಸವೊಂದರ ಜಪದ ಮಹಿಮೆಯು । ಈಸುಪರಿಯಲಿ ಪಾಪ ಸುಡುವುದು ಮಾಸದಧಿಕದ ಮಹಿಮೆ ಪೇಳುವೆ ಕೇಳು ಮನಗೊಟ್ಟು ॥68॥

ಆರು ಯಿಲ್ಲವೆ ಏಳು ತಿಂಗಳು । ಧಾರುಣಿಯೊಳೀ ಪುರುಷಸೂಕ್ತವ । ಚಾರುತರ ಭಕ್ತಿಯಲಿ ಪಠಿಸಲು ಪಾಪನಾಶಕವು ॥
ಮೀರದಾಹಾರದಲಿ ಮಿತಿ ಸಂ- । ಹಾರ ಮಾಳ್ಪುದು ದುರಿತಪಂಚಕ । ವಾರಣಕೆ ಕೇಸರಿಯಲಾ ಕೇಳ್ಪುರುಷಸೂಕವಿದು ॥69॥

ತ್ರಿಮಧುವೆಂಬುವ ಮಂತ್ರ ಸೂಕ್ತವ । ವಿಮಲ ಸುಪರ್ಣಾತ್ರೀಣಿ ಮಂತ್ರವ । ವಿಮಲಚಿತ್ತದಿ ನಾಚಿಕೇತವ ಜಪಿಸಿದರೆ ಫಲವು ॥
ಅಮಿತ ಪಾಪವಿನಾಶಕರ ಪಂ- । ಚ ಮಹಾಪಾತಕ ಧ್ವಂಸ ಮಾಳ್ಪದು । ನಿಮಗೆ ಪೇಳುವೆ ಬೇರೆ ನಾನಾಯಣಪನವ ಮಂತ್ರ ॥70॥

ಹೆಸರು ಗಾಯತ್ರಿಗೆ ತ್ರಿಪದೆ ಯೆಂ- । ದುಸುರುವರು ಭಕ್ತಿಯಲಿ ಜಪಿಸಲು । ವಸುಧೆಯಲಿ ತದ್ವಿಷ್ಣೋ ಅಘಮರ್ಷಣದ ಪಠಣದಲಿ ॥
ಪರಿಹರಿಸಿದ ಏಳೇಳುಜನ್ಮದ । ವಿಷಮಪಾಪಗಳೆಲ್ಲ ಸುಡುವವು । ಬಿಸಜಬಾಂಧವನೆದುರಿನಲಿ ಹಿಮ ಕರಗುವಂದದಲಿ ॥71॥

ತಿಳಿಯದಜ್ಞಾನದಲಿ ಮಾಡಿದ । ಕಿಲುಬಿಷವನನುತಪ್ತ ಭಾವದಿ । ಕಳೆಯಬೇಕೈ ಪಂಚಗವ್ಯವ ಯೋಗ್ಯ ಮಾನದಲಿ ॥
ಜಲವು ಕುಶಸಮ್ಮಿಶ್ರ ಗೋಮಯ । ತಿಳಿಯೆ ದಧಿಘೃತಮೂತ್ರಕ್ಷೀರವ । ಕೊಳಲುಬೇಕೈ ಪಂಚಗವ್ಯವ ಯೋಗ್ಯಮಾನದಲಿ ॥72॥

ನೀಲವರ್ಣದ ದನದ ಮೂತ್ರವು । ಕಾಲವರ್ಣದ ದನದ ಗೋಮಯ । ಹಾಲು ಸಂಗ್ರಹ ಮಾಡ ಬೇಕೈ ತಾಮ್ರದನವಿನದು ॥
ಕೇಳು ಬಿಳಿದಾಕಳಿನ ದಧಿಯನು । ಕೂಲ ಕಪಿಲಾ ದನದ ತುಪ್ಪವ ಮೇ । ಳಯಿಸ ಬೇಕಿವನು ವಿಧಿಪೂರ್ವಕದಿ ಫಲಿಸುವರೆ ॥73॥

ಕಾಲುಸೇರಿನ ಮಾನಮೂತ್ರದ । ಕಾಲುಕರಡಿಮೆರಡಯ್ಯ ಕ್ಷೀರವು । ಕಾಲು ಮೂರರದಧಿಯು ಗೋಮಯ ಹಿರಿಬೆರಳಿನಷ್ಟು ॥
ಕಾಲುಸೇರಿನ ತುಪ್ಪವಷ್ಟೇ । ಮೇಳಯಿಸಿರ್ಕೈ ದರ್ಭ ನೀರನು । ಹೇಳುವೆನು ಪ್ರಾಶನದ ಮಂತ್ರವ ಪಾಪನಾಶಕವಾ ॥74॥

ಕುಶ ಸಹಿತವಿರುತಿಹವು ಕೇಳ್ಕೈ । ರಸಗಳಾರೇ ಪಂಚಗವ್ಯ ದೊ । ಳುಸಿರುವೆನು ಪ್ರತ್ಯೇಕರಸ ಪ್ರಾಶನದ ಮಂತ್ರವನು ॥
ಎಸೆವುದೈ ಮೊದಲಿಗೆ ಇರಾವತಿ । ಎಸವುದೆರಡನೆ ಇಂದ್ರವಿಷ್ಣು ವು । ಎಸೆವುದೈ ಮೂರನೆಯ ಮಾನಸ್ತೋಕ ಮಂತ್ರವಿದು ॥75॥

ನಾಲಕನೆ ಮಂತ್ರವು ಪ್ರಜಾಪತಿ । ಮೇಲೆ ಗಾಯತ್ರಿಯು ಕಡೆಗೆ ನೀ- । ನಾಲಿಸೈ ವ್ಯಾಹೃತಿಯ ಮಂತ್ರವು ಪ್ರಣವ ಪೂರ್ವಕವು ॥
ಮೇಲೆ ಹೇಳಿದ ಮಂತ್ರಗಳು ನಿ- । ರ್ಮೂಲ ಮಾಳ್ಪವು ಪಾಪರಾಶಿಯ । ಕೀಳುವವು ಚರ್ಮಾಸ್ಥಿಗತ್ವ ಪಾಪವನು ದೇಹದಲಿ ॥76॥

ಇನಿತು ಸಾಮಗ್ರಿಗಳು ಸಿಗದಿರೆ । ದನಕಪಿಲೆಯಿರಲದರ ಒಡವೆಗೆ । ಳನುವರಿಸಿ ಮೇಳೈಸಬೇಕೈ ಪಂಚಗವ್ಯವನು ॥
ಎನಿತು ಪಾತಕವಿರಲು ಸರ್ವಕೆ । ಅನುವರದ ಪರಿಹಾರವಿರ್ಪುದು । ವಿನುತ ಸದ್ಗುರುಕೃಪೆಯು ಮೊದಲನೆ ದುರಿತ ಪರಿಹಾರ ॥77॥

ಹಿರಿದು ಪಾತಕ ಪಂಚಕವು ಭೂ- । ಸುರರವಧೆ ಸುರೆಕುಡಿವುದೈ ಮೇಣ್- । ಪರಸ್ವರ್ಣಸ್ತೇಯ ಗುರುಸ್ತ್ರೀಯೊಡನೆ ವ್ಯಭಿಚಾರ ॥
ದುರಿತವೈದನೆಯವರ ಕೂಡನು । ಸರಿಸಿ ನಡೆವುದು ಯಿಂತು ಪಂಚಕ । ದುರಿತಗಳು ಭೂಮಿಯಲಿ ಪೇಳ್ವರು ನೀತಿ ಕೋವಿದರು ॥78 ॥

ಜಾತಿಯವ ಶಾಸ್ತ್ರಜ್ಞ ಧರ್ಮಸು । ನೀತಿ ಕೋವಿದನಿರಲು ಯಮನು ಪು- । ನೀತ ಮಾಳ್ಪನು ಪಾಪನಾಶಕ ತತ್ಪ್ರಸಾದವಲಾ ॥
ಈ ತೆರದೊಳು ನೃಸಿಂಹ ತಾಪಸ । ಮೂರ್ತಿ ಶ್ರೀಗುರು ಪತಿತನಿಗೆ ಬಹು । ಪ್ರೀತಿಯಿಂದುಪದೇಶಿಸಿದನೈ ಕರ್ಮಫಲಗಳನು ॥79॥

ಹಿಂದೆ ಜನ್ಮದಿ ವಿಪ್ರಕುಲದಲಿ । ಬಂದು ತಾಯ್ತಂದೆಗಳ ಗುರುವರನು । ನಿಂದಿಸಿದ ಫಲದಿಂದ ದೊರೆಯಿತು ಪತಿತಜನ್ಮವಿದು ॥
ಒಂದು ಮಾತನು ಪೇಳುವೆನು ನಿನ- । ಗಿಂದು ಸಂಗಮದಲ್ಲಿ ವೀಯಲು । ಬಂದಪುದು ದ್ವಿಜನ್ಮ ನಿನ್ನಯ ಪಾಪ ಹೋಗುವುದು ॥80॥

ಪತಿತನೆಂದನು ನಗುತ ಗುರುವಿಗೆ । ಕ್ಷಿತಿಯೊಳಗೆ ನಾ ನಿನ್ನ ಕಂಡೆನು । ಪತಿತತನವೆಲ್ಲಿಯದು ನಿನ್ನಯ ದರ್ಶನದ ಫಲದಿ ॥
ಪತಿತನೆನುತಲುಪೇಕ್ಷೆ ಮಾಡದೆ । ಗತಿಯ ಕಾಣಿಸು ಶ್ರೀಗುರುವೆ ನಿನ- । ಗತಿವಿನಯದಿಂ ಪಾದಕೆರಗುವೆ ರಕ್ಷಿಸೈ ಭರದಿ ॥81॥

ಕಾಗೆ ಮಾನಸ ಕೆರೆಗೆ ಪೋಗಲಿ । ಕಾಗುವುದು ಕೇಳ್ರಾಜಹಂಸವು । ಹೀಗೆ ನಿನ್ನಯ ದರ್ಶನದಿ ಪಾವನವು ಮಮ ಗಾತ್ರ ॥
ತಾಗಲಾ ಕಬ್ಬಿಣಕೆ ಪರುಷವು । ಆಗುವುದು ಸುಂದರ ಸುವರ್ಣವು । ಹೋಗಲಾಪದೆ ತಿರುಗಿ ಕಬ್ಬಿಣ ಜನ್ಮಕದು ತಿಳಿಯೆ ॥82॥

ನಿನ್ನ ದರ್ಶನವೆಂಬ ಸುಧೆಯಲಿ । ಯೆನ್ನ ದೇಹ ಪುನೀತವಾಯಿತು । ಯೆನ್ನ ಮತಿಯಲಿ ಜ್ಞಾನರಾಶಿಯು ಸಿಕ್ಕಿ ತುಳುಕುವುದು ॥
ಭಿನ್ನ ಭಾವವನರಿಯದೀಕ್ಷಣ । ಯೆನ್ನ ನೀ ಭೂಸುರರ ಕುಲದಲಿ । ಮನ್ನಿಸೈ ಗುರುನಾಥ ಪಾಮರನೆಂದು ತಿಳಿಯದಲೆ ॥83॥

ಕೇಳಿದನು ತಲೆದೂಗಿ ಗುರುವರ । ಪೇಳಿದನು ನಸುನಗುತ ಮಾರ್ನುಡಿ । ಕೀಳುಜಾತಿಯ ಜನ್ಮ ನಿನ್ನಿದು ವಿಪ್ರಕುಲವೆಂತು ॥
ಹಾಳು ನಿಂದೆಯ ಮಾಡಿ ನಿನಗನು- । ಕೂಲವಾಗದು ವಿಪ್ರವೃಂದವು । ಹೇಳುವೆನು ಋಷಿವರ್ಯ ವಿಶ್ವಾಮಿತ್ರ ಕಥನವನು ॥84॥

ಕ್ಷಾತ್ರಕುಲದಲಿ ಪುಟ್ಟಿ ವಿಶ್ವಾ-। ಮಿತ್ರ ಹಟಮಾಡಿದನು ಗಾಧಿಯ । ಪುತ್ರ ಬ್ರಾಹ್ಮಣ ಕುಲದಿ ಋಷಿವರನಾಗಬೇಕೆಂದು ॥
ಧಾತ್ರಿಯಲಿ ಬ್ರಹ್ಮನ ಶತಾಬ್ದ ವಿ- । ಚಿತ್ರತರದಲಿ ತಪವ ಮಾಡಿ ವಿ- । ಧಾತ್ರ ಮೊದಲಾದವರಿಗೆಂದನು ಬ್ರಹ್ಮಋಷಿ ಯೆನುತಾ ॥85॥

ಸುವರರು ಮೇಣವಗೆ ಪೇಳ್ದರು । ಗುರು ವಸಿಷ್ಠನು ಮಾನ್ಯನೆಮಗವ । ಕರೆದರೆ ಬ್ರಹ್ಮರ್ಷಿ ನಿನಗಾವ್ ಮನ್ನಿಪೆವು ಭರದಿ ॥
ಮರಳಿ ವಿಶ್ವಾಮಿತ್ರನಾಗಲೆ । ಗುರುವಶಿಷ್ಠನ ಕರೆದು ಪೇಳ್ದನು । ಕರೆಯ ಬೇಕೈ ಯೆನಗ ನೀ ಬ್ರಹ್ಮರ್ಷಿನಾಮದಲಿ ॥86॥

ಗುರುವಸಿಷ್ಠನು ಪೇಳಿದನು ಋಷಿ- । ವರನೆ ಕ್ಷತ್ರಿಯ ಕುಲದವರು ತಪ । ಕಿರುವರಪವಿತ್ರರು ಕಣಾ ನೀ ದೇಹವನು ತೊರೆದು ॥
ಮರಳಿ ವಿಪ್ರರ ಕುಲದಿ ಬಂದರೆ । ಕರೆಯುವೆನು ಬ್ರಹ್ಮರ್ಷಿಯೆನುತಲಿ । ಪರಮ ತಾಪಸಿ ಗಾಧಿಜನು ಸಂತಪ್ತನಾದನಲಾ ॥87॥

ಪರಿಪರಿಯೋಳಾ ಗುರುವಸಿಷ್ಠಂ- । ಗರುಹಿದನು ಗಾಧಿಜನು ಪೇಳಿದ । ತೆರದಿ ಕರೆಯನೆನುತ್ತ ಕೋಪದಿ ಕೆದರಿ ಮನದೊಳಗೆ ॥
ಗುರುವಶಿಷ್ಠನ ನೂರು ಮಕ್ಕಳ । ಕರುಣೆಯಿಲ್ಲದೆ ಕೊಂದ ಗಾಧಿಜ- । ನರಿಯನ್ಯೆ ಸಾತ್ವಿಕಮಹಿಮೆಯನು ತಾಪಸೋತ್ತಮನಾ ॥88॥
ಮುನಿ ವಶಿಷ್ಠ ನು ಕೋಪಿಸನು ನಿಜ । ತನಯ ಮರಣದ ವಾರ್ತೆಯಲಿ ಮ-। ತ್ತನುವುದಕೆ ಬ್ರಹ್ಮರ್ಷಿಯೆನುತಲಿ ಸಿದ್ಧ ಬೇರಿಲ್ಲಾ ॥
ಮನಸಿನಲಿ ಬೈಯುತ್ತ ಪರ್ವತ । ವನು ಕರದಿ ತಾನೆತ್ತಿ ಕೊಲ್ಲುವೆ । ನೆನುತ ಬಂದನು ಮುನಿವಸಿಷ್ಠನ ಮೇಲೆ ಖೇದದಲಿ ॥89॥
ಮುನಿ ವಶಿಷ್ಠನು ಶಾಂತ ಮೂರುತಿ । ಮುನಿಯಲಾರನು ನಗುತ ನಿಂತನು । ಮನದಿ ಪಶ್ಚಾತ್ತಾಪವಾಯಿತು ಗಾಧಿಜಗೆ ಮರಳಿ ॥
ಮುನಿವಸಿಷ್ಠ ನ ಕೊಂದೆನಾದರೆ । ಅನುವವರು ಬೇರಿಲ್ಲ ದಿವಿಜರ । ಗಣವು ತನಗನ್ನು ವರು ಈ ಮುನಿಯೊಬ್ಬ ಹೇಳಿದರೆ ॥90॥
ಎನುತಲೀಪರಿ ಚಿಂತಿಸುತ ತಾ- । ವಿನಯದಿಂ ಪರ್ವತವ ಬಿಸುಟನು । ಮನವನರಿತನು ಮುನಿವಸಿಷ್ಠನು ಗಾಧಿಜನನಪ್ಪಿ ॥
ಮುನಿಯೆ ನೀ ಬ್ರಹ್ಮರ್ಷಿಯಾದೀ । ಕ್ಷಣದೊಳೆನುತಲಿ ಪೇಳಿದನು ಮನ । ದಣಿಯೆ ಕೊಂಡಾಡಿದನು ವಿಶ್ವಾಮಿತ್ರ ಮುನಿರಾಯಾ ॥91॥
ಕರೆಯೆ ವಿಶ್ವಾಮಿತ್ರ ಭೋಜನ । ಕರುಹಿದನು ಶ್ರೀಗುರುವಸಿಷ್ಠನು । ತೊರಿಯಬೇಕೀ ನಿನ್ನ ನಿಜದೇಹವನು ನಂತರದಿ ॥
ಬರುವೆ ನಿನ್ನಯ ಭೋಜನವ ಪತಿ । ಕರಿಸುವೆನು ತಾನೆಂದು ಪೇಳಲು । ತರಣಿ ಕಿರಣದಿ ಭಸ್ಮ ಮಾಡಿದನಾಗ ದೇಹವನು ॥92॥
ತರಣಿಕಿರಣದಿ ಸುಟ್ಟು ಗಾಧಿಜ । ಧರಿಸಿದನು ನೂತನ ಶರೀರವ । ಭಂದೊಳಾದನು ಗಾಧಿಜನು ಬ್ರಹ್ಮರ್ಷಿ ನಾಮಕನು ॥
ಸುರನರರೊಳವಗಾಯ್ತು ಮಾನ್ಯತೆ । ಧರಣಿಯಲಿ ಬ್ರಹ್ಮರ್ಷಿನಾಮದಿ । ಮೆರೆದ ವಿಶ್ವಾಮಿತ್ರ ತಪಸಾಮರ್ಥ್ಯವಸಮಾನಾ ॥93॥
ಆದ ಕಾರಣ ನೀನು ಪತಿತನು । ಭೇದವಿಲ್ಲದೆ ತನುವ ತ್ಯಜಿಸಲು । ಆದಪುದು ಬ್ರಾಹ್ಮಣರ ಕುಲದಲ್ಲಿ ಜನ್ಮ ನಿನಗಿನ್ನು ॥
ಬಾಧಿಸದು ಗತ ಪಾತಕವು ನಿಜ । ಮೇದಿನಿಯೊಳೀ ಜನ್ಮದಲ್ಲಿ ವಿ । ನೋದದಿಂದನುತಾಪವಾಯಿತು ಪುಣ್ಯವಶದಿಂದಾ ॥94॥

ಈ ತೆರದಿ ಪತಿತನಿಗೆ ಶ್ರೀಗುರು- । ನಾಥನುಪದೇಶಿಸಿದನಾದರು । ಜಾತಿಯಲಿ ತಾ ಶ್ರೇಷ್ಠ ಬ್ರಾಹ್ಮಣನೆಂದು ಬಗೆದನಲಾ ॥
ಜಾತಿಬಡವಗೆ ಹಣವು ದೊರೆಯಲು- । ಆತನದ ಬಿಸುಡುವನೆ ರೋಗಿಗೆ । ಭೂತಳದಿ ಪೀಯೂಷ ಸಿಗಲವ ಪ್ರಾಣ ತ್ಯಜಿಸುವನೆ ॥95॥

ಹೊಟ್ಟೆಗಿಲ್ಲದೆ ಹಸಿವೆಯಲಿ ಕಂ- । ಗೆಟ್ಟ ಪಶುವಿಗೆ ತೃಣದರಾಶಿಯು । ದೃಷ್ಟಿಗೋಚರವಾಗಲದ ಬಿಡುತಿಹುದೆ ಸುಲಭದಲಿ ॥
ಭ್ರಷ್ಟ ಪತಿತನು ತಾನು ಬ್ರಾಹ್ಮಣ । ಶ್ರೇಷ್ಠ ನಿಹೆ ನಾ ಮನೆಗೆ ಪೋಗುವೆ । ಕಷ್ಟವಿಲ್ಲದೆ ನಿಮ್ಮ ಕೂಡುವೆನೆಂದ ವಿಪ್ರರಿಗೆ ॥96॥

ಅನಿತರೊಳಗಾ ಪತಿತನಿದ್ದೆಡೆ । ವನಿತೆ ಪುತ್ರರು ಬಂದು ಕಂಡರು । ಮುನಿಸಿನಲಿ ಮಾತಾಡಿಸಲು ಚಾಂಡಾಲ ನಿಜಸತಿಯಾ ॥
ಕನಲಿ ದೂರಕೆ ಹೋಗಿ ತನ್ನಯ । ತನಯಭಾರ್ಯೆಗೆ ಮುಟ್ಟದಿರು ನೀ । ವೆನುತ ಹಿಂದಟ್ಟಿದನು ಚೋದವಿದೇನ ಹೇಳವೆನು ॥97॥

ನೋಡಿದಳು ದುಃಖದಲಿ ಪತಿಯನು । ಖೋಡಿ ಯೇನಾಯ್ತೆಂದು ತಾ ಮಾ । ತಾಡಿದಳು ಗುರುರಾಯ ಕರುಣಿಸು ಕರುಣಿಸೈ ಯೆನ್ನಾ ॥
ಓಡಿದರೆ ಪತಿ ಯೆನ್ನ ಬಿಟ್ಟರೆ । ರೂಢಿಯಲಿ ನಾ ಪ್ರಾಣ ತ್ಯಜಿಸುವೆ । ಬೇಡವೀ ಸಂಸಾರ ಮಕ್ಕಳು ಯೆಮಗೆ ಬಹುಮಂದಿ ॥98॥

ಏನ ಮಾಡಲಿ ಶ್ರೀಗುರುವೆ ಪತಿ । ಯೇನ ಬಗೆದನೋ ನೀ ದಯಾನಿಧಿ । ಪ್ರಾಣನಾಥನ ಕಳುಹಿಕೊಡು ಯೆನ್ನೊಡನೆ ಶೀಘ್ರದಲಿ ॥
ಏನ ಮಾಡಿದೆ ನಾನು ಯೆನ್ನನು । ಯೇನು ಕಾರಣ ತ್ಯಜಿಪನವ ನೀ । ಮಾನನಿಧಿ ಪತಿ ಹೋಗೆ ರಕ್ಷಿಪರಾರು ಮುಂದೆನ್ನಾ ॥99॥

ಆಕೆಯಾಡಿದ ನುಡಿಯ ಕೇಳಿ ವಿ- । ವೇಕದಲಿ ಗುರುವಾಡಿದನು ನಿನ । ಗೇಕೆ ಬುದ್ಧಿಭ್ರಂಶವಾಯಿತು ಮನೆಗೆ ನಡಿ ಈಗಾ ॥
ಈ ಕಳತ್ರ ಸುತಾದಿಗಳ ಬಿಡ । ಲೇಕೆ ಸದ್ಗತಿಯಹುದೆ ನಿನಗಿದು । ಸಾಕು ಹುಡುಗಾಟಿಕೆಯ ಬಿಡು ಬಿಡು ಬುದ್ಧಿ ಭ್ರಂಶವನು ॥100॥

ಮಡದಿಯನು ಮಾಡಿದರೆ ಮಕ್ಕಳ । ಪಡೆದು ಸಂಸಾರದಲಿ ಯಿಂದ್ರಿಯ । ಗಡಣವನು ತೋಷಿಸಲು ಬೇಕೈ ಧರ್ಮ ನೀತಿಯಿದು ॥
ಮಡದಿಮಕ್ಕಳ ಬಿಟ್ಟು ಬಿಡಲಾ । ಜಡವಹುದು ಸದ್ಗತಿ ಕುಟುಂಬದ । ಪೋಡಲತಾಪವಧೋಗತಿಗೆ ಸೋಪಾನ ಸುಲಭವಲಾ ॥101॥

ಮಾಡಿ ಮಡದಿಯ ಬಿಡುವುದನುಚಿತ । ಮಾಡಬಾರದು ಮೊದಲು ಲಗ್ನವ । ಮಾಡಿ ಬಿಟ್ಟರೆ ವನಿತೆಯರು ಗೋಳಾಡುವರು ನಿಜವು ॥
ರೂಢಿಪವನಾನಿಲರ ಸಾಕ್ಷಿಯ । ಮಾಡಿ ವರಿಸಿದ ತರುಣಿಯನು ಬಿಡ- । ಬೇಡ ದೋಷವೂ ಹೆಚ್ಚಿನದು ಹಿತವಚನ ಪೇಳುವೆನು ॥102॥

ಈ ನುಡಿಯ ಚಾಂಡಾಲ ಕೇಳ್ದನು । ಜ್ಞಾನವೆನಗಾಯ್ತಿದರ ನಂತರ । ಹೀನ ಜಾತಿಯವನೆಂದು ಪೊಗಲ್ಕೆ ಗುರುವೆ ಪೇಳೆನಗೆ ॥
ಮಾನಸದಿ ಗುರು ಚಿಂತಿಸಿದನೈ । ಜ್ಞಾನಬೀಜ ವಿಭೂತಿ ಮೈಯಲಿ । ತಾನೆ ತೊಳೆಯಲು ತಿಮಿರ ಬಂದಪುದಿದುವೆ ಯೋಗ್ಯವಲಾ ॥103॥

ಕರೆದು ಶಿಷ್ಯರಿಗೆಂದನಾ ಗುರು- । ವರನು ಲುಬ್ಧಕನೋರ್ವನನು ಕರೆ- । ತರಲು ಬೇಕೆನಲಾಗಲೋಡಿದರೂರೊಳಗೆ ತ್ವರದಿ ॥
ತರಿಸಿದರು ಲುಬ್ಧಕನ ತತ್ ಕ್ಷಣ । ಗುರುವು ಪೇಳಿದನವಗೆ ನೀರಲಿ । ಭರದಿ ಪತಿತನ ಮೈ ತೊಳೆದು ತೆಗೆ ತೆಗೆ ವಿಭೂತಿಯನು ॥104॥

ಗುರುನಿರೋಪದಿ ನೀರ ತಂದರು । ಭರದಿ ಪತಿತಗೆ ಸ್ನಾನ ಹಾಕಲು । ಹರಿದು ಹೋಯ್ತು ವಿಭೂತಿ ಜ್ಞಾನವು ಕರಗಿ ಹೋಯಿತಲಾ ॥
ತರುಣಿಪುತ್ರರ ನೋಡಿ ತಾನೆ- । ಕ್ಕರದಿ ಬಿಗಿಯಪ್ಪಿದನು ದ್ವಿಜಕುಲ- । ಮರೆವ ಬಂತಾಕ್ಷಣದಿ ಚೋದ್ಯವನೇನ ಹೇಳುವೆನು ॥105॥

ಮಡದಿ ಮಕ್ಕಳ ಮಮತೆಯಲ್ಲಿಯೆ । ಅಡಗಿಹೋಯಿತು ಜ್ಞಾನ ಪತಿತಗೆ । ಒಡಬಡಿಸಿ ಮಡದಿಯನು ಮನೆಗೈ ತಂದನಾಕ್ಷಣದಿ ॥
ಪಡೆದರಾಶ್ಚರ್ಯವನು ನೆರೆದಿಹ । ಜಡಮತಿಯ ಮಾನವರು ನೋಡುತ । ನಡೆದ ಗೋಷ್ಠಿಯ ಕೇಳಿದರು ಶ್ರೀಗುರುಚರಣ ನೋಡಿ ॥106॥

ಇಂತು ನಡೆದಿಹ ಸಂಗತಿಯ ತಾ- । ನಂತು ನೋಡಿ ತ್ರಿವಿಕ್ರಮನು ಬಹು । ಸಂತಸದಿ ಕೇಳಿದನು ಗುರುವರ ಪೇಳು ಗೂಢವನು ॥
ಎಂತು ಪತಿಗೆ ಜ್ಞಾನವಾಯಿತು । ಎಂತು ಮೈತೊಳೆಯಲ್ಕೆ ತಿಮಿರವು । ಬಂತು ಪೇಳೆಮಗದನು ವಿಸ್ತಾರದಲಿ ಮನವರಿಯೆ ॥107॥

ನುಡಿಯನಾಲಿಸಿ ಗುರುವು ಪೇಳ್ದನು । ಜಡಮತಿಯ ಪತಿತಂಗೆ ಜ್ಞಾನದ । ಕಡಲು ಕೈಸೆರೆಯಾಯ್ತು ನೋಡು ವಿಭೂತಿಮಹಿಮೆಯಿದು ॥
ಕೊಡದ ನೀರಲಿ ಮೈ ತೊಳೆಯಲು । ಅಡಗಿತೈ ಸುಜ್ಞಾನ ಭಸ್ಮವು । ಬಿಡಲು ದೇಹವ ಜ್ಞಾನವದರೊಡಗೂಡಿ ಹೋಯಿತಲಾ ॥108॥

ಪುಣ್ಯಪಾವನ ಭಸ್ಮ ಮಹಿಮೆಯು । ಪೂರ್ಣಸ್ವಾನಂದವನು ಕೊಡುವುದು । ಮನ್ನಿಸಲು ಪರಬ್ರಹ್ಮರೂಪದ ಮೂಲಬೀಜವಿದು ॥
ಇನ್ನು ಭಸ್ಮಮಹಾತ್ಮ್ಯೆಯನು ನಾ । ನಿರ್ಣಯಿಸಿ ಹೇಳುವೆನೆನುತಲಿ । ಬಣ್ಣಿಸಿದನ್ನೈ ವಿಷ್ಣುರೂಪನು ಗುರುವು ಶಿಷ್ಯರಿಗೆ ॥109॥

॥ ಅಧ್ಯಾಯ 28 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 29

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ನರಹರಿಸರಸ್ವತಿ ತ್ರಿವಿಕ್ರಮ- । ಗರುಹಿದನು ಭಸ್ಮಪ್ರಭಾವವ- । ನರುಹಿದನು ಭಸ್ಮವನು ಧರಿಸುವ ವಿಧಿಯನೆಲ್ಲವನು॥

ಗುರುಚರಣಧ್ಯಾನದಿ ನಿರಂತರ । ದೊರೆಯುವುದು ಸ್ವಾನಂದವಗಣಿತ । ನಿರುಪಮವು ಸ್ವಾತಂತ್ರ್ಯ ಪರಿಮಿತಯಿಲ್ಲ ಸಂತಸಕೆ ॥
ಧರೆಯೊಳದನರಿತವರು ಜಾಣರು । ಸುರರು ಸಹ ನರರಾಗಿ ಭೂಮಿಗೆ । ಬರುವರ್ರೈ ಸ್ವಾದಿಸಲಿಕಾನಂದವ ನಿರಂತರದಿ ॥1॥

ಮುನಿ ತ್ರಿವಿಕ್ರಮ ಭಾರತಿಯು ಗುರು- । ವನು ವಿನಯಪೂರ್ವಕದಿ ಕೇಳಲು । ಮನದಿ ಸಂತಸದಿಂ ವಿಭೂತಿಯಮಹಾತ್ಮ್ಯೆಯುಸಿರಿದನು ॥
ಮನವ ಕೊಟ್ಟದ ಕೇಳಿರೆಂದನು । ವಿನುತಚರಣ ನೃಸಿಂಹಸರಸತಿ । ಮನುಜರಿಗೆ ಸುಲಭದಲಿ ತರಣೋಪಾಯವನರುಹಿದನು ॥2॥

ಇದ್ದನಾ ಕೃತಿಯುಗದಿ ಪೂರ್ವದಿ । ಶುದ್ಧ ಬುದ್ಧ ಬ್ರಹ್ಮವೇತ್ತೆ ಪ್ರ- । ಸಿದ್ಧ ಮುನಿವರ ವಾಮದೇವ ಮಹಾತ್ಮನೀಜಗದಿ ॥
ಬದ್ಧ ವಲ್ಕಲನಾಗಿ ಮೈಗೆ ವಿ- । ಶುದ್ಧ ಭಸ್ಮವ ಪೂಸಿ ತಿರುಗುತ । ಲಿದ್ದನಾ ಮುನಿವರನು ಲೋಕಾರಾಧನೆಯ ನೆವದಿ ॥3॥

ಮಡದಿ ಮಕ್ಕಳ ಗೊಡವೆಯಿಲ್ಲದೆ । ಜಡಿದು ಷಡ್ವೈರಿಗಳ ಚಿತ್ತದಿ । ಪಡೆದು ಸಂತುಷ್ಟಿಯನು ನಿಸ್ಪೃಹ ಮೌನಿವರ ನೆನಿಸಿ ॥
ಹಿಡಿದು ಜಡೆಯನು ಶಿರದಿ ವ್ಯಾಘ್ರದ । ಕಡಿದ ಚರ್ಮವ ಹೊದ್ದು ತಿರುಗುತ । ನಡೆದನ್ರೈ ದೇಶಾಂತರದಿ ಪರರುಪಕೃತಿಯ ಬಯಸಿ ॥4॥

ತಿರುಗಿ ನಾನಾ ಕ್ಷೇತ್ರ ತೀರ್ಥವ । ಬರುತ ಕಂಡನು ಘೋರ ರಾಕ್ಷಸ । ರಿವರು ಕ್ರೌಂಚಾರಣ್ಯ ಭೂಮಿಯ ಭೀತಿದಾಯಕವಾ ॥
ನರರ ಪಶುಗಳ ತಿಂದು ತೇಗುವ । ಪರಮದುಷ್ಟನು ಬ್ರಹ್ಮರಾಕ್ಷಸ । ನಿರುವನೋರ್ವನು ವನದೊಳಾ ಬಹುಕಾಲಪರಿಯಂತಾ ॥5॥

ಮುನಿವರನು ಕೇಳ್ ವಾಮದೇವನು । ವನಕೆ ಬಂದನು ತಿರುಗಿ ದೇಶವ । ನನಿತರೊಳಗಾ ಬ್ರಹ್ಮರಾಕ್ಷಸ ಕಂಡು ಸಂತಸದಿ ॥
ಮನದಣಿಯ ಸುಗ್ರಾಸವಾಯಿತು । ಮನುಜನೀತನ ತಿಂಬೆನೆನುತಲಿ । ಘನ ರಭಸದಲಿ ವಾಮದೇವನ ಕಡೆಗೆ ನೋಡಿದನು ॥6॥

ಕರಕರನೆ ತಾ ಹಲ್ಲುಕಿಸಿಯುತ । ದೊರಕಿಹನು ಋಷಿ ತಿಂಬೆನೆನುತಲಿ । ಭರದಿ ಬಂದನು ಬಾಯ ಪಸರಿಸಿ ಮುನಿಪನಿದ್ದೆಡೆಗೆ ॥
ಬರುತ ಬಿಗಿಯಪ್ಪಿದನು ಋಷಿಯನು । ಪರಿಯ ಕಂಡಾ ವಾಮದೇವನು । ಕರುಣದಿಂ ನಸುನಗುತಲಿದ್ದನು ರಕ್ಕಸನ ನೋಡಿ ॥7॥

ಬೆದರದೋಡದೆ ಋಷಿಯನೋಡುತ । ಮುದದಿ ರಕ್ಕಸ ಬಾಯ ಪಸರಿಸಿ । ವದನದಲಿ ತುತ್ತಾದನೆಂದಾ ಋಷಿಯ ಕಚ್ಚಿದನು ॥
ಅದುಭುತವನೇನೆಂಬ ಭಸ್ಮವು । ವದಗಿ ತಾ ರಕ್ಕಸನ ಬಾಯೊಳು । ಉದಿತವಾಯಿತು ಜ್ಞಾನಜ್ಯೋತಿಯು ರಾಕ್ಷಸಾಧಮಗೆ ॥8॥

ದುರಿತರಾಸಿಯು ಭಸ್ಮವಾಯಿತು । ತಿರುಗಿ ರಕ್ಕಸ ಜ್ಞಾನಿಯಾದನು । ಪರುಷಸ್ಪರ್ಶದಿ ಲೋಹ ಚಿನ್ನವ ಮಾಳ್ಪತೆರನಂತೆ ॥
ನರನಿಗಮೃತವ ಕುಡಿಸಲಾಕ್ಷಣ । ಸುರರಯೋಗ್ಯತೆ ಬರುವ ತೆರದಲಿ । ಬರಲು ಮಾನಸಕೆರೆಗೆ ಕಾಗೆಯು ಹಂಸವಾದಂತೆ ॥9॥

ಜಂಬುನದಿಯಲಿ ಮಣ್ಣು ಚಿನ್ನವಿ । ದೆಂಬ ನಾಣ್ಣುಡಿ ನಿಜವಿದಾಯಿತು । ಹಂಬಲಿಲ್ಲದೆ ಬ್ರಹ್ಮರಾಕ್ಷಸ ಸಾಧು ದರ್ಶನದಿ ॥
ಕುಂಭಿನಿಯೊಳಾದನು ಪುನೀತನು । ಸಂಭ್ರಮವ ನಾನೆಂತು ಬಣ್ಣಿಪೆ- । ನಂಬುಧಿಯ ಮಾನದ ದುರಿತವದು ಬತ್ತಿ ಬಯಲಾಯ್ತು ॥10॥

ದೊರಕುವುದು ಪುರುಷಾರ್ಥವೆಲ್ಲವು । ದೊರಕಲಾರದು ಭಾಗ್ಯವಿಲ್ಲದೆ । ಧರೆಯೊಳಗೆ ಸತ್ಪುರುಷದರ್ಶನ ದುರ್ಲಭವು ಜಗದಿ ॥
ದರುಶನದ ಮಾತ್ರದಲಿ ಪಾಪದ । ಗಿರಿಯು ಸುಡುವುದು ಸಾಧುಸಜ್ಜನ- । ದರುಶನದ ಮಹಿಮೆಯನು ಬಣ್ಣಿಸಲಾರೆ ಬಾಯಿಯಲಿ ॥11॥

ಆನೆಕುದುರೆಮನುಷ್ಯರನ್ನನು । ಮಾನವಿಲ್ಲದೆ ನುಂಗಿ ಬಿಟ್ಟರು । ಮಾನಿಸದು ಕ್ಷುಧೆ ಸಾಗರವ ಪ್ರಾಶನವ ಮಾಡಿದರು ॥
ಮಾನಿಸದು ತೃಷೆ ಬ್ರಹ್ಮರಾಕ್ಷಸ- । ಗೇನು ಹೇಳಲಿ ಕ್ಷುತ್ಪಿಪಾಸೆಯು । ಕ್ಷೀಣವಾಯಿತು ಮುನಿಯ ಸ್ಪರ್ಶದಿ ಜ್ಞಾನಿಯಾದನಲಾ ॥12॥

ಚರಣಕೆರಗುತ ಬ್ರಹ್ಮರಾಕ್ಷಸ । ಪರಿಪರಿಯೊಳಾ ಮುನಿಯ ಸ್ತುತಿಸುತ । ಅರುಹಿದನು ಗುರುರಾಜ ನೀನೆ ಮಹೇಶ್ವರನು ನೀನೇ ॥
ಕರುಣಸಾಗರ ನೀನು ಭವಸಾ- । ಗರದಿ ಮುಳುಗಿದೆ ನಾನು ಯೆನಗು । ದ್ಧರಿಸ ಬೇಕೈ ನೀನು ನಿನ್ನಯ ಚರಣಕೆರಗುವೆನು ॥13॥

ನಿನ್ನ ದರ್ಶನ ಮಾತ್ರದಿಂದಲಿ । ಭಗ್ನವಾಯಿತು ಪಾಪರಾಶಿಯು । ನಿನ್ನ ನಂಬಿದೆ ಕರುಣನೌಕೆಯಲೇರಿಸೈಯೆನ್ನಾ ॥
ಯೆನ್ನುತೀಪರಿ ಬ್ರಹ್ಮರಾಕ್ಷಸ । ಬಿನ್ನವಿಸಿದನು ವಾಮದೇವಗೆ । ಸನ್ನುತಾತ್ಮನು ಮುನಿಯು ರಕ್ಕಸಗೆಂದ ಕುರುಣದಲಿ ॥14॥

ಯಾರು ನೀನಿಹೆ ಪೇಳು ನೀನೀ । ಘೋರವನದಲಿ ವಾಸಿಸುವ ನಿಜ । ಕಾರಣವಿದೇನಿಹುದು ಯಾವುದು ನಿನ್ನದೈ ವಂಶಾ ॥
ಕ್ರೂರ ರಾಕ್ಷಸ ಮುನಿಯ ವಚನವ । ಚಾರು ಪ್ರೇಮದಿ ಕೇಳಿ ತಾನು ವಿ- । ಚಾರಪೂರ್ವಕ ಕಥನವನು ಮಾಡಿದನು ಕರಮುಗಿದು ॥15॥

ಆಲಿಸೈ ಮುನಿರಾಯ ನಿನಗಾ । ಪೇಳುವೆನು ನಿಜಜನ್ಮಚರಿತವ । ಕಾಲಚಕ್ರದಿ ಸಿಲುಕಿದೀ ದುರ್ಭಾಗ್ಯ ಕೀಟಕದಾ ॥
ಮೇಲು ಕೀಳೀ ಭಾವವೆರಡ ಸ । ಮೂಲ ಮರೆತೆನು ಜನ್ಮಜನ್ಮದಿ । ಗೋಳಿಡುತ ನಾನಿದ್ದೆ ಕರ್ಮದ ದುರ್ವಿಪಾಕದಲಿ ॥16॥

ಕಳೆದೆನಿಪ್ಪತ್ತೈದು ಜನ್ಮಂ- । ಗಳನು ಪರಮೋತ್ಕೃಷ್ಟ ರೀತಿಯ- । ಉಳಿದ ಜನ್ಮಗಳೆಲ್ಲ ದೋಷಾಸ್ಪದಗಳಾಗಿಹವು ॥
ತಿಳಿಯದೆನಗದು ಮರತೆನನುಭವ । ತಿಳಿಯುವಂದದಿ ನಿನಗೆ ಪೇಳುವೆ । ಕಳೆದೆ ನಾನುತ್ಕೃಷ್ಟ ಜನ್ಮವ ರಾಜವಂಶದಲಿ ॥17॥

ಯಮನ ವಂಶದಿ ಪುಟ್ಟಿ ನಾ ರಾ । ಜ್ಯವನು ಮದದಿಂದಾಳ್ದೆ ಪ್ರಜೆಗಳ । ನವಿನಯದಿ ತ್ರಾಸಿಸಿದೆ ದುರ್ಜಯ ನಾಮವೆನಗಿತ್ತು ॥
ಅವನಿಯಲಿ ಬಹುಜನರ ಕೊಂದೆನು । ಯುವತಿಯರ ವರಿಸಿದೆನನೇಕರ । ವಿವರವಿಲ್ಲದನೇಕರನು ಭೋಗಿಸಿದೆ ರತಿಸುಖದಿ ॥18॥

ಒಂದು ಬಾರಿಗೆ ರತಿಸುಖಕೆ ನಾ- । ತಂದ ಸತಿ ಯೆರಡನೆಯ ಬಾರಿಗೆ । ಬಂದುದಿಲ್ಲೀ ಪರಿಯೊಳಾನಂದದಲಿ ನಾನಿದ್ದೆ ॥
ಬಂಧನದಿ ನಾನಿಟ್ಟೆ ನಾರೀ- । ವೃಂದವನು ಭೋಗಿಸಿದ ನಂತರ । ಬೆಂದು ಬಳಲುತ ಶಾಪವಿತ್ತರು ಯೆನಗೆ ಮುನಸಿನಲಿ ॥19॥

ದೇಶಗಳ ನಾ ಗೆದ್ದು ರಾಣಿ- । ವಾಸಕಾಗಿಯೆ ತಂದೆ ಸ್ತ್ರೀಯರ । ಲೇಸಿನಿಂ ಭೋಗಿಸಿದೆನೊಂದೇಸಾರೆ ನಂತರಕೆ ॥
ರೋಷದಿಂದವರನ್ನು ಬಂದೀ- । ವಾಸದಲ್ಲಿಟ್ಟೆನು ಮದಾಂಧನು । ಆ ಸಕಲ ನಾರಿಯರು ಶಪಿಸಿದರೇಕಭಾವದಲಿ ॥20॥

ಮನಸಿನಲಿ ಸಂತೋಷವಿದ್ದರೆ । ಪ್ರಣಯಪೂರ್ವಕವಾಗಿ ಬರುವರು । ಮನಸು ಕೆಟ್ಟರೆ ಹಣವ ಕೊಟ್ಟೆನು ಜಬರಿ ಮಾಡಿದೆನು ॥
ಇನಿತು ಮಾಡಿಯು ಬಾರದಿದ್ದರೆ । ತಿನಿಸಿದೆನು ಯಮದೂತರಿಗೆ ಯೆನ । ಗಿನಿತು ಕನಿಕರವಿಲ್ಲದಾಯಿತು ವಿಷಯಭೋಗದಲಿ ॥21॥

ಭೂಸುರರು ಯೆನಗಂಜಿ ಬಿಟ್ಟರು । ದೇಶವನು ಮಮರಾಜ್ಯವನು ಬಹು । ಕ್ಲೇಶ ಪಟ್ಟರು ವನಿತೆಯರ ಬಿಟ್ಟೋಡಿದರು ಹಿಂದೆ ॥
ಆ ಸುವಾಸಿನಿಯರಿಗೆ ನಾ ಸಂ- । ತೋಷದಲಿ ಭೋಗಿಸಿದೆ ಕೆಟ್ಟೀ । ವಾಸನೆಯ ನಾ ಬಿಡದೆ ಮದನನ ಬಲೆಗೆ ಸಿಲುಕಿದೆನು ॥22॥

ಬಾಲೆಯರ ಭೋಗಿಸಿದೆನಗಣಿತ । ಶೀಲವನು ನಾ ಮರೆತೆ ವಿಧವಾ । ಬಾಲಕಿಯರ ಪತಿವ್ರತಾ ಸ್ತ್ರೀಯರನು ಸ್ವೇಚ್ಛೆಯಲಿ ॥
ಹೇಳಲೇನದ ಬ್ರಹ್ಮವಂಶದ । ಬಾಲೆಯರ ಮುನ್ನೂರ ರಮಿಸಿದೆ । ನಾಲ್ಕು ನೂರನು ಕ್ಷತ್ರಿಯರ ಸ್ತ್ರೀಯರನು ರಮಿಸಿದೆನು ॥23॥

ಆರನೂರನು ವೈಶ್ಯ ಜಾತಿಯ । ನಾರಿಯರ ರಮಿಸಿದೆನು ಶೂದ್ರರ । ನಾರಿಯರ ಸಾವಿರದ ಚಾಂಡಾಲಿನಿಯರೊಂದುಶತಾ ॥
ವಾರವನಿತೆಯ ಲೆಕ್ಕವಿಲ್ಲದೆ । ನಾರಿಯರ ಭಿಲ್ಲಿಣಿ ಸಹಸ್ರವ । ನಾ ರಜಕವನಿತೆಯರ ನಾಲ್ನೂರನ್ನು ರಮಿಸಿದೆನು ॥24॥

ಇಷ್ಟು ಭೋಗಿಸಿ ಕೂಡ ಮನ ಸಂ- । ತುಷ್ಟವಾಗದು ವಿಷಯಸುಖದಲಿ । ತುಷ್ಟಿಗೋಸುಗ ಮದ್ಯಪಾನವ ಮಾಡಿದೆನು ಮದದಿ ॥
ಇಷ್ಟು ಪರಿ ವ್ಯಸನಗಳ ರಾಜಗೆ । ರಾಷ್ಟ್ರವುಳಿವುದೆ ಬಹಳ ದಿವಸಕೆ । ಭ್ರಷನಾದೆನು ರಾಜ್ಯ ಹೋಯಿತು ವೈರಿಗಳ ಕೈಗೆ ॥25॥

ವ್ಯಾಧಿಪೀಡಿತನಾಗಿ ಬಹಳ ವಿ । ರೋಧಿಗಳು ಕಾಡಿದರು ಪ್ರಾಣವು । ಹಾದಿ ಹಿಡಿಯಿತು ಯವನ ರಾಜ್ಯದ ರಾಜಧಾನಿಗೆಲಾ ॥
ಆ ದುರಾತ್ಮನು ಯಮನ ನರಕದ । ಹಾದಿಯನು ತೋರಿಸಿದನದರಲಿ । ಬಾಧೆ ಪಟ್ಟೆನು ಸುರರ ವರ್ಷಸಹಸ್ರ ಪರಿಯಂತಾ ॥26॥

ನರಕದಲಿ ನಾ ಪಿತರ ಸಂಗಡ । ಚರಿಸಿ ಹತ್ತಾವರ್ತಿ ಮುಂದಕೆ । ದೊರಕಿತ್ತೈ ಜನ್ಮಾಂತರವು ಕೇಳ್ ಪ್ರೇತವಂಶದಲಿ ॥
ಧರಿಸಿದೆನು ವಿದ್ರೂಪದೇಹವ । ಧರಿಸಿದೆನು ಶಿಶ್ನಗಳ ಸಾವಿರ । ಚರಿಸಿದೆನು ಸಾವಿರವರುಷವೀ ಪ್ರೇತಯೋನಿಯಲಿ ॥27॥

ಮರಣ ಬಂತೆನಗಾಗ ತದನಂ- । ತರಕೆ ಯಮಬಾಧೆಯನು ಸಹಿಸಿದೆ । ಮರಳಿ ಹುಲಿಜನ್ಮದಲಿ ನಾನಾ ಜೀವಿ ಹಿಂಸಿಸಿದೆ ॥
ಮರಳಿ ಮೂರನೆ ಜನ್ಮ ವಜಗರ । ತಿರುಗಿ ತೋಳದ ಜನ್ಮ ನಾಲ್ಕನೆ । ಧರಿಸಿದೆನು ಐದನೆಯ ಜನ್ಮವ ಗ್ರಾಮಸೂಕರನಾ ॥28॥

ಆರನೆಯ ಜನ್ಮದಲಿ ಓತಿಯ । ಕ್ರೂರ ಶ್ವಾನನು ಯೇಳನೆಗೆ ನಾ । ಹಾರಿ ಬಂದೆನು ಯೆಂಟನೆಗೆ ಜಂಬುಕನ ವಂಶದಲಿ ॥
ಚಾರು ರೋಹೀಹರಣ ನವಮಕೆ । ತೋರಿದೆನು ಒಂಟೆಯಲಿ ಹತ್ತಕೆ । ಹಾರಿದೆನು ನಂತರದಿ ಮರ್ಕಟ ಜನ್ಮದಲಿ ನಾನೇ ॥29॥

ಹರಿಣ ಹದಿನೆರಡನೆಯ ಜನ್ಮದಿ । ಮರಳಿ ಮುಂಗಲಿ ಕಾಗೆಯಾದೆನು । ಮರಳಿ ಹದಿನೈದರಲಿ ಬಂದೆನು ಗ್ರಾಮಸೂಕರನು ॥
ಧರಿಸಿದೆನು ಕಾಡ್ಗೋಳಿಜನ್ಮವ । ಮರಳಿ ಗರ್ದಭಜನ್ಮವಾಯಿತು । ಕುರುಡನಾದೆನು ಗರ್ದಭನ ಜನ್ಮದಲಿವಿಧಿವಶದಿ ॥30॥

ಜನುಮ ಬೆಕ್ಕಿನದಾಯ್ತು ನಂತರ । ಜನುಮ ಮಂಡುಕದಾಯ್ತು ನಂತರ । ಜನುಮನಾಮೆಯದಾಯ್ತು ಯಿಪ್ಪತ್ತನೆಯ ಸರತಿಯಲಿ ॥
ಜನುಮ ನಂತರ ಮತ್ಸ್ಯದಾಯಿತು । ಜನುಮ ಮೂಷಕದಾಯ್ತು ನಂತರ । ಜನಿಸಿದೆನು ನಾ ಗೂಬೆಜನ್ಮದಿ ಕುರುಡ ಕಿವುಡಾಗಿ ॥31॥

ಜನುಮವಿಪ್ಪತ್ನಾಲ್ಕರಲಿ ನಾ । ಜನಿಸಿದೆನು ಕುಂಜರನ ವಂಶದಿ । ಜನಿಸಿದೆನು ಬ್ರಹ್ಮರಾಕ್ಷಸನಾಗಿ ಈ ಭವದಿ ॥
ವನದೊಳಗೆ ನಾ ತಿರುತಿರುಗಿದೆನು । ಮನದ ಚಿಂತೆಯ ಹೇಳಲಾರೆನು । ದಣಿದೆನಗಣಿತ ಕ್ಷುತ್ಪಿಪಾಸೆಗೆ ಶಾಂತಿಯೇ ಇಲ್ಲಾ ॥32॥

ಹಸಿವೆಯಲಿ ನಾ ತಿನಿಸಿನಾಶೆಗೆ । ಬಸವಳಿದು ನುಂಗುವೆನೆನುತ್ತಲಿ । ಋಷಿವರನೆ ಬಾಯಿಂದ ಕಚ್ಚಿದೆ ನಿನ್ನ ದೇಹವನು ॥
ತೃಷೆಪಿಪಾಸೆಯು ಶಾಂತವಾಯಿತು । ನುಸುಳಿದುದು ಮನದಲ್ಲಿ ಜ್ಞಾನವು । ವಸುಮತಿಯೊಳೆನ್ನಂತೆ ಭಾಗ್ಯರು ಯಾರಿಹರು ತಿಳಿಯೆ ॥33॥

ನಿನ್ನ ದೇಹಸ್ಪರ್ಶವಾಗಲು । ಛಿನ್ನವಾಯಿತು ದುರಿತ ಪರ್ವತ । ಜನ್ಮಜನ್ಮಾಂತರದ ಜ್ಞಾನವು ಸಂಭವಿಸಿತೆನಗೆ ॥
ಇನ್ನು ಮುಂದಕೆ ಜನ್ಮ ಸಾಕೈ । ನಿನ್ನನುಗ್ರಹವಾದುದದರಿಂ । ಛಿನ್ನಸಂಸೃತಿಪಾಶನಾದೆನು ನಿನ್ನ ದರ್ಶನದಿ ॥34॥

ತಾರಕನು ನೀನಹುದು ವಿಶ್ವಕೆ । ಧಾರುಣಿಯೊಳಸಮಾನ ಪುರುಷನು । ಚಾರುಗಾತ್ರದ ಸ್ಪರ್ಶ ಮಾತ್ರದಿ ದುರಿತ ಪರಿಹಾರಾ ॥
ಯಾರಿಹನು ತವ ಮಹಿಮೆಯನು ವಿ- । ಸ್ತಾರ ಮಾಡಲು ಜಗದಿ ಯೆನ್ನನು । ತಾರಿಸೈ ಕಾರುಣ್ಯ ನಿಧಿ ನಾ ಪತಿತ ಪಾಮರನು ॥35॥

ನಾನು ಮಹಪಾಪಿಯು ದುರಾತ್ಮನು । ನೀನಪಾರಮಹಾತ್ಮ ನಿನ್ನ ಸ । ಮಾನರನು ನಾ ಕಾಣೆ ನಿನ್ನಯ ದೇಹಸ್ಪರ್ಶದಲಿ ॥
ಜ್ಞಾನವಾಯಿತು ಯೆನಗಖಿಲ ನೀ । ಮಾನಿಸೈ ಮಮ ವಚನವನು ನೀ । ಸಾನುರಾಗದಿ ಕಾಯೊ ಉದ್ಧರಿಸೆನ್ನ ನೀ ಭವದಿ ॥36॥

ಧರೆಯೊಳಗೆ ನೀ ಭಕ್ತರನ್ನು- । ದ್ಧರಿಸಲೋಸುಗ ತಿರುಗುತಿಹೆ ನೀ । ಹರನೆ ಸಾಕ್ಷಾತ್ ವಾಮದೇವನೆ ನರನು ನೀನಲ್ಲಾ ॥
ಪರಿಪರಿಯೊಳೀ ತೆರದಿ ರಕ್ಕಸ । ವರಮುನಿಯ ಚರಣವನು ಸ್ತುತಿಸಲು । ಕರುಣದಿಂದಾ ವಾಮದೇವನು ನುಡಿದನುತ್ತರವಾ ॥37॥

ಕೇಳು ರಕ್ಕಸ ಭಸ್ಮ ಮಹಿಮೆಯ । ಹೇಳುವೆನು ನಾ ನಿನಗೆ ಮುದದಲಿ । ಶೂಲಪಾಣಿಯು ಧರಿಸಿಹನು ಸರ್ವಾಂಗ ಭಸ್ಮವನು ॥
ಆಲಿಸೈ ಯೆನ್ನಂಗಭಸ್ಮ ಕ । ತಾಳ ನಿನ್ನಯ ಮುಖವು ಪಸರಿಸೆ । ಬೀಳಲಾಯಿತು ನಿನಗೆ ಜ್ಞಾನೋದಯವು ತತ್ ಕ್ಷಣದಿ ॥38॥

ಹರನು ಧರಿಸಿದ ವಸ್ತು ಪಾವನ- । ತರವಲಾ ಮಹಿಮೆಯನು ಬಲ್ಲವ । ರಿರುವರೇ ಹರಭೂಷಣವಲಾ ಭಸ್ಮ ನಿತ್ಯದಲಿ ॥
ಪರಿಯನರಿಯೆನು ಭಸ್ಮಮಹಿಮೆಯ- । ನರಿವನ್ನೈ ಹರನೋರ್ವ ಜಗದಲಿ । ಅರುಹುವೆನು ನಾನೊಂದು ದೃಷ್ಟಾಂತವನು ಮನದಣಿಯೆ
॥39॥

ದೇಶದ್ರಾವಿಡದಲ್ಲಿ ಭೂಸುರ । ವಾಸಮಾಡಿದನೋರ್ವ ಪುಣ್ಯದ । ಲೇಶವವಗರಿವಿಲ್ಲ ಸಂತತ ದುಷ್ಟವಾಚರಣಾ ॥
ತೋಷದಲಿ ಶೂದ್ರಿಣಿಯ ಸಂಗದಿ । ಭೂಸೂರನು ಕಾಲವನು ಕಳೆದನು । ರೋಷದಲಿ ವಿಪ್ರನನು ಜಾತಿಯಹೊರಗೆ ಹಾಕಿದರು ॥40॥

ತಂದೆತಾಯಿಯು ಬಂಧು ಬಳಗವು । ಮುಂದರಿಸಿ ಹಾಕಿದರು ಹೊರಗವ । ನಂದಿನಿಂದಲೆ ಹೆಚ್ಚಿದನು ದುಷ್ಕರ್ಮನರ್ತನದಿ ॥
ಹಿಂದು ಮುಂದನು ನೋಡದಲೆ ತಾ- । ನೆಂದುದೇ ನಿಜವೆಂದು ಬಗೆದನು । ಮಂದಮತಿ ತಸ್ಕರನ ವೃತ್ತಿಲಿಹೊಟ್ಟೆ ತುಂಬಿದನು ॥41॥

ಪರವನಿತೆ ಪರದ್ರವ್ಯವೆಂಬುದ । ಮರೆತು ದುರಿತವ ಮಾಡಲೆಸಗಿದ । ಪರವನಿತೆಯಲಿ ಪಾಪದೃಷ್ಟಿಯನಿಟ್ಟು ನೋಡುವನು ॥
ಪರಿಯೋಳೀ ಹಲದಿವಸ ಪೋಗಲು । ಹೊರಟನವ ತಸ್ಕರನ ವೃತ್ತಿಗೆ । ಭರದೊಳವನಿಗೆ ಬಿಗಿದು ಹೊಡೆದರು ಕರ್ಮವಶದಿಂದಾ ॥42॥

ಮರಣ ಬಂತಾ ಹೊಡೆತದಿಂದಲಿ । ಹೊರಗೆ ಚೆಲ್ಲಿದರಾಶವವ ಭೂ- । ಸುರನ ಶವ ಬಂದಾಗ ಬಿತ್ತಾ ಹೊಲಸುರಾಶಿಯಲಿ ॥
ಹೊರಟಿತಾಶವಕಾಗ ವಾಸವು । ಬರುತ ಕಂಡುದು ಶ್ವಾನವೊಂದದ । ನಿರದೆ ತಾ ತಿನಬೇಕೆನುತ ಮನ ಮಾಡಿತಾ ನಾಯಿ ॥43॥

ನಾಯಿ ಮಲಗಿತು ಭಸ್ಮ ಗುಡ್ಡದಿ । ಬಾಯಿ ಮೈ ಗಾಯ್ತೆಲ್ಲ ಭಸ್ಮವು । ನಾಯಿ ಕಚ್ಚಲು ಶವಕೆ ಭಸ್ಮಸ್ಪರ್ಶವಾಯಿತಲಾ ॥
ಆಯಿತಚ್ಚರಿ ಹೇಳ್ವುದೇನದ- । ನಾಯಮನಕಿಂಕರರು ವಿಪ್ರನ । ನಾಯಸದೊಳೊಯ್ಯುತ್ತಲಿದ್ದರು ಹೊಡೆದು ಬಡಿಯುತಲಿ ॥44॥

ಬಂದು ನೋಡಿದರಾಗ ಶವವನು । ನಿಂತು ಪರಿಕಿಸಿ ನೋಡಿ ಯಚ್ಚರಿ । ಯಿಂದ ನುಡಿದರು ಭಸ್ಮಭೂಷಿತ ದೇಹವಿದನಾರು ॥
ಬಂದು ಯಮಕಿಂಕರರು ವಯ್ದರೊ । ಯಿಂದಿಗಿವನಿಗೆ ಯೋಗ್ಯ ಶಿವಪುರ । ವೆಂದು ಯಮಕಿಂಕರರನಟ್ಟಿದರಾಗ ಶಿವನವರು ॥45॥

ಬಂದು ಶಿವದೂತರನು ನೋಡುತ । ಹಿಂದೆಗದು ಯಮದೂತರೋಡಿದ । ರಂದು ಪಾತಕಿ ವಿಪ್ರನನು ಬಿಟ್ಟರು ಸಗಾಢದಲಿ ॥
ಬಂದು ಯಮರಾಜನಿಗರುಹಿದರು । ಮುಂದೆ ಗತಿ ಯೇನೆಮಗೆ ಪಾಪಿಯ । ತಂದೆವಾ ವಿಪ್ರನಿಗೆ ಶಿವನವರೊಡಿಸಿದರೆಮ್ಮಾ ॥46॥

ಹೊಡೆದು ಬಡೆಯುವರೆಮಗೆ ಧರೆಯಲಿ । ಮೃಡನ ದೂತರು ನಿರ್ದಯರು ನೀ । ನೊಡೆಯನಿರೆ ಮುಂದೇನು ಗತಿ ಪೇಳೆಮಗೆ ಶೀಘ್ರದಲಿ ॥
ನುಡಿಯ ಕೇಳುತ ಯಮನ ದೂತರು । ಕಡು ಮುನಿಸಿನಲಿ ಶಿವನ ದೂತರ । ಕಡೆಗೆ ಬಂದರು ಕಾರಣವ ಕೇಳಿದನು ಘುಡು ಘುಡುಸಿ ॥47॥

ಘೋಪಾತಕೀ ವಿಪ್ರನೀತನು । ವಾರಿಧಿಯ ಮರುಕಣವ ಗಣಿಸಲು । ಭಾರವಾಗದು ಜನಪಾಪದ ಗಣನೆ ದುರ್ಲಭವು ॥
ಮಾರಹರನಿಹ ಪುರಕೆ ಯೋಗ್ಯನು । ಯಾರಿವಗೆ ಕೈಲಾಸ ಕೊಡುವರು । ಕಾರಣದಿ ಹಿಡಿದೊಯ್ಯುತಿದ್ದರು ಯಮಪುರಕ್ಕಿವನಾ ॥48॥

ಏನಿದದ್ಭುತ ಪಾಪಿಯಾತ ವಿ । ಮಾನಕಿವಯೋಗ್ಯನೆ ಕಣಾ ನಿಮ- । ಗೇನ ಹೇಳಲಿ ಮೂಢತನಕಿದು ಕಳಸವಾಯಿತಲಾ ॥
ಈ ನುಡಿಯ ಕೇಳುತ್ತ ಯಮನಿಗೆ । ಸಾನುರಾಗದಿ ಶಿವನದೂತರು । ಮಾರ್ನುಡಿಯನಿತ್ತರು ಮಹಾಗುಣಗಣಸಮನ್ವಿತರು ॥49॥

ನೋಡಿದರೆ ಯಮರಾಜ ಹಣೆಯಲಿ । ಮಾಡಿಹುದು ಭಸ್ಮದ ಸುಲಾಂಛನ । ನೋಡು ವಕ್ಷಸ್ಥಳದಿ ಮೇಣೀ ಬಾಹು ಮೂಲದಲಿ ॥
ನೋಡು ಕರಕಂಕಣದಿ ಭಸ್ಮವು । ಕೂಡಿಹುದು ಕೇಳಿ ಪರಿಯ ಶವ । ರೂಢಿಯಲಿ ಮುಟ್ಟುವರೆ ನಿನ್ನವರೇನು ನುಡಿ ಯೀಗಾ ॥50॥

ಹರನ ದೂತರಿಗಾಜ್ಞೆ ಕೇಳೀ । ಪರಿಯಲಿರುವರು ಸಭಸ್ಮಭೂಷಿತ । ನರರು ಕೈಲಾಸಕ್ಕೆ ಯೋಗ್ಯರು ಕರೆತರಲು ಬೇಕು ॥
ಇರುತಿರಲು ಹಣೆಯಲ್ಲಿ ಭಸ್ಮದ । ಪರಮಪಾವನ ಮುದ್ರೆ ನಿನ್ನವ । ರರಿಯರೇ ಮುಟ್ಟಿದರು ಯಾತಕೆ ನಮ್ಮ ಪ್ರೇತವನು ॥51॥

ನಿನ್ನ ದೂತರು ಶಿವನ ವಚನವ । ಮಾನ್ಯ ಮಾಡದೆ ಯಿದ್ದ ಕಾರಣ । ಮುನ್ನವೇ ಪ್ರಾಣವನು ಹೀರುವೆವಿತ್ತು ಬಿಟ್ಟೆವಲಾ ॥
ಇನ್ನು ಮುಂದವರಿಂಗೆ ತಿಳಿಸೈ । ಚಿನ್ಮಯಾತ್ಮಕ ಶಿವನ ನುಡಿಯನು । ಯೆನ್ನುತಲಿ ಶಿವದೂತರೆಂದರು ನಗುತ ಕಾಲನಿಗೆ ॥52॥

ಭಸ್ಮಭೂಷಿತ ನರನು ಮಾಡಿದ । ಕಲ್ಮಷದ ಗುಡ್ಡಗಳು ಸುಡುವವು । ಭಸ್ಮಭೂಷಿತ ನರನು ಶಿವನಿಗೆ ಪ್ರೀತಿಪಾತ್ರನಲಾ ॥
ಧರ್ಮವಿದು ಕೈಲಾಸಪುರದಲಿ । ನಿರ್ಮಲದ ಸಾಮ್ರಾಜ್ಯದಲಿ ದುಷ್ । ಕರ್ಮವಿರಹಿತ ಸುಖವ ಪಡುವನು ಭಸ್ಮಯೋಗದಲಿ ॥53॥

ಶಿವನ ದೂತರ ವಚನ ಕೇಳುತ । ಜವನು ಹಿಂತಿರುಗಿದನು ದೂತರ । ಹವಣಿಸುತ ಪೇಳಿದನು ಮುಂದಿನ ಕಾರ್ಯ ಸಂಗತಿಯಾ ॥
ಅವನಿಯಲಿ ಭಸ್ಮಾಂಕಿತರ ಮಾ- । ನವರ ಮುಟ್ಟಲು ಬಾರದೈ ನೀ । ವವರು ಪಾತಕ ಮಾಡಿಯೂ ಶಿವಪುರಕೆ ಯೋಗ್ಯರಲಾ ॥54॥

ಕೊರಳೊಳಗೆ ರುದ್ರಾಕ್ಷಮಾಲೆಯ । ಧರಿಸುವವರನು ಮುಟ್ಟ ಬೇಡಿರಿ । ಧರಿಸಿದರೆ ಹಣೆಯಲಿ ತ್ರಿಪುಂಡ್ರದ ತಿಲಕವವರಿಂಗೆ ॥
ತರಲುಬಾರದು ಯೆಮ್ಮ ನಗರಿಗೆ । ಹರನ ಕಟ್ಟಾಜ್ಞೆಯು ಕಣಾ ಮುಂ- । ದರಿಯವೆಂದರೆ ಕೇಳಲಾರೆವು ಕ್ಷಮೆಯ ನಾ ಮಾಡೆ ॥55॥

ಈ ತೆರದಿ ರಕ್ಕಸಗೆ ಪೇಳ್ದನು । ಧೂತಪಾಪನು ವಾಮದೇವ ವಿ- । ಭೂತಿಮಹಿಮೆಯ ವಿಸ್ತರಿಸಿದನು ಭಕ್ತಿ ಪೂರ್ವಕದಿ ॥
ಭೂತನಾಥನ ಪರಮಭಸ್ಮವು । ಭೂತಳದಿ ದುರ್ಲಭವದದರಿಂ । ಪ್ರೀತಿಯಿಂ ನಾ ಧರಿಸಿಹೆನು ದೇಹದಲ್ಲಿ ಧನ್ಯನಲಾ ॥56॥

ಹರನ ಪ್ರೀತಿಯ ವಸ್ತುವಿದನಾ । ಧರಿಸಿದೆನು ತತ್ಕಾರಣದಿ ನಾ- । ನರಿವರಾರೈ ಹರನ ಪ್ರೀತಿಯ ವಸ್ತು ಮಹಿಮೆಯನು ॥
ಅರುಹಿದೀ ವಿಷಯವನು ಕೇಳುತ । ಚರಣಕೆರಗಿದನಾಗ ರಕ್ಕಸ । ಹರನ ಮೂರ್ತಿಯೇ ನೀನು ಉದ್ಧರಿಸೆಂದನಾ ಭರದಿ ॥57॥

ನಿನ್ನ ಚರಣವ ಕಂಡೆನೀಗಲಿ । ಧನ್ಯನಾದೆನು ಭವದೊಳಗೆ ನಾ । ಪುಣ್ಯ ಮಾಡಿದೆನೆಂದು ದರ್ಶನವಾಯ್ತು ಯೆನಗಿಂದು ॥
ಯೆನ್ನ ಜ್ಞಾಪಕಕೀಗ ಬಂತದು । ಮುನ್ನ ರಾಜ್ಯವ ನಾಳ್ವ ವೇಳ್ಯದಿ । ಸಣ್ಣ ಕೆರೆ ಕಟ್ಟಿಸಿದೆ ವಿಪ್ರಗೆ ಕೊಟ್ಟೆ ವೃತ್ತಿಯನು ॥58॥

ಇನಿತು ಪುಣ್ಯವ ಮಾಡಿದೆನು ನಾ । ಗಣನೆಯಿಲ್ಲದೆ ಪಾಪ ಮಾಡಿದೆ । ಮನದಣಿಯಲುನ್ಮತ್ತನಿದ್ದೆನು ರಾಜ್ಯವೈಭವದಿ ॥
ಯೆನಗೆ ಯಮಪುರ ಕೊಯ್ಯಲಾಯಮ- । ನನುವ ಕೇಳನು ಚಿತ್ರಗುಪ್ತಗೆ । ನೆನಪು ಬಂತಾ ಯಮನ ಭಾಷಣ ಕೇಳು ಮುನಿವರ್ಯಾ ॥59॥

ಕೇಳು ವಿಪ್ರಾಧಮನೆ ನಿನಗೀ । ಕೀಳು ಜನ್ಮಗಳಾಗಿ ನಂತರ । ಮೇಳವಿಸುವುದು ಪುಣ್ಯವಿಪ್ಪತ್ತೈದನೆಯ ಜನ್ಮ ॥
ಕಾಲವಶದಲಿ ಸಾಧುದರ್ಶನ । ಹಾಳು ಮಾಳ್ಪುದು ನಿನ್ನದುರಿತವ । ಮೇಳವಿಸಿತದರಿಂದ ನಿನ್ನಯ ಚರಣದರ್ಶನವು ॥60॥

ಸ್ವಾಮಿ ನೀ ಜಗಕಿರುವೆ ಶ್ರೀಗುರು । ವಾಮದೇವನೆ ತಾರಿಸೆನ್ನನು । ಹೇಮವಾದೆನು ನಿನ್ನ ಚರಣದ ಪರುಷಸ್ಪರ್ಶದಲಿ ॥
ನೇಮಯಾವುದು ಮಂತ್ರವಾವುದು । ಸೋಮಶೇಖರ ನಿಟ್ಟಭಸ್ಮದ । ಕ್ಷೇಮದಿಂದೆನಗರುಹೆನುತ ರಕ್ಕಸನು ಬೆಸಗೊಂಡಾ ॥61॥

ನುಡಿಯನಾಲಿಸಿ ವಾಮದೇನನು । ನುಡಿದನಾರಕ್ಕಸಗೆ ಪೇಳುವೆ- । ನೊಡನೆ ಧಾರಣವಿಧಿಯ ಕೇಳ್ಳೈ ಸಾವಧಾನದಲಿ ॥
ಮೃಡನು ಪೂರ್ವದಿ ಮಂದರಾಚಲ । ದೆಡೆಗೆ ಪಾರ್ತಿಸಹಿತ ಸಭೆಯಲಿ । ಕಡುವಿನೋದದಿ ಕುಳಿತಿರಲು ಬಂದರು ಸಭಾಲಯಕೆ ॥62॥

ಸುರರು ತೆತ್ತಿಸಕೋಟ ಸರ್ವರ । ಕರೆದು ಸುರಪತಿ ಬಂದನಲ್ಲಿಗೆ । ವರುಣವಾಯುಕುಬೇರಮೊದಲಾದೆಂಟು ಪಾಲಕರು ॥
ಬರುವರಾದರು ಯಕ್ಷವರ ಕಿಂ- । ಪುರುಷಗುಹ್ಯ ಕಸಿದ್ಧ ವಿದ್ಯಾ- । ಧರರು ಸಾಧ್ಯರು ಪನ್ನಗರು ಗಂಧರ್ವಮೊದಲಾಗಿ ॥63॥

ಸುರಗುರು ಬೃಹಸ್ಪತಿ ವಸಿಷ್ಠರು । ನೆರೆದರೆ ಸಭೆಗರ್ಯಮಾದ್ಯರು । ಬರುವರಾದರು ದಕ್ಷಬ್ರಹ್ಮಾದಿಗಳು ಓಲಗಕೆ ॥
ನೆರದರೈ ಅಪ್ಸರೆಯರೆಲ್ಲರು । ಬರುವರಾದರು ಚಂಡಿಕಾಸಹ । ಪರಮಶಕ್ತಿಗಳಲ್ಲಿ ವಸುಗಳು ಎಂಟು ಮಂದಿಗಳು ॥64॥

ಬಂದರೈ ಅಶ್ವಿನಿಕುಮಾರರು । ಬಂದರೈ ತಾ ವೈಶ್ವದೇವರು । ವೃಂದಸಹಿತೀಶ್ವರನ ವೊಡ್ಡೋಲಗಕೆ ವಹಿಲದಲಿ ॥
ನಿಂದರಾಭೂಪತಿ ಮಹಾಕಲ । ನಂದಿಕೇಶ್ವರ ನೀಲವರ್ಣದ । ಸುಂದರಾಂಗರು ಕರದಿ ದಂಡವ ಹಿಡಿದು ಪಾರ್ಶ್ವದಲಿ ॥65॥

ವೀರಭದ್ರನು ಸಂಕರುಷಣನು । ಆರುಕರ್ಣನು ದೇವಮಾನ್ಯನು । ಚಾರು ಮಣಿಭದ್ರನು ವೃಕೋದರ ಕರ್ಣಧಾರಕನು ॥
ಧಾರಕೇತ ಮಹಾನುವೀರನು । ಭೂರಿಕುಂಭೋದರನು ಬಂದನು । ನಾರದಾದಿ ಮುನೀಶ್ವರರು ದುಂಡೋದರಾದಿಗಳು ॥66॥

ಭೂತನಾಥ ಕಿರೀಟ ಭೃಂಗಿಯು । ಖ್ಯಾತ ನಾನಾವರ್ಣಗಣ ಶಿವ- । ದೂತ ನಾನಾಪರಿಯ ಗಾತ್ರದ ಚಿತ್ರರೂಪಗಳು ॥
ಶ್ವೇತಲೋಹಿತ ಧೂಮ್ರವರ್ಣದ । ಪೀತತಾಮ್ರಸುವರ್ಣಮಂಡಿತ । ರೀತೆರದ ಬಹುಚಿತ್ರಗಣಗಳು ಬಂದರೋಲಗಕೆ ॥67॥

ಆನೆಸೂರಕರವ್ಯಾಘ್ರನರಿಮುಖ । ಶ್ವಾನ ತೋಳದ ಮುಖರು ಮೇಣಾ । ವಾನರರ ಮೋತಿಯರು ಸಿಂಹನ ಶರಭಮುಖದವರು ॥

ಹೀನಮುಖಬಹುಮುಖರು ನಾನಾ- । ಪಾಣಿ ವಿವಿಧಾಯುಧರು ಪಾದ ವಿ । ಹೀನರ್ಕೈ ಬಹುಪಾದಯುಕ್ತರು ಬಂದರೋಲಗಕೆ ॥68॥

ಕರ್ಣಹೀನ ವಿಚಿತ್ರಗಣಗಳು । ಕರ್ಣಬಾಹುಲ್ಯರು ಹಲವರಾ । ಕಣ್ಣು ಕುರುಡರು ಸ್ಥೂಲಕುಬ್ಜಕರ್ಕೈದರಾಸಭೆಗೆ ॥

ಕಣ್ಣು ನಾಲ್ಕು ವಿಚಿತ್ರವರ್ಣವು । ಬಣ್ಣಿಸಲು ಯೆನಗಸದಳವು ಶಿವ । ನನ್ನು ಪೂಜಿಪ ಗಣಗಳೆಲ್ಲರು ಬಂದರೋಲಗಕೆ ॥69॥

ಇನಸಹಸ್ರಪ್ರಕಾಶ ಸಿಂಹಾ- । ಸನವು ಮೆರೆದುದು ಸಭೆಯಮಧ್ಯದಿ । ಮಿನುಗುತಿಹವ್ಯೆವದಕೆ ದಿವ್ಯಪ್ರಭಾವಳಿಗಳೇಳು ॥

ಗಣದ ಮಧ್ಯದಿ ಪಂಚವಕ್ತ್ರನು । ಮಿನುಗುತಿದ್ದನು । ಗಿರಿಜೆಯೊಡೆಯನು । ಅನುಪಮವಲಾ ಶಿವನ ವಡ್ಡೋಲಗವ ಬಣ್ಣಿಪರೆ ॥70॥

ರಕ್ತವರ್ಣ ಪ್ರಭಾವಳಿಯು ಮೊದ- । ಲಿತ್ತು ರತ್ನ ಸುಶೋಭಿತವು ಮೇ- । ಣಿತ್ತೆರಡನೆಯ ಪ್ರಭಾವಳಿಯು ಕೇಳ್ ಹೇಮವರ್ಣವದು ॥

ಮತ್ತೆ ಮೂರನೆ ನೀಲವರ್ಣದ । ರಕ್ತವರ್ಣವು ನಾಲ್ಕನೇಯದು । ಮುತ್ತು ವೈಡೂರ್ಯದ ಪ್ರಭಾವಳಿಯ್ಕೆದನೇಯದಲಾ ॥71॥

ಮೆರೆದುದ್ಕೆ ಕೇಳ್ ಪುಷ್ಪರಾಗದ । ಪರಮ ಸುಂದರ ವೇಲಿ ಮುತ್ತಿನ । ಸರಸ ಜಾಳಿಯು ಶೋಭೆಯಿತ್ತಾರನೆ ಪ್ರಭಾವಳಿಗೆ ॥

ತರತರದ ಬಹು ರತ್ನ ದಿಂದಲಿ । ಮೆರೆಯುತಿದ್ದುದು ವಿಶ್ವಕರ್ಮನ । ಕರದಕೌಶಲವಾ ಪ್ರಭಾವಳಿ ಯೇಳನೇದರಲಿ ॥72॥

ಈ ತೆರದ ಸಿಂಹಾಸನದೊಳಾ । ಭೂತನಾಥ ಭವಾನಿಸಹಿತಲಿ । ಕೂತಿಹನು ಶತ ಕೋಟಭಾಸ್ಕರನಂತೆ ಸಂಜಿಪನು ॥

ನೇತ್ರ ಮೂರನೆಯಿಂದ ಜ್ವಾಲೆ- । ಹಾತಿಶಯ ಪ್ರಳಯಾಗ್ನಿಯಂದದಿ । ಜೋತಿ ಬರ್ಪುದು ಭೀತಿಯುತ್ಪಾದಕರ ದರ್ಶನವು ॥73॥

ಪ್ರಳಯಸಮಯದೊಳೇಳು ಸಾಗರ । ಮಿಳಣಿಯಾಗುವ ತೆರದಿ ಹರಸಭೆ । ಯಲಿ ವಿರಾಜಿಸಿತೇನ ಹೇಳೆನು ಶ್ವಾಸನಿಶ್ವಾಸಾ ॥

ತಲೆಯ ಮೇಲಾ ಮೆರೆವ ಷೋಡಶ । ಕಲೆಯ ಚಂದ್ರನ ಶೋಭೆಯಿಂದಲಿ । ಪೊಳೆಯುತ್ತಿದ್ದನು ಸಭೆಯ ಮಧ್ಯದಿ ಸಾಂಬಶಂಕರನು ॥74॥

ತಕ್ಷಕನು ಯೆಡ ಕಿವಿಗೆ ಭೂಷಣ । ದಕ್ಷಿಣಕೆ ವಾಸುಕಿಯೆ ಭೂಷಣ । ಪ್ರೇಕ್ಷರ ಕಣ್ಣಿಂಗೆ ರತ್ನದ ತೇಜ ತೋರುವುದು ॥
ವಕ್ಷಭೂಷಣ ನಾಗಹಾರವು । ದಕ್ಷಮುಖಹರ ನೀಲಕಂಠನು । ಪ್ರೇಕ್ಷಕರ ದುರಿತಾಪಹಾರನು ಸರ್ಪಭೂಷಣನು ॥75॥

ಕರದಿ ಕಂಕಣ ಸರ್ಪಗಳು ನಾ- । ಗರುಗಳೇ ಮುದ್ರಿಕೆಯು ಮೇಖಲೆ । ಯರಗಗಳು ಪರಿಧಾನ ವ್ಯಾಘ್ರಾಜಿನವು ಶೋಭಿಪುದು ॥
ಮೆರೆವ ದೇಹವು ದರ್ಪಣವು ನೂ- । ಪುರವು ಕರ್ಕೋಟಕವು ಪದ್ಮವು । ಮೆರೆದನಾ ಶಿವ ಪೌರ್ಣಿಮೆಯ ಚಂದ್ರಮನ ತೇಜದಲಿ ॥76॥

ಹೆಸರು ಕರ್ಪುರಗೌರವಂದಾ । ಪಶುಪತಿಗೆ ಶೋಭಿಸುವದದರಿಂ । ದೆಸೆಯುವನು ಸಭೆಯಲ್ಲಿ ಭೋಳಾಸಾಂಬ ಶಿವನವನು ॥
ಮಿಸುಪರತ್ನದ ಮುಕುಟ ಶಿರದಲಿ । ವಿಷಧರರ ಕೇಯೂರಭೂಷಣ । ಮಿಸುಪ ಕುಂಡಲಶೋಭೆ ಝುಗಝುಗಿಸಿತ್ತು ಸಭೆಯೊಳಗೆ ॥77॥

ಕೊರಳ ಮೇಲಾ ಸರ್ಪಹಾರವು । ಕೊರಳೊಳಗೆ ವಿಷಧರಿಸಿ ಸುಮನೋ- । ಹರವು ಕಂಠವು ನೀಲಕಂಠ ಪ್ರಸಿದ್ಧಹೆಸರಾಯ್ತು ॥
ಮೆರೆದನಾ ಶಿವ ಶುಭ್ರ ಕಮಲದ । ಪರಿಮಳದ ಹೂವಿನಲಿ ಪೂಜಿಸಿ- । ದರೋ ವಿನೂತನ ಚಂದನದಿ ಲೇಪಿಸಿದರೆಂಬಂತೆ ॥78॥

ಕಿರಗಳಿದ್ದವು ಹತ್ತು ಶಿವನಿಗೆ । ಕರದೊಳೆಂದೊಂದಾಯುಧವು ವಿ- । ಸ್ತರಿಸಿದವು ಕೇಳ್ ಖಡ್ಗ ಡಮರು ತ್ರಿಶೂಲರೇಖೆಗಳು ॥
ಪರಶು ನೀರಿನ ಪಾತ್ರೆ ಕೈಯೊಳು । ಮೆರೆಯತಿದೆ ಖಟ್ವಾಂಗ ನಾನಾ । ಪರಿಯ ಬಾಣ ಧನುಷ್ಯ ಶೃಂಗಿ ಪಿನಾಕ ಕಮಲಗಳು ॥79॥

ಹರನು ಮೆರೆದನು ಪಂಚವಕ್ತ್ರನು । ಆರುಹುವೆನು ವಿಸ್ತರಿಸಿ ವಕ್ತ್ರದ । ಪರಿಯ ಕೇಳಿರಿ ಪೇಳುವೆನು ಸಾಂಬನ ಸದಾಶಿವನಾ ॥
ಮೆರೆವುದೊಂದನೆ ಮುಖವು ಮನುಮಥ । ಹರನ ಭಸ್ಮವಿಭೂಷಿತನ ಹಾಲ್ । ನೋರೆಯೊ ಶುಭ್ರಚ್ಛವಿಯಚಂದ್ರಮನೋ ವಿಚಾರಿಸಲು
॥80॥

ಚಂದ್ರ ಸೂರ್ಯಾಗ್ನಿಯರು ನೇತ್ರಗ । ಳಿಂದುಮೌಳಿ ಪವಿತ್ರನೀಶ್ವರ । ಮಂದಸಸ್ಮಿತವನದ ಹಣೆಯಲಿ ಶುಭ್ರ ತಿಲಕವದು ॥
ಮುಂದೆ ಕಂಠದೊಳೆಸೆದುದ್ದೈ ನಾ- । ಗೇಂದ್ರಹಾರ ಪವಿತ್ರ ಮೂರುತಿ । ಸುಂದರೋಷ್ಠವು ಪವಳದಂತೆ ವಿರಾಜಿಸುತ್ತಿಹುದು ॥81॥

ಹರನ ಮುಖವುತ್ತರದ ದಿಶೆಯಲಿ । ಮೆರೆದದಯಾಚಲದಿ ರಂಜಿಪ । ತರುಣಸೂರ್ಯನೊ ದಾಡಿಮದ ಪುಷ್ಪದಲಿ ಶೋಭಿತನೋ ॥
ಕರಕಮಲಗಳು ಮುಖಕಮಲವದು । ಮೆರೆವುತಿದ್ದವು ತಾಮ್ರವರ್ಣದೊ । ಛರಿಯೆ ನಾನೀ ಶೋಭೆಯನು ವಿಸ್ತರಿಸಿ ಪೇಳಲಿಕೆ ॥82॥

ಹರನ ಮೂರನೆ ಮುಖವು ಪೂರ್ವದಿ । ಶಿರದೊಳೊಪ್ಪುವ ಗಂಗೆ ಬಿದಿಗೆಯ । ಸುರಸ ಷೋಡಶಕಲೆಯ ಚಂದ್ರನು ಮಿನುಗುತಿಹಸೊಬಗು ॥
ಉರುಗಗಳ ನೇಣಿಂದ ಕಟ್ಟಿದ । ಶಿರದಿ ಜಟೆಯನು ಮಂಡಿಸಿದ ಸುಂ- । ದರದ ಪರಿಯೇನೆಂಬೆನನುಪಮರೂಪ ಪರಶಿವನಾ ॥83॥

ನಾಲಕನೆ ದಕ್ಷಿಣದ ಮುಖವಿ- । ಕ್ರಾಳದಾಡೆಗಳತಿಭಯಂಕರ । ನೀಲವರ್ಣದ ಶೋಭಿತಾನನ ಮೆರೆವುದೈ ಶಿವನಾ ॥
ಜ್ವಾಲೆಮುಖದಿಂ ಹೊರಡುತಿಹುದು ವಿ । ಶಾಲ ವೇದಶ್ರುತಿಯು ರುಂಡದ । ಮಾಲೆ ಶೋಭಿಸುತಿಹುದು ಕಂಠದಿ ಸರ್ಪಭೂಷಣಗೆ ॥84॥

ವದನವೈದನೆ ಸಗುಣನಿರ್ಗುಣ । ವುದಿತ ವ್ಯಕ್ತಾವ್ಯಕ್ತರೂಪವು । ಒದಗಿತಲ್ಲಿ ಸಲಕ್ಷಣದ ನಿರ್ಲಕ್ಷಣದ ಗುಣವು ॥
ವಿದಿತ ಸಾಕಾರದ ನಿರಾಕಾ- । ರದ ವಿಲಕ್ಷಣ ವಸ್ತು ನಾನಾ- । ಯುಧನು ಮೆರೆದನು ಪಂಚಮುಖ ಪರಬ್ರಹ್ಮ ಮೂರುತಿಯು ॥85॥

ಕಾಳವ್ಯಾಲವನೇಕ ಸರ್ಪದ । ಮಾಲೆ ಕಂಠದಿ ಶೋಭಿಸುವುದು ವಿ- । ಶಾಲ ಚರಣವು ಕೆಂಪು ಕಮಲಾಕಾರ ರಂಜಿಪುದು ॥
ಮೇಲೆ ನಖಗಳು ಚಂದ್ರನಂದದಿ । ಕಾಲಡಿಗೆ ಪಾದುಕದ ಶೋಭೆಯು । ಹೇಳಲೇನದ ಸರ್ಪಗಳ ಭೂಷಣವು ದೇಹದಲಿ ॥86॥

ಹುಲಿಯ ಚರ್ಮವ ಹೊದ್ದು ಚಂದ್ರಾ- । ವಳಿಯ ನಾಭಿಯೊಳಿಟ್ಟನಾ ಕೂ- । ದಲುಗಳೆಲ್ಲ ತಟಸ್ಥ ವುದರದಿ ಚಂದನೇನೆಂಬೆ ॥
ಹೊಳೆಯುವುದು ಸರ್ವಾಂಗ ಸರ್ಪಾ- । ವಳಿಯ ಭೂಷಣ ಕೆರದೊಳೊಪ್ಪುತ । ಹೊಳೆವ ಸುಂದರ ನಾಗಬಂಧವು ಶೋಭಿಸಿತುಭರದಿ ॥87॥

ಹರನು ಪರಮಾರ್ಥಿಗಳ ಸುರತರು । ಶರಣರಿಗೆ ಸುಮನೋಹನು ಶಂ । ಕರನು ರುದ್ರನು ಪಾರ್ವತೀಸಹ ನಿದ್ದನೋಲಗದಿ ॥
ಗಿರಿಜೆ ಸರ್ವೇಶ್ವರಿಯು ನಾನಾ । ಪರಿಯಲಂಕಾರದಲಿ ಶೋಭಿಸು- । ತಿರುವಳಾ ಸಭೆಯಲ್ಲಿ ಹರನೊಡ್ಡೋಲಗದಿ ತಿಳಿಯೆ ॥88॥

ಕನಕ ಚಂಪಕದಂತೆ ಗೋರಟ । ಮಿನುಗುತಿದೆ ಕಂಠದಲಿ ಮುತ್ತಿನ । ಮಣಿಯ ಹಾರವು ರತ್ನಖಚಿತ ಕಿರೀಟ ಶಿರದೊಳಗೆ ॥
ಅನುಪಮವು ಕೇಳ್ನಾ ಗಬಂದಿಯು । ಗಣಿತವಿಲ್ಲದ ಪರಿಮಳದ ಹೂ- । ವಿನ ಸುದಿವ್ಯ ಸುಪುಷ್ಪ ಜಾತಿಗಳಾ ಕಿರೀಟದಲಿ ॥89॥

ಪರಿಮಳವನಾಸ್ವಾದಿಸಲಿಕಾ- । ಬರುವುದ್ಯೆ ಭ್ರಮರಾಳಿ ಮಕುಟದ । ಹೊರಗೆ ರಂಜಿಸುತಿಹುದು ಮುತ್ತಿನ ಜಾಲಸಂದೋಹಾ ॥
ಸರಳ ನಾಸಿಕವಲ್ಲಿ ಮುಕ್ತಾ- । ಭರಣವದಕೆ ಸುರತ್ನ ಸೋಜ್ವಲ । ಮೆರೆದಳೀಪರಿ ಗಿರಿಜೆ ತನ್ನಯ ಪತಿಯ ಪಾರ್ಶ್ವದಲಿ ॥90॥

ಹವಳದಂತಧರೋಷ್ಠಗಳು ತಾ । ಪವಣಿಸಿದ ರತ್ನಗಳ ತೆರದಲಿ । ಶಿವೆಯ ಹಲ್ಲಿನ ಪಂಕ್ತಿ ರಂಜಿಸುವುದು ಸಗಾಢದಲಿ ॥
ಕಿವಿಯೊಳಗೆ ಬಹುವಿಧದ ರತ್ನವ । ಪವಣಿಸಿಹವಾ ಭರಣಗಳು ತಾ । ಕವಿಯ ಕಲ್ಪನೆ ನಿಲುಕಲಾರದ ವಸ್ತು ಜಗಜನನಿ ॥91॥

ಹಳದಿ ವರ್ಣದ ದಿವ್ಯ ಕುಪ್ಪಸ । ದೊಳಗೆ ಸ್ತನಗಳು ರಾಜಿಸುವವ್ಯೆ । ಝಳಪಿಸುವವ್ಯೆ ಕಂಚುಕದ ಮೇಲ್ ರತ್ನ ಹಾರಗಳು ॥
ಪೊಳೆವ ಕಾಲವ್ಯಾಲನಾಗಂ- । ಗಳು ಕುಡಿಯುವವು ಪಾರ್ವತಮ್ಮನ । ಮೊಲೆಯ ಹಾಲನು ಭಾಗ್ಯವೆಂತುಟೊ ಸರ್ವ ಜಾತಿಯರಾ ॥92॥

ರಕ್ತವರ್ಣದ ಸೀರೆಯುಟ್ಟಳು । ಶಕ್ತಿ ಕುಂಕುಮ ಲೇಪಿಗಿದಳೋ । ಮತ್ತೆ ದಾಡಿಮಪುಷ್ಪವೇಲಿಯ ಹೊದ್ದು ಕೊಂಡಿಹಳೋ ॥
ವಿಸ್ತರಿಸಲಾರೆನು ಮಹಾತ್ಮಳ । ಮೂರ್ತಿ ರಂಜಿಪುದೇನನೆಂಬೆನು । ಮುತ್ತಿನಿಂದ ಸುಶೋಭಿತವು ಕಾಣುವುದು ಕಂಚುಕಿಯು ॥93॥

ಬೆರಳಿಗಿರುವವು ಮುದ್ರಿಕೆಗಳಾ- । ಕರದಿ ಮೆರೆವವು ಕಂಕಣಗಳು । ಚರಣದಲಿ ಶೋಭಿಪವು ನೂಪುರಗಳು ಸಗಾಢದಲಿ ॥
ಮೆರೆವ ಅಷ್ಟಮಿಚಂದ್ರನಂದದಿ । ಧರಿಸಿದಳು ತಿಲಕವನು ಹಣೆಯಲಿ । ಗಿರಿಜೆ ಮುಕ್ತಾಫಲದ ಶುಭ್ರತೆಯಂತೆ ತಿಲಕವದು ॥94॥

ಬೇರೆಬೇರೀ ತೆರದಿ ಗಿರಿಯ ಕು- । ಮಾರಿ ಧರಿಸಿದಳಾಭರಣಗಳ- । ನಾರು ಬಣ್ಣಿಪರಿದನು ಶೇಷನಿಗಸದಳವು ನೋಡೆ ॥
ವಾರಿಜಾಸನ ಸುರವರರು ಮೇಣ್ । ನಾರದಾದಿ ಸನತ್ಕುಮಾರರು । ಭೋರನ್ಯೆತಂದರು ಸದಾಶಿವನಿದ್ದ ಸಭೆಗಾಗಿ ॥95॥

ಚರಣಕೆರಗಿ ಸನತ್ಕುಮಾರರು । ಹರನ ಕೊಂಡಾಡಿದರು ಜಯಜಯ । ಹರನೆ ಮನುಮಥಹರನೆ ಗಂಗಾಧರನೆ ಭವಹರನೆ ॥
ದುರಿತವನು ಸಂಹರಿಸಿ ಭವಸಾ- । ಗರವ ದಾಟುವ ಪರಿಯ ಪೇಳ್ವೈ । ಕರತಲಾಮಲಕದಪರಿಯೊಳಿರಬೇಕು ಪುರುಷಾರ್ಥ ॥96॥

ಕಷ್ಟ ಮಾಡದೆ ಬಹುದಿವಸದಲಿ । ಶ್ರೇಷ್ಠವಹ ಪುರುಷಾರ್ಥ ಸಾಧಿಪ । ಯಿಷ್ಟಸಾಧನವಾವುದೀ ಕಲಿಯುಗದಿ ಪೇಳೆಮಗೆ ॥
ಭ್ರಷ್ಟರಾಗುವರೀ ಯುಗದಿ ಮ- । ತ್ತಿಷ್ಟು ಸುಲಭೋಪಾಯ ಪೇಳ್ವೈ । ಕಷ್ಟ ಮಾಳ್ಪರೆ ಶಕ್ತಿಯಿಲ್ಲೈ ಭಕ್ತವತ್ಸಲನೇ ॥97॥

ನುಡಿಯ ಕೇಳಿ ಸನತ್ಕುಮಾರಗೆ । ಮೃಡನು ನುಡಿದನು ಸಂತಸದೊಳಾ । ಪೊಡವಿಯಲ್ಲಿ ತ್ರಿಪುಂಡಧಾರಣವಹುದು ಬಹುಸುಲಭಾ ॥
ಬಿಡದೆ ಪ್ರತಿದಿನ ಧರ್ಮಪೂರ್ವಕ । ನಡಿಸಿದರೆ ಧಾರಣವು ಭಸ್ಮದ । ಪಡೆವರ್ೈ ಸಕಲಾರ್ಥ ಸಾಧನ ಸುಲಭ ಮಾರ್ಗದಲಿ ॥98॥

ಹರನೆ ಪೇಳೆಮಗೀಗ ಧಾರಣೆ । ತೆರನದಾವುದು ಭಸ್ಮದ್ರವ್ಯದ । ಪರಿಕರವು ಮೇಣಾವುದ್ಯೆಯದಕೇನು ಮಂತ್ರವಿಧಿ ॥
ಧರಿಸುವರೆ ಯಾವುದು ಪ್ರಮಾಣವು । ಅರುಹು ನೀನೆಮಗೆಂದು ಚರಣದ । ಲೆರಗಿದನು ವರಭಕ್ತಿಯಲ್ಲಿ ಸನತ್ಕುಮಾರಕನು ॥99॥

ಗೋಮಯದ ದ್ರವ್ಯವನು ತೆಗೆದು ಸು । ನೇಮದಿಂ ದೇವರಾಗ್ನಿಯಿಂ ವಿ । ನಿರ್ಮಿಸಿದನಾ ಭಸ್ಮ ಶ್ರೇಷ್ಠವು ಯೋಗ್ಯ ಧಾರಣಕೆ ॥
ಭೂಮಿಯಲ್ಲಿ ಪುರಾತನದ ಬಹು । ಹೋಮಯಜ್ಞದ ಭಸ್ಮ ಸಿಗಲಾ- । ರಾಮವಹುದಾ ಭಸ್ಮಧಾರಣೆ ಪಾಪಹಾರಕವು ॥100॥

ಕೈ ತಳದಿ ಭಸ್ಮವನು ಸದ್ಯೋ । ಜಾತಮಂತ್ರದಿ ತೆಗೆದು ಮತ್ತೆ ವಿ- । ಭೂತಿಯೆನ್ನ ಭಿಮಂತ್ರಿಸಲು ಬೇಕಗ್ನಿ ಮಂತ್ರದಲಿ ॥
ಕೂತು ಮಾನಸೋಕಮಂತ್ರದಿ- । ಭೂತಿಯನು ಹೆಬ್ಬೆರಳಿಗೇರಿಸಿ । ನೀ ತಲೆಯ ಮೇಲೇರಿಸ್ಯೆ ತ್ರ್ಯಂಬಕದ ಮಂತ್ರದಲಿ ॥101॥

ಧರಿಸಬೇಕು ಲಲಾಟ ಭುಜದಲಿ । ಪರಮ ತ್ರ್ಯಾಯುಷ ಮಂತ್ರದಿಂದಲಿ । ಧರಿಸಬೇಕೀ ಮಂತ್ರದಿಂದಲಿ ಸ್ಥಾನಸ್ಥಾನದಲಿ ॥
ಇರಲು ಬೇಕೈ ಮೂರು ರೇಷೆಗ- । ಳಿರದೆ ಮಂತ್ರೋಚ್ಚಾರದಿಂದಲಿ । ಇರಲು ಬೇಕು ಸಮಾನರೇಷೆಗಳೆಲ್ಲ ಸ್ಥಾನದಲಿ ॥102॥

ಬೆರಳ ಮೂರರ ಭಸ್ಮದಿಂದಲಿ । ಧರಿಸಬೇಕು ತ್ರಿಪುಂಡ್ರ ಮೊದಲಿನ । ಬೆರಳಿನಿಂದಲಿ ಮಧ್ಯರೇಷೆಯ ತೆಗೆ ಲಲಾಟದಲಿ ॥
ತಿರುಗಿ ಮಧ್ಯಾನಾಮಕದಿ ನೀ । ನೆರಡು ರೇಷೆಗಳನ್ನು ತೆಗೆ ಆ । ತೆರದಿ ತೆಗೆಯಲು ಬೇಕು ರೇಷೆಯ ಸ್ಥಾನಸ್ಥಾನದಲಿ ॥103॥

ಇರಲು ಬೇಕೈ ಸ್ಥಾನಸ್ಥಾನದಿ । ಸರಳವಾಗಿಹ ಮೂರು ರೇಷೆಗ । ಳಿರಲು ಬೇಕವು ಹುಬ್ಬಿನಾಕಾರಪ್ರಮಾಣದಲಿ ॥
ಇರಲು ಬಾರದು ಅಧಿಕವದರಿಂ- । ದರುಹುವೆನು ಪ್ರತಿಯೊಂದು ರೇಷೆಗೆ । ಯಿರುವ ನವದೇವತೆಗಳನು ನೀ ಕೇಳು ಮನಗೊಟ್ಟು ॥104॥

ಮೂರುರೇಷೆಗೆ ಕ್ರಮದಿ ಅಉಮಾ- । ಕಾರಗಳು ಕೂಡಿದರೆ ಯೊಂದ್ ಓಂ- । ಕಾರವಾಗುವದದೆ ತೆರದಿ ಮೂರ್ಗುಣಗಳಾಗುವವು ॥
ತೋರುವುದು ಮೊದಲನೆಯ ರೇಷೆಗೆ । ಚಾರು ಋಗ್ವೇದವು ರಜೋಗುಣ । ಗಾರಪತ್ಯವು ಮೇಣ್ ಕ್ರಿಯಾಶಕ್ತಿಯು ಪವನಪ್ರಾತಃ ॥105॥

ಎರಡನೆಯದಕೆ ಯಜುರವೇದವು । ಯಿರುವುದಿಚ್ಛಾಶಕ್ತಿ ಸಾತ್ವಿಕ । ಪರಮಗುಣವೈ ದಾಕ್ಷಿಣಾಗ್ನಿಯು ಸವನ ಮಧ್ಯಾಹ್ನ ॥
ಇರುದೈ ಮೂರನೆಯ ರೇಷೆಗೆ । ಪರಮ ತಮಗುಣ ಸಾಮವೇದವು । ಇರುವುದಿದಕಾ ಜ್ಞಾನಶಕ್ತಿಯು ಸವನ ಸಾಯಾಹ್ನ ॥106॥

ಧ್ಯಾನನಮನದ ಮಾಡುತೀಪರಿ । ಮಾನವನು ಭಸ್ಮವನು ಧರಿಸಲು । ನೂನ್ಯತೆಯ ತೋರಿಸಲು ಬಾರದು ಶಿವನದೀ ಮತವು ॥
ಜ್ಞಾನವಿಲ್ಲದ ಮಂತ್ರ ತಿಳಿಯದೆ । ತಾನು ಧರಿಸಲು ಭಾವಶುದ್ಧ ದೊ- । ಳೇನ ಹೇಳುವೆ ಮಹಿಮೆಯಗಣಿತಫಲವ ಕೊಡುತಿಹುದು ॥107॥

ಭಸ್ಮ ಧರಿಸಲು ಬೇಕು ಸರ್ವರು । ಬ್ರಹ್ಮಚಾರಿ ಗ್ರಹಸ್ಥನಾಗಲಿ । ಕರ್ಮನಿಷ್ಠ ಯತೀಶವಾನಪ್ರಸ್ಥನಾಗಿರಲಿ ॥
ಜನ್ಮ ಮೃತ್ಯುವ ಗೆದ್ದು ಪಡೆವರು । ವೊಮ್ಮೆಗೆಲೆ ಮುಕ್ತಿಯನು ಮನುಜರು । ತಮ್ಮ ತಮ್ಮಿಚ್ಛಿತವ ಪಡೆವರು ಭಸ್ಮಧಾರಿಗಳು ॥108॥

ಜಾತಿಯಾವದೆಯಾಗಲವನು ವಿ । ಭೂತಿ ಹಚ್ಚಿದರಾಯ್ತು ಪಾವನ । ಪಾತಕಗಳುಪಪಾತಕಂಗಳು ಸುಟ್ಟು ಹೋಗುವವು ॥
ಭೂತಳದಿ ವಿಧಿಮಂತ್ರಯುಕ್ತ ವಿ । ಭೂತಿಧಾರಣ ಮಾಳ್ಪನಾರೊ ಪು । ನೀತನಪ್ಪನು ಸರ್ವವಂದ್ಯನು ಭಸ್ಮಧಾರಕನು ॥109॥

ಪರವನಿತೆ ಪರದ್ರವ್ಯವನ್ನ ಸ- । ಹರಿಸಿದಂತಿಹ ದುರಿತ ಮತ್ತಾ । ಪರರ ನಿಂದಿಸಿ ಪರರ ಕ್ಷೇತ್ರವ ಹರಿಸಿರುವಪಾಪ ॥
ಪರರ ಪೀಡನೆ ಪಾಪ ಹಾದಿಯ । ವಿರಮದಾಸ್ಥಾನವನು ಕೆಡಿಸಿದ । ದುರಿತ ಮನೆಗಳ ಸುಟ್ಟು ಪಾಪವ ಸುಟ್ಟು ಬಿಡುವದಲಾ ॥110॥

ಸತ್ಯವಾಡದೆ ಮೋಸಗೊಳಿಸಿ ಸ- । ಮಸ್ತರನು ವಂಚಿಸಿದ ಪಾತದ । ವಿತ್ತಕಾಗಿಯೆ ವೇದವಿಕ್ರಯ ಮಾಡುವಾ ಪಾಪಾ ॥
ವೃತ್ತಿಯನು ಕಸುಕೊಂಡ ಪಾತಕ । ಸತ್ಯವಿಲ್ಲದ ಮಾತು ಸಾಕ್ಷಿಯ । ನಿತ್ತರಾ ಪಾತಕವು ಹೊಟ್ಟೆ ನಿಮಿತ್ಯ ಕೌಟಿಲ್ಯಾ ॥111॥

ಗೋಮಹಿಷ ತಿಳಕಂಬಳಾದಿಯ । ಭೂಮಿವಸ್ತ್ರಾನ್ನಗಳ ಲವಣದ । ಹೇಮದಾನಗ್ರಹಣ ಪಾತಕವೆಲ್ಲ ನಾಶಿಪುದು ॥
ನೇಮವಿಲ್ಲದೆ ನೀಚರಿಂದಲಿ । ಹೇಮಜಲಧಾನ್ಯಾದಿ ದಾನವ । ಕಾಮಿಸಿದರಾ ಪಾಪ ಸುಡುವುದು ಭಸ್ಮಧಾರಣದಿ ॥112॥

ದಾಸಿವ್ಯಷಲೆರಜಸ್ವಲೆಯರೊಳು । ವೇಶ್ಯ ಕನ್ಯೆ ಭುಜಂಗ ವಿಧವೆಯೊ । ಳೇಸು ವ್ಯಭಿಚಾರವನು ಮಾಡಲು ಸಂಭವಿಪ ದುರಿತಾ ॥
ಮಾಸರ ಸಲವಣಾದಿಗಳ ಕ್ರಯ- । ದೋಷವೆಲ್ಲವು ಸುಟ್ಟು ಹೋಗಿ ವಿ । ನಾಶವಪ್ಪುದು ಭಸ್ಮಧಾರಣಮಾತ್ರದಲಿ ಜಗದಿ ॥113 ॥

ಜ್ಞಾತವಾಗಲಿ ಮೇಣು ಕೇಳ- । ಜ್ಞಾತವಾಗಲಿ ಹುಟ್ಟಿರುವ ಬಹು । ಪಾತಕಗಳನು ದಹಿಸಿ ಬಿಡುವುದು ಭಸ್ಮಧಾರಣೆಯು ॥
ಭೂತನಾಥನ ನಿಂದಿಸಿದರಾ । ಪಾತಕಿಯು ಸಂತತವು ನರಕಕೆ । ಪಾತ್ರನಲ್ಲಾ ಯಿರುವುದೆ ಸಂದೇಹವಿದಕಿನ್ನು ॥114॥

ಹರನ ದ್ರವ್ಯವನಪಹರಿಸಿದರೆ । ಹರನ ಶರಣರ ನಿಂದಿಸಿದರಾ । ದುರತಕಿಲ್ಲೈ ಜಗದಿ ಪ್ರಾಯಶ್ಚಿತ್ತ ಬೇರಿನ್ನು ॥
ಕೊರಳೊಳಗೆ ರುದ್ರಾಕ್ಷಮಾಲೆಯ । ಧರಿಸಿ ಹಣೆಗೆ ತ್ರಿಪುಂಡ್ರವಿಟ್ಟರೆ ಧರೆಯೊಳಾನರ ಪೂಜ್ಯನಪ್ಪನು ಮೂರು ಲೋಕದಲಿ ॥115॥

ಜಾತಿ ಯಾವದೆ ಯಿರಲಿ ಯಿಟ್ಟ ವಿ- । ಭೂತಿಯಿಂದಲಿ ನರನು ಸರ್ವ ಪು- । ನೀತನಪ್ಪನು ಭಸ್ಮಧಾರಣ ಮಹಿಮೆ ಚೋದ್ಯವಲಾ ॥
ತೀರ್ಥ ಕ್ಷೇತ್ರವನೇಕವಿರುವುದು । ಧಾತ್ರಿಯಲಿ ತತ್ಸ್ನಾನಫಲವ ವಿ- । ಭೂತಿ ಕೊಡುವುದು ಭಸ್ಮಮಹಿಮೆಯ ಬಲ್ಲ ಶಿವನೊರ್ವ ॥116॥

ವೇದಶಾಸ್ತ್ರವನಂತವಿರುವುದು । ಐದೆರಡು ಕೋಟಿಗಳು ಮಂತ್ರಗ- । ಳೋದಲಿಕೆ ಪಂಚಾಕ್ಷರಾದಿಗಳಿಹವು ಬಹುಪರಿಯು ॥
ಮೇದಿನಿಯೊಳಿದನೆಲ್ಲ ಪಠಿಸಿದ । ಸಾಧನವು ಕೇಳ್ ಭಸ್ಮಧಾರಣ- । ವಾದರವು ಜಗಕೆಲ್ಲ ಭಸ್ಮ ಮಹಾತ್ಮೆಯನುಪಮವು ॥117॥

ನಿತ್ಯ ಭಸ್ಮವ ಲೇಪಿಸಿದರೈ । ಪುತ್ರಪೌತ್ರರು ಸಕಲ ಸಂಪತ್ । ಧಾತ್ರಿಯಲಿ ಸುಖಸಾಧನವು ಪರಲೋಕಸೋಪಾನಾ ॥
ಹತ್ತು ನೂರರ ಜನ್ಮ ಪಾತಕ । ಮೊತ್ತವೆಲ್ಲವು ಸುಟ್ಟುಹೋಪುದು । ಮುಕ್ತಿ ಕಡೆಗಾಗುವುದು ನಾಲ್ವತ್ತೆರಡು ಪೀಳಿಗೆಗೆ ॥118॥

ಧರೆಯೊಳೀ ಭಸ್ಮವನು ಧರಿಸಲು । ಬರಲು ಶಕ್ಯವೆ ವ್ಯಾಧಿ ದೇಹಕೆ । ನಿರುತವಷ್ಟೈಶ್ವರ್ಯ ಬರುವುಮ ಜ್ಞಾನವದರಂತೆ ॥
ಮರಣ ಬರಲು ವಿಮಾನದಲಿ ಸುರ- । ತರುಣಿಯರು ಕರೆದೊಯ್ವರವರಿಗೆ । ಚರಣಕೆರಗುವರಾಗ ಗಂಧರ್ವಾದಿ ಸುರವರರು ॥119॥

ಇರುತಲಾ ಸ್ಥಾನದಲಿ ಕೆಲದಿನ- । ಬರುವರವರಾ ಬಹ್ಮಲೋಕಕೆ । ಸ್ಥಿರದೊಳಲ್ಲಿರುತಿಹುರು ಕೇಳೈ ಕಲ್ಪಶತತನಕಾ ॥
ಮರಳಿ ವೈಕುಂಠಕ್ಕೆ ಬರುವರು । ಯಿರುವರಲ್ಲಿಯೆ ಮೂರು ಕಲ್ಪದಿ । ಬರುವರದನಂತರಕೆ ಕೈಲಾಸಕ್ಕೆ ಪುಣ್ಯದಲಿ ॥120॥

ಹರನ ಕೈಲಾಸಕ್ಕೆ ಬರಲಾ । ಹರನ ಸಾಯುಜ್ಯದಲಿ ಶಾಶ್ವತ । ವಿರುವರೈ ಹರಮೋಕ್ಷ ಪಡೆವರು ಭಸ್ಮಧಾರಣದಿ ॥
ಧರಿಸದಿರು ಸಂದೇಹ ಮನದಲಿ । ಧರಿಸು ಭಸ್ಮವ ದೇಹದಲಿ ನಿನ । ಗರಿವ ತಿಳಿಸುವೆ ವೇದಶಾಸ್ತ್ರದ ಸಾರವಿದು ನಿಜವು ॥121॥

ಎಂದು ಭಸ್ಮದ ಮಹಿಮೆಯನು ತಾ- । ನಿಂದುಧರ ಪೇಳಿದನು ವಿಸ್ತರ- । ದಿಂದಲಾಗ ಸನತ್ಕುಮಾರಾದಿಗಳ ಸಭೆಯೊಳಗೆ ॥
ಬಂದನೀಶ್ವರ ಬಳಿಕ ಶಿವಪುರ- । ಕಂದು ನಡೆದರು ಸುರರು ಮುನಿಗಳು । ಎಂದು ನುಡಿದನು ವಾಮದೇವನು ಬ್ರಹ್ಮರಾಕ್ಷಸಗೆ ॥122॥

ಚರಣ ಕೆರಗಲು ಬ್ರಹ್ಮರಾಕ್ಷಸ- । ಗರುಹಿದನು ಮುನಿ ವಾಮದೇವನು । ಅರಿತೆ ನೀನೀಸರಿಯ ಭಸ್ಮ ಮಹಾತ್ಮ್ಯೆ ಯನು ಶಿವನಾ ॥
ಭರದೊಳಾಯಿತು ನಿನಗೆ ಜ್ಞಾನವು । ಪರಮ ಭಸ್ಮಸ್ಪರ್ಶದಲಿ ನಿನ- । ಗಿರುವುದೈ ಮುಂದಿನ್ನು ಮೋಕ್ಷದ ಹಾದಿ ನಿಜವಾಗಿ ॥123॥

ಸಂತಸದೊಳಾ ವಾಮದೇವನು । ಮಂತ್ರಿಸುತ ಭಸ್ಮವನು ಕೊಟ್ಟನು । ಆಂತನದಲಾ ಬ್ರಹ್ಮರಾಕ್ಷಸ ಭಕ್ತಿಯಿಂ ಶಿರದಿ ॥
ಬಂತು ತತ್ ಕ್ಷಣವು ದಿವ್ಯದೇಹವು । ಕಾಂತಿಯಾಯಿತು ಸೂರ್ಯಚಂದ್ರರ । ಶಾಂತಮೂರುತಿ ಸಂತಸದೊಳಾ ನಲಿದ ರಕ್ಕಸನು ॥124॥

ಮುನಿವರನ ಪದಕೆರಗಿ ರಕ್ಕಸ । ವಿನಯದಿಂ ಬಲ ಬಂದು ಭಕ್ತಿಯ । ಮನದಿ ಜಾನವ ಮಾಡಲಾಕ್ಷಣ ಬಂದಿತು ವಿಮಾನಾ ॥
ಮುನಿಯು ಕೊಟ್ಟನು ಬ್ರಹ್ಮರಾಕ್ಷಸ- । ಗನುಪಮದ ದೋಕ್ಷವನು ಸಜ್ಜನ । ರನುಪಮದಮಹಿಮೆಯನು ಪೊಗಳಲಿಕಸದಳವುಯೆನಗೆ ॥125॥

ಹರನಲಾ ಶ್ರೀವಾಮದೇವನು । ನರನ ರೂಪದಿ ಧರೆಗೆ ತೋರುವ । ಶರಣರನು ರಕ್ಷಿಪ ನಿಮಿತ್ತದಿ ಚರಿಸುವನು ಜಗದಿ ॥
ಗುರುವು ಕೊಟ್ಟ ವಿಭೂತಿಯಲಿಯು- । ದ್ಧರಿಸಿದನು ಪಾತಕಿಯು ರಕ್ಕಸ । ನರರೆ ಭಸ್ಮ ಮಹಾತ್ಮ್ಯೆಯಿದು ಬಹು ಚೋದ್ಯವೀಜಗದಿ ॥126॥

ಗುರುವಿನಧಿಕದ ತತ್ವವಲ್ಲೈ । ಗುರುಮಹಿಮೆಯನು ನಿಗಮಶಾಸ್ತ್ರಗ । ಳರಿತು ಘೋಷಿಪವೈ ಸದಾ ಗುರುಶ್ರೇಷ್ಠ ನೆಂದೆನುತಾ ॥
ಗುರುಹೊರತು ಮಂತ್ರಗಳು ಸಾಧಿಸ । ಲರಿಯವಲ್ಲಾ ಗುರುಪ್ರಸಾದದಿ । ಬರುವುದೈ ಸಕಲಾರ್ಥ ಸಿದ್ಧಿಯ ದಾಸಿಯಂದದಲಿ ॥127॥

ಗುರುವು ಕೊಟ್ಟ ವಿಭೂತಿಗಿರುವುದು । ಪರಮ ತಾರಕಶಕ್ತಿಯದರಿಂ । ಗುರುವೆ ತಾರಕನೆಂದು ನಿಗಮಾಗಮವು ಪೊಗಳುವವು ॥
ಗುರುನೃಸಿಂಹ ಸರಸ್ವತಿಯೆ ಈ । ಪರಿಯೊಳರುಹಿದನಾ ತ್ರಿವಿಕ್ರಮ । ಗಿರದೆ ಸಂತಸವಾಯ್ತು ಮರಳಿದರಾಗ ಮಂದಿರಕೆ ॥128॥

ಉದುವಾಯಿತು ಜ್ಞಾನವವರಿಗೆ । ವಿದಿತವಾಯಿತು ಭಸ್ಮಮಹಿಮೆಯು । ಸದಮಲಾಂತಃಕರಣವಾಯಿತು ಶಿಷ್ಯವೃಂದಕ್ಕೆ ॥
ಇದನು ಸುಮನೋಭಾವದಲ್ಲಿಯೆ । ವೊದಗಿ ಪಠಣವ ಮಾಳ್ಪನವರಿಗೆ । ಮುದದಿ ಸಕಲಾಭೀಷ್ಟವೀವನು ವಿಷ್ಣು ಗುರುಮೂರ್ತಿ ॥129॥

॥ ಅಧ್ಯಾಯ 29 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 30

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ರೋಗಪೀಡಿತನಾದ ಪತಿಯ ನೀ । ರೋಗ ಮಾಡುವ ಯತ್ನದಲ್ಲಿ ವಿ- । ಯೋಗವಾಯಿತು ಗಾಣಗಾಪುರದ ಹಾದಿಯಲಿ ಸತಿಗೆ॥

ಸಾವಧಾನದಿ ಗುರುಪದಾಂಬುಜ- । ಸೇವೆಯನು ಮಾಡಲ್ಕೆ ಮನದಲಿ । ಭಾವವೊಂದಿರ ಬೇಕು ಭಾವದ ತೆರದಿ ಫಲವಿಹುದು ॥
ಈ ವಸುಂಧರೆ ಗುರುಭಕುತಿಯ ಪ್ರ- । ಭಾವದಿಂದಲಿ ನಿಜವು ಸುರರಮ- । ರಾವತಿಗೆ ಮಿಗಿಲೆನಿಸುವುದು ಗುರುಭಕ್ತಿಯೇ ಮುಕ್ತಿ ॥1॥

ನಾಮಧಾರಕನಾಗ ಶಿಷ್ಯಶಿ । ರೋಮಣಿಯ ಗುರುಚರಣಕೆರಗುತ । ರೋಮಹರುಷಿತನಾಗಿ ಬಿನ್ನೈಸಿದನು ಭಕುತಿಯಲಿ ॥
ನೀ ಮಹಾತುಮನಹುದು ತಾರಕ- । ನೀ ಮಹಾ ಭವಸಾಗರದಿ ಪದ । ತಾಮರಸವಜ್ಞಾನತಿಮಿರಕೆ ನೀನೆ ಭಾಸ್ಕರನು ॥2॥

ನಾನವಿದ್ಯಾ ಮಾಯೆ ಯೆಂಬುವ । ಮಾನವಿಲ್ಲದ ಸಾಗರದೊಳ । ಜ್ಞಾನವೆಂಬುವ ನೆರೆಗೆ ತೇಲುತ ಬಂದೆ ದಿಕ್ಕಿಲ್ಲಾ ॥
ನೀನು ಯೆನ್ನಯ ಭಾಗ್ಯ ನಿನ್ನ ನಿ । ಜಾನುಭವದಿಂದೆನ್ನ ನೆತ್ತಿದೆ । ನಾನು ದಾಟಿದೆ ನೋಡಪಾರಭವಾಂಬುಧಿಯ ನಿಜದಿ ॥3॥

ನೀನೆ ಶ್ರೀಗುರು ವಿಶ್ವಪಾಲಕ । ನೀನೆ ತ್ರಿಜಗದ್ವಂದ್ಯ ಸ್ವಾಮಿಯು । ಪಾನಮಾಡಿಸಿದೆನಗೆ ಶ್ರೀಗುರುಚರಿತದಮೃತವನು ॥
ಮಾನಸದಿ ಕೇಳ್ ತೃಪ್ತಿಯಾಗದು । ತಾನೆ ವೃದ್ಧಿಯ ಪಡೆವುದಾಸೆಯು । ನೀನೆ ಕೇಳೀ ಕ್ಷುತ್ಪಿಪಾಸೆಯ ತೀರಿಸುವ ಮೇಘ ॥4॥

ಧನ್ಯನಾದೆನು ನಿನ್ನ ಉಪಕೃತಿ- । ಯನ್ನು ತೀರಿಸಲೆನಗೆ ಸಾಧ್ಯವೆ । ನಿನ್ನ ನಿಜರೂಪವನು ತೋರಿಸಿದ್ಯೆ ಕೃತಾರ್ಥನಲಾ ॥
ಎನ್ನ ವಂಶೋವಂಶದವರು- । ತ್ತೀರ್ಣವಾಗುವ ಬಗೆಯ ಕಾಣೆನು । ಇನ್ನು ಮುಂದಿನ ಗುರುಚರಿತ್ರವ ಪೇಳು ಯೆನಗೀಗಾ ॥5॥

ಕೇಳಿ ಶಿಷ್ಯನ ವಚನವನು ಗುರು- । ಮೌಳಿಸಿದ್ಧನು ಪೇಳ್ದನಾಗಲೆ । ಆಲಿಸ್ಯೆ ಶಿಷ್ಯೋತ್ತಮನೆ ಮುಂದಿನ ಕಥಾಮೃತವಾ ॥
ಕಾಲನನು ನೀ ಜಯಿಸಿದೀ ಗುರು । ಲೀಲೆಯನು ಕಿವಿಯಿಂದ ಕೇಳಿದೆ । ಹೇಳಲಾರೆನು ನಿನ್ನ ಭಾಗ್ಯದ ಮಹಿಮೆಯನು ನಾನು ॥6॥

ಗುರುಚರಿತ್ರದ ಶ್ರವಣದಲಿ ನಿನ- । ಗುರುತರದ ಲಭಿರುಚಿಯು ಪುಟ್ಟಿತು । ದುರಿತರಾಶಿಯು ದಗ್ಧವಾಯಿತು ಧನ್ಯ ನೀ ಜಗದಿ ॥
ಗುರುಕೃಪೆಯ ಸುತುಷಾರವಂತಃ । ಕರಣಕ್ಷೇತ್ರದಿ ಬೀಳೆ ಭಕ್ತಿಯ । ಪರಮ ಬೀಜವು ವೃಕ್ಷವಾಗಿಯೆ ಫಲವು ಬರುತಿಹುದು ॥7॥

ಧನ್ಯ ನಿನ್ನಯ ವಾಣಿಯದರಿಂ- । ದೆನ್ನ ಮನದಲಿ ಗುರುಚರಿತ್ರದ । ಸನ್ನುತದ ಕಥನಕ್ಕೆ ಭರತಿಯ ಚಂದ್ರ ನೀನಾದೆ ॥
ಇನ್ನು ನಿನಗೇನಹುದು ಕೊರತೆ ಭ । ವಾರ್ಣವವ ನೀ ದಾಟಿದೆಯಲಾ । ವರ್ಣನೀಯ ಗುರುಮಹಿಮೆ ಯಗಮ್ಯವೀಜಗದಿ ॥8॥

ಕೇಳಿ ನಿನ್ನಯ ವಚನವನು ಯೆನ । ಗೇಳುತಿವೆ ಸಂತೋಷತೆರೆಗಳು । ಪೇಳಲಾರೆನು ಸರ್ವಚರಿತವ ಲೀಲೆಯಗಣಿತವು ॥
ಮೇಲೆ ಮೇಲೆನಗರಿವಿರುವ ಸುಕ । ಥಾಳಿಯೊಳಗಿನಹೂವು ತೆಗೆದೀ । ಮಾಲೆಯನು ರಚಿಸುವೆನು ನಿನಗರ್ಪಿಸುವೆ ಸಾದರದಿ ॥9॥

ಗುರುನೃಸಿಂಹಸರಸ್ವತಿಯು ಹರಿ । ಹರವಿರಂಚಿ ತ್ರಿಮೂರ್ತಿ ಕೂಡಿಯೆ । ಧರೆಯೊಳಗೆ ನರವೇಷದಿಂದವತರಿಸಿದರು ನಿಜದಿ ॥
ಮೆರೆಯಿತಪರಂಪಾರ ಕೀರ್ತಿಯು । ಗುರುವಿರಲು ಗಂಧರ್ವಪುರದಲಿ । ಹರಿಯಿತಾ ಸತ್ಕೀರ್ತಿಲತೆ ಬಹುದೇಶದೇಶದಲಿ ॥10॥

ದೇಶದೇಶಗಳಿಂದ ಗುರುಪದ- । ದಾಶೆಯಿಂದಲಿ ಬಂದು ಕಂಡರು । ಭಾಷೆ ಸಾಲದು ಗುರುಮಹಿಮೆ ವಿಸ್ತಾರ ಮಾಡಲಿಕೆ ॥
ವೇಷಧಾರಿಯಲಾ ಗುರುವುಸ- । ನ್ಯಾಸಿಯೆಂದೇ ಬಗೆವರವನು ಮ- । ಹೇಶನಲ್ಲಾ ಲೀಲೆಯಾಡಿದನೀಧರಿತ್ರಿಯಲಿ ॥11॥

ಭಕ್ತ ವೃಂದವು ಯಾತ್ರೆಗೈದು ವಿ- । ಚಿತ್ರವನು ನೋಡಿದರು ದರ್ಶನ । ಮಾತ್ರದಲಿ ಸಂಪಾದಿಸಿದರಾ ಸಕಲ ಕಾಮಿತವಾ ॥
ವಿತ್ತ ಸಿಕ್ಕಿತು ದೀನಜನರಿಗೆ । ಪುತ್ರರಾದರು ಬಂಜೆಯರಿಗಾ- । ನೇತ್ರವಾಯಿತು ಹುಟ್ಟು ಕುರುಡರಿಗೇನ ಹೇಳುವೆನು ॥12॥

ಕುಷ್ಟರೋಗದಿ ನೆರಳಿ ಬಹು ಸಂ- । ಕಷ್ಟ ಪಡೆಯುವ ನರರ ರೋಗವು । ನಷ್ಟವಾಯಿತು ದೇಹಕಾಂತಿ ಸುವರ್ಣವಾಯಿತಲಾ ॥
ಹುಟ್ಟು ಕಿವುಡಗೆ ಶ್ರವಣಶಕ್ತಿಯು । ಕಷ್ಟವಿಲ್ಲದೆ ಬಂತು ಸದ್ಗುರು- । ದೃಷ್ಟಿಯಮೃತದ ವೃಷ್ಟಿ ಭಕ್ತರ ಸಕಲ ಕಾಮೇಷ್ಟಿ ॥13॥

ಪರುಷತಾಗಲು ಕೀಳು ಲೋಹಕೆ । ವಿರಚಿಸುವುದು ಸುವರ್ಣವದನೀ । ಪರಿಯ ಮಹಿಮೆಯಲಾ ಧರೆಯೊಳೀ ಗುರುವರನ ದೃಷ್ಟಿ ॥
ಶರಣರಘ ಸಂಹರಣವೆಂಬೀ । ಬಿರುದು ಶ್ರೀಗುರುನಾಥನಿಗೆ ಗುರು । ಚರಣದರ್ಶನ ಸರ್ವರೋಗನಿವಾರಣದ ಮಾತ್ರೆ ॥14॥

ನಾಮಧಾರಕ ಕೇಳು ಶಿಷ್ಯಶಿ । ರೋಮಣಿಯೆ ನಾನೊಂದು ಕಥೆಯನು । ಪ್ರೇಮದಿಂದಲಿ ಪೇಳುವೆನು ಗುರುಲೀಲೆಯದ್ಭುತವಾ ॥
ಗ್ರಾಮ ಮಾಹುರವೆಂದು ಉತ್ತರ । ಸೀಮೆಯಲಿ ಯೊಂದೂರು ಯಿರುವುದು । ಕ್ಷೇಮದಲಿ ದ್ವಿಜನೊರ್ವನಿದ್ದನು ಗ್ರಾಮಮಾಹುರದಿ ॥15॥

ಧನಿಕನಿದ್ದನು ವಿಪ್ರನವನನು । ಜನರು ಗೋಪೀನಾಥನೆಂಬರು । ತನಯರೆಲ್ಲರು ಹುಟ್ಟಿದಾಕ್ಷಣ ಮರಣವಶವಹರು ॥
ಮನದಿ ಭಿನ್ನತೆ ಯಾಂತು ದತ್ತನ । ವಿನಯಪೂರ್ವಕವಾಗಿ ಸೇವಿಸೆ । ತನಯನಾದನು ದತ್ತನೆಂದೇ ಹೆಸರನಿಟ್ಟರಲಾ ॥16॥

ಅಳಿದರೈ ಬಹು ಸುತರು ನಂತರ । ಉಳಿದನೊರ್ವನೆ ಮಗನೆನುತ ಬಹು । ಸಲಗೆಯಲಿ ಮಮತೆಯಲಿ ಪುತ್ರನ ಪಾಲಿಸುತ್ತಿಹರು ॥
ಕಳೆಯಲೈದನೆ ವರುಷ ಮುಂಜಿಯ । ಘಳಿಲನವ ಮಾಡಿದರು ಮಗನಿಗೆ । ಸುಳಿಯೆ ಹದಿನೆರಡಬುಧವವನಿಗೆ ಲಗ್ನ ಮಾಡಿದನು ॥17॥

ರತಿಯ ಹೋಲುವ ವಧುವನಾರಿಯ । ಸುತಗೆ ಸುಂದರ ಭಾರ್ಯೆ ಕೊಟ್ಟರು । ಸುತನ ಸುಂದರ ಸೊಸೆಯ ನೋಡುತ ಹಿಗ್ಗಿದರು ಮನದಿ ॥
ಸತಿಪತಿಯ ನಿಸ್ಸೀಮಪ್ರೇಮವು । ಸತತ ವರ್ಧಿಸಿತೇನ ಹೇಳುವೆ । ಸತಿಪತಿಯರಿದ್ದರು ಸಮಾನವಯಸ್ಕರೇನೆಂಬೆ ॥18॥

ವರುಷ ಹದಿನಾರಾಯ್ತು ಬಾಲೆಗೆ ತರುಣಿ । ಸುಂದರಿ ಲಕ್ಷಣಾನ್ವಿತೆ- । ಯರಘಳಿಗೆಯಾದರು ವನಿತೆ ನಿಜಪತಿಯ ಬಿಡದಿಹಳು ॥
ವರ ಪರಸ್ಪರ ಪ್ರೇಮವದ ವಿ । ಸ್ತರಿಸಲೆನಗಳವಲ್ಲ ದಂಪತಿ । ಯರ ವಿಲಕ್ಷಣ ಸುಖವನದನಾನೆಂತು ಬಣ್ಣಿಸಲಿ ॥19॥

ಇಂತು ಹಲದಿನವಾಗೆ ಬಾಲಗೆ । ಬಂತು ವ್ಯಾಧಿಯು ಕೂರ ಕರ್ಕಶ । ನಿಂತು ಹೋಯಿತು ಭೋಜನವು ರುಚಿಯಿಲ್ಲ ನಾಲಿಗೆಗೆ ॥
ಕಾಂತೆಯಿದ ನೋಡಿದಳು ತಾ ಪತಿ- । ಯಂತೆ ಭೋಜನವನ್ನೆ ಬಿಟ್ಟಳು । ಯೆಂತುವರ್ಣಿಪೆ ಸತಿಯ ಪ್ರೇಮವನೊಂದು ಬಾಯಿಯಲಿ ॥20॥

ಪರಿಪರಿಯಲೌಷಧಗಳನು ವೈ- । ದ್ಯರು ಚಿಕಿತ್ಸೆಯ ಮಾಡಿಕೊಟ್ಟರು । ತರುಣಿ ತಾ ಪತಿಯೊಡನೆ ಸೇವಿಸುತ್ತಿರ್ದಳೌಷಧವಾ ॥
ಪುರುಷನುಪವಾಸವನು ಮಾಡಲು । ತರುಣಿಯುಪವಾಸವನು ಮಾಳ್ಪಳು । ಪುರುಷನಂದದಿ ಸರ್ವಕ್ಲೇಶವ ಬಾಲೆ ಸಹಿಸಿದಳು ॥21॥

ಮೂರುವರುಷಗಳಾದವೀಪರಿ । ನಾರಿ ಪುರುಷನ ಕೂಡೆ ಕ್ಲೇಶವ । ಭೂರಿಸಂತೋಷದಲಿ ಸಹಿಸಿದಳಾ ಪತಿವ್ರತೆಯು ॥
ಚೋರನಂದದಿ ವ್ಯಾಧಿ ಪುರುಷಶ- । ರೀರವನು ಕೊರಿಯುತ್ತಲಿದೆ ಕೇಳ್ । ನಾರಿದೇಹವು ಕ್ಷೀಣವಾಯ್ತುದರಂತೆ ದಿನದಿನದಿ ॥22॥

ಪತಿಚರಣ ತೀರ್ಥವನು ಸೇವಿಸಿ । ಸತಿಯು ಕಾಲಕ್ರಮಣ ಮಾಳ್ಪಳು । ಪತಿಯ ದೇಹವು ಕೊಳೆತು ಹೊರಡಿತು ವಾಸದುರ್ಗಂಧಾ ॥
ಪತಿಸಮೀಪಕೆ ಯಾರು ಬಾರರು । ಪಿತನು ಮಾತೆಯು ವೈದ್ಯರಾಗಲಿ । ಸತಿಯು ಸಂತತ ಪತಿಯ ಶುಶ್ರೂಷೆಯನು ಮಾಡುವಳು ॥23॥

ಪತಿಯು ಸೇವಿಪುದೆನಿತು ಗ್ರಾಸವ । ಸತಿಯು ಸೇವಿಪಳೌಷಧವ ತಾ । ಪತಿಗೆ ಕೊಟ್ಟರೆ ತಾನು ಪತಿಯಂದದಲಿ ಸೇವಿಪಳು ॥
ಪತಿಯರೋಗಕುಪಾಯವೆಂತದು । ಕೃತಿಯವೈದ್ಯರು ಸೋತರೆಂದಾ । ಪಿತನು ಮಾತೆಯು ಬಾಂಧವರು ಹೇಳಿದರೆ ನಂಬಳಲಾ ॥24॥

ಪುರುಷನೀಪರಿ ರೋಗದಿಂದಲಿ । ನರಳುತಿರೆ ದಿವ್ಯಾಭರಣಗಳ । ಧರಿಪುದನುಚಿತವೆನುತ ತ್ಯಜಿಸಿದಳವಳು ಭೂಷಣವಾ ॥
ಪುರುಷನೇ ನಿಜಪ್ರಾಣವೆಂದಾ । ತರುಣಿ ಮನದಲಿ ನಿರ್ಧರಿಸಿ ನಿಜ । ಪುರುಷದುಃಖದಿ ಪಾಲುಕೊಂಡಳು ಶುದ್ಧ ಭಾವದಲಿ ॥25॥

ಎರಡು ಕುಲದಲಿ ತಂದೆತಾಯ್ಗಳು । ಪರಮಧನಿಕರು ನೋಡಿ ಮಕ್ಕಳ । ಕರಗಿದಂತಃಕರಣದಿಂದಲಿ ದುಃಖ ಮಾಡುವರು ॥
ಪರಿಪರಿಯ ವೈದ್ಯರನು ಕರೆದು । ಪರಿಪರಿಯ ರಸಪಾಕವಿತ್ತರು । ಅರರೆ ರೋಗದ ಶಪುನವಾಗದು ವ್ಯಾಧಿ ವರ್ಧಿಸಿತು ॥26॥

ಪರಿಪರಿಯ ಜಪಮಂತ್ರವಿದ್ಯೆಯ । ಪರಿಪರಿಯನುಷ್ಠಾನ ಹವನವ । ಪರಿಪರಿಯ ಭೋಜನವ ಸಂತರ್ಪಣವ ಮಾಡಿದರು ॥
ಕರೆದು ಜೋಯಿಸರಿಂಗೆ ಗ್ರಹಗಳಿ- । ಗಿರುವ ಜಪ ದಾನಗಳ ಕೊಟ್ಟರು । ಮರೆತ ಕುಲದೇವತೆಯ ಸಂತರ್ಪಿಸಿದರಾದರದಿ ॥27॥

ಸಾಗಲಾರದುಪಾಯವೆಮ್ಮದು । ರೋಗಕಿಲ್ಲೌಷಧವು ಯೆಮ್ಮೊಳು । ಭೋಗಿಭೂಷಣನೊಲುಮೆಯಲ್ಲದುಪಾಯಬೇರಿಲ್ಲಾ ॥
ಹೋಗಿಬರುವೆವು ನಾವೆನುತಲಾ । ರೋಗವೈದ್ಯರು ಹೇಳೆ ದುಃಖದ । ಸಾಗರದಿ ದೂಡಿದ ತೆರದೊಳಾಯ್ತಾಪ್ತಮಂಡಲಕೆ ॥28॥

ತಂದೆತಾಯ್ಗಳು ಕೇಳಿ ದುಖಃಖದೊ- । ಳಂದು ಮುಳುಗಿದರೇನ ಪೇಳ್ವೆನು । ಕಂದನೆಮಗಾದನು ಕಣಾ ಗುರುದತ್ತದಯೆದಿಂದಾ ॥
ಮುಂದೆ ರಕ್ಷಿಸಬೇಕವನೆ ತಮ । ಗೆಂದು ದತ್ತಾತ್ರೆಯನ ಧ್ಯಾನಿಸಿ । ತಂದೆತಾಯ್ಗಳು ಮರುಗಿದರು ಸುತರೋಗವನು ಕಂಡು ॥29॥

ಕಂದನೋರ್ವನೆ ನಮ್ಮ ವಂಶದೊ- । ಳಿಂದಿವನ ರಕ್ಷಿಸದೆ ಪೋದರೆ । ಮುಂದೆ ಪ್ರಾಣವ ಬಿಡುವೆವೆಂದರು ದತ್ತನನು ಸ್ಮರಿಸಿ ॥
ಕಂದನಾಕ್ಷಣ ತುಂಬಿ ಕಂಬನಿ । ತಂದೆತಾಯ್ಗಳನಪ್ಪಿ ಪೇಳ್ದನು । ತಂದೆ ನಿನ್ನಯ ಋಣವ ತೀರಿಸಲೆಂತು ನಾನಿನ್ನು ॥30॥

ತಂದೆತಾಯ್ಗಳು ನುಡಿಯ ಕೇಳುತ । ನೊಂದು ಮನದಲಿ ಮೂರ್ಛೆ ಬಿದ್ದರು । ಕಂದ ಹೃದಯಾನಂದ ಕೋಪಿಸಬೇಡ ವೆಮ್ಮೊಡನೆ ॥
ಮುಂದೆ ವಾರ್ಧಕ್ಯದಲಿ ನಮಗಾ- । ನಂದದಿಂದಲೆ ಪೋಷಿಸುವೆ ನೀ । ನೆಂದು ಭರವಸವಿತ್ತು ಯೆನ್ನನು ಬಿಟ್ಟು ಪೋಗುವೆಯಾ ॥31॥

ಯಮ್ಮನೀಗಲು ಬಿಟ್ಟು ಪೋದರೆ । ಧರ್ಮ ಸಂಭವಿಸುವುದೆ ನಿನಗಿದು । ಕರ್ಮ ತಟ್ಟದೆ ನಿಲುವುದೇ ಪೇಳೆಂದನಾ ಪಿತನು ॥
ಧರ್ಮಕರ್ಮವನರಿಯೆ ನಾನೀ- । ಜನ್ಮ ಭೋಗವು ತೀರಲಿಕ್ಕಾ । ಒಮ್ಮೆ ದೇಹತ್ಯಾಗ ಮಾಡುವುದಿದುವೆ ನಿಜಮಾತು ॥32॥

ತಂದೆತಾಯ್ಗಳ ಹೊಟ್ಟೆಯಲಿ ನಾ । ಬಂದು ಸ್ತನಪಾನವನು ಮಾಡಿದ । ಒಂದು ಘಳಿಗೆಯ ತಾಯಿಯುಪಕೃತಿ ಜನ್ಮಜನ್ಮದಲಿ ॥
ಬಂದು ಸೇವೆಯ ಮಾಡಿದರು ಋಣ । ಸಂದುಹೋಗದು ನಿಮ್ಮ ಹೊಟ್ಟೆಯ- । ಲಿಂದು ಬಂದೀ ಕಷ್ಟ ಕೊಟ್ಟೆನು ಕ್ಷಮಿಸಬೇಕೆನ್ನಾ ॥33॥
ಲೇಶಮಾತ್ರವು ಸೌಖ್ಯ ಕೊಡದಾ- । ಯಾಸಮಾತ್ರವೆ ನಿಮಗೆ ಕೊಟ್ಟೆನು । ದೋಷವೆನ್ನದು ಪಾಪವೆನ್ನದು ನಿಮಗೆ ಬಡಿಯಿತಲಾ ॥
ಈಸುದುಃಖವೆ ಸಾಕು ಮುಂದಾ । ಕ್ಲೇಶವನು ಬಿಡಿರೇಕಭಾವದೊ-। ಳೀಶನನು ಭಕ್ತಿಯಲಿ ಪೂಜಿಸಿ ದುಃಖ ಮರೆಯುವುದು ॥34॥
ಕಾಲಗತಿಯು ವಿಚಿತ್ರವಿರುವುದು । ಕಾಲನನು ಗೆದ್ದವರ ಕಾಣೆನು । ಕಾಲನೀಶನ ಬಿಡನು ಮಿಕ್ಕಾದವರ ಪಾಡೇನು ॥
ಪೇಳುತೀಪರಿ ತಂದೆತಾಯ್ಗಳ । ಬೋಳಯಿಸಿದನು ವಿನಯಪೂರ್ವಕ । ಲೋಲಲೋಚನೆಗೆಂದನವ ಬಹು ಮಧುರ ವಚನದಲಿ ॥35॥
ಕೇಳು ಪ್ರಾಣೇಶ್ವರಿಯೆ ಮನುಜರ । ಭಾಳಲಿಖಿತವನಾರು ಮೀರ್ವರು । ಲೋಲಲೋಚನೆ ಯೆನ್ನದೆಸೆಯಿಂ ಕಷ್ಟ ನಿನಗಾಯ್ತು ॥
ಕಾಲವಶದಿಂ ನಿನ್ನಯತ್ನ ಕೆ । ಭಾಳಲೋಚನ ಯಶವನೀಯನು । ಮೇಳವೆಮ್ಮದು ಪ್ರೇಮಗ್ರಂಥಿಯು ಭಗ್ನ ವಾಗುವದು ॥36॥
ಪೂರ್ವಜನ್ಮದ ವೈರಿ ನಾನೀ । ಸರ್ವತೋಪರಿ ನಿನಗೆ ಕಷ್ಟವ । ನಿರ್ವಹಿಸಿ ಕೊಡಲೆಂದು ಪಾಣಿಗ್ರಹಣ ಮಾಡಿದೆನು ॥
ನಿರ್ವಹಿಸಿದೆನು ಋಣವನೀಗಲೆ । ಸರ್ವವೆನ್ನಪರಾಧ ಕ್ಷಮಿಸುತ- । ಲುರ್ವಿಯಲಿ ನೀನೆನ್ನ ಮನೆಯಲಿ ಸೌಖ್ಯದಿಂದಿರಲಾ ॥37॥
ಎನ್ನ ತಾಯ್ತಂದೆಗಳು ಪ್ರೇಮದಿ । ನಿನ್ನ ಸಂರಕ್ಷಿಪರು ನಿಜವಿದು । ನಿನ್ನ ಮನಸಾ ಪರಿಯೊಳಿರದಿರೆ ಪೋಗು ತಾಯ್ಮನೆಗೆ ॥
ನಿನ್ನ ಸುಂದರ ರೂಪ ಮುಖದ ಪ್ರ- । ಸನ್ನತೆಯು ದುರ್ಭಾಗ್ಯವೆನಗದು । ಶೂನ್ಯವಾಯಿತು ಪುಣ್ಯಹೀನನ ನೀನು ವರಿಸಿದೆಯಾ ॥38॥
ಎನ್ನ ಅಂಗಸ್ಪರ್ಶಮಾತ್ರದಿ । ಛಿನ್ನ ವಾಯಿತು ಭಾಗ್ಯಲತೆಯದ । ಕಿನ್ನು ಪಾಯವ ಕಾಣೆ ಮಂಗಳಸೂತ್ರ ಹರಿವುದಲಾ ॥
ಎನ್ನು ತೀಪರಿ ಪತಿಯ ವಚನವ । ಖಿನ್ನ ವದನೆಯು ಸತಿಯು ಕೇಳ್ದಳು । ರನ್ನೆ ಗಾಯಿತು ಮೂರ್ಛೆ ನಂತರ ಪತಿಯನೀಕ್ಷಿಸುತಾ ॥39॥

ಚರಣದಲಿ ಮಸ್ತಕವನಿಟ್ಟು । ತರುಣಿ ಮರುಗಿದಳೇನನೆಂಬೆನು । ಮರೆಯಬೇಡೈ ಪ್ರಾಣನಾಥನೆ ಯೆನ್ನನಬಲೆಯನು ॥
ಧರೆಯೊಳಗೆ ನಾ ಕಾಣೆ ನಿನ್ನಯ । ಪರಿಯ ದಾತಾರನನು ಗತಿಯಾ । ರಿರುವರೈ ಯೆನಗೀಗ ನೀ ಹೊರತಿಲ್ಲ ಗತಿ ಬೇರೆ ॥40॥

ನೆರಳಿನಂದಲಿ ನಿಮ್ಮೊಡನೆ ನಾ । ಬರುವೆ ನಿಃಸಂದೇಹವಿದು ನೀವ್ । ತೊರೆಯ ಬಾರದನಾಥೆಯಬಲೆಯನೆನ್ನ ಪ್ರಾಣೇಶಾ ॥
ತರುಣಿಯಾಡಿದ ವಚನ ಕೇಳುತ । ಧರೆಗೆ ಬಿದ್ದರು ತಂದೆತಾಯ್ಗಳು । ತರುಣಿ ಯೆಬ್ಬಿಸಿ ಸಂತವಿಸಿದಳು ಅತ್ತೆ ಮಾವರನು ॥41॥

ಚಿಂತೆಯನ್ನು ಮಾಡದಿರಿ ಮನದಲಿ । ಸಂತಸದಿ ನೀವಿರಲು ಬೇಕಾ । ಕಂತುಹರ ಪಾಲಿಸುವನೆನ್ನಯ ಪತಿಯ ನಿಜವಾಗಿ ॥
ಕಂತುಹರನೋಲಿಯಲ್ಕೆ ದುರುಳ ಕೃ- । ತಾಂತನಾಟಕವು ಸಾಗಲಾರದು । ಬಂತು ಮನದಲಿ ಸ್ಥಾನವೊಂದಾನಿದನು ಪೇಳುವೆನು ॥42॥

ಗುರುನೃಸಿಂಹಸರಸ್ವತಿಯ ಪದ- । ದರುಶನದ ಮಾತ್ರದಲಿ ರೋಗದ । ಹರಣವಾಗುವದೆಂದು ನಂಬುವೆ ಗುರುವೆ ಸುರತರುವು ॥
ಇರುವನವನಾ ಗಾಣಗಾಪುರ- । ವರದಿ ಕುಳುಹಿಸಿರೆಮ್ಮನಲ್ಲಿಗೆ । ಮರಳಿಬರುವೆವು ಗುರುಕೃಪಾಮೃತ ವುಂಡು ಸೌಖ್ಯದಲಿ ॥43॥

ತರುಣಿಯಾಪರಿ ಭಾವಭಕುತಿಯೊ- । ಳೆರಗಿದಳು ಮಾವನ ಪದಾಬ್ಜಕೆ । ಹರುಷವಾಯಿತು ಸರ್ವರಿಗೆ ತಲೆದೂಗಿದರು ಮುದದಿ ॥
ತರುಣಿಗಪ್ಪಣೆ ಕೊಟ್ಟರೆಲ್ಲರು । ಹೊರಟಳಾಗಲೆ ಪತಿಯ ಡೋಲಿಯ । ಲಿರಿಸಿ ಹೊರಡುವ ಮೊದಲು ಬಿನ್ನೈಸಿದಳು ಮಾವನಿಗೆ ॥44॥

ಸ್ಥಿರಮನದಿ ನೀವಿದ್ದು ಸ್ವಾಂತಃ । ಕರಣಶುದ್ಧತೆಯಿಂದ ನೀವಿರೆ । ಬರುವನೈ ಬೆಂಬಲಕ ಗುರುವರನೆಂದಳಿಂದು ಮುಖಿ ॥
ಹರುಷದಿಂದಲಿಯತ್ತೆ ಮಾವರು । ಹರಿಸಿದರು ಬಾಲಕಿಗೆ ನಿನ್ನಯ । ವರಸುಮಂಗಲಭಾಗ್ಯದಿಂದಲಿ ಮಗನು ಜೀವಿಸಲಿ ॥45॥

ಅಷ್ಟಸುತ ಸೌಭಾಗ್ಯ ಮಂಗಲ । ಕೊಟ್ಟು ಪಾಲಿಸಲೀಶ್ವರನು ಸಂ- । ಕಷ್ಟದಳ ಖಂಡಿಸಲೆನುತ ಬಹುಶುದ್ಧ ಮನಸಿನಲಿ ॥
ಕೊಟ್ಟ ರಾಶೀರ್ವಾದವವಳಿಗೆ । ಬಟ್ಟೆ ಹಿಡಿದಳು ಬಳಿಕ ತರುಣಿಯು । ಮುಟ್ಟಿದಳು ಗಂಧರ್ವಪುರದ ಸಮೀಪ ಪಯಣದಲಿ ॥46॥

ದಾರಿಯಲಿ ಪಯಣದಲಿ ರೋಗವಿ । ಕಾರ ವರ್ಧಿಸಿತೇನನೆಂಬೆನು । ಭಾರಿಯಾಯ್ತು ತ್ರಿದೋಷ ಗಾಣಗಪುರಕೆ ಬರುವಾಗಾ ॥
ಊರಲಿವಳು ವಿಚಾರಿಸಲು ಗುರು । ಮೂರು ತಿಯು ಸಂಗಮದಿ ಸ್ನಾನವ । ತೀರಿಸಲು ಪೋಗಿಹರೆನುತ್ತಲಿ ಪೇಳ್ದರೂರವರು ॥47॥

ಸತಿಯು ಗುರುದರ್ಶನಕೆ ಪೋಗುವ । ಮತಿಯ ಮಾಡುತ್ತ ಬಂದಳಾಗಲೆ । ಪತಿಯಿರುವ ಸ್ಥಾನಕ್ಕೆ ಕಂಡಳು ಪ್ರಾಣಸಂಕಟವಾ ॥
ಪತಿಯ ಪಾಶವ ಕಡಿದು ಸರ್ವರ । ಗತಿಸಿದನು ಕೈಲಾಸನಗರಿಗೆ । ಸತಿಯ ತಲೆಯಲಿ ಬಿತ್ತು ಕೇಳ್ಕೆ ದುಃಖದಾಕಾಶಾ ॥48॥

ಧರಣಿಯಲಿ ತಾ ಬಿದ್ದು ದೊಪ್ಪನೆ । ಮರುಗಿದಳು ದುಃಖದಲಿ ನಾನಾ । ಪರಿಯಲಾಸತಿ ಪ್ರಾಣನಾಥನ ಗುಣಗಳನು ನೆನೆದು ॥
ಶಿರವನಪ್ಪಳಿಸಿದಳು ಭೂಮಿಗೆ । ಉರವ ಪಾಷಾಣದಲಿ ಬಡೆದಳು । ಶಿರದ ಕೇಶವ ಬಿಟ್ಟು ತಾನಾಕ್ರೋಶಮಾಡಿದಳು ॥49॥

ಚೂರಿಯನು ಹೊಟ್ಟೆಯಲಿ ಹಾಕುವ । ನಾರಿಯನು ನಾಗರಿಕರೆಲ್ಲ ನಿ- । ವಾರಿಸಿದರ್ಕೆ ಬಂದು ಸಂತೈಸಿದರು ಪ್ರೇಮದಲಿ ॥
ನಾರಿ ತನ್ನಯ ಪ್ರಾಣನಾಥನ । ಚಾರು ಗುಣಗಳ ನೆನೆದು ಬಹು ಕ । ಣ್ಣೀರ ಧಾರೆಯ ಸುರಿಸಿ ಮಾಡಿದಳ್ಕೆ ಪ್ರಲಾಪವನು ॥50॥

ಮಾಡಿದೆಯೊ ನೀನೇನು ದೇವನೆ । ಕಾಡಿದೆಯೋ ನೀನೆನ್ನ ನಬಲೆಯ । ನೋಡಿ ಬಂದೆನು ಪಾಲಿಸುವೆ ನೀನೆನುತಲಾಶೆಯಲಿ ॥
ಓಡಿಬಹ ಹುಲಿಬಾಯ ತಪ್ಪಿಸ । ಲೋಡಿ ಹೋಗಲು ಧೇನು ಯವನನ । ದಾಡೆಯಲಿ ಸಿಕ್ಕಿರ್ದ ಪರಿಯಾಯ್ತೀಗ ನೋಡಿದರೆ ॥51॥

ದೇವರಿಗೆ ಪೂಜಿಸಲು ಹೋಗರೆ । ದೇಗುಲವೆ ತಲೆಮೇಲೆ ಬಿತ್ತೀ । ಗಾವಣಿಗರಾಡುವುದು ಪ್ರತ್ಯಯ ಬಂತು ಯೆನಗೀಗಾ ॥
ಕಾವ ತಾಳದೆ ಬಿಸಿಲ ಕಾಲದಿ । ಸೇವಿಸಲು ಗಿಡನೆರಳನಾಗಿಡ । ದೈವವಶದಲಿ ತಲೆಯ ಮೇಲ್ಬಿದ್ದಂತೆ ಯೆನಗಾಯ್ತು ॥52॥

ನಿರಡಿಸಿಬಳಲುತ್ತತೃಷೆಯನಿ- । ವಾರಣೆಯ ಮಾಡಲ್ಕೆ ತಾ ಭಾ- । ಗೀರಥಿಯ ಸೇರಲ್ಕೆ ಮೊಸಳೆಯು ನುಂಗಿದಂತಾಯ್ತು ॥
ಧಾರುಣಿಯೊಳೆನ್ನಂಥ ಪಾಪಿಯ । ನಾರಕಾಣೆನು ಮನೆಯ ಬಿಟ್ಟೆನು । ದೂರದೇಶಕೆ ತಂದನಕಟಾ ಪ್ರಾಣವಲ್ಲಭನಾ ॥53॥

ತಂದೆತಾಯ್ಗಳ ಬಿಟ್ಟು ಮೇಲಾ । ಬಂಧುಬಾಂಧವರನ್ನು ತ್ಯಜಿಸಿದೆ । ಬಂದೆನಿಲ್ಲಿಗೆ ಪ್ರಾಣನಾಥನು ಬದುಕ ಬೇಕೆಂದು ॥
ಮಂದಭಾಗ್ಯಳು ನಾನು ಪತಿಯನು । ತಂದೆನಿಲ್ಲಿ ವಿದೇಶವಸ್ತಿಗೆ । ಕೊಂದೆನಲ್ಲಾ ಪ್ರಾಣನಾಥನ ಕೇಳ್ವರೆನಗಾರು ॥54॥

ಇನಿತು ದುಃಖದಿ ಮರಗುತಿಹ ನವ । ವನಿತೆಯನು ಸಂತೈಸಲೋಸುಗ । ಜನರು ನೆರೆದರು ಗಾಣಗಾಪುರವಾಸಿಯರು ಭರದಿ ॥
ಕನಿಕರದೊಳಾ ಸತಿಯ ನೋಡುತ । ವಿನಯದಿಂ ತತ್ವವನು ಪೇಳ್ದರು । ಮನುಜರಿಹರೇ ಜಗದಿ ಭವಿತವ್ಯವನು ತಪ್ಪಿಸುವಾ ॥55॥

ಊರಜನರೀ ಪರಿಯ ಪೇಳಲು । ನಾರಿಗಾಯಿತು ದುಃಖ ಬಹಳ ವಿ- । ಚಾರ ಮಾಡಿದಳಾಗ ತನ್ನಯ ಜನ್ಮಕರ್ಮವನು ॥
ತೋರಿಸುತ ಪತಿಶವನ ಪೇಳ್ದಳು । ಚಾರು ತಾಯ್ತಂಗಿಗಳೆ ಕೇಳಿರಿ । ದೂರ ದೇಶಕೆ ತಂದೆ ಪತಿಯನು ಪ್ರೇಮಭಾವದಲಿ ॥56॥

ಗಾಣಗಾಪುರದಲ್ಲಿ ಶ್ರೀಗುರು । ರಾಣನಿರುವನು ಚರಣ ನೋಡಲು । ಹಾನಿಯಪ್ಪುದು ರೋಗವೆಂದೇಯಾಶೆ ಮಾಡಿದೆನು ॥
ಪ್ರಾಣನಾಥನು ಬಿಟ್ಟನೆನ್ನಯ । ಪ್ರಾಣವುಳಿವವುಪಾಯ ಕಾಣೆನು । ಕ್ಷೋಣಿಯಲಿ ಯಾರೆನ್ನನಬಲೆಯ ರಕ್ಷಿಪರು ಮುಂದೆ ॥57॥

ಬಾಲತನದಲಿ ಲಗ್ನ ವಾಗಲು । ಶೂಲಪಾಣಿಯ ಗೌರಿಯನು ನಾ । ಲೀಲೆಯಿಂದಲಿ ಪೂಜಿಸಿದೆನೈ ಭಕ್ತಿ ಭಾವದಲಿ ॥
ಓಲೆ ಮಂಗಳಸೂತ್ರ ಕಂಕಣ । ಭಾಲಕುಂಕುಮವೆಂಬ ಮಂಗಲ । ಶೀಲದಾಭರಣಗಳಿಗೋಸುಗ ಮಾಡಿದೆನು ವ್ರತವಾ ॥58॥

ಹೇಳಿದೆಲ್ಲವ ವ್ರತವ ಮಾಡಿದೆ । ಭಾಳಲೋಚನ ಮುನಿದ ನಮ್ಮಯ । ಮೇಲೆ ನಿಷ್ಫಲವಾದವೀ ವ್ರತವೆಲ್ಲವೇನೆಂಬೆ ॥
ಹಾಳುಬಿತ್ತೀ ಹಳದಿಕರಡಿಗೆ । ಧಾಳಿಯಿತ್ತರು ಚೋರರೆನ್ನಯ । ಭಾಲಕುಂಕುಮಕೊರಳಮಂಗಳಸೂತ್ರಕೇನೆಂಬೆ ॥59॥

ಪುಣ್ಯ ಮಾಡಿದುದೆಲ್ಲ ಹೋಯಿತು । ಗಣ್ಯ ವಿಲ್ಲೈ ಶಿವಗೆ ಪೂಜೆಯ । ಯೆನ್ನನೀ ಪರಿ ಕಾಡುವುದು ಶಿವ ನಿಮಗೆ ಸಮ್ಮತವೆ ॥
ಇನ್ನು ಜೀವಿಪುದೆನಗೆ ತಕ್ಯವೆ । ಯೆನ್ನ ಪ್ರಾಣೇಶ್ವರನು ಲೋಕದೊ- । ಳನ್ಯರಂತಲ್ಲಮಮ ಯೆನ್ನಯ ಪಂಚಪ್ರಾಣನಲಾ ॥60॥

ಎಂದು ನಾನಾ ಪರಿಗಳಲಿ ಬಹು । ನೊಂದು ಮನದಲಿ ಸತಿಯು ದುಃಖದ । ಕುಂದುಮೋರೆಯೊಳಾಗ ನೋಡಿದಳಮಮ ಪತಿಶವವಾ ॥
ಹಿಂದು ಮುಂದಕೆ ನೋಡದಲೆ ಕೈ- । ಯಿಂದ ಪ್ರೇತವನಪ್ಪಿ ಶೋಕಾ- । ಕ್ರಂದಳಾದಳು ಪತಿಯ ಪೂರ್ವಸ್ನೇಹ ನೆನೆನೆನೆದು ॥61॥

ಯಾಕೆ ಪ್ರಾಣೇಶ್ವರನೆಯನ್ನ ವಿ- । ಲೋಕಿಸದೆ ನೀ ಪೋಪುದುಚಿತವೆ । ಸಾಕು ನಿರ್ದಯೆ ನಿನಗೆ ತ್ರಾಸವ ಕೊಟ್ಟೆನೇ ನಾನು ॥
ನಾಕದಬಲಾಮೋಹಪಾಶಕೆ । ಕಾಕುಲತೆಯಾಯ್ತೆಂದು ಪೋದೆಯೊ । ನಾ ಕಠೋರಳೆನುಲೆನ್ನನು ತ್ಯಜಿಸಿದೆಯೊ ನಾಥಾ ॥62॥

ನಾನು ಕಲ್ಲಿನ ತೆರದಿ ಕಠಿಣಳು । ನೀನು ಕೋಮಲತನುವು ಯೆನ್ನಯ । ಹೀನಭಾಗ್ಯಳ ಸ್ಪರ್ಶಮಾತ್ರದಿ ಗಡಿಗೆ ಪುಡಿಯಾಯ್ತು ॥
ದೀನತಾಯ್ತೆಂದೆಗಳ ಬಿಡಿಸಿದೆ । ಪ್ರಾಣನಾಥನ ದೂರ ತಂದೀ । ಹಾನಿಯನು ಮಾಡಿಸಿದೆನೆನ್ನಯ ಪ್ರಾಣವಲ್ಲಭನಾ ॥63॥

ಹಿಂದೆ ದಶರಥರಾಯ ಬೇಟೆಗೆ । ಬಂದು ವನದಲಿ ತಿಳಿಯದಲೆ ಮೃಗ । ವೆಂದು ಶ್ರಾವಣ ಮಗನ ಕೊಲ್ಲಲು ವಾರ್ತೆಯನು ಕೇಳಿ ॥
ತಂದೆತಾಯ್ಗಳು ಪ್ರಾಣಬಿಟ್ಟರು । ಯಿಂದು ನಾನಾಪರಿಯಲಾ ಮುದಿ । ತಂದೆತಾಯ್ಗಳ ನಿಧನಕಾರಣನಾದೆನಕಟಕಟಾ ॥64॥

ಮೂರುಹತ್ಯೆಗಳೆನಗೆ ಬರುವವು । ತೋರದೆನಗೆ ಉಪಾಯವಿದರಿಂ । ವೈರಿಯಲ್ಲಾ ನಾನು ಪತಿಗಾಜನನಿಜನಕರಿಗೆ ॥
ತೋರುವುದು ನಿಜಪತಿಯಕೊಂದಿಹ । ನಾರಿಯೆನುತಲಿ ಸಕಲಲೋಕವು । ದೂರುವುದುಯಿದುಕುಂಟೆ ಸಂಶಯಪತಿಯ ಕೊಂದೆನಲಾ ॥65॥

ನಾರಿಯಲ್ಲಾ ನಿನ್ನ ಕೊರಳಿಗೆ । ಚೂರಿಯಾದೆನು ನಾನು ನಿಮ್ಮನು । ಕ್ರೂರತನದಲಿ ಕೊಂದೆನಕಟಾ ಹೇಳಿ ಫಲವೇನು ॥
ವೈರಿಯಾದೆನು ನಿಮಗೆ ನಿಮ್ಮಯ । ಮೋರೆಯನು ಕದ್ದೊಯ್ದನಿಲ್ಲಿಗೆ ಚೊರಳಾದೆನು ತಾಯಿತಂದೆಗೆ ಮೋರೆ ತಪ್ಪಿಸಿದೆ ॥66॥

ತಂದೆತಾಯ್ಗಳು ಮುದುಕರವರಿಗೆ । ಮುಂದೆ ಪೋಷಿಪೆ ಯೆನುತ ಮನದಾ । ನಂದವಿತ್ತಾ ಜನಕಜನನಿಯರಿಂಗೆ ನಿಜವಾಗಿ ॥
ಕಂದನೋರ್ವನೆ ನೀವು ನೋಡಿರಿ । ಕಂದೆರೆದು ಯೆನ್ನೊಡನೆ ಮಾತಾ- । ಡೆಂದು ಸತಿಯಾಕ್ರೋಶಗೈದಳು ಯೆದೆ ಬಡೆದು ಮರುಗಿ ॥67॥

ಎಲ್ಲಿ ಹೋಗುವೆ ನೀನು ಯೆನ್ನಯ । ವಲ್ಲಭನೆ ಪ್ರಾಣೇಶ ನೋಡೈ । ಯೆಲ್ಲರನು ನೀ ಬಿಟ್ಟು ಪೋದೆಯೊ ಯೆಮಗೆ ಗತಿ ಯೇನು ? ॥
ಎಲ್ಲಿ ಪೋಗಲಿ ನಾನು ಎನಗಿ- । ನ್ನೆಲ್ಲಿ ಪಾಲಕರಿಹರು ಧರಣಿಯೊ । ಳಿಲ್ಲ ಯೆನಗಾಶ್ರಯವು ನೀ ಹೊರತೀಗ ನೋಡಿದರೆ ॥68॥

ಮಂದಿಯಂದದೊಳಲ್ಲ ನಿನ್ನಲಿ । ಕುಂದನೊಂದನು ಕಾಣೆ ವಲ್ಲಭ । ನೆಂದು ನಿನ್ನನು ವಂದಿಸಿದೆ ಹರಿಯೆಂದು ಶಿವನೆಂದು ॥
ಮುಂದೆ ಯೆನ್ನನು ಬಿಟ್ಟು ಪೋದರೆ । ಕಂದೆರೆದು ನೋಡುವರ ಕಾಣೆನು । ಬಂದುದಕಟಾ ಸಂಕಟವು ನಭದಿಂದೆ ಕೊಡಲಿಯಿದು ॥69॥

ಮರೆಯಲಾರೆನು ನಿನ್ನ ಗುಣಗಣ । ಕರಗುವುದು ಮನವೆನ್ನ ದುಃಖದೊ- । ಳರಿಯೆ ಮುಂದಿನ ಜೀವಿತದ ಸಾಫಲ್ಯವೇನಿಹುದು ॥
ತಿರುಗಿ ನೋಡಲು ನಿನ್ನ ಪತಿಯೆಂ- । ದರಿಯಲಿಲ್ಲಾ ಪಂಚಪ್ರಾಣದ । ದೊರೆಯೆನುತ ನಂಬಿರ್ದೆ ರಕ್ಷಿಪರಾರು ಯೆನಗೀಗಾ ॥70॥

ಯಾರ ಮನೆಗಾಂ ಹೊಟ್ಟೆಗೋಸುಗ । ಸೇರಬೇಕೀ ಭಾಗ್ಯಹೀನಳ । ಮೋರೆಯನು ನಾ ಹೇಗೆ ತೋರಿಸಬೇಕು ಮಂದಿಯಲಿ ॥
ತೋರಲಾರೆನು ಬಾಲವಿಧವೆಯ । ಮೋರೆಯನು ಜನರೋಡಿ ಪೋಪರು । ಸೇರದೈ ವೈಧವ್ಯವದರಿಂ ವಧೆಯೆ ಲೇಸೆನಗೆ ॥71॥

ಸಿಟ್ಟಿನಲಿ ನೀನೆನ್ನನಬಲೆಯ । ಬಿಟ್ಟು ಹೋಗುವುದುಚಿತವೇ ವೂಲಿ । ದಿಷ್ಟು ಬುದ್ಧಿಯ ಕಲಿಸಬಾರದೆ ಯೆನ್ನ ತಪ್ಪಿರಲು ॥
ಬಿಟ್ಟು ನಿನ್ನನು ಪ್ರಾಣಸಖ ನಾ । ನಿಷ್ಟಮಿತ್ರರಮನೆಗೆ ಪೋಪೆನೆ । ಬಿಟ್ಟೆನಲ್ಲಾ ತಂದೆತಾಯ್ಗಳ ನಿನ್ನ ಸಲುವಾಗಿ ॥72॥

ಯಾವ ಪರಿಯಲಿ ದೀನವೃತ್ತಿಯ । ಸೇವಿಸುತನಾನನ್ಯರಲ್ಲಿಗೆ । ಜೀವಿಸುವ ಪರಿಯೇನು ಯೆನ್ನನುಪೇಕ್ಷಿಸುವವರಲ್ಲಾ ॥
ಯಾವ ಪರಿಯಂತೆನ್ನ ಮೇಲೆ ಕೃ-। ಪಾವಲೋಕನ ಪತಿಯ ಛತ್ರವು । ಪಾವನಳು ನಾನೆಲ್ಲ ಲೋಕಕ್ಕಾಪ್ತ ಮಿತ್ರರಿಗೆ ॥73॥

ಎತ್ತ ಹೋಗಲಿ ನಾನು ಯೆನ್ನಯ । ಅತ್ತೆ ಮಾವಂದಿರಿಗೆ ಮೋರೆಯ । ಮೃತ್ಯು ಪರಿಯಂತಾಗುವುದಲಾ ನಿತ್ಯವಪವಿತ್ರಾ ॥
ಪುತ್ರನೋರ್ವನೆ ನೀನು ಮಾವಗೆ । ಸತ್ತವಾರ್ತೆಯ ಕೇಳಿದರೆ ಗೃಹ । ಸತ್ಯವಾಗಿಯರಣ್ಯಪರಿಯಲಿ ತೋರ್ಪುದವರಿಂಗೆ ॥74॥

ಬಂದೆ ನಿಮಗಾರೋಗ್ಯವಾಗಲಿ । ಯೆಂದು ನಿಮ್ಮನು ದೂರದೇಶಕೆ । ತಂದೆ ನಿಮ್ಮನು ಬಿಟ್ಟು ಹೋಗುವದೆಂತು ಪ್ರಾಣೇಶಾ ॥
ಮಂದಿ ನಗರೇ ಪತಿಯ ಭಕ್ಷಿಸಿ । ಬಂದರಾಕ್ಷಸಿ ಪಾಪಿಯನುತಲಿ । ಕಂದೆರದು ನೋಡೆನುತ ಗೋಳಾಡಿದಳು ವಿಧವಿಧದಿ ॥75॥

ಇಂತು ನಾನಾತರದಿ ಶೋಕಾ- । ಕ್ರಾಂತಳಾದಳು ಸತಿಶಿರೋಮಣಿ । ಕಂತುಹರನೋಲ್ ದಿವ್ಯ ರೂಪದ ಸಿದ್ಧನೈತಂದಾ ॥
ಆಂತು ಕರದಿ ತ್ರಿಶೂಲ ಕೊರಳಲಿ । ಕಾಂತಿಯುತ ರುದ್ರಾಕ್ಷಮಾಲೆಯ- । ನಾಂತು ಭಸ್ಮಾಂಕಿತಶರೀರನು ಶಿರದಿ ಜಟೆ ಧರಿಸಿ ॥76॥

ಬಾಲೆಯನು ನೋಡಿದನು ಕರುಣದಿ । ಪೇಳಿದನು ನಿಜ ತತ್ವಬೋಧೆಯ । ಭಾಳಲಿಖಿತವ ಮೀರ್ವರಾರೀ ಜಗದಿ ಕೇಳ್ಬಾಲೆ ॥
ಏಳು ಪ್ರೇತವ ಬಿಟ್ಟು ಮಾತನು । ಕೇಳು ದುಃಖ ಪ್ರಳಯದೋಲ್ಕ । ಲ್ಲೋಳವನು ನೀ ಬಿಟ್ಟು ಮನ ಸಂತೈಸ ಬೇಕೀಗಾ ॥77॥

ಹತ್ತು ದಿನ ಪರಿಯಂತ ಅತ್ತರೆ । ಸತ್ತವನು ಬರುತಿಹನೆ ಬಾಲೆಯೆ । ಹತ್ತುವದು ದೇಹಕ್ಕೆ ಪೂರ್ವಾರ್ಜಿತದ ಕರ್ಮಫಲಾ ॥
ಮೃತ್ಯು ಮುಖವಶವಹರು ಸರ್ವರು । ಮೃತ್ಯುವನುಗೆದ್ದವರು ಯಾರು ಧ- । ರಿತ್ರಿಯಲಿ ನೀ ನೋಡು ಬಿಡುಬಿಡು ಶೋಕ ನಿಷ್ಫಲವು ॥78॥

ಯಾರಿಗೀ ಜೀವಿತವು ಸ್ಥಿರವಿದೆ । ಯಾರಿವನು ಪತಿ ನಿನ್ನದೆಂದ ವಿ- । ಕಾರವಲ್ಲಾ ಜಗದಿ ನೀನಾರಿವನು ಮತ್ಯಾರು ॥
ನಾರಿಜನ್ಮವು ನಿನ್ನ ದಾವುದ । ಯಾರು ಬಲ್ಲರು ಪೂರ್ವಜನ್ಮದೊ- । ಳಾರುಪತಿ ಯೆಂಬುವುದು ನಿರ್ಧಾರದಲಿ ಪೇಳೆನಗೆ ॥79॥

ಪರಿಪರಿಯ ಕಾಷ್ಠಗಳು ನದಿಯಲಿ । ನೆರೆಯ ಕಾಲದಿ ಸೇರಿ ವೊಂದಾ- । ಗಿರುವ ಪರಿಯಲಿ ನರರು ಸಂಸಾರದಲಿ ಕೂಡುವರು ॥
ಮರೆಯಬೇಕೀ ಪತಿಯ ನೀನೀ । ಹರಿಯ ಬೇಕೀ ಮೋಹಪಾಶವ । ಸ್ಥಿರವಿದಾರಿಗೆ ಬಂಧುಬಳಗವು ಮೂರುದಿನಕಿಹುದು ॥80॥

ನೀರಮೇಲಣ ಗುಳ್ಳೆಯೀ ಸಂ- । ಸಾರವೆಂಬುದು ಸ್ಥಿರವಿದಲ್ಲಾ । ಕಾರಣದೊಳಿದಕೆಕೆ ಶೋಕವನೇಕೆ ಮಾಡುವೆಯ್ಯೆ ॥
ಧಾರುಣಿಯೋಳಿ ಪಂಚಭೂತವಿ-। ಕಾರಕ್ಕೆ ವಶವಹುದು ಕೇಳು ಶ । ರೀರವದರಿಂ ನಿನ್ನ ವಶವಹುದೇನು ದೇಹದಲಿ ॥81॥

ಗುಣವನನುಸರಿಸುವುದು ಕರ್ಮವು । ಅನುಸರಿಸುವುದು ಫಲವು ಕರ್ಮವ । ಗುಣವು ಮಾಯಾಮಯವು ಕೇಳೀ ದೇಹದಲಿ ನಿಜವು ॥
ಗುಣಗಳಿರುವವು ಮೂರು ಮಾಯೆಯ । ನನುಸರಿಸುವವು ಸತ್ವರಜತಮ । ವೆನಿಪ ಗುಣಸಂಪರ್ಕದಿಂದಲಿ ದೇಹರಂಜಿಪುದು ॥82॥

ತಾನುಮಾಡಿದ ಪಾಪಪುಣ್ಯವಫ-। ಲಾನುಸಾರವು ಜನ್ಮ ಕರ್ಮವು । ಪ್ರಾಣಿಗಳು ಸಂಸಾರದಲಿ ಕರ್ಮಕ್ಕೆ ವಶವಹರು ॥
ತಾನು ಮಾಡಿದ ಕರ್ಮಫಲವನು । ತಾನೆ ಭೋಗಿಸಬೇಕು ತಪ್ಪದು । ಮಾನಿನಿಯೆ ನೀನೀಗ ಮರೆಯೌ ಪತಿಯ ನಿಧನವನು ॥83॥

ಅಮರನಿರ್ಜರರೆಂದು ಹೊಗಳುವ । ಸುಮನಸರೀಗ ಕಾಲ ತಪ್ಪನು ನಮಿಸಬೇಕೌ ತಲೆಯ ಕಾಲಗೆ ಸರ್ವಶಕ್ತನಿಗೆ ॥
ಕಮಲಸಂಭವನಾದರೆಯು ಕೇ । ಳಮರನಲ್ಲಾ ಮಿಕ್ಕ ಮನುಜರು । ಯಮನಗೆಲ್ಲುವರೇನು ವ್ಯರ್ಥದಿ ಶೋಕ ಸಲ್ಲದಿರು ॥84॥

ಕಾಲ ಸಕಲರ ನಿಧನಕಾರಣ । ಕಾಲ ಕರ್ಮಾಧೀನ ದೇಹದ । ಜಾಲವಿದು ಕೇಳ್ಪಂಚಭೂತಾತ್ಮಕವು ನರಶ್ವರವು ॥
ಬಾಲ ಜನಿಸಲು ಪಿರಿದು ಸಂತಸ । ತಾಳ ಬಾರದು ಸಾಯಲದು ಬಹು । ಗೋಳಿಡಲು ಬಾರದು ಸದಾ ಜೀವಕ್ಕೆ ಸಾವಿಹುದು ॥85॥

ಹುಟ್ಟಿದಾಕ್ಷಣ ಮರಣವೆಂಬುದು । ಕಟ್ಟಳೆಯು ಸರ್ವರಿಗೆ ವಿದಿತವು । ಹುಟ್ಟಿದವರಲಿ ಸಾಯದವರನು ಕಾಣೆನೀಜಗದಿ ॥
ಹುಟ್ಟಿದವನಿಗೆ ಮರಣಸತ್ತವ । ಗಟ್ಟಿ ಬರುವುದು ಜನನವೆಂಬೀ । ಶಿಷ್ಟಸಮ್ಮತ ತತ್ವನೀನಿದ ಮರೆಯುವದು ಸರಿಯೆ ॥86॥

ಕೆಲವರು ಪೂರ್ವವಯಸ್ಸಿನಲಿ ಮ-। ತ್ತುಳಿದವರು ಯೌವನದ ಮತ್ತಾ- । ಕೆಲವರು ವಾರ್ಧಕ್ಯದಲಿ ಮೃತ್ಯುವ ಬೆನ್ನ ಹಿಡಿಯುವರು ॥
ಕಳೆಯುವರು ಸ್ವಾರ್ಜಿತದ ಕರ್ಮದ । ಫಲಕೆ ಸರಿಯಾಗಿಲ್ಲಿ ಕಾಲವ । ನಳಿಯ ಋಣ ಸಂಬಂಧ ಕಾಲಾಧೀನರಾಗುವರು ॥87॥

ಬ್ರಹ್ಮ ಲಿಖಿತವು ತಪ್ಪದದು ಸ- । ತ್ಕರ್ಮನಿಷ್ಠರು ಕೆಲವರು । ಕರ್ಮಬಲದಲಿಯೊಂದೆರಡು ದುಷ್ಕರ್ಮ ಫಲಗಳನು ॥
ಮರ್ಮವಿದ ನೀನರಿಯೆ ಬೇಕೌ । ಜನ್ಮ ವೆತ್ತಿ ದನರಗೆ ಮರಣವು । ಜನ್ಮ ಸಿದ್ಧಾ ಹಕ್ಕು ಮರಣಕೆ ಕರುಣೆಯೇಯಿಲ್ಲಾ ॥88॥

ನಾರಿ ಕೇಳೌಸ್ವಪ್ನ ಧೋಲ್ ಸಂ- । ಸಾರವಿದು ಸ್ಥಿರವಲ್ಲ ನೋಡಲು । ಗಾರುಡಿಯ ಕೈಯಾಟ ಮಿಥ್ಯಾ ನೋಟ ಬಹು ಮಾಟ ॥
ಸಾರಿ ಹೇಳುವೆ ನಿನಗೆ ಮುಂದಿನ । ಕಾರಿಯವ ನೀ ಮಾಡು ಕಣ್ಣಿನ । ನೀರನಾರಿಸು ಶೋಕಮಾಡುವುದುಚಿತವಲ್ಲೀಗಾ ॥89॥

ನೂರುಸಾವಿರ ಜನ್ಮದಲಿ ನೀ । ನಾರು ಯಾರಿಗೆ ಭಾಮಿನಿಯು ಸಂ । ಸಾರವೆಂಬುದು ಸೌಖ್ಯದಾಟವೆಯೊಂದೆ ಜನ್ಮದಲಿ ॥
ನಾರಿ ನೋಡೌದೇಹವೇನು ವಿ- । ಚಾರಿಸಲು ಮೂತ್ರಯಂತ್ರವು । ಯಾರಿಡುವರಿ ಕೊಳಕು ದೇಹವ ಸತ್ತನಂತರ ॥90॥

ಮುಂದೆ ಮಾಡುವ ಕಾರ್ಯವಿಧಿಯೇ । ನೆಂದು ಮನದಲಿ ನಿರ್ಧರಿಸಿ ನಲ- । ವಿಂದ ವರ್ತಿಸು ನೀನು ಸುವಿವೇಕದಲಿ ತಿಳಿದಂತೆ ॥
ಎಂದು ನಾನಾ ಪರಿಯೋಳಾ ಯೋ- । ಗೀಂದ್ರ ತತ್ವವ ಭೋಧಿಸಿದನಾ । ಯಿಂದುವದನೆಯು ಶೋಕ ಬಿಟ್ಟಳು ಜ್ಞಾನವುದಿಸಿತಲಾ ॥91॥

ಕರಗಳನು ಜೋಡಿಸುತ ಭಾಮಿನಿ । ಶಿರವ ಚರಣ ದೊಳಿಟ್ಟು ಸಿದ್ಧನ । ಕರುಣಮಯ ಮುದ್ರೆಯಲಿ ಬಿನ್ನೈಸಿದಳು ಭಕ್ತಿಯಲಿ ॥
ಶರಣು ಹೊಕ್ಕೆನು ನಿನಗೆ ಯೋಗೀ । ಶ್ವರನೆ ತಾರಿಸು ತಾರಿಸೆನ್ನನು । ಕರುಣದಲಿ ನೀನೆನ್ನ ನುದ್ಧರಿಸೆಂದಳಿಂದುಮುಖಿ ॥92॥

ದಾರಿ ತಪ್ಪಿದ ಯೆನಗೆ ದಾರಿಯ । ತೋರಿಸೈ ಯೋಗೀಂದ್ರ ನೀ ಸಂ- । ಸಾರಸಾಗರಕಾದೆ ತಾರಕನೆನಗೆ ತಾಯ್ತಂದೆ ॥
ತಾರಣೋಪಾಯವನು ಪೇಳಲು । ಭಾರಿಸಂತಸದಿಂದ ವಚನಪ್ರ-। ಕಾರ ವರ್ತಿಸುಪೆನೆಂದು ಕಾಲ್ಗೆರಗಿದಳು ಮುನಿವರನಾ ॥93॥

ನುಡಿಯನಾಲಿಸಿ ಯೋಗಿರಾಜನು । ಮಡದಿಯನು ಸಂತೈಸಿ ಸ್ತ್ರೀ । ಯರ ನಡತೆಯನು-ಪೇಳಿದನು ಮುಂದಿನ ಕಾರ್ಯಕಾರಣವಾ ॥
ಪೊಡದಿಯಲ್ಲೀ ಪುಣ್ಯ ಪಾವನ । ಸಡಗರದ ಕಥೆ ಕೇಳಿದವರಿಗೆ । ಮೃಡನು ಸಕಲಾಭೀಷ್ಟ ಕೊಡುವನು ವಿಷ್ಣು ವಚನವಿದು ॥94॥

॥ ಅಧ್ಯಾಯ 30 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 31

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಪತಿಯು ಮಡಿದಿಹನೆಂದು ದುಃಖಿಪ । ಸತಿಗೆ ಪಾತಿವ್ರತ್ಯ ಧರ್ಮವ । ಯತಿವರೇಣ್ಯನು ವಿಸ್ತರಿಸಿದನು ಪ್ರೇಮಭಾವದಲಿ॥

ಗುರುಚರಣ ಪಾವನ ಪರಾತ್ಪರ । ಪರಮ ಮಂಗಲಸದನ ದುರಿತದ । ಹರಣ ಹರುಷದ ಪರುಷ ಪೂರ್ಣಾನಂದವಿಗ್ರಹವು ॥
ಕರುಣ ಜ್ಞಾನೇಂದ್ರಿಯಗಳೆಲ್ಲವು । ಮರೆತು ನಿಜಕರ್ಮವನು ಯಾವನ । ಸ್ಮರಣೆಯಲಿ ತತ್ಪರತೆಯಾಂತರೊ ಶ್ರೀಗುರುವೆಯವನೆ ॥1॥

ಯೋಗಿರಾಜನು ದುಃಖದಿಂ ಬೆಂ- । ಡಾಗಿ ಬಳಲುವ ಸತಿಗೆ ಈ ಭವ । ಸಾಗರವ ದಾಟುವ ಸುಯುಕ್ತಿಯ ಪೇಳಿದನು ಮುದದಿ ॥
ನಾಗವೇಣಿಯೆ ಕೇಳು ಪತಿಯಿರು- । ವಾಗ ಸ್ತ್ರೀಯರ ನಡತೆ ಯಾವದು । ಮಾರ್ಗವಾವುದು ಪತಿಯ ನಿಧನದ ಮೇಲೆ ಪೇಳುವೆನು ॥2॥

ತರುಣಿಯರ ಗುಣಧರ್ಮಗಳ ವಿ । ಸ್ತರವು ಸ್ಕಂಧಪುರಾಣದೊಳಗಿರು । ತಿರುವುದದರಲಿ ಕಾಶಿಖಂಡದಿ ಬಹಳ ವಿಸ್ತಾರಾ ॥
ಧರೆಯೊಳಿರ್ದನಗಸ್ತ್ಯ ಋಷಿವರ । ನಿರುವಳವನಿಗೆ ಭಾರ್ಯೆಯತಿಸುಂ- । ದರಳು ಪಾತಿವ್ರತ್ಯದಲ್ಲಿ ನಿರುಪಮಳು ನೋಡಿದರೆ ॥3॥

ತರುಣಿ ಲೋಪಾಮುದ್ರೆಯವನಿಗೆ । ಪರಮ ಶಿಷ್ಯನು ವಿಂಧ್ಯನಿದ್ದನು । ಗಿರಿಯರೂಪದೊಳಿವನ ಕೀರ್ತಿಯು ಹಬ್ಬಿತ್ತೈ ಜಗದಿ ॥
ಪರಿ ಪರಿಯ ಕಾಂತಾರವದರಲಿ । ಪರಿಪರಿಯ ಮೃಗಪಕ್ಷಿಗಳು ಸುರ- । ವರರ ರಮ್ಯ ವಿರಾಮಸ್ಥಾನವು ಸೊಗಸನೇನೆಂಬೆ ॥4॥

ಸುರಮುನೀಶ್ವರನ ನಾರದನು ಬರು- । ಬರುತ ಕಂಡನು ವಿಂಧ್ಯಗಿರಿಯನು । ಪರಮ ಸಂತೋಷವನು ತಾಳ್ದನು ನೋಡಿ ಮನದಣಿಯೆ ॥
ಹರಹರಾ ಗಿರಿರಾಜನೆಂಬರು । ಧರೆಯೊಳಗೆ ಸುರನರರು ನಿನ್ನನು । ಕೊರತೆಯೊಂದೇ ನಿನಗೆ ಮೇರುಸಮಾನ ನೀನಲ್ಲಾ ॥5॥

ಎಂದ ನಾರದವಚನ ಕೇಳುತ । ನೋಂದನಾ ವಿಂಧ್ಯಾದ್ರಿಯಾಕ್ಷಣ । ವಿಂಧ್ಯನೆಂದನು ಮೇರುವಿನಪರಿ ನಾನು ಬೆಳೆಯುವೆನು ॥
ಎಂದು ವಿಂಧ್ಯಾಚಲವು ಕೋಪಿಸಿ । ಮುಂದೆ ಗಗನವ ಮುಟ್ಟುವಂದದೆ- । ಳೊಂದೆಸವನೇ ಬೆಳೆಯಹತ್ತಿದನೇನ ಹೇಳುವೆನು ॥6॥

ತರಣಿಮಂಡಳ ತನಕ ಬೆಳೆದನು । ಗಿರಿಯು ದಕ್ಷಿಣಭಾಗಕಾಯಿತು । ನೆರಳು ಸೂರ್ಯನ ಕಿರಣವಿಲ್ಲದೆ ಕತ್ತಲೆಯೆ ಬಿತ್ತು ॥
ನರರ ಹವ್ಯಾದಿಗಳು ನಡೆಯದೆ । ಸುರರಿಗಾಯ್ತುಪವಾಸ ಋಷಿಗಣ । ಮೊರೆಯ ಬಿಟ್ಟರು ಸುರರು ಗೋಳಾಡಿದರು ಹಸಿವೆಯಲಿ ॥7॥

ಶರಣು ಹೊಕ್ಕಾಸುರರು ಋಷಿಗಳು । ಸುರಪತಿಯು ನೋಡಿದನು ವಿಂಧ್ಯನ । ಕರಣಿಯಿದು ನಾ ಪೇಳ್ವೆ ಸುವಿಚಾರವನು ಮಾಡಿದರೆ ॥
ಹರಣವಪ್ಪುದು ನಿಮ್ಮ ದುಃಖದ । ಗುರುವಗಸ್ತ್ಯನು ವಿಂಧ್ಯ ಶಿಷ್ಯನು । ಇರುವನಾಗುರು ಕಾಶಿಪುರದಲಿ ಹೋಗಿ ನೀವಲ್ಲಿ ॥8॥

ಗುರುವಗಸ್ತ್ಯನು ಬರಲು ವಿಂಧ್ಯಾ । ಗಿರಿಯು ತಲೆಬಾಗಿಸದಿರದು ಮುಂ । ದರಿತು ಗುರು ಪೇಳಲೆ ಗುರುವಾಕ್ಯವನು ಮೀರನಲಾ ॥
ಭರದಿ ನೀವೀಕ್ಷಣಲೆ ಕಾಶೀ । ಪುರಕೆ ತೆರಳಿರಿ ಮುನಿಯ ವಿಂಧ್ಯಾ- । ಗಿರಿಗೆ ಕಳುಹಿಸಿ ಕೊಡಿರೆನುತ ಬೋಧಿಸಿದನಾ ಬ್ರಹ್ಮಾ ॥9॥

ಸರಸಿಜಾಸನ ನುಡಿದ ವಚನವ । ಸುರಪತಿಯು ಕೇಳುತಲೆ ಕಾಶೀ । ಪುರಕೆ ನಡೆದನು ಸಕಲ ಸುರಗಣದೊಡನೆ ವಹಿಲದಲಿ ।
ಗುರುಬೃಹಸ್ಪತಿಸಹಿತ ಋಷಿಗಣ । ಬರಲಗಸ್ತ್ಯಾಶ್ರಮಕೆ ಸಕಲರ । ಕರೆದು ಸಾದರದಿಂದಲಾತಿಥ್ಯವನು ಮಾಡಿದನು ॥10॥

ಇತ್ತನಾ ಮುನಿಯರ್ಘ್ಯಪಾದ್ಯ ಸ । ಮಸ್ತ ದೇವತೆಯರಿಗೆ ಗುರುವಿಗೆ । ವಿಸ್ತರಿಸಿದನು ಪೂಜೆಯನು ವಿಧಿಪೂರ್ವಕದಿ ಬಳಿಕಾ ॥
ಮತ್ತೆ ಸುರಗುರು ಮನಸಿನಲಿ ಸಂ- । ತೃಪ್ತನಾದನು ಸ್ತುತಿಯ ಮಾಡುತ । ಗಸ್ತ್ಯ ಲೋಪಾಮುದ್ರೆಯರ ಕೊಂಡಾಡಿದನು ಮುದದಿ ॥11॥

ಗುರುಬೃಹಸ್ಪತಿಯೆಂದನಾಗಲೆ । ಧರಣಿಯಲಿ ಬಹು ಸತಿಯರಿರುವರು । ಪರಮಪಾತಿವ್ರತ್ಯನಿಷ್ಠರು ಖ್ಯಾತಿ ಪಡೆದವರು ॥
ಮೆರೆವರೈ ಸಾವಿತ್ರ್ಯರುಂಧತಿ । ಗಿರಿಜೆ ಲಕ್ಷ್ಮಿ ಸ್ವಯಂಭುಪತ್ನಿಯು । ಗಿರಿವರನಸತಿ ಮೇನಕೆಯು ಶಾಂಡಿಲ್ಯ ಋಷಿಭಾರ್ಯೆ ॥12॥

ಅತ್ರಿಭಾರ್ಯೆ ಸುನೀತಿ ಮೇಣ್ ಸಾ । ವಿತ್ರಿ ಸೂರ್ಯನ ಕಾಂತೆ ಸಂಜ್ಞೆಯು । ಮತ್ತೆ ಯಜ್ಞೇಶ್ವರನ ಪ್ರಾಣೇಶ್ವರಿಯು ಸ್ವಾದೇವಿ ॥
ಧಾತ್ರಿಯಲಿ ವಿಖ್ಯಾತ ಪಡೆದ ಸ- । ಮಸ್ತ ಪತಿತತ್ಪರಸತಿಯರೊಳ- । ಗಸ್ತ್ಯ ಪತ್ನಿಗೆ ಸರಿಯಕಾಣೆನೆನುತ್ತ ಗುರು ನುಡಿದಾ ॥13॥

ಸತಿಯು ಲೋಪಾಮುದ್ರೆ ತನ್ನಯ । ಪತಿಯ ಸೇವೆಯ ಮಾಳ್ಪರೀತಿಯ- । ನತಿ ವಿನೋದದಿ ಪೇಳುವೆನು ನೀವೆಲ್ಲ ಕೇಳುವುದು ॥
ಪತಿಯ ಭೋಜನವಾದನಂತರ । ಸತಿಯ ಭೋಜನ ಮುಖ್ಯವದನಾ । ಪತಿ ಪ್ರಸಾದವೆನುತ್ತಲನ್ನ ಗ್ರಹಣ ಮಾಡುವುದು ॥14॥

ಪತಿಯೆ ದೈವತವೆಂದು ಸೇವೆಯ । ಪತಿ ಕರಿಸುವುದು ಪತಿಯ ಯೆದುರಿಲಿ । ಅತಿವಿನಯದಿಂದೆದ್ದು ಪತಿಯಾಜ್ಞೆಯಲಿ ಕೂಡುವುದು ॥
ಪತಿಯವಜ್ಞೆಯ ಮಾಡದಿರುವುದು । ಸತತ ಸೇವೆಯ ಮಾಡಿ ಹಗಲಲಿ । ಅತಿಥಿಯಭ್ಯಾಗತರ ಪೂಜಿಸುತಿಹುದು ಪತಿಯೊಡನೆ ॥15॥

ಪಡೆಯದಾ ನಿಜಪತಿನಿರೋಪವ । ಮಡದಿ ಹೋಗಲು ಬಾರದೆಲ್ಲಿಯು । ತೊಡಗಬಾರದು ದಾನಧರ್ಮದಿ ಪತಿಯ ಕೇಳದಲೆ ॥
ಅಡಿಗಡಿಗೆ ಪತಿಸೇವೆ ಮಾಡುತ । ದೃಢಮನದಿ ಭಾವಿಸುತಲೀತನೆ । ಜಡಜನಾಭನು ನಿಜವೆನುತ ನಂಬಿರುವುದೇ ಧರ್ಮ ॥16॥

ಮಲಗಲಾಪತಿ ಕಾಲನೊತ್ತುತ । ಲಲನೆ ಪತಿ ನಿದ್ರಿಸ್ತನಾದರೆ । ಬಳಿಕ ಕುಪ್ಪಸ ತೆಗೆದು ಮಲಗುವುದುಚಿತ ಸತಿಯರಿಗೆ ॥
ಲಲನೆಸುರ ಕುಪ್ಪಸದ ಸ್ಪರ್ಶ ದೊ- । ಳಳಿವುದೈಯಾಯುಷ್ಯ ಪುರುಷರ । ಲಲನೆ ತನ್ನಯ ಪತಿಯ ಹೆಸರನ್ನು ತೆಗೆವುದನುಚಿತವು ॥17॥

ಪುರುಷನೇಳದ ಮುನ್ನವೇಳುತ । ನಿರತ ಮೋರೆಯ ತೊಳೆದು ಗೃಹದುಪ । ಕರಣ ಸ್ವಚ್ಛವ ಮಾಡಿ ಸಂಮಾರ್ಜನವ ಮಾಡುವುದು ॥
ತ್ವರಿತದಲಿ ಸ್ನಾನವನು ತೀರಿಸಿ । ಹರನೆ ನಿಜಪತಿಯೆಂದು ಪೂಜಿಸಿ । ಚರಣತೀರ್ಥವ ಸೇವಿಪುದೆ ಸತಿಯರಿಗೆ ಭೂಷಣವು ॥18॥

ಪೂರುಷನು ಮನೆಯೊಳಗಿರಲು ಶೃಂ । ಗಾರ ಸರ್ವಾನಂದ ಪತಿ ಪರ- । ವೂರಸೇರಲು ತ್ಯಜಿಸುವುದು ಶೃಂಗಾರಹರ್ಷವನು ॥
ಕ್ರೂರವಚನದಿ ಬೈದೊಡನೆ ಪತಿ । ನಾರಿ ಕೋಪಿಸದಿರುವುದುಚಿತವು । ಸೇರುವುದು ಪತಿ ಚರಣವನು ಕ್ಷಮಿಸೆಂದು ಬೇಡುವದು ॥19॥

ಬರಲು ಪತಿ ಹೊರಗಿಂದ ನಾರಿಯು । ಹರುಷದಿಂದೆದುರಾಗಿ ಬರುವುದು । ಸರಸದಿಂ ಪ್ರತಿಯಾಜ್ಞೆ ಕೇಳ್ವುದು ಸತಿಯ ಧರ್ಮವಿದು ॥
ಪುರುಷನಿಂಗಿತ ಕೇಳಿಯದನಾ- । ಚರಿಸಬೇಕಾ ಸತಿಯು ಪತಿ ಮನ- । ವರಿಯದಾ ಸ್ವಚ್ಛಂದವೃತ್ತಿಯು ಗೌಣಮಾರ್ಗವದು ॥20॥

ಬಿಟ್ಟು ಮನೆಯನು ಹೊರಗೆ ಹೋಗುವು- । ದಿಷ್ಟವಲ್ಲಾ ಸತಿಯರಿಂಗೊಂ । ದಿಷ್ಟು ಹೋದರೆ ತಿರುಗಿ ಥಟ್ಟನೆ ಬರುವುದುಚಿತವದು ॥
ದೃಷ್ಟಿ ತಿರುಗಿಸ ಬಾರದನ್ಯರು । ಇಷ್ಟಮಿತ್ರರು ಯೆಂಬ ನೆವದಲಿ । ಭ್ರಷ್ಟತನವೈ ಸತಿಗೆ ಪರಪುರುಷರನು ನೋಡುವದು ॥21॥

ಪರಪುರುಷರನು ಪಾಪದೃಷ್ಟಿಯೊ- । ಳಿರದೆ ನೋಡಲು ನಾರಿಯವಳಿಗೆ । ಬರುವುದೈ ನಿಜ ಗೂಗೆಜನ್ಮವು ಶಾಸ್ತ್ರಸಿದ್ಧವಿದು ॥
ಸುರರೆ ಲೋಪಾಮುದ್ರೆ ಈ ತೆರ- । ವಿರುವಳೈ ಸತಿಯರ ಶಿರೋಮಣಿ । ಹೊರಗೆ ಹೋಗಳು ನಿರತ ಪತಿಸೇವೆಯಲಿ ತತ್ಪರಳು ॥22॥

ದೇವರುಪಕರಣವನು ತಿಕ್ಕುತ । ದೇವಪೂಜೆಗೆ ಗಂಧಪರಿಮಳ । ಹೂವ ಪಂಚಾರತಿಯನಕ್ಷತೆಸಹಿತ ಸಂಗ್ರಹಿಸಿ ॥
ಆವಗಂ ಪತಿ ಬರಲು ಮನೆಗೆ ಸ್ವ । ಭಾವಶುದ್ಧದಿ ಭಜಿಸಿ ಪತಿಯನು । ಭಾವಭಕುತಿಯೊಳೀಕೆ ಲೋಪಾಮುದ್ರೆ ತೋಷಿಪಳು ॥23॥

ಪುರುಷನುಚ್ಛಿಷ್ಟವನು ಸೇವಿಸಿ । ನಿರತ ಭೋಜನ ಮಾಡುವುದು ಪತಿ । ಹೊರಗೆ ಹೋಗಲು ಧೇನು ಪೂಜಿಸುತನ್ನ ಗ್ರಹಿಸುವುದು ॥
ನಿರತ ಗೃಹನಿರ್ಮಲತೆ ಸಾಧಿಸಿ । ಪುರುಷನಾಜ್ಞೆಯ ಹೊರಗೆ ತನ್ನಾ- । ಚರಣ ಮಾಡಳು ಪತಿಯವಾಕ್ಯ ಪ್ರಮಾಣ ತನಗೆಂದು ॥24॥

ಊರೊಳುತ್ಸಾಹಕ್ಕೆ ಹೋಗಳು । ದೂರ ಹೋಗಳು ತೀರ್ಥಯಾತ್ರೆಗೆ । ಸೇರಳೆಲ್ಲಿಯು ಬೇರೆಯವರಲಿ ಲಗ್ನ ಕಾರ್ಯಕ್ಕೆ ॥
ಪುರುಷನು ಮನೆಯೊಳಗಿರಲು ತಾ । ನಾರಿ ಹರ್ಷದೊಳಿರಲು ಬೇಕೈ । ಚಾರು ಸಂತಸ ಬೇಕು ಪತಿ ದುಶ್ಚಿತ್ತನಾದರೆಯು ॥25॥

ವನಿತೆಯರು ಕಡೆಗಾದ ವೇಳ್ಯದೋ- । ಳನವರತ ಮೌನವನು ಧರಿಸುತ । ವಿನುತ ವೇದಾದಿಗಳ ಶ್ರವಣವ ಮಾಳ್ಪುದನುಚಿತವು ॥
ಅನಿತು ದಿವಸಗಳೆಲ್ಲ ಪುರುಷರ । ತನುವೆ ನೋಡಲು ಬಾರದೆಂಬುದು । ವಿನಯಶೀಲಳ ಧರ್ಮ ಪಾತಿವ್ರತ್ಯ ಭೂಷಣವು ॥26॥

ಪುರುಷ ಮನೆಯೊಳಗಿಲ್ಲವಾದರೆ । ಸ್ಮರಣ ಮಾಡಲುಬೇಕು ಮನದಲಿ । ತರಣಿಮಂಡಳ ನೋಡಿ ಸತಿ ಮನಿಯೊಳಗೆ ಸೇರುವುದು ॥
ಪುರುಷನಾಯುಷ ವರ್ಧಿಸಲಿಕಾ । ತರುಣಿ ಕುಂಕುಮಕಂಠ ಸೂತ್ರವ । ಧರಿಸಿ ಕಜ್ಜಳಸಿಂಧುರಾಲಂಕಾರವಿಡಬೇಕು ॥27॥

ಪುರುಷನಿರಲು ಸುವಾಸಿನಿಯರಿಗೆ । ಶಿರದಿ ಫಣಿವೇಣಿಗಳ ಭೂಷಣ । ಕರದಿ ಕಂಕಣ ಚರಣದಲಿ ತೋಡರವನಿಡಬೇಕು ॥
ನೆರೆಕರೆಯ ಮೈತ್ರಿಯನು ತಾಸ್ವೀ । ಕರಿಸಬಾರದು ರಜಕ ಜೈನರ । ತರುಣಿಯರ ಕುಂಟಣಿಯರಲಿ ಸಂಗತಿಯು ಹಾನಿಕರಾ ॥28॥

ಪತಿಯನಿಂದಿಸಿ ನುಡಿಯುತಿರುವಾ । ಸತಿಯ ಸಂಗತಿ ದೋಷಕರವದು । ಸತಿಯ ಪಾತಿವ್ರತ್ಯವದರಿಂ ಭಗ್ನವಾಗುವುದು ॥
ಪತಿಯ ತಾಯ್ತಂದೆಗಳ ಭಗಿನಿಯ । ಪತಿಯ ಸೋದರನನ್ನು ಬಿಟ್ಟು । ಸತಿಯು ಬೇರೆ ಬಿಡಾರ ಮಾಡಲು ಶ್ವಾನವಾಗುವಳು ॥29॥

ಒರಲುಮುಸುಲದ ಮೇಲೆ ಹೊಸ್ತಲ । ಮರುಗಿನಲಿ ತಾ ಬೀಸುಗಲ್ಲಿಲಿ । ಹಿರಿಯರೆದುರಿಲಿ ಕೂಡಬಾರದು ಸತಿಯ ಧರ್ಮವಿದು ॥
ಪುರುಷರೊಡನೆ ವಿವಾದಮಾಡುತ । ಪುರುಷನಂತಃಕರಣ ನೋಯಿಸ । ತರುಣಿಯಲ್ಲಾ ದುಃಖಖೇದದ ಭರಣಿಯಾಗಿಹಳು ॥30॥

ಪುರುಷ ದುರ್ಭಾಗ್ಯನು ನಪುಂಸಕ । ನಿರಲು ಮೂಢನು ವ್ಯಾಧಿಗ್ರಸ್ತನು । ಹರಿಸಮಾನನೆನುತ್ತ ಪೂಜಿಸಬೇಕು ಮತ್ತವನಾ ॥
ಪುರುಷನನುಮತಿಯಿಂದ ನಡೆಯಲು । ಹರಿಹರನು ಮೆಚ್ಚುವರು ಸತಿಯಳ । ಪರಮ ದೈವತ ಪತಿಯೆ ಯೆಂದೇ ಭಾವಿಸಲು ಬೇಕು ॥31॥

ಸೀರೆ ಕುಪ್ಪಸ ಚಿನ್ನ ರತ್ನಾ- । ಹಾರಗಳು ಪತಿಯನುಮತಿಯಲಿ ವಿ- । ಹಾರಗಳು ಶೃಂಗಾರಗಳು ಪತಿಯ ಪ್ರಸಾದದಲಿ ॥
ನಾರಿ ತನ್ನಯ ಪತಿಯ ಮನದ ವಿ- । ಚಾರ ನೋಡುತಲಾಭರಣಗಳ । ಧಾರಣವ ತಾ ಮಾಡಬೇಕಾ ಪ್ರತಿನಿರೋಪದಲಿ ॥32॥

ಒಡವೆ ವಸ್ತುವ ಪೇಳ್ವುದಾದರೆ । ಹುಡುಗ ಹುಡುಗಿಯರಿದ್ದರವರೊಳು । ನುಡಿದು ಅವರ ಮುಖಾಂತರದಿ ಪತಿಯೊಡನೆ ಪೇಳುವುದು ॥
ಹುಡುಗರೆದುರಿಲಿ ಯಿಲ್ಲವಾದರೆ । ವಡವೆ ತೋರಿಸಿ ಮನದ ಇಂಗಿತ । ಮಡದಿ ತಿಳಿಸಲುಬೇಕು ನೆಟ್ಟಗೆ ನುಡಿಯ ಬಾರದಲಾ ॥33॥

ಧನಿಕನನು ಸ್ತುತಿಸುತ್ತ ಪತಿ ನಿ- । ರ್ಧನಿಕನೆನ್ನುತ ಪತಿಯ ದೂಷಿಪು- । ದನುಚಿತವು ಸತಿಗೆಂದು ನೀ ತಿಳಿ ಶಾಸ್ತ್ರಸಮ್ಮತವು ॥
ಎನಿತು ನಿಜಪತಿ ತರುವನದರಲಿ । ವನಿತೆ ತಾ ಸಂತುಷ್ಟಳಿರಬೇ- । ಕೆನುತ ಧರ್ಮಶ್ರುತಿಗಳೆಲ್ಲವು ಸಾರುತಿವೆ ಜಗಕೆ ॥34॥

ಮಂದಿ ಯಾತ್ರಾದಿಗಳ ಮಾಡುವ- । ರೆಂದು ಮನದಲಿ ಕುಗ್ಗಬಾರದು । ನಿಂದಿಸುವುದನುಚಿತವು ನಿಜಪತಿ ಹೋಗದಿರನೆಂದು ॥
ಇಂದುಧರ ಮೊದಲಾದ ಮೂರ್ತಿಗ । ಳೆಂದು ಪತಿಯನು ಪೂಜಿಸಲು ಬಹು । ಚಂದವೈ ಪತಿಚರಣ ತೀರ್ಥವೆ ಸಕಲ ತೀರ್ಥಗಳು ॥35॥

ವ್ರತವ ಮಾಡುವದಿರಲು ಪತಿಯನು । ಮತಿಯಲದನಾಚರಿಪುದುತ್ತಮ । ಸ್ವತಃ ಬುದ್ಧಿಯ ವ್ರತವು ಪುರುಷಾಯುಷ್ಯ ಕ್ಷೀಣವದು ॥
ಗತಿಸುವಳು ನರಕಕ್ಕೆ ತನ್ನಯ । ಪತಿಸಹಿತ ಕೇಳದಂಥ ವನಿತೆಯು । ಶ್ರುತಿವಚನ ಘೋಷಿಸುವದೀಪರಿ ಯೆಂದನಾ ಗುರುವು ॥36॥

ಪತಿಗೆ ಕ್ರೋಧದೊಳುತ್ತರವನಾ । ಸತಿಯು ಕೊಟ್ಟರೆ ಶ್ವಾನಜನ್ಮಕೆ । ಗತಿಸುವಳು ನರಿಯಾಗಿ ಬೊಗಳುವಳೂರ ಹೊರಗವಳು ॥
ಪತಿಯೆವುಚ್ಛಿಷ್ಟವನು ನೇಮದಿ । ಪ್ರತಿದಿವಸ ಭೋಜನವ ಮಾಡುತ । ಪತಿಚರಣ ತೀರ್ಥವನು ಸೇವಿಸಬೇಕು ಭಕ್ತಿಯಲಿ ॥37॥

ಪತಿಯೆ ಸಾಕ್ಷಾತ್ ಶಂಕರನೆ ನಿಜ । ಸತತವೀಪರಿ ನೆನೆಯಲಾ ಸತಿ । ಗತಿಸುವಳು ವೈಕುಂಠನಗರಿಗೆ ಧನ್ಯಳಾ ಸತಿಯು ॥
ಅತಿಥಿರೂಪದಿ ನೆಂಟರಿಷ್ಟರ । ಸತತ ಭೋಜನ ಸ್ವೀಕರಿಪುದನು । ನುಚಿತವು ವನಭೋಜನವು ನೆರೆಮನೆಯೂಟ ಸಲ್ಲದಲಾ ॥38॥

ಬಡವನಿಹ ನಿಜಪತಿಯೆನುತ ಹೆಸ- । ರಿಡಲು ಸಲ್ಲದು ಪತಿಗೆ ಪರರತಿ । ಸಡಗರದೊಳಿದ್ದರು ಸದಾ ಸ್ತುತಿ ಮಾಡಬಾರದಲಾ ॥
ಮೃಡಸಮಾನನು ಪತಿಯೆನುತ ನಿಜ । ಮಡದಿ ಭಾವಿಸಬೇಕು ದುರ್ಗುಣ । ವೊಡದು ನಿಂದಿಸಬಾರದಿವು ಕೇಳ್ಸತಿಯ ಲಕ್ಷಣವು ॥39॥

ಪುಂಡನಾದರು ಪತಿಯು ಕೇಳ್ಭೂ- । ಮಂಡಲದಿ ಲಕ್ಷ್ಮಿಯರಸ ನಿಜ । ಗಂಡನೆಂದೇ ಸ್ತುತಿಸಬೇಕೈ ಸತಿಯು ನಿಜಪತಿಯಾ ॥
ಭಂಡತನದಲಿ ಯತ್ತೆ ಮಾವರ । ಕಂಡ ಪರಿಯಲಿ ಮಾತನಾಡಲು । ಗಂಡನಾಯುಷ್ಯಕ್ಕೆ ಕೇಡಹುದೆಂದು ತಿಳಿಯುವುದು ॥40॥

ಆತ್ತೆಮಾವಂದಿರನು ತ್ಯಜಿಸುತ । ವಸ್ತಿಯನು ಬೇರಾಗಿ ಮಾಡಲು । ಯೆತ್ತುವರು ಜನ್ಮವನು ವನದಲಿ ಕರಡಿಯೋನಿಯಲಿ ॥
ಚಿತ್ತದಲಿ ಕೋಪಿಸುತ ಬಡೆದರು । ಪತ್ನಿ ಗಂಡಗೆ ಕೆಡಕ ನೆನಸಲು । ಸತ್ತು ಬರುವಳು ವ್ಯಾಘ್ರಜನ್ಮದಿ ಘೋರವನದೊಳಗೆ ॥41॥

ಪರಪುರುಷರನು ಪಾಪದೃಷ್ಟಿಯೊ । ಳಿರದೆ ನೋಡಲು ಸಾಯಲಾಕ್ಷಣ । ಬರುವಳವಳಾ ಕಣ್ಣು ಕಪ್ಪಡೆಯಾಗಿ ಭೂಮಿಯಲಿ ॥
ಪುರುಷನನು ವಂಚಿಸುತಲೊಬ್ಬಳ । ಸುರಸಖಾದ್ಯವ ತಿಂದಳಾ ಸೂ- । ಕರನಜನ್ಮದಿ ಬಂದಮೇಧ್ಯದ ಮೆಲುವಳಿದು ನಿಜವು ॥42॥

ಅದರ ನಂತರ ಕಣ್ಣು ಕಪ್ಪಡೆ । ಯುದರದಲಿ ತಾ ಬಂದು ವೃಕ್ಷದ । ಪೊದರೊಳಗೆ ಜೋತಾಡಿ ನಿಜವಿಷ್ಠೆಯನು ತಿನ್ನುವಳು ॥
ಸುದತಿ ನಿಷ್ಠುರ ವಚನದಲಿ ಪ್ರತಿ । ಯೆದುರಿನಲಿ ಮಾತಾಡಿದರೆ ತಾ । ವುದುಭವಿಸುವಳು ಮೂಕ ಜನ್ಮದಿ ಹುಟ್ಟು ಕಿವುಡಾಗಿ ॥43॥

ಪುರುಷನೆರಡನೆ ಲಗ್ನ ಮಾಡಲು । ತರುಣಿ ಸವತಿಯ ಮತ್ಸರದೊಳಿರೆ । ಬರುವುದವಳಿಗೆ ಭಾಗ್ಯಹೀನತೆ ಯೇಳು ಜನ್ಮದಲಿ ॥
ಪರಪುರುಷರಲಿ ಪ್ರೇಮದೃಷ್ಟಿಯ । ಪರಿಯ ನಾರಿಯರಿಂಗೆ ದುಃಖದ । ಶರಧಿ ತಪ್ಪದು ಹುಟ್ಟುವಳು ಚಾಂಡಾಲಜನ್ಮದಲಿ ॥44॥

ಹೊರಗೆ ಹೋಗಿಹ ಪತಿಯ ಭವನಕೆ । ಮರಳಿ ಬರಲವನೆದುರುಗಾಣಿಸಿ । ತರಲು ಬೇ ಕವನಿಂಗೆ ಮನೆಯೊಳು ತೊಳೆದು ಕೈಕಾಲಾ ॥
ಕರದಿ ಬೀಸಣಿಗೆಯನು ಕೊಡುತಲಿ । ಹರಿಸಬೇಕೈ ಶ್ರಮವ ಪುರುಷನ । ಚರಣಗಳನೊತ್ತುತ್ತ ಸವಿಮಾತಿನಲಿ ಪ್ರೀತಿಯಲಿ ॥45॥

ಪತಿಗೆ ಸಂತಸವಾಗೆ ತ್ರೈಮೂ- । ರುತಿಗಳಿಗೆ ಸಂತೋಷವಪ್ಪುದು । ಪತಿಯೇ ಪರದೈವತವು ಸತಿಗಿದು ಶ್ರುತಿಯ ಸಮ್ಮತವು ॥
ಪತಿಯೆ ಯಿಹ ಪರಮೋಕ್ಷದಾತನು । ಪತಿಹೊರತು ಸುಖಕೊಡುವನಾರೀ । ಕ್ಷಿತಿಯೊಳಗೆ ಕೊಡಲಾರರೈ ತಾಯ್ತಂದೆ ಬಾಂಧವರು ॥46॥

ಪತಿಯೆ ನಿಜಗುರು ಪ್ರತಿಯೆ ದೈವತ । ಪತಿಯೆ ಪಾವನ ತೀರ್ಥಯಾತ್ರೆಯು । ಪತಿಯ ಸರ್ವಾಭರಣಭೂಷಣ ಸತಿಗೆ ನಿಜವಾಗಿ ॥
ಪತಿಯಿರಲು ದೇಹದ ಪವಿತ್ರತೆ । ಪತಿಯು ಸಾಯಲು ಪ್ರೇತಸಾಮ್ಯತೆ । ಗತಿಯ ಕಾಣೆನು ಸತಿಗೆ ಪತಿ ಹೊರತಿನ್ನು ಕ್ಷಿತಿಯೊಳಗೆ ॥47॥

ಪತಿಯು ಧರ್ಮದ ಮೂಲ ಬೀಜವು । ಪತಿಯು ಪಂಚಪ್ರಾಣ ಸತಿಯಳ । ಪತಿ ತೊಲಗಲಾ ಸತಿಯು ಪ್ರೇತದ ವೋಲಮಂಗಲೆಯು ॥
ಸುತರು ಹುಟ್ಟಿದ ವಿಧವೆಯಾದರೆ । ಮೃತ ಸಮಾನವು ಜೀವವಿದ್ದರು । ಕೃತಿಯೊಳೆಲ್ಲರು ತ್ಯಜಿಸುವರು ದುಃಶಕುನವೆನ್ನುವರು ॥48॥

ಊರಹೊರಡುವ ಸಮಯ ವಿಧವಾ । ನಾರಿಸನ್ಮುಖವಾಗಿ ಬರಲು ವಿ । ಚಾರ ಮಾಡಲುಬೇಕು ದರುಶನ ಮರಣಸೂಚಕವು ॥
ಬಾರದಿದು ದುಃಶಕುನ ಪುತ್ರಗೆ । ನಾರಿವಿಧವೆಯು ತನ್ನ ಮಗನಿಗೆ । ತಾರದಿಹಳೈ ದುಃಶಕುನಫಲ ಶುಭವು ತಾಯ್ಮುಖವು ॥49॥

ಪುತ್ರನಿಲ್ಲದ ವಿಧವೆ ನಮನಕೆ । ಪಾತ್ರಳಲ್ಲಾ ನಮಿಸಬಾರದು । ಮೃತ್ಯು ಕರವೈ ಶಾಪವಾಶೀರ್ವಾದ ನಿಷ್ಫಲವು ॥
ಚಿತ್ರತರವಿದು ನೋಡೆಯದರಿಂ- । ದೆತ್ತಲಾಗದು ಬಾಯಮೋರೆಯ । ಪುತ್ರಹೀನಳ ಕೂಡೆ ಕಾಣೆನು ಬೇರುಪಾಯವನು ॥50॥

ಪತಿಯ ದೇಹತ್ಯಾಗವಾಗಲು । ಸತಿಯು ಪತಿಶವದೊಡನೆ ಸ್ವರ್ಗಕೆ । ಗತಿಸುವುದು ಧರ್ಮ ಶ್ರುತಿಸ್ಮೃತಿ ಸಮ್ಮತದ ಮಾರ್ಗಾ ॥
ಪತಿಯ ಸಹ ಶವದೊಡನೆ ನಡೆಯಲು । ಸತಿಗೆ ಬರುವುದು ಹೆಜ್ಜೆ ಹೆಜ್ಜೆಗೆ । ವಿತತ ಸಾವಿರದಶ್ವಮೇಧದ ಫಲವು ಗತಿಸಿದರೆ ॥51॥

ಮೇಘರಾಜನ ಕೂಡೆ ನಾರಿಯು । ಹೋಗುವುದು ಶಶಿಯೊಡನೆ ಬೆಳಕದು । ಹಾಗೆ ಪತಿಯೊಡಗೂಡಿ ಹೋಗುವುದಿದುವೆ ಸತಿಧರ್ಮ ॥
ಸಾಗುವರು ಮೂರೇಳು ಪಿಡಿಗಳು । ಭೋಗಿಸಲು ಸ್ವರ್ಗವನುಭಯಕುಲ । ಯೋಗವಿದು ಸಾಮಾನ್ಯ ವಲ್ಲಾ ಸತಿಯೆ ಪರಗತಿಯು ॥52॥

ಪುರುಷ ಪಾತಕಿಯಿರಲು ಜನುಮದಿ । ಮರಣ ಬರಲವನಿಂಗೆ ಯಮಕಿಂ- । ಕರರು ಪಿಡಿದೊಯ್ದ್ವರು ಕಣಾ ಪಾತಕದ ಫಲದಂತೆ ॥
ತರುಣಿಯಾತನ ಸಹಗಮನವಾ । ಚರಿಸಲಾಕ್ಷಣ ವೋಡಿ ಯಮಕಿಂ- । ಕರರು ಪೊಪರು ಪಾತಕಿಯ ತಾ ಬಿಟ್ಟು ಯಮಪುರಕೆ ॥53॥

ಪತಿಯೊಡನೆ ಸಹಗಮನವಾಗುವ । ಸತಿಯ ನೋಡರು ಕಾಲದೂತರು । ಗತಿಸುವರು ಭಯಭೀತಿಯಲಿ ದೇವಾಂಗನೆಯರೆಲ್ಲಾ ॥
ಕ್ಷಿತಿಗೆ ಬಂದು ವಿಮಾನದಲಿ ಸುರ- । ತತಿಯ ಮಧ್ಯದಿ ಸಂಭ್ರಮದೊಳಾ । ಸತಿಯನೊಯ್ವ್ವರು ಸ್ವರ್ಗಭುವನಕೆ ಪತಿಯ ಸಂಗಡಲೆ ॥54॥

ಗರುಡನುರಗನನೊಯ್ದ್ವ ಪರಿಯಲಿ । ತರುಣಿ ಪ್ರಾಣೇಶ್ವರನನೊಯ್ವ್ವಳು । ಸರರು ನಡುಗುವುರ್ಶ್ಯೆ ಪ್ರತಿವ್ರತೆಮಹಿಮೆಗಂಜುವರು ॥
ತರಣಿ ಸತಿಗಂಜುವನು ತನ್ನಯ । ಕಿರಣಗಳನೆಲ್ಲವನು ಮಂದೀ । ಕರಿಸಿ ತೇಜವನೀವ ಸತಿಯಿದ್ದಸ್ಥಾನದಲಿ ॥55॥

ನಡುಗುವವು ತಾರೆಗಳು ಗಗನದೊ- । ಳುಡುಪತಿಯು ತಾನಾದ ಶೀತಳ । ಜಡಜನಾಭನು ಸಹಿತ ನಡುಗುವ ನೋಡಿ ಪತಿವ್ರತೆಯಾ ॥
ಮಡದಿ ನಿಜಪ್ರಾಣೇಶ್ವರನ ಸಂ- । ಗಡಲೆ ವೊಯ್ವ್ವಳು ಸರ್ಗಭುವನಕೆ । ಬಿಡಳು ಸ್ವರ್ಗವ ಭೋಗಿಪಳು ಬಹುಕಲ್ಪ ಪರಿಯಂತಾ ॥56॥

ಒಂದು ರೋಮಕೆ ಕೋಟಿವರುಷವಿ- । ದೆಂದು ವಿಬುಧರು ಪೇಳ್ವರಗ್ನಿಗೆ । ಬಂದು ಬೀಳುವ ದೇಹದಲಿ ರೋಮಗಳು ಎಷ್ಟಿಹವು ॥
ಅಂದು ಪರಿಯಂತಾ ಸತಿಯು ತ- । ನ್ನಂದವನು ಭೋಗಿಪಳು ಸ್ವರ್ಗದೊ- । ಳಂದು ಪರಿಯಂತಾಪತಿಯು ಭೋಗಿಪನು ಸ್ವರ್ಗವನು ॥57॥

ಪುಣ್ಯವೀಪರಿ ಸಹಗಮನದಲಿ । ಧನ್ಯಳಾಸತಿಮಾತೃ ಪಿತೃಗಳು । ಧನ್ಯ ಕನ್ಯಾ ಜನ್ಮವೀಪರಿ ಸತಿಯು ಪುಟ್ಟಿದರೆ ॥
ಧನ್ಯವೈ ಕುಲವೆರಡು ಸ್ವರ್ಗದಿ । ಪುಣ್ಯವೈ ಮೂರೇಳು ಪಿಡಿಗದು । ಮಾನ್ಯ ಲೋಕದಿ ಧನ್ಯ ಕುಲದಲಿ ಜನ್ಮ ಕನ್ಯೆಯದು ॥58॥

ನಾರಿಯಾವ್ಯಭಿಚಾರಿಯಾಗಲು । ಘೋರಪಾತಕವೆರಡು ಕುಲಕಾ । ಮಾರಿನರಕದೊಳದ್ದುವಳು ಮೂರೇಳು ಪಿಡಿ ತನಕಾ ॥
ನಾರಿ ಸುದುರಾಚಾರಿಯವಳ ಶ । ರೀರದೊಳಗಿನ ರೋಮಮಾನದ । ಭಾರಿನರಕವು ಸಿಗುವುದೈ ಕೋಟ್ಯಾನುವರುಷದಲಿ ॥59॥

ಸತಿಯ ಪಾವನಚರಣ ತಾಗಲು । ಕ್ಷಿತಿಯು ತಾನೇ ಧನ್ಯಳೆನುವಳು । ಸತಿಯ ಮೇಲಿನ ಕಿರಣದಿಂದಲಿ ಸೂರ್ಯಚಂದ್ರಮರು ॥
ಅತಿ ಪುನೀತರು ತಾವೆನುತಲಾ । ಮಥಿಸುವರು ಮನದೊಳಗೆ ಪಾತಿ- । ವ್ರತೆಯ ಮಹಿಮೆಯನೇನನೆಂಬೆನು ಜಗದೊಳದ್ಭುತವು ॥60॥

ಮನೆಮನೆಯೊಳಿತೆರದಿ ನಾರಿಯು । ಮಿನುಗಿದರೆ ಮನೆ ಧನ್ಯವಾಯಿತು । ವನಿತೆಯರಿಗೀ ಗುಣವೆ ಭೂಷಣ ದೇಹಕಾಂತಿಯಿದು ॥
ಮನೆಯೊಳೀತೆರನಾರಿ ಸಿಗುವರೆ । ಜನುಮಜನುಮಾಂತರದ ಸುಕೃತದ । ಗಣನೆ ಬೇಕೈ ಸಾಧ್ಯವಲ್ಲಾ ಮಿಕ್ಕ ಜನರಿಂಗೆ ॥61॥

ಸತಿಯು ಸಹಧರ್ಮಿಣಿಯು ಸುಮನೋ- । ರಥದ ಪುರುಷಾರ್ಥದ ನಿಧಿಯು ಕೇಳ್ । ಸತಿವಿಹೀನ ಗೃಹಸ್ಥ ಭವನವು ವನವು ನಿರ್ಜನವು ॥
ಸುತನನಿಹಪರ ಸಾಧನವ ಸತಿ । ಯುತಗೃಹಸ್ಥನು ಸಂಗ್ರಹಿಸುವನು । ಸತಿಯೆ ಸ್ವರ್ಗದ ಗತಿಗೆ ಮುಕ್ತಿಗೆ ಸುಲಭ ಸೋಪಾನಾ ॥62॥

ಸತಿವಿಹೀನನು ಬಂದು ಈ ಸಂ- । ಸೃತಿಯೊಳಗೆ ನಿಷ್ಫಲನು ಕರ್ಮದ । ಗತಿಯೆ ಕಾಣನು ಧರ್ಮಹೀನಜಾಗಲಸ್ತನನು ॥
ಪಿತನ ಪ್ರಪಿತಾಮಹನ ಋಣದಲಿ । ಸತತ ಮುಳುಗುವನವನು ಮುಂದಿನ । ಗತಿಗೆ ಘಾತಕನೆಂದು ತಿಳಿ ಸತಿ ಯವಳೆ ಸದ್ಗತಿಯ ॥63॥

ಪುಣ್ಯಭಾಗೀರಥಿಯ ಸ್ನಾನವು । ಪ್ರಣ್ಯವದರಿಂ ಸತಿಯ ದರ್ಶನ । ವೆನ್ನುತಲಿ ನೀ ನಂಬು ಪಾತಿವ್ರತ್ಯ ಮಹಿಮೆಯಿದು ॥
ಜನ್ಮವೇಳರ ಪಾಪರಾಶಿಯು । ಭಗ್ನವಪ್ಪುದು ಸುಟ್ಟು ಸತಿಯಳ । ಮನ್ನಣೆಯ ದರ್ಶವು ಸುಕೃತದ ಲಾಭವೀಜಗದಿ ॥64॥

ಸುರಗುರು ಬೃಹಸ್ಪತಿಯು ಈ ಪರಿ । ಯರುಹಿದನು ಸಕಲರಿಗೆ ಸತಿಯಳ । ಪರಮಪಾತಿವ್ರತ್ಯ ಮಹಿಮೆಯ ಮೋಕ್ಷಸಾಧನವಾ ॥
ಧರಿಯೊಳೀಪಾವನ ಚರಿತ್ರವ । ಪರಮ ಭಕ್ತಿಯೊಳಾರು ಕೇಳ್ವರೊ । ದೊರೆಯುತಿಹುದವರಿಂಗೆ ಕಾಮಿತ ವಿಷ್ಣು ವಚನವಿದು ॥65॥

॥ ಅಧ್ಯಾಯ 31 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 32

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥
॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥
॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥
(ಭಾಮಿನೀ ಷಟ್ಪದಿ)

ಸಾರಾಂಶ ॥ ಪುರುಷನೊಳು ಸಹಗಮನಕೆಂದೇ । ತೆರಳಿದಾ ತರುಣಿಯನು ಶ್ರೀಗುರು । ಹರಿಸಿದನು ಪ್ರೇತವನು ಚೇತರಿಸಿದನು ಕರುಣದಲಿ॥

ಸುರವರರು ಪೀಯೂಷ ಕಲಶವ । ನರಪತಿ ಪರೀಕ್ಷಿತಗೆ ಕೊಟ್ಟರು । ಮರಳಿ ಪ್ರತಿಫಲವಾಗಿ ಭಾಗವತವನು ಬೇಡಿದನು ॥
ಮರುಳರವರೇನೆಂಬೆ ಶ್ರೀಗುರು । ಚರಣಭಕ್ತಿಯ ಸವಿಯನರಿಯರು । ಅರಿವಿರಲು ತುಚ್ಛಿಸುವರಾ ಭಾಗವತದಮೃತವನು ॥1॥

ಗುರುಬ್ರಹಸ್ಪತಿ ಸತಿಯ ಧರ್ಮವ । ನರುಹಿದನು ತೋಷದಲಿ ಸುರರಿಗೆ । ಸುರವರರು ಕೇಳಿದರು ವಿಧವೆಯ ಧರ್ಮಸಾಧನವಾ ॥
ಹರುಷದಿಂದಾ ಗುರುಬೃಹಸ್ಪತಿ । ಮರಳಿ ವಿಧವಾಧರ್ಮಗಳ ತಾ । ನರುಹಿದನು ದೇವತೆಗಳೆಲ್ಲರು ತಲೆಯ ತೂಗಿದರು ॥2॥

ಪುರುಷನಿರಲು ಸಮೀಪದಲ್ಲಿಯೆ । ಮರಣ ಬಂದಾಕ್ಷಣದಲಾತನ । ತರುಣಿ ಸಹಗಮನವನು ಮಾಳ್ಪುದು ಲೋಕಸಮ್ಮತವು ॥
ತರುಣಿ ಗರ್ಭಿಣಿ ಇರಲಿ ಅಥವಾ । ತರುಣಿ ಸ್ತನಪಾನವನು ಮಾಡುವ । ತರಳನಿರೆ ಸಹಗಮನ ವರ್ಜ್ಯವು ಶಾಸ್ತ್ರ ಸಮ್ಮತವು ॥3॥

ಈ ತೆರದನಾರಿಯರು ವಿಧವಾ । ರೀತಿನೇಮವನರಿತು ನಡೆಯಲು । ಭೂತಳದಿ ಸಹಗಮನದಷ್ಟೇ ಪುಣ್ಯ ಗಳಿಸುವರು ॥
ಪ್ರೀತಿಯಿಂದಲಿ ಕೇಶವಪನವ- । ನಾತತೂಕ್ಷಣ ಮಾಡಬೇಕ್ಕೈ । ಘಾತಕವು ಪತಿಸುಖಕೆ ಸತಿಯಳ ಶಿರದಕೇಶಗಳು ॥4॥

ನಿತ್ಯ ಪ್ರಾತಃಸ್ನಾನ ಮಾಳ್ಪುದು । ಭಕ್ತಿಯಲಿ ವಾರಕ್ಕೆ ಮೂರಾ- । ವರ್ತಿಯುಪವಾಸವನು ಮಾಳ್ಪುದು ಶುದ್ಧ ಮನಸಿನಲಿ ॥
ತೃಪ್ತಿಯೊಂದೇ ಧಾನ್ಯ ಭೋಜನ । ಭಕ್ತಿಯಲಿ ದರದಿವಸ ವೀಪರಿ । ನಿತ್ಯ ಚಾಂದ್ರಾಯಣವನಾಚರಿಸಿದರೆ ಗುಣವಿಹುದು ॥5॥

ವಿಧಿಯ ಚಾಂದ್ರಾಯಣವ ಪೇಳುವೆ । ಬಿದಿಗೆ ದಿವಸದೊಳೇಕಗ್ರಾಸವ । ಮುದದಿ ಗ್ರಹಣವ ಮಾಡಿ ದಿನಕೊಂದೊಂದನೇರಿಸುತ ॥
ಸುದತಿ ಪೌರ್ಣಿಮೆದಿನದಿ ಭೋಜನ । ವಿಧಿಯ ತೀರಿಸಿ ಮುಂದೆ ಪ್ರತಿದಿನ । ಮುದದೊಳಿಳಿಸುತ ಕಡೆಯೊಳೆಂದೇ ಗ್ರಾಸಗ್ರಹಿಸುವುದು ॥6॥

ಶಕ್ತಿಯಿಲ್ಲದ ನಾರಿಯೊಂದಾ- । ವರ್ತಿಭೋಜನ ಮಾಳ್ಪುದುಚಿತವು । ನಿತ್ಯಶಾಕಾಹಾರ ಫಲಗಳ ತಿನುವುದುತ್ತಮವು ॥
ಪಥ್ಯವಪ್ಪುದು ಕ್ಷೀರಪಾನವು । ಮೃತ್ಯು ಬಾರದ ತೆರದಿ ಶ್ವಾಸವು । ನಿತ್ಯ ನಡೆಯುವ ತೆರದಿ ಭೋಜನ ಮಾಳ್ಪುದು ಚಿತವದು ॥7॥

ಒಂದೆ ಧಾನ್ಯದ ಕೂಳು ತಿನುವುದು । ಮುಂದೆ ಮೂರುಪವಾಸ ಮಾಳ್ಪುದು । ಯೆಂದಿಗಾದರು ಮಡಿಯಲೇ ಮಾಡುವುದು ಭೋಜನವಾ ॥
ಗಂಧಪರಿಮಳಸ್ನಾನ ಮಂಗಳ । ಕುಂದಪುಷ್ಪಾದಿಗಳ ವರ್ಜಿಸು । ತೊಂದೆ ಮನದಲಿ ಸತಿಯ ಧ್ಯಾನದಿ ದಿವಸ ಕಳೆಯುವದು ॥8॥

ಪುರುಷ ತೀರಿದ ಬಳಿಕ ನಾರಿಯು । ಧರಣಿಯಲಿ ಶಯನವನು ಮಾಳ್ಪುದು । ಭರದಿ ಮಂಚಕೆಶಯನ ಮಾಡಲು ಪತಿಯು ನರಕದಲಿ ॥
ನಿರುತ ಬರುವನು ವಿಧವೆ ಮಂಚದೊ- । ಳಿರದೆ ಶಯನವ ಮಾಳ್ಪ ದನುಚಿತ । ದುರಿತವಿದು ರೌರವಕೆ ಹಾದಿಯು ಸತಿಪತಿಯರಿಂಗೆ ॥9॥

ಪುತ್ರನಿಲ್ಲದ ನಾರಿ ತರ್ಪಣ । ಪುತ್ರನಂದದಿ ಮಾಡುವುದು ತಾ । ಗೋತ್ರನಾಮೋಚ್ಚಾರ ಮಾಡುತ ದರ್ಭತಿಲಕುಶದಿ ॥
ನಿತ್ಯ ಪೂಜೆಗೆ ವಿಷ್ಣು ಮೂರುತಿ । ಭಕ್ತಿಪೂರ್ವಕವಿಟ್ಟು ಪುರುಷನೆ । ನುತ್ತ ಚಿತ್ತದಿ ನೆನಿಸಿ ಪೂಜೆಯ ಮಾಡುವುದು ಧರ್ಮ ॥10॥

ಪುರುಷನಿಗೆ ಜೀವಂತನಾತನಿ- । ಗೋರೆದು ಅವನನುಮತಿಯ ಮೇಲಾ- । ಚರಣೆಯನು ಮಾಡುವುದು ಧರ್ಮವು ಸತಿಗೆ ವಿಹಿತವಲಾ ॥
ಮರಣ ಬರಲಾತನಿಗೆ ಪೂಜಿಪ । ಸರಸಿಜಾಕ್ಷನ ಬೋಧೆಯಿಂದಲೆ । ಚರಿಸುವುದು ವ್ರತನೇಮಗಳನಾ ತೀರ್ಥಯಾತ್ರೆಗಳಾ ॥11॥

ಗುರುಪುರೋಹಿತರನುಮತಿಯಲಾ- । ಚರಣಶುದ್ಧತೆ ಯಿಟ್ಟು ತನಗತಿ । ಪರಮ ಪ್ರಿಯವಾಗಿರುವ ವಸ್ತುವ ದ್ವಿಜರಿಗೀಯುವುದು ॥
ಸ್ಮರಿಸಿ ವಿಷ್ಣುವ ಮಾಘ ಕಾರ್ತಿಕ । ಮರಳಿ ವೈಶಾಖದಲಿ ಸ್ನಾನವ । ಚರಿಸುವುದು ಸದ್ಧರ್ಮವಿದು ಶಾಸ್ತ್ರೋಕ್ತ ಮಾರ್ಗವಲಾ ॥12॥

ಮಾಡುವುದು ಜಲಕುಂಭದಾನವ । ರೂಢಿಯಲಿ ವೈಶಾಖ ಮಾಸದಿ । ಮಾಡುವುದು ಕಾರ್ತಿಕದಿ ದ್ವಿಜರಿಗೆ ದೀಪದಾನವನು ॥
ನೀಡುವುದು ತಿಲಘೃತವ ಮಾಘದಿ । ಮಾಡುವುದು ವೈಶಾಖ ಮಾಸದಿ । ನಾಡಿನಲಿ ಜಲದರವಟಿಗೆಯನು ನಿರ್ಮಲೋದಕದ ॥13॥

ಗಂಧಪರಿಮಳದಿಂದ ಪೂಜಿಸು । ತಿಂದುಧರಮಸ್ತಕದ ಮೇಲೆ ಸು- । ಬಂಧುರದ ಧಾರೆಯನು ಸಂತತವಿಡಲು ಬಹು ಪುಣ್ಯ ॥
ಮಿಂದು ವಿಪ್ರರ ಮನೆಗೆ ಜಲವನು । ತಂದುಶಕ್ತ್ಯನುಸಾರ ಕೊಡುವುದು । ಬಂದ ವಿಪ್ರರ ಭೋಜನದಿ ಸಂತೈಸುವುದು ಧರ್ಮ ॥14॥

ತೀರ್ಥಯಾತ್ರೆಗೆ ಹೋಗುವವರಿಗೆ । ಛತ್ರಪಾದುಕೆ ಕೊಟ್ಟು ಮನ್ನಿಪು । ದುತ್ತಮದ ಸನ್ಮಾರ್ಗ ಬಂದರೆ ಮನೆಗೆ ಯಾತ್ರಿಕರು ॥
ಹಸ್ತ ಪಾದವ ತೊಳೆದು ವಿಪ್ರರ । ವಸ್ತ್ರವಿತ್ತು ಸುಗಂಧ ಪುಷ್ಪದಿ । ಮತ್ತೆ ಬೀಸಣಿಕೆಯಲಿ ಶ್ರಮ ಪರಿಹಾರ ಮಾಡುವುದು ॥15॥

ನೀರು ಪಾತ್ರವನಿತ್ತು ಶಕ್ತ್ಯನು- । ಸಾರ ಗುಡಪಾನವನು ಕೊಡುವುದು । ನಾರಿ ಕೇಳೇಲಾದಿ ಕರ್ದಳಿದ್ರಾಕ್ಷಫಲಗಳನು ॥
ಧಾರುಣೀ ಸುರರಿಂಗೆ ಶಕ್ತನು- । ಸಾರ ದಾನವ ಮಾಳ್ಪುದುಚಿತವು । ಪೂರುಷನ ನಾಮದಲಿ ಸರ್ವಾರ್ಪಣೆಯ ಮಾಡುವದು ॥16॥

ಕಾರ್ತಿಕದಿ ಜವೆಯನ್ನ ವಥವಾ । ಭತ್ತದನ್ನದ ದಿನದೊಳೊಂದಾ- । ವರ್ತಿ ಸೇವನೆ ವರ್ಜ್ಯ ಮಧುತೈಲಾದಿ ಬದನೆಗಳು ॥
ಮತ್ತೆ ಕಂಚಿನ ಪಾತ್ರೆ ವರ್ಜ್ಯವು । ಚಿತ್ತಶುದ್ಧ ತೆಯಿರಲು ಸರ್ವ ಪ- । ವಿತ್ರವಪ್ಪುದು ದ್ವಿದಲಮಾತ್ರವ ತ್ಯಜಿಸ ಬೇಹುದಲಾ ॥17॥

ಮಾಡಬೇಕು ಪಲಾಶಪಾತ್ರದಿ । ರೂಢಿಯಲಿ ಭೋಜನವ ಸಾಂಗತೆ । ಮಾಡಬೇಕು ವ್ರತಕೆ ಶುಚಿಯಲಿ ಪೂಜೆ ತೀರಿಪುದು ॥
ಬೇಡವೆನುತಲಿ ತ್ಯಾಗ ಮಾಡಿದ । ಪಾಡು ವಸ್ತುಗಳೆಲ್ಲವನು ತಾ । ಜೋಡಿ ಸಲು ದ್ವಿಜದಾನಕವುಗಳೆ ಪುಣ್ಯಕರವಹುದು ॥18॥

ಕ್ಷಿತಿಯ ಮೇಲ್ಪವಡಿಸುವ ವಿಪ್ರಗೆ । ವಿತತ ಮಂಚವ ದಾನ ಮಾಳ್ಪುದು । ಘೃತಭರಿತ ಕಂಚಿನ ಸುಪಾತ್ರವ ದ್ವಿಜರಿಗೀಯುವುದು ॥
ವ್ರತವನೊಂದನು ಹೇಳುವೆನು ನಾ । ನತಿವಿಶೇಷದ ದೀಪದಾನವ । ಸ್ತುತಿಸಲೆನಗಳವಲ್ಲವೀ ದಾನದ ಮಹತ್ವವನು ॥19॥

ಹಾಲುಮೊಸರನು ತ್ಯಜಿಸುವುದು ವ್ರತ । ಪಾಲಿಸುತ ಸಾಂಗತೆಯ ಮಾಳ್ಪುದು । ಲೀಲೆಯಲಿ ಸಾಲಂಕೃತಾಕಳ ದಾನ ಮಾಡುವುದು ॥
ಮೇಲಿಹುದು ವ್ರತ ದೀಪದಾನವು । ಭಾಳಲೋಚನ ಮೆಚ್ಚುವನು ತಿಮಿ- । ರಾಳಿ ನಾಶಕವೆಂದು ಮಿಗಿಲೀ ದಾನ ಭೂತಳದಿ ॥20॥

ತ್ಯಾಗ ಮಾಳ್ಪುದು ಪರರ ದ್ರವ್ಯವ । ಭೋಗವನು ತಾನೊಂದು ತಿಂಗಳು । ಮಾಘಮಾಸದಿ ಸ್ನಾನಮಾಳ್ಪುದು ಸೂರ್ಯನುದಯದಲಿ ॥
ಯೋಗಿಗಳ ಕರೆದೇಕ ಮನದಲಿ । ಯೋಗ್ಯ ತಿಳಖರ್ಜುರದ ಲಡ್ಡುಗ । ಳಾಗಮೋಕ್ತದೊಳೀವುದೈ ಶರ್ಕರೆಯ ಪಕ್ವಾನ್ನಾ ॥21॥

ಶೀತಕಾಲದಿ ಕಾಷ್ಠದಾನವು । ಶೀತ ಹರಣಕೆ ಕಂಬಳಿಯನಾ । ಧೂತವಸ್ತ್ರವ ಧಾಬಳಿಗಳೀಯುವುದು ಪುಣ್ಯ ಕರಾ ॥
ರಾತ್ರಿ ಶಯನಕೆ ಮಂಚದಾನವು । ಶೀತ ಹಾರಕದೌಷಧಂಗಳ । ಪ್ರೀತಿಯಲಿ ಬ್ರಾಹ್ಮಣರಿಗೀವುದು ವಿಧವೆಯರ ಧರ್ಮ ॥22॥

ನಾರಿನೇಮವ ಪಾಲಿಸುತಲಾ । ಹೋರಿಬೆನ್ನಿಲಿ ಕೂಡಬಾರದು । ಧಾರಣವ ತಾ ಮಾಡಬಾರದು ಬಳೆಯ ಕುಪ್ಪಸವಾ ॥
ಸೀರೆ ಬಿಳಿದಿರಬೇಕು ಉಡಲಿಕೆ । ಬೇರೆ ವರ್ಣದ ಸೀರೆಯುಟ್ಟರೆ । ಘೋರ ಪಾತಕವಿಹುದು ಸುತನಾಜ್ಞೆಯಲಿ ವರ್ತಿಪುದು ॥23॥

ಸುತನು ಪತಿಯಿಂದುದ್ಭವಿಸಿದನು । ಸುತನು ಪತಿಯಾತ್ಮಕನು ನಿಜವಿದು । ಶ್ರುತಿಸ್ಮೃತಿಗಳಾ ಘೋಷ ಮಾಳ್ಪವು ದಿವ್ಯತತ್ವವಿದು ॥
ಸತಿಯ ನೆನೆದೀ ತತ್ವವನು ನಿಜ । ಸುತನ ಮಾತಿನೊಳಿರಲು ಸರ್ವಕೆ । ಹಿತವಹುದು ಪರಲೋಕಸಾಧನಕಿಹುದು ಮಾರ್ಗವಿದು ॥24॥

ಭಕ್ತಿಯಲ್ಲಿದನಾಚರಿಸಲಾ । ಮುಕ್ತಿ ತನ್ನಯ ದಾಸಿ ನಿಜವಿದು । ಶಾಸ್ತ್ರ ಸಮ್ಮತ ಸಹಗಮನಕಿದು ಸರಿಯು ತೂಕದಲಿ ॥
ಸತ್ತು ನರಕದ ಕೀಟಯೋನಿಯೊ । ಳತ್ತು ಗೋಳಿಡುತ್ತಿರುವ ಪತಿಯ । ನ್ನೆತ್ತುವಳು ಸ್ವರ್ಗದಲಿ ವಿಧವೆಯು ಶುದ್ಧ ವರ್ತನದಿ ॥25॥

ಧಾರುಣಿಯೊಳಿಹ ಪತಿಪರಾಯಣ । ನಾರಿಯರು ಭಾಗೀರಥಿಸಮ । ಮಾರಹರನನು ಹೋಲುವರು ಪತಿರಾಜರವರುಗಳಾ ॥
ಕಾರಣದೋಳಿಬ್ಬರನು ಪೂಜಿಸ । ಲಾರ ಭೀತಿಯು ಜಗದಿ ಕಾಲನ । ಹೋರ ಬಹುದ್ಯೆ ಕಾಲನನು ಗಣ್ಣಿಪರ ನಾ ಕಾಣೆ ॥26॥

ಇಂತು ಲೋಪಾಮುದ್ರೆಯನು ಬಹು । ಸಂತಸದಿ ಸ್ತುತಿಸಿದನು ಸುರಗುರು । ಯೆಂತು ವರ್ಣಿಸಲೀ ಪತಿವ್ರತೆಯಳ ಸುಗುಣಗಳನು ॥
ಇಂತು ಪೇಳ್ವನು ಯೋಗಿರಾಜನು । ಚಿಂತೆಯಲಿ ತೇಲಾಡುತಿಹಳಿಗೆ । ಕಾಂತನಾಶೆಯ ತೊರೆದನಾಥೆಗೆ ಪ್ರೀತಿಪೂರ್ವಕದಿ ॥27॥

ಬಾಲೆ ವಿಧವಾಧರ್ಮವನು ನಾ । ಹೇಳಿದೆನು ಪ್ರೀತಿಯಲಿ ನಿನಗನು । ಕೂಲವೇನಿಹದದನು ಮಾಳ್ಪುದು ಮನಕೆ ಬಂದಂತೆ ॥
ಶೀಲವೀಪರಿ ಯಿರಲು ನಿಜಭವನ । ಜಾಲವೆಲ್ಲವು ಹರಿದು ಪೋಗುವು- । ದೇಳು ಯೆನ್ನೊಳು ಪೇಳು ಸಾಕೌ ನಿನ್ನದೀ ಗೋಳು ॥28॥

ನಿನಗೆ ಮನದೊಳು ಧೈರ್ಯವಿದ್ದರೆ । ಸನುಮತದೊಳೀ ಪತಿಯೊಡನೆ ನಿಜ । ತನುವ ಸುಡುವುದು ಯೋಗ್ಯ ಸಹಗಮನಕ್ಕೆ ತೆರಳೀಗಾ ॥
ಮನದೊಳಂಜಿಕೆ ಯಿರಲು ಸಲ್ಲದು । ನಿನಗೆ ವೈಧವ್ಯದಲಿ ನಾ ಪೇ-। ಳ್ದನಿತು ಧರ್ಮವ ಚರಿಸು ಪುಣ್ಯ ಸಮಾನವೆರಡಕ್ಕೆ ॥29॥

ಎರಡರಲಿ ನಿನಗಾವುದೌ ಪ್ರಿಯ- । ಕರವು ಪೇಳೆನಗೆನುತ ಯೋಗೀ । ಶ್ವರನು ಹಸ್ತವ ಮಸ್ತಕದ ಮೇಲಿಟ್ಟು ಕೇಳಿದನು ॥
ತರುಣಿ ಮನಗೊಟ್ಟೆಲ್ಲ ಕೇಳ್ದಳು । ಚರಣಕೆರಗಿದಳಾಗ ಯೋಗೀ । ಶ್ವರಗೆ ಬಿನ್ನೈಸಿದಳು ಮತವನು ಭಾವಭಕುತಿಯಲಿ ॥30॥

ಶರಣು ಹೊಕ್ಕೆನು ನಿನಗೆ ಯೋಗೀ- । ಶ್ವರನೆ ನೀನೇ ತಂದೆ ತಾಯ್ ಸೋ । ದರನು ಪಂಚ ಪ್ರಾಣನಲ್ಲಾ ನೀನು ನಿಜ ವೆನಗೆ ॥
ಬರಲಿ ಕ್ಷೇಮವು ಪುರುಷಗೆನುತಲಿ । ಬರಲು ನಾ ಪರದೇಶಕಿಲ್ಲಿಗೆ । ಮರಣವಾಯಿತು ಪ್ರಾಣವಲ್ಲಭಗೇನು ಮಾಡುವೆನು ॥31॥

ಚರಣದರ್ಶನದಿಂದ ನಿನ್ನಯ । ಪರಮ ಧನ್ಯಳು ನಾನೆನುತ ತಿಳಿ- । ದಿರುವೆ ನಿಜವೆನಗಾಯ್ತು ಪರಲೋಕಕ್ಕೆ ಸಾಧನವು ॥
ಪರಮ ದುಸ್ತರವಿಹುದು ನೀ ಪೇ । ಳಿರುವ ವಿಧವಾಚರಣೆ ದೇಹದೊ- । ಳಿರುವದೈ ತಾರುಣ್ಯ ಲಾವಣ್ಯಗಳು ವೈರಿಗಳು ॥32॥

ಹಾದಿ ತಪ್ಪಿದರೆನಗೆ ನಿಂದಾ- । ವಾದ ದುರಿತಗಳಟ್ಟುವವು ನಾ । ಮೋದದಿಂದಲೆ ಪತಿಯೊಡನೆ ಸಹಗಮನ ಮಾಡುವೆನು ॥
ನೀ ದಯಾನಿಧೇ ತಾರಿಸೆನ್ನನು । ಸಾಧಿಪೆನು ಪರಲೋಕ ಸುಲಭದಿ । ಖೇದದುಃಖಗಳಿಲ್ಲ ಮನದಲಿ ಪತಿಯ ಸೇರುವರೆ ॥33॥

ಎಂದು ಯೋಗೀಶ್ವರನ ಚರಣದಿ । ಚಂದದಿಂದಲಿ ತಲೆಯನಿಡಲವ । ಮಂದಹಾಸ್ಯದಿ ತಲೆಯನೆತ್ತುತ ನುಡಿದನಾ ಸತಿಗೆ ॥
ಇಂದು ನೀ ಪತಿಯೊಡನೆ ಪೋಗುವು- । ದೆಂದು ನಿರ್ಧಾರವನು ಮಾಡಿದೆ । ಯಿಂದುಧರ ನಿಮಗೀರ್ವರಿಗೆ ಸುಖ ಕೊಡಲಿ ಸಂತತದಿ ॥34॥

ಗುರುಚರಣ ದರ್ಶನಕೆ ಬಂದೀ । ಪರಿಯ ದುರ್ಧರ ಸಂಕಟವು ಬಂ । ದಿರುವುದಲ್ಲಾ ಕಾಲಗತಿ ಬೇರಿತ್ತು ನೋಡುವರೆ ॥
ಅರಿವರಾರೀ ಬ್ರಹ್ಮಕರಣಿಯ । ಬರುವ ಸಂಕಟ ಬಂತು ದೇವರ । ಕರಣಿ ತಪ್ಪಿಸಬಹುದೆ ಮೀರುವರಾರು ವಿಧಿಲಿಖಿತಾ ॥35॥

ದರುಳ ರಾವಣ ಗೆದ್ದ ನೆಲ್ಲರ । ಮರಣವವನಿಗೆ ತಪ್ಪಿತೇ ಕಲಿ । ಕುರುಪತಿಯು ಸಾಮಾನ್ಯನೇ ಕಾಲನಿಗೆ ತುತ್ತಾದಾ ॥
ಅರಿಯೆ ಭೀಷ್ಮ ದ್ರೋಣರಿಚ್ಛಾ । ಮರಣಿಗಳು ಮರಣವನು ಗೆದ್ದರೆ । ನರಪತಿ ಪರೀಕ್ಷಿತನು ರಾಜ್ಯವ ಬಿಟ್ಟರೇನಾಯ್ತು ॥36॥

ಇನಕುಲದ ಸಾತ್ವಿಕ ಹರಿಶ್ಚಂ- । ದ್ರನನ ಬಿಟ್ಟಿತೆ ವಿಧಿಯು ಡೊಂಬರ । ಮನೆಯೊಳಗೆ ಆಳಾದನಲ್ಲಾ ಯೇನ ಹೇಳುವೆನು ॥
ಮನುಜರಲ್ಲಿ ಯಜಂಕ್ಯ ಬಲಿ ಯೆಂ- । ದೆನುವ ಗಾದೆಗೆ ವಿಧಿಯು ತಪ್ಪಿತೆ । ಮುನಿದು ಮುನಿ ಬಾಲಕನು ಪಾತಾಳಕ್ಕೆ ಮೆಟ್ಟಿದನು ॥37॥

ಹರಿಹರರು ಬಹುರೂಪ ಧರಿಸುತ । ಧರೆಗೆ ಬಂದರು ಲೀಲೆಯಾಡಿದ । ರರರೆ ಬಿಟ್ಟಿತೆ ಮರಣವವರಿಗೆ ದಿವ್ಯಪುರುಷರಿಗೆ ॥
ಗುರುಹೊರತು ಕಾಲನನು ಗೆದ್ದವ । ರಿರುವರೇ ಧಾತ್ರಿಯಲಿ ಕೇಳೌ । ಭರದಿ ಪೇಳುವೆನೊಂದು ಮಾತನು ಮಾಡು ನೀನದನು ॥38॥

ಗುರುಚರಣದರ್ಶನವ ಮಾಡಲು । ತೆರಳು ಬೇಗದಿ ದರ್ಶನದ ನಂ- । ತರಕೆ ನೀ ಪತಿಯೊಡನೆ ಚಿತೆ ಯೇರುವುದು ಸತಿಯೆಂದು ॥
ಕರದಿ ಭಸ್ಮವ ಮಂತ್ರಿಸುತಲಾ । ತರಣಿಗಿತ್ತನು ಹಣೆಗೆ ಹಚ್ಚಿದ । ಮರಳಿ ರುದ್ರಾಕ್ಷಗಳ ನಾಲ್ಕನು ಕೊಡುತಲಿಂತೆಂದಾ ॥39॥

ಕೊರಳೊಳಗೆ ರುದ್ರಾಕ್ಷವೆರಡನು । ಯೆರಡು ಕಿವಿಯಲ್ಲೆರಡು ಕಟ್ಟುತ । ತರುಣಿ ಕೇಳೌ ಮುಂದೆ ಪ್ರೇತದ ದಹನ ಮಾಡುವುದು ॥
ಗುರುಚರಣದಲಿ ರುದ್ರಸೂಕ್ತದಿ । ವಿರಚಿ ಸುವರಭಿಷೇಕವನು ದ್ವಿಜ । ವರರು ತತ್ತೀರ್ಥವನು ನೀ ತರಬೇಕು ಬರುವಾಗ ॥40॥

ತನ್ನ ದೇಹದ ಮೇಲೆ ತೀರ್ಥವ । ಮುನ್ನ ಪ್ರೋಕ್ಷಿಸಿ ಶವದ ಮೇಲೆಯು । ಸನ್ನು ತಾಂಗಿಯೆ ಪ್ರೋಕ್ಷಿಸೌ ನೀ ಭಕ್ತಿಭಾವದಲಿ ॥
ಮುನ್ನ ಪತಿಯೊಳು ಸಹಗಮನಕ್ರಿಯೆ- । ಯನ್ನು ಮಾಳ್ಪುದು ವಾಯನವನು ಪ್ರ- । ಸನ್ನ ಚಿತ್ತದಿ ಕೊಡಲುಬೇಕು ಸುವಾಸಿನಿಯರಿಂಗೆ ॥41॥

ಪರಿ ಪರಿಯ ದಾನಗಳ ಧರಣೀ । ಸುರರಿಗೀವುದು ದ್ರವ್ಯ ಕೂಪದಿ । ಹರುಷದಿಂ ನಂತರಕೆ ಪರಿಚಿತೆ ಯೇರ್ವುದುಚಿತವಲಾ ॥
ತರುಣಿಗೀಪರಿ ಬೋಧಿಸುತ ಮುನಿ-। ವರನು ನಡೆದನು ತನ್ನ ಮಾರ್ಗದಿ । ಹರುಷದಿಂದಾ ಸತಿಯು ಮುಂದಿನ ಕೆಲಸ ತೊಡಗಿದಳು ॥42॥

ಉತ್ತಮ ದ್ವಿಜವರರ ಕರಿಸುತ । ಸತ್ತವರಿಗಾ ಯೋಗ್ಯವೆನಿಸುವ । ಕೃತ್ಯವನು ಮಾಡಿಸಿದಳೈ ಷೋಡಶದ ಕರ್ಮವನು ॥
ಇತ್ತಳಾಬ್ರಾಹ್ಮಣರಿಗಾಕ್ಷಣ । ವಿತ್ತ ದಾನವ ಭಕ್ತಿಭಾವದಿ । ಮುತ್ತಯಿದೆಯರ ಕರೆದು ಬಿನ್ನೈಸಿದಳು ವಚನವನು ॥43॥

ತೀರಿಸುತ ಸ್ನಾನವನು ಪಟ್ಟೆಯ । ಸೀರೆಯುಟ್ಟಾಭರಣ ತೊಟ್ಟಳು । ಚಾರು ಸೌಭಾಗ್ಯದ ಹಳದಿಕುಂಕುಮವ ಹಣೆಗಿಟ್ಟು ॥
ನಾರಿ ನಡೆದಳು ಕರತಳದ ತಾ । ಧಾರಣವ ಮಾಡಿದಳು ಬೆಂಕಿಯ । ಧೀರಮನದಲಿ ಪ್ರೇತದೊಡನಾ ನದಿಯ ತಟದೊಳಗೆ ॥44॥

ಎತ್ತಿಪ್ರೇತವ ವಸ್ತ್ರದಲಿ ತಾ । ಸುತ್ತಿಕಾಷ್ಠ ದಲೇರಿಸಿದರೈ । ಮತ್ತೆ ನಡೆದರು ನದಿಯ ತೀರಕೆ ದಹನ ಮಾಡುವರೆ ॥
ಸುತ್ತುಮುತ್ತಿನ ನಾರಿಯರು ತಾ- । ನೊತ್ತಿ ಬಂದರು ನೋಡುವರೆ ಬಹು । ಚಿತ್ರವಲ್ಲಾ ಸತಿಯ ಪತಿನಿಷ್ಠೆಯ ಜಗತ್ರಯದಿ ॥45॥

ಬಣ್ಣಿಪೆನು ನಾನೆಂತು ಸತಿಲಾ- । ವಣ್ಯವನು ಷೋಡಶವರುಷ ತಾ- । ರುಣ್ಯವನು ಪೋಲುವಳು ರೂಪದಿ ಲಕ್ಷ್ಮೀದೇವಿಯನು ॥
ಹೆಣ್ಣು ಗಂಡುಗಳೆಲ್ಲ ಕೂಡಿದ । ರೆನ್ನುವರು ಪರಿಪರಿಯ ಭಾವದಿ । ಸನ್ನುತಾಂಗಿಯ ಪೊಗಳುವರು ತಾವೇಕಭಾವದಲಿ ॥46॥

ತಲೆಯ ತೂಗುತರೆಲ್ಲರೀಕೆಯು । ನಲಿದು ಬೆಂಕಿಯ ಪಿಡಿದು ಕರದಲಿ । ನಲಿವಿನಿಂದಲಿ ಹೋಗುವುದು ಬಹು ಚೋದ್ಯವೆನ್ನುವರು ॥
ತಿಳಿಯದೀಕೆಯು ಪ್ರಾಣಬಿಡುವಳು । ಕಲಿಸಬೇಕಿವಳೇಕೆ ವ್ಯರ್ಥದಿ । ತೊಲಗುವಳು ಜೀವವನು ಯೆಂಬರು ಕೆಲವು ನೋಟಕರು ॥47॥

ಪತಿಯ ಸುಖವನು ಕಾಣಲಾರದೆ । ಸುತನ ಮೋರೆಯ ನೋಡದಲೆ ತಾ । ಪತಿಯೊಳೈಕ್ಯವನೆಂತು ಪಡೆದಳೊ ಭಾಪು ಭಾಪೆನುತಾ ॥
ಕ್ಷಿತಿಯೊಳೀಪರಿ ನಾರಿಯರು ಸಂ- । ತಸದಿ ಪಾತಿವ್ರತ್ಯ ಕಲಿಯಲಿ । ರತಿಪತಿಯಪಿತ ಸಿದ್ಗತಿಯ ಕೊಡಲೆಂದು ಪ್ರಾರ್ಥಿಪರು ॥48॥

ಧನ್ಯರೀಕೆಯ ತಂದೆತಾಯ್ಗಳು । ಧನ್ಯರೀಕೆಯ ಪೂರ್ವಜರು ಮ- । ತ್ತಿನ್ನು ಧನ್ಯರು ನಾವು ಪ್ರೇತದ ಕೂಡೆ ನಡೆವವರು ॥
ಪುಣ್ಯವಿಹುದೈ ಹೆಜ್ಜೆ ಹೆಜ್ಜೆಗೆ । ಬಣ್ಣಿಸುವರಸದಳವು ಯೆಮಗಿದ । ಚೆನ್ನಹತ್ತುವದಶ್ವಮೇಧದ ಫಲವದಡಿಗಡಿಗೆ ॥49॥

ಎಂದು ನಾನಾ ಪರಿಯೋಳಾ ಜನ । ವೃಂದ ತಂತಮ್ಮೊಳಗೆ ನುಡಿದರು । ಬಂದು ಮುಟ್ಟಿದರಾಗ ನದಿ ತೀರದಲಿ ನಿಂತರಲಾ ॥
ತಂದುವಹ್ನಿಯ ಕುಂಡ ರಚಿಸುತ । ತಂದ ಪ್ರೇತವನಿಟ್ಟರಲ್ಲಿಯೇ । ಸುಂದರಾಂಗಿಯು ಕರೆದಳಾ ಮುತ್ತೈದೆಯರ ಮುದದಿ ॥50॥

ಹಳದಿ ಕುಂಕುಮ ಕಂಠ ಸೂತ್ರವ । ಲಲನೆಯರಿಗಿತ್ತಳು ವಿನೋದದಿ । ಬಳಿಕ ವಸ್ತ್ರಾಭರಣವಿತ್ತಳು ಗಂಧಪುಷ್ಪಗಳಾ ॥
ಬಳಿಕ ವಿಪ್ರರ ಕರೆದು ದ್ರವ್ಯವ । ನಲವಿನಿಂದಲಿ ಕೊಟ್ಟಳಾಕ್ಷಣ । ತಲೆಯ ತೂಗಿದರೆಲ್ಲ ನೆರೆದಿಹ ಜನರು ಚೋದ್ಯದಲಿ ॥51॥

ವನಿತೆ ಬಿನ್ನೈಸಿದಳು ನೆರೆದಿಹ । ಜನರಿಗತಿ ನಮ್ರದಲಿ ಯೆನ್ನಯ । ಜನಕನಿಹನೈ ಶೂಲಪಾಣಿಯು ತಾಯಿ ಪಾರ್ವತಿಯು ॥
ವಿನಯದಿಂದಲಿ ಕರೆದಿಹರು ಶ್ರಾ- । ವಣಿಗೆ ದೀಪಾವಳಿಯ ಹಬ್ಬಕೆ । ಮನದಿ ಸಂತಸವಾಯ್ತು ಹೋಗುವೆ ಸಗುಣ ರೂಪದಲಿ ॥52॥

ತವರಮನೆಗಾನೀಗ ಹೋಗುವೆ । ಶಿವನ ಕೈಲಾಸಕ್ಕೆ ಯೆನ್ನೀ । ಸವಿನಯದ ಪ್ರಾರ್ಥನೆಯ ಮಾಳ್ಪೆನು ಪ್ರೇಮವಿರಬೇಕು ॥
ಜವದಿ ಯೆಮಗೆ ನಿರೋಪ ಕೊಡುತಲಿ । ಭವನವನು ಸೇರುವದು ನೀವಿದ-। ನವಧರಿಸಿ ಕೇಳಿದರೆ ಪೇಳ್ವುದು ಸುಖದಿನಿಹೆನೆಂದು ॥53॥

ಅತ್ತೆ ಮಾವರು ಕೇಳಿದರೆ ನಾ- । ವಿತ್ತ ಸುಖ ಸಂತಸದಲಿರುವೆವೆ- । ನುತ್ತ ಪೇಳ್ವುದು ಹೇಳಲಾಗದು ಪತಿಯ ನಿಧನವನು ॥
ಮೃತ್ಯುವಾರ್ತೆಯ ಕೇಳಿದರೆ ಸಂ- । ತಪ್ತ ರಾಗುವರತ್ತೆ ಮಾವರು । ಮೃತ್ಯು ಮುಖವನು ಸೇರುವರು ತಾವ್ ಪುತ್ರಶೋಕದಲಿ ॥54॥

ಸತ್ತರೆನ್ನಯ ಮಾವನೀಪರಿ । ಹತ್ಯೆ ಬರುವದು ನಿಮಗೆ ಯದರಿಂ- । ವಾರ್ತೆ ಯೀಪರಿ ಹೇಳಬೇಕವರಿಂಗೆ ಪ್ರೀತಿಯಲಿ ॥
ತೀರ್ಥವುತ್ತಮ ಬಂದ ಕೂಡಲೆ । ಸ್ವಸ್ಥವಾಯಿತು ಪತಿಯ ಜೀವಕೆ । ಸುಸ್ಥಳವು ಗುರುಚರಣಸನ್ನಿಧಿಯೆಂದು ನಿಂತಿಹೆವು ॥55॥

ಮುದವ ಕೊಡುವೀ ಸ್ಥಾನ ಭೀಮಾ । ನದಿಯ ತೀರವು ಕಲ್ಪತರು ಗುರು- । ಪದವು ರಂಜಿಪ ಸ್ಥಾನವೆಮಗಾಯ್ತಾಗಲೇ ಕ್ಷೇಮ ॥
ಮುದದೊಳೀಪರಿ ವಾರ್ತೆ ಪೇಳ್ವುದು । ಬದಲಿಸದೆ ನಾ ಪೇಳ್ದ ಮಾತನು । ಸದಯದಂತಃಕರಣದಲಿ ಕೊಡಿರಪ್ಪಣೆಯನೆಮಗೆ ॥56॥

ಎಂದ ವಚನವ ಕೇಳುತೆಲ್ಲರು । ನೋಂದರೈ ದುಃಖದಲಿ ತಾವ್ ಕ । ಣ್ಣಿಂದ ಬಾಷ್ಪವ ಸುರಿಸಿದರು ಸತಿಯಳನು ನೋಡುತಲಿ ॥
ಮಂದಹಾಸ್ಯದಿ ಸತಿಯು ಪ್ರೇತದ । ಮುಂದೆ ಹತ್ತಿರನಿಂತು ಕೊಂಡಳು । ಬಂದುದಾಕ್ಷಣ ಯೋಗಿರಾಜನ ವಚನ ಮನದೊಳಗೆ ॥57॥

ಎರಡು ರುದ್ರಾಕ್ಷಗಳ ಕಿವಿಯಲಿ । ಯೆರಡು ಕೊರಳಲಿ ಕಟ್ಟಿ ಧರಣೀ । ಸುರರಿಗೆಂದಳು ಗುರು ನೃಸಿಂಹಸರಸ್ವತಿಯ ಚರಣ ॥
ದರುಶನವ ಮಾಡುವೆನು ನಂತರ । ಬರುವೆನಿಲ್ಲಿಗೆ ಬೇಗದಲಿ ಮ- । ತ್ತಿರುವದೈ ಸಂಕಲ್ಪವೆನ್ನದು ಮಾಳ್ಪೆಸಹಗಮನ ॥58॥

ಪಡೆದು ದ್ವಿಜರ ನಿರೋಪವನು ತಾ । ಮಡದಿ ಸಂಗಮಕಾಗ ಬಂದಳು । ಮೃಡ ನೃಸಿಂಹ ಸರಸ್ವತಿಯ ಸನ್ನಿಧಿಗೆ ವಹಿಲದಲಿ ॥
ಗಡಣ ನರನಾರಿಯರೆ ಬಂತಾ । ಸಡಗರವ ನೋಡಲ್ಕೆ ಸತಿಯಳ । ಮಡದಿ ಬಂದಳು ಹಾದಿಯಲಿ ಗುರುವರನ ಸ್ತುತಿಸುತಲಿ ॥59॥

ನರಹರಿಯೆ ನೀನೆನ್ನ ದೀನಳ । ಮರೆತೆಯಾ ದುರ್ಭಾಗ್ಯವೆನ್ನದು । ಶರಣರಿಂಗಾಧಾರವೆಂಬುವ ಬಿರುದನೆಲ್ಲಿಟ್ಟೆ ॥
ಇರುವವೈ ಸಿದ್ಧಿಗಳು ನಿನ್ನಯ । ಚರಣ ದಾಸಿಯರಾಗಿ ನವನಿಧಿ- । ಯರು ಸದಾ ಸೇವಿಪರು ನಿನ್ನಯ ಪಾದಪಂಕಜವಾ ॥60॥

ಸೃಷ್ಟಿಸುವೆ ಗುಣರಜದಿ ಜಗವನು । ಶ್ರೇಷ್ಠವಹ ಗುಣಸತ್ವದಲಿ ನೀ । ಸೃಷ್ಟಿಯನು ಪ್ರತಿ ಪಾಲಿಸುವೆ ನೀ ಸ್ವಾಮಿ ಜಗಕಹುದು ॥
ಸಿಟ್ಟಿನಲಿ ಗುಣತಮದಿ ಸಕಲವ । ನಷ್ಟ ಮಾಡುವ ಮೂರ್ತಿ ನೀನೆ । ಬಿಟ್ಟೆ ಯೆನ್ನನು ಬುದ್ಧಿಹೀನಳೆನುತ್ತ ಕೋಪದಲಿ ॥61॥

ದುರುಳರುಪಟಳ ತಾಳಲಾರದೆ । ಅರಸನೊಳು ದೂರಿದರೆ ತತ್ ಕ್ಷಣ । ದೊರೆಯುವುದು ಕೇಳವಗೆ ಶಾಂತಿಯು ರಾಜದ್ವಾರದಲಿ ॥
ನರರು ರೋಗ್ರಸ್ತರಾದರೆ । ಬರುವರವರ್ವೈ ವೈದ್ಯನಿದ್ದೆಡೆ । ದೊರೆವುದವರಿಗೆ ಕ್ಷೇಮವಾರೋಗ್ಯವು ಸಗಾಢದಲಿ ॥62॥

ಮೂರು ಮೂರುತಿಯವನು ತಾಳ್ದವ- । ತಾರ ಭಕ್ತರ ಕಾಯ್ವೆನೆನುತಲಿ । ಭಾರಿ ಕೀರ್ತಿಯು ಜಗದೊಳಾಯಿತು ಕೇಳಿ ಕೀರ್ತಿಯನು ॥
ಸೇರಿದೆನು ತವಚರಣ ನೀನಾ- । ಧಾರವೆಂದೇ ನಂಬಿ ಬಂದೆನು । ನಾರಿಯೆನ್ನನುಪೇಕ್ಷಿಸಿದೆಯೋ ಸದಯ ಗುರುರಾಯಾ ॥63॥

ನಾನು ನಿನಗಪರಾಧ ಮಾಡಿದೆ । ನೇನು ಬಂದೆನು ದೂರದೇಶಕೆ । ನೀನೆನಗೆ ತಾಯ್ತಂದೆಯೆಂಬೀ ಭಾವ ಧರಿಸುತಲಿ ॥
ದೀನಳಬಲೆಯು ನಿನ್ನ ಚರಣ- । ಧ್ಯಾನದಲಿ ತತ್ಪರಳು ನಿನಗ । ಮಾನ ಬಾರದೆ ನೋಡು ಕರುಣೆಯ ಬೀಡು ಮಾತಾಡು ॥64॥

ಚರಣದರ್ಶನವಾದಕೂಡಲೆ । ಪುರುಷಗೆನ್ನಯ ಕ್ಷೇಮ ಬರುವುದು । ಧರಿಸುತೀ ನಿರ್ಧಾರ ಬಂದೆನು ನಿನ್ನ ದರುಶನಕೆ ॥
ಧರೆಯೊಳೆನ್ನಯ ವಯದ ನಾರಿಯ- । ರಿರುವರೇ ಸಂತಾನಸುಖದಲಿ । ಬರಿದೆ ನಾನೀ ಜನ್ಮವೆತ್ತಿದೆ ಕಲ್ಲಿನಂದದಲಿ ॥65॥

ಪತಿಯು ಸಂತತ ರೋಗಿಯಾಗಲು । ಸುತನ ಸೌಖ್ಯವ ಕಾಣೆನೆನುತಲಿ । ಯತಿವರನೆ ತವ ದರ್ಶನಕೆ ನಾ ಬಂದೆನಾಶೆಯಲಿ ॥
ಪತಿಯ ರೋಗವು ಹೋಯ್ತು ಪಡೆದೆನು । ಸುತರ ಹಲವರ ನಾನು ನಿಜಕಾ- । ಮಿತವ ಪಡೆದೆನು ನಿನ್ನ ದರ್ಶನದಿಂದ ನಿಜವಾಗಿ ॥66॥

ಕೀರ್ತಿಲತೆಯಿದು ಹಬ್ಬಿ ಜಗದಲಿ । ಖ್ಯಾತಿಯಾಯಿತು ನಿನ್ನ ಮಹಿಮೆಯ । ಕೀರ್ತಿಲತೆಯನು ಕೊಂಡು ನಡೆದೆನು ಸ್ವರ್ಗಕಾನೀಗಾ ॥
ಈ ತೆರದಿ ಸ್ತುತಿಸುತಲಿ ನಾರಿಯು । ಭೀತಿಯಲಿ ನಡೆ ತಂದು ನೋಡಿದ । ಆ ತಪೋನಿಧಿ ಗುರುವರನನಮರಜೆಯ ಸಂಗಮದಿ ॥67॥

ಬರುತ ಕಂಡಳು ನಾರಿ ಪಿಂಪಳ । ಮರದಡಿಗೆ ಕುಳಿತಿರುವ ಶ್ರೀಗುರು । ವರನ ದೂರದಿ ಕಂಡು ಸಾಷ್ಟಾಂಗವನು ಮಾಡಿದಳು ॥
ತರುಣಿಯ ಸುಭಕ್ತಿಯನು ನೋಡುತ । ಕರುಣ ದೃಷ್ಟಿಯ ತೆರೆದು ಗುರುವರ । ಹರಿಸಿದನು ಸೌಭಾಗ್ಯವಿವಳಿಗಖಂಡ ಬರಲೆಂದು ॥68॥

ತರುಣಿ ಕೇಳುತಲೀ ವಚನವನು । ಮರಳಿ ದಂಡಾಕಾರ ಬೀಳಲು । ಹರಿಸಿದನು ಗುರುವಷ್ಟಸುತಸೌಭಾಗ್ಯ ಬರಲೆಂದು ॥
ಬೆರಗಿನ ಪ್ರೇಕ್ಷಕರು ನಕ್ಕರು । ಪುರುಷನೀಕೆಯ ಸತ್ತ ನೀಕ್ಷಣ । ತೆರಳಿದರು ಸತಿ ಚಿತೆಯನೇರುವಳೀಗಲಗ್ನಿಯಲಿ ॥69॥

ಗುರುನಿರೋಪವ ಪಡೆಯುವರೆ ಬಂ- । ದಿರುವಳವಳಿಗೆ ಪುತ್ರರಾಗುವ । ಪರಿಯ ಕಾಣೆವೆನು ವಿಸ್ತರಿಸಿದರು ಗುರುವರಗೆ ॥
ಗುರುವಚನ ಸಟೆಯಾಗದೆಂಬುದು । ಭರವಸವು ನಮಗಿಹುದು ಗುರುವರ । ನಿರುವನಲ್ಲಾ ಸರ್ವಶಕ್ತನು ಯೆಂದರಾದ್ವಿಜರು ॥70॥

ಎಂದು ಕೇಳುತ ನಸುನಗುತ ಗುರು- । ವೆಂದನೀಕೆ ಸುಭಾಗ್ಯ ಲಕ್ಷ್ಮಿಯು । ಎಂದಿವಳು ಸಾಯುವಳು ಸಾಯುವನೆಂತು ಪತಿಯಿವಳಾ ॥
ಬಂದಿಹುದು ಸಂದೇಹವದರಿಂ- । ತಂದು ತೋರಿಸಿರೆನಗೆ ಶವವದ । ನೆಂದು ಗುರುವರ ನುಡಿಯಲೋಡಿದರಾಗ ನದಿಗಾಗಿ ॥71॥

ನೆರೆದರಾಗಲೆ ಭೂಸುರರು ಗುರು- । ಚರಣಕಭಿಷೇಕವನು ತೀರಿಸಿ- । ದರು ಕಣಾ ವಿಧಿಪೂರ್ವಕದಿ ಕೇಳುದ್ರಸೂಕ್ತದಲಿ ॥
ಪರಿಪರಿಯ ತೀರ್ಥೋಪಚಾರದಿ । ಗುರುವರಗೆ ಪೂಜೆಯ ಸಮರ್ಪಿಸಿ- । ದರು ಮಹಾ ಭಕ್ತಿಯಲಿ ಷೋಡಶವಿಧಿಯಲಾ ದ್ವಿಜರು ॥72॥

ಅನಿತರೊಳಗಾ ಪ್ರೇತ ತಂದರು । ಸನುಮುಖದಿ ಕೇಳಿಟ್ಟರದನಾ । ವಿನಯದಿಂದಾಜ್ಞೆಯನು ಕೊಟ್ಟನು ಭಕ್ತ ಜನರಿಂಗೆ ॥
ಎಣಿಸ ಬೇಡಿರಿ ಸಂಶಯನ ಶವ । ವನು ಬಿಡಿಸಿ ನೀವೇಕ ಭಾವದಿ । ತನುವ ಪ್ರೋಕ್ಷಿಸಿರೀಗ ತೀರ್ಥದಲೆಂದನಾ ಗುರುವು ॥73॥

ಗುರುನಿರೋಪದಿ ಬ್ರಾಹ್ಮಣರು ಗುರು- । ಚರಣತೀರ್ಥದಿ ಶವವನೆಲ್ಲವ । ಪರಮ ಭಕ್ತಿಯಲಾಗ ಪ್ರೋಕ್ಷಿಸಿದರು ವಿಧಾನದಲಿ ॥
ಗುರುವರನು ಪೀಯೂಷದ ದೃಷ್ಟಿಯ । ತಿರುಗಿಸಿದನಾ ಪ್ರೇತದೇಹದೊ- । ಳರಗಳಿಗೆಯಲಿ ಶವಕೆ ಸಂಜೀವನವ ಕೊಟ್ಟಂತೆ ॥74॥

ಎದ್ದು ಕೂತಿತು ರಭಸದಲಿ ತಾ-। ನಿದ್ದೆ ಬತ್ತಲೆಯೆಂದು ಲಜ್ಜೆಯೊ-। ಳಿದ್ದನವ ವಸ್ತ್ರವನು ವೇಷ್ಟಿಸಿ ಬಿಟ್ಟಿತಾ ಸ್ಥಾನ ॥
ನಿದ್ದೆಯತಿಶಯ ಬಿತ್ತು ಯೆನ್ನನು । ಯೆದ್ದು ಕೂಡಿಸಲಿಲ್ಲವೇತಕೆ । ಬುದ್ಧಿ ಗೆಟ್ಟೆಯೊ ಯೆನುತ ಭಾರ್ಯೆಗೆ ಸಿಟ್ಟು ಮಾಡಿದನು ॥75॥

ಎಲ್ಲಿಗೆನ್ನನು ತಂದೆ ಯತಿ ಯಾ- । ಕಿಲ್ಲಿ ಬಂದಿಹನಿಲ್ಲಿ ಕೂಡಿದ । ರೆಲ್ಲರೀಪರಿ ನೋಳ್ಪರೇನಿದು ಗಾರುಡೀಯಾಟಾ ? ॥
ಮೆಲ್ಲಮೆಲ್ಲನೆ ಹೇಳೆನುತ ನಿಜ- । ವಲ್ಲಭೆಯ ಬಿನ್ನೈಸಲಾಕೆಯು । ಎಲ್ಲವನು ವಿಸ್ತರಿಸಿ ಪೇಳ್ದಳು ಗುರುಕೃಪಾಮಹಿಮಾ ॥76॥

ಸತಿಪತಿಯರಾಕ್ಷಣದೊಳೆದ್ದರು । ಯತಿವರನ ಚರಣದಲಿ ತಲೆಗಳ- । ನತಿವಿನಯದಲಿ ಭಾವಭಕುತಿಯೊಳಿಟ್ಟರೇನೆಂಬೆ ॥
ಸ್ತುತಿಸಲಾರಂಭಿಸಿದರಾ ದಂ- । ಪತಿಗಳುತ್ಸಹವೆಂತು ಬಣ್ಣಿಪೆ । ಮತಿಯು ಕುಂಠಿತವಾಯ್ತು ನೆರೆದಾ ನಾಗರಿಕರಿಂಗೆ ॥77॥

ಪಾಪರೂಪಿಗಳಾವು ದುಸ್ತರ । ಪಾಪವಾಚರಿಸಿದೆವು ಜನ್ಮದಿ । ಪಾಪಕರ್ಮದೊಳಾಯು ಜನ್ಮ ವು ದೇಹ ಪಾಪಮಯಾ ॥
ಪಾಪಸಾಗರದಲ್ಲಿ ಮುಳುಗಿದ । ತಾಪದಿಂ ಬೆಂಡಾದ ಯೆಮ್ಮನು । ಕೋಪವಿಲ್ಲದೆ ರಕ್ಷಿಸಿದೆಯೋ ಗುರುಕೃಪಾನಿಧಿಯೆ ॥78॥

ಸಕಲ ಸಚರಾಚರಕೆ ನೀರ । ಕ್ಷಕನೆನುತ ನಿಗಮಗಳು ಪೇಳ್ವವು । ನಿಖಿಳ ಲೋಕದಿ ಕೀರ್ತಿ ಶರಣಾಗತರವಶನೆಂದು ॥
ಬಕುತರನು ರಕ್ಷಿಸುವ ಕಾರಣ । ಯುಕುತಿಯಲಿ ನರದೇಹ ಧರಿಸುತ । ಪ್ರಕಟನಾದೆಯೊ ಗಾಣಗಾಪುರದಲ್ಲಿ ಲೀಲೆಯಲಿ ॥79॥

ತ್ರಾಹಿ ತ್ರಾಹಿ ಜಗದ್ಗುರುವೆ ನೀ । ತ್ರಾಹಿ ತ್ರೈಮೂರುತಿಯೆ ಯೆಮ್ಮನು । ತ್ರಾಹಿ ವಿಶ್ವಾಧಾರ ಸಗುಣಾಕಾರ ಗುರುರಾಯಾ ॥
ತ್ರಾಹಿ ನೀನು ಪರಾತ್ಪರನು ನಿಜ । ತ್ರಾಹಿ ತ್ರಾಹಿ ಕೃಪಾನಿಧಿಯೆ । ನೀ ತ್ರಾಹಿ ಭಕ್ತರ ಕಾಮಧೇನುವೆ ತ್ರಾಹಿ ಗುರುರಾಯಾ ॥80॥

ಗುರುವೆ ನೀ ಶಂಕರ ಸದಾಶಿವ । ಧರೆಯೊಳಗೆ ನರರೂಪ ಧರಿಸಿಯೆ । ಶರಣರಕ್ಷಕನಾಗಿ ಬಂದಿಯ ಮಹಿಮೇ ನಾನರಿಯೆ ॥
ಚರಣ ನಿನ್ನದು ಪರಮ ಪಾವನ । ದುರಿತಹರಣ ಪಿನಾಕಪಾಣಿಯೆ । ಶರಣು ಶರಣೆನ್ನುವೆನು ನಿನ್ನಯ ಪಾದಪಂಕಜಕೆ ॥81॥

ಜ್ಞಾನಮೂರುತಿ ನೀನು ನಾನ । ಜ್ಞಾನಕೂಪದ ಮಂಡುಕನು ಯೆನ । ಗೇನು ತಿಳಿವುದು ಸಾಕು ಮಾಡೀ ಜನನ ಮರಣವನು ॥
ನೀನು ಮನದಿಚ್ಛೆಯಲಿ ವಿಶ್ವವ । ನ್ಯೂನವಿಲ್ಲದೆ ಸೃಷ್ಟಿಸುವೆ ನಿನ- । ಗೇನ ಪೇಳ್ವರು ವೇದಗಳು ತಾವರಿಯೆವೆನ್ನುವರು ॥82॥

ನೀನು ನಿರ್ಮಲ ನಿಷ್ಕಳಂಕನು । ನಾನು ನಿನ್ನೊಳು ಕಾಣೆ ಕೋಪವ । ನೀನು ಮಹದಾನಂದಮೂರುತಿ ಬಕುತರಿಗೆ ಸುಗತಿ ॥
ಧ್ಯಾನವೀಪರಿ ಯೆನ್ನ ಕಣ್ಣಿಗೆ । ಕಾಣುತಿಹುದಚ್ಚರಿಯೆ ಕ್ರೋಧದ । ಮಾನವನು ನಾನರಿಯೆನೇ ಸುಡುವುದು ಜಗತ್ರಯವಾ ॥83॥

ಕರುಣ ಸಾಗರ ಶರಣ ರಕ್ಷಕ । ಬಿರುದು ನಿನ್ನದು ಗುರುವರನೆ ನೀ- । ನರಿತು ಕ್ಷಮಿಸಲು ಬೇಕು ತಪ್ಪುಗಳೆನ್ನ ಕರುಣದಲಿ ॥
ಗುರುವೆ ಕಲ್ಪದ ತರುವೆ ನಿನ್ನೊಳು । ಬರುವೆ ನೆರಳಿನ ತೆರದೊಳೆನ್ನನು । ಕರುಣದಿಂದುದ್ಧರಿಸು ತಾಯಿಯ ತೆರದಿ ಗುರುರಾಯಾ ॥84॥

ಗುರುವರನು ಕೇಳಿದನು ಸ್ತುತಿಯನು । ಹರಿಸಿದನು ಮೇಣವರ ಹರುಷದಿ । ದುರಿತವೆಲ್ಲವು ನಾಶವಾಯಿತು ಪುತ್ರರಷ್ಟಕರು ॥
ಬರುವರೈ ನಿಮ್ಮ ದರದಲಿ ನೋ- । ಳ್ವರಿ ಸಕಲಸೌಭಾಗ್ಯವಷ್ಟೈ । ಶ್ವರಿಯ ಲಭಿಸುವಿರೆಂದನಾ ಗುರು ದಂಪತಿಯರಿಂಗೆ ॥85॥

ಬಿಡಿ ಬಿಡಿರಿ ಸಂದೇಹವನು ನೀವ್ । ಪಡೆಯುವಿರಿ ಪುರುಷಾರ್ಥ ನಾಲ್ಕನು । ನಡಿಯಿರೈ ನಿಮ್ಮೂರಿಗೀಕ್ಷಣ ಭಾಗ್ಯವುದಯಿಸಿತು ॥
ನುಡಿಯ ಕೇಳ್ದಾ ನೆರೆದ ಮಾನದ । ಗಡಣ ಜಯಜಯಕಾರ ಮಾಡಿತು । ಗಡಬಡಿಸಿತ್ತೈ ಸಕಲಜನ ಸಮುದಾಯ ಚೋದ್ಯದಲಿ ॥86॥

ಕೆಲವರು ಸಾಷ್ಟಾಂಗ ಪ್ರಣಾಮದಿ । ಕೆಲವರು ನಾಮಸ್ಮರಣ ಭಜನದಿ । ಕೆಲವರು ಗಾಯನ ಕೆಲವರು ನೃತ್ಯದಿ ಗುರುವ ಸ್ತುತಿಸಿದರು ॥
ತಿಳಿಯ ದೋರ್ವನು ಗುರುಮಹಿಮೆಯನು ಕೊಳುತ । ತರ್ಕವ ಮನದಿ ಕೆಳ್ದನು । ತಿಳಿಸಿರೆನಗೀ ಚೋದ್ಯತತ್ವದ ಸತ್ಯ ಮಿಥ್ಯತೆಯಾ ॥87॥

ಭಾಲಲಿಖಿತವು ತಪ್ಪಲಾರದು । ಹೇಳುವವು ನಿಗಮಾಗಮಂಗಳು । ಯೇಳುತಿದೆ ಸಂಶಯವು ದ್ವಿಜನಿವ ಸತ್ತು ಬದುಕಿದನು ॥
ಹೇಳಿರೆನಗೀ ದ್ವಿಜನು ಸತ್ತವ । ನೇಳುತಿಹ ಪರಿ ಯೇನು ಯಿವನಿಗೆ । ಭಾಲಲಿಖಿತವು ತಪ್ಪಿತಲ್ಲಾ ತತ್ವವೇನಿಹುದು ॥88॥

ನಸುನಗುತ ಗುರುವೆಂದನಾಕ್ಷಣ । ಪುಸಿಯಹುದೆ ವಿಧಿಲಿಖಿತ ನಾನಾ । ಯಸದಿ ಬ್ರಹ್ಮನ ಬೇಡಿ ಸಾಲವ ತಂದೆನಾಯುಷನಾ ॥
ನುಸುಳಿ ಮುಂದಿನಜನ್ಮ ಬರಲಾ । ಯುಷವು ಕರ್ಮ್ಮಾಗುವದು ಸತಿಯಳ । ನೊಸಲಕುಂಕುಮ ಕಾಯ್ದುವದಕೆ ನಾಮಾಡಿದೆನು ಹದನಾ ॥89॥

ಕೇಳಿ ವಿಸ್ಮಿತರಾದರೆಲ್ಲರು । ತಾಳಿದರು ಸಂತಸವ ಗುರುವಿನ । ಲೀಲೆಯನು ನೆನೆನೆನೆದು ಮನೆಗೈತಂದರವರೆಲ್ಲಾ ॥
ಬಾಲೆ ಯಾಪತಿಸಹಿತ ಹರುಷವ । ತಾಳಿ ಸಂಗಮದಲ್ಲಿ ಸ್ನಾನವ । ಲೀಲೆಯಲಿ ಮಾಡಿದರು ದಾನವನಿತ್ತರಖಿಳಧನಾ ॥90॥

ತರಣಿಯಸ್ತಾಚಲಕೆ ನಡೆಯಲು । ಮರಳಿ ಬಂದರು ಮಠಕೆ ಗುರುವಿನ । ಚರಣ ಕಭಿವಂದಿಸಿದರೈ ತಾವ್ ಭಾವಭಕುತಿಯಲಿ ॥
ಪರಿಪರಿಯ ಪೂಜೋಪಚಾರವ । ಗುರುವಿಗರ್ಪಿಸುತಾರತಿಯ ಸಾ । ದರದಿ ಬೆಳಗಿದರವರು ನಿರುಪಮ ಭಾವಭಕುತಿಯಲಿ ॥91॥

ಕಾಲನನು ಗೆಲ್ಲುವನು ಶ್ರೀಗುರು । ಕಾಲ ಮಹಿಮೆಯನೇನ ಪೇಳ್ವೆ ಸು- । ಕಾಲವಲ್ಲಾ ಗುರುಕೃಪಾ ಸುತುಷಾರವುದುರಿದರೆ ॥
ಕಾಲಿಗೆರಗುವೆ ವಿಷ್ಣು ಸದ್ಗುರು- । ಕಾಲಿನೂಳಿಗ ಮಾಡಿದರೆ ಭವ । ಕಾಲುವೆಯಲಾ ಯಾರು ಸಾಗರವೆಂದು ಹೇಳುವರು ॥92॥

॥ ಅಧ್ಯಾಯ 32 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 33

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುವು ಕರುಣದಿ ದಂಪತಿಯರಿ- । ಗರುಹಿದನು ರುದ್ರಾಕ್ಷಮಹಿಮೆಯ । ತಿರುಗಿ ವೇಶ್ಯಾಸ್ತ್ರೀಯ ಪಾತಿವ್ರತ್ಯ ಮಹಿಮೆಯನು॥

ಗುರುಚರಣ ಮಹಿಮೆಯನು ನಾ ವಿ । ಸ್ತರಿಸಲಸಮನು ಹರಿಯು ವಕ್ಷದಿ । ಧರಿಸಿರುವ ಶ್ರೀಚರಣ ಬಲಿಯೊಳು ದಾನ ಬೇಡಿದರೆ ॥
ಧರೆಯನೆಲ್ಲವ ವ್ಯಾಪಿಸಿರುವಾ । ಚರಣ ಶಿಲೆಯನು ಬಾಲೆ ಮಾಡಿದ । ಚರಣ ಸಂಸ್ಕೃತಿಹರಣವಘಸಂಹರಣ ಗುರುಚರಣ ॥1॥

ಚರಣಕೆರಗುತ ನಾಮಧಾರಕ । ನರುಹಿದನು ಸಿದ್ಧನಿಗೆ ಭಾವದಿ । ಕರುಣದಿಂದೆನಗರುಹು ಮುಂದಿನ ಗುರುಕಥಾಮೃತವಾ ॥
ತೆರಳಿದನು ಗುರು ಮಠಕ ದಂಪತಿ । ಮರಳಿ ಬಂದರು ಗುರುಸಮೀಪದೊ । ಳರುಹು ನಂತರ ನಡೆದ ಸಂಗತಿಯನು ವಿನೋದದಲಿ ॥2॥

ಕೇಳುತಾ ನುಡಿ ಸಿದ್ಧನೆಂದನು । ಕೇಳು ಶಿಷ್ಯೋತ್ತಮನೆ ಪ್ರಾತಃ । ಕಾಲದಲಿ ಮರುದಿವಸ ದಂಪತಿ ಬಂದು ಗುರುಮಠಕೆ ॥
ಕಾಲಿಗೆರಗಿದರಾಗ ಗುರುವಿನ । ಮೇಳದಲಿ ಕುಳ್ಳಿರ್ದರಾ ಕ್ಷಣ । ಬಾಲೆಸತಿ ಬಿನ್ನೈಸಿದಳು ಶ್ರೀಗುರುವ ವಂದಿಸುತಾ ॥3॥

ಪುರುಷಮರಣದ ದಿವಸ ಯೋಗೀ । ಶ್ವರನು ರುದ್ರಾಕ್ಷದ ಮಹಿಮೆಯನು । ಕರುಣದಿಂದೆನಗರುಹಿ ಕೊಟ್ಟನು ನಾಲ್ಕು ರುದ್ರಾಕ್ಷ ॥
ಕೊರಳೊಳಗೆ ಕಿವಿಯಲ್ಲಿ ಕಟ್ಟುವ । ಪರಿಯ ಹೇಳುತ ಸಂಗಮದಿ ಗುರು- । ವರನ ದರುಶನ ಮಾಡಿ ಬರಬೇಕೆಂದು ನೇಮಿಸಿದಾ ॥4॥

ಗುರುಚರಣರುದ್ರಾಭಿಷೇಕದ । ಪರಮಪಾವನ ತೀರ್ಥವನು ಶವ- । ವಿರುವಸ್ಥಾನದಿ ತಂದು ಪ್ರೋಕ್ಷಿಸಬೇಕು ದೇಹದಲಿ ॥
ಅರುಹಿತೀ ಪರಿ ಯೋಗಿರಾಜನು । ತೆರಳಿದನು ಯೇನೆಂಬೆ ಯೋಗೀ । ಶ್ವರನು ಕೊಟ್ಟಿಹ ನಾಲ್ಕು ರುದ್ರಾಕ್ಷಗಳ ನೋಡೆಂದು ॥5॥

ಗುರುವರಗೆ ತೋರಿಸಲು ನಗುತಲಿ । ತರುಣಿಗುತ್ತರವಿತ್ತನಾಕ್ಷಣ । ಮರುಳೆ ನಾನದ ತಂದು ಕೊಟ್ಟೆನು ಯೋಗಿರೂಪದಲಿ ॥
ಕರಗಿತೆನ್ನಯ ಸದಯದಂತಃ । ಕರಣ ನಿನ್ನಯ ಭಕ್ತಿ ನೋಡುತ । ಲೊರೆವೆ ನಿನಗೆ ಸುಪುಣ್ಯ ರುದ್ರಾಕ್ಷದ ಮಹಿಮೆ ನಾನು ॥6॥

ಧರಣಿಯಲಿ ರುದ್ರಾಕ್ಷಮಹಿಮೆಯ- । ನರಿಯರಲ್ಲಾ ಮಹಿಮೆ ನಿರುಪಮ । ಸರಿಯ ಕಾಣೆನು ದೇವರೆಂದೇ ಭಾವಿಸಿದ ನೀನು ॥
ಧರಿಸಿದರೆ ರುದ್ರಾಕ್ಷವನು ಸಂ- । ಹರಿಪುದೈ ದುರಿತೌಘ ಭಕ್ತಿಯ- । ಲಿರಲಭಕ್ತಿಯಲಿರಲಿ ಸಂಶಯವಿಲ್ಲವಿದಕಿನ್ನು ॥7॥

ಧರಿಸಿದರೆ ಸಾವಿರದ ಮಾಲೆಯ । ಹರನ ಸಮನಹನವನು ವಂದಿಸು- । ವರು ಸಮಸ್ತಸುರೇಶಮೊದಲಾ ದೇವತೆಗಳೆಲ್ಲಾ ॥
ದೊರೆಯದಿರೆ ಸಾವಿರವು ಷೋಡಶ । ಧರಿಸಬೇಕೈ ಭುಜಗಳಲಿ ಶಿಖೆ । ಗಿರಲಿ ಯೊಂದಿಪ್ಪತ್ತು ನಾಲುಕು ಕರಗಳಲಿ ಬೇಕು ॥8॥

ಇರಲಿ ಕಂಠಾಭರಣ ಮೂವ- । ತ್ತೆರಡರದು ಮಸ್ತಕದೊಳಷ್ಟೋ । ಇರಲಿ ಶ್ರವಣದ್ವಯಗಳಲಿ ದ್ವಾದಶದ ಮಾನದಲಿ ॥
ಧರಿಸಿದರೆ ರುದ್ರಾಕ್ಷವಷ್ಟೋ । ತ್ತರಶತದಮಾಲೆಯನು ಕಂಠದಿ । ಹರನಸುತಸಮನೆಂದು ತಿಳಿಯಾ ಮಾನವನ ನಿಜದಿ ॥9॥

ಮುತ್ತು ಹವಳಸ್ಫಟಿಕರೌಪ್ಯದಿ । ಮತ್ತೆ ವೈಡೂರ್ಯದಲಿ ಚಿನ್ನದಿ । ಬಿತ್ತರಿಸಿ ಮಾಲೆಯನು ಮಾಡಿದರುತ್ತ ಮೋತ್ತಮವು ॥
ವಿಸ್ತರಿಸಲಸದಳವು ಫಲವನು । ಭಕ್ತಿಯಲಿ ರುದ್ರಾಕ್ಷ ಧರಿಸಿದ- । ರೆತ್ತಿ ವೊಯ್ಯುವರವರ ಶಿವಲೋಕಕ್ಕೆ ಸದ್ಗತಿಗೆ ॥10॥

ಕರದೊಳಗೆ ರುದ್ರಾಕ್ಷಮಾಲೆಯ । ಧರಿಸಿ ಜಪಮಾಡಿದರೆ ಫಲವದು । ನಿರುಪಮವು ರುದ್ರಾಕ್ಷದಲಿ ಜ್ಞಾನೋದಯವು ನಿಜವು ॥
ಧರಿಸಿದರೆ ರುದ್ರಾಕ್ಷಮಾಲೆಯ । ಧರಿಸಿದರೆ ಭಸ್ಮ ತ್ರಿಪುಂಡ್ರವ । ನರಜನುಮದಲಿ ಬಂದು ಸಾರ್ಥಕವೇನು ನಾ ಕಾಣೆ ॥11॥

ಇಟ್ಟು ರುದ್ರಾಕ್ಷವನು ಶಿರದಲಿ । ಕಟ್ಟಿ ಕಿವಿಯಲಿ ಸ್ನಾನ ಮಾಡಲು । ಶ್ರೇಷ್ಠ ಗಂಗಾಸ್ನಾನಫಲದ ಸಮಾನ ಬಹುಪುಣ್ಯಾ ॥
ಇಟ್ಟು ರುದ್ರಾಕ್ಷವನು ಪೂಜೆಗೆ । ಬಿಟ್ಟರೈ ಜಲ ರುದ್ರಸೂಕ್ತದಿ । ಸೃಷ್ಟಿಗೀಶ್ವರ ರುದ್ರಪೂಜೆಗೆ ಸಮವೆನಿಸುತಿಹುದು ॥12॥

ಏಕ ಪಂಚೈಕಾದಶವು ಹದಿ- । ನಾಕು ಈ ಪರಿ ಮುಖಗಳಿರುವವು । ಲೋಕದಲಿ ರುದ್ರಾಕ್ಷ ಮುಖಗಳ ನೋಡಿ ಪರಿಕಿಸಲು ॥
ಬೇಕು ಉತ್ತಮ ಸಿಗದಿರಲು ನೀ- । ವೇಕ ಮನದಲಿ ಲಭಿಸಿರುವುದೇ । ಸಾಕೆನುತ ಧರಿಸಲ್ಕೆ ಅದೆ ಪುರುಷಾರ್ಥಸಾಧನವು ॥13॥

ಅರುಹುವೆನು ನಾನೊಂದು ಪೂರ್ವದ । ಚರಿತವನು ತ್ವರಿತದಲಿ ದುರಿತದ । ಹರಣವನು ಶ್ರವಣಕ್ಕೆ ಗಹನದ ಮಧುರಪಾನವನು ॥
ಧರೆಯೊಳಗೆ ಕಾಶ್ಮೀರ ದೇಶ ದೊ- । ಳರಸನಿದ್ದನು ಭದ್ರಸೇನನು । ಇರುವನವನಿಗೆ ಪುತ್ರನೋರ್ವ ಸುಭದ್ರನಾಮದಲಿ ॥14॥

ಅವನಿಪತಿಗಿಹ ಮಂತ್ರಿ ಮಂತ್ರಿಗೆ । ಕುವರನೋರ್ವನು ನಾಮ ತಾರಕ । ನಿವರೊಳಗೆ ಬಹುಸಖ್ಯ ಜನಿಸಿತು ಬಾಲತನದಿಂದಾ ॥
ಇವರಿಗೊಂದೇ ವಯವು ವಿದ್ಯೆಯು । ಹವಣಿಸಿತು ಕೇಳೊಂದು ಸ್ಥಾನದಿ । ಕುವರರಿಬ್ಬರು ಜ್ಞಾನವಂತರದೊಂದೆಮನದವರು ॥15॥

ಎರಡು ದೇಹಗಳೊಂದು ಮನವೀ । ತರುಣರಿಗೆ ವರ್ಧಿಸಿದರೀ ಪರಿ । ಹರನ ಪ್ರೇಮದ ಭಕ್ತರೈ ರುದ್ರಾಕ್ಷಭೂಷಣರು ॥
ಧರಿಸಿ ಭಸ್ಮ ತ್ರಿಪುಂಡ್ರ ಹಣೆಯಲಿ । ಯಿರಿಸಿ ತಿಲಕವ ಮೆರೆದರಾ ಶಿವ- । ಶರಣರೈ ತ್ಯಜಿಸಿದರು ದಿವ್ಯಾಭರಣಭೂಷಣವಾ ॥16॥

ಚಿನ್ನ ಹೊನ್ನನು ಮಣ್ಣಿನಂದದಿ । ಮನ್ನಿಸಿದರೈ ಯಾಕುಮಾರರು । ರನ್ನ ಚಿನ್ನಾಭರಣ ಕಬ್ಬಿಣವೆಂದು ತ್ಯಜಿಸುವರು ॥
ಮನ್ನಿಸರು ರುದ್ರಾಕ್ಷ ಹೊರತಿ । ನ್ನೊಂದು ವಸ್ತುವ ತಂದೆ ತಾಯ್ಗಳು । ಯತ್ನ ಮಾಡಲು ಕೇಳರವರೇನೆಂಬೆನದ್ಭುತವಾ ॥17॥

ಬಲುಮೆಯಲಿ ಚಿನ್ನಾಭರಣವನು । ತಿಳಿಸಿ ಕೊಟ್ಟರೆ ತಂದೆ ತಾಯ್ಗಳು । ನಲಿವಿನಿಂದದ ವಿಪ್ರರಿಗೆ ದಾನವನು ಮಾಡುವರು ॥
ಹಲವುದಿನವೀಪರಿಯಲಾಗಲು । ನಿಳಯಕೈ ತಂದನು ಪರಾಶರ । ನಿಳೆಯರಸ ಮನ್ನಿಸಿದಾತನ ಭಾವ ಭಕುತಿಯಲಿ ॥18॥

ಕರೆದು ಸಿಂಹಾಸನದೊಳಾ ಮುನಿ । ವರನ ಕೂಡ್ರಿಸಿ ವಿಧವಿಧದೊಳಾ- । ದರಿಸಿದನು ವಿಧಿಪೂರ್ವಕದಿ ನೃಪನಾ ಪರಾಶರನಾ ॥
ನರಪತಿಯು ಸಂತಸದಿ ಶ್ರೀಗುರು- । ವರನ ನೋಡುತ ಭಕ್ತಿಭಾವದಿ । ಕರಗಳನು ಜೋಡಿಸುತ ಬಿನ್ನೈಸಿದನು ದುಃಖವನು ॥19॥

ವರಮುನಿಯೆ ಹುಚ್ಚಾದರೆನ್ನ ಕು- । ವರನು ಮಂತ್ರಿಯ ಕುವರನಿಬ್ಬರು । ಧರಿಸುವರು ರುದ್ರಾಕ್ಷಮಾಲೆಯ ತ್ಯಜಿಪರಾಭರಣಾ ॥
ಕೊರಳೊಳಗೆ ರುದ್ರಾಕ್ಷಮಾಲೆಯು- । ಶಿರದೊಳದು ಮೇಣ್ಕಿವಿಯೊಳದು । ಭುಜ ಕರದೊಳದುರುದ್ರಾಕ್ಷಮಯವೇ ದೇಹವಾಗಿಹುದು ॥20॥

ತಿಳಿಯದವರಿಗೆನುತ್ತ ಪ್ರೇಮದಿ । ಕಲಿಸಿದರೆ ನಾ ಮಾತ ಕೇಳರು । ತೊಲಗುವರು ದಿವ್ಯಾಭರಣ ಭೂಷಣವ ಧಿಕ್ಕರಿಸಿ ॥
ಇಳೆಯ ಸುಖದುಪಯೋಗವಿರಲಾ । ಕಳದು ಕೂಡುವ ಜಾಣರೇಯಿವ । ರುಳಿವುಪಾಯವ ಪೇಳು ನಿನ್ನ ತ್ರಿಕಾಲಜ್ಞಾನಿಯಲಾ ॥21॥

ಅರಸನಾಡಿದ ನುಡಿಯ ಪಾರಾ- । ಶರನು ಕೇಳುತಲೆಂದನೀಪರಿ । ಚರಿತವಿಹುದು ವಿಚಿತ್ರ ನಿನ್ನ ಯ ಕುವರರಿಬ್ಬರದು ॥
ಪುರವು ನಂದಿಗ್ರಾಮವದರ । ಪರಮ ಲಾವಣ್ಯದಲಿ ಚಂದ್ರನ । ಸರಿಯೆನಿಪ ಸುಂದರಿಯು ವೇಶ್ಯೆಯು ಯಿದ್ದಳೈಯಲ್ಲಿ ॥22॥

ವರ್ಣಿಸಲು ನಾನೆಂತು ವೇಶ್ಯೆಯ । ಧಾನ್ಯ ಧನಸಂಪತ್ತು ಕಾಲಿಗೆ । ಚಿನ್ನ ಪಾದುಕೆ ವಿಧವಿಧದ ಭೂಷಣಗಳಿರುತಿಹವು ॥
ರತ್ನ ಜಡಿತವು ಮಂಚಕೆವು ಬಹು । ರತ್ನ ವಸ್ತ್ರಾಭರಣವೆಲ್ಲವು । ಯಿನ್ನು ಗೋಮಹಿಷಾದಿ ಸಂಪತ್ತಿಹುದು ನಿರುಪಮವು ॥23॥

ಗಂಧಕುಂಕುಮ ಕಸ್ತುರಿಯ ತಾ । ಚಂದದಿಂದಲಿ ಪೂಸಿ ಪುಷ್ಪಗ । ಳಿಂದ ಶೋಭಿತಳಾಗಿರುವಳೈ ಭೋಗಸಾಧನದಿ ॥
ಸುಂದರಿಯು ನವಯೌವ್ವನದ ಪರಿ । ಯಿಂದ ಮಾರನ ರತಿಗೆ ಪೋಲ್ವಳು । ಹಿಂದೆ ಹಾಕಿದ ಇಂದ್ರಭುವನದ ಗಣಿಕೆಯರನವಳು ॥24॥

ಗಣಿಕೆಯಾದರು ಜನ್ಮ ವಶದಲಿ । ಮನವಿಹುದು ಧರ್ಮಾರ್ಥಕರ್ಮದಿ । ಘನಪತಿವ್ರತೆಯಂತೆ ಶುದ್ಧಾಚಾರಭೂಷಿತಳು ॥
ಧನವ ವಸ್ತ್ರಾನ್ನಗಳ ದ್ವಿಜರಿಗೆ । ವಿನಯದಿಂದಲಿ ಕೊಟ್ಟು ಮನ್ನಿಸಿ । ಮನವ ಸಂತೈಸುವಳು ಶ್ರೀಹರಭಜನಪೂಜನದಿ ॥25॥
ಮನೆಯ ಮುಂದಿನ ಭಾಗದಲಿ ಬಹು । ಮಿನುಗುವದು ಮಂಟಪವು ನಾಟ್ಯದ । ವನಿತೆ ನಾನಾ ರತ್ನ ವಸ್ತ್ರದಿ ಶೋಭಿಸಿದಳದನು ॥
ದಿನದಿನಕೆ ಸಖಿಯರನು ಕೂಡಿಸಿ । ಮನುಮಥನ ಮದದಾನೆಯಂದದಿ । ಕುಣಿಯುತ್ತಿದ್ದಳು ನಾಟ್ಯ ಮಂಟಪದಲ್ಲಿ ಸರಸದಲಿ ॥26॥
ಗಣಿಕೆಯಾ ಮಂಟಪದಿ ಸಾಕಿದ । ಮನಕೆ ರಂಜನ ಕೊಡುವ ವಿಧವಿಧ । ಕುಣಿತದಲಿ ನಿಷ್ಣಾತವಿದ್ದವು ಮಂಗ ಕುಕ್ಕುಟವು ॥
ವನಿತೆ ರುದ್ರಾಕ್ಷದ ಸುಭೂಷಣ- । ವನು ಕೊಡಿಸಿದಳು ಪ್ರಾಣಿಗಳಿಗಾ । ವಿನಯದಿಂದಲಿ ನಾಟ್ಯವನು ಕಲಿಸಿದಳು ಮೇಣವಕೆ ॥27॥
ಸಂದವೀಪರಿ ಹಲವು ವರುಷಗ- । ಟೊಂದು ದಿನ ಶಿವವೃತ್ತಿನಾಮದ । ಬಂದನ್ಯೆ ಬಹುಧನಿಕ ವೈಶ್ಯನು ಗಣಿಕೆಯಿದ್ದೆಡೆಗೆ ॥
ಬಂಧುರದ ರುದ್ರಾಕ್ಷಮಾಲೆಗ । ಳಿಂದ ಭೂಷಿತತನುವು ಹಣೆಯಲಿ । ಚಂದದಿಂ ಧರಿಸಿದನು ಭಸ್ಮ ತ್ರಿಪುಂಡ್ರ ತಿಲಕವನು ॥28॥
ಬೆರಳಿನಲಿ ಬಲಗೈಯ ರಂಜಿಪ । ಮೆರೆವ ರತ್ನದ ಮಧ್ಯದಲಿ ರವಿ- । ಕಿರಣದಂದದಿ ರಂಜಿಸುವ ಲಿಂಗವನು ನೋಡಿದಳು ॥
ಹರುಷದಿಂದಾ ವೈಶ್ಯನನು ತಾ । ಕರೆದು ಭವನದೊಳಿರಿಸಿ ನೃತ್ಯದಿ । ಹರುಷವಿತ್ತಳು ಪರಿಪರಿಯ ಬಹುನಾಟ್ಯ ಕೋವಿದಳು ॥29॥
ಮೂಡಿ ಬರುತಿಹ ರವಿಕಿರಣದೋಲ್ । ನೋಡಿದಳು ವೈಶ್ಯನ ಕರದಲಿ ಸ- । ಗಾಢಲಿಂಗವ ಮಾಡಿದಳು ಮನ ತನಗೆ ಬೇಕೆನುತಾ ॥
ಬೇಡಿದಳು ದಾಸಿಯರ ಮುಖದಿಂ- । ದಾಡಿದಳು ಲಿಂಗವನು ಕೊಟ್ಟರೆ । ಬೇಡಿದುದ ನಾ ಕೊಡುವೆ ವೈಶ್ಯನಿಗೆಂದಳಾ ಗಣಿಕೆ ॥30॥
ಧನವ ಬೇಡಲು ಧನವ ಕೊಡುವೆನು । ತನುವ ಬೇಡಲು ತನುವ ಕೊಡುವೆನು । ವಿನಯದಿಂ ರತಿಸುಖದಿ ರಮಿಸುವೆ ಪೇಳಲಿಚ್ಛಿತವಾ ॥
ಅನುನಯದಿ ಕುಲಸ್ತ್ರೀಯ ತೆರದಲಿ । ಆನುಕರಿಸುವೆನು ಮೂರು ದಿವಸಕೆ । ಯೆನಗೆ ಲಿಂಗದಮೇಲೆ ಬಹಳಭಿಲಾಷೆ ಹುಟ್ಟಿಹುದು ॥31॥

ಈ ತೆರದ ಭಾಷಣವ ದಾಸಿಯ- । ರಾತನಿಗೆ ತಿಳಿಸಿದರು ವೈಶ್ಯನ । ಮಾತನಾಡಿಸಿ ವಿನಯದಿಂದಿಂಗಿತವ ನೋಡಿದರು ॥
ಮಾತನಾಲಿಸಿ ವೈಶ್ಯನೆಂದನು । ಪ್ರೀತಿಯಲಿ ನಾನೀವೆ ಲಿಂಗವ । ನಾತಳೋದರಿ ರತಿಸುಖದಿ ತೋಷಿಸಲು ಬೇಕೆನ್ನಾ ॥32॥

ಮೂರುದಿನ ಪರಿಯಂತ ಯೆನ್ನೊಳು । ಸೇರಿರಲು ಕುಲಸ್ತ್ರೀಯ ತೆರದಲಿ । ನಾರಿಮಣಿಗೀಲಿಂಗವನಾ ಕೊಡುವೆ ಹರುಷದಲಿ ॥
ಯಾರು ನಂಬುವರಿವರ ಕುಕುಲಾ- । ಚಾರವೇ ವ್ಯಭಿಚಾರ ವೇಶ್ಯಾ । ನಾರಿಯಾಗುವಳೇ ಪತಿವ್ರತೆ ನಂಬಲಾರೆನಲಾ ॥33॥

ಸ್ಥಿರಮನವ ನಾನರಿಯೆ ವೇಶ್ಯೆಗೆ । ನಿರತ ಕುಲದಾಚಾರವಗಣಿತ । ಪುರುಷರೊಳು ರತಿಕೇಳಿಯಲಿ ತತ್ಪರತೆ ತೋರಿಸುತಾ ॥
ಚರಿಸುವುದು ದುಷ್ಕರ್ಮವದರಿಂ । ಭರವಸವ ನಾನಿಡೆನು ವಾಕ್ಯದಿ । ಅರುಹಿರೆನ್ನೀ ಮಾತನೊಡತಿಗೆ ಯೆಂದನಾವೈಶ್ಯಾ ॥34॥

ವಾರವನಿತೆಯು ಕೇಳಿ ನುಡಿಯನು । ಭಾರಿಸಂತಸದಿಂದ ಪೇಳ್ದಳು । ಮೂರು ದಿನ ಪರಿಯಂತ ನಿನ್ನೊಳು ಧರ್ಮಸತಿಯಂತೆ ॥
ಸೇರುವೆನು ತನುಮನಧನದಿ ಮದ- । ನಾರಿಸಾಕಿಯು ರವಿಶಶಿಗಳಾ । ತಾರೆಗಳು ಯೆನಗಿರಲಿ ಸಾಕ್ಷಿಗಳೆಂದಳಾ ವೇಶ್ಯೆ ॥35॥

ಮನದಿ ಸಂತಸ ತಾಳಿ ವೈಶ್ಯನು । ಗಣಿಕೆಗಿತ್ತನು ದಿವ್ಯಲಿಂಗವ । ವನಿತೆ ಕೇಳೀ ಲಿಂಗವಿದು ಮತ್ಪ್ರಾಣತುಲ್ಯವಲಾ ॥
ವಿನಯದಿಂದಿದ ಜಪಿಸು ತಪ್ಪಿದ । ರೆನಗೆ ಪ್ರಾಣದ ಮೇಲೆ ಸಂಕಟ- । ವೆನುತಲೆಚ್ಚರವಿತ್ತನಾ ಮೋದದಲಿ ವಾಣಿಜನು ॥36॥

ಜತನವನು ಮಾಡುವೆನು ಲಿಂಗವ । ನತಿಹುಶಾರಿಯಲಿಂದಲೆಂದಾ । ಪತಿಕರಿಸಿದಳು ಲಿಂಗವನು ಬಹು ಸಂತಸದೊಳಾಗಾ ॥
ಗತಿಸಲಸ್ತಾಚಲಕೆ ರವಿಯಾ- । ಸತಿಪತಿಯರಾಬಿಟ್ಟು ಮಂಟಪ । ಗತಿಸಿದರು ಮಂದಿರಕೆ ಪರಮಪ್ರೀತಿಯಲಿಯವರು ॥37॥

ರತಿಸುಖದ ಕಾಲದಲಿ ಲಿಂಗವ । ಜತನದಿಂದಿಡಬೇಕು ದೂರದಿ । ಸತತ ಮರೆಯದೆ ವರ್ತಿಸೀ ಪರಿಯೆಂದನಾ ವೈಶ್ಯ ॥
ಸತಿಯು ಕೇಳಿ ವಚನವನು ತಾ- । ನತಿಜತನದಿಂ ಲಿಂಗ ತೆಗೆದಳು । ಪತಿಯನುಜ್ಞೆಯಲಿಟ್ಟಳದನಾ ನಾಟ್ಯ ಮಂಟಪದಿ ॥38॥

ಕೃತಕಸತಿಪತಿಯಿವರು ಭವದಲಿ । ರತಿಸುಖದೊಳಿರಲಿತ್ತ ಭಸ್ಮೀ । ಕೃತವದಾಯಿತು ಮಂಟಪವು ಬೆಂಕಿಯಲಿ ಯೇನೆಂಬೆ ॥
ಯತನ ನಿಷ್ಫಲವಾಯಿತೆಲ್ಲರ । ಮತಿಯು ವೈಶ್ಯನು ಮೂರ್ಛೆಬಿದ್ದನು । ಗತಿಸಿತೆನ್ನಯ ಪ್ರಾಣಲಿಂಗವೆನುತ್ತ ಶೋಕದಲಿ ॥39॥
ದಗ್ಧವಾದವು ನಾಟ್ಯ ಭವನದೊ । ಳಿದ್ದ ಮರ್ಕಟ ಕುಕ್ಕುಟಗಳಾ । ದಗ್ಧವಾದವು ಬೆಂಕಿಯಲಿ ಕೇಳೆಲ್ಲ ಪ್ರಾಣಿಗಳು ॥
ಬಿದ್ದಡಾಭೂಮಿಯಲಿ ವೈಶ್ಯನು । ಯೆದ್ದು ಕ್ಷಣದಲಿ ಶೋಕಮಾಡುತ । ಸಿದ್ಧನಾದನು ನಾನು ಪ್ರಾಣತ್ಯಾಗ ಮಾಡುವರೆ ॥40॥
ಕಾಷ್ಠ ಭಾರವ ತಂದು ಬೆಂಕಿಯ । ನಿಟ್ಟು ಜ್ವಾಲೆಯನೆಬ್ಬಿಸಿದನು । ನಷ್ಟವಾಯಿತು ಪ್ರಾಣಲಿಂಗವು ಸುಟ್ಟು ಹೋಯಿತಲಾ ॥
ಭ್ರಷ್ಟನಾದೆನೆನುತ್ತ ಲೊದರುತ । ಸೆಟ್ಟಿಯಾಕ್ಷಣ ಹೊಗಲು ಬೆಂಕಿಯ- । ನೆಷ್ಟು ಬಣ್ಣಿಪೆ ವೇಶ್ಯೆ ಮಾಡಿದ ದುಃಖಶೋಕವನು ॥41॥
ಏನಿದಾಯಿತು ಚೋದ್ಯ ವೈಶ್ಯನು । ಪ್ರಾಣನಾಥನು ಸಾಯಲಿವನೊಳು । ಪ್ರಾಣವನು ತ್ಯಜಿಸುವುದು ಸತಿಯಳ ಧರ್ಮವಿಹುದಲ್ಲಾ ॥
ತಾನು ಸತಿಯಳ ತೆರದಿ ಸಾಯುವೆ । ದಾನಧರ್ಮವ ಮಾಳ್ಪೆನೆಂದಾ । ಮಾನಿನಿಯು ವಿಪ್ರರನು ಕರೆದಳು ಸಾಯ ಬಯಸಿದಳು ॥42॥
ಕರೆದು ವಸ್ತ್ರಾಭರಣಗಳ ಭೂ- । ಸುರರಿಗಿತ್ತಳು ಪತಿಯೊಡನೆ ತಾ । ತೆರಳಿದಳು ಸಹಗಮನತತ್ಪರಳಾಗಿ ಹರುಷದಲಿ ॥
ಕರೆದು ತನ್ನಯ ಬಾಂಧವನನೀ । ತೆರದಿ ಪೇಳ್ದಳು ನಾನು ಪೋಪೆನು । ಕರುಣಿಸುವುದು ನಿರೋಪವೆಂದಳು ಕಾಲಿಗೆರಗುತಲಿ ॥43॥
ನುಡಿಯ ಕೇಳುತ ಬಂಧುವರ್ಗವು । ನುಡಿದರಾಕೆಗೆ ಮೂರ್ಖಳೆಂದೊಡ- । ಬಡಿಸಲೆತ್ನಿಸಿದರು ಸಗಾಢದಿ ಪೇಳ್ವಿರೀ ಹದನಾ ॥
ಒಡೆಯನೊಬ್ಬನೆ? ವಾರವನಿತೆಗೆ । ಪೊದದಿಯಲಿ ನೂರಾರು ಯಿರುವರು । ಕೊಡವೆ ಯೇತಕೆ ವ್ಯರ್ಥದಲಿ ನಿನ್ನೊಡಲ ಬೆಂಕಿಯಲಿ ॥44॥
ಕೇಳದೀನುಡಿ ಬಂಧುಗಳಿಗಾ । ಬಾಲೆ ನುಡಿದಳು ವೈಶ್ಯನನು ನಾ- । ಲೀಲೆಯಿಂದಲಿ ವರಿಸಿದೆನು ಚಂದ್ರಾರ್ಕರೇ ಸಾಕ್ಷಿ ॥
ಬಾಳಲಾರೆನು ಪತಿಯ ಬಿಟ್ಟೀ । ತಾಳಲಾರೆನು ವಚನಭ್ರಷ್ಟತೆ । ಭಾಲಲೋಚನನಾಣೆಯಿಟ್ಟೀ ಪತಿಯ ವರಿಸಿದೆನು ॥45॥

ಮೂರು ದಿನ ಪರಿಯಂತ ನಾನೀ । ನಾರಿ ವೈಶ್ಯನ ಧರ್ಮಪತ್ನಿಯು । ಮೀರಲಾಯುಷವವನಿಗರ್ಪಿಪೆನೆನ್ನ ಪ್ರಾಣವನು ॥
ಯಾರಿಗೀ ಸಂಸಾರ ಶಾಶ್ವತ । ಮೂರುದಿನವೇ ಬಾಳ್ವೆ ಧರೆಯಲಿ । ಮೀರಲಾರೆನು ವಚನ ಸತಿಯಳ ಧರ್ಮವಾಚರಿಪೆ ॥46॥

ಧನ್ಯಳಾದೆನು ನಾನು ಸತಿಯಳ । ಪುಣ್ಯ ಸಿಕ್ಕಿತು ಯೆನಗೆ ಈ ದಿನ । ಧನ್ಯರಾದರು ಪೂರ್ವಜರು ಮೂರೇಳು ಪೀಳಿಗೆಯ ॥
ಬನ್ನಿರೆನ್ನೊಡನೀಗ ನಿಮಗೀ । ಪುಣ್ಯ ಬರುವುದು ಅಶ್ವಮೇಧದ । ಬನ್ನಿರೆನ್ನಯ ಬಂಧುಬಾಂಧವರುಗಳೇ ಚಂದದಲಿ ॥47॥

ಹರುಷದಿಂದಲಿ ಯಗ್ನಿ ಕುಂಡಕ । ತೆರಳಿದರು ಭಕ್ತಿಯಲಿ ಸರ್ವರ । ನಿರಿಸಿ ಸುತ್ತಲು ತಾನು ಸೂರ್ಯಗೆ ಕರವ ಜೋಡಿಸುತಾ ॥
ತ್ವರಿತದಿಂ ಕುಂಡಪ್ರದಕ್ಷಿಣೆ । ವಿರಚಿಸುತ ತಾನೇಕಭಾವದಿ । ಸ್ಮರಿಸಿ ಪತಿಯನು ಧುಮುಕಿದಳು ಕುಂಡದಲಿ ತತ್ ಕ್ಷಣಕೆ ॥48॥

ಚಿತ್ರವಾಯಿತು ಶ್ರೀಸದಾಶಿವ । ನೆತ್ತಿದನು ಮೇಲಕ್ಕೆ ವೇಶ್ಯಯ । ಚಿತ್ರವಾಯಿತು ಬೆಂಕಿ ಶೀತಲವಾಯ್ತು ತತ್ಕ್ಷಣದಿ ॥
ಭಕ್ತವತ್ಸಲ ಹತ್ತು ಭುಜದಪ- । ವಿತ್ರ ಭಸ್ಮಾಂಕಿತ ಜಟಾಧರ । ನೆತ್ತಿದನು ಮೇಲಕ್ಕೆ ವೇಶ್ಯಳ ಮೆಚ್ಚಿ ಶಂಕರನು ॥49॥

ಹರನು ಗಂಗಾಧರನು ವೇಶ್ಯಳಿ- । ಗರುಹಿದನು ನಾ ನಿನ್ನ ಸತ್ವವ । ಪರಿಕಿಸಿದೆ ನಾ ವೈಶ್ಯರೂಪದಿ ಬಂದವನು ನಾನೇ ॥
ಮರಳಿ ಮಂಟಪ ಸುಟ್ಟು ನಿನ್ನನು । ಪರಿಕಿಸಲು ನಾ ಹೊಕ್ಕೆ ನಗ್ನಿಯ । ತರುಣಿ ಮೆಚ್ಚಿದೆ ನಿಮಗೆ ಕೊಡುವೆನು ಬೇಡಿದುದನೀಗಾ ॥50॥

ನಾಗಭೂಷಣ ನಿನ್ನ ದರ್ಶನ । ವಾಗೆ ಬೇಡುವದೇನು ವರವನು । ಭೋಗದಾಸೆಯು ತೀರಿತೆನ್ನದು ಬೇಡವೀಜನ್ಮ ॥
ಯೋಗಿರಾಜನೆ ನಿನ್ನ ಚರಣಪ- । ರಾಗ ಭೋಗಿಪ ಭೃಂಗವೇ ನಾ- । ನಾಗಿ ರಂಜಿಸಲೆಂದು ಬೇಡುವೆನೊಲ್ಲೆ ಬೇರಿನ್ನು ॥51॥

ದಾಸದಾಸಿಯರಿಗತಿ ದಯಸಿ ಸ- । ದಾಶಿವನೆ ಬಾಂಧವರಿಗಾ ಕೈ । ಲಾಸಪದ ವೀಯುವುದು ಬಿಡಿಸಿ ಜನ್ಮ ಮರಣವನು ॥
ಈಶ ನಿನ್ನಯ ಚರಣ ಸೇವೆಯ । ದಾಸ್ಯತನವನು ಕೊಟ್ಟು ಸಲಹೈ । ಈಸು ಬೇಡವೆ ಮುಕ್ತಿಯನು ಕೊಡು ಬಂಧುವರ್ಗಕ್ಕೆ ॥52॥

ಕೇಳಿ ವೇಶ್ಯೆಯ ವಚನ ಕರುಣದಿ । ಭಾಳನೇತ್ರನು ಸಕಲರನು ಕರೆ- । ದೋಲಗದಿ ಸಾಮೀಪ್ಯ ಮುಕ್ತಿಯನಿತ್ತನೆಲ್ಲರಿಗೆ ॥
ಕೋಳಿ ಮರ್ಕಟ ನಾಟ್ಯ ಮಂಟಪ । ಜ್ವಾಲೆಯಲಿ ಮೃತಪಟ್ಟರೀಭವ । ಜಾಲದಲಿ ಜನ್ಮಿಸಿದರೀ ಪಟ್ಟಣದಿ ಭಾಗ್ಯದಲಿ ॥53॥

ನಿನ್ನ ಮಗನಾ ಮರ್ಕಟನು ಮೇ- । ಣಿನ್ನು ಮಂತ್ರಿಯ ಮಗನು ಕುಕ್ಕುಟ । ಧನ್ಯರೈ ರುದ್ರಾಕ್ಷಧಾರಣದಿಂದ ಜನಿಸಿದರು ॥
ಚಿನ್ನವನು ತ್ಯಜಿಸುವರು ಶಂಕರ । ನನ್ನು ಪೂಜಿಸುತಿಹರು ಗುಣಸಂ- । ಪನ್ನರೈ ರುದ್ರಾಕ್ಷ ಧರಿಪರು ಪೂರ್ವಸಂಸ್ಕಾರ ॥54॥

ತಿಳಿಯದಜ್ಞಾನದಲಿ ತಾ ಕೊರ- । ಳೊಳಗೆ ರುದ್ರಾಕ್ಷವನು ಧರಿಸಿದ । ಫಲವು ನಿನ್ನುದರದಲಿ ಜನಿಸುತ ರಾಜಭೋಗವಿದು ॥
ತಿಳಿದು ಜ್ಞಾನದಿ ಧರಿಸಿದರೆ ಕೊರ- । ಳೊಳಗೆ ರುದ್ರಾಕ್ಷವನು ನಿರುಪಮ । ಫಲವಲಾ ಮಿತಿಯಿಲ್ಲ ಪುಣ್ಯಕೆ ಬೇಡ ಸಂಶಯವ ॥55॥

ಗುರುವರನು ದಂಪತಿಗೆ ಕೇಳೀ । ಪರಿಯ ಪೇಳ್ದನು ಋಷಿ ಪರಾಶರ । ನರುಹಿದನು ರುದ್ರಾಕ್ಷಮಹಿಮೆಯ ಜನರು ತಿಳಿವಂತೆ ॥
ಪರಮಪಾವನ ಪುಣ್ಯ ಕಥೆಯಿದು । ಧರಿಸಿ ಭಕ್ತಿಯ ಕೇಳಿದರೆ ಶಂ । ಕರನು ಮೆಚ್ಚುವನೀವ ಮುಕ್ತಿಯ ವಿಷ್ಣುವಚನವಿದು ॥56॥

॥ ಅಧ್ಯಾಯ 33 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 34

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥
॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥
॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುವು ರುದ್ರಾಧ್ಯಾಯ ಮಹಿಮೆಯ । ನರುಹಿದನು ದಂಪತಿಯರಿಂಗಾ । ಹರನ ಮೃತ್ಯುಂಜಯನ ಮಹಿಮೆಯನರುಹಿದನು ಮುದದಿ॥

ಕಾಲ ಕಚ್ಚಲು ಕಾಮಸರ್ಪವು । ಮೇಲೆ ಮತ್ಸರಕ್ರೋಧಗಳ ವಿಷ- । ಜ್ವಾಲೆ ಯೇರುವುದಾಗುವದು ಮದಮೋಹದಾಟವದು ॥
ಮೇಲೆಯೊಂದೇ ಲೋಭವುಳಿದುದು । ಲೀಲೆಯಲಿ ತಲ್ಲೋಭ ಶ್ರೀಗುರು । ಕಾಲಸೇರಲು ಕಾಮಸರ್ಪದ ವಿಷವದಳಿಯುವುದು ॥1॥

ಅರಸನಿಗೆ ರುದ್ರಾಕ್ಷ ಮಹಿಮೆಯ- । ನರುಹಿದನು ಪ್ರೀತಿಯಲಿ ಪರಾ- । ಶರನು ಮಕ್ಕಳ ಪೂರ್ವಜನ್ಮದ ಸಕಲ ಚರಿತವನು ॥
ಕರವ ಜೋಡಿಸಿ ರಾಯನೆಂದನು । ಹರುಷವಾಯಿತು ಮನಕೆ ಹಿಂದಿನ । ಕರಣೆಯಿಂದಲಿ ಪ್ರಾಪ್ತವಾಯಿತು ರಾಜಪದಭೋಗಾ ॥2॥

ಜ್ಞಾನವಿಲ್ಲದೆ ಧರಿಸಿದರೆ ಈ । ಕ್ಷೋಣಿಯಲಿ ಕೇಳ್ರಾಜ್ಯ ಲಾಭವು । ಜ್ಞಾನದಲಿ ಧರಿಸಿಹರು ರುದ್ರಾಕ್ಷಗಳನೀಭವದಿ ॥
ಏನು ಫಲಸಂಪ್ರಾಪ್ತಿ ಯೆಂಬುದ । ನೀನರುಹಬೇಕೆನಗೆ ನೀ ಬಹು । ಜ್ಞಾನಿಯಾಗಿಹೆ ಮೂರು ಕಾಲವ ತಿಳಿದ ಗುರುವರ್ಯಾ ॥3॥

ಕೇಳಿ ರಾಯನ ವಚನವನು ಮುನಿ । ಪೇಳಿದನು ಸಂದೇಹವಿಲ್ಲದೆ । ಕೇಳು ರಾಜೇಶ್ವರನೆ ಮನಕದು ಸೌಖ್ಯದಾಯಕವು ॥
ಆಲಿಸಿದರೆನ್ನಯ ವಚನ ನಿ- । ರ್ಮೂಲ ಮಾಳ್ಪನು ದುಃಖಬೀಜವ । ತಾಳದಿರು ಶಂಕೆಯನು ನಿನ್ನಯ ಪುಣ್ಯವಗಣಿತವು ॥4॥

ಅರಸ ನಿನ್ನ ಕುಮಾರಗಾಯುಷ । ವರುಷ ಹದಿನೆರಡಿಹನವುಗಳೊಳ । ಗಿರುವವೇಳೇ ದಿವಸವೀದಿನದಿಂದ ನೋಡಿದರೆ ॥
ಮರಣವೆಂಟನೆದಿನಕೆ ನಿಶ್ಚಯ । ಬರುವದನನಿಗೆ ಪೂರ್ವಜನ್ಮದ । ಕರಣಿ ಈ ತೆರನಿಹುದು ಪ್ರತ್ಯುಪಚಾರ ನೀ ಮಾಡು ॥5॥

ಋಷಿಯ ದಾರುಣವಚನ ಕೇಳುತ । ವಸುಮತೀಶನು ಧೊಪ್ಪ ಬಿದ್ದನು । ಉಸುರಲಾರದೆ ನೋಡಿದನು ಪಾರಾಶರನ ಮುಖವಾ ॥
ಕುಶಲಮತಿ ನೀನಿದಕುಪಾಯವ- । ನುಸುರದಿರಲೆನ್ನ ಸುವತ್ಯಜಿಸುವೆ । ಬಸವಳಿದು ನಿನ್ನಡಿಯ ಹಿಡಿದೆನೆನುತ್ತ ನೃಪ ನುಡಿದಾ ॥6॥

ನರಪತಿಯ ವಚನವನು ಪಾರಾ- । ಶರನು ಕೇಳುತಲೆಂದ ನೃಪನೇ । ಮರುಳುತನ ಬಿಡು ಮಾರಹರನನು ಶರಣು ಹೋಗು ನೀನು ॥
ಹರನು ಮೃತ್ಯುಂಜಯನು ಸಂಕಟ । ಹರನು ಭಕ್ತೋದ್ಧರಣನೆಂದಾ । ಬಿರುದಿನವನು ವಿವೇಕದಲಿ ನೀ ಶರಣು ಹೋಗವನಾ ॥7॥

ಮೂರುಲೋಕಗಳೊಳಗೆ ದೇವನು । ಮಾರಹರನೊರ್ವನೆ ಪಿನಾಕಿಯು । ತಾರಕನು ಸ್ವಾನಂದರೂಪನು ನಿಷ್ಕಳಂಕನಲಾ ॥
ತೋರಿದನು ಬ್ರಹ್ಮ ಸ್ವರೂಪದಿ । ಚಾರು ವಿಶ್ವವ ಸೃಷ್ಟಿಸಿದನೈ । ಆರಜೋಗುಣದಿಂದ ರಂಜಿಸಿದನು ಯುಗಾದಿಯಲಿ ॥8॥

ವೇದನಾಲ್ಕನು ಬ್ರಹ್ಮನಿಗೆ ಶಿವ । ನಾದಿಯಲಿ ಕೊಟ್ಟಿರುವನದರಿಂ । ಮೇದಿನಿಯನೆಲ್ಲವನು ಬ್ರಹ್ಮನು ರಚಿಸಿದನು ಮುದದಿ ॥
ವೇದಸಾರದ ನಿಖಿಳ ಉಪನಿಷ-। ದಾದಿಯನು ತನ್ನೊಳಗೆ ಯಿಟ್ಟನು । ಬೋಧಪರವಾಗಿರುವ ರುದ್ರಾಧ್ಯಾಯವನು ಕೊಟ್ಟಾ ॥9॥

ಕೇಳು ರುದ್ರಾಧ್ಯಾಯಮಹಿಮೆಯ । ಭಾಳಲೋಚನನಾಜ್ಞೆಯಲಿ ವಿಧಿ- । ಲೀಲೆಯಿಂದಲಿ ರಚಿಸಿದನು ವಿಶ್ವವನು ಸರ್ವವನು ॥
ಕೇಳಿರದು ಪರತತ್ವವಿಹುದು ತ್ರಿ । ಶೂಲಿಯಾತ್ಮಕವೆಂದು ಜಗದಲಿ । ಕೇಳುತಿದೆ ಜಪ ಘೋಷವಿಂದಿನ ತನಕ ನಿಜವಾಗಿ ॥10॥

ಹರನಿರೋಪದೊಳಾ ಚತುರ್ಮುಖ । ವಿರಚಿಸಿದನೈ ವೇದ ದಕ್ಷಿಣ- । ಕಿರುವ ಮುಖದಿಂ ಬಂತು ಪಾವನ ಯಜುರ್ವೇದ ॥
ಅರುಹಿದನು ವಿಧಿಯತ್ರಿ ಮೊದಲಾ- । ಗಿರುವ ಋಷಿವರರಿಂಗೆ ಸುರರಿಂ- । ಗರುಹಿದರು ಮೇಣವರು ತಮ್ಮಯ ಶಿಷ್ಯವೃಂದಕ್ಕೆ ॥11॥

ಗುರುಪರಂಪರೆಯಿಂದಲೀ ಪರಿ । ಧರೆಯೊಳಗೆ ಪಸರಿಸಿತು ಮಂತ್ರವು । ಧರೆಯೊಳನ್ಯವನರಿಯೆ ತ್ವರಿತದಲಿ ಮೋಕ್ಷಸಾಧನವಾ ॥
ದುರಿತನಾಶಕವೀ ಸುಮಂತ್ರವು । ದೊರೆಯುವುದು ಪುರುಷಾರ್ಥವೆಲ್ಲವು । ಧರೆಯೊಳಗೆ ಸರಿ ಕಾಣೆನಿದಕಿನ್ನೇನು ವರ್ಣಿಸಲಿ ॥12॥

ಚಿತ್ತವಿಸು ಮೇಣೊಂದು ನೇಮವ । ನಿತ್ತನಾವಿಧಿ ಜಗಕೆ ಹರುಷದಿ । ಬಿತ್ತಿದಂದದಿ ಫಲದ ಪ್ರಾಪ್ತಿಯೆನುತ್ತ ನೇಮಿಸಿದಾ ॥
ಇತ್ತನವರೆಲ್ಲರಿಗೆ ಧರ್ಮಪ್ರ- । ವೃತ್ತಿ ನಿವೃತಿಯೆಂಬ ಸಾಧನ । ಬಿತ್ತಿದರೆ ಧರ್ಮವನು ಸೌಖ್ಯವಧರ್ಮದಿಂ ನರಕಾ ॥13॥

ಪುತ್ರರೈವರು ಧರ್ಮನಿಗೆ ಮದ- । ಮತ್ಸರರು ಮೇಣ್ ಕ್ರೋಧ ಲೋಭರು । ಮತ್ತೆ ಕಾಮನು ಯೆಂಬವರು ಪಂಚಾತ್ಮಕರು ತಿಳಿಯೆ ॥
ಇತ್ತ ನಿವರಿಗೆ ವಿಧಿಯು ನರಕದ । ಸತ್ತೆಯನು ಮೇಣಿವರ ರಾಜ್ಯದ । ಸೂತ್ರವನು ವಿಸ್ತರಿಸಲಾರೆನು ಚಿತ್ರತರವಾಯ್ತು ॥14॥

ಕಾಮನಿಗೆ ಸುತರಿಹರು ಸ್ತ್ರೀಯೊಳು । ಕಾಮುಕರು ಗುರುತಲ್ಪಗರು ಮೇ- । ಣಾ ಮದಿರೆಯಲಿ ತತ್ಪರರು ನರಕಕ್ಕೆ ಮಂತ್ರಿಗಳು ॥
ಭೂಮಿ ಸುರಹತ್ಯಕರು ಪಿತೃಗಳ । ನೇಮವಿಲ್ಲದೆ ಕೊಲ್ಲುವರು ಬಹು । ತಾಮಸರು ಕ್ರೋಧಾತ್ಮಜರು ನರಕಕ್ಕೆ ಸೇವಕರು ॥15॥

ಭೂಸುರರ ವಿತ್ತಾಪಹಾರಕ । ರಾಸುವರ್ಣಸ್ತೇಯಕರು ಕೇಳ್ । ಕೂಸುಗಳು ಲೋಭಕ್ಕೆ ಇವರಾ ನರಕಭಾಜನರು ॥
ಈಸುಪರಿಯಲಿ ಸೃಷ್ಟಿಸಿರುವಾ । ದೋಷಗಳಿಗೆ ನಿರೋಪ ಕೊಟ್ಟನು । ಲೇಸಿನಿಂದಲಿ ಭೂಮಿಯಲಿ ಸಾಮ್ರಾಜ್ಯ ಮಾಡಲಿಕೆ ॥16॥

ಇನ್ನು ಬೇಕಾದರೆ ಸಹಾಯವು । ಸಣ್ಣ ಪುಟ್ಟ ದುರಿತಗಳ ಕೊಡುವೆನು । ಪೂರ್ಣ ನಿಮ್ಮ ಸ್ವರಾಜ್ಯ ನರಕಕೆ ಯೆಂದನಾ ಯಮನು ॥
ಯೆನ್ನು ತೀಪರಿ ಯಮನ ವಚನಗ- । ಳನ್ನು ಕೇಳುತ ಮರ್ತ್ಯಲೋಕಕೆ । ಭಿನ್ನ ಭಿನ್ನ ಸ್ವರೂಪದಲ್ಲಿ ದುರಿತಗಳು ಬಂದವಲಾ ॥17॥

ಇಳೆಗಿಳಿದು ನೋಡಿದವು ಪಾತಕ । ಗಳು ವಿನೋದದಿ ಸರ್ವ ದಿಶೆದಿಶೆ- । ಗಳ ವಿಲೋಕಿಸಲಾಗ ತೋರಿತು ರುದ್ರಜಪಘೋಷಾ ॥
ಕಳವಳಿಸಿ ಹಿಂತಿರುಗಿದವು ಯಮ । ಬಳಿಗೆ ಬಂದವು ಬಿನ್ನವಿಸಿದವು । ಕಳೆಯಲಾರೆವು ಗಳಿಗೆಯೊಂದನು ಮರ್ತ್ಯಲೋಕದಲಿ ॥18॥

ಭೂತಳಕೆ ನಾವ್ ಪೋಗಿ ಬಂದೆವು । ಭೀತಿಯಾಯಿತು ಮನದಿ ನಿಮ್ಮಯ । ದೂತರಾಗಿಹೆವಿನ್ನು ಮಾಡುವದೇನು ಹೇಳುವುದು ॥
ಭೂತನಾಥನ ಭಕ್ತರೆಲ್ಲರು ಪ್ರೀತಿಯಿಂದಲಿ ರುದ್ರಜಪವನು । ತೀರ್ಥಕ್ಷೇತ್ರದಿ ಭುವನವನದಲಿ ಪಠಿಸುತಿರುವರಲಾ ॥19॥

ಗತಿ ನಮಗೆ ಮುಂದೇನು ಕಾಣೆವು । ಕ್ಷಿತಿಯಲೆಮಗಾಶ್ರಮವು ತೋರದು । ಮತಿಯು ಕುಂಠಿತವಾಯ್ತು ಕೇಳುತ ರುದ್ರಜಪಘೋಷಾ ॥
ಸತತ ಸುದುರಾಚಾರಿಯಾದನು । ಸ್ತುತಿಸಲವನಾ ರುದ್ರಜಪವನು । ಗತಿಸುವುದು ಪಾಪೌಘ ನಾವಿರಲಾರೆವು ಕೇಳಲ್ಲಿ ॥20॥

ಕಾಲಕೂಟಮಹಾವಿಷದಪರಿ । ತಾಳಲಾರೆವು ರುದ್ರ ಜಪವನು । ಪೇಳು ಹೋಗುವದೆಲ್ಲಿ ಭೂಮಿಯಲಿರೆವು ಕ್ಷಣಮಾತ್ರ ॥
ಕೇಳುತೀ ದುರಿತಗಳ ನುಡಿಯನು । ಕಾಲನತಿ ಕೋಪದಲಿ ಹೊರಟನು । ಮೇಲೆ ಬಂದನು ಬ್ರಹ್ಮಲೋಕಕೆ ಸಿಡಿಲಿನಂದದಲಿ ॥21॥

ಧರೆಗೆ ಕಳುಹಿದೆ ದೂತರೆನ್ನಯ । ನರಕ ಭಾಜನರನ್ನು ಹಿಡಿದೈ- । ತರುವ ಕಾರಣಕಾಗಿ ಕೇಳೆ ಸರಸಿಜಾಸನನೆ ॥
ತಿರುಗಿಬಂದರು ಭೀತಿಯಲಿ ಮನ । ಮರುಗಿ ಪೇಳ್ದರು ಧರೆಯ ಸರ್ವರು । ನರರು ಪುಣ್ಯಾತ್ಮಕರು ಕೇಳಿದು ರುದ್ರಜಪಮಹಿಮೆ ॥22॥

ದುರಿತಗಳನದು ಸುಟ್ಟು ಬಿಡುವುದು । ನರರ ಪುಣ್ಯಾತ್ಮಕರ ಮಾಳ್ಪುದು । ದೊರೆಯಿತವರಿಗೆ ಪಾಪನಾಶಕ ರುದ್ರ ಜಪಮಾತ್ರೆ ॥
ನರಕ ನಿರ್ಜನವಾಯ್ತು ಮುಂದಿನ । ಪರಿಯ ಕಾಣೆನು ಪಾಪಗಳು ಬಹು । ಸೊರಗಿದವು ಸಾಯುವವು ಹಲದಿನ ಹೋಗಲೀ ವಿಧದಿ ॥23॥

ಪ್ರಾಪ್ತವಾಗಲು ಸರ್ವರಿಗೆ ಸುಖ । ಲುಪ್ತವಾಯ್ತಾಪತ್ತಿಯದರಿಂ । ವ್ಯರ್ಥವಾಯಿತು ಯಮನ ರಾಜ್ಯವು ರುದ್ರ ಜಪದಿಂದಾ ॥
ಯುಕ್ತಿಯನು ಯೋಚಿಸಲು ನೀನು ಸ- । ಮರ್ಥನಿಹೆ ಮುಂದಿನ ವುಪಾಯವ । ಚಿತ್ರ ಕೊಟ್ಟು ವಿವೇಕದಿಂದಲಿ ಯೋಚಿಸೈ ತಾತಾ ॥24॥

ನುಡಿದನೀಪರಿ ಯವನು ಖೇದದಿ । ಜಡಜಸಂಭವ ಕೇಳ್ದನೆಲ್ಲವ । ಸಡಗರದಿ ಮಾರುತ್ತರವ ತಾನಿತ್ತ ನಾ ಯಮಗೆ ॥
ಜಡಮತಿಗಳಾ ರುದ್ರ ಜಪವನು । ಬಿಡದೆ ಪಠಿಸಲು ನಿಂತು ಮಲಗುತ । ಹಿಡಿದು ತರಬೇಕವರ ಬೇಡಬೇಡವರ ನೀ ದಯದಿ ॥25॥

ಭಾವಭಕುತಿಯೊಳಾರು ಪಠಿಪರು । ಕಾವುದವರನು ನಿನ್ನ ದೂತರು । ಆವಗಂ ತದ್ರುದ್ರ ಜಪದಲಿ ಪುಣ್ಯ ಬಹಳಿಹುದು ॥
ಈವನೈ ಶಿವ ಸೌಖ್ಯ ಸಂಪತಿ । ಜೀವಿಗಳಿಗಾಯುಷವರ್ಧನ । ಸಾವವೈ ರೋಗಗಳು ಜ್ಞಾನದ ವೃದ್ಧಿಯಾಗುವುದು ॥26॥

ಹಿಂದೆ ಮಾಡಿದ ಪಾಪಕರ್ಮಗ । ಳಿಂದ ಕ್ಷೀಣಾಯುಷ್ಯವಪ್ಪುದು । ಇಂದುಧರನೊಲಿದರೆಯದೇ ದೀರ್ಘಾಯುವಾಗುವದು ॥
ಬಂದಪುದು ಸದ್ಬುದ್ಧಿ ಸುಧೃತಿಯು । ಬಂದಪುದು ವರ್ಚಸ್ವ ಶಿವಜಪ- । ದಿಂದ ಸಾತ್ವಿಕ ಭಾವ ವೊಂದಿರಬೇಕು ಶಿವನಲ್ಲಿ ॥27॥

ಭಕ್ತಿಯಲಿ ಶಿವಮಂತ್ರದಲಿ ಶಿವ । ಗಿತ್ತರಭಿಷೇಕವನು ತಜ್ಜಲ । ಮೃತ್ಯು ಹಾರಕ ಸ್ನಾನ ಮಾಡಲು ಮರಣಭಯವಿಲ್ಲಾ ॥
ಭಕ್ತಿಯಲಿಯತಿರುದ್ರ ಜಪಿಸುತ । ಲಿತ್ತರಭಿಷೇಕವನು ಸ್ನಾನದ । ಮಾತ್ರದಲಿ ತನ್ನರಗೆ ಭೀತಿಯೆ ಮೃತ್ಯು ದೇವತೆಯಾ ॥28॥

ಭಕ್ತಿಯಲಿ ಶತರುದ್ರ ಜಪಿಸಲು । ಮುಕ್ತನಾಗುವನವನು ಭವದಲಿ । ಚಿತ್ತವಿಸು ನೀನಿದನು ದೂತರಿಗರುಹು ನೇಮವನು ॥
ಮೃತ್ಯುವಿಂಗೀ ತೆರದಿ ಬ್ರಹ್ಮನು । ವಿಸ್ತರಿಸಿದನು ರುದ್ರಮಹಿಮೆಯ । ಮತ್ತೆ ಪಾರಾಶರನು ಪೇಳ್ದನು ಭದ್ರಸೇನನಿಗೆ ॥29॥

ಜವನ ಗೆಲ್ಲುವ ಮಂತ್ರವನು ನೀ- । ನವಧರಿಸು ಪೇಳುವೆನು ಮಾಡೈ । ಶಿವನಿಗಭಿಷೇಕವನು ಹತ್ತು ಸಹಸ್ರ ರುದ್ರದಲಿ ॥
ಕುವರ ನಿನ್ನ ಯ ಹತ್ತು ಸಾವಿರ- । ವವಧಿಯಲಿ ರಾಜ್ಯವನು ಮಾಡುವ । ನವನಿಯಲಿ ಸತ್ಕೀರ್ತಿ ಗಳಿಪನು ಸುರಪತಿಯತೆರದಿ ॥30॥

ನೂರು ವಿಪ್ರರ ಕರಿಸುತೀಗಲೆ । ಮಾರಹರನಭಿಷೇಕಕ್ಕೈ ನೀ- । ನಾರಭಿಸು ರುದ್ರಾಭಿಷೇಕವು ಯಮನ ಗೆಲ್ಲುವದು ॥
ಭಾರಿ ಸಂತೋಷದಲಿ ನೃಪ ಸಂ- । ಭಾರವನು ಮಾಡಿದನು ಭೂಸುರರಾ- । ರಭಿಸಿದರು ರುದ್ರ ಜಪವನು ಮುನಿಯು ಪೇಳ್ದಂತೆ ॥31॥

ಏಳು ದಿನವಿಪರಿಯಲಾಯಿತು । ಬಾಳಲೋಚನಗಾಗೆ ಸ್ನಾನವು । ಬಾಲನೇಳನೆ ದಿನಕ್ಕೆ ಮೂರ್ಛಿತನಾದನೇನೆಂಬೆ ॥
ಭಾಳಲೋಚನಸಮ ಪರಾಶರ । ನೇಳಿಸಿದನಾ ಮಗನ ತೀರ್ಥದಿ । ಶೂಲಿಯೇ ರಕ್ಷಿಸಿದನೀ ಬಾಲಕನ ಪ್ರತ್ಯಕ್ಷಾ ॥32॥

ಧರಣಿಗಿಳಿದರು ಯಮನ ದೂತರು । ಕರೆದರೈ ನೃಪತಿಯ ಕುಮಾರನ । ಶಿರದಿ ಮಂತ್ರಾಕ್ಷತೆಯ ಬೀಳಲು ದೂರನಿಂತರಲಾ ॥
ಬರಲದಂಜುವರವರು ಹತ್ತರ । ಕರದಿ ಪಾಶವ ಧರಿಸಿಯದರಿಂ । ಕೊರಳ ಹಿಡಿಯಲು ಯತ್ನ ಮಾಳ್ಪರು ರಾಜನಂದನನಾ ॥33॥

ಹರನ ದೂತರು ಬಂದರಾಕ್ಷಣ । ಧರೆಯೊಳಿವರನು ನೋಡಿದಾಕ್ಷಣ । ತಿರುಗಿ ಯಮಪುರಕೋಡಿ ಹೋದರು ಯಮನ ಸೇವಕರು ॥
ಹರನವರು ಬೆನ್ನಟ್ಟಿ ಪೋದರು । ಅರರೆ ರಕ್ಷಣೆಯಾಯ್ತು ಕುವರಗೆ । ಹರುಷವಾಯಿತು ರಾಜನಿಗೆ ವಂದಿಸಿದನಾ ಮುನಿಯಾ ॥34॥

ತನುಪುಳಕದಲಿ ರಾಜನೆದ್ದನು । ಮುನಿಯ ವಿಪ್ರರನೆಲ್ಲ ತನುಮನ । ಧನದಿ ಸಂತೈಸಿದನು ಸಂತಸಕಿಲ್ಲ ಮಿತಿ ಮಾನಾ ॥
ಮನದಿ ಹಿಗ್ಗುತ ರಾಜಸಭೆಯಲಿ । ವಿನುತ ಚರಿತರ ಕರೆದು ತಾನತಿ । ವಿನಯದಿಂ ಪದಕೆರಗಿದನು ಮನ್ನಿಸುತಲಾಭಾರಾ ॥35॥

ನರಪತಿಯ ಸಭೆಗೈದನಾಕ್ಷಣ । ಸುರಮುನಿಯು ನಾರದನ ನೋಡುತ । ಕರೆದು ಸಿಂಹಾಸನದಿ ನರಪತಿ ಪೂಜೆ ಮಾಡಿದನು ॥
ಹರುಷದಿಂ ನಾರದನು ರಾಯಂ- । ಗರುಹಿದನು ನೀ ಧನ್ಯ ಧರೆಯೊಳು । ಹರನ ವರದಿಂ ಯಮನ ಗೆದ್ದಿಯೊ ಧನ್ಯ ನೀ ಧನ್ಯಾ ॥36॥

ಚಿತ್ರವನು ನಾ ಕಂಡೆ ನಿನಗೆ ವಿ । ಚಿತ್ರವನು ಹೇಳುವೆನು ನಾನೀ । ಮರ್ತ್ಯ ಲೋಕಕೆ ಬರುತ ಕಂಡೆನು ಚೋದ್ಯವಿದನೊಂದಾ ॥
ಮೃತ್ಯು ದೂತರು ಬಂದು ನಿನ್ನಯ । ಪುತ್ರನನು ಕದ್ದೊಯ್ಯಲೆತ್ನಿಪ । ರಿತ್ತ ಬಂದರು ಶಿವನ ದೂತರು ರಕ್ಷಿಸಲಿಕವನಾ ॥37॥

ಹರನ ದೂತರ ಕಂಡು ಬೆದರುತ । ಮರಳಿದರು ಯಮದೂತರವರನು । ಹರನವರು ಬೆನ್ನಟ್ಟಿ ಪೋದರು ಹೊಡೆತ ಹೊಡೆದರಲಾ ॥
ತಿರುಗಿ ಬಂದೊಡೆಯವನಿಗೆ ಪೇಳ್ದರು । ತರಣಿಸಂಭವ ಕೊಪಹಲಿ ಬಂ- । ದಿರದೆ ಪೇಳ್ದನು ವೀರಭದ್ರನಿಗಾಗ ವಹಿಲದಲಿ ॥38॥

ವೀರಭದ್ರನೆ ಕೇಳು ರಾಜಕು- । ಮಾರ ಕ್ಷೀಣಾಯುಷ್ಯನಿರೆ ಕರ- । ತಾರಬಾರದೆ ಯೆಮ್ಮದೂತರಿಗೇನು ದೋಷವದೆ ॥
ಮಾರಹರನವರುಗಳು ಬಡದರು । ಕಾರಣವ ನಾ ಕಾಣೆನೆನಲಾ । ವೀರಭದ್ರನು ಘುಡುಘುಡಿಸಿದನು ನುಡಿದನುತ್ತರವಾ ॥39॥

ಹತ್ತು ಸಾವಿರ ವರುಷವಾಯುಷ- । ವಿತ್ತು ರಾಜಕುಮಾರನಿಗೆ ನೀ । ಚಿತ್ರಗುಪ್ತರ ಕೇಳದಲೆ ಕಳುಹಿಸಿದ ದೂತರನು ॥
ಉತ್ತಮೋತ್ತಮವಾಯ್ತು ನಿನ್ನಯ । ಭೃತ್ಯರಿಗೆ ಮಾಡಿರ್ದ ಮನ್ನಣೆ । ಮೃತ್ಯು ಮುಖದಿಂ ತಪ್ಪಿ ಬಂದರು ನಿನ್ನ ಸೌಭಾಗ್ಯಾ ॥40॥

ಮೃತ್ಯು ರಾಜನು ಕೇಳಿ ನುಡಿಯನು । ಚಿತ್ರಗುಪ್ತರ ಕರೆದು ಕೇಳ್ದನು । ಪತ್ರಕವ ನೋಡಿದರು ಪೇಳ್ದರು ವಿಧಿಲಿಪಿಯನವನಾ ॥
ಇತ್ತು ದ್ವಾದಶವರ್ಷಕೊಂದು ಮ- । ಹತ್ವ ಗಂಡಾಂತರವು ಮೇಣಾ । ಹತ್ತು ಸಾವಿರ ವರುಷವಾಯುಷವಿತ್ತು ಕುವರನಿಗೆ ॥41॥

ತಪ್ಪು ತನ್ನ ದೆನುತ್ತ ಮೃತ್ಯುವು । ಒಪ್ಪಿ ಕೊಂಡನು ವೀರಭದ್ರನ । ನಪ್ಪಿ ಕ್ಷಮೆ ಬೇಡಿದನು ತಿರುಗಿದನವನು ನಿಜಪುರಕೆ ॥
ಸರ್ಪಭೂಷಪಕೃಪೆಯ ಮಹಿಮೆಯು । ಸ್ವಲ್ಪವಾಯುಷ ದೀರ್ಘವಾಯಿತು । ಸ್ವಲ್ಪವಲ್ಲಾ ನಿನ್ನ ಪುಣ್ಯ ಪರಾಶರನ ದಯದಿಂ ॥42॥

ತೆರದೊಳೀಸುರಮುನಿಯು ಪೇಳುತ । ತಿರುಗಿ ಹೋದನು ಬ್ರಹ್ಮಲೋಕಕೆ । ಹರುಷವಾಯಿತು ರಾಜನಿಗೆ ಗುರುಕೃಪೆಯ ಮಹಿಮೆಯಲಿ ॥
ಗುರುಪರಾಶರ ತಿರುಗಿ ಪೋದನು । ನರಪತಿಯು ಸುಖದಿಂದ ರಾಜ್ಯವ । ಹರುಷನಿರ್ಭರದಿಂದಲಾಳಿದ ಬಹಳ ದಿನತನಕಾ ॥43॥

ಗುರುವನಂಬಲು ಯಮನ ಬ್ರಹ್ಮನ । ದಿರದು ಭೀತಿಯು ಗುರುಪರಾತ್ಪರ । ಹರನು ಸಂಕಟಹರನು ಶರಣಾಗತರ ಕೈವಾರಿ ॥
ಗುರುವಿಗದರಿಂ ರುದ್ರ ಜಪದಲಿ । ವಿರಚಿಸಿರಿ ಪೂಜೆಯನು ವೊಲಿದರೆ । ಗುರುವಿನಿಂದಲಿ ಸಕಲಸಾಧನ ವಿಷ್ಣುವಚನವಿದು ॥44॥

॥ ಅಧ್ಯಾಯ 34 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 35

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುವರನು ಪ್ರೇಮದಲಿ ದಂಪತಿ । ಯರಿಗೆ ಪೇಳ್ದನು ದೇವಯಾನಿಯ । ಚರಿತವನು ಸೋಮಪ್ರದೋಷದ ಹರನ ಪೂಜೆಯನು॥

ಗುರುಚರಣಸೇವೆಗೆ ನಿರಂತರ । ಬರುವುದಗಣಿತ ವಿಘ್ನ ಬಂದರೆ । ಪುರುಷನಂದದಿ ತಲೆಯ ಕೊಡಬೇಕದಕೆ ಭಯಪಡದೆ ॥
ಗುರುವು ಕೊಟ್ಟಾ ಪುಟವೆನುತ ತಾ । ನರಿಯ ಬೇಕೈ ಬರಿದೆ ಗುರುವಿನ । ಚರಣ ಮರೆಯಲು ಬಾರದೈ ಸುಖದುಃಖವೆರಡರಲಿ ॥1॥

ಗುರುವರನು ರುದ್ರಾಕ್ಷ ಮಹಿಮೆಯ- । ನರುಹಿದನು ದಂಪತಿಗೆ ತದನಂ- । ತರದಿ ಬಿನ್ನೈಸಿದರು ದಂಪತಿ ಗುರುಚರಣಕೆರಗಿ ॥
ಕರಗಳೆರಡನು ಜೋಡಿಸುತ ಗುರು- । ವರನ ಸ್ತುತಿಸುತ ಕೇಳಿದರು ಯೆಮ । ಗರುಹು ಮುಂದಿನಗತಿಯದಾವುದು ತಿಳಿಸು ಕರುಣದಲಿ ॥2॥

ಗುರುಚರಣ ಸ್ಮರಣವೆ ಸನಾತನ- । ವಿರಲಿ ಸೇವೆಯು ಸತತ ದೊರೆಯಲಿ । ಕರುಣಿಸುವುದೆಮಗೊಂದು ಮಂತ್ರವ ಸುಖದ ಸಾಧನವಾ ॥
ಗುರುವು ಕೇಳುತ ನುಡಿದನೈ ಸ್ತ್ರೀ । ಯರಿಗೆ ಮಂತ್ರವ ಕೊಡಲು ವಿಫಲವು । ಪರಿಣಮಿಸುವುದು ವನಿತೆಯರು ಮಂತ್ರಕ್ಕೆಯೋಗ್ಯರಲಾ ॥3॥

ಅಂದು ಶುಕ್ರಾಚಾರ್ಯ ಮಂತ್ರವ । ಚಂದದಿಂದಲಿ ಕುವರಿಗಿತ್ತನು । ಅಂದಿನಿಂದಾ ಮಂತ್ರನಿಷ್ಫಲವಾಯ್ತು ಸ್ತ್ರೀಯರಿಗೆ ॥
ಎಂದ ನುಡಿದನು ಕೇಳಿ ದಂಪತಿ । ಯೆಂದರಾ ಗುರುವರಗೆ ನೀನಾ । ಸುಂದರಾಖ್ಯಾನವನು ಕರುಣಿಸಬೇಕು ತಿಳಿವಂತೆ ॥4॥

ಹಿಂದೆ ದೇವಾಸುರರ ಯುದ್ಧದಿ । ಕೊಂದರಸುರರನೆಲ್ಲರನು ಗುರು । ತಂದುಕೊಡುವನು ಜೀವವನು ಭೃಗು ಮಂತ್ರಶಕ್ತಿಯಲಿ ॥
ಇಂದ್ರನೆಲ್ಲರ ವಜ್ರದಲಿ ತಾ । ಕೊಂದು ಬಿಡುವನು ಶುಕ್ರನೆಲ್ಲರ । ತಂದು ಕೊಡುವನು ಜಪಿಸಿ ಸಂಜೀವನದ ಮಂತ್ರವನು ॥5॥

ತೆರದೊಳಿ ಹಲದಿವಸ ಹೋಗಲು । ಸುರಪತಿಯು ತಾ ನೊಂದು ಮನದಲಿ । ಹರನ ಬಳಿಗೈ ತಂದು ದೂರಿದ ಶುಕ್ರನಾಟವನು ॥
ಹರನು ಕೋಪದಿ ನಂದಿಯನು ಕರೆ- । ದರುಹಿದನು ಶುಕ್ರನನು ತತ್ ಕ್ಷಣ । ತರಲು ಬೇಕೆನಲವನು ಹೊರಟನು ಶುಕ್ರನಿದ್ದೆಡೆಗೆ ॥6॥

ಅಸುರಗುರು ತಪ ಮಾಳ್ಪವೇಳೆಗೆ । ನುಸುಳಿದನು ಮುಂದವನ ನಂದಿಯ । ಕುಶಲದಿಂದಾ ಶುಕ್ರನನು ಪಿಡಿದೊಯ್ದ ನಾಕ್ಷಣಕೆ ॥
ಕುಸುಮಶರಸಂಹಾರನಾ ಕ್ಷಣ- । ಕಸುರಗುರುವನು ನುಂಗಿ ಬಿಟ್ಟನು । ಬಸವಳಿದರಾ ದೈತ್ಯಗಣ ಶುಕ್ರನನು ಕಾಣದಲೆ ॥7॥

ಹರನುದರದಲಿ ಶುಕ್ರನಿದ್ದನು । ಸುರರಿಗಾಯಿತು ಹರುಷ ಕೆಲದಿನ- । ವಿರಲು ಹರನಿಂಗರಿವು ಹಾರಿತು ಶುಕ್ರನಿದ ನೋಡಿ ॥
ಹರನ ಮೂತ್ರದ್ವಾರದಿಂದಲಿ । ಹೊರಗೆ ಬಂದನು ಹೆಸರು ತದನಂ- । ತರದೊಳಾಯಿತು ಜಗದಿ ಭಾರ್ಗವನೆಂದು ಶುಕ್ರನಿಗೆ ॥8॥

ಸುರಪತಿಯು ಮತ್ತಿದನು ನೋಡುತ । ಗುರುಬೃಹಸ್ಪತಿಗೆಂದ ದೈತ್ಯರ । ಗುರುವು ದೈತ್ಯರನೆಬ್ಬಿಸುವನೈ ಮಂತ್ರಬಲದಿಂದಾ ॥
ಗುರುವು ನೀನೆಮಗಿರಲು ಯೆಮಗೀ । ಧುರದೊಳಪಜಯವೆಂತು ಪಾಲಿಗೆ । ಬರುವುದೈ ಯೋಚಿಸಲು ಬೇಕಿದಕಿನ್ನುಪಾಯವನು ॥9॥

ಸುರವರರಿಗೆಲ್ಲರಿಗೆ ಪೂಜ್ಯನು । ಗುರುಬೃಹಸ್ಪತಿಯೆಂದು ತ್ರಿಜಗದಿ । ಮೆರೆಯುತಿದೆ ತವ ಕೀರ್ತಿ ನೀನಾ ಶುಕ್ರನಂದದಲಿ ॥
ಸುರರ ಪಾಲಿಗೆ ವಿಜಯಶ್ರೀಯನು । ತರಲು ನೀನು ಸಮರ್ಥನೆಂದಾ । ಸುರಪತಿಯು ವಾಚಸ್ಪತಿಯು ಪೂಜಿಸಿದ ಭಕ್ತಿಯಲಿ ॥10॥

ಗುರುಬೃಹಸ್ಪತಿ ಯೆಂದನಾ ಸುರ- । ವರಗೆ ಪೇಳುವೆನೊಂದು ಪಾಯವ । ಬರುವದ್ಯೆ ಯಶವದಕೆ ನೀನಂಜದಿರು ಮನದೊಳಗೆ ॥
ಇರುವುದ್ಯೆ ಸಂಜೀವಿನಿಯ ಜಪ । ತಿರುತಿರುಗಿ ಮಂತ್ರಿಪನು ಶುಕ್ರನು । ತರುವನ್ಯೆ ಪ್ರಾಣವನು ಸಾಯಲು ದೈತ್ಯಸೈನ್ಯದಲಿ ॥11॥

ಅರಿಯರಾರೀ ಮಂತ್ರವನು ಯಿದ । ನರಿತುಕೊಳಲಿಕೆ ಕಚನ ಕಳುಹಲು । ತರುವನ್ಯೆ ಮಂತ್ರವನು ಬಹು ಯತ್ನವನು ಮಾಡುವನು ॥
ತರಲಿಕಸದಳವಾದರದನೇ । ತಿರುಗಿ ನಿಷ್ಫಲ ಮಾಳ್ಪ ಯತ್ನವ । ವಿರಚಿಸುವನ್ಯೆ ಮಂತ್ರ ಷಟ್ಕರ್ಣದಲಿ ನಿಷ್ಫಲವು ॥12॥

ಕರೆದು ಪುತ್ರನಿಗೆಂದನಾ ಸುರ- । ಗುರುವು ಮಗನೇ ದೇವಕಾರ್ಯಕೆ । ತ್ವರದಿ ಪೋಗಲು ಬೇಕು ನೀನಾ ಶುಕ್ರನಿದ್ದೆಡೆಗೆ ॥
ಗುರುಚರಣಸೇವೆಯನು ಮಾಡುತ । ಪರಮ ಸಂಜೀವಿನಿಯ ಮಂತ್ರವ । ಕೊರಕಿಸಲು ನೀ ಯತ್ನ ಮಾಡಲು ಬೇಕು ಮನಗೊಟ್ಟು ॥13॥

ಚರಣಕಭಿವಂದಿಸುತ ಪಿತನಿಗೆ । ಸುರಪತಿಯ ಬೀಳ್ಕೊಟ್ಟು ಕಚನ್ಯೆ । ತರಲು ಕಂಡನು ದೈತ್ಯಗುರುಶುಕ್ರನನು ಭಕ್ತಿಯಲಿ ॥
ಎರಗಿ ಪಾದಕೆ ಕಚನು ತಾ ನಿಂ- । ತಿರಲು ಶುಕ್ರನು ಮುಂದೆ ಕೇಳ್ದನು । ಬರುವುದೆಲ್ಲಿಂದಾಯ್ತು ಬಂದಿಹ ಕಾರ್ಯವೇನೆಂದ ॥14॥

ದ್ವಿಜಕುಮಾರನು ನಾನು ನಿನ್ನಯ । ತ್ರಿಜಗದಲಿ ಪಸರಿಸಿತು ಕೀರ್ತಿಯು । ಭಜಕ ವತ್ಸಲ ನೀನು ವಿದ್ಯಾ ಮೂಲ ಪೀಠವಿದು ॥
ಭಜಿಸುವವರಿಗೆ ತ್ಯಜಿಸಲಾರದ । ವಿಜಯವೀಗಲೆ ಕೇಳಿ ಬಂದೆನು । ನಿಜವು ನಾವಿದ್ಯಾರ್ಥಿರೂಪದಿ ಬಂದೆ ನಿನ್ನೆಡೆಗೆ ॥15॥

ಎಂದು ಕಚನಾ ಶುಕ್ರಗೆಂದನು । ಬಂದಳಾಕ್ಷಣ ದೇವಯಾನಿಯು । ತಂದೆಗಭಿವಂದಿಸುತ ಪೇಳ್ದಳು ವಿನಯಭಾವದಲಿ ॥
ಸುಂದರಾಂಗ ಸುಲಕ್ಷಣನು ಕಚ । ಬಂದಿಹನು ವಿದ್ಯಾರ್ಥಿಯಾಗಿಹ । ತಂದೆ ನೀನಿವನನ್ನು ಮನ್ನಿಸು ಬ್ರಹ್ಮಕುಲದವನಾ ॥16॥

ಮಗಳ ಮಾತನು ಕೇಳಿ ಶುಕ್ರನು । ಹಗೆಯ ಮಗನನು ಮನೆಯೊಳಿಟ್ಟನು । ಬಗೆದಳಾಮಗಳಾಗ ಬೇರೊಂದನು ಕಣಾ ಮನದಿ ॥
ಜನದೊಳೀ ಸುಂದರನ ಜೋಡಿಯ । ಮುಗುದರನು ನಾ ಕಾಣೆನೀತನು । ಸುಗುಣನಿವನನು ವರಿಸುವೆನು ಪತಿಯಾಗಿ ಸಾಧಿಸುತಾ ॥17॥

ಅಸುರರಿಂಗರಿವಾಯ್ತು ಹಗೆಯೀ । ಪಸುಳೆ ಸಂಜೀವಿನಿಯ ಕಲಿಯಲು । ಯಶವು ದೇವರಿಗಹುದು ಮುಗಿಯಿತು ನಮ್ಮ ಜನರಾಟಾ ॥
ಉಸುರಿದರೆ ಗುರು ಸಿಟ್ಟಿಗೇಳುವ- । ನುಸುರಿದರೆ ನಿಜಕಾರ್ಯ ಕೆಡುವುದು । ಮುಸುಕುಮನದಲಿ ಯೋಚಿಸಿದರವರೊಂದುಪಾಯವನು ॥18॥

ದಿನದಿನದೊಳಾ ಕಚನು ಸಮಿಧೆಯ । ವನಕೆ ಪೋಗುತ ತರುತಲಿರಲೊಂ- । ದುದಿನ ದೈತ್ಯರು ಕೂಡಿ ಕೊಂದರು ಕಪಟಭಾವದಲಿ ॥
ದನುಜರಾ ಸಮಿಧೆಯನು ತಂದರು । ಮನೆಗೆ ಸಂಧ್ಯಾಕಾಲದಲಿ ಕಚ । ದಿನದ ತೆರದಲಿ ಬಾರದಿರೆ ಗುರುಕನ್ಯೆ ನೊಂದಳಲಾ ॥19॥

ಮನೆಗೆ ಕಚ ಬಾರದಿರೆ ತಾ ಭೋ । ಜನವ ಮಾಡನೆನುತ್ತಲಾ ಗುರು- । ತನುಜೆ ಹಟ ಹಿಡಿದಳು ಮಹಾಖೇದದಲಿ ಪಿತನೊಡನೆ ॥
ಮನದಿ ದುಃಖವ ತಾಳಿ ಶುಕ್ರನು । ನೆನೆಯಲಾತನ ನೋಡಿದನು ಕಚ । ವನದಿ ಸತ್ತಿಹ ಪರಿಯು ಬಂತಾ ಜ್ಞಾನಚಕ್ಷುವಿಗೆ ॥20॥

ಮನದಿ ಸಂಜೀವಿನಿಯ ಜಪಿಸುತ । ಲನಿಮಿಷರ ಗುರುಪುತ್ರ ಕಚನನು । ವಿನಯದಿಂ ಬರಮಾಡಿದನು ತನ್ನಾಶ್ರಮಕೆ ಮುದದಿ ॥
ದಿನಗಳಿಂಪರಿ ಹಲವು ಹೋಗಲು । ಪುನಹ ಕಚನನು ದೈತ್ಯರೆಲ್ಲರು । ವನದಿ ಕೊಂದರು ತುಂಡುಗಳ ಚೆಲ್ಲಿದರು ದಿಶೆದಿಶೆಗೆ ॥21॥

ತರಣಿಯಸ್ತಾಚಲಕೆ ನಡೆಯಲು । ಬರನು ಕಚನಾಶ್ರಮಕೆನುತ ಮನ । ಮರುಗಿ ಪಿತನೊಡನೆಂದಳಾ ಗುರುಪುತ್ರಿ ವಿನಯದಲಿ ॥
ಕರುಣದಿಂದಲಿ ಕಚನ ವೇಗದಿ । ಕರೆತರಲು ಬಿನ್ನೈಸಿದಳು ತಾ । ಮರಣವಶವಾಗುವೆನು ಕಚನನು ಬಿಡೆನು ಕ್ಷಣಮಾತ್ರ ॥22॥

ಚಿಂತಿಸಿದನಾ ಶುಕ್ರನಾಗಲೆ । ಬಂತು ಕಚನಿಗೆ ಮರಣ ದೇಹದ । ತಂತುಗಳ ದಿಶೆದಿಶೆಗೆ ಚೆಲ್ಲಿದ ಪರಿಯ ನೀಕ್ಷಿಸಿದಾ ॥
ಪಿಂತೆ ಕನ್ಯಾ ಲೋಭದಲಿ ಯಾ । ಮಂತ್ರ ಸಂಜೀವಿನಿಯ ಜಪಿಸಿದ- । ನೆಂತು ಪೇಳುವೆ ನದರಮಹಿಮೆಯ ಧನ್ಯವೀಮಂತ್ರಾ ॥23॥

ಕರೆಯಲಾ ಗುರು ಕಚನ ಮನೆಗೈ- । ತರುವ ಬಾಲನ ನೋಡಿ ಹರುಷದ । ಭರತಿಯಾಯಿತು ದೇವಯಾನಿಗೆ ಕಚನ ನೋಡುತಲಿ ॥
ಮರಳಿದೈತ್ಯರು ಕಪಟಯೋಚಿಸಿ । ದರು ಪರಮಮೂರ್ಖರು ಕಣಾ ಗುರು । ಕರಣಿ ಯರಿಯರು ಗುರುವಜಯಿಸುವ ವೀರರೇನವರು ॥24॥

ಮರುದಿವಸವೇಕಾದಶಿಯ ದಿನ । ಬರುವುದಾದಿನ ಕಚನ ಕೊಂದರೆ । ಭರದಿ ಸುಡುವೆವು ಬೂದಿಮಾಳ್ಪೆವು ಕಚನ ದೇಹವನು
ತರುತಲಾ ಬೂದಿಯನು ಕಪಟದಿ । ಗುರುವರನ ಪಾನದಲಿ ಮಿಸಳಿಸಿ । ಹರುಷದಿಂದಲಿ ಕುಡಿಯಲಿತ್ತರೆ ಕುಡಿವನಾ ಗುರುವು ॥25॥

ಹೊಟ್ಟೆಗೊಂದಾವರ್ತಿ ಬೂದಿಯು । ಬಟ್ಟೆ ಹಿಡಿದರೆ ಮುಂದೆ ಬಹು ಸಂ- । ಕಷ್ಟ ಬರುವುದು ಕಚನ ಪುನರುಜ್ಜೀವನವಸಾಧ್ಯ ॥
ದುಷ್ಟರೀಪರಿ ಮನದಿ ಯೋಚಿಸಿ । ಸುಟ್ಟು ಕಚನನು ಬೂದಿ ಮಾಡುತ । ಕೊಟ್ಟರೈ ಶುಕ್ರನಿಗೆ ಮದ್ಯದಿ ಕೂಡಿಸುತ ಮುದದಿ ॥26॥

ಬಾರದಿರಲಾ ಕಚನು ಸಂಜೆಗೆ । ಚೀರಿದಳು ದುಃಖದಲಿ ಸುತೆ ಬಾ । ಯಾರಿ ಗೋಳಾಡಿದಳು ಬಿನ್ನೈಸಿದಳು ಶುಕ್ರನಿಗೆ ॥
ಬಾರದಿರೆ ಕಚ ಮನೆಗೆ ಮರಣದ । ದಾರಿಯನು ನಾಹಿಡಿವೆ ಬೆಂಕಿಯ । ಹಾರುವೆನು ತಾನೆಂದು ಗೋಳಾಡಿದಳು ಪಿತನೆದುರು ॥27॥

ಜ್ಞಾನಿ ಶುಕ್ರನು ಮನದಿ ಚಿಂತಿಸಿ । ಯೇನು ಕಚಗಾಯ್ತೆನುತ ನೋಡಲು । ಕಾಣನವನನು ತ್ರಿಜಗದಲಿ ತಿರುತಿರುಗಿ ನೋಡಿದರು ॥
ಮೇಣು ಬಹುಚಿಂತೆಯಲಿ ನೋಡಲು । ಕಾಣಿಸಿದನಾ ತನ್ನ ಜಠರದೊ । ಳೇನ ಮಾಡಲಿ ಯೆನುತ ದುಗುಡದಿ ಮಗಳಿಗಿಂತೆಂದಾ ॥28॥

ಹುಡುಗಿ ಕೇಳೌ ನಿನ್ನ ಕಚನೆ । ನ್ನೊಡಲೊಳಗೆ ಹೋಗಿಹನು ತೆಗೆದರೆ । ಮಡಿಯುವೆನು ನಾ ನಿನ್ನ ತಂದೆಯು ಬೇರೆ ಬಗೆ ಕಾಣೆ ॥
ಬಿಡುಬಿಡೌ ನೀನವನ ಗೊಡವೆಯ । ಸುಡಲಿ ನಿನ್ನಭಿಲಾಷೆ ವೈರಿಯ । ಹುಡುಗನಲ್ಲಾ ಯಾಕಿ ಕನಿಕರ ತೋರಿಸುವೆಯವಗೆ ॥29॥

ಆಲಿಸಿದಳೀ ವಚನವನು ಗುರು- । ಬಾಲೆ ಪ್ರತ್ಯುತ್ತರವನಿತ್ತಳು । ಕೇಳು ಕಚನೇ ಪತಿಯೆನುತ ನಾ ಮನದಿ ವರಿಸಿಹನು ॥
ಶೀಲದಲಿ ಸದ್ಗುಣಿಯು ಕಚನೀ । ಪಾಲಿಸೈ ನೀನೆನ್ನ ಬಯಕೆಯ । ಮೇಳದಿಂದಲಿ ಯಿರುವೆವಿಬ್ಬರು ಸುಖದೊಳಾಶ್ರಮದಿ ॥30॥

ಒಪ್ಪದಿರೆ ನೀನೆನ್ನ ಮಾತಿಗೆ । ಅಪ್ಪ ಹಾರುವೆನಗ್ನಿ ಕುಂಡದಿ । ತಪ್ಪದಿದು ನಿರ್ಧಾರವೆನುತಾ ಬಾಲೆಯಾಡಿದಳು ॥
ಅಪ್ಪಿ ಕೊಳುತಲಿ ಮಗಳ ಶುಕ್ರನು । ತಪ್ಪು ಮಾಡದಿರೆನುತ ಮಗಳಿಗೆ । ಬೊಪ್ಪ ತಾನೇ ಸಾಯ್ವೆನೆನುತಲಿ ತತ್ವ ಬೋಧಿಸಿದಾ ॥31॥

ಬಲ್ಲೆಯೈ ಸಂಜೀವಿನಿಯ ನೀ । ನೆಲ್ಲರಿಗೆ ಜಿವವನು ಕೊಡುತಿಹೆ । ನಿಲ್ಲಲಾರದು ನಿನ್ನ ಪ್ರಾಣವೆನುತ್ತ ನೀ ಪೇಳ್ವೆ ॥
ಬಲ್ಲೆ ನಿನ್ನಯ ಕಪಟವಾದವ । ನೆಲ್ಲವನು ನಾ ಕೇಳಲಾರೆನು । ವಲ್ಲಭಗೆ ನೀ ಪ್ರಾಣದಾನವ ಕೊಡಲು ಬೇಕೀಗಾ ॥32॥

ಎನ್ನೊಡನೆ ಕೇಳ ಮಂತ್ರವಿರುವಮ । ಯೆನ್ನೊಡಲ ಸೀಳುತಲಿ ಬರಲವ- । ನನ್ನ ನೆಬ್ಬಿಸುವವನ ಕಾಣೆನು ಮಂತ್ರವುಚ್ಚಸಿರಿ ॥
ಕನ್ಯೆ ಕೇಳೋ ಮಂತ್ರವದು ಷ । ಟ್ಕರ್ಣವಾಗಲು ಗುಣವು ಪೋಪುದು । ಯೆನ್ನ ಪ್ರಾಣವು ವುಳಿಯಲಾರದು ಯೆಂದನಾ ಶುಕ್ರಾ ॥33॥

ಚರಣಕಭಿವಂದಿಸುತ ಮಾರು । ತ್ತರವನಿತ್ತಳು ದೇವಯಾನಿಯು । ಬರಿದೆಯಂಜಿಸಬೇಡ ಮಂತ್ರವ ಕಲಿಸಲು ಯೆನಗೀಗಾ ॥
ಮರಣವಾಗಲು ನಿನಗೆ ನಾನು- । ಚ್ಚರಿಸುವೆನು ತನ್ಮಂತ್ರವದರಿಂ । ಮರಳಿ ಬರುವುದು ಪ್ರಾಣವೆಂದಳು ಪಿತಗೆ ವಿನಯದಲಿ ॥34॥

ಮಗಳ ನುಡಿಯನು ಕೇಳಿ ಶುಕ್ರನು । ನಗುತ ಪೇಳ್ದನು ಮಂತ್ರವಿದ್ಯೆಯ । ಮಗಳೆ ಕೊಡಬಾರದು ಕಣಾ ಸ್ತ್ರೀಯರಿಗೆ ಬಹು ದೋಷಾ ॥
ಮುಗದೆಯರಿಗಾ ಮಂತ್ರ ಕೊಟ್ಟರೆ । ಸಿಗದು ತತ್ಫಲ ವ್ಯರ್ಥವಪ್ಪುದು । ಜಗದಿ ಸ್ತ್ರೀಯರ ಮಂತ್ರ ಕೇಳೌ ನಿಜಪತಿಯ ಭಕ್ತಿ ॥35॥

ಎಂದ ಮಾತನು ಕೇಳಿ ಕೋಪದೊ-। ಳೆಂದಳಾ ಗುರುಕನ್ಯೆ ಪಿತನಿಗೆ । ಚಂದದಿಂದಲಿ ಜಪವ ಮಂತ್ರಿಸಿ ಬಾಳ್ವೆ ಮಾಡುವುದು ॥
ಇಂದು ಪ್ರಾಣವ ತ್ಯಜಿಸುವೆನು ತಾ । ನೆಂದು ಖೇದದಿ ದೇವಯಾನಿಯು । ಬಂದು ಪಿತನಿದ್ದೆಡೆಗೆ ಧೊಪ್ಪನೆ ಬಿದ್ದಳವನಿಯಲಿ ॥36॥

ನೋಡಿ ಶುಕ್ರನು ಮಗಳ ಖೇದವ । ಬಾಡಿದಾನನದಿಂದಲೆಬ್ಬಿಸಿ । ಮಾಡಬಾರದು ಶೋಕವೆನುತಲಿ ಮಗಳ ತಕ್ಕೈಸಿ ॥
ಆಡಿದನು ಮಂತ್ರವನು ಕಿವಿಯಲಿ । ಬೇಡವೆಂದರು ಕಚನು ಕೇಳಿದ । ನೋಡಿ ಬಂದನು ಹೊರಗೆ ಶುಕ್ರನ ಹೊಟ್ಟೆ ಸೀಳುತಲಿ ॥37॥

ಮರಳಿ ಮಂತ್ರವ ದೇವಯಾನಿಯು । ಭರದೊಳುಚ್ಚರಿಸಲ್ಕೆ ಶುಕ್ರಗೆ । ತಿರುಗಿ ಜೀವವು ಬಂತು ಮಂತ್ರದ ಮಹಿಮೆ ಯೇನೆಂಬೆ ॥
ಸುರಗುರುವಿನಾ ಪುತ್ರನಾಕ್ಷಣ । ಚರಣಕಭಿವಂದಿಸುತ ಶುಕ್ರಗೆ । ತೆರಳಿದನು ಸುರಲೋಕಕಾಗಲೆ ಗುರುವ ವಂದಿಸುತಾ ॥38॥

ಗುರುವರನೆ ನೀನೆನ್ನ ನೀಪರಿ । ಮರಣದಿಂದಲಿ ರಕ್ಷಿಸಿದೆ ಸುರ- । ವರರ ಕಾರ್ಯವು ಸಾಧಿಸಿತು ಸಂಜೀವಿನಿಯ ಮಂತ್ರ ॥
ದೊರೆಯಿತೆನಗೀ ತೆರದಿ ನಿನ್ನಯ । ಕರುಣೆ ಯಾಯಿತಗಾಧವದನಾ । ಮರೆಯಲಾರೆನು ಕೊಡು ನಿರೋಪವನೆಂದಾ ಕಚನು ॥39॥

ಗುರುನಿರೋಪದಿ ತೆರಳಲಾಕ್ಷಣ । ಕರವಪಿಡಿದಳು ದೇವಯಾನಿಯು । ಹೊರಟೆ ನೀನೆಲ್ಲೀಗ ನಿನ್ನನು ಬಿಡೆನುಬಿಡೆಬಿಡೆನು ॥
ವರಿಸಿದೆನು ನಾ ನಿನ್ನ ಮನದಲಿ । ಕರುಣಿಸೆನ್ನೀ ಬಯಕೆಯನು ನಿನ- । ಗರುಹುವೆನು ಪತಿಯೆಂದು ಭಾವಿಸಿ ನಿನ್ನ ಬದುಕಿಸಿದೆ ॥40॥

ಅರುಹುವವು ನಿಗಮಾಗಮಂಗಳು । ಗುರುತನುಜೆ ನಿಜಭಗಿನಿ ಯೆನುತಲಿ । ಗುರುವುದರದಿಂ ಬಂದೆಯದರಿಂ ತಾಯಿ ನೀನಾದೆ ॥
ವರಿಸಿದರೆ ನಿನ್ನನು ಕಣಾ ಬಹು । ದುರಿತವಪ್ಪುದು ಶಾಸ್ತ್ರಸಿದ್ಧದ । ಪರಿಗೆ ಕಾಣೆನುಪಾಯವನು ಕ್ಷಮಿಸೆಂದನಾ ಕಚನು ॥41॥

ಸಿಟ್ಟಿನಲಿ ಗುರುಕನ್ಯೆ ಯಾ ಕ್ಷಣ । ಕೊಟ್ಟಳೈ ಶಾಪವನು ಕಚನಿಗೆ । ಕೆಟ್ಟು ಹೋಗಲಿ ನಿನ್ನ ವಿದ್ಯೆಯು ಫಲವು ಸಿಗದಿರಲಿ ॥
ಇಟ್ಟೆನೈ ವಿಶ್ವಾಸವನು ಕಾ । ಪಟ್ಯದಲಿ ನೀನೆನ್ನ ತೊರೆಯುವೆ । ಬಿಟ್ಟೆನೈ ನಿನ್ನಾಶೆ ನಿನಗೆ ನಿರಾಶೆಯೇ ಸಿಗಲಿ ॥42॥

ತಿರುಗಿ ಮಾರುತ್ತರವನಿತ್ತನು । ಭರದಿ ಕಚನಾ ಕ್ಷಣಕೆ ಕೇಳೌ । ಬರಿದೆ ನೀ ಶಾಪಿಸಿದೆ ಯೆನ್ನನು ಕಾಮವಶಳಾಗಿ ॥
ವರಿಸುವೆನು ನಿನ್ನನು ನಿಜದಿ ಭೂ- । ಸುರರ ಕುಲವ್ಯತಿರಿಕ್ತ ಕುಲಜನು । ಮರೆಯ ಬೇಡೀ ಯೆನ್ನ ವಚನವನರಿ ಕೋ ನೀನು ॥43॥

ನಿನ್ನ ತಾತನು ಬ್ರಹ್ಮವೇತ್ತನು । ಮನ್ನಿಸಿದರವ ನಿನಗೆ ಮಂತ್ರವ । ಮುನ್ನ ಫಲಿಸದು ಸ್ತ್ರೀಯಳಿಗೆ ಕೊಟ್ಟಿರುವ ಕಾರಣದಿ ॥
ಎನ್ನು ತಾ ಕಚ ಕ್ರೂರಶಾಪಗ- । ಳನ್ನು ಕೊಟ್ಟನು ದೇವಯಾನಿಗೆ । ಛಿನ್ನ ಸಂಶಯನಾಗಿ ನಡೆದನು ಕಚನು ಸುರಪುರಕೆ ॥44॥

ಮಂತ್ರ ಸಂಜೀವಿನಿಯು ನಿಜ ಪರ-। ತಂತ್ರವಾಯಿತು ಶುಕ್ರನದನಾ । ಕಾಂತೆಯರಿಗಿತ್ತನು ಕಣಾ ಮೋಹದಲಿ ತಿಳಿತಿಳಿದು ॥
ಮಂತ್ರಗಳ ಕಾಂತೆಯರಿಗೀವುದು । ತಂತ್ರವಲ್ಲಾ ಸ್ತ್ರೀಯರಿಗೆ ಸ್ವ- । ತಂತ್ರವಿಲ್ಲೈ ಪತಿಯ ಸೇವೆಯು ಮಂತ್ರತಂತ್ರವದು ॥45॥

ಪತಿನಿರೋಪವು ಬೇಕು ಸತಿಯರು । ವ್ರತವನುಪವಾಸವನು ಮಾಳ್ಪರೆ । ಸತಿಗೆ ಪತಿಹೊರತಿನ್ನು ದೈವತ ಬೇರೆ ನಾ ಕಾಣೆ ॥
ಸತಿಪತಿಯರಿಂಗೀ ತೆರದಲಾ । ಯತಿವರೇಣ್ಯನು ಪೇಳಲಾಕ್ಷಣ । ನುತಿಸಿ ಗುರುವಿಗೆ ಪೇಳ್ದಳಾ ಸಾವಿತ್ರಿ ವಿನಯದಲಿ ॥46॥

ನೀನೆ ದೇವರದೇವ ವಿಶ್ವಕೆ । ನೀನೆ ಪೋಷಕ ನಿನ್ನ ಬಿಟ್ಟರೆ । ಕಾಣೆನೆನ್ಯರ ಶರಣರಿಗೆ ಕೈವಾರಿಯನು ಜಗದಿ ॥
ನೀನು ಗುರು ಗುರುವಾಕ್ಯವೆಮಗೆ ಪ್ರ- । ಮಾಣ ನಿನ್ನಯ ಚರಣ ಸೇವೆಯ । ಮಾನವೊಂದಿರೆ ಭವಕೆ ತಾರಣ ಮುಕ್ತಿಸಾಧನವು ॥47॥

ನಿರತ ನಿನ್ನಯ ಚರಣಕಮಲದಿ । ಪರಮ ಭಕ್ತಿಯನಿತ್ತು ಸಲಹುವ । ತೆರದಿ ನೀನೆಮಗರುಹು ಸಾಧನವದನು ಮಾಡುವೆವು ॥
ತರುಣಿ ಯೀಪರಿ ಭಾವಭಕುತಿಯ । ಭರದಿ ಗುರುಚರಣಕ್ಕೆ ವಂದಿಸಿ । ಕರಗಳನು ಜೋಡಿಸುತ ನಿಂತಳು ಗುರುವಿನೆದುರಿನಲಿ ॥48॥

ಗುರುವು ದಂಪತಿಗೆಂದನಾಕ್ಷಣ । ಕರಹುವೆನು ನಾನೊಂದು ವ್ರತವನು । ಸ್ಥಿರದಿ ಭಕ್ತಿಯನಿತ್ತು ರಾಜ್ಯವನೀವುದಾ ವ್ರತವು ॥
ಮರಳಿ ದಂಪತಿಯರು ಗುರುವಿಗು । ತರವನಿತ್ತರು ಪ್ರೇಮಭಾವದಿ । ಕರುಣದಿಂದೆಮಗರುಹು ನಿನ್ನ ನಿರೋಪ ಮಾಡುವೆವು ॥49॥

ಗುರುವಚನವು ಪ್ರಮಾಣವಹುದೈ । ಗುರುವಚನ ಮೀರ್ವವರು ಬೀಳ್ವರು । ನರಕ ಭಾಜನರಾಗಿ ಬಹುದುಃಖವನು ತಾಳುವರು ॥
ಗುರುವಚನವನು ಶಿರದಿ ಧರಿಸುತ । ಮೆರಿಸುವೆವು ನಾವ್ ಗುರುಮಹಿಮೆಯನು । ಗುರುವಿಗೆಣಿಸಲು ದ್ರೋಹ ರೌರವನರಕದಲಿವಾಸ ॥50॥

ಚರಣ ಕರಗುತ ಪೇಳಿದರು ಶ್ರೀ । ಗುರುವು ಸಂತಸದಿಂದ ಪೇಳ್ದನು । ಪರಮಪಾವನ ಪುಣ್ಯದಾಯಕ ವ್ರತದ ಕಥನವನು ॥
ಹರುಷದಿಂದಲಿ ದಂಪತಿಗಳಾ । ಪರಮ ಸುಖದಲಿ ಕೇಳುತಿದ್ದರು । ಸ್ಮರಣಪೂರ್ವಕವಾಗಿ ಕೇಳ್ಳೈ ನಾಮಧಾರಕನೆ ॥51॥

ಸತಿಶಿರೋಮಣಿ ಕೇಳು ಪೇಳುವೆ । ವ್ರತವನೊಂದನು ಪರಮ ಸುಖವನು । ಸತತ ಕೊಡುತಿಹ ನಿಷ್ಠೆಯಿಂದದನಾಚರಿಸೆ ಮುದದಿ ॥
ರತಿಪತಿಯ ಸಂಹಾರಕನ ನೀ । ವತುಲಭಕ್ತಿಯೊಳರ್ಚಿಸಲು ಪಶು- । ಪತಿಯು ನಿತ್ಯಾನಂದ ಶಾಂತಿಯನೀವನೀಶ್ವರನು ॥52॥

ವಿಷಯಸುಖತತ್ಪರರು ಭವದಲಿ । ನುಸುಕುವವರಿಲ್ಲದೆ ಸದಾ ಮಾ । ನಸದಿ ವೈರಾಗ್ಯವನು ಭಜಿಪರು ಸರ್ವರಾಶಿವನಾ ॥
ಅಸಮಭಾವದಿ ಪೂಜಿಸಲು ತಾ । ನುಸುಳಲಾರರು ಜನನ ಮರಣದಿ । ಪಶುಪತಿಯು ಪ್ರೇಮದಲಿ ಮೋಕ್ಷವನೀವನವರಿಂಗೆ ॥53॥

ಒಂದಿಹುದು ವ್ರತಗಳ ಶಿರೋಮಣಿ । ಯಿಂದುವಾರದ ಶಿವಪೂಜೆ ಜಿ । ತೇಂದ್ರಿಯತ್ವದಿ ನಕ್ತ ಭೋಜನದಿಂದ ಮಾಡಿದರೆ ॥
ಮಿಂದು ವೈದಿಕ ತಾಂತ್ರಿಕದಿ ನಲ- । ವಿಂದ ಪೂಜೆಯ ಮಾಡಬೇಕಾ । ಯಿಂದುಮೌಳಿ ಪ್ರಸನ್ನನಾಗುವ ಸುಲಭಸಾಧನವು ॥54॥

ಲೇಸಿನಿಂದೀ ವ್ರತವ ಕನ್ಯೆ- । ಸುವಾಸಿನಿಯು ಗತಭರ್ತೃವಿಧವಾ । ಯೋಷಿತೆಯು ಮೇಣ್ ಬ್ರಹ್ಮಚಾರಿ ಗೃಹಸ್ಥರೆನ್ನದಲೆ ॥
ತೋಷದಿಂದಲೆ ಮಾಡಿದರೆ ವಿ । ಶ್ವೇಶ ನೊಲಿವನು ಬೇಡ ಸಂಶಯ । ದೋಷ ನಾಶಕ ಕಥೆಯ ಪೇಳ್ವೆನು ಕೇಳಿರೈ ಮುದದಿ ॥55॥

ಇದ್ದ ನಾರ್ಯಾವರ್ತದಲಿ ಪ್ರ । ಸಿದ್ಧರಾಯನು ಚಿತ್ರವರ್ಮನು । ಇದ್ದನವ ಧರ್ಮಿಷ್ಠ ಕರ್ಮಠ ದುಷ್ಟನಾಶಕನು ॥
ಗೆದ್ದು ಪೃಥ್ವಿಯನೆಲ್ಲ ಧನದಸ- । ಮೃದ್ಧಿಯಾಯಿತು ಸಕಲ ಪುಣ್ಯವ । ಶುದ್ಧ ಮನದಲಿ ಮಾಡಿ ಸತ್ಕೀರ್ತಿಯನು ದೊರಕಿಸಿದಾ ॥56॥

ಸುತನ ಕಾಣದೆ ದುಃಖದಲಿ ನರ । ಪತಿಯ ಪುತ್ರೇಷ್ಟಿಯನು ಮಾಡಿದ । ಸುತೆಯ ಪಡೆದನು ಸುಂದರಾಂಗಿಯ ಶಿವಪ್ರಸಾದದಲಿ ॥
ಅತಿ ಸುಲಕ್ಷಣೆ ತೇಜವಾ ಪಾ । ರ್ವತಿಯ ಪೋಲ್ವುದು ಸೂರ್ಯಕಿರಣದ । ದ್ಯುತಿಯ ಲಾವಣ್ಯದಲಿ ರಾಜಕುಮಾರಿ ಬೆಳಗಿದಳು ॥57॥

ಜಾತಕರ್ಮವ ಮಾಡಿ ಭೂಸುರ । ವ್ರಾತರೆಲ್ಲರು ನೋಡಿ ಕನ್ಯೆಯ । ಜ್ಯೋತಿಷಾಧಾರದಲಿ ಫಲವನು ಹೇಳತೊಡಗಿದರು ॥
ಈತಳೋದರಿ ಪತಿ ಸಹಿತ ಬಹು । ಖ್ಯಾತಿಯಲ್ಲಿಯೆ ರಾಜ್ಯ ಮಾಡುತ । ಭೂತಳದಿ ಕೇಳ್ ಹತ್ತು ಸಾವಿರ ವರುಷ ಬಾಳುವಳು ॥58॥

ಕನ್ಯೆ ಬಹುಲಕ್ಷಳು ಬಹುಲಾ । ವಣ್ಯಳಾ ಉಮೆಯಂದದಲಿಸಂ । ಪೂರ್ಣ ಜ್ಞಾನಳು ದೇವಮಾತೆಯ ತೆರದೊಳೀ ಬಾಲೆ ॥
ಬಣ್ಣಿಸಲು ದಮಯಂತಿರೂಪಳು । ಪೂರ್ಣ ಚಂದ್ರ ಸಮಾನ ದೀಪ್ತಳು । ಕಣ್ಣಿನಿಂ ನೋಡಿದರೆ ಕಾಂತಿಯು ಸೂರ್ಯನಂದದಲಿ ॥59॥

ಜಾನಕಿಯು ಹೋಲುವ ಪತಿವ್ರತೆ । ಮೇಣು ಲಕ್ಷ್ಮಿಯ ತೆರದಿ ಗುಣದನಿ । ಧಾನ ಭಾರತಿಯಂದದಲಿ ವಿದ್ಯಾವಿಶಾರದಳು ॥
ಏನು ಬಣ್ಣಿಸಲೀ ಹಸುಳೆ ಬಹು । ಜಾಣೆಯಾಗುವಳೆಂದು ಪೇಳಲು । ದಾನಗಳ ಮಾಡಿದನು ರಾಜನು ವಿಪುಲ ಹರುಷದಲಿ ॥60॥
ಮೋದದಿಂದಲಿ ದಾನ ಮಾಡುತ । ಮೇದಿನೀಪತಿಯಿರಲು ಸಭೆಯಲಿ । ಮೇದಿನೀ ಸುರನೋಬ್ಬ ನಿರ್ಭಯನಾಗಿ ಪೇಳಿದನು ॥
ಆದರಿಸಿ ನೀ ಕೇಳು ರಾಯನೆ । ಖೇದತಾಳದಿರೆನ್ನ ವಚನಕೆ । ಚೋದ್ಯವೆಂದೆನಬೇಡ ಕನ್ಯಾಳ ಕ್ಷಣವ ಪೇಳ್ವೆ ॥61॥
ಅರಸ ಕೇಳ್ ಹದಿನಾಲ್ಕು ಸಂವ । ತ್ಸರಗಳಾಗಲು ನಿನ್ನ ಕನ್ಯಗೆ । ಬರುವದೈ ವೈಧವ್ಯ ನೀನರಿ ಬ್ರಹ್ಮಲಿಖಿತವಿದು ॥
ನರಪತಿಯು ವಾಕ್ಯವನು ಕೇಳುತ । ಪರಮ ಚಿಂತಾಕ್ರಾಂತನಾದನು । ಧರಣಿಯಲಿ ಮತಿ ತಪ್ಪಿ ಬಿದ್ದನು ಸಿಡಿಲೆರಗಿದಂತೆ ॥62॥
ಕರ್ಣಕರ್ಕಶವಚನವನು ದ್ವಿಜ । ನಿರ್ಣಯದಿ ಪೇಳಿದನು ನಡೆದನು । ಮನ್ನಿಪರು ಜಗ ತೃಣಸಮಾನವೆನುತ್ತನಿಸ್ಪೃಹರು ॥
ಕನ್ಯೆಗಾಸೀಮಂತಿನೀ ಹೆಸ- । ರನ್ನು ಮುದದೊಳಿಟ್ಟ ನಾ ನೃಪ । ಮುನ್ನ ಬೆಳೆದಳು ಸೋಮನಂದದಿ ಬಾಲೆಭವನದಲಿ ॥63॥
ಬಾಲತನದಲಿ ಬೆಳೆಯುತಿಹ ನಿಜ । ಬಾಲೆಯು ಖೇದದಲಿಯವನೀ । ಪಾಲನೋಡುತ ಚಿಂತಿಸಿದನಾ ದ್ವಿಜನ ನುಡಿನೆನೆದು ॥
ಏಳುವರುಷಗಳಾಗೆ ಬಾಲೆಗೆ । ಖೇಳಮೇಳದೊಳಿರುವ ಸಮಯದಿ । ಕೇಳಿದಳು ಕಿವಿಯಿಂದ ಭೂಸುರವಾಕ್ಯದಿಂಗಿತವಾ ॥64॥
ಕೇಳಿದಳು ವೈಧವ್ಯತನಗೀ । ರೇಳುವರುಷದಿ ಬರುವುದೆನುತಲಿ । ಬಾಲೆಕರೆದಳು ಯಾಜ್ಞವಲ್ಕ್ಯನ ಪತ್ನಿಯನು ಮನೆಗೆ ॥
ಕಾಲಿಗೆರಗುತ ವಿನುತ ಚರಿತೆಗೆ । ಪೇಳಿದಳು ದ್ವಿಜವಚನವೆಲ್ಲವ । ಪಾಲಿಸೌ ಯೆನಗೆನುತ ಕರಗಳ ಮುಗಿದು ವಿನಯದಲಿ ॥65॥
ಜನನಿ ನೀನಾಗಿರುವೆ ಮೈತ್ರಾ । ಯಣಿಯೆ ನಿನ್ನನು ಶರಣು ಹೊಕ್ಕೆನು । ಮನವು ಚಂಚಲವಿವುದು ಕೇಳೌ ವಿಪ್ರವಚನದಲಿ ॥
ಯೆನಗೈ ಸೌಭಾಗ್ಯವು ನಿರಂತರ । ಘನತರದಿ ಸ್ಥಿರವಾಗುವಾ ವ್ರತ । ವನು ಸಗಾಢದಿ ಪೇಳಬೇಕೆಂದೆರಗಿದಳು ಪದಕೆ ॥66॥

ಎಂದ ವಚನವ ಕೇಳಿ ಕನ್ಯಗೆ । ಯೆಂದಳಾ ಮೈತ್ರಾಣಿಯು ನೀ- । ನಿಂದುಮೌಳಿಯ ಶರಣು ಹೊಗು ಸ್ಥಿರವಿಹುದು ಸೌಭಾಗ್ಯ ॥
ಇಂದುವಾರದ ವ್ರತವ ನೀನೋಲ- । ವಿಂದಲಾಚರಿಸಿ ನಿನ್ನಯ । ಕುಂದು ಹೋಗುವದಿದುವೆ ನಿಶ್ಚಯವೆಂದು ನೀನಂಬು ॥67॥

ಹರನ ಪೂಜಿಸಬೇಕು ಭಕ್ತಿಯೋ । ಳಿರುತ ಸ್ನಾನವ ಮಾಡಿ ದಿವ್ಯಾಂ । ಬರವ ಧರಿಸುತ ನೀ ನಿರಾಹಾರದಲಿ ಯಡೆಬಿಡದೆ ॥
ದುರಿತವಭಿಷೇಕದಲಿ ನಾಶವು । ದೊರೆವುದೈ ಸಾಮ್ರಾಜ್ಯ ಪೀಠದ । ನಿರುತವದ ಪೂಜೆಯನುಮಾಡಲು ಭಕ್ತಿಭಾವದಲಿ ॥68॥

ಗಂಧಪುಷ್ಪಾಕ್ಷತೆಸಮರ್ಪಣೆ- । ಯಿಂದು ಸುಖಸೌಭಾಗ್ಯ ಬರುವುದು । ಬಂಧುದರ ಸೌಭಾಗ್ಯ ಬರುವುದು ಧೂಪದಾನದಲಿ ॥
ಬಂದಪುದು ಸತ್ಕೀರ್ತಿ ದೀಪದಿ । ತಂದು ನೈವೇದ್ಯವನು ಕೊಡಲಾ- । ನಂದಭೋಗದ ಪ್ರಾಪ್ತಿಯಪ್ಪುದು ಶಿವನ ಪೂಜೆಯಲಿ ॥69॥

ಕೊಡಲು ತಾಂಬೂಲವನು ಲಕ್ಷ್ಮಿಯು । ನಡೆದು ಬರುವಳು ಮನೆಗೆ ಶಂಕರ । ನಡಿಗೆ ನಮನವ ಮಾಡೆ ಪುರುಷಾರ್ಥಗಳು ದೊರೆಯುವವು ॥
ಮೃಡನ ಜಪಿಸಲು ಬಂದು ಕಾಲ್ಗಳ । ಪಿಡಿವವಷ್ಟೈಶ್ವರ್ಯಗಳು ಧನ । ವೊಡವೆ ವಸ್ತುಗಳೆಲ್ಲ ಹೋಮದಿ ತುಂಬಿ ತುಳುಕುವವು ॥70॥

ಇತ್ತರಾ ವಿಪ್ರರಿಗೆ ಭೋಜನ । ತೃಪ್ತರಾಗುವರೆಲ್ಲ ದೇವರು । ಸತ್ಯವಿದು ನೀನಿಂದುವಾರವ್ರತವನಾಚರಿಸು ॥
ಮೃತ್ಯುಹರ ಪೂಜೆಯಲಿ ದುರಿತ ಸ । ಮಸ್ತ ಪರಿಹರಿಸುವುದು ಕ್ಲೇಶವ । ಕಿತ್ತಿ ಬೇರನು ಭಯವ ನಾಶಿಸುವದು ಹರನ ಪೂಜೆ ॥71॥

ಸೋಮವಾರವ್ರತದ ಮಹಿಮೆಯ । ಪ್ರೇಮದಲಿ ಪೇಳಿದುದ ಕೇಳುತ । ನೇಮ ಮಾಡಿದಳಾ ವ್ರತವನಾಚರಿಸಿದಳು ತರಳೆ ॥ ಹೋಮವಾಯಿತು
ದುರಿತವೆಲ್ಲವು । ಕೋಮಲಾಂಗಿಯು ವಯದಿ ಬೆಳೆಯಲು । ಭೂಮಿ ಪತಿ ಯೋಚಿಸಿದನೈ ಲಗ್ನವನು ಮಾಡುವರೆ ॥72॥

ಬಂದುದೆಲ್ಲವು ಬರಲಿ ವಿಧಿಲಿಪಿ । ಯಿಂದ ತಪ್ಪಿಸಲಾರಿಗಳವೈ । ಇಂದು ವಿವಾಹಯೋಗ್ಯಳು ಲಗ್ನ ಮಾಡುವೆನು ॥
ಎಂದು ಮನದಲಿ ನಿರ್ಧರಿಸಿ ರಾ । ಜೇಂದ್ರ ಕಳುಹಿದನೆಲ್ಲ ಮಂತ್ರಿ- । ವೃಂದವನು ದಿಶೆದಿಶೆಗೆ ಹುಡುಕಲು ಯೋಗ್ಯ ವರನನ್ನು ॥73॥

ಧರಣಿಯೆಲ್ಲವ ಹುಡುಕಿದರು ನೃಪ । ವರನಳನ ವಂಶದಲಿ ಕಂಡರು । ವರನ ಚಿತ್ರಾಂಗದನ ಚಂದ್ರಸಮಾನ ಹೊಳೆಯುವನಾ ॥
ಕರೆದು ತತ್ಪಿತನಿಂದ್ರಸೇನನಿ । ಗರುಹಿನಿಶ್ಚೈಸಿದರು ಲಗ್ನವ । ಮೆರೆಯಿತಾಸೀಮಂತಿನಿಯ ವೈವಾಹಸೌರಂಭ ॥74॥

ಸುಂದರಾಂಗಿಯ ಲಗ್ನ ಕಾರ್ಯಕೆ । ಬಂದರೈ ಬಹುದೇಶಪಾಲರು । ಚಂದವನು ಬಣ್ಣಿಸಲಿಕಸದಳ ಭಾರಿಸೌರಂಭ ॥
ಬಂದವರಿಗಾನಂದದಿಂದಲಿ । ತಂದು ನಾನಾಭರಣವಸ್ತ್ರಾಗ- । ಳಿಂದ ಸನ್ಮಾನಿಸಿದನಾರಾಜೇಂದ್ರ ಲಗ್ನದಲಿ ॥75॥

ಕಳುಹಿಕೊಟ್ಟನು ನೆಂಟರನು ಬಳಿ- । ಕಳಿಯನೊಬ್ಬನನಿಟ್ಟು ಕೊಂಡನು । ಹಲವುದಿನವೀಪರಿಯಲಳಿಯನು ಸಂತಸದಿ ಕಳೆದಾ ॥
ಜಲದಿ ಕ್ರೀಡೆಯನಾಡಲೋಸುಗ । ದಳಸಹಿತ ಕಾಳಿಂದಿನದಿತಟ । ಬಳಿಗೆ ಬಂದನು ರಾಜಪುತ್ರನು ವಿಹರಕಾತುರನು ॥76॥

ಹರುಷದಿಂದ ರಾಜಪುತ್ರನು । ತೆರಳಿದನು ನೌಕೆಯಲಿ ದೂತರ । ನಿರದೆ ಕೊಂಡನು ಮಾಡಿದನು ಜಲದಲಿ ವಿಹಾರವನು ॥
ಪರಿಪರಿಯಲೋಲಾಡುತಿರ್ದರು । ಪರಮಸಂತೋಷದಲಿ ದೂತರು । ಉರುಳಿ ಬಿತ್ತಾ ನೌಕೆ ಮುಳುಗಿದರೆಲ್ಲರಾಜಲದಿ ॥77॥

ದಳದಿ ಕೋಲಾಹಲವು ಬೆಳೆಯಿತು । ಮುಳುಗಿದನು ನೀರಲಿ ಕುಮಾರನು । ಯಿಳಿಯಿರೈ ತೆಗೆಯಿರಿ ಯೆನುತ ಬೊಬ್ಬಿರಿದರಾ ಜನರು ॥
ಜಲದೊಳಗೆ ಮುಳುಗುತ್ತೆ ರಾಜನ । ಅಳಿಯನನು ಶೋಧಿಸಲು ಕಾಣದೆ । ಬಳಲಿ ಬೆಂಡಾದರು ಮಹಾದುಃಖದಲಿ ನೃಪಸೇನೆ ॥78॥

ಎರಡು ದಂಡೆಯಮೇಲೆ ಶೋಧಿಸೆ । ಪರಿಪರಿಯಲಾ ನೃಪನ ಸೈನ್ಯವು । ಮರುಗಿ ಮಂತ್ರಿಗಳೋಡಿ ಸುದ್ದಿಯ ತಿಳಿಸಿದರು ನೃಪಗೆ ॥
ಅರಸ ಕೇಳ್ ನಿನ್ನಳಿಯ ನದಿಯಲಿ । ತೆರಳಿದನು ಜಲಕ್ರೀಡೆಗೆನುತಲಿ । ತರಳ ಬಿದ್ದನು ಜಲದಿ ನೌಕೆಯು ಮುಳುಗಿಹೋಯಿತಲಾ ॥79॥

ನೀರಿನಲಿ ದಳವಿಳಿಸಿ ನೋಡಲು । ಬಾರಲಾರನು ಮೇಲಕಳಿಯನು । ತೋರುವುದು ವಿಪರೀತ ಕಷ್ಟವಿದೆಂದರಾ ನೃಪಗೆ ॥
ಕ್ರೂರವಚನವನಿದನು ಕೇಳುತ । ಧಾರುಣೀಪತಿ ಮೂರ್ಛೆಬಿದ್ದನು । ಭಾರಿದುಃಖದಿ ರಾಜಕನ್ಯೆ ಪ್ರಳಾಪಿಸಿದಳಾಗ ॥80॥

ನಾರಿಯರು ಬಹು ಕೂಡುತಲಿ ನದಿ- । ತೀರಕ್ಕೈ ತಂದರು ಸದಾಢದಿ । ಪಾರವಿಲ್ಲಾ ದುಃಖಿಕಿದನಾನೆಂತು ವರ್ಣಿಸಲಿ ॥
ಮಾರಹರನೇ ನಿನ್ನ ವ್ರತವನು । ಭಾರಿ ಭಕುತಿಯಲೆಸಿಗಿದೆನು ನಾ । ತೋರಲಿಲ್ಲ್ಯ ಕರುಣೆಯೆನ್ನಯ ಮೇಲೆ ತ್ರಿಪುರಾರಿ ॥81॥

ವರುಷ ಹದಿನಾಲಕ್ಕೆ ಮರಣವು । ಬರುವುದೆನ್ನಯ ಪತಿಗೆನುತನಾ । ನರಿತು ಚರಣವಾಶ್ರೈಸಿದೆನು ಲೋಭದಲಿ ॥
ಹರನ ವ್ರತ ನಿಷ್ಫಲವದಾಯಿತು । ಶರಣಳನು ಕೈಬಿಟ್ಟೆ ನಿನ್ನಯ । ಪರಮಕೀರ್ತಿಯ ಚಂದ್ರಮಂಗಾ ಗ್ರಹಣಹತ್ತಿತಲಾ ॥82॥

ನೀಲಕಂಠನೆ ನಿನ್ನ ನಂಬಿದ । ಬಾಲೆಯನುಪೇಕ್ಷಿಸುವುದುಚಿತವೆ । ಟೋಲಕೂತಿತು ನಿನ್ನ ಕೀರ್ತಿಯ ಲತೆಯ ತಿನ್ನುವರೆ ॥
ಹೇಳಲಾರಿಗೆ ಯೆನ್ನ ದುಃಖವ । ಕೇಳಿ ಮಾಡುವರೇನು ಸೌಖ್ಯವ । ಹಾಳು ಮಾಡಿದನೇ ಯಮಾಜಿಯು ವೈರ ಸಾಧಿಸುತಾ ॥83॥

ಸೋಮವಾರವ್ರತದಿ ಸಿಗುವುದು । ಕಾಮಿತವು ನಿಜವೆಂದು ಪೇಳ್ದಳು । ಭಾಮಿನೀಮಣಿ ಯಾಜ್ಞವಲ್ಕ್ಯನ ರಾಣಿ ಮೈತ್ರಾಣಿ ॥
ಈ ಮಹಾತ್ಮ್ಯೆಯ ವಚನದಲಿ ನಿ-। ಸ್ಸೀಮಭರವಸೆಯಿಟ್ಟು ಕೆಟ್ಟೆನು । ಸೋಮಶೇಖರವ್ರತವು ನಿಷ್ಫಲವಾಯ್ತು ಪಾಪಿಣಿಗೆ ॥84॥

ಅಳುತ ನಾನಾ ಪರಿಯೊಳಾ ಸತಿ । ಜಲದಿ ಧುಮುಕುವೆನೆಂದು ಯತ್ನಿಸೆ । ಬಳಗವೆಲ್ಲರು ಕೂಡಿ ಸಂತೈಸಿದರು ಭಾಮಿನಿಯಾ ॥
ಇಳೆಯಧಿಪನಳಿಯನ ನಿಧನವನು । ತಿಳಿದು ಬಂದನು ಕನ್ಯೆಯಿದ್ದೆಡೆ । ತಿಳಿಸೆ ನಾನಾ ತತ್ವ ಬೋಧವ ಪಳ್ದನಾ ಸುತೆಗೆ ॥85॥

ಸಕಲಮಂತ್ರಿಪುರೋಹಿತರು ನಾ । ವಿಕರ ಕರೆಸುತ ಶೋಧಮಾಡಿದ । ರಕಟ ನಿಷ್ಫಲವಾಯ್ತು ಯತ್ನವು ಪ್ರೇತಕಾಣದಲೆ ॥
ಸಕಲ ಸೇವಕವೃಂದ ದುಃಖದೊ-। ಳಕಟ ಮುಳುಗಿದರೇನೆಂಬೆನು । ವಿಕಲಮತಿ ಕಳುಹಿದನು ವಾರ್ತೆಯನಿಂದ್ರಸೇನನಿಗೆ ॥86॥

ಮಗನಳಿದ ವಾರ್ತೆಯನು ಕೇಳುತ । ನಗರಕ್ಕೈ ತಂದನು ನೃಪಾಲನು । ಮಗನು ಮುಳುಗಿದ ನದಿಗೆ ಬಂದು ಪ್ರಲಾಪ ಮಾಡಿದನು ॥
ವಿಗಡದುಃಖದ ರಾಯರಿರ್ದರು । ಮುಗದಿ ಸೀಮಂತಿನಿಸಹಿತ ದೃಗು- । ಯುಗದಿ ಗಂಗಾನದಿಯಸಿಳಿಸಿದರೇನು ಹೇಳುವೆನು ॥87॥

ಹಣೆಯ ತಿಲಕವನೊರಸಿ ಬಾಲೆಯು । ಗಣನೆಯಿಲ್ಲದೆ ಶೋಕಮಾಡಿದ । ಳೆನಗೆ ಮುಂದಿನ ಜೀವದಾಸೆಯು ತೋರದೆಳ್ಳಿನಿತು ॥
ಉಣೆನು ವೈಧವ್ಯವನು ಪತಿಯೊಳು । ಕೊನೆಯ ಕಾಂಬೆನು ಸಹಗಮನದಲಿ- । ಗಣಿಗಳೆಲ್ಲಕೆ ಕೇಳಿ ಕೊಡಿರಿ ನಿರೋಪವೆನಗೀಗಾ ॥88॥

ಪ್ರೇತ ಶೋಧಿಸ ಬೇಕು ನದಿಯಲಿ । ಪ್ರೇತವಿಲ್ಲದೆ ಸಹಗಮನದಾ- । ಮಾತು ಸಲ್ಲದು ಪ್ರೇತಸಿಕ್ಕಿದ ಮೇಲೆ ಸಹಗಮನಾ ॥
ಮಾತನೀಪರಿಯಾಡಿ ಭೂಸುರ । ರಾ ತಳೋದರಿಗರಿವ ಪೇಳ್ದರು । ಪ್ರೀತಿಯಲಿ ತತ್ವವನು ಬೋಧಿಸಿದರು ಸತಿಗೆ ಮುದದಿ ॥89॥

ಮಗಳೆ ವಿಧಿಯನು ಜಯಿಸುವರು ಮೂ- । ಜಗದೊಳಾರನು ಕಾಣೆ ವಿಧಿವಶ । ಜಗವು ತಲೆಬಾಗಿಸಲು ಬೇಕಾವಿಧಿಗೆ ನಮ್ರತೆಯೆ ॥
ಮುಗದೆ ನೀ ಶೋಕವನು ಬಿಡುನಿ । ನ್ನಗಲಿದನು ಪತಿಯೆಂದು ಶೋಕದ । ಬಗೆಯುಸಲ್ಲದುಯೆಂದು ಮನೆಗೊಯ್ದರು ಸತಿಯನೆಳೆದು ॥90॥

ಇಂದ್ರಸೇನನು ಪುತ್ರಶೋಕದಿ । ಕಂದಿದಾನನದಿಂದ ರಾಜ್ಯಕೆ । ಬಂದು ಖಂತಿಯೊಳಿರಲು ಗೋತ್ರಜರೆಲ್ಲ ಕಪಟದಲಿ ॥
ಬಂದಿವಾಸದೊಳಿಟ್ಟರವನನು । ಸುಂದರಾಂಗಿಯ ಸಹಿತ ರಾಜನ । ಚಂದದಿಂದಲಿ ರಾಜ್ಯವಾಳಿದರೇನ ಹೇಳುವೆನು ॥91॥

ಪುತ್ರಿಯನು ನೋಡುತಲಿ ದುಃಖಿದಿ । ಚಿತ್ರವರ್ಮನು ಬೋಧಿಸಿದನಾ । ತತ್ವವನು ಸಂತೈಸಿ ಕನ್ಯೆಯ ಬಹಳ ಮಮತೆಯಲಿ ॥
ಪುತ್ರಹೊಟ್ಟೆಯಲಿಲ್ಲ ನೀನೇ । ಪುತ್ರನಂದದಿ ರಮಿಸು ಮನೆಯಲಿ । ಚಿತ್ತಶುದ್ಧಿ ಯಲೊಂದು ವರುಷದ ತನಕ ನಮ್ಮೊಡನೆ ॥92॥

ಊರವರು ನಿಂದಿಪರು ವಿಧವಾ । ಚಾರವಿಲ್ಲಾ ರಾಜಕನ್ಯಗೆ । ದೂರಿದರೆ ನಾ ಪೇಳ್ವೆ ಮಾರುತ್ತರನವರಿಂಗೆ ॥
ನಾರಿವರುಷಾವಧಿಯ ಕಳೆಯೆ ವಿ- । ಚಾರವನು ನಾಪೇಳ್ವೆ ದುಃಖವ । ದೂರ ಮಾಡಾತನಕ ಧೈರ್ಯದೊಳೆಂದನಾ ಭೂಪ ॥93॥

ಪಿತನ ಮಾತನು ಕೇಳಿ ರಾಯನ । ಸುತೆಯು ಶಿವಚಿಂತನವ ಮಾಡುತ । ಸತತವಾಚರಿಸಿದಳು ಹಿಂದಿನ ಸೋಮವಾರವ್ರತಾ ॥
ಗತಿವಿಹೀನಳಿಗೀಗ ನೀನೇ ಗತಿ ಕಣಾ ಪರಮೇಶನೆನುತಲಿ । ನುತಿಸಿ ಶಿವನನು ಪೂಜಿಸಿದಳುಪವಾಸದಲಿ ಸತಿಯು ॥94॥

ನದಿಯ ತೀರಕೆ ನಾಗಲೋಕದ । ಸುದತಿಯರು ಬಂದವರು ಸುಂದರ- । ವದನನನು ಲಾವಣ್ಯ ಮೂರ್ತಿಯ ರಾಜನಂದನನಾ ॥
ಸದಯದಂತಃಕರಣದಿಂದಲಿ । ಯೊದಗಿತೆಗೆದರು ಜಲದಿ ಮುಳುಗುವ । ಮದನಮೂರ್ತಿಯ ತೆರನ ಸುಕುಮಾರನನು ಯೆತ್ತುತಲಿ ॥95॥
ಮಂದಿರಕೆ ಕರೆದೊಯ್ದು ಕೇಳಾ । ಸುಂದರಾಂಗನಿಗಮೃತ ಕುಡಿಸುತ । ತಂದರೈ ಜೀವವನು ಮೂರ್ಛಿತನಾದ ನೃಪಸುತಗೆ ॥
ಇಂದು ದೊರಕಿತು ರತ್ನ ಸುಂದರ- । ವೆಂದು ನಲಿದರು ನಾಗ ಕನ್ಯೆಯ । ರಂದು ತಂದರು ತಕ್ಷಕನಿಗರ್ಪಣವ ಮಾಡಿದರು ॥96॥
ನೋಡಿದರು ಪಾತಾಳಲೋಕದ । ಗಾಢರಚನೆಯ ರಾಜಪುತ್ರರು । ಪ್ರೌಢತನದಲಿ ಇಂದ್ರಭುವನಕೆ ಮಿಗಿಲೆನಿಸಿ ಹೊಳೆವಾ ॥
ಮೂಡಿದಳೋ ವಿದ್ಯುಲ್ಲತೆಯು ಮೇ- । ಣಾಡಿದಳೊ ತಕ್ಷಕನ ನಗರದಿ । ರೂಢಿಗಚ್ಚರಿಯೆಂಬ ತೆರದಲಿ ನಗರ ಹೊಳೆಯುವುದು ॥97॥
ಮುತ್ತು ಮಾಣಿಕ ವಜ್ರನೀಲಗ । ಳುತ್ತಮೋತ್ತಮ ಪಂಕ್ತಿಯಿಂದಲಿ । ಕೆತ್ತಿಸಿದ ನಗರದಲಿ ಸೂರ್ಯನ ಕಾಂತಿ ನಾಚಿತಲಾ ॥
ವಿಸ್ತರಿಸಿತಾ ನೆಲವು ಚಂದ್ರನ । ದೀಪ್ತಿಯೋ ದ್ವಾರಾವತಿಯ ಬಹು । ಚಿತ್ರರಂಜಕ ಹೇಮಭೂಷಿತ ಭೂವಿಯೆಂಬಂತೆ ॥98॥
ಮೇಲೆ ನೋಡಿದನಖಿಳ ಸರ್ಪರ । ಮೇಳವನು ವಿಕ್ರಾಳಫಣಿಗಳ । ಕಾಲಕೂಟವನುಸುರಿಸಲೆ ಫೂತ್ಕರಿಪ ನಾಗರನು ॥
ಮೇಲೆ ಸಿಂಹಾಸನದ ಮಧ್ಯದಿ । ಮೇಳವಿಸಿದನು ನಾಗರಾಜನು । ಹೋಲುತಿಹನವಕೋಟಿಸೂರ್ಯರ ಪ್ರಭೆಯನೇನೆಂಬೆ ॥99॥
ಸ್ವರ್ಣದಂಡದಿ ನಾಗರಾಜನ । ವರ್ಣಶೋಭಿಸಿತೇನ ಹೇಳುವೆ । ರನ್ನಗಳು ಮುಗುಟದಲಿ ಸಾವಿರ ಹೆಡೆಗಳಿರುತಿಹವು ॥
ಹೊನ್ನ ಪೀತಾಂಬರವ ಸುತ್ತುತ । ಪನ್ನಗಾಧಿಪ ರಂಜಿಸಿದನಾ । ಕನ್ಯೆಯರು ಸೇವಿಸುವರಾತನ ದಿವ್ಯ ಭೂಷಿತರು ॥100॥
ಫಣಿ ವರನ ಸಭೆಯೊಳಗೆ ರಾಜನ । ತನಯನೈತರೆ ಕಾಲಿಗೆರಗಿದ । ವಿನಯಪರವಚನದಲಿ ಬಿನ್ನೈಸಿದನು ತಕ್ಷಕಗೆ ॥
ಫಣಿಪತಿಯು ನೋಡುತ ಕುಮಾರನ । ಮನದಿ ಸಂತಸ ತಾಳ್ದು ಕೇಳಿದ । ತನಯ ಸುಂದರನೀತ ನಿಮಗೆಲ್ಲಿಂದ ದೊರಕಿದನು ॥101॥

ಅರಸ ಕೇಳ್ಕೈ ಕುವರ ನಾರೆಂ- । ದರಿಯದೀತನನಿಲ್ಲಿ ತಂದೆವು । ಧರೆಗೆ ಯಮುನಾ ತೀರದಲಿ ಸ್ನಾನಾರ್ಥ ಹೋಗಿರಲು ॥
ದೊರೆತನೆಮಗಾ ನೀರಿನಲಿ ಸುಂ- । ದರನು ಮುಳುಗಿಯೆ ಸುಯುತಿದ್ದನು । ಕರುಣದಿಂದೆತ್ತಿದವು ತಂದೆವು ನಾಗಲೋಕದಲಿ ॥102॥

ಈ ತೆರದೊಳಾ ನಾಗಕನ್ಯೆಯ । ಮಾತನಾಲಿಸಿ ಪೇಳ್ದ ತಕ್ಷಕ । ಭೀತಿಯನು ನೀ ತ್ಯಜಿಸು ನಿರ್ಭಿಡೆಯಿಂದ ಮಾತಾಡು ॥
ಭೂತಳದಿ ತವದೇಶವಾವುದು । ಯಾತ ಕೋಸುಗ ಬಂದೆ ನಿನ್ನಯ । ಮಾತೆಯಾರ್ಕೈ ಹೆಸರು ಯಾವದು ಯೆನಗೆ ಪೇಳಿದನು ॥103॥

ನಾಗರಾಜನೆ ಕೇಳು ಯೋಗಾ- । ಯೋಗವಿದು ದುರ್ಘಟವು ನಿನ್ನಯ । ನಾಗಕನ್ಯೆಯರೆನ್ನ ತಂದರು ಜಲದಿ ಮೂರ್ಛಿತನಾ ॥
ಭಾಗ್ಯವೆನ್ನದು ದೊಡ್ಡದೆಂದೀ । ಯೋಗ್ಯ ನಿನ್ನಯ ಚರಣ ಕಂಡೆನು । ಬಾಗಿ ಶಿರವನು ನಿನಗೆ ಪೇಳುವೆನೆನ್ನ ಚರಿತವನು ॥104॥

ಅರಸನಿರುವನು ಇಂದ್ರಸೇನನು । ಧರೆಯೊಳಗೆ ನೈಷಧನ ವಂಶದಿ । ತರಳನವನಿಗೆ ನಾನು ಚಿತ್ರಾಂಗದನು ಹೆಸರೆನಗೆ ॥
ಹರುಷದಿಂದಲಿ ನಾ ಜಲದಲಿ ವಿ । ಹರಿಸುತಿರೆ ಕೇಳ್ ನಾವೆ ಮುಳುಗಿತು । ಬರವಿದಾಯಿತು ನಿಮ್ಮ ಲೋಕಕ್ಕೆಂದನಾ ಕುವರಾ ॥105॥

ಧನ್ಯ ಪೂರ್ವಾರ್ಜಿತದ ಫಲದಲಿ । ನಿನ್ನ ದರ್ಶನವಾಯ್ತು ಪಾಪವು । ಛಿನ್ನವಾಯಿತು ನಿನ್ನ ದರ್ಶನ ಮಾತ್ರದಿಂದೆನ್ನಾ ॥
ಎನ್ನುತೀಪರಿ ಸ್ತುತಿಸೆ ಕುವರನು । ಮನ್ನಿಸುತ ನಾಗೇಂದ್ರ ನುಡಿದನು । ಚಿನ್ನ ದಾಸನವಿತ್ತು ಕೂಡಿಸಿದನು ಕುಮಾರನಿಗೆ ॥106॥

ತರುಣ ನಿನ್ನಯ ಗುಣಗಳೆಲ್ಲವ । ಪರಿಕಿಸಲು ಸಂತೋಷವಾಯಿತು । ಕರುಣದಿಂದೆನಗರುಹು ನಿನ್ನಯ ಭವನದಲಿ ನಿಜದಿ ॥
ನಿರತ ಪೂಜಿಪದೈವವಾವುದು । ಪರವು ಚೋದ್ಯವಿದವನ ಮಹಿಮೆಯು । ಬರವಿದಾಯಿತು ಯೆಮ್ಮಲೋಕಕೆ ಕುಡಿದೆಯಮೃತವನು ॥107॥

ಎಂದು ನುಡಿಯನು ಕೇಳಿ ಬಹಳಾ । ನಂದದಿಂದಲಿ ಕುವರ ಪೇಳ್ದನು । ಚಂದ್ರಶೇಖರ ಸಕಲ ದೇವರ ದೇವ ಶಿವನೆಮ್ಮಾ ॥
ಮಂದಿರದಿ ಪೂಜಿಸುವ ದೈವತ । ತಂದೆ ವಿಶ್ವಕೆ ಬ್ರಹ್ಮರಾಜಸ । ದಿಂದ ಸಂಭವಿಸಿದನು ರಚಿಸಿದನೆಲ್ಲ ವಿಶ್ವವನು ॥108॥

ಅವನ ಸಾತ್ವಿಕ ಗುಣವೆ ವಿಷ್ಣುವು । ಭುವನಗಳನೆಲ್ಲವನು ರಕ್ಷಿಪ- । ನವತರಿಸಿ ಯುಗಯುಗದಿ ಧರ್ಮಸ್ಥಾಪನೆಯ ಮಾಡಿ ॥
ಅವನ ತಾಮಸಗುಣದಿ ತಾವು- । ದ್ಭವಿಸಿದರು ಹನ್ನೊಂದು ರುದ್ರರು । ಭುವನಕೆಲ್ಲಕೆ ಪ್ರಳಯತರುವವರು ಕಲ್ಪದಂತ್ಯದಲಿ ॥109॥

ಸೃಷ್ಟಿ ಸ್ಥಿತಿಲಯವೆಂಬ ಮೂರಾ । ಕಟ್ಟಳೆಗಳಿಗೆ ಮೂಲಬೀಜವು । ಶ್ರೇಷ್ಠ ನಿಹನ್ನೈ ಯೆನ್ನ ಕುಲದೇವತೆ ಸದಾಶಿವನು ॥
ಕೊಟ್ಟನಾತನೆ ರವಿಗೆ ತೇಜನ । ನಿಟ್ಟನಾತನೆ ಶೀತ ಶಶಿಯಲಿ । ತುಷ್ಟವಾಗಿಹ ಪಂಚಭೂತಗಳವಗೆ ದಾಸರಲಾ ॥110॥

ಸರ್ವಭೂತಾತ್ಮಕನು ಪೂರ್ಣನು । ಶರ್ವ ಚಿನ್ಮಯನೈ ನಿರಂಜನ । ನೀಶ್ವರನು ನೋಡಿದರಚಿಂತ್ಯನು ಸಗುಣನಿರ್ಗುಣನು ॥
ದಿವ್ಯ ಕುಂಡಲಿ ಶೇಷತಕ್ಷಕ- । ರೀರ್ವರವನಿಗೆ ಮೂರು ಕಣ್ಣುಗ । ಳುರ್ವಿಯಲಿಶಶಿಸೂರ್ಯಪಾವಕರೆಂಬ ಭೂತಗಳು ॥111॥

ಹುಲಿಯ ತೊಗಲನು ಸುತ್ತಿ ದೇಹದಿ । ತಲೆಯೊಳಗೆ ಬಾಲೇಂದು ಧರಿಸಿ । ಹೊಳೆವನಾ ಶಿವನವನ ಮನೆಯಲಿ ಪೂಜಿಪೆವು ನಾವು ॥
ಲಲಿತವಚನವ ಕೇಳ್ದನಾ ಮನ- । ದೊಳಗೆ ಸಂತಸ ತಾಳಿ ತಕ್ಷಕ । ನೊಲಿದು ಬಿಗಿದಪ್ಪಿದನು ಶಿವಭಕ್ತನನು ತೋಷದಲಿ ॥112॥

ಕೊಡುವೆನಿನಗಾನೆಲ್ಲ ರಾಜ್ಯವ । ಸಡಗರದಿ ಪಾತಾಳಲೋಕ । ಕ್ಕೊಡೆಯ ನೀನಾಗೀಗ ಕೊಡುವೆನು ರಾಜ್ಯ ಭೋಗಗಳಾ ॥
ಕೊಡುವೆನಿನಗಾನೆಲ್ಲರತ್ನವ । ಪೊಡವಿಯಲಿ ಗೋಚರಕೆ ಬಾರದ । ವೊಡವೆವಸ್ತುಗಳಿಹವು ಯೆನ್ನಯ ರಾಜ್ಯದಲಿ ನೋಡು ॥113॥

ಇಳೆಯೊಳಿಲ್ಲದ ಕಲ್ಪವ ಕ್ಷಂ- । ಗಳ ನಿನಗೆ ತೋರಿಸುವೆನಗಣಿತ । ದಿಳೆಯೊಳಗೆ ಮಾನವರ ದೃಷ್ಟಿಗೆ ಬೀಳದಮ್ಮ ತವದು ॥
ಕೊಳದಿ ಕೂಪತಟಾಕನದಿನದ- । ಗಳಲಿ ರಂಜಿಸುತಿಹುದು ರೋಗಂ- । ಗಳನು ಮರಣಾದಿಗಳ ಕಾಣರು ಯೆನ್ನ ರಾಜ್ಯದಲಿ ॥114॥

ಈ ತೆರದಿ ಸಾಮ್ರಾಜ್ಯ ದುರ್ಲಭ । ಭೂತಳದಿ ನೋಡಿದರೆ ನಿಮಗಿದ । ಪ್ರೀತಿಯಲಿ ನಾನೀನೆ ಶಿವಪೂಜಕನು ನೀನೆಂದು ॥
ಭೀತಿಯಿಲ್ಲದೆ ರಾಜ್ಯವಾಳ್ಕೈ । ಭೂತನಾಥನು ನಿನಗೆ ಮೆಚ್ಚಿಹ । ಕಾತರಿಸದಿರು ಯೆಂದು ನುಡಿದನು ತಕ್ಷಕನು ಮುದದಿ ॥115॥

ನಾಗರಾಜನೆ ಕೇಳು ಯೆನ್ನಯ । ನಾಗವೇಣಿಯು ಪೂಜಿಸುವಳಾ । ನಾಗಭೂಷಣನನ್ನು ಪತಿಯಾಯುಷ್ಯ ವರ್ಧಿಸಲು ॥
ಸಾಗಿಬಂದೆನು ತಿಳಿಯದವಳಿಗೆ । ಹೋಗಿ ಬರುವೆನು ಮೃತ್ಯುಲೋಕಕೆ । ನೀಗುವಳು ಪ್ರಾಣವನು ಮತ್ರಿಯೆ ಹೋಗದಿರೆ ನಾನು ॥116॥

ಪಿತನ ಹೊಟ್ಟೆಯೊಳೊರ್ವ ನಾನೇ । ಸುತನು ಸಂಜನಿಸಿದೆನು ಯೆನ್ನಯ ಪಿತನು । ದುಃಖದಿ ಮುಳುಗಿಹನು ಸುತವಿರಹ ತಾಳುವನೆ ? ॥
ಸತಿ ಚತುರ್ದಶವರ್ಷದಾಕೆಯು । ಪತಿಯೇ ದೈವತವೆಂದು ನಂಬುವ । ಸತಿಯು ನೂತನ ಲಗ್ನದಾಕೆಯು ದುಃಖ ಸಹಿಸುವಳೆ ॥117॥

ಸೆಳೆಯುತಿದೆ ಮನ ಲೋಹ ಚುಂಬಕ । ವೆಳೆಯುವಂದದಿ ತಂದೆತಾಯ್ಗಳ । ತಿಳಿಮೊಗವ ನಾ ನೋಡಿ ಸಂತೈಸುವೆನು ದುಃಖದಲಿ ॥
ತಿಳಿಯೆ ತಾಯ್ತಂದೆಗಳ ಮುಖಾಂತರ । ಗಳಿಸಿದೆನುನಾ ಸರ್ವಸುಖಗಳ । ನಿಳೆಗೆ ಹೋಗುವೆನೊಮ್ಮೆ ಚರಣವ ನೋಳ್ಪೆನವರುಗಳಾ ॥118॥

ಹೋಗದಿರೆ ನಾಮೃತ್ಯು ಲೋಕಕೆ । ತ್ಯಾಗಿಸುವರೆ ದೇಹವನು ಮೇ । ಣಾಗುವುದು ಯೆನ್ನಿಂದ ಹತ್ಯವು ತಂದೆ ತಾಯಿಗಳಾ ॥
ನಾಗರಾಜನೆ ನಿನ್ನ ದರ್ಶನ । ವಾಗಿ ನಾ ಕೃತಕೃತ್ಯನಾದೆನು । ಹೋಗಿ ಬರುವೆನು ಕೊಡುನಿರೋಪವನೆಂದಾ ಕುವರಾ ॥119॥

ಹರುಷದಲಿ ನಾಗೇಂದ್ರನಮೃತವ । ತರಿಸಿ ಕುಡಿಸಿದನಾಕುಮಾರಗೆ । ಪರಿಪರಿಯ ರತ್ನಾಭರಣಗಳನಿತ್ತನತಿ ಮುದದಿ ॥
ತರಿಸಿ ನಾನಾ ವಸ್ತ್ರಭೂಷಣ । ಸುರತರುಫಲಂಗಳನು ಕೊಟ್ಟನು । ಧರೆಗೆ ನೀ ಹೋಗೆಂದು ಕಳುಹಿಸಿದನಾ ಕುಮಾರಕನಾ ॥120॥

ಹರಿಸುವೆನು ನಾ ನಿನ್ನ ಕುವರನೆ । ಸ್ಮರಿಸಲೆನ್ನನು ಸಂಕಟದಿ ಯಶ । ಬರುವುದೈ ನಿನಗೆಂದು ಮನದಲಿ ನಂಬು ದೃಢವಾಗಿ ॥
ಅರುಹುತೀಪರಿ ತನ್ನ ಕುವರನ । ಕರೆದು ಸಂಗಡ ಪೋಗೆನುತ ಬಹು । ಸರಸದಿಂದಪ್ಪಣೆಯನಿತ್ತನು ನಗುತ ನಾಗೇಂದ್ರಾ ॥121॥

ಮನದ ವೇಗದ ಕುದುರೆ ಕೊಟ್ಟನು । ಫಣಿವರೇಂದ್ರನು ರಾಜಕುವರಗೆ । ಘನತರದ ಚತುರಂಗ ಸೇನೆಯ ಕೊಟ್ಟನಾತನಿಗೆ ॥
ಮನದಿ ಹರುಷವ ತಾಳಿ ಭೂಪನ । ತನುಜ ನಡೆದನು ಮೃತ್ಯುಲೋಕಕೆ । ಯೆನಿತು ಮಹಿವೆಯೊ ಸೋಮವಾರವ್ರತದ ಫಲವಿದಲಾ ॥122॥

ನದಿಯೊಳಗೆ ಮುಳುಗಿರ್ದ ಸ್ಥಳದ- । ಲ್ಲುದಿಸಿದನು ರಾಜನ ಕುಮಾರನು । ಕುದುರೆಯನು ತಾನೇರಿ ತಕ್ಷಕ ಕುವರ ಸಹಿತಾಗಿ ॥
ಸುದತಿಸೀಮಂತಿನಿಯು ಸ್ನಾನಕೆ । ನದಿಯ ತೀರಕೆ ಬಂದಳಾದಿನ । ವೊದಗಿಕೂಡಿತು ಸೋಮವಾರ ವ್ರತದ ಫಲದಿದಲಾ ॥123॥

ನೋಡಿ ಸೀಮಂತಿನಿಯು ಸಖಿಯರ । ಕೂಡೆ ಮಾತಾಡಿದಳು ಸಖಿಯರೆ । ನೋಡಿದರೇನದು ಚೋದ್ಯ ಬರುವುದು ಕುದುರೆ ನೀರಿಂದಾ ॥
ಆಡಲಾರೆನು ರಾಕ್ಷಸರದದು । ಗಾಢಮಾಯೆಯೊ ಯಕ್ಷಕಿನ್ನರ । ರೋಡಿ ಬರುವರೊ ನೋಡಿರೀ ರೂಪವನು ಪರಿಕಿಸಿರಿ ॥124॥

ಎಲ್ಲಿಹೋಗುವನಿವನು ತಿಳಿಯದು । ಎಲ್ಲಿಯೆಂತೋ ನೋಡಿದಂತಿದೆ । ಸಲ್ಲಲಿತಮೈವಾಸ ದಶಯೋಜನದ ಪರಿಯಂತ ॥
ಮೆಲ್ಲನಿವನನು ನೋಡೆ ಕಮಲದ । ವಲ್ಲಭನ ರಮಣೀಯ ದೀಪ್ತಿಯು । ಬಲ್ಲಿರಾ ನೀನಿವನನೆಂದಳು ನಡುಗಿ ಸಖಿಯರಿಗೆ ॥125॥

ನೋಡಿದಳು ದೃಷ್ಟಿಸುತ ಹಿಂದಕೆ । ನೋಡಿದಂತಿದೆ ಪರಪುರುಷನನು । ನೋಡಬಾರದು ದೃಷ್ಟಿಸುತ ತಾನೆಂದು ಭೀತಿಯಲಿ ॥
ಮಾಡೆನಿರ್ಧಾರವನು ನಿಜಪತಿ । ಯೋಡಿ ಬಂದಿರುವಂತೆ ಮನಸಿನ । ಗಾಢವಾಯ್ತು ವಿಚಾರ ರೋಮಾಂಚಗಳು ಯೆದ್ದವಲಾ ॥126॥

ಅರಸು ಪುತ್ರನು ನೋಡಿ ತನ್ನಯ । ತರುಣಿಯೆಂದೇ ಮನದೊಳಗೆ ನಿ- । ರ್ಧರಿಸಿ ದೃಷ್ಟಿ ಸಲಾಕೆಯನು ಬಹು ಚೋದ್ಯವಾಯ್ತವಗೆ ॥
ಕೊರಳೊಳಗೆ ಗಳಸರಿಯು ಮುತ್ತಿನ । ಸರವು ತೋರವು ಹಳದಿ ಕಂಕಣ । ಕರದಿ ಕಾಣುವುಯೆಂದು ವಿಸ್ಮಿತನಾಗಿ ಮನದೊಳಗೆ ॥127॥

ಕುದುರೆಯಿಂ ಕೆಳಗಿಳಿದು ನದಿತೀ । ರದಲಿ ಕುಳಿತನು ರಾಜಪುತ್ರನು । ಮುದದಿ ಕರೆದನು ರಾಜಕನ್ಯೆಯ ಸಖಿಯರಿಬ್ಬರನು ॥
ವದನ ಬಾಡಿದುದೇಕ ನಿಮ್ಮಯ । ಸುದತಿ ತೋರ್ವಳು ರಾಜಕನ್ಯೆಯು । ಉದುಭವಿಸಿದಳು ಯಾವ ವಂಶದಿ ಹೆಸರು ಯೇನಿವಳಾ ॥128॥

ಮನುಜನೀತನು ಸ್ನೇಹಭಾವದಿ । ವಿನಯಪೂರ್ವಕವಾಗಿ ಕೇಳುವ । ನನಿತುವನು ಪೇಳೆಂದು ಸೂಚಿಸಿದಳು ಸೀಮಂತಿನಿಯು ॥
ಇನಿತುರಾಜ್ಞಿಯ ಮಾತ ಕೇಳುತ । ಮನದಿ ಸಂತಸದಾಳಿ ಸಖಿಯರು । ವಿನುತಚರಿತಗೆ ತಮ್ಮ ರಾಜ್ಞಿಯ ಕಥೆಯ ಪೇಳಿದಳು ॥129॥

ಯಾರು ನೀನೆಂದರಿಯದಾದರು । ತೋರುತಿದೆ ಸುಸ್ನೇಹಭಾವವು । ನಾರಿ ಯೀಕೆಯು ಚಿತ್ರವರ್ಮನ ಪುತ್ರಿ ಸುಂದರಿಯು ॥
ಧಾರುಣಿಪಚಿತ್ರಾಂಗದನ ಸತಿ । ನೀರೊಳಿಲ್ಲೆಯ ಪತಿಯು ಮುಳುಗಿದ । ನಾರು ಬಣ್ಣಿಪರಿವಳ ದುಃಖವ ವಿಧವೆಯಾಗಿಹಳು ॥130॥

ಹೆಸರು ಸೀಮಂತಿನಿಯು ತರುಣಿಗೆ । ವಸುಧೆಯಾಳ್ವರ ಕುಲದಿ ಹುಟ್ಟಿಯೆ । ವಸುಮತೀಶನ ಕರವ ಹಿಡಿದಳು ಭಾಗ್ಯಹೀನಳಲಾ ॥
ಹೊಸದು ಜವ್ವನವಿಹುದು ತರುಣಿಗೆ । ವಿಷಮವೈಧವ್ಯದಲಿ ಮುಳುಗಲು । ಕೆಸರಿನಲಿ ಮುಳುಗಿರ್ದ ಕುಸುಮದ ತೆರದಿತೋರುವಳು ॥131॥

ಇಂದುಶೇಖರಪೂಜೆಯನ್ನಿ ವ- । ಳಿಂದು ವಾರದಿ ಮಾಳ್ಪಳದರಿಂ- । ದಿಂದು ಸ್ನಾನಕ್ಕೆ ಬಂದಳೀಗಲೆ ನದಿಗೆ ನಮ್ಮೊಡನೆ ॥
ತಂದೆತಾಯ್ಗಳು ಬಂಧುಬಳಗವು । ಹೊಂದಿದುಃಖದಿ ಮುಳುಗಿಮನದಲಿ । ನೊಂದಿಹರು ರಾಜ್ಯವನು ಗೆದ್ದರು ದುಷ್ಟ ಬಂಧುಗಳು ॥132॥

ಬಂದಿಖಾನೆಯೊಳಿವಳ ಗಂಡನ । ತಂದೆತಾಯ್ಗಳು ಕಾಲ ಕಳೆವರು । ಇಂದುಮುಖಿ ಸೀಮಂತಿನಿಯು ಶಿವಪೂಜೆ ಮಾಡುವಳು ॥
ಎಂದು ಸಖಿಯರು ಪೇಳ್ದ ನಂತರ । ಸುಂದರಾಂಗಿಯು ಕೇಳ್ದಳಾತನ । ಇಂದು ಪೇಳಲುಬೇಕು ನೀವಾರೆಂದು ಯೆಮಗೀಗಾ ॥133॥

ಮದನನಂದದಿ ರೂಪತೋರ್ಪುದು । ವದನ ಪರಿಚಿತವೆಂದು ಕಾಣುವು । ದುದಯವಾಯ್ತೆಲ್ಲಿಂದ ನರಕಿನ್ನರನೊ ಪನ್ನಗನೊ ॥
ತ್ರಿದಶಪತಿಯೋ ಸಿದ್ಧ ಯಕ್ಷನೊ । ವೊದಗಿ ನೀನೆನಗರುಹೆನುತಲಾ । ಸುದತಿ ಕೌತುಕದಿಂದ ಕೇಳ್ದಳು ರಾಜಕುವರನಿಗೆ ॥134॥

ಮನದೊಳಾಗುವುದಾಪ್ತಭಾವವು । ನಿನಗದೇತಕ್ಕೆಮ್ಮವಾರ್ತೆಯು । ಯೆನಗೆ ಪೇಳ್ಳೈ ನಿನ್ನ ಹೆಸರನು ಮನದಿ ಶಂಕಿಸದೇ ॥
ಎನುತ ನುಡಿದಾ ಲೋಲಲೋಚನೆ । ನೆನೆದು ಪತಿರೂಪವನು ದುಃಖದಿ । ಮುಳುಗಿ ದೊಪ್ಪನೆ ನೆಲಕೆ ಬಿದ್ದಳು ಸುರಿಸಿ ಕಣ್ಣೀರಾ ॥135॥

ನೋಡಿ ತನ್ನಯ ಸತಿಯ ದುಃಖದ । ಗಾಢವಾಯಿತು ದುಃಖ ಕುವರನಿ- । ಗಾಡಬಾರದು ನಿಜಸ್ವರೂಪವನೆಂದು ನಿರ್ಧರಿಸಿ ॥
ಮಾಡಬಾರದು ದುಃಖವೀಪರಿ । ರೂಢಿಯಲಿ ಹೆಸರೆನಗೆ ಸಿದ್ಧನು । ನೋಡು ನಿನಗಾನೊಂದು ಗುಪ್ತವ ಪೇಳ್ವೆ ಹರುಷದಲಿ ॥136॥

ನಿನ್ನ ಸುಖಸೌಭಾಗ್ಯ ದೃಢವದೆ । ನಿನ್ನ ಶಿವಪೂಜೆಯ ಪ್ರಭಾವದಿ । ನಿನ್ನ ಪತಿದರ್ಶನವು ಲಭಿಸುದು ಮೂರು ದಿನಗಳಲಿ ॥
ಮುನ್ನಿ ಸೆನ್ನಯ ವಾಕ್ಯ ಸತ್ಯವಿ- । ದೆನ್ನುತಲಿ ನಿಃಶಂಕೆಯಿಂದಿರು । ಯನ್ನ ಪಂಚಪ್ರಾಣ ನಿನ್ನಯ ಪತಿಯು ನಿಜನಿಜವು ॥137॥

ಎಂದು ಸತಿಗೇಕಾಂತದಲಿ ನಲ-। ವಿಂದ ಭಾಷೆಯ ಕೊಟ್ಟು ನಡೆದನು । ಇಂದುಮುಖಿಗಶ್ರುಗಳು ಸುರಿದವು ಮುಸಲಧಾರೆಯಲಿ ॥
ಬಂದವಾಕೆಗೆ ಹುರುಷ ತೆರೆದಳು । ಸ್ಪಂದನವನಾನೆಂತು ಪೇಳಲಿ । ಬಂದುದಾಕೆಯ ಮನದಿ ಸಿದ್ಧ ನೆ ತನ್ನ ಪತಿಯೆಂದು ॥138॥

ಪತಿಯ ಮುಖದಾಕಾರ ಮುಖವದು । ಪತಿಯ ಸುಂದರ ನಯನ ಕೋಮಲ । ಪತಿಯ ಮಂಜುಳವಾಣಿ ಕಿವಿಗಿಂಪಾಗಿ ತೋರುವುದು ॥
ಅತಿಮನೋಹರ ಕೈಯಹಿಡಿಯಲು । ಮತಿಗೆತರ್ಕವದಾಯ್ತು ಯೆನ್ನಯ । ಪತಿಯಕರಗಳಸ್ಪರ್ಶವತಿಮೃದು ಪುಷ್ಪ ಸುರಗಿಯವೊಲ್ ॥139॥

ಅರಿತಿಹೆನು ಪತಿಚಿಹ್ನವೆಲ್ಲವ । ನಿರುವನಿವನೇ ಯೆನ್ನಪತಿಗೋ । ಚರಿಸೆ ಪ್ರೇಮಾಶ್ರುಗಳು ಸುರಿದವು ಚೋದ್ಯ ಬಹು ಚೋದ್ಯ ॥
ಅರಗಳಿಗೆ ಯೋಚಿಸತನಂತರ । ತರುಣಿ ದುಃಖದಿ ಮುಳುಗಿ ಮನದಲಿ । ಕರಗಿದಳು ದುರ್ಭಾಗ್ಯಳಿಗೆ ಪತಿ ದರ್ಶನ ವದೆಂದು ॥140॥

ದೈವಹೀನಳು ನಾನು ಪತಿಯೆನ । ಗಾವಪರಿಯಲಿ ದೊರಕುವನು ಪತಿ । ಜೀವಹೋಯಿತು ಜಲದೊಳಿನ್ನೆಂತೆನಗೆ ದೊರಕುವನು ॥
ಈ ವಸುಧೆಯಲಿ ಸತ್ತು ಹೋದರೆ । ಜೀವದಿಂದಲಿ ತಿರುಗಿ ಬರುವುದು । ಯಾವರೀತಿಯಲೆಂದು ತಿಳಿಯದಪೂರ್ವ ಸಂಗತಿಯು ॥141॥

ಬಿತ್ತು ಯೆನಗಿದು ಹಗಲು ಸ್ವಪ್ನವು । ಧೂರ್ತನಿರುವನೊ ವೇಷಧಾರಿಯೊ । ದೈತ್ಯ ರಾಕ್ಷಸಯಕ್ಷಕಿನ್ನರನೇನೊ ನಾ ತಿಳಿಯೆ ॥
ಚಿತ್ತ ತಾಪವ ನೋಡಿ ದಯೆಯಿಂ । ದಿತ್ತ ಕಳುಹಿದನೇನು ಪತಿಯನು । ಚಿತ್ರವಿದು ಪರಶಿವನ ಲೀಲೆಯೆನುತ್ತ ಚಿಂತಿಪಳು ॥142॥

ಶಂಕರನು ಮೆಚ್ಚಿರುವ ಭಕ್ತಗೆ । ಸಂಕಟವು ತಟ್ಟುವುದೆ ಜಗದಲಿ । ಶಂಕೆಯಿಲ್ಲ್ಯ ಪತಿಯಕಳುಹಿದನೆನಗೆ ಗಿರಿಜೇಶಾ ॥
ಬಿಂಕು ಬೆರಗನ ಕಾಣೆನಿವನ । ಲ್ಲಂಕಿತಳು ನಾ ಶಿವನಿಗೆನುತಲಿ । ಶಂಕರನೆ ಸಂಕಟದಿ ತಾರಿಸಿದಂತೆ ತೋರುತಿದೆ ॥143॥

ಅರಸುಮಗನಾಕ್ಷಣಕೆ ರಭಸದಿ । ತುರಗದಲಿಯಾರೂಢನಾದನು । ಪುರಕೆ ಬಂದನು ತಿಳುಹಿದನು ವಾಸುಕಿಯ ಪುತ್ರನಿಗೆ ॥
ಅರಸನಿಗೆ ನೀ ಹೋಗಿ ಹೇಳೈ । ಪುರಕೆ ಬಂದಿಹೆ ನಾನು ಯೆನ್ನುಯ । ಸರಸದಲಿ ರಾಜ್ಯವನು ಕೊಡದಿರೆ ಸಂಹರಿಪೆನವರಾ ॥144॥

ಉರಗರಾಜನ ಮಗನು ಬಂದನು । ತ್ವರಿತದಲಿ ರಾಜಾಲಯಕೆ ಮೇಣ್ । ಹೊರಗಿನಿಂದಲೆ ಕಳುಹಿದನು ರಾಜನ ನಿರೋಪವನು ॥
ಉರಗರಾಜನ ಭೇಟಿಗೋಸುಗ । ತೆರಳಲಾ ರಾಜನ ಕುಮಾರನು । ಮರುಳರ್ರೈ ನೀವಾಚರಿಸಿದಿರಿ ಕಪಟ ಭಾವವನು ॥145॥

ತುಡುಗುತನದಲಿ ರಾಜ್ಯ ಪಡೆದಿರಿ । ಹುಡುಗ ಸತ್ತನು ನದಿಯೊಳೆಂಬೀ । ನುಡಿಯ ನಂಬುತ ಸ್ವಾಮಿದ್ರೋಹವ ನೀವು ಮಾಡಿದಿರಿ ॥
ನಡೆಯಿರೈ ಚಿತ್ರಾಂಗದನು ತಾ । ಪೊಡವಿಯನು ಬೇಡುವೆನು ಸಾಮದಿ । ಕೊಡದಿರಲು ಸಂಹರಿಪ ನಿಮ್ಮನು ಬಳಗಸಹಿತಾಗಿ ॥146॥

ಮರಣ ದಂಜಿಕೆ ನಿಮಗೆ ಯಿದ್ದರೆ । ಶರಣರಾಗಿರಿ ಹೋಗಿಯವನಿಗೆ । ಮರಳಿ ರಾಜ್ಯವನೀಯಬೇಕಾ ಇಂದ್ರಸೇನನಿಗೆ ॥
ಉರಗರಾಜನ ಮೈತ್ರಿ ಯವನಿಗೆ । ದೊರಕಿಹುದು ಪೀಯೂಷ ಕುಡಿಸಿದ । ಚರಣಕೆರಗಿರಿ ಹೋಗಿಯವನಿಗೆ ಶೀಘ್ರದಲಿ ನೀವು ॥147॥

ನೀವವಜ್ಞೆ ಯ ಮಾಡಿದರೆ ನಿಜ । ಸಾವು ತಪ್ಪದು ನಿಮಗೆ ನಾನೇ । ಹೇಯವಿಲ್ಲದೆ ಕೊಲುವೆ ನಿಮ್ಮನು ರಾಜನಾಜ್ಞೆಯಲಿ ॥
ಈ ವಚನವನು ಕೇಳಿ ರಾಜ್ಯವ । ನೀವುದುಚಿತವಿದೆಂದು ಮನದಲಿ । ಭಾವಿಸಿದರಾ ಶತ್ರುಗಳು ಮನದಲಿ ವಿಚಾರಿಸುತಾ ॥148॥

ಶರಣು ಪೋಪುದು ಲೇಸು ಇಲ್ಲವೆ । ಮರಣ ಬರುವುದು ನಿಶ್ಚಯವು ಮೇ- । ಣಿರದೆ ರಾಜ್ಯದ ಹರಣವಾಗುವುದಲ್ಲವೇ ನಿಜವು ॥
ಬರುವುದು ಪಕೀರ್ತಿಯು ದಿಟದೊಳೆನು- । ತರಿತು ತಂದರು ಇಂದ್ರಸೇನನ । ಕರೆದು ಸಿಂಹಾಸನದಿ ಕೂಡಿಸಿ ನಮಿಸಿದರು ಪದಕೆ ॥149॥

ಕೊಟ್ಟು ನಾನಾವಿಧದ ಭೂಷಣ । ಸಿಟ್ಟು ಮಾಡದಿರೆಂದು ನಮಿಸುತ । ಕಷ್ಟ ಕೊಟ್ಟೆವು ಬಂದಿವಾಸದೊಳಿಟ್ಟೆವೈ ನಿನ್ನಾ ॥
ಬಿಟ್ಟುಬಿಡು ಕೋಪವನು ಹಿಂದಿನ । ದುಷ್ಟತನವನು ಮರೆತು ಕಳೆ ನಿನ- । ಗಿಷ್ಟವಿಹ ಸಾಮ್ರಾಜ್ಯ ಕೊಟ್ಟೆವೆನುತ್ತ ನಮಿಸಿದರು ॥150॥
ಇಂದ್ರಸೇನನ ಚರಣಕೆರಗುತ- । ಲೆಂದನಾ ತಕ್ಷಕನ ಕುವರನು । ಬಂದಿರುವನೈ ಹೊರಗೆ ನಿನ್ನಯ ಪುತ್ರ ವಿಖ್ಯಾತಾ ॥
ಮಿಂದು ಬರಲಿಕಿ ಹೋದಕನ್ಯೆಯ । ರಂದು ವೈದರು ನಾಗಲೋಕಕೆ । ಕಂದ ನಿನ್ನ ಸುರಕ್ಷಿತನು ನಾಗೇಂದ್ರ ಕರುಣದಲಿ ॥151॥
ಎಂದ ಮಾತನು ಕೇಳುತಾ ರಾ । ಜೇಂದ್ರ ಮೂರ್ಛಿತನಾದ ಹರುಷದಿ । ಬಂದು ತಕ್ಷಕ ಕುವರ ಸಂತೈಸಿದನು ಪ್ರೇಮದಲಿ ॥
ಚಂದದಿಂದಲಿ ನಿನ್ನ ಕುವರನ । ನಿಂದು ನೀವಿದಿರಾಗಿ ಹರುಷದಿ । ತಂದು ರಾಜ್ಯವ ತೋರಿಸೆಂದನು ತಕ್ಷಕನ ಮಗನು ॥152॥
ಉರಗಪತಿಯ ನಿರೋಪ ಕೇಳುತ । ಧರಣಿ ಪತಿ ಹರುಷದಲಿ ತನ್ನಯ । ಪುರವ ಶೃಂಗರಿಸಿದನು ತೋರಣಗುಡಿ ಪತಾಕೆಯಲಿ ॥
ಕರೆದು ಬಾಂಧವಮಂತ್ರಿಗಳನೆ । ಲ್ಲರನು ಕೂಡಿಸಿ ಸುತನ ನೋಡಲು । ಹೊರಟನಾ ರಾಜೇಂದ್ರ ನಿಜದಳ ಭಾರದಲಿ ಮುದದಿ ॥153॥
ಸತ್ತಾನಾ ಮುಳಗಿ ನದಿಯೊಳೆ । ನುತ್ತ ಹಬ್ಬಿದ ವಾರ್ತೆ ಸುಳ್ಳಾ- । ಯಿತ್ತೆನುತ ನಗರದಲಿ ಜಯಜಯಕಾರವತಿಯಾಯ್ತು ॥
ಚಿತ್ರಸಂತೋಷದಲಿ ರಾಯನು । ಪುತ್ರನನು ನೋಡಿದನು ಉಭಯರ । ಚಿತ್ರಸೌಖ್ಯವ ಬಣ್ಣಿಸಲಿಕಸದಳವು ಮಾನವಗೆ ॥154॥
ಸುತನು ಚರಣದಲಿಟ್ಟನೈ ತಲೆ । ಪಿತನು ತೆಗೆದಪ್ಪಿದನು ಹರುಷದಿ । ಸುತನೆ ಬಂದೆಯೋ ಪೋದುದೆಲ್ಲಿಗೆ ದುಃಖವಾಯ್ತೆಮಗೆ ॥
ಸುತನ ತೆಗೆದಪ್ಪಿದಳು ತಾಯಿಯು । ಕ್ಷಿತಿಯೊಳೆನ್ನನು ಬಿಟ್ಟುಪೋದೆಯೋ । ಗತಿವಿಹೀನಳು ನಾನು ನೀ ಹೊರತೆನ್ನ ಭವನವನು ॥155॥
ಮಾತೆಯಾಡಿದ ನುಡಿಯ ಕೇಳುತ । ಲೀತೆರದಲಾ ಪುತ್ರ ನುಡಿದನು । ಮಾತೆ ಕ್ಷಮಿಸುವುದೆನ್ನ ಪಾತಾಳದಲಿ ನಾನಿದ್ದೆ ॥
ಪ್ರೀತಿಯಿಲ್ಲದೆ ನಿನ್ನ ದಣಿಸಿದೆ । ಘಾತವಾಯಿತು ನಾಗಕನ್ಯಾ- । ವ್ರಾತ ವೈದ್ಯರು ಮೂರ್ಛೆಯಲಿ ಕುಡಿಸಿದರು ಪೀಯೂಷಾ ॥156॥

ನಾಗಭೂಷಣನೊಲಿದನೆಂದೇ । ನಾಗರಾಜನ ಕೃಪೆಯು ತೋರಿತು । ಸಾಗಿ ಬಂದೆನು ನಿಮ್ಮ ಚರಣವ ನೋಡ ಬೇಕೆನುತಾ ॥
ಈಗ ನಿಮ್ಮ ಚರಣನೋಡಿದೆ । ಯೋಗ ದುರ್ಲಭ ನೋಡು ತಾಯಿಯೆ । ನೀಗುವದು ದುಃಖವನು ಶಿವನನು ಮನದಿ ಧ್ಯಾನಿಸುತಾ ॥157॥

ಜನನಿ ಕೇಳೌ ತಿಳಿಯೆ ನಿನ್ನಯ । ಸ್ತನದ ಹಾಲನು ಕುಡಿದ ಪ್ರತಿಫಲ । ಜನುಮಜನುಮದಿ ಕೊಡಲಶಕ್ಯವು ಪ್ರೇಮನಿರುಪಮವು ॥
ಜನನಿಯೇ ವರದೈವತವು ತಾ- । ನೆನುತ ಪೇಳ್ವವು ವೇದವೆಲ್ಲವು । ಜನನಿ ಪಾರ್ವತಿ ಜನಕನೇ ಹರನಹುದು ಮಾನವಗೆ ॥158॥

ತಾಯಿತಂದೆಗೆ ದುಃಖ ಕೊಡುತಲಿ । ನೋಯಿಸುವ ಶತಮೂರ್ಖ ಪುತ್ರನು । ನಾಯಿಯೆಂದೇ ತಿಳಿಯಬೇಕವ ಪಶುಸಮಾನನಲಾ ॥
ತಾಯಿ ತಂದೆಯ ನೋಯಿಸುವ ಸುತ । ಸಾಯಲಾತನು ನರಕ ಭೋಗಿಪ । ತೋಯಜಾಕ್ಷಿಯ ಸಪ್ತಜನ್ಮ ದರಿದ್ರನಾಗುವನು ॥159॥

ಎಂದು ನಾನಾತೆರ ದೊಳೀಪರಿ । ತಂದೆತಾಯ್ಗಳ ಸಂತವಿಸುತಾ । ನಂದದಿಂದಲಿ ಬಂಧುಬಳಗವ ನೋಡಿ ವಹಿಲದಲಿ ॥
ಮಂದಿರಕೆ ನಡೆ ತಂದರಾಕ್ಷಣ । ತಂದು ದಿವ್ಯಾಭರಣಭೂಷಣ- । ದಿಂದ ತಕ್ಷಕ ಸುತನ ಮನ್ನಿಸಿದನು ನೃಪಾಲಕನು ॥160॥

ತಂದೆ ಕೇಳೈ ತಕ್ಷಕನ ಮಗ । ನಿಂದ ರಕ್ಷಣೆಯಾಯ್ತು ಜೀವಕೆ । ಸುಂದರಾಲಂಕಾರಭೂಷಣವಿತ್ತನೈ ಯೆನಗೆ ॥
ಎಂದು ಪುತ್ರನು ನುಡಿಯೆ ಪಿತನಿಂ- । ತೆಂದನಾ ತಕ್ಷಕನ ಮಗನಿಗೆ । ತಂದೆ ನಿನ್ನುಪಕಾರ ಮರೆಯೆನು ಜನುಮಜನುಮದಲಿ ॥161॥

ಚಿತ್ರವರ್ಮನ ನಗರಕಾಕ್ಷಣ । ಭೃತ್ಯರನು ಕಳುಹಿದನು ರಾಯನು । ವಾರ್ತೆಯನು ಕಳುಹಿದನು ಪುತ್ರನ ಬರವ ತಿಳುಹಿದನು ॥
ಸತ್ತವನು ಜೀವಂತನಾದನು । ಸತ್ಯ ಸೊಸೆ ಸೌಭಾಗ್ಯವಂತಳು । ಪುತ್ರನೆನ್ನಯ ಬದುಕಿದನು ಶಂಕರನ ಕೃಪೆಯಿಂದಾ ॥162॥

ಸೋಮವಾರವ್ರತದ ಮಹಿಮೆಯು । ಭಾಮಿನಿಯು ಶಂಕರನು ಪೂಜಿಪ । ನೇಮಮಾಡಿದಳದರಫಲದಲಿ ಚೂಡೆಕಂಕಣಕೆ ॥
ಕ್ಷೇಮವಾಯಿತು ಧನ್ಯಳೆಂದೇ । ಭೂಮಿಪತಿ ಕೊಂಡಾಡಿ ಸೊಸೆಯನು । ಪ್ರೇಮದಿಂದಲಿ ಕಳುಹಿದನು ಭೃತ್ಯರನು ಬೇಗದಲಿ ॥163॥

ಬಂದುಪಯಣದ ಮೇಲೆ ಪಯಣದ- । ಲೆಂದರಾರಾಜೇಂದ್ರ ನಿನ್ನಯ । ನಂದನೆಯ ಸೌಭಾಗ್ಯದಲಿ ಸತ್ತವನು ನಿನ್ನಳಿಯ ॥
ಬಂದಿಹನು ತೆರಳೀಗ ಬೇಗದಿ । ನಂದನೆಯ ಕರಕೊಂಡು ಯೆನಲಾ- । ನಂದದಿಂದಲಿ ಹಿಗ್ಗಿದರು ಸೀಮಂತಿನಿಯು ಸಹಿತಾ ॥164॥

ದಾನಧರ್ಮಂಗಳನು ಮಾಡಿದ- । ನೇನಹೇಳುವೆನವನ ಸಂತಸ । ಕ್ಷೋಣಿಪತಿ ಹೇರರಿಗೆ ಕೊಟ್ಟನು ದಿವ್ಯ ಭೂಷಣವಾ ॥
ಸೇನೆಸಹಿತಲಿ ಹೊರಟನಾಗಲೆ । ಕ್ಷೋಣಿಪತಿ ಕರಕೊಂಡು ದಿಬ್ಬಣ- । ವೇನ ಹೇಳುವೆ ಸಾಗರದ ತೆರನಾಗಿ ಹೊರಟವಲಾ ॥165॥

ಸತಿ ಸೀಮಂತಿನಿ ನೋಡಿ ತನ್ನಯ । ಪತಿಯನಪ್ಪುತ ಹರುಷಬಾಷ್ಪದಿ । ಪತಿಕರಿಸಿದಳು ಜನ್ಮವೆರಡಾಯ್ತೆಂದು ಹಿಗ್ಗುತಲಿ ॥
ಸತಿಗೆ ಮೌಲ್ಯಾಭರಣವಿತ್ತನು । ಪತಿಯು ವನಿತೆಗೆ ಕುಡಿಸುತಮೃತವ । ಗತಿಸಿದರು ಕಾಲವ ಪರಸ್ಪರಚರಿತಕಥನದಲಿ ॥166॥

ವಿರಚಿಸುತಲೆರಡನೆಯ ಮಂಗಲ- । ಕರವಿವಾಹವ ರಾಜರಾಗಲೆ । ಹೊರಟರ್ರೈ ತಂತಮ್ಮ ನಗರಕೆ ತೋಷದಲಿ ಬಳಿಕಾ ॥
ಅರಸರಿಬ್ಬರು ರಾಜ್ಯವಿತ್ತರು । ಹರುಷದಲಿ ಬಹುಕಾಲ ರಾಜ್ಯವ । ಭರದೊಳಾಳ್ದನು ಕೇಳು ಚಿತ್ರಾಂಗದನು ಭೂಮಿಯಲಿ ॥167॥

ಹರನ ಸಾಂಬನ ಸೋಮವಾರದಿ । ಪರಮಭಕುತಿಯೊಳರ್ಚಿಸಿದ ಫಲ । ತರುಣಿ ಸೀಮಂತಿನಿಗೆ ಕಾಮಿತ ಸೌಖ್ಯ ಸೌಭಾಗ್ಯ ॥
ಹರನ ವರದಲಿ ದೊರೆದವದರಿಂ । ತರುಣಿ ನೀನಾಚರಿಸು ಈ ವ್ರತ । ದೊರಕುವುದು ಪುರಾಷರ್ಥವೆಲ್ಲವು ಯೆಂದನಾ ಗುರುವು ॥168॥

ವ್ರತವನೀಪರಿ ಮಾಡ ಬೇಕೌ । ಸತತ ಕುಂಕುಮಕಂಕಣದ ಭ । ದ್ರತೆಯು ಸಿಗುವುದು ಪುತ್ರಪೌತ್ರಾದಿಗಳ ಕೊಡುವುದಿದು ॥
ಮತವಿದೆನ್ನದು ಕೇಳುಸ್ಸವಾಸಿನಿ । ಗತಿಯು ಸದ್ಗತಿಯಪ್ಪುದಿದರಲಿ । ಮತಿಯ ಶುದ್ಧೀಕರಿಸಿ ವ್ರತ ಮಾಡೆಂದನಾ ಗುರುವು ॥169॥

ಗುರುವರನ ವಚನವನು ಕೇಳತ । ಚರಣ ಕೆರಗಿದರಾಗ ದಂಪತಿ । ಯರು ವಿನೋದದಿ ಪೇಳ್ದರ್ರೈ ಪ್ರತ್ಯುತ್ತರವನವಗೆ ॥
ಗುರುವರನೆ ನಿನ್ನಯ ಚರಣಗಳು । ಶರಣರಿಗೆ ಸುರತರುವಿರಲು ನಾ-। ವರಿಯೆವೆರಡನು ಸಾಧನವ ತವ ಚರಣ ಸಂತರಣ ॥170॥

ನಾನು ಹೇಳಿದೆನೆನುತಲೀ ವ್ರತ । ಸಾನುರಾಗದಿ ಮಾಡಿರೈ ವ್ರತ । ಮಾನಿಸಿರಿ ಮುಟ್ಟುವುದು ಸೇವೆಯು ಯೆನ್ನ ಚರಣಕ್ಕೆ ॥
ಈ ನಿರೋಪವ ಕೇಳಿ ದಂಪತಿ । ಸಾನುರಾಗದಿ ವ್ರತವ ಕೊಂಡರು । ಮಾನನಿಧಿಗಳು ಸೌಖ್ಯ ಪಟ್ಟರು ಲೋಕವೆರಡರಲಿ ॥171॥

ತಂದೆತಾಯ್ಗಳು ಕನ್ಯೆಪುತ್ರರು । ಬಂದು ಕಂಡರು ವಾರ್ತೆ ಕೇಳುತ । ನಂದದಿಂದಲಿ ಗುರುವ ಪೂಜಿಸಿದರು ಸಗಾಢದಲಿ ॥
ವಂದಿಸುತ ಶ್ರೀಗುರುನಿರೋಪವ- । ನಂದುಕೊಂಡರು ತಿರುಗಿ ನಡೆದರು । ಮಂದಿರಕೆ ತಂತಮ್ಮ ಹಬ್ಬಿತು ಕೀರ್ತಿ ದಿಶೆದಿಶೆಗೆ ॥172॥

ಅದರಾ ದಂಪತಿಗೆ ಪುತ್ರರು । ಐದುಮಂದಿಯು ಗುರುವಿನಾಶೀ- । ರ್ವಾದದಿಂದಲಿ ಪ್ರತಿವರುಷ ದರುಶನಕೆ ಬರುತಿಹರು ॥
ಮೇದಿನಿಯೊಳೀ ಪರಿಯ ಗುರುವಿನ । ಮೋದಕಾರಕ ಚರಿತವಿಹುದೈ । ಸ್ವಾದಿಸಲು ಸಕಲಾರ್ಥವೆಲ್ಲವು ಕರತಲಾಮಲಕಾ ॥173॥

ಸಕ್ಕರೆಯು ಸವಿಯಿರುವದೆಂಬುದು- । ನಕ್ಕರದಿ ವರ್ಣಿಸಲು ಶಕ್ಯವೆ । ಮಕ್ಕಳಾಟಕೆ ಕೈಯಕಂಕಣವೇಕೆ ಕನ್ನಡಿಯು ॥
ಅಕ್ಷಿಗೋಚರವಾಗಲೆರಡನೆ । ಸಾಕ್ಷಿಯೇತಕೆ ಗುರುಮಹಿಮೆ ಪ್ರತ್ಯ । ಕ್ಷ ನೋಡದಲೇಕೆ ನಂಬಿರಿ ಯೆನ್ನ ವಚನವನು ॥174॥

ಸೇವೆಯನು ಮಾಡಿದರೆ ಶ್ರೀಗುರು । ಕಾವನೆಂಬದು ನಿಜವು ಮನದಲಿ । ಭಾವವೊಂದಿರಬೇಕು ಸದ್ಗುರು ತಾರಿಸುವನೆಂದು ॥
ಪಾವನಾತ್ಮಕ ಪುಣ್ಯ ಚರಿತವು । ಸಾವನುಂಗುವ ಹಾವು ಪಠಣದ- । ಲೀವುದೈ ಕಾಮಿತವನೆಲ್ಲವ ಕಾಮಧೇನುವಲಾ ॥175॥

ಕಲ್ಲುಸಕ್ಕರೆ ಗುರುಚರಿತ್ರವು । ಮೆಲ್ಲನಾಸ್ವಾದಿಸಿರಿ ಭಕ್ತಿಯ । ಲೆಲ್ಲರಿಗೆ ಸವಿಯಾಗುವುದು ಹರಿಸುವದು ಮೂರ್ದೋಷಾ ॥
ಮೌಲ್ಯ ಕೊಟ್ಟರೆ ಸಿಗದಿದಂಗಡಿ- । ಯಲ್ಲಿ ಸದ್ಗುರು ಚರಣಕಮಲಗ- । ಳಲ್ಲಿ ಸಿಗುವುದು ಭಕ್ತಿಭಾವದಿ ವಿಷ್ಣುವಚನವಿದು ॥176॥

॥ ಅಧ್ಯಾಯ 35 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 36

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಪರಗೃಹದೊಳನ್ನವನು ತ್ಯಜಿಸಿದ । ಧರಣಿಯಮರಗೆ ಪೇಳ್ದನಾಗುರು- । ವರನು ವಿಪ್ರರ ಧರ್ಮಕರ್ಮರಹಸ್ಯ ತತ್ವವನು॥

ನರಕನಗರಕೆ ಹಾದಿ ತೋರಿಸು । ತಿರುವ ಷಡ್ವೈರಿಗಳು ಜೀವ- । ಕ್ಕಿರುವನವರೊಳು ಮುಖ್ಯ ಕಾಮನು ಕುಸುಮಶರನವನು ॥
ಇರುವನವನ್ಯೆ ಅಂಗಹೀನನು । ಧರೆಯೊಳೆಲ್ಲರ ಗೆದ್ದ ನಾತನು । ಗುರುಚರಣ ಸೇವಕರು ಕಾಮನ ಗೆಲ್ವರಂಜದಲೆ ॥1॥

ಚರಣಕೆರಗುತ ನಾಮಧಾರಕ । ಕರವ ಜೋಡಿಸುತೆಂದ ನೀನಾ- । ಗಿರುವೆ ಭವಸಾಗರಕೆ ತಾರಕನೆನಗೆ ನಿಜವಾಗಿ ॥
ಕರುಣದಿಂದಲಿ ನೀನು ಭವಸಾ- । ಗರವ ತಾರಿಸು ಯೆನ್ನ ಶ್ರೀಗುರು- । ಚರಿತಪೀಯೂಷವನು ಕುಡಿಸೈ ಸಿದ್ಧಯೋಗೀಶಾ ॥2॥

ಇರುವೆ ನೀನೇ ಬ್ರಹ್ಮವೇತ್ತನು । ತರಣಿ ಮಾಯಾ ತಿಮಿರವೃಂದಕೆ । ಭರದಿ ಮಾಯಾಮೋಹರಜನಿಯೊಳಿದ್ದೆ ನಿದ್ರೆಯಲಿ ॥
ಕರುಣಸಾಗರನಾಗಿ ಬಂದೆ- । ಚ್ಚರಿಕೆ ಮಾಡಿದೆ ಯೆನಗೆ ಜ್ಞಾನದ । ತರಣಿ ಯುದಯಾಚಲಕೆ ಬಂದನು ಸಿದ್ಧ ಮುನಿಯಾಗಿ ॥3॥

ತರಣಿಯುದಯದಿ ಮಾಯೆಕತ್ತಲೆ । ಹರಿದು ಹೋಯ್ತ್ಯಜ್ಞಾನಬೆಳಕಿದು । ಧರೆಗೆ ಪಸರಿಸಿತೆಂದು ನಂಬಿದೆ ನಿನ್ನ ದರ್ಶನದಿ ॥
ಶರಧಿಯನು ದಾಟಿಸಿದೆ ಈ ಭವ । ಶರಧಿಯಲಿ ಮೊಳಕಾಲು ನೀರ್ಗೈ । ಪರಿಕಿಸಲು ತವ ಲೀಲೆ ನಿರುಪಮವೆಂದನಾ ಶಿಷ್ಯಾ ॥4॥

ನೀನು ಗುರುಚರಿತೆಯನು ಹೇಳಿದೆ । ಜ್ಞಾನಪೀಯೂಷವನು ಕುಡಿಸಿದೆ । ಮಾನಸದಿ ಸಂತೃಪ್ತಿಯಾಗದು ಹೆಚ್ಚುತಿಹುದಾಶೆ ॥
ಜ್ಞಾನದಾನಿಯು ನೀನಹುದು ನಿಜ । ದಾನ ಮಾಡ್ಯೆ ಗುರುಚರಿತ್ರವ । ಲೀನವಾಗಿಹೆ ಗುರುಚರಿತ್ರದ ಶ್ರವಣಮನದಲಿ ॥5॥

ಸಿದ್ಧ ಮುನಿ ಹೇಳಿದನು ಶಿಷ್ಯಗೆ । ಇದ್ದನಾ ಗಂಧರ್ವಪುರದಲಿ । ಶುದ್ಧಚರಿತ ನೃಸಿಂಹಮೂರುತಿ ಯತಿಯ ವೇಷದಲಿ ॥
ವೃದ್ಧಿಯಾಯಿತು ಕೀರ್ತಿಲತೆಯು ಪ್ರ । ಸಿದ್ಧಿಯಾಯಿತು ಲೀಲೆಯಗಣಿತ । ಶುದ್ಧ ತ್ರೈಮೂರುತಿಗಳಲ್ಲವೆ ಗುರು ನೃಸಿಂಹಮುನಿ ॥6॥

ಅರುಹೆ ನಾ ವಿಸ್ತಾರಭಯದಲಿ । ಪರಿ ಪರಿಯ ಲೀಲೆಗಳನೆಲ್ಲವ । ಪರಿಕಿಸುತ ಸಂಕ್ಷಿಪ್ತದಲಿ ನಾನೊರೆವೆ ಚರಿತವನು ॥
ಇರುವನೊರ್ವನು ದ್ವಿಜನು ಗಾಣಗ । ಪುರದಿ ಕರ್ಮಠ ವೇದರತನಾ- । ಗಿರುವ ಸತ್ಯವ್ರತನು ಹೋಗನು ಪರರ ಭೋಜನಕೆ ॥7॥

ವ್ಯರ್ಥಭಾಷಣ ಮಾಡನವನು ವಿ- । ರಕ್ತ ವಿಪ್ರನು ದಾನ ಕೊಳ್ಳನು । ನಿತ್ಯದಲಿ ತಾ ಶುಷ್ಕ ಭಿಕ್ಷೆಯ ಬೇಡಿ ಭುಂಜಿಪನು ॥
ನಿತ್ಯವಭ್ಯಾಗತರು ಬರಲಾ- । ತಿಥ್ಯವನು ಮಾಡುವನು ಪ್ರೇಮದಿ । ಸತ್ವಶೀಲನು ವಿಪ್ರ ವಿಥ್ಯಾ ಭಾಷಣವನರಿಯಾ ॥8॥

ನಾರಿಯಾತನ ಕರ್ಮವಶದಲಿ । ಕ್ರೂರಕ್ರೋಧಾನ್ವಿತಳು ಪತಿಯನು । ದೂರುವಳು ಸಂಸಾರ ಬಡತನದೆಂದು ದೂಷಿಪಳು ॥
ಊರೊಳಗೆ ಗುರುವರನ ಕೀರ್ತಿಗೆ । ದೂರದಿಂದಲಿ ಮಂದಿ ಬರುವರು । ಭೂರಿ ಭೂಸುರ ಭೋಜನವ ಮಾಡುವರು ದಿನದಿನದಿ ॥9॥

ದಿನದಿನದಿ ನಡೆಯುವ ಸಮಾರಾ । ಧನೆಗೆಯಾಮಂತ್ರಣವನೀವರು । ವನಿತೆಪುರುಷರು ದಂಪತಿಗಳನು ಕರೆದು ತೋಷಿಪರು ॥
ದಿನದಿನದ ಭೋಜನದ ಪರಿಯನು । ವನಿತೆಯರು ಕೊಂಡಾಡುವರು ಬಡ । ವನಿತೆ ತನ್ನಯ ಪತಿಯ ಬೈವಳು ಹೋಗನಿವನೆಂದು ॥10॥

ಕೇಳುತಾ ಬಡ ವಿಪ್ರನನಿತೆಯು । ತಾಳಲಾರದೆ ಮನದ ದುಃಖವ । ಹೇಳಿ ಕೊಂಡಳು ತನ್ನ ಮನದಲಿ ಬಹಳ ದುಃಖದಲಿ ॥
ಭಾಲಲೋಚನ ಕೇಳುಯೆನ್ನಯ । ಭಾಳಲಿಖತವಿದೇನು ಸಿಗದು ಪ- । ರಾಲಯದ ಭೋಜನವು ಪಕ್ವಾನ್ನಗಳನುಣಲಾರೆ ॥11॥

ಪತಿದರಿದ್ರನು ಪರರ ಭೋಜನ । ಪತಿಕರಿಸನ್ನೈ ದೈವವೆನ್ನುದು । ಗತಿಯು ಮುಂದೇನಿದಕೆ ಪರಮೇಶ್ವರನೆ ಶ್ರೀಹರಿಯೆ ॥
ಪ್ರತಿ ದಿನದೊಳುಪ್ಪನ್ನ ವುಂಡೆನು । ಮತಿಯು ಮರುಳಾಯ್ತೆನಗೆ ಕೇಳ್ದಂ । ಪತಿಯರೂಟವು ಸಿಗದೆ ಪತಿ ಪರರೂಟ ಗ್ರಹಿಸನಲಾ ॥12॥

ನೆರೆಹೊರೆಯ ಸ್ತ್ರೀಯರಿಗೆ ಸಿಗುವುದು । ದರದಿವಸ ಪಕ್ವಾನ್ನದೂಟವು । ಮರಳಿ ದಕ್ಷಿಣೆ ವಸ್ತ್ರವಗಣಿತ ಭಾಗ್ಯವಂತರಲಾ ॥
ಮರುಳಹನು ಪತಿಯೆನ್ನ ನೀಪರಿ । ಮರುಗಿಸುವದು ಕಣಾ ವಿಲಕ್ಷಣ । ಹರಹರಾ ನಾ ಕಾಣೆ ಯುಕ್ತಿಯನೆಂದಳಿಂದುಮುಖಿ ॥13॥

ಬಂದನೋರ್ವನು ಭಾದ್ರಪದದಲಿ । ಯೊಂದು ಪಕ್ಷವ ಮಾಡಲೋಸುಗ । ಚಂದದಿಂದಲಿ ಕರೆದನಾ ದಂಪತಿಗಳೆಲ್ಲರನು ॥
ಮಂದಭಾಗ್ಯಳು ತಾನೆನುತ ಪತಿ- । ಗೆಂದಳೀ ಬ್ರಾಹ್ಮಣನ ಭೋಜನ । ಕಿಂದು ಹೋಗಲು ಬೇಕು ಮನಸೆನಗಾಯ್ತು ಭೋಜನದಿ ॥14॥

ಪರಿಪರಿಯ ಪಕ್ವಾನ್ನ ದೂಟವು । ದೊರೆಯುವದು ದಕ್ಷಿಣೆಯು ವಸ್ತ್ರವು । ಹರಹರಾ ಇದನೆಲ್ಲ ಬಿಡುವುದು ಸರಿಯೆ ಪ್ರಾಣೇಶಾ ॥
ಬರದಿರಲು ನೀವಿದಕೆ ಯೆನ್ನನು । ಕರುಣದಿಂ ಕಳುಹಿಸಿರಿ ಪಾದ । ಕ್ಕೆರಗುವೆನು ತಾನೆನುತ ಪತಿಯೊಳು ಹಟವ ಮಾಡಿದಳು ॥15॥

ಸತಿಯ ಮಾತನು ಕೇಳಿ ದುಃಖಿದಿ । ಪತಿ ನಿರೋಪವ ಕೊಟ್ಟನಾಕೆಗೆ । ಮತಿಗೆ ಬಾರದು ಸೇರದೆನಗೆ ಪರಾನ್ನ ಭೋಜನವು ॥
ಮತಿಗೆ ನಿನ್ನ ಪ್ರಶಸ್ಥವಾದರೆ । ಸತಿಯೆ ಪೋಗಾಭೋಜನಕ್ಕನು- । ಚಿತವು ನಾ ಬರಲಾರೆನೆಂದನು ಸತಿಗೆ ಪತಿಯಾಗಾ ॥16॥

ಅನುಮತಿಯು ತನಗಾಯಿತೆನುತಾ । ವನಿತೆ ಹಿಗ್ಗುತ ಪೇಳ್ದಳು । ಯೆನಗೆ ಭೋಜನದಾಶೆ ಯಾಗಿದೆ ಬರುವೆ ಭೋಜನಕೆ ॥
ಎನಲು ಸತಿಗೆ ಗೃಹಸ್ಥನೆಂದನು । ವನಿತೆಯೊಬ್ಬಳು ಸಲ್ಲಳೀಭೋ । ಜನಕೆ ದಂಪತಿ ಬೇಕು ಕರೆತಾ ನಿನ್ನ ಗಂಡನನು ॥17॥

ನುಡಿಯ ಕೇಳುತ ಸುದತಿ ದುಃಖಿದಿ । ಗಡಗಡನೆ ನಡುಗಿದಳು ದುಃಖಿದಿ । ಸುಡುಸುಡೆನ್ನೀಜನ್ಮ ಸಿಗದೀ ವಿಪ್ನ್ರ ಭೋಜನವು ॥
ಬಡವೊಡೆಯನಾ ಪಿಡಿಯೆ ಕೈಗಳ । ಸಡಲಿಸಿತು ಯೆನ್ನೊಡಲು ಭೋಜನ । ಪಡೆಯ ಬೇಕೆಂದಾಗ ಯೋಚಿಸಿದಳು ಸುಯುಕ್ತಿಯನು ॥18॥

ತರುಣಿ ಬಂದಳು ಮಠಕೆ ಶ್ರೀಗುರು । ನರಹರಿ ಸರಸ್ವತಿಯ ವಂದಿಸಿ- । ಯರುಹಿದಳು ನಿಜಪತಿಯ ನೇಮವ ತನ್ನ ದುಃಖವನು ॥
ಕರೆದು ಯೆನ್ನಯ ಪತಿಗೆ ಪೇಳ್ವುದು । ಕರುಣದಿಂದೀ ಭೋಜನಕೆ ನೀ । ತೆರಳ ಬೇಕೆಂದವಗೆ ಭೋಧಿಸಿ ಕುಳುಹು ಭೋಜನಕೆ ॥19॥

ಪರಿಪರಿಯ ಪಕ್ವಾನ್ನ ಭೋಜನ । ದೊರೆಯುವುದು ದಕ್ಷಿಣೆ ಸುವಸ್ತ್ರವು । ಬರುತಿಹುದು ಬಾಯೊಳಗೆ ನೀರಿದ ಕೇಳುತಾಶೆಯಲಿ ॥
ಕರುಣ ಸಾಗರ ನೀನು ನಿನ್ನನು । ಮೊರೆಯಹೊಕ್ಕೆನು ಯೆನ್ನ ಪತಿಯನು । ಕರೆದು ಕಳುಹಿಸು ಭೋಜನಕೆ ನಾ ನಿನ್ನ ಕಾಲ್ಪಿಡಿವೆ ॥20॥

ತರುಣಿಯಾಡಿದ ನುಡಿಯ ಕೇಳುತ । ಗುರುವು ಕರೆದನು ಮುದದಿ ವಿಪ್ರನ । ತೆರಳು ಪರಭೋಜನಕೆ ನಿನ್ನಯ ತರುಣಿಯೊಡಗೂಡಿ ॥
ತರುಣಿ ಗಿರುವುದು ಭೋಜನೇಚ್ಛೆಯು । ತರುಣಿಯಾಶೆಯ ತೀರಿಸಲು ತತ್ । ಪರಮ ಪತಿ ಇರಬೇಕು ನೋಯಿಸಬಾರದೈ ಸತಿಯಾ ॥21॥

ಗುರುವಚನವನು ಕೇಳಿ ವಿಪ್ರನು । ಗುರುವಿಗೆಂದನು ತನ್ನ ನೇಮವ । ನರಿಯಲಾ ಪರರನ್ನ ಗ್ರಹಣವ ಮಾಡೆ ನಾನೆಂದು ॥
ಗುರುವು ನಿನ್ನಯ ವಚನವನು ನಾ- । ಶಿರದಿ ಧರಿಸುತ ತೆರಳಿದೆನು ಶ್ರೀ । ಗುರುವಚನ ಮೀರಿದರೆ ತಪ್ಪದು ನರಕ ರೌರವವು ॥22॥

ತರುಣಿಗಾಯಿತು ಮನದಿ ಸಂತಸ । ದೊರೆಯಿತೀದಿನ ಪಂಚ ಪಕ್ವದ । ಪರಮ ಭೋಜನವೆಂದು ಮನದಲಿ ಹಿಗ್ಗಿದಳು ತರಳೆ ॥
ಪರಿಪರಿಯ ಮಿಷ್ಟಾನ್ನದೆಲೆಯನು । ತರುಣಿ ಕಂಡಳು ಕೂತಳಾಕ್ಷಣ । ಪರಿಯ ವಿಪರೀತವನು ಕಂಡಳು ಸತಿಯು ಪಂಕ್ತಿಯಲಿ ॥23॥

ಶ್ವಾನಶೂಕರಮುಖ್ಯ ಮೃಗಗಳು । ಹೀನಜಾತಿಯ ಜಂತುಗಳ ದನು । ಮಾನವಿಲ್ಲದೆ ಬಂದು ಹತ್ತಿರ ಮಾಳ್ಪವೂಟವನು ॥
ಏನಿದಚ್ಚರಿಯೆಂದು ಖೇದದಿ । ಮಾನಿನಿಯು ತಾನೆದ್ದಳಾಕ್ಷಣ । ಕ್ಷೋಣಿಸುರರಿಗೆ ಪೇಳ್ದಳೈ ತಾ ಕಂಡ ವಿಸ್ಮಯವಾ ॥24॥

ಇಂತು ನಾರಿಯು ಮನದಿ ಚಿಂತಾ । ಕ್ರಾಂತಳಾಗುತ ಪತಿಯ ಸಹಿತವೆ । ಪಿಂತಿರುಗಿದಳು ಮನೆಗೆ ನಾಯಿಯ ಯೆಂಜಲುಂಡೆವೆಲಾ ॥
ಎಂತು ಹೋಗುವ ದೀ ದುರಿತವೆನ । ಗೆಂತು ವಾಸನೆಯಾಯ್ತು ದುಷ್ಟೆಗೆ । ಕಾಂತನಾಡಿದ ವಚನ ಮೀರಿದೆನೆಂದಳಿಂದುಮುಖಿ ॥25 ॥

ನುಡಿಯ ಕೇಳುತ ವಿಪ್ರನೆಂದನು । ಮಡದಿ ನಿನ್ನಯ ಮಾತ ಕೇಳಿದೆ- । ನುಡುಗೊರೆಯು ತಾನಾಯ್ತುಯೆಂಜಲು ನಾಯಿಸೂಕರದಾ ॥
ನಡೆದರಾ ದಂಪತಿಗಳಾಕ್ಷಣ । ವಡಿಗೆರಗಿ ಗುರುವಿಂಗೆ ನಮಿಸಲು । ಸಡಗರದಿ ಶ್ರೀಗುರುವು ನುಡಿದನು ಸಂತವಿಸುತವರಾ ॥26॥

ಕಣ್ಣಿನಿಂದಲಿ ನೋಡಿದೆಯೊ ಪರ- । ರನ್ನ ಗ್ರಹಣದ ಸುಖವ ಭಾಮಿನಿ । ನಿನ್ನ ಪತಿಯನು ನಿಂದಿಸಿದೆ ದಿನದಿನದಿ ವ್ಯರ್ಥದಲಿ ॥
ಇನ್ನು ನಂಬುಗೆಯಿಂದ ಪತಿಯನು । ಬನ್ನ ಬಡಿಸಲು ಬೇಡ ಮನದ ಪ್ರ । ಸನ್ನತೆಯು ನಿನಗಾಯ್ತು ಕೂಡಿದುದೇ ಮನೋರಥವು ॥27॥

ಗುರುವರನ ನುಡಿ ಕೇಳಿ ಭಾಮಿನಿ । ಗುರುಚರಣಕಭಿವಂದಿಸುತ ಮನ । ಮರುಗಿ ಪೇಳ್ದಳು ಜೀಯ ಕ್ಷಮಿಸೈ ತಪ್ಪು ಮಾಡಿದೆನು ॥
ಪರರ ಭೋಜನಕೊಯ್ದು ಪತಿಮನ- । ಕಿರದೆ ದುಃಖವ ಕೊಟ್ಟೆ ನೇಮವ । ಮುರಿಸಿದೆನು ನಾನರಿಯೆ ಗೂಢವನೆಂದಳಿಂದುಮುಖಿ ॥28॥

ಮಂದಮತಿ ನಾನಿಹೆನು ಸುಗುಣ- । ವೃಂದಭೂಷಿತನೆನ್ನ ಪತಿಯೆ- । ನ್ನಿಂದ ದೋಷವು ಬಂತು ಕ್ಷಮಿಸುವುದೆಂದಳಾ ಸತಿಯೂ ॥
ಎಂದು ಸತಿಯಳ ನುಡಿಯ ಕೇಳುತ । ಲೆಂದನಾದ್ವಿಜವರನು ಗುರುವಿಗೆ । ತಂದೆ ಕೇಳ್ಳೈ ಭಂಗವಾಯಿತು ವ್ರತವು ಸತಿಯಿಂದಾ ॥29॥

ಪರರ ಮನೆಯಲಿ ಭೋಜನವ ಸ್ವೀ । ಕರಿಸಲಾರೆನೆನುತ್ತ ಮನ । ನಿರ್ಧರಿಸಿದೆನು ಸಂಕಲ್ಪವೆನ್ನಯ ನಾರಿ ತಿಳಿಯದಲೆ ॥
ಮುರಿಸಿದಳು ಮುಂದೇನುಪಾಯವು । ಗುರುವರನೆ ನೀನರುಹ ಬೇಕೆಂ- । ದೆರಗಿದನು ಪದಕಮಲದಲಿ ನಿಜಭಾವಭಕುತಿಯಲಿ ॥30॥

ಕೇಳಿ ತದ್ವಚನವನು ಶ್ರೀಗುರು । ಪೇಳಿದನು ಸಾಂತ್ವನವನವರಿಂ- । ಗಾಲಿಸೈ ದ್ವಿಜವರನೆ ಮಡದಿಯ ಮನದ ಬಯಕೆಯನು ॥
ಪಾಲಿಸಿದೆ ಸಂತೋಷವಾಯಿತು । ಬಾಲೆ ವರ್ತಿಪಳಿನ್ನು ಮುಂದಕೆ । ಪೇಳಿದಂದದಿ ನೀನು ನಿರ್ಭಯನಾಗು ಮುಂದಿನ್ನು ॥31॥

ದೋಷವಿದು ತಟ್ಟದು ನಿನಗೆ ಬಹು । ಲೇಸು ಬರುವುದು ಪೇಳ್ವೆ ಕೇಳ್ಳೈ । ಭೂಸುರಗೆ ಧರ್ಮಾರ್ಥ ಕಾರ್ಯದಿ ವಿಪ್ರ ಸಿಗದಿರಲು ॥
ದೋಷವಿಲ್ಲ ಪರಾನ್ನ ಗ್ರಹಣದಿ । ದೋಷ ಬರುವುದು ಹೊಗದಿರೆ ನೀ । ಭೂಷಣವು ನಿನಗಿಹುದು ಹೋದರೆ ಧರ್ಮಸಾಗುವುದು ॥32॥

ಎಂದು ನುಡಿಯನು ಕೇಳಿ ಬಹಳಾ- । ನಂದದಿಂದಲಿ ವಿಪ್ರನುಡಿಯನು । ಇಂದು ವಿಸ್ತರದಿಂದ ಪೇಳ್ವೈ ಧರ್ಮತತ್ವವನು ॥
ಎಂದು ಎಲ್ಲಿ ಪರಾನ್ನ ವರ್ಜ್ಯವು । ಎಂದು ಎಲ್ಲಿ ಪರಾನ್ನ ಗ್ರಾಹ್ಯವು । ಕುಂದುಹೆಚ್ಚನು ಹೇಳಬೇಕೆಂದೆರಗಿದನು ಪದಕೆ ॥33॥

ಕೇಳಿ ವಿಪ್ರನ ವಚನವನು ಗುರು । ಪೇಳಿದನು ಧರ್ಮದ ರಹಸ್ಯವ । ಕೇಳು ವಿಪ್ರನೆ ತತ್ವಸಾರ ಪರಾನ್ನ ಭೋಜನದಾ ॥
ಕೇಳು ಗುರುಭುವನದಲಿ ಶಿಷ್ಯರ । ಮೇಳದಲಿ ವೈದಿಕರ ಮನೆಯಲಿ । ಮೇಲೆ ಮಾತುಲಶ್ವಶುರಗೃಹದಲಿಯನ್ನ ನಿರ್ದೋಷಾ ॥34॥

ಸಾಧು ಜನರಲಿ ಮೇಣು ತನ್ನ ಸ- । ಹೋದರರ ಮಂದಿರದಿ ಭೋಜನ । ವಾದರದ ಕಿನ್ನೇನು ದೊಷವು ಬರುವುದೇ ಮರುಳೆ ॥
ಮೇದಿನೀಸುರ ಸಿಗದೆ ಧರ್ಮಕೆ । ಭೇದಬಂದರೆ ಹೋಗುತಲ್ಲಿಗೆ । ಸಾದರದಿ ಧರ್ಮವನು ನುಡಿಸಲು ಬೇಕು ನಿಜವಾಗಿ ॥35॥

ದುರಿತ ಬರೆ ಗಾಯತ್ರಿ ಜಪದಲಿ । ಪರಿಹರಿಸುವುದು ದುರಿತವರ್ಗವು । ಅರುಹುವೆನು ನಾನಿನ್ನು ವರ್ಜ್ಯಸ್ಥಾನಗಳನಿರದೆ ॥
ಹಿರಿಯಮಾತಾಪಿತರ ಕೈಯಿಂ- । ದಿರದೆ ಸೇವೆಯ ಕೊಳ್ವಮನೆಯಲಿ । ಪರಮ ಧನಲೋಭಿಷ್ಟನಲಿ ಭೋಜನವ ವರ್ಜಿಪುದು ॥36॥

ಮಡದಿಮಕ್ಕಳ ಕಷ್ಟವಿಸಿ ದ್ವಿಜ । ಕೊಡುವನ್ನೈ ದಾನವನ ದಂತಹ । ಬಡಿಸಿದರೆ ಭೋಜನವ ವರ್ಜಿಪುದುಚಿತವಿದು ನಿಜವು ॥
ಮಡದಿ ತ್ಯಜಿಸಿದ ವಿಪ್ರನಲ್ಲಿಯೆ । ಬಿಡಲು ಪೂರ್ವಜಧರ್ಮಮಾರ್ಗವ । ಬಿಡಲು ಬೇಕವನಲ್ಲಿ ಭೋಜನವನ್ನು ಸಜ್ಜನರು ॥37॥

ಚಿತ್ರಕನ ಮನೆಯಲ್ಲಿ ಗರ್ವದಿ । ಯುಕ್ತನಾದವನಲ್ಲಿ ವಿಪ್ರನು । ಶಸ್ತ್ರ ಧರಿಸುತ ಮಲ್ಲಯುದ್ಧವ ಮಾಡುವವನಲ್ಲಿ ॥
ವೃತ್ತಿಯಾಜಕತನದೊಳುದರವ । ಪೂರ್ತಿ ಮಾಡುವನಲ್ಲಿಯೂರಸ- । ಮಸ್ತರುಚ್ಚಾರಿಸಿ ಬಹಿಷ್ಕಾರವನು ಕೊಟ್ಟಲ್ಲಿ ॥38॥

ಪರರ ನಿಂದಿಸಿಯಾತ್ಮ ಸಂಸ್ತುತಿ- । ಪರರ ಮನೆಯಲಿ ಸರ್ವಜನರಿಗೆ । ಗುರುತನದಿ ಮಂತ್ರೋಪದೇಶವ ಮಾಡುವವನಲ್ಲಿ ॥
ಭರದೊಳೊಂದೇ ಸ್ಥಳದೊಳಡಿಗೆಯ- । ನಿರದೆ ಮಾಡುತ ವೈಶ್ವದೇವರ । ವಿರಚಿಸದೆ ಬಹುಜನರು ಕರೆದರೆ ಊಟವರ್ಜಿಪುದು ॥39॥

ದುಷ್ಟತನದಲಿ ಶಿಷ್ಯರಿರಲಾ । ಭ್ರಷ್ಟ ಗುರುವಿನ ಭವನದಲಿ ಮನ । ಮುಟ್ಟಿ ಧನದಾನವನು ಮಾಡದ ತಾಮಸಿಕನಲ್ಲಿ ॥
ಸಿಟ್ಟಿರುವ ಬ್ರಾಹ್ಮಣನ ಮನೆಯಲಿ । ಬಿಟ್ಟು ತಂದೆಯ ಬೇರೆ ಇರುತಿಹ । ದುಷ್ಟ ಮಗನಲಿ ಭೋಜನವ ವರ್ಜಿಪುದು ಸಜ್ಜನರು ॥40॥

ತರುಣಿ ಪೇಳಿದ ತೆರದೊಳಿರುತಿಹ । ಪುರುಷನಲಿ ಚೋರನಲಿ ಮೇಣ್ ತ । ಸ್ಕರನ ವಿದ್ಯೆಯ ಕಲಿಸುವವನಲಿ ದ್ವಾರಪಾಲನಲಿ ॥
ಗುರುವ ನಿಂದಿಪನಲ್ಲಿ ಕುಟಿಲಾ- । ಚರಣದಲಿ ವೇದಗಳ ಶೂದ್ರರಿ- । ಗರುಹುವವನಲಿ ಭೋಜನವ ವರ್ಜಿಪುದು ಸಜ್ಜನರು ॥41॥

ತರಗ ಮಾರುವ ದ್ವಿಜನ ಮನೆಯಲಿ । ಹರಭಜನವಿಲ್ಲದ ಭವನದಲಿ । ವಿರಚಿಸದೆ ಸ್ನಾನವನು ಭೋಜನ ಮಾಡುವವನಲ್ಲಿ ॥
ನಿರತ ದ್ಯೂತದಿ ಕಾಲಕಳಿವಲಿ । ಬರಿದೆ ದಂಬಾರ್ಥಕ್ಕೆ ಜಪವಾ- । ಚರಿಸುವವನಲಿ ದ್ರವ್ಯದಾಶೆಗೆ ಜಪವ ಮಾಳ್ಪನಲಿ ॥42॥

ಸಾಲಕೊಟ್ಟುಪಕಾರ ಮಾಳ್ಪ ಕು- । ಶೀಲನಲಿಯನ್ಯಾಯರತನಲಿ । ಕಾಲಕಾಲಕೆ ಸಂಧ್ಯೆಯನು ಬಿಟ್ಟಿರುವ ವಿಪ್ರನಲಿ ॥
ಏಳಿಗೆಯ ವಿದ್ವಾಂಸರನು ಹೀ । ಯಾಳಿಸುವರಲಿ ಪಕ್ಷಪಾತವ । ಪಾಲಿಸುವನಲಿ ಭೋಜನವ ವರ್ಜಿಪುದು ಸಜ್ಜನರು ॥43॥

ನೀತಿಯಿಲ್ಲದೆ ನಡೆವನಲಿ ಬಹು । ಪಾತಕಿಯರಲಿ ತನ್ನ ನಿಜಜಾ- । ಮಾತ ಕನ್ನೆಯರಿಂಗೆ ದ್ವೇಷಿಪರಲ್ಲಿ ಲಂಡರಲಿ ॥
ಸೂತನಲಿ ನಿಷ್ಪುತ್ರನಲಿ ಪರ । ಜಾತಿಯವನಲಿ ಪಂಚಯಜ್ಞದ । ಘಾತಕಿಯ ಮನೆಯಲ್ಲಿ ಭೋಜನ ವರ್ಜಿಸಲು ಬೇಕು ॥44॥

ತನ್ನ ಮನೆಯನ್ನವನು ನಿಂದಿಸಿ । ಭಿನ್ನ ಗ್ರಹದನ್ನವನು ಭುಂಜಿಪ । ಕುನ್ನಿಯಲಿ ಬಧಿರನಲಿ ಹೀನ ಶರೀರನಲಿ ತಿಳಿಯೆ ॥
ಅನ್ನ ಗ್ರಹಣವ ಮಾಡಲಾಗದು । ಪುಣ್ಯಹೀನತೆ ಯಾಗುವದು ಮತಿ । ಯನ್ನು ಕ್ಷೀಣಿಸುತಿಹುದು ನೋಡು ಪರಾನ್ನ ಗ್ರಹಣದಲಿ ॥45॥

ಅಡಿಗೆಭಟ್ಟನ ವೃತ್ತಿಯಲಿ ತ- । ನ್ನೊಡಲಹೊರೆವನ ಮನೆಯೊಳುಂಡರೆ । ಕೆಡುವುದೈ ಸ್ಮೃತಿ ಬುದ್ಧಿ ಕಿವಿಯಲಿ ಕಿವುಡನಾಗುವನು ॥
ಗಡಬಡಿಸುವುದು ಧೃತಿಯು ಶಕ್ತಿಯು । ಸಡಲಿಸುವುದೈ ಬಾಣಸಿಯ ಮನೆ । ಯಡಿಗೆಯವನು ಭುಂಜಿಸುವುದನುಚಿತ ಶಾಸ್ತ್ರಸಿದ್ಧವಿದು ॥46॥

ಭೂಸುರನು ನಿಜಮನೆಯ ಬಿಡುತಲೆ । ವಾಸವನು ಪರಗೃಹದಿ ಮಾಡಲು । ತೋಷದಿಂ ಪರರನ್ನ ಗ್ರಹಿಸಲು ಕೆಡುವುದಿಹಪರವು ॥
ದೋಷವಪ್ಪುದು ದ್ವಿಜಗೆ ಪುಣ್ಯವು । ನಾಶವಪ್ಪುದು ತನ್ನ ಪುಣ್ಯ ಫ- । ಲಾಶಯವು ಯಜಮಾನನಿಗೆ ಹೋಗುವುದು ನಿಜವಾಗಿ ॥47॥

ಸ್ವರ್ಣಭೂಗೋದಾನ ದೂಷಣ । ರನ್ನ ಗಜವಾಜಿಗಳ ದಾನವು । ಪುಣ್ಯ ನಾಶಕ ಗ್ರಹಣದಿಂದದರಂತೆ ಪರರನ್ನ ॥
ಕನ್ಯೆಗರ್ಭಕ ಜನಿಪ ತನಕವು । ಕನ್ಯೆಯಳ ಮನೆಯನ್ನ ವರ್ಜ್ಯವು । ಪುಣ್ಯ ಹಾನಿಯು ಭೋಜನವ ಮಾಡಿದರೆ ಶೂದ್ರದಲಿ ॥48॥

ಧರೆಯೊಳೀತೆರವಿಹುದು ದ್ವಿಜರಾ । ಚರಣವಿದನೆಲ್ಲವನು ನೇಮದಿ । ಚರಿಸಿದರೆ ತಟ್ಟುವುದೆ ದೈನ್ಯವು ವಿಪ್ರಕುಲಜರಿಗೆ ॥
ಸುರತರುವು ಸುರಧೇನುವೈ ಭೂ- । ಸುರರ ನಿಜದಾಶೀರ್ವಚನಗಳು । ಸುರವರರು ಕಿಂಕರರು ಸಿದ್ಧಿಗಳೆಲ್ಲ ದಾಸಿಯರು ॥49॥

ಮದದಿ ದ್ವಿಜರುನ್ಮತ್ತರಾದರು । ಮೊದಲಿನಾಚಾರವನು ಬಿಟ್ಟರು । ವೊದಗಿತೈ ದಾರಿದ್ರ್ಯವದರಿಂ ಧರ್ಮಭ್ರಷ್ಟರಿಗೆ ॥
ಇದನು ಕೇಳುತ ವಿಪ್ರನೆಂದನು । ಮುದದಿ ವಿಪ್ರಾಚಾರಧರ್ಮವ । ನೊದಗಿ ವಿಸ್ತರದಿಂದ ಪೇಳೆನಗೆಂದು ಬೇಡಿದನು ॥50॥

ಕರುಣಸಾಗರ ಭಕ್ತಜನಸುರ- । ತರುವೆ ಗುರುಮೂರುತಿಯೆ ನಿನ್ನಯ । ಚರಣಕೆರಗುವೆ ನೀನೆ ತ್ರೈಮೂರ್ತಿಗಳು ನೋಡಿದರೆ ॥
ಅರುಹಬೇಕು ಸಮಗ್ರ ವಿಪ್ರಾ । ಚರಣಧರ್ಮವನೆನಗೆ ಕರುಣದಿ । ಗುರುವೆ ನಿನ್ನಧಿಕಾರವಾಣಿಯಲೆಂದನಾ ವಿಪ್ರ ॥51॥

ಋಷಿಗಳೆಲ್ಲರು ಪೂರ್ವದಲಿ ನೈ- । ಮಿಷ ವನದಿ ಕೂಡಿದರು ಬಹು ಸಂ-। ತಸದೊಳಾಚರಿಸಿದರು ತಪವನನನ್ಯಭಾವದಲಿ ॥
ಋಷಿಕುಲೋತ್ತಂಸಕ ಪರಾಶರ । ಋಷಿಯು ಬರಲಿದಿರೆದ್ದು ತಂದರು । ಬೆಸಸಿದರು ಕರಜೋಡಿಸುತ ದ್ವಿಜಧರ್ಮವೇನೆಂದು ॥52॥

ಬ್ರಹ್ಮ ಋಷಿ ನೀನೆಂದು ನಿನ್ನೊಳು । ಧರ್ಮವನುಕೇಳುವೆವು ಸಂಶಯ । ನಮ್ಮ ಮನದೊಳಗಿಹುದು ದಿಟವೋ ಸೆಟೆಯೊ ತೆಳಿಯದಲಾ ॥
ನಮ್ಮ ಕುಲದಾಚಾರ ನೋಡಲು । ನಿಮ್ಮ ಯಧಿಕಾರ ಪ್ರಣೀತದ । ಧರ್ಮ ಕರ್ಮರಹಸ್ಯವನು ತಿಳಿಸೆಂದರಾ ಋಷಿಗೆ ॥53॥

ಗುರು ಪರಾಶರ ಕೇಳಿ ನುಡಿಯನು । ಹರುಷದಿಂದಲಿ ಪೇಳ್ವನವರಿಗೆ । ಅರುಹುವೆನು ನಾ ಮೋಕ್ಷ ಸಿದ್ಧಿಯ ಸುಲಭ ಮಾರ್ಗವನು ॥
ತರಣಿಯುದಯದ ಮೊದಲು ಬ್ರಾಹ್ಮಸು-। ರರ ಮುಹೂರ್ತದೊಳೆದ್ದು ಶ್ರೀಗುರು । ಸ್ಮರಣಮಾಡುತ ಹರಿಹರಬ್ರಹ್ಮಾದಿಗಳ ನೆನೆದು ॥54॥

ಸ್ಮರಿಸಬೇಕು ನವಗ್ರಹರನಂ- । ತರ ಕೆ ಸ್ಮರಿಸಿ ಸನತ್ಕುಮಾರನ । ಸ್ಮರಿಸಬೇಕಾ ಬಳಿಕ ಸನಕ ಸನಂದನಾದಿಗಳಾ ॥
ಸುರಮುನಿಯ ನಾರದನ ತದನಂ- । ತರಕೆ ತುಂಬುರ ಸಿದ್ಧಯೋಗಿಯ । ಶರನಿಧಿಗಳೇಳನು ಗಿರಿಗಳನು ಸಪ್ತ ಪಿತೃಗಳನು ॥55॥

ಸಪ್ತ ಪಿತೃಗಳ ಸ್ಮರಿಸಿ ನಂತರ । ಸಪ್ತದ್ವೀಪಗಳನ್ನು ಸ್ಮರಿಸುತ । ಸಪ್ತಭುವನಂಗಳನು ಪ್ರಾರ್ಥಿಸಬೇಕು ಯೆದ್ದೊಡನೆ ॥
ಮತ್ತೆ ಶಯನ ಸ್ಥಾನದಿಂದಲಿ । ಭಕ್ತಿಯಿಂದಾಚಮನವೆರಡನು । ವಿಸ್ತರಿಸಿ ಲಘುಶಂಕೆ ಮಾಡಲು ಹೋಗಬೇಕಾಗಾ ॥56॥

ಮಾಡಿರ್ಕೈ ಶೌಚಾಚಮನವನು । ನೋಡಿರಾಚಮನ ಪ್ರಕಾರವ-। ನಾಡುವೆನು ಕೇಳೆರಡು ಸ್ನಾನದ ಪೂರ್ವನಂತರದಿ ॥
ಮಾಡಬೇಕದರಂತೆ ಜಲವ ಸ- । ಗಾಢದಲಿ ಕುಡಿವಾಗ ತದ್ವತ್ । ಮಾಡಬೇಕಾಚಮನವೆರಡನು ಮಲಗುತೇಳುತಲಿ ॥57॥

ಹೊಲಸು ದೃಷ್ಟಿಗೆ ಬೀಳಲಾಪರಿ । ಹೊಲಸು ವಾಯುವಿಸರ್ಜನದಲಾ-। ಕಳಿಸಲೆರಡಾಚಮನ ಮಾಡಲು ಶುದ್ಧನಾಗುವನು ॥
ಎಲೆಯ ಮೇಲ್ಭೋಜನದ ಪೂರ್ವದಿ । ಬಳಿಕ ಭೋಜನವಾದನಂತರ । ತಿಳಿಯೆ ಶೌಚದ ಬಳಿಕ ಲಘುಶಂಕೆಯ ಬಳಿಕಲೆರಡು ॥58॥

ಬರಲು ಸೀನೆರಡಾಚಮನವನು । ನರನು ಮಾಡಲು ಬೇಕು ಜಲ ಸಿಗ । ದಿರಲು ಶ್ರೋತ್ರಾಚಮನ ಮಾಳ್ಪುದು ಶಾಸ್ತ್ರಸಿದ್ಧವಿದು ॥

ಕರದಿ ಕಿವಿಕಣ್ಣುಗಳ ಸ್ಪರ್ಶಿಸೆ । ನರರಿದಕ ಶ್ರೋತ್ರಾಚಮನವೆಂ- । ಬರು ಕಣಾ ಸಂದೇಹವಿಲ್ಲದೆ ಪಾಪ ನಾಶಿಪುದು ॥59॥

॥ ಶ್ಲೋಕ ॥ ಅಗ್ನಿರಾಪಶ್ಚ ಚಂದ್ರಶ್ಚ ವರುಣಾರ್ಕೇಂದ್ರವಾಯವಃ ॥ ವಿಪ್ರಸ್ಯ ದಕ್ಷಿಣೇ ಕರ್ಣೇ ನಿತ್ಯಂ ತಿಷ್ಠಂತಿ ದೇವತಾಃ॥

ತರಣಿವಾಯುಹುತಾಶಚಂದ್ರರು । ವರುಣದೇವೇಂದ್ರಾಪದೇವತೆ- । ಯರು ನಿರಂತರವಿಹರು ವಿಪ್ರನ ಬಲದ ಕಿವಿಯೊಳಗೆ ॥

ಕರದಿ ಕಿವಿಯನು ಸ್ಪರ್ಶಿಸಲು ತಾ । ದುರಿತವೆಲ್ಲವು ನಾಶವಪ್ಪುದು । ಬರುವುದಾಚಮನದ ಮಹತ್ವವು ಕರದ ಸ್ಪರ್ಶದಲಿ ॥60॥

ಮಾಡಿ ಲಘುಶಂಕಾಚಮನವನು । ಮಾಡುತಲಿ ಮಾನಸಿಕ ಸ್ನಾನವ । ಕೂಡಬೇಕಾಸನದೊಳರುಣೋದಯದ ಪರಿಯಂತ ॥

ನೋಡುತರುಣೋದಯವ ಶೌಚಕೆ । ಕಾಡುದೇಶಕೆ ಹೋಗಬೇಕೈ । ಕೂಡಿಸುತ ಜನಿವಾರ ಕಿವಿಯಲಿ ದಿಶೆಗೆ ನೈಋತಕೆ ॥61॥

ಸುತ್ತು ಮತ್ತಲೆ ನೋಡಿದರೆ ನ- । ಕ್ಷತ್ರಸೂರ್ಯರ ಕಡೆಗೆ ನಿಲುಕದೆ । ಮತ್ತೆ ಸ್ತ್ರೀಪುರುಷರನು ನೋಡದೆ ಕೆಳಗೆ ನೋಡುತಲಿ ॥

ಉತ್ತರಕೆ ಮುಖ ಹಗಲು ಹೊತ್ತಿಲಿ । ರಾತ್ರಿಯಲಿ ದಕ್ಷಿಣಕೆ ಮುಖವೀ । ತತ್ವವನು ಪಾಲಿಸುತ ಶೌಚವ ತೀರಿಸಲು ಬೇಕು ॥62॥

ಕಚ್ಚೆ ಬಿಚ್ಚ ದೆ ಮೂತ್ರ ಮಾಡಲು । ಶೌಚ ವೇಳ್ಯದಿ ಕಚ್ಚೆ ಹಾಕಲು । ನಿಶ್ಚಯವು ಯಮಪುರದ ಯಾತನೆಯಲ್ಲಿ ಸಿಲುಕುವನು ॥

ಉಚ್ಚೆ ಹೊಯ್ದರೆ ನಿಂತು ವಿಪ್ರರು । ನಿಶ್ಚಯವು ನರಕದಲಿ ವಾಸವು । ಹಚ್ಚುವದು ವರುಷಗಳು ರೋಮಗಳೆಷ್ಟು ದೇಹದಲಿ ॥63॥

ನೀರುಯಿಲ್ಲದ ಸ್ಥಾನದಲಿ ಜ । ರೂರಿ ಬಿದ್ದರೆ ಮಾಡು ನೀ ಭಾ- । ಗೀರಥಿಯ ಸ್ಮರಣವನು ಮೃತ್ತಿಕೆಯಿಂದ ಸ್ನಾನವನು ॥

ನೀರು ಸಿಕ್ಕುವತನಕ ತಾನಾ- । ಹಾರುವರ ವರ್ಜಿಸುವುದುಚಿತವು । ಹಾರುವನು ಸತ್ಕುಲದ ಧರ್ಮವಿದೆಂದನಾ ಋಷಿಯೂ ॥64॥

ಹೊರಕಡೆಗೆ ಕೂಡುವ ವಿಧಾನವ- । ನರುಹುವೆನು ನಾನೀಗ ನೆಲವನು । ತೊರೆದು ತೃಣಪರ್ಣದಲಿ ಶುಷ್ಕದಿ ಕೂಡುವುದು ಯೋಗ್ಯ ॥

ಭರದಿ ಮಲವ ವಿಸರ್ಜಿಸಿದ ನಂ- । ತರಕೆ ನೀರಿನ ಪಾತ್ರವಿದ್ದೆಡೆ । ಬರುತ ಪ್ರಕ್ಷಾಳನವ ಮಾಡಲು ಬೇಕು ತ್ವರಿತದಲಿ ॥65॥

ಬಲ್ಲವರು ಪೇಳುವರು ಮೃತ್ತಿಕೆ- । ಯಲ್ಲಿ ಸ್ನಾನವ ಮಾಡೆ ದುರಿತಗ । ಳೆಲ್ಲ ನಾಶಿಪುದೆಂದು ಮಾಡಿರಿ ಮೃತ್ತಿಕಾಸ್ನಾನ ॥
ನೆಲ್ಲಿ ಕಾಯಿಯ ಮಾನದಲಿ ತಾ- । ಗುಳ್ಳೆಯನು ಮಾಡುತ್ತಲೊಂದನು । ಮೆಲ್ಲ ಮೆಲ್ಲಗೆ ಲಿಂಗಸ್ಥಾನದಿ ಹಚ್ಚಿ ಕೊಳ್ಳುವುದು ॥66॥

ಮೂರೆರಡು ಗುಳ್ಳೆಗಳನಾ ಗುದ- । ದ್ವಾರದಲಿ ಹಚ್ಚುವುದು ಹಸ್ತಕೆ । ಮೂರು ಮರರ ಮಾನದಲಿ ಹಚ್ಚುವದು ತಿಕ್ಕುವುದು ॥
ಆರು ಮತ್ತೋಂದನೆಯ ಗುಳಿಗೆಗ- । ಳೇರಿಸುವುದೈ ಕಾಲುಗಳಿಗೆ ವಿ । ಚಾರಿಸಲು ಮೃತ್ತಿಕೆಯ ಕೊಳ್ಳುವ ಸ್ಥಾನಗಳ ಪೇಳ್ವೆ ॥67॥

ಬಾವಿಕೂಪತಡಾಗದಿಂದಲಿ । ಸೇವಿಸಲು ಮೃತ್ತಿಕೆಯ ತರುವುದು । ದೇವಮಂದಿರತೀರ್ಥಕ್ಷೇತ್ರದ ಮೃತ್ತಿಕೆಯು ವರ್ಜ್ಯ ॥
ಹಾವು ಮೂಷಕವಿದ್ದ ಬಿಲದಿಂ । ಜೀವಿಗಳು ಸಂಚರಿಪ ರಸ್ತೆಯ । ನೀವು ಮೃತ್ತಿಕೆ ತರಲುಬಾರದು ವೃಕ್ಷತಳದಿಂದಾ ॥68॥

ಮೃತ್ತಿಕಾ ಶೌಚದ ವಿಧಾನವ । ಮತ್ತೆ ಪೇಳ್ವೆನು ಕೇಳಿರೈ ಮನ- । ವಿತ್ತು ಶಾಸ್ತ್ರೋಕ್ತವನು ಋಷಿಸಮ್ಮತಿಯ ಮಾತುಗಳಾ ॥
ಮೂತ್ರಶಂಕೆಯ ಮಾಡಲೊಂದಾ- । ವರ್ತಿ ಹೊರ ಕಡೆಯಿಂದ ಬರಲು ದ್ವಿ । ವರ್ತಿ ಮೈಥುನವಾಗೆ ಮೂರಾವರ್ತಿ ಸ್ಥಾನವಿದು ॥69॥

ನುಡಿದೆನೀ ಪರಿಯಲಿ ಗೃಹಸ್ಥನು । ವೊಡನೆಯೊಂದಾವರ್ತಿ ಮಾಡಲು । ತಡೆಯ ದೆರಡಾವರ್ತಿಯು ಚಿತವು ಬ್ರಹ್ಮಚಾರಿಗದು ॥
ವೊಡನೆ ತ್ರಿಗುಣವು ವಾನಪ್ರಸ್ಥಗೆ । ಬಿಡದೆ ನಾಲ್ಕಾವರ್ತಿ ಯತಿಗದು । ಪೊಡವಿಯೊಳಗೀತರದಿ ನೇಮಗಳಿಹವು ಶಾಸ್ತ್ರದಲಿ ॥70॥

ನ್ಯೂನವನು ಮಾಡಿದರೆ ಧರ್ಮದ । ಹಾನಿ ಬರುವುದು ಈ ಪ್ರಕಾರದಿ । ಸ್ನಾನ ಮಾಡುವುದುಚಿತ ಹಗಲಲಿ ಸರ್ವಕಾಲದಲಿ ॥
ಮಾನಿಸಿದರರ್ಧವನು ರಾತ್ರಿಗೆ । ಮಾನಿಸದಿರದರರ್ಧ ಕಷ್ಟದಿ । ನ್ಯೂನತೆಗೆ ಪರವಿಲ್ಲ ಮಾರ್ಗಕ್ರಮಣ ಕಾಲದಲಿ ॥71॥

ಧರ್ಮವಿದು ವ್ರತಬಂಧವಾಗಲು । ಬ್ರಾಹ್ಮಣರಿಗಾಚಾರ ಕರ್ಮವು । ವರ್ಮವಿದು ಮುಕ್ಕಳಿಸಬೇಕೈ ಬಾಯಿಯನು ಬಳಿಕಾ ॥
ಬ್ರಾಹ್ಮಣರಿಗದು ಎಂಟುಬಾರಿಯು । ಕರ್ಮ ಕ್ಷತ್ರಿಯಗಾರುಬಾರಿಯು । ನಿಮ್ಮ ವೈಶರಿಗದರ ನಿಮ್ಮಯು ಶೂದ್ರರಿಗೆ ತಿಳಿಯೆ ॥72॥

ಶುದ್ಧ ನಿರ್ಮಲ ಸ್ಥಾನದಲಿ ತಾ- । ನಿದ್ದು ಪದ್ಮಾಸನದಿ ಕೂಡುತ । ಶುದ್ಧ ಮನದಲಿ ಸ್ಮರಿಸಿರೈ ಕುಲದೈವತವ ಬಿಡದೆ ॥

ಇದ್ದು ಮೌನದೊಳಾಚಮನವನು । ಬುದ್ಧಿಪೂರ್ವಕ ಮಾಡಿ ಚೋವಿಸ । ಶುದ್ಧ ನಾಮಂಗಳನು ಯೆರಡಾವರ್ತಿ ಧ್ಯಾನಿಸಿರಿ ॥73॥

ನೆಲಸಿ ಹವು ತೀರ್ಥಗಳು ವಿಪ್ರರ । ಬಲದ ಹಸ್ತದೊಳ್ಳೈದು ಕೇಳ್ ಕೈ । ತಲದಿ ಹೆಬ್ಬೆರಳಡಿಯೊಳಿರುವದು ಬ್ರಹ್ಮತೀರ್ಥವದು ॥

ನೆಲಸಿಹುದು ಪಿತೃತೀರ್ಥ ತರ್ಜನಿ । ತಳದ ಕೈ ಹೆಬ್ಬೆರಳ ಮಧ್ಯದಿ । ನೆಲಸಿಹುದು ಸುರತೀರ್ಥ ಚತುರಂಗುಲಿಯ ಮೂಲದಲಿ ॥74॥

ಕಿರಿಬೆರಳ ಭಾಗೋತ್ತರದಿ ತಾ । ನಿರುವುದೈ ಋಷಿ ತೀರ್ಥವೀಪರಿ । ವಿರಚಿಸಿರಿ ಪಿತೃದೇವಋಷಿ ತರ್ಪಣ ವನಲ್ಲಲ್ಲಿ ॥

ವಿರಚಿಸಿರಿ ನೀವ್ ಬ್ರಹ್ಮತೀರ್ಥದಿ । ನಿರತವಾಚಮನವನು ನೇಮದಿ । ಧರೆಯೊಳಿದನರಿತವರು ಪಡೆದರು ಮುಕ್ತಿ ಸುಲಭದಲಿ ॥75॥

ಬ್ರಹ್ಮತೀರ್ಥ ದೊಳಾಚಮನವನು । ನಿರ್ಮಲದಿ ಮಾಡುತಲಿ ನಂತರ । ಓಂ ಶ್ರೀಕೇಶವಾಯ ನಮಃ । ಓಂ ಶ್ರೀನಾರಾಯಣಾಯ ನಮಃ । ಓಂ ಶ್ರೀ ಮಾಧವಾಯ ನಮಃ । ಒಮ್ಮೆ ಗೀತೆಯನುನುಚ್ಚರಿಸುತಲಿ ಕರ್ಮದಾರಂಭಾ । ಸುಮ್ಮನಿದನುಚಾರಿಸುತ ನೀ । ರೊಮ್ಮೆ ಸುರತೀರ್ಥದಲಿ ಬಿಟ್ಟು । ಗೋವಿಂದಾಯ ನಮಃ । ವಿಷ್ಣವೇ ನಮಃ । ಮಧುಸೂದನಾಯ ನಮಃ ಒಮ್ಮಿಗಿಲಿ ಪ್ರಕ್ಷಾಳಿಸಿರಿ ನೀವೆರಡು ಕರಗಳನು ॥76॥

ತ್ರಿವಿಕ್ರಮಾಯ ನಮಃ । ವಾಮನಾಯ ನಮಃ । ಇಂತುನುಡಿದಾ ಗಲ್ಲವೆರಡನು । ಸಂತಸದಿ ಸ್ಪರ್ಶಿಸಲು ಬೇಕೈ ॥

ಶ್ರೀಧರಾಯ ನಮಃ । ಎಂತ ತಳಹಸ್ತದಲಿ ಬಿಂಬೋಷ್ಠವನು ಸ್ಪರ್ಶಿಸಿರಿ । ಹೃಷಿಕೇಶಾಯ ನಮಃ । ಎಂತ ಹಸ್ತವ ಪುನಹ ಸ್ಪರ್ಶಿಸಿ

ಪದ್ಮನಾಭಾಯ ನಮಃ । ಎಂತ ಪಾದದ್ವಯವ ಸ್ಪರ್ಶಿಸಿ । ದಾಮೋದರಾಯ ನಮಃ । ಎಂತ ಪಂಚಾಂಗುಲದಿ ಬಲಹಸ್ತವ ತಿರದೊಳಿಡಿರಿ ॥77॥

ಸಂಕರ್ಷಣಾಯ ನಮಃ । ಎಂದು ಮೂರ್ಬೆರಳುಗಳ ಕೂಡಿಸಿ ತಂದು ಘ್ರಾಣದೊಳಿಡಿರಿ ನಂತರ । ವಾಸುದೇವಾಯ ನಮಃ । ಪ್ರದ್ಯುಮ್ನಾಯ ನಮಃ ।

ಎಂದು ಉಚ್ಚಾರಿಸುತ ಕಿವಿಕಣ್ಣುಗಳ ಸ್ಪರ್ಶಿಸಿರಿ । ಅನಿರುದ್ಧಾಯ ನಮಃ ಪುರುಷೋತ್ತಮಾಯ ನಮಃ । ಆಧೋಕ್ಷಜಾಯ ನಮಃ । ನಾರಸಿಂಹಾಯ ನಮಃ ।

ಅಚ್ಯುತಾಯ ನಮಃ । ಎಂದು ನಾಭಿಸ್ಪರ್ಶಮಾಡಿರಿ । ಜನಾರ್ದನಾಯ ನಮಃ । ಉಪೇಂದ್ರಾಯ ನಮಃ । ಎಂದು ಪಂಚಾಂಗುಲಿಯ ಸ್ಪರ್ಶವು । ಹರಯೇ ನಮಃ ॥ ಶ್ರೀಕೃಷ್ಣಾಯನಮಃ । ಎಂದು ಉಚ್ಚಾರಿಸುವ ಭುಜಗಳ ಸ್ಪರ್ಶಿಸಿರಿ ಬೆರಳಾ ॥78॥

ವೇಳೆವೇಳೆಗೆ ಮಾಳ್ಪ ಸಂಧ್ಯಾ । ಕಾಲದಲಿ ನೀವೀಪರಿಯಲಾ । ಕಾಳಜಿಯಲಿರಬೇಕು ಸಂಕಟ ಸೂತಕವು ಬರಲು ॥
ಪೇಳುವೆನು ನಾನಾಚಮನವಿಧಿ । ಮೇಲೆ ಹೇಳಿದ ದೇವತೀರ್ಥದಿ । ಕ್ಷಾಲಿಸಿರಿ ಗೋವಿಂದನಾಮದಿ ಹಸ್ತಗಳನೆರಡಾ ॥79॥

ಮೋರೆಯನು ಪ್ರಕ್ಷಾಳಿ ಸುತಲು- । ಚ್ಚಾರಿಸಿರಿ ಮಂತ್ರವನು ಸಂಧ್ಯಾ- । ಭಾರವನು ಬಿಡಬೇಕು ಸಂಕಟ ಸೂತಕವು ಬರಲು ॥
ಶೂದ್ರಮೊದಲಾದವರು ಮುಟ್ಟಲು । ಬೇರಿಹುದು ಕೇಳಾಚಮನವಿ । ಚಾರುತರ ಗೋವಿಂದನಾಮದಿ ಕರಗಳನು ತೊಳೆದು ॥80॥

ಕಣ್ಣು ಕಿವಿಗಳ ಸ್ಪರ್ಶ ಮಾಡಲು । ಪುಣ್ಯ ಬರುವುದು ಒದ್ದೆಯಲಿ ಪ- । ರ್ಜನ್ಯದಲಿ ಬರಲವ ಪುನೀತನು ಆಚಮನದ್ವಯದಿ ॥
ಇನ್ನು ಸುಫಲಾಹಾರ ಭಕ್ಷಣ- । ವನ್ನು ಮಾಡುವ ಮೊದಲು ಮೇಣ್ಜಲ । ವನ್ನು ಕುಡಿಯುವ ಮೊದಲು ಬರಲು ಸ್ಮಶಾನದಿಂ ಮನೆಗೆ ॥81॥

ನೀರು ಸಿಗದಿರೆ ನೀವು ಮನನಿ । ರ್ಧಾರದಿಂದಲಿ ತೂಷ್ಣೀಭಾವದಿ । ಚಾರು ಶ್ರೋತ್ರಾಚಮನ ಮಾಡಲು ಬೇಕು ಭಕ್ತಿಯಲಿ ॥
ಚಾರು ಪರ್ವಣಿ ಬಿಟ್ಟು ಪ್ರತಿಪದೆ । ಯಾರುವೊಂಬತ್ತನೆಯ ತಿಥಿಗಳ । ವಾರ ಮಂಗಳ ಸೂರ್ಯಶನಿಗಳ ತ್ಯಜಿಸಿ ದ್ವಾದಶಿಯಾ ॥82॥

ಮಾಡಬೇಕೈ ದಂತದಾವನ । ನೋಡು ಶ್ರಾದ್ಧದ ದಿವಸ ಮದುವೆಯ । ಪ್ರೌಢದಿವಸದಿ ದಂತಧಾವನ ವರ್ಜ ಮಾಡುವುದು ॥
ತಾಡ ಕೇತಕಿನಾರಿಕೇಳದ । ಮಾಡಖರ್ಜುರಮುಳ್ಳುಗಿಡಗಳ । ನೋಡಬಾರದು ಶಾಖೆಗಳ ಕೇಳ ವರ್ಜ್ಯವಿವು ಕಾಷ್ಠಾ ॥83॥

ಖದಿರದೌದುಂಬರವ ವಟಶಾ । ಖದಲಿಯಾಘಾಡದಲಿ ಕರವಂ- । ದದಲಿ ಕಾಷ್ಠ ವ ತೆಗೆಯಲದು ಪುಣ್ಯ ಪ್ರದಾಯಕವು ॥
ಹದಿನೆರಡು ಅಂಗುಲದ ಕಾಷ್ಠವು । ವಿಧಿಸಿರುವುದೈ ವಿಪ್ರರಿಗೆ ನವ । ವಿಧಿಸಿರುವುದೈ ಕ್ಷತ್ರಿಯರಿಗೆಂಟೆಂಟು ಯಿತರರಿಗೆ ॥84॥

ದಂತಧಾವನ ಕಾಷ್ಠ ಕಡಿಯುವ । ಮಂತ್ರ ಆಯುರ್ಬಲವು ಹೆಸರದ । ನಿಂತು ಮಂತ್ರೋಚ್ಚಾರ ಮಾಡತ ಕಾಷ್ಠ ಕಡಿಯುವುದು ॥
ದಂತಧಾವನ ಮಾಡಿ ನೈಋತ- । ಕಂತು ಕಾಷ್ಠವ ಬಿಸಾಡಿ ದ್ವಾದಶ- । ಸಂತಸದಿ ಮುಕ್ಕಳಿಕೆ ಮಾಡುತಲಾಚಮನವೆರಡು ॥85॥

ಪರಿಯಿದಾಯಿತು ದಂತಧಾವನ । ಪೊರೆವೆ ಪ್ರಾತಃಸ್ನಾನವಿಧಿಯನು । ಭರದಿ ಮುಗಿಸಲು ದಂತಧಾವನ ಸ್ನಾನ ಮಾಡುವುದು ॥
ಪರಮಯತಿ ಸನ್ಯಾಸಿತಾಪಸಿ- । ಯರಿಗೆ ಮೂರಾವರ್ತಿ ಸ್ನಾನವು । ವಿರಚಿಸಲು ಬೇಕೊಂದು ಬಾರಿಗೆ ಬ್ರಹ್ಮಚಾರಿಯರು ॥86॥

ಮಾಡು ಪ್ರಾತಃಸ್ನಾನವನು ಕೈ- । ಗೂಡುವುದು ಪರಮಾರ್ಥಸಾಧನ । ಪೋಡುವುದು ದಾರಿದ್ರ್ಯ ಚಿಂತೆಯು ಶೋಕ ಹರಿಸುವುದು ॥
ನೀಡುವುದು ಪ್ರಜ್ಞೆಯನು ಸ್ವಪ್ನದ । ಕೇಡು ಚಂಡಾಡುವುದು ಸುರವರ । ರಾಡುವರು ಕಿಂಕರರ ಪ್ರಾತಃಸ್ನಾನ ಮಾತ್ರದಲಿ ॥87॥

ಸ್ನಾನವಿದು ಆಯುಷ್ಯವರ್ಧನ । ಸ್ನಾನ ತೇಜೋಬಲದ ವರ್ಧನ । ಸ್ನಾನ ಸುಖಸೌಭಾಗ್ಯ ಸಾಧನ ಪಾಪ ನಿರ್ದಳನ ॥
ಸ್ನಾನವಾಚರಿಸುವುದು ಸರ್ವರು । ಮಾನವರು ಪ್ರತಿದಿವಸ ಮತ್ತಾ- । ವಾನಪ್ರಸ್ಥ ಗೃಹಸ್ಥರಿಗೆ ಸ್ನಾನಗಳು ಯೆರಡಿಹವು ॥88॥

ವಾರಿ ನಿರ್ಮಲ ಸಿಗದಿರಲು ಮೇಣ್ । ಭಾರಿ ಸಂಕಟ ಬರಲು ಸ್ನಾನವಿ- । ಚಾರ ಪೇಳ್ವೆನು ಭಸ್ಮವಾಯ್ವಗ್ನಿಯಲಿ ಮೀಯುವುದು ॥
ಸೇರದಿರಲೀಪರಿಯ ಸ್ನಾನವು । ನೀರನಾಪೋಹಿಷ್ಠದಲ್ಲಿ ಶ- । ರೀರ ಪ್ರೋಕ್ಷಿಸೆ ಸ್ನಾನ ಮಂತ್ರದೊಳಾಯ್ತು ವಿಧಿಯುಕ್ತಾ ॥89॥

ಭಾವಭಕುತಿಯೊಳಾರು ಸದ್ಗುರು । ದೇವದರ್ಶನ ಮಾಡುವರೊ ಫಲ- । ವಾವಗಂ ಬರುತಿಹುದು ತೀರ್ಥಸ್ನಾನದಂದದಲಿ ॥
ಭಾವದಿಂದಲಿ ತಂದೆತಾಯ್ಗಳ । ಪಾವನಪದಂಗಳನು ತೊಳೆಯುತ । ಸೇವಿಸಿದರಾನೀರ ತೀರ್ಥಸ್ನಾನ ಫಲವಿಹುದು ॥90॥

ಮಳೆಯೊಳಗೆ ಮೈನೆನೆದು ಬಂದರೆ । ನೆಲದಿನಿಂತಾ ವಾಯು ಬೀಸಲು । ಕುಳಿತರೆ ಧೂಳಿಯಲಿ ಸ್ನಾನದ ಫಲವು ಬರುತಿಹುದು ॥
ಹೊಲೆಯಚಾಂಡಾಳರನು ಸ್ಪರ್ಶಿಸೆ । ಜಲದ ಸ್ನಾನದಿ ಶುದ್ಧಿಯಪ್ಪುದು । ಬಳಿಕ ಶೂದ್ರಾದಿಗಳ ಸ್ಪರ್ಶಕೆ ಮಾಡಿರುಪಸ್ನಾನಾ ॥91॥

ಸದೃಢ ತನುವಿರೆ ಮುಖ್ಯ ಸ್ನಾನವ- । ನುದಕದಲಿ ಮಾಡುವುದು ನೇಮದೊ । ದಳೊದಗಿರಲು ಸಂಕಟವು ವಿಗ್ರಹ ಸಂಧಿಕಾಲದಲಿ ॥
ಮುದದೊಳುಪಸ್ನಾನವನು ಮಾಡಿರಿ । ಉದಯಕಾಲದಿ ಸ್ನಾನ ಮಾಡಲಿ- । ಕದುವೆ ಶ್ರೇಯವು ಕೇಳು ಶೀತೋದಕವು ರಮಣೀಯಾ ॥92॥

ಇರಲಶಕ್ತತೆ ದೇಹದಲಿಯಾ- । ನರನು ಬಿಸಿನೀರಿನಲಿ ಸ್ನಾನವ । ವಿರಚಿಸಲು ನಿರ್ದೋಷವಹುದೈ ಸ್ನಾನಫಲವಿಹುದು ॥
ಇರುವುದುದಕ ಪವಿತ್ರ ಮೊದಲೇ । ಬರಲಿದಕೆ ನಂತರದ ವೈಶ್ವಾ । ನರನ ಸಂಪರ್ಕವು ಕಣಾ ಶುದ್ಧಿಯಲಿ ಯೇರಿತಲಾ ॥93॥

ಉಷ್ಣ ನೀರಿನ ಸ್ನಾನ ಮಾಡುತ । ತಣ್ಣಗಿನ ಜಲಮಿಶ್ರಮಾಡುವ । ಮುನ್ನ ಸಂಕಲ್ಪವನು ವಿಧಿಪೂರ್ವಕದಿ ಮಾಡುವುದು ॥
ತನ್ನ ಕೈಯಿಂದುಟ್ಟ ವಸ್ತ್ರವ । ಸನ್ನುತನು ತಾ ಹಿಂಡಬಾರದು । ತನ್ನ ಮನೆಯಲಿ ಮೀಯಲಘಮರ್ಷಣವ ವರ್ಜಿಪುದು ॥94॥

ಶ್ರಾದ್ಧ ಕಾಲದ ಮೃತದಿವಸದಲಿ । ಮುದ್ದು ಪುತ್ರೋತ್ಸವದ ದಿವಸದಿ । ಶುದ್ಧ ಪೌರ್ಣಿಮೆ ಸಂಕ್ರಮಣ ಅಮವಾಸ್ಯೆ ದಿವಸದಲಿ ॥
ಬುದ್ಧಿಪೂರ್ವಕವಾಗಿ ಸ್ನಾನ ನಿ- । ಷಿದ್ಧ ವುಷ್ಣೋದಕದಿ ತಣ್ಣಗೆ । ಯಿದ್ದ ನೀರಿಲಿ ಸ್ನಾನಮಾಳ್ಪುದು ಶಾಸ್ತ್ರಸಿದ್ಧವಲಾ ॥95॥

ಸ್ನಾನಸಮಯದಿ ಜುಟ್ಟ ಕಟ್ಟುತ- । ಮೌನವಾಚರಿಸುವುದು ಯೋಗ್ಯವು । ಭಾನು ಸನ್ಮುಖನಾಗಿ ಹಸ್ತದಿ ದರ್ಭ ಧರಿಸುವುದು ॥
ತಾನು ಆಪೋಹಿಷ್ಠಾ ಮಂತ್ರದಿ । ಸ್ನಾನದುದಕದಿ ಪ್ರೋಕ್ಷಿಸುತಲಾ । ಸಾನುರಾಗದಿ ಮೂರು ಗಾಯತ್ರಿಗಳ ಮಂತ್ರಿಸಿರಿ ॥96॥

ಮೊದಲು ಶೀತೋದಕವ ಹಾಕುತ । ತದುಪರಿಯು ಬಿಸಿನೀರು ಕೂಡಿಸು- । ವುದು ಸದಾ ಬಹುಯೋಗ್ಯ ಮನೆಯಲಿ ಸದ್ಗೃಹಸ್ಥರಿಗೆ ॥
ಮುದದೊಳಾ ಅವಧೂತ ಮಂತ್ರದಿ । ಕದಡು ಮಲವನು ತೆಗೆದು ಧ್ಯಾನಿಸು-। ವುದು ಸದಾ ಗಂಗೆಯನು ಭಾಗೀರಥಿಯ ಸ್ಮರಿಸುವುದು ॥97॥

ಮಾಡುತಾಚಮನವನು ವಿಧಿಯಲಿ । ಆಡು ದೇವಸ್ಯತ್ವ ಮಂತ್ರವ । ಮಾಡು ಪುನರಪಿ ಜಪವನುಟ್ಟು ಧೂತ ವಸ್ತ್ರವನು ॥
ನೋಡು ಪುನರವಧೂತ ಮಂತ್ರವ । ನಾಡಿವಸ್ತ್ರವ ವಿಸ್ತರಿಸುವುದು । ಆಡು ತುದ್ಯಂನದ್ಯ ಮಂತ್ರವ ರವಿಗೆ ತೋರಿಸಿರಿ ॥98॥

ಮಡಿಯುಡುವ ಕಾಲದಲಿ ನೇಮದಿ । ನುಡಿಯಿರವಹಂತೀವಿತನ್ವತಿ । ಸಡಗರದಿ ಮಂತ್ರವನು ನಂತರವಾಚಮನವೆರಡು ॥
ನುಡಿದು ಆಪೋಹಿಷ್ಠಾ ಮಂತ್ರವ । ಜಡವ ದೇಹದ ಮೇಲೆ ಪ್ರೋಕ್ಷಿಸಿ । ಅಡಿಗೆ ಸಿರದಲಿ ಹೃದಯದಲಿ ಮಾರ್ಜನವ ಮಾಡುವುದು ॥99॥

ಸ್ನಾನವೀಪರಿ ಮಾಡಿ ಪುನರಪಿ । ಮಾನಸಸ್ನಾನವನು ಮಾಡಿರಿ । ಧ್ಯಾನಮಾಡಿರಿ ಭಕ್ತಿಯಲಿ ನಾರಾಯಣನ ಮೂರ್ತಿ ॥
ಭಾನುಮಂಡಳರೂಪ ವರಕಮ । ಲಾನನನು ಧೃತಶಂಖಚಕ್ರನ । ಧ್ಯಾನವೀಪರಿ ಶಿರಕಿರೀಟದ ಮೂರ್ತಿ ಭುಜನಾಲ್ಕು ॥100॥

ಇಂತು ಹರಿಯನು ಧ್ಯಾನಿಸುತ ನುಡಿ । ಮಂತ್ರ ಅಪವಿತ್ರಃ ಪವಿತ್ರವ- । ನಂತು ಮಂತ್ರೋಚ್ಚಾರದಲಿ ಸುಸ್ನಾತ ಫಲವಿಹುದು ॥
ನಿಂತರೈ ನದಿ ತೀರದಲಿ ಮೇ- । ಣಂತು ಶಕ್ತಿಯ ಪಾತವಾಗಲು । ಬಂತು ಸ್ನಾನದ ಫಲವು ಗಂಗಾಸ್ಮರಣಮಾತ್ರದಲಿ ॥101॥

ಅರುಹುವೆನು ಸುಸ್ನಾನ ಪರಿಯನು । ತರಣಿವಾರ ನಿಷಿದ್ಧ ದೇಹಕೆ । ಜ್ವರವು ಬರುವುದು ಕಾಂತಿ ಹಾನಿಯು ಸೋಮವಾರದಲಿ ॥
ಮರಣ ಮಂಗಳವಾರದಲಿ ಸಿರಿ- । ಬರುವಳೈ ಬುಧವಾರಸ್ನಾನದಿ । ಗುರುದಿನದಿ ಧನಹಾನಿ ಮಂಗಳಸ್ನಾನ ಮಾಡಿದರೆ ॥102॥

ಪುತ್ರಘಾತವು ಶುಕ್ರವಾರದಿ । ವಿತ್ತಲಾಭವು ಮಂದವಾರದಿ । ಸತ್ಯವಿದು ಭಾವಿಸಿರಿ ಮಂಗಳಸ್ನಾನ ಸಮಯದಲಿ ॥
ಪೃಥ್ವಿಯಲಿ ವಿಪ್ರರಿಗೆ ಸುಖಸಂ- । ಪತ್ತು ದೊರೆವುದು ಧರ್ಮ ಮಾರ್ಗದ- । ವರ್ತನದಿ ಸರ್ವಾಭಿವೃದ್ಧಿಯು ದೊರೆಯುವುದು ನಿಜವು ॥103॥

ನದಿಯೊಳಗೆ ಸ್ನಾನದಿ ಪ್ರವಾಹದ । ಯೆದುರು ಮುಖ ಮನೆಯೊಳಗೆ । ಸ್ನಾನಕ್ಕುದಯಕಾಲದಿ ಸೂರ್ಯಗಭಿಮುಖವಾಗಿ ಮೀಯವದು ॥
ಒದಗಿ ಸಂಧ್ಯಾಕಾಲದಲ್ಲಿ ಸ್ನಾ । ನದಲಿ ಪಶ್ಚಿಮ ಮುಖವು ಯೀಪರಿ । ವಿಧಿಯು ಸ್ನಾನಕೆ ಮೇಲೆ ಮಂತ್ರವ ಪೇಳುವೆನು ನಿಮಗೆ ॥104॥

ನದಿಯೊಳಗೆ ಸ್ನಾನವನು ಮಾಳ್ಪರೆ । ಮುದದೊಳಘಮರ್ಷಣವ ಮಾಡಿರಿ । ನದಿ ನಮಸ್ಕಾರಕೆ ನಮೋಗ್ನ್ಯೇಪ್ಸುಮತೆ ಮಂತ್ರವನು ॥
ಉದಕ ಯದಪಾಂಕ್ರೂರ ಮಂತ್ರದಿ । ಬದಿಗೆ ಸಾರಿಸಿ ಯೆರಡು ಕೈಯಿಂ- । ದದರ ಮೇಲುಚ್ಚಾರ ಮಾಡಿರಿಮಂಮೇಗಂಗೆ ॥105॥

ಮೇಲೃತಂಚಸತ್ಯಂಚ ಜಪಿಸಿರಿ । ಪಾಲಿಸಿರಿಯೀವಿಧಿಯ ನದಿಯಲಿ । ಕೇಳಿ ಮೈಥುನವಮನದುಃಸ್ವಪ್ನಾಂತ್ಯದಲಿ ಸ್ನಾನ ॥
ಪಾಲಿಸದೆ ಶುದ್ಧತ್ವಬಾರದು । ಆಲಿಸಲಿ ಮನಗೊಟ್ಟು ಋಷಿಗಳು । ಪೇಳುವೆನು ನಾನಿನ್ನು ವಸ್ತ್ರವಿಧಾನವನು ಕೇಳಿ ॥106॥

ರಕ್ತ ವಸ್ತ್ರವ ಜೀರ್ಣಧೋತ್ರ ಗ್ರ- । ಹಸ್ಥ ನುಡುತಲೆ ಧರ್ಮಮಾಡೆ ಸ- । ಮಸ್ತ ಪುಣ್ಯವು ರಾಕ್ಷಸರಿಗಾವುದು ನೋಡಿದರೆ ॥
ನಿತ್ಯ ಕಾಷಾಯಾಂಬರವನು ಗ್ರ- । ಹಸ್ಥ ವರ್ಜಿಸಬೇಕು ಮೇಣಾ । ವಸ್ತ್ರವೊದ್ದೆಯದಿರಲು ವರ್ಜಿಸಬೇಕು ಧರ್ಮದಲಿ ॥107॥

ವಸ್ತ್ರ ಶ್ವೇತವು ವಿಪ್ರರಿಂಗುಪ- । ವಸ್ತ್ರ ಬೇರಿರಬೇಕು ಕೇಳು ಪ- । ವಸ್ತ್ರವೆನುತಲಿ ಹೆಸರದಕೆ ಋಷಿವರರೆ ಕೇಳುವುದು ॥
ಧೋತ್ರಧಾರಣ ನಂತರಕೆ ವಿ । ಭೂತಿ ಧಾರಣ ಮಂತ್ರಪೂರ್ವಕ । ಭೂತಿ ಸಿಗದಿರೆ ಗೋಪಿಚಂದನ ಹಚ್ಚುತಿರಬೇಕು ॥108॥

ಧರೆಯೊಳಗೆ ದ್ವಾರಾವತಿ ಯ ಪುರ- । ವರದ ಗೋಪೀಚಂದನವು ಹೊರ- । ತಿರುವ ಗೋಪೀಚಂದನವು ಧಾರಣ ಕಯೋಗ್ಯವಲಾ ॥
ದೊರೆಯದಿರಲಾ ಗೋಪಿಚಂದನ । ಧರಿಸಿ ಗಂಗಾಮೃತ್ತಿಕೆಯನೀ । ಪರಿಯ ಮಾಡಲು ಊರ್ಧ್ವಪುಂಡ್ರದಿ ಮುಕ್ತಿ ಸಾಯುಜ್ಯಾ ॥109॥

ಹಿರಿದು ಬೆರಳಿಂ ಕಾಮಪುಷ್ಟಿಯು । ಧರಿಸಿದರೆ ನಡುಬೆರಳಿನಿಂದಾ । ದೊರೆವುದೈ ಆಯುಷ್ಯ ವೃದ್ಧಿ ವಿಭೂತಿ ಧಾರಣದಿ ॥
ದೊರೆಯುವುದು ಸನ್ಮುಕ್ತಿ ತರ್ಜನಿ । ಬೆರಳಿನಿಂ ಧರಿಸಿದರೆ ನಖದಿಂ । ಧರಿಸಿದರೆ ತಟ್ಟುವುದು ದುರಿತವನಾವಿಕದೊಳನ್ನಾ ॥110॥

ಉತ್ತಮ ದಶಾಂಗುಲಿಯ ಮಾನವು । ಮತ್ತೆ ಮಧ್ಯಮ ಪಂಚದಿಂದೊಂ- । ಭತ್ತು ಆಂಗುಲಿಯಧಮ ಪಕ್ಷವು ಮೂರು ನಾಲ್ಕರದು ॥
ವಿಸ್ತರಿಪೆನುತ್ತಮ ಪ್ರಕಾರವ । ಚಿತ್ತಶುದ್ಧತೆಯಿಂದ ದ್ವಾದಶ । ಮುಕ್ತಿದಾಯಕ ವಿಷ್ಣು ನಾಮಗಳನ್ನು ಸ್ತುತಿಸುವುದು ॥111॥

ಕೇಶವಾಯ ನಮಃ । ಹಣೆಗೆ ಹಚ್ಚಿ ವಿಭೂತಿಯನು ಮೇಣ್ । ನಾರಾಯಣಾಯ ನಮಃ । ಯೆನುತ ನಾಭಿಯ ಮೇಲೆ ಹಚ್ಚುರಿ । ಮಾಧವಾಯ ನಮಃ ।
ಯೆನುತ ನಳಿನಾಕಾರದಲಿ ಹೃದಯದಲಿ ಹಚ್ಚುವುದು । ಗೋವಿಂದಾಯ ನಮಃ । ಯೆನುತ ಕಂಠದಿ ಹಚ್ಚಿ ಮತ್ತಾ । ವಿಷ್ಣವೇ ನಮಃ । ಯೆನುತ
ಕಟಿದೇಶದಲಿ ಹಚ್ಚುರಿ । ಮಧುಸೂದನಾಯ ನಮಃ । ಯೆನುತ ದಕ್ಷಿಣಭುಜದಿ ಹಚ್ಚುರಿ ಊರ್ಧ್ವಪುಂಡ್ರವನು ॥112॥

ತ್ರಿವಿಕ್ರಮಾಯ ನಮಃ । ಎನುತ ನಾಭಿಯ ಉತ್ತರಕೆ ತಾ । ವಾಮನಾಯ ನಮಃ । ಯೆನುತ ಬಾಹುಗಳಿಂಗೆ ಹಚ್ಚುರಿ । ಶ್ರೀಧರಾಯನಮಃ । ಯೆನುತ
ಹಚ್ಚುರಿ ಊರ್ಧ್ವಪುಂಡ್ರವ ಬಲದಕರ್ಣಕೆಗೆ । ಹೃಷಿಕೇಶಾಯ ನಮಃ । ಯೆನುತಲೆಡಕರ್ಣಕೆಗೆ ಹಚ್ಚುರಿ । ಪದ್ಮನಾಭಾಯ ನಮಃ । ಯೆನುತ
ಪಶ್ಚಿಮ ಕಟಿಪ್ರದೇಶದಿ । ದಾಮೋದರಾಯ ನಮಃ । ಯೆನುತ ಶಿರದಲಿ ಹಚ್ಚಲಾಯಿತು ಪೂರ್ಣವಿಧಿ ಕೇಳು ॥113॥

ಧರಿಸಲೀಪರಿ ದ್ವಾರಕಾಪುರ- । ವರದಗೋಪೀಚಂದನವ ಮೇ- । ಣಿರದೆ ಭಸ್ಮವ ಪಾಪರಾಶಿಯು ದಹನವಾಗುವುದು ॥
ಹರಿಹರರು ಸಂತುಷ್ಟರಪ್ಪರು । ದೊರೆಯುವವು ನಿಜಭಕ್ತಿ ಮುಕ್ತಿಯು । ಪರಮ ಸುಖಸಂಪತ್ತಿ ವರ್ಧನವಿಹುದು ವಿಪ್ರರಿಗೆ ॥114॥

ಮದುವೆಮೊದಲಾಗಿರುವ ಶುಭಮೂ- । ರ್ತದಲಿ ಶ್ರಾದ್ಧವ ದಿನದೊಳಭ್ಯಂ । ಗದದಿನದಿ ಸೂತಕದಿ ದೇವರ ಕಾರ್ಯವಿಹ ದಿನದಿ ॥
ಮುದದಿ ಗೋಪೀಚಂದನವ ತ್ಯಜಿ । ಪುದು ಕಣಾ ಸದ್ಧರ್ಮವದರಿಂ- । ದದನು ನೀನಾಚರಿಸಿರೆಂದು ಪರಾಶರನು ನುಡಿದಾ ॥115॥

ವಿಸ್ತರಿಸಿ ಪೇಳ್ದ ನು ಪರಾಶರ । ಹತ್ತುಪರಿ ವರ್ಭೆಗಳ ವಿಪ್ರರಿ- । ಗುತ್ತಮದ ಸಾಧನವ ತರ್ಪಣ ಯಜ ವಸ್ತುಗಳು ॥
ನಿತ್ಯ ದರ್ಭೆಯ ಸಂಗ್ರಹವು ಕೇ- । ಳುತ್ತಮವು ಸಾಧಿಸದಿರಲು ನೀವ್ । ಕಿತ್ತಿ ಸಂಗ್ರಹಮಾಡಿರೈ ವರ್ಷರ್ತುಕಾಲದಲಿ ॥116॥

ಭೂದಿವಿಜರಿಗೆ ನಾಲ್ಕು ಕ್ಷತ್ರಿಯ- । ರಾದವರಿಗಾ ವೈಶ್ಯರಿಗೆ ಮೂರ್ । ಶೂದ್ರರಿಂಗೊಂದೊಂದು ದರ್ಭೆಯ ಧರಿಪ ಪರಿಪಾಠಾ ॥
ಈ ದರುಭೆಯಗ್ರದಲಿ ಬ್ರಹ್ಮನು । ಮಧ್ಯದಲಿ ಹರಿ ಮೂಲದಲಿ ಶಿವ । ಮೋಹದಿಂದಲಿ ವಾಸಿಪರು ತನ್ಮಹಿಮೆ ಪೇಳುವೆನು ॥117॥

ಹರಿಯು ಚಕ್ರವ ಧರಿಸಿ ಖಳಸಂ- । ಹರಣವನು ಮಾಡುವನು ಗಿರಿಜಾ । ವರ ತ್ರಿಶೂಲದಲಿ ರಾಕ್ಷಸರ ವಿಧ್ವಂಸ ಮಾಡುವನು ॥
ಪರಿಯೊಳೀ ಬ್ರಾಹ್ಮಣರು ದರ್ಭೆಯ-। ಕರದಿ ಧರಿಸುತ ಪಾಪವನು ಕ । ತ್ತರಿಸಿ ಬಿಡುವರು ಮಹಿಮೆಯಗಣಿತ ದರ್ಭಧಾರಣದಾ ॥118॥

ತೃಣದ ಪರ್ವತಕಗ್ನಿ ತಾಗಲು । ಕ್ಷಣದಿ ಸುಟ್ಟು ವಿಭೂತಿ ಮಾಳ್ಪುದು । ಕ್ಷಣದೊಳಾಪರಿ ದರ್ಭೆ ಸುಡುವುದು ಪಾಪರಾಶಿಯನು ॥
ಒಣಗಿರುವ ದರ್ಭೆಯನು ಕೂಡಿಸಿ । ಹೆಣೆದು ಗ್ರಂಥಿಯ ಮಾಡುತಲೆ ಧಾ । ರಣವ ಮಾಳ್ಪುದು ಜಪತಪಾನುಷ್ಠಾನಸಮಯದಲಿ ॥119॥

ಬೆಳ್ಳಿಯಂಗುರವನ್ನು ತರ್ಜನಿ- । ಯಲ್ಲಿ ಚಿನ್ನ ದನಾಮಿಕೆಯ ಬೆರ । ಳಲ್ಲಿ ಧರಿಸುತ ದೇವಪಿತೃಕರ್ಮಗಳ ಮಾಡುವುದು ॥
ಬೆಳ್ಳಿ ಚಿನ್ನದ ಮುದ್ರಿಕೆಯ ಕರ । ದಲ್ಲಿ ಯಿದ್ದರು ಕುಶವ ಧರಿಸಿಯೇ । ಯೆಲ್ಲ ಜಪತಪಹೋಮದಾನಗಳನ್ನು ಮಾಡುವುದು ॥120॥

ಕಿರಿಬೆರಳಿನಲಿ ಖಡ್ಗಪಾತ್ರದ । ಪರವ ಪಾವನ ಮುದ್ರಿಕೆಯ ತಾ । ಧರಿಸಬೇಕ್ಕೈ ವಿಪ್ರ ಕುಲಜರು ಶಾಸ್ತ್ರ ಸಮ್ಮತವು ॥
ಇರುತಿರಲು ಜೀವಂತ ಪಿತೃಗಳು । ಧರಿಸಲಾಗದು ನರರು ತರ್ಜನಿ । ಬೆರಳಿನಲಿ ಮುದ್ರಿಕೆಯ ಶಾಸ್ತ್ರಾಧಾರ ಪೇಳುವೆನು ॥121॥

ಇರುತಿರಲು ಜೀವಂತ ಪಿತೃಗಳು । ಧರಿಸಲಾಗದು ಯೋಗ ಪಟ್ಟೋ । ತ್ತರಿಯ ಬೆಳ್ಳಿ ಮುದ್ರಿಕೆಯ ತರ್ಜನಿಯ ಬೆರಳಿನಲಿ ॥
ಚರಣದಲಿ ಪಾದುಕವು ಸಲ್ಲದು । ವರಗಯಾಶಾದ್ಧ ವನು ಮಾಳ್ಪುದು । ದುರಿತಕಾರಕ ಮಾಡಲಾಗದು ಯೆಂದನಾ ಮುನಿಯು ॥122॥

ಬೆರಳಿನಲಿ ನವರತ್ನ ದುಂಗುರ । ಧರಿಸುವವರಿಗೆ ತಟ್ಟಲಾಗದು । ದುರಿತಬಾಧೆಯು ರತ್ನವೊಂದಾದರ ಪವಿತ್ರವದು ॥
ಅರಿವು ಬರುವಂದದಲಿ ನಾನಿ । ನ್ನೊರೆವೆ ಪ್ರಾತಃ ಸಂಧ್ಯೆ ಮಾಡುವ । ಪರಿಯನೆಲ್ಲವ ಕೇಳಿರೈ ಋಷಿವರರೆ ಮನಗೊಟ್ಟು ॥123॥

ಮಿನುಗುತಿರೆ ತಾರೆಗಳು ಗಗನದಿ । ಜನರು ನಿಂತೇ ಜಪವ ಮಾಡುತ । ಲಿನನುದಯದಲಿ ಕೊಡಲು ಬೇಕರ್ಘ್ಯವನು ಸೂರ್ಯನಿಗೆ ॥
ಇನನುದಯಪೂರ್ವದಲಿ ಕೊಡಲದ । ದನುಜರಪಹರಿಸುವರು ತತ್ಕಾ- । ರಣದೊಳರ್ಘ್ಯವ ಕೊಡಬಾರದು ಪೂರ್ವಯಾಮದಲಿ ॥124॥

ಇಂದು ನಾ ಪೇಳುವೆನು ಸಂಧ್ಯಾ । ವಂದನೆಯ ಸರ್ವಪ್ರಕಾರವ- । ನೆಂದು ಪಾರಾಶರನು ವಿವರಿಸಲಿಕ್ಕೆ ತೊಡಗಿದನು ॥
ಮುಂದೆ ಗಾಯತ್ರಿಯನು ಜಪಿಸಲು । ಬಂಧಿಸಿರಿ ಜುಟ್ಟನ್ನು ನೀವಾ- । ನಂದದಿಂದಲಿ ಉನ್ನತಾಸನವನ್ನು ಸ್ವೀಕರಿಸಿ ॥125॥
ಕರದಿ ದರ್ಭೆಯ ಧರಿಸಿ ಜಲದಿಂ- । ದೆರಡು ಬಾರಿಗೆ ದೇವತೀರ್ಥದಿ । ವಿರಚಿಸಿರಿಯಾಚಮನವನು ಸ್ಮರಿಸುತಲಿ ವಿಷ್ಣುವನು ॥
ತಿರುಗಿ ಪ್ರಾಣಾಯಾಮ ಮಾಡಿರಿ । ಪರಿಯೆ ಪೇಳುವೆನದರ ನೀವು- । ಚ್ಚರಿಸಿ ಸಂಧ್ಯಾ ಕ್ರಮದ ಪ್ರಾರಂಭಿಸುವುದುಚಿತದಲಿ ॥126॥

ಪ್ರಣವಸ್ಯ ಪರಬ್ರಹ್ಮಋಷಿ । ಪರಮಾತ್ಮಾ ದೇವತಾ । ದೈವೀ ಗಾಯತ್ರೀಚ್ಛಂದಃ । ಸಪ್ತಾನಾಂವ್ಯಾಹೃತೀನಾಂವಿಶ್ವಾಮಿತ್ರ ಜಮದಗ್ನಿ ಭರದ್ವಾಜಗೌತಮಾತ್ರಿ ವಶಿಷ್ಠ ಕಶ್ಯಪಾ ಋಷಯಃ ॥ ಅಗ್ನಿ ವಾಯು ಸೂರ್ಯ ಬೃಹಸ್ಪತಿವರುಣೇಂದ್ರವಿಶ್ವೇದೇವಾ ದೇವತಾಃ ॥ ಗಾಯತ್ರ್ಯುಷ್ಣಿಗನುಷ್ಟುಬ್ಬೃಹತೀ ಪಂಕ್ತಿಸ್ತ್ರುಷ್ಟುಜ್ಜಗತ್ಯಶ್ಛದಾಂಸಿ ॥ ಗಾಯಿತ್ರ್ಯಾ ವಿಶ್ವಾಮಿತ್ರ ಋಷಿ ಸವಿತಾದೇವತಾ । ಗಾಯತ್ರೀ ಶಿರಸಃ ಪ್ರಜಾಪತಿರ್ ಋಷಿ ॥ ಬ್ರಹ್ಮಾಗ್ನಿವಾಯ್ವಾದಿತ್ಯಾ ದೇವತಾ । ಯಜುಶ್ಛಂದಃ ಪ್ರಾಣಾಯಾಮೇ ವಿನಿಯೋಗಃ ।

ಓಂ ಭೂಃ ಪಾದಾಭ್ಯಾಂ ನಮಃ । ಓಂ ಭುವಃ ಜಾನುಭ್ಯಾಂ ನಮಃ । ಓಂ ಸ್ವಃ ಕಟ್ಯೈ ನಮಃ । ಓಂ ಮಹಃ ನಾಭ್ಯೈ ನಮಃ । ಓಂ ಜನಃ ಹೃದಯಾಯ ನಮಃ । ಓಂ ತಪಃ ಕಂಠಾಯ ನಮಃ । ಓಂ ಸತ್ಯಂ ಲಲಾಟಾಯ ನಮಃ । ಓಂ ಭೂಃ ಭುವಃ ಸ್ವಃ ಶಿರಸೇ ಸ್ವಾಹಾ । ಓಂ ತತ್ಸವಿತುಃ ಹೃದಯಾಯ ನಮಃ । ವರೇಣ್ಯಂ ಶಿರಸೇ ಸ್ವಾಹಾ । ಭರ್ಗೋದೇವಸ್ಯ ಶಿಖಾಯೈ ವಷಟ್ । ಧೀಮಹಿ ಕವಚಾಯ ಹುಂ । ಧೀಯೋಯೊ ನಃ ನೇತಾಭ್ಯಾಂ ವಷಟ್ । ಪ್ರಚೋದಯಾತ್ ಅಸ್ತ್ರಾಯ ಫಟ್ । ಓಂ ಆಪಃ ಹೃದಯಾಯ ನಮಃ । ಜ್ಯೋತಿಃ ಶಿರಸೇ ಸ್ವಾಹಾ । ರಸಃ ಶಿಖಾಯೈ ವಷಟ್ । ಅಮೃತಂ ಕವಚಾಯಹುಂ । ಬ್ರಹ್ಮ ನೇತ್ರಾಭ್ಯಾಂ ವಷಟ । ಭೂರ್ಭುವಃ ಸ್ವರೋಮ್ ಅಸ್ತ್ರಾಯಫಟ್॥

ಅಥಾಂಗುಲಿ ನ್ಯಾಸಃ ॥ ಓಂ ತತ್ಸವಿತುರಂಗುಷ್ಠಾಭ್ಯಾಂ ನಮಃ । ವರೇಣ್ಯಂ ತರ್ಜನೀಭ್ಯಾಂ ನಮಃ । ಭರ್ಗೋದೇವಸ್ಯ ಮಧ್ಯಮಾಭ್ಯಾಂ ನಮಃ । ಓಂ ಧೀಮಹಿ ಅನಾಮಿಕಾಭ್ಯಾಂ ನಮಃ । ಧಿಯೋ ಯೋನಃ ಕನಿಷ್ಠ ಕಾಭ್ಯಾಂ ನಮಃ । ಪ್ರಚೋದಯಾತ್ ಕರತಲಕರ ಪೃಷ್ಠಾಭ್ಯಾಂ ನಮಃ । ಸಾವಿತ್ರೀಂ ಶಿರಸಾಸಾರ್ಧಂ ಜಪೇದ್ವ್ಯಾಹೃತಿ ಪೂರ್ವಿಕಾಂ ॥ ಪ್ರತಿ ಪ್ರಣವ ಸಂಯುಕ್ತಾಂ ತ್ರಿರಯಂ ಪ್ರಾಣಸಂಯಮಃ॥

ಮೊದಲು ಸಪ್ತ ವಾಹೃತಿ, ತದನಂತರ ಸಾವಿತ್ರಿ ಮಂತ್ರ, ಕಡೆಗೆ ಶಿರೋಭಾ ಪ್ರತಿಪ್ರಣವ ಸಹಿತ ಈ ಪ್ರಕಾರದಲ್ಲಿ 3 ವೇಳೆ ಮಾಡಿದರೆ 1 ಪ್ರಾಣಾಯಾಮವು ॥ ಭೂಃ ಭುವಃ ಸ್ವ ರ್ಮಹಃ ಜನಃ ತಪಃ ಸತ್ಸಂ ತಥೈವಚ । ಪ್ರತ್ಯಂಕಾರ ಸಮಾಯುಕ್ತಂ ತಥಾ ತತ್ಸವಿತುಃ ಪದಂ । ಓಮಾಪೋಜ್ಯೋತಿರಿ ತಚ್ಚಿರಃ ಪಶ್ಚಾತ್ಸಯೋಜಯೇತ್ ।

ತ್ರಿರಾವರ್ತನ ಯೋಗಾ ಪಾಣಾಯಾಮಸ್ತು ಶಬ್ದತೇ ॥ ಭೂಃ ಮೊದಲು ಮಾಡಿಕೊಂಡು ಸತ್ಯಂ ಪರ್ಯಂತ ಸಪ್ತ ವ್ಯಾಹೃತಿ ಓಂಕಾರಪೂರ್ವಕ ಉಚ್ಚರಿಸಿ ಅದರ ನಂತರ । "ತತ್ಸವಿತುಃ ವರೇಣ್ಯಂ ಭರ್ಗೋದೇವಸ್ಯ ಧೀಮಹಿ । ಧೀಯೋಯೋನಃ ಪ್ರಚೋದಯಾತ್ ॥ ಈ ಸಾವಿತ್ರಿ ಮಂತ್ರವಂ ಉಚ್ಚರಿಸಿ, ನಂತರ ಆಪೋಜ್ಯೋತಿ ಮೊದಲಾದ ಶಿರೋಭಾಗ ಓಂಕಾರ ಪೂರ್ವಕ ಉಚ್ಚಾರ ಮಾಡಬೇಕು. ಹೀಗೆ ಮೂರು ಆವೃತ್ತಿಯಾದರೆ ಒಂದು ಪ್ರಾಣಾಯಾಮವಾಗುತ್ತದೆ.

ಕನಿಷ್ಠಾನಾಮಿಕಾಭ್ಯಾಂ ಚ ಗೃಹೀತ್ವಾ ವಾಮ ಭಾಗತಃ ॥ ಹೃಸ್ವೋಚ್ಚಾರಣ ಕಾಲಾಭ್ಯಾಂ ಮಾತ್ರಾ ಷೋಡಶ ರೇಚಯೇತ್ ॥1 ॥ ದ್ವಾತ್ರಿಂಶತ್ಪೂರಣೇ ಪ್ರೋಕ್ತಾ ಚತುಃ ಷಷ್ಠಸ್ತು ಕುಂಭಕೇ ॥ ದಕ್ಷನಾಸಾಪುಟೇನೈವ ಪೂರ್ವ ವಾಯುಂ ವಿರೇಚಯೇತ್ ॥2 ॥ ಅಂಗುಷ್ಠೇನ ಪುಟೀ ಬಧ್ವಾ । ನಾಸಾಯಾಂ ದಕ್ಷಿಣಂ ಪುನಃ । ವಾಮಭಾಗೇನ ಸಂಪೂರ್ಯ ಧಾರಯೇತ್ ಪೂರ್ಣಕುಂಭವತ್ ॥3 ॥ ಪಂಚಾಂಗುಲೀಭಿರ್ನಾಸಾಗ್ರ ಪೀಡನಂ ಪ್ರಣವಾಭಿಧಾ ॥

ಕಿರಿಯನಾಮಿಕ ಬೆರಳುಗಳ ತಾ । ಧರಿಸಿಯೆಡನಾಸಾ ಪಟವನಂ । ತರದಿ ಷೋಡಶ ಮಾತ್ರೆಗಳ ನುಚ್ಚರಿಪ ಕಾಲದಲಿ ॥
ಭರದಿ ಬಿಡುವುದು ಶ್ವಾಸ ವಿಪ್ರರು । ಕರೆವರಿದ ರೇಚಕವೆನುತಲಿ । ಅರಿಯಿರಿದು ರೇಚಕವು ದಕ್ಷಿಣ ಸೋಳ್ಳೆಯಿಂಬಹುದು ॥127॥

ಹಿರಿಬೆರಳಿನಿಂ ದಕ್ಷಿಣದ ಪುಟ । ಧರಿಸುತೆಡ ಪುಟದಿಂದ ವಾಯುವು । ಹೊರಗೆ ಬತ್ತಿಸ ಮಾತ್ರೆ ಹಾಕಲು ಹೆಸರು ಪೂರಣವು ॥
ಧರಿಸುತೀಪರಿ ಯೈದು ಬೆರಳಲಿ । ನರರು ನಾಸಾಗ್ರವನು ಪ್ರಣವೋ । ಚ್ಚಾ ರದೊಳರವತ್ನಾಲ್ಕು ಮಾತ್ರೆಯೊಳಹುದು ಕುಂಭಕವು ॥128॥

ಬ್ರಹ್ಮ ರಂಧ್ರದಿ ರೇಚಕವನಾ । ಬ್ರಹ್ಮತೇಜದಿ ಪೂರ್ಣಮಾಡಿರಿ । ಬ್ರಹ್ಮನಾಯುವು ರೇಚಕದಿಪೂರಕದಿ ಕುಂಭಕದಿ ॥
ಬ್ರಹ್ಮಚಾರಿ ಗ್ರಹಸ್ಥ ರೀಪರಿ । ಕರ್ಮಮಾಡಲು ಬೇಕು ಯತಿಗಳ । ಧರ್ಮ ವಾನಪ್ರಸ್ಥ ಧರ್ಮವು ಬೇರೆ ಬೇರಿಹುದು ॥129॥

ನಂತರಕೆ ಮಾಡುವುದು ಮಾರ್ಜನ । ಮಂತ್ರ ಆಪೋಹಿಷ್ಠ ಸೂಕ್ತದಿ । ಮಂತ್ರಕೀ ಋಷಿ ಸಿಂಧುದ್ವೀಪ ಗಾಯತ್ರಿ ಛಂದಸ್ಸು ॥
ಮಂತ್ರ ಕೀ ದೇವತೆಯು ಆಪವು । ಯಿಂತು ಉಚ್ಚಾರಿಸುತ ಮಾರ್ಜನ । ಸಂತಸದಿ ವಿನಿಯೋಗವನು ಮಾಡುವುದು ಸಜ್ಜನರು ॥130॥

ಉಸುರುತೀಪರಿ ಮಂತ್ರವನು ತಾ । ಕುಶ ಪವಿತ್ರದಿ ಮಾಡಿ ಮಾರ್ಜನ । ಮೆಸಗುವುದು ಪಾದಗಳ ಯಸ್ಯಕ್ಷಯೆಯ ಮಂತ್ರದಲಿ ॥
ಉಸುರಿ ಆಪೋಜನ ಸುಮಂತ್ರವ । ನೆಸಗುವುದು ದೇಹದಲಿ ಪ್ರೋಕ್ಷಣ । ವೆಸಗುವುದು ಪ್ರಾಶನವ ಸೂರ್ಯಶ್ಚೇತಿ ಮಂತ್ರದಲಿ ॥131॥

ಸೂಕ್ತ ವಿಹುದು ಹಿರಣ್ಯ ವರ್ಣವು । ಮತ್ತೆ ನೀವುಚ್ಚರಿಸಿ ಮಾರ್ಜನ । ನಿತ್ಯದಲಿ ಮಾಡುವುದು ದ್ರುಪದಾದಿ ಪದ ಮಂತ್ರದಲಿ ॥
ಹಸ್ತದಿಂದುದಕವನು ಘ್ರಾಣಿಸಿ । ಪೃಥ್ವಿಯಲಿಬಿಡಬೇಕು ನಂತರ । ವಿಸ್ತರಿಸುವೆನು ಕೇಳಿರೈ ಮಾರ್ಜನ ವಿಧಾನವನು ॥132॥

ಸಂಧ್ಯಾ ತೀರ್ಥೇ ಜಲೇವಾಪ್ಯಾಂ ರೌಪ್ಯತಾವಾದಿಪಾತ್ರಕೇ । ವಾಮಹಸ್ತೇ ಜಲಂ ಧೃತ್ವಾ ಕುರ್ಯಾನ್ಮಾರ್ಜನಮಾತ್ಮನಃ ।

ಕರದಿ ಹರಿಗರ್ಪಿಸಿದ ತುಳಸಿಯ । ಧರಿಸಿ ರಜತ ಸುವರ್ಣ ವೌದುಂ-। ಬರದ ಪಾತ್ರದಿ ನದಿಯೊಳಗೆ ತೀರ್ಥದಲಿ ಬಾವಿಯಲಿ ॥
ವಿರಚಿಸುವದೈ ಮೇಲೆ ಹೇಳಿದ । ಪರಿಯಲಾ ಮಾರ್ಜನವ ಪಾತಕ । ಹರಿಸುವುದು ಪಾವನವು ತುಳಸೀದಳವು ನೋಡಿದೊಡೆ ॥133॥

ವರವ ಮೂರಕ್ಷರಗಳೆಂತ್ಯದೊ । ಳಿರುವ ಚರಣೋಚ್ಚಾರ ಮಾರ್ಜನ । ಶಿರದಿ ಸಸಥಾಂತ್ಯಗಳ ಮಾರ್ಜನ ಹೃದಯದೇಶದಲಿ ॥
ಇರುವ ಮೂರು ನಕಾರವಂತ್ಯದಿ । ಚರಣದಿಂದಲಿ ಮಾರ್ಜನವ ನೀವ್ । ವಿರಚಿಸಿರಿ ಪಾದದಲಿ ಯೆಂದನು ಮುನಿ ಪರಾಶರನು ॥134॥

ಶಿರದೊಳೆಂಟಾವರ್ತಿ ಮಾರ್ಜನ । ಚರಣದಲಿ ವೊಂಬತ್ತು ಪ್ರಾಶನ । ವಿರಚಿಸಿರಿ ಮಧ್ಯಾಹ್ನ ಮಂತ್ರಾಪಃ ಪುನಂತು ಯಿದು ॥
ಮರಳಿ ಅಗ್ನಿಶ್ಚೇತಿ ಮಂತ್ರದಿ । ವಿರಚಿಸಿರಿ ಸಂಜೆಯಲಿ ಸಂಧ್ಯೆಯ । ಪರಿಯೊಳೀ ಪ್ರಾಶನವ ಮಾಡಲು ಪಾಪನಾಶನವು ॥135॥

ತೀರಿಸುತ ಪ್ರಾಶನವ ನಂತರ । ನೀರಿನಿಂದಾಚಮನ ವೆರಡನು । ತೀರಿಸುತ ಜಲ ಮೂಸಿ ಬಿಡುವುದು ಪೇಳ್ವೆ ನಂತರದಿ ॥
ಚಾರು ಭಕುತಿಯೊಳರ್ಘ್ಯ ಕೊಡುವ ವಿ-। ಚಾರವನು ನಾ ಪೇಳ್ವೆ ಋಷಿಗಳೆ । ಘೋರ ದೈತ್ಯ ಪರಾಭವಕೆ ಕೊಡಬೇಕು ಅರ್ಘ್ಯವನು
॥136॥

ದಿನದಿನದಿ ಮಂದೇಹ ನಾಮಕ । ದನುಜರ್ಕೈ ಸಂಜೆಯಲಿ ಸೂರ್ಯನ । ತಿನಲು ಯತ್ನಿಪರೇನು ಹೇಳುವ ಘೋರ ಯುದ್ಧದಲಿ ॥
ಜನಿಸಿಹರು ವಿರೇಯ ಕುಲದಲಿ । ವನಜಸಂಭವ ಶಾಪವಿತ್ತಿಹ । ದಿನದಿನದ ಸಂಪ್ರಾಪ್ತವಾಗಲಿ ಮರಣ ನಿಮಗೆನುತಾ ॥137॥

ತರಣಿಗಾದೈತ್ಯರೊಳು ಯುದ್ಧದಿ । ಮರಣ ಬಂದರೆ ಲೋಕರಕ್ಷಣ । ಪರಿಯು ವಿರಮಿಪುದೆನುತ ಭೂಸುರರೇಕ ಧಾವದಲಿ ॥
ಭರದೊಳರ್ಘ್ಯವನೀಯುವರು ಭೂ- । ಸುರರು ಗಾಯತ್ರಿಯನು ಹಾಡುತ । ಪರಿಭವಿಸುವರು ದೈತ್ಯರನು ಓಂಕಾರರೂಪದಲಿ ॥138॥

ದುರುಳರವರಿಂಗರ್ಘ್ಯ ಜಲವಿಮ । ಪರಮ ವಜ್ರದ ಪಾತದಂದದಿ । ತರುವುದೈ ಮರಣವನು ಬ್ರಹ್ಮನ ಶಾಪಬಲ ವಿಹುದು ॥
ಧರೆಯೊಳಿಹ ಬ್ರಾಹ್ಮಣರು ಮೇಲಾ । ಧರಣಿ ಮಂಡಳ ನಾಲಖಿಲ್ಯರು । ತರಣಿಗಿತ್ತಾ ಅರ್ಘ್ಯಬಲದಿಂ ಸೂರ್ಯನುದಯಿಪನು ॥139॥

ತರಣಿಯುದಯದ ಭಾವಮಾತ್ರದಿ । ಧರೆಯ ಹವ್ಯಾದಿಗಳು ನಡೆಯವು । ಬರುವುದದರಿಂ ಸುರಗಣಕ್ಕುಪವಾಸ ಕಾರಣದಿ ॥
ಬರಲು ಸುರರುಪವಾಸ ಸೃಷ್ಟಿಯೊ । ಳಿಂದು ಮೆಣುತ್ಪತ್ತಿ ಯದರಿಂ । ತರಣಿ ಮಂಡಳ ರಕ್ಷಣಕೆ ಕೊಡಬೇಕು ದ್ವಿಜರರ್ಘ್ಯ ॥140॥

ಕರವೆರಡರಂಜಲಿ ಪುಟದಿ ಜಲ । ಭರಣ ಮಾಡುತ ನಿಂತು ಪಾದಗ । ಳೆರಡನೇಕಿಕರಿಸಿ ಆ ಭೂಮಧ್ಯ ಪರಿಯಂತ ॥
ತರಲಿ ಅಂಜಲಿ ಪುಟದ ನೀರನು । ತರಣಿ ಮಂಡಳ ನೋಡುತರ್ಘ್ಯವ । ಭರದಿ ಕೊಡುವುದು ದ್ವಿಜರು ಉಚ್ಚರಿಸುವುದು ಪ್ರತಿಚಕ್ಷ್ವ
॥141॥

ಇನನುದಯದಲಿ ಸಂಜೆಯಲಿ ಮೂ । ರನು ಕೊಡುವುದರ್ಘ್ಯವನು ಜಪಿಸುತ । ಮನದಿ ಗಾಯತ್ರಿಯನು ಮಧ್ಯಾಹ್ನದಲಿ ಹಂಸಶುಚಿ ॥
ದನುಜರಿಹರ್ಕೈ ಬ್ರಹ್ಮವಂಶಜ- । ರೆನುತ ಪಾತಕ ತಟ್ಟುವುದು ಸಂ- । ಹನನ ವಪ್ಪುದು ಮಂತ್ರ ಅಸವಾದಿತ್ಯ ಉಚ್ಚರಿಸಿ ॥142॥

ಮೂರು ಬಾರೀ ಮಂತ್ರವನ್ನು । ಚ್ಚಾರಿಸುತೆ ಮಾಡಲು ಪ್ರದಕ್ಷಿಣೆ । ಘೋರ ಪಾತಕ ನಾಶವಪ್ಪುದು ಬ್ರಹ್ಮಹತ್ಯೆಯದು ॥
ನೂರು ಪಟಿ ಸಂಧ್ಯಾ ಫಲವು ನದಿ- । ತೀರದಲಿ ಮಾಡಿದರೆ ಮೇಣ್ಭಾ । ಗೀರಥಿಯ ತೀರದಲಿ ಕೋಟಿ ಪ್ರಮಾಣ ಫಲವಿಹುದು ॥143॥

ಬರುವುದೊಂದೇ ಗುಣವು ಮನೆಯಲಿ । ಹೊರಗೆ ದ್ವಿಗುಣವು ನದಿಯ ತೀರದಿ । ದೊರೆಯುವದು ಫಲ ತ್ರಿಗುಣ ಗೋವೃಂದಾವನದ ಸ್ಥಳದಿ ॥

ದೊರೆಯುವದುದಶಗುಣವು ಹೋಮದಿ । ದೊರೆಯುವದುಶತಗುಣವು ದೇವತೆ । ಯರಸಮೀಪದ ತೀರ್ಥದಲಿಸಾವಿರಗುಣವುಬಹುದು ॥144॥

ಹರಿಯ ಸನ್ನಿಧಿಯಲ್ಲಿ ಫಲವದು । ಬರುವುದೈ ಶತಕೋಟಿ ಮೇಣೀ । ಶ್ವರನ ಸನ್ನಿಧಿಯಲ್ಲಿಯಗಣಿತ ಫಲವು ಸಿಗುತಿರಲು ॥
ದುರಿತ ರೋಗಗಳೆಲ್ಲವನ್ನು ಸಂ- । ಹರಿಸುತಾಯುಷ್ಯವನು ವರ್ಧಿಸಿ । ತರುವದೈ ಸಿದ್ಧಿಯ ಕುಶಾಸನದಲ್ಲಿ ಜಪಿಸಿದರೆ ॥145॥

ಕಾಷ್ಠ ದಾಸನದಲ್ಲಿ ಕುಳಿತರೆ । ಕಷ್ಟ ದುಃಖಗಳೆಲ್ಲ ಬರುವವು । ಬಟ್ಟೆಯಾಸನದಲಿ ದರಿದ್ರತೆ ಕಲ್ಲಿನಲಿ ವ್ಯಾಧಿ ॥
ಇಟ್ಟರಾ ಶಾಖೆಗಳ ಪಲ್ಲವ । ಅಟ್ಟಿ ಬರುವುದು ದುಃಖತಾಪಗ- । ಳಷ್ಟು ಭಸ್ಮಾಸನದಿ ವ್ಯಾಧಿಯು ನಾಶವಾಗುವುದು ॥146॥

ಚಿಗರಿ ತೊಗಲಲಿ ಕೂತು ಜಪಿಸಲು । ಬಗೆಬಗೆಯ ಜ್ಞಾನಪ್ರಕಾಶವು । ಮುಗುದೆ ಮುಕ್ತಿಯು ವಶ್ಯಳಾ ವ್ಯಾಘ್ರಾಜಿನದಿ ತಿಳಿಯೆ ॥
ಸೊಗಸು ಸುಖ ಸಂಪತ್ತಿರಾಶಿಯು । ಸಿಗುವುದೈ ಕಂಬಳಿಯ ಮೂಲಕ । ಬಗೆಬಗೆಯ ಸಾಧನದ ಮಹಿಮೆಯ ತಿಳಿಯಿರೈ ನೀವು ॥147॥

ಧ್ಯಾನನ್ಯಾಸವವಶ್ಯ ಕಾರ್ಯವು । ಧ್ಯಾನವಿಲ್ಲದೆ ಜಪವ ಮಾಡಲು । ಹಾನಿಯಹುದೈ ಫಲವು ನ್ಯಾಸವು ಲೋಪ ಮಾಡಿದರೆ ॥
ಕ್ಷೀಣವಹುದಾಯುಷ್ಯ ಋಷಿಗಳ । ಧ್ಯಾನಮಾಡದೆ ಜಪವ ಮಾಡೆ ಮ । ಹಾನ ವ್ಯಾಧಿಯು ಬರುವುದೆಂದನು ಮುನಿಪರಾಶರನು ॥148॥

ಅಥ ಧ್ಯಾನಂ ।   ಧ್ಯೇಯಃ ಸದಾ ಸವಿತೃಮಂಡಲ ಮಧ್ಯವರ್ತಿ । ನಾರಾಯಣಃ ಸರಸಿಜಾಸನಸನ್ನಿವಿಷ್ಟಃ ॥

ಕೇಯೂರವಾನ್ ಮಕರಕುಂಡಲವಾನ್ ಕಿರೀಟೀ । ಹಾರೀ ಹಿರಣ್ಮಯವಪುರ್ಧೃತಶಂಖಚಕ್ರ ॥149॥

ಕರದಿ ಚಕ್ರ ಸುಶಂಖ ಧರಿಸಿದ । ಶಿರಕಿರೀಟದ ಕೊರಳೊಳಗೆ ಸುಂ- । ದರದ ಹಾರದ ಕಿವಿಯೊಳಗೆ ಕುಂಡಲವ ಧರಿಸಿರುವಾ । ಸರಸಿಜಾಸನ ಸನ್ನಿವಿಷ್ಟದ । ತರಣಿ ಮಂಡಳಮಧ್ಯವರ್ತಿಯ । ನಿರತ ಧ್ಯಾನಿಸಬೇಕು ನಾರಾಯಣನ ಮೂರುತಿಯನು ॥150॥

ನಂತರ,

ಆಗಚ್ಛ ವರದೇ ದೇವಿ । ಜಪೇ ಮೇ ಸನ್ನಿಧೌ ಭವ । ಗಾಯಂತಂ ತ್ರಾಯಸೇ ಯಸ್ಮಾತ್ । ಗಾಯತ್ರೀ ತ್ವಂ ತತಃ ಸ್ಮೃತಾ ॥151 ॥

ಎಂದು ಆಮಂತ್ರಣ ಮಾಡಿ,

ಗಾಯತ್ರೀದೇವತಾ । ಅನುಷ್ಟುಪ್ ಛಂದಃ । ಓಂ ಆದಿತ್ಯ ದೇವತಾ । ಗಾಯತ್ರೀ ಆವಾಹನೇ ವಿನಿಯೋಗಃ ॥ ಪ್ರಾತಃಸಂಧ್ಯೆಯಲ್ಲಿ

ಗಾಯತ್ರೀ ದೇವತಾ । ಗಾಯತ್ರೀ ಛಂದಃ । ಸಾವಿತ್ರಿ ಆವಾಹನೇ ವಿನಿಯೋಗಃ ॥ ಮಧ್ಯಾಹ್ನ ಸಂಧ್ಯೆಯಲ್ಲಿ

ಸವಿತಾದೇವತಾ । ಗಾಯತ್ರೀ ಛಂದಃ । ಸರಸ್ವತೀ ಆವಾಹನೇ ವಿನಿಯೋಗಃ ॥ ಸಾಯಂ ಸಂಧ್ಯೆಯಲ್ಲಿ ಎಂತ ಉಚ್ಚರಿಸಿರಿ,

ರಕ್ತವರ್ಣಳು ರಕ್ತವಸ್ತ್ರೆಯು । ಹತ್ತಿರುವಳೈ ಹಂಸವನು ಗಾ- । ಯತ್ರಿ ಭುಜ ನಾಲ್ಕಿಹವ ಕರದಲಿ ಚಾಟು ಧರಿಸಿಹಳು ॥
ವಕ್ತ್ರಗಳು ನಾಲ್ಕಿಹವು ಮೇಣ್ವ- । ದ್ರಾಕ್ಷಮಾಲೆಯ ಕರದಿ ರಂಜಿಪ । ಮೂರ್ತಿಯಿಹಳು ಕುಮಾರಿಕೆಯು ಋಗ್ವೇದಸಂಯುತಳು ॥152 ॥

ಹೀಗೆ ಪ್ರಾತಃ ಸಂಧ್ಯಾ ಸ್ವರೂಪ ಧ್ಯಾನಿಸಿ-

ಓಂಕಾರ ಶಿಖಾಮಾವಾಹಯಾಮಿ । ಛಂದ ಋಷಿನಾವಾಹಯಾಮಿ । ಶ್ರಿಯಮಾವಾಹಯಾಮಿ । ಬಲಮಾವಾಹಯಾಮಿ ॥

ಎಂತ ಆವಾಹನ ಮಾಡಬೇಕು

ವಸ್ತ್ರಶ್ವೇತವ ಧರಿಸಿಹಳು ಸಾ- । ವಿತ್ರಿ ಮಧ್ಯಂದಿನದಿ ತರುಣಿಳು । ಎತ್ತು ವಾಹನೆಯಾಗಿ ರಂಜಿಪಳೇನ ಹೇಳುವೆನು ॥

ವಕ್ತ್ರಗಳು ಐದಿಹವು ಮಂಗಲ । ಮೂರ್ತಿ ವೇದ ಯಜುಸ್ಸು ಸಂಗಡ । ಮತ್ತಿಹುದು ರುದ್ರಾಕ್ಷಮಾಲೆ ತ್ರಿಶೂಲಧಾರಿಣಿಯು ॥153 ॥

ಹೀಗೆ ಮಧ್ಯಾಹ್ನ ಕಾಲ ಧ್ಯಾನವನ್ನು ಮಾಡಿ

ಓಂಕಾರ ಶಿಖಾಮಾವಾಹಯಾಮಿ । ಛಂದ ಋಷಿನಾವಾಹಯಾಮಿ । ಶ್ರಿಯಮಾವಾಹಯಾಮಿ । ಹ್ರಿಯಮಾವಾಹಯಾಮಿ ॥

ಎಂತ ಆವಾಹನ ಮಾಡಬೇಕು

ಧರಿಸಿಹಳು ಕರಿವಸ್ತ್ರವರ್ಣವು । ಕರಿದಿಹದು ದೇಹಕ್ಕೆ ವಾಹನ । ಗರುಡ ಕರಗಳು ನಾಲ್ಕು ಪದ್ಮಗದಾಯುಧಂಗಳನು ॥

ಧರಸಿಳು ಮೇಣ್ ಶಂಖಚಕ್ರವ । ಸರಸ್ವತಿಯು ತಾ ವೃದ್ಧಳಿಹಳೀ । ಪರಿಯ ಸಾಯಂಧ್ಯಾನವೆಂದನು ಮುನಿಪರಾಶರನು ॥154॥

ಹೀಗೆ ಧ್ಯಾನಿಸಿರಿ

ಓಂಕಾರ ಶಿಖಾಮಾವಾಹಯಾಮಿ । ಛಂದಃ ಋಷಿನಾವಾಹಯಾಮಿ । ಶ್ರಿಯಮಾವಾಹಯಾಮಿ । ಬಲಮಾವಾಹಯಾಮಿ ॥

ಎಂದು ಆವಾಹನೆ ಮಾಡಬೇಕು । ಗಾಯತ್ರೀ ಧ್ಯಾನವೆಂದರೆ-

ಪಂಚಶೀರ್ಷೋಪನಯನೇ ವಿನಿಯೋಗಃ । ಪ್ರಣವಸ್ಯ ಪರಬ್ರಹ್ಮಋಷಿಃ । ಪರಮಾತ್ಮಾ ದೇವತಾ । ಗಾಯತ್ರೀಛಂದಃ ॥

ಉದಾತ್ತ ಅನುದಾತ್ತ ಸ್ವರಿತ ಸ್ವರಃ । ಅಗ್ನಿರ್ವಾಯು ಸೂರ್ಯೋದೇವತಾಃ । ಗಾಯತ್ರೀ ತ್ರಿಷ್ಟುಪ್ ಜಗತೀ ಛಂದಃ ॥

ಬ್ರಹ್ಮ ವಿಷ್ಣು ಮಹೇಶ್ವರಾ ದೇವತಾ । ಋಗ್ಯಜು ಸಾಮಾನಿ ಸ್ವರೂಪಾಣಿ । ಆಹವನೀಯಾಗ್ನಿ ಗಾರ್ಹಪತ್ಯ ದಕ್ಷಿಣಾಗ್ನಿ ಉಪಸ್ಥಾನಾನಿ ॥

ಪೃಥಿವ್ಯಂತರಿಕ್ಷಂ ದ್ಯೌಸ್ತ್ವಾನಿ । ಉದಾತ್ತ ಅನುದಾತ್ತ ಸ್ವರಿತ ಸ್ವರಾಃ । ಪೀತ ವಿದ್ಯುತ್ ಶ್ವೇತ ವರ್ಣಾ । ಪ್ರಾತರ್ಮಧ್ಯಾಹ್ನ ಸಾಯಂ

ತೃತೀಯಸವನಾನಿ । ವಿಶ್ವ-ತೇಜಸ- ಪ್ರಾಜ್ಞ-ಸ್ವರೂಪಿಣೀ । ಜಾಗೃತಿ ಸ್ವಪ್ನ ಸುಷುಪ್ತ್ಯಾವಸ್ಥಾ । ಹೀಗೆ, ತ್ರಿಪದ ಗಾಯತ್ರಿಗೆ ಹೇಳಿದನು.

ಧ್ಯಾನಗಳ ತ್ರಿವಿಧವ ಹೇಳುವೆನು । ನಾನೀಗ ಜಪದ ವಿಧಾನ ಹೇಳುವುದು ॥

ಮಮೋಪಾತ್ತ ದುರಿತಕ್ಷಯದ್ವಾರಾ । ಶ್ರೀಪರಮೇಶ್ವರ ಪ್ರೀತ್ಯರ್ಥಂ ಜಪೇ ವಿನಿಯೋಗಃ ।

ಓಂ ಅಂ ನಾಭೌ । ವಂ ಹೃದಯೇ । ವಂ ಕಂಠೇ ।

ಭೂಃ ಅಕ್ಷರ ಮಂತ್ರಕ್ಕೆ ಗಾಯತ್ರೀ ಛಂದಃ । ಅಗ್ನಿರ್ದೇವತಾ ವಿಶ್ವಾಮಿತ್ರ ಋಷಿಃ । ಷಡ್ಜ ಸ್ವರಃ । ಶ್ವೇತವರ್ಣಃ । (ಪಾದ ಸ್ಪರ್ಶಿಸಿ)
ಪ್ರಾಣಾಯಾಮೇ ವಿನಿಯೋಗಃ । (ಉಚ್ಚರಿಸಿರಿ)

ಭುವಃ ಅಕ್ಷರ ಮಂತ್ರಕ್ಕೆ ಉಷ್ಣಿಣ್ ನಾಮಛಂದಃ । ವಾಯುರ್ದೇವತಾ । ಭೃಗುಋಷಿಃ । ಋಷಭಸ್ವರಃ । ಶ್ಯಾಮವರ್ಣಃ । (ಪಾದ ಸ್ಪರ್ಶಿಸಿ)
ಪ್ರಾಣಾಯಾಮೇ ವಿನಿಯೋಗಃ । (ಉಚ್ಚರಿಸಿರಿ)

ಸ್ವಃ ವ್ಯಾಹೃತೀ ಮಂತ್ರಕ್ಕೆ ಅನುಷ್ಟುಪ್ ಛಂದಃ । ಸವಿತಾ ದೇವತಾ । ಭಾರದ್ವಾಜಋಷಿಃ । ಸ್ವರಗಂಗಾಧಾರಃ । ಶ್ವೇತವರ್ಣಃ ।
(ಕಂಠವಂ ಸ್ಪರ್ಶಿಸಿ) ಪ್ರಾಣಾಯಾಮೇ ವಿನಿಯೋಗಃ । (ಉಚ್ಚರಿಸಿರಿ)

ಮಹಃ ಮಂತ್ರಕ್ಕೆ ಬೃಹಸ್ಪತೀ ಛಂದಃ । ಬೃಹಸ್ಪತೀ ದೇವತಾ । ವಶಿಷ್ಠ ಋಷಿಃ । ಮಧ್ಯಮಃ ಸ್ವರಃ ಪಿಶಂಗ ವರ್ಣಃ ॥
(ನಾಭಿಯಂ ಸ್ಪರ್ಶಿಸುತ,) ಪ್ರಾಣಾಯಾಮೇ ವಿನಿಯೋಗಃ । (ಉಚ್ಚರಿಸಿ) ॥

ಜನಃ ಮಂತ್ರಕ್ಕೆ ಪಂಕ್ತೀ ಛಂದಃ । ವರುಣ ದೇವತಾ । ಗೌತುಮಃ ಋಷಿಃ । ಪಂಚಮಸ್ವರಃ । ನೀಲವರ್ಣಃ । (ಹೃದಯಂ ಸ್ಪರ್ಶಿಸುತ)
ಪ್ರಾಣಾಯಾಮೇ ವಿನಿಯೋಗಃ । (ಎಂತ ಉಚ್ಚರಿಸಿರಿ) ॥

ತಪಃ ಮಂತ್ರಕ್ಕೆ ತ್ರಿಷ್ಟುಪ್ ಛಂದಃ । ಈಶ್ವರದೇವತಾ । ಕಶ್ಯಪಋಷಿಃ । ಪಂಚಮ ಸ್ವರಃ । ನೀಲವರ್ಣಃ । (ಹೃದಯ ಸ್ಪರ್ಶಿಸುತ)

ಪ್ರಾಣಾಯಾಮೇ ವಿನಿಯೋಗಃ । (ಎಂತ ಉಚ್ಚರಿಸಿರಿ)

ಸತ್ಯಂ ಮಂತ್ರಕ್ಕೆ ಜಗತೀ ಛಂದಃ । ವಿಶ್ವೇದೇವತಾ ಆಂಗಿರಸಋಷಿಃ । ನಿಷಾದಸ್ವರಃ । ಕನಕವರ್ಣಃ । (ಭುವೋರ್ಲಲಾಟ ಸ್ಪರ್ಶಿಸತ)
ಪ್ರಾಣಾಯಾಮೇ ವಿನಿಯೋಗಃ ॥ (ಎಂತ ಉಚ್ಚರಿಸಿರಿ)

ಶಿರಸ್ಥಾನ ಸ್ಪರ್ಶಕ್ಕೆ ಅನುಷ್ಟುಪ್ ಛಂದಃ । ಪ್ರಜಾಪತಿ ಋಷಿಃ । ಪರಮಾತ್ಮಾ ದೇವತಾ । ಪ್ರಾಣಾಯಾಮೇ ವಿನಿಯೋಗಃ । (ಉಚ್ಚರಿಸಿ-)

ನಂತರ ಆಪೋಜ್ಯೋತಿ ರಸೋಮೃತಂ । ಬ್ರಹ್ಮಭೂ ರ್ಭುವಸ್ವರೋಮ್ । (ಎಂತ ಅಂಗನ್ಯಾಸ ಮಾಡುವದು -)

ಈಗ ಇಪ್ಪತ್ತನಾಲ್ಕು ಅಕ್ಷರಂಗಳಿಗೆ ಪ್ರತ್ಯಪ್ರತ್ಯೇಕ ಅಕ್ಷರಕ್ಕೆ ನ್ಯಾಸಮಂ ಪೇಳುವೆನು ।

ಈ ತ್ರಿಪದಾ ಗಾಯತ್ರೀ ಮಂತ್ರಕ್ಕೆ । ಅಕ್ಷರಗಳಿಹವು ಇಪ್ಪತ್ತುನಾಲ್ಕು । ಪ್ರತಿಯೊಂದು ಅಕ್ಷರಕ್ಕೆ ನ್ಯಾಸಮಂ ಪೇಳುವೆನು ।

ತ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ಅಗ್ನಿ ದೇವತಾ । ಗಾಯತ್ರೀ ಛಂದಃ । ಅಸತೀ ಪುಷ್ಪವರ್ಣಃ । ವಾಯವ್ಯ ಕೋಣಃ ॥
(ಗುಲ್ಭಮಂ ಸ್ಪರ್ಶಿಸಿರಿ) ॥

ತ್ಸ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ವಾಯುದೇವತಾ । ದೇವೀ ಗಾಯತ್ರೀ ಛಂದಃ । ಸೌಮ್ಯರೂಪ ಪೀತ ವರ್ಣಃ ।
(ಜಂಘಾಸ್ಥಾನ ಸ್ಪರ್ಶಿಸಿರಿ । ಸರ್ವಪಾಪದಲನವಿಹುದಿದು)॥

ವಿ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ಸೋಮದೇವತಾ । ದೇವೀ ಗಾಯತ್ರೀ ಛಂದಃ । ಇಂದ್ರನೀಲ ವಿದ್ಯುದ್ವರ್ಣಃ ।
ಮಹಾರೋಗಹರಣ । (ಈ ತೆರದಿ ಜಾನುಸ್ಥಾನ ನ್ಯಾಸವದಹುದು) ॥

ತು ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ವಿದ್ಯುದ್ದೇವತಾ । ದೇವೀ ಗಾಯತ್ರೀ ಛಂದಃ । ವಹ್ನಿ ರೂಪ । ಸೌಮ್ಯ ವರ್ಣಃ ॥
ಭ್ರೂಣಹತ್ಯ ಪಾಪನಾಶನ । ಉರುಸ್ಥಾನ ನ್ಯಾಸ ವಿಧಾನ,

ರ್ವ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ಸೋಮದೇವತಾ । ದೇವೀ ಗಾಯತ್ರೀ ಛಂದಃ । ಸುವರ್ಣಸ್ಪಟಿಕಕಾಂತಿ । ಗುಹ್ಯ

ಸ್ಥಾನದನ್ಯಾಸ ವಿಧಾನ । ಸಮಸ್ತ ಅಘೌಘನಾಶನವು.

ರೇ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ವರುಣದೇವತಾ । ದೇವೀಗಾಯತ್ರೀ ಛಂದಃ । ವಿದ್ಯುತ್ಪ್ರಕಾಶ ರೂಪಧಾರಣ ।
ಅಭಕ್ಷ್ಯಪಾಪಕ್ಷಾಲನ ವೃಷಣಸ್ಥಾನ ನ್ಯಾಸವಿಧಾನ.

ಣಿ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ಬೃಹಸ್ಪತಿದೇವತಾ । ದೇವೀಗಾಯತ್ರೀ ಛಂದಃ । ಶಾಂತಾಕಾರ ವರ್ಣ ।
ದೇವಹತ್ಯಾ ಪಾಪ ಜಲನ । ಕಟಿಸ್ಥಾನ ನ್ಯಾಸ,

ಯಂ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ತಾರಕಾ ದೈವತ । ದೇವೀ ಗಾಯತ್ರೀ ಛಂದಃ ॥

ಭ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ಪರ್ಜನ್ಯ ದೇವತಾ । ದೇವೀ ಗಾಯತ್ರೀ ಛಂದಃ । ಕೃಷ್ಣ ಮೇಘವರ್ಣ । ನಾಭಿನ್ಯಾಸವಿಧಾನ

ಗೋ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ಇಂದ್ರದೇವತಾ । ದೇವೀ ಗಾಯ ಛಂದಃ । ರಕ್ತವರ್ಣ । ಸುರಸಗೋಹತ್ಯಾ ಪಾಪನಾಶನ ॥
ಉದರ ನ್ಯಾಸವಿಧಾನ

ದೇ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ಗಂಧರ್ವದೇವತಾ । ದೇವೀ ಗಾಯತ್ರೀ ಛಂದಃ । ಸ್ತ್ರೀಹತ್ಯಾ ಪಾಪನಾಶನ ।
ಸ್ತನ ನ್ಯಾಸ ವಿಧಾನ

ವ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ರುದ್ರದೇವತಾ । ದೇವೀ ಗಾಯತ್ರೀ ಛಂದಃ । ವಾಣೀಜಾತಪಾಪನಾಶನ ।
ಹೃದಯ ಸ್ಥಾನ ನ್ಯಾಸವಿಧಾನ.

ಸ್ಯ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ಮಿತ್ರದೇವತಾ । ದೇವೀ ಗಾಯತ್ರೀ ಛಂದಃ । ಕಾಂಚನವರ್ಣ ರೂಪ । ಮಾರ್ಜಾರ ಕುಕ್ಕುಟ
ಪಾಪಹನನ । ಸುರಸ ಕಟಿನ್ಯಾಸವಿಧಾನ.

ಧೀ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ವಿಷ್ಣು ದೇವತಾ । ದೇವೀಗಾಯತ್ರೀಛಂದಃ । ಶುಕ್ಲಕುಮುದಸಂಕಾಶ ತ್ವಷ್ಟಾ ದೇವತಾ ॥ ಪಿತೃಹತ್ಯಾ ಪಾಪನಾಶಕ । ದಂತ ನ್ಯಾಸವಿಧಾನ

ಮ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ವಾಸುದೇವ ದೇವತಾ । ದೇವೀ ಗಾಯತ್ರೀ ಛಂದಃ । ಪದ್ಮತೇಜೋಮಯ ವರ್ಣ । ಸರ್ವಜನ್ಮಪಾಪ ಕ್ಷಾಳನ । ತಾಲುಸ್ಥಾನ ನ್ಯಾಸವಿಧಾನ

ಹಿ ವರ್ಣಾಕ್ಷರಕ್ಕೆ ವಿಶ್ವಾಮಿತ್ರಋಷಿಃ । ಮೇರು ದೇವತಾ । ದೇವೀ ಗಾಯತ್ರೀ ಛಂದಃ । ಶಂಖವರ್ಣರೂಪ । ಸರ್ವಪಾ ಪಹರಣ । ನಾಸಿಕಾನ್ಯಾಸ ವಿಧಾನ,

ಧಿ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ಸೋಮದೇವತಾ । ದೇವೀ ಗಾಯತ್ರೀ ಛಂದಃ । ಪಾಂಡುರಭಾಸ ಸಂಕಾಶ । ಪ್ರಾಣಿಗ್ರಹಣ ಪಾಪನಾಶನ । ನೇತ್ರಸ್ಥಾನನ್ಯಾಸ ವಿಧಾನ

ಯೋ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ಯಮದೇವತಾ । ದೇವೀ ಗಾಯತ್ರೀ ಛಂದಃ । ರಕ್ತಗೌರವರ್ಣ । ಪ್ರಾಣಿವಧ ಪಾಪಹರಣ ॥ ಭ್ರೂಮಧ್ಯನ್ಯಾಸ ವಿಧಾನ.

ಯೋ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ವಿಶ್ವೇದೇವಾ ದೇವತಾ । ದೇವೀ ಗಾಯತ್ರೀ ಛಂದಃ । ರೂಪರುಕ್ಮಾಭಸಂಕಾಶ । ಸರ್ವಪಾಪನಾಶನ । ಲಲಾಟ ಸ್ಥಾನನಾಸ್ಯ ವಿಧಾನ.

ನಃ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ಅಶ್ವಿನೌ ದೇವತಾ । ದೇವಿ ಗಾಯತ್ರೀ ಛಂದಃ । ಸೂರ್ಯ ಸಮಾನ ತೇಜೋರೂಪವು । ಪೂರ್ವದಿಶಾ ನ್ಯಾಸವಿಧಾನ

ಪ್ರ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ। ಪ್ರಜಾಪತಿ ದೇವತಾ । ದೇವಿ ಗಾಯತ್ರೀ ಛಂದಃ । ರೂಪವಹುದ್ಯೆ ನೀಲವರ್ಣವು ॥ ವಿಷ್ಣು ಸಾಯುಜ್ಯವನ್ನು ಕೊಡುವುದು । ದಕ್ಷಿಣದಿಶಾ ನ್ಯಾಸವಿಧಾನ

ಚೋ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ಸರ್ವದೇವತಾ । ದೇವೀ ಗಾಯತ್ರೀ ಛಂದಃ । ಕುಂಕುಮವರ್ಣರೂಪವು । ಪಶ್ಚಿಮದಿಶಾ ನ್ಯಾಸವಿಧಾನ

ದ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ರುದ್ರದೇವತಾ । ದೇವೀ ಗಾಯತ್ರೀ ಛಂದಃ । ಉತ್ತರದಿಶಾ ನ್ಯಾಸವಿಧಾನ

ಯಾ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ಬ್ರಹ್ಮದೇವತಾ । ದೇವೀ ಗಾಯತ್ರೀ ಛಂದಃ । ಸುವರ್ಣರೂಪ ಸುರಸವು । ಬ್ರಹ್ಮಲೋಕವಾಸ

ಪಾಪ್ತಿಯು । ಮೂರ್ಧ್ನ್ಯ ಸ್ಥಾನದ ವ್ಯಾಸವಿಧಾನ

ತ ವರ್ಣಾಕ್ಷರಕ್ಕೆ ವಿಶ್ವಾಮಿತ್ರ ಋಷಿಃ । ವಿಷ್ಣು ದೇವತಾ । ದೇವೀ ಗಾಯತ್ರೀ ಛಂದಃ । ವಿಷ್ಣು ರೂಪವಧರಿಸಿ ವೈಕುಂಠದಲಿನಿಜವಾಸ ॥

ಶಿಖಾಸ್ಥಾನ ನ್ಯಾಸವಿಧಾನ, ।

ಇಂತು ಇಪ್ಪತ್ತುನಾಲ್ಕು ಅಕ್ಷರ । ಮಂತ್ರಗಳ ನ್ಯಾಸಗಳ ಪೇಳ್ದೆನು । ಮಂತ್ರ ನ್ಯಾಸೊಚ್ಚಾರ ವಿಧಿಪೂರ್ವಕದಿ ಮಾಡುವದು ॥
ನಂತರಕೆ ಶಿರದಲ್ಲಿ ಕೈಯ್ಯನು । ಆಂತು ನ್ಯಾಸವ ಮಾಡುವುದು ತದ । ನಂತರ ಮಾಡುವ ವಿಧಾನವ ಪೇಳ್ವೆ ಸರಸದಲಿ ॥155॥

ಶಿರಸ್ಥಾನದನ್ಯಾಸಕ್ಕೆ ಅನುಷ್ಟುಪ್ ಛಂದಃ । ಪ್ರಖ್ಯಾತ ಪ್ರಜಾಪತಿ ಋಷಿಃ । ಪರಮಾತ್ಮಾದೇವತಾ ಪ್ರಾಣಾಯಾಮೇ ವಿನಿಯೋಗಃ । (ಎಂದು ಉಚ್ಚಾರಿಸುತ) ಓಂ (ಆಪೋಸ್ಥಾನವ ಸ್ಪರ್ಶಿಸಿ, ಜ್ಯೋತಿರ್ನೇತ್ರ ಸ್ಪರ್ಶಿಸಿ, ರಸೋಜಿಹ್ವೆಯನ್ಯಾಸ ಮಾಡಿ) । ಅಮೃತೇತಿ ಲಲಾಟದಲ್ಲಿ, ಬ್ರಹ್ಮಭೂರ್ಭುವಸ್ವರೋಮ್ । (ಎಂತ ನ್ಯಾಸ ಮಾಡುವುದು)

ತೀರಿಸುತ ನ್ಯಾಸವನು ಈ ಪರಿ । ಮೂರು ಗಾಯತ್ರಿಯ ಸುಮಂತ್ರೋ । ಚ್ಚಾರ ಮಾಡುತ ನ್ಯಾಸ ವ್ಯಾಪಕವನ್ನು ಮಾಡುವುದು ॥
ತೀರಿಸುತಲೀ ಪರಿಯ ವಿಧಿಯನು । ಮೂರುಬಾರಿಗೆ ಕೈಯ ತೊಳೆಯುತ । ಚಾರುತರ ಭಾವದಲಿ ಹತ್ತಂಗುಲಿಯ ನ್ಯಾಸಿಸಿರಿ ॥156॥

ಓಂ ಭೂಃ ಹಿರಣ್ಯಾತ್ಮನೆ ಅಂಗುಷ್ಠಾಭ್ಯಾಂ ನಮಃ । ಓಂ ಭುವಃ ಪ್ರಜಾಪತ್ಯಾತ್ಮನೇ ತರ್ಜನೀಭ್ಯಾಂ ನಮಃ ।
ಓಂ ಸ್ವಃ ಸೂರ್ಯಾತ್ಮನೇ ಮಧ್ಯಮಾಭ್ಯಾಂ ನಮಃ । ಓಂ ಮಹಃ ಬ್ರಹ್ಮಾತ್ಮನೇ ಅನಾಮಿಕಾಭ್ಯಾಂ ನಮಃ ।
ಓಂ ಜನಃ ಸೋಮಾತ್ಮನೇ ಕನಿಷ್ಠಿಕಾಭ್ಯಾಂ ನಮಃ । ಓಂ ತಪಃ ಸತ್ಯಂ ಆಗ್ನಿ ಸವಿತ್ರಾತ್ಮನೇ ಕರತಲಕರಪೃಷ್ಠಾಭ್ಯಾಂ ನಮಃ

ಓಂ ತತ್ಸವಿತುಃ ಅಂಗುಷ್ಠಾಭ್ಯಾಂ ನಮಃ ಹೃದಯಾಯ ನಮಃ । ವರೇಣ್ಯಂ ತರ್ಜನೀಭ್ಯಾಂ ನಮಃ ಶಿರಸೇ ಸ್ವಾಹಾ ।
ಭರ್ಗೋದೇವಸ್ಯ ಮಧ್ಯಮಾಭ್ಯಾಂ ನಮಃ ಶಿಖಾಖ್ಯೈ ವಷಟ್ । ಧೀಮಹಿ ಅನಾಮಿಕಾಭ್ಯಾಂ ನಮಃ ಕವಚಾಯಹುಂ ॥
ಧೀಯೋ ಯೋ ನಃ ಕನಿಷ್ಠಿಕಾಭ್ಯಾಂ ನಮಃ ನೇತ್ರಾಭ್ಯಾಂ ವಷಟ್ । ಪ್ರಚೋದಯಾತ್ ಕರತಲಕರಪ್ರಷ್ಠಾಭ್ಯಾಂ ನಮಃ । ಅಸ್ತ್ರಾಯ ಪಟ್॥

ಅಥ ಷಡಂಗ ನ್ಯಾಸಃ - ನಂತರ ಉಭಯ ಹಸ್ತಾಂಗುಲಿನ್ಯಾಸ ಮಾಡುವುದು ॥
ಓಂ ಭೂಃ ಹಿರಣ್ಯಾತ್ಮನೇ ಹೃದಯಾಯ ನಮಃ ॥ ಓಂ ಭುವಃ ಪ್ರಜಾಪತ್ಯಾತ್ಮನೇ ಶಿರಸೇಸ್ವಾಹಾ ॥ ಓಂ ಸ್ವಃ ಸೂರ್ಯಾತ್ಮನೇ ಶಿಖಾಯೈ ವಷಟ್ ॥ ಓಂ ಮಹಃ ಬ್ರಹ್ಮಾತ್ಮನೇ ಕವಚಾಯ ಹುಂ ॥ ಓಂ ಜನಃ ಓಂ ತಪಃ ಓಂ ಸತ್ಯಂ ಸೋಮಾತ್ಮನೇ ನೇತ್ರಾಭ್ಯಾಂ ವಷಟ್ ॥
ಓಂ ಪ್ರಚೋದಯಾತ್ ಸರ್ವಾತ್ಮನೇ - ಅಸ್ತ್ರಾಯಫಟ್ ॥
ಓಂ ತತ್ಸವಿತುಃ ಹೃದಯಾಯ ನಮಃ ॥ ಓಂ ವರೇಣ್ಯಂ ಶಿರಸೇಸ್ವಾಹಾ ॥ ಓಂ ಭರ್ಗೋದೇವಸ್ಯ ಶಿಖಾಯೈ ವಷಟ್ ॥ ಓಂ ಧೀಮಹಿ ಕವಚಾಯ ಹುಂ ॥ ಓಂ ಧಿಯೋಯೋನಃ ನೇತ್ರಾಭ್ಯಾಂ ವಷಟ್ ॥ ಓಂ ಪ್ರಚೋದಯಾತ್ ಅಸ್ತ್ರಾಯಫಟ್ ॥
ಇಂತು ಷಣ್ಣ್ಯಾಸವನು ಮಾಡಿದ । ನಂತರದಿ ಹತ್ತಂಗ ನ್ಯಾಸವ । ನೆಂತು ಮಾಡುವದೆನುತ ಪೇಳ್ವೆನು ಬೇಗದಿಂ ನಿಮಗೆ ॥157॥

ಓಂ ಭೂಃ ಪದ್ಭ್ಯಾಂ ನಮಃ । ಓಂ ಭುವಃ ಜಾನುಭ್ಯಾಂ ನಮಃ । ಓಂ ಸ್ವಃ ಕಟ್ಯೈ ನಮಃ । ಓಂ ಮಹಃ ನಾಭಯೇ ನಮಃ । ಓಂ ಜನಃ ಹೃದಯಾಯ ನಮಃ । ಓಂ ತಪಃ ಕಂಠಾಯನಮಃ । ಓಂ ಸತ್ಯಂ ಲಲಾಟಾಯ ನಮಃ । ಓಂಭೂರ್ಭುವಃ ಸ್ವಃ ಶಿರಸೇಸ್ವಾಹಾ । ಓಂ ತತ್ಸವಿತುಃ ಹೃದಯಾಯ ನಮಃ । ವರೇಣ್ಯಂ ಶಿರಸೇ ಸ್ವಾಹಾ । ಭರ್ಗೋದೇವಸ್ಯ ಶಿಖಾಯೈ ನಮಃ ॥ ಧೀಮಹಿ ಕವಚಾಯ ಹುಂ । ಧಿಯೋ ಯೋ ನಃ ನೇತ್ರಾಭ್ಯಾಂ ವಷಟ್ ॥ ಪ್ರಚೋದಯಾತ್ ಅಸ್ತ್ರಾಯಫಟ್ ॥ ಓಂ ಆಪಃ ಹೃದಯಾಯ ನಮಃ । ಜ್ಯೋತಿಃ ಶಿರಸೇ ಸ್ವಾಹಾ । ರಸಹ್ ಶಿಖಾಯೈ ವಷಟ್ ॥ ಅಮೃತಂ ಕವಚಾಯ ಹುಂ ॥ ಬ್ರಹ್ಮ ನೇತ್ರಾಭ್ಯಾಂ ವಷಟ್ । ಭೂರ್ಭುವಃಸ್ವರೋಮ ಅಸ್ತ್ರಾಯ ಫಟ್॥

ಗಾಯತ್ರೀ ಮಂತ್ರದ ಇಪ್ಪತ್ತು ನಾಲ್ಕು ಅಕ್ಷರಗಳ ಅಂಗನ್ಯಾಸ ಕ್ರಮವನ್ನು ಪೇಳುವೆನು -

ತಂ ಅಂಗುಷ್ಠಾಭ್ಯಾಂ ನಮಃ । ತ್ಸಂ ಗುಲ್ಫಯೋರ್ನಮಃ । ವಿಂ ಜಂಘಯೋರ್ನಮಃ । ತುಂ ಜಾನುಭ್ಯಾಂ ನಮಃ । ರ್ವಂ ಊರುಭ್ಯಾಂ ನಮಃ । ರೇಂ ಗುಹ್ಯಾಯ ನಮಃ । ಣಿಂ ವೃಷಣಾಯ ನಮಃ । ಯಂ ಕಟಿಭ್ಯಾಂ ನಮಃ । ಭಂ ನಾಭ್ಯೇ ನಮಃ । ರ್ಗೋಂ ಉದರಾಯ ನಮಃ । ದೇಂ ಸ್ತನಾಭ್ಯಾಂ ನಮಃ । ವಂ ಹೃದಯಾಯ ನಮಃ । ಸ್ಯಂ ಕಂಠಾಯ ನಮಃ । ಧೀಂ ದಂತೇಭ್ಯೋ ನಮಃ । ಮಂ ತಾಲವೇ ನಮಃ । ಹಿಂ ನಾಸಿಕಾಯೈ ನಮಃ । ಧಿಂ ನೇತ್ರಾಭ್ಯಾಂ ನಮಃ । ಯೋಂ ಭ್ರುವೋರ್ಮಧ್ಯಾಯ ನಮಃ । ಯೋಂ ಲಲಾಟಾಯ ನಮಃ । ನಃ ಪ್ರಾನ್ಮುಖಾಯ ನಮಃ । ಪ್ರಂ ದಕ್ಷಿಣ ಮುಖಾಯ ನಮಃ । ಚೋಂ ಪಶ್ಚಿಮ ಮುಖಾಯ ನಮಃ । ದಂ ಉತ್ತರ ಮುಖಾಯ ನಮಃ । ಯಾಂ ಮೂರ್ಧ್ನೇ ನಮಃ । ತ್ ಶಿಖಾಯೈ ನಮಃ ॥

ನಂತರ ಶಿಖಾ ಹಿಡಿದು ಕೆಳಗೆ ಇಳಿಯುತ್ತಾ ನ್ಯಾಸ ಮಾಡುವುದು ಅದರ ವಿಧಾನವೇನಂದರೆ

ತ್ ಶಿಖಾಯೈ ನಮಃ । ಯಾಂ ಮೂರ್ಧ್ನೇ ನಮಃ । ದಂ ಉತ್ತರ ಮುಖಾಯ ನಮಃ । ಚೋಂ ಪಶ್ಚಿಮ ಮುಖಾಯ ನಮಃ । ಪ್ರಂ ದಕ್ಷಿಣ

ಮುಖಾಯ ನಮಃ । ನಃ ಪ್ರಾನ್ಮುಖಾಯ ನಮಃ । ಯೋಂ ಲಲಾಟಾಯ ನಮಃ । ಯೋಂ ಭ್ರುವೋರ್ಮಧ್ಯಾಯ ನಮಃ । ಧಿಂ ನೇತ್ರಾಭ್ಯಾಂ ನಮಃ । ಹಿಂ ನಾಸಿಕಾಯೈ ನಮಃ । ಮಂ ತಾಲವೇ ನಮಃ । ಧೀಂ ದಂತೇಭ್ಯೋ ನಮಃ । ಸ್ಯಂ ಕಂಠಾಯ ನಮಃ । ವಂ ಹೃದಯಾಯ ನಮಃ । ದೇಂ ಸ್ತನಾಭ್ಯಾಂ ನಮಃ । ಗೋರ್ಂ ಉದರಾಯ ನಮಃ । ಭಂ ನಾಭ್ಯೇ ನಮಃ । ಯಂ ಕಟಿಭ್ಯಾಂ ನಮಃ । ಣಿಂ ವೃಷಣಾಯ ನಮಃ । ರೇಂ ಗುಹ್ಯಾಯ ನಮಃ । ವರ್ಂ ಊರುಭ್ಯಾಂ ನಮಃ । ತುಂ ಜಾನುಭ್ಯಾಂ ನಮಃ । ವಿಂ ಜಂಘಯೋರ್ನಮಃ । ತ್ಸಂ ಗುಲ್ಫಯೋರ್ನಮಃ । ತಂ ಅಂಗುಷ್ಠಾಭ್ಯಾಂ ನಮಃ॥

ಪ್ರಣವಸ್ವರೂಪದ ನ್ಯಾಸ ಹೇಗಂದರೆ:

ಅಕಾರ ನಾಭಿನ್ಯಾಸ, ಉಕಾರ ಹೃದಯನ್ಯಾಸ, ಮಕಾರ ಮುಖನ್ಯಾಸ, ನಕಾರ ಲಲಾಟನ್ಯಾಸ, ಮಃ ಶಿರಸಿ ಹಸ್ತದಿಂದ ನಮಸ್ಕರಿಸಿ
ಪೇಳುವೆನು ಗಾಯತ್ರಿ ಮುದ್ರೆಯ । ಕೇಳಿರೆಂದನು ಋಷಿಗಳಿಗೆ ಮುನಿ । ಲೋಲ ನೀಪರಿ ಮುದ್ರೆಗಳು ಮೇಲಿಹವು ಮಂತ್ರಕ್ಕೆ॥

ಶ್ಲೋಕ- ಸುಮುಖಂ ಸಂಪುಟಂಚೈವ ವಿತತಂ ವಿಸ್ತೃತಂ ತಥಾ । ದ್ವಿಮುಖಂ ತ್ರಿಮುಖಂ ಚೈವ ಚತುಃಪಂಚಮುಖಂ ತಥಾ ॥1 ॥
ಷಣ್ಮುಖಾಧೋ ಮುಖಂ ಚೈವ ವ್ಯಾಪಕಾಂಜಲಿ ಕಂ ತಥಾ । ಶಕಟಂ ಯಮಪಾಶಂ ಚ ಗ್ರಥಿತಂ ಚೋಲ್ಮು ಕೋಲ್ಮುಕಂ । 2 ॥
ಪ್ರಲಂಬಂ ಮುಷ್ಟಿ ಕಂ ಚೈವ ಮತ್ಸಕೂರ್ಮವರಾಹಕಂ । ಸಿಂಹಾಕ್ರಾಂತಂ ಮಹಾಕ್ರಾಂತಂ ಮುದ್ಗರಂ ಪಲ್ಲವಂ ತಥಾ ॥3 ॥
ಏತಾ ಮುದ್ರಾ ನ ಜಾನಾತಿ ಗಾಯತ್ರೀ ನಿಷ್ಫಲಾ ಭವೇತ್ । ಏತಾ ಮುದ್ರಾಸ್ತು ಕರ್ತವ್ಯಾ ಗಾಯತ್ರಿ ಸುಪ್ರತಿಷ್ಠಿತಾ ॥4॥

ಮುದ್ರೆಯಿಲ್ಲದ ಮಂತ್ರಜಪವು ನಿ- । ಷಿದ್ಧವೆಂಬರು ಮುನಿಪರದರಿಂ । ಮುದ್ರೆಯಿಂದಲಿ ಗುಪ್ತವಾಗಿಯೆ ಜಪಿಸಿರೀ ಮಂತ್ರಾ ॥
ಶುದ್ಧ ಮನದಲಿ ನೂರ ಎಂಟನು । ಮುದ್ರೆಸಂಯುತವಾಗಿ ಜಪಿಸಲು । ಬಿದ್ದು ಹೋಗುವುದೆಲ್ಲ ಪಾಪವು ಶಾಸ್ತ್ರಸಿದ್ಧವಿದು ॥158॥

ಗಾಯತ್ರೀ ಪ್ರಥಮ ಪಾದಕ್ಕೆ, ಋಗ್ವೇದಋಷಿ । ಭೂಮಿತತ್ವ । ಬ್ರಹ್ಮದೇವತಾ । ತ್ರಿಷ್ಟುಪ್ ಛಂದಃ ॥ ದ್ವಿತೀಯ ಪಾದಕ್ಕೆ ಯಜುರ್ವೇದ ಋಷಿ॥

ರುದ್ರ ದೇವತಾ । ಪ್ರಾಣಾಪ್ಯಾನವಾನತತ್ವ ಜಗತೀ ಛಂದಃ । ತೃತೀಯ ಪಾದಕ್ಕೆ ಋಗ್ಯಜುಃಸಾಮತತ್ವ ವಿಷ್ಣು ದೇವತಾ । ತ್ರಿಷ್ಟುಪ್ ಛಂದಃ । ಸಮಸ್ತ ಪಾಪಕ್ಷಯಾರ್ಥೇ ವಿನಿಯೋಗಃ ॥ ಗಾಯತ್ರಿ ಧ್ಯಾನಂ॥

ಮುಕ್ತಾ ವಿದ್ರುಮಹೇಮನೀಲಧವಲಚ್ಛಾಯೈ ರ್ಮುಖೈಸ್ತ್ರೀಕ್ಷಣೈ । ಯುಕ್ತಾ ಮಿಂದುಕಲಾನಿಬದ್ಧ ಮುಕುಟಾಂ ತತ್ವಾರ್ಥವರ್ಣಾತ್ಮಿಕಾಂ ॥

ಗಾಯತ್ರೀಂ ವರದಾಭಯಾಂ ಕುಶಕತಾಂ ಶುಭ್ರಂ ಕಪಾಲಂ ಗುಣಂ । ಶಂಖಂ ಚಕ್ರಮಥಾರವಿಂದಯುಗಲಂ ಹಸ್ತೈರ್ವ ಹಂತೀಂ ಭಜೇತ್॥

ಧ್ಯಾನವಿದು ಗಾಯತ್ರಿ ದೇವಿವಿ- । ಧಾನವನು ಪೇಳಿದೆನು ನ್ಯಾಸದ । ಮೌನದಿಂದಲಿ ಜಪಿಸಿರೆ ನಾಸಾಗ್ರನಯನದಲಿ ॥
ಪ್ರಾಣಮಾನಸವನ್ನು ಕೂಡಿಸಿ । ಸಾನುರಾಗದಿ ಜಪವ ಮಾಡಲು । ಹಾನಿಯಪ್ಪುದು ಜನ್ಮಜನ್ಮಾಂತರದ ಪಾಪವದು ॥159॥

ಆಲಿಸಿರಿ ಗಾಯತ್ರಿ ಮಂತ್ರವು । ಮೂಲವಿದು ವೇದಗಳಿಗೈ ನಿಜ । ಹಾಳು ಮಾಳ್ಪುದು ಪಾಪರಾಶಿಯ ಜಪಿಸಿದರೆ ನಿರತಾ ॥
ಮೂಲಗಾಯತ್ರಿಯ ಜಪದ ಫಲ । ಪೇಳುವೆನು ನಾ ವೇದಪಠಣದ । ತೊಲಕ್ಕೈ ಸರಿಯಹುದು ಜಪಿಸಿರಿ ನಿತ್ಯ ಗಾಯತ್ರಿ ॥160॥

ಚಿಂತಿತವ ಕೊಡುತಿರುವ ಮಂಗಳ- । ಮಂತ್ರವಿದನೆಲ್ಲವರು ಜಪಿಸಿರಿ । ಸಂತತದಿ ಜಪಮಾಡಿದರೆ ಸೂಕರನ ಜನ್ಮವದು ॥
ನಿಂತು ಜನದಲಿ ಜಪಿಸಬಾರದು । ಸಂತತದಿ ಬ್ರಾಹ್ಮಣರ ಮುಖದಲಿ । ಕಾಂತಿಯುತ ಮೂರಗ್ನಿಗಳು ವಾಸಿಪವು ಯೆಡೆಬಿಡದೆ ॥161॥

ಉದಕ ಸಂಪರ್ಕದಲಿ ವಿಪ್ರರ । ವದನದೊಳಗಿಹ ಅಗ್ನಿತೇಜವು । ಕದಲುವುದು ನಿಜವೆಂಬ ಕಾರಣ ಜಲವ ವರ್ಜಿಪುದು ।
ಮುದದಿ ಮಾಲೆಯ ಧರಿಸುತಾ ಹ-। ಸ್ತದಲಿ ನಾಭಿಯ ಮುಟ್ಟಿ ಜಪವನು । ಪೊದಗಿ ಮಾಡುವುದೆಂದು ಪೇಳ್ದ ನು ಮುನಿಪರಾಶರನು ॥162॥

ಎದ್ದು ನಿಂತಾ ಜಪವ ಮಾಡುವ । ಪದ್ಧತಿಯು ಬೆಳಗಿನಲಿ ಕೇಳಿರಿ । ಮಧ್ಯದಿನದಲಿ ಕೂತು ಇಲ್ಲವೆ ನಿಂತು ಜಪಿಸುವುದು ॥
ಶುದ್ಧ ಮನದಲಿ ಸಂಜೆ ವೇಳೆಗೆ । ಇದ್ದ ನೆಲದಲಿ ಕೂತು ಜಪಿಸಲು । ಹೊದ್ದ ದುರಿತವು ನಾಶವಪ್ಪುದು ಮಂತ್ರ ಮಹಿಮೆಯಿದು ॥163॥

ಮರವ ನೋಡಿರಿ ಜಪವ ಮಾಡು- । ತ್ತಿರುವ ಕಾಲಕೆ ಸಂಜೆ ಹೊತ್ತಿಲಿ । ಮರದ ಭಾವದಿ ನಾಸಿಕಾಗ್ರದಿ ದೃಷ್ಟಿಯಿಡಬೇಕು ॥
ಧರಿಸಿ ಮಾಲೆಯ ಹೃದಯ ಸ್ಥಾನದಿ । ಭರದ ಮಧ್ಯಾಹ್ನದಲಿ ಪೇಳ್ವುದು । ಕರದಿ ಮುಖಸ್ಪರ್ಶಿಸುತ ಸಂಜೆಗೆ ಜಪವ ಮಾಡುವುದು ॥164॥

ಯತಿಗೆ ವಾನಪ್ರಸ್ಥರಿಗೆ ದಶ- । ಶತಪ್ರಮಾಣವು ಜಪದ ಸಂಖ್ಯೆಯು । ಇತರರಿಗೆ ನೂರೆಂಟು ನಿತ್ಯದ ಮಾನ ಜನಸಂಖ್ಯೆ ॥
ಕೃತಕ ವಿಗ್ರಹ ಸಂಧಿಕಾಲದಿ । ಪತನವಾದರೆ ಶಕ್ತಿ ಜಪವನು । ಸತತ ಮಾಡಿರಿ ಹತ್ತು ಇಪ್ಪತ್ತೆಂಟು ಆವರ್ತಿ ॥165॥

ಉತ್ತಮವು ಮಾನಸಿಕ ಜಪವದು । ಗುಪ್ತ ಪುಟುಪುಟಿಸುವುದು ಮಧ್ಯಮ । ಮತ್ತೆ ಪ್ರಗಟೋಚ್ಚರಣೆ ಬಹಳ ಕನಿಷ್ಠ ವೆನಿಸುವುದು ॥
ಆ ತ್ರಿಪಾದದ ಮಂತ್ರವಿದು ಗಾ- । ಯತ್ರಿ ದುರಿತವಿನಾಶಿ ಪಾದವಿ । ಭಕ್ತಿಯಲಿ ಜಪಿಸಿದರೆ ಇಲ್ಲವೆ ನರಕದಾತ್ರಿಯದು ॥166॥

ಗಾಯತ್ರೀ ಮಂತ ಉಚ್ಚಾರಃ-

ಓಂತತ್ । ಓಂ ಭೂರ್ಭುವಃಸ್ವಃ । ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ ॥167॥

ಮೂರು ಪಾದಗಳಿಹವು ನೀವು- । ಚ್ಚ್ಚಾರಿಸಿರಿ ಪದವನು ವಿಭಾಗಿಸಿ । ಬೇರೆಬೇರಾಗುಚ್ಚರಿಸಿದರೆ ಪಾಪವನಾಶಕವು ॥
ನೂರುಯೆಂಟಾವರ್ತಿ ಜಪಿಸಲು । ಘೋರ ಪಾತಕ ನಾಶವಪ್ಪುದು । ಘೋರತರ ಪಾತಕವು ಸುಡುವುದು ಕೋಟಿಜಪಮಾಡೆ ॥168॥

ಚಿತ್ತಶುದ್ಧಿ ಕರದಿ ಮಾಲೆಯ । ಗುಪ್ತದಲಿ ಧರಿಸುತ್ತ ಜಪಿಸಿರಿ । ಸತ್ಯವಿದು ಸುಖವಹುದು ನಿರುಪಮ ಜಪದ ಮಾತ್ರದಲಿ ॥
ಮುತ್ತು ಮಾಲೆಗೆ ಲಕ್ಷಗುಣವಹು- । ದುತ್ತಮವು ರುದ್ರಾಕ್ಷಮಾಲೆಯು । ಚಿತ್ತವಿಸಿರಿ ಸುವರ್ಣ ಮಾಲೆಗೆ ಕೋಟಗುಣವಹುದು ॥169॥

ಹಿರಿಬೆರಳ ಜಪದಿಂದ ಗುಣ ವೊಂ । ದಿರಲು ದಶ ಪರ್ವಾಂಗುಲಿಯೋಳಾ । ಬರುವುದೆ ಶತಗುಣವು ಕೇಳ್ಕೈ ಶಂಖಮಣಿಯಿಂದಾ ॥
ಬರುವುದೈ ಹವಳದಲಿ ಗುಣ ಸಾ- । ವಿರವು ಸ್ಫಟಿಕದಿ ಕೇಳು ದಶಸಾ- । ವಿರವು ಪದ್ಮಾ ಕ್ಷಿಯಲಿ ಬರುವುದು ಹತ್ತು ಲಕ್ಷವದು ॥170॥

ಮಾಡುತಿರೆ ಜಕಗಳನುಲಂಘನ । ಮಾಡಬಾರದು ಮೇರುವನು ತಾ । ಮಾಡಿದರೆ ಪಾತಕವು ಬಹುವಿಹುದೆಂದು ಪೇಳುವರು ॥
ಓಡುವುದು ನಿಜ ಮೇರುಲಂಘನ । ಗಾಢ ಪಾಪವು ಭಕ್ತಿಯಲಿ ತಾ । ಮಾಡೆ ಪ್ರಾಣಾಮಾಯ ಮೂರಾವರ್ತಿ ಮೋದದಲಿ ॥171॥

ದೃಢಮನದಿ ಮಾಡುವುದು ಜಪವನು । ಎಡಬಲಕೆ ನೋಡದಲೆ ಶೂದ್ರರು । ನುಡಿಯಲವರೊಳು ಮಾಡದಲೆ ಸಂಭಾಷಣವ ಮುದದಿ ॥
ಪಡೆದು ದ್ರವ್ಯವ ಪರರಿಗೋಸುಗ । ಸಡಗರದಿ ಜಪ ಮಾಡಲಾತಗೆ । ಬಡಿಯುವುದು ಬಹುಪಾಪ ಚಾಂಡಾಳರಲಿ ಜನಿಸುವನು ॥172॥

ತುರಿಸಿಕೊಳಬಾರದು ಶರೀರವ । ನರನು ಜಪಮಾಡುವ ಸಮಯದಲಿ । ತುರಿಕೊಂಡರೆ ಮಾಡಿರೈ ಶ್ರೋತ್ರಾಚಮನ ನೀವು ॥
ಇರುವವೈ ಬ್ರಾಹ್ಮಣರ ದಕ್ಷಿಣ । ಕರಣದಲಿ ಕೇಳೇಳು ದೇವತೆ । ಕರದಿ ಸ್ಪರ್ಶಿಸಲದನು ಪಾಪವಿನಾಶವಾಗುವುದು ॥173॥

ಬರಲು ದೃಷ್ಟಿಯ ಪಥದಿ ಪತಿತನು । ಎರಡು ಆಚಮನಗಳ ಮಾಡಲು । ನರನು ಶುದ್ಧಿಯ ಪಡೆವ ಸಂಭಾಷಣವ ಮಾಡಿದರೆ ॥
ತಿರುಗಿಯೊಂದಾಚಮನ ಸ್ನಾನವ । ಭರದಿ ಮಾಡಲು ಶುದ್ಧನಾಗುವ । ಬರಲು ನಿದ್ರೆಯು ಸೀನು ಕೋಪವು ಜಪವ ಶುದ್ಧಿ ಪುದು ॥174॥

ಮೌನಧರಿಸುವುದುತ್ತಮವು ಸಂ- । ಧಾನವಿರೆ ಮಾತಿನಲಿ ಸಂಜ್ಞಾ । ಮಾನದಿಂದಲಿ ತೋರಿಸುವುದೈ ಮನದ ಭಾವವನು ॥
ಧೇನು ಸೂರ್ಯಾಗ್ನಿಗಳ ದರ್ಶನ । ಕಾಣಲಾಕ್ಷಣ ದುರಿತ ಹಾನಿಯು । ಮೇಣು ಉಚ್ಚಾರಿಸಿರಿ ತದ್ವಿಷ್ಣ್ವೆಂಬ ಮಂತ್ರವನು ॥175॥

ವಿಧಿಯೊಳಾ ಜಪಮಾಡಿದವರಿಗೆ । ವೊದಗುವುದು ಸಕಲಾರ್ಥಸಾಧನ । ವುದಯಕಾಲದಿ ನುಡಿಯಿರೈ ಮಿತ್ರಸ್ಯ ಋಷಿಯೆನುತಾ ॥
ಉದುತ್ಯ ಮಂತ್ರವ ನಡುಹಗಲಿನಲಿ । ಮುದದಿ ಸಾಯಂಕಾಲ ಸಮಯದಿ । ವದದಿ ನುಡಿಯಿರಿ ಕೇಳಿಮಂಮೇವರುಣ ಮಂತ್ರವನು ॥176॥

ದಿಶೆಗಳೆಲ್ಲವ ನಮಿಸಿ ಹಿಂದಿನ । ಋಷಿಯ ಮತದಲಿ ಗೋತ್ರಪ್ರವರವ । ನುಸುರಿ ಸಗುಣ ಪ್ರದಕ್ಷಿಣೆಯು ತಾ ಮಾಡಿ ನಮಿಸುವುದು ॥
ಎಸಗಿರೌಪಾಸನವ ನಂತರ । ಮಿಸುಪ ಅಗ್ನಿಯ ಸ್ಥಂಡಿಲದಿ ಸ್ಥಾ- । ಪಿಸುವುದುತ್ತಮ ಕುಂಡದಲಿ ಸ್ಥಾಪಿಸುತ ನಿತ್ಯದಲಿ ॥177॥

ನೆಲದ ಮೇಲಿನ ಆಗ್ನಿ ಖರ್ಪರ- । ದೊಳಗೆ ರಂಜಿಪ ಅಗ್ನಿವರ್ಜ್ಯವು । ಬೆಳಗುಯಾಮದಿ ಸಂಜೆಯಲಿ ಹೋಮವನು ಮಾಡುವುದು ॥
ಬೆಳಗಲನಲನು ಕುಂಡದಲಿ ನಿ- । ರ್ಮಲನು ಸಂಸ್ಕೃತ ಹವ್ಯಕವ್ಯಕೆ । ಮಲಿನ ವಹಬೆಂಕಿಯಲಿ ಹೋಮವ ಮಾಳ್ಪುದನುಚಿತವು ॥178॥

ಪರ್ಣದಿಂದಲಿ ಪ್ರಜ್ವಲಿಸೆ ನರ- । ನಗ್ನಿ ಯನು ವಾಧಿಷ್ಠನಾಗುವ । ತನ್ನ ಮುಖದಿಂ ದೀಪಿಸಲು ಆಯುಷ್ಯ ಕ್ಷಯವಹುದು ॥
ತನ್ನ ಹಸ್ತದಿ ಧಮನದಿಂದಲಿ । ಅಗ್ನಿಯನ್ನು ಪ್ರಜ್ವಲಿಸೆ ಮೃತ್ಯುವು । ಬೆನ್ನ ಹಿಡಿದನು ಶೂರ್ಪದಿಂದಲಿ ಕ್ಷಯವು ಧನಧಾನ್ಯ ॥179॥

ಬಿದಿರಫುಂಕಣೆ ಬೀಸಣಿಗೆಯಲಿ । ವೊದಗಿ ಬೆಂಕಿ ಪ್ರದೀಪ್ತ ಮಾಡುತ । ಲದರೊಳಗೆ ಅರ್ಪಿಸಿರಿ ನೀವಾ ಶುಷ್ಕಕಾಷ್ಠ ವನು ॥
ವಿಧಿ ಪುರಸ್ಸರವಾಗಿ ಕರದಿ ಸ- । ಮಿಧನ ಧರಿಸುತ ಶುದ್ಧ ದ್ರವ್ಯವ । ನದರೊಳಗೆ ಚೆಲ್ಲುವುದು ವಿಪ್ರನು ಭಕ್ತಿಪೂರ್ವಕದಿ ॥180॥

ಜ್ವಾಲೆ ಬರುತಿಹ ಸ್ಥಾನದಲಿ ದ್ರ- । ವ್ಯಾಳಿಯನು ಚೆಲ್ಲುವುದು ಸಮಿಧೆಯ । ಶಾಲಿ ತಂಡುಲ ಗೋದಿ ಜವೆ ಜೋಳವನು ಚೆಲ್ಲುವುದು ॥
ಹಾಲು ನೀವಾರಗಳು ಸಹಿತವೆ । ಜ್ವಾಲೆಗರ್ಪಿಸಬಹುದು ತುಪ್ಪವ । ಮೇಲೆ ಸಂಪ್ರೋಕ್ಷಿಸುತ ಸಂಸ್ಕೃತವಾಗಲಾ ಧಾನ್ಯ ॥181॥

ತರಿಸೆ ಸಮಿಧೆಯ ಶೂದ್ರಹಸ್ತದಿ । ತೊರೆಯುವುದು ಹೋಮಕ್ಕೆ ಸಲ್ಲದು । ಅರುಹುವೆನು ನಾ ಸಂಖ್ಯೆಯನು ಕೇಳನಲನಾಹುತಿಗೆ ॥
ಇರಲು ಬೇಕರುವತ್ತು ದಾಣೆ ಗ- । ಆರಲು ಬಾರದ ಹೆಚ್ಚು ಕಡಿಮೆಯ- । ನಿರತ ಹೋಮಾಹುತಿಯ ಪರಿಮಾಣವನು ಮರೆಯದಿರಿ ॥182॥

ಘೃತವು ಸಿಗದಿರೆ ತಿಲದ ತೈಲಾ- । ಹುತಿಗೆ ಯೋಗ್ಯವು ತಿಲಗಳೇ ಯಾ- । ಹುತಿಗೆ ಯೋಗ್ಯವು ತೈಲ ಸಿಗದಿರೆ ಶಾಸ್ತ್ರಸಿದ್ಧವಿದು ॥
ಸತತ ವೀಪರಿ ಹೋಮ ತೀರಲು । ಕ್ಷೀತಿಯಮರರಾ ಬ್ರಹ್ಮಯಜ್ಞದ । ಕೃತಿಯ ತರ್ಪಣ ವಿಧಿಯ ನಾನುಸುರುವೆನು ಕೇಳುವುದು ॥183॥

ತೀರಿಸುತ ಮಧ್ಯಾಹ್ನ ಸಂಧ್ಯೆಯ । ತೀರಿಸುತ ಹೋಮವನು ಬೆಳಗಿನ । ತೀರಿಸುತಲಥವಾ ಹಗಲಿನಲಿ ವೈಶ್ವದೇವನನು ॥
ತೀರಿಸಿರಿ ನೀವ್ ಬ್ರಹ್ಮಯಜ್ಞವ । ಬಾರಿಯೊಂದೇ ಪ್ರತಿದಿವಸದಲಿ । ನೀರಿನಾಶಯವಿರೆ ಸಮೀಪದಿ ಸ್ಥಾನವದು ಯೋಗ್ಯ ॥184॥

ಮೂರು ಪ್ರಾಣಾಯಾಮ ಮಾಡು । ಚ್ಚಾರಿಸುವುದೈ ವಿದ್ಯುಸಿ ವಾ- । ಮೋರು ಮೇಲಕೆ ಪಾದದಕ್ಷಿಣ ಸ್ಥಾಪಿಸುವುದಾಗಾ ॥
ಮೋರೆ ಪೂರ್ವೋತ್ತರಕೆ ಮಾಡುತ । ಚಾರು ದರ್ಭೆಯ ಬಲದಿ ಕೈಯೊಳ । ಗೇರಿಸುತಲೆಡಕಾಲಿನಲಿ ಆಸನವ ಹಾಕುವುದು ॥185॥

ಎರಡು ಕರ ಸಂಪುಟವ ಮಾಡುತ । ಲಿರಿಸಬೇಕದ ಬಲ ಕಾಲಿಲಿ । ಭರದೊಳದನಂತರ ಕೆ ಜಪಿಸಿರಿ ಪ್ರಣವಗಳ ಮೂರು ॥
ನಂತರ ಓಂ ಭೂರ್ಭುವಸ್ವಃ । ತತ್ಸವಿತುರ್ವರೇಣ್ಯಂ । ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋನಃ ಪ್ರಚೋದಯಾತ್ ॥186 ॥ ಎಂತ ಹತ್ತು ಬಾರಿ ಜಪಿಸಿ

ಸ್ವಾಧ್ಯಯನ ದಿವಸದಲಿ ವಿಪ್ರರು । ವೇದಗಳ ಪಠಿಪುದು ಯಥಾಮತಿ । ವೇದ ಪಠಣದ ವರ್ಜ ದಿವಸದಿ ಸ್ವಲ್ಪ ಋಚೆ ಸಾಕು ॥
ಸಾಧ್ಯವಿಲ್ಲದ ಪಕ್ಷದಲಿ ನೀ । ವಾದರದೊಳುಚ್ಚಾರ ಮಾಡಿರಿ । ಮೋದದಿಂದ ನಮೋ ಬ್ರಹ್ಮಣೆಯೆಂಬ ಮಂತ್ರವನು ॥187॥

ವೃಷ್ಟಿರಸಿ ಮಂತ್ರದಲಿ ಜಲವನು । ಮುಟ್ಟಿ ತರ್ಪಣ ಮಾಡುವುದು ಬಹು । ಶ್ರೇಷ್ಠ ದ್ರವ್ಯವು ದರ್ಭೆ ವಸು ರುದ್ರಾದಿ ದೇವರಿಗೆ ॥
ತುಷ್ಟಿಯನು ಕೊಡುತಿಹುದು ಬಹು ಸಂ- । ಕಷ್ಟವಾದರೆ ಮೂರುಬಾರಿಗೆ । ಶ್ರೇಷ್ಠವಹ ಗಾಯತ್ರಿ ಜಪಿಸಲು ವೇದಪಠಣಫಲಾ ॥188॥

ಕುಶದ ತುದಿಯಿಂ ದೇವತರ್ಪಣ । ಋಷಿಗಳಿಗೆ ಕುಶಮಧ್ಯ ತರ್ಪಣ । ಕುಶದ ಮೇಲೋದಕದಿ ಪಿತೃತರ್ಪಣವ ಮಾಡುವುದು ॥
ಕುಶನ ಭೂಮಿಯೊಳಿಟ್ಟು ತರ್ಪಣ । ವೆಸಗುವುದು ಪಾತ್ರದಲಿ ತರ್ಪಣ । ವೆಸಗಲಾರದು ಮನೆಯೊಳಗೆ ಭೂಮಿಯಲಿ ನೀರಿನಲಿ ॥189॥

ಧರಿಸಬೇಕೈ ಕರದಿ ತಿಲವನು । ಇರಿಸಬಾರದು ಶಿಲೆಯ ಕಲ್ಲಿಲಿ । ಧರೆಯ ತಳದಲಿ ಕಾಷ್ಠ ಪಾತ್ರದಿ ರೋಮಕೂಪದಲಿ ॥
ಹೊರಗೆ ಜಲದಾಶಯತಿಲದಿಂ- । ದಿರರೆ ತರ್ಪಣ ಮಾಳ್ಪು ದುಚಿತವು । ಮರೆಯಬಾರದು ಮನೆಯೊಳಗೆ ತಿಲತರ್ಪಣವೆ ತ್ಯಾಜ್ಯಾ ॥190॥

ಶ್ವೇತ ತಿಲ ದೇವರಿಗೆ ಋಷಿ ಸಂ- । ವ್ರಾತಕುಚಿತವು ಧೂಮ್ರತಿಲಪಿತೃ । ವ್ರಾತಕುಚಿತವು ಕೃಷ್ಣ ವರ್ಣದ ತಿಲವು ತರ್ಪಣಕೆ ॥
ರೀತಿಯನು ಪೇಳುವೆನು ಯಜ್ಞು ಪು । ವೀತಧಾರಣ ಸವ್ಯ ದೇವ । ವ್ರಾತಕೈ ಋಷಿಗಳಿಗೆ ಮಾಲೆಯು ಪಿತರಿಗಪಸವ್ಯಾ ॥191॥

ಅಂಜಲಿಯು ಒಂದಿಹುದು ದೇವರಿ- । ಗಂಜಲಿದ್ವಯ ಋಷಿಗಳಿಗೆ ಮೇ- । ಣಂಜಲಿತ್ರಯ ಪಿತರರಿಗೆ ಈ ಪರಿಯ ತರ್ಪಣವು ॥
ಅಂಜಲಿತ್ರಯ ಮಾತೆಗಿರುವುದು । ಅಂಜಲಿಯು ಒಂದಿಹುದು ಸ್ತ್ರೀಯರಿ । ಗಂಜಲಿದ್ವಯ ಗುರುಸತಿಗೆ ಸಾಪತ್ನ ಮಾತೆಗದು ॥192॥

ತರಣಿ ಮಂಗಳ ಶುಕ್ರವಾರದಿ । ವರ ಮಘಾ ನಕ್ಷತ್ರ ದಿನದಲಿ । ಪರಮನಂದಾ ತಿಥಿಗಳಲಿ ತಿಲತರ್ಪಣವು ತ್ಯಾಜ್ಯಾ ॥
ಇರಲು ಮಂಗಲಕಾರ್ಯ ಮನೆಯಲಿ । ತೊರೆಯುವುದು ತಿಲತರ್ಪಣವ ತಾ । ನಿರದೆ ಬಿಡುವುದು ತಾನು ಹುಟ್ಟಿದ ದಿವಸ ತಾರೆಯಲಿ ॥193॥

ತಿಲದಿ ತರ್ಪಣ ವ್ಯರ್ಜ್ಯವೆಂದನು । ಜಲದಿ ಮಾಡುವುದುಚಿತವದು ಕೈ- । ತಳದಿ ದರ್ಭದ ಹಿಡಿದು ಚಿನ್ನದ ಮುದ್ರಿಕೆಯು ಯಿರಲು ॥
ತೊಳೆಯದಾ ಕೈಗಳನು ಸ್ನಾನವು । ತಿಳಹೊರತು ಮಾಡಲ್ಕೆ ತರ್ಪಣ । ಕಳೆದು ದಕ್ಷಿಣೆ ಶ್ರಾದವಿವು ನಿಷ್ಫಲಗಳೀ ಜಗದಿ ॥194॥

ಮಾಸವಾಶ್ವೀನ ಕೃಷ್ಣ ಪಕ್ಷದ । ಮಾಸ ಹಿಂದಿನ ದಿನಸ ಯಮನಿಗೆ । ತೋಷದಿಂದಲಿ ತರ್ಪಣವ ಕೊಡಬೇಕು ಪ್ರತಿ ವರುಷಾ ॥
ಲೇಸಿನಿಂದೊಂದೊಂದು ತಿಲದ ವಿ- । ಶೇಷ ತರ್ಪಣ ಮಾಡುವುದು ಭವ । ಪಾಶ ಹರಿವುದು ಇಲ್ಲವಿದಕೆ ನಿಷೇಧ ಶಾಸ್ತ್ರದಲಿ ॥195॥

ಯಮಾಯ ಧರ್ಮರಾಜಾಯ । ಮೃತ್ಯುವೇ ಚಾಂತಕಾಯ ಚ । ವೈವಸ್ವತಾಯ ಕಾಲಾಯ ಸರ್ವಭೂತಕ್ಷಯಾಯ ಚ ॥
ಔದುಂಬರಾಯ ದಧ್ನಾಯ । ನೀಲಾಯ ಪರಮೇಷ್ಠಿ ನೇ । ವೃಕೋದರಾಯ ಚಿತ್ರಾಯ ಚಿತ್ರಗುಪ್ತಾಯ ತೇನಮಃ ॥196॥

ಇಂತು ಹದಿಮೂರಿಹವು ನಾಮಗ । ಕಂತಕನಿಗದನುಚ್ಚರಿಸುತಲಿ । ಸಂತಸದೊಳೊಂದೊಂದು ನಾಮಕೆ ಅಂಜಲಿ ತ್ರಯವು ॥
ಇಂತು ತರ್ಪಣ ಕೊಡಲುಪಾತಕ-। ಸಂತತಿಯು ಸುಡುತಿಹುದು ವ್ಯಾಧಿಯು । ಚಿಂತೆ ತಟ್ಟದು ಶನಿಯು ಮೇಣಪಮೃತ್ಯು ಪೀಡಿಸದು ॥197॥

ಸುರನದಿಯ ಸುತಭೀಷ್ಮ ನಿಂಗಾ- । ವರುಷಕೊಂದಾವರ್ತಿ ತರ್ಪಣ । ಮರೆಯದಲಿ ಕೊಡಬೇಕು ಭೀಷ್ಮಾಷ್ಟಮಿಯ ದಿವಸದಲಿ ॥
ತರಣಿಗರ್ಘ್ಯವ ಮೂರು ತದನಂ । ತರದೊಳಿತ್ತರೆ ವಿಪ್ರರೆಲ್ಲರು । ದುರಿತವೆಲ್ಲವು ನಾಶವಪ್ಪುದು ಯೆಂದನಾ ಗುರುವು ॥198॥

ಗುರು ನೃಸಿಂಹಸರಸ್ವತಿಯು ವಿ- । ಸ್ತರಿಸಿದನು ಬ್ರಾಹ್ಮಣರ ಆಹ್ನಿಕ । ಪರಿಯನೆಲ್ಲವ ವಿಪ್ರರಿಗೆ ತಾ ಕರುಣಭಾವದಲಿ ॥
ಧರೆಯೊಳಿದನೆಲ್ಲವನು ಯಾರಾ । ಚರಿಪರವರಿಗೆ ಸರ್ವಸಿದ್ಧಿಯು । ಬರವುದೈ ನಿಜವೆಂದು ಪೇಳ್ದನು ವಿಷ್ಣು ಗುರುಮೂರ್ತಿ ॥199॥

॥ ಅಧ್ಯಾಯ 36 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 37

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುವರನು ವಿಸ್ತರಿಸಿದನು ಭೂ- । ಸುರರ ನಿತ್ಯಾಹ್ನಿಕ ಪ್ರಕಾರವ । ನಿರತ ಮಾಡುವ ದೇವಪೂಜಾ ಪರಿಯನೆಲ್ಲವನು॥

ಹೊಲೆಯನಿರುವನು ಹೊರವಳಯದಲಿ । ನೆಲಿಸುತಿಹನೆನ್ನುವರು ನೋಡಲು । ಹೊಲೆಯನಿರುವನು ತನ್ನ ದೇಹದಿ ಕ್ರೋಧರೂಪದಲಿ ॥
ತಿಳಿಯಲಿವನನು ಹೊರಗೆ ಹಾಕದೆ । ಮಲಿನವಪ್ಪುದು ದೇಹ ಗುರುಪದ । ನಳಿನ ಭಜಿಸಲು ಸತ್ವಗುಣದಲಿ ಕ್ರೋಧ ಸಾಯುವುದು ॥1॥

ಚರಣಕೆರಗುತ ನಾಮಧಾರಕ- । ನರುಹಿದನು ಸಿದ್ಧನಿಗೆ ಮುಂದಿನ । ಗುರುಚರಿತವನು ವಿಸ್ತರಿಸಿ ಪೇಳೆನಗೆ ತೋಷದಲಿ ॥
ಹರುಷದಿಂದಲಿ ಸಿದ್ಧ ಮುನಿ ವಿ । ಸ್ತರಿಸಿದನು ಮುಂದಾದ ಕಥೆಯನು । ಗುರುಕೃಪಾಮೃತ ಬಡಿಸಿದನು ಮನಮುಟ್ಟಿ ಕುಡಿವಂತೆ ॥2॥

ಅರುಹುವೆನು ಕೇಳ್ನಾಮಧಾರಕ । ಧರೆಯೊಳಗೆ ನಾರಾಯಣನೆಯವ- । ತರಿಸಿಹನು ಗುರುರೂಪದಲಿ ಸಂದೇಹವಿದಕೇನು ॥
ಇರುವುದೇನಾಯಾಸವವನಿಗೆ । ಅರಿವನವನೆಲ್ಲವನು ಧರ್ಮವ । ಪರಿಕಿಸಲು ಚಾಂಡಾಲನಿಂ ವೇದವನು ನುಡಿಸಿದನು ॥3॥

ಧರೆಯಲೀ ಗುರುರೂಪದಲಿಯವ । ತರಿಸಿಹರು ತ್ರೈಮೂರ್ತಿಗಳು ಮೇ- । ಣಿ ರುವದರಿಂ ಭಕ್ತಜನರಿಗೆ ಕಾಮಧೇನುಪರಿ ॥
ಧರೆಯೊಳಿಹ ಪಾಮರರು ಭವಸಾ- । ಗರವ ದಾಟುವ ಹೇತುವಿಂದಲಿ । ಅರುಹಿದರು ಬ್ರಾಹ್ಮಣರ ದೈನಿಕ ಧರ್ಮಕರ್ಮಗಳಾ ॥4॥

ದುರಿತನಾಶನಸಾಧನಂಗಳ- । ನರುಹುವೆನು ಶ್ರೀಖಂಡ ಮಣಿ ಘೃತ । ವರಣಿ ಕೃಷ್ಣಾಜಿನ ತಿಲವು ಸಂಗ್ರಾಹ್ಯವಿವು ನಿರತ ॥
ಇರಲುಬೇಕೈ ಶುಕ್ಲ ಪಕ್ಷದಿ । ನಿರತ ಸಾರಸಪಕ್ಷಿ ಮನೆಯಲಿ । ಇರಲು ಬೇಕೈ ಧೇನು ಪಾವನ ಸದ್ಗ್ರಹಸ್ಥನಲಿ ॥5॥

ದೇವಪೂಜಾವಿಧಿಯ ಪೇಳ್ವೆನು । ಸಾವಧಾನದಿ ಕೇಳಿರೆಲ್ಲರು । ದೇವಗೃಹವನು ಸಾರಿಸುತ ಸ್ವಚ್ಛತೆಯಲಿಡಬೇಕು ॥
ದೇವಗೃಹವನಲಂಕರಿಸುತಲಿ । ಭಾವಭಕುತಿಯಲಾರಭಿಸುವುದು । ದೇವಪೂಜೆಯ ಕುಳಿತು ಶುದ್ಧ ಪವಿತ್ರ ಆಸನದಿ ॥6॥

ಮನೆಯ ಸಂಮಾರ್ಜನದ ಪರಿಯನು । ವಿನಯದಿಂ ಪೇಳುವೆನು ಪಾತ್ರವು । ಮಿರಗು ತಿರಬೇಕದುವೆ ತಾಮ್ರ ಸುವರ್ಣ ಬೆಳ್ಳಿಯದು ॥
ಇನಿತು ಸಿಗದಿರೆ ಮಣ್ಣು ಪಾತ್ರವು ಮನೆಯ ಸಂಮಾರ್ಜನಕೆ ಯೋಗ್ಯವು । ಅನುಚಿತವು ಕೇಳ್ಕಾಂಸ್ಯ ಪಾತ್ರವು ಸದ್ಗ್ರಹಸ್ಥನಿಗೆ ॥7॥

ಸಾರಿಸಲು ಕನ್ಯಕೆಯು ನವವಧು । ಶೂದ್ರ ಜಾತಿಯ ನರರು ಸಲ್ಲರು । ನೈರುತಿಯ ದಿಕ್ಕಿನಲಿ ಪ್ರಾರಂಭಿಸುವುದುತ್ತಮವು ॥
ಸಾರಿಸುವುದನುಚಿತವು ಪಿಡಿಯುತ । ನೀರಪಾತ್ರವ ಬಲದ ಕೈಯಲಿ । ಸಾರಿಸುವುದನುಚಿತವು ನೀರಲಿ ರಾತ್ರಿಕಾಲದಲಿ ॥8॥

ರಾತ್ರಿಯಲಿ ಸಾರಿಸುವ ಕೆಲಸವ- । ಗತ್ಯವಾದರೆ ಭಸ್ಮದಿಂದ ಪ- । ವಿತ್ರ ಸಂಮಾರ್ಜನವ ಮಾಡುವುದುಚಿತವೈ ಕೇಳು ॥
ಮತ್ತೆ ದೇವರ ಕೋಣೆಯಲಿ ವಿ- । ಪ್ರೋತ್ತಮರು ರಂಗವಲಿ ಹಾಕಿ ಪ್ರ-। ಶಸ್ತ ಮಾಡುತ ದೇವಪೂಜೆಯನಾರಭಿಸಬೇಕು ॥9॥

ಮೂರು ಬಾರಿಗೆ ದೇವತಾರ್ಚನೆ । ಧಾರುಣೀಸುರರಿಂಗೆ ಯೋಗ್ಯವು । ಮೂರು ಬಾರಿಗೆ ದ್ವಿಜರು ಮಾಡುವ ಸಂಧ್ಯೆಯಂದದಲಿ ॥
ಮೂರು ಬಾರಿಗೆ ಸಾಧ್ಯವಿರದಿರೆ । ಚಾರು ಪ್ರಾತಃಕಾಲ ವುತ್ತಮ । ಯಾರಿಗದು ಸಾಧಿಸದಿರಲು ಮಧ್ಯಾಹ್ನ ವುತ್ತಮವು ॥10॥

ಮತ್ತೆ ಸಂಧ್ಯಾಕಾಲದಲಿ ಹೂ । ಭಕ್ತಿಯಲಿ ಯೇರಿಸುವುದಥವಾ । ಭುಕ್ತಿ ಕಾಲಕೆ ಮಂತ್ರಪುಷ್ಪದಿ ಹೂವನೇರಿಸಿರಿ ॥
ನಿತ್ಯದಲಿ ಮಾಡದಿರೆ ಪೂಜೆಯ । ಮೃತ್ಯುವಶವಹ ನರನು ನರಕಕೆ । ಪಾತ್ರನಾಗುವನವನು ಸಂತತ ದ್ವಿಜರೆ ಕೇಳುವುದು ॥11॥

ಆರುಪರಿ ಪೂಜಾಪ್ರಕಾರವು । ನೀರಿನಿಂದರ್ಚಿಸಲಿಕಾ ಹರಿ । ಭಾರಿ ಸಂತೋಷಿಪನು ನಾರಾಯಣ ಜಗನ್ನಾಥಾ ॥
ಬೇರೆಯೊಂದು ಪ್ರಕಾರವ ಶ್ರೇಯವು । ಭೂರಿಯಿರುವುದು ಅಗ್ನಿ ಪೂಜೆಗೆ । ಚಾರುಮಾನಸ ಪೂಜೆಯುತ್ತಮವೆಂದು ಪೇಳುವುದು ॥12॥

ತೃಪ್ತಿ ನಾರಾಯಣಗೆ ಸೂರ್ಯನ । ಭಕ್ತಿಪೂರ್ವಕವಾಗಿ ಪೂಜಿಸೆ । ಮೂರ್ತಿಪೂಜೆಯು ಹೋಮಪಾತ್ರದ ಪೂಜೆ ಸಾಮಾನ್ಯಾ ॥
ಚಿತ್ತಶುದ್ಧಿ ಯಜ್ಞಪುರುಷನ । ನಿತ್ಯದಲಿ ಪೂಜಿಸಲು ಪ್ರಾಜ್ಞರು । ಮುಕ್ತಿದಾಯಕವಿಹುದು ಮುಖ್ಯವು ಯಜ್ಞ ಪೂಜೆಯದು ॥13॥

ತುರುಕರುವ ಪೂಜಿಸಿರಿ ಮೇಣ್ ಭೂ- । ಸುರರ ಪೂಜೆ ವಿಶೇಷ ಮಾನ್ಯವು । ಗುರುವರ ಪೂಜಿಸೆ ಭಕ್ತಿಯಲಿ ತ್ರೈಮೂರ್ತಿ ವೊಲಿಯುವರು ॥
ಗುರುವೆ ತ್ರೈಮೂರ್ತಿಗಳೆನುತಲಿ । ತಿರುತಿರುಗಿ ನಿಗಮಾಗಮಂಗಳು । ಪರಿಪರಿಯಲೊದರುವವು ಶ್ರೀಗುರುವಿಹನು ಕಲ್ಪತರು ॥14॥

ಕಲಿಯುಗದಿ ಕಲಿಯ ಪ್ರಭಾವದಿ । ನೆಲಸಬಾರದು ಮನದಿ ಸ್ಥೈರ್ಯವು । ತಿಳಿಯುತೀಪರಿ ಶಾರ್ಙಧರ ರಚಿಸಿದನುಪಾಯವನು ॥
ಇಳೆಯನುದ್ಧರಿಸಲಿಕೆ ಶ್ರೀಹರಿ । ಸುಲಭ ಯುಕ್ತಿಯ ಮಾಡಿದನು ತಾ । ತಿಳಿಯೆ ಶಾಲಿಗ್ರಾಮ ತೀರ್ಥವು ಪಾಪಹರಿಸುವುದು ॥15॥

ಗುರುವಿನಾಜ್ಞೆಯ ಪಡೆದು ಧರಣೀ । ಸುರರು ಪ್ರತಿಮೆಯ ಪೂಜೆ ಮಾಳ್ಪುದು । ಕರಣಶುದ್ಧಿಯಲಾಗಮೋಕ್ತದಿ ಭಾವಭಕುತಿಯಲಿ ॥
ಅರುಹಬಾರದು ವೇದಮಂತ್ರವ । ತರುಣಿವರ್ಗಕೆ ಶೂದ್ರವರ್ಗಕೆ । ಗುರುನಿರೋಪದೊಳಿವರಿಗುಚಿತ ಪುರಾಣ ಮಂತ್ರಗಳು ॥16॥

ಕಾಷ್ಠ ಪಾಷಾಣಗಳ ಮೂರ್ತಿಗ- । ಳಿಷ್ಟದೇವತೆಯಾಗಿ ಸಕಲಾ । ಭೀಷ್ಟವನು ಕೊಡುತಿಹವು ಪೂಜಿಸೆ ಗುರುವಿನಾಜ್ಞೆಯಲಿ ॥
ಉಟ್ಟು ಮಡಿವಸ್ತ್ರಗಳ ಮೇಣು ವಿ- । ಶಿಷ್ಟ ಪೀಠದಿ ಕುಳಿತು ಭಕ್ತಿಯೊ- । ಳಿಷ್ಟ ದೇವರ ಪೂಜೆಯಾರಂಭಿಸುವುದೈ ದ್ವಿಜರು ॥17॥

ಮೂರು ಪ್ರಾಣಾಯಾಮಗಳ ತಾ । ತೀರಿಸಿದ ಬಳಿಕೇಭ್ಯೋಮಾತಾ । ಚಾರು ಮಂತ್ರೋಚ್ಚಾರದಲಿ ಪರಮಾತ್ಮ ಚೇತವಿಸಿ ॥
ತೀರಿಸುತ ದ್ವಾದಶ ಪ್ರಣವಗಳ । ನೀರಿನಿಂದಲಿ ಪ್ರೋಕ್ಷಿಸುವುದು ಶ- । ರೀರ ತನ್ನಯ ಮೇಲೆ ಸಂಕಲ್ಪಾದಿ ಮಾಡುವುದು ॥18॥

ಬಲದ ಭಾಗದೊಳಿಟ್ಟು ದೇವರ । ಕಲಶ ಪೂಜೆಯ ಮಾಡಿ ವಿಧಿಯಲಿ । ಬಳಿಕ ಶಂಖವ ಘಂಟೆಯನು ಪೂಜಿಪುದು ನೇಮದಲಿ ॥
ಹಳೆಯ ನಿರ್ಮಾಲ್ಯವ ವಿಸರ್ಜಿಸಿ । ಕಳೆವುದದ ನೈಋತ್ಯ ಮೂಲೆಗೆ । ತೊಳೆದು ಬೆಳಗಿದ ವಸ್ತ್ರವನು ಹಾಸುವುದು ದೇವರಿಗೆ ॥19॥

ಬಳಿಕ ದೀಪವ ಪ್ರಜ್ವಲಿಸುವುದು । ಬಳಿಕ ಶ್ರೀಗುರು ಚರಣ ಸ್ಮರಿಸುತ । ಚಲುವದರ್ಶನ ಮಾಡುವುದು ಪೀಠಕ್ಕೆ ಭಕ್ತಿಯಲಿ ॥
ಹೀಗೆ ತಿಳಿದು ಮನಸಾಕಾಯವಾಚದಿ । ಘಳಿಲನೇ ಪೂಜೆಯನು ಮಾಳ್ಪುದು । ಬಳಿಕ ದ್ವಾರಂಗಳನು ದಿಶೆಗಳನರ್ಚಿಸುವುದುಚಿತ ॥20॥

ಓಂ ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ । ಸ ಭೂಮಿಂ ವಿಶ್ವತೋ ವೃತ್ವಾತ್ಯತಿಷ್ಠದ್ದಶಾಂಗುಲಂ ॥
ಆಗಚ್ಛ ದೇವದೇವೇಶ ತೇಜೋರಾಶೇ ಜಗತ್ಪತೇ । ಕ್ರಿಯಮಾಣಾಂ ಮಯಾ ಪೂಜಾಂ ಗೃಹಾಣ ಪುರುಷೋತ್ತಮ ॥
ಎಂದು ಆವಾಹನವನರ್ಪಿಸಿ॥

ಓಂ ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಂ । ಉತಾಮೃತತ್ವಸ್ಯೇಶಾನೋ ಯದನ್ನೇನಾ ತಿರೋಹತಿ ॥
ನಾನಾ ರತ್ನ ಸಮಾಯುಕ್ತಂ ಕಾರ್ತಸ್ವರವಿಭೂಷಿತಂ । ಆಸನಂ ದೇವದೇವೇಶ ಪ್ರೀತ್ಯರ್ಥಂ ಪ್ರತಿಗೃಹ್ಯತಾಂ ॥
ಎಂದು ಉಚ್ಚಾರಿಸುತ ಆಸನವನರ್ಪಿಸಿ॥

ಓಂ ಏತಾವಾನಸ್ಯ ಮಹಿಮಾ ಅತೋಜ್ಯಾಯಾಂಶ್ಚ ಪೂರುಷಃ । ಪಾದೋಸ್ಯ ವಿಶ್ವಾಭೂತಾನಿ ತ್ರಿಪಾದಸ್ಯಾಮೃತಂ ದಿವಿ ॥ ಪಾದ್ಯಂ ಗೃಹಾಣ ದೇವೇಶ ಸರ್ವಕ್ಷೇಮಸಮರ್ಥಭೋ । ಭಾಸಮರ್ಪಿತಂ ದೇವ ಲೋಕನಾಥ ನಮೋಸ್ತುತೇ ॥ ಎಂದು ಉಚ್ಚಾರಿಸುತ ಪಾದ್ಯವ ಕೊಡಿರಿ॥

ಓಂ ತ್ರಿಪಾದೋರ್ಧ್ವ ಉದೈತ್ಪುರುಷಃ ಪಾದೋ ಸ್ಯೇಹಾಭವತ್ ಪುನಃ । ತತೋ ವಿಷ್ವಙ್ ವ್ಯಕ್ರಾಮತ್ ಸಾಶನಾನಶನೇ ಅಭಿ ॥ ಸಮಸ್ತ ದೇವದೇವೇಶ ನಮಸ್ತೆ ಧರಣೀಧರ । ನಮಸ್ತೇ ಜಗದಾಧಾರ ಅರ್ಘ್ಯಂ ನಃ ಪ್ರತಿಗೃಹ್ಯತಾಂ ॥ ಎಂದು ಅರ್ಘ್ಯಪ್ರದಾನ ಮಾಳ್ಪುದು॥

ಓಂ ತಸ್ಮಾದ್ವಿರಾಳ ಜಾಯತ ವಿರಾಜೋ ಅಧಿಪುರುಷ ಸಜಾತೋ ಅತ್ಯರಿಚ್ಯತ ಪಶ್ಚಾದ್ಭೂಮಿಮಥೋ ಪರಃ ॥ ಕರ್ಪೂರವಾಸಿತಂ ತೋಯಂ ಮಂದಾಕಿನ್ಯಾಃ ಸಮಾಹೃತಂ । ಆಚಮ್ಯತಾಂ ಜಗನ್ನಾಥ ಮಯಾ ದತ್ತಂ ಹಿ ಭಕ್ತಿತಃ ॥ ಎಂದು ಆಚಮನೀಯ ಕೊಡುವುದು॥

ಓಂ ಯತ್ಪುರುಷೇಣ ಹವಿಷಾ ದೇವಾ ಯಜ್ಞಮತನ್ವತ । ವಸಂತೋಽಸ್ಯಾಸೀದಾಜ್ಯಂ ಗ್ರೀಷ್ಮ ಇಧ್ಮಃ ಶರದ್ಧವಿಃ ॥ ಗಂಗಾ ಸರಸ್ವತೀರೇನಾಪಯೋಷ್ಣೀನರ್ಮದಾ ಜಲೈಃ । ಸ್ನಾಪಿತೋ ಮಯಾ ದೇವ ತಥಾ ಶಾಂತಿಂ ಕುರುಷ್ವ ಮೇ ॥ ಎಂದು ಸ್ನಾನ ಸಮರ್ಪಣೆಯು ಪಂಚಾಮೃತದಿ ಬಳಿಕಾ ॥21॥

ಓಂ ಆಪ್ಯಾಯಸ್ವಸಮೇತುತೇ ವಿಶ್ವತಃ ಸೋಮವೃಷ್ಣಿಯಮ್ ಭವಾವಾಜಸ್ಯ ಸಂಗತೇ ॥ ಕಾಮಧೇನೋಃ ಸಮುದ್ಭುತಂ ದೇವರ್ಷಿಪಿತೃ ತೃಪ್ತಿ ದಂ ॥ ಪಯೋ ದದಾಮಿ ದೇವೇಶ ಸ್ನಾನಾರ್ಥಂ ಪ್ರತಿಗೃಹ್ಯತಾಂ ॥ ಪಯಃಸ್ನಾನಂ ಸಮರ್ಪಯಾಮಿ । ಪಯಃಸ್ನಾನಾನಂತರಂ ಶುದ್ಧೋದಕ ಸ್ನಾನಂ ಸಮರ್ಪಯಾಮಿ॥

ಓಂ ದಧಿಕ್ರಾವಣ್ಣೋ ಅಕಾರಿಷಂ ಜಿಷ್ಣೋರಶ್ವಸ್ಯ ವಾಜಿನಃ । ಸುರಭಿನೋ ಮುಖಾಕರತ್ಪ್ರಣ ಆಯಂಷಿ ತಾರಿಷತ್ ॥ ಚಂದ್ರಮಂಡಳ ಸಂಕಾಶಂ ಸರ್ವದೇವಪ್ರಿಯಂ ದಧಿ । ಸ್ನಾನಾರ್ಥಂ ತೇ ಮಯಾ ದತ್ತಂ ಪ್ರೀತ್ಯರ್ಥಂ ಪ್ರತಿಗೃಹ್ಯತಾಂ ॥ ದಧಿಸ್ನಾನಂ ಸಮರ್ಪಯಾಮಿ ॥ ದಧಿಸ್ನಾನಾನಂತರಂ ಶುದ್ಧೋದಕ ಸ್ನಾನಂ ಸಮರ್ಪಯಾಮಿ॥

ಓಂ ಘೃತಂಮಿಮಿಕ್ಷೇ ಘೃತಮಸ್ಯ ಯೋನಿಘೃತೇ ಶ್ರಿತೋ ಘೃತಮಸ್ಯ ಧಾಮ । ಅನುಷ್ವದಮಾವಹ ಮಾದಯಸ್ವಸ್ವಾಹಾ ಘೃತಂ ವೃಷಭವಕ್ಷಿಹವ್ಯಂ ॥ ಆಜ್ಯಂ ಸುರಾಣಾಮಾಹಾರಂ ಆಜ್ಯಂ ಯಜ್ಞೇ ಪ್ರತಿಷ್ಠಿತಂ । ಆಜ್ಯಂ ಪವಿತ್ರಂ ಪರಮಂ ಸ್ನಾನಾರ್ಥಂ ಪ್ರತಿಗೃಹ್ಯತಾಂ ॥ ಘೃತ ಸ್ನಾನಂ ಸಮರ್ಪಯಾಮಿ ॥ ಘೃತಸ್ನಾನಾನಂತರಂ ಶುದ್ಧೋದಕ ಸ್ನಾನಂ ಸಮರ್ಪಯಾಮಿ॥

ಓಂ ಮಧುವಾತಾ ಋತಾಯತೇ ಮಧುಕ್ಷರಂತಿ ಸಿಂಧವಃ । ಮಾಧ್ವೀರ್ನಸ್ಸಂತ್ವೋಷಧೀಃ । ಮಧುನಕ್ತ ಮುತೋಷಸಿ ಮಧುಮತ್ಪಾರ್ಥಿವಗ್ಂ ರಜಃ । ಮಧುದ್ಯೌರಸ್ತು ನಃ ಪಿತಾ । ಮಧುಮಾನ್ನೋ ವನಸ್ಪತಿರ್ಮಧುಮಾಗ್ಂ ಅಸ್ತು ಸೂರ್ಯಃ । ಮಾಧ್ವೀರ್ಗಾವೋ ಭವಂತು ನಃ ॥

ಸರ್ವೌಷಧಿಸ ಮುತ್ಪನ್ನಂ ಪೀಯೂಷ ಸದೃಶಂ ಮಧು ಸ್ನಾನಾರ್ಥಂ ತೇ ಪ್ರಯಚ್ಛಾಮಿ ಗೃಹಾಣ ಪರಮೇಶ್ವರ ॥ ಮಧುಸ್ನಾನಂ ಸಮರ್ಪಯಾಮಿ ॥ ಮಧುಸ್ನಾನಾನಂತರಂ ಶುದ್ಧೋದಕಸ್ನಾನಂ ಸಮರ್ಪಯಾಮಿ॥

ಓಂ ಸ್ವಾದುಃ ಪವಸ್ವ ದಿವ್ಯಾಯ ಜನ್ಮನೇ ಸ್ವಾದು ರಿಂದ್ರಾಯ ಸುಹವೀತು ನಾಮ್ನೇ । ಸ್ವಾದುರ್ಮಿತ್ರಾಯ ವರುಣಾಯ ವಾಯವೇ ಬೃಹಸ್ಪತಯೇ ಮಧುಮಾಗ್ಂ ಅದಾಭ್ಯಃ ॥

ಇಕ್ಷ ದಂಡಸಮುದ್ಭೂತದಿವ್ಯಶರ್ಕರಯಾ ಹರಂ । ಸ್ನಾಪಯಾಮಿ ಸದಾ ಭಕ್ತ್ಯಾ ಪ್ರೀತೋ ಭವ ಸುರೇಶ್ವರ । ಶರ್ಕರಾಸ್ನಾನಂ ಸಮರ್ಪಯಾಮಿ ॥ ಶರ್ಕರಾಸ್ನಾನಾನಂತರಂ ಶುದ್ಧೋದಕಸ್ನಾನಂ ಸಮರ್ಪಯಾಮಿ॥

ಓಂ ಗಂಧದ್ವಾರಾಂ ದುರಾಧರ್ಷಾಂ ನಿತ್ಯ ಪುಷ್ಟಾಮ್ ಕರೀಷಿಣೀಂ ॥ ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಂ ॥

ಕರ್ಪೂರೈಲಾಸಮಾಯುಕ್ತಂ ಸುಗಂಧದ್ರವ್ಯ ಸಂಯುತಂ । ಗಂಧೋದಕಂ ಮಯಾ ದತ್ತಂ ಸ್ನಾನಾರ್ಥಂ ಪ್ರತಿಗೃಹ್ಯತ್ಯಾಂ ॥

ಗಂಧೋದಕಸ್ನಾನಂ ಸಮರ್ಪಯಾಮಿ । ಗಂಧೋದಕ ಸ್ನಾನಾನಂತರಂ ಶುದ್ಧೋದಕ ಸ್ನಾನಂ ಸಮರ್ಪಯಾಮಿ॥

ತೀರಿ ಸುತಲೀ ಪರಿಯ ಸ್ನಾನವ । ಚಾರು ಪಂಚಾಮೃತದಿ ಬಳಿಕು । ಚ್ಛಾರಿಸಿರಿತಂ ಯಜ್ಞ ಮೆಂಬುವ ಮಂತ್ರ ಭಕುತಿಯಲಿ॥

ಓಂ ತಂ ಯಜ್ಞಂ ಬರ್ಹಿಷಿ ಪ್ರೋಕ್ಷನ್ ಪುರುಷಂ ಜಾತಮಗ್ರತಃ । ತೇನ ದೇವಾ ಆಯಜಂತ ಸಾಧ್ಯಾ ಋಷಿಯಶ್ಚ ಯೇ ॥

ಸರ್ವಭೂಷಾಧಿಕೇ ಸೌಮ್ಯೇ ಲೋಕಲಜ್ಜಾ ನಿವಾರಣೆ । ಮಯೋಪಪಾದಿತೇ ತುಭ್ಯಂ ವಾಸಸೀ ಪ್ರತಿಗೃಹ್ಯತಾಂ ॥

ವಸ್ತ್ರಯುಗ್ಮಂ ಸಮರ್ಪಯಾಮಿ॥

ಓಂ ತಸ್ಮಾದ್ಯ ಜ್ಞಾತ್ಸರ್ವಹುತಃ ಸಂಭೃತಂ ಪ್ರಷದಾಜ್ಯಂ । ಪಶೂಸ್ತಾಂಶ್ಚಕ್ರೇ ವಾಯವ್ಯಾ ನಾರಣ್ಯಾನ್ ಗ್ರಾಮ್ಯಾಶ್ಚ ಯೇ ॥

ದೇವದೇವ ನಮಸ್ತೇಽಸ್ತು ತ್ರಾಹಿ ಮಾಂ ಭವಸಾಗರಾತ್ । ಬ್ರಹ್ಮಸೂತ್ರಂ ಸೋತ್ತರಿಯಂ ಗೃಹಾಣ ಪುರುಷೋತ್ತಮ ॥

ಯಜ್ಞೋಪವೀತಂ ಸಮರ್ಪಯಾಮಿ॥

ಹರಿದ್ರಾಸ್ವರ್ಣವರ್ಣಾಭಾ ಸರ್ವಸೌಭಾಗ್ಯದಾಯಿನೀ । ಸರ್ವಾಲಂಕಾರಮುಖ್ಯಾ ಹಿ ದೇವಿ ತ್ವಂ ಪ್ರತಿಗೃಹ್ಯತಾಂ ।

ಹರಿದ್ರಾಂ ಸಮರ್ಪಯಾಮಿ॥

ಹರಿದ್ರಾಚೂರ್ಣಸಂಯುಕ್ತಂ ಕುಂಕುಮಂ ಕಾಮದಾಯಕಂ । ವಸ್ತ್ರಾಲಂಕರಣಂ ಸರ್ವಂ ದೇವಿ ತ್ವಂ ಪ್ರತಿಗೃಹ್ಯತಾಂ ।

ಕುಂಕುಮಂ ಸಮರ್ಪಯಾಮಿ॥

ಜ್ಯೋತ್ಸ್ನಾಪತೇ ನಮಸ್ತುಭ್ಯಂ ನಮಸ್ತೆ ವಿಶ್ವರೂಪಿಣೇ । ನಾನಾಪರಿಮಳದ್ರವ್ಯಂ ಗೃಹಾಣ ಪರಮೇಶ್ವರ ।
ಸುವಾಸಿಕ ಪರಿಮಳದ್ರವ್ಯಂ ಸಮರ್ಪಯಾಮಿ॥

ಓಂ ತಸ್ಮಾದ್ಯ ಜ್ಞಾತ್ಸರ್ವಹುತಂ । ಎಂಬ ಮೇಲಿನ ಋಚೆಯನ್ನೇ ಉಚ್ಚರಿಸಿದ ನಂತರ ॥
ಶ್ರೀಖಂಡಂ ಚಂದನಂ ದಿವ್ಯಂ ಗಂಧಾಡ್ಯಂ ಸುಮನೋಹರಂ । ವಿಲೇಪನಂ ಸುರಶ್ರೇಷ್ಠ ಚಂದನಂ ಪ್ರತಿಗೃಹ್ಯತಾಂ ।
ಚಂದನಂ ಸಮರ್ಪಯಾಮಿ॥

ಅಕ್ಷತಾಸ್ತಂಡುಲಾಃ ಶುಭ್ರಾಃ ಕುಂಕುಮೇನ ವಿರಾಜಿತಾಃ । ಮಯಾ ನಿವೇದಿತಾ ಭಕ್ತ್ಯಾಗೃಹಾಣ ಪರಮೇಶ್ವರ ।
ಅಕ್ಷಾತಾನ್ ಸಮರ್ಪಯಾಮಿ॥

ಓಂ ತಸ್ಮಾದಶ್ವಾ ಆಜಾಯಂತ ಯೇ ಕೇಚೋಭಯಾದತಃ । ಗಾವೋಹ ಜಜ್ಞಿರೇ ತಸ್ಮಾಜಾತಾ ಅಜಾವಯಾಃ ॥
ಮಾಲ್ಯಾದೀನಿ ಸುಗಂಧಿನಿ ಮಾಲತ್ಯಾದೀನಿ ವೈ ಪ್ರಭೋ । ಮಯಾ ಹೃತಾನಿ ಪೂಜಾರ್ಥಂ ಪುಷ್ಪಾಣಿ ಪ್ರತಿಗೃಹ್ಯತಾಂ ॥
ಸೇವಂತಿಕಾ ಬಕುಲಚಂಪಕಪಾಟಲಾಬ್ಜೈಃ । ಪುನ್ನಾಗಜಾಜಿಕರವೀರರಸಾ ಲಪುಷ್ಪೈ । ಬಿಲ್ವ ಪ್ರವಾಲತುಲಸೀದಲಮಲ್ಲಿಕಾಭಿಃ ।
ತ್ವಾಂ ಪೂಜಯಾಮಿ ಜಗದೀಶ್ವರ ಮೇ ಪ್ರಸೀದ ॥ ನಾನಾವಿಧಾನಿ ಪುಷ್ಪಾಣಿ ಸಮರ್ಪಯಾಮಿ ॥22॥

ತಾನು ಹಚ್ಚಿದ ಗಿಡದ ಪುಷ್ಪಗ- । ಳೇನ ಹೇಳುವೆನುತ್ತಮೋತ್ತಮ । ಕ್ಷೋಣಿಯಲಿ ಮಧ್ಯಮವು ವನದಲಿ ಹುಟ್ಟಿರುವ ಹೂವು ॥
ತಾನು ಹಣವನು ಕೊಟ್ಟು ಕೊಂಡರೆ । ಹೀನವದು ಅಧಮಾಧಮವು ಮೇಣ್ । ನ್ಯೂನವಾಗಲು ಹಚ್ಚಿರುವ ಗಿಡ ಕೊಂಡು ಕೊಳಬೇಕು
॥23॥

ಶ್ವೇತಪುಷ್ಪಗಳುತ್ತ ಮೋತ್ತಮ । ಪೀತವಥವಾ ರಕ್ತ ಮಧ್ಯಮ । ಪಾತಕವು ಅಧಮಾಧಮಂಗಳು ಕೃಷ್ಣ ಪುಷ್ಪಗಳು ॥
ಮಾತನೊಂದನು ಪೇಳ್ವೆ ಕೇಳಿರಿ । ಭೂತಳದಿ ಬಿದ್ದಿರುವ ಪುಷ್ಪಗ- । ಳಾ ತೆರದಿ ಕೃಮಿಭಕ್ಷ ತಂಗಳವಿರುವ ಹೂ ವರ್ಜ್ಯ ॥24॥

ತುಳಸಿಬಿಲ್ವ ಸಹಸ್ರದಳ ತಂ । ಗಳವದಲ್ಲಾ ದೇವಪೂಜೆಗೆ । ಇಳೆಯೊಳಿವು ಸನ್ಮಾನನೀಯವು ಸರ್ವಕಾಲದಲಿ ॥
ನಳಿನ ಚಂಪಕ ಬಕುಳ ಮೇಣ್ಪಾ । ಟಳವು ಸೇವಂತಿಕೆಯು ಜಾಜಿಯು । ಹೊಳೆವ ಮಲ್ಲಿಗೆ ನಾಗಸಂಪಿಗೆ ಮುಖ್ಯ ಗ್ರಾಹ್ಯವಿವು ॥25॥

ಹರಿಯ ಪೂಜೆಗೆ ವರ್ಜ್ಯವಿವು ಧ- । ತ್ತೂರ ಕಪಿತ್ಥ ಕರಂಜವರ್ಕವು । ತೊರೆಯಿರೈ ಕೂಷ್ಮಾಂಡಸೇವಗೆಯಮರ ಪುಷ್ಪವನು ॥
ಅರುಣಕರವೀರವನು ತ್ಯಜಿಸಿರಿ । ಮರಳಿ ಗಿರಿಕರ್ಣಿಕೆಯ ನಿಗುಡಿಯ । ತೊರೆಯಿರೈ ಶ್ರೀವಿಷ್ಣು ಪೂಜೆಗೆ ಫಲವ ಹೇಳುವೆನು ॥26॥

ನರನು ಪೂಜಿಸಲರ್ಕಪುಷ್ಪದಿ । ಹರಣ ತಟ್ಟುವುದೆಮಗೆ ಮೇಣ್ ಧ- । ತ್ತೂರದ ಪುಷದಿ ಪುಣ್ಯನಾಶವು ಕುಂದದಲಿ ಕುಂದು ॥
ಗಿರಿಯಕರ್ಣಿಕೆಯಿಂ ಕುಲಕ್ಷಯ । ಬರುವುದೈ ಬಹು ಶೋಕ ಕಂಟಕ- । ವಿರುವ ಪುಷ್ಪದಿ ಕೋವಿದಾರದಿ ವಿತ್ತನಾಶವಲಾ ॥27॥

ಹರಿಯ ಪೂಜಾವಿಧಿಗೆ ಈ ಪರಿ । ಇರುವವೈ ಹೂಗಳವು ವರ್ಜ್ಯವು । ನರರು ಜಾಗ್ರತೆಯಿಂದಲಾರಿಸಬೇಕು ಪುಷ್ಪಗಳಾ ॥
ಹರನ ಪೂಜಾ ಸಮಯದಲಿ ನಾ- । ನರುಹುವೆನು ಕೇಳ್ತ್ಯಾಜ್ಯ ಹೂಗಳ । ಕರಿಯ ಹೂಗಳು ವರ್ಜ್ಯ ಕೇತಕಿ ಶಾಂಶಕಾದಿಗಳು ॥28॥

ಹರಗೆ ವರ್ಜ್ಯ ಕಪಿತ್ಥ ದಾಡಿಮ । ವರ ಕರಂಜವು ನಿಂಬ ಮಾಧವಿ । ತೊರೆವುದೈ ಘಾತಕಿಯ ಬಕುಲವ ನಿಂಬ ವಂಚಕವಾ ॥
ತೊರೆವುದೈ ಯೂಥಿಕೆಯ ಜಾಜಿಯ । ನಿರದೆ ಚೂತವ ಕುಂದಪುಷ್ಪವ । ಹರನಿಗರ್ಪಿಸಬೇಕು ಪ್ರಿಯವಹ ಶ್ವೇತ ಪುಷ್ಪಗಳಾ ॥29॥

ಸಲ್ಲದೈ ಗಣಪತಿಗೆ ತುಳಸಿಯು । ಸಲ್ಲದೈ ನಿಜ ದೂರ್ವೆ ಶಕ್ತಿಗೆ । ಎಲ್ಲವನು ನೀ ತಿಳಿದು ಪುಷ್ಪಾರ್ಪಣವ ಮಾಡಿದರೆ ॥
ಬಲ್ಲೆ ನಿಜದಲಿ ನಿಮ್ಮ ಕಾಮ್ಯಗ- । ಳೆಲ್ಲವನು ಸಾಧಿಸುತ ಕೇಳ್ಕೊನೆ । ಯಲ್ಲಿ ಮುಕ್ತಿಯ ಪಡೆವಿರೆಂದನು ಗುರುವು ತೋಷದಲಿ ॥30॥

ಓಂ ಯತ್ಪುರುಷಂ ವ್ಯಧಧುಃ ಕತಿಧಾ ವ್ಯಕಲ್ಪಯನ್ । ಮುಖಂ ಕಿಮಸ್ಯ ಕೌ ಬಾಹೂ ಕಾ ಊರೂ ಪಾದಾ ಉಚ್ಯೇತೆ ॥
ವನಸ್ಪತಿರಸೋತ್ಪನ್ನೋ ಗಂಧಾಢ್ಯೋ ಧೂಪಮುತ್ತಮಂ । ಆಘ್ರೇಯಃ ಸರ್ವದೇವಾನಾಂ ಧೂಪೋಯಂ ಪ್ರತಿಗೃಹ್ಯತಾಂ ।
ಧೂಪಂ ಸಮರ್ಪಯಾಮಿ॥

ಓಂ ಬ್ರಾಹ್ಮಣೋಸ್ಯ ಮುಖಮಾಸೀದ್ಬಾಹೂ ರಾಜನ್ಯಃ ಕೃತಃ ॥ ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ॥
ಸಾಜ್ಯಂಚವರ್ತಿ ಸಂಯುಕ್ತಂ ವಹ್ನಿನಾ ಯೋಜಿತಂ ಮಯಾ ॥ ದೀಪಂ ಗೃಹಾಣ ದೇವೇಶ ತ್ರೈಲೋಕ್ಯ ತಿಮಿರಾಪಹ ॥
ಭಕ್ತ್ಯಾದೀಪಂ ಪ್ರಯಚ್ಛಾಮಿ ದೇವಾಯ ಪರಮಾತ್ಮನೇ । ತ್ರಾಹಿ ಮಾಂ ನರಕಾದ್ಘೋರಾತ್ ದಿವ್ಯ ಜ್ಯೋತಿರ್ನಮೋಸ್ತುತೇ ॥
ಏಕಾರ್ತಿಕ ದೀಪಂ ಸಮರ್ಪಯಾಮಿ॥

ಓಂ ಚಂದ್ರಮಾ ಮನಸೋ ಜಾತಶ್ಚಕ್ಷೋಃ ಸೂರ್ಯೋ ಆಜಾಯತ । ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ ॥
ನೈವೇದ್ಯಂ ಗೃಹ್ಯತಾಂ ದೇವ ಭಕ್ತಿಂ ಮೇ ಹ್ಯಚಲಾಂ ಕುರು । ಈಪ್ಸಿತಂ ಮೇ ವರಂ ದೇಹಿ ಪರತ್ರೇ ಚ ಪರಾಂ ಗತಿಂ ॥
ಶರ್ಕರಾಖಂಡಖಾದ್ಯಾನಿ ದಧಿಕ್ಷೀರಘೃತಾನಿಚ । ಆಹಾರಂ ಭಕ್ಷ್ಯಭೋಜ್ಯಂ ಚ ನೈವೇದ್ಯಂ ಪ್ರತಿಗೃಹ್ಯತಾಂ ॥
ಸತ್ಯಂತವರ್ತೇನ ಪರಿಷಿಂಚಾಮಿ । ಆಮೃತೋಪಸ್ತರಣಮಸಿ ಸ್ವಾಹಾ ॥ ಓಂ ಪ್ರಾಣಾಯ ಸ್ವಾಹಾ । ಓಂ ಅಪಾನಾಯ ಸ್ವಾಹಾ ॥
ಓಂ ವ್ಯಾನಾಯ ಸ್ವಾಹಾ । ಓಂ ಉದಾನಾಯ ಸ್ವಾಹಾ । ಓಂ ಸಮಾನಾಯ ಸ್ವಾಹಾ । ಓಂ ಬ್ರಹ್ಮಣೇ ಸ್ವಾಹಾ ॥
ಮಹಾನೈವೇದ್ಯಂ ಸಮರ್ಪಯಾಮಿ ॥ ಪಾನೀಯಂ ಸಮರ್ಪಯಾಮಿ । ಉತ್ತರಾಪೋಷಣಂ ಸಮರ್ಪಯಾಮಿ ॥ ಹಸ್ತ ಪ್ರಕ್ಷಾಲನಂ
ಸಮರ್ಪಯಾಮಿ ॥ ಮುಖಪ್ರಕ್ಷಾಲನಂ ಸಮರ್ಪಯಾಮಿ ॥ ಕರೋದ್ವರ್ತನಾರ್ಥೇ ಚಂದನಂ ಸಮರ್ಪಯಾಮಿ ॥
ಎಂತ ನೈವೇದ್ಯವನ್ನು ತೋರಿಸಿರಿ,

ಓಂ ನಾಭ್ಯಾ ಅಸೀದಂತರಿಕ್ಷಂ ಶೀರ್ಷ್ಣೋರ್ದ್ಯೌ ಸಮವರ್ತತ । ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ಥಾ ಲೋಕಾಂ ಆಕಲ್ಪಯನ್ ॥
ಪೂಗಿಫಲಂ ಮಹದ್ದಿವ್ಯಂ ನಾಗವಲ್ಲೀದಲೈರ್ಯುತಂ । ಕರ್ಪೂರೇಲಾಸನಾಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಂ ॥
ಮುಖವಾಸಾರ್ಥ ಪೂಗಿಫಲತಾಂಬೂಲಂ ಸಮರ್ಪಯಾಮಿ ॥ ಎಂತ ತಾಂಬೂಲ ಸಮರ್ಪಿಸಿರಿ

ಓಂ ಸಪ್ತಾಸ್ಯಾಸನ್ ಪರಿಧಯಃ ತ್ರಿಸಪ್ತ ಸಮಿಧಃ ಕೃತಾಃ । ದೇವಾಯದ್ಯಜ್ಞಂ ತನ್ವಾನಾ ಅಬಧ್ನನ್ ಪುರೂಷಂ ಪಶುಂ ॥
ಹಿರಣ್ಯಗರ್ಭಗರ್ಭಸ್ಥಮ್ ಹೇಮಬಿ ಜಂ ವಿಭಾವಸೋ ॥ ಅನಂತಪುಣ್ಯಫಲದಮತಃ ಶಾಂತಿಂ ಪ್ರಯಚ್ಛ ಮೇ ॥
ಸುವರ್ಣಪುಷ್ಪ ದಕ್ಷಿಣಾಂ ಸಮರ್ಪಯಾಮಿ ॥ ಎಂದು ಬಾಯಿಂದುಚ್ಚರಿಸಿ ದಕ್ಷಿಣೆಯ ನೀಯುವುದು

ಇದ ಫಲಂ ಮಯಾ ದೇವ ಸ್ಥಾಪಿತಂ ಪುರತಸ್ತವ ॥ ತೇನಮೇ ಸುಫಲಾವಾಪ್ತಿ ರ್ಭವೇಜ್ಜನ್ಮನಿ ಜನ್ಮನಿ ॥
ಫಲೇನ ಫಲಿತಂ ಸರ್ವಂ ತ್ರೈಲೋಕ್ಯಂ ಸಚರಾಚರಂ । ತಸ್ಮಾತ್ಫಲಪ್ರದಾನೇನ ಸಫಲಾಸ್ಯು ರ್ಮನೋರಥಾಃ ॥
ನಾರಿಕೇಲಫಲಂ ಸಮರ್ಪಯಾಮಿ ।
ನಾರಿಕೇಲವನಿಟ್ಟು ಮುಂದಕೆ । ನೀರ ಬಿಡುವುದು ಮುಂದೆ ದೇವರಿ- । ಗಾರತಿಯ ನೀರಾಂಜನವ ತೋರಿಪುದು ಭಕ್ತಿಯಲಿ॥

ಅದರ ಮಂತ್ರ - ಓಂ ಶ್ರೀಯೇಜಾತಃ ಶ್ರೀಯ ಆ ನಿರಿಯಾಯ ಶ್ರಿಯಂ ವಯೋ ಜರಿತೃಭ್ಯೋ ದಧಾತಿ । ಶ್ರಿಯಂ ವಸಾನಾ ಅಮೃತತ್ವಮಾಯನ್ ಭವಂತಿ ಸತ್ಯಾ ಸಮಿಥಾ ಮಿತದ್ರೌ । ಶ್ರೀಯ ಏವೈನಂ ತಚ್ಛ್ರೀ ಯಮಾದಧಾತಿ ಸಂತತಮೃ ಚಾವಷ ಕೃತ್ಯಂ ಸಂತತ್ಯೈ ಸಂಧೀಯತೇ ಪ್ರಜಯಾ ಪಶುಭಿರ್ಯ ಏವಂ ವೇದ ।

ಯಾಜ್ಯಯಾಯಜಪ ತಿರ್ವೈಯಾಚ್ಯಾ ಪುಣ್ಯೈವ ಲಕ್ಷ್ಮೀಃ ಪುಣ್ಯಾಮೇವ ತಲ್ಲಕ್ಷ್ಮೀಂ ಸಂಭಾವಯತಿ ಪುಣ್ಯಾಂ ಲಕ್ಷ್ಮೀಮ್ ಸಂಸ್ಕುರುತೇ ।
ಚಂದ್ರಾತಿತ್ಯೌಚಧರಣಿ ರ್ವಿದ್ಯು ದಗ್ನಿಸ್ತಥೈವಚ । ತ್ವಮೇವ ಸರ್ವಜ್ಯೋತಿಷೀ ಆರ್ತಿಕ್ಯಂ ಪ್ರತಿಗೃಹ್ಯತಾಂ ॥

ಮಹಾ ನೀರಾಂಜನದೀಪಂ ಸಮರ್ಪಯಾಮಿ । ಕರ್ಪೂರಗೌರಂ ಕರುಣಾವತಾರಂ ಸಂಸಾರ ಸಾರಂ ಭುಜಗೇಂದ್ರಹಾರಂ ॥
ಸದಾ ವಸಂತಂ ಹೃದಯಾರವಿಂದೇಭವಂ ಭವಾನೀಸಹಿತಂ ನಮಾಮಿ ॥ ಕರ್ಪುರಾರ್ತಿಕ್ಯ ದೀಪಂ ಸಮರ್ಪಯಾಮಿ॥

ಓಂ ಯಜ್ಞೇನ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ । ತೇಹ ನಾಕಂ ಮಹಿಮಾನಃ ಸಚಂತಯತ್ರ ಪೂರ್ವ ಸಾಧ್ಯಾಹ್ ಸಂತಿ ದೇವಾಃ ॥ ಓಂ ರಾಜಾಧಿರಾಜಾಯ ಪ್ರಸಹ್ಯ ಸಾಹಿನೇ ನಮೋವಯಂ ವೈಶ್ರವಣಾಯ ಕುರ್ಮಹೇ । ಸಮೇ ಕಾಮಾನ್ ಕಾಮಕಾಮಾಯ ಮಹ್ಯಂ ಕಾಮೇಶ್ವರೋ ವೈಶ್ರವಣೋ ದಧಾತು । ಕುಬೇರಾಯ ವೈಶ್ರವಣಾಯ ಮಹಾರಾಜಾಯ ನಮಃ ॥ ಓಂ ಸ್ವಸ್ತಿ । ಸಾಮ್ರಾಜ್ಯಂ ಭೌಜ್ಯಂ ಸ್ವಾರಾಜ್ಯಂ । ವೈರಾಜ್ಯಂ ಪಾರಮೇಷ್ಟ್ಯಮ್ ರಾಜ್ಯಂ । ಮಹಾರಾಜ್ಯ ಮಾಧಿಪತ್ಯ ಮಯಂ ಸಮಂತಪರ್ಯಾಯಾಯಿ ಸ್ಯಾತ್ । ಮರುತಹ್ ಪರಿವೇಷ್ಟಾರೋ ಮರುತ್ತ ಸ್ಯಾವಸನ್ ಗೃಹೇ ॥ ಆವೀಕ್ಷಿತಸ್ಯ ಕಾಮಪ್ರೇರ್ವಿಶ್ವೇದೇವಾಃ ಸಭಾಸದ ಇತಿ ॥ ಮಂತ್ರ ಪುಷ್ಪಂ ಸಮರ್ಪಯಾಮಿ ॥ ಮಂತ್ರಪುಷ್ಪವನರ್ಪಿಸುವುದೀತೆರದ ಮಂತ್ರದಲಿ

ನಂತರದಿ ಧಾತಾ ಪುರಸ್ತಾತ್ । ಮಂತ್ರ ವುಚ್ಚರಿಸುತ ಪ್ರದಕ್ಷಿಣೆ । ಸಂತಸದಿ ಹಾಕುತ ನಮಸ್ಕರಿಸುವುದು ಯೋಗ್ಯವಿದು ॥
ನಿಂತು ಬಹಳ ಸಮೀಪದಲಿ ಮೇ- । ಣಂತುಪೃಷ್ಠದಿ ನಮಿಸಬಾರದು । ಅಂತರಗೃಹದಲ್ಲಿ ದಂಡ ಪ್ರಣಾಮ ಮಾಡದಿರಿ ॥31॥

ತಂದೆತಾಯ್ಗಳು ಗುರುವು ತಾ ಹೊರ- । ಗಿಂದ ಬಂದರೆ ಯೆದುರುಗಾಣಿಸಿ । ವಂದಿಸುವುದುತ್ತಮವು ತದ್ವತ್ ಉತ್ತಮದ್ವಿಜರಾ ॥
ಒಂದೇ ಬಾರಿಗೆ ನಮಿಸಿರ್ರೈ ದ್ವಿಜ । ವೃಂದಕೀಪರಿ ದೇವರಿಗೆ ಕೇ । ಳೊಂದು ನಮನವು ಮುಟ್ಟುವುದು ಸರ್ವರನು ನಿಜವಾಗಿ ॥32॥

ತಂದೆ ತಾಯಿಯು ಗುರುವು ತಾಯಿಯ ತಂದೆ ಹೊಟ್ಟೆಗೆ ಹಾಕುವನು ಭಯ ದಿಂದ ರಕ್ಷಕ ಜ್ಯೇಷ್ಠ ಬಂಧುವು ಮೇಣ್ಪುರೋಹಿತನು ॥
ಬಂಧುಗಳ ತಾಯ್ತಂದೆಯರುತನ- । ಗಿಂದಧಿಕವಯದವರು ಮಿತ್ರರು । ವಂದ್ಯರೆಲ್ಲರು ನೋಡು ಮಲತಾಯ್ ತಾಯಿಯಂದದಲಿ ॥33॥

ಕಿರಿವಯಸರನು ನಮಿಸಬಾರದು । ಕರದಿ ಪುಷ್ಪ ಕುಶಾಗ್ನಿ ಸಮಿಧೆಯ । ಧರಿಸಿದವರನು ಕರದೊಳಕ್ಷತೆಯಿರಲಿ ಕದರಂತೆ ॥
ಕರದಿ ಪುಷ್ಪ ಕುಶಾಗ್ನಿ ಸಮಿಧೆಯ । ಧರಿಸಿದವರನು ನಮಿಸಲವರಿಗೆ । ಶರಗಳಿಲ್ಲದೆ ವಧಿಸಿದಂತಾಗುವುದು ಪರಿಕಿಸಲು ॥34॥

ದೂರದಲ್ಲಿಹ ವಿಪ್ರನನು ಮದ- । ವೇರಿದವನನು ಹೋವ ಜಪತಪ । ಕಾರಿಯದಿ ತತ್ಪರನ ಸ್ನಾನವ ಮಾಡುತಿರುವವನಾ ॥
ನೀರಿನಲ್ಲಿಹ ನರನ ಕ್ರೋಧಿಯ । ಜೋರಿನಿಂದೋಡುತ್ತಲಿರುವನ । ಧಾರುಣಿಯೋಳೀ ನರರ ನಮಿಸುವುದಲ್ಲ ಸಜ್ಜನರು ॥35॥

ಒಂದೆ ಕರದಿಂ ವಿಪ್ರರಿಂಗಭಿ- । ವಂದಿಸುವುದು ಪ್ರಶಸ್ತವಲ್ಲವು । ವಂದಿಸಲು ಮೂರ್ಖನನು ಸೂತಕಿಯನ್ನು ಕೇಡಹುದು ॥
ಮುಂದೆ ಗೀತಾವಾದ್ಯ ನೃತ್ಯಗ । ಳಿಂದ ದೇವರ ತೋಷಗೊಳಿಸುತ । ಚಂದದಿಂ ಪ್ರಾರ್ಥನೆಯ ಮಾಳ್ಪುದು ಯೋಗ್ಯರೀತಿಯಲಿ ॥36॥

ಬಳಿಕ ಸನಕಾದಿಗಳ ಪೂಜಿಸಿ । ಬಳಿಕ ಪೀಠದಿ ಕರವನಿಡುತಲಿ । ಕಳುಹಿಸಿರಿ ದೇವರನು ಉತ್ತರಪೂಜೆ ತೀರಿಸುತಾ ॥
ಇಳೆಯೊಳೀಪರಿ ಸುರರು ಪೂಜೆಯ । ಕೊಳುತ ತೆರಳುವರವರ ಲೋಕಕೆ । ಬಳಿಕ ಭೋಜನದನ್ನವನು ಸಂಸ್ಕರಿಸಿರೈ ಬೇಗಾ ॥37॥

ಮಾಡಿರೈ ನೀವ್ ವೈಶ್ವದೇವವ । ಗಾಢದಿಂ ಪ್ರಜ್ವಲಿಸಿ ಯಗ್ನಿಯ । ಕೂಡಿಸಿರಿ ಘೃತವನದರಲಿ ಮೇಣೈದು ಭಾಗವನು ॥
ಮಾಡಿರಾ ಭಾಗದಲಿಯಾಹುತಿ । ನೀಡಿರೈ ದಶಭಾಗ ಮಾಡುತ ನೀಡಿರೈ ಯೆರಡನೆಯ ಭಾಗದ ಬಲಿಹರಣಕಾಗಿ ॥38॥

ಮೂರನೇಯದು ಅನ್ನ ದಾನವು । ಚಾರುಪಿತೃಯಜ್ಞಕ್ಕೆ ನಾಲ್ಕನೆ । ಧಾರುಣಿಯೊಳು ಮನುಷ್ಯ ಯಜ್ಞಕೆ- ಯ್ಯೆದನೆಯ ಭಾಗ ॥
ಹಾರಿಸುವುದು ಪಂಚಯಜ್ಞವು । ಘೋರವಾತಕಗಳನು ಪರಿಕಿಸೆ । ಕಾರಣದಿ ನೀವ್ ಮಾಡಿರಿದನು ಸುಮಂತ್ರಪೂರ್ವಕದಿ ॥39॥

ಅನ್ನ ವಿಲ್ಲದ ದಿವಸ ತಂಡುಲ- । ವನ್ನು ಯೋಜಿಸಿ ವೈಶ್ವದೇವಕೆ । ಮನ್ನಿಸಿರಿ ನೀವ್ ಅನಲ ಮೊದಲಾಗಿರುವ ಸುರವರರಾ ॥
ತನ್ನ ಮನೆಗಾ ವೈಶ್ವದೇವದ । ಸನ್ನುತದ ಮಧ್ಯಾಹ್ನ ಕಾಲದಿ । ಮನ್ನಿಸಲು ಬೇಕತಿಥಿ ಬಂದರೆ ಪೂಜಿಸುತ ಮುದದಿ ॥40॥

ಮನೆಗೆ ನಡಹಗಲಿನಲಿ ಬಂದಿಹ । ಮನುಜನವ ಚಾಂಡಾಳ ಚೋರನು । ಯೆನುತ ಭಾವವ ಬಿಟ್ಟು ಪೂಜಿಸಬೇಕು ಹರುಷದಲಿ ॥
ಮನಸಿನಲಿ ಸಂತುಷ್ಟರಾಗದೆ । ಮನೆಯ ಬಿಟ್ಟರೆ ಹಸಿವೆಯಲಿ ಪಿತೃ- । ಗಣವು ಬಾರದು ಒಂದು ವರುಷದ ತನಕ ತದ್ಗೃಹಕೆ ॥41॥

ಮಾತೃ ಪಿತೃಘಾತಕಿಯೆ ಆಗಲಿ । ಪಾತಕಿಯೆ ಚಾಂಡಾಲನಾಗಲಿ । ಗೋತ್ರಕುಲವ ವಿಚಾರಿಸದೆ ನೀಡುವುದು ಭೋಜನವಾ ॥
ಭೂತಳದೊಳು ಪ್ರವಾಸಿಯಾಗಲು । ಈ ತೆರವ ಮಾಡುವುದು ಯೋಗ್ಯವು । ಪ್ರೀತಿಯಲಿ ಫಲಮೂಲದಧಿಕ್ಷೀರಗಳ ವಾಪರಿಸಿ ॥42॥

ಧಾರುಣಿಯೊಳೀ ವೈಶ್ವದೇವ ಪ್ರ । ಕಾರ ಮಾಡುವ ವೇಳೆ ಹೋಗಲು । ಬಾರದೆಂದಾಜ್ಞಾಪಿಸಿಹನಾ ಯಮನು ದೂತರಿಗೆ ॥
ಯಾರು ಕೇಳೀ ಪಂಚಯಜ್ಞವ । ಧಾರುಣಿಯೊಳಾಚರಿಸದಿರುವರು । ಘೋರಪಾತಕಿಯವರು ಚಾಂದ್ರಾಯಣಕೆ ಪಾತ್ರರಲಾ ॥43॥

ವೈಶ್ವದೇವದ ಮೊದಲು ಬಂದರೆ । ಭಿಕ್ಷೆಯನು ಹಾಕುವುದು ಯೋಗ್ಯವು । ಭಿಕ್ಷೆಯೆಂಬುದು ವೈಶ್ವದೇವದ ಫಲಕೆ ಸರಿಯಹುದು ॥
ನಿಶ್ಚಯವು ಬಲಿಹರಣ ತಾನು ಸ್ವ- । ಹಸ್ತದಲಿ ತೆಗೆದರೆ ಮಹಾದೋ- । ಷಾಸ್ಪದನು ಚಾಂದ್ರಾಯಣವನಾಚರಿಸಬೇಕವನು ॥44॥

ಬಲಿಹರಣ ತೆಗಿಸದಲೆ ಭೋಜನ । ಕೋಳಗೆ ಬಂದರೆ ಪಾಪ ಬರುವುದು । ಬಳಿಕ ಮಾಡಿರಿ ಆರು ಪ್ರಾಣಾಯಾಮ ಭಕ್ತಿಯಲಿ ॥
ಅಳಿದು ಹೋಗುವುದೆಲ್ಲ ಪಾತಕ । ವಿಳೆಯೊಳೀಪರಿ ವೈಶ್ವದೇವವ । ತಿಳಿದು ಮಾಡಲು ಬೇಕೆನುತ ಗುರುವರನು ಪೇಳಿದನು ॥45॥

ತೀರಿಸುತಲೀ ವೈಶ್ವದೇವವ । ಯಾರು ಬರುತಿಹರತಿಥಿ ಯೆನುತಲಿ । ದ್ವಾರದಲ್ಲಿ ಹೊರಬಂದು ಮಾರ್ಗಪ್ರತೀಕ್ಷೆ ಮಾಡುವುದು ॥
ಯಾರು ಬರುವರೊ ಕರೆದವರ ಸ । ತ್ಕಾರ ಪೂರ್ವಕ ಪೂಜೆ ಮಾಡಿರಿ । ಚಾರುತರ ಭಕ್ತಿಯಲ್ಲಿ ಪೂಜಿಸಿರತಿಥಿವರ್ಗವನು ॥46॥

ಮರಳಿ ಈ ಪರಿ ಪೂಜೆ ಮಾಳ್ಪುದು । ಬರಲತಿಥಿ ಸಭೆಯಲಿ ಶ್ರಮಿಸುತ । ಗುರುವು ಬ್ರಾಹ್ಮಣ ಸರ್ವವರ್ಣಕ್ಕೆಂದು ಶ್ರುತಿ ವಚನಾ ॥
ಪರಮಗುರುವಿಹನತಿಥಿ ಸಮಯದಿ । ಬರಲವನು ಕೇಳ್ವೈಶ್ವದೇವಕೆ । ವಿರಚಿಸಲು ಸತ್ಕಾರಪೂಜೆಯು ಸುರರಿಗರ್ಪಣವು ॥47॥

ಅತಿಥಿಗಳಿಗಾತಿಥ್ಯ ಮಾಡಲು । ಸತತ ಸಂತೋಷಿಪರಲಾ ಪಶು- । ಪತಿಯು ಬ್ರಹ್ಮೇರುದ್ರಾದಿ ಮರುತರು ಆರ್ಯಮಾದಿಗಳು ॥
ಅತಿಥಿಗಳ ಪಾದಗಳ ತೊಳೆಯಲು । ಪಿತರರೆಲ್ಲರ ತುಷ್ಟರಪ್ಪರು । ರತಿಪತಿಯ ಪಿತನಂತು ಪರಮೇಶ್ವರನು ತೋಷಿಪರು ॥48॥

ಯತಿವರರು ಮೇಣ್ ಬ್ರಹ್ಮಚಾರಿಗ- । ಳತಿಥಿರೂಪದಿ ಬರಲು ಭವನಕೆ । ಸತತ ಕೊಡ ಬೇಕನ್ನ ದಾನವ ಪುಣ್ಯ ಬಹುವಿದಕೆ ॥
ಯತಿಗೆ ಕೊಟ್ಟಿಹ ಗ್ರಾಸವೊಂದರ- । ದತಿಶಯವು ಫಲ ಮೇರು ಸಮವೈ । ಯತಿಗೆ ಕೊಡಬೇಕುತ್ತ ಮೋದಕ ಶರಧಿಗದು ಸಮವು ॥49॥

ಮನೆಗೆ ಬಂದಿಹ ಅತಿಥಿಗಳ ಬಿ- । ಟ್ಟುಣುವವರಿಗೀ ಜನ್ಮ ತೀರಲು । ಜನುಮ ಬರುವುದು ಶ್ವಾನಗರ್ದಭ ಯೋನಿಯಲಿ ನಿಜವು ॥
ಮನನಪೂರ್ವಕವತಿಥಿಯನು ದಿನ- । ದಿನದಿ ಪೂಜಿಸಿ ಬಳಿಕ ಭೋಜನ-। ವನು ಗೃಹಸ್ಥನು ತೀರಿಸುವುದೈ ಶಾಸ್ತ್ರ ಮಾರ್ಗವಿದು ॥50॥

ತೊಳೆದು ಕಾಲ್ಗಳನೊರಸದಲೆ ತಾ । ಕುಳಿತು ಭೋಜನ ಮಾಡುವುದು ಕೇಳ್ । ಮೆಲುವುದೈ ಭೋಜನವನನ್ನವ ಛಿನ್ನ ಮಾಡದಲೆ ॥
ಇಳೆಯೊಳಗೆ ವಿಪ್ರರಿಗೆ ಪಂಚ । ಸ್ಥಳಗಳಿರಬೇಕಾರ್ದ್ರ ಪಾದಂ । ಗಳು ಕರಗಳೆರಡೈದನೆಯ ಮುಖ ದೀರ್ಘ ವಾಯುಷಕೆ ॥51॥

ಪಾದಗಳ ಜೋಡಿಸುತ ವಿಬುಧರು । ಮೇದಿನಿಯೊಳಾಸನದಿ ಕೂಡುತ । ಸಾದರದಿ ಪೂರ್ವಾಭಿಮುಖದಲಿ ಊಟ ಮಾಡುವುದು ॥
ಭೇದ ಮಾಡಲಯೋಗ್ಯ ಪಂಕ್ತಿಯ । ಭೇದ ಮಾಡಲು ದುರಿತ ವಗಣಿತ । ವೇದಿನೀಸುರರೆಲ್ಲರೀಪರಿ ಧರ್ಮ ಮಾಡುವುದು ॥52॥

ಮಂಡಲವ ಮಾಡದಲೆ ಯನ್ನವ । ನುಂಡರದು ರಾಕ್ಷಸ ಪಿಶಾಚರ । ತಂಡ ಕರ್ಪಣ ರಸವನೊಯ್ವರು ಕೇಳ್ನಿ ಶಾಚರರು ॥
ಮಂಡಲ ಚತುಷ್ಕೋಣ ದ್ವಿಜರಿಗೆ । ಮಾಂಡಳಿಕರಿಗೆ ಕೇಳ್ ತ್ರಿಕೋಣವು । ಮಂಡಲವು ವೈಶ್ಯರಿಗೆ ವರ್ತುಲ ಚಂದ್ರ ಶೂದ್ರರಿಗೆ ॥53॥

ಉತ್ತಮವು ಪೂರ್ವಾಭಿಮುಖವದು । ಉತ್ತರಕ್ಕಭಿಮುಖವು ಪಿತೃಗಣ । ತೃಪ್ತಿ ಗುತ್ತಮ ವರ್ಜ್ಯವೈ ಸರ್ವತ್ರ ದಕ್ಷಿಣವು ॥
ಮತ್ತೆ ಮಂಡಲ ಮಾಡಿ ರುದ್ರಾ- । ದಿತ್ಯವಸುಬ್ರಹ್ಮಾದಿ ದೇವರ । ಭಕ್ತಿಯಲಿಯಾವಾಹನೆಯ ಮಾಡುವುದು ಸಜ್ಜನರು ॥54॥

ಚಿನ್ನ ಬೆಳ್ಳಿಯ ತಾಮ್ರಪಾತ್ರವು । ಪುಣ್ಯ ವಿಹುದ್ಯೆ ಪದ್ಮಪತ್ರದಿ । ದಿನ್ನು ಕೇಳು ಪಲಾಶ ಪಾತ್ರವು ಪುಣ್ಯಕಾರಕವು ॥
ಚಿನ್ನ ಬೆಳ್ಳಿಯ ಪಾತ್ರಗಳು ಬಹು । ಮಾನ್ಯವಲ್ಲ್ಯೆ ಯತಿಗಳಿಗೆ ಮೇ । ಣಿನ್ನು ತಾಮ್ರದ ಪಾತ್ರ ಸಲ್ಲದು ಸದ್ಗೃಹಸ್ಥನಿಗೆ ॥55॥

ಶಕ್ತಿ ಶಂಖಜ ತಾಮ್ರ ಸ್ಪಟಿಕದ । ಪಾತ್ರಗಳು ಯತಿಗಳಿಗೆ ಯೋಗ್ಯವು । ಪತ್ರಗಳು ವರ್ಜ್ಯವು ಪಲಾಶದವಲ್ಲಿ ಪತ್ರಗಳು ॥
ಮತ್ತೆ ಕರ್ದಳಿಗರ್ಭಪತ್ರಾ- । ಶ್ವತ್ಥವಟದ ಕದಂಬದರ್ಕದ । ಪತ್ರದಲಿ ಭೋಜನಕೆ ಚಾಂದ್ರಾಯಣವ ಮಾಡುವುದು ॥56॥

ಹತ್ತಿಯೆಲೆಯಲಿ ತಾಮ್ರ ಲೋಹದ । ಪಾತ್ರದಲಿ ಮೃಣ್ಮಯದ ಪಾತ್ರದಿ । ವಸ್ತ್ರದಲಿ ಭೋಜನವ ಮಾಡಲು ನರಕಪ್ರಾಪ್ತಿಯದು ॥
ನಿತ್ಯದಲಿ ಕಂಚಿನ ಸುಪಾತ್ರ ಪ್ರ- । ಶಸ್ತವೈ ಸಜ್ಜನ ಗೃಹಸ್ಥಗೆ । ಕೀರ್ತಿಬಲಪ್ರಜ್ಞೆಯನು ವರ್ಧಿಸುತಿಹುದು ನಿತ್ಯದಲಿ ॥57॥

ಐದು ಸೇರಿನ ಪಾತ್ರ ವುತ್ತಮ । ವೈದಕಿಂತಲು ಕಮ್ಮಿ ಜಾಸ್ತಿ ನಿ- । ಷೇಧ ವಿರುವುದು ಉತ್ತಮೋತ್ತಮ ಆರು ಸೇರಿರಲು ॥
ಸಾಧಿಸಿದರೀ ಪರಿಯ ಪಾತ್ರವು । ಮೇದಿನಿಯಲಿ ಸುವರ್ಣ ಪಾತ್ರದ । ಆದರಕೆ ಸರಿಯಹುದು ಯೆಂದನು ಶ್ರೀಗುರುವು ಮುದದಿ ॥58॥

ಯತಿಗೆ ವಿಧವೆಗೆ ಮೇಣ್ ಬ್ರಹ್ಮ । ವ್ರತಿಗಳಿಂಗಭ್ಯಂಗ ತಾಂಬುಲ- । ಯುತವು ಕಂಚಿನ ಪಾತ್ರ ಭೋಜನ ಸಲ್ಲದ್ಯೆ ನಿಜವು ॥
ಪತಿತನಿರಲು ಸಮೀಪ ಭೋಜನ । ಸತತ ವರ್ಜ್ಯವು ಶೂದ್ರರುಣಲಾ- । ಗತಕ ಶೇಷವನುಣ್ಣಬಾರದು ದ್ವಿಜರು ಸಜ್ಜನರು ॥59॥

ಮುದ್ದು ಬಾಲನ ಮುಂದೆ ಕೂಡಿಸಿ । ಶ್ರಾದ್ಧ ದಿವಸದೊಳುಣ್ಣಬಾರದು । ಖುದ್ದು ತನ್ನಾಸನವ ಹಾಕಲು ಬಾರದೈ ತಾನು ॥
ಬುದ್ಧಿವಂತರು ಭೋಜನಕೆ ಕುಳಿ- । ತಿದ್ದರಾ ವೇಳ್ಯದಲಿ ಕಿಂಚಿತು । ಸದ್ದು ಮಾಡಲು ಸಲ್ಲದೈ ಮೌನವನು ಧರಿಸುವುದು ॥60॥

ತನ್ನ ಮೈಯನು ತಾನೆ ತಿಕ್ಕುತ । ಲೆಣ್ಣೆಯಭ್ಯಂಗನವು ಸಲ್ಲದು । ತನ್ನ ದಾಪೋಶನವ ತಾನೇ ಕೊಂಡರದು ದೋಷ ॥
ತನ್ನ ಭೋಜನ ಮಂಡಲವ ತಾ- । ನಿನ್ನು ಹಾಕುವುದದುವೆ ಯನುಚಿತ । ವನ್ನ ಬಡಿಸಲು ಮೊದಲದಕೆ ಕೈ ಜೋಡಿಸಿರಿ ಮುದದಿ ॥61॥

ಬಡಿಸಿದಾಕ್ಷಣ ವಭಿಘರಿಸುವುದು । ಒಡನೆ ಪ್ರಾಣಾಹುತಿಯ ನಂತರ । ಬಡಿಸಿಕೊಳುವದು ತುಪ್ಪ ತನ್ನಯ ಸ್ವಂತ ಕೈಯಿಂದಾ ॥
ಜಡವ ನಂತರ ಕೊಂಡು ವ್ಯಾಹೃತಿ । ನುಡಿವುದ್ಯೆ ಮಂತ್ರವನು ನೀರನು । ಬಡಿಯುತನ್ನ ಪವಿತ್ರ ಮಾಡುವುದಾಗ ಮಂತ್ರದಲಿ ॥62॥

ಕರದಿ ನೀರನು ಕೊಂಡು ಅನ್ನವ- । ನಿರದೆ ಪರಿಸಿಂಚಿಸುವುದಾಕ್ಷಣ । ಭರದಿ ನೀವಾ ಚಿತ್ರಗುಪ್ತರ ವಂದಿಸಿರಿ ಮುದದಿ ॥
ಮರಳಿ ತೊಳೆದಾ ವಾಮ ಹಸ್ತದಿ । ಕರದೊಳಾಪೋಶನವ ಗ್ರಹಿಸಿರಿ । ಪರಮ ಶಾಸ್ತ್ರೋಕ್ತದಲಿ ಗ್ರಹಿಸಿರಿ ಯೇಕಭಾವದಲಿ ॥63॥

ಕರದೊಳಾಪೋಶನವ ಗ್ರಹಿಸಲು । ತಿರುಗಿ ಬಿಟ್ಟೆರಡನೆಯ ನೀರನು । ಭರದಿ ಗ್ರಹಿಸಲು ಶ್ವಾನಮೂತ್ರಗ್ರಹಣವದು ತಿಳಿಯೆ ॥
ಕರದಿ ಕೇಳಾಪೋಶನದ ಜಲ- । ವಿರುವ ಕಾಲದಿ ನಮನ ಸಲ್ಲದು । ಮರಳಿಯವರಾಶೀರ್ವಚನವನು ಕೊಡಲು ಪಾಪವಲಾ ॥64॥

ಮಾಡದಾಪೋಶನವನೂಟವ । ಮಾಡಿದರೆ ನೂರೆಂಟು ಬಾರಿಗೆ । ಮಾಡಿರ್ಯೆ ಗಾಯತ್ರಿ ಜಪವನು ಪಾಪ ಹರಿಸುವುದು ॥
ಗಾಢವಹ ಕಾರ್ಪಾಸ ರಾಶಿಗೆ । ಮಾಡಲಗ್ನಿಯ ಸ್ಪರ್ಶ ಬೂದಿಯ । ಮಾಡುವಂದದಿ ಪಾಪವನು ಸುಡುತಿಹುದು ಪ್ರಾಣಾಗ್ನಿ ॥65॥

ಕೊಡಿರಿ ಪ್ರಾಣಾಹುತಿಯ ನಂತರ । ಕೊಡುವುದದು ಪುರುಷಾರ್ಥವೆಲ್ಲವ । ನುಡಿಯಿರೀ ಶ್ಲೋಕವನು ಭಗವದ್ಗೀತೆಯಿಂ ಮುದದಿ ॥
ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ । ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಂ ॥66॥

ನಾನು ವೈಶ್ವಾನರನ ರೂಪದಿ । ಪ್ರಾಣಿಗಳ ದೇಹದಲಿ ವಾಸಿಪೆ । ನಾನು ಪ್ರಾಣಾಪಾನ ಸಂಯುತನಾಗಿ ಪಚಿಸುವೆನು ॥
ಪ್ರಾಣಿಗಳಿಗನ್ನವ ಚತುರ್ವಿಧ । ನಾನೆ ಪಚಿಸುವೆನೆಲ್ಲ ದೇಹದಿ । ಸಾನುರಾಗದೊಳಿದನು ದ್ವಿಜರುಚ್ಚರಿಸಿರ್ಯೆ ಮುದದಿ ॥67॥

ಅನ್ನ ಬ್ರಹ್ಮನು ರಸವು ವಿಷ್ಣುವು । ತಿನ್ನುತಿಹ ದೇವನು ಮಹೇಶನು । ಯೆನ್ನುವೀ ಭಾವದಲಿ ಭೋಜನಗ್ರಹಣ ಮಾಡುವುದು ॥
ಅಗ್ನಿ ರಶ್ಮೀ ಮಂತ್ರ ಜಪಿಸಲಿ- । ತನ್ನ ದೋಷದ ಸರ್ವದುರಿತವು । ಛಿನ್ನ ವಾಗುವುದೇನಹೇಳುವೆ ಮಂತ್ರಮಹಿಮೆಯನು ॥68॥

ಬಳಿಕ ಪ್ರಾಣಾಹುತಿಗಳೈದನು । ಕೊಳುವುದೈ ವಿಧಿಪೂರ್ವಕದೊಳಿದ ತಿಳಿಸಿಹೇಳುವೆ ನೇಮದಿಂದನಾಚರಿಸಿ ಮುದದಿ ॥

(ತರ್ಜನೀಮಧ್ಯ ಮಾಂಗುಷ್ಠ ದಿಂದ) ಪ್ರಾಣಾಯ ಸ್ವಾಹಾ । (ಮಧ್ಯಮಾನಾಮಿಕಾಂಗುಷ್ಠ ದಿಂದ) ಅಪಾನಾಯ ಸ್ವಾಹಾ ।

ವ್ಯಾನಾಯ ಸ್ವಾಹಾ (ಅಂಗುಷ್ಠ ತರ್ಜನೀಕನಿಷ್ಠ ಕೆಯಿಂದ) ಉದಾನಾಯ ಸ್ವಾಹಾ ।

(ಐದು ಬೆರಳುಗಳಿಂದ) ಸಮಾನಾಯ ಸ್ವಾಹಾ (ಎಂದು ಪ್ರಾಣಾಹುತಿಯ ಕೊಳ್ಳುವದು)

ನಾಲಿಗೆಯ ಮೇಲಿಟ್ಟು ಬೇಗದಿ । ಲೀಲೆಯಿಂದೀಯನ್ನ ನುಂಗಿರಿ । ಬೀಳಬಾರದು ದಂತಸ್ಪರ್ಶವು ಪ್ರಾಣದಾಹುತಿಗೆ ॥

ಮೇಲೆ ಮೌನವ ಧರಿಸಬೇಕೈ । ಮೌನಧರಿಸುವ ಸ್ಥಾನ ಪೇಳ್ವೆನು । ಸ್ನಾನದಲಿ ಹೋಮವ ಭೋಜನ ಮಾಳ್ಪ ಸಮಯದಲಿ ॥69॥

ಧರಿಸದಿರೆ ಮೌನವನು ಹೋಮದಿ । ಸಿರಿಯು ತೊಲಗುವಳೆಂದು ನೀ ತಿಳಿ । ಧರಿಸದಿರೆ ಮೌನವನು ಭೋಜನ ಸಮಯದಲಿ ತಿಳಿಯೆ ॥

ಬರುವುದಪಮೃತ್ಯುವು ಯೆನುತ ನೀ । ನರಿತ ಕೋ ಸಾಧಿಸದಿರಲು ಭೂ- । ಸುರರು ಪ್ರಾಣಾಹುತಿಯ ತನಕವೆ ಮೌನಧರಿಸುವುದು ॥70॥

ಯಾರಿಗಿಹ ಜೀವಂತ ತಂದೆಯು । ಯಾರಿಗಿರುವನು ಜ್ಯೇಷ್ಠ ಭ್ರಾತೃವು । ಕಾರಣವ ನಾ ಕಾಣೆನವರಿಗೆ ಮೌನಭೋಜನದಿ ॥

ಚಾರು ಶ್ರಾದ್ಧಾನ್ನವನುಣಲು ನಿ- । ರ್ಧಾರವೈ ನಿಜಮೌನ ಗ್ರಾಹ್ಯವು । ಧಾರುಣಿಯೊಳಿದನಾಚರಿಸಿರೈ ಕರ್ಮಮಾರ್ಗಿಗಳು ॥71॥

ಮೊದಲು ಮಧುರಾನ್ನವನು ಭಕ್ಷಿಸು । ವುದು ಪ್ರಶಸ್ತವು ಕೋದ್ರುನಾನ್ನವು । ಮೊದಲು ಗ್ರಾಹಿಸಬಾರದೈ ಕೇಳ್ ಕಠಿಣವನ್ನವನು ॥

ವಿದಿತವಿರಲೈ ನಿಮಗೆ ಕೊನೆಯಲಿ । ಮುದದಿ ತ್ಯಜಿಪುದು ನೀವ್ ದ್ರವಾನ್ನವ । ನಿದನು ಮೀರಲು ಶಕ್ತಿಹೀನತೆ ಬರುವುದೈ ನಿಜವು ॥72॥

ದನವು ನೀರನು ಕುಡಿಯುವನಿತಕ । ಮನುಜ ತೀರಿಸಬೇಕು ತಾ ಭೋ- । ಜನವ ಕೇಳ್ಕೈ ಶೀಘ್ರಭೋಜನ ಸೌಖ್ಯದಾಯಕವು ॥

ಮುನಿವರರು ಸನ್ಯಾಸಿಯತಿಗಳು । ತಿನುವುದಷ್ಟ ಗ್ರಾಸ ಷೋಡಶ । ತಿನುವುದೈ ವನವಾಸಿಗಳು ಕೇಳೊಂದು ಭೋಜನಕೆ ॥73॥

ಮರುಹತ್ತೆರಡಾ ಗೃಹಸ್ಥಗೆ । ಬಾರದೈಮಿತಿ ಬ್ರಹ್ಮಚಾರಿಗೆ । ಧಾರುಣಿಯೊಳೀ ಪರಿಯ ಗ್ರಾಸಪ್ರಮಾಣ ಮಾನವಗೆ ॥
ಬಾರಿಗೊಂದೇ ತನ್ನ ಮುಖದಲಿ । ಸೇರುವುದು ನೋಡೆಷ್ಟು ಅಷ್ಟು ವಿ- । ಚಾರಿಸಲು ಕೇಳೊಂದು ಗ್ರಾಸವೆನುತ್ತ ತಿಳಿಯುವುದು ॥74॥

ಅಧಿಕ ಗ್ರಾಸವ ಮುಖದಿ ಕೊಳ್ಳಲು । ವಿದಿತವದ ಕುಚ್ಛಿಷ್ಠವೆಂಬರು । ವದನದಿಂದದ ಭಕ್ಷಿಸಲು ಪಾತಕವು ತಟ್ಟುವುದು ॥
ವದನದಲಿ ಹಾಕಿರ್ದಗ್ರಾಸವ । ಮೊದಲು ಬಾಯಿಂ ತೆಗೆದು ಕೆಳಗಿಡಿ- । ಸಿದರೆ ಚಂದ್ರಾಯಣ ವ್ರತವನಾಚರಿಸಿದರೆ ಶುದ್ಧಿ ॥75॥

ಒಂದು ಪಾತ್ರೆಯಲೊಂದು ವೇಳ್ಯಕೆ । ಬಂಧುಬಳಗಗಳೆಲ್ಲ ಭೋಜನ । ವೊಂದುಗೂಡಿಯೇ ಮಾಳ್ಪುದನುಚಿತ ವೂಟವೀ ತೆರದಿ ॥
ನಿಂದ್ಯ ವಿಹುದೈಯಿದಕೆ ಪೇಳುವೆ । ನೊಂದೆರಡು ನಿರ್ದೋಷಗಳ ವ್ರತ । ಬಂಧವಾಗದ ಮಗನು ಮೇಣವಿವಾಹಿತಳು ಕನ್ಯೆ ॥76॥

ಎಡದ ಕೈಯನು ಮೇಲೆ ಪಾತ್ರದೊ-। ಳಿಡಲು ಬೇಕುಣ್ಣುವ ಸಮಯದಲಿ । ಬಿಡಲು ಪಾತ್ರವ ತಿಳಿಯದಲೆ ತತ್ ಕ್ಷಣವೆ ಭೋಜನವಾ ॥
ಬಿಡಲುಬೇಕೈ ಕರ್ಮನಿಷ್ಠನು । ಬಿಡಲುಬಾರದು ಘೃತವ ಪಾಯಸ । ಬಿಡಲುಬಾರದು ಬಡಿಸಿದನ್ನವನುಂಡ ಯೆಲೆಮೇಲೆ ॥77॥

ಗ್ರಾಸವೊಂದನು ಯೆಲೆಯ ಮೇಲೆಯೆ । ಶೇಷದನ್ನವೆನುತ್ತ ಬಿಡುವುದು । ಲೇಸುಭೋಜನ ಮಾಡಬಾರದು ಶೇಷದನ್ನವನು ॥
ದೋಷವಿಲ್ಲೈ ಯೆಡದ ಕೈಯಲಿ । ಭೂಸುರರು ಪಾತ್ರವನು ಹಿಡಿಯದೆ । ಲೇಸಿನಿಂ ಭೋಜನವ ಮಾಡಲು ಮೊದಲಿನಿಂ ತಿಳಿದು ॥78॥

ಹಿಡಿದ ಪಾತ್ರವ ಬಿಡುವುದನುಚಿತ । ಹಿಡಿಯದಲೆ ತಾನೂಟಮಾಡಲು । ಬಡಿಯದೈ ಪಾತಕವು ಮನದಿ ವಿಚಾರಿಸಿರಿ ಯಿದನು ॥
ಹೆಡತಲೆಗೆ ಸುತ್ತುತಲಿ ವಸ್ತ್ರವ । ನೆಡದಿಪಾದದಿ ತನ್ನ ಹಸ್ತವ । ನಿಡು ತಲಥವಾ ದಕ್ಷಿಣಕ್ಕೆ ಮುಖ ಮಾಡುತುಣಲನ್ನಾ ॥79॥

ಆನ್ನವದರಾಕ್ಷಸರು ವೊಯ್ವರು । ಯೆನ್ನುತಲಿ ನಿರ್ಧಾರ ಮಾಡಿರಿ । ಇನ್ನು ಭೂಮಿಯ ಮೇಲೆ ಯೆಡಕ್ಕೈ ಯಿಡಲು ರೋಗವದು ॥
ಬೆನ್ನ ಮೇಲೆಯೆ ಯಿರುವುದೆಂಬುದ । ಮನ್ನಿಸಿರಿ ನಿಜವಾಗಿ ಕೈ ಬೆರ- । ಳನ್ನು ವಿಂಗಡಿಸುತ್ತ ವುಂಡರೆ ದೋಷ ಗೋಹತ್ಯೆ ॥80॥

ಸಲ್ಲದೂಟವು ದೇವತಾಲಯ । ದಲ್ಲಿ ಶಯನಸ್ಥಾನದಲ್ಲಿಯೆ । ಸಲ್ಲದೂಟ ಸ್ಮಶಾನದಲಿ ಗಜವಾಜಿಗಳನೇರಿ ॥
ಸಲ್ಲದೈ ಕರಪಾತ್ರ ಭೋಜನ । ಸಲ್ಲದೂಟವು ಆರ್ದ್ರವಸ್ತ್ರಗ- । ಳಲ್ಲಿ ಕೂದಲು ಬಿಟ್ಟು ಭೋಜನ ಗೌಣ ತಿಳಿಯುವುದು ॥81॥

ಮೇದಿನೀಸುರರೂಟ ಮಾಡುವ । ದಾದರವರಿಗೆ ಸನ್ಮುಖದಿ ನಿಜ । ಪಾದರಕ್ಷೆಯನಿಡಲುಬಾರದು ದೋಷಬಹುವಿಹುದು ॥
ಹೋದರೂಟದಿ ದೀಪ ರಾತ್ರಿಯೊ- । ಳಾದಿಯಲಿ ದೀಪವನು ತರುವುದು । ಆದನಂತರ ಭೋಜನವ ತೀರಿಸುವುದುಚಿತವಲಾ ॥82॥

ಕಂದಮೂಲೋದಕವ ಕಬ್ಬನು । ತಿಂದು ಪಾತ್ರದೊಳಿಡಲು ಕೇಳ್ಳೈ ಮುಂದಿರುವ ಸಂಗ್ರಹವು ಯೆಂಜಲೆನುತ್ತ ತಿಳಿಯುವುದು ॥
ಮಿಂದುಮಾಡದೆ ವೈಶ್ವದೇವನ । ಚಂದದಿಂದಲಿ ಬ್ರಹ್ಮಯಜ್ಞವ । ನಂದುಮಾಡದೆ ಊಟಮಾಡಲು ದೋಷಬಹುವಿಹುದು ॥83॥

ಅನ್ನವಲ್ಲ್ಯ ಬಡಿಸಿರುವ ಕೃಮಿ । ಯೆನ್ನುತಲಿ ತಿಳಿಯುವುದು ರಾತ್ರಿಗೆ । ಪರ್ಣಪೃಷ್ಠದ ಮೇಲೆ ಕತ್ತಲೆಯಲ್ಲಿ ಭೋಜನವು ॥
ಸನ್ನುತಾತ್ಮರು ಮಾಡೆ ಕೃಮಿಗಣ- । ವನ್ನು ತಿಂದಾಪರಿಯೊಳಾಗುವು । ದೆನ್ನು ತಲಿ ತಿಳಿ ಯೆನುತ ಪಾರಾಶರನು ಪೇಳಿದನು ॥84॥

ಎನಿತು ಪಾತ್ರದೊಳಿರುವುದನ್ನವು । ಅನಿತನೆಲ್ಲವನುಣ್ಣುವುದು ಭೋ । ಜನದಿ ಹೆಚ್ಚಿಗೆ ಕೊಂಡರದು ಪಾತಕವು ತಟ್ಟುವುದು ॥
ಮನುಜನೀಪರಿ ಮಾಡುತಿರೆ ಭೋ । ಜನವ ಕಥೆಯನು ಕೇಳುತಿರೆ ಕೇಳ್ । ವಿನಯಕಾದರು ಕೇಶಮುಟ್ಟಲು ಬಾರದೈ ತಿಳಿಯೆ ॥85॥

ಕತ್ತಲೆಯೊಳೂಟವನು ಮಾಳ್ಪುದು । ಶಿಸ್ತು ಕೇಳು ಪ್ರಶಸ್ತವಲ್ಲ್ಯ । ಸುತ್ತು ಮುತ್ತಲು ನೋಡಬಾರದು ಗಗನವ್ಯೋಮವನು ॥
ನಿತ್ಯದಲಿ ಸತಿಯರಿಗೆ ಶೇಷದ । ತುತ್ತು ಮಾನದ ಅನ್ನವಿಡದಿರೆ । ಸತ್ಯ ಬರುವುದು ಪಾಪವದರಿಂ ಬಿಡಿರಿ ಶೇಷಾನ್ನ ॥86॥

ಪರಿಯು ಬಿಟ್ಟಾ ಶೇಷದನ್ನವ । ಸತಿಯು ತಿನ್ನದೆ ಬಿಟ್ಟಳಾದರೆ । ಕ್ಷಿತಿಯೊಳಗೆ ಬಹು ಪಾತಕವು ತಟ್ಟವುದು ನಿಜವಿದಲಾ ॥
ಪತಿತನಿರಬಾರದು ಸಮೀಪದಿ । ಸತಿಯರಾ ಮೊರೆಯ ನಿರೀಕ್ಷಿಸ । ಲತಿಶಯವು ಪಾತಕವು ಬರುವುದು ವರ್ಜಿಸುವುದಿದನು ॥87॥

ಶೂನ್ಯ ದೇವಾಲಯದಿ ಮೇಣಾ । ತನ್ನ ಮನೆಯಾ ದೇವಗೃಹದೊಳ- । ಗಿನ್ನು ಪೇಳುವೆ ಜಲಸಮೀಪದಿ ಸಂಜೆಹೊತ್ತಿನಲಿ ॥

ಅನ್ನುವನು ಭುಂಜಿಸುವುದನುಚಿತ । ವಿನ್ನು ಪೇಳುವೆನೂಟಪಾತ್ರಗ । ಳನ್ನು ಕಲ್ಲಿನ ಮೇಲಿಡುತ ಭೋಜನವು ಸಲ್ಲದಲಾ ॥88॥

ಅನುಚಿತವು ಮಾಡುವುದು ಸಹ ಭೋ । ಜನವ ಮಾಡಲು ಯೆಂಜಲುಂಡಾ । ಘನತರದ ಪಾತಕವು ಬೆನ್ನಟ್ಟುವುದು ನಿಜವಾಗಿ ॥

ವನಿತೆಯರಿಗೆ ನಿರ್ದೋಷವಪ್ಪುದು । ಅನಿ ತುಪರಿಯಲ್ಲವನು ತಿಳಿದಾ । ದಿನದಿನದೊಳಿದನಾಚರಿಸಬೇಕೆಂದು ಮುನಿ ನುಡಿದಾ ॥89॥

ಪ್ರಾಶನವ ಮಾಡುತ್ತ ಉಳಿದಿಹ । ಶೇಷಜಲವಚ್ಛಿಷ್ಟವೆನುವರು । ಪ್ರಾಶಿಸಲು ಬೇಕಾದರದರಿಂ ಚೆಲ್ಲುವುದು ತುಸುವಾ ॥

ದೋಷಕರ ವಸ್ತ್ರೋದಕವು ಬಹು । ದೋಷಗಳು ತಟ್ಟುವವು ನರಕದ । ವಾಸ ನಾಯಿಯ ಜನ್ಮ ಬರುವುದು ಮರಣ ನಂತರಕೆ ॥90॥

ನೀರು ಕುಡಿಯುವ ಸಮಯದಲಿ ಮೇಣ್ । ಕ್ಷೀರಘೃತವಾಪೋಶನದ ಕರ । ನೀರ ಸೇವಿಪ ಕಾಲದಲಿ ನಿಃಶಬ್ದ ವಿರಬೇಕು ॥

ನೀರನೀಪರಿ ಕುಡಿ ವಕಾಲದಿ । ಸೇರಿದರೆ ತುಸುಶಬ್ದ ಕಿವಿಗೆ ವಿ- । ಚಾರಿಸದೆ ಬಿಡಬೇಕು ಕುಡಿಯೆ ಸುರಾ ಸಮಾನವದ ॥91॥

ನದಿಸರೋವರಗಳಲಿ ಸೇರುತ । ವದನದಿಂದಲೆ ನೀರಪ್ರಾಶಿಸು- । ವುದು ಮಹಾದೋಷಾಸ್ಪದವು ಜಲ ನಿಂತು ಕುಡಿದರದು ॥

ಬುಧರು ಪೇಳ್ವರಯೋಗ್ಯವೆನುತಲಿ । ಮುದದಿ ಸುರೆಗುಪಮೆಯನು ಕೊಡುವರು । ಬುಧರು ಕೇಳದರಿಂದಲೀಪರಿ ಪಾನತ್ಯಜಿಸುವುದು ॥92॥

ಎರಡು ಕೈಯಂಜಲಿಯಲೇ ಸ್ವೀ । ಕರಿಸಬಾರದು ನೀರನೊಂದೇ । ಕರದಿ ಕುಡಿವುದು ಯೋಗ್ಯ ಯಡಗೈ ಮುಟ್ಟಬಾರದಲಾ ॥

ಭರದಿ ಸಭೆಯಲಿ ಕೂತು ಅಥವಾಂ- । ಥರುಣದಲ್ಲಿಯೆ ಕೂತು ಜಲ ಸ್ವೀ । ಕರಿಸಬಾರದು ದೋಷವಗಣಿತ ವಿಹುದು ಪ್ರಾಶನದಿ ॥93॥

ಭಿನ್ನ ಪಾತ್ರದಿ ಬಡಿಸುವುದು ಕೇ । ಳನ್ನವನು ಭೋಜನದ ಸಮಯದೊ- । ಳನ್ಯ ಜಾತಿಯ ನರರು ನೋಡಲುಬಾರದನ್ನವನು ॥

ಕುನ್ನಿ ಚಾಂಡಾಳರು ರಜಸ್ವಲೆ । ಯನ್ನ ವನು ದೃಷ್ಟಿಸಲು ಬಾರದು । ಕರ್ಣಪಥದಲಿ ಬರಲು ಧ್ವನಿಯದು ತ್ಯಜಿಪುದನ್ನವನು ॥94॥

ದಳಣ ಕಾಂಡಣ ಮಾಳ್ಪ ಸಪ್ಪಳ । ಕಲಹವಾಡುವ ಶಬ್ದಗಳು ಬೈ- । ಗಳಿನ ಸ್ಪಷ್ಟಾಸ್ಪಷ್ಟ ಶಬ್ದದ ಕೇಳಿದಾಕ್ಷಣವೆ ॥
ಕುಳಿತರೂಟಕೆ ಬಿಟ್ಟು ಭೋಜನ । ದೆಲೆಯ ಮೇಲಿಂದೇಳಬೇಕೈ । ಕೊಳಲುಬಾರದು ಪಂಕ್ತಿಗನ್ಯರ ಗುರ್ತವಿಲ್ಲದರಾ ॥95॥
ಗುರ್ತದಿಲ್ಲದ ಜನರ ಪಂಕ್ತಿಗ- । ಗತ್ಯವಿದ್ದರೆ ಭಸ್ಮ ಜಲದಲಿ । ಪ್ರತ್ಯಕಿಸಿಕೊಳ್ಳುವುದು ಯೋಗ್ಯವು ಜಲವು ಶುದ್ಧಿಪುದು ॥
ಮತ್ತೆ ಮಧ್ಯದಿ ಸ್ತಂಭವಿರಲದು । ಪ್ರತ್ಯೇಕಿಸುವುದು ದ್ವಾರಮಾರ್ಗ ಪ್ರ- । ಶಸ್ತವಾಗಿಹುದೈ ಪ್ರಥಮಕ್ಕರಣಕ್ಕೆ ಶುದ್ಧಿಯಲಿ ॥96॥
ಕೃಷ್ಣ ವಸ್ತ್ರವನುಟ್ಟು ಭೋಜನ- । ವನ್ನು ಮಾಳ್ಪುದು ಯೋಗ್ಯವಲ್ಲವು । ಅನ್ನ ಬಡಿಸಲು ಸ್ತ್ರೀಯರೈ ತಾ ಕಚ್ಚೆ ಹಾಕದಲೆ ॥
ಅನ್ನ ವದನುಚ್ಛಿಷ್ಟವೆಂಬರು । ಸನ್ನುತಾತ್ಮರು ತಿಳಿವುತಲಿ ಶೇ । ಷಾನ್ನ ಬಿಡುವುದು ವಿಕಿರಿಡ ವಿಲೋಹಿತವನುಚ್ಚರಿಸಿ ॥97॥
ಋಷಿಯಘೋರನು ಮಂತ್ರಕಿರುವನು । ಮಿಸುಪ ದೇವತೆ ರುದ್ರನಿದಕಿ । ನ್ನುಸುರುತಲಿ ಅನ್ನಾಭಿಮಂತ್ರಣ ಮಾಳ್ಪುದೈ ದ್ವಿಜರು ॥
ಉಸುರುತಲಿ ಶೇಷಾನ್ನ ಕೈಯಿಂ- । ಹೆಸರನುಚ್ಚರಿಸುತ್ತ ಯಮಗ । ರ್ಪಿಸುವುದೈ ಬಲಿಯುತ್ತರಾಪೋಶನವ ಮಾಡುವುದು ॥98॥
ಪಾತ್ರದುಚ್ಛಿಷ್ಟವನು ಸರ್ವವ । ಹಸ್ತದಲಿ ತಕ್ಕೊಂಡು ಪಾತ್ರದ । ಹತ್ತಿರಕ್ಕಿದನಿಡುಪುದೈ ರೌರವವನುಚ್ಚರಿಸಿ ॥
ಹಸ್ತಪ್ರಕ್ಷಾಳನವ ಮಾಳ್ಪುದು । ಹಸ್ತದಿಂ ಗಂಡೂಷ ಮಾಳ್ಪುದು । ಚಿತ್ತವಿಸಿರೀಪರಿಗೆ ತಪ್ಪಲು ಆತ್ಮಘಾತಕಿಯು ॥99॥
ಬಾಯ ತೊಳೆಯುವ ಪರಿಯ ಕೇಳಿರಿ । ಬಾಯೊಳಗೆ ನಡುಬೆರಳ ಹಾಕುತ । ಸೋಯಿಯಿಂದಲೆ ತಿಕ್ಕಿ ಕಿರಿಹಿರಿ ಬೆರಳ ಹಾಕದಲಿ ॥
ಬಾಯೊಳೆರಡೀ ಬೆರಳ ಹಾಕಲು । ಸಾಯಲಾ ರೌರವದ ನರಕವು । ಕಾಯುತಿರುವುದು ಪಾಪ ಕರ್ಮದ ಫಲನಿಮಿತ್ತದಲಿ ॥100॥
ಹಸ್ತ ಪ್ರಕ್ಷಾಳನವ ತೀರಿಸಿ । ಮತ್ತೆ ಮಾಳ್ಪುದು ದಂತಶೋಧನ । ಕಿತ್ತಿ ಹಾಕುತ ಹಸ್ತ ದಿಂದ ಪವಿತ್ರ ನೈಋತಕೆ ॥
ಮತ್ತೆ ಕೇಳಂಗುಷ್ಠ ಮಾತ್ರವೆ । ನುತ್ತ ಮಂತ್ರೋಚ್ಚಾರ ಮಾಡುತ । ಹಸ್ತದಿಂ ಕಣ್ಣಿಗೆ ಜಲವನರ್ಪಿಸುವುದೈ ದ್ವಿಜರು ॥101॥

ತೆರದೊಳೀ ಮಂತ್ರವನು ಜಪಿಸದ । ನರಗೆ ಕಣ್ಣಿನ ರೋಗ ಬರುವುದು । ನರರು ಜಪಿಸುತ ಕಣ್ಣು ಮುಟ್ಟಲು ದೃಷ್ಟಿ ದೃಢವಹುದು ॥
ಎರಡು ಆಚಮನಗಳ ತೀರಿಸಿ । ತಿರುಗಿ ಯಾಯಂಗೌವ ಮಂತ್ರವ । ನಿರದೆ ದ್ರುಪದಾದೀತಿ ಮಂತ್ರೋಚ್ಚಾರ ಮಾಡುವುದು ॥102॥

ಕಾಲತೊಳದಾ ನಂತರದಿ ನೀ- । ವೇಳಿರೈಯಲ್ಲಿಂದ ಭೋಜನ । ಶಾಲೆಯಲಿ ಬಂದಾಗ ಎರಡಾಚಮನಗಳ ಮಾಡಿ ॥
ಮೇಲೆ ನಾಭಿಸ್ಪರ್ಶಮಾಳ್ಪುದು । ಮೇಲೆ ಭಕ್ತಿ ಪುರಸ್ಸರದಿ ನಾ । ಮಾಳಿಯನು ಸಂಸ್ಮರಿಸುವಾ ಪರಿ ಪೇಳ್ವೆ ಕೇಳುವುದು ॥103॥

ಸ್ಮರಿಸಬೇಕಾ ಋಷಿಯ ಗಸ್ತಿಯ । ಮರಳಿ ವಡವಾನಳನ ಭೀಮನ । ಸ್ಮರಿಸಿರೈ ನೀವ್ ಕುಂಭಕರ್ಣನ ಶನಿಯನಿಲ್ವಲನಾ ॥
ಸ್ಮರಿಸಿರೆ ವಾತಾಪಿಯನು ನೀವ್ । ಸ್ಮರಿಸಿದರೆ ಕೇಳೀ ಮಹಾತ್ಮರ । ಬರುವುದೈ ಪಂಚನಾಗ್ನಿ ದೇಹದಿ ಪ್ರಜ್ವಲಿಸುತಿಹುದು ॥104॥

ಇರುವುದಾರಿಗೆ ಬಂಧುವರ್ಗವು । ಕರಗಳವರೈ ವಸ್ತ್ರದಿಂದಲಿ । ಒರಿಸಬಾರದು ಕರಗಳಾರಿಸಬೇಕು ಬೆಂಕಿಯಲಿ ॥
ಸ್ಮರಿಸಿರೈ ಗುರುವರನ ತದನಂ- । ತರಕೆ ಕುಲದೇವತೆಯನೆಂದಾ । ಗುರುವರನು ಪೇಳಿ ದನ ಭೋಜನದ ಪ್ರಕಾರವನು ॥105॥

ಅರುಹಿದುವನಿದ ಕೇಳುತಾ ಭೂ- । ಸುರನು ಗುರುವಿಂಗೆಂದ ನಿನ್ನಯ । ಕರುಣದಿಂದಲಿ ತಿಳಿಯಿತೆಮಗೀ ಭೋಜನದ ವಿಧಿಯು ॥
ಅರುಹುವುದು ಯೆಮಗೀಗ ಭೋಜನ । ಕಿರುವುದಾವುದು ವಿಧಿನಿಷೇಧದ । ಪರಿಯ ಪೇಳ್ಪುದೆನುತ್ತ ವಿಪ್ರನು ಗುರುವಿಗೆರಗಿದನು ॥106॥

ಗುರವು ಪೇಳಿದನಾಗ ವಿಪ್ರಗೆ । ಅರುಹುವೆನು ನಾನೀಗ ಕೇಳಿದ । ನರನು ತಿನಬಾರದು ಲವಣಬಹುಮಿಶ್ರಿತಾನ್ನವನು ॥
ವಿರಚಿಸದಲಾ ವೈಶ್ವದೇವವ । ತಿರುಗಿ ಪೂರ್ಣಗಣಾನ್ನವನು ಭೂ- । ಸುರನು ವರ್ಜಿಪುದೇಕಭಾವದಿ ದೋಷ ಬಹುವಿಹುದು ॥107॥

ಲಶುನಗಾಜರಕಂದಮುಲಗಳು । ಮಿಸುಪ ಬಿಳಿ ಕುಂಬಳವು ಬದನೆಯು । ಮಿಸುಪ ಛತ್ರಾಕಾರವಿಹ ಶಾಖೆಗಳು ಸರ್ವಸ್ವ ॥
ವಸುಮತಿಯೊಳಗ್ರಾಹ್ಯಗಳು ಕೇಳ್ । ವಿಷಮವಪ್ಪುದು ಸೇವಿಸಲಿಕದು । ಮಸಗುವುದು ಬಹುಪಾಪ ಸೇವನಮಾತ್ರದಲ್ಲಿ ತಿಳಿಯೆ ॥108॥

ರಾತ್ರಿ ಹತ್ತರ ತನಕ ಬಿಡಿರಿ ಪ್ರ । ಸೂತವಿಹ ದನಮಹಿಷಿಗಳ ಸ್ತನ- । ದುತ್ತಮವು ಹಾಲಿಲ್ಲ ಬಿಡಿರೀ ತೆರೆದ ಹಾಲುಗಳಾ ॥
ನೂತನದಿ ನದಿ ಪೂರಬರಲು ತ್ರಿ । ರಾತ್ರಿಯಲಿ ಜಲವನ್ನು ಬಿಡುವುದು । ಶಾಸ್ತ್ರ ಸಮ್ಮತವಾದ ಮಾತಿದು ಕೇಳು ಭೂಸುರನೆ ॥109॥

ಪ್ರತಿಪದೆಯ ದಿನ ಬೂದಿಗುಂಬಳ । ಸತತ ಪಡವಳ ಡೋರಲಿಯ ಮತಿ । ಯುತರು ಭಕ್ಷಿಸಬಾರದೈ ಭಕ್ಷಿಸಲು ಪಾಪವದು ॥
ಕ್ಷಿತಿಯೊಳಗೆ ಸ್ವರ್ಗಾಪವರ್ಗದ । ಮತಿಯಿರಲು ಅಷ್ಟಮಿಯ ದಿನದಲಿ । ಸತತ ಬಿಡಿರೌದುಂಬರದ ನೆಲ್ಲಿಯ ಸುಫಲಗಳನು ॥110॥

ನೆಲ್ಲಿಕಾಯಿಯ ಭಾನುವಾರದಿ । ಮೆಲ್ಲಬಾರದು ರಾತ್ರಿಯಲಿ ನೀ । ವೆಲ್ಲಕೇಳಿರಿ ಬೇಲಫಲ ಬೃಗುವಾರದಲಿ ವರ್ಜ್ಯ ॥
ಸಲ್ಲದೈ ಶನಿವಾರ ಶಮಿಫಲ । ವಲ್ಲಳೈ ಶ್ರೀಲಕ್ಷ್ಮಿ ಯದರಿಂ- । ದೆಲ್ಲವನು ನಾ ಪೇಳ್ದ ವಿಧಿಯಾಚರಿಸುವುದು ಬುಧನು ॥111॥

ರಾತ್ರಿಯಲಿ ಭಕ್ಷಿಸಲು ನರನಾ । ಧಾತ್ರಿಫಲವ ಪ್ರತಿಜ್ಞೆ ತೊಲಗದೆ- । ನುತ್ತ ಪೇಳ್ವರು ವೀರ್ಯನಾಶವ ಮಾಳ್ಪುದೀಫಲವು ॥
ಸುತ್ತುಮುತ್ತಲು ಯೆಂಜಲಿರಪ- । ವಿತ್ರವದು ನಖಕೇಶ ಬಿದ್ದರೆ । ಮತ್ತೆ ಮೂಷಕಧೇನುಸ್ಪರ್ಶದೊಳೆಂಜಲಿಪುದನ್ನಾ ॥112॥

ಒಂದೆ ಕೈಯಲಿ ಬಡಿಸಿದನ್ನವ । ಹಿಂದೆ ಮಾಡಿದ ತಂಗಳನ್ನವು । ನಿಂದ್ಯವಹುದೈ ತ್ಯಜಿಪುದವುಗಳನೇಕ ಭಾವದಲಿ ॥
ನಿಂದ್ಯವಲ್ಲಾ ತಂಗಳಲ್ಲವು । ಚಂದದಿಂ ಘೃತತೈಲಮಿಶ್ರಿತ । ಸುಂದರಾನ್ನವು ಕರದವಸ್ತ್ರವು ತಂಗಳೆನಿಸುವುದೆ ? ॥113॥

ಕ್ಷೀರಘೃತ ಮೊದಲಾದ ವಿಧವಿಧ । ಗೋರಸವನಾ ವಿಪ್ರವರ್ಯರು । ಮಾರುವುದು ತಕ್ಕೊಂಡರರದ ಬಹುಪಾತಕವು ನಿಜವು ॥
ಧಾರುಣೀಸುರರುಣ್ಣಬಾರದು । ಭಾರಿದೋಷವು ವಹ್ನಿ ಪಕ್ವವು । ಚಾರು ಉದ್ದಿನ ವಡೆಯು ಅಳ್ಳಿಟು ತಂಗಳೆನಿಸದದು ॥114॥

ಫಲಗಳೆಲ್ಲವು ಕಂದಮೂಲಗಳು । ತಿಳಿಯಲಾರದು ತಂಗಳೆನುತಲಿ । ವಿಳಿತುಜವಪರಮಾನ್ನ ಗುಡಯುತ ಲವಣಹೀನಾನ್ನಾ ॥
ತಿಳಿಯಲಾರದು ತಂಗಳೆನುತಲಿ । ಕೊಳಲಿದನು ನಿರ್ದೋಷವದು ತಂ- । ಬುಲವನೀವುದು ಕೇಳ್ವುದುತ್ತಮ ಭಜನಾಂತರದಿ ॥115॥

ಅಡಿಕೆಹೋಳಥವಾ ಸುಚೂರ್ಣವ । ಕೊಡುವುದ್ಯೆ ಕೊಳ್ಳುವುದು ವಿಪ್ರರು । ಕೊಡುವುದೊಂದಡಿಕೆಯು ಸುಖವನಾರೋಗ್ಯ ಪ್ರಕೃತಿಯನು ॥
ಅಡಿಕೆದ್ವಯವನು ಕೊಡೆ ನಿರೋಗಿತೆ- । ಯಡಿಕೆ ಮರಳಿ ಭಾಗ್ಯಗಧಿಕತೆ- । ಯಡಿಕೆ ನಾಲ್ಕರಲೇನಹೇಳುವೆ ದುಃಖ ಬರುತಿಹುದು ॥116॥
ಅಡಿಕೆಯ್ಯೆಯ್ದನು ಕೊಡಲು ಪ್ರಜ್ಞಾ- । ದೃಢತೆ ಬರುವುದು ಆರಡಿಕೆಗಳ । ಕೊಡಲುಬಾರದು ಮರಣ ಬರುವುದು ಶಾಸ್ತ್ರಸಿದ್ಧವಿದು ॥
ಅಡಿಕೆಯನು ಬಾಯೊಳಗೆ ಹಾಕುತ । ಬಿಡಲು ಪರ್ಣನ ಬಾಯೊಳಿಕ್ಕದೆ ಕಡು ದರಿದ್ರತೆ ಯೇಳು ಜನ್ಮಾಂತರದಿ ತಟ್ಟುವದು ॥117॥
ಪರ್ಣಮೂಳವ ತೆಗೆಯದದನೇ । ತಿನ್ನುವವರಿಗೆ ವ್ಯಾಧಿಬರುವುದು । ಪರ್ಣದಗ್ರವ ತಿನಲು ಪಾಪವು ಬರುವುದ್ಯೆ ನಿಜವು ॥
ಚೂರ್ಣಪರ್ಣವ ತಿನ್ನಲು ಆಯುಃ- । ಕ್ಷೀಣತೆಯು ಸಂಭವಿಸುವುದು ಕೇಳ್ । ಪರ್ಣಪೃಷ್ಠದಿ ಬುದ್ಧಿ ನಾಶವು ಬರುವುದ್ಯೆ ನಿಜವು ॥118॥
ಎರಡು ಪರ್ಣಂಗಳನು ತಿಂದರೆ । ಸಿರಿಯು ತೊಲಗುವದೇನ ಹೇಳುವೆ । ದುರಿತವರ್ಧಕ ಪರ್ಣವೆರಡನು ತ್ಯಜಿಸುವುದು ದ್ವಿಜರು ॥
ವರಯತೀಶ್ವರ ಬ್ರಹ್ಮಚಾರಿಗೆ । ವರವಿಹೀನಸ್ತ್ರೀರಜಸ್ವಲೆ । ಯರಿಗೆ ತಾಂಬುಲ ಮಾಂಸಭಕ್ಷಣದಂತೆ ರಂಜಿಪುದು ॥119॥
ಮೇಲೆ ಹೇಳಿದ ಜನರಿಗಾ ತಾಂ- । ಬೂಲ ಮಾಂಸಾಹಾರವೆಂದೆನು । ಕೇಳಿರ್ಯೆ ರಸವದು ಸುರಾಪಾನಕ್ಕೆ ಸಮವಿಹುದು ॥
ಮೇಲೆ ಹೇಳಿದ ಪರಿಯಲಾತಾಂ- । ಬೂಲಗ್ರಹಣೋತ್ತರಕೆ ಸಾಯಂ । ಕಾಲದಲ್ಲಿ ಸಂಧ್ಯೆಯನ್ನು ವಿಧಿಪೂರ್ವಕದಿ ಮಾಡುವುದು ॥120॥
ತರಣಿಗರ್ಘ್ಯವನಿತ್ತು ಮೂರನು । ತಿರುಗಿ ನಾಲ್ಕರ್ಘ್ಯವನು ಕೊಡುವುದು । ಭರದಿ ಗಾಯತ್ರಿಯನು ನಂತರ ಉಚ್ಚರಿಸಿ ನೀವು ॥
ತಿರುಗಿಮಂಮೇವರಣಮಂತ್ರೋ- । ಚ್ಚರಣೆ ಮಾಡುತ ಬಳಿಕಗೊತ್ರೋ । ಚ್ಚರಣೆಯನು ಮಾಡುವುದು ಪ್ರವರಸಮೇತ ಭಕ್ತಿಯಲಿ ॥121॥
ರಾತ್ರಿಯಲಿ ಭೋಜನ ನಿಷಿದ್ಧ ವ- । ಗತ್ಯವಾದರೆ ಕ್ಷೀರಮಿಶ್ರಿತ । ಉತ್ತಮವು ಭೋಜನವು ಮಾಳ್ಪುದು ರಾತ್ರಿಕಾಲದಲಿ ॥
ರಾತ್ರಿಯೂಟವ ಮಾಳ್ಪವೇಳೆಗೆ । ಚಿತ್ರದಾಹುತಿ ಪರಿಯ ಪೇಳ್ವೆನು । ಭಕ್ತಿಯಿಂದುಚ್ಚರಿಸಿ ಋತಂತ್ವಾಸತ್ಯ ಮಂತ್ರವನು ॥122॥

ತೀರೆ ಊಟವು ವೇದಪಠಣವ । ನಾರಭಿಸುವುದು ವಂದು ಪ್ರಹರಕೆ । ತೀರಿಸುತ ವೇದಗಳ ಪೋಪುದು ಶಯನಮಂದಿರಕೆ ॥
ಮೂರು ಕಾಲಿನ ಭಿನ್ನ ಮಂಚವು । ಬಾರದೌದುಂಬರದ ಪಿಪ್ಪಲ । ಚಾರುಪ್ಲಕ್ಷವೃಕ್ಷಮಂಚವು ಬಾರಿದೂಷಿತವು ॥123॥

ಪ್ರೇತಗಜದಂತಾಸ್ತಿ ಮಂಚವು । ಘಾತಕವು ಜಾಂಬೂಳಕಾಷ್ಠವು । ಪೂತ ವೃಕ್ಷದ ಕಾಷ್ಠ ಬೇಕೈ ಮಂಚ ಮಾಡಲಿಕ ॥
ಪೂತನಕ್ಷತ್ರಗಳ ವಾರಗ- । ಳಾತತೂಕ್ಷಣ ಪೇಳ್ವೆ ಮಂಚದ । ರೀತಿಯನು ಫಲಗಳನು ಸಾಧಕಬಾಧಕಂಗಳನು ॥124॥

ತರಣಿವಾರದಿ ಮಂಚಮಾಡಲು । ಬರುವುದೈ ಬಹುಲಾಭ ಚಂದ್ರನು । ತರುವ ಬಹುಸುಖವ ಮಂಗಳ ದುಃಖಕಾರಕನು ॥
ಬರುವುದೈ ಬುಧನಿಂದ ಪೀಡೆಯು । ಗುರುವಿನಿಂ ಷಟ್ಪುತ್ರಲಾಭವು । ವರವಿಶೇಷವು ಶುಕ್ರ ಮರಣವು ಮಂದವಾರದಲಿ ॥125॥

ಮಘಧನಿಷ್ಠಾ ಭರಣಿಯಲಿ ಮಂ- । ಚಗಳ ಮಾಡಲು ಬಾರದೈ ಬಹು । ವಿಗುಣವಿಹವೀ ಮೂರು ನಕ್ಷತ್ರಗಳು ನೋಡಿದರೆ ॥
ಸ್ವಗೃಹಶಯನಕೆ ಮೂಡಲಿಗೆ ತಲೆ । ಸಗುಣ ಶ್ವಶುರಾಲಯದಿ ದಕ್ಷಿಣ । ಸುಗಮ ಪಶ್ಚಿಮದಿಶೆಗೆ ತಲೆಯು ಪ್ರದೋಷಕಾಲದಲಿ ॥126॥

ಉತ್ತರವು ಸಂತತ ನಿಷಿದ್ಧ ವು । ಮತ್ತೆ ಪೇಳುವೆ ಪೂರ್ಣಕುಂಭವ । ಮಸ್ತಕದ ಹತ್ತರಕೆ ಮಂಗಳ ದ್ರವ್ಯವನ್ನಿಟ್ಟು ॥
ರಾತ್ರಿ ಸೂಕ್ತದಿ ವಿಷ್ಣು ವನು ಸ್ಮರಿ-। ಸುತ್ತ ಋಷಿಯನಗಸ್ತಿಯನು ಸ್ಮರಿ-। ಸುತ್ತ ಮಾಧವ ಮೇಣು ಮುಚುಕುಂದನನು ಸ್ಮರಿಸುವುದು ॥127॥

ಬಳಿಕ ಆಸ್ತಿಕ ಕಪಿಲಋಷಿಗಳ । ಕೊಳುತ ಸರ್ಪಂಗಳ ಸುನಾಮಾ । ವಳಿಯ ಶಯನವ ಮಾಳ್ಪುದೈ ಭೂಸುರರು ಸಂತಸದಿ ॥
ಹಳೆದಿರುವ ದೇವಾಲಯವು ಗಿಡ- । ತಳವು ಮೇಣು ಸ್ಮಶಾನಭೂಮಿಯು । ಹಲರು ಕೂಡವ ಸಾರ್ವಜನಿಕ ಸ್ಥಳ ಮಹೇಶ್ವರನಾ ॥128॥

ಸ್ಥಳವು ನಿಜತಾಯ್ತಂದೆ ಸಂತಸ- । ದೊಳಗೆ ಮಲಗಿದ ಸ್ಥಳವು ಕೇಳ್ವಾ । ರುಳವು ಕೆರೆ ನದಿದಂಡೆ ಯಿವು ಶಯನಕ್ಕಯೋಗ್ಯವಲಾ ॥
ಮಲಗಬಾರದು ಧಾನ್ಯದಲಿ ಮನೆ ಹಳೆದಿರುತ ಬೀಳಲಿಕೆ ಬಂದರೆ । ಮಲಗುವುದು ಕೇಳನುಚಿತವು ಪರಿಕಿಸಲು ಭೂಸುರರು ॥129॥

ನೆಲದ ಮೇಲ್ತಾಯ್ತಂದೆ ಮಲಗಿರೆ । ಮಲಗಬಾರದು ಮಂಚದಲಿ ಅವ । ರೊಳಗೆ ಮಲಗಲು ಹೊರಗೆ ಮಂಚದಿ ಮಲಗುವುದು ಸುತನು ॥
ತಲೆಗೆ ವಸ್ತ್ರವ ಸುತ್ತಿ ಗಗನದೆ । ಕೆಳಗೆ ದೀಪವ ನೋಂದಿಸದೆ ತಾ । ಮಲಗಬಾರದು ವದ್ದೆ ವಸ್ತ್ರದಿ ನಗ್ನ ರೀತಿಯಲಿ ॥130॥

ಮಲಗಬಾರದು ಪೂರ್ವರಾತ್ರಿ ಗೆ । ಮಲಗಲಕ್ಕ ಪರಾತ್ರಿಸಲ್ಲದು । ಮಲಗಬಾರದು ಸ್ತ್ರೀ ರಜಸ್ವಲೆ ಯಿರಲು ಹತ್ತಿರಕೆ ॥
ಮಲಗುವಾಗಲೆ ದೀಪ ನೊಂದಿಸಿ । ಮಲಗುವುದು ಶ್ರೇಯಸ್ಕರವು ಕೇ । ಳುಳಿದರಾ ದೀಪದಲಿ ಆಯುಕ್ಷೀಣ ಕಾರಣವು ॥131॥

ನೀಲವಸ್ತ್ರವನುಟ್ಟು ಸ್ತ್ರೀ ಚಾಂ- । ಡಾಳ ಪುತ್ರನ ಪಡೆವಳದರಿಂ । ನೀಲವಸ್ತ್ರ ತ್ಯಾಜ್ಯ ವಸ್ತ್ರವು ಶುಭ್ರವಿರಬೇಕು ॥
ಲೋಲಲೋಚನೆಯರಿಗೆ ಕೇಳ್ಕೃತು । ಕಾಲ ಬಾರದೆ ಸಂಗ ಮಾಡಲು ಹೇಳಿಹರು ಬಹು ದೋಷವೆನುತಲಿ ಋಷಿಕುಲೋತ್ತಮರು ॥132॥

ಹತ್ತು ವರ್ಷದತನಕ ಕನ್ಯೆಯು । ಮತ್ತೆಲಗ್ನವ ಮಾಡುವುದು ಬಹು । ಉತ್ತಮವು ನಂತರ ರಜಸ್ವಲೆಯೆಂದು ತಿಳಿಯುವುದು ॥
ಸ್ವಸ್ತ್ರೀಯಳಿಗೆ ಕಾಲವಿರೆ ಋತು । ಮತ್ತವಳ ತ್ಯಜಿಸುತ್ತ ಹೋದರೆ । ಹತ್ಯ ಬರುವುದು ಭೂಣಹತ್ಯ ದೋಷ ಬಹುಳಿಹುದು ॥133॥

ಸತಿಯು ವೃದ್ಧೆಯು ಬಂಜೆಯಿರಲಾ । ಸುತರು ಬಹುಪರಿ ಮೃತಿಯ ಪಡೆದರೆ । ಸತತ ಕನ್ಯಾ ಸಂತತಿಯೆ ಜನಿಸಿದರೆ ಯಾಸತಿಗೆ ॥
ಋತುವು ತಪ್ಪಲು ದೋಷವಿಲ್ಲೈ । ಋತುಕೊಡಲು ನಾಲ್ಕನೆಯ ದಿವಸದಿ । ಸುತನು ಅಲ್ಪಾಯುಷಿಯು ಐದನೆದಿನದಿ ಮಗಳಹಳು
॥134॥

ಆರನೇ ದಿನ ಋತುವನೀಯಲು । ಧಾರುಣಿಯೋಳೀ ಪುತ್ರನಾಗುವ । ಚಾರು ಕನ್ಯಾ ಜನನ ಋತು ಕೊಡೆ ವಿಷಮದಿವಸದಲಿ ॥
ತಾರಕಾಬಲವಿರಲು ಋತುದಿನ । ಸೇರುವುದು ದಶದಿವಸವದರಿಂ- । ತಾರೆಗಳು ವರ್ಜ್ಯಗಳು ರೇವತಿ ಮೇಣ್ ಮಘಾ ಮೂಲಾ ॥135॥

ಸತಿಪುರುಷರೊಳು ಕ್ರೋಧವಿರುವುದು । ಋತುಸಮಯದಲಿ ಯೋಗ್ಯವಲ್ಲವು । ಋತು ಸಮಯದಿ ಗುಣಾನುಸಾರದಿ ಪಿಂಡ ಜನಿಸುವುದು ॥

ಸತತವೀಪರಿ ಧರ್ಮಕರ್ಮದ । ಗತಿಯಿರಲು ವಿಪ್ರರಿಗೆ ಧನಸಂ- । ಪತಿಯು ಸುತ ಸಂತಾನವೃದ್ಧಿಯು ಯೆಂದನಾ ಮುನಿಯು ॥136॥

ಗುರುವನು ಪೇಳಿದನು ವಿಪ್ರಗೆ । ಪರಿಯೊಳೀ ಧರ್ಮವನು ಪಾಲಿಸೆ । ಬರುವುದೆಲ್ಲಿಂದವಗೆ ದೈನ್ಯವು ಧರ್ಮನಿಷ್ಠನಿಗೆ ॥

ಸಿರಿಯು ಸ್ಥಿರವಿಹಳಲ್ಲಿಯೇ ನೀ । ನರಿ ಯಿದನು ಪುತ್ರಾದಿ ಸೌಖ್ಯವು । ನಿರತ ಸಿಗುವುದು ನೂರುವರುಷಾಯುಷ್ಯವಾತನಿಗೆ ॥137॥

ದುರಿತಗಳು ತಟ್ಟವು ಕಣಾ ಕಲಿ- । ಪುರುಷನಂಜುವನವಗೆ ಕಾಲನ । ಮರಣ ಭಯವೆಲ್ಲಿಂದ ಬರುವದು ಧರ್ಮನಿಷ್ಠನಿಗೆ ॥

ಇರುವದೀಪರಿ ಧರ್ಮಕರ್ಮದ । ಪರಮಪಾವನ ಮಹಿಮೆಯಿದ ನೀ । ನರಿತು ಸಂತತವಾಚರಿಸ ಬೇಕಂದನಾ ಗುರುವು ॥138॥

ಗುರುವಚನವನು ಕೇಳಿ ವಿಪ್ರನು । ಚರಣಕೆರಗುತ ನುಡಿದನಾಕ್ಷಣ । ಕರುಣಸಾಗರನಾಗಿ ಭಕ್ತೋದ್ಧರಣ ನೀನಾಗಿ ॥

ಧರೆಯೊಳವತರಿಸಿರುವಿ ನೀ ಹರಿ- । ಹರವಿರಂಚಿಯೆ ಯೆಂದು ನಂಬಿಹೆ । ತರಣಿಯಂದದೊಳೆನ್ನ ತಿಮಿರವ ಹರಿಸಿದೆಯೋ ದೇವಾ ॥139॥

ಎನುತ ವಿಪ್ರನು ಚರಣಕಭಿವಂ- । ದನೆಯ ಮಾಡುತ ತುಂಬಿ ಕಂಬನಿ । ವಿನಯಪೂರ್ವಕವಾಗಿ ನಮಿಸಿದನೇಕಭಾವದಲಿ ॥

ಮನದಿ ಸಂತಸ ತಾಳಿ ಶ್ರೀಗುರು । ಪುನಹ ಪೇಳಿದನಾಗ ವಿಪ್ರಗೆ । ವಿನಯದಿಂದಾನರುಹಿದೆನು ಭೂಸುರರ ಧರ್ಮವನು ॥140॥

ಪರಮ ಭಕ್ತಿಯೊಳಾಚರಿಸಲೀ । ಪರಿಯೊಳೆಲ್ಲವುದುರಿತದೋಷವು । ಹರಣವಾಯಿತು ಬೇಡ ನಿನಗೀಭಿಕ್ಷೆ ಮುಂದಿನ್ನು ॥

ಪರಮ ಸುಖಸಾಮ್ರಾಜ್ಯ ನಿನ್ನನು । ವರಿಸಿಹುದು ಕೇಳೀಗ ನಿಜವಿದು । ಪರಮ ಕನ್ಯಾಪುತ್ರಸಂತತಿ ವರ್ಧಿಪುದು ನಿನಗೆ ॥141॥

ಬೇಡ ಸಂಶಯವಿದಕೆ ನಿನಗೀ । ರೂಢಿಯಲಿ ಪುರುಷಾರ್ಥಸಾಧನ । ಕೂಡುವುದು ಗುರುಭಕ್ತಿ ನಿನ್ನದಗಾಧ ನೋಡಿದೆನು ॥
ಮೂಡಿದನು ಸುಜ್ಞಾನಸೂರ್ಯನು । ಓಡಿದುದು ಬಹುದುಃಖಕತ್ತಲೆ । ಮೂಢನೀ ಕಥೆ ಕೇಳಿದರೆ ಸುಜ್ಞಾನಿಯಾಗುವನು ॥142॥

ಗುರುವಚನವಿದು ಸತ್ಯ ನಾ ನಿಮ । ಗರುಹುವೆನು ನಿಜ ನಿಜವೆನುತಲಿ । ಮರಳಿ ಮೂರಾವರ್ತಿ ನಿಃಶಂಕೆಯಲಿ ಪೇಳುವೆನು ॥
ಗುರುವು ಪೇಳಿದ ತೆರದಿ ಧರ್ಮಾ- । ಚರಣವಾಗಲು ಸಿದ್ಧಿಗಳು ಕಿಂ- । ಕರರ ರೂಪದಿ ಸೇವಿಪರು ನಿಜವಿಷ್ಣು ವಚನದಲಿ ॥143॥

॥ ಅಧ್ಯಾಯ 37 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 38

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಮೂರುಜನರಿಗೆ ಸಾಲುತಿಹ ಸಂ- । ಭಾರದಿಂದಲೆ ಭಾಸ್ಕರದ್ವಿಜ । ನೂರುಮಂದಿಯನೆಲ್ಲರಿಗೆ ಭೋಜನವ ಹಾಕಿದನು॥

ಗುರುಚರಣದಾಕರ್ಷಣವ ವಿ । ಸ್ತರಿಸಲಸದಳ ಲಕ್ಷ್ಮಿಚಂಚಲೆ । ಯಿರುವಳೆನುತಲಿ ಗಾದೆ ಮಾತನು ಬಲ್ಲರೆಲ್ಲವರು ॥
ಗುರುಚರಣದಲಿ ಮಾತ್ರಲಕ್ಷ್ಮಿಯು । ನಿರತವಿರುವಳು ದಾಸಿ ಸ್ಥಿರದಲಿ । ತಿರುಗಿ ಕಿಂಕರರಷ್ಟ ಸಿದ್ಧಿಗಳಾಚರಣದಡಿಗೆ ॥1॥

ಚರಣಕೆರಗುತ ನಾಮಧಾರಕ । ಮರಳಿ ಬಿನ್ನೈಸಿದನು ಸಿದ್ಧಗೆ । ಗುರುಚರಿತ್ರ ಕಥಾನಕವ ಮುಂದೆನಗೆ ತಿಳಿಸುವುದು ॥
ಗುರುಚರಿತಾಮೃತವ ನೀನೀ । ವರೆಗೆ ಕುಡಿಸಿದೆ ತೃಪ್ತಿಯಾಗದು । ತಿರುತಿರುಗಿ ಕೇಳುವರೆ ಮನದಿ ಕುತೂಹಲವು ಬಹುದು ॥2॥

ನೀನು ಕುಡಿಸಿದ ಗುರುಚರಿತ್ರದ । ಪಾನವೈ ತೃಷೆ ಶಾಂತಮಾಡದೆ । ಪಾನದಾಶೆಯ ವರ್ಧಿಸುವುದೈ ಚಿತ್ರತರವಿದಲಾ ॥
ದೀನ ನಾನಜ್ಞಾನಿ ಯೆನಗಾ । ಜ್ಞಾನಪೀಯೂಷವನು ಕುಡಿಸಿ ನಿ । ಧಾನವನು ಕೂಡಿಸೆನುತ ಪೇಳ್ದನು ನಾಮಧಾರಕನು ॥3॥

ನುಡಿಯನಿದ ಕೇಳುತಲಿ ಸಿದ್ಧನು । ನುಡಿದನೈ ಕೇಳ್ ನಾಮಧಾರಕ । ಪೊಡವಿಯೊಳು ನಾ ಕಾಣೆ ನಿನ್ನ ಸಮಾನ ಭಕ್ತರನು ॥
ಒಡನೆ ನಿನ್ನಯ ಪ್ರಶ್ನೆ ಕೇಳುತ । ಪಡೆದೆನಾನಂದವನು ಮನದಲಿ । ಜಡಮತಿಗೆ ನಿನ್ನಿಂದಲೊಡೆದುದು ಸ್ಮರಣದಂಕುರವು ॥4॥
ವಿತ್ತವನು ತಂದಿರುವನೋರ್ವ ದ್ವಿ- । ಜೋತ್ತಮನು ಗುರುಚರಣಕಮಲದ । ಹತ್ತಿರಕೆ ತಾನಿಟ್ಟು ಬಿನ್ನೈಸಿದನು ಭಕ್ತಿಯಲಿ ॥
ವಿಸ್ತರಿಸಿದೆನು ಹಿಂದೆ ನಾನು ಚ- । ರಿತ್ರವಿದನೀನರಿಯೆಯಾ ಗುರು । ಮೂರ್ತಿ ಯಂಗೀಕಾರ ಮಾಡದೆ ಪೇಳ್ದನೈ ದ್ವಿಜಗೆ ॥5॥
ಎನಗೆ ವಿತ್ತವು ಬೇಡ ದ್ವಿಜ ಭೋ- । ಜನವ ಮಾಡೆಂದಾಗ ಗುರುವರ । ವಿನಯಪೂರ್ವಕದಿಂದ ಪೇಳ್ದನು ಹರುಷ ನಿರ್ಭರದಿ ॥
ಮನದಿ ಸಂತಸದಿಂದ ಸಮಾರಾ । ಧನೆಯ ಮನ ಮಾಡಿದನು ವಿಪ್ರನು । ದಿನದಿನದಿ ಕೇಳಾಯಿತಾಗುರುಮಠದಿ ಭೋಜನವು ॥6॥
ನಿತ್ಯ ಬ್ರಾಹ್ಮಣಭೋಜನವು ದಿನ । ನಿತ್ಯ ಗುರುಸನ್ಮಾನ ಪೂಜೆಯು । ಭಕ್ತರೀಪರಿ ಬಂದು ಗುರುವನು ಪೂಜಿಪರು ನಿತ್ಯಾ ॥
ಭಕ್ತರಾರಾಧಿಸದ ದಿನವದು । ಸತ್ಯ ಕಾಣರು ಜನರು ಊರೊಳೆ । ನುತ್ತಕೀರ್ತಿಯು ಪಸರಿಸಿತು ಕೇಳ್ ದೇಶದೇಶದಲಿ ॥7॥
ಹಲದಿವಸವೀಪರಿಯೊಳಾಗಲು । ಬಳಲಿ ಬಂದನು ವಿಪ್ರನತಿದು- । ರ್ಬಲನು ಕಾಶ್ಯಪಗೋತ್ರ ಭಾಸ್ಕರನಾಮಧಾರಕನು ॥
ಬಳಲಿ ಬಂದ ಸುದಾಮನಂದದೊ- । ಳೊಳಗೆ ಬಂದಾ ಗುರುವರನ ಪದ । ದಲಿ ತಲೆಯ ತಾನಿಟ್ಟು ಸಾಷ್ಟಾಂಗವನು ಮಾಡಿದನು ॥8॥
ಗುರುಚರಣದರ್ಶನಕೆನುತ ಬಂ । ದಿರುವ ಭೂಸುರ ತನ್ನ ಮನದಲಿ । ಗುರುವಿಗೊಂದಿನ ಭಿಕ್ಷೆಮಾಡುವೆನೆಂದು ನಿರ್ಧರಿಸಿ ॥
ತೆರವ ಕಾಣನು ಬಂದ ದಿವಸದಿ । ಯೆರಡನೆಯ ಜನರಿತ್ತರಾದಿನ । ಗುರುಗೆ ಭಿಕ್ಷೆಯನಂದು ಕರೆದರು ಭಿಕ್ಷೆಗಾ ದ್ವಿಜನಾ ॥9॥
ಮೂರುಜನರಿಗೆ ಸಾಲುತಿಹ ಸಂ- । ಭಾರವನು ಭಾಸ್ಕರನು ತಂದಿಹ । ಚಾರು ಭಕ್ತಿಯಲೊಂದು ವಸ್ತ್ರದಿ ಕಟ್ಟಿ ಬಗಲೊಳಗೆ ॥
ಸೇರಲಾ ಮಠಕಾಗಿ ಗಂಟನು । ಭೂರಿಜಾಗ್ರತೆಯಿಂದ ಕಟ್ಟಿದ । ನೇರಿಸುತನದ ತಲೆಕೆಳಗೆ ಮಠದಲ್ಲಿ ಮಲಗಿದನು ॥10॥

ಆ ದಿನದ ಭೋಜನವು ತೀರಲು । ಮೇದಿನೀಸುರ ಮಠಕೆ ಬಂದು ವಿ । ನೋದದಿಂದಾ ಗಂಟತಲೆಗಿಂಬಾಗಿ ಮಾಡುತಲಿ ॥
ಭೇದಬುದ್ಧಿ ಯನೆಣಿಸದಲೆ ಸಮ- । ರಾಧನೆಯ ತಾ ಮಾಳ್ಪನೆನುತಲಿ । ಮೇದಿನೀಸುರನಿದ್ದನಾ ಮಠದೊಳಗೆ ಭಕ್ತಿಯಲಿ ॥11॥

ದಿನದಿನದೊಳೆರಡನೆ ಯ ಮಂದಿಯೆ । ಅನವರತ ಭಿಕ್ಷೆಯನು ಮಾಳ್ಪರು । ದಿನವು ಸಿಗದಾ ಭಾಸ್ಕರಗೆ ನಿಜ ಭಿಕ್ಷೆ ಕೊಡುವುದಕೆ ॥
ಜನತೆ ಮಠದಲಿ ಕೂತು ನಿಂದೆಯ । ದಿನದಿನದಿ ಮಾಡುವರು ಸಮರಾ । ಧನೆಯ ಮಾಡುವಿ ಯೆಂದು ಭಾಸ್ಕರನನ್ನು ಕೇಳುವರು ॥12॥

ಭಿಕ್ಷೆ ಕೊಡಬೇಕೆಂದು ಗುರುವಿಗೆ । ನಿಶ್ಚಯದೊಳೀ ವಿಪ್ರ ಬಂದಿಹ । ಭಿಕ್ಷೆ ಕೊಡನಾ ಪರರ ಭಿಕ್ಷೆಯನುಣುವನೀ ದ್ವಿಜನು ॥
ಶಿಷ್ಯವೃಂದವು ಬಹಳ ಮಠದಲಿ । ನಿಶ್ಚಯವು ವಬ್ಬನಿಗೆ ಸಾಲದು । ಆಚ್ಚರಿಯೆಲಾ ಭಿಕ್ಷೆ ಕೊಡುವನು ಯೆಂತು ಗುರುವರಗೆ ॥13॥

ಎಂತು ಸಮರಾಧನೆಯನೆನುವನು । ಯೆಂತು ದ್ವಿಜಗೀ ಮಾನವಿಲ್ಲ್ಲೈ । ನಿಂತು ನೀನೇ ಭಿಕ್ಷೆ ಬೇಡುವಿ ಮಠದಿ ದಿನದಿನಕೆ ॥
ಇಂತು ನಾನಾ ಪರಿಯೊಳಾ ದ್ವಿಜ । ಪಂಕ್ತಿಯೆಲ್ಲವು ಚೇಷ್ಟೆಗೈದರು । ಬಂತು ಭಾಸ್ಕರದ್ವಿಜಗೆ ಚಿಂತೆಯು ಮನದಿ ಖಿನ್ನತೆಯು ॥14॥

ಮೂರು ಮಾಸಗಳಾಗಿ ಹೋದವು । ತೋರದೊಂದೇ ದಿವಸ ತೆರವಾ । ಧಾರುಣೀಸುರ ದಿನದಿನದಿ ಮಠದೊಳಗೆ ಭಂಜಿಪನು ॥
ಮೂರು ಮಾಸಗಳಾಗಿಯೊಂದಿನ । ಹಾರುವರ ಚೇಷ್ಟೆಯನು ಶ್ರೀಗುರು- । ಮೂರುತಿಯು ಕೇಳಿದನು ಬಡ ಬ್ರಾಹ್ಮಣನ ಸಂಗತಿಯಾ ॥15॥

ಕರೆದು ಭಾಸ್ಕರದ್ವಿಜಗೆ ಶ್ರೀಗುರು । ವರನು ಪೇಳಿದನಿಂದು ನಾ ಸ್ವೀ । ಕರಿಸುವೆನು ತವಭಿಕ್ಷೆ ಸನ್ನಾಹವನು ಮಾಡೀಗ ॥
ಗುರುವರನ ವಾಕ್ಯವನು ಕೇಳುತ । ಹರುಷದಿಂ ಕುಣಿದಾಡುತಾಕ್ಷಣ । ಚರಣಕಮಲದೊಳಿಟ್ಟು ತಲೆಯನು ಗುರುವ ಸ್ತುತಿಸಿದನು ॥16॥

ಮೂರು ಜನರಿಂಗೋಸುಗವೆ ಸಂ- । ಭಾರವನು ಮಾಡಿದನು ಭಾಸ್ಕರ । ಧಾರುಣೀಸುರರೆಲ್ಲ ಬಂದರು ಗುರುವರನ ಕಡೆಗೆ ॥
ದೂರಿದರು ಗುರುವಡಿಗೆ ದ್ವಿಜತತಿ । ಯಾರಿವನು ಬಂದಿಹನು ಯೆಮಗೀ । ಬಾರಿ ಮನೆಯೌತಣವು ಸಿಕ್ಕಿತು ಜೋಳನುಚ್ಚೆಂದು ॥17॥

ಗುರುವು ನಸುನಗುತೆಂದನಾಕ್ಷಣ । ತೆರಳದಿರಿ ನೀವ್ ಮನೆಗೆ ನೀವಿ- । ಲ್ಲಿರುವುದೈ ಭೋಜನಕೆ ಸ್ನಾನವ ಮಾಡಿ ಬನ್ನಿರಲಾ ॥
ಗುರುಮಠದೊಳಿರುತಿಹುದು ಪುಷ್ಕಳ । ಪರಮ ವಸ್ತುಗಳದರ ಮೂಲಕ । ಕರೆವನೈ ಗುರು ಮಾಡಿಸುವ ಸಂಭಾರಭಾರವನು ॥18॥

ಎನುತ ಬ್ರಾಹ್ಮಣರೆಲ್ಲ ಹಿಗ್ಗುತ । ಮನದಿ ತೆರಳಿದರಾಗ ಸ್ನಾನಕೆ । ವಿನಯದಿಂದಾ ಗುರುವು ಭಾಸ್ಕರನಿಂಗೆ ಪೇಳಿದನು ॥
ದಿನಮಣಿಯು ಗಗನದಲಿ ಯೇರುವ-। ನನಿತು ಸಾಮಗ್ರಿಯನು ಶೀಘ್ರದೊ-। ಳನುವರಿಸು ಬ್ರಾಹ್ಮಣರು ಬರುವರಪಾರಸಂಖ್ಯೆಯಲಿ ॥19॥

ಆ ನದಿಗೆ ತೆರಳಿದರು ವಿಪ್ರರು । ಸ್ನಾನಕೋಸುಗವೀಗಬರುವರು । ನೀನು ಬೇಗದಿ ಹೋಗಿ ಕರೆತಾರೀಗ ಭೂಸುರರಾ ॥
ಈ ನಿರೋಪವ ಕೊಂಡು ಭಾಸ್ಕರ- । ನಾನದಿಗೆ ನಡೆತಂದು ಪೇಳ್ದನು । ಸಾನುರಾಗದಿ ಬೇಗದಿಂ ತೆರಳುವುದು ಭೋಜನಕ ॥20॥

ಕೇಳಿ ಭಾಸ್ಕರದ್ವಿಜನ ವಚನವ । ಪೇಳಿದರು ಭೂಸುರರು ಸರ್ವರು । ಖೂಳ ನಡಿಯೆಲೊ ಗುರುವಿಗೌತಣ ಮಾಡು ಬೇಗದಲಿ ॥
ಮೇಳದಲಿ ನಾವೆಲ್ಲ ಬಂದರೆ । ಕೂಳು ವೊಂದೊಂದೆಮಗೆ ಸಾಲದು । ನಾಳೆ ಬರುವೆವು ಮಠದ ಭೋಜನಕೆಂದರಾ ದ್ವಿಜರು ॥21॥

ನುಡಿಯ ಕೇಳುತ ವಿಪ್ರರಾಡಿದ । ನಡೆದನಾ ಭಾಸ್ಕರನು ಗುರುಮಠ । ಕಡೆಗೆ ಶ್ರೀಗುರುಚರಣ ಕೆರಗುತ ಪೇಳ್ದ ನೀ ಹದನಾ ॥
ಬಡವ ನಾನಿಹೆ ನನ್ನ ಭೋಜನ- । ದಡಿಗೆ ಸಾಲದು ಮಂದಿ ಬಹುವಿದೆ । ಒಡನೆ ಬರುವೆವು ನಾಳೆ ಯೆಂಬರು ಬಾರರಿಂದಿನಲಿ ॥22॥

ನೇಮವಿಂದೆಮಗಿಹುದು ಬ್ರಾಹ್ಮಣ- । ಸ್ತೋಮದೊಡನುಣ್ಣುವುದು ಮುರಿಯೆವು । ನೇಮ ಕರೆ ಈ ಕಣವೆ ವಿಪ್ರರನೆಲ್ಲ ಭೋಜನಕೆ ॥
ನೇಮ ಮುರಿದರೆ ನಿನ್ನ ಭೋಜನ । ಕಾಮಿತರು ನಾವಲ್ಲವೆಂದಾ । ಭೂಮಿಸುರನಿಗೆ ಪೇಳಲಾಕ್ಷಣ ನುಡಿದನುತ್ತರವಾ ॥23॥

ಗುರುವರನ ನುಡಿಯೆನ್ನ ನುಡಿಯಿದ- । ಕರಡನೆಯ ಯೋಚನೆಯೆ ಬೇಡೀ- । ತೆರದಿ ಬ್ರಾಹ್ಮಣಭೋಜನವನಾ ಬಡಿಸುವೆನು ನಿಜದಿ ॥
ಧರಿಸುತೀ ನಿರ್ಧಾರ ಮನದಲಿ । ಗುರುವರಗೆ ಬಿನ್ನೈಸಿದನು ನೀ । ಕರೆಯುವರೆ ವಿಪ್ರರನು ಶಿಷ್ಯರ ಕಳುಹಿ ನೋಡುವುದು ॥24॥

ಎನ್ನ ಮಾತಿಗೆ ದ್ವಿಜರು ನಂಬಿಗೆ । ಯನ್ನು ಕೊಡರೇನೆಂಬೆ ಶಿಷ್ಯರು । ನಿನ್ನ ದಾಮಂತ್ರಣವೆನಲು ದ್ವಿಜರೆಲ್ಲ ಬರುತಿಹರು ॥
ಎನ್ನು ತೀ ನುಡಿ ಕೇಳಿ ಶ್ರೀಗುರು । ತನ್ನ ಶಿಷ್ಯರ ಕರೆದು ಹೇಳಿದ- । ನಿನ್ನು ಬೇಗದಿ ಪೋಗಿ ಕೋಡಿರಾಮಂತ್ರಣವನೆಲ್ಲ ॥25॥

ಮನದಿ ಭಾಸ್ಕರದ್ವಿಜನು ಯೋಚಿಸಿ- । ದನು ಕಣಾ ಗುರುವರನು ಸಾಮಾ । ನ್ಯನೆ ತ್ರಿಮೂರುತಿಯೆನುವರವನಿಗಸಾಧ್ಯವೇನಿನ್ನು ॥
ಯೆನುತ ಮನದಲಿ ನಿರ್ಧರಿಸಿ ಯೋ- । ಚನೆಯ ಮಾಡದೆ ಸ್ವಸ್ಥವಿದ್ದನು । ಅನಿತರೊಳು ಬಂದರು ಕಣಾ ಭೂಸುರರು ಮಠಕಾಗಿ ॥26॥

ಗುರುವರನು ನೋಡುತಲಿ ವಿಪ್ರರ । ಕರೆದು ಹೇಳಿದನಾಗ ಯಿಂದಿಗೆ । ಕರೆಯಿರೆಲ್ಲರ ಮನೆಯೊಳಿಹ ಸರ್ವರನು ಭೋಜನಕೆ ॥
ಪರಮ ಭಕ್ತಿಯೊಳೆಮಗೆ ಈ ಭಾ- । ಸ್ಕರನು ಭೋಜನವಿಕ್ಕುವನು ನೀವ್ । ತ್ವರದಿ ಪತ್ರಾವಳಿಯ ಮಾಡಿರಿ ನಾಲ್ಕು ಸಾವಿರವಾ ॥27॥

ಹತ್ತಿಲಿದ್ದನು ಭಾಸ್ಕರನು ಗುರು । ಮತ್ತೆ ಪೇಳಿದನವಗೆ ನೀನು ಸ-। ಮಸ್ತ ದ್ವಿಜರಿಗೆ ಕೊಡುಕೊಡಾಮಂತ್ರಣವ ಪ್ರೀತಿಯಲಿ ॥
ಉತ್ತರವ ತಾ ಕೊಡದೆ ಶ್ರೀಗುರು- । ವಿತ್ತ ಆಮಂತ್ರಣಕೆ ಜೋಡಿಸಿ । ಚಿತ್ತವಿಸಿರ್ಪೆ ಭೋಜನಕೆ ನೀವೆಂದು ದ್ವಿಜ ಪೇಳ್ದ ॥28॥

ಕೆಲರು ನಗುತಲಿ ಪೇಳ್ದರವನಿಗೆ । ನಿಲುವೆ ನಾವೆಲ್ಲರೂಟಕೆ । ತಿಳಿಯೆ ನಮಗೊಂದು ಕಣ ಸಿಗುತಿಹುದೆಯಡಿಗೆಯಲಿ ॥
ಕೆಲರು ವೃದ್ಧರು ಪೇಳ್ದರಾಕ್ಷಣ । ತಿಳಿಯಬಾರದಸಾಧ್ಯವೆನುತಲಿ । ಕಲಿಸಿಹನು ಗುರು ನುಡಿವನೀದ್ವಿಜ ಗುರುವು ನುಡಿದುದನು ॥29॥

ನಿಂದೆಯನು ಮಾಡುವುದು ಸಲ್ಲದು । ಬಂದೆವೀ ಮಠಕಿಂದು ಗುರುಗಳು । ನಿಂದೆಯನು ಕೇಳಿದರೆ ಸಿಟ್ಟಾಗುವರು ಯೆಮ್ಮೊಡನೆ ॥
ಎಂದು ಕೇಳಲು ಕೆಲರು ವಿಪ್ರರು । ಚಂದವನು ನೋಡುವೆವೆನುತ್ತಲಿ । ಮಂದಹಾಸ್ಯದಿ ವಿಪ್ರರೆಲ್ಲರು ಕೂತರಾಕ್ಷಣಕೆ ॥30॥

ಭಕ್ತಿಪೂರ್ವಕವಾಗಿ ಭಾಸ್ಕರ- । ನಾರ್ತಿಯನು ಮಾಡಿದನು ಗುರುವಿಗೆ । ತೃಪ್ತನಾದನು ಯೆಲೆಗಳನು ಹಾಕಲಿಕೆ ಪೇಳ್ದನಲಾ ॥
ಮತ್ತೆ ಮಾಡಿರ್ದಡಿಗೆಯನು ಬಹು । ಹರದಿ ತಾನಿಡಿಸಿಕೊಂಡನು । ಮತ್ತೆ ಕಾಷಾಯಾಂಬರವ ಹಾಸಿದನು ಮೇಲದಕೆ ॥31॥

ಕರದಿ ತೆಗೆದು ಕಮಂಡಲೋದಕ । ಗುರುವು ಅಭಿಮಂತ್ರಿಸುತ ಪ್ರೋಕ್ಷಿಸಿ । ಕರೆದು ಪೇಳ್ದನು ವಿಪ್ರರಿಗೆ ನೀವೀಗ ಬಡಿಸುವುದು ॥
ಕರದೊಳೆತ್ತಲು ಬಾರದೀಯಂ । ಬರವ ನೀವೀ ತೆರದಿ ಬಿಡುವುದು । ತಿರುತಿರುಗಿ ಬೇಕಾದ ವಸ್ತುವ ತೆಗೆದು ಬಡಿಸುವುದು ॥32॥

ಮಡಿಕೆಯೊಂದನು ತಂದು ತುಪ್ಪವ । ನಿಡಿಸಿದನು ಅದರೊಳಗೆ ಪೇಳ್ದನು । ಮಡಿಕೆಯಿಂದಲಿ ಸುರಿಸಿ ವೊಯ್ಯಿರಿ ಭರದಿ ನೀವೀಗಾ ॥
ಕೊಡಲನುಜ್ಞೆಯ ವಿಪ್ರರೆಲ್ಲರು । ಬಡಿಸಲಿಕೆ ಸುರುಮಾಡಿದನು ದ್ವಿಜ । ಗಡಣ ಬಹುಬಂದಿತ್ತು ಚೋದ್ಯವಿದೇನ ಹೇಳುವೆನು ॥33॥

ಎಷ್ಟು ತುಪ್ಪವನೊಯ್ದು ಬಡಿಸಲು । ಅಷ್ಟು ತುಂಬಿಹುದಾಗ ಮಡಿಕೆಯು । ಕಷ್ಟವಾಯಿತು ಸಾಕುಸಾಕೆಂದೊದರಿದರು ಜನರು ॥
ಇಷ್ಟವಿದ್ದಷ್ಟೆಲ್ಲ ಬಡಿಸಿರಿ । ಹೊಟ್ಟೆ ತುಂಬಲಿಯೂಟದಲಿ ಸಾ- । ಕಷ್ಟು ತುಪ್ಪವು ಬಂದಿಹುದು ಗುರುವಂದನಾ ಸಭೆಗೆ ॥34॥

ದಣಿದುಬಂದಿರಿ ನೀವು ಹಸಿವೆಯ । ಲುಣದೆ ಹೋಗಲು ಬೇಡಿರೆಂದನು । ಉಣಿರಿ ಪಕ್ವಾನ್ನಗಳ ಹೋಳಿಗೆ ಕಡಬು ಬಡಿಸುವೆವು ॥
ಉಣಿರಿ ಹಪ್ಪಳ ಸಂಡಿಗೆಯ ನೀ- । ವುಣಿರಿ ಉಣಿರೈ ಶಾಕಪಾಕವ । ನುಣಿರಿ ಭಕ್ಷ್ಯಾದಿಗಳ ಪರಮಾನ್ನವನು ಸಂತಸದಿ ॥35॥

ಬಡಿಸಿದರು ಸಕ್ಕರೆಯ ತುಪ್ಪವ । ನೋಡಲು ತುಂಬಿತು ತೃಪ್ತರಾದರು । ಪೊಡವಿಯಮರರು ಚೋದ್ಯಬಟ್ಟರು ಹೊಟ್ಟೆಯುಬ್ಬರಸಿ ॥
ಒಡನೆಯೆದ್ದರು ಕೈಯ ತೊಳೆದರು । ತೊಡಗಿದರು ಯೆರಡನೆಯ ಪಂಕ್ತಿಯ । ನೊಡನೆ ಶ್ರೀಗುರು ಕರೆದು ಪೇಳ್ದನು ಬ್ರಹ್ಮವೃಂದಕ್ಕೆ
॥36॥

ಕರೆಯಿರೈ ನಿಮ್ಮಿಷ್ಟ ಮಿತ್ರರ । ಕರೆಯಿರೈ ನಿಜಪುತ್ರಸತಿಯರ । ಕರೆದು ಭಾಸ್ಕರನೂಟ ಹಾಕುವನೆಂದು ಪೇಳಿದರು ॥
ಬರುತ ಬ್ರಹ್ಮವೃಂದವೆಲ್ಲಕೆ । ಭರದಿ ಭೋಜನವಾಯು ತದನಂ- । ತರಕೆ ಶೂದ್ರಾದಿಗಳ ಕರೆದರು ಊಟಹಾಕಿದರು ॥37॥

ಕರೆದರಾಕ್ಷಣ ಹೀನಜಾತಿಯ । ನರರಿಗೆಲ್ಲರಿಗೂಟ ಹಾಕಿದ- । ರರರೆ ಗ್ರಾಮದೊಳಿದ್ದ ಜನರಿಂಗಾಯ್ತು ಭೋಜನವು ॥
ಗುರುವರನು ಸಾರಿಸಿದನೈ ಡಂ- । ಗುರವನೂರಲಿ ಭೋಜನವ ಭಾ- । ಸ್ಕರನು ಕೊಡುವನು ಬನ್ನಿರೆನುತಲಿ ಶೀಘ್ರಗತಿಯಾಗಿ ॥38॥

ಎಲ್ಲರುಳಿಯದಲೂಟ ಮಾಡಿದ । ರಿಲ್ಲಿ ಮಠದಲಿ ಯೆನುತ ಗುರುವರ । ನುಲ್ಲಸಿತ ಮುಖನಾಗಿ ಕರೆದನು ಭಾಸ್ಕರದ್ವಿಜನಾ ॥
ಬಲ್ಲೆಯೈ ನೀ ನಗರದಲ್ಲಿಯೆ । ಯೆಲ್ಲರೂಟವು ತೀರಿತೀಗಲೆ । ಮೆಲ್ಲ ನೀಗಲು ನೀನು ಭೋಜನ ತೀರಿಸುವುದೆಂದು ॥39॥

ಮಾಡಿ ಭೋಜನ ಭಾಸ್ಕರದ್ವಿಜ । ನೋಡಿದನು ಬಹು ಚೋದ್ಯಪಟ್ಟನು । ಮಾಡಿದಡಿಗೆಯು ತಾನು ಸರ್ವವು ಹಿಂದೆವುಳಿದಿಹುದು ॥
ನೋಡಿಗುರುವಿನ ಲೀಲೆಯನು ಕೊಂ- । ಡಾಡಿದನು ಮನಮುಟ್ಟಿ ಶ್ರೀಗುರು- । ವಾಡಿದನು ಉಳಿದಡಿಗೆ ನದಿಯಲಿ ಹಾಕಿ ಬಾರೆಂದು ॥40॥

ಜಲದೊಳಡಿಗೆಯ ಹಾಕಲಾಕ್ಷಣ । ಜಲಚರಕೆ ಸಂತೃಪ್ತಿಯಾಯಿತು । ಇಳೆಯೊಳಾಯಿತು ಕೀರ್ತಿಯದುಭುತವೇನ ಹೇಳುವೆನು ॥
ತಿಳಿಯಲಾದಿನ ನಾಲ್ಕು ಸಾವಿರ । ಯೆಲೆಗಳಾದವು ಭೋಜನದಿ ತಾ । ನೆಲೆಯಕಾಣದೆ ಚೋದ್ಯ ಬಟ್ಟರು ನೆರೆದ ಭೂಸುರರು ॥41॥

ಕರೆದು ಭಾಸ್ಕರದ್ವಿಜನ ಶ್ರೀಗುರು- । ವರನು ಕೊಟ್ಟನು ವರವ ನಿನ್ನಯ । ದುರಿತದಾರಿದ್ರ್ಯಗಳು ಸುಟ್ಟವು ಮೆಚ್ಚಿದೆನು ನಿನಗೆ ॥
ಪರಮಸುಖದಲಿ ಪುತ್ರಪೌತ್ರರು । ದೊರಕುವರು ನಿನಗಿನ್ನು ಯೆನ್ನಯ । ವರವು ಸಟೆಯಾಗದು ಕಣಾ ನೀನಂಬು ನಿಜವಾಗಿ ॥42॥

ನೆರೆದ ಜನರಿಗೆ ಚೋದ್ಯವಾಯಿತು । ಪರಮಕೌತುಕ ನಾಲ್ಕು ಸಾವಿರ । ನರರಿಗಾಗಿಹುದೂಟ ಮೂವರಿಗಾದ ಅಡಿಗೆಯಲಿ ॥
ಪರಿಯನಿದ ನೋಡುತಲಿ ಶ್ರೀಗುರು । ವರನ ಮಹಿಮೆಯ ಪೊಗಳಿದನು ಮು-। ತ್ತರುಹಿದರು ಕೆಲರಾಗ ಅನ್ನಾಪೂರ್ಣೆಯೊಲಿದಿಹಳು ॥43॥

ಹಿಂದೆ ದುರ್ವಾಸನಿಗೆ ಶ್ರೀಗೋ- । ವಿಂದ ಮಾಡಿದ ಭೋಜನದ ಪರಿ- । ಯಿಂದ ಕಂಡೆವು ಗುರುವು ಸಾಕ್ಷಾತ್ ಕೃಷ್ಣ ಮೂರ್ತಿಯಲಾ ॥
ವಂದ್ಯನೀಗುರು ದಂಡಧಾರಿಯು । ಕಂದೆರದು ನೋಡಿದರೆ ಶಿವನಿವ- । ನೆಂದು ನಿಃಸಂದೇಹ ಪೇಳುವೆನೆಂದರಾ ಜನರು ॥44॥

ಮೂರುಸೇರನ್ನ ದಲಿ ಭೋಜನ । ಪೂರವಾಯಿತು ನಾಲ್ಕು ಸಾವಿರ । ಭೂರಿಭೋಜನವಾಯ್ತು ಹರಿಯವತಾರನೀಗುರುವು ॥
ಕ್ಷೀರ ತೆಗೆದನು ಬಂಜೆ ಮಹಿಷೆಗೆ । ಚಾರುವೇದಂಗಳನು ಪತಿತನ । ಮೋರೆಯಿಂದಲಿ ನುಡಿಸಿದನು ಕಷ್ಟವನು ಹರಿಸಿದನು ॥45॥

ಸತ್ತದ್ವಿಜನಿಗೆ ತೀರ್ಥಪ್ರೋಕ್ಷಿಸಿ । ಮತ್ತೆ ಜೀವವ ತಂದನೀತನು । ಅತ್ತಿಗಿಡಸತ್ತಿತ್ತು ಜಿಗಿಯಿತು ದೃಷ್ಟಿ ಮಾತ್ರದಲಿ ॥
ಆತ್ರಿವಿಕ್ರಮಭಾರತಿಗೆ ತಾ- । ನುತ್ತಮೋತ್ತಮ ವಿಶ್ವರೂಪವ । ವಿಸ್ತರಿಸಿದನು ಮಹಿಮೆಯನು ಬಣ್ಣಿಸುವರಾರಿವನಾ ॥46॥

ತಂತುಕಾರಗೆ ಭಕ್ತ ವರದನು । ಸಂತಸದಿ ಶ್ರೀಶೈಲಪರ್ವತ । ನಿಂತಲಿಯೆ ತೋರಿಸಿದ ಕಾಶೀಕ್ಷೇತ್ರ ಮೊದಲಾಗಿ ॥
ಇಂತು ನಾನಾಲೀಲೆ ಯಿರುವವ । ನಂತ ಮೂರುತಿ ಯಿರುವನೀ ಗುರು- । ವೆಂತು ಬಣ್ಣಿಸಲಿವನ ಸಮದೈವತವೆ ಬೇರಿಲ್ಲಾ ॥47॥

ಆನ್ಯ ದೇವತೆಗಳನು ಪೂಜಿಸಿ । ಬನ್ನ ಬಟ್ಟರೆ ಕಾಮಿತಾರ್ಥಗ- । ಳನ್ನು ಕೊಡುವರು ಗುರುವು ದರ್ಶನ ಮಾತ್ರದಲಿ ಕೊಡುವಾ ॥
ಎನ್ನು ತೀಪರಿ ನೆರೆದ ವಿಪ್ರರು । ಮನ್ನಿಸಿದರಾ ಗುರುವರನ ತಾವ್ । ಧನ್ಯರೆನುತಲಿ ಗುರುವ ಕೊಂಡಾಡಿದರು ಮನದಣಿಯೆ ॥48॥

ದೇಶದೇಶಂಗಳಿಗೆ ವಾರ್ತೆಯು । ಬೇಸರಿಲ್ಲದೆ ಪಸರಿಸಿತು ಬಹು । ದೇಶದೇಶಗಳಿಂದ ಬಂದರು ಜನರು ದರ್ಶನಕೆ ॥
ವಾಸಿಸುತಲಾ ಗಾಣಗಾಪುರ । ವೇಶಿಯಲಿ ಪುರುಷಾರ್ಥ ಪಡದರು । ಭಾಸುರದ ಗುರುವಿಷ್ಣು ದೃಷ್ಟಿಯು ಸಕಲ ಕಾಮೇಷ್ಟಿ ॥49॥

॥ ಅಧ್ಯಾಯ 38 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 39

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಮುದುಕಿಯರುವತುವರುಷ ಬಂಜೆಯು । ಸುದತಿಯವಳಿಗೆ ಮಕ್ಕಳಾದವು । ಪದಕಮಲಸೇವೆಯಲೀ ಗುರುವಿನ ವರಪ್ರಸಾದದಲಿ॥

ವೇದಶಾಸ್ತ್ರವನರಿಯೆನುಪನಿಷ- । ದಾದ್ಯ ತತ್ವವನೊಲ್ಲೆ ನಾನು ವಿ- । ವಾದದಲಿ ಬೀಳೆನು ಸದಾ ಕ್ಷೇತ್ರಜ್ಞ ಕ್ಷೇತ್ರದಲಿ ॥
ಆದಿ ಮೂರುತಿ ನೀನು ಶ್ರೀಗುರು- । ಪಾದ ನಿನ್ನಯ ಭಜಿಪುದೊಂದೇ । ಹಾದಿಯೆನಗರಿವಿಹುದು ಸಲಹೋ ದತ್ತಗುರುರಾಯಾ ॥1॥

ನಾಮಧಾರಕ ಕೇಳು ಶಿಷ್ಯ ಶಿ । ರೋಮಣಿಯೆ ಮುಂದಿನ ಕಥಾನಕ । ರಾಮಣೀಯಕವಿಹುದು ಮನವಿಟ್ಟದನು ಕೇಳುವುದು ॥
ಸೋಮನಾಥ ದ್ವಿಜನು ಶೌನಕ- । ನಾಮಗೋತ್ರಜನವನ ಶಾಖೆಯು । ಭೂಮಿಯಲಿ ವಿಖ್ಯಾತವಾಪಸ್ತಂಬ ಮೇಲವಗೆ ॥2॥

ಸತಿಶಿರೋಮಣಿ ಸಾಧ್ವಿ ಸುಪತಿ- । ವ್ರತೆಯು ಗಂಗಾಹೆಸರಿನಾಕೆಯು । ಸತತ ಸಂತೋಷದಲಿ ಕಾಲವ ಕಳೆದಳೂರಿನಲಿ ॥
ಸುತನ ಪಡೆಯದೆ ವರುಷಗಳ ಬಹು । ಸತಿಯು ಕಳೆದರುವತ್ತು ವರುಷಕೆ । ಸತಿಯು ಬಂಜೆಯೆನುತ್ತ ಕೀರ್ತಿಯು ಪಸರಿಸಿತು ಜಗದಿ ॥3॥

ಪತಿಯೇ ಪರದೈವತವೆನುತ್ತಲಿ । ಸತಿಯು ಪತಿಯನು ಸೇವಿಸಿದಳಾ । ಪ್ರತಿದಿವಸ ಗುರುದರ್ಶನಕೆ ಬರುತಿಹಳು ಭಕ್ತಿಯಲಿ ॥
ಪ್ರತಿದಿವಸ ನೀರಾಂಜನಾರುತಿ । ಸತಿಯು ಗುರುವಿಂಗೇಕಭಾವದಿ । ಸತತ ತೋರಿಸಿ ಪೂಜಿಸಿದಳವಳೇಕಭಾವದಲಿ ॥4॥

ವರುಷ ಹಲವೀ ತೆರದೊಳಾಗಲು । ಗುರುವರನು ನಸುನಗುತ್ತ ಕೇಳಿದ- । ನರಿತು ನಾರಿಯ ಕರ್ಮದಿಚ್ಛೆಯ ಮನದಿ ತರ್ಕಿಸುತಾ ॥
ತ್ವರಿತದಲಿ ನೀನೆನಗೆ ಪೇಳೌ । ಧರೆಯೊಳೇನೌ ನಿನ್ನಭೀಷ್ಟವು । ದರದಿವಸ ನೀರಾಂಜನದಿ ನೀನೇಕೆ ಪೂಜಿಸುವಿ ॥5॥

ನಿನ್ನ ಸೇವೆಗೆ ಮೆಚ್ಚಿದೆನು ನಾ । ನಿನ್ನು ಕೊಡುವೆನು ವರವನೆಂದಾ । ಸನ್ನುತಾತ್ಮನು ಗುರುವರನು ಸಂತೈಸಿದನು ಸತಿಯಾ ॥
ನಿನ್ನ ಭಾಗ್ಯೋದಯವು ಬಂದಿದೆ । ನಿನ್ನ ಬಯಕೆಯ ಸಲಿಸುವನು ಹರಿ- । ಯೆನ್ನುತಲಿ ಪೇಳಿದನು ಶ್ರೀಗುರು ಗಂಗೆಗತಿ ಭರದಿ ॥6॥

ಗುರುವಚನವನು ಕೇಳಿ ನಾರಿಯು । ಚರಣಕೆರಗುತ ಬಿನ್ನವಿಸಿದಳು । ಕರಗಳೆರಡನು ಜೋಡಿಸುತಲವಳೇಕಭಾವದಲಿ ॥
ಗುರುವೆ ಪೇಳುವೆನೆನ್ನ ಕುಂದನು । ವರುಷವರುವತ್ತಾಯ್ತು ಯಿಂದಿನ । ವರೆಗೆ ನಾ ಕಂಡಿಲ್ಲ ಸಂತತಿ ಬಂಜೆಯೆನ್ನುವರು ॥7॥

ಸುತನ ಪಡೆಯದ ನಾರಿ ಲೋಕದೊ-। ಳತಿದುರಿತವತಿ ಮೋರೆ ಕಂಡರೆ । ಗತಿಯು ದುರ್ಗತಿಯೆಂದು ಪೇಳ್ವರು ಲೋಕ ನಿಂದಿಪುದು ॥
ಸುತನು ಜನಿಸದ ಜನ್ಮನಿಷ್ಫಲ । ಸುತನ ಹಾದಿಯ ನೋಡಿ ಕೂತಿಹ- । ರತಿಮಹಾತ್ಮರು ಉಭಯಕುಲಸಂಜನಿತ ಪೂರ್ವಜರು ॥8॥

ಪುಟ್ಟಿದರೆ ಸತ್ಪುತ್ರ ವಂಶದಿ । ಕೊಟ್ಟು ಪಿಂಡೋದಕವನೆಮಗಾ । ಶ್ರೇಷ್ಠತೆಗೆ ಮುಟ್ಟಿಸುವನಿಪ್ಪತ್ತೊಂದು ಪಿಥಿತನಕಾ ॥
ಇಷ್ಟ ನಿದರಿಂ ಪುತ್ರವಂಶಕೆ । ಭ್ರಷ್ಟತನದಿಂದುಳಿಸಿ ಸರ್ವರ । ಶ್ರೇಷ್ಠತೆಗೆ ಮುಟ್ಟಿಸುವನೆಂಬರು ಪಿತರರೈ ಜಗದಿ ॥9॥

ಪುತ್ರನಿಲ್ಲದ ಮನೆಯು ನೀರೇ । ಬತ್ತಿರುವ ಕಾಸಾರಸಮವದು । ಹತ್ತಿಲಿರುವುದು ಕ್ರೂರ ಬೃಹದಾರಣ್ಯ ವಾತನಿಗೆ ॥
ಪುತ್ರರಿಲ್ಲದೆ ಸುಗತಿಯಿಲ್ಲ್ಯೋ । ಪುತ್ರನಿಹಸಂಸಾರದಲಿ ಕ- । ಗ್ಗತ್ತಲೆಗೆ ಕೈದೀಪವೆಂದಳು ನಾರಿ ಬಿಸುಸುಯ್ದು ॥10॥

ನಿತ್ಯ ಹೋಗುವೆ ನದಿಗೆ ಸ್ನಾನಕೆ । ಎತ್ತುತಲಿ ಬಾಲಕರ ಕಡೆಯಲಿ । ನಿತ್ಯ ಬರುತಿಹರಲ್ಲಿ ಸ್ನಾನಕೆ ಧನ್ಯರವರೆನುವೆ ॥
ಎತ್ತಿ ಬಾಲನ ಕಡೆಯಮೇಲಿ । ನ್ಯೊತ್ತಿಗಲ್ಲವ ಮುದ್ದುಗೈಯುತ । ಚಿತ್ತಕಾನಂದವನು ಭೋಗಿಪೆನೆಂತು ಈ ಜಗದಿ ॥11॥

ಸುಡಲಿ ವಕ್ಷಸ್ಥಳವು ಯೆನ್ನದು । ಕಡೆಯ ಮೇಲೆನಗಿಲ್ಲ ಬಾಲನು । ಸುಡಲಿ ಬಾಳ್ವೆಯು ಪುರುಷನಲ್ಲಾ ಸತಿಯು ಮೇಣಲ್ಲಾ ॥
ಹುಡುಗನಾದರೆ ಪಿಂಡದಾನದಿ । ಕೊಡುವನೈ ಸದ್ಗತಿಯ ಹಿರಿಯರಿ- । ಗೊಡನೆ ನಡೆವರಧೋಗತಿಗೆ ಕೊಡದಿರಲು ಪಿಂಡವನು ॥12॥

ವಿನುತಚರಿತನೆ ಗುರುವೆ ಬೇಡುವೆ । ಜನುಮವಿದು ಸಾಕೆನಗೆ ಮುಂದಿನ । ಜನುಮದಲಿ ಕೊಡಬೇಕು ವರವನು ಪುತ್ರ ಸಂತಾನಾ ॥
ಎನಗೆ ಸಾಕೀಭವದ ಯಾತನೆ । ಜನುಮದಲಿ ವಯಸಾಯಿತಧಿಕವು । ಯೆನಗೆ ಕರುಣಾಸಿಂಧು ಬೇಡಿದ ವರವ ಕೊಡು ನಿಜದಿ ॥13॥

ಪುತ್ರರೆನಗಿರಬೇಕು ಪುಷ್ಕಳ । ಭಕ್ತ ವರದನೆ ಕೇಳು ಪುತ್ರರ- । ನಿತ್ತು ಯೆನ್ನಿಚ್ಛೆಯನು ಪೂರಿಸು ಬರುವ ಜನುಮದಲಿ ॥
ಇತ್ತನುತ್ತರ ಗುರುವು ನಾರಿಗೆ ನಿತ್ಯ ನೀರಾಂಜನದ ಹಗಲಿರು- । ಳುತ್ತಮದ ರೀತಿಯಲಿ ಸೇವೆಯ ಮಾಡಿದೌ ಯೆನಗೆ ॥14॥

ನಾನು ಮೆಚ್ಚಿದೆ ನಿನ್ನ ಭಕ್ತಿಗೆ । ಸಾನುರಾಗದಿ ಕೊಡುವೆನೈ ಸಂ । ತಾನವನ್ನೀ ಜನ್ಮದಲ್ಲಿಯೇ ಕನ್ನೆಯಾಗುವಳು ॥
ಏನು ಭರವಸ ಬರುವ ಜನುಮದ- । ಲೇನು ಹಿಂದಿನ ಜನ್ಮಗೋಷ್ಠಿಯ । ಜ್ಞಾನವಿರುವುದೆ ನಿನಗೆ ಸಾಂಪ್ರತ ಜನ್ಮವೇ ನಿಜವು ॥15॥

ನುಡಿಯನಾಲಿಸಿ ವಿಪ್ರನನಿತೆಯು । ಸಡಗರದಿ ಕರಜೋಡಸುತ ಗುರು- । ವಡಿಗೆ ಸಾಷ್ಟಾಂಗಪ್ರಣಾಮವ ಮಾಡಿದಳು ಭರದಿ ॥
ನುಡಿಯ ಜ್ಞಾಪಕಕಾಗಿ ಸೀರೆಯ । ಕಡೆಗೆ ಗಂಟಿಕ್ಕಿದಳು ಗುರುವಿಗೆ । ನುಡಿದಳಾಕ್ಷಣ ಸದ್ಗದಿತಕಂಠದಲಿಯಾನಾರಿ ॥16॥

ಕರುಣಸಾಗರ ಯೆನಗೆ ಅರುವ । ತ್ಮೂರುಷಷಾಯಿತು ಪ್ರಾಯ ಮುದುಕಿಯು । ಬರದು ಯೆನಗಾಋತುವು ಮಕ್ಕಳು ಯಂತುಪುಟ್ಟುವರು ॥
ಧರಣಿಯಲಿ ನಾನಾವ್ರತವನಾ- । ಚರಿಸಿದೆನು ಪುತ್ರಾರ್ಥಿಯಾಗುತ । ತಿರುತಿರುಗಿದೆನು ತೀರ್ಥಯಾತ್ರೆಗಳನ್ನು ಮಾಡಿದೆನು ॥17॥

ಜನರು ಕೇಳಶ್ವತ್ಥನಾರಾ- । ಯಣಪ್ರದಕ್ಷಿಣೆ ಮಾಡೆನುತ್ತಲೆ । ಯೆನಗೆ ಪೇಳ್ದರು ಪುತ್ರರಾಗುವರೆಂದು ಭರವಸದಿ ॥
ದಿನದಿನದೊಳಶ್ವತ್ಥ ನಾರಾ- । ಯಣ ಪ್ರದಕ್ಷಿಣೆ ಮಾಡಿದೆನು ಹಲ- । ದಿನಗಳಾದವು ಕಾಣೆನ್ಯೆ ಸಂತಾನವೀತನಕಾ ॥18॥
ಆಶೆಯಿಂದಶ್ವತ್ಥ ಪೂಜೆಯ । ತೋಷದಿಂದಲಿ ಮಾಡಿಯೆನಗೆ ನಿ- । ರಾಶಯಾಯಿತು ವರುಷವರುವತ್ತಾಯ್ತು ಯೆನಗೀಗಾ ॥
ಭೂಸುರರ ಮಾತಿನಲಿ ನಾ ವಿ- । ಶ್ವಾಸ ಮಾಡಿದೆ ಪುತ್ರರಾಗದೆ । ಘಾಸಿಯಾಯಿತು ಜೀವ ನಿಷ್ಫಲವಾಯ್ತು ಸೇವೆಯದು ॥19॥
ಪುತ್ರರೀಜನ್ಮದಲಿ ಜನಿಸದೆ । ನಿತ್ಯ ಸೇವೆಯ ಮಾಡಲೆನಗೆ ವಿ- । ಚಿತ್ರತರದಲಿ ಮುಂದೆ ಸಂತಾನವನು ಪಡೆಯುವೆನು ॥
ಸತ್ಯವೀಫಲವೆಂದು ನಾನ- । ಶ್ವತ್ಥ ಪೂಜೆಯ ನಡಿಸಿಹೆನು ಯೆನ । ಗುತ್ತರೋತ್ತರ ಪುತ್ರದಾನವ ನೀಡು ಗುರುರಾಯಾ ॥20॥
ಗುರುವರನು ನೀ ಮೆಚ್ಚಿದರೆ ಪು- । ತ್ರರನು ಕೂಡುವಿಯೊ ಜನ್ಮವಿದರಲಿ । ಅರಿವೆ ನಿನ್ನಯ ಮಾತು ಸಟೆಯಾಗದು ಕಣಾ ಜಗದಿ ॥
ವರವನಿತ್ತೆನಗೀಗ ಶ್ರೀಗುರು- । ವರನು ಕನ್ಯಾರತ್ನ ವಿತ್ತನು । ಭರವಸೆಯ ಮಾಡುವೆನು ಗುರುವಾಕ್ಯದಲಿ ನಾನಿನ್ನು ॥21॥
ನಗುವ ತೆರದಲಿ ಮಾಡದೆನ್ನನು । ಮಗಳ ಕೊಡುವುದು ನೀನು ಹೇಳುವ । ಬಗೆಯನರಿತೆನು ನುಡಿವೆ ನಾನು ತಥಾಸ್ತು ಶಬ್ದವನು ॥
ಮುಗುದೆ ನಾನೀ ಮೂರ್ಖತನದಲಿ । ಜಗದ ಮಾತನು ಕೇಳಿ ಪೂಜಿಸಿ । ನಗುವ ತೆರವಾಯ್ತಲ್ಲ ಕೊಡುವನೆ ಮಗನನಶ್ವತ್ಥಾ ॥22॥
ನುಡಿಯ ಕೇಳುತ ವಿಪ್ರವನಿತೆಗೆ । ನುಡಿದನಾಗುರು ಕೇಳು ನಾರಿಯೆ । ಪೊಡವಿಯೊಳು ಬಹು ಪುಣ್ಯವಶ್ವತ್ಥದ ಪ್ರದಕ್ಷಿಣೆಯು ॥
ನುಡಿಯ ಬಾರದು ನಿಂದ್ಯ ಮಾತನು । ಸಡಗರದಿ ಪೂಜಾಫಲವ ನೀ । ಪಡೆವೆ ನಿಶ್ಚಯ ಸೇವೆಯದು ನಿಷ್ಫಲವು ಆಗುವುದೆ ? ॥23॥
ಎನ್ನ ಮಾತಿನ ಮೇಲೆ ಭರವಸೆ । ಯನ್ನು ನೀನಿಡುತಿಹರೆ ನಿತ್ಯದಿ । ಮುನ್ನನೀ ಸೇವೆಯನು ಬಿಡದಲೆ ಮಾಡು ಭಕ್ತಿಯಲಿ ॥
ಪುಣ್ಯಪಾವನ ಸಂಗಮದಿ ಬಹು । ಮಾನ್ಯ ವಿಹುದಶ್ವತ್ಥ ನಿತ್ಯದಿ । ಯೆನ್ನ ಕೂಡದ ಪೂಜಿಸೌ ಭಕ್ತಿಯಲಿ ಫಲವಿಹುದು ॥24॥

ಪೇಳುವೆನು ನಾ ನಿನಗೆ ಮಹಿಮೆಯ । ಕೇಳು ನಾರಿಯೆ ವೃಕ್ಷವಶ್ವಥ । ಪೇಳುವರು ಜನರದಕೆ ನಾರಾಯಣ ಸುನಾಮವನು ॥
ಪೇಳಲಸದಳ ಸರ್ವಮಹಿಮೆಯು । ಬಾಲೆ ಕೇಳೌ ಸರ್ವದೇವರು । ಮೇಳದಲಿ ವಾಸಿಪರು ಕೇಳಶ್ವತ್ಥವೃಕ್ಷದಲಿ ॥25॥

ಸುರಮುನಿಯು ನಾರದನು ಮಹಿಮೆಯ- । ನರುಹಿದನು ಋಷಿಗಡಣಕಿದನಾ । ಸರಸಿಜಾಸನ ವಿಸ್ತರಿಸಿದನು ನಾರದಗೆ ನಿಜದಿ ॥
ಚರಿಸಿ ತ್ರಿಭುವನದಲ್ಲಿ ನಾರದ । ಸುರಮುನಿಯು ಬರಲಿವನ ಪೂಜಿಸು- । ತಿರದೆ ಮಹಿಮೆಯನು ಕೇಳಿದರು ನಾರದನಿಗಾದರದಿ ॥26॥

ಋಷಿ ವಚನವನು ಕೇಳಿ ನಾರದ । ನುಸುರಿದನು ನಾ ಬ್ರಹ್ಮಲೋಕದಿ । ನುಸುಳಿದೆನು ಕೇಳಿದೆನು ಬ್ರಹ್ಮನ ಮುಖದಿ ಮಹಿಮೆಯನು ॥
ವಸುಧೆಯೊಳಗಿದು ವಿಷ್ಣು ರೂಪದೊ- । ಳೆಸೆಯುತಿಹುದಶ್ವತ್ಥ ವೃಕ್ಷವು । ಉಸುರಬೇಕಿದ ಪೂಜಿಸುವ ಪರಿಯೆಂದು ಕೇಳಿದೆನು ॥27॥

ಸರಸಿಜಾಸನ ಪೇಳ್ದನೆನಗೀ । ಪರಿಯನಾವೃಕ್ಷದ ಮಹಾತ್ಮ್ಯೆಯ । ಮೆರೆವ ಮೂಲದಿ ಬ್ರಹ್ಮ ಮಧ್ಯದಿ ವಿಷ್ಣು ವಾಸಿಪನು ॥
ಹರನು ತುದಿಯಲಿ ವಾಸಿಪನು ಈ । ಪರಿಯಲಾ ವೃಕ್ಷದಲಿ ವಾಸಿಸು- । ತಿರುವರೈ ತ್ರೈಮೂರ್ತಿಗಳು ತ್ರಿಗುಣಾತ್ಮಕರು ದಿಟವು ॥28॥

ಒರೆವೆ ಶಾಖಾಪಲ್ಲವದೊಳಿರು । ತಿರುವಧಿಷ್ಠಿತ ದೇವತೆಯರನು । ಹರನು ದಕ್ಷಿಣದಿಶೆಯ ಪಲ್ಲವ ಶಾಖೆ ಮೇಲಿಹನು ॥
ಹರಿಯು ಪಶ್ಚಿಮದಿಶೆಗೆ ಉತ್ತರ । ಕಿರುವ ಬೊಮ್ಮನು ಪೂರ್ವಭಾಗಕೆ । ಮೆರೆವರಿಂದ್ರಾದಿಗಳು ನಿರ್ಗುಣ ರೂಪದಲಿ ಮರದಿ ॥29॥

ಹಗಲಿರುಳು ಶಾಖೆಗಳ ಮೇಲಾ । ಹಗಲೊಡೆಯನಾದಿತ್ಯನಿರುವನು । ನಿಗಮಗಳು ಗೋಬ್ರಾಹ್ಮಣರು ಋಷಿವರನು ಯಜ್ಞಗಳು ॥
ಹಗಲಿರುಳು ಮೂಲಾಂಕುರದಿ ಝುಗ । ಝುಗಿಸುತಿಹವಾತೀರ್ಥ ನದಿಗಳು । ಸೊಗಸಿನಲಿ ವಾಸಿಪವು ವೃಕ್ಷದ ಪೂರ್ವಶಾಖೆಯಲಿ ॥30॥

ಮೂಲಕಿರುವದಕಾರವರ್ಣವು । ಮೇಲೆ ಮಧ್ಯದಿ ಸ್ಕಂಧ ಶಾಖೆಯ- । ಲೇಳುತಿಹುದು ಉಕಾರಶಬ್ದವು ಹೂವುಹಣ್ಣಿನಲಿ ॥
ಬೀಳುತಿಹುದು ಮಕಾರವೀಪರಿ । ತಾಳುತೋಂಕಾರ ಸ್ವರೂಪವ । ಬಾಳುವುದು ಜಗದೊಳಗೆ ಪಾವನ ರೂಪದಶ್ವತ್ಥ ॥31॥

ವಸುಗಳೆಲ್ಲರು ರುದ್ರರೇಕಾ । ದಶರು ತ್ರೈಮೂರ್ತಿಗಳು ಸರ್ವರು । ವಸತಿಯನು ಮಾಡಿಹರು ಕೇಳಶ್ವತ್ಥವೃಕ್ಷದಲಿ ॥
ಅಸದಳವು ವರ್ಣಿಸಲು ಮಹಿಮೆಯ । ವಸುಧೆಯೊಳು ಕೇಳಿದಕೆ ಸುರತರು । ಹೆಸರು ನಿಜ ಬಿದ್ದಿಹುದೆನುತ ಪೇಳಿದನು ಶ್ರೀಬ್ರಹ್ಮಾ ॥32॥

ಬಣ್ಣಿಸಲಿ ನಾನೆಂತು ಮಹಿಮೆಯ । ಬಣ್ಣಿಸಲಿಕಸದಳವು ಬಾಯಲಿ । ಪರ್ಣಶಾಖೆಗಳಲ್ಲಿ ವಾಸಿಪರೆಲ್ಲ ಸುರವರರು ॥
ಎನ್ನುವೀ ವಚನಗಳ ಕೇಳುತ । ಬಿನ್ನವಿಸಿದರು ಋಷಿಗಳೆಲ್ಲರು । ವರ್ಣಿಸೈ ನಾರದನೆ ಪೂಜಾವಿಧಿಯನಶ್ವಥದಾ ॥33॥

ಹಿಂದಕೊಮ್ಮೆಗೆ ನಾವು ಸಂತಸ- । ದಿಂದ ಅಥರ್ವಣನಿಗೆ ಕೇಳಿದೆ- । ವಿಂದು ನಿನ್ನನು ಕೇಳುತಿಹೆವೀವೃಕ್ಷ ಪೂಜೆಯನು ॥
ಇಂದು ನೀ ಪೂಜೆಯ ವಿಧಾನವ । ಕುಂದುಬಾರದೆ ಪೇಳ್ವುದೆಂದಾ । ವೃಂದವೆಲ್ಲವು ಬಿನ್ನವಿಸಿದರು ನಾರದಗೆ ಮುದದಿ ॥34॥

ಮುನಿವರರ ವಚನವನು ಕೇಳುತ । ಮನದಿ ಹರುಷವ ತಾಳಿ ನಾರದ । ವಿನಯದಿಂ ಪೇಳಿದನು ಪೂಜಾವಿಧಿಯ ಪ್ರೇಮದಲಿ ॥
ದಿನ ಸುಮೂರ್ತವ ನೋಡಿ ಪೂಜೆಯ- । ನನುಕರಿಸುವುದು ಪೌಷಚೈತ್ರದೊ । ಳನುಕರಿಸುವುದು ಸಲ್ಲದೈ ಆಷಾಢಮಾಸದಲಿ ॥35॥

ಅಸ್ತವಿರೆ ಗುರುಶುಕ್ರ ಮೇಣು ಪ್ರ- । ಶಸ್ತ ತಾರಾಬಲವು ಯಿಲ್ಲದೆ । ಸ್ವಸ್ಥಚಿತ್ತದಿ ಪೂಜೆಯಾರಂಭಿಪುದು ಸರಿಯಲ್ಲಾ ॥
ಮತ್ತುಳಿದ ಮಾಸದಲಿ ಶುಭಸುಮು- । ಹೂರ್ತದಲಿ ಪೂಜೆಯನು ಪ್ರಾರಭಿ- । ಸುತ್ತ ಸೇವಿಸುವುದು ಪ್ರಶಸ್ತವು ಭೋಜನವ ತ್ಯಜಿಸಿ ॥36॥

ಭಾನುಭೃಗುಶಶಿವಾರದಲಿ ಅಪ- । ರಾಹ್ನ ಸಮಯದಿ ಪರ್ವಕಾಲದಿ । ಪೌರ್ಣಿಮಾಸಂಕ್ರಾಂತಿಕಾಲದಿ ರಿಕ್ತತಿಥಿದಿನದಿ ॥
ಮೇಣುಸಂಧ್ಯಾಕಾಲ ವೈಧೃತಿ । ಹೀನದಿವಸದಿ ಮುಟ್ಟಬಾರದು । ಹಾನಿಯಪ್ಪುದು ಪುಣ್ಯ ವೀಪರಿ ದಿವಸ ಸಾಧಿಪುದು ॥37॥

ಅನೃತಭಾಷಣ ದ್ಯೂತಕರ್ಮವ । ಮನುಜರಾಚರಿಸದೆ ಪರರ ನಿಂ- । ದನೆಯ ಮಾಡದೆ ಪ್ರಾರಭಿಸುವುದು ಪ್ರಾತಕಾಲದಲಿ ॥
ದಿನ ಬೆಳಗಲು ಸಚ್ಛೈಲಸ್ನಾನದಿ । ತನುವ ಶುದ್ಧಿಕರಿಸಿ ನಂತರ । ತನುವನಾಚ್ಛಾದಿಸುತ ನಿರ್ಮಲವಸ್ತ್ರಭೂಷಣದಿ ॥38॥

ವಿಮಲಕಲಶಗಳೆರಡಗಂಗಾ- । ಯಮುನೆ ಹೆಸರನು ಕೊಟ್ಟು ತರುವುದು । ಸುಮತಿಯರು ಪುಣ್ಯಾಹವಾಚ ಮಾಡಿ ನಂತರಕೆ ॥

ತಮಗಿರುವ ಕಾರ್ಮ್ಯಾರ್ಥವನು ತಾ । ಸಮನಿಸುತ ಸಂಕಲ್ಪ ರೂಪದಿ । ವಿಮಲ ಚಿತ್ತದೊಳೇಳು ಬಾರಿಗೆ ಮಾಡಿರಭಿಷೇಕಾ ॥39॥

ಸ್ನಾನವನು ನಂತರಕೆ ಮಾಡುತ । ಸ್ನಾನವಶ್ವತ್ಥಕ್ಕೆ ಮಾಡಿರಿ । ಸಾನುರಾಗದಿ ಪುರುಷಸೂಕ್ತದಿ ಪೂಜೆ ಮಾಡುವುದು ॥

ಧ್ಯಾನಮಾಡಿರಿ ವಿಷ್ಣು ಮೂರ್ತಿಯ । ಮಾನಿಸಿರಿ ನೀವಷ್ಟಭುಜದ ಸು- । ಮಾನ್ಯ ಮೂರ್ತಿಯ ಶಂಖಚಕ್ರವ ಕರದಿ ಧರಿಸಿರುವಾ ॥40॥

ಖಡಗ ಖೇಟಕ ಬಾಣ ಧನುವನು । ಹಿಡಿದ ಮೂರ್ತಿಯನೊಂದು ಕರದಲಿ । ಕೊಡುತಲಭಯವ ಭಕ್ತರಿಗೆ ಶಾಂತಿಯನು ಕೊಡುತಿರುವಾ ॥

ಉಡಿಸಿ ಪೀತಾಂಬರವ ಲಕ್ಷ್ಮಿಯ- । ನೆಡಬದಿಗೆ ಕೂಡಿಸುತಲೀಪರಿ । ಜಡಜನಾಭನ ಮೂರ್ತಿಧ್ಯಾನಿಸಿ ಪೂಜೆಮಾಡುವುದು ॥41॥

ಮೂರು ಮೂರ್ತಿಗಳಿರುವ ಸ್ಥಾನವು । ಮಾರಹರ ಶಕ್ತಿಗಳ ಹೊರತಿರ- । ಲಾರದಾ ಸ್ಥಾನದಲಿ ದೇವರನೆಲ್ಲ ಸ್ಥಾಪಿಸುತಾ ॥

ಚಾರುಭಕುತಿಯೊಳೆಲ್ಲರನು ಹದಿ- । ನಾರು ವಿವಿಧುಪಚಾರ ಮಾಡುತ । ಚಾರುವಸ್ತ್ರದ ನೂಲಿನಿಂದಲಿ ಮರವವೇಷ್ಟಿಸುತಾ ॥42॥

ಮರಳಿ ಸಂಕಲ್ಪವನು ಮಾಡುತ । ಮರಕೆ ನೀವ್ಮಾಡಿರಿ ಪ್ರದಕ್ಷಿಣೆ । ಹರುಷದಿಂದ ಸಹಸ್ರನಾಮೋಚ್ಚರಣೆ ಮಾಡುತಲಿ ॥

ಪುರುಷಸೂಕ್ತವನುಚ್ಚರಿಸುತಲಿ । ಭರದಿ ಮನವಾಕ್ಕಾಯಕರ್ಮದಿ । ಪರಮಭಕುತಿಯೊಳಾಗ ಮಾಡಿರಿ ನೀವ್ ಪ್ರದಕ್ಷಿಣೆಯಾ ॥43॥

ಬಾರದಿರಲೀ ಸೂಕ್ತ ನಾಮಗ । ಳಾರಭಿಸುವುದು ಮೌನದಲಿ ಫಲ । ಸೇರುವುದು ನಿರುಪಮವು ನಿಜವಿದು ಪುಣ್ಯದಾಯಕವು ॥

ನೀರಕುಂಭವ ತಲೆಯೊಳೇರಿಸಿ । ನಾರಿ ಗರ್ಭಿಣಿ ನಡಿಯುವಂದದೆ- । ಳೋರೆಯಲಿ ಮಂದಪ್ರದಕ್ಷಿಣೆ ಹಾಕುವುದು ಮುದದಿ ॥44॥

ಬರುವುದೈ ಕೆಳಶ್ವಮೇಧದ । ಪರಮ ಪುಣ್ಯವು ಹೆಜ್ಜೆ ಹೆಜ್ಜೆಗೆ । ತಿರುತಿರುಗಿ ಮಾಡಿರಿ ನಮಸ್ಕಾರವನು ಭಕ್ತಿಯಲಿ ॥

ಎರಡು ಲಕ್ಷಪ್ರದಕ್ಷಿಣೆಯಲಾ । ದುರಿತ ಬ್ರಾಹ್ಮಣಹತ್ಯೆ ಸುಡುವುದು । ಹರಿಹರಬ್ರಹ್ಮಾದಿಗಳ ವಾಸ್ತವ್ಯವೀ ಮರದಿ ॥45॥

ಸ್ಥಾನವಿಹುದು ತ್ರಿಮೂರ್ತಿಯೆಂದಿದ । ನೇನ ಹೇಳಲಿಯದರ ಮಹಿಮೆಯ । ಹಾನಿಯಪ್ಪುದು ಕೇಳ್ಮಹಾಪಾಪಗಳು ದರ್ಶನದಿ ॥
ಹಾನಿಯಪ್ಪುದು ವ್ಯಾಧಿಪೀಡೆಯಿ- । ದೇನ ವರ್ಣಿಸಲೀ ಪ್ರದಕ್ಷಿಣೆ । ಕ್ಷೋಣಿಯಲಿ ಋಣ ಕೋಟ ಪರಿಹರಿಸುವುದು ಲೀಲೆಯಲಿ ॥46॥

ಸಾವಿರ ಪ್ರದಕ್ಷಿಣೆಯ ಮಾಡಲು । ಸಾವು ಜರೆವ್ಯಾಧಿಗಳ ತಾಪದಿ । ಕಾವನೈ ಅಶ್ವತ್ಥನಾರಾಯಣನು ಪ್ರೇಮದಲಿ ॥
ಭಾವ ಶುದ್ಧಿಯೊಳಿದನು ಪೂಜಿಸ- । ಲೀವನೈ ಸಂತಾನ ಸುಖವನು । ಈ ವಚನ ಸಟೆಯಲ್ಲ ಪುತ್ರೋತ್ಪತ್ತಿಯಾಗುವುದು ॥47॥

ಮಂದವಾರದಿ ವೃಕ್ಷದಡಿಯಲಿ । ಮಿಂದು ಮೃತ್ಯುಂಜಯವ ಜಪಿಸಲು । ಕೊಂದು ಮೃತ್ಯುವ ಜಯಿಸುವವನು ಅಶ್ವತ್ಥ ಮಹಿಮೆಯಿದು ॥
ಮಂದಪಾಪಗ್ರಹದ ತಾಪದಿ । ಬೆಂದು ಬಳುವ ನರರು ಪೂಜಿಸೆ । ಸಂದು ಪೂರ್ಣಾಯುಷ್ಯವನು ಭೋಗಿಪರು ನಿಜಮಾತು ॥48॥

ಕೋಣಸ್ಥ ಕೋ ರೌದ್ರಯಮೌ ಚ ಬಭ್ರುಃ । ಕೃಷ್ಣ ಶನಿಃ ಪಿಂಗಲ ಏವ ಮಂದಃ ।
ನಿತ್ಯಂ ಸ್ಮರೇದ್ ವ್ಯಾಹರತೇ ಚ ಪೀಡಾಂ । ತಸ್ಮೈ ನಮಸ್ತೇ ರವಿನಂದನಾಯ॥

ಎನುತಲೀ ಶ್ಲೋಕವನು ಪಠಿಸುತ । ಶನಿಯ ನಾಮೋಚ್ಚರಣೆಯಲ್ಲಾ । ವಿನುತ ವೃಕ್ಷದ ಸುಪ್ರದಕ್ಷಿಣೆ ನಿತ್ಯದಲಿ ಮಾಡಿ ॥
ಶನಿಯ ಪೀಡೆಯು ವ್ಯಾಧಿಬಾಧೆಯು । ಹನನವಾಗುವುದೇನ ಹೇಳುವೆ । ತೃಣವನಗ್ನಿಯು ಸುಡುವ ತೆರದಲಿ ಭಸ್ಮ ಮಾಡುವುದು ॥49॥

ದೃಢಮನದೊಳಶ್ವತ್ಥ ಪೂಜಿಸೆ । ಕೊಡುವುದೈ ಕಾಮಿತವನೆಲ್ಲವ । ಪಡೆವರೈ ಪುತ್ರಾರ್ಥಿಗಳು ಸಂತಾನಸೌಖ್ಯವನು ॥
ಬಿಡದೆ ಗುರುವಾರದೊಳಮಾಸೆಯೊ- । ಳೆಡೆಬಿಡದೆ ಛಾಯೆಯಲಿ ಮೀಯಲು । ಸುಡುವುದೈ ದ್ವಿಜಹತ್ಯಪಾತಕ ದಿಟವು ದಿಟದಿಟವು ॥50॥

ಮರದ ನೆರಳಲಿಯೊಬ್ಬ ಬ್ರಾಹ್ಮಣ- । ಗಿರದೆ ಭೋಜನವಿಕ್ಕಲಿದರಿಂ । ಬರುವುದೈ ಫಲ ಕೋಟಿಗುಣ ವೆಂದೆಣಿಸು ಸತ್ವರದಿ ॥
ನೆರಳೊಳಗೆ ಕೂತೊಂದು ಮಂತ್ರೋ । ಚ್ಚರಿಸಿದರೆ ವೇದವನು ಪಠಿಸಲು । ಬರುವುದದ ಕೆಯನಂತ ಫಲವೆಂದೆಣಿಸು ನಿಜವಾಗಿ ॥51॥

ಭಕ್ತಿಯಲಿ ಮಾನವನು ಕೇಳ । ಶ್ವತ್ಥ ವೃಕ್ಷವನೊಂದೆ ಸ್ಥಾಪಿಸೆ । ಮುಕ್ತಿಯನು ಪಡೆವರು ಬೆಚಾಳಿಸ ಪಿಢಿಯ ವಂಶಜರು ॥
ಪೃಥ್ವಿಯಲಿ ವೃಕ್ಷವನು ಕಡಿಯಲು । ಹತ್ತುವುದು ಬಹು ಪಾಪ ನರಕದ । ಪಾತ್ರನಾಗುವ ಪಿತೃ ಸಮೇತದಿ ಬಂದು ಬೀಳುವನು ॥52॥

ಮರದಡಿಗೆ ಕೂಡುತಲಿ ಹೋಮವ । ವಿರಚಿಸೆ ಮಹಾಯಜ್ಞ ಫಲವದು । ಬರುವುದಕ್ಷಯ ಸುಕೃತಪಡೆವರು ಪುತ್ರಸಂತಾನಾ ॥
ಪರಿಯೊಳೀಯಶ್ವತ್ಥ ಮಹಿಮೆಯ । ನರುಹಿದನು ನಾರದಗೆ ಬೊಮ್ಮನು । ಸುರಮುನಿಯು ನಾರದನು ಪೇಳ್ದನು ನೆರೆದ ಋಷಿಜನಕೆ ॥53॥

ಎನಿತು ಮಾಡುವಿರೀ ಪ್ರದಕ್ಷಿಣೆ । ಯನಿತರದಶಾಂಶವನು ಹವನವ- । ನೆನಿತು ಹವನಗಳೋ ದಶಾಂಶವು ವಿಪ್ರಭೋಜನವಾ ॥
ವಿನಯದಿಂ ಮಾಡುವುದು ನಿಗಮವ । ನನುಸರಿಸಿ ವಿಧಿಪೂರ್ವಕದಿ ವ್ರತ । ವನು ಧರಿಸಿರೈ ಬ್ರಹ್ಮಚರ್ಯವ ಮೇಣ್ ಹವಿಷಾನ್ನಾ ॥54॥

ಪರಿಯೊಳೀವ್ರತವಾಚರಿಸಿ ನಂ । ತರದೊಳುದ್ಯಾಪನನ ಮಾಡಿರಿ । ಮರವ ಶಕ್ತ್ಯಾನುಸಾರಮಾಳ್ಪುದು ಚಿನ್ನದಿಂ ಬಳಿಕಾ ॥
ಧರಣಿಯಮರರಿಗಿತ್ತು ದಾನವ । ಕರುಸಹಿತ ಕೇಳ್ ಶ್ವೇತಧೇನುವ । ಹರುಷದಿಂ ವಿಧಿಪೂರ್ವಕದಿ ದಾನವನು ಮಾಡುವುದು ॥55॥

ಮರದಡಿಗೆ ತಿಲರಾಶಿಯದಕಾ- । ವರಣ ಮಾಳ್ಪುದು ಶ್ವೇತವಸ್ತ್ರವ । ಕರೆದು ವಿಪ್ರರ ದಾನಮಾಳ್ಪುದು ರಾಶಿವಸ್ತ್ರಗಳಾ ॥
ಸುರಮುನಿಪನಶ್ವತ್ಥ ಪೂಜೆಯ । ಪರಿಯನಿದ ಪೇಳಿದನು ಋಷಿಗುಣ । ಹರುಷ ದಿಂದೀ ವ್ರತದಿ ಸಾಧಿಸಿದರು ಅಭೀಷ್ಟಗಳಾ ॥56॥

ಗುರುವರನು ಪೇಳಿದನು ಬಂಜೆಗೆ । ಯಿರುವುದೀಪರಿ ಮಹಿಮೆ ಶ್ರವಣದಿ । ಬರುವುದೌ ಸತ್ಫಲವು ನಿನ್ನಯ ಭಾವಮಾನದಲಿ ॥
ಇರುವುದೀ ಅಶ್ವತ್ಥ ವೃಕ್ಷವು । ಇರುವುದಲ್ಲಿಯೇ ನಮ್ಮ ವಾಸವು । ಇರುವುದೀ ಸುರಧೇನು ಭೀಮಾತೀರ ಸಂಗಮದಿ ॥57॥

ನಿರತ ಸೇವಿಸು ಭಕ್ತಿಭಾವದಿ । ಮರವ ನಿನ್ನುದರದಲಿ ಕನ್ಯೆಯು । ಬರುವಳಿದಕಿನ್ನೇನು ಸಂಶಯವೆಂದನಾ ಗುರುವು ॥
ಗುರುವಚನವನು ಕೇಳಿ ವಂಧ್ಯೆಯು । ಮರಳಿಯುತ್ತರ ವಿತ್ತಳಾಕ್ಷಣ । ಚರಣಕೆರಗುತ ಕರಗಳನು ಜೋಡಿಸುತ ವಿನಯದಲಿ ॥58॥

ಗುರುವಚನ ಸುರಭಿಯ ಸಮಾನವು । ಇರುವುದೆಂದಾ ವೇದಶಾಸ್ತ್ರಗ । ಳರುಹುವವು ನಂಬುವೆನು ನಾನೀ ವಚನ ನಿಜವೆಂದು ॥
ತಿರುಗಿ ನಿಮಗಾನೊಂದು ಪೇಳುವೆ । ವರುಷ ಮೂರಿಪ್ಪತ್ತು ಯೆನಗೀ । ತೆರದ ವಯದಲಿ ಕನ್ಯೆಯಾಗುವ ಲಕ್ಷಣವದೆಂತು ॥59॥

ಕರೆಯುವರು ಜನರೆನಗೆ ವಂಧ್ಯಾ- । ತರುಣಿಯೆಂದೇ ಗಾಣಗಾಪುರ । ವರದಿ ನಿಮಗಿದ ಪೇಳಿದೆನು ನಂಬುವೆನು ಗುರುವಚನಾ ॥
ಮರವಿದೇತಕೆ ಕಾರ್ಯಸಿದ್ಧಿಗೆ । ಗುರುಚರಣವೇ ಕಲ್ಪಲತಿಕೆಯು । ಹರುಷದಿಂದಲಿ ನಿಮ್ಮ ಚರಣವ ಭಜಿಸುವೆನು ನಾನು ॥60॥

ಗುರುನಿರೋಪವ ಪಡೆದು ನಾರಿಯು । ತೆರಳಿದಳು ಸಂಗಮಕೆ ಷಟ್ಕುಳ । ವರದಿ ಸ್ನಾನವ ಮಾಡಿ ವೃಕ್ಷದ ಸೇವೆ ತೊಡಗಿದಳು ॥
ಗುರುವು ಪೇಳಿದ ವಿಧಿಪುರಃಸರ । ತರುಣಿಯಾಚರಿಸಿದಳು ಪೂಜೆಯ । ಹರುಷದಿಂ ದಿನರಾತ್ರಿ ಸೇವೆಯ ಮಾಡೆ ಮೂರ್ದಿವಸಾ ॥61॥

ಮೂರು ದಿವಸಗಳಾಗೆ ಸ್ವಪ್ನವು । ನಾರಿಗಾಯಿತು ಕೌತುಕವಲಾ । ನಾರಿ ಕೇಳೌ ಸಿದ್ಧಿಯಾಯಿತು ನಿನ್ನ ಕಾಮಿತವು ॥
ಭಾರಿ ಮಹಿಮಾ ಗಾಣಗಾಪುರ । ಸೇರಿ ಶ್ರೀಗುರುವಿನ ಪ್ರದಕ್ಷಿಣೆ- । ಯಾರುಮತ್ತೊಂದನೆಯ ಸಾರಿಗೆ ಮಾಡು ಭಕ್ತಿಯಲಿ ॥62॥

ನಂತರದಿ ಸಾಷ್ಟಾಂಗವಂದನೆ । ಸಂತಸದಿ ನೀ ಮಾಡೆ ಶ್ರೀಗುರು । ಕಂತುಹರನವತಾರ ಕೊಡುವ ಪ್ರಸಾದ ತಿನಬೇಕು ॥
ಇಂತು ಸ್ವಪ್ನದಿ ವಿಪ್ರನೋರ್ವನು । ಕಾಂತೆಗುಪದೇಶಿಸಿದ ಮಹಿಮೆಯ- । ನೆಂತು ವರ್ಣಿಸಲೀಗ ಶ್ರೀಗುರುಲೀಲೆಯ ಗಣಿತವು ॥63॥

ತೀರಿಸುತ ಸೇವೆಯನು ಮರುದಿನ । ನಾರಿ ಬಂದಳು ಗಾಣಗಾಪುರ । ಸೇರಿದಳು ಗುರುಮಠಕೆ ಬಂದಳು ವಿನಯಪೂರ್ವಕದಿ ।
ಆರುಮತ್ತೊಂದು ಪ್ರದಕ್ಷಿಣೆ । ನಾರಿ ಮಾಡುತ ಶ್ರೀಗುರುನಮ- । ಸ್ಕಾರವನು ಮಾಡಿದಳು ದಂಡಾಕಾರದಲಿ ಬಳಿಕಾ ॥64॥

ಕೊಟ್ಟನಾಕ್ಷಣ ಫಲಗಳೆರಡನು । ಕೊಟ್ಟನಭಿವಚನವನು ನಾರಿಗೆ । ಬಿಟ್ಟುಬಿಡು ನೀ ಸಂಶಯವ ಕಾಮಿತವು ಸಾಧಿಸಿತು ॥
ಕೊಟ್ಟೆ ನಿನಗಾನೆರಡ ಪತ್ಯರ । ಜ್ಯೇಷ್ಠಂ ಕನ್ಯಾ ಪುತ್ರ ನಂತರ । ಇಷ್ಟಸಿದ್ಧಿಗೆ ಫಲಗಳನು ನಿನಗಿತ್ತೆ ನಾನಿದನು ॥65॥

ಪಾರಣೆಯ ಮಾಡುತ್ತ ನಂತರ । ನಾರಿ ಕೇಳೀ ಫಲವ ಭಕ್ಷಿಸು । ಚಾರುತರದಾನಗಳನೀವುದು ಹೇಳಿದಂದದಲಿ ॥
ತೀರಿಸುತ ವ್ರತಪೂರ್ಣತೆಯನಾ । ನಾರಿದಾನವನಿತ್ತಳಾದಿನ । ಮೂರುಸಂಜೆಗೆ ಕಡೆಗೆ ಕೂತಳು ಚೋದ್ಯವೇನೆಂಬೆ ॥66॥

ಮೂರುದಿನ ಪರಿಯಂತ ಮೌನವ । ನಾರಿಯಾಚರಿಸುತಲಿ ವಿಧಿಯಲಿ । ಯಾರನಾದರು ನೋಡದಲೆ ಕಾಲವನು ಕಳೆದಳಲಾ ॥
ಮೂರುದಿನ ಹವಿಷಾನ್ನ ಭಕ್ಷಿಸಿ । ನಾರಿ ತೊಟ್ಟಳು ಶ್ವೇತವಸ್ತ್ರವ । ತೀರಿಸುತ ಸ್ನಾನವನು ನಾಲ್ಕನೆದಿವಸ ಗುರುಕಡೆಗೆ ॥67॥

ಪತಿಸಹಿತ ನಡೆತಂದು ಮಠದಲಿ । ಯತಿವರಗೆ ಪೂಜೆಯನು ಮಾಡಿದ- । ಳತಿವಿವೇಕದಿ ಗುರುವು ಪೂಜೆಗೆ ಮೆಚ್ಚಿದನು ಮನದಿ ॥
ಸುತಸುತೆಯರನು ಪಡೆದು ರಂಜಿಸು । ಕ್ಷಿತಿಯೊಳಗೆ ನೀನೆಂದು ಗುರುಮೂ- । ರುತಿಯು ಆಶೀರ್ವಚನವಿತ್ತನು ದಂಪತಿಯರಿಂಗೆ ॥68॥

ವರುಷ ವರುವತ್ತಾದ ನಾರಿಯು । ಧರಿಸಿದಳು ಗರ್ಭವನು ಗಾಣಗ । ಪುರದೊಳಾಯಿತು ಕೌತುಕವು ಗುರುಮಹಿಮೆ ಹೆಚ್ಚಾಯ್ತು ॥
ಪುರದೊಳೊಂದೇ ವಾರ್ತೆ ಬಂಜೆಯು । ಧರಿಸಿದಳು ಗರ್ಭವನೆನುತ್ತಲಿ । ಮೆರೆಯಿತದ್ಭುತವೇನನೆಂಬೆನು ಗುರುಚರಣ ಮಹಿಮೆ ॥69॥

ಉಡಿಯ ತುಂಬಿದರೇಳು ತಿಂಗಳು । ನುಡಿಯಲಕ್ಷಯ ವಾಯನಂಗಳ । ನೊಡನೆ ಬೆಳಗಿರಿ ವಿಪ್ರರಿಗೆ ವಾಯನವ ಕೊಟ್ಟಳಲಾ ॥
ಸಡಗರದಿ ಗುರುವಾಜ್ಞೆ ಯಿಂದಲಿ । ಮಡದಿಯೂರಲಿ ವಾಯನಂಗಳ । ಕೊಡುವ ಬಹು ಸೌರಂಭವಾಯ್ತು ವಿನೋದಬಹುವಾಯ್ತು ॥70॥

ಗುರುವಿಗತಿ ಪ್ರೀತಿಯು ವಿನೋದದಿ । ತರುಣಿ ಬಂಜೆಗೆ ಯೆಂಟು ತಿಂಗಳು । ಮೆರೆಯೆ ಸೀಮಂತವನು ಮಾಡಿಸಿ ಗುರುವಿನೋದದಲಿ ॥
ಹರುಷದಿಂದೂರಲ್ಲಿ ವಾಯನ । ವರ ಪ್ರಧಾನದ ವಿಧಿಯ ತೀರಿಸೆ । ಹರಸಿದನು ಗುರುವರನು ದಂಪತಿಯರಿಗೆ ಪ್ರೀತಿಯಲಿ ॥71॥

ಬೆಳ್ಳಗಾದವು ಕೂದಲವಳಿಗೆ । ಕೊಳ್ಳಿರೀಕೆಯು ಕೊಡುವ ವಾಯನ । ವೆಲ್ಲ ಕೌತುಕ ಬಂಜೆಗಾಯಿತು ಗರ್ಭಧಾರಣವು ॥
ಅಲ್ಲಸಾಧಾರಣದ ಸಂಗತಿ । ಯೆಲ್ಲ ಸಾಧ್ಯವು ಗುರು ಪ್ರಸಾದದಿ । ಬಲ್ಲರಾರೀ ಗುರುಮಹಿಮೆಯನು ಮೂರು ಜಗದೊಳಗೆ ॥72॥

ಗುರುನೃಸಿಂಹ ಸರಸ್ವತಿಯ ಪದ- । ಸರಸಿಜವ ಭಜಿಸಲ್ಕೆ ಕಾಮಿತ । ದೊರೆವುದಿದು ನಿಶ್ಚಯವು ಸೇವಿಸಿ ಪಡೆಯಿರಾನಂದಾ ॥
ಹರಿಹರಬ್ರಹ್ಮಾದಿ ಮೂರುತಿ । ಯರು ಕಣಾ ನರವೇಷದಿಂದು । ದ್ಧರಿಸಲಿಕೆ ಭಕ್ತರನು ಬಂದಿಹರೆಂದು ಸ್ತುತಿಸಿದರು ॥73॥

ಸಂತಸದೊಳಾ ವಿಪ್ರನನಿತೆಯು । ನಂತರದಿ ಬಂದಳು ಮಠಕೆ ಬಹು । ಸಂತಸವು ಪಸರಿಸಿತು ಗುರುಭಕ್ತಿಯ ಪ್ರಭಾವವಿದು ॥
ನಿಂತು ಗುರುಸನ್ಮುಖದಿ ಬ್ರಾಹ್ಮಣ- । ಕಾಂತೆ ವಂದಿಸುತೇಕಭಾವದೊ- । ಳಿಂತು ಸ್ತುತಿಸಿದಳೇನನೆಂಬೆನು ಚರಣಕೆರಗುತಲಿ ॥74॥

ಪರಮ ಪುರುಷನು ನೀನು ಶ್ರೀಗುರು- । ವರನು ಹರಿಹರಬ್ರಹ್ಮ ಮೂರುತಿ । ಯಿರುವೆ ನರವೇಷದಲಿ ಭಕ್ತೋದ್ಧರಣ ನೀನಾಗಿ ॥
ಪುರುಷನಿನ್ನಯ ವಾಕ್ಯ ದೇಹವು । ಭರದೊಳಾಯ್ತು ಸುವರ್ಣ ಮಹಿಮೆಯ- । ನರಿವರಾರೀಜಗದಿ ನಿನ್ನಯ ಮಹಿಮೆ ಗುಣಗಣವಾ ॥75॥

ಸ್ತುತಿಸಲೆನಗಳವಲ್ಲ ವಿಶ್ವವ । ಗತಿಕಣಾ ನೀನಹುದು ತ್ರೈಮೂ- । ರುತಿಯು ನೀನಹೆ ಕರುಣಸಾಗರ ಹೆಸರು ವಪ್ಪುವುದು ॥
ಸ್ತುತಿಸುತೀಪರಿ ಗುರುಚರಣವನು । ಸತಿಯು ಮನೆಗೈತರಲು ಕೆಲದಿನ । ಗತಿಯೊಳಾಯ್ತು ಪ್ರಸೂತಿ ಕನ್ಯಾರತ್ನ ಜನಿಸಿತಲಾ ॥76॥

ಹರುಷವಾಯಿತು ದಂಪತಿಯರಿಗೆ । ಕರೆದು ಜೋಯಿಸರನ್ನು ಕೇಳಲು । ಅರುಹಿದರು ಶಾಸ್ತ್ರೋಕ್ತ ಕನ್ಯಾಲಕ್ಷಣಂಗಳನು ॥
ಇರುವಳೀಕೆಯು ನಿರ್ಮಲತ್ವದಿ । ದೊರಕುವುದು ಸಂತಾನ ಸಂಪತ್ । ಮೆರವಳಿಕೆಯ ಪುತ್ರಪೌತ್ರರ ಸೌಖ್ಯದಿಂ ದಿಟವು ॥77॥

ಜ್ಯೋತಿಷರು ವರ್ಣಿಸಿದರೀಪರಿ । ಜಾತಕದ ಫಲಗಳನು ಕೇಳುತ । ಕೌತುಕದಿ ವಿಪ್ರರಿಗೆ ದಾನವನಿತ್ತನಾ ದ್ವಿಜನು ॥
ಹತ್ತು ದಿವಸವು ತೀರಲಿಕೆ ಸಂ । ಸ್ನಾತಳಾದಳು ಕೂಸನೆತ್ತುತ । ಪ್ರೀತಿಯಿಂದಲಿ ಬಂದಳಾಗುರುದರ್ಶನಕೆ ಮಠಕೆ ॥78॥

ತಂದು ಬಾಲೆಯ ಗುರುಚರಣಕಭಿ- । ವಂತಿಸುತ ಸಾಷ್ಟಾಂಗ ನಮನವ । ನೊಂದೆಭಾವದಿ ಮಾಡಿದಳು ಗುರುವರನ ಪಾದದಲಿ ॥
ಮುಂದೆ ಶ್ರೀಗುರುಮೂರ್ತಿ ಬಹಳಾ- । ನಂದದಿಂದಲಿಯವಳ ನೆಬ್ಬಿಸೆ । ಚಂದದಿಂದಾಡಿದಳು ಕೌತುಕ ಮಾಡಿ ಗುರುವರಗೆ ॥79॥

ಗುರುವೆ ನಿಮ್ಮಾಶೀರ್ವಚನದಲಿ । ಭರದೊಳಾದಳು ಕನ್ಯೆ ಮುಂದಿನ । ವರವ ನೀನೇ ಬಲ್ಲೆ ಪುತ್ರನು ಜನಿಸಬೇಕೆನಗೆ ॥
ನರಹರಿ ಸರಸ್ವತಿಯೆ ನಿನ್ನಯ । ಸರಸತಿಯು ಕೇಳೀಕೆ ನರಹರಿ । ಬರಲು ಜನನಕೆ ನಿನ್ನ ನಾಮವು ಪೂರ್ಣವಾಗುವುದು ॥80॥

ಸತಿಯ ವಚನವ ಕೇಳಿ ನಗುತಲಿ । ಚತುರತನಕತಿ ಮೆಚ್ಚಿದನು ಶ್ರೀ- । ಯತಿವರೇಣ್ಯನು ಪೇಳಿದನು ಭಾಮಿನಿಗೆ ತೊಷದಲಿ ॥
ಸತಿಯೆ ಕೇಳೌ ನಿನ್ನ ಮನಕಾ- । ಮಿತವನೀವನು ಚಂದ್ರಮೌಳಿಯು । ಸುತೆಯ ನೀ ತಾರೆಂದು ಕೂಸನು ಯೆತ್ತಿದನು ಭರದಿ ॥81॥

ತೊಡೆಯ ಮೇಲೆತ್ತಿದನು ಗುರುವರ । ಹುಡುಗಿಯ ನಿರೀಕ್ಷಿಸುತ ಪೇಳಿದ । ನುಡಿವೆನೀಕೆಯ ಲಕ್ಷಣಂಗಳ ಕೇಳು ಹರುಷದಲಿ ॥
ಹುಡುಗಿ ಈಕೆಯು ಪುತ್ರಪೌತ್ರರ ಪಡೆಯುವಳು ನಿಃಶಂಕೆಯಿಂದಲಿ । ಪಡೆವಳೈ ಧನಧಾನ್ಯ ಸಂಪತಿ ಭಾಗ್ಯವತಿಯಿವಳು ॥82॥

ಕೃತುನ ಮಾಡುತಲಿವಳಪತಿ ದೀ । ಕ್ಷಿತನೆನುತ್ತಲಿ ಹೆಸರ ಪಡೆವನು । ಸತಿಶಿರೋಮಣಿ ಪತಿಭಜನೆಯಲಿ ನಿರತರತಳಿವಳು ॥
ಕೃತಕವಲ್ಲಾ ನಿಜವ ಪೇಳ್ವೆನು । ಕ್ಷಿತಿಯೊಳೀಕೆಯ ವಂಶವೆಲ್ಲವು । ಸತತ ಸದ್ಗುರುಭಜನೆಯಲಿ ಲೌಕಿಕವ ಪಡೆಯುವರು ॥83॥

ಜ್ಞಾನಿಯಾಗುವನಿವಳ ಪತಿ ಕೇಳ್ । ಕ್ಷೋಣಿಯಲಿ ವೇದಗಳನೆಲ್ಲವ । ತಾನೆ ಪಠಿಸುವನವನಿಗಷ್ಟೈಶ್ವರ್ಯ ದೊರಕುವುದು ॥
ಕ್ಷೋಣಿಪತಿದರ್ಶನಕೆ ಬರುವನು । ಪುಣ್ಯಶೀಲಳು ಧರ್ಮಪರಳಿವ । ಳೇನ ಹೇಳುವೆನಿವಳ ಭಾಗ್ಯಕೆ ಸರಿಯ ಕಾಣೆನಲಾ ॥84॥

ಎರಡನೆಯ ಮಗು ಪುತ್ರನಾಗುವ । ನಿರುವನತಿ ಸುಜ್ಞಾನಿಯೆನಲಾ । ತರುಣಿ ನುಡಿದಳು ನಿನ್ನ ವಾಕ್ಯ ಪ್ರಮಾಣವೆನಗಿನ್ನು ॥
ಗುರುವು ವಿಪ್ರಸ್ತ್ರೀಗೆ ನುಡಿದನು । ಪರಮ ಸತ್ಸುತನಾದರವನಿಂ- । ಗಿರುವುದೈ ಮೂವತ್ತು ಮೂರ್ಖಶತಾಯುವಾಗುವನು ॥85॥

ಇದರೊಳಗೆ ನಿನಗಾವ ಪುತ್ರನು । ಸುದತಿ ಬಯಕೆಯ ಪೇಳು ಯೆನಲಾ । ಸುದತಿ ಹೇಳಿದಳಾಗ ತನ್ನಯ ಮನದ ಬಯಕೆಯನು ॥
ಮುದದಿ ಕೊಡು ಸತ್ಪುತ್ರನವನಿಗೆ । ವದಗಿ ಕೊಡು ಕೇಳೈದು ಪುತ್ರರ । ಪದಕೆರಗುವೆನೆನುತ್ತ ನಾರಿಯು ಬಿನ್ನವಿಸಿದಳಲಾ ॥86॥

ಭಕ್ತವತ್ಸಲ ವರದ ಶ್ರೀಗುರು । ಮೂರ್ತಿಯಾಪರಿ ವಿಪ್ರವನಿತೆಗೆ । ಇತ್ತನೈ ವರ ದಂಪತಿಯು ಹಿಂತಿರುಗಿದರು ಮನೆಗೆ ॥
ಮತ್ತೆಯವಳಿಗೆ ಜನಿಸಿದನು ಸ- । ತ್ಪುತ್ರನವನಿಗೆ ಗುರುಪ್ರಸಾದದಿ । ಪುತ್ರರಾದರು ಐದು ಗುರು ವಾಕ್ಯವೆ ಪ್ರಮಾಣವಲಾ ॥87॥

ಗುರುವು ಪೇಳಿದ ತೆರದಿ ಕನ್ನೆಗೆ । ದೊರಕಿತೈ ಸತ್ಕೀರ್ತಿಯವಳಿಗೆ । ದೊರಕಿದನು ಸದ್ಭಾಗ್ಯವಂತನು ಪತಿಯು ಸುಜ್ಞಾನಿ ॥
ಧರೆಯೊಳಗೆ ಯಜ್ಞವನು ಮಾಡುತ । ದೊರಕಿಸಿದನೈ ಪೆಸರುದೀಕ್ಷಿತ । ಧರಣಿ ಪತಿ ದರ್ಶನಕೆ ಬಂದನು ಕೀರ್ತಿ ಕೇಳುತಲಿ ॥88॥

ವರುಷ ಮೂರಿಪ್ಪತ್ತು ಬಂಜೆಯು । ಗುರುಪ್ರಸಾದಪ್ರಭಾವದಿಂದಲೆ । ದೊರಕಿಸಿದಳಾ ಪುತ್ರಸಂತಾನವನು ಮುದಿತನದಿ ॥
ಗುರುಮಹಿಮೆ ನಿರುಪಮವು ಲೋಕದೊ-। ಳಿರಲು ಬೇಕೈ ಮನದಿ ಭಕ್ತಿಯು । ಗುರುವೆ ಸುರತರುವೆಂಬ ಮಾತಿದು ಸತ್ಯವೈಸತ್ಯಾ ॥89॥

ಗುರುಚರಣಸದ್ಭಕ್ತಿಯುತರಿಹ । ನರರು ದೈನ್ಯವ ಕಾಂಬರೇ ಸುರ- । ತರುವ ನಾಶ್ರೈಸಿದರೆ ಬಡತನ ಬರವುದೇ ಜಗದಿ ॥
ಗುರುವು ಸಕಲಾಭೀಷ್ಟ ಸಾಧನ । ಗುರುವು ಸಕಲಾರಿಷ್ಟ ನಾಶನ । ಗುರುವೆ ಮಂಗಲಧಾಮವೆಂದನು ವಿಷ್ಣು ಗುರುಮೂರ್ತಿ ॥90॥

॥ ಅಧ್ಯಾಯ 39 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 40

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುವರನ ಕರುಣದಲಿ ಸತ್ತಿಹ । ಮರಕೆ ಪುಟ್ಟಿತು ಪಲ್ಲವವು ಮೇಣ್ । ನರಳುತಿಹ ಕುಷ್ಟದ ಶರೀರವು ಕಾಂತಿಯುತವಾಯ್ತು॥

ಹತ್ತು ಉಪನಿಷದಗಳು ವೇದದ । ಸತ್ವ ಸಾರವಿದೆಂದು ಬಹು ದ- । ಪೋರ್ಕ್ತಿಯಿಂದಲಿ ಮೆರೆಯುತಿದ್ದವು ಜಗದಿ ಜನರರಿಯೆ ॥
ಪೃಥ್ವಿಯಲಿ ತಿರುತಿರುಗಿ ಬಂದುಪ । ವಿತ್ರಜ್ಞಾನೋಬನನು ನೋಡಲು । ಅಸ್ತವಾಯಿತು ದರ್ಪ ಗುರುಚರಣದಲಿ ಲಯವಾಯ್ತು ॥1॥

ನಾಮಧಾರಕ ಕೇಳು ಶಿಷ್ಯ- । ರೋಮಣಿಯೆ ಮುಂದಿನ ಕಥಾನಕ । ರಾಮಣೀಯಕ ವಿಹುದು ಸತ್ತಿಹ ಗಿಡವು ಚಿಗಿಯಿತಲಾ ॥
ಭೂಮಿಸುರವರ ಬಂದನೋರ್ವನು । ನಾಮ ನರಹರಿ ಗಾರ್ಗ್ಯ ಗೋತ್ರಜ । ಕ್ಷೇಮವಿಲ್ಲದೆ ಕುಷ್ಟರೋಗದಿ ಬಳಲಿದನು ದ್ವಿಜನು ॥2॥

ಗುರುವರನು ಶ್ರೀಗಾಣಗಾಪುರ- । ವರದೊಳಿರುತಿರೆ ಬಂದನಾ ದ್ವಿಜ । ಚರಣ ಕೆರಗುತ ಕರವಜೋಡಿಸಿ ಗುರುವ ಸ್ತುತಿಸಿದನು ॥
ಗುರುವೆ ನಿನ್ನಯ ಕೀರ್ತಿ ಕೇಳಿದೆ । ಧರಣಿಯಲಿ ನೀ ಭಕ್ತವತ್ಸಲ । ಬಿರುದ ಧರಿಸಿಹೆ ಪರಮಪುರುಷನು ಜಗಕೆ ಗುರು ನೀನು ॥3॥

ಪುಟ್ಟಿದೆನು ಸಂಸಾರದಲಿ ನಾ- । ನಿಷ್ಟು ದಿನವಾಯುಷ್ಯ ಕಳೆದೆನು । ಘಟ್ಟಿಕಲ್ಲಾಗಿಹೆನು ನಾನಜ್ಞಾನ ತಿಮಿರದಲಿ ॥
ಶ್ರೇಷ್ಠ ನೀನಹೆ ಜ್ಯೋತಿರೂಪನು । ಕುಷ್ಟಿ ಯಾಗಿಹೆ ನಾನು ಯೆನ್ನನು । ಎಷ್ಟು ನಿಂದಿಪರೇನ ಹೇಳುವೆ ಕಷ್ಟಶ್ರೀಗುರುವೆ ॥4॥

ಓದಿಹೆನು ನಾನತಿ ಪ್ರಯಾಸದಿ । ವೇದವ ಯಜುಃಶಾಖೆಯನು ಯೆನ । ಗಾದರಿಸರ್ಕೈ ವಿಪ್ರರೆಲ್ಲರು ಕುಷ್ಟಿ ನಾನೆಂದು ॥
ಮೇದಿನೀಸುರರರ್ಥ ಪೇಳರು । ನೀ ದಯಾನಿಧಿ ಕೇಳುಯೆನ್ನಯ । ಬಾಧೆಯನು ಬಿಡಿಸುವ ಮಹಾತುಮ ನೀನೆ ಈ ಜಗದಿ ॥5॥

ಕುಷ್ಟಿ ನಾನಿಹೆನಂಗಹೀನನ- । ನಿಷ್ಟನೆಂದೇ ತಿಳಿದು ಮೋರೆಯ । ದೃಷ್ಟಿಸರು ಮುಂಜಾನೆ ವಿಪ್ರರು ದುಃಖವೇನೆಂಬೆ ॥
ಸೃಷ್ಟಿಗೊಡೆಯನು ನೀನು ನಾ ಬಹು । ಕಷ್ಟಿ ಜನ್ಮದ ಸುಖವು ಸಾಕೈ । ಶಿಷ್ಟ ರಕ್ಷಕ ನಿನ್ನ ಚರಣವ ಪಿಡಿದೆ ನಾನಿಂದು ॥6॥

ಜನುಮಜನುಮಾಂತರದಿ ಪಾಪವ । ಗಣನೆಯಿಲ್ಲದೆ ಮಾಡಿದೆನು ಫಲ । ಉಣುವೆನೀಜನ್ಮದಲಿ ಸಹಿಸೆನು ಪಾಪಕರ್ಮವನು ॥
ದಣಿದೆ ನಾ ನಾ ತೀರ್ಥಯಾತ್ರೆಯ । ಲೊಣಗಿದುದು ವ್ರತದಲಿ ಶರೀರವು । ಗುಣವ ಕೊಡರ್ಕೈ ನಿಖಿಳ ದೇವತೆಯರು ಮಹಾತುಮರು ॥7॥

ಧರಿಸಿ ನಿರ್ಧಾರವನು ಮನದಲಿ । ಗುರುವೆ ನಿನ್ನಡಿಗಳಿಗೆ ಬಂದೆನು । ಕರುಣ ಸಾಗರ ರಕ್ಷಿಸೆನ್ನನು ತ್ರಿಜಗಪಾವನನೆ ॥
ಗುರುವೆ ಯೆನ್ನ ನಪೇಕ್ಷೆ ಮಾಡಲು । ಮರಣವೇ ಲೇಸೆಂದು ಮನನಿ । ರ್ಧರಿಸಿ ಧುಮುಕುವೆ ನದಿಯೊಳೆಂದನು ವಿಪ್ರ ಕೈ ಮುಗಿದು ॥8॥

ಎನುತ ನಾನಾವಿಧದಿ ಸ್ತುತಿಸುತ । ವಿನಯ ಭಯಭಕ್ತಿಯಲಿ ಶ್ರೀಗುರು- । ವನು ನಮಿಸಿದನು ಪರುಷವೀಪದವೆಂದು ಹೇಳಿದನು ॥
ಅನುಪಮವು ನಿನ್ನಯ ಚರಣರಜ- । ಕಣದಸ್ಪರ್ಶದಿ ಪಾಪರಾಶಿಯು । ಹನನವಾಗುವದೆಂದು ವಿಪ್ರನು ಗುರುವಿಗೆರಗಿದನು ॥9॥

ಕರುಣಸಾಗರ ಭಕ್ತವತ್ಸಲ । ಗುರುವು ಪೇಳ್ದನು ಮಂದಹಾಸ್ಯದಿ । ನರಹರಿಯೆ ನಿಜ ಜನ್ಮ ಜನ್ಮಾಂತರದ ಪಾಪದಲಿ ॥
ಭರಿತವಿಹುದೈ ನಿನ್ನ ದೇಹವು । ದೊರಕಿತಾ ಕುಷ್ಟವು ನಿನಗೆ ನಾ- । ನೊರೆವೆನಿದಕಿನ್ನೊಂದುಪಾಯವ ಭಾವನಿನಗಿರಲು ॥10॥

ಭಕ್ತಿಯಲಿ ನೀನಾಚರಿಸಲಿದ । ಸತ್ತು ಹೋಗುವದೈ ದುರಿತವದು । ಚಿತ್ತಶುದ್ಧತೆಯಿಂದ ನೀನಿದ ಮಾಡು ಗುಣವಹುದು ॥
ಇತ್ತಲೀಪರಿ ಗುರುವರನು ಪೇ- । ಳುತ್ತಿರಲು ದ್ವಿಜನೋರ್ವ ತಂದನು । ಸತ್ತು ಬಿದ್ದಿರುವತ್ತಿ ಗಿಡವನು ಸರ್ಪಣಕೆ ಮನೆಗೆ ॥11॥
ಕಾಷ್ಠವೌದುಂಬರದ ವಣಗಿದು । ದೆಷ್ಟ ಹೇಳಲಿ ನಾಲ್ಕು ವರುಷವು । ದೃಷ್ಟಿ ಬಿತ್ತಾಕಾಷ್ಠದಲಿ ಗುರುವರನು ನೋಡಿದನು ॥
ಕುಷ್ಟಯಹತದ್ವಿಪ್ರನನು ಕರೆ- । ದಿಷ್ಟ ಭಾವದಿ ಪೇಳ್ದ ನೀ ತೆರ । ಕಾಷ್ಠವನು ನೀನಿದನು ಕೊಳ್ಳು ಏಕಭಾವದಲಿ ॥12॥
ಭಕ್ತಿಭಾವದಿ ಕೊಂಡು ಕಾಷ್ಠ ವ । ಚಿತ್ತವಿಸು ನೀ ಸಂಗಮಕೆ ಮೇ- । ಣಿತ್ತಿಗಿಡವನು ಹಚ್ಚು ಸಂಗಮನಾಥನೆದುರಿನಲಿ ॥
ನಿತ್ಯದಲಿ ಸಂಗಮದಿ ಸ್ನಾನವ । ಭಕ್ತಿಪೂರ್ವಕ ಮಾಡಿ ಮೇಣ- । ಶ್ವತ್ಥವನು ಪೂಜಿಸುತ ಪುನರಪಿ ನದಿಗೆ ಹೋಗುವುದು ॥13॥
ಧರಿಸುತಲಿ ಕರದೊಳಗೆ ಕಲಶಗ- । ಳೆರಡ ನೀ ನದಿಜಲದಿ ಪ್ರತಿದಿನ । ಮರಕೆ ಹಾಕೈ ನೀರ ನಿತ್ಯದೊಳೇಕಭಾವದಲಿ ॥
ಭರವಸದೊಳಿದ ಮಾಡು ಯೆಂದೀ । ಮರಕೆ ನವ ಪಲ್ಲವವು ಬರುವುದು । ದುರಿತವಂದಿಗೆ ತೀರಿ ದೇಹ ಸುವರ್ಣವಾಗುವುದು ॥14॥
ಗುರುಚರಣದ ಕೃಪಾತುಷಾರದ । ಸರಸವಚನದಿ ವಿಪ್ರನಾಶೆಯ । ಮರಕೆ ಹುಟ್ಟಿತು ಪಲ್ಲವವು ದ್ವಿಜಭಾಗ್ಯವೇನೆಂಬೆ ॥
ಭರವಸವು ದೃಢವಾಯ್ತು ವಿಪ್ರಗೆ । ಭರದೊಳೋಡುತ ಶುಷ್ಕ ಕಾಷ್ಟವ । ಶಿರದೊಳೇರಿಸಿ ನಡೆದನಾ ಸಂಗಮಕೆ ಬೇಗದಲಿ ॥15॥
ಒಣಗಿದೌದುಂಬರದ ಗಿಡವನು । ಮನಸ ಪೂರ್ವಕವಾಗಿ ಭೀಮಾ- । ವಿನುತತೀರದಿ ಸಂಗಮೇಶ್ವರನೆದುರು ಹಚ್ಚಿದನು ॥
ಅನುಕರಿಸಿದನು ಗುರುವಚನವನು । ದಿನದಿನದಿ ನೇಮದಲಿ ನೀರನು । ಉಣಿಸುತಿದ್ದನು ಶುಷ್ಕಕಾಷ್ಠಕೆ ಚೋದ್ಯವೇನೆಂಬೆ ॥16॥
ಏಳುದಿನಪರಿಯಂತವೀಪರಿ । ಲೀಲೆಯಲಿ ದ್ವಿಜನಾಚರಿಸಿದನು । ಕೇಳಿ ವಾರ್ತೆಯು ಬಂದು ವಿಪ್ರರು ಚೋದ್ಯವೆನ್ನುವರು ॥
ಲೀಲೆಯನು ತಾ ತಿಳಿಯದೆಲ್ಲರು । ಖೂಳನೆಂದೇ ಬಗೆದು ವಿಪ್ರಗೆ । ಪೇಳಿದರು ಸದಸದ್ವಿವೇಕವನೆಲ್ಲ ವಿಪ್ರನಿಗೆ ॥17॥

ಒಣಗಿಹುದು ಗಿಡ ನಾಲ್ಕು ವರುಷದ । ತನಕ ಹಚ್ಚಿದೆ ಚೋದ್ಯವಾಯಿತು । ಉಣಿಸುತಿಹೆ ದರದಿವಸ ನೀರನು ಹುಚ್ಚ ನಂದದಲಿ ॥
ಮನದಿಯೋಚಿಸಿ ನಿನ್ನ ರೋಗದ । ಗುಣವು ಬಾರದೆನುತ್ತ ಗುರುಯೋ- । ಚನೆಯ ಪೇಳ್ದನಶಕ್ಯಕೋಟಿಯನೇನ ಹೇಳುವೆನು ॥18॥

ಚೇಷ್ಟೆಯನು ಮಾಡಿದನು ಶ್ರೀಗುರು । ಗುಟ್ಟನೀನದ ನರಿಯೆ ನೀನೀ । ಕಷ್ಟವನು ಸಹಿಸುವೆ ವೃಥಾ ನೀ ಹುಚ್ಚನೋ ತಿಳಿಯೆ ॥
ಸೃಷ್ಟಿಯಲಿ ನಾವರಿಯೆ ಸತ್ತಿಹ । ಕಾಷ್ಠ ಕೆಲ್ಲಿಂದೀಗ ಪಲ್ಲವ । ಭ್ರಷ್ಟತನದಕ ಮಾಲ ಮಾಡಿದೆಯೆಂದರಾ ದ್ವಿಜರು ॥19॥

ಗುರು ಕೃಪಾಸಾಗರನು ಭಕ್ತರಿ । ಗಿರುವನವನ್ನೈ ವರದ ಮಹಿಮೆಯ- । ನರಿವರಾರೀ ಜಗದಿ ಸಟೆಯಾಗದು ವಚನವವನಾ ॥
ದುರಿತನಾಶನವನೆಂದು ನಿನಗಿದ । ಪರಮ ದಿವ್ಯೌಷಧವ ಹೇಳಿಹ । ನರಿಯಲಾರೆವು ಗುರುಮಹಿಮೆ ಕೆಲರೆಂದರೀ ತೆರದಿ ॥20॥

ಪರಿಪರಿಯೊಳಾ ಜನರ ನುಡಿಯನು । ಹರುಷದಿಂದಲಿ ಕೇಳಿ ವಿಪ್ರನು । ತಿರುಗಿಯುತ್ತರವಿತ್ತನವರಿಂಗೇಕಭಾವದಲಿ ॥
ಗುರುವಚನದಲಿ ಶ್ರದ್ಧೆ ದೃಢವಾ- । ಗಿರುವುದೆನಗಿದು ಸತ್ಯ ಭಾವದ । ತೆರದಿ ಫಲವೈ ಸಿಗುವುದೆನಗಿದು ದಿಟವು ದಿಟದಿಟವು ॥21॥

ಸತ್ಯವಚನನು ಗುರುವೆನುತ ಶ್ರುತಿ- । ತತ್ವಗಳು ಘೋಷಿಪವು ಯೆನಗವ । ವ್ಯರ್ಥವಾಗಿಯಸತ್ಯ ವಚನವನೆಂತು ಪೇಳುವನು ॥
ಅತ್ತಿಗಿಡವಿದು ಚಿಗಿತು ಪುನರಪಿ । ನಿತ್ಯ ಜೀವಕ್ರಮವ ಮಾಳ್ಪುದು । ಸತ್ಯವೆನ್ನಯ ಮಾತು ಇಲ್ಲವೆ ಪ್ರಾಣ ತ್ಯಜಿಸುವೆನು ॥22॥

ತೆರದೊಳೀ ನಿರ್ಧಾರ ಮಾತನು । ಅರುಹಿದನು ದ್ವಿಜನವರಿಗೆಲ್ಲವ । ಹರುಷದಿಂದಾ ಶುಷ್ಕಕಾಷ್ಠಕೆ ಸೇವೆ ತೊಡಗಿದನು ॥
ಪರಿಯೊಳೀ ದಿನವೇಳ ತೀರಲು । ಗುರುವರನಿಗರುಹಿದರು ಶಿಷ್ಯರು । ಗುರುವೆ ಕುಷ್ಟಿದ್ವಿಜನು ಸಾವನು ನಿನ್ನ ಮಾತಿನಲಿ ॥23॥

ಕಾಷ್ಠ ಶುಷ್ಕಕೆ ನೀರನೆರೆಯುವ । ಕಷ್ಟ ಸಾಧನವೆಂದು ದ್ವಿಜನಿಂ- । ಗೆಷ್ಟ ಹೇಳಿದನೇನ ಬಿಡನವ ಗುರು ನಿರೋಪವನು ॥
ಇಷ್ಟು ದಿನವುಪವಾಸವಿರುವನು । ನಿಷ್ಠೆಯಿಂದಲಿ ನಿನ್ನ ವಚನದೊ- । ಳಿಟ್ಟು ಭರವಸ ಸೇವಿಪನು ಸತ್ತಿರುವ ವೃಕ್ಷವನು ॥24॥

ಅನ್ಯ ಭಾವವನರಿಯನವನಾ । ಅನ್ನಗ್ರಹಣವ ಮಾಡನಾಜಲ- । ವನ್ನು ಕುಡಿಯನು ಪ್ರಾಣದಾಶೆಯ ಬಿಟ್ಟು ಸೇವಿಪನು ॥
ನಿನ್ನ ವಾಕ್ಯ ಪ್ರಮಾಣವೇತನ- । ಗನ್ನು ವನು ಗುರುಮೂರ್ತಿಯಾಡಿದು- । ದನ್ನು ನಿಜಮಾಡುವನೆನುತ ನಿರ್ಧಾರ ಮಾಡಿಹನು ॥25॥

ಶುದ್ಧವಿರಲಂತಃಕರಣ ಸಂ- । ಸಿದ್ಧಿ ಯಪ್ಪುದು ಶುದ್ಧ ಭಾವನೆ । ಯಿಂದ ತೆರದಲಿ ಯಿದಕೆ ನಾನೊಂದೊರೆವೆ ಗೋಷ್ಠಿಯನು ॥
ಶುದ್ಧ ಗುರು ಭಕ್ತಿಯ ಪ್ರಕಾರದ । ಸಿದ್ಧಿ ಸಾಧನೆ ಪೇಳೆನುತಲಾ । ಶುದ್ಧ ಬುದ್ಧ ಸ್ವರೂಪ ಸೂತಗೆ ಋಷಿಗಳರುಹಿದರು ॥26॥

ಮಾತು ಕೇಳುತ ಋಷಿ ವರರಿಗಾ । ಸೂತನೆಂದರು ಭವದ ಬಲೆಯಲಿ । ಸೋತು ಸಿಲುಕಿದ ಮಾನವರಿಗೀ ಭಕ್ತಿಯೇ ಮುಕ್ತಿ ॥
ಭೂತಳದಿ ಗುರುಭಕ್ತಿ ಮಾಡಲು । ಜಾತಿನೀತಿಯ ನೋಡದಲೆ ಗುರು । ಮಾತಿನಲಿ ಶ್ರದ್ಧೆಯನಿಡುವದಿದು ಮೊದಲನೆಯ ತತ್ವಾ ॥27॥

ಗುರುವಿನಲಿ ಧೃಢ ಭಕ್ತಿಯಿದ್ದರೆ । ಪರಮ ಸಾಧನ ಸರ್ವ ಧರ್ಮಕೆ । ಧರಿಸಲಾಗದು ಮನದಿ ಶಂಕೆಯ ಶೃದ್ಧೆಯೇ ಸಿದ್ಧಿ ॥
ಗುರುವಿವನು ನರನಲ್ಲ ಸಾಕ್ಷಾತ್ । ಹರಿಬ್ರಹ್ಮಾದಿಮೂರುತಿ । ಯಾರಿವರಾರೀ ತತ್ವವನು ಕೇಳವರೆ ಜ್ಞಾನಿಗಳು ॥28॥

ಗುಣವನವಗುಣಗಳನು ಮಾನವ । ನೆಣಿಸಲಾರದು ಗುರುಚರಣದಲಿ । ವಿನಯ ಭಕ್ತಿಯನಿಟ್ಟು ಶ್ರೀಗುರುವರನೆ ಹರನೆಂದು ॥
ಎಣಿಸುತೀಪರಿ ಮನದಿ ಶ್ರೀಗುರು- । ವನು ಭಜಿಸಲಾಸರ್ವ ಸಿದ್ಧಿಗ । ಳನವರತ ದಾಸಿಯರು ಮೆಚ್ಚುವನ್ಯೆ ಮಹೇಶ್ವರನು ॥29॥

ಮಂತ್ರೇ ತೀರ್ಥೇ ದ್ವಿಜೇ ದೇವೇ ದೈವಜ್ಞೆ ಭೇಷಜೇ ಗುರೌ ॥
ಯಾದೃಶೀಂ ಭಾವನಾಂ ಕುರ್ಯಾತ್ ಸಿದ್ಧಿರ್ಭವತಿ ತಾದೃಶೀ॥

ಯಾವ ತೆರದಲಿ ಮಂತ್ರ ತೀರ್ಥದಿ । ದೇವದ್ವಿಜದೈವಜ್ಞ ಗುರುವಿಲಿ । ಭಾವನೆಯನಿಡುತಿಹನೋ ಭೇಷಜನಲ್ಲಿ ನಿಜವಾಗಿ ॥
ಆ ವಿಧದಿ ಸಿಗುತಿಹುದು ಸಿದ್ಧಿಯು । ಸಾವಧಾನದಿ ಕೇಳಿರೆಲ್ಲರು । ಪೂರ್ವ ಕಥೆಯನು ಪೇಳುವೆನು ಗುರುಭಕ್ತಿಭಾವನೆಯಾ ॥30॥

ಧರಣಿಯೊಳು ಪಾಂಚಾಲದೇಶದೊ । ಅರಸನೊರ್ವನು ಸಿಂಹಕೇತನು । ಮೆರೆದನ್ಯೆ ರಾಜ್ಯದಲಿ ಮಗನಿರ್ದನು ಧನಂಜಯನು ॥
ತೆರಳಿದನು ಮಗನೊಂದು ದಿನದಲಿ । ಹೊರವಳಯದಡವಿಯಲಿ ಮೃಗಯಾ- । ಪರಮನಿರ್ಜನ ವನದಿ ಬೇಟೆಯನಾಡಿದನು ಮುದದಿ ॥31॥

ನೀರಕಾಣದೆ ವನದಿ ಬಹು ಬಾ- । ಯಾರಿ ದಣಿದನು ತಿರುಗಿ ರಾಜಕು- । ಮಾರನೋಡಾಡಿದನು ವನದಲಿ ನೀರಿನಾಶೆಯಲಿ ॥
ತೋರಲಾರದೆ ನೀರು ಶಬರರು । ದೂರ ನಡೆಯರು ನೀರ ಕುಡಿಯದೆ । ಘೋರ ಕಾನನದಲ್ಲಿ ಕಂಡರು ಶಬರಬಾಲಕನು ॥32॥

ಬಾಲನಾ ಕಾನನದಿ ಜೀರ್ಣದೇ । ವಾಲಯದ ಹತ್ತರದಿ ಕೈಯಲಿ । ಲೀಲೆಯಿಂದಲಿ ಭಿನ್ನಲಿಂಗವ ಹಿಡಿದು ನಿಂತಿಹನು ॥
ಮೇಲೆ ಮೇಲಿಂದದನು ನೋಡುತ । ತಾಳುವನು ಸಂತಸವನನಿತಕೆ । ಬಾಲನಿದ್ದೆಡೆ ರಾಜಪುತ್ರನು ಬಂದು ಮುಟ್ಟಿದನು ॥33॥

ಅರಸುಮಗನಿದ ನೋಡಿ ಶಬರನು । ಕರೆದು ಕೇಳಿದ ಭಿನ್ನಲಿಂಗವ । ಕರದಿ ಹಿಡಿದಿಹೆ ಯೇನು ನಿನ್ನ ವಿಚಾರವೆಂದೆನಲು ॥
ಮರಳಿ ಪ್ರತ್ಯುತ್ತರವನಿತ್ತನು । ಇರುತಿಹುದು ರಮಣೀಯ ಲಿಂಗವು । ಬರುವುದೆನಗೆ ವಿಚಾರ ಪೂಜೆಯ ಮಾಡಬೇಕೆಂದು ॥34॥

ಅರಸುಮಗನಿಂತೆಂದನವನಿಗೆ । ಇರುವುದೀಪರಿ ಹಲವು ಕಲ್ಲುಗ- । ಳರಿಯೆ ನಾನೀ ಭಿನ್ನ ಲಿಂಗದ ಫಲವ ನಿಜವಾಗಿ ॥
ಬರುವುದಾದರೆ ನಿನ್ನ ಮನದಲಿ । ಭರದಿ ಕೊಂಡಿದ ಪೂಜೆಮಾಡ್ಯೆ । ಪರಿಯ ಪೇಳುವೆನೆಲ್ಲ ಪೂಜಾವಿಧಿಯ ಕೇಳುವುದು ॥35॥

ಮನೆಗೆ ಕೊಂಡೊಯ್ಯುವುದು ಹರುಷದಿ । ಮನಕೊಳಿವನೆ ಮಹೇಶನೆನುತಲಿ । ನೆನಿಸಿ ಪೂಜೆಯ ಮಾಡು ನಿತ್ಯದೊಳೇಕ ಭಾವದಲಿ ॥
ಮನವಶುದ್ಧೀಕರಿಸಿ ಬಹಳ ಸು- । ಮನಗಳನು ತಂದೇರಿಸುತ ಶಿವ । ನನು ವಿವೇಕದಿ ಧೂಪದೀಪಗಳಿಂದ ಪೂಜಿಸಲಾ ॥36॥

ಇರುವುದೀ ಲಿಂಗಕ್ಕೆ ಭಸ್ಮದಿ । ಪರಮ ಪ್ರೀತಿಯು ನೀನು ದಿನದಿನ । ದೊರಕಿಸಲು ಬೇಕ್ಕೆ ಚಿತಾಭಸ್ಮವನು ನೇಮದಲೆ ॥
ಮರೆಯದಿದ ನೈವೇದ್ಯಕಾಗಿಯೆ । ಹರನಿಗರ್ಪಿಸಿ ಪೂಜೆಮಾಡಲು । ದೊರೆವುದಿದರಲಿ ಸಿದ್ಧಿಯೆಂದನು ರಾಜಸುತನನಗೆ ॥37॥

ಅರಸುಕುವರನು ಶಬರಗಾದನು । ಗುರುವು ಶಬರನು ಕೇಳುತೋಂದೇ । ಭರವಸೆಯೊಳಾ ತೆರದಿ ಪೂಜೆಯನಾರಭಿಸಿದನನಾ ॥
ಗುರುನಿರೋಪದೊಳೇಕಭಾವದಿ । ವಿರಚಿಸಿದನಾಲಿಂಗಪೂಜೆಯ । ದರದಿವಸ ನೈವೇದ್ಯ ಕಾಗಿಯೆ ತಂದನಾ ಭಸ್ಮ ॥38॥
ಹಲದಿವಸವೀಪರಿಯ ಪೂಜೆಯ- । ನೊಲವಿನಿಂದಾ ಶಬರಶಬರಿಗ । ಳಗಲದೀನೇಮದಲಿ ಮಾಡಿದರೇನ ಹೇಳುವೆನು ॥
ಬಳಲಿದನು ಮೇಣೊಂದು ದಿವಸದಿ । ನೆಲನನೆಲ್ಲವ ಹುಡುಕೆ ಸಿಗದದು । ಹಳಹಳಿಸಿದನು ಮನೆಗೆ ಬಂದನು ದುಃಖವೇನೆಂಬೆ ॥39॥
ಚಿಂತೆಯಾಯಿತು ಬಹಳ ಶಬರಗೆ । ಕಂತೆಯನು ಕರೆದೆಂದನೀಪರಿ । ಕಾಂತೆ ಕೇಳೀ ದಿನದಿ ಸಿಗದಾ ಚಿತೆಯ ಭಸ್ಮವಿದು ॥
ಬಂತು ದೈನಿಕ ಪೂಜೆಗಡಚಣಿ । ಕಂತುಹರ ಸಿಟ್ಟಾಗುವನು ಯಿದ- । ಕಂತು ಪಾಯವ ಪೇಳ್ವುದೆಂದನು ದುಗುಡದಲಿ ಶಬರಾ ॥40॥
ಗುರುವು ಪೇಳಿದನೀತರದೊಳಾ- । ದರದಿವಸ ಪೂಜೆಯನು ಮಾಡೆಂ- । ದರುಹಿದನು ಗುರುವಾಕ್ಯ ಮೀರಲು ರೌರವದ ನರಕಾ ॥
ದುರಿತವವನಿಗೆ ದೂರವಿಲ್ಲೆ್ಲ । ದುರಿತ ದಾರಿದ್ರ್ಯಗಳ ದೋಷಗ- । ಳಿರದೆ ಬೆನ್ನಟ್ಟುವವಧೋಗತಿಯಿಹಪರದೊಳಿಹುದು ॥41॥
ಗುರುನಿರೋಪವನಾರು ಸ್ವೀಕರಿ । ಪರೊಯವರೆ ಸಂಸಾರಸಾಗರ । ತರಿಸುವರು ನಿಜವಾಗಿಯೆಂದಾ ಶ್ರುತಿಗಳೊದರುವವು ॥
ಗುರುನಿರೋಪವ ಮಾಡದಿದ್ದರೆ । ಮರಣವದರಿಂ ಲೇಸು ಪ್ರಾಣವ । ನಿರದೆ ತ್ಯಜಿಸುವೆನೆಂದು ಕಾಂತೆಗೆ ಪೇಳಿದನು ಶಬರಾ ॥42॥
ಪತಿಯ ವಚನವ ಕೇಳಿ ಶಬರನ । ಸತಿಯು ನಗುತಿಂತೆಂದಳೀಪರಿ । ಪತಿಯೆ ಯಿದಕೇಕಿಷ್ಟು ದುಗುಡವು ಪೇಳ್ವೆನೀಹದನಾ ॥
ಚಿತೆಯ ಭಸ್ಮವ ನಾನು ಕೊಡುವೆನು । ಸತತ ಗುರುವಾಕ್ಯ ಪ್ರಮಾಣವು । ಮತಿಯ ಕಲುಷಿತ ಮಾಡಬೇಡೀ ಕ್ಷುಲ್ಲ ಕೆಲಸದಲಿ ॥43॥
ನಾನು ಮನೆ ಯೊಳಗಿರುವೆನದ ವೈ- । ಶ್ವಾನರನಿಗರ್ಪಿಸಿರಿ ಭಸ್ಮವು । ತಾನೆ ಸಿಗುವುದು ಚಿಂತೆಯಿದಕಿನ್ನೇನು ಮಾಡುವುದು ॥
ಕ್ಷೋಣಿಯಲಿ ದೇಹಕ್ಕೆ ಬರುವುದು । ಹಾನಿಯೆಂದಾದರು ತಿಳಿಯಲಿದ । ನೇನು ಹರಗರ್ಪಿಸಿದರಾಯಿತು ಸ್ವಾರ್ಥಪರಮಾರ್ಥಾ ॥44॥

ಸತಿಯ ವಚನವ ಕೇಳಿ ಶಬರನ । ಮತಿಯು ವಿಹ್ವಲವಾಯ್ತು ಪೇಳ್ದನು । ಸತಿಯೇ ಪ್ರಾಣೇಶ್ವರಿಯೆ ನಿನ್ನನು ಸುಟ್ಟರೇನಹುದು ॥
ರತಿಯ ಹೋಲುವ ರೂಪು ನೀನಾ । ಸುತರಪಡೆಯದ ಪೂರ್ವವಯ ಸಂ । ಸೃತಿಯ ಸುತದುಪಭೋಗಮಾಡದ ನಿನಗೆ ಸುಡಲೆಂತು ॥45॥

ತಂದೆ ತಾಯ್ಗಳು ರಕ್ಷಿಸಲು ಬೇ- । ಕೆಂದು ಯೆನಗರ್ಪಿಸಿದ ನಿನ್ನನು । ಚಂದ್ರ ಸೂರ್ಯರ ಸಾಕ್ಷಿಯಲಿ ವರಿಸಿದೆನು ನಾನಿನ್ನಾ ॥
ಮಂದಿರಕೆ ರಕ್ಷಿಪ ನಿಮಿತ್ತದಿ । ತಂದೆ ನಿನ್ನನು ಪ್ರೀತಿಯಲಿ ನಿನ- । ಗಿಂದು ಸುಡುವೀ ಹದವ ಪೇಳುವೆ ಮಾಳ್ಪೆ ನಾನೆಂತು ॥46॥

ನೀನು ಯೆನ್ನಯ ಪ್ರಾಣಪ್ರಿಯೆ ನೀ । ಹಾನಿಯಾಗಲು ಹರನು ವಲಿವನೆ । ನೀನು ಪರಿಕಿಸಿ ನೋಡು ಬರುವುದು ಪಾತಕವು ಬರಿದೆ ॥
ಏನು ಪಾಪವ ಮಾಡಿದೆನೊ ಖಳ । ನಾನು ಯೆಂದೀ ಲೋಕವೆಲ್ಲವು । ಮಾನಿಪನು ಸ್ತ್ರೀಹತ್ಯ ಪಾತಕ ಮಾಳ್ಪೆ ನಾನೆಂತು ॥47॥

ನಿನ್ನ ತಾಯ್ತಂದೆಗಳು ಬೈವರು । ಯನ್ನ ನೀ ಲೋಕದಲಿ ಮೂರ್ಖನು । ಯೆನ್ನುವರು ಸ್ತ್ರೀಘಾತಕದ ಪಾಪಿಷ್ಠ ನಾನೆಂದು ॥
ಇನ್ನು ನಿನ್ನಯ ರೂಪ ಬಹುಲಾ- । ವಣ್ಯ ವಹುದೀಪರಿಯಸ್ತ್ರೀಯನು । ಯೆನ್ನ ಕೈಯಿಂದೆಂತ ಸುಡಲೀಪರಿಯ ನಾ ಮಾಡೆ ॥48॥

ಹಲವು ವೃತಗಳ ಮಾಡಿ ಶ್ರೀಹರ- । ನೊಲುಮೆಯನು ದೊರಕಿಸುವ ದೇಹವ- । ನಿಳೆಯೊಳಗೆ ನಾನೆಂತು ಸುಡಲೀ ಬೆಂಕಿಯಲಿ ನಿನ್ನಾ ॥
ಘಳಿಲನೀ ಮಾತುಗಳ ಶಬರನ । ಲಲನೆ ಕೇಳಿದಳಾಗ ನುಡಿದಳು । ತಿಳಿಯೆ ನಿನ್ನಯ ತತ್ವ ದೇಹವು ಸ್ಥಿರವೆ ಜಗದೊಳಗೆ ॥49॥

ನಿತ್ಯವಲ್ಲ ಶರೀರ ಸ್ವಪ್ನಾ । ವಸ್ಥೆಯಂದದೊಳಿಹುದು ನೀನೀ । ಮಿಥ್ಯವಿಹ ಸಂಸಾರಮಾಯೆಯ ಸತ್ಯ ತಿಳಿದೆಯಲಾ ॥
ಮೃತ್ಯುವಿನ ಬಾಯಲ್ಲಿ ಸರ್ವರು । ಸತ್ತು ಬೀಳುವರಕಟ ನಿನಗಿದ । ಗೊತ್ತು ಹಚ್ಚುವೆ ದೇಹ ನೀರಿನ ಮೇಲಿರುವ ಗುಳ್ಳೆ ॥50॥

ದಾನವಿತ್ತರು ಯೆನಗೆ ನಿನ್ನನು । ನಾನು ನಿನ್ನರ್ಧಾಂಗಿ ಯೆನ್ನಯ । ಪ್ರಾಣ ನಿನ್ನದು ತಂದೆತಾಯ್ಗಳನರಿಯೆ ನಾನಿಂದು ॥
ಜ್ಞಾನದೃಷ್ಟಿಯೊಳಿದನು ನೋಡನು- । ಮಾನಮಾಡದೆ ದಹನ ಮಾಡೈ । ಹಾನಿಯಿರುವುದು ಸಕಲ ವಸ್ತುಗಳಿಂಗೆ ಜಗದೊಳಗೆ ॥51॥

ನಾಶಕರವಾದೀ ಶರೀರವ । ನೀಶಗರ್ಪಿಸುತಿರುವೆನೆನಗು- । ಲ್ಲಾಸವಾಗಿದೆ ಬೇರೆ ಸಾರ್ಥಕವೇನು ದೇಹಕ್ಕೆ ॥

ಭಾಸುರದ ಸತ್ಕೀರ್ತಿ ದೊರೆತರೆ । ಲೇಸುಲೇಸಹುದೆಂದು ಜಗದಲಿ । ತೋಷವರ್ಧನವಹುದು ಸುಡುಸುಡು ಯೆನ್ನ ನೀಕ್ಷಣದೀ ॥52॥

ಎಂದು ನಾನಾ ಪರಿಯೊಳಾಸತಿ । ಯೆಂದಳೈ ನಿಜಪತಿಗೆ ಬೋಧಿಸಿ । ಕುಂದನಿಣಿಸದೆ ಶಬರ ನಿರ್ಧಾರವನು ಮಾಡಿದನು ॥

ಮಂದಿರದೊಳಾಕೆಯನಿಡುತಲಾ । ನಂದದಿಂದಲಿ ಜ್ವಾಲೆ ಹಚ್ಚಲು । ಬೆಂದುಹೋಯಿತು ಶಬರಿಸಹಿತಲೆ ಮನೆಯು ಚೋದ್ಯವಲಾ ॥53॥

ಗುರುನಿರೋಪದ ಭಸ್ಮವಿಟ್ಟನು । ಹರನೆದುರು ನೈವೇದ್ಯ ಕಾಗಿಯೆ । ಹರುಷದಿಂದಾ ಶಬರನರ್ಪಿಸಿದನು ಸಗಾಢದಲಿ ॥

ಹರನ ಪೂಜಾವಿಧಿಯಲಿವನಾ । ದರದಿ ಧೂಪಾದಿಗಳ ತೋರಿಸಿ । ಸ್ಮರಣವಿಲ್ಲದೆ ಸ್ತ್ರೀಯ ಕರೆದನು ತೀರ್ಥ ಕೊಳ್ಳಲಿಕೆ ॥54॥

ನಿತ್ಯದಲಿ ಬರುವಂತೆ ಶಬರನ । ಹತ್ತರಕೆ ಬಂದಳು ಕಣಾ ಸ್ತ್ರೀ । ಚಿತ್ರವಲ್ಲಾ ಹರನ ಮಹಿಮೆಯ ನೇನ ಹೇಳುವೆನು ॥

ಮತ್ತೆ ಸುಟ್ಟಿಹ ಮನೆಯ ನೋಡಲು । ಇತ್ತು ಹಿಂದಿನ ತೆರದಿ ಮೇಣವ । ಳೆತ್ತ ಬಂದಳು ಮನೆಯ ಸುರಕ್ಷಿತವೆಂತ ಕಾಣುವುದು ॥55॥

ಮನದಿ ವಿಸ್ಮಯ ತಾಳಿ ಶಬರನು । ವನಿತೆಯನು ದೃಷ್ಟಿಸುತ ಕೇಳ್ದನು । ನಿನಗೆ ನಾ ಮನೆಯೊಳಗೆ ಹಾಕುತ ಮನೆಯ ಸುಟ್ಟಿಹೆನು ॥.

ಪುನಹನೀನೆಂತಿಲ್ಲಿ ಬಂದಿಹೆ । ಮನೆ ಸುರಕ್ಷಿತವಿಹುದು ವಿಸ್ಮಯ- । ವೆನಗೆ ತೋರುವುದೆಂದು ಶಬರನು ಪೇಳ್ದ ನಾಸತಿಗೆ ॥56॥

ವನಿತೆ ಶಬರಗೆ ಪೇಳ್ದಳಾಕ್ಷಣ । ವಿನಯಪೂರ್ವಕವಾಗಿ ಪ್ರಾಣೇ । ಶನೆ ಯೆನಗೆ ಧ್ಯಾನದಲಿ ಬರುತಿದೆ ಜ್ವಾಲೆ ನೀನಿಟ್ಟೆ ॥

ಮನೆಯೊಳಗೆ ನಾನಿದ್ದೆ ನಿದ್ರೆಯೋ- । ಳೆನಗೆ ಶೀತದ ಬಾಧೆಯಾಯಿತು । ಮನದೊಳಾಯಿತು ನಿದ್ದೆ ಬಂದಂತೆನಗೆ ಚೋದ್ಯವಲಾ ॥57॥

ನಿನ್ನ ಮಾತನು ಕೇಳಿ ಬಂದೆನು । ಸನ್ನು ತಾತ್ಮನೆ ಶಿವನು ನಿನಗೆ ಪ್ರ- । ಸನ್ನನಾದನು ಮಚ್ಚಿ ಭಕ್ತಿಗೆ ದಿಟವು ದಿಟದಿಟವು ॥

ಎನ್ನು ತೀ ನಾರಿ ನುಡಿಯಲು ಪ್ರ- । ಸನ್ನನಾದನು ಶೂಲಪಾಣಿಯು । ತನ್ನ ನಿಜರೂಪವನು ತೋರಿಸಿ ಮುಂದೆ ನಿಂತನಲಾ ॥58॥

ಚರಣ ಕೆರಗುತ ದಂಪತಿಗಳತಿ । ಹರುಷದಿಂ ಲೋಟಾಂಗಣವ ವಿ- । ಸ್ತರಿಸಿದರು ಹರನೆಂದನವರಿಗೆ ಮೆಚ್ಚಿದೆನು ನಿಮಗೆ ॥
ವರವನೀಡುವೆ ನಿಮಗೆ ಸೌಖ್ಯವು । ನಿರತ ದೊರೆಯಲಿ ರಾಜ್ಯಸಂಸದ । ಬರಲಿ ಸ್ವರ್ಗದಿ ಕೊಟಿಕಲ್ಪದ ವಾಸ ನಿಮಗಿರಲಿ ॥59॥

ಸೂತನೀಪರಿ ಋಷಿಗಳಿಗೆ ಬಹು । ಪ್ರೀತಿಯಿಂದಲಿ ನುಡಿದ ಗೋಷ್ಠಿಯ- । ನೀತೆರದಿ ಗುರುಶಿಷ್ಯರಿಗೆ ಪೇಳಿದನು ಕಥನವನು ॥
ಮಾತ ಹೇಳುವೆ ನಿನಗೆ ಶ್ರೀಗುರು- । ನಾಥನಲಿ ಭಾವಾರ್ಥವಿದ್ದರೆ । ಆತೆರದಿ ಫಲಸಿದ್ಧಿಯೆಂದನು ನಗುತ ಶ್ರೀಗುರುವು ॥60॥

ನೋಡುವೆನು ಕಣ್ಣಿನಲಿ ತಾ ನಿಜ- । ವಾಡುವರೊ ಸಟೆಯಾಡುವರೊ ಕೊಂ- । ಡಾಡುತಿಹರೋ ವ್ಯರ್ಥವೆಂದಾ ಗುರುವು ಸಂಗಮಕೆ ॥
ಓಡಿದರು ಬಹು ಮಂದಿ ಹಿಂದೆ ಸ- । ಗಾಢದಲಿ ನಡೆತಂದರಾ ದ್ವಿಜ । ಮಾಡುತಿದ್ದನು ಶುಷ್ಕ ಕಾಷ್ಠದ ಸೇವೆ ಭಕ್ತಿಯಲಿ ॥61॥

ಕರದೊಳಿದ್ದ ಕಮಂಡಲೂದಕ । ಸುರಿಸಿದನು ಕೇಳ್ ಶುಷ್ಕಕಾಷ್ಠದಿ । ಗುರುವು ಕರುಣಾದೃಷ್ಟಿಯಿಂದಲಿ ನೋಡಿದನು ಮರನಾ ॥
ಭರದೊಳಾಸತ್ತಿದ್ದ ಕಾಷ್ಠ ಕೆ । ಮರಳಿ ಪಲ್ಲವ ಚಿಗಿತು ಜೀವದ । ಮರವದಾಯಿತು ಚೋದ್ಯವಾಯಿತು ನೆರೆದ ಜನ ಬೆದರೆ ॥62॥

ಪರಿಸಸ್ಪರ್ಶದಿ ಕೀಳುಲೋಹಕೆ । ಬರುವದೈ ಭಂಗಾರಯೋಗ್ಯತೆ । ಗುರುಕೃಪಾದೃಷ್ಟಿಯಲಿ ಸತ್ತಿಹ ಮರವು ಚಿಗಿಯಿತಲಾ ॥
ಅರರೆ ವಿಪ್ರನ ಕುಷ್ಟರೋಗವು । ಹರಿದುಹೋಯಿತು ದೇಹಕಾಂತಿಯು । ಭರದೊಳಾಯಿತು ಚಿನ್ನದಂತಾನರಗೆ ಕುಷ್ಟನಿಗೆ ॥63॥

ಹರುಷನಿರ್ಭರನಾಗಿ ಧರಣೀ । ಸುರನು ಕುಣಿದಾಡಿದನು ಶ್ರೀಗುರು- । ವರನ ಕೊಂಡಾಡಿದನು ಮೈ ಮರೆತನು ಸಗಾಢದಲಿ ॥
ಗುರುವೆ ನೀ ಶಶಿಕೋಟಿ ತೇಜನೆ । ಶರಣವತ್ಸಲನಿಂದಿರಾಕ್ಷನೆ । ಸುರನರಾರ್ಚಿತಚರಣಕಮಲನೆ ಅತ್ರಿನಂದನನೆ ॥64॥

ಗುರುವೆ ದತ್ತಾತ್ರೇಯಮೂರುತಿ । ಮೆರೆವೆ ನೀನು ಸುಗಂಧಮಾಲ್ಯದಿ । ಸುರವರೇಣ್ಯರು ವಂದಿಪರು ನಿನ್ನಂಘ್ರಿಕಮಲವನು ॥
ಧರೆಯೊಳಗೆ ನೀ ಭಕ್ತ ವತ್ಸಲ । ಬಿರುದಕಾಯ್ವರೆ ಬಂದು ತತ್ ಕ್ಷಣ । ವರದ ಮೂರುತಿ ವಂದಿಪೆನು ನರಹರಿಸರಸ್ವತಿಯೆ ॥65॥

ಗುರುವೆ ನೀನೀ ಮೋಹತಿಮಿರಕೆ । ತರಣಿ ಕೊಟಿಪ್ರಕಾಶನಂತಿಹೆ । ಹರಿದು ಮಾಯಾಪಾಶತಿಮಿರವ ರಕ್ಷಿಸುವೆ ಜಗವಾ ॥
ಶರಣಗಣಸಂಸೇವ್ಯವರಣನೆ । ಧರೆಯೊಳಾ ಶ್ರೀಪಾದವಲ್ಲಭ । ನಿರುವೆ ನಿನಗಾಂ ವಂದಿಪೆನು ನರಹರಿಸರಸ್ವತಿಯ ॥66॥

ಗುರುವೆ ಕಾಮಕ್ರೋಧಮೊದಲಾ- । ಗಿರುವ ಷಡ್ಗಜಳಿಗೆ ಅಂಕುಶ । ಪರಮ ಪ್ರೇಮಾನಂದಮೂರುತಿ ನೀನೆ ಗುರುರಾಯಾ ॥
ಶರಣರಘಸಂಹರಣ ಶಿಷ್ಯ । ದ್ಧರಣ ದುಷ್ಟರನಾಶಕಾರಣ । ವರದ ಮೂರ್ತಿಯ ವಂದಿಪೆನು ನರಹರಿ ಸರಸ್ವತಿಯೆ ॥67॥

ಕಾಮಿತಾರ್ಥವನೀವ ಭಕ್ತರ । ಕಾಮಧೇನುವೆ ಗುರುವೆ ನೀನಾ । ಕಾಮಕ್ರೋಧಾದಿಗಳ ಸುಟ್ಟು ವಿಭೂತಿ ಧರಿಸಿದೆಯಾ ॥
ಸೋಮಸೂರ್ಯರು ನಿನ್ನ ಲೋಚನ । ವ್ಯೋಮತೇಜಾಪಗಳ ಕರ್ತನೆ । ನೀ ಮಹಾತುಮ ವಂದಿಪೆನು ನರಹರಿಸರಸ್ವತಿಯೆ ॥68॥

ಪುಂಡರಿಕದಳನಯನ ಶ್ರೀಗುರು । ಕುಂಡಲೇಂದುಪ್ರಕಾಶ ದುರಿತದ । ಖಂಡನಾರ್ಥಕೆ ದಂಡವನು ಧರಿಸಿದೆಯೊ ಲೀಲೆಯಲಿ ॥
ಮಂಡಲಿಕವಂದಿತ ಪದನೆ ಮಾ । ರ್ತಂಡನನು ಹೋಲುವ ಪ್ರಕಾಶನೆ । ಮಂಡೆಯಿಂದಲಿ ವಂದಿಪೆನು ನರಹರಿಸರಸ್ವತಿಯೆ ॥69॥

ವೇದಶಾಸ್ತ್ರ ಪುರಾಣಗಳು ತವ । ಪಾದಸೇವೆಯ ಮಾಡಿ ಪಾವನ । ವಾದವೈ ನೀ ಸಕಲ ತತ್ವಕೆ ಪರಮನಿಜತತ್ವ ॥
ನಾದ ಬಿಂದುವೆ ಶರಣರಿಗೆ ತವ । ಪಾದವೇ ಚಿಂತಾಮಣಿಯು ನಿಜ । ಪಾದಕೆರಗುವೆ ನಿನ್ನ ನಾ ನರಹರಿ ಸರಸ್ವತಿಯೆ ॥70॥

ಅಷ್ಟ ಯೋಗದ ತತ್ವನಿಷ್ಠನೆ । ತುಷ್ಟ ಜ್ಞಾನಾಂಬುಧಿಯೆ ಗುರುವರ । ಕೃಷ್ಣವೇಣೀತೀರವಾಸನೆ ಭಕ್ತವತ್ಸಲನೆ ॥
ಕಷ್ಟದೈನ್ಯವ ದೂರ ಮಾಡುವ । ಭೀಷ್ಟದಾಯಕ ಭಕ್ತಜನರಿಗೆ । ಶ್ರೇಷ್ಠ ನಿನ್ನಯ ಚರಣಗಳು ನರಹರಿ ಸರಸ್ವತಿಯೆ ॥71॥

ನಾರಸಿಂಹಸರಸ್ವತೀಶನೆ । ಹಾರವನು ಪದಮೌಕ್ತಿಕವನಾ- । ನೆರವೇರಿಸುವೆ ತವ ಚರಣದಲಿ ನಿಜಭಾವಭಕುತಿಯಲಿ ॥
ಧಾರಣೆಯ ಮಾದುವುದು ತವಚರ- । ಣಾರವಿಂದದ ರಜದಿ ಯೆನ್ನಯ । ಘೋರ ಪಾಪ ಶರೀರ ಪಾವನ ಮಾಡುವುದು ದಯದಿ ॥72॥

ನಾರಸಿಂಹಸರಸ್ವತೀಶನ । ಧಾರುಣೀಯೊಳೀ ಸ್ತುತಿಯ ಪಠಿಪಗೆ । ಘೋರತರ ಸಂಸಾರ ಸಾಗರಕದುವೆ ತಾರಣವು ॥
ಸಾರತತ್ವಜ್ಞಾನದಾಯಕ । ಚಾರುಸಕಲಾಭಿಷ್ಟ ಸಾಧಕ । ಸೇರುವುದು ದೀರ್ಘಾಯು ಸಂತತಿ ಸಕಲ ಧನಧಾನ್ಯಾ ॥73॥

ಇಂತು ನಾನಾ ಪರಿಯೋಳಾ ದ್ವಿಜ । ಸಂತಸದಿ ಕೊಂಡಾಡಿದನು ಗುರು । ನಿಂತು ದ್ವಿಜನಿಗೆ ಕೊಟ್ಟನ ಭಯವ ಶುದ್ಧ ಭಾವದಲಿ ॥
ಕಂತುಹರ ನೀನಹುದು ಪಾಪಿಯ । ಸಂತರಣ ನೀನಾಗಿ ಬಂದಿಹೆ । ಅಂತವಿಲ್ಲ್ಲ್ಯ ನಿನ್ನ ಲೀಲೆಗೆನುತ್ತ ದ್ವಿಜ ನುಡಿದಾ ॥74॥

ಹರುಷವಿಸ್ಮಯದಿಂದ ಧರಣೀ । ಸುರರು ಬೆರಗಾದರು ಕಣಾ ಶ್ರೀ । ಗುರುವರನ ಲೀಲೆಯನು ನೋಡಿದರಮಮ ವಿಸ್ಮಯವಾ ॥
ಸ್ಮರಿಸಿ ಕೊಂಡಾಡಿದರು ಶ್ರೀಗುರು- । ವರನ ಚರಣಕ್ಕಡ್ಡ ಬಿದ್ದರು । ಮೆರಿಸಿದರು ಗುರುವರನ ಸ್ತುತಿಯಲಿ ಮೈಮರೆತರಲ್ಲಾ ॥75॥

ತಿರುಗಿದರು ಗುರು ಸಹಿತ ಮಠ ಕೆ- । ಲ್ಲರು ಬರುತ ಸಂತೋಷವಾಯಿತು । ಹರುಷದಿಂದಾರತಿಗಳನು ಬೆಳಗಿದರು ಮಾರ್ಗದಲಿ ॥
ನೆರೆದ ಮಂದಿಗೆ ಸರ್ವರಿಗೆ ಶ್ರೀ ಗುರು ಸಮಾರಾಧನೆಯ ಮಾಡಿಸಿ । ಕರೆದು ಕುಷ್ಟಿದ್ವಿಜಗೆ ಗುರುವಿಂತೆಂದ ನಸುನಗುತಾ ॥76॥

ದುರಿತತಾಪತ್ರಯಗಳೆಲ್ಲವು । ಪರಿಹರಿಸಿದಂತಾಯ್ತು ಕುಷ್ಟವು । ಪರಮ ರೋಗವು ನಾಶವಾಯಿತು ಭಾಗ್ಯ ಉದಯಿಸಿತು ॥
ಪರಮಭಕ್ತನು ನಮಗೆ ಯೋಗೇ । ಶ್ವರನೆನುತ ಹೆಸರಿಡುವೆ ನಿನಗೀ । ಪರಿಯಲೆಲ್ಲರು ಕರೆಯುವರು ನೀ ಶಿಷ್ಯರೊಳು ರತ್ನಾ ॥77॥

ವೇದಶಾಸ್ತ್ರಾದಿಗಳು ತರ್ಕದ । ಬೋಧೆಗಳು ತವ ವಂಶದವರಲಿ । ಮೋದದಿಂದಲಿ ಕುಣಿಯುವವು ಜಿಹ್ವೆಯಲಿ ನಿಜವಿದಲಾ ॥
ಸಾಧಿಸುವರೈ ಪುತ್ರಪೌತ್ರರು । ಗೋಧನಾಧಿಗಳನ್ನು ಬಡತನ । ಬಾಧೆಯಾಗದು ನಿನ್ನ ವಂಶೋವಂಶದಲಿ ಮುಂದೆ ॥78॥

ಹೆಂಡತಿಯ ಮಕ್ಕಳನು ನೀಕರೆ । ಕೊಂಡು ವಾಸಿಸು ಗಾಣಗಾಪುರ । ಮಂಡಲದಿ ವಿದ್ಯಾಸರಸ್ವತಿ ಮಂತ್ರ ನಿನಗೀವೆ ॥
ಗಂಡುಮಕ್ಕಳು ನಿನಗೆ ಮೂವರು । ಪುಂಡರಲ್ಲ ವಿವೇಕಯುಕ್ತರು । ಚಂಡವಿಕ್ರಮನೋರ್ವನೆಮ್ಮಯ ಪೂಜೆ ಮಾಡುವನು ॥79॥

ನಿರತ ನಿನ್ನಯ ವಂಶಜರು ಶ್ರೀ ಗುರುಚರಣ ಸದ್ಭಕ್ತಿತತ್ಪರ- । ರಿರುವರೈ ಪ್ರಿಯರೆನಗೆ ನಿನ್ನಯ ಸಕಲ ವಂಶಜರು ॥

ಮೆರೆವನೊಬ್ಬನು ಯೋಗಿ ನಾಮದಿ ಚರಣಸೇವೆಯ ಮಾಳ್ಪನೆಮ್ಮಯ । ಮೆರೆವರವನ ನಿಜಾನ್ವಯದಿ ಗುರುಚರಣಸೇವಕರು ॥80॥

ಕೊಟ್ಟನಾಶೀರ್ವಚನವಿದನಾ । ಕುಷ್ಟದಿಂ ಗುಣವಾದ ದ್ವಿಜನಿಗೆ । ಶ್ರೇಷ್ಠ ಶ್ರೀಗುರುವಚನ ಫಲಿಸಿತು ಹೇಳಿದಂದದಲಿ ॥

ನಿಷ್ಠೆಯೊಂದಿರೆ ಗುರುಚರಣದಲಿ । ಕಷ್ಟ ತಾಪತ್ರಯಗಳೆಲ್ಲವು । ಸುಟ್ಟು ಹೋಗುವವೇನು ಚೋದ್ಯವೆ ? ಎಷ್ಟು ವಚನವಿದು ॥81॥

॥ ಅಧ್ಯಾಯ 40 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 41

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುವು ಸಾಯಂದೇವ ಭಕ್ತನ । ಪರೆಕಿಸಿದನಾ ಮಳೆಯ ವೇಳ್ಯದಿ । ಗುರುಚರಣ ಸದ್ಭಕ್ತಿಮಹಿಮೆಯನರುಹಿದನು ಮುದದಿ॥

ಗುರುವೆ ಸಕಲ ಕಲಾನಿಧಿಯು ಶ್ರೀ । ಗುರುವೆ ಸಾಧನಮೂಲಬೀಜವು । ಗುರುವೆ ವಿದ್ಯಾಶಾಸ್ತ್ರಗಳಿಗಧಿದೈವತವು ತಿಳಿಯೆ ॥
ಗುರುವಿಗಧಿಕದ ದೈವವಿಲ್ಲೈ । ಧರೆಯೊಳಗೆ ಗುರುರಾಜನೆಂಬರು । ಮೆರೆಯಲ್ಕೆ ಗುರುಸೇವೆ ಭಾಗೀರಥಿಯ ತೆರನಾಗಿ ॥1॥

ತಿರುತಿರುಗಿ ಕೌತುಕದಿ ಶ್ರೀಗುರು- । ವರನ ಸನ್ಮುಖನಿಂತು ಸಿದ್ಧನ । ಚರಣಕೆರಗುತ ನಾಮಧಾರಕ ಕರವ ಜೋಡಿಸುತಾ ॥
ಭರದಿ ಬಿನ್ನೈಸಿದನು ಶ್ರೀಗುರು- । ವರನೆ ಸಿದ್ಧೇಶ್ವರನೆ ಭವಸಾ । ಗರದಿ ತಾರಕನಾದೆ ಯೆನಗಿನ್ನೇನ ಹೇಳುವೆನು ॥2॥

ತೆರತೆರದಿ ಧರ್ಮಗಳನರುಹುತ । ಗುರುಚರಿತ್ರ ಸುಧಾರಸವನೀ । ನೆರದಿ ಯೆನ್ನಯ ಬಾಯೊಳಗೆ ಕೇಳ್ ಧನ್ಯ ನಾ ಜಗದಿ ॥
ಗುರುಚರಣಸಂಸ್ಮರಣೆಯಾಯಿತು । ದೊರೆಯಿತ್ತೈ ಸುಜ್ಞಾನವೆನಗದು । ಮರೆವೆನೇ ನಿನ್ನುಪಕೃತಿಯ ನಾ ಜನ್ಮ ಜನ್ಮದಲಿ ॥3॥

ಇನ್ನು ಮುಂದೆನಗೊಂದು ಪೇಳ್ಳೈ । ಯೆನ್ನ ಪೂರ್ವಜನೆಂತು ಸೇವೆಯ । ಸನ್ನು ತಾಂಘ್ರಿದ್ವಯದಿ ಮಾಡಿದನೆಂತು ವಿವರಿಪುದು ॥
ಧನ್ಯ ಕೇಳ್ಳೈ ಸಿದ್ಧ ನೀ ಗುರು । ಸನ್ನಿಧಿಯೊಳಿರುವ ಕಾರಣ । ಮನ್ನಿಸೈ ಅವನೆಂತು ಭಕ್ತಿಯ ಮಾಡತೊಡಗಿದನು ॥4॥

ನಾಮಧಾರಕ ನುಡಿದ ವಚನವ । ನಾ ಮಹಾತುಮ ಸಿದ್ಧ ಕೇಳ್ದನು । ರಾಮಣೀಯಕ ಕಥೆಯ ಪ್ರಾರಂಭಿಸಿದನಾಕ್ಷಣಕೆ ॥
ನಾಮಧಾರಕ ಕೇಳು ಶಿಷ್ಯ । ಶಿರೋಮಣಿಯೆ ನಾನರುಹಿದೆನು ನಿನ । ಗಾ ಮಹಾತುಮನೋರ್ವನಿದ್ದನು ನಿನ್ನ ಪೂರ್ವಜನು ॥5॥

ಹೆಸರು ಸಾಯಂದೇವನಾತನ । ವೊಸರ ಗ್ರಾಮದೊಳಿದ್ದನಾತನು । ಮಿಸುಪ ಶ್ರೀಗುರು ಮೂರ್ತಿಯಲಿ ದೃಢಭಕ್ತಿಭಾವದಲಿ ॥
ಪಸರಿಸಿತು ಗುರುವರನ ಖ್ಯಾತಿಯು । ದಶದಿಶೆಯೊಳದನೆಂತು ವರ್ಣಿಸ । ಲಸದಳವು ಬಾಯೊಂದು ನಾಲಿಗೆಯೊಂದು ಸಾಲದಲಾ ॥6॥

ನರಹರಿಸರಸ್ವತಿಯು ಗಾಣಗ । ಪುರದೊಳಿರೆ ಬಹು ಜನರು ಬಂದರು । ಗುರುವಿಗೆರಗಿದರೇಕ ಭಾವದಿ ಚರಣಕಮಲದಲಿ ॥
ಶರಣ ವತ್ಸಲನಿಹನು ಶ್ರೀಗುರು । ವರನು ದರ್ಶನಮಾತ್ರದಿಂದಲಿ । ಶರಣರಿಗೆ ದಯಪಾಲಿಸಿದನಾ ಸಕಲಕಾಮಿತವಾ ॥7॥

ಯತಿನೃಸಿಂಹಸರಸ್ವತಿಯ ಯಶ । ಲತೆಯ ಹೂಗಳ ಪರಿಮಳವು ಬಹು । ಗತಿಸಿದುದು ದಿಶೆದಿಶೆಗೆ ಸಾಯಂದೇವ ಕೇಳುತಲೆ ॥
ಅತಿ ಹರುಷದಿಂ ಭಕ್ತಿಭಾವದಿ । ಯತಿವರೇಣ್ಯನ ನೋಳ್ಪನೆನುತಲಿ । ಗತಿಸಿದನು ಗಾಣಗಾಪುರ ಶ್ರೀಕ್ಷೇತ್ರವಿದ್ದೆಡೆಗೆ ॥8॥

ದೂರದಿಂದಲಿ ಗಾಣಗಾಪುರ । ತೋರಿದುದು ದೃಕ್ಪಥದಿಯವನಾ- । ಭಾರಿ ಸಂತಸದಿಂದ ಲೋಟಾಂಗಣವ ಹಾಕಿದನು ॥
ದೂರದಿಂದಲಿ ಬರುತ ದಂಡಾ । ಕಾರದಲಿ ನಮನವನು ಮಾಡುತ । ಸೇರಿದನು ಗುರುಮಠವ ಕಂಡನು ಯತಿವರೇಣ್ಯನನು ॥9॥

ಮೂರ್ತಿಮಂತ ಪರಾತ್ಪರ ಶ್ರೀ । ನಾಥನನು ನೋಡಿದನು ದೂರದಿ । ಪ್ರೀತಿಭಯಭಕುತಿಯಲಿ ದಂಡಾಕಾರ ನಮಿಸಿದನು ॥
ಸೋತು ಮನ ಗುರುವರನ ಪದಕಂ । ಜಾತಧೂಳಿಯ ತನ್ನ ಕೇಶದಿ । ಪ್ರೀತಿಯಿಂದಲಿ ಝಾಡಿಸಿದನವನೇನ ಹೇಳುವೆನು ॥10॥

ಕರಗಳೆರಡನು ಜೋಡಿ ಸುತ ಗುರು- । ವರನ ಸ್ತುತಿಸಿದನೇಕಭಾವದಿ । ಗುರುವೆ ನೀ ತ್ರೈಮೂರ್ತಿ ಗುರುವೇ ಜ್ಞಾನಸಾಗರನು ॥
ಗುರುವರನೆ ತವ ದರುಶನದಿ ಬಹು । ದುರಿತರಾಶಿಗಳೆನ್ನ ಪೋದವು । ಗುರುವೆ ನಾನು ಕೃತಾರ್ಥನಾದೆನು ಪಿತರಸಹಿತಾಗಿ ॥11॥

ಧನ್ಯವೆನ್ನಯ ಜನ್ಮವಾಯಿತು । ಧನ್ಯರಾದರು ಪಿತೃಗಳೆಲ್ಲರು । ಧನ್ಯನಾದೆನು ಜನ್ಮಜನ್ಮಾಂತರದ ಪೋಯ್ತುಘವು ॥
ಎನ್ನ ಕಾಯ್ವುವುದು ವಿಶ್ವಪತಿ ನೀ । ಯೆನ್ನ ಶ್ರೀಗುರು ಮೂರ್ತಿ ನೀನೇ । ನಿನ್ನ ಭಜಿಪೆನು ಪರಮಜ್ಯೋತಿ ನೃಸಿಂಹ ಸರಸ್ವತಿಯೆ ॥12॥

ನಿನ್ನ ಚರಣದ ಗುಣಗಣಂಗಳ । ವರ್ಣಿಸಲಿಕಸದಳವು ದೇವನೆ । ನಿನ್ನ ಬಿರುದನು ಬಲ್ಲೆ ಶರಣಾಗತರ ರಕ್ಷಕನು ॥
ನಿನ್ನ ಚರಣದೊಳಡಗಿಹವು ಬಹು । ಪುಣ್ಯಪಾವನ ಕೋಟಿ ತೀರ್ಥಗ । ಳೆನ್ನುವವು ವೇದಗಳು ಚರಣ ಪವಿತ್ರವೆನ್ನುವರು ॥13॥

ಹರಿಹರಬ್ರಹ್ಮರು ಧರಣಿಯೊಳು । ಶರಣರಕ್ಷರಾಗಿ ಕೇಳವ । ತರಿಸಿಹರು ನಿನ್ನಯ ಸ್ವರೂಪದೊಳೆಂದು ತೋರುವುದು ॥
ಗುರುವೆ ನೀ ಪರಬ್ರಹ್ಮಮೂರ್ತಿಯು । ಶರಣರಕ್ಷಕನಾಗಿ ದುಷ್ಟರ । ಹರಣ ಮಾಡಲು ದುರಿತ ಹರಿಸಲು ದಂಡ ಧರಿಸಿರುವೆ ॥14॥

ಕೊರಳೊಳಗೆ ರುದ್ರಾಕ್ಷಮಾಲೆಯು । ಮೆರೆಯುತಿದೆ ವ್ಯಾಘ್ರಾಂಬರವು । ನೀ ಧರಿಸಿರುವೆ ಭಸ್ಮವನು ಸರ್ವಾಂಗದಲಿ ಲೇಪನದಿ ॥
ತರಣಿ ವೈಶ್ವಾನರರು ನಿನ್ನಯ । ಪರಮ ಕ್ರೂರೇಕ್ಷಣಗಳು ಚಂದ್ರನು । ಮೆರೆವನೈ ಪೀಯೂಷದೃಷ್ಟಿಯು ನೀನೆ ಮುಕ್ಕಣ್ಣ ॥15॥

ಗುರುವೆ ನೀ ಪುರುಷಾರ್ಥ ಸಾಧನ । ಶರಣರಕ್ಷಕ ಬಿರುದು ಶೋಭಿಸು । ತಿರುವುದೈ ನೀ ರುದ್ರ ಸದ್ಗುರು ನೀನೆ ನರಹರಿಯು ॥
ಹರಿಯ ರೂಪದಿ ಧರಿಸಿ ಪೀಠಾಂ । ಬರವ ನೀರಕ್ಷಿಸುವೆ ಜಗವನು । ಚರಣ ತೀರ್ಥಸ್ಥಾನ ಪಾವನ ಶರಣರಭಿಮಾನಿ ॥16॥

ಪುತ್ರ ಸಂತಾನವನು ಬಂಜೆಗೆ । ಯಿತ್ತನವ ಪಲ್ಲವವು ಚಿಗಿಯಿತು । ಸತ್ತಕಾಷ್ಠಕೆ ಬಂಜೆಮಹಿಷಿಯ ಹಾಲ ಹಿಂಡಿದೆಯಾ ॥
ಆತ್ರಿವಿಕ್ರಮ ಭಾರತಿಗೆ ನೀ । ಗೋತ್ತು ಹಚ್ಚಿದ ವಿಶ್ವರೂಪವ । ನಿತ್ತೆ ಸಂತೃಪ್ತಿಯಲಿ ಭೋಜನ ವೂರ ಜನರಿಂಗೆ ॥17॥

ಮಾದಿಗನ ಮುಖದಿಂದ ನುಡಿಸಿದೆ । ವೇದನಾಲ್ಕನು ನಿನ್ನ ಮಹಿಮೆಯ । ಬೋಧವಾಗುವ ಪರಿಯ ಕಾಣೆನಪಾರಸಾಗರವು ॥
ಮೇದಿನಿಯೊಳವತರಿಸಿ ಭಕ್ತರ । ನೀ ದಯಾನಿಧಿ ರಕ್ಷಿಸುವೆ ಜಗ- । ದಾದಿ ಮೂರುತಿ ನೀನು ಲೀಲಾವಿಗ್ರಹನು ತಿಳಿಯೆ ॥18॥

ಎಂದು ನಾನಾ ಪರಿಯ ಸಂಸ್ತುತಿ । ಯಿಂದ ನಮಿಸಿದನವನು ಗುರುವಿಗೆ । ಬಂದವಾನಂದಾಶ್ರುಗಳು ಕಣ್ಣಿಂದಲಾ ದ್ವಿಜಗೆ ॥
ನಿಂದವೈ ರೋಮಾಂಚಗಳು ನಾ- । ನಿಂದು ಬಣ್ಣಿಸಲಾರೆ ವಿಪ್ರನು । ಬಂಧುರದ ಸದ್ಗದಿತಕಂಠದಿ ಗುರುವ ಸ್ತುತಿಸಿದನು ॥19॥

ಭಕ್ತಿಯನು ತೋರಿದನು ದ್ವಿಜನೊಂ । ಬತ್ತು ಪರಿಯಲಿ ಗುರುವ ಸ್ತುತಿಸಲು । ಚಿತ್ತ ಸಂತೋಷದಲಿ ಶ್ರೀಗುರುಮೂರ್ತಿ ಪೇಳಿದನು ॥
ಮಸ್ತಕದಿ ಹಸ್ತವನಿಡುತ ಗುರು- । ಸತ್ತಮನು ದ್ವಿಜಗಿತ್ತ ವರವನು । ಭಕ್ತರಲಿ ನೀನಹೆ ಶಿರೋಮಣಿ ಮೆಚ್ಚಿದೆನು ನಿನಗೆ ॥20॥

ಸ್ತೋತ್ರವನು ನಾ ಕೇಳಿ ಮೆಚ್ಚಿದೆ । ಚಿತ್ತದಾನಂದದಲಿ ವರವಿದ- । ನಿತ್ತೆ ಕೇಳೈ ನಿನ್ನ ವಂಶದಿ ಗುರುಪರಾಯಣರು ॥
ಸತ್ವಶೀಲರು ಜನಿಸುವರು ಸ- । ದ್ವರ್ತನರು ಜಗವಂದ್ಯರಾಗುವ । ರಿತ್ತೆನೀವರದಿಟವು ಫಲಿಪುದು ಚಿಂತೆ ಬೇಡೆಂದಾ ॥21॥

ಪೋಗಿ ಸಂಗಮಕೀಗ ಸ್ನಾನವ । ವೇಗದಿಂ ತೀರಿಸುತಲಶ್ವಥ । ಕಾಗಪೂಜಿಸಿ ಮಠಕೆ ಬರುವುದು ಪಂಕ್ತಿಭೋಜನಕೆ ॥
ಶ್ರೀಗುರುವು ಪೇಳಿದ ನಿರೋಪವ । ಬಾಗಿ ಶಿರದಲಿ ವಹಿಸಿ ನಡೆದನು । ಬೇಗದಿಂದಲಿ ಬಂದನೈ ಸ್ನಾನವನು ತೀರಿಸುತಾ ॥22॥

ಷೋಡಶುಪಚಾರದಲಿ ಗುರುವಿಗೆ । ಮಾಡಿದನು ಪೂಜೆಯನು ಭಿಕ್ಷೆಯ । ನೀಡಿದನು ಪಕ್ವಾನ್ನಗಳ ಬಡಿಸಿದನು ವಿಧವಿಧದಾ ॥
ಕೂಡಿರುವ ಬಹು ಶಿಷ್ಯರಲಿ ತಾ- । ಕೂಡಿಸಿದನವನನ್ನು ಹತ್ತಿಲಿ । ಮಾಡಿದನು ಬಹುಪ್ರೇಮವನು ಶ್ರೀವರದ ಗುರುಮೂರ್ತಿ ॥23॥

ತೀರಿಸುತ ಭೋಜನವ ಶ್ರೀಗುರು । ಭಾರಿಸಂತಸದಿಂದ ಕೂತು ವಿ-। ಚಾರಿಸಿದನಾ ವಿಪ್ರ ನಿನ್ನ ಕುಟುಂಬವೆಲ್ಲಿಹುದು ॥
ಊರು ದಾವುದು ಪುತ್ರಸ್ತ್ರೀಯರು । ಊರೊಳಗೆ ಸುಕ್ಷೇಮವಿರುವರೆ । ಚಾರು ನಿನ್ನಯ ವರ್ತಮಾನವ ಪೇಳುಯೆನಗೆಂದಾ ॥24॥

ಉತ್ತರವ ಗುರುವಿಂಗೆ ಭೂಸುರ । ನಿತ್ತನೈ ಗುರುತ್ವತ್ಪ್ರಸಾದದಿ । ಪುತ್ರವರ್ಗ ಕಳತ್ರರೆಲ್ಲರು ಕ್ಷೇಮದಿಂದಿಹರು ॥
ಚಿತ್ತದಲಿ ಸಂಕಲ್ಪ ಮಾಡಿದೆ । ನಿತ್ಯ ನಿರ್ಮಲ ನಿನ್ನ ಚರಣದ । ಭಕ್ತಿಪೂರ್ವಕ ಸೇವೆ ಮಾಡುವೆನೆಂದು ನಿಜವಾಗಿ ॥25॥

ಇರುವುದೆಮ್ಮಯ ವಾಸ ಕೇಳು- । ತ್ತರದ ಕಾಂಚೀ ಕ್ಷೇತ್ರದಲಿ ನೀ । ಕರುಣನಿಧಿಯೆಂದಾಯ್ತು ಕೀರ್ತಿಯ ಕೇಳಿ ಬಂದಿಹೆನು ॥
ಇರುವೆ ನಿನ್ನ ಸಮೀಪ ಸಂತತ । ಧರಿಸಿಹೆನು ನಿರ್ಧಾರವೀಪರಿ । ಶರಣರಕ್ಷಕ ಯೆನ್ನ ಸಲಹೊ ವರದ ಗುರುಮೂರ್ತಿ ॥26॥

ನುಡಿಯ ಕೇಳುತ ವಿಪ್ರನಿಗೆ ಗುರು । ನುಡಿದನೈ ನಸುನಗುತ ಕೇಳೀ । ಗೊಡವೆ ಸಲ್ಲದು ಕಠಿಣವಿಹುದೈ ಸೇವೆ ತಾಪಸನಾ ॥
ಅಡವಿಯೊಳು ನಾನಿರುವೆ ಹಲದಿನ । ಅಡಿಗಡಿಗೆ ನಗರಕ್ಕೆ ಬಾರೆವು । ಪಡೆಯಬೇಕೈ ಕಷ್ಟ ಬಹು ನೀನೆಂತು ಸಹಿಸುವೆಯಾ ॥27॥

ಗುರುವಿಗುತ್ತರ ಕೊಟ್ಟನಾ ಭೂ- । ಸುರನು ವಿನಯದಿ ಗುರುವೆಯಂಗೀ । ಕರಿಸು ಯೆನ್ನನು ದೀನಸೇವಕನೆಂದುಪೇಕ್ಷಿಸದೆ ॥
ಗುರುವ ಸೇವಿಸದಿರುವ ನರನೀ । ಧರಣಿಯಲಿ ಸಂಚರಿಸುತಿಹ ಪಶು । ಗುರುವ ಸೇವಿಸೆ ದಾಟುವನು ಸಂಸಾರ ಸಾಗರವಾ ॥28॥

ಗುರುಚರಣಸೇವಕಗೆ ದುಃಖದ । ಪರಿಯು ತಟ್ಟದು ಸೌಖ್ಯದಿಂದಲೆ । ನಿರತ ಸಾಧಿಪನವನು ಪುರುಷಾರ್ಥಗಳನೆಲ್ಲವನು ॥
ದೊರೆಯುವುದು ಸುಲಭದಲಿ ಸಿದ್ಧಿಯು । ಮರಣಭಯವಿಲ್ಲವಗೆ ಯಮಕಿಂ । ಕರರು ಮಾಡುವರೇನು ಶ್ರೀಗುರುಬೆಂಬಲಕ್ಕಿರಲು ॥29॥

ಎನುತ ಸಾಯಂದೇವ ಗುರುವಿಗೆ । ವಿನಯಪೂರ್ವಕವಾಗಿ ನುಡಿದನು । ಸನುಮತದೊಳಾ ಶಿಷ್ಯನನು ಸ್ವೀಕರಿಸಿದನು ಮುದದಿ ॥
ದಿನಗಳಿಪರಿ ಹಲವು ಗತಿಸಲು । ಮನದಿ ಸಂತಸತಾಳ್ದು ಶಿಷ್ಯನ । ಮನದ ನಿರ್ಧಾರವನು ಪರಿಕಿಸಬೇಕೆನುತ ನೆನೆದು ॥30॥

ತೆರಳಿದನು ಸಂಗಮಕೆ ಶ್ರೀಗುರು- । ವರನು ಶಿಷ್ಯರ ಬಿಟ್ಟನೆಲ್ಲರ । ಹರುಷದಲಿ ಕರೆದೊಯ್ದು ಸಾಯಂದೇವನೊಬ್ಬನನೇ ॥
ಪರಿಯ ಹೇಳುವೆನೆಂತು ನಿನ್ನಯ । ಪರಮಪೂರ್ವಜ ಭೋಳನಿದ್ದನು । ಗುರುವರನ ಹಿಂಬದಿಗೆ ತೆರಳಿದನೇಕಭಾವದಲಿ ॥31॥

ಭಕ್ತ ಸಾಯಂದೇವ ಸಹಿತಲಿ । ಭಕ್ತ ವರದನು ಕುಳಿತನೈ ಅ- । ಶ್ವತ್ಥದಡಿಯಲಿ ಮಾತನಾಡುತ ಕ್ಷೇಮವಾರ್ತೆಯನು ॥
ಅಸ್ತನಾದನು ಸೂರ್ಯ ಸುತ್ತಲು । ಕತ್ತಲೆಯ ಸಾಮ್ರಾಜ್ಯವಾಯಿತು । ಚಿತ್ತದಲಿ ಶ್ರೀಗುರುವು ಯುಕ್ತಿಯನೊಂದ ನೆನಿಸಿದನು ॥32॥

ನೋಡಬೇಕೆಂದಿವನ ಭಾವವ । ಮೋಡಗಳನೆಬ್ಬಿಸಿದನಾ ಗುರು । ಝಾಡಿಸಿತು ಮಳೆ ಮುಸಲಧಾರೆಯೊಳೇನ ಹೇಳುವೆನು ॥
ಮೂಡಿದುದು ಬಿರುಗಾಳಿ ಸುತ್ತಲು । ನೋಡಿ ಸಾಯಂದೇವ ಮಳೆಯಿಂ-। ದೊಡಲಾರದೆ ಗುರುವ ಕಾಪಾಡಿಸಲಿಕೆತ್ನಿಸಿದಾ ॥33॥

ತನ್ನ ವಸ್ತ್ರವ ತೆಗೆದು ಶ್ರೀಗುರು । ವನ್ನು ಮಳೆಯಿಂ ರಕ್ಷಿಸಿದ ಪ- । ರ್ಜನ್ಯ ಗಾಳಿಯ ತಾನೆ ಸಹಿಸಿದನೇಕಭಾವದಲಿ ॥
ಮುನ್ನ ವೀಪರಿ ಯಾಮವೆರಡಕೆ । ತಣ್ಣಗಿನ ಮಳೆಗಾಳಿ ಸೋಸುತ । ಬನ್ನ ಬಟ್ಟನು ಯೆಂತು ಬಣ್ಣಿಪೆನವನ ಯಾತನೆಯಾ ॥34॥

ಗಾಣಗಾಪುರದಿಂದ ನೀ ವೈ- । ಶ್ವಾನರನ ಬೇಗದಲಿ ತಾರೈ । ಕ್ಷೀಣವಾದವು ಗಾತ್ರಗಳು ಶೀತದಲಿ ಮರಗಟ್ಟಿ ॥
ನೀನೆ ಬೇಗದಿ ಪೋಗೆನಲು ಗುರು । ತಾನೆ ಸಾಯಂದೇವ ಹೊರಟನು । ಮೇಣು ಬಂದನು ಗಾಳಿ ಮಳೆಯಲಿ ಗಾಣಗಾಪುರಕೆ ॥35॥

ಎರಡು ಬದಿಯಲಿ ನೋಡದಲೆ ನೀ । ಭರದಿ ದಾರಿಯ ನಡೆಯ ಬೇಕೈ । ಗುರುನಿರೋಪವಿದಾಯ್ತು ನಡೆದನು ವಿಪ್ರನೀತೆರದಿ ॥
ಧರಣಿಯಲಿ ಮುಸುಕಿತ್ತು ಕತ್ತಲೆ । ಸುರಿಯುತಿತ್ತೈ ಮಳೆಯು ದೃಗ್ಗೋ- । ಚರಕೆ ಬಾರದು ಹಾದಿ ನಡೆದನು ಗುರುತು ಹಿಡಿಹಿಡಿದು ॥36॥

ಮನದಿ ಶ್ರೀಗುರುಚರಣ ಧ್ಯಾನಿಸಿ । ಮಿನುಗುತಿಹ ಮಿಂಚಿನ ಪ್ರಕಾಶದಿ । ತನಗೆ ತೋರಿದ ಹಾದಿಯಲ್ಲಿಯೇ ಬಂದನಾದ್ವಿಜನು ॥
ವನವದಾಟುತ ಬಂದನೂರಿಗೆ । ವಿನಯದಿಂದಲಿ ದ್ವಾರಪಾಲರಿ- । ಗಿನಿತು ವೃತ್ತಾಂತವನು ಪೇಳುತ ಕೊಂಡನಗ್ನಿಯನು ॥37॥

ಮಡಿಕೆಯಲಿ ತಾನಿಡುತ ಬೆಂಕಿಯ । ನಡೆದ ಸಾಯಂದೇವ ಸಂಗಮ- । ಕಡೆಗೆ ಶೀತದಿ ನಡುಗುತ್ತಿದ್ದನು ನಿನ್ನ ಪೂರ್ವಜನು ॥
ನಡೆಯುತಿರಲೀ ತೆರದಿ ಮಾರ್ಗದೊ । ಳೊಡನೆ ಬಂತು ವಿಚಾರ ಮನದಲಿ । ಯೆಡಗಡೆಗೆ ಬಲಗಡೆಗೆ ನೋಡಲು ಬಂದೆ ಯಾಕೆಂದು ॥38॥

ಎಡಗಡೆಗೆ ನೋಡಿದನು ಸರ್ಪವು । ಹೆಡೆಯನೇರಿಸುತಟ್ಟಬರುವುದು । ಕಡೆಯನೆರಡನೆ ನೋಡೆ ಪಂಚಫಣೀಂದ್ರ ಬರುತಿಹನು ॥
ಗಡಬಡಿಸಿ ಭಯಭೀತಿಯಿಂದಲಿ । ನಡುನಡುಗಿ ತಾನೊಡುತಿದ್ದನು । ಅಡವಿಗೋಡಲು ಸರ್ಪಗಳು ನಡುಹಾದಿ ಬಂದಪರು ॥39॥

ಗುರುಚರಣಕಮಲಗಳ ಧ್ಯಾನಿಸಿ । ಭರದೊಳೋಡಿದನವನು ಮುಂದಕೆ । ಬರುತ ಕಂಡನು ಸಂಗಮದಿ ಶ್ರೀಗುರುವ ಭಕ್ತಿಯಲಿ ॥
ಗುರುವ ಕಂಡನು ದೂರದಲಿ ಸಾ । ವಿರತರಣಿ ಜ್ಯೋತಿಯನು ಪೊಲುವ । ಮರಳಿ ವೇದಧ್ವನಿಯ ಕೇಳ್ದನು ಚೆದ್ಯವೇನೆಂಬೇ ॥40॥

ಹತ್ತಿರಕೆ ಬರಲವನು ಕಂಡು ಸ- । ಮಸ್ತ ತರಣಿಪ್ರಕಾಶ ನೊಂದಿತು । ಸ್ವಸ್ಥಚಿತ್ತದೊಳೊರ್ವನೇ ಗುರುಮೂರ್ತಿ ಕೂತಿಹನು ॥
ಕತ್ತಲೆಯ ಸಾಮ್ರಾಜ್ಯ ತೀರಿತು । ಬಿತ್ತು ಕಣ್ಣಿಗೆ ಪೂರ್ಣಚಂದ್ರನ । ಉತ್ತಮೋತ್ತಮ ಬೆಳಕು ಕೇಳಾದಿನವೆ ಪೂರ್ಣಿಮೆಯು ॥41॥

ತಂದ ಬೆಂಕಿಯ ಪ್ರಜ್ವಲಿಸಿ ತಾ । ಮುಂದೆ ಕೂತನು ಗುರುವು ಶೀತದಿ । ನೊಂದ ತನುವನು ಕಾಸಿಕೊಂಡನು ಲೋಕಜನರಂತೆ ॥
ಮುಂದೆ ಬೆಳಗಾಯ್ತೆಲ್ಲ ದಿಶೆಯಲಿ । ಬಂದನಾದ್ವಿಜ ಮರಳಿ ಶುದ್ಧಿಗೆ । ಬಂದು ಸರ್ಪಗಳೆರಡು ಗುರುವನು ವಂದಿಸಿದರಾಗಾ ॥42॥

ಗುರುವಿಗಭಿವಂದಿಸುತ ಸರ್ಪಗ- । ಳೆರಡು ನಡೆದವು ತಮ್ಮ ಮಾರ್ಗದಿ । ಗುರುವು ಸಾಯಂದೇವಗೆಂದನು ಯೇತಕಂಜಿದೆಯಾ ॥
ಮರುಳೆ ನಿನ್ನಯ ಕಾಯಲೋಸುಗ । ಎರಡು ಫಣಿಗಳ ಕಳುಹಿಕೊಟ್ಟಿಹೆ । ಸರಿಯೆ ನಿನ್ನೀ ಪರಿಯೊಳಂಜಿಕೆ ಕಾರಣವ ಕಾಣೆ ॥43॥

ಧರಿಸಬೇಡನುಮಾನ ಮನದಲಿ । ಪರಮ ಕಠಿಣವು ಮುನಿಯ ಸೇವೆಯು । ಧರಿಸಬಾರದು ಸೇವೆ ಮನದಿ ವಿಚಾರಮಾಡದಲೆ ॥
ಗುರುಚರಣಸೇವೆಯನು ನೀ ಸ್ವೀ । ಕರಿಸಬೇಕಾದರೆ ವಿಚಾರಿಸು । ಪರಮದೃಢಭಕ್ತಿಯಲಿ ಸೇವಿಸೆ ಕಲಿಯ ಭಯವೇನು ॥44॥

ಕರಗಳೆರಡನು ಜೋಡಿಸುತ ಶ್ರೀ । ಗುರುಚರಣಕೆರಗಿದನು ಪೇಳ್ದನು । ಕರುಣ ಸಾಗರ ಕರುಣತೋರಿಸು ದೀನ ಪಾಮರಗೆ ॥
ಗುರುಚರಣ ಭಕ್ತಿಯ ಪ್ರಕಾಶವ । ನರುಹಬೇಕೈ ನೀನು ಮನವಿದ । ಸ್ಥಿರವ ಮಾಡಲಿಕೆಂದು ಬಿನ್ನೈಸಿದನು ಗುರುವರಗೆ ॥45॥

ಗುರುವು ಸಾಯಂದೇವಗೆಂದನು । ಸುರಸನಿಹಕಥೆಯೊಂದ ಪೇಳ್ವೆನು । ಇರುವುದೈ ಬಹುರಾತ್ರಿ ಬ್ರಾಹ್ಮ ಮುಹೂರ್ತ ಪರಿಯಂತ ॥
ಗುರುಚರಣ ಭಕ್ತಿಯ ಪ್ರಕಾರವ । ನರುಹುವೆನು ನಾ ರಾತ್ರಿಕಾಲವ । ಹರಣವಾದಂತಾಯ್ತೆನುತ ತೊಡಗಿದನು ತತ್ಕಥೆಯಾ ॥46॥

ಒಂದು ದಿನ ಕೈಲಾಸಶಿಖರದೊ । ಳಿಂದುಶೇಖರ ಕುಳಿತಿರಲು ನಲ- । ನಿಂದ ತನ್ನರ್ಧಾಂಗಿ ಪಾರ್ವತಿಗರುಹಿದನು ಕಥೆಯ ॥
ಇಂದುವದನೆಯು ಗಿರಿಜೆ ಪತಿಗಿಂ- । ತೆಂದಳಾ ವೇಳೆಯಲಿ ಸದ್ಗುರು । ವೇದರೇನಾತಂಗೆ ಭಕ್ತಿಯ ಮಾಳ್ಪಪರಿಯೇನು ॥47॥

ಹರನು ಪಾರ್ವತಿಗೆಂದನಾಕ್ಷಣ । ಗಿರಿಜೆ ಕೇಳ್ ಸದ್ಗುರುವು ಶಿವಸಮ । ಗುರುಚರಣಸದ್ಭಕ್ತಿಯಿಂದಲಿ ಸರ್ವಸಾಧನವು ॥
ಗುರು ಚರಣದಲಿ ಭಾವ ದೃಢತರ- । ವಿರಲು ಸಿದ್ಧಿಯುದಾಸಿಯಾಗುವ । ಳರುಹುವೆನು ನಿನಗೊಂದು ಕಥೆಯನುಯೆಂದನಾ ಗುರುವು ॥48॥

ಬಗೆಬಗೆಯ ಜಪಯಜ್ಞ ತಪಗಳು । ಬಗೆಬಗೆಯ ದಾನಾದಿಕರ್ಮವು । ಸುಗಮವಲ್ಲಾ ವಿಘ್ನ ಬರುವವು ಕಷ್ಟ ಸಾಧನವು ॥
ಜಗದೊಳೊಂದೇ ಸುಲಭ ಸಾಧನ । ಸುಗಮ ಸಿದ್ಧಿಯ ಬೀಜಮಂತ್ರವು । ಅಗಜೆ ಕೇಳ್ ಗುರುಭಕ್ತಿಯಿದಕೇನಿಹುದೆಯನ್ಯೋಕ್ತಿ ॥49॥

ಗುರುಚರಣದಲನನ್ಯಭಾವದೊ- । ಳಿರುವವನೆ ಜಗದೊಳಗೆ ಜಾಣನು । ದೊರಕಿಸುವನವ ಸರ್ವಸಿದ್ಧಿಯನಪ್ರಯಾಸದಲಿ ॥
ಅರುಹುವೆನು ದೃಷ್ಟಾಂತ ವೊಂದನು । ಗಿರಿಜೆ ನೀ ಮನಗೊಟ್ಟು ಕೇಳ್ವುದು । ಸರಸಿಜಾಸನ ಬ್ರಹ್ಮನವತಾರವನು ತಾಳಿದನು ॥50॥

ಧರೆಯೊಳವತರಿಸಿದನು ತ್ವಷ್ಟ್ರನು । ಪರಮಸುಂದರರೂಪ ಧರ್ಮದಿ । ಪರವು ಕುಶಲನು ಧೀರನಾತಗೆ ಮುಂಜಿ ತೀರಿಸುತಾ ॥
ಗುರುಕುಲಕೆ ಕಳುಹಿದನು ಗುರುವಿಗೆ । ಪರಿಪರಿಯ ಸೇವೆಯನು ಮಾಡುತ । ಲಿರಲುಯೊಂದು ವಿಚಿತ್ರ ಸಂಗತಿಯಾಯ್ತು ಪೇಳುವೆನು ॥51॥

ಸುರಿಯಿತೈ ಮಳೆ ಬಹಳವೊಂದಿನ । ಗುರುವರನ ನಿಜ ಪರ್ಣಶಾಲೆಯೊ- । ಳಿರದೆ ಮಳೆ ಸೋರಿದುದು ಮಳೆಯಿಂ ತ್ರಾಸ ಬಹುವಾಯ್ತು ॥
ಗುರುವು ಶಿಷ್ಯಗೆ ಕರೆದು ಪೇಳಿದ- । ನರರೆ ನೋಡೀ ಪರ್ಣಶಾಲೆಯ । ಹರಕುಮುರುಕಾಗಿಹುದು ಸೋರುವುದೇನು ಹೇಳುವೆನು ॥52॥

ಕಟ್ಟಬೇಕೈ ನೀನು ಮನೆಯನು । ಕೆಟ್ಟು ಹೋಗಲು ಬಾರದು ಉತ್- । ಕೃಷ್ಟವಾಗಿರಬೇಕು ನಿತ್ಯ ನವೀನವಿರಬೇಕು ॥
ಘಟ್ಟಿಯಾಗಿರಬೇಕು ಸರ್ವೋ- । ತ್ಕೃಷ್ಟ ಪರಿಕರ ಸಂಗ್ರಹವು ಮನ- । ಮುಟ್ಟಿವೊಳಗಿರಬೇಕು ದೃಷ್ಟಿಗೆ ರಮ್ಯವಿರಬೇಕು ॥53॥

ಗುರುವನಿತೆಯನಿತರೋಳು ಬಂದಳು । ಅರುಹಿದಳು ಶಿಷ್ಯನಿಗೆ ಮೋದದಿ । ತರಲು ಬೇಕೆನಗೊಂದು ಕಂಚುಕಿ ಹೊಲಿಯದಿರಬೇಕು ॥
ಮರಳಿ ನೆಯ್ದಿರಬಾರದದು ಬಹು- । ಪರಿಯರಂಗಿತ ಶೋಭೆಯಿಂದಲಿ । ಮೆರೆಯಬೇಕದು ಯನ್ನ ದೇಹದ ಮಾನದಿರಬೇಕು ॥54॥

ಬಳಿಕ ಗುರುಸುತನೆಂದನಾತಗೆ । ತಿಳಿದು ತಾರೈ ಪಾದುಕಂಗಳ । ಜಲದ ಮೇಲಿಂದೆನಗೆ ನಡಿಯುವ ತೆರದಿ ಬರಬೇಕು ॥
ನೆಲದ ಮೇಲ್ನಡೆದರೆ ಕೆಸರು ತಾ- । ಗಲಿಕೆ ಬಾರದು ಕಂಡಕಡೆಯಲಿ । ಚಲನಯೋಗ್ಯವು ಬೇಕು ಕಾಲಿನ ಮಾನವಿರಬೇಕು ॥55॥

ಕೇಳುತೀಪರಿ ವಚನಗಳನಾ । ಬಾಲೆ ಗುರುಸುತೆ ಸೆರಗ ಹಿಡಿದಳು । ಹೇಳಿದಳು ತನ್ನಿಷ್ಟವನು ಶಿಷ್ಯನಿಗೆ ಮೋದದಲಿ ॥
ಲೀಲೆಯಿಂದೆರಡೆನಗೆ ಕಿವಿಗಳಿ । ಗೋಲೆಗಳ ತರಬೇಕು ಸುಮನೋ- । ಲೋಲವಾಗಿಹ ಗೇಹ ಯೆನಗಾಡಲಿಕೆ ತರಬೇಕು ॥56॥

ಹಸ್ತಿ ದಂತದಲೇಕಸ್ತಂಭದ । ನಿತ್ಯ ನವನವ ತೆರದೊಳಿರುತಿಹ । ವಸ್ತುವಾಗಿರಬೇಕು ಹರಿಯಲು ಮುರಿಯ ಬಾರದದು ॥
ಎತ್ತ ಹೋಗಲು ನಾನು ಬರಬೇ । ಕತ್ತ ಸೋಪಸ್ಕಾರ ಸಹಿತಲೆ । ಮತ್ತೆ ಯೊಳಗಿರಬೇಕು ಪೀಠಾದಿಗಳು ಸಾಮಗ್ರಿ ॥57॥

ಎಂದು ನೋಡಿದಡಂದು ನೂತನ । ವೆಂದು ತೋರಲು ಬೇಕು ಪಾಕಕೆ । ತಂದು ಕೊಡು ಭಾಂಡಗಳ ನೂತನ ಚಿತ್ರತರವಾದ ॥
ಎಂದು ಬೇಕಾದಾಗ ಅವು ತ । ನ್ನಿಂದ ತಾನೇ ಪಾಕಸಿದ್ಧಿ ಯ । ತಂದುಕೊಡುತಿರಬೇಕು ಕಜ್ಜಳಸ್ಪರ್ಶವಾಗದಲೆ ॥58॥

ಅಡಿಗೆ ಮಾಡಲು ಉಷ್ಣ ತಾಪವು । ಬಡಿಯಬಾರದು ಯೆನಗೆ ಶೀತವು । ಮಡಿಕೆಯಾಗಲು ಬಾರದೈ ಭೋಜನದ ಪರಿಯಂತ ॥
ನುಡಿದಳೀಪರಿ ಗುರುಸುತೆ ಯು ತಾ । ನೋಡಬಡುತ ಹೊರವಂಟನಾಕ್ಷಣ । ನಡೆದನಾಶ್ರಮದಿಂದ ಶಿಶ್ಯೋತ್ತಮನು ಹೊರಗಾಗಿ ॥59॥

ಮನದಿ ಚಿಂತಾಕ್ರಾಂತನಾದನು । ಯೆನಗೆ ಸಾಧ್ಯವೆ ಸರ್ವವಿದು ಯೆನ- । ಗುಣುವ ಪತ್ರಾವಳಿಯ ಮಾಡಲು ಬಾರದೈಯಿನಿತು ॥
ಮಿಣುಕು ಬಾಲನು ನಾನುಯೆನ್ನಿಂ- । ದಿನಿತು ಸಾಹಸಕಾರ್ಯಗಳ ನಾ- । ನೆನಿತು ಪರಿಯಲಿ ಮಾಳ್ಪುದೆಂದನು ದುಗುಡದಲಿ ಶಿಷ್ಯಾ ॥60॥

ಸ್ಮರಿಸಿದನು ಏಕಾಗ್ರಮನದಲಿ । ಗುರುಚರಣಗಳನವನು ಭಯದಲಿ । ಧರೆಯೊಳೀ ಸಾಧನಗಳೆಲ್ಲವ ಕೊಡುವವರು ಯಾರು ॥
ಶರಣುಹೋಗಲಿ ಯಾರಿಗಿಂತೀ । ಗುರುವರನ ವಚನವನು ಸಲಿಸದೆ । ಮುರಿದೆನಾದರೆ ಕೋಪಿಸುವ ಗುರುವು ಯೆನ್ನೊಡನೆ ॥61॥

ಯಾರು ರಕ್ಷಿಪರೆನ್ನನೀಗಲೆ ಯಾರು । ಗುರುಹೊರತೆನ್ನ ಕಾಯುವ । ಧೀರರನು ನಾ ಕಾಣೆ ಗುರುವೇ ಕರುಣಸಾಗರನು ॥
ಧಾರುಣಿಯೋಳಾ ಗುರುನುಡಿಗೆ ಸ- । ತ್ಕಾರ ಮಾಡದುಪೇಕ್ಷಿಸಲ್ಕವ । ಭಾರಿ ಕೋಪದಿ ಶಾಪವೀಯುವನೆಂದು ಬೆದರಿದನು ॥62॥

ಮುಂದೆ ಗತಿಯೇನೆನಗೆ ರಕ್ಷಿಪ । ರಿಂದು ಯೆನ್ನನು ಯಾರು ನಾನಿಹೆ । ಮಂದಮತಿ ಪಾಮರನು ಬಾಲನಶಕ್ತ ನೋಡಿದರೆ ॥
ಇಂದೆನಗೆ ಗುರುವಾಕ್ಯವೇ ಗತಿ । ಯೆಂದು ನಂಬಿಕೆ ಸಿದ್ಧಿ ಸಿಗದಿರೆ । ನೊಂದಿಪೆನು ಪ್ರಾಣಾಗ್ನಿಯನು ನಾ ನೋಡೆನಾಗುರುವಾ ॥63॥

ಇಂತು ನಾನಾಪರಿಯ ಚಿಂತಾ । ಕ್ರಾಂತನಾದನು ಮನದಿ ಬಾಲನು । ಶ್ರಾಂತನಾದನು ನಡೆದು ವನದಲಿ ದುಗುಡಭಾವದಲಿ ॥
ಮುಂತು ಮಾರ್ಗಕ್ರಮಣಮಾಡಲು । ಸಂತನೋರ್ವನು ಮುಂದೆ ಬಂದನು । ಸಂತಸದೊಳವ ನೋಡಿದನು ಬಾಲಕನ ಚಿಂತೆಯನು ॥64॥

ಬಾಲನನು ನೋಡಿದನು ಕರುಣಾ- । ಲೋಲ ಸಾಧುವು ಕೇಳ್ದನವನಿಗೆ । ಹೇಳೆನಗೆ ಬಾಲಕನೆ ನಿನ್ನಯ ತಂದೆ ಯಾರಿಹನು ॥
ಕಾಲು ನಡೆಯಲಿ ವನದಿ ತಿರುಗುವೆ । ಹೇಳುವುದು ತವ ಮುಖವು ದುಃಖದ । ಪಾಳಿ ಬಂದಿಹುದೆಂದು ದುಗುಡದ ಕಾರಣವ ಪೇಳು ॥65॥

ಬಾಲನಾತನ ಪ್ರಶ್ನೆ ಕೇಳುತ । ಕಾಲಿಗೆರಗಿದನೇಕಭಾವದಿ । ಪಾಲಿಸೆನ್ನನು ಸ್ವಾಮಿ ಚಿಂತೆಯೊಳಾನು ಮುಳುಗಿಹೆನು ॥
ಲೀಲೆ ಗುರುವಿನಗಾಧವದರಿಂ- । ಕಾಲುಗಳ ನಾ ಕಂಡೆ ನಿಮ್ಮಯ । ಪೇಳೆನಗೆ ನಲವಿಂದ ಸುಲಭೋಪಾಯ ತಾರಣದಾ ॥66॥

ವ್ಯಾಕುಲದಿ ತಳಮಳಿಪ ಕರುವಿಂ । ಗಾಕಳಾಗಿಹ ತಾಯಿ ಬಂದು ವಿ । ವೇಕದಿಂದಲಿ ಸಿಗಲು ಸಂತವಿಸಿದಂತಾಯ್ತು ನೀ ಬಂದು ॥
ಶೋಕಮಾಳ್ಪ ಚಕೋರ ಪಕ್ಷಿಗೆ । ಸಾಕೆನಿಪ ಚಂದ್ರಪ್ರಕಾಶವು । ಜೋಕೆಯಿಂದಲಿ ಸಿಗಲು ಸಂತಸವಾದ ತೆರನಾಯ್ತು ॥67॥

ನೀನು ಕರುಣಾಸಿಂಧು ಯೆಂಬನು । ಮಾನ ತಪ್ಪದು ಪೂರ್ವಪುಣ್ಯದ । ಭಾನು ನೀ ತಲೆದೋರೆ ವಿಕಸಿತವಾಯ್ತು ಮನಕಮಲಾ ॥
ಏನು ನಿನ್ನಯ ಹೆಸರು ಯಿಲ್ಲಿಗೆ । ಏನು ಕಾರಣ ಬಂದೆ ಪೇಳ್ಳೈ । ಸಾನುರಾಗದೊಳಿಲ್ಲಿ ನಿರ್ಜನ ವನದೊಳೆಲ್ಲಿಂದ ॥68॥

ಧನ್ಯನಾದೆನು ಕಂಡು ನಿನ್ನ ಯ । ಸನ್ನು ತಾಂಘ್ರಿದ್ವಯವ ಯೆನಗಿಂ- । ದಿನ್ನು ತಾಪತ್ರಯವು ತಟ್ಟದು ಮನವು ಸ್ಥಿರವಾಯ್ತು ॥
ಮನ್ನಿಸುವೆನಾ ನಿನ್ನ ನೀಶ್ವರ- । ನೆನ್ನುತಲೆ ಮನದೊಳಗೆ ಯೆನ್ನಯ । ನಿನ್ನ ಚರಣದ ದಾಸನಾಗಿಹೆ ಭಕ್ತವತ್ಸಲನೆ ॥69॥

ಚರಣಕೆರಗಿದ ತರಳನನು ಕರ । ವೆರಡರಿಂದೆತ್ತಿದನು ಪ್ರೇಮದಿ । ಶಿರದಿ ಹಸ್ತವನಿಟ್ಟು ಕೊಟ್ಟನು ಅಭಯದಾನವನು ॥
ತರಳನನು ಬಿಗಿದಪ್ಪಿ ಸಾಧುವು । ಮರಳಿ ಕೇಳಿದನಾಗ ಬಾಲನು । ಹರುಷದಿಂ ಪೇಳಿದನು ಗುರುವು ಗುರುಪತ್ನಿ ಬೇಡಿದುದಾ ॥70॥

ಅರಿಯೆ ನಾನೀ ಸಾಧನಂಗಳ । ತರಳನಾನಿಹೆ ತಿಳಿಯದಾಗುರು- । ವರನ ವಚನವ ಸ್ವೀಕರಿಸಿದೆನು ಭಾವಭಕುತಿಯಲಿ ॥
ಇರುವೆಯಂದದೊಳಿರುವೆ ನಾ ಹಿಮ- । ಗಿರಿಯನೆತ್ತುವ ಧೈರ್ಯ ಮಾಡಿದೆ । ಶರಣವತ್ಸಲ ನೀನು ಹೇಳ್ಳೈ ತಾರಣೋಪಾಯ ॥71॥

ನುಡಿಯ ಕೇಳುತ ಸಾಧು ಬಾಲಗೆ । ನುಡಿದನಾಕ್ಷಣ ಸಕಲ ಸಾಧನ । ಪಡೆವ ಸುಲಭೋಪಾಯ ನಿನಗರುಹುವೆನು ಪ್ರೇಮದಲಿ ॥
ಪೊಡವಿಯಲಿ ಕೇಳ್ಕಾಶಿಪುರದಲಿ । ಪಡೆವರೈ ಸಕಲಾರ್ಥಸಿದ್ಧಿಯ । ಮೃಡನು ವಿಶ್ವೇಶ್ವರನು ವಾಸಿಪನಲ್ಲಿ ಸಂತತದಿ ॥72॥

ಕಾಶಿಪುರದಲಿ ಹೋಗಿ ನೀ ವಿ- । ಶ್ವೇಶ್ವರನ ಭಕುತಿಯಲಿ ಪೂಜಿಸೆ । ಲೇಸಿನಿಂದಲಿ ದೊರಕುವವು ಗುರುಪೇಳ್ದ ವಸ್ತುಗಳು ॥
ಕಾಶಿಪುರದಲಿ ಕೇಳು ಪಂಚ- । ಕ್ರೋಶಕ್ಷಿತಿ ವಿಖ್ಯಾತವಾಗಿದೆ । ವಾಸಿಪರು ಕೇಳಲ್ಲಿ ವಿಷ್ಣು ಪ್ರಮುಖ ಸುರವರರು ॥73॥

ಸರಸಿಜಾಸನನಲ್ಲಿ ಸೃಷ್ಟಿಯ । ವಿರಚಿಸಲು ತಪಮಾಡಿ ಪಡೆದನು । ವರವನಿದರ ಮಹಾತ್ಮ್ಯ ವರ್ಣಿಸಲಾರೆ ಬಾಯಿಂದಾ ॥
ಹರಿಯು ಜಗವನು ಪಾಲಿಸಲಿಕಾ । ವರವ ಪಡೆದನು ಕಾಶಿಪುರದಲಿ । ಪರಮಪಾವನ ಪುಣ್ಯತೀರ್ಥವು ಕಾಶಿ ಸುಕ್ಷೇತ್ರಾ ॥74॥

ತ್ವರಿತದಲಿ ನೀ ಹೋಗು ಕಾಶೀ । ಪುರಕೆ ವಿಶ್ವೇಶ್ವರನ ದರುಶನ । ದೊರಕಿಸುವುದೈ ಸಕಲಕಾಮಿತಗಳನು ನಿಶ್ಚಯದಿ ॥
ಧರಿಸಲಾಗದು ಶಂಕೆಯನು ನಿನ । ಗರುಹುವೆನು ಗುಹ್ಯವನು ನೀನೇ । ಧರೆಯೊಳಗೆ ನಿಜ ವಿಶ್ವಕರ್ಮನ ಕುಶಲತೆಯ ಪಡೆವೆ ॥75॥

ಹರನಿರುವನೈ ದೇವ ಕರುಣಾ । ಶರಧಿಯು ಪಮನ್ಯುವಿಗೆ ಹಾಲಿನ । ಶರಧಿಯನು ತಾನಿತ್ತನೈ ಪ್ರೀತಿಯಲಿ ಭಕ್ತನಿಗೆ ॥
ಇರುವುದೈ ಯಾನಂದಕಾನನ । ಪರಮ ಸಿದ್ಧ ಸ್ಥಾನ ಸರ್ವರು । ಧರೆಯೊಳಲ್ಲಿಯೆ ಪಡೆದರೈ ಸಕಲಾರ್ಥ ಕಾಮಿತವಾ ॥76॥

ಕಾಶಿಯೋ ಧರಣಿಯಲಿ ಪುಣ್ಯದ । ರಾಶಿಯೋ ಜೀವಿಗಳ ಪಾಪವ । ನಾಶಿಸುವ ಜ್ವಾಲಾನೃಸಿಂಹನ ಮೂರ್ತಿಯೆಂಬಂತೆ ॥
ಕಾಶಿಯಂತಿಹ ಕಾಮಧೇನು ವಿ । ಲಾಸದಿಂದಲಿ ಮೆರೆಯುತಿರೆ ನಿನ । ಗಾಶೆಹೀನತೆ ಬೇಡವೆಂದನು ನಗುತಲವಧೂತಾ ॥77॥

ಬಿಡುಬಿಡೆಲೋ ಚಿಂತೆಯನು ಬಾಲನೆ । ಪೊಡವಿಯೊಳು ಕಾಶಿಯ ಮಹಾತ್ಮ್ಯೆಯ । ನುಡಿಯಲಸದಳವೆನಗೆ ಸಾಲದು ಜಿಹ್ವೆಯೊಂದದಕೆ ॥
ಅಡಿಗಡಿಗೆ ಕೇಳಶ್ವಮೇಧದ । ಸಡಗರದಿ ಫಲ ದೊರೆವುದಲ್ಲಿಯೆ । ಪಡೆಯಲೀಫಲ ಕಾಶಿಯಾತ್ರೆಯ ಮಾಡು ನೀನೀಗಾ ॥78॥

ಸಕಲಪುರುಷಾರ್ಥಗಳ ಪಡೆಯುವ । ಯುಕುತಿಯಹುದಿದು ನಿನಗೆ ಪೇಳಿದೆ । ಭಕುತಿ ನಿನ್ನದು ನೋಡಿ ಮೆಚ್ಚಿದೆನೆಂದನಾ ಸಾಧು ॥
ಯುಕುತಿಯನು ಕೇಳಿದನು ತದ್ಬಾ- । ಲಕನು ಪ್ರತ್ಯುತ್ತರವನಿತ್ತನು । ಭಕುತಿಯಲಿ ಸಾಷ್ಟಾಂಗವೆರಗುತ ಕೇಳ್ದ ನೀ ಹದನಾ ॥79॥

ಅರಿಯೆ ನಾನಾನಂದಕಾನನ । ವಿರುವುದೆಲ್ಲೆಂಬುದನು ಪೇಳ್ಕೈ । ಸುರರ ಲೋಕದೊಳಿರುವುದೋ ನರಲೋಕದೊಳಗಿಹುದೊ ? ॥
ತಿರುಗಿಯದು ಪಾತಾಳಲೋಕದೊ । ಳಿರುವುದೋ ಯೆನಗರುಹಬೇಕೆಂ- । ದೆರಗಿದನು ಕೇಳ್ ಬ್ರಹ್ಮಚಾರಿಯು ವಿನಯಪರನಾಗಿ ॥80॥

ತಾರಕನು ನೀನಾಗಿ ಈ ಸಂ- । ಸಾರಸಾಗರದಲ್ಲಿ ದೊರಕಿದೆ । ತಾರಿಸೆನ್ನನು ಬಿಡದೆ ಜ್ಞಾನಾಮೃತವ ಕುಡಿಸುತಲಿ ॥
ಯಾರು ವೊಯ್ಯುವರೆನಗೆ ಕಾಶಿಗೆ । ತೋರಬೇಕೈ ಕರುಣ ನೀ ಹೊರ- । ತಾರಕಾಣೆನು ಜಗದೊಳೆಂದನು ಬಾಲಕನು ಮುನಿಗೆ ॥81॥

ಸಾಲದೆನಗೀ ಬುದ್ಧಿ ನೋಡಲು । ಬಾಲನಲ್ಲಾ ಬ್ರಹ್ಮಚಾರಿಯು । ಪಾಲಿಸೈ ನೀನೆನ್ನ ನೆನುತಲಿ ಚರಣ ಕೆರಗಿದನು ॥
ಬಾಲನಾಡಿದ ನುಡಿಯ ಕೇಳುತ । ಪೇಳಿದನು ಮತ್ತವನಿಗುತ್ತರ । ಬಾಲನಿನ್ನೊಡನೆದ್ದು ಬರುವೆನು ಚಿಂತೆ ಮಾಡದಿರು ॥82॥

ವ್ಯರ್ಥವೈ ನರಜನ್ಮ ಕಾಶೀ । ಯಾತ್ರೆ ಮಾಡದೆ ಜಗದೊಳಿರಲವ । ಸತ್ತಪರಿಯಿಂದರಿಯು ನಿನ್ನಯ ಕೂಡೆ ಬರಲೆನಗೆ ॥
ಹತ್ತುವುದು ಸುಲಭದಲಿ ಯಾತ್ರೆಯು । ಮತ್ತು ವಿಶ್ವೇಶ್ವರನ ನೋಳ್ಪನೆ । ನುತ್ತ ಬಾಲಕಸಹಿತ ಹೋದನು ಕಾಶಿಪಟ್ಟಣಕೆ ॥83॥

ಹೊರಟರವರು ಮನೋಗತಿಯಲಾ । ಪುರಕೆ ಬಂದರು ನಿಂತು ವಿಶ್ವೇ । ಶ್ವರನ ಸನ್ಮುಖದಲ್ಲಿ ನಿಂತರು ಸಾಧು ಬಾಲನಿಗೆ ॥
ಅರುಹಿದುವೆ ಕೇಳಿದುವೆ ಕಾಶೀ । ಪುರವು ನೀ ಯಾತ್ರೆಯನು ಮಾಡೆಂ- । ದರುಹಲಾ ಬಾಲಕನು ಬಿನ್ನೈಸಿದನು ತಾಪಸಿಗೆ ॥84॥

ಅರಿಯೆ ನಾ ಯಾತ್ರೆಯನು ಮಾಡುವ । ಪರಿಯ ನೀನೇ ಪೇಳಿಯೆನಗು- । ದ್ಧರಿಸುವುದು ನೀನೇ ಕಣಾ ಗುರುವೆನಗೆ ರಕ್ಷಿಪುದು ॥
ಹರಿಯದೆನಗೀ ಬಗೆಯನುತಲಾ । ತರಳ ಪೇಳಲು ನಗುತ ಸಾಧುವು । ಕರುಣಿಸಿದನೈ ಬಾಲಕಗೆ ಯಾತ್ರಾ ವಿಧಾನವನು ॥85॥

ಮೊದಲು ಮಣಿಕರ್ಣಿಕೆಯ ಸ್ನಾನವ । ವಿಧಿಪುರಸ್ಸರಮಾಡಿ ನಂತರ । ವೊದಗಿ ಪೂಜಿಸು ನೀ ವಿನಾಯಕನನ್ನು ನಂತರದಿ ॥
ಮುದದಿ ಪಾಂಚಾಳೇಶ್ವರನನೀ । ವಿಧಿಪುರಸ್ಸರ ನಮಿಸಿ ಬಳಿಕಾ । ಸದಮಲಾತಃಕರಣ ವಿಶ್ವೇಶ್ವರನ ಪೂಜಿಪುದು ॥86॥

ತಿರುಗಿ ಗಂಗಾತೀರಕಾಗಿಯೆ । ಬರುತ ಮಣಿಕರ್ಣಿಕೆಯ ಸ್ನಾನವ । ಭರದಿ ಮಾಡುತ ಪೂಜಿಸೈ ಮಣಿಕರ್ಣಿಕೇಶ್ವರನಾ ॥
ತೆರಳು ತದನಂತರ ಕಮಲೇ- । ಶ್ವರನಪೂಜಿಸಿ ಭಕ್ತಿಭಾವದಿ । ಮರಳಿ ನೀನೀಶ್ವರನ ವಾಸುಕಿಯನ್ನು ಪೂಜಿಪುದು ॥87॥

ಹರುಷದಿಂದಲಿ ಪರ್ವತೇಶ್ವರ । ಮರಳಿ ಗಂಗಾಕೇಶವನನೀ । ನುರುತರದಿ ಪೂಜಿಪುದು ಲಲಿತಾ ದೇವಿಯನು ತಿಳಿಯೆ ॥
ತೆರಳು ನೀನಲ್ಲಿಂದ ಮುಂದಕ । ವರಜರಾಸಂಧೇಶ್ವರನ ನಂ- । ತರಕೆ ಪೂಜಿಸು ಸೋಮನಾಥನ ಭಕ್ತಿ ಭಾವದಲಿ ॥88॥

ಶೂಲಕಂಠೇಶ್ವರನ ಪೂಜಿಸು । ಮೇಲೆ ವಾರಾಹೇಶ್ವರನ ನೀ । ಲೀಲೆಯಿಂ ಬ್ರಹ್ಮೇಶ್ವರನ ಪೂಜಿಪುದು ನಂತರಕೆ ॥
ಮೇಲಗಸ್ತ್ಯೇಶ್ವರನ ಪೂಜಿಸು । ಮೇಲೆ ಕಶ್ಯಪಹರಿಹರೇಶ್ವರ । ಮೇಲೆ ಹರುಷದಿ ವೈಜನಾಥಧ್ರುವೇಶ್ವರಗೆ ನಮಿಸು ॥89॥

ಪರಮ ಗೋಕರ್ಣೇಶ್ವರನ ನಂ- । ತರಕೆ ಪೂಜಿಸು ಹಾಟಕೇಶನ । ಭರದಿ ಪೂಜಿಸು ಅಸ್ಥಿಕ್ಷೇಪತಟಾಕದೀಶ್ವರನಾ ॥
ಮರಳಿ ಪೂಜಿಸು ಕಿಂಕರೇಶ್ವರ । ಮರಳಿ ಪೂಜಿಸು ಭಾರಭೂತೇ । ಶ್ವರನ ನಂತರ ಚಿತ್ರಗುಪ್ತೇಶ್ವರನ ಪೂಜಿಪುದು ॥90॥

ಪೂಜಿಸೈ ನೀ ಚಿತ್ರಘಂಟವ । ಪೂಜಿಪುದು ನೀ ಪಶುಪತೇಶ್ವರ । ಪೂಜಿಪುದು ನಂತರ ಪಿತಾಮಹನಿರಲು ಈಶ್ವರನಾ ॥
ರಾಜಿಸುವ ಕಲ್ಲೋಶ್ವರನ ನೀ । ಪೂಜಿಸೈ ಚಂದ್ರೇಶ್ವರನ ನೀ । ಪೂಜಿಸೈನಂತರಕೆ ವಿಶ್ವೇಶ್ವರನ ಭಕುತಿಯಲಿ ॥91॥

ಹುಷದಿಂ ವಿಘ್ನೇಶ್ವರನ ನೀ । ಭರದಿ ಪೂಜಿಸು ಮೇಣು ಅಗ್ನೀ- । ಶ್ವರನ ನಾಗೇಶ್ವರ ಹರಿಶ್ಚಂದ್ರೇಶ್ವರರ ಮುದದಿ ॥
ಮರಳಿ ಚಿಂತಾಮಣಿವಿನಾಯಕ । ಮರಳಿ ಸೋಮೇಶ್ವರವಿನಾಯಕ । ಭರದಿ ಪೂಜಿಸು ವಾಮದೇವವಸಿಷ್ಠರನು ನಮಿಸು ॥92॥

ಚಿತ್ರಸಂಧೇಶ್ವರನ ಪೂಜಿಸು । ಪೃಥ್ವಿಯೊಳಗಿದು ಲಿಂಗವುತ್ತಮ । ವಿಸ್ತರಿಸಲು ಮನೋಹರವು ಕೇಳೈ ವಿಶಾಲಾಕ್ಷಾ ॥
ಮತ್ತೆ ಧರ್ಮೇಶ್ವರನ ಪೂಜಿಸು । ಮತ್ತೆ ಪೂಜಿಸು ವಿಶ್ವಬಾಹುವ । ಮತ್ತೆ ಪೂಜಿಸು ಭಕ್ತಿಯಲಿ ಆಶಾವಿನಾಯಕನಾ ॥93॥

ಇರುವ ವೃದ್ಧಾದಿತ್ಯನವನನು । ಭರದಿ ಪೂಜಿಸು ನಾಲ್ಕು ವಕ್ತ್ರೇ । ಶ್ವರನ ಲಿಂಗ ಮನೋಹರವು ನೋಡುವರೆ ಧರಣಿಯಲಿ ॥
ಮರಳಿ ಬ್ರಹ್ಮೇಶ್ವರಪ್ರಕಾಮೇ-। ಶ್ವರರನೀಶಾನೇಶ್ವರರನನು । ಕರಿಸಿ ಪೂಜಿಸು ಚಂಡಿ ಚಂಡೇಶ್ವರರ ಭಾವದಲಿ ॥94॥

ವರಭವಾನೀಶಂಕರನ ಮನ । ಹರನ ಧುಂಡೀರಾಜನನು ನೀ । ಹರುಷದಿಂದಲಿ ರಾಜರಾಜೇಶ್ವರನ ಪೂಜಿಪುದು ॥
ಮರಳಿ ಲಾಂಗೂಲೇಶ್ವರನ ನೀ । ನಿರದೆ ನಕುಲೇಶ್ವರನ ಪೂಜೆಸು । ತಿರುಗಿ ನಮಿಸು ಪರಾನ್ನ ಪರದ್ರವ್ಯೇಶ್ವರನ ಮುದದಿ ॥95॥

ಪಾಣಿಗ್ರಹಣೇಶ್ವರನ ಪೂಜಿಸು । ಮೇಣುಗಂಗೇಶ್ವರಮೊರೇಶ್ವರ । ಜ್ಞಾನಭಾವಿಲಿ ಮಿಂದು ಜ್ಞಾನೇಶ್ವರನ ಪೂಜಿಪುದು ॥
ಮೇಣು ನಂದೀಶ್ವರನ ಪೂಜಿಸಿ । ಸಾನುರಾಗದಿ ಭಕ್ತಿ ಭಾವದಿ । ನೀನು ಪೂಜಿಸು ನಿಷ್ಕಳಂಕೇಶ್ವರನ ಲಿಂಗವನು ॥96॥

ಮತ್ತೆ ಮಾರ್ಕಂಡೇಶ್ವರನ ನೀ । ವಿಸ್ತರಿಸು ಪೂಜೆಯನು ನಂತರ । ಚಿತ್ತಶುದ್ಧಿಯೊಳೆರಗು ನೀನು ಸುರೇಶ್ವರನ ಪದಕೆ ॥
ಮತ್ತೆ ಪೂಜಿಸು ತಾರಕೇಶ್ವರ- । ನುತ್ತ ಮಾಂಗವನೇಕಭಾವದಿ । ಭಕ್ತಿಭಾವದಿ ನೀ ಮಹಾಕಾಲೇಶ್ವರನ ನಮಿಸು ॥97॥

ಚರಣಕೆರಗುತ ದಂಡಪಾಣಿಗೆ । ಧರೆಯೊಳು ಮಹೇಶ್ವರಗೆ ಮೋಕ್ಷೇ । ಶ್ವರವ ಪೂಜಿಸು ವೀರಭದ್ರೇಶ್ವರನ ಭಕ್ತಿಯಲಿ ॥
ತೆರಳಿ ನೀನಲ್ಲಿಂದ ನಂತರ । ಹರುಷದಿಂ ಪೋಗುವುದು ಮುಂದಕೆ । ವಿರಚಿಸುವುದೈ ಪೂಜೆ ಅವಿಮುಕ್ತೇಶ್ವರನ ಮುಂದೆ ॥98॥

ನ್ಯಾಯದಲಿ ಮೋದಾದಿಪಂಚವಿ । ನಾಯಕನ ಪೂಜಿಸುತ ನಂತರ । ಬೀಯವಿಲ್ಲದೆ ಪೂಜಿಸೈ ಆನಂದಭೈರವನಾ ॥
ಕಾಯು ತೀಪರಿ ಯಾತ್ರೆ ವಿಧಿಯನು । ಜೀಯಬಾರೈ ಮರಳಿ ಪೂಜೆಯ- । ನಾಯತದಿ ನೀ ಮಾಡು ವಿಶ್ವೇಶ್ವರಗೆ ಸ್ಮರಹರಗೆ ॥99॥

ಭಕ್ತಿಭಾವದೊಳೀ ತೆರದಿ ನೀ । ಯಾತ್ರೆಯಂತರ್ಗೃದಿ ತೀರಿಸಿ । ಮುಕ್ತಿಮಂಡಪದೊಳಗೆ ಬರುವುದು ಪೇಳುವ್ವದೀ ಶ್ಲೋಕಾ ॥
ಅಂತಗೃಹೇಷು ಯಾತ್ರೇಯಂ । ಯಥವದ್ಯಾ ಮಯಾ ಕೃತಾ ॥
ನ್ಯೂನಾತಿರಿಕ್ತಯಾಶಂಭುಃ । ಪ್ರೀಯತಾಮನಯಾ ವಿಭುಃ ॥
ಇತಿ ಮಂತ್ರ ಸಮುಚ್ಚಾರ್ಯ । ಕ್ಷಣಂ ವೈ ಮುಕ್ತಿಮಾನ್ ಭವೇತ್ ॥
ವಿಶ್ರಮ್ಯ ಯಾಯಾದ್ಭವನೇ । ನಿಷ್ಪಾಪಃ ಪುಣ್ಯ ಭಾಗ್ಭವೇತ್॥

ತೀರಿಸಿದನಂತರ್ಗೃಹದಿನಾ- । ಚಾರುತರ ಭಕ್ತಿಯಲಿ ಯಾತ್ರೆಯ । ಮಾರಹರಗರ್ಪಿಸಿದೆ ತಿಳಿಯದು ಹೆಚ್ಚು ಕುಂದೆನಗೆ ॥
ತೋರಿಸಲಿ ಹರಪ್ರೇಮವೆಂದು- । ಚ್ಚಾರಿಸುತಲೀ ಮಂತ್ರ ಶ್ರಮಪರಿ- । ಹಾರಮಾಡುತ ಮನೆಗೆ ಬರೆ ನಿಷ್ಪಾಪನಾಗುವನು ॥100॥

ವಿಶ್ವನಾಥನ ನಮಿಸಿ ನಂತರ । ದಕ್ಷಿಣದ ಮಾನಸದ ಯಾತ್ರೆಗೆ । ನಿಶ್ಚಯದಿ ಹೊರಡುವುದು ಮಣಿಕರ್ಣಿಕೆಯ ಸ್ನಾನಕ್ಕೆ ॥
ವಿಶ್ವನಾಥನ ಬಳಿಕ ಪೂಜಿಸಿ । ನಿಶ್ಚಲದ ಸಂಕಲ್ಪ ಪೇಳುವುದು । ಹರ್ಷದಿಂ ಮೊದಾದಿಪಂಚವಿನಾಯಕನ ನಮಿಸು ॥101॥

ಧುಂಡಿರಾಜ ಭವಾನಿಶಂಕರ । ದಂಡಪಾಣಿ ವಿಶಾಲನಯನರ । ದಂಡದಾಕಾರದಲಿ ನಮಿಸ್ಯೆ ಧರ್ಮಕೂಪದಲಿ ॥
ಮುಂಡೆ ಮುಳುಗುವತನಕ ಸ್ನಾನವ । ನಂಡಲಿಲ್ಲದೆ ಮಾಡುತಲಿ ಭೂ- । ಮಂಡಲದ ಧರ್ಮೇಶ್ವರನ ನೀವಲಿಸು ಶ್ರಾದ್ಧದಲಿ ॥102॥

ಬಳಿಕ ಗಂಗಾಕೇಶವನ ನೀ । ಬಳಿಕ ಲಲಿತಾದೇವಿಯನು ನೀ । ನಲುವಿನಿಂ ಪೂಜಿಸು ಜರಾಸಂಧೇಶ್ವರನ ಮುದದಿ ॥
ವಲಿಸು ಬಳಿ ಕಾಸೋಮನಾಥನ । ಬಳಿಕ ವಾರಾಹೇಶ್ವರನ ನೀ । ವಲಿಸು ಬಳಿಕ ದಶಾಶ್ವಮೇಧದ ತೀರ್ಥವಾಚರಿಸು ॥103॥

ಸ್ನಾನವೀತೀರ್ಥದಲಿ ತೀರಿಸಿ । ನ್ಯೂನತೆಯ ಮಾಡದಲೆ ಸ್ನಾನವಿ- । ಧಾನತೀರಿಸು ಬಳಿಕ ಹೋಗು ಪ್ರಯಾಗತೀರ್ಥಕ್ಕೆ ॥
ಸ್ನಾನಶ್ರಾದ್ಧವ ಮಾಡುತಲಿ ನೀ । ಸಾನುರಾಗದಿ ಪೂಜೆ ಮಾಳ್ಪುದು । ಧ್ಯಾನಪೂರ್ವಕವಾ ಪ್ರಯಾಗೇಶ್ವರನ ನಮಿಸುವುದು ॥104॥

ತಿರುಗಿ ನೀನು ದಶಾಶ್ವಮೇಧೇ । ಶ್ವರನ ಪೂಜಿಸು ಭಕ್ತಿಭಾವದಿ । ತಿರುಗಿ ಪೂಜಿಸು ಶೀತಲೇಶ್ವರನನ್ನು ಮೋದದಲಿ ॥
ತಿರುಗಿ ಪೂಜಿಸು ವಂದಿದೇವಿಯ । ನಿರದೆ ಸರ್ವೇಶ್ವರನ ಪೂಜಿಸು । ಭರದಿ ಪೂಜಿಸು ಧುಂಡಿರಾಜನ ಭಕ್ತಿಪೂರ್ವಕದಿ ॥105॥

ಬಾಲ ನೀ ನಂತರದಿ ಪೂಜಿಸು । ತೀಳಭಾಂಡೇಶ್ವರನ ಬಳಿಕಾ । ಲೀಲೆಯಿಂದಲಿ ಸ್ನಾನಮಾಡಾರೇವಕುಂಡದಲಿ ॥
ಮೇಲೆ ಮಾನಸಕೆರೆಯೊಳಗೆ ನೀ । ಬೀಳುವುದು ಸ್ನಾನಕ್ಕೆ ಮೀಯುತ । ಲಿಲೆಯಿಂದಲಿ ಶ್ರಾದ್ಧ ಪಿತೃತರ್ಪಣವ ತೀರಿಪುದು ॥106॥

ಮಾನಸೇಶ್ವರನನ್ನು ಪೂಜಿಸೆ । ಮಾನಸದ ಕಾಮಿತಗಳೆಲ್ಲವು । ತಾವೆ ಲಭಿಪವು ಕೇಳು ಮಾನಸ ಯಾತ್ರೆ ಮಹಿಮೆಯನು ॥
ಸ್ನಾನ ಕೇದಾರದಲಿ ಮಾಡುತ । ಸಾನುರಾಗದಿ ಮಾಡು ತರ್ಪಣ । ಮೇಣು ಕೇದಾರೇಶ್ವರನ ಪೂಜಿಸು ವಿನೋದದಲಿ ॥107॥

ಗೌರಿಕುಂಡದಿ ಸ್ನಾನಮಾಡುತ । ತೀರಿಸೈ ಪೂಜೆಯನು ವೃದ್ಧ ಕೇ । ದಾರನೆಂಬೀಶ್ವರ ಹನುಮಂತೇಶ್ವರನ ಬಳಿಕಾ ॥
ಚಾರುರಾಮೇಶ್ವರನ ಪೂಜಿಸು । ತೀರಿಸೈ ಕೃಮಿಕುಂಡಸ್ನಾನವ । ತೀರಿಸೈ ಶ್ರಾದ್ಧಾದಿ ಕರ್ಮವನಲ್ಲಿ ತಪ್ಪದಲೆ ॥108॥

ಭಕ್ತಿಯಲಿ ವಿಶ್ವೇಶ್ವರನ ನೀ । ಸುತ್ತುತಲಿ ಪೂಜಿಸುತ ಸ್ನಾನಕೆ । ಮತ್ತೆ ಬಾರೈ ಸ್ವಪ್ನ ಕುಂಡಕೆ ಸ್ನಾನ ತೀರಿಸುತಾ ॥
ಮತ್ತೆ ಸ್ವಪ್ನೇಶ್ವರನ ಪೂಜಾ- । ವಿಸ್ತರವ ತೀರಿಸುತ ಸಂಗಮ । ತೀರ್ಥದಲಿ ವೀಯುತ್ತ ಪೂಜಿಸು ಸಂಗಮೇಶ್ವರನಾ ॥109॥

ಸ್ನಾನವನು ಲೋಲಾರ್ಕಕೂಪದಿ । ನೀನು ತೀರಿಸಿ ಶ್ರಾದ್ಧ ಕರ್ಮವ । ಮೇಣು ಪೂಜಿಸು ಸದ್ಗದಿತಪ್ರದಲಿಂಗವೀಶ್ವರನಾ ॥
ಧ್ಯಾನಿಸರ್ಕವಿನಾಯಕನ ನೀ । ಸಾನುರಾಗದಿ ಭಕ್ತಿಭಾವದಿ । ಮೇಣು ಪೂಜಿಸು ತಪ್ಪದಲೆ ಪಾರಾಶರೇಶ್ವರನಾ ॥110॥

ಸನ್ನಿಹತ್ಯ ಸುಕುಂಡದಲಿ ನೀ । ನಿನ್ನು ಸ್ನಾನವ ಮಾಡಿ ನಂತರ । ಚಿಣ್ಣ ತೆರಳುವುದೈ ಕುರುಕ್ಷೇತ್ರದಲಿ ಸ್ನಾನಕ್ಕೆ ॥
ವರ್ಣಿಸಲಿ ನಾನೆಂತು ನೀನು ಸು- । ವರ್ಣಮೊದಲಾಗಿರುವ ದಾನಗ । ಳನ್ನು ಕೊಡಬೇಕಲ್ಲಿ ನಂತರ ಅಮೃತಕುಂಡದಲಿ ॥111॥

ಸಾವಧಾನದಿ ಮೀಯುತಾದು- । ರ್ಗಾವಿನಾಯಕನನ್ನು ಪೂಜಿಸು । ದೇವಿದುರ್ಗೆಯ ಪೂಜಿಸೈ ತದನಂತರದಿ ನೀನು ॥
ಭಾವದಲಿ ಚೌಷಷ್ಟಯೋಗಿನಿ । ಸೇವೆಯನು ತೀರಿಸಲು ನಿನಗವ । ರಾವಗಂ ಕೊಡುತಿಹರು ಮನಕಾಮಿತವನೆಲ್ಲವನು ॥112 ॥

ಕುಕ್ಕುಟದ್ವಿಜನಿಂಗೆ ವಂದಿಸು । ತಕ್ಕರದೊಳೀ ಮಂತ್ರ ಹೇಳೈ । ಲೆಕ್ಕವಿಲ್ಲವ ಸ್ವಪ್ನಗಳ ದುಷ್ಫಲವ ಹರಿಸುವನು ॥
ವಾರಾಣಸ್ಯಾಂ ದಕ್ಷಿಣೇ ಭಾಗೇ । ಕುಕ್ಕುಟೋನಾಮ ವೈದ್ವಿಜಃ ॥ ತಸ್ಯ ಸ್ಮರಣಮಾತ್ರೇಣ । ದುಃಸ್ವಪಃ ಸುಸ್ವಪ್ನೋ ಭವೇತ್ ॥113॥

ವಾರಣಾಸಿಕ್ಷೇತ್ರದಲಿ ವಿ । ಸ್ತಾರವಹ ದಕ್ಷಿಣದ ಭಾಗದಿ । ಧಾರುಣಿ ಸುರನೋರ್ವ ಕುಕ್ಕುಟನೆಂಬ ನಾಮದಲಿ ॥
ಚಾರು ಸ್ಮರಣದ ಮಾತ್ರದಿಂ ಪರಿ- । ಹಾರ ಮಾಳ್ಪನು ಸ್ವಪ್ನ ದುಷ್ಫಲ । ಸೇರುವವು ಸುಸ್ವಪ್ನವೆಲ್ಲಾ ದ್ವಿಜನ ಕರುಣದಲಿ ॥114॥

ಮಾಸದುಪವಾಸದಲಿ ಪೂಜಿಸು । ಲೇಸಿನಿಂದೆಂಬೆಯನು ಗೌರಿಯ । ತ್ರಾಸವಿಲ್ಲದೆ ಯೇಳು ಕವಡಿಗಳನ್ನು ವೊಪ್ಪಿಸೆಲಾ ॥
ತೋಷದಿಂ ರೇಣುಕೆಯ ಪೂಜಿಸಿ । ಕೂಸೆ ಶಂಖೋದ್ಧಾರತೀರ್ಥದಿ । ತೋಷದಿಂ ಮೀಯುತ್ತ ಪೂಜಿಸು ಶಂಖವಿಷ್ಣುವನು ॥115॥

ಸ್ನಾನವನು ಕಾಮಾಕ್ಷಿಕುಂಡದಿ । ಸಾನುರಾಗದಿ ಮಾಡಿ ಪೂಜೆ ವಿ । ಧಾನವನು ತೀರಿಸುವುದೈ ಕಾಮಾಕ್ಷಿದೇವಿಯಳಾ ॥
ಮೇಣಯೋಧ್ಯಾ ಕುಂಡದಲಿ ನೀ । ಸ್ನಾನ ಮಾಡುತಲೇಕ ಭಾವದಿ । ಧ್ಯಾನಿಸೈ ಲಕ್ಷ್ಮಿಯನು ಪೂಜಿಸು ಭಕ್ತಿಭಾವದಲಿ ॥116॥

ಲವಕುಶರ ಕುಂಡದಲಿ ನೀ ಸ್ನಾ । ನವನು ತೀರಿಸಿನಂತರದೊಳಾ । ಲವಕುಶರ ಪೂಜಿಸುವುದೈ ನೀವಿಧಿ ಪುರಸ್ಸರದಿ ॥
ಅವಧಿಯಿಲ್ಲದೆ ಲಕ್ಷ್ಮಿ ಕುಂಡದೊ- । ಳವಗಹಿಸುವುದು ಮೇಣು ಲಕ್ಷ್ಮಿ । ಧವನ ಪೂಜಿಸಿ ಸೂರ್ಯಕುಂಡದಿ ಸ್ನಾನ ಮಾಡುವುದು ॥117॥

ಶ್ರಾದ್ಧಕರ್ಮವನಾಚರಿಸುತ । ಲ್ಲಿದ್ದ ಸಾಂಬಾದಿತ್ಯ ಪೂಜೆಯ । ಶ್ರದ್ಧೆಯಿಂದಾಚರಿಸಿ ಮುಂದಕ ನಡೆವುದೈ ಮುದದಿ ॥
ಶುದ್ಧಮನದಲಿ ವೈಜನಾಥನೊ- । ಳಿದ್ದು ತೀರ್ಥದಿ ಸ್ನಾನಮಾಳ್ಪುದು । ಮುದ್ದು ಪೂಜೆಯ ಮಾಡು ನೀನಾ ವೈಜನಾಥನಿಗೆ ॥118॥

ಮತ್ತೆ ಗೋದಾವರಿಯ ತೀರ್ಥದಿ । ಭಕ್ತಿಯಲಿ ಸ್ನಾನವನು ಮಾಳ್ಪುದು । ಮತ್ತೆ ಪೂಜಿಸು ಗೌತುಮೇಶ್ವರನನ್ನು ಮೋದದಲಿ ॥
ಸ್ವಸ್ತಿಯಪ್ಪುದು ನಿನಗೆ ಮೀಯುತ । ಗಸ್ತಿ ಕುಂಡದ ತೀರ್ಥದಲಿ ಸುಪ- । ವಿತ್ರವಾದ ಅಗಸ್ತಿ ಈಶ್ವರನನ್ನು ಪೂಜಿಪುದು ॥119॥

ಸ್ನಾನ ತೀರಿಸಿ ಶುಕ್ರತೀರ್ಥದಿ । ಮೇಣು ಶುಕ್ರೇಶ್ವರನ ಪೂಜಿಸು । ಸಾನುರಾಗದೊಳನ್ನ ಪೂರ್ಣಾದೇವಿಯನು ವೊಲಿಸು ॥
ನೀನು ಪೂಜಿಸಿ ಧುಂಡಿರಾಜನ । ಜ್ಞಾನವಾಪಿಯ ಸ್ನಾನತೀರಿಸಿ । ಮೇಣು ಜ್ಞಾನೇಶ್ವರನ ಪೂಜಿಸು ದಂಡಪಾಣಿಯನು ॥120॥

ನಂತರದೊಳಾನಂದಭೈರವ । ಗಿಂತು ಪೂಜೆಯ ಮಾಡಿ ಬರುವುದು । ಸಂತಸದೊಳಾ ವಿಶ್ವನಾಥನಿಗೆರಗುವುದು ಮುದದಿ ॥
ಇಂತುನಾಗಾ ತೆರದಿ ಯಾತ್ರೆಯ । ಸಂತಸದಿ ಮಾಡಲ್ಕೆ ನನಗಾ । ಕಂತುಹರ ದಕ್ಷಿಣದ ಮಾನಸ ಯಾತ್ರೆಯಲಿ ವೊಲಿದಾ ॥121॥

ತೀರಿತೀ ದಕ್ಷಿಣದ ಮಾನಸ । ಚಾರು ಯಾತ್ರೆಯ ಪೇಳ್ವೆನೀಗಲೆ । ಚಾರುತರಲುತ್ತರದ ಮಾನಸ ಯಾತ್ರೆಯನು ಮುದದಿ ॥
ಚಾರು ಸಂಕಲ್ಪವನು ಮಾಡುತ । ಸೇರುವುದು ನೀ ಪಂಚಗಂಗಾ- । ತೀರಕಾಗಿಯೇ ಸ್ನಾನ ಮಾಡುವುದಲ್ಲಿ ಮೋದದಲಿ ॥122॥

ಜನುಮ ಕೋಟ್ಯಾವಧಿಯ ಪಾಪದ । ಹನನ ವಾಗುವದಲ್ಲಿ ಸ್ನಾನದೋ- । ಳೆನುತ ಘೋಷಿಸುತಿರುವರೈ ವೇದಗಳು ಶಾಸ್ತ್ರಗಳು ॥
ವಿನುತ ನದಿಗಳ ಹೆಸರ ಪೇಳ್ವೆನು । ವಿನುತ ಕಿರಣಾ ಧೂತಪಾಪೆಯು । ಮಿನುಗುವವು ಕೇಳಾಸರಸ್ವತಿಗಂಗೆಯಮುನೆಗಳು ॥123॥

ಕೃತಯುಗದೊಳಾ ನದಿಗೆ ಧರ್ಮಾ- । ವತಿಯು ಹೆಸರಾಯ್ತದರ ನಂತರ । ಕ್ಷಿತಿಯೊಳಾಯಿತು ಧೂತಪಾಪಾ ಹೆಸರು ತ್ರೇತೆಯಲಿ ॥
ವಿತತ ಬಿಂದುಕ್ಷೇತ್ರ ಹೆಸರಾ । ಯಿತು ಕಣಾ ದ್ವಾಪರದಿ ಕಲಿಯಲಿ । ಸತತವಾಯಿತು ಪಂಚಗಂಗಾನಾಮ ಧರಣಿಯಲಿ ॥124॥

ಮಾಘ ಮಾಸದಿ ಸ್ನಾನವನ್ನು ಪ್ರ- । ಯಾಗದಲಿ ಮಾಡುವುದುಯದರಿಂ । ಭಾಗ್ಯವಧಿಕವು ಪಂಚಗಂಗಾನದಿಯ ಸ್ನಾನದಲಿ ॥
ಪೋಗೆ ನೀ ಸ್ನಾನವನು ತೀರಿಸಿ । ಬೇಗ ಪೂಜಿಸು ಬಿಂದುಮಾಧವ । ಸಾಗು ಕೇಶವನನ್ನು ಪೂಜಿಸು ಭಾವಭಕುತಿಯಲಿ ॥125॥

ಪೂಜಿಸೈ ಗೋಪಾಲಕೃಷ್ಣನ । ಪೂಜಿಸೈ ನರಸಿಂಹ ಕ್ಷೇತ್ರದಿ । ರಾಜಿಸುತ್ತಿಹ ಮಂಗಳಾಗೌರಿಯನು ಭಕ್ತಿಯಲಿ ॥
ಪೂಜಿಸು ಗಭಸ್ತೆಶ್ವರನ ನೀ । ಪೂಜೆ ಮಥುರಾದಿತ್ಯಗರ್ಜಿಸು- । ತೋಜೆಯಿಂ ವಿಶ್ವೇಶ್ವರನ ದರ್ಶನವ ಮಾಡುವುದು ॥126॥

ಮುಕ್ತಿ ಮಂಡಪಕೈತರುತ ನೀ । ಭಕ್ತಿಯಿಂ ಸಂಕಲ್ಪ ಮಾಡುತ । ಯಾತ್ರೆಯನು ಮಾಡುವುದು ಉತ್ತರ ಮಾನಸದ ನೀನು ॥
ಸ್ವಸ್ಥ ಚಿತ್ತದಿ ಹೊರಟು ಮೇಣಾ । ದಿತ್ಯನನ ಪೂಜಿಸುವುದೈ ನೀ । ಮತ್ತೆ ಕೇದಾರೇಶ್ವರನ ಭಜಿಸುವುದು ನೇಮದಲಿ ॥127॥

ಪಾಪಭುಕ್ತೇಶ್ವರನ ಪೂಜಿಸಿ । ತಾಪಹರನವಗ್ರಹಗಳಿಗೆ ಪೂ- । ಜೋಪಚಾರವ ಮಾಡಿ ವಂದಿಸು ಕಾಳಭೈರವನಾ ॥
ಆ ಪರಿಯೋಳಾ ಕ್ಷೇತ್ರಪಾಲರ । ಸೊಪಚಾರದಿ ಪೂಜೆ ತೀರಿಸಿ । ಪಾಪಹರಸ್ನಾನವನು ಮಾಡೈ ಕಾಲಕೂಪದಲಿ ॥128॥

ವಂದಿಸುತ ಕಾಳೇಶ್ವರನ ನೀ । ಚಂದದಿಂದಲಿ ಹಂಸತೀರ್ಥದಿ । ಮಿಂದು ಶ್ರಾದ್ಧಾದಿಗಳ ಪಿತೃಕರ್ಮಗಳನಾಚರಿಸು ॥
ಬಂಧುನಂಗಳು ಹರಿದು ಪಾಪವು । ಬೆಂದು ಹೋಗುವುದೇನು ಚೋದ್ಯವು । ಮುಂದೆ ಪೂಜಿಸು ಕೃತ್ತಿವಾಸೇಶ್ವರನ ಮೋದದಲಿ ॥129॥

ಮತ್ತೆ ಮೀಯುತ ಶಂಭು ತೀರ್ಥದಿ । ಸತ್ಯರತ್ನೇಶ್ವರರ ಪೂಜಿಸು । ಮತ್ತೆ ದಕ್ಷೇಶ್ವರನ ಪೂಜಿಸು ಭಾವಭಕುತಿಯಲಿ ॥
ಮತ್ತೆ ಪೂಜಿಸು ಭಕುತಿಯಲಿ ಚತು- । ರ್ವಕ್ತ್ರದೀಶ್ವರನನ್ನು ನಂತರ । ಸತ್ವರದಿ ತೆರಳುವುದು ವೃದ್ಧ ಸುಕಾಲತೀರ್ಥಕ್ಕೆ ॥130॥

ಮರಳಿ ಕಾಳೇಶ್ವರನ ಪೂಜಿಸು । ಹರುಷದಿಂದಪಮೃತ್ಯುವಿಶ್ವರನನು । ತಿರುಗಿ ಪೂಜಿಸು ಮಾಡು ಮಂದಾಕಿನಿಯ ಸ್ನಾನವನು ॥
ಪರಮ ಪಾವನ ಮಧ್ಯಮೇಶ್ವರ । ಗಿರದೆ ಪೂಜಿಸು ಜಂಬುಕೇಶ್ವರ- । ಗಿರದೆ ಪೂಜಿಸು ವಕ್ರತುಂಡನ ಭಜಿಸು ಭಾವದಲಿ ॥131॥

ಮತ್ತೆ ಹೋಗಾವಂಡಖಾತದ । ತೀರ್ಥಕಾಗಿಯೆ ಸ್ನಾನ ಮಾಡುತ । ಸ್ವಸ್ಥ ಚಿತ್ತದಿ ಶ್ರಾದ್ಧ ಕರ್ಮಾದಿಗಳನಾಚರಿಸು ॥
ಮತ್ತೆ ಪೂಜಿಸು ಭೂತಭೈರವ । ನಿತ್ತಪನು ಸಕಲಾರ್ಥಸಾಧನ । ಚಿತ್ತಶುದ್ಧದಿ ಪೂಜಿಸೀಶಾನೇಶ್ವರನ ಮುದದಿ ॥132॥

ಪೋಗಿ ಜೈಗಿಷವ್ಯ ಗುಹೆಯೊಳು । ಬಾಗಿ ತಲೆಯನು ಮುಂದೆ ತೆರಳೈ । ಬೇಗ ಘಂಟಾಕುಂಡ ಸ್ನಾನವ ಮಾಡು ಭಕ್ತಿಯಲಿ ॥
ಆಗ ವ್ಯಾಸೇಶ್ವರನ ಪೂಜಿಸಿ । ಯೋಗವನು ಸಾಧಿಸುತ ನಂತರ । ಪೋಗಿ ಪೂಜಿಸು ಕಂದುಕೇಶ್ವರನನ್ನು ಭಕ್ತಿಯಲಿ ॥133॥

ಜ್ಯೇಷ್ಠವಾಪಿಯ ಸ್ನಾನ ತೀರಿಸಿ । ಶ್ರೇಷ್ಠ ಜ್ಯೇಷ್ಠೇಶ್ವರನ ಪೂಜಿಸು । ಕಷ್ಟವಿಲ್ಲದೆ ಮುಂದೆ ಮೀಯಾ ಸಪ್ತಸಾಗರದಿ ॥
ತುಷ್ಟ ವಾಲ್ಮೀಕೀಶ್ವರನಿಗಾ । ಕೊಟ್ಟು ಪೂಜೆಯಭೀಮೊಟಜಕಾ । ದೃಷ್ಟಿಸುತ ಭೀಮೇಶ್ವರನನಾರಾಧಿಸೈ ಮುದದಿ ॥134॥

ಮಾತೃಪಿಂಡದ ತೀರ್ಥದಲಿ ಸು- । ಸ್ನಾತನಾಗುತ ಶ್ರಾದ್ಧವಿಧಿಯನು । ಪ್ರೀತಿಯಿಂದಲಿ ತೀರಿಸೈ ಪೈಶಾಚಮೋಚನದಾ ॥
ತೀರ್ಥದಲಿ ಮೀಯುತಲಿ ನಂತರ । ಪ್ರೀತಿಯಿಂದಲಿ ಪೂಜೆ ಮಾಡುವು । ದಾತಕೂಕ್ಷಣ ಕೇಳ್ಕಪರ್ದೇಶ್ವರಗೆ ಮೋದದಲಿ ॥135॥

ಮುಂದೆ ಕರ್ಕೋಟಕದ ತೀರ್ಥದಿ । ಮಿಂದು ಕರ್ಕೋಟಕತ ಈಶ್ವರ । ಗಂಧದಿಂದಲಿ ಪೂಜಿಸೈ ಬಾಲಕನೆ ಭಕ್ತಿಯಲಿ ॥
ಬಂದು ಬಳಿಕೀಶ್ವರನ ಗಂಗೆಗೆ । ಮಿಂದುದಾನಾದಿಗಳ ಮಾಳ್ಪುದು । ಚಂದದಿಂದಗ್ನೀಶ್ವರಗೆ ಪೂಜಿಪುದು ಭಕ್ತಿಯಲಿ ॥136॥

ಚಕ್ರಕುಂಡದಿ ಸ್ನಾನ ತೀರಿಸಿ । ಭಕ್ತಿಯಲಿ ಸ್ನಾನವನು ಮಾಡೈ । ಉತ್ತರಾರ್ಕನ ಪೂಜಿಸೈ ನೀ ಭಕ್ತಿಭಾವದಲಿ ॥
ಮತ್ಸ್ಯದರದಲಿ ಸ್ನಾನಮಾಡುತ । ಭಕ್ತಿಯಲಿ ಓಂಕಾರ ಶಿವನಿಗೆ । ಚಿತ್ತಶುದ್ಧದಿ ಪೂಜೆಮಾಡೈ ತಪ್ಪದಲೆ ಬಾಳಾ ॥137॥

ಪುನಹ ಕಪಿಲೇಶ್ವರಗೆ ಪೂಜಿಸು । ಋಣವಿಮೋಚನತೀರ್ಥ ಸ್ನಾನದೊ- । ಳಣುಗ ಕೇಳೈ ತೀರಿಸೈ ಶ್ರಾದ್ಧಾದಿ ಕರ್ಮಗಳಾ ॥
ನಿನಗೆ ಪಾಪವಿಮೋಚನದ ಬಹು । ವಿನುತ ತೀರ್ಥದಿ ವಿವುದಿಷ್ಟವು । ಮನದೊಳಿದ್ದಂತಾಗ ಮಾಳ್ಪುದು ಶ್ರಾದ್ಧ ಕರ್ಮಗಳಾ ॥138॥

ತೀರ್ಥವಿಹುದು ಕಪಾಲಮೋಚನ । ಭಕ್ತಿಯಲಿ ನೀಶ್ರಾದ್ಧ ತರ್ಪಣ- । ವಿತ್ತು ಪೂಜೆಯ ಮಾಡು ಕುಲಸ್ತಂಭದ ಸಮೀಪದಲಿ ॥
ತೀರ್ಥ ವಿಹುದೈ ಪುಣ್ಯ ಪಾವನ । ವೈತರಣಿ ನಾಮದಲಿ ಫಲವ । ತ್ಯುತ್ತಮವು ಗೋದಾನ ಮಾಡಲು ಪುಣ್ಯ ಬಹುವಿಹುದು ॥139॥

ಹೋಗಿ ಕಪಿಲಾಧಾರತೀರ್ಥಕೆ । ಬೇಗನೆಸಗೈ ಶ್ರಾದ್ಧಸ್ನಾನವ । ತ್ಯಾಗಮಾಡಿರಿ ವಿಪ್ರರಿಗೆ ಗೋದಾನ ವಿಧಿಯುಕ್ತಾ ॥
ಅಗವೃಷಭಧ್ವಜನ ಪೂಜಿಸಿ । ಬೇಗನಾ ಜಾಲಾನೃಸಿಂಹಗೆ । ಪೋಗಿ ಪೂಜಿಸು ಸಂಗಮದಿ ಕರುಣಾನದಿಯ ತಟದಿ ॥140॥

ಲೇಸಿನಿಂ ಶ್ರಾದ್ಧಾದಿ ತೀರಿಸಿ । ಕೇಶವಾದಿತ್ಯರನು ಪೂಜಿಸು । ತೋಷದಿಂದರ್ಚಿಸುವುದೈ ನೀನಾದಿಕೇಶವನಾ ॥
ಭಾಸುರದ ಪ್ರಹ್ಲಾದತೀರ್ಥದೊ । ಳಾಸುಮಂಗಲ ಸ್ನಾನಮಾಡುತ । ತೋಷದಿಂದಲಿ ಶ್ರಾದ್ಧ ಕರ್ಮಾದಿಗಳ ಮಾಡುವುದು ॥141॥

ಬಳಿಕ ಪ್ರಹ್ಲಾದೇಶ್ವರನ ನೀ । ನಲಿವಿನಿಂದಲಿ ಭಕ್ತಿಭಾವದಿ । ಚೆಲುವಿನಿಂ ಪೂಜೆಯನು ಮಾಡ್ಯೆ ಏಕಭಾವದಲಿ ॥
ಬಳಿಕ ಕಪಿಲಾಧಾರ ತೀರ್ಥದಿ । ತೊಳೆದು ಮೈಯನು ಭಕ್ತಿ ಭಾವದೊ । ಳಲಗದೆಯೆ ಪೂಜೆಯನು ಮಾಡ್ಯೆ ಮುಕ್ಕಣೇಶ್ವರನಾ ॥142॥
ಮೇಣಸಂಖ್ಯಾತೇಶ್ವರನ ನೀ । ಸಾನುರಾಗದಿ ಪೂಜೆ ಮಾಡ್ಯೆ । ಮೇಣ್ ಮಹಾದೇವನನು ಭಕ್ತಿಯೊಳರ್ಚಿಸ್ಯೆ ನೀನು ॥
ಮೇಣು ದ್ರುಪದೇಶ್ವರನ ಪೂಜಿಸು । ನೀನು ಗಂಗಾಯಮುನೆ ಸರಸತಿ । ಈ ನದಿಗಳಾ ಮೂರು ಲಿಂಗಗಳನ್ನು ಪೂಜಿಪುದು ॥143॥
ಕಾಮ್ಯ ತೀರ್ಥಕೆ ಹೋಗು ನಂತರ । ಕಾಮ್ಯದೀಶ್ವರನನ್ನು ವಂದಿಸು । ನಿರ್ಮಲದ ಗೋಪ್ರಕರ ತೀರ್ಥದಿ ಸ್ನಾನಮಾಡುವುದು ॥
ಸೌಮ್ಯತನದಲಿ ಪಂಚಗಂಗಾ- । ನಿರ್ಮಲೋಕದ ಸ್ನಾನಮಾಡಿ- । ನ್ನೊಮ್ಮೆ ಮರ್ಣಿಕರ್ಣಿಕೆಯ ಸ್ನಾನದಿ ವಿಧಿಯ ತೀರಿಪುದು ॥144॥
ತೀರಿಸ್ಯೆ ಜಲಶಾಯಿಪೂಜೆಯ । ಮಾರುತಿಯ ನಂತರಕೆ ವಂದಿಸು । ಸೇರುವುದು ಮೋದಾದಿ ಪಂಚವಿನಾಯಕರ ಸ್ಥಳಕೆ ॥
ಚಾರುತರದಲಿ ಅನ್ನಪೂರ್ಣೆಗೆ । ತೋರಿಪುದು ಪೂಜೆಯನು ನಂತರ । ತೀರಿಸ್ಯೆ ಪೂಜೆಯನು ಧುಂಡೀರಾಜನಿಗೆ ಮುದದಿ ॥145॥
ಜ್ಞಾನವಾಪಿಯ ವಿಧಿಪುರಸ್ಸರ । ಸ್ನಾನವನು ತೀರಿಸುತ ಮುಂದಕೆ । ಧ್ಯಾನಪೂರ್ವಕ ಪೂಜಿಸ್ಯೆ ಜ್ಞಾನೇಶ್ವರನ ಮುದದಿ ॥
ಮೇಣು ಪೂಜಿಸು ದಂಡಪಾಣಿಯ । ನೀನು ಹೋಗ್ಯೆ ಮೋಕ್ಷಲಕ್ಷ್ಮಿಯ । ಸ್ನಾನಕಾನಂತರದಿ ಪೂಜಿಸು ಪಂಚಪಾಂಡವರಾ ॥146॥
ದ್ರೌಪದೀದ್ರುಪದರ ವಿನಾಯಕ- । ತಾಪಹರನಾನಂದಭೈರವ । ನಾ ಪರಿಯಲಿ ವಿಮುಕ್ತ ಈಶ್ವರನನ್ನು ಪೂಜಿಸುತಾ ॥
ಈ ಪರಿಯೊಳಾ ಸಕಲ ಯಾತ್ರೆಯ । ಲೋಪವಿಲ್ಲದೆ ಮಾಡಿ ಪುನರಪಿ । ಯಾಪಿನಾಕಿಯ ವಿಶ್ವನಾಥನ ಬಂದು ನೋಡುವುದು ॥147॥
ಇಂತು ತೀರಿಸಿ ಯಾತ್ರೆಯನು ನೀ । ಸಂತಸದಿ ವಿಶ್ವೇಶ್ವರನ ಬಳಿ । ನಿಂತು ನೀನೀ ಪುಣ್ಯ ಪಾವನ ಶ್ಲೋಕ ನುಡಿಯುವುದು॥
ಉತ್ತರಮಾನಸಯಾತ್ರೆಯಂ । ಯಥಾವದ್ಯಾ ಮಯಾಕೃತಾ ॥ ನ್ಯೂನಾತಿರಿಕ್ತಯಾ ಶಂಭುಃ । ಪ್ರೀಯತಾಮನಯಾ ವಿಭೋ॥

ಉತ್ತರದ ಮಾನಸದ ಯಾತ್ರೆಯ । ಭಕ್ತಿಪೂರ್ವಕ ಮಾಡಿದೆನು ನ್ಯೂ- । ನಾತಿರಿಕ್ತತೆಯರಿಯೆ ಶಂಭು ಪ್ರಸನ್ನತೆಯ ಪಡಲಿ ॥
ಚಿತ್ತಶುದ್ಧದೊಳಾಪರಿಯೊಳೆ- । ನ್ನುತ್ತ ಮುಂದಕೆ ಪಂಚಕ್ರೋಶದ । ಯಾತ್ರೆಯಾರಂಭಿಸುವುದೈ ನೀ ವಿಧಿಪುರಸ್ಸರದಿ ॥148॥

ಸಿದ್ಧನೀಪರಿ ಪೇಳ್ದ ಶಿಷ್ಯಗೆ । ಶುದ್ಧ ಮೋಕ್ಷದ ದ್ವಾರವಾಗಿಹ । ಶುದ್ಧ ಬುದ್ಧ ಮನೋಹರದ ಗುರುಚರಿತಕಥನವನು ॥
ಶುದ್ಧ ಮನದಲಿ ಕೇಳುವವರಿಗೆ । ಸಿದ್ಧಿಯಪ್ಪುದು ಕಾಮಿತಾರ್ಥವು । ದಗ್ಧವಾಗುವುದೆಲ್ಲ ಪಾಪವು ವಿಷ್ಣುವಚನವಿದು ॥149॥

॥ ಅಧ್ಯಾಯ 41 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 42

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥
॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥
॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುವು ಸಾಯಂದೇವನಿಂಗಾ । ಪರಿಪರಿಯ ಯಾತ್ರಾವಿಧಾನವ । ನರುಹಿ ಕೊಟ್ಟನು ವರವನಾತನ ಪೂಜೆಗತಿ ಮೆಚ್ಚಿ॥

ಮೂರು ಲೋಕದಿ ತಿರುತಿರುಗಿ ಭಾ- । ಗೀರಥಿಯು ಮಾನವರ ಪಾಪದ । ಮೇರುಗಳ ಸಂಹಾರ ಮಾಳ್ಪಳು ವೇದಸಮ್ಮತವು ॥
ಧಾರುಣಿಯೊಳೀ ತೆರದಿ ಗಂಗೆಗೆ । ಸೇರಿರುವ ಪಾಪೌಘಗಳ ಸಂ- । ಹಾರ ಮಾಳ್ಪನು ಗುರುವು ದರ್ಶನ ಮಾತ್ರದಲಿ ತಿಳಿಯೆ ॥1॥
ಹರುಷದಿಂ ಸಂಕಲ್ಪ ಮಾಡುತ । ತೆರಳು ಸ್ವರ್ಗದ್ವಾರ ಭುವನಕೆ । ಭರದಿ ಗಂಗಾಕೇಶವನ ಪೂಜಿಸುತ ಭಕ್ತಿಯಲಿ ॥
ತೆರಳುವುದು ಹರಿಚಂದ್ರಮಂಟಪ । ಕಿರದೆ ಸ್ವರ್ಗದ್ವಾರವೆಂದರೆ । ಮೆರೆವುದೈ ಮಣಿಕರ್ಣಿಕಾ ತೀರ್ಥವು ಕಣಾ ಮುಂದೆ ॥2॥
ಮಿಂದು ಮಣಿಕರ್ಣಿಕೆಯ ತೀರ್ಥದಿ । ತಿಂದು ಹವಿಷಾನ್ನವನು ವಿಧಿಯಲಿ । ಹಿಂದಿನಾದಿನ ಹಿಡಿದು ಶುಚಿಯಾಚರಣವಿರಬೇಕು ॥
ಮುಂದೆ ಪ್ರಾತಃಕಾಲದಲಿ ಬಹು । ಚಂದದಿಂದಲಿ ಗಂಗೆಯೊಳಗಾ- । ನಂದದಿಂದಲಿ ಮಿಂದು ವಂದಿಸು ಧುಂಡಿರಾಜನನು ॥3॥

ಚರಣಕೆರಗುತ ಧುಂಡಿರಾಜಗೆ । ಕರುಣವಚನದಿ ಬೇಡಿಕೊಂಬುದು । ಕರುಣಿಸೈ ಯೆರಡನೆಯ ದರ್ಶನವೆಂದು ವಿನಯದಲಿ ॥
ತಿರುಗಿ ಗಂಗೆಯ ವಂದಿಸುತ ನೀ । ತೆರಳು ವಿಶ್ವೇಶ್ವರನ ಭುವನಕೆ । ಭರದಿ ಪೂಜಿಸು ಅವನ ಮೇಣು ಭವಾನಿಶಂಕರನಾ ॥4॥

ಮತ್ತೆ ಹೋಗೈ ಭಕ್ತಿಭಾವದಿ । ಮುಕ್ತಿಮಂಟಪಕಾಗಿ ಹರುಷದಿ । ಮತ್ತೆರಡನೇ ಪೂಜೆಮಾಡೈ ಧುಂಡಿರಾಜನಿಗೆ ॥
ಮತ್ತೆ ವಿಶ್ವೇಶ್ವರನ ಪೂಜೆಯ । ಸ್ವಸ್ಥಚಿತ್ತದಿ ಮಾಡು ನಂತರ । ವಿಸ್ತರಿಸು ಮೋದಾದಿ ಪಂಚವಿನಾಯಕರ ಪೂಜೆ ॥5॥

ಚರಣಕೆರಗುತ ದಂಡಪಾಣಿಗೆ । ಮರಳಿ ನೀನಾನಂದಭೈರವ । ಗಿರದೆ ಪೂಜಿಸಿ ತಿರುಗಿ ಬಾ ಮಣಿಕರ್ಣಿಕೆಗೆ ಮುದದಿ ॥
ಹರನ ಸಿದ್ಧಿವಿನಾಯಕನ ನೀ । ಮರಳಿ ಗಂಗಾಕೇಶವನ ಮ- । ತ್ತಿರದೆ ಲಲಿತಾದೇವಿಯನು ಪೂಜಿಪುದು ಮೋದದಲಿ ॥6॥

ರಾಜಸಿದ್ಧೇಶ್ವರನ ಧ್ಯಾನಿಸು । ಪೂಜಿಸೈ ನೀ ದುರ್ಲಭೇಶ್ವರ । ಪೂಜಿಸೈ ನೀ ಸೋಮನಾಥನ ಭಾವಭಕುತಿಯಲಿ ॥
ರಾಜಿಸುತ್ತಿಹ ಶೂಲಕಂಠನ । ಪೂಜಿಸು ವರಾಹೇಶ್ವರನ ಮೇಣ್ । ಪೂಜಿಸುವುದು ದಶಾಶ್ವಮೇಧನ ಪರಮ ಸಂತಸದಿ ॥7॥

ವಂದಿದೇವಿಗೆ ವಂದಿಸುತಲಾ- । ನಂದದಿಂ ಸರ್ವೇಶ್ವರನ ನೀ । ವಂದಿಸೈ ಮನಮುಟ್ಟಿ ಕೇದಾರೇಶ್ವರನ ಮುದದಿ ॥
ಮುಂದೆ ಹನುಮಂತೇಶ್ವರನ ಬಹು । ಚಂದದಿಂದಲಿ ಸಂಗಮೇಶ್ವರ । ಗಂದು ಪೂಜಿಸು ಬಳಿಕ ಲೋಕಾರ್ಕನನು ವಂದಿಪುದು ॥8॥

ಪೂಜಿಸಲರ್ಕವಿನಾಯಕನನು ವಿ- । ರಾಜಿಸುತಿಹ ತೀರ್ಥ ದುರ್ಗಾ । ಪೂಜಿಸಾರ್ಯಾದುರ್ಗೆಯನು ದುರ್ಗಾಗಣೇಶನನು ॥
ಈ ಜಗದೊಳೆರಡನೆಯ ಭೇಟಿಯ । ನೀ ಜಗತ್ಪಾಲಕನೆ ಪಾಲಿಸು । ಪೂಜಿಸುವೆ ನಿನಗೆಂದು ಬೇಡುವುದವನ ಸನ್ಮುಖದಿ ॥9॥

ತಿರುಗಿ ವಿಶ್ವಕ್ಸೇನ ಹರಗಾ- । ದರದಿ ಪೂಜಿಸಿ ಕರ್ದಮದಿ ನೀ । ನುರುತರದಿ ಮೀಯುತ್ತ ಪೂಜಿಸು ಕರ್ದಮೇಶ್ವರನಾ ॥
ತಿರುಗಿ ಕರ್ದಮಕೂಪದಲಿ ಹೋ । ಗಿರದೆ ಪೂಜಿಸು ಸೋಮನಾಥನ । ತಿರುಗಿ ವಿರುಪಾಕ್ಷನನು ಸೂಜಿಸು ಭಾವಭಕುತಿಯಲಿ ॥10॥

ಬಾಲ ನೀ ಕರ ಜೋಡಿಸುತಲಾ । ನೀಲಕಂಠನ ಕರ್ದಮೇಶನ । ಲೀಲೆಯಿಂ ಪೂಜಿಸುತಲೆರಡನೆ ಭೇಟಿ ಕೊಡು ಯೆನುತಾ ॥
ಕಾಲಿಗೆರುಗುತ ಬೇಡಿ ಕೊಳ್ಳ್ಳ । ಮೇಲೆ ಹೋಗಾ ನಾಗನಾಥಗೆ । ಮೇಲೆ ಚಾಮುಂಡಿಯನು ಪೂಜಿಸು ಭಾಹಭಕುತಿಯಲಿ ॥11॥
ತರಳ ಮೋಕ್ಷೇಶ್ವರನ ಪೂಜಿಸು । ಮರಳಿ ವರುಣೇಶ್ವರನ ವಂದಿಸು । ತಿರುಗಿ ಪೂಜಿಸು ವೀರಭದ್ರನ ದ್ವಿತಿಯ ದುರ್ಗೆಯನು ॥
ಮರಳಿ ವಿಕಟಾಕ್ಷನನು ಪೂಜಿಸು । ಭರದಿ ಭೈರವನನ್ನು ವಂದಿಸು । ತಿರುಗಿ ವಿಮಳಾರ್ಜುನನ ಬಳಿಕಾ ಕಾಳಕೂಟವನು ॥12॥
ಪೂಜಿಸು ಮಹಾದೇವನನು ನೀ । ಪೂಜಿಸೈಯಾ ನಂದಿಕೇಶನ । ಪೂಜಿಸೈ ಭೈರವನ ಭೃಂಗೇಶ್ವರನ ನೇಮದಲಿ ॥
ಪೂಜಿಸೈ ಗಣವಿಪ್ರನನು ನೀ । ಪೂಜಿಸು ವಿರೂಪಾಕ್ಷನನು ನೀ । ಪೂಜಿಸೈ ಯಕ್ಷೇಶ್ವರನ ವಿಮಲೇಶ್ವರನ ಮುದದಿ ॥13॥
ನೀನು ಪೂಜಿಸು ಭೀಮಚಂಡಿಯ । ಮೇಣು ಚಂಡಿವಿನಾಯಕನ ನೀ । ಮೇಣು ರವಿರಕ್ಷಾ ಕ್ಷಗಂಧರ್ವನನು ಮೋದದಲಿ ॥
ನೀನು ಜ್ಞಾನೇಶ್ವರನ ಪೂಜಿಸು । ಮೇಣು ಅಮೃತೇಶ್ವರನ ನಂತರ । ಸಾನುರಾಗದಿ ಪೂಜಿಸೈ ಗಂಧರ್ವಸಾಗರನಾ ॥14॥
ನರಕಸಾಗರ ದಾಟುವರೆ ನೀ । ನೆರಗು ಕಾಲಿಗೆ ಭೀಮಚಂಡಿಗೆ । ತಿರುಗಿ ದರ್ಶನ ದೊರೆಯಲೆನುತಲಿ ಬೇಡಿಕೊಳ್ಳುವುದು ॥
ಮರಳಿ ಯೊಂದಡಿಗಣಪತಿಯ ನೀ । ಭರದಿ ಪೂಜಿಸು ಭೈರವನ ನೀ । ನಿರದೆ ಪೂಜಿಸು ಸಂಗಮೇಶ್ವರನನ್ನು ಭರವಸದಿ ॥15॥
ಭೂತನಾಥನ ಸೋಮನಾಥನ । ಖ್ಯಾತಿನಿರುತಿಹ ಕಾಲನಾಥನ । ಭೀತಿಯಿಲ್ಲದೆ ಪೂಜಿಸು ಕಪರ್ದೇಶ್ವರನ ಬಳಿಕಾ ॥
ಪ್ರೀತಿಯಲಿ ನಾಗೇಶ್ವರನ ನೀ । ಪೂತಕಾಮೇಶ್ವರಗಣೇಶರ । ನೀತರಳ ವಿಶ್ವೇಶ್ವರನ ಪೂಜಿಪುದು ಭಕ್ತಿಯಲಿ ॥16॥
ಪೂಜಿಸು ಚತುರ್ಮುಖವಿನಾಯಕ । ಪೂಜಿಸೈ ದೇಹಲಿ ವಿನಾಯಕ । ಪೂಜಿಸೈ ನೀ ಬಳಿಕ ಭರದಿ ಗಣೇಶಷೋಡಶರಾ ॥
ಪೂಜಿಸೈ ನೀನುತ್ಕಲೇಶ್ವರ । ರಾಜಿಸುವುದದು ಬಹು ಮನೋಹರ । ಪೂಜಿಸೇಕಾದಶರ ರುದ್ರರ ಭಕ್ತಿಭಾವದಲಿ ॥17॥

ತೆರಳುವುದು ತಪಭೂಮಿಗಾನಂ । ತರದಿ ರಾಮೇಶ್ವರನ ಪೂಜಿಸು । ಮರಳಿ ಸೋಮೇಶ್ವರನ ಭರತೇಶ್ವರನ ಪೂಜಿಪುದು ॥
ತಿರುಗಿ ಪೂಜಿಸು ಲಕ್ಷ್ಮಣೇಶ್ವರ । ಮರಳಿ ಶತ್ರುಘ್ನೇಶ್ವರನ ನೀ । ಧರಣಿದೇವಿಯನರ್ಚಿಸೈ ನೀ ಹರುಷಭಾವದಲಿ ॥18॥

ಬಳಿಕ ನಹುಷೇಶ್ವರನ ಪೂಜಿಸಿ । ಕೊಳುತ ರಾಮೇಶ್ವರನ ಧ್ಯಾನವ । ವೊಲಿದು ಕೊಡು ದರ್ಶನವ ಪುನರಪಿಯೆಂದು ಬೇಡುವುದು ॥
ತಿಳಿಯಲಗಣಿತ ತೀರ್ಥ ವರುಣವು । ನೆಲದೊಳಿರುವವು ಲಿಂಗವಗಣಿತ । ನಲಿವಿನಿಂದಲಿ ಪೂಜೆಯನು ಮಾಡಿರಿ ಸುಭಾವದಲಿ ॥19॥

ಇರುವುದೈ ಮುಂದಕ್ಕೆ ಲಿಂಗವು । ಪರಮಪಾವನ ಹೆಸರು ಸಿದ್ಧೇ । ಶ್ವರನೆನುತಲಿದ ಕರೆವರೈ ನೀನದಕೆ ವಂದಿಪುದು ॥
ತಿರುಗಿ ಪಶುಪಾಣಿಯ ವಿನಾಯಕ । ಗಿರದೆ ಪೂಜೆಯ ಮಾಡಿ ಪೃಥ್ವೀ । ಶ್ವರನ ಪೂಜಿಸು ಶರಯುಕೂಪದಿ ಸ್ನಾನ ಮಾಡಾಗಾ ॥20॥

ಮರಳಿ ಕಪಿಲೋದ್ಧಾರತೀರ್ಥದಿ । ವಿರಚಿಸುತ ಸ್ನಾನವನು ನಂತರ । ತೆರಳು ವೃಷಭಧ್ವಜನ ಪೂಜೆಗೆ ಭಕ್ತಿಭಾವದಲಿ ॥
ತಿರುಗಿ ಜ್ವಾಲಾನರಹರಿಯ ಪದ- । ಕೆರಗಿ ಹರುಷದಿ ಮುಂದೆ ನಡೆವುದು । ವರುಣಸಂಗಮಸ್ನಾನ ತೀರಿಸಿ ಶ್ರಾದ್ಧ ಮಾಡುವುದು ॥21॥

ತೋಷದಿಂದಲಿ ಸಂಗಮೇಶ್ವರ- । ನೀಶನನು ಬಾಲಕನೆ ನಂತರ । ತೋಷಿಸೈ ಪೂಜೆಯಲಿ ಸರ್ವವಿನಾಯಕನ ಮುದದಿ ॥
ಕೇಶವನ ನಂತರದಿ ಪೂಜಿಸು । ಲೇಸಿನಿಂ ಮುಂದಕ್ಕೆ ಪ್ರಹ್ಲಾ- । ದೇಶ್ವರನ ಪೂಜಿಸುತ ಕಪಿಲಾತೀರ್ಥದಲಿ ಮೀಯು ॥22॥

ಮೂರು ಕರ್ಣೇಶ್ವರನ ಪೂಜೆಯ । ತೀರಿಸುತಲಾ ಪಂಚಗಂಗಾ । ತೀರದಲ್ಲಿಯೆ ಪೂಜಿಸುವುದು ಮಹೇಶನನು ಮುದದಿ ॥
ತೋರುವನು ಕೇಳ್ಬಿಂದುಮಾಧವ । ನೇರಿಸೈಪೂಜೆಯನು ಮಂಗಳ- । ಗೌರಿಯನು ಪೂಜಿಸು ಗಭಸ್ತೇಶ್ವರನ ನಂತರದಿ ॥23॥

ವಾಮದೇವವಸಿಷ್ಠರನು ನೀ । ನೇಮದಿಂದಲಿ ಪೂಜಿಸುವುದಾ । ರಾಮಣೀಯಕ ಪರ್ವತೇಶ್ವರನನ್ನು ವಂದಿಪುದು ॥
ಆ ಮಹೇಶ್ವರನನ್ನು ಪೂಜಿಸಿ । ನೇಮದಿಂದಲಿ ಸಿದ್ಧ ಗಣಪತಿ । ಕೂರ್ಮೆಯಿಂದಲಿ ಸಪ್ತಪರ್ಣೇಶ್ವರನ ಪೂಜಿಪುದು ॥24॥

ಬಳಿಕ ಪೂಜಿಸು ಸರ್ವಗಣಪತಿ । ವೋಲಿಸಿಮಣಿ ಕರ್ಣಿಕೆಗೆ ತೆರಳುವು । ದಿಳಿಯುತಲಿ ಮೇಣಲ್ಲಿ ಸ್ನಾನವ ಮಾಡಿ ಹರುಷದಲಿ ॥
ಬಳಿಕ ವಿಶ್ವೇಶ್ವರನ ಪೂಜಿಸು । ನಲವಿನಿಂದ ಮಹೇಶನರ್ಚನೆ- । ಗಳನು ತೀರಿಸಿ ಮುಕ್ತಿಮಂಟಪಕಾಗಿ ತೆರಳುವುದು ॥25॥

ಹರಿಯ ನಮಿಸುತ ದಂಡಪಾಣಿಗೆ । ಕರವ ಜೋಡಿಸಿ ಧುಂಡಿರಾಜಗೆ । ಮರಳಿ ನೀನಾನಂದಭೈರವನನ್ನು ಪೂಜಿಪುದು ॥
ಎರಗುತಾದಿತ್ಯೇಶನಿಗೆ ನೀ । ಭರದಿ ಪೂಜಿಸಿ ನಮಿಸಬೇಕಾ- । ದರದಿ ನೀ ಮೋದಾದಿ ಪಂಚವಿನಾಯಕರ ಮುದದಿ ॥26॥

ವಿಶ್ವನಾಥನ ಮರಳಿ ಪೂಜಿಸು । ಮೋಕ್ಷಲಕ್ಷ್ಮಿ ವಿಲಾಸವಲಿ ನೀ । ನಿಶ್ಚಲಾಂತಃಕರಣದಲಿ ಪಠಿಸುವುದು ಈ ಶ್ಲೋಕಾ॥

ಜಯ ವಿಶ್ವೇಶ ವಿಶ್ವಾತ್ಮನ್ । ಕಾಶೀನಾಥ ಜಗತ್ಪತೇ । ತ್ವತ್ಪ್ರಸಾದಾನ್ಮಹಾದೇವ । ಕೃತಾ ಕ್ಷೇತ್ರ ಪ್ರದಕ್ಷಿಣಾ ॥
ಅನೇಕಜನ್ಮ ಪಾಪಾನಿ । ಕೃತಾನಿ ಮಮ ಶಂಕರ । ಗತಾನಿ ಪಂಚಕ್ರೋಶಾತ್ಮಾ । ಕೃತಾಲಿಂಗ ಪ್ರದಕ್ಷಿಣಾ ।

ಕಾಶಿನಾಥ ಜಗತ್ಪತಿಯೆ ವಿ- । ಶ್ವೇಶ ವಿಶ್ವಾತ್ಮಕನೆ ನಿನ್ನ ಕೃ । ಪಾಶ್ರಯದೊಳಾಯ್ತಿಲ್ಲಿ ಕ್ಷೇತ್ರ ಪ್ರದಕ್ಷಿಣೆಯು ಭರದಿ ॥
ದೋಷಗಳ ಜನ್ಮಾಂತರದಿ ನಾ । ಬೇಸರಿಲ್ಲದೆ ಮಾಡಿಹೆನು ತ । ದ್ದೋಷರಾಶಿಗಳೆಲ್ಲ ಸುಟ್ಟವು ಕಾಶಿಯಾತ್ರೆಯಲಿ ॥27॥

ಇಷ್ಟು ಮಂತ್ರೋಚ್ಚಾರ ಮಾಡುತ । ಲಿಷ್ಟ ದೇವತೆ ಶಿವನ ಧ್ಯಾನಿಸಿ । ನೆಟ್ಟನೈ ತರುವುದು ಪುನಹವಾಮುಕ್ತಿಮಂಟಪಕೆ ॥
ಅಷ್ಟ ಮಂಟಪಗಳನು ವಂದಿಸಿ । ಶ್ರೇಷ್ಠವೀ ತೀರ್ಥದಲಿ ಯಾತ್ರಾ । ಕಟ್ಟಳೆಯ ತೀರಿಸುವುದೈ ನೀ ಬಾಲಕನೆ ನೋಡು ॥28॥

ಮುಕ್ತಿಮಂಟಪ ಸ್ವರ್ಗಮಂಟವ । ಮತ್ತೆ ಕೇಳೈಶ್ವರ್ಯಮಂಟಪ । ಮತ್ತಿರುವುದಾಜ್ಞಾನಮಂಟಪ ನಾಲ್ಕನೇ ಸ್ಥಾನಾ ॥
ಸ್ವಸ್ಥ ದಲಿಯಾಮೋಕ್ಷಲಕ್ಷ್ಮೀ । ಚಿತ್ರದಾಸ್ಥಾನವು ವಿಲಾಸವು । ಚಿತ್ರಮಂಟಪ ಮಂಟಪಗಳಾನಂದವೈರಾಗ್ಯಾ ॥29॥

ಕಾಶಿಯಲಿ ಯಾರಿಹರು ನಿತ್ಯ ನಿ- । ವಾಸಿಗಳ ಯಾತ್ರಾ ಪ್ರಕಾರವ । ಲೇಸಿನಿಂದಲಿ ಪೇಳುವೆನು ನಿನಗರಿವ ತೆರದಂತೆ ॥
ಪೂಸಿ ಮೈಗೆಂಣೆಯನು ಪುಷ್ಕರ । ಭಾಸುರದ ತೀರ್ಥದಲಿ ಮೀಯುತ । ಭೂಸುರರ ಪೂಜಿಸುತ ಪಿತೃದೇವರನು ತರ್ಪಿಸುತಾ ॥30॥

ತೆರಳು ದ್ರುಪದಾದಿತ್ಯ ಈಶ್ವರ । ವರರ ಪೂಜಿಸಿ ದಂಪತೇಶ್ವರ- । ಚರಣಕಭಿನಂದಿಸುತ ಶ್ರೀವಿಷ್ಣುವನು ಪೂಜಿಸುದು ॥
ತಿರುಗಿ ನಮಿಸಾ ದಂತ ಪಾಣಿಯ । ಮರಳಿ ನೋಡು ಮಹೇಶ್ವರನ ಪದ । ಸರಸಿಜವ ವಂದಿಸುತ ಪೂಜಿಸು ಧುಂಡಿರಾಜನನು ॥31॥

ಮಿಂದು ನೀನಾ ಜ್ಞಾನತೀರ್ಥದಿ । ನಂದಿಕೇಶ್ವರನನ್ನು ಪೂಜಿಸು । ಮುಂದೆ ಪೂಜಿಸು ತಾರಕೇಶ್ವರನನ್ನು ಭಕ್ತಿಯಲಿ ॥
ವಂದಿಸು ಮಹಾಕಾಳನೀಶನ । ಚಂದದಿಂ ಕರದಂಡಗಣಪತಿ । ಮುಂದೆ ಪೂಜಿಸು ವಿಶ್ವನಾಥನನೇಕಭಾವದಲಿ ॥32॥

ಪೂಜಿಸೈ ಕಾಶೀಶ್ವರನ ನೀ । ರಾಜಿಸುವ ಪ್ರತಿಪದೆಯ ದಿವಸದಿ । ರಾಜಿಸುವ ಮತ್ಸ್ಯೋದರದಿ ಸ್ನಾನವನು ತೀರಿಸುತಾ ॥
ಬೀಜೆತಿಜೆದಿವಸದಲಿ ಭಕ್ತಿಲಿ । ಪೂಜಿಪುದು ಮುಕ್ಕಣ್ಣ ದೇವನ । ರಾಜಿಸುವವೈಯಲ್ಲಿ ಲಿಂಗಗಳೆರಡು ನೋಡುವುದು ॥33॥

ನಾಲಕನೆ ತಿಥಿ ಕಾಂಚಿಲಿಂಗವು । ಮೇಲೆ ರತ್ನೇಶ್ವರನು ಪಂಚಮಿ । ಲೋಲ ಚಂದ್ರೇಶ್ವರನ ಷಷ್ಠಿಯ ದಿವಸ ಪೂಜಿಪುದು ॥
ಏಳನೇ ಕೇದಾರನೀಶನು । ಮೇಲೆ ಧೂಮ್ರೇಶ್ವರನು ಅಷ್ಟಮಿ । ಮೇಲೆ ವಿಶ್ವೇಶ್ವರನು ನವಮಿಯ ದಿನದಿ ಪಾವನನು ॥34॥

ಹತ್ತನೆಗೆ ಕಾಮೇಶ್ವರನು ಕೇಳ್ । ಮತ್ತೆ ವಿಶ್ವೇಶ್ವರನ ನಂತರ । ಭಕ್ತಿಯಲಿ ಮಣಿಕರ್ಣಿಕೇಶ್ವರ ದ್ವಾದಶಿಯ ದಿವಸ ॥
ಆ ತ್ರಯೋದಶಿ ದಿವಸವಲಿ ಯವಿ । ಮುಕ್ತನೀಶ್ವರ ವಂದ್ಯ ನಂತರ । ವಿಸ್ತರಿಸು ವಿಶ್ವೇಶ್ವರನ ಪೂಜೆಯನು ನೇಮದಲಿ ॥35॥

ಅರುಹುವೆನು ನಾನೀಗ ಬಾಲನೆ । ನರನು ಕಾಶೀವಾಸಿಯಾಗಲು । ದರದಿವಸ ಯಾತ್ರೆಯ ಪ್ರಕಾರವ ಕೃಷ್ಣ ಪಕ್ಷದಲಿ ॥
ವರುಣ ನದಿಯಲಿ ಮಿಂದುಶೈಲೇ- । ಶ್ವರನ ದರ್ಶನ ಕೊಂಡು ಸಂಗಮ । ಹರನ ಪೂಜಿಸು ಸಂಗಮದಿ ತೀರಿಸುತ ಸ್ನಾನವನು ॥36॥

ಸ್ವರ್ಗ ತೀರ್ಥದಿ ಸ್ನಾನ ತೀರಿಸಿ । ಸ್ವರ್ಗದೀಶ್ವರನನ್ನು ಪೂಜಿಸು । ಸ್ವರ್ಗನದಿ ಮಂದಾಕಿನಿಯ ಸ್ನಾನವನು ತೀರಿಸುತಾ ॥
ಯೋಗ್ಯ ತರದಲಿ ಮಧ್ಯಮೇಶ್ವರ- । ಗರ್ಘ್ಯಪಾದಾದಿಗಳ ಕೊಡುತಲಿ । ಯೋಗ್ಯ ಪೂಜೆಯ ಮಾಡು ಬಾಲನೆ ಭಾವಭಕುತಿಯಲಿ ॥37॥

ಮಿಂದು ಮಣಿಕರ್ಣಿಕೆಯ ತೀರ್ಥದೊ । ಳಂದು ಪೂಜಿಸು ಸ್ವಸ್ಥ ಚಿತ್ತದೊ । ಳಂದದಿಂದ ಹಿರಣ್ಯಗರ್ಭನಿಶಾನದೀಶ್ವರನಾ ॥
ಮಿಂದು ನೀನಾ ಧರ್ಮಕೂಪದಿ । ವಂದಿಸೈ ಗೋಪದ್ಮದೀಶ್ವರ । ಮುಂದೆ ಕಪಿಲಾಧಾರತೀರ್ಥದಿ ಸ್ನಾನ ಸಪ್ತಮಿಗೆ ॥38॥

ವಂದಿಸೈ ವೃಷಭಧ್ವಜೇಶಗೆ । ಮಿಂದು ಉದಶಾಂತೆಂಬ ಕೂಪದಿ । ವಂದಿಸುಪಶಾಂತೇಶ್ವರಗೆ ನೀ ಭಕ್ತಿಭಾವದಲಿ ॥
ಮುಂದೆ ಮೀಯುತ ಪಂಚ ಕುಂಡದಿ । ಚಂದದಿಂದಲಿ ಶಿವನ ಧ್ಯಾನಿಸಿ । ವಂದಿಸೈ ಜ್ಯೇಷ್ಠೇಶ್ವರನ ನೀನಾ ದಿನದಿ ಮುನದಿ ॥39॥

ಇರುವದು ಚತುಃಶರಧಿ ತೀರ್ಥವು । ಹರುಷದಿಂದಲಿ ಮಿಂದು ನೀನ । ಲ್ಲಿರದೆ ಪೂಜಿಸು ಕೇಳ್ಸಮುದ್ರೇಶ್ವರನನಾದಿವಸಾ ॥
ಇರುವುದೈ ಸನ್ಮುಖದಿ ತೀರ್ಥವು । ಭರದಿ ಸ್ನಾನವ ಮಾಡಿ ಶುಕ್ಲೇ- । ಶ್ವರನ ಪೂಜಿಸು ಭಕ್ತಿಭಾವದಿ ನೀನು ಆ ದಿನದಿ ॥40॥

ಮಿಂದು ನೀನಾದಂಡ ಖಾತದಿ । ವಂದಿಸೈ ನೀ ಭಕ್ತಿ ಭಾವದಿ । ಮುಂದಿರುವುದೈ ಶೌನಕೇಶ್ವರತೀರ್ಥ ಪಾವನವು ॥
ಮಿಂದು ತೀರ್ಥದ ಹೆಸರು ಲಿಂಗಕೆ । ವಂದಿಸೈ ವ್ಯಾಘ್ರೇಶ್ವರನ ನೀ । ಮಿಂದು ಜಂಬುಕತೀರ್ಥದಲಿ ವಂದಿಸುವುದಾಲಿಂಗಾ ॥41॥

ಹೇಳಿದೆನು ನಾನಿಂತು ನಿನಗೀ । ರೇಳು ಲಿಂಗದ ಪೂಜೆಯನ್ನಿ- । ರೇಳುದಿನದಲಿ ಪೂಜಿಪುದು ಕಾಶಿವಾಸಿಗಳು ॥
ಹೇಳುವೆನು ನಿನಗೊಂದು ಗುಹ್ಯವ । ಕೇಳು ಅಷ್ಟಮಿ ಎರಡು ಪಕ್ಷದಿ । ಭಾಳಲೋಚನಪೂಜೆ ಮಂಗಳದಾಯಕವು ನೋಡೆ ॥42॥

ತಾರಕೇಶ್ವರ ಮಧ್ಯಮೇಶ್ವರ । ನಾರ್ಮದೇಶ್ವರ ಪರ್ವತೇಶ್ವರ । ಚಾರು ಗಂಗೇಶ್ವರ ವಿರೂಪಾಕ್ಷೇಶ್ವರನು ಬಳಿಕಾ ॥
ಚಾರು ಮೋಕ್ಷೇಶ್ವರನು ಮತ್ತಾ । ಭಾರಿಭಕ್ತೇಶ್ವರನು ನೋಡಲು । ಧಾರುಣಿಯೊಳಿಹನಾ ಗಭಸ್ತೇಶ್ವರನು ಈ ಪರಿಯಾ ॥43॥

ಇಂತು ನವಲಿಂಗಗಳು ರಾಜಿಪು- । ವಂತೆ ಕಾಶೀಪುರದೊಳಷ್ಟಮಿ । ಶಾಂತರೂಪದಿ ಪೂಜೆ ಮಾಡಲು ಫಲ ವಿಶೇಷವಲಾ ॥
ಕಂತುಹರನೀ ರೂಪ ತಾಳಿದ । ಸಂತಸದಿ ಭಕ್ತರನು ಸಲಹುವ । ನಿಂತು ಕಾಶೀಪುರದಿ ಪುಣ್ಯ ಕ್ಷೇತ್ರದಲಿ ತಿಳಿಯೆ ॥44॥

ವಂದ್ಯ ವೀನವಲಿಂಗ ನಿನಗಿ- । ನ್ನೊಂದು ಗುಹ್ಯವ ಪೇಳ್ವೆನೈ ಹ- । ನ್ನೊಂದು ಲಿಂಗಗಳಿಹವು ತದ್ವತ್ ಪೇಳ್ವೆ ಹೆಸರುಗಳಾ ॥
ವಂದಿಸಲು ನೀ ಭಕ್ತಿ ಭಾವದಿ । ಬಂದು ಮುಕ್ತಿಯು ಸೆರಗ ಹಿಡಿವಳು । ಕುಂದನೆಣಿಸದೆ ಪೂಜಿಸೀ ಹನ್ನೊಂದು ಲಿಂಗಗಳಾ ॥45॥

ಇರುವನೈ ಅಗ್ನಿಧ್ರುವೇಶ್ವರ- । ನೆರಡನೇ ಕೇಳೂರ್ವಶೀಶ್ವರ- । ನಿರುವ ನಕುಲೇಶ್ವರ ಮನೋಹರ ಮೂರನೆಯ ಲಿಂಗ ॥
ಇರುವನಾಷಾಢೇಶ್ವರನು ನಂ- । ತರಕೆ ನೋಡಾ ಭಾರಭೂತೇ । ಶ್ವರನು ಲಾಂಗೂಲೇಶ್ವರನು ತ್ರಿಪುರಾಂತಕನು ಬಳಿಕಾ ॥46॥

ಇರುವನೆಂಟನೆ ಮನಪ್ರಕಾಮೇ- । ಶ್ವರನು ಒಂಭತ್ತನೆಯ ಪ್ರೀತೇ । ಶ್ವರನು ಮಂದಲಿಕೇಶ್ವರನು ಹತ್ತನೆಯ ಲಿಂಗವದು ।
ಇರುವನೈ ತಿಲಮದನದೀಶ್ವರ । ಪರಿಯೊಳೀ ಹದಿನೊಂದು ಲಿಂಗಗ- । ಳಿರದೆ ನೇಮದಿ ಪೂಜಿಸಲು ಕೇಳ ಸಕಲ ಸಿದ್ಧಿಯಲಾ ॥47॥

ಒರೆವೆ ನಿನಗಿನ್ನೊಂದು ಯಾತ್ರಾ- । ಪರಿಯ ಬಾಲನೆ ಕೇಳು ನೀನಾ । ಪರಿಯ ಮಾಡಲು ಪುಣ್ಯ ಬಹುವಿಹುದೇನ ಹೇಳುವೆನು ॥
ಭರದೊಳಾಸಿತ ಪಕ್ಷತಿಥಿಯಲಿ । ತಿರುಗಿ ಯಾತ್ರೆಗಳುಂಟು ಮಾಡೈ । ಧರಣಿಯೊಳು ಬಹು ಗುಹ್ಯವಿದು ನಿನಗೊಂದು ಹೇಳುವೆನು ॥48॥

ಸ್ನಾನವನು ಗೋಪ್ರೇಕ್ಷತೀರ್ಥದಿ । ಸಾನುರಾಗದಿ ಮಾಡಿ ಪೂಜಿಸು । ನೀನು ಬಳಿಕಾ ಭಾಳನೇತ್ರಕನನ್ನು ಮೋದದಲಿ ॥
ಮೇಣು ಜ್ಯೇಷ್ಠಾಂ ವಾಪಿಯಲಿ ನೀ । ಸ್ನಾನ ಮಾಡುತ ಜ್ಯೇಷ್ಠಗೌರಿಯ । ಧ್ಯಾನಪೂರ್ವಕ ಪೂಜೆಯ ನೀ ಮಾಡು ಸಂಭ್ರಮದಿ ॥49॥

ಜ್ಞಾನವಾಪಿಗೆ ಹೋಗುತಲ್ಲಿಯೆ । ಸ್ನಾನವನು ತೀರಿಸುತ ಮುಂದಕೆ । ನೀನು ಕೇಳ್ಶೃಂಗಾರಸೌಭಾಗ್ಯಗಳ ಗೌರಿಯರಾ ॥
ಸಾನುರಾಗದಿ ಪೂಜಿಸೈ ನೀ । ಮೇಣು ನೋಡು ವಿಶಾಲಗಂಗಾ- । ಸ್ನಾನ ತೀರಿಸಿ ಪೂಜಿಸುವುದು ವಿಶಾಲ ಗೌರಿಯನು ॥50॥

ಲಲಿತ ತೀರ್ಥದಿ ಸ್ನಾನ ತೀರಿಸಿ । ಲಲಿತೆ ದೇವಿಯ ಪೂಜೆ ಮಾಡೈ । ಬಳಿಕ ತೀರಿಸು ಸ್ನಾನ ಪಾವನ ತೀರ್ಥದಲಿ ಮುದದಿ ॥
ಬಳಿಕ ನೀ ಪೂಜಿಸು ಭವಾನಿಯ । ತೊಳೆದು ಮೈಯನು ಬಿಂದುತೀರ್ಥದಿ । ಬಳಿಕ ಮಂಗಳ ಗೌರಿಯನು ಪೂಜಿಪುದು ಭಕ್ತಿಯಲಿ ॥51॥

ಇಷ್ಟು ಪೂಜಿಸು ಶಕ್ತಿಯರ ನೀ । ಶ್ರೇಷ್ಠ ವಹ ಲಕ್ಷ್ಮಿಯನು ಪೂಜಿಸು । ಇಷ್ಟ ಸಿದ್ಧಿಗೆ ವಂದಿಸು ಗಣೇಶನ ಚತುರ್ಥಿಯಲಿ ॥
ಕೊಟ್ಟು ಮೋದಕ ಗೌರಿಪುತ್ರನಿ । ಗಿಷ್ಟ ಸಿದ್ಧಿಯ ಪಾಲಿಸೆಮಗೀ । ಬಟ್ಟೆಯಲಿ ಯಾತ್ರೆಯಲಿ ವಿಘ್ನವ ಸಂಹರಿಸು ಯೆಂದು ॥52॥

ತರಣಿಮಂಗಳವಾರಗಳಲಾ । ಚರಿಸಿರೈ ಭೈರವನ ಯಾತ್ರೆಯ । ಮರಳಿ ಷಷ್ಠಿಯ ದಿನದಿ ಮಾಡು ವಿಶೇಷ ನೇಮದಲಿ ॥
ತರಣಿವಾರದಿ ಸಪ್ತಮಿಯ ದಿನ । ಚರಿಸಿರೈ ದೇವರಿಗೆ ಯಾತ್ರೆಯ । ನಿರದೆ ನವಮ್ಯಷ್ಟಮಿಗಳಲಿ ಚಂಡಿಯರ ಯಾತ್ರೆಗಳಾ ॥53॥

ಅಂತರ್ಗೃಹಯಾತ್ರೆಯನು ನೀನು ನಿ- । ರಂತರದೊಳಾಚರಿಸಿ ಬಾಲನೆ । ಇಂತು ಕಾಶೀಖಂಡಯಾತ್ರೆಯ ಪೇಳಿದೆನು ನಿನಗೆ ॥
ಸಂತಸದೊಳೀ ತೆರದಿ ಯಾತ್ರೆಯ । ಕಂತುಹರ ಕ್ಷೇತ್ರದಲಿ ಮಾಡಲು । ಬಂತು ನಿನಗಿಷ್ಟಾರ್ಥಸಿದ್ಧಿಗಳೆಂದು ನೀ ನಂಬು ॥54॥

ಯಾತ್ರೆಯನು ತೀರಿಸುತ ನೀನಾ- । ಕ್ಷೇತ್ರದಲಿ ನಿನ್ನಯ ಹೆಸರಿನಲಿ । ಭೂತನಾಥನ ಲಿಂಗವನು ಸ್ಥಾಪಿಸುವುದೈ ಭರದಿ ॥
ಈ ತೆರದೊಳೀ ಯಾತ್ರೆ ಮಾಡಲು । ಮಾತ ಹೇಳುವೆ ನಿನ್ನ ಕಾಮಿತ । ಪೂರ್ತಿಯಾಗುವುದೇನು ಚೋದ್ಯವೆ ಗುರುಪ್ರಸಾದದಲಿ ॥55॥

ನಿನ್ನ ಚಿತ್ತದೊಳಿರುವ ಗುರುವು ಪ್ರ- । ಸನ್ನನಾಗುವನಂಜಬೇಡಲೆ । ಚೆನ್ನಿಗನು ಸಿದ್ಧೇಶ್ವರನು ಸಿದ್ಧಿಯನು ಕೊಡದಿರನು ॥
ನಿನ್ನ ಶ್ರೀಗುರುಚರಣ ಕಮಲಗ । ಳನ್ನು ಮನದಲಿ ಸ್ಥಾಪಿಸಲು ನಿನ- । ಗಿನ್ನು ದುರ್ಲಭವೇನೆನುತ ಹರಸಿದನು ಬಾಲನನು ॥56॥

ಎಂದು ತಾಪಸಿ ವಿಧವಿಧದಿ ನಲ । ವಿಂದ ಕಾಶೀಯಾತ್ರೆ ವಿಧಿಯನು । ಬಂದು ತಿಳಿಸಿದ ಬಾಲವಟುವಿಗೆ ಚೋದ್ಯವಾಯಿತಲಾ ॥
ಇಂದುಧರನೇ ಇವನು ಸದ್ಗುರು । ಬಂದು ತಿಳಿಸಿದನೆನಗೆ ಸಿದ್ಧಿಯು । ಬಂದಪುದು ನಿಜವೆಂದು ಮನದಲಿ ನಿರ್ಧರಿಸಿದನಲಾ ॥57॥

ನಾನು ನೋಡಾರಾಧಿಸದೆ ಗುರು । ತಾನೆ ದರ್ಶನ ಕೊಟ್ಟು ಹೇಳಿದ । ನೀನು ಕರುಣಾಮೂರ್ತಿಯೋ ತಾಯ್ತಂದೆಯೋ ಯೆನಗೆ ॥
ದಾನತಪಸಾಯಾಸವಿಲ್ಲದೆ । ತಾನೆ ವೊಲಿವವರಲ್ಲರನ್ಯರು । ಕ್ಷೋಣಿಯಲಿ ಶಿವನೊರ್ವನೊಲಿವನು ಗುರುಪ್ರಸಾದದಲಿ ॥58॥

ಗುರುಚರಣಕಮಲಗಳ ಮನದಲಿ । ಸ್ಮರಿಸಿ ಕಾಶೀಯಾತ್ರೆ ಮಾಡಿದ । ಪರಮ ವಿಧಿಪೂರ್ವಕದಿ ತಾಪಸ ಹೇಳಿದಂದದಲಿ ॥
ಹರನು ತ್ರಿಪುರಾಂತಕನು ಭವನಾ । ಶರಣರಘ ಸಂಹರನು ಬಾಲನ । ಪರಮ ಭಕ್ತಿಗೆ ಮೆಚ್ಚಿ ದರ್ಶನವಿತ್ತನಗಜೇಶಾ ॥59॥

ಹರನು ಮೆಚ್ಚಿದ ಬೇಡು ಬಾಲನೆ । ವರವ ನಿನ್ನಿಚ್ಛೆಯನು ಕೊಡುವೆನು । ಅರುಹೆನುತ ಹರ ನುಡಿಯಲಾಕ್ಷಣ ಬಾಲಕನು ಮುದದಿ ॥
ಗುರುವು ಗುರುಸತಿಪುತ್ರಪುತ್ರಿಯ- । ರೊರೆದ ವಸ್ತುಗಳನ್ನು ಬೇಡಿದ- । ನರೆಘಳಿಗೆಯಲಿ ಸರ್ವ ವಸ್ತು ವನಿತ್ತನಾ ಹರನು ॥60॥

ಹರುಷದಿಂದ ವಸ್ತುಗಳ ತಾ- । ನಿರದೆ ಕೊಟ್ಟನು ಮತ್ತೆ ನುಡಿದನು । ಭರದಿ ಕೊಟ್ಟೆನು ನಿನ್ನ ಭೀಷ್ಟವನೆಲ್ಲವನು ನಾನು ॥
ಹರಸುವೆನು ನಿನಗಾನು ಬಾಲನೆ । ಧರಣಿಯಲಿ ನಿನಗೆಲ್ಲ ವಿದ್ಯೆಯು । ಬರುವುದೈ ಕೌಶಲವು ನಿನಗರ್ಪಿಸಿದೆ ನಾ ಮುದದಿ ॥61॥

ಭಕ್ತಿಯನು ಗುರುವಿನಲಿ ಮಾಡಿದೆ । ತೃಪ್ತಿಯಾಯಿತು ಯೆನಗೆ ಸದ್ಗುರು- । ಭಕ್ತಿಯೆನಗರ್ಪಣವು ದೊರೆವುದು ನಿನಗೆ ಪುರುಷಾರ್ಥಾ ॥
ಶಕ್ತನಾದನು ಸೃಷ್ಟಿ ವಿರಚಿಸೆ । ಧಾತ್ರಿಯಲಿಯಸಹಾಯಶೂರನು । ಸತ್ವ ವೆಂತುಟೊ ಹರನ ಕರದಿಂ ವರವು ದೊರೆಯಿತಲಾ ॥62॥

ಗುರುವು ಗುರುಸತಿಪುತ್ರ ಪುತ್ರಿಯ- । ರೊರೆದ ವಸ್ತುಗಳನ್ನು ಕೊಟ್ಟನು । ಪರಮ ಸಂತೋಷದಲಿ ಬಾಲನಪ್ಪಿದನು ಗುರುವು ॥
ಹರುಷವಾಯಿತು ಮನದಿ ನೀನೇ । ಧರಣಿಯಲಿ ರಂಜಿಸುವೆ ಜ್ಞಾನದ । ಗಿರಿಯು ನೀನೇ ಸರ್ವವಿದ್ಯಾ ಕುಶಲ ನೀನಾಗು ॥63॥

ಮನೆ ಮನೋಹರ ಮಾಡಿ ಕೊಳ್ಳೈ । ಯೆನಗೆ ಚಿತ್ರ ವಿಚಿತ್ರವಸ್ತುಗ- । ಳನು ಕಣಾ ನೀ ಮಾಡಿ ತಂದ್ಯೆ ನಿನ್ನ ಕೀರ್ತಿಲತೆ ॥
ಒಣಗದಿರಲಿ ನಿರಂತರವು ಬಹು । ಧನಕನಕಸಂಪತ್ತಿ ಮೊದಲಾ । ದೆಣಿಕೆಯಿಲ್ಲದೆ ದೊರೆಯಲಷ್ಟೈಶ್ವರ್ಯ ನಿನಗಿನ್ನು ॥64॥

ಕಲೆಗಳರುವತ್ನಾಲ್ಕು ನಿನಗಾ । ಉಳಿದ ವಿದ್ಯೆ ಚತುರ್ದಶವು ಬಹು । ಸುಲಭದಲಿ ದೊರೆಯುವವು ನಿನ್ನಯ ಕೀರ್ತಿ ಹೆಚ್ಚುವುದು ॥
ಇಳೆಯೊಳಗೆ ಆಸೂರ್ಯಚಂದ್ರರು । ಬೆಳಗುವನಕತಿ ಕೀರ್ತಿ ಬರುವುದು । ಸುಲಭದಲಿ ಸೃಷ್ಟಿಯನು ರಚಿಸುವೆ ಬ್ರಹ್ಮನಂದದಲಿ ॥65॥

ಅಷ್ಟ ಸಿದ್ಧಿಗಳೆಲ್ಲ ನಿನ್ನಲಿ । ಕಷ್ಟ ಮಾಡುವ ದಾನಿಯಾಗುವ । ರೆಷ್ಟು ಹೇಳಲಿ ವಶ್ಯ ನವನಿಧಿಯಾಗುವರು ನಿನಗೆ ॥
ಕಷ್ಟ ಚಿಂತೆಯು ನಿನ್ನ ವಂಶವ । ತಟ್ಟಲಾರದು ಯೆಂದು ಶ್ರೀಗುರು । ಕೊಟ್ಟನೈ ವರ ತ್ವಷ್ಟೃನಿಗೆ ಬ್ರಹ್ಮನ ಕುಮಾರನಿಗೆ ॥66॥

ವರವನೀಪರಿ ಪಡೆದನೆಂದಾ । ಹರನು ಪಾರ್ವತಿಗರುಹಿನು- । ಗುರುಚರಣಸದ್ಭಕ್ತಿ ಈ ಪರಿಯಿಹುದು ಚೋದ್ಯವಲಾ ॥
ಗುರುಚರಣದಲಿ ಭಾವವೊಂದಿರೆ । ದೊರೆಯುವವು ಸಕಲಾರ್ಥಸಾಧನ । ಗುರುವೆ ಭವಸಾಗರವ ದಾಟಿಸುತಿರುವ ನೌಕೆಯಲಾ ॥67॥

ಗುರುವೆ ತ್ರೈಮೂರ್ತಿ ಸ್ವರೂಪನು । ಗುರುವ ಭಜಿಪುದನನ್ಯಭಾವದಿ । ಗುರುಹೊರತು ಕಾಣುವರೆ ಸಿದ್ಧಿಯ ನರರು ಪಾಮರರು ॥
ಗುರುವಿನಲಿ ದೇವರಲಿ ಭಕ್ತಿಯ । ನುರುತರದೊಳಿಡಲಿದುವೆ ತಾರಕ । ಪರಮ ಪುರುಷಾರ್ಥಗಳ ಸಾಧಕ ವೇದಸಮ್ಮತವು ॥68॥

ಇಂದುಧರನೀ ಪರಿಯೊಳಾ ಕಥೆ । ಯೊಂದ ಪೇಳ್ದನು ಪಾರ್ವತಿಗೆ ತಾ- । ನೆಂದು ಸಾಯಂದೇವಗರುಹಿದ ಗುರುವು ಪ್ರೇಮದಲಿ ॥
ಸಂದಿತನಿತರೊಳಾ ರಜನಿ ಬಹು । ಚಂದವಾಯಿತು ಪೂರ್ವ ದಿಶೆಯಲಿ । ಬಂದವರುಣನು ಪೂರ್ವ ದಿಶೆ ಕುಂಕುಮವನಿಟ್ಟಂತೆ ॥69॥

ಗುರುಕೃಪಾವರ ಜ್ಞಾನಜ್ಯೋತಿಯು । ಬರಲವಿದ್ಯಾತಿಮಿರ ಹರಿವುದು । ಪರಿಯು ನಿಜವಿದು ತೋರಿಸುವೆ ನಾನೆಂದು ಜಗಕೆಲ್ಲಾ ॥
ತರಣಿಯುದಯಾಚಲಕೆ ಬರೆ ತಮ । ಹರಿಯಿತೈ ಬಳಿ ಕೆತ್ತಹೋಯಿತೊ । ಗುರುಕೃಪೆಯೊಳಿತೆರದಿ ಮಾಯಾ ತಿಮಿರ ಹರಿವುದಲಾ ॥70॥

ಹರುಷದಿಂದಲಿ ಭೂಸುರನು ಗುರು- । ಚರಣಕಭಿವಂದಿಸಿದನಾಕ್ಷಣ । ಕರುಣಸಾಗರ ನೀನೆ ಬುದ್ಧಿಯ ಕೊಡುವ ದಾತಾರ ॥
ಅರುಹಿದೆನಗೀ ಕಾಶಿಯಾತ್ರೆಯ । ಪರಿಯನೆಲ್ಲವ ನಿನ್ನ ದಯೆ ಗೋ- । ಚರಿಸಿತೈ ಯೆನಗಾಗ ಕಾಶೀಪುರವು ಕಣ್ಣಿನಲಿ ॥71॥

ಗುರುವೆ ನೀನೆನ್ನೊಡನೆ ಕಾಶೀ । ಪುರವ ತಿರುಗಿದೆ ತೋರಿಸಿದೆ ಯೆನ । ಗರಿಯೆ ಸ್ವಪ್ನವೊ ನಿಜವೊ ನಿನ್ನಯ ಮಹಿಮೆ ಚೋದ್ಯವಲಾ ॥
ಅರುಹಿ ಸಾಯಂದೇವನೀಪರಿ । ಗುರುಚರಣ ಕೆರಗಿದನು ತೋಷದಿ । ಪರಿಪರಿಯೊಳಾ ಗುರುವ ಕೊಂಡಾಡಿದನು ಪ್ರೇಮದಲಿ ॥72॥

ಆದಿಯಲಿ ನೀ ಬ್ರಹ್ಮ ರೂಪದಿ । ವೇದದಾಧಾರದಲಿ ಸೃಷ್ಟಿಯ । ಮೇದಿನಿಯ ವಿರಚಿಸಿದೆ ವೇದದ್ವೇಷ್ಟೃ ದೈತ್ಯರನು ॥
ಮೋದದಿಂದಲಿ ಸಂಹರಸಿ ಸುವಿ- । ನೋದದಿಂದಲಿ ಧರ್ಮಸ್ಥಾಪಿಸಿ । ನೀ ದಯಾನಿಧಿ ಅತ್ರಿಕುಲದಲಿ ಬಂದೆ ನರಹರಿಯೇ ॥73॥

ಭೂದಿವಿಜಮೊದಲಾದ ನರರನು । ಬಾಧಿಪನು ಕಲಿರಾಜ ಮೇಣಾ । ವೇದಗಳ ಮಾನಿಸನು ಭೇದಾಭೇದ ಮಾಡುವನು ॥
ಬೋಧವಾಗೀ ತೆರದ ಧರ್ಮವ । ಹಾದಿಗಾಣಿಸಿ ಧರ್ಮಜ್ಞಾನದ । ನೀ ದಯಾನಿಧಿ ದೀಪಹಚ್ಚಿದೆ ಮುದದಿ ನರಹರಿಯೆ ॥74॥

ದರಿಯ ರೂಪದಿ ಜಗದಿ ನೀನವ । ತರಿಸಿ ದುಷ್ಟರ ವಧಿಸಿ ನೀ ಭೂ- । ಸುರರ ವಂದಿಸಿ ಶಿಷ್ಯ ಭಾವದಿ ಜಗವ ಪಾಲಿಸಿದೆ ॥
ಧರಣಿಯಲಿ ಭೂಸುರರ ಕುಲದಲಿ । ಬರುತ ತಾಪಸವೇಷದಲಿ ನೀ । ಧರೆಯೊಳಗೆ ಸನ್ಯಾಸವನು ಸ್ಥಾಪಿಸಿದೆ ನರಹರಿಯೆ ॥75॥

ಚರಿತ ನಿನ್ನಯ ಚಿತ್ರತರ ನಿನ । ಗರಿಯರ್ರೈ ಬ್ರಹ್ಮಾದಿದೇವರು । ಧರಿಣಿಯಲಿ ಮೂಕನಿಗೆ ವಾಚೆಯು ಬಂಜೆಯಲಿ ಸುತನು ॥
ಕುರುಡನಿಗೆ ನಯನಗಳು ವಿಧವೆಗೆ । ಪರಮ ಸುಖಸೌಭಾಗ್ಯ ಬಡವಗೆ । ಸಿರಿಯು ದೊರೆಯಿತು ನಿನ್ನ ದಯೆಯಲಿ ವೀರನರಹರಿಯೆ ॥76॥

ದುರಿತಕಷ್ಟದರಿದ್ರರಾಶಿಯು । ಹರಿವುದೈ ನಿನ್ನಯ ಕಟಾಕ್ಷದಿ । ಶರಣರಿಗೆ ಸುರಧೇನು ಜಗಕೀ ನೀ ಪರಂಜ್ಯೋತಿ ॥
ಶರಣರಘ ಸಂಹರಣನೆಂಬೀ । ಬಿರುದು ಪಾಲಿಸಲೋಸುಗವೆ ನೀ । ಧರಣಿಗವತರಿಸಿದೆ ಕೃಪಾನಿಧಿ ವೀರನರಹರಿಯೆ ॥77॥

ಗುರುವೆ ನಿನ್ನಯ ಚರಣದಲಿಯಡ । ಗಿರುವವೈ ತೀರ್ಥಗಳು ಸರ್ವವು । ಪರಮಪಾವನ ಗಂಗೆಮೊದಲಾಗಿರುವ ತೀರ್ಥಗಳು ॥
ಚರಣವನು ಪೂಜಿಸಲು ಸಾವಿರ । ತುರಗಮೇಧದ ಪುಣ್ಯ ಬರುವುದು । ಧರೆಯೊಳರಿಯರು ನಿನ್ನ ಮಹಿಮಾಗುಣವ ನರಹರಿಯೆ ॥78॥

ನಿನ್ನ ನಾಮದ ಮಹಿಮೆಯನು ತಾ । ವರ್ಣಿಸಲು ನಾ ಶಕ್ತನಿಲ್ಲೈ । ಪನ್ನ ಗೇಶನಿಗಸದಳವು ನಿಗಮಗಳು ಸೋತವಲಾ ॥
ಎನ್ನ ಹೃದಯದ ತಾಪಗಳ ನೀ- । ನಿನ್ನು ಹರಿಸೈ ಗುರುವೆ ನೀನು ಪ್ರ- । ಸನ್ನವಾಗಲು ದುರಿತ ನಿಲುವುದೆ ನೋಡು ನರಹರಿಯೆ ॥79॥

ಭಕ್ತರನು ಪಾಲಿಸುವ ಕಾರಣ । ಧಾತ್ರಿಯಲಿ ನೀ ಬಂದು ತಾಪಸ । ವೃತ್ತಿಯನು ಸ್ಥಾಪಿಸಿದೆ ನಿನ್ನಯ ಮಹಿಮೆ ಚೋದ್ಯವಲಾ ॥
ಭಕ್ತರಿಗೆ ಪುರುಷಾರ್ಥ ನಾಲ್ಕರ- । ನಿತ್ತು ಷಡ್ವೈರಿಗಳ ಜಯಿಸುತ । ಕ್ಷೇತ್ರದಾಣಗಪುರದಿ ವಾಸಿಪ ವೀರನರಹರಿಯೆ ॥80॥

ಅಷ್ಟಕದ ರೂಪದಲಿ ನಿನ್ನಯ । ಶ್ರೇಷ್ಠ ಮಹಿಮೆಯ ಸ್ತುತಿಸಿದೆನು ಯೆ- । ನ್ನಿಷ್ಟವನು ಕೊಡು ಪಠಿಸುವವರಿಗೆ ಪುತ್ರಧನಧಾನ್ಯಾ ॥
ಇಷ್ಟ ಪುರುಷಾರ್ಥಗಳ ನಾಲ್ಕನು । ಕೊಟ್ಟು ಸಲಹೈ ತೇಜಬಲಸಂ । ತುಷ್ಟಿ ದೀರ್ಘಾಯುವ ನಿರೋಗಿತೆ ಕೊಡುವುದೈ ಗುರುವೆ ॥81॥

ಮಾಡಿದನು ಸ್ತೋತ್ರಗಳ ನೀ ಪರಿ । ಮಾಡಿದನು ದಂಡಪ್ರಣಾಮವ । ಬೇಡಿಕೊಂಡನು ಸದ್ಗದಿತಕಂಠದಲಿ ಶ್ರೀಗುರುವಾ ॥
ನೋಡುವವರಿಗೆ ನರನ ರೂಪದೊ । ಳಾಡುತಿಹೆ ಲೀಲಾವತಾರಿಯು । ರೂಢಿಯಲಿ ತ್ರೈಮೂರ್ತಿಯೇ ನೀನೆಂದು ನಂಬುವೆನು ॥82॥

ತೋರಿಸಿದ ಪುರುಷಾರ್ಥನಾಲ್ಕನು । ವಾರಣಾಸಿಯು ವಿಶ್ವನಾಥನು । ತೋರುವರು ನಿನ್ನಲ್ಲಿ ನಾನನುಭವದೊಳಾಡುವೆನು ॥
ಬೇರೆ ನಾನೊಂದರಿಯೆ ನಿನ್ನ ಪ- । ದಾರವಿಂದದೊಳೆಲ್ಲ ತೀರ್ಥಗ । ಳೂರಿಹವು ಬೇರುಗಳ ಚೇಷ್ಟೆಯು ಬೇಡ ಯನ್ನೊಡನೆ ॥83॥

ಗುರುವು ಸಾಯಂದೇವಗೆಂದನು । ಭರದಿ ಕಾಶೀಯಾತ್ರೆ ನನಗಾ- । ನರೆದಿನದಿ ಮಾಡಿಸಿದೆ ಪುಣ್ಯವು ಪೂರ್ಣ ನಿನಗಹುದು ॥
ಬರುವುದಿಪ್ಪತ್ತೊಂದು ಪಿಢಿಗಳ । ವರೆಗೆ ಫಲವದು ನಿನ್ನ ವಂಶದಿ । ಚರಣಸೇವಕನಾಗಿ ವಾಸಿಸು ಮಠದೊಳೀಯಮ್ಮಾ ॥84॥

ಹಲವರಿರುವರು ಶರಣರೆನಗವ- । ರೊಳಗೆ ನೀನು ಶಿರೋಮಣಿಯೆ ನೀ । ನುಳಿದ ದಿನಗಳನೆಲ್ಲ ಕಳೆವುದು ಭಕ್ತಿಭಾವದಲಿ ॥
ಇಳೆಯೊಳು ಮ್ಲೇಂಛರಿಗೆ ನೀ ಕರ- । ಗಳನು ಜೋಡಿಸಬಾರದೈ ನೀ । ಬಳಗವನು ಸ್ತ್ರೀಪುತ್ರರನು ಕರಕೊಂಡು ಬಾರಿಲ್ಲೆ ॥85॥

ತೆರಳಿದನು ಗುರುಮಠಕೆ ತದನಂ- । ತರದಿ ಶಿಷ್ಯರಿಗೆಲ್ಲವಗಣಿತ । ಹರುಷವಾಯಿತು ಶ್ರೀಗುರುವ ನೋಡುತಲಿ ಮನದೊಳಗೆ ॥
ಹೊರಟನಾಕ್ಷಣ ತನ್ನ ಊರಿಗೆ । ಬರುತ ಕಂಡನು ಸತಿಸುತರಿಗವ- । ನರುಹಿದನು ಗುರುವಿಹನು ಹೊರಡಿರಿ ದರ್ಶನಕ್ಕೆನುತಾ ॥86॥

ತಂದನಾಸತಿ ಸುತರನಾದ್ವಿಜ । ನೊಂದೆಭಾವದಿ ಗುರುಚರಣ ಕಭಿ । ವಂದಿಸಿದನಾ ಕ್ಷಣದಿ ಮನೆಯವರೆಲ್ಲರೊಡಗೂಡಿ ॥
ಚಂದದಿಂದ ಕರವಜೋಡಿಸಿ । ವಂದಿಸಿದನಾ ಸದ್ಗುರುವ ನಲ- । ವಿಂದ ನಾನಾತೆರದಿ ಸ್ತುತಿಸಲು ಪ್ರಾರಂಭಿಸಿದನಲಾ ॥87॥

ಶ್ರೀಗುರುವೆ ನೀ ಮೂರುಮೂರುತಿ । ಯಾಗಿ ಜಗದಲಿ ಬಂದ ನಿಗ- । ಮಾಗಮಂಗಳಿಗಿಲ್ಲ ಗೋಚರ ಮಹಿಮೆ ನಿರುಪಮವು ॥
ಸಾಗಲಾರದು ಯೆನ್ನ ಮತಿಯೆನ- । ಗೀಗ ದರ್ಶನ ಕೊಟ್ಟು ಸಲಹಿದೆ । ಯೋಗಪುರುಷನೆ ಭೇಟಿ ಕೊಟ್ಟೆಯಾದಿಮೂರುತಿಯೆ ॥88॥

ಕರುಣಸಾಗರ ನೀನು ನಿನ್ನಯ । ಚರಣಚಂದ್ರಮನನ್ನು ನೋಡಲು । ಹರುಷದಲಿ ಕುಣಿದಾಡುವುದು ನಿಜ ಮನಚಕೋರವದು ॥
ಪರಿಪರಿಯ ಜನ್ಮಾಂತರದಿ ಮಾ- । ಡಿರುವ ಪಾಪದ ರಾಶಿ ಸುಟ್ಟಿತು । ಧರಣಿಯೊಳು ನಾನಾದೆ ಪಾವನ ನಿನ್ನ ದರ್ಶನದಿ ॥89॥

ಪರಮ ಚಿಂತಾಮಣಿಯ ಸ್ಪರ್ಶದಿ । ಬರುವುದೈ ಹೇಮತ್ವಲೋಹಕೆ । ಭರದಿ ಜಂಬೂನದಿಯ ಮೃತ್ತಿಕೆ ಚಿನ್ನವಾಗುವುದು ॥
ಬರಲು ಕರೆವಾಯಸನು ಮಾನಸ । ಕೆರೆಯೊಳಗೆ ಹಂಸತ್ವ ಪಡೆವನು । ಚರಣದರ್ಶನದಿಂದಲೆನ್ನಯ ದುರಿತ ಹೋಯಿತಲಾ ॥90 ॥

- ಗಂಗಾ ಪಾಪಂ ಶಶೀ ತಾಪಂ । ದೈನ್ಯಂ ಕಲ್ಪತರುಸ್ತಥಾ । ಪಾಪಂ ತಾಪಂ ಚ ದೈನ್ಯಂಚ ಗುರುರ್ಹರತಿ ದರ್ಶನಾತ್ ॥

ಪಾಪವನು ಜಾಹ್ನವಿಯು ಹರಿಪಳು । ತಾಪವನು ಶಶಿ ದೈನ್ಯವನು ಮಣಿ । ಈ ಪರಿಯೊಳೊಂದೊಂದು ಗುಣವೊಂದೊಂದು ಸಾಧನಕೆ ॥
ಭಾಪು ನಿನ್ನಯ ದರ್ಶನವು ನಿಜ । ಪಾಪಹಾರಕ ವಿತ್ತದಾಯಕ । ತಾಪಶಾಂತಕ ದರ್ಶನವ ನೀನಿತ್ತೆ ನರಹರಿಯೆ ॥91॥

ಪರಮಪುರುಷಾರ್ಥಗಳ ನಾಲ್ಕನು । ಗುರುವು ಕೊಡುತಿಹನೆಂದು ಶ್ರುತಿಗಳು । ಪರಿಪರಿಯಲೊದರುವವು ಕಂಠದಿ ಶೋಷ ಬರುವನಕಾ ॥
ಧರಣಿಯೊಳಗಿಪರಿಯು ದೃಗ್ಗೋ । ಚರಕೆ ಬಂತೈ ಯೆನಗೆನುತ ಭೂ- । ಸುರನು ಪದಗಳ ಹಾಡಿದನು ಕರ್ಣಾಟ ಭಾಷೆಯಲಿ ॥92॥

॥ ರಾಗ ಶ್ರೀರಾಗ-ತಾಲ-ಆದಿ ॥ ॥ ಪದ॥

॥1 ॥ ಕಂಡೆನಿಂದು ಭಕ್ತ ಜನರ ಭಾಗ್ಯನಿಧಿಯ ಭೂ । ಮಂಡಲದೊಳಗೆ ನಾರಸಿಂಹಸರಸ್ವತಿಯಾ ॥ ಪಲ್ಲ॥

ಕಂಡೆನಿಂದು ದೃಷ್ಟಿಯಿಂದ ವಾರಿಜದಳಪಾದವನ್ನು । ಹೃದಯ ಕಮಲದಲ್ಲಿ ಭಜಿಸೆ ಸುಖವನೀವ ಜಗತ್ಪತಿಯಾ ॥ ಕಂಡೆ ॥1 ॥

ಭೋಗಿಜನರಿಗೆಲ್ಲ ಕಾಮ್ಯಫಲಗಳಿತ್ತು ಸಲುಹುತಿರುವ । ಯೋಗಿನಿಯರೊಡೆಯ ನಾರಸಿಂಹಸರಸ್ವತೀಪಾದ ॥ ಕಂಡೆ ॥

ವಾಕ್ಯ ಕಾರಣನಾದ ಜಗದಿ ಹಿಡಿದು ದಂಡಕಮಂಡಲವನು । ಸಗುಣನೆನಿಸಿ ಸುಜನರಿಗೆ ವಲಿದ ಶ್ರೀಗುರುಯತಿವರನ್ನ ॥ ಕಂಡೆ ॥2॥

ಧರೆಗೆ ಗಾಣಗಾಪುರಕೈಲಾಸ ಹರಿದಾಸರೊಡೆಯನೆನಿಸಿ । ಕರುಣದಿ ವರವಿತ್ತು ಪೊರೆವ ಅನುದಿನ ಗುರುಚರಣವನ್ನು ॥ ಕಂಡೆ ॥3॥

॥2 ॥ ಕಂಡೆನಮ್ಮಾ । ಇಂದು । ಕಂಡೆನಮ್ಮಾ । ಮಂಡಲದೊಳಗೆ ಯತಿವರರಾಯಚಂದ್ರಮನಾ ॥ ಪಲ್ಲ॥

ತತ್ವ ಬೋಧೆಯ ಉಪನಿಷತ್ತತ್ವ ಚರಿತನಾ । ವ್ಯಕ್ತವಾದ ಪರಬ್ರಹ್ಮಮೂರ್ತಿಯೆನಿಸುವನಾ ॥ ಕಂಡೆ ॥1 ॥

ಶೇಷಶಯನನರವೇಷಕಾಯಕನಾ । ಲೇಸು ಕೃಪೆಯನಿಮೇಷನೆಂಬ । ಭಾಷಾಪಾಲಕನಾ ॥ ಕಂಡೆ ॥2 ॥

ಗಂಧಪರಿಮಳದಿಂದ ಶೋಭಿತಾನಂದಸಾಗರನಾ । ಛಂದವುಳ್ಳ ಯೋಗೀಂದ್ರ ಗೋಪೀವೃಂದವಲ್ಲಭನಾ ॥ ಕಂಡೆ ॥3 ॥

ಮಂತ್ರಕೂಟದಿ ಮೆರೆದು ಸ್ವತಂತ್ರನಾದವನಾ । ಇಂತು ನಿಗಮಾಗಮದ ಸಕಲಕಾಂತಿಯುಳ್ಳವನಾ ॥ ಕಂಡೆ ॥4 ॥

ಕರಿಯರಾಯಳಿನಿಪಂಗೆ ವರದ ಗುರುರಾಯನ್ನಾ । ನರಸಿಂಹಸರಸ್ವತ್ಯೆಂಬ ನಾರಿಪುರುಷನಾಮಕನಾ ॥ ಕಂಡೆ ॥5॥

ಇಂತು ನಾನಾಪರಿಯೊಳಾದ್ವಿಜ । ಸಂತಸದಿ ಹಾಡಿದನು ಸ್ತುತಿಯನು । ಬಂತು ಪ್ರೇಮಾಲಾಪ ಗುರುವಿಗೆ ತಾಯಿಯಂದದಲಿ ॥
ಸಂತವಿಸಿದನು ಬಳಿಕ ಭೂಸುರ । ಕಾಂತೆಯನು ಪುತ್ರರನು ಮನ್ನಿಸಿ । ಸಂತಸದಿ ಕಳುಹಿದನು ಹರಸುತ ಭಕ್ತವತ್ಸಲನು ॥93॥

ಭಾದ್ರಪದಸಿತ ಪಕ್ಷದಲ್ಲಿ ತ್ರ- । ಯೋದಶಿಯ ದಿನ ಮರಳಿ ಬಂದನು । ಪಾದಕಭಿನಂದಿಸುತ ಪೊಗಳಿದ ನಿನ್ನ ವಂಶಜನು ॥
ಆದಿಮೂರುತಿ ನೀನು ಧರ್ಮದ । ಹಾದಿಯನು ತೋರಿಸುವ ಕಾರಣ । ಮೇದಿನಿಯೊಳವತರಿಸಿರುವೆ ತ್ರೈಮೂರ್ತಿ ನೀನಾಗಿ ॥94॥

ಧರಣಿಯಲಿ ಮಾನವನ ವೇಷದೊ । ಳಿರುವೆ ನಿನ್ನಯ ಪಾದವರಿಯರು । ನರನು ನೀನಲ್ಲೀಜಗದಿ ಹರನೆಂತ ನಂಬಿದೆನು ॥
ಪರಿಪರಿಯೊಳೀ ತೆರದಿ ಭೂಸುರ । ಗುರುವ ಸ್ತುತಿಸಲು ಕರುಣಮೂರುತಿ । ಕರೆದು ಯೋಗಕ್ಷೇಮ ಕೇಳ್ದನು ನಿನ್ನ ಪೂರ್ವಜನಾ ॥95॥

ಪ್ರೇಮಭಾವದಿ ಗುರುವು ಕೇಳಲು । ಕ್ಷೇಮವಾರ್ತೆಯನೆಲ್ಲ ಪೇಳ್ದನು । ಕ್ಷೇಮವೆನ್ನಯ ಸರ್ವಜನರ್ಗೆ ತವ ಪ್ರಸಾದದಲಿ ॥
ಪ್ರೇಮಭಾವದಿ ಪುತ್ರಸತಿಯರ । ರಾಮಣೀಯಕ ಗುರುಚರಣದಲಿ । ಭೂಮಿಯಲಿ ದಂಡಪ್ರಣಾಮವ ಮಾಡಿಸಿದನಾಗಾ ॥96॥

ಜೇಷ್ಠ ಪುತ್ರನು ನಾಗನಾಥನು । ಶ್ರೇಷ್ಠನಿಹನೈ ನಿನ್ನ ವಂಶದಿ । ಕೊಟ್ಟಿಹನು ಶ್ರೀಹರನು ಪೂರ್ಣಾಯುಷ್ಯವಾತನಿಗೆ ॥
ಭ್ರಷ್ಟಯವನರ ಸೇವೆಯನು ನೀ । ಬಿಟ್ಟುಬಿಡು ಮುಂದಕ್ಕೆ ಸೇವಿಸೆ । ಕಷ್ಟಬಹು ಬರುವದು ಕಣಾ ಮ್ಲೇಂಛರನು ವಂದಿಸಲು ॥97॥

ಪುತ್ರರಿರುವರು ನಾಲ್ಕು ನಿನಗೈ । ಪುತ್ರರಾಗುವರಿನ್ನು ನಾಲ್ಕು । ಪತ್ನಿ ನಿನ್ನಯ ಭಾಗ್ಯವಂತಳು ಅಷ್ಟಪುತ್ರಿಯಳು ॥
ಪೃಥ್ವಿಯಲಿ ರಂಜಿಪರು ನಿನ್ನಯ । ಪುತ್ರಪೌತ್ರರು ಗುರುಪರಾಯಣ- । ರುತ್ತಮರು ಧನಧಾನ್ಯವಷ್ಟೈಶ್ವರ್ಯ ಭೋಗಿಪರು ॥98॥

ಯಾವ ದಿವಸದಿ ನೀನು ಮ್ಲೇಂಛರ । ಸೇವಿಸುವ ವಂದಿಸುವೆಯಾದಿನ । ಜೀವಕಹುದೈ ಹಾನಿ ನಿನಗಾನೊರೆನೆ ಗುಹ್ಯವನು ॥
ಈ ಹಿರಿಯ ಮಗ ನಾಗನಾಥನು । ಭಾವಭಕುತಿಯೊಳೆಮ್ಮ ಪೂಜಿಸಿ । ಆವಗಂ ರಂಜಿಪನು ಸೌಖ್ಯದಿ ವಂಶವಂಶದಲಿ ॥99॥

ಇಂತು ಹರಸುತ ಪೇಳ್ದನವನಿಗೆ । ಸಂತಸದೊಳಾಗುರುವು ನೀ ಅ- । ನಂತವ್ರತವಾಚರಿಸು ಈ ದಿನವಿಹುದು ಆ ವ್ರತವು ॥
ಇಂತು ಪಡೆದು ನಿರೋಪ ಗುರುವಿನ । ಬಂತು ಮಂಡಳಿಯೆಲ್ಲ ಸಂಗಮ । ಕಂತುಹರನನು ಪೂಜಿಸುತಲಶ್ವತ್ಥ ಪೂಜಿಸುತಾ ॥100॥

ತಿರುಗಿ ಮಠಕ್ಕೈತರಲು ಗುರು ಭೂ-। ಸುರನಿಗೆಂದನು ವ್ರತವನಂತರ । ಭರದಿ ನೀನಾಚರಿಸು ದ್ವಿಜರೊಡಗೂಡಿ ಭಕುತಿಯಲಿ ॥
ಚರಣಕೆರಗುತ ನುಡಿದನುತ್ತರ । ಗುರುವೆ ನಿನ್ನಯ ಚರಣಸೇವೆಯು । ನಿರತ ದೊರೆಯಲಿ ಸರ್ವ ವ್ರತದುಪವಾಸವದು ನಮಗೆ ॥101॥

ನುಡಿಯ ಕೇಳುತ ಗುರುವು ದ್ವಿಜನಿಗೆ । ಸಡಗರದಿ ವ್ರತ ಮಾಡಬೇಕೆಂ- । ದೊಡಬಡಿಸಿದನು ಹಿಂದೆ ಕೌಂಡಿಣ್ಯರ್ಷಿ ಮಾಡಿದನು ॥
ಅಡಿಗೆರಗಿ ಭೂಸುರನು ಕೇಳ್ದನು । ಪೊಡವಿಯಲಿ ವ್ರತವೆಂತು ಮಾಳ್ಪುದು । ಪಡೆಯುವರು ಫಲವೇನು ಹಿಂದಾಚರಿಸಿದರು ಯಾರು ॥102॥

ಎನುತಲಾದ್ವಿಜ ಕೇಳಲಾಗುರು । ವಿನಯದಿಂದಲಿ ಹೇಳ ತೊಡಗಿದ । ಮುನಿಪ ಕೌಂಡಿಣ್ಯಾಖ್ಯ ಮಾಡಿದ ವ್ರತಪ್ರಕಾರವನು ॥
ಮನವ ಶುದ್ಧೀಕರಿಸುತೀಕಥೆ- । ಯನು ವಿವೇಕದಿ ಕೇಳೆ ಸಂಸೃತಿ । ವನಧಿಯನು ದಾಟುವರು ಭಕ್ತರು ವಿಷ್ಣು ವಚನವಿದು ॥103॥

॥ ಅಧ್ಯಾಯ 42 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 43

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುವು ಸಾಯಂದೇವನಿಂಗಾ- । ದರದಿ ಪೇಳ್ದನನಂತವ್ರತವನು । ಧರೆಯೊಳಷ್ಟೈಶ್ವರ್ಯ ದೊರಕುವ ಸುಲಭಸಾಧನವಾ॥

ತರಣಿಗಿರುವ ಪ್ರಕಾಶ ಶ್ರೀಗುರು । ವರನ ದಾನದ ಮಹಿಮೆಯಾಹಿಮ- । ಕರಗೆ ಶೈತ್ಯವನಿತ್ತವನು ಮೇಣಾರು ಗುರುಹೊರತು ॥
ಪರಿಮಳವ ಹೂಗಳಿಗೆ ವೈಶ್ವಾ । ನರಗೆ ದೀರ್ಘಾಯುಷ್ಯ ವಿತ್ತವ । ಗುರುವೆ ಗುರುಮಹಿಮೆಯನು ವರ್ಣಿಸಲಾರೆ ಬಾಯಿಂದಾ ॥1॥

ಗುರುವು ಸಾಯಂದೇವಗೆಂದನು । ಧರೆಯೊಳೀವ್ರತವಾಚರಿಸಿದವ- । ರಿರುವರೈ ಬಹುಮಂದಿ ಪೂರ್ವದಿ ಕೇಳು ಪೇಳುವೆನು ॥
ಧರೆಯೊಳಗೆ ಧರ್ಮಜನು ಕೇಳಾ- । ಚರಿಸಿದನು ಭಕ್ತಿಯಲಿಯಾವ್ರತ । ತ್ವರಿತದಲಿ ರಾಜ್ಯವನು ಪಡೆದನನಂತವ್ರತದಿಂದಾ ॥2॥

ದ್ಯೂತಕರ್ಮದಿ ಪಾಂಡುತನಯರು । ಸೋತು ರಾಜ್ಯವ ವನಕೆ ತೆರಳಲು । ಭೂತಳಾಧಿಪನಾದನೈ ದುರ್ಯೋಧನನು ತಿಳಿಯೆ ॥
ನೀತಿಧರ್ಮವ ಬಿಡದೆ ಪಾಂಡವ । ರಾತಳೋದರಿಸಹಿತ ವನದಲಿ । ಮಾತಿಗೊಪ್ಪಿದ ತೆರದಿ ಸುಳಿದರು ವನವನಾಂತರದಿ ॥3॥

ಘೋರಕಾನನದೊಳು ಯುಧಿಷ್ಠಿರ । ಚಾರುಸೋದರಸತಿ ಸಹಿತ ಬಹು । ಕ್ರೂರತಾಪದಿ ಬಳಲಿ ಬೆಂಡಾದರು ಸುಧಾರ್ಮಿಕರು ॥
ಚೋರಕೌರವ ದ್ವೇಷಮತ್ಸರ । ಪೂರಿತನು ಪಾಂಡವರ ಬಹುಪರಿ । ಕ್ರೂರತನದಲಿ ಕಾಡಿದನು ಮತ್ತೇನ ಹೇಳುವೆನು ॥4॥

ಕುರುಪತಿಯು ದುರ್ವಾಸಋಷಿಯನು । ಕರೆದು ಕಳುಹಿದನಾ ವನಾಂತರ- । ಕಿರದೆ ಪರಿಕಿಸ ಬೇಕೆನುತ ಪಾಂಡವರ ಸತ್ವವನು ॥
ಹರಿಯ ಮೊರೆಹೊಕ್ಕವರು ಕಾಂಬರೆ । ಹರಣವನು ಪಾಂಚಾಲಿ ಬೇಗದಿ । ಶರಣು ಹೊಕ್ಕರು ದ್ವಾರಕೇಶನ ಮುನಿಯು ಬೆರಗಾದಾ ॥5॥

ಶರಣರಕ್ಷಕನೆಂಬ ಬಿರುದಿನ । ಹರಿಯು ಪಾಂಡವರನ್ನು ಕಾಯ್ದನು । ಕರುಣದಿಂದಲಿ ವಜ್ರಪಂಜರನಾಗಿ ಪಾಂಡವರಾ ॥
ಹರಿಯ ನಾಮಸ್ಮರಣೆಗೈಯುತ । ಧರಣಿಪತಿಗಳು ಧರಣಿವಿಪ್ರರು । ಮೆರೆದರೈ ಕಾನನದಿ ಕೃಷ್ಣನ ದಿವ್ಯ ಕೃಪೆಯಿಂದ ॥6॥

ಹರಿಯ ಪಂಚಪ್ರಾಣಕೌಂತೇ । ಯರು ಯೆನುತ ಬಿರುದಿಹುದು ಜಗದಲಿ । ಪರಿಪರಿಯ ಕಷ್ಟಗಳ ಭೋಗಿಪರವರು ಕಾನನದಿ ॥
ಮರೆಯರಚ್ಯುತನಂಘ್ರಿಕಮಲವ । ಪರಿ ಪರಿಯ ವ್ರತತೀರ್ಥಗಳನಾ- । ಚರಿಸಿದರು ಪಾಂಡವರು ಪುಣ್ಯಶ್ಲೋಕರೇನೆಂಬೆ ॥7॥

ಶರಣರೆನ್ನಯ ವನದಿ ವಾಸಿಪ- । ರರರೆ ನೋಡುವೆ ಕಣ್ಣಿನಿಂದಾ- । ನರುಹುವೆನು ಸುಖಸಾಧನವ ತಾನೆಂದು ಮುರವೈರಿ ॥
ತೆರಳಿದನು ಕಾನನಕೆ ಧರ್ಮಜ । ನಿರುವ ಠಾವಿಗೆ ಬಂದು ಕಂಡನು । ಮರುಗಿದರು ಪಾಂಡವರು ಕೃಷ್ಣನ ಮುಖವ ನೋಡುತಲಿ ॥8॥

ಸೃಷ್ಟಿಗೊಡೆಯನ ಚರಣಧೂಳಿಯ । ಬಿಟ್ಟ ಕೂದಲಿನಿಂದ ಝಾಡಿಸಿ । ನಿಟ್ಟುಸಿರ ಬಿಡುತಾಗ ನುಡಿದಳು ಹರಿಗೆ ಪಾಂಚಾಲಿ ॥
ಜ್ಯೇಷ್ಠ ಪಾಂಡವ ಧರ್ಮ ರಾಜನು । ದೃಷ್ಟಿ ಸುತ ಶ್ರೀ ಹರಿಯ ಚರಣದಿ । ಕೊಟ್ಟೆನೈ ಲೋಟಾಂಗಣದ ದಂಡಪ್ರಣಾಮವನು ॥9॥

ಹರಿಯನುಪಚರಿಸಿದರು ಷೋಡಶ । ಪರಿಯಲಾ ಪಾಂಡವರು ವನದೊಳ- । ಗಿರುವ ಪುಷ್ಪಂಗಳನು ಕೂಡಿಸಿ ಮಾಲೆ ಹಾಕಿದರು ॥
ಚರಣದಲಿ ಶಿರವಿಡುತ ಭಕ್ತಿಯ । ಭರದಿ ಪೂಜಿಸಿದರು ಮುಕುಂದನ । ಕರುಣದೀನಸ್ವರದಿ ಸ್ತುತಿಸಿದಾಗ ಶ್ರೀಹರಿಯಾ ॥10॥

ನಂದ ಕಂದ ಮುಕುಂದ ಹರಿಗೋ- । ವಿಂದ ವಂದಿಪೆ ವಂದದಲಿ ನಿನ । ಗಿಂದು ಬಂದುದೆ ಕುಂದು ದೃಷ್ಟಿಗೆ ಪಾಂಡ ನಂದನರಾ ॥
ಇಂದಿರಾಧನ ಪರಮ ಸೌಖ್ಯಾ- । ನಂದಮೂರು ತಿ ನಿನ್ನ ನಂಬಿದೆ । ವಿಂದು ಕೈ ಬಿಟ್ಟಿಮಗೆ ವನವಾಸಕ್ಕೆ ಕಳುಹಿ ದೆಯಾ ॥11॥

ಸೃಷ್ಟಿಸ್ಥಿತಿಲಯ ಕಾರಣನು ನೀ । ಸೃಷ್ಟಿಯಲಿ ನೀ ಹೊರತು ಬೇರಿ- । ನ್ನೆಷ್ಟು ದೇವರು ಇರಲು ದೇವರದೇವ ನೀನಾಗಿ ॥
ದುಷ್ಟಶಾಸನ ಶಿಷ್ಟಪಾಲನ । ಕಟ್ಟಳೆಯು ಲಯವಾಯ್ತು ನಿನಗಿ- । ನ್ನೆಷ್ಟು ಮೊರೆಯಿಡಲಾವು ನೋಡೈ ಕಂದೆರದು ನಮ್ಮಾ ॥12॥

ಧರೆಯ ಭಾರವನಿಳಿಸಲೋಸುಗ । ಭರದಿ ನೀನವತರಿಸಿ ದುಷ್ಟರ । ಹರಣ ಮಾಡವೆಯೆಂದು ನಿಗಮಗಳೊದರುವವು ಮುದದಿ ॥
ಧರೆಗೆ ಜಡನಾದರೆ ಯುಧಿಷ್ಠಿರ । ಹರಿಯೆ ನೀ ಸಂಹರಿಸ ಬಾರದೆ । ಬರಿದೆ ವನವನ ತಿರುಗಿಸುವೆ ಯೆಮಗೇಕೆ ಪೇಳೆಮಗ ॥13॥

ಪಂಚಪಾಂಡವರಿಹರು ಕೃಷ್ಣನ । ಪಂಚಪ್ರಾಣಗಳೆನುತ ತೋರಿಸಿ । ವಂಚಿಸಿದೆ ನೀನೆಮ್ಮ ಕರುಣಾನಿಧಿಯೆ ಶ್ರೀ ಹರಿಯೆ ॥
ಸಂಚಿತವು ವನವಾಸವಾಯ್ತಿದು । ವಂಚಿಸದೆ ಪೇಳೆಮಗೆ ದಯದಲಿ । ಮಿಂಚಿನಂತೀರಾಜ್ಯ ವಡಗಿತು ಕಷ್ಟಮೋಡದಲಿ ॥14॥

ಹರಿಯೆ ಕರುಣಾನಿಧಿಯೆ ನಿನ್ನಯ । ಶರಣರಿಂಗೀ ಪರಿಯ ದೈನ್ಯವೆ । ಮರೆತೆಯಲ್ಲಾ ದೀನಕಾಂತೇಯರನು ವನದೊಳಗೆ ॥
ಧರೆಯೊಳಗೆ ನೀಹೊರತು ನಮ್ಮನು । ಪೊರೆವ ದಾತಾರನನು ಕಾಣೆವು । ಮೊರೆಯಿಡುವುದಾರಿಂಗೆ ನೀ ಹೊರತೆಮಗೆ ಗತಿಯಾರು ॥15॥

ನೀನುಪೇಕ್ಷಿಸಲೆಮ್ಮ ಶ್ರೀಹರಿ । ದೀನರೆಮ್ಮನು ಪೊರೆವರವನೀ । ಕ್ಷೋಣಿಯಲಿ ಕಾಣೆವು ದಯಾನಿಧಿ ಬೇರೆ ಗತಿಯಿಲ್ಲಾ ॥
ನೀನೆ ಭವಸಾಗರಕೆ ತಾರಣ । ನೀನೆ ಸುಖಸಂಪತ್ತಿ ಕಾರಣ । ನೀನೆ ಲಕ್ಷ್ಮೀರಮಣ ನಾರಾಯಣನೆ ಪೊರೆಯೆಮ್ಮ ॥16॥

ಇನಿತು ಧರ್ಮಜ ನುಡಿಯೆ ಮಾರುತಿ । ವಿನಯಪೂರ್ವಕವಾಗಿ ನುಡಿದನು । ಮುನಿದ ಕಾರಣವೇನು ಪೇಳೈ ಕೃಷ್ಣ ನಮ್ಮೊಡನೆ ॥
ಮನದಿ ದುಗುಡವ ತಾಳಿ ದೇವೇಂ । ದ್ರನ ತನಯ ಪೇಳಿದನು ಭಾವನೆ । ಮುನಿಯ ಬೇಡೈ ನಿನ್ನ ಭಗಿನಿಯ ಪ್ರೇಮ ನಿನಗಿರದೆ ॥17॥

ಬಟ್ಟೆಯಿಲ್ಲದೆ ವನದಿ ತಿರುಗುತ । ಕಷ್ಟ ಪಟ್ಟೆವು ನಾವು ಬಹಳವ । ನಿಷ್ಟುಗಳ ಸಹಿಸಿದೆವು ಹೇಳುವರೆಮಗೆ ಬಾಯಿಲ್ಲಾ ॥
ಶಿಷ್ಟ ಪಾಲಕ ಪಾಂಡವರ ಸಂ- । ಕಷ್ಟಗಳ ಪರಿಹರಿಸು ಕರುಣಾ- । ದೃಷ್ಟಿಯಿಂದಲೆ ನೋಡಲಾರದೆ ಪಾಲಿಸೈ ಬಿರುದಾ ॥18॥

ರಕಿಪತಿಯ ಪಿತನಿಂಗೆ ಮಾದ್ರೀ- । ಸುತರು ಬಂದೆರಗಿದರು ದ್ರುಪದನ । ಸುತೆಯು ಕಂಬನಿತುಂಬಿ ನುಡಿದಳು ಬಿಟ್ಟತುರುಬಿನಲಿ ॥
ಕ್ಷಿತಿಯ ಭೋಗಿಪರೆಮ್ಮ ವೈರಿಗ । ಅತುಲ ವಿಕ್ರಮ ವಾಲಿ ನೀನಿರೆ । ಕ್ಷಿತಿಯು ನಗದೇ ಶರಣರಿಗೆ ವನವಾಸವೇ ಹೇಳು ॥19॥

ನಿನ್ನ ಪೋಲುವ ಛತ್ರವೆಮಗಿರೆ । ಬನ್ನ ಓಡುವುದು ಸರಿಯೆ ಪೇಳೆಮ- । ಗಿನ್ನು ರಾಜ್ಯ ಪ್ರಾಪ್ತಿಯಹುದೇ ಪೇಳು ಪೇಳೆಮಗೆ ॥
ಕೃಷ್ಣ ಕರುಣಾನಿಧಿಯೆ ಸುಖಿಸಂ- । ಪನ್ನರಾಗುವ ಹಾದಿ ತೋರಿಸು । ಧನ್ಯವಾಯಿತು ನಿನ್ನ ದರ್ಶನದಿಂದಲೀದಿವಸಾ ॥20॥

ಶರಣರಾಡಿದ ಕರುಣ ವಚನವ । ನರಿತು ಮನದಲಿ ಹರಿಯು ಪೇಳ್ದನು । ಬರಿದೆ ಯೆನ್ನನು ದೂರಬೇಡಿರಿ ಮನದ ಮುನಿಸಿನಲಿ ॥
ಅರಿತು ನೋಡಿರಿ ತಾನು ಮಾಡಿದ । ದುರಿತಕರ್ಮದ ಸರ್ವಫಲಗಳ । ಪರಿಹರಿಸಲಳವಲ್ಲ ಜಗವಿದು ಕರ್ಮಫಲಬದ್ಧ ॥21॥

ಕೇಳು ಧರ್ಮಜವೊಂದುಪಾಯವ । ಪೇಳುವೆನು ವ್ರತವೊಂದ ಮಾಡಲು । ಹಾಳು ಬೀಳುವುದೆಲ್ಲ ದುರಿತದ ದುಷ್ಟ ಕರ್ಮಫಲ ॥
ಲೀಲೆಯಿಂಧಿದನಾಚರಿಸೆ ತಾ । ತ್ಕಾಲಿಕವು ಫಲವಿಹುದು ನಂಬಿದ । ನಾಲಿಸೈ ಪೇಳುವೆನು ನಾನಾ ವ್ರತಪ್ರಕಾರವನು ॥22॥

ವ್ರತಗಳಲಿ ಯುತ್ತಮವನಂತನ । ವ್ರತವೆನುತ ವಿಖ್ಯಾತಿಯಾಗಿದೆ । ಕ್ಷಿತಿಯೊಳಗೆ ನೀವದನು ಮಾಡಿರಿ ಭಕ್ತಿಭಾವದಲಿ ॥
ಕ್ಷಿತಿಯ ರಾಜ್ಯವು ನಿಮಗೆ ತೀವ್ರದೊ । ಅತಿ ಸುಲಭದಲಿ ಪ್ರಾಪ್ತವಪ್ಪುದು । ಸತತ ಮಂಗಳದಾಯಕವು ಸಕಲಾರ್ಥ ಸಾಧನವು ॥23॥

ಅಂತವಿಲ್ಲೈಯೆನ್ನ ಲೀಲೆಗೆ । ಅಂತವಿಲ್ಲೈಯೆನ್ನ ನಾಮಕೆ । ಅಂತವಿಲ್ಲೈಯೆನ್ನ ಮಹಿಮಾಗುಣಕೆ ನೋಡಿದರೆ ॥
ಅಂತವಿಲ್ಲ ನಗೆಂದು ಸರ್ವರ । ನಂತನೆಂದೇ ಕರೆವರೆನ್ನನು । ಬಂತು ಕೇಳಾ ವ್ರತದ ಫಲವೆನಗೆಂದು ನೀನಂಬು ॥24॥

ಹಗಲಿರುಳು ಮೇಣ್ ಪಕ್ಷಮಾಸವು । ಯುಗವು ಕಲ್ಪಾದಿಗಳು ಮೇಣಾ । ಅಗಣಿತ ಕಲಾಕಾಷ್ಠ ಮೂರ್ತಿಗಳಲ್ಲಿ ಸರ್ವರಲಿ ॥
ಬಗೆಬಗೆಯ ರೂಪದಲಿ ನಾನೀ । ಜಗದೊಳವತರಿಸುವೆನು ದುಷ್ಟರ । ಬಗೆವೆ ಶಿಷ್ಟರ ಸಲಹಿ ಧರ್ಮ ಸ್ಥಾಪನೆಯ ಮಾಳ್ಪೆ ॥25॥

ನಂದಗೋಪನ ಕುಲದಿ ಜನಿಸಿದೆ । ಬಂದುದೆನಗೀಹೆಸರು ಕುಂತೀ । ನಂದನರೆ ಸಂಶಯವ ಮಾಡದೆ ಭಜಿಸಿರೈಯೆನ್ನಾ ॥
ಇಂದುಧರಹರಿ ಬ್ರಹ್ಮ ಮೂರ್ತಿಗ- । ಳೊಂದೆ ರೂಪವ ಧರಿಸಿ ಜಗದಲಿ । ಬಂದಿಹೆನು ನಾನೇಯನಂತನು ನೋಡು ನಿಜನಿಜವು ॥26॥

ಸಪ್ತವಾರಿಧಿ ಸಪ್ತ ಋಷಿಗಳು । ಧಾತ್ರಿ ಧಾತ್ರಿಯೊಳಿರುವ ವೃಕ್ಷಸ- । ಮಸ್ತರವಿಶಶಿದ್ವಾದಶಾರ್ಕರು ಅಷ್ಟವಸು ನಿಜದಿ ॥
ಸಪ್ತ ಪಾತಾಳಗಳು ಭೂರ್ಭುವ । ಸಪ್ತಲೋಕಂಗಳು ಮಿನುಗುವ ಸ-। ಮಸ್ತ ನಕ್ಷತ್ರಗಳು ದಶದಿಶೆ ರುದ್ರಗಣವೆಲ್ಲ ॥27॥

ಭಾನುಹಿಡಿದಣುರೇಣುಸಹಿತಕೆ । ನಾನುಸಚರಾಚರಕೆವಿಷ್ಯಕ್- । ಸೇನ ನಾನೇಸಕಲ ಸೃಷ್ಟಿ ಸ್ಥಿತಿಗೆ ಕಾರಣನು ॥
ನಾನು ರುದ್ರನ ರೂಪ ಧರಿಸುತ । ಹಾನಿ ಮಾಳ್ಪೆನು ವಿಶ್ವವೆಲ್ಲವ । ನಾನು ಕೇಳಣುರೇಣುತೃಣಕಾಷ್ಠದಲಿ ತುಂಬಿಹೆನು ॥28॥

ಮನದಿ ಸಂಶಯ ಧರಿಸದಲೆ ನೀ- । ವಿನುತವ್ರತವನು ಮಾಡು ವೊಲಿವೆನು । ನಿನಗೆ ಸುಖಸಾಮ್ರಾಜ್ಯ ಬರುವುದನಂತಕೃಪೆಯಿಂದಾ ॥
ಎನುತಲೀಪರಿ ನುಡಿಯೆ ಶ್ರೀಹರಿ । ಮನದಿ ಸಂತಸ ತಾಳಿ ಧರ್ಮಜ । ನನಿತರಲಿ ಬಿನ್ನೈಸಿದನು ಕೃಷ್ಣನಿಗೆ ಮೋದದಲಿ ॥29॥

ಯಾವ ದಿನದಲಿ ಯಾವ ಪರಿಯಲಿ । ಯಾವ ಪೂಜೆಯ ಯಾವ ದಾನವ । ಸಾವಧಾನದಿ ಮಾಡಿದರೆ ವೊಲಿಯುವನು ಶ್ರೀಹರಿಯು ॥
ಈ ವ್ರತವನಾರಾಚರಿಸಿದರು । ಪೂರ್ವದಲಿ ಫಲವೇನು ದೊರೆಯಿತು ಈ । ವಿವರವೆಲ್ಲವನು ಪೇಳ್ಕೈ ಕೃಷ್ಣ ನೀನೆನಗೆ ॥30॥

ಎಂದು ಧರ್ಮಜ ಕೇಳಲಾಗ ಮು- । ಕುಂದ ನಗುತಿಂತೆಂದ ಕೇಳೈ । ಚಂದದಿಂದಲಿ ಪೇಳ್ವೆ ನಾನೀವ್ರತವಿಧಾನವನು ॥
ಹಿಂದೆ ಯಾರಾಚರಿಸಿದರು ಫಲ- । ವೆಂತಿಹುದು ಇದಕೆಂದು ನಾನಾ- । ನಂದದಿಂ ವಿಸ್ತರಿಪನೆಂದನು ಕೃಷ್ಣ ನಸುನಗುತಾ ॥31॥

ಭಾದ್ರಪದದಲಿ ಶುಕ್ಲ ಪಕ್ಷಚ । ತುರ್ದಶಿಯದಿನ ವ್ರತವ ಮಾಳ್ಪುದು । ಶುದ್ಧ ಮನದಲಿ ಭಾವಭಕುತಿಯೊಳಿದನು ಮಾಡುವುದು ॥
ದ್ವಾದಶಾಬ್ದವು ತೀರಿದಾಕ್ಷಣ । ಭದ್ರವಿಹುದ್ಯೆ ನಿನಗೆ ರಾಜ್ಯವು । ಶುದ್ಧ ಧಾರ್ಮಿಕ ನೀನು ಧರ್ಮಜ ಕಡೆಗೆ ಜಯ ನಿನಗೆ ॥32॥

ಕೃತಯುಗದೊಳು ಸುಮಂತನಿದ್ದನು । ಕ್ಷಿತಿಯೊಳಗೆ ವಾಸಿಷ್ಠ ಗೋತ್ರದಿ । ಸತಿಯು ಭೃಗುಸುತೆ ದೀಕ್ಷೆಯೆಂಬಭಿಧಾನವಾಕೆಯದು ॥
ಪತಿಯೆ ದೈವತವೆಂದು ಪೂಜಿಪ । ಸತಿಯು ಮೆರೆದಳು ಭಾರ್ಯೆಯಾತಗೆ । ಸುತೆಯು ಕನ್ಯಾರತ್ನ ಹುಟ್ಟಿದಳವರ ಹೊಟ್ಟೆಯಲಿ ॥33॥

ನಿತ್ಯ ಭಕ್ತಿಯ ಮಾಡುವಳು ತ । ತ್ಪುತ್ರಿ ಗೃಹವನು ಶೋಭಿಪಳು ಬಹು । ಚಿತ್ರತರವರ್ಣಂಗಳಲಿ ತೋರಣವ ಮಾಡುವಳು ॥
ಚಿತ್ರತರವಿಹ ಪಂಚವರ್ಣದಿ । ಪತ್ರಪುಷ್ಪದ ರಂಗಮಾಲಿಕೆ- । ಯುತ್ತಮದಿ ಮಾಡುತ ಸುಮಂತನ ಮನೆಯ ಶೋಭಿಪಳು ॥34॥

ಶೀಲವುತ್ತಮವೆಂದು ಸುತೆಯ ಸು- । ಶೀಲೆಯೆಂಬಾ ನಾಮವಿಟ್ಟರು । ಲೀಲೆಯಿಂದೀ ಬಾಲೆ ಮಾಳ್ಪಳು ರಂಗಮಾಲೆಗಳಾ ॥
ಕಾಲವಶದಲಿ ತಾಯಿ ದೀಕ್ಷೆಯು । ಕಾಲನಾಜ್ಞೆಯನಾಂತು ನಡೆದಳು । ಮೇಲೆ ಕೈಲಾಸಕ್ಕೆ ಪತ್ನಿವಿಹೀನ ಗೃಹವಾಯ್ತು ॥35॥

ನಾರಿಯಿಲ್ಲದ ಮನೆಯು ನಿಜ ಕಾಂ- । ತಾರವೆಂದೆನಿಸುವುದು ಧರ್ಮವಿ । ಚಾರ ನಡೆಯದು ಯೆನುತಲಾಗ ಸುಮಂತು ದುಃಖದಲಿ ॥
ಬೇರೆಯರಡನೆ ಲಗ್ನವಾದನು । ಕ್ರೂರ ಕರ್ಕಶಿ ಭಾರ್ಯೆಯಾದಳು । ಘೋರಕಲಹವ ಮಾಡಿದಳು ದಿನದಿನದಿ ಮನೆಯೊಳಗೆ ॥36॥

ಸುತೆಯನಾಸಾಪತ್ನಭಾವದಿ । ಸತಿಯು ಪ್ರತಿದಿನ ತಾಪಕೊಟ್ಟಳು । ಯತಿ ಸುಮಂತಗೆ ದುಃಖವಾಯಿತು ನೋಡುತೀಪರಿಯಾ ॥
ಸುತೆಯು ಉಪವರಳಾಗಲಾಕಗೆ । ಪತಿಯ ಮಾಡುವೆನೆಂದು ಯೋಚಿಸೆ । ಯತಿಯು ಕೌಂಡಿಣ್ಯನು ಮನೆಗೆ ಬರಲವನ ನುಡಿಸಿದನು ॥37॥

ಶೀಲಗುಣಗಳ ನೋಡಿ ಯವನು ಸು । ಶೀಲೆಯನು ಸ್ವೀಕರಿಸಿದನು ಮೇಣ್ । ಲೀಲೆಯಿಂದ ಸುಮಂತ ಕನ್ಯಾದಾನ ಮಾಡಿದನು ॥
ಕಾಲಕಳೆದನು ಮಾಸವೆರಡನು । ಲೀಲೆಯಿಂದಲಿ ಶ್ವಶುರಗೃಹದಲಿ । ಮೇಲೆಮೇಲಿಂದಾಗ ನೋಡಿದನವನು ಗೃಹಕಲಹಾ ॥38॥

ತಾಳಲಾರದೆ ಕಲಹದುಃಖವ । ಪೇಳಿದನು ಕೌಂಡಿಣ್ಯ ನೋಂದಿನ । ಬೀಳುಗೊಡುವೆವು ಬೇರೆಮನೆಗಾವ್ ಮಾವ ನೋಡಿದಿರಾ ॥

ಬಾಲೆ ನಿನ್ನಯ ಮಗಳು ಗುಣದಿ ಸು- । ಶೀಲೆ ಹೆಸರಿಗೆ ಶೋಭಿಪಳು ದುಃ- । ಶೀಲೆ ಕರ್ಕಶೆ ನಿನ್ನ ಭಾರ್ಯೆಯು ನಿತ್ಯ ದುಃಸಹಳು ॥39॥

ಮುನಿ ಸುಮಂತನು ದುಃಖಮಾಡಿದ । ವನಿತೆಯಲ್ಲಾ ಯೆನ್ನ ವೈರಿಯು । ವಿನಯಶೀಲಳು ಕನ್ಯೆ ನಿನ್ನಯ ವಚನವಿದು ನಿಜವು ॥

ಎನಗೆ ಪ್ರಾರಬ್ಧದಲಿ ಕರ್ಕಶ । ವನಿತೆ ಸಿಕ್ಕಿದಳೇನ ಮಾಡುವೆ । ಕ್ಷಣಸಹಿತ ನಾ ನಗಲಲಾರೆನು ಸುತೆ ಸುಶೀಲೆಯನು ॥40॥

ನಾರಿ ಮನೆಯಲಿ ಶಾಂತಳಿರದಿರೆ । ಘೋರತರ ಕಾಂತಾರವೇ ಸಂ- । ಸಾರವದು ನಿಃಸಾಗವದರಲಿ ಮುಳುಗಿದೆನು ನಾನು ॥

ಮಾರಹರನೇ ನಿನ್ನ ಪೂಜೆಗೆ । ಬಾರದಿಹುದೆ ವಿಘ್ನ ಕರ್ಕಶೆ । ನಾರಿ ಧರ್ಮಕೆ ಮಾರಿ ಮೋಕ್ಷಕೆ ವೈರಿ ನೋಡಿದರೆ ॥41॥

ನಿತ್ಯ ಕನ್ಯಾದರ್ಶನದಿ ಜಾ- । ಮಾತೃ ದರ್ಶನವೆನಗೆ ದಿನದಿನ । ವಿತ್ತು ನೀವೀ ಮನೆಯ ಬಿಟ್ಟರೆ ಶೂನ್ಯಗೃಹವಾಯ್ತು ॥

ಅತ್ತು ದುಃಖದಿ ನುಡಿದ ಮಾವನಿ- । ಗಿತ್ತನುತ್ತರವನ್ನು ಮೋದದಿ । ನಿತ್ಯವೊಂದೇ ಸ್ಥಳವು ಸಲ್ಲದು ಯತಿಯರಿಬ್ಬರಿಗೆ ॥42॥

ಬೇರೆಯಾಶ್ರಮಕಾಗಿ ಹೋಗುವೆ । ದೂರವಿಲ್ಲ ಸಮೀಪದಾಶ್ರಮ । ಸೇರುವೆವು ಮೇಲಿಂದ ಮೇಲೀ ಸ್ಥಳಕೆ ಬರುತಿಹೆವು ॥

ಚಾರುವಿನಯಪ್ರೇಮಭಾಷಣ । ವಾಋಷೀಶ್ವರ ಕೇಳಿ ನುಡಿದನು । ಬೇರೆಯಾಶ್ರಮಕೀಗ ಹೋಗದೆ ಕೇಳು ಪೇಳಿದುದಾ ॥43॥

ಇರಲು ಬೇಕೀಯಾಶ್ರಮದಿ ಹದಿ- । ನೆರಡು ದಿನಪರಿಯಂತ ನೀವ್ ನಂ- । ತರ ತ್ರಯೋದಶಿ ದಿವಸವನ್ಯಾಶ್ರಮಕೆ ಹೋಗುವುದು ॥

ಇರುವುದಾದಿನ ಸರ್ವ ಸಿದ್ಧಿಯ । ವರಸುಮೂರ್ತವು ಕೇಳಿರಾದಿನ । ತೆರಳಿರೆಂದನು ಮಾವನಳಿಯಗೆ ಪ್ರೇಮಭಾವದಲಿ ॥44॥

ಮಾವನಾಡಿದ ನುಡಿಯನೊಂದೇ । ಭಾವದಲಿ ಜಾಮಾತ ಕೇಳ್ದನು । ಸರ್ವಸಿದ್ಧಿತ್ರಯೋದಶಿಯ ಸುಮುಹೂರ್ತದಲಿ ಹೊರಟು ॥

ಮಾವನಡಿಗೆರಗಲ್ಕೆ ಬರಲವ । ಸಾವಧಾನದಿ ಸತಿಯ ಕರೆದನು । ಈ ವಧೂವರರೀಗ ತಮ್ಮಾಶ್ರಮಕೆ ಹೊರಡುವರು ॥45॥

ಅಳಿಯನಿಗೆ ಭೋಜನವ ಹಾಕುತ । ಬಳಿಕ ಕೊಡು ಗೋಧೂಮವ್ರೀಹಿಯ । ನಳಿಯನಿಗೆ ಮಗಳಿಂಗೆ ಹಾದಿಯ ಮೇಲೆ ಭೋಜನಕೆ ॥
ಘಳಿಲನೀ ವಚನವನು ಕೇಳು । ತ್ತೊಳಗೆ ಪೊದಳು ಹಾಕಿ ಬಾಗಿಲ । ನೊಳಗಿನಿಂದಲೆ ಚಿಲಕ ಹಾಕಿದಳೇನ ಹೇಳುವೆನು ॥46॥

ಹಲಪರಿಯೋಳು ಸುಮಂತು ಪೆಳಲು । ತಲೆಯ ಬಾಗಿಲ ಹೊರಗೆ ತಾನ । ಪ್ಪಳಿಸಿಕೊಂಡರು ತೆರೆಯದಿರೆ ಬಾಗಿಲನು ಕರ್ಕಶೆಯು ॥
ಬಳಿಕ ಬಂದು ಸುಶೀಲೆ ತಂದೆಯ । ಬಳಿಗೆ ಸಂತೈಸಿದಳು ಭೋಜನ । ಕೋಳದೆ ಹೊರಟಳು ಪತಿಸಹಿತ ತನ್ನಾಶ್ರಮಕೆ ಮುದದಿ ॥47॥

ವ್ಯಾಕುಲದಿ ಕೇಳಾ ಸುಮಂತನು । ಪಾಕಶಾಲೆಗೆ ಹೋಗಿ ನೋಡಲು । ಪಾಕಶೇಷದ ಹೊಟ್ಟು ನೋಡುತ ಕೊಟ್ಟನಳಿಯನಿಗೆ ॥
ಜೋಕಯಿಂದಲಿ ನಡೆದ ಪುಣ್ಯ । ಶ್ಲೋಕರಿಬ್ಬರು ಹಾದಿ ನಡೆದರು । ಕಾಕುಲತೆಯನು ಬಿಟ್ಟು ರಥದಲಿ ಪಯಣ ಮಾಡಿದರು ॥48॥

ಹಾದಿಯಲಿ ಮಧ್ಯಾಹ್ನಕಾಲದಿ । ಮೋದದಿಂ ಕೌಂಡಿಣ್ಯಮುನಿ ಸಂಧ್ಯಾ । ದಿಗಳ ತೀರಿಸಲಿಕೋಸುಗವಿಳಿದು ಸಂತಸದಿ ॥
ಆ ದಿವಸ ನದಿತೀರದಲಿ ಬಹು । ಮೋದದಿಂದಲಿ ಸ್ತ್ರೀಸಮೂಹ ಚ । ತುರ್ದಶಿಯ ವ್ರತಮಾಡುತಿದ್ದರು ಭಾವಭಕುತಿಯಲಿ ॥49॥

ದೂರದಿಂದ ಸುಶೀಲೆ ನದಿಯಾ । ತೀರದಲಿ ರಕ್ತಾಂಬರದ ಶೃಂ- । ಗಾರದಿಂ ನಾರಿಯರ ನೋಡುತ ಪೋದಳಾಸ್ಥಳಕೆ ॥
ಬೇರೆ ಬೇರಾಗವರನಂತನ । ಚಾರ ಪೂಜೆಯ ಮಾಡುತಿದ್ದರು । ನಾರಿಯರು ಪೇಳ್ದರು ಸುಶೀಲೆಗೆ ವ್ರತವಿಧಾನವನು ॥50॥

ಇಂದು ನಾವೀನದಿಯ ತೀರದಿ । ಚಂದದಿಂ ಮಾಡುವವನಂತನ । ಸುಂದರವ್ರತ ಭಾದ್ರಪದದ ಚತುರ್ದಶಿಯು ಶುಕ್ಲಾ ॥
ತಂದು ರಕ್ತಾಂಬರದ ಸೂತ್ರದ । ಚಂದವಾಗಿ ಅನಂತ ಮಾಳ್ಪುದು । ಮಿಂದು ನದಿಯಲಿ ವಿಧಿಪುರಸ್ಸರ ಮಾಳ್ಪುದೀವ್ರತವಾ ॥51॥

ಉಟ್ಟು ದಿವ್ಯಾಂಬರವ ನದಿಯಿಂ- । ದಿಟ್ಟು ಕುಂಕುಮ ಹಳದಿಯನು ಮನ । ಗೊಟ್ಟು ಗಂಗಾಯಮುನೆಯೆಂಬೀ ಕಲಶಯುಗಳವನು ॥
ಥಟ್ಟನದರಲಿ ನೀರ ತುಂಬುತ । ತೊಟ್ಟು ಪಲ್ಲವ ಪಂಚವದರಲಿ । ಕೊಟ್ಟು ರತ್ನಾಭರಣವವುಗಳ ಪೂಜಿಸೌ ಮುದದಿ ॥52॥

ಎರಡು ಕಲಶಂಗಳಿಗೆ ಷೋಡಶ । ಪರಿಯಲುಪಚಾರಗಳನರ್ಪಿಸಿ । ಪರಿಪರಿಯೋಳಾರತಿಯ ಬೆಳಗುವುದೇಕ ಭಾವದಲಿ ॥
ತಿರುಗಿ ದರ್ಭಗ್ರಂಥಿಶೇಷನ । ನೆರಡು ಕಲಶದ ಮೇಲಿಡುತಲಾ । ಪರಮನೂತನವಸ್ತ್ರವರ್ಪಿಸು ವಿಧಿಪುರಸ್ಸರದಿ ॥53॥

ಎರಡು ಕಲಶಗಳೆದುರು ರಂಗದ । ಪರಿಪರಿಯ ಚೂರ್ಣದಲಿ ಶೋಭಿಪ । ಪರಿಪರಿಯ ಪದ್ಮಾದಿಶಂಖಗಳನ್ನು ಚಿತ್ರಿಪುದು ॥
ತಿರುಗಿ ದರ್ಭದ ಶೇಷಪೂಜೆಯ । ಪರಿಪರಿಯ ಹದಿನಾರು ವಿಧದಲಿ । ಹರುಷದಿಂದುಪಚಾರಿಸುತ ಪೂಜಿಪುದು ಭಕ್ತಿಯಲಿ ॥54॥

ಏಳು ಹೆಡೆಗಳ ಶೇಷ ಲಕ್ಷ್ಮೀ । ಲೋಲಗಿರುವುದು ವಾಸವದರಿಂ । ಹೇಳುವರು ಜನರಿದಕನಂತನೆನುತ್ತ ಮೋದದಲಿ ॥
ಮೇಲೆನಿಪ ನೇತ್ರಗಳು ಪಿಂಗಳ । ತಾಳಿಹನು ಮೋದದಿ ಚತುರ್ಭುಜ । ತಾಳಿಹನು ಗದೆಚಕ್ರ ಪದ್ಮವ ಶಂಖವನು ಕರದಿ ॥55॥

ಧ್ಯಾನವೀಪರಿ ಮೂರ್ತಿ ಮನದಲಿ । ಓನ್ನಮೋ ಭಗವತೆಯ ಮಂತ್ರದಿ । ಸಾನುರಾಗದಿ ಪೂಜಿಸೌ ನೀ ದರ್ಭಗ್ರಂಥಿಯನು ॥
ಆನವೀನವನಂತದೋರದ । ಧ್ಯಾನಪೂರ್ವಕ ಕಲಶಕರ್ಪಿಸಿ । ತಾನು ಪೂಜಿಸಬೇಕು ಮೇಣಾ ಪುರುಷಸೂಕ್ತದಲಿ ॥56॥

ವಿಧಿ ಪುರಸ್ಪರ ಪೂಜೆ ಮಾಡುತ । ವದನದಿಂ ಸಂಸಾರಗವ್ಹರ । ಯಿದನು ಮಂತ್ರೋಚ್ಚಾರ ಮಾಡುತ ದೋರ ಕಟ್ಟುವುದು ॥
ಮುದದಿ ಹಳೆ ದೋರವ ವಿಸರ್ಜಿಪ । ವಿಧಿಯ ಪೇಳ್ವೆನು ಮಂತ್ರವನು ಕೇಳ್ । ವದನದಿಂದುಚ್ಚರಿಸು ನಮಸ್ತೇ ವಾಸುದೇವಾಯ ॥57॥

ವದನದಿಂ ದಾತಾ ಚ ಯೆಂಬುವ । ವಿಧಿಪುರಸ್ಪರ ಮಂತ್ರ ಹೇಳುತ । ಮುದದಿ ವಾಯನ ಕೊಡುವುದೌ ಗೋಧೂಮ ಘೃತಸಹಿತಾ ॥
ಇದನು ದಕ್ಷಿಣೆ ಸಹಿತ ಕೊಡುವುದು । ಅದರೊಳರ್ಧವ ಕೊಟ್ಟು ದ್ವಿಜರಿಗೆ । ಮುದದಿ ಬಳಿ ಕುಳಿದರ್ಧನನು ಸೇವಿಸುವುದೈ ತಾನು ॥58॥

ವ್ರತವಿದನು ಹದಿನಾಲ್ಕು ವತ್ಸರ । ಸತತ ಮಾಡುತ ನಂತರದಿ ವಿಧಿ- । ಯುತ ಚತುರ್ದಶ ಕಲಶ ದಾನವನಿತ್ತು ತೋಷದಲಿ ॥
ಕ್ಷಿತಿಯಮರರಿಗೆ ಭೋಜನವ ನೀ । ನತಿ ವಿವೇಕದಿ ಮಾಡಿದರೆ ನಿನ । ಗತಿತ್ವರಿತದಲಿ ದೊರೆಯುವವು ಪುರುಷಾರ್ಥಗಳು ನಿಜವು ॥59॥

ಸತಿಯೆ ಕೇಳಿ ದಿನವನಂತನ । ವ್ರತಕೆ ಯೋಗ್ಯ ಚತುರ್ದಶಿಯು ನಿನ್ನ ಗತುಳತರ ಸೌಭಾಗ್ಯ ಸುಖದಾಯಕವದೀ ವ್ರತವು ॥
ವ್ರತವ ನೀನಾ ಚರಿಪುದೆನಲಾ । ಸತಿಯರು ಪದೇಶಿಸೆ ಸುಶೀಲೆಯು । ವ್ರತವ ಮಾಡಿದಳಾಗ ಸುಮನೋಭಾವದಲಿ ತಿಳಿಯೆ ॥60॥
ತೀರಿಸುತಲಾ ವ್ರತವ ಸತ್ವರ । ನಾರಿ ಬಂದಳು ತಿರುಗಿ ತಾವಕೆ । ತೀರಿಸುತಲಾಹ್ನಿಕವ ಬಂದನು ತಿರುಗಿ ಕೌಂಡಿಣ್ಯಾ ॥
ದಾರಿಯನು ಕ್ರಮಿಸುತ್ತ ದಂಪತಿ । ಗೋರಥದಿ ಮುಂದಕ್ಕೆ ನಡೆಯಲು । ತೋರಿತಮರಾವತಿಯ ಪೋಲುವ ನಗರ ಸನ್ಮುಖದಿ ॥61॥
ನಾಗರೀಕರು ಬಂದು ಮುಂದಕೆ । ಬಾಗಿ ಶಿರವನು ಬಿನ್ನವಿಸಿದರು । ಬೇಗದಲಿ ಬಾರೆಮ್ಮ ನಗರಿಗೆ ನೀನೆಯಧಿಪತಿಯಾ ॥
ಸಾಗಲಾಕೌಂಡಿಣ್ಯ ನಗರಕೆ । ನಾಗರಿಕರಭಿಷೇಕ ಮಾಡಿದ- । ರೀಗ ಪೇಳುವೆನೆಂತು ಮುನಿಕೌಂಡಿಣ್ಯ ಸಂಭ್ರಮವಾ ॥62॥
ದಿನಗಳೀಪರಿ ಹಲವು ಹೋಗಲು । ಮುನಿಪನೊಂದಿನ ಸುಖದಿ ಕುಳಿತಿರೆ । ವನಿತೆಯಳ ಕರಬದ್ಧ ಸೂತ್ರವ ಕಂಡು ಕೇಳಿದನು ॥
ವನಿತೆ ವಿನಯದಿ ಹೇಳ್ದಳಿದು ಪಾ । ವನವನಂತನ ದಾರವಿದರಿಂ । ನಿನಗೆ ಲಭಿಸಿತು ರಾಜ್ಯಭೋಗವು ಮಹಿಮೆಯಗಣಿತವು ॥63॥
ವ್ರತವ ಮಾಡಿದ ದಿವಸ ನಿನಗೀ । ಕ್ಷಿತಿ ಪತಿಯ ಸಾಮ್ರಾಜ್ಯ ಸಿಕ್ಕಿತು । ಸತತವಿದರಿಂದುತ್ತರೋತ್ತರವೃದ್ಧಿಯಾಗುವುದು ॥
ಸತಿಯ ಸವಿನುಡಿಗಳನು ಕೇಳುತ । ಯತಿವರೇಣ್ಯನು ಪೇಳ್ದ ನಿನ್ನಯ । ಕೃತಕರಕ್ತಾಂಬರದ ದಾರವು ಮಾಟಗಾರಿಕೆಯು ॥64॥
ಎಲ್ಲಿ ಕೃತಕ ದನಂತ ದಾರವು । ಎಲ್ಲಿ ಸುಖಸಂಪತ್ತಿರಾಜ್ಯವು । ಬಲ್ಲೆ ನಿನ್ನ ವಶೀಕರಣಸಾಧನವ ನಾ ಬಲ್ಲೆ ॥
ಬಲ್ಲೆ ನಿನ್ನೀ ಕೃತಕ ಪರಿಯವ । ನೆಲ್ಲವೆನುತಲಿ ಕೋಪದಿಂದಾ । ವಲ್ಲಭೆಯ ಕರದಿಂದಲೆಳೆದನನಂತದೋರಕವಾ ॥65॥
ಸೆಳೆದು ದಾರವ ಕೋಪದಿಂದಲೆ । ಜ್ವಲನಗರ್ಜಿಸಿದನು ಯತೀಶ್ವರ । ನಿಳೆಯ ಸುಖಸಾಮಾಜ್ಯ ತನ್ನಯ ತಪದ ಫಲವೆನುತಾ ॥
ತಿಳಿದು ಗರ್ವದಿ ಸತಿ ಸುಶೀಲೆಯ । ಛಳಿಸಲಾರಂಭಿಸಿದನಾಕ್ಷಣ । ವಿಳೆಯ ಧನಸಂಪತ್ತಿ ಕ್ಷಣದಲಿ ನಷ್ಟವಾಯಿತಲಾ ॥66॥

ನೋಡುತಾಪತಿರಾಜ ಮಾಡಿದ । ಮೂಢತ ನವನು ಲಕ್ಷಿಸದೆ ಯಾ । ಪ್ರೌಢೆ ಜ್ವಲನದ ದಾರವನು ಹಾಕಿದಳು ಹಾಲಿನಲಿ ॥
ಮಾಡಿದಪರಾಧವನು ಕ್ಷಮಿಸೈ । ಮೂಢರಾವೆಮಗಿಲ್ಲ ಜ್ಞಾನವು । ಕಾಡಬಾರದೆನುತ್ತ ಬೇಡಿದಳಾಗ ಶ್ರೀಹರಿಯಾ ॥67॥

ಅರಿಗಳಾದ ನಗರದಲಿ ತ- । ಸ್ಕರರು ಗೋಧನ ಹರಣ ಮಾಡಿದ । ರರರೆ ಭಿಕ್ಷಾಪಾತ್ರೆ ಕೈಯಲಿ ಪ್ರಾಪ್ತವಾಯಿತಲಾ ॥
ಅರಮನೆಯು ಪಾವಕನ ಮುಖದಿಂ- । ದುರಿದು ಭಸ್ಮೀಭೂತವಾಯಿತು । ಹರಿಯ ಕ್ಷಣದವಕೃಪೆಯು ಸಾಲದೆ ತಾಳ್ವರಾರಿನ್ನು ॥68॥

ಮನದೊಳಾಗ ವಿಚಾರ ಬಂತೈ । ಮುನಿದನೈ ಯಿಂದೆಮಗನಂತನು । ವನಿತೆ ಮಾತನು ಕೇಳದೆನಗೀ ಕಷ್ಟ ಬಹಳಾಯ್ತು ॥
ವನದ ಮದಗಜದಂತೆ ದುರ್ವ । ರ್ತನವ ಮಾಡಿದೆ ನಾನ ನಂತನ । ಮುನಿಸಿನಿಂದಲಿ ಜ್ವಲನಗರ್ಪಿಸಿ ಕಷ್ಟ ಭೋಗಿಸಿದೆ ॥69॥

ಮಾಡುವೆನು ನಿರ್ಧಾರ ಮನವನು । ರೂಢಿಯಲಿನಾ ಶ್ರೀಯನಂತನ । ನೋಡದಲೆ ನಾಗ್ರಹಿಸನನ್ನೋದಕವ ಮುಂದಿನ್ನು ॥
ಮಾಡುತೀನಿರ್ಧಾರ ಸತಿಯೊಡ- । ಗೂಡಿ ಭೂಮಿಯು ಪರ್ಯಟನವನು । ಮಾಡಿದನು ಕೌಂಡಿಣ್ಯ ಬಾರೋ ಅನಂತ ಬಾರೆನುತಾ ॥70॥

ಅಡವಿಯಲಿ ದಂಪತಿಯರೀಪರಿ । ಹುಡುಕುತಿರಲಾ ಶ್ರೀಯನಂತನ । ಗಿಡವನೊಂದನು ಕಂಡರಾಮ್ರದ ರಮ್ಯಫಲವಿರುವಾ ॥
ಪೊಡವಿಯಲ್ಲಿಯ ಪಕ್ಷಿಕೀಟಕ । ಗಿಡಸಮೀಪಕೆ ಬಾರರಾತನ । ಕಡೆಗೆ ಕೇಳಿದರವರು ನೋಡಿದಿಯೋ ಅನಂತನನು ॥71॥

ಮಾತನಾಡಿತು ವಿಪ್ರನೊಳು ತ । ಚ್ಚೂತವೃಕ್ಷವು ಕರುಣ ಸ್ವರದಲಿ । ಭೂತಳದಿ ನಾ ನೋಡಲಿಲ್ಲೈಯ ಶ್ರೀಯನಂತನನು ॥
ಪ್ರೀತಿಯಿಂದಲಿ ಯೆನಗೆ ತಿಳಿಸಾ । ನಾಥನನು ನೀ ನೋಡಿದರೆ ಯೆನ । ಗೀತೆರದಿ ಮಾಡುವ ಬಹಿಷ್ಕಾರವನು ತೊಲಗಿಸುವೆ ॥72॥

ನಡೆದನಾ ಕ್ಷಣ ವಿಪ್ರ ಮುಂದ ಕೆ । ಹುಡುಕುತಲಿಯಾಶ್ರೀಯನಂತನ । ಅಡವಿಯಲಿ ಮೇಣೊಂದ ಕಂಡನು ವತ್ಸಧೇನುಗಳಾ ॥
ಅಡವಿಯಲಿ ತೃಣ ಬಹಳ ವಿರುವದು । ಕಡಿದು ತಿನ್ನಲು ದನದ ಬಾಯಿಗೆ । ಪಿಡಿ ಸಿಗದೆ ಬಳಲುವದುಪಾಸದಿ ತೃಣದ ಮಧ್ಯದಲಿ ॥73॥

ನೋಡಿ ಧೇನುವ ಕೇಳ್ದನಾದ್ವಿಜ । ನೋಡಿದಿಯೋ ನೀ ಶ್ರೀಯಂತನ । ಕಾಡಿನಲಿ ತಿರುನಾಡು ತಿಹೆವು ಬಂದನೇನಿಲ್ಲ ॥
ನೋಡಿ ಕರುಣಾ ಸ್ವರದಿ ವಿಪ್ರನಿ- । ಗಾಡಿದಳು ತದ್ಧೇನು ವಿಪ್ರನೆ । ನೋಡಲಿಲ್ಲ್ಯೆ ನಿನ್ನನಂತನ ನೀನೆ ಹೇಳೆನಗೆ ॥74॥

ನುಸುಳಿದನು ಕೌಂಡಿಣ್ಯ ಮುಂದಕೆ । ವೃಷಭನೋರ್ವನ ಕಂಡು ಕೇಳಿದ । ನಸಮಬಲ ನೀ ಪೇಳು ಯೆನ್ನ ಅನಂತನೆಲ್ಲಿಹನು ॥
ವೃಷಭ ಪೇಳ್ದನು ನಿನ್ನ ನಂತನು । ನುಸುಳಲಿಲ್ಲ್ಯೆ ಯಿಲ್ಲಿ ನೀನಾ । ಕುಸುಮಶರನಪ್ಪನನು ನೋಡಿದರೆನಗೆ ತಿಳಿಸುವುದು ॥75॥

ಮುಂದೆ ನಡೆಯಲು ವಿಪ್ರ ಕಂಡನು । ಚಂದವಾಗಿಹ ಕೆರೆಗಳೆರಡನು । ಒಂದರಿಂದೊಂದಕ್ಕೆ ಹರಿವುದು ನೀರು ಸಂತತವು ॥
ಮಂದಸಸ್ಮಿತಕಮಲಮುದದ । ವೃಂದದಿಂದಲಿ ಚಂದವಿರುವುದು । ಮುಂದೆ ಬಂದಾಕೆರೆಗಳಿಗೆ ಕೇಳಿದನನಂತನು ॥76॥

ಕೆರೆಗಳಾದರು ನಾಸ್ತಿ ಯುತ್ತರ- । ವಿರದೆ ಕೊಟ್ಟರು ಕೇಳಿ ವಿಪ್ರನು । ತೆರಳಿದನು ಮುಂದಕ್ಕೆ ಕಂಡನು ಗರ್ದಭನನೊಂದಾ ॥
ಮರಳಿ ಕುಂಜರನೊಂದ ಕಂಡನು । ಭರದೊಳವುಗಳ ಕೇಳಿದನು ನೀ । ವರಿವಿರಾ ಪೇಳಿಯನಂತನ ತೋರಿಸುವೆನೀಗಾ ॥77॥

ತಿರುಗಿಯುತ್ತರ ಕೊಡದಲಾಕುಂ- । ಜರನು ಗರ್ದಭ ತೆರಳೆ ಮುಂದಕೆ । ಧರಣಿಸುರ ದುಃಖದಲ್ಲಿ ಪ್ರಾಣತ್ಯಾಗ ಮಾಡುವರೆ ॥
ಧರಣಿಯಲಿ ಬಿದ್ದುರುಳುತಿದ್ದನು । ಶರಣವತ್ಸಲ ಭಕ್ತನನು ತಾ । ಪರಿಕಿಸಲು ಬಂದಲ್ಲಿ ಮುಟ್ಟಿದ ವಿಪ್ರವೇಷದಲಿ ॥78॥

ಏಳು ವಿಪ್ರೋತ್ತಮನೆ ಏಳ್ಳೆ । ಪೇಳು ಯೆನ್ನೊಡನೇನು ಬೇಕದ । ಪೇಳು ನಿನಗಾಶ್ರೀಯನಂತನ ತೋರಿಸುವೆನೀಗಾ ॥
ಏಳು ಬಾರೆನ್ನೊಡನೆ ಲಕ್ಷ್ಮೀ । ಲೋಲನಾಗಿಹ ಶ್ರೀಯನಂತನ । ಲೀಲೆಯನು ನಾ ತೋರಿಸುವೆನೆಂದವನ ಕೈ ಹಿಡಿದು ॥79॥

ತೆರಳಿದನು ಬ್ರಾಹ್ಮಣನು ವೃದ್ಧನು । ಕರದಿ ಕೌಂಡಿಣ್ಯನನು ಹಿಡಿದನು । ಬರಲು ಮುಂದಕೆ ಕಂಡನೈ ಬಹುರಮ್ಯ ಗಹ್ವರವಾ ॥
ಭರದಿ ಗಹ್ವರವನು ಪ್ರವೇಶಿಸಿ । ಶರಣನನು ದಿವ್ಯಾಸನದಿ ಸ- । ತ್ಕರಿಸಿ ತೋರಿಸಿ ತೋರಿಸಿದನು ಕಣಾ ನಿಜದಿವ್ಯರೂಪವನು ॥80॥

ನೋಡಿದನು ಕೌಂಡಿಣ್ಯ ರೂಪವ । ನಾಡಲಾರದೆ ಚರಣಕೆರಗಿದ । ಜೋಡಿಸುತ ಕರಗಳನು ನಂತರ ಸ್ತುತಿಸತೊಡಗಿದನು ॥
ನೋಡಿದೆನು ನಾ ನಿನ್ನ ಚರಣವ । ಗೂಢವನು ನಾ ತಿಳಿಯೆ ನಿನ್ನಯ । ಮೂಢನಾಗಿಹೆ ಕಾಯೊ ಕ್ಷಮಿಸಪರಾಧ ಮಾಡಿದೆನು ॥81॥

ಸಿರಿಯರಸ ತವ ಸ್ಮರಣಮಾತ್ರದಿ । ದುರಿತವೆಲ್ಲವು ಹರಣವಪ್ಪುದು । ಪುರುಷರಲಿ ಪುರುಷೋತ್ತಮನು ನೀ ಯಜ್ಞ ಪುರಷನಲಾ ॥
ಹರಿಹರವಿರಂಚಿಗಳು ನಿನ್ನಯ । ಪರಿ ಪರಿಯ ರೂಪಗಳು ನಿನ್ನಯ । ದರುಶನವೆ ದುರಿತೌಘನಾಶನ ಸಚ್ಚಿದಾನಂದಾ ॥82॥

ಪಾಪಿ ನಾನಿಹೆ ಪಾಪ ಕರ್ಮನು । ಪಾಪದಲಿ ಹುಟ್ಟಿದೆನು ಪಾಪದ । ರೂಪನಾಗಿಹೆ ಕ್ಷಮಿಸು ನಾರಾಯಣನೆ ಶ್ರೀಹರಿಯೆ ॥
ಈ ಪರಿಯೊಳೆನಗಿತ್ತೆ ದರ್ಶನ । ತಾಪವನು ಸಂಹರಿಸುತೆನ್ನಯ । ಕೋಪಿಸದೆ ಸಲಹೆನ್ನ ಲಕ್ಷ್ಮೀಲೋಲ ದೀನನನು ॥83॥

ಶರಣರನು ರಕ್ಷಿಸುವ ಬಿರುದಿನ । ಹರಿಯೆನುತ ನಾ ನಂಬಿ ನಿನ್ನಯ । ಚರಣ ಕೆರಗಿದೆ ರಕ್ಷಿಸೈ ನಿನ್ನಂಘ್ರಿಕಮಲದಲಿ ॥
ಇರುವೆ ನಾನೀಭ್ರಮರರೂಪದಿ । ಪರಿಮಳವಸೇವಿಸುವೆಪದರಜ- । ವಿರಲಿ ಯೆನ್ನಯ ಶಿರದಿ ಪಾವನ ಮಾಡುತೀದೇಹಾ ॥84॥

ನಿನ್ನ ಚರಣವ ಕಂಡೆ ನಿಂದಿಗೆ । ಧನ್ಯನಾದೆನು ದರ್ಶನದಿ ನಾ- । ನಿನ್ನು ಪೇಳುವುದೇನು ಭಕ್ತರ ಕಾಮಧೇನುವಲಾ ॥
ಎನ್ನುತೀಪರಿ ಸ್ತುತಿಸೆ ದ್ವಿಜವರ । ನನ್ನು ತಕ್ಕೈಸಿದನು ಹರಿಯು ಪ್ರ- । ಸನ್ನನಾದನು ಕೊಟ್ಟನೈ ವರ ಮೂರರನು ಮುದದಿ ॥85॥

ಭೂಸುರನೆ ಮೆಚ್ಚಿದೆನು ನಿನಗಿ- । ನ್ನಾಶೆ ಯಾವುದು ಪೇಳು ಧರ್ಮದ । ವಾಸನೆಯು ದಾರಿದ್ರ್ಯನಾಶವು ಹರಿಪುರದಿ ವಾಸ ॥
ಲೇಸಿನಿಂದೀ ವರತ್ರಯಂಗಳ । ವಾಸುದೇವನು ಕೊಟ್ಟನವನಿಗೆ । ಭೂಸುರನು ಕೇಳಿದನು ನೋಡಿದುದೆಲ್ಲ ಹಾದಿಯಲಿ ॥86॥

ಶ್ರೇಷ್ಠ ವಾಗಿಹ ಚೂತವೃಕ್ಷವ । ದೃಷ್ಟಿಸಿದೆ ಹಾದಿಯಲಿ ಫಲವದೆ । ಮುಟ್ಟಲಾರರು ಪಕ್ಷಿಕೀಟಕವೇನು ಕಾರಣವು ॥
ಬಿಟ್ಟು ಮುಂದಕೆ ಬರಲು ಕಂಡೆನು । ದೃಷ್ಟಿಯಲಿ ಧೇನುವ ಸವತ್ಸಕ । ಮುಟ್ಟಲಾರದು ತೃಣವು ಬಾಯಿಗೆ ಚಿತ್ರವೇನೆಂಬೆ ॥87॥

ಕೆರೆಗಳೆರಡನು ಕಂಡೆ ನೀರದು । ಹರಿವುದು ಪರಸ್ಪರವು ಯಾರಿಗು । ಬರದೆ ಉಪಯೋಗಕ್ಕೆ ವೃಷಭನ ಕಂಡೆ ಮದಯುತನಾ ॥
ತಿರುಗಿ ಗರ್ದಭ ಕುಂಜರರ ನಂ- । ತರದಿ ಕಂಡೆನು ಕೊನೆಗೆ ನಿನ್ನಯ । ಚರಣ ಕಂಡೆನು ಹೇಳು ಯೆನಗಿದರರ್ಥವೇನೆಂದು ॥88॥

ಪರಿಯೊಳೀ ಭೂಸುರನು ಕೇಳಲು । ಹರಿಯು ನಗುತಿಂತೆಂದ ನೀನೋ- । ಡಿರುವ ಚೂತದವೃಕ್ಷ ದ್ವಿಜ ವರನೋರ್ವನುನ್ಮತ್ತ ॥
ಪರಿಪರಿಯ ಶಾಸ್ತ್ರಜ್ಞ ಕೋವಿದ- । ನಿರಲು ವಿದ್ಯಾದಾನ ಮಾಡದೆ । ಮರಣವಾಗಲು ಬಂತು ಚೂತದ ವೃಕ್ಷದಲಿ ಜನ್ಮ ॥89॥

ಧೇನುವತ್ಸರ ಕಂಡೆ ಮುಂದಕೆ । ನೀನು ನೋಡ್ಯೆ ಭೂಮಿನಿಷ್ಫಲ । ದಾನವನು ಭೂಸುರಗೆ ಮಾಡಿದ ಪಾಪಫಲವಿದಲಾ ॥
ನೀನು ನೋಡಿದ ವೃಷಭ ಪೂರ್ವ ದಿ । ದಾನಮಾಡಿದ ಕೃಪಣ ಧನಿಕನು । ನೀನು ನೋಡಿದ ಕೆರೆಗಳೆರಡರ ಪರಿಯ ಪೇಳುವೆನು ॥90॥

ಅಕ್ಕ ತಂಗಿಯರಿಬ್ಬರಿದ್ದರು । ಅಕ್ಕರದೊಳ ವರುಗಳು ತಮ್ಮೊಳು । ಸಿಕ್ಕಿದಂದದಿ ದಾನಧರ್ಮ ಪರಸ್ಪರದಿ ಮಾಡಿ ॥
ಸೊಕ್ಕಿನಿಂದಲಿ ಸಾಯಲೀ ಪರಿ । ಮಕ್ಕಿಯಲಿ ಹುಟ್ಟಿರುವರಿವರಿಗೆ । ಸಿಕ್ಕಿತ್ಯೆ ಫಲ ಕರ್ಮ ವಶದಲಿ ನೋಡು ನೀನದನು ॥91॥

ಕತ್ತೆ ಯೆಂಬದು ನಿನ್ನ ಕ್ರೋಧವು । ಹಕ್ಕಿ ಯೆಂಬದು ನಿನ್ನ ಮದವದು । ಮುಕ್ತಿಯೆಲ್ಲರಿಗಾಯ್ತು ಕೇಳನುತಾಪ ನಿನಗಾಗೆ ॥
ಸ್ವಸ್ತಿಸುಖಸಾಮ್ರಾಜ್ಯ ಭೋಗಿಸಿ । ಮುಕ್ತಿಯಪ್ಪುದು ನಿನಗೆ ಮುಂದಕೆ । ಸತ್ಯವ್ಯೆ ನಿನಗಾಪುನರ್ವಸು ತಾರೆಯಲಿ ವಾಸ ॥92॥

ಇಂತು ವಿಸ್ತರಿಸಿದನು ಶ್ರೀಮದ । ನಂತ ಕಥೆಯನು ಧರ್ಮಜಗೆ ಶ್ರೀ । ಕಾಂತನೆಂದನು ಫಲವಿದನು ಕೌಂಡಿಣ್ಯ ಭೋಗಿಸುತಾ ॥
ಆಂತ್ಯದಲ್ಲಿ ಸ್ವರ್ಗಕ್ಕೆ ತೆರಳಿದ- । ನಿಂತು ಪೇಳಿದ ತೆರದಿ ಶ್ರೀಮದ- । ನಂತವ್ರತವನು ಮಾಡು ದೊರೆವುದನಂತ ಸಾಮ್ರಾಜ್ಯಾ ॥93॥

ಕಂತು ಪಿತನಾಡಿದ ತೆರದೊಳಾ । ಕುಂತಿಪುತ್ರ ಯುಧಿಷ್ಠಿರನು ಮನ- । ಸಂತಸದಿ ಮಾಡಿದನು ಕೇಳ್ಯೆ ವ್ರತವನಂತವದು ॥
ಬಂತು ಸುಖಸಾಮ್ರಾಜ್ಯವವನಿಗೆ । ನಂತರದೊಳೆಂದೀಕಥೆಯ ಬಹು । ಸಂತಸದಿ ಗುರು ಪೇಳಿದನು ಕೇಳ್ನಿನ್ನ ಪೂರ್ವಜಗೆ ॥94॥

ವ್ರತಗಳಲಿ ಯುತ್ತಮವನಂತನ । ವ್ರತವು ನೀನಾಚರಿಸಿ ಪಶ್ಚಾತ್ ಸುತನಿಗೀವುದು ನಾಗನಾಥಗೆ ಭಕ್ತಿಭಾವದಲಿ ॥
ವ್ರತವನಿದಕೌಂಡಿಣ್ಯ ಮಾಡಿದ । ನತುಲಸುತಸಂಪತ್ತಿ ಪಡೆದನು । ಕೃತಿಯೊಳೀ ವ್ರತ ಶ್ರೇಷ್ಠ ವೆಂದನು ನಗುತ ಶ್ರೀಗುರುವು ॥95॥

ವ್ರತವನಂತನ ಪುಣ್ಯ ಪಾವನ । ಕ್ಷಿತಿಯೊಳಗೆ ಸಕಲಾರ್ಥಸಾಧನ । ವೃತವನೀನಾಚರಿಸು ಭಕಿಯೊಳೇಕಭಾವದಲಿ ॥
ಸತತವಿದನಾಚರಿಸೆ ಪಾಪದ । ತತಿಯು ಭಸ್ಮೀಭೂತವಾಗುವು- । ದತುಲ ಪುಣ್ಯದ ವ್ರತವನೆನಗೋಸ್ಕರವೆ ನೀ ಮಾಡು ॥96॥

ಗೋತ್ರವಿದೆ ಕೌಂಡಿಣ್ಯವೆನ್ನ ದು । ಧಾತ್ರಿಯಲಿ ಕೇಳೀ ವ್ರತದ ಫಲ । ಸತ್ವರದೊಳೆನಗರ್ಪಿಸುವುದೈ ಮೆಚ್ಚುವೆನು ನಿನಗೆ ॥
ಪ್ರೀತಿಯಲಿ ಶ್ರೀಗುರು ನಿರೂಪಿಸೆ । ಭಕ್ತಿಪೂರ್ವಕ ನಿನ್ನ ಪೂರ್ವಜ । ಚಿತ್ತಶುದ್ಧದೊಳೀವ್ರತವನಾಚರಿಸಿದನು ಮುದದಿ ॥97॥

ಗುರುವನುಪಚರಿಸಿದನು ಭಕ್ತಿಯ- । ಲಿರದೆ ಸಾಯಂದೇವ ನಾನಾ । ಪರಿಯಲಾರತಿಗೈದು ಗೀತಾವಾದ್ಯ ನೃತ್ಯದಲಿ ॥
ಪರಿಪರಿಯ ಪಕ್ವಾನ್ನದಲಿ ಭೂ । ಸುರರ ಸಂತೈಸಿದನು ಶ್ರೀಗುರು- । ವರಗೆ ಭೋಜನವಿತ್ತನೈ ಶಾಕೋಪಶಾಕೆಯಲಿ ॥98॥

ಹರುಷವಾಯಿತು ಸರ್ವಗಾಣಗ । ಪುರದಿ ನಿನ್ನಯ ಪೂರ್ವಜನು ನಂ- । ತರದಿ ಕಳುಹಿಸಿ ಕೊಟ್ಟನೈ ನಿಜಪುತ್ರಸತಿಯರನು ॥
ಗುರುಚರಣದಡಿಗಿದ್ದು ತಾನೇ । ಪರಮ ಸಂತೋಷದಲಿ ಶ್ರೀಗುರು- । ಚರಣ ಸೇವೆಯ ಮಾಡಿ ದನು ತಾನೇಕಭಾವದಲಿ ॥99॥

ಧನ್ಯ ನಿನ್ನಯ ಪೂರ್ವಜನಿಗೆ ಪ್ರ- । ಸನ್ನನಾದನು ಗುರುವು ನಿನ್ನಯ । ಧನ್ಯತೆಯನೇನೆಂಬೆ ನಿನಗಾ ವಂಶದಲಿ ಜನ್ಮ ॥
ನಿನ್ನ ಪೂರ್ವಜನಿಂಗೆ ಸಿಕ್ಕಿದ । ರನ್ನದೋಪನು ಗುರುನಿಧಾನವು । ಪುಣ್ಯ ವಿಹುದೀಕಥೆಯ ಕೇಳ್ದರಿಗೆಂದನಾವಿಷ್ಣು ॥100॥

॥ ಅಧ್ಯಾಯ 43 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 44

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ತಂತುಕಾರನಿಗರ್ಧಕ್ಷಣದಲಿ । ಸಂತಸದಿ ಗುರು ಮಲ್ಲಿಕಾರ್ಜುನ । ಕಂತುಹರನನು ತೋರಿದನು ಶ್ರೀಶೈಲ ಪರ್ವತದಿ॥

ಗುರುಚರಣದಲಿಯಡಿಗಿಹವು ಬಹು । ಪರಮ ಪಾವನ ತೀರ್ಥಗಳು ಪಾ- । ಮರರು ತಿಳಿಯದೆ ಮಂದಮತಿಗಳು ತೀರ್ಥಯಾತ್ರೆಯಲಿ ॥
ಬರಿದೆ ಕಾಲವ ಕಳೆವರೈ ಗುರು । ವರನ ತಿಳಿಯರು ಮಂದಮತಿಗಳು । ಧರಣಿಯಲಿ ಮಾಯೆಯನು ಹರಿವವನೋರ್ವ ಗುರುರಾಯಾ ॥1॥

ಗುರುಚರಿತ್ರದ ಕಥೆಯ ಮುಂದೆನ । ಗರುಹಬೇಕೆಂದಾಗ ಸಿದ್ಧನ । ಚರಣಕೆರಗಿದನೇಕಭಾವದ ನಾಮಧಾರಕನು ॥
ಕರುಣದಿಂದಾ ಸಿದ್ಧ ಮುನಿವರ- । ನರುಹಿದನು ಪ್ರೇಮದಲಿ ಕಥೆಯನು । ಗುರುಚರಿತಾಮೃತವ ಕರ್ಣಪಿಯೂಷಸಾಧನವಾ ॥2॥

ಶಿಷ್ಯರಿದ್ದರು ಹಲವರದರೊಳು । ಶಿಷ್ಯನೋರ್ವನು ತಂತುಕಾರನು । ನಿಶ್ಚಲಾಂತಃಕರಣ ಶ್ರೀಗುರುಚರಣ ಸೇವೆಯಲಿ ॥
ದಕ್ಷನವ ಸಂಸಾರಯಾತ್ರೆಯೊ । ಳೆಚ್ಚರದೊಳವ ಪ್ರಹರತ್ರಯವಲಿ । ಸ್ವಚ್ಛನೇಯುವ ಕೆಲಸ ಮಾಡುತಲೊಂದೆ ಪ್ರಹರದಲಿ ॥3॥

ಗುರುವರನ ಮಠ ಕೈದಿ ದೂರದಿ । ಚರಣ ಸ್ಮರಿಸುತ ನಿಂತು ಮಠದಲಿ । ಭರದೊಳುಡುಗುವ ಝಾಡಿಸುವ ರಾಜಾಂಗಣವನವನು ॥
ಪರಿಯೊಳೀದಿನ ಕೆಲವು ಕಳೆಯಲು । ಹರನ ವ್ರತ ಶಿವರಾತ್ರಿ ಬಂತೈ । ತೆರಳಿದರು ತಂತುಕನ ತಾಯ್ತಂದೆಗಳು ಪರ್ವತಕೆ ॥4॥

ತೆರಳುವಾಗಲೆ ತಂತುಕಾರನ । ಕರೆದರೈ ತಾಯ್ತಂದೆಗಳು ನೀ । ತೆರಳಬಾರದೆ ಮಗನೆ ಶ್ರೀಶೈಲಕ್ಕೆ ಯೆಮ್ಮೊಡನೆ ॥
ಮರಳಿ ತಂತುಕ ನುಡಿದನವರಿಗೆ । ಗುರುವೆ ಯೆನ್ನಯ ಮಲ್ಲಿಕಾರ್ಜುನ । ಗುರುಚರಣ ಗಳೆ ಯೆನ್ನ ಶ್ರೀಪರ್ವತವೆ ನಿಜವೆಂದಾ ॥5॥

ಹೊರಡದಿಹನವನೆಂದು ಸರ್ವರು । ತೆರಳಿದರು ಶ್ರೀಪರ್ವತಕೆ ಭ್ರಾ- । ತರರು ತಾಯ್ತಂದೆಗಳು ಯಾತ್ರಿಕರೆಲ್ಲರವರವರು ॥
ಮರುಳನೆಂದೇ ಬಗೆದರವನನು । ಗುರುವು ನಗು ತಿಂತೆಂದನವನಿಗೆ । ತೆರಳಬಾರದೆ ನೀನು ಯಾತ್ರೆಗೆ ಮಲ್ಲಿಕಾ ಎಲ್ಲಿಕಾರ್ಜುನನಾ ॥6॥

ಗುರುವಚನವನು ಕೇಳಿ ತಂತುಕ । ನರುಹಿದನು ಗುರುವಿಂಗೆ ನಿನ್ನಯ । ಚರಣಗಳು ಶ್ರೀಶೈಲ ನೀನೇ ಮಲ್ಲಿಕಾರ್ಜುನನು ॥
ಮರುಳರವರೇನೆಂಬೆ ನಿನ್ನಯ । ಪರಿಯನರಿಯರು ನಿನ್ನ ಬಿಟ್ಟೀ । ಪರಿಯ ಯಾತ್ರೆಯೊಳೇನು ಫಲವಹುದೆಂದನವ ನಗುತ ॥7॥

ಚರಣದಲಿಯಡಗಿಹವು ನಿನ್ನಯ । ಪರಿಪರಿಯ ತೀರ್ಥಗಳು ಪಾಮರ । ರರಿಯದಿದನಾಚರಿಸುವರು ಯಾತ್ರೆಗಳ ಮರುಳರಲಾ ॥
ನರನ ರೂಪದಿ ಬಂದು ಯೆಮ್ಮೊಳು । ಹರನು ಲೀಲೆಯನಾಡು ತಿರಲಿದ- । ನರಿಯದಲೆ ಪಾಷಾಣ ಪೂಜಿಪರೆಲ್ಲ ಮರುಳರಲಾ ॥8॥

ಈ ತೆರದೊಳಾ ತಂತುಕಾರನು । ಮಾತನಾಡಿದ ಗುರುವ ಸ್ತುತಿಸುತ । ಲಾತನಿದ್ದನು ದಿನದಿನದಿ ಗುರು ಸನ್ನಿಧಿಯೊಳಲ್ಲಿ ॥
ಈ ತೆರದಿ ಹಲದಿನಗಳಾಗಲು । ಪ್ರೀತಿಯಾಯಿತು ಗುರುವಿಗಾಶಿವ । ರಾತ್ರಿ ದಿನದಲಿ ಕರೆದು ಪೇಳ್ದನು ತಂತುಕಾರನಿಗೆ ॥9॥

ಸ್ನಾನ ತೀರಿಸಿ ಸಂಗಮದಿ ಮ । ಧ್ಯಾಹ್ನ ಸಮಯದಿ ತಂತುಕಾರನು । ಧ್ಯಾನಪೂರ್ವಕವಾಗಿ ನಿಂತನು ಗುರುವಿನೆದುರಿನಲಿ ॥
ಸಾನುರಾಗದಿ ಗುರುವು ಪೇಳ್ದನು । ನೀನು ಹಿಂದುಳಿದಿರುವಿ ಯಾತ್ರೆಯ । ನೇನು ಬಿಟ್ಟ್ಯ ನಗೆಯ ಮಾಡುವುದಿಚ್ಛೆ ನಿನಗಿಹುದೆ? ॥10॥

ಮಲ್ಲಿಕಾರ್ಜುನನೊಲ್ಲೆ ಯಾತ್ರೆಯ । ನೊಲ್ಲೆ ಶ್ರೀಗುರುಚರಣಗಳೆ ಯನ । ಗೆಲ್ಲ ದೇವರು ತೀರ್ಥಯಾತ್ರೆಯು ನೀನೆ ಶ್ರೀಶೈಲಾ ॥
ಸಲ್ಲಲಿತವೀವಚನ ಕೇಳುತ । ಗಲ್ಲದಲಿ ನಸುನಗುತ ಶ್ರೀಗುರು । ಮೆಲ್ಲನವನಿಗೆ ಕರೆದು ಪೇಳಿದನೊಂದು ಗುಹ್ಯವನು ॥11॥

ಬಾರೊ ಭಕ್ತಶಿರೋಮಣಿಯೆ ನೀ । ಬಾರೊ ಹತ್ತರ ಮಲ್ಲಿಕಾರ್ಜುನ । ತೋರಿಸುವೆ ಹಿಡಿ ಪಾದುಕಂಗಳ ಕಣ್ಣಮುಚ್ಚುತಲೆ ॥
ಯಾರಿಗಾದರು ಹೇಳಬೇಡಿದ । ಸಾರಸತ್ವದಿ ಹಿಡಿಯೊ ಪಾದವ । ಬಾರೊ ಹೋಗುವೆವೀಗ ನಾನಾ ಮಲ್ಲಿಕಾರ್ಜುನಗೆ ॥12॥

ಎಂದು ನುಡಿದಾ ಗುರುವು ಪರಮಾ- । ನಂದದಿಂ ಹೊರವಂಟನಾಕ್ಷಣ । ತಂದನಾ ಶ್ರೀಗಿರಿಗದೊಂದೇ ಕ್ಷಣದಿ ತಂತುಕನಾ ॥
ಇಂದು ನೀ ಕಣ್ಣುಗಳ ತೆರೆಯುವು । ದೆಂದ ಕೂಡಲೆ ತಂತುಕನು ಬಹು । ಚೆಂದ ನೋಡಿದ ಮಲ್ಲಿಕಾರ್ಜುನಗಿರಿಯ ಯಾತ್ರಿಕರಾ ॥13॥

ತಂತುಕನಿಗಾ ಗುರು ನಿರೋಪವ । ನಂತು ಕೊಟ್ಟನು ಹೋಗು ಯಾತ್ರೆಗೆ । ಸಂತಸದೊಳಾನಿಲ್ಲಿ ಪರ್ವತ ಬುಡದಿ ನಿಂತಿರುವೆ ॥
ಕಂತುಹರದರ್ಶನವ ಮಾಡುತ । ನಂತರದಿ ಬಾರಿಲ್ಲಿ ನಿನ್ನನು । ಪಿಂತಿರುಗಿ ನಾನೊಯ್ವೆ ಸಂಗಮದೆಡೆಗೆ ವೇಗದಲಿ ॥14॥

ಗುರು ನಿರೋಪವ ಕೊಂಡು ತಂತುಕ । ತೆರಳಿದನು ಸ್ನಾನಕ್ಕೆ ತೀರ್ಥದೊ । ಳಿರದೆ ಕಂಡನು ತನ್ನ ತಾಯ್ತಂದೆಗಳ ಬಂಧುಗಳಾ ॥
ಅರರೆ ಹುಚ್ಚನು ಬಂದಿರುವನೀ । ವರೆಗೆ ಕಾಣಿಸಿಕೊಳ್ಳದಲೆ ಯೆಮ । ಗರಿಯದೀಪರಿ ಯಡಗಿ ಬಂದಿಹನೇನ ಹೇಳುವೆನು ॥15॥

ಈ ನುಡಿಯ ಕೇಳುತಲೆ ತಂತುಕ । ತಾನೆ ಯೋಡಿದನವರೊಡನೆ ಕೇಳ್ । ನಾನು ಶ್ರೀಗುರು ಸಹಿತ ಹೊರಟೆನ ದಿಂದು ಮಧ್ಯಾಹ್ನ ॥
ಏನ ಹೇಳಲಿ ಮನದ ವೇಗದಿ । ನಾನು ಬಂದೆನು ಗಳಿಗೆ ಹೊತ್ತಿಲಿ । ಸ್ನಾನಕಾಗಿಯೆ ಬಂದೆನೀಕ್ಷಣ ಗುರುನಿರೋಪದಲಿ ॥16॥

ಮರುಳನಿವ ವಂಚಿಸಿದನೆಮ್ಮನು । ಸರಳ ನಮ್ಮೊಡಗೂಡದಲೆ ಬಂ- । ದಿರುವನೆಮ್ಮಯ ಹಿಂದೆ ಬಡಿವಾರವನು ಹೇಳುವೆನು ॥
ಧರೆಯೊಳೀಪರಿ ಸಾಧ್ಯವಿಹುದೇ । ಬರಿದೆ ಹುಚ್ಚನು ನಂಬ ಬೇಡಿರಿ । ಮರುಳರೇ ನಾವೇನು ಯೆಂದರು ನಗುತ ಯಾತ್ರಿಕರು ॥17॥

ವೇಳೆ ಕಳೆಯದೆ ಯಾತ್ರಿಕರ ಸಂ- । ಮೇಳದಲಿ ತಾ ಮಾತನಾಡದೆ । ಭೋಳ ತಂತುಕ ಕ್ಷೌರ ಸ್ನಾನವ ತೀರಿಸುತ ಮುದದಿ ॥
ಮೇಲೆ ನಡೆದನು ಪರ್ವತದಿ ದೇ । ವಾಲಯದಿ ಪೂಜಿಸಲು ಪೋದನು । ಬಿಲ್ವಗಂಧಾಕ್ಷತೆಯ ಕೈಯಲ್ಲಿ ಹಿಡಿದು ಮುಂನಡೆದ ॥18॥

ಅಲ್ಲಿ ವಿಸ್ಮಯ ಕಂಡನೊಂದನು । ಮಲ್ಲಿಕಾರ್ಜುನಲಿಂಗದಲಿ ತಾ- । ನೆಲ್ಲ ಕಂಡನು ಗುರುನೃಸಿಂಹ ಸರಸ್ವತಿಯ ಮೂರ್ತಿ ॥
ಬಿಲ್ವದಲಪುಷ್ಪಾಕ್ಷತೆಯನವ- । ಮೆಲ್ಲನೇರಿಸಿ ಭಕ್ತಿಭಾವದಿ । ಚೆಲ್ವ ಶ್ರೀಗುರು ಮುಲ್ಲಿಕಾರ್ಜುನನೆಂದು ಯೋಚಿಸಿದಾ ॥19॥

ಇಂತು ಯೋಚಿಸುತಾಗ ಬಂದನು । ತಂತುಕಾರನು ಗುರುಗಳಿದ್ದೆಡೆ । ಸಂತಸದಿ ಮಲಗಿಹನು ವೃಕ್ಷಚ್ಛಾಯೆಯಲಿ ಗುರುವು ॥
ತಂತುಕಾರನು ದೂರದಿಂದಲಿ । ನಿಂತು ನೋಡಲು ಕಂಡನಚ್ಚರಿ । ಯೆಂತು ನಾನೇರಿಸಿದ ಹೂಗಳ ಧರಿಸಿದನು ಗುರುವು ॥20॥

ಚರಣಕಭಿವಂದಿಸುತ ಶ್ರೀಗುರು । ವರಗೆ ಪೇಳ್ದನು ತಂತುಕಾರನು । ಗುರುವೆ ನಾ ಚೋದ್ಯವನು ಕಂಡೆನು ಪೇಳ್ವೆನಿಮ್ಮೊಡನೆ ॥
ಗುರುವೆ ನಿನಗರ್ಪಿಸುವರೆಲ್ಲರು । ಪರಿಪರಿಯ ಪೂಜೆಯನು ನೀನದ । ಹರುಷದಿಂದಲಿ ಕೊಂಬುದನು ನಾ ಕಂಡೆ ದೇಗುಲದಿ ॥21॥

ಅಲ್ಲಿ ನೋಡಿದೆ ನಿನ್ನ ಮೂರ್ತಿಯ । ಮಲ್ಲಿಕಾರ್ಜುನ ನೀನೆ ನಾ ಬಂ- । ದಿಲ್ಲಿ ನೋಡಲ ಮಲ್ಲಿಕಾರ್ಜುನನಂತೆ ಗೋಚರಿಸಿ ॥
ಮೆಲ್ಲನೆನ್ನನು ವಂಚಿಸಿದೆ ನಾ ಬಲ್ಲೆ ನಿನ್ನ ಯ ಲೀಲೆಯದು ನೀ । ನಲ್ಲದಿಲ್ಲೈ ಮಲ್ಲಿಕಾರ್ಜುನನಿಲ್ಲ ಶೈಲದಲಿ ॥22॥

ಹತ್ತರದೊಳಿರೆ ಮಲ್ಲಿಕಾರ್ಜುನ । ಸುತ್ತುವರು ಶ್ರೀಶೈಲ ಪರ್ವತ । ಗೊತ್ತನರಿಯರು ಯಾತ್ರೆ ಮಾಡುವ ಕಾರಣವದೇನು ॥
ನಿತ್ಯ ನೀನೇ ಮಲ್ಲಿಕಾರ್ಜುನ । ತತ್ವವಿದನರಿಯದಲೆ ನರರೀ । ವ್ಯರ್ಥ ಯಾತ್ರೆಗೆ ಬರುವರೆಂದೇ ತಿಳಿದೆ ನಾನೀಗಾ ॥23॥

ಮರುಳರೀ ಮಾನವರು ಮಹಿಮೆಯ । ನರಿಯರೈ ಶ್ರೀಗುರುವೆ ನಿನ್ನಯ । ನರನ ವೇಷದಿ ಲೀಲೆಯಾಡುವ ಹರನಲಾ ನೀನು ॥
ಬರಿದೆ ಕಾಲವ್ಯಯವಲಾ ಗುರು । ವರನ ಚರಣದಿ ತೀರ್ಥವೆಲ್ಲವ । ದಿರುತಿರಲು ದೂರದಲಿ ಹೋಗುವ ಕಾರಣವದೇನು ॥24॥

ಗುರುವು ನಗುತಲಿ ನುಡಿದನವನಿಗೆ । ಭರಿತನಹನೀಜಗದಿ ಸಚರಾ । ಚರ ದೊಳೇಶ್ವರ ನಿಜವು ಯದ್ಯಪಿ ಸ್ಥಾನಮಹಿಮಯಲಿ ॥
ಹರಣ ಪೂಜಿಸಬೇಕೆ ದೆನಲಾ । ಗುರುವಿಗೆಂದನು ತಂತುಕಾರನು । ಕರುಣದಿಂದೆನಿಗರುಹಿದನು ಶ್ರೀಗಿರಿಮಹಿಮೆಯಲ್ಲವನು ॥25॥

ಶ್ರೀಗುರುವು ನಗು ತಾಗ ಪೇಳ ನು । ಮಾಘ ವದ್ಯ ಚತುರ್ದಶಿಯ ದಿನ । ಶ್ರೀಗಿರಿಯ ಮಹಿಮೆಯನು ವರ್ಣಿಪರಾರು ಮೂಜಗದಿ ॥
ಈಗ ನಿನಗರುಹುವೆನು ಮನಕಿಂ- । ಸಾಗಿರುವ ಸಕ್ಯಕಥೆಯ ಪೇಳ್ವೆ । ಹೋಗುವುದು ದುರಿತೌಘವೀಕಥೆ ಕೇಳಿದಾಕ್ಷಣದಿ ॥26॥

ಮೆರೆವುದೊಂದು ಕಿರಾತ ದೇಶವು । ಧರಣಿಯಲಿ ವಿಖ್ಯಾತಿ ಪಡೆದುದು । ಅರಸನಲ್ಲಿ ವಿಮರ್ಷಣನು ತಾ ರಾಜ್ಯವಾಳಿದನು ॥
ಅರಿಗಳೆಲ್ಲರ ಸೋಲಿಸುತ ಬಹು । ಪರಿ ಪರಾಕ್ರಮ ಮಾಡಿ ಶೂರನು । ಧರಣಯಲಿ ತಾನೆಂದು ಖ್ಯಾತಿಯ ಹೊಂದಿದನು ನಿಜದಿ ॥27॥

ಮೃಗಯೆಯಲಿ ತತ್ಪರನು ಕ್ರೂರನು । ಸಿಗುವ ಮಾಂಸವನೆಲ್ಲ ತಿಂಬನು । ಬಗೆಯನವನಿದು ಗ್ರಾಹ್ಯ ಮೇಣಗ್ರಾಹ್ಯವೆಂಬುದನು ॥
ವಿಗಡ ಚಂಚಲ ಸಕಲಸ್ತ್ರೀರತ । ಮಿಗಿಲೆನಿಸಿ ವರಹರನ ಪೂಜಿಪ । ಸುಗುಣ ವೊಂದೇ ಕೇಳ ದೀಶ್ವರನಲ್ಲಿ ದೃಢಭಕ್ತಿ ॥28॥

ನಿತ್ಯ ಶಿವಪೂಜೆಯನವನು ಸ- । ದ್ಭಕ್ತಿಯಿಂದಲಿ ಮಾಳ್ಪನೈ ಶಿವ । ರಾತ್ರಿ ದಿನ ದುಪವಾಸ ಮಾಡುವನೇಕಭಾವದಲಿ ॥
ನೃತ್ಯಗೀತಸುವಾದ್ಯ ದಿಂ ಶಿವ । ರಾತ್ರಿ ಪೂಜೆಯ ಮಾಳ್ಪನಾ ನೃಪ । ಭಕ್ತಿಪೂರ್ವಕವಾಗಿ ಪರಮೇಶ್ವರನ ಪೂಜಿಪನು ॥29॥

ಧರಣಿಪತಿ ದುರ್ಗುಣಿಯು ನಿಜವಿದು । ಹರನ ಪೂಜೆಯದೊಂದು ಸದ್ಗುಣ । ತರುಣಿಯಾತನ ರಾಣಿ ಹೆಸರಾಕೆಗೆ ಕುಮುದ್ವತಿಯು ॥
ಮನದೊಳಾಕೆ ಸುಶೀಲೆ ಪತಿತ । ತ್ಪರಳು ಸುಗುಣೆಯು ಚಿಂತಿಸಿದಳಿ । ಪರಿಯ ಪುರುಷನು ಪತಿಯು ದೊರಕಿದನೆಂದು ಮನದೊಳಗೆ ॥30॥

ಪತಿಯ ದುರ್ವರ್ತನವ ನೋಡುತ । ಸತಿಯು ಮನದೊಳು ಚಿಂತಿಸುತ ಬಹು । ಜತನದಿಂ ವತಿಯೊಡನೆ ಕೇಳುವೆನೆಂದು ಮನಮಾಡಿ ॥
ಪತಿಯೆ ನಾ ಬಿನಹ್ನವ ಮಾಡುವೆ । ಕಥಿಸ ಬೇಕೆನಗೀಗ ಗುಹ್ಯವ । ಖತಿಯು ತಾಳಲು ಬಾರದೆಂದಳು ನಗುತ ರಾಜನಿಗೆ ॥31॥

ಹರನ ಪೂಜಾ ವಿಧಿಯ ನೋಡಲು । ಹರುಷವಾಗುವುದೆನ್ನ ಮನದೊಳ । ಗೆರಡನೆಯ ವರ್ತನನ ನೋಡಲು ಖಿನ್ನನಾಗುವೆನು ॥
ಪರಸತಿಯ ಪರವಿಲ್ಲ ನಾಲಿಗೆ । ಯರಿಯದ್ಯೆ ಭಕ್ಷ್ಯದ ವಿಚಾರವ । ಸ್ಥಿರವಿದಿಲ್ಲ್ಯೈ ಮನವು ನಿನ್ನದು ತಿಳಿಯೆ ಕಾರಣವು ॥32॥

ಮುನಿಸದೆನ್ನಯ ಮೇಲೆ ಕಪೆಯಿಟ್ಟೆ । ನಗೆ ಪೇಳಲು ಬೇಕು ನಾಥನೆ । ಎನುತ ವಿನಯದಿ ಚರಣಕೆರಗುತ ನುಡಿದಳಾಸತಿಯು ॥
ವನಿತೆಯಾಡಿದ ನುಡಿಯ ಕೇಳುತ । ಸನುಮತದಿ ತಕ್ಕೈಸಿ ನಾರಿಗೆ । ವಿನಯಪೂರ್ವಕವಾಗಿ ನಿಜವೃತ್ತಾಂತ ಪೇಳಿದನು ॥33॥

ನೀನು ಕೇಳಿದ ಪ್ರಶ್ನೆಯಿಂದಲೆ । ಜ್ಞಾನವಾಯಿತು ಪೂರ್ವಜನ್ಮದ । ಮಾನಿನಿಯೆ ನಾ ಪೇಳ್ವೆನೆಲ್ಲವ ಪೂರ್ವದಿತಿಹಾಸ ॥
ಶ್ವಾನಯೋನಿಯೊಳಿದ್ದೆ ನಾ ಪಂ- । ಪಾನಗರಿಯಲಿ ಕಾಲಕಳೆ ದೆನ । ದೇನ ಹೇಳುವೆನೊಂದು ದಿನ ಶಿವರಾತ್ರಿ ದಿವಸದಲಿ ॥34॥

ನೆರೆದರೈ ಶಿವನಾಲಯದೊಳಾ । ಪುರದ ಜನರಾ ಶಿವನ ಪೂಜೆಗೆ । ತಿರುತಿರುಗಿ ನಾ ಸೇರಿದೆನು ಭಕ್ಷಣದ ಲೋಭದಲಿ ॥
ಹರನ ಪೂಜಾವಿಧಿಯ ಕಂಡೆನು । ಪರಿಪರಿಯ ವಾದ್ಯಗಳ ಗಜರದಿ । ಕರದೊಳಾರುತಿ ಬೆಳಗುತಿದ್ದರು ಭಕ್ತ ಮಂಡಳಿಯು ॥35॥

ದ್ವಾರದಲ್ಲಿ ಪ್ರವೇಶ ಮಾಡಲು । ಹಾರಿ ಬಂದರು ಬಡಿಗೆ ಕಲ್ಲಿಂ- । ದೇರಿಸಿದರೆನಗೇಟನೋಡಿದೆ ಗರ್ಭಗೃಹದೊಳಗೆ ॥
ದ್ವಾರಪಾಲರು ಬಂದು ಹೊಡಿಹೊಡಿ । ಸೇರಿತೀ ಹೊಲನಾಯಿಯೊಳಗೆಂ- । ದಾರುಭಟೆ ಮಾಡಿದರು ಕಲ್ಲಿಂಹೊಡೆದರಾ ಕ್ಷಣಕೆ ॥36॥

ಹೊರಗೆ ಹೋಗಲು ಹಾದಿ ಕಾಣದೆ । ತಿರುತಿರುಗಿ ನಾನೊಳಗೆಯೋಡಿದೆ । ಬರಲು ಬಾಗಿಲಕಡೆಗೆ ಬೆಂಬತ್ತಿದರು ಹೊರಗಿಂದಾ ॥
ತಿರುಗುತಿರೆ ಹರನಿಗೆ ಪ್ರದಕ್ಷಿಣೆ- । ಯರಿಯದಾಯಿತು ಮೂರುಬಾರಿಗೆ । ಮರಣವಾಯಿತು ಹರನ ಮುಂದೆನಗೇನ ಹೇಳುವೆನು ॥37॥

ತಿನುವೆನೆಂಜಲವೆನುತ ಪೋಗಲು । ಹನನವಾಯಿತು ಕೇಳು ನೀ ಭಾ- । ಮಿನಿಯೆ ಹರನ ಪ್ರದಕ್ಷಿಣೆಯ ಫಲ ಬಂತು ಮರಣದಲಿ ॥
ದಿನವು ಪಾವನ ಶಿವನ ರಾತ್ರಿಯು । ಜನಿಸಿದೆನು ತತ್ಪುಣ್ಯಫಲದಲಿ । ವನಿತೆ ಕೇಳಿ ರಾಜವಂಶದಿ ಶಿವನ ಭಕುತಿಯಲಿ ॥38॥

ತಿನಲು ಸಿಗದೆಂಜಲ ದೆನುತಲಾ । ದಿನದೊಳಾಯಿತು ನಿರಶನವು ಪಾ । ವನತರದ ಶಿವಪೂಜೆ ನೋಡಿದೆ ಮರಣಕಾಲದಲಿ ॥
ಇನಿತು ಪರಮೇಶ್ವರನ ಪೂಜೆಯ । ದೆನೆಗೆ ಫಲಿಸಿತು ಹರನ ಭಕ್ತಿಯ । ಜನುಮವಾಯಿತು ಕೇಳು ಪ್ರಾಣೇಶ್ವರಿಯೆ ಕಥನವನು ॥39॥

ಶ್ವಾನಯೋನಿಯ ಹಿಂದೆ ಜನ್ಮದ । ಮಾನದಿಂದಲಿ ಸರ್ವಭಕ್ಷಣ । ಮಾನಸವು ಪರನಾರಿಯರೋಳಿದನೇನ ಹೇಳುವೆನು ॥
ಪ್ರಾಣನಾಥನ ಕಥೆಯ ಕೇಳುತ । ತಾನು ಹಿಂದಿನ ಜನ್ಮದಲಿ ಯೇ- । ನೇನು ಮಾಡಿದೆ ಹೇಳೆನಲು ನಗುತೆಂದನಾ ಪತಿಯು ॥40॥

ಸತಿಯೆ ಕೇಳಾಪೂರ್ವಜನ್ಮದ । ಕಥೆಯ ಹೇಳುವೆ ನಿನ್ನ ದೀಕ್ಷಣ । ಕ್ಷಿತಿಯೊಳಗೆ ನೀ ಕಾಕಪತ್ನಿಯು ಪೂರ್ವಜನ್ಮದಲಿ ॥
ಪಥತಿ ಬಿದ್ದಿಹ ಮಾಂಸತುಂಡನು । ಸುತರಿಗೋಸುಗ ಹಿಡಿದು ಬಾಯೊಳ । ಗತಿಸುವುದ ನೋಡಿದುದು ಹದ್ದೊಂದೇನ ಹೇಳುವೆನು ॥41॥

ನಿನ್ನ ಬಾಯಿಂದದನು ಕೊಳ್ಳುವೆ । ನೆನ್ನುತಲಿ ಕೇಳ್ ದುಷ್ಟ ಹದ್ದದು । ಬೆನ್ನ ಹಿಡಿಯಿತು ನಿನ್ನ ನೀನದ ಬಿಡದೆ ನೋಡಿದೆಯ್ಯೆ ॥
ಬೆನ್ನ ಬಿಡದದು ಹದ್ದು ಘೋರಾ- । ರಣ್ಯದಲಿ ನೀನೋಡಿ ಶ್ರೀಗಿರಿ- । ಯನ್ನು ನೋಡುತ ಮಲ್ಲಿಕಾರ್ಜುನ ಶಿಖರದಲಿ ಬಂದು ॥42॥

ನಿನ್ನ ಶ್ರಮಹರಣಾರ್ಥ ಕೂಡಲು । ನಿನ್ನ ತಲೆಗದು ಬಡೆದು ಬಾಯಿಂ । ಯತ್ನವಿಲ್ಲದೆ ಮಾಂಸ ಕಿತ್ತಲ ದೋಡಿಪೋಯ್ತಾಗ ॥
ನಿನ್ನ ದಾಯ್ತು ಪ್ರದಕ್ಷಿಣೆಯು ನೀ । ಪುಣ್ಯ ಗಳಿಸಿದೆ ಮಲ್ಲಿಕಾರ್ಜುನ । ಪುಣ್ಯ ಪಾವನ ಕ್ಷೇತ್ರದಲಿ ನೀ ಪ್ರಾಣ ತ್ಯಜಿಸಿದೆಯ್ಯೆ ॥43॥

ನಿನ್ನ ದೀ ಪುಣ್ಯ ಪ್ರಭಾವದಿ । ಜನ್ಮವಾಯಿತು ರಾಜಕುಲದಲಿ । ನಿನ್ನ ಪ್ರಾಣವು ಹೋಯ್ತು ಹದ್ದಿನ ಚಂಚು ಘಾತದಲಿ ॥
ರನ್ನೆ ಶ್ರೀಶೈಲದಲಿ ನೀ ಮೃತಿ । ಯನ್ನು ಪಡೆದೀ ಸೌಖ್ಯ ಗಳಿಸಿದೆ । ಬಣ್ಣಿಸಲಿ ನಾನೆಂತು ಶಿವನಾಲಯದ ಮಹಿಮೆಯನು ॥44॥

ಇಂತು ಹಿಂದಿನ ಜನ್ಮ ಕಥೆಯನು । ಕಾಂತೆ ಕೇಳುತ ಮನದಿ ಹಿಗ್ಗುತ । ಕಂತುಹರ ಪೂಜೆಯನು ಮಾಡುವೆನುನೆಂದು ಹೇಳಿದಳು ॥
ಅಂತು ಮುಂದಿನ ಜನ್ಮದಾ ವೃ । ತ್ತಾಂತ ಪೇಳಲು ಬೇಕೆನುತಲಾ । ಕಾಂತನನು ಬಿನ್ನೈಸಲಾತನು ಹೇಳ ತೊಡಗಿದನು ॥45॥

ಸಿಂಧುದೇಶದಿ ರಾಜನಾಗುವೆ । ನಂದು ನೀನೇ ಭಾರ್ಯೆಯಾಗುವೆ । ಬಂದು ಹುಟ್ಟುವೆ ನೀನು ಸೃಂಜಯ ರಾಜವಂಶದಲಿ ॥
ಮುಂದೆ ಸೌರಾಷ್ಟ್ರದಲಿ ಜನ್ಮಕೆ । ಬಂದು ನಿನ್ನನು ವರಿಸುವೆನು ನಾ- । ನಂದು ನೀನು ಕಳಿಂಗದೇಶದಿ ಜನ್ಮವೆತ್ತಿರುವೆ ॥46॥

ನಾರಿ ಕೇಳ್ನಾಲ್ಕನೇ ಜನ್ಮದಿ । ಧಾರುಣೀಪತಿಯಾಗಿ ನಾ ಗಾಂ । ಧಾರದೇಶವನಾಳುವೆನು ನೀ ಮಗಧದೇಶದಲಿ ॥
ಧಾರುಣೀಶನ ಕನ್ಯೆಯಾಗಿಯೆ । ನಾರಿ ಯೆನ್ನನು ವರಿಸಿರುವೆ ನಿನ- । ಗಾರು ಸರಿಯಿಹರಾಗ ಪುಣ್ಯ ಪ್ರಭಾವವೇನೆಂಬೆ ॥47॥

ಕಾಂತೆ ಕೇಳೈದನೆಯ ಜನ್ಮ ದೊ- । ಳಾಂತು ಜನ್ಮವ ರಾಜಕುಲದಿ ಯ- । ವಂತೀದೇಶವನಾಳ್ವೆ ನೀನು ದಶಾರ್ಣದೇಶದಲಿ ॥
ಕಾಂತೆ ಯೆನ್ನನು ವರಿಸಿರುವೆ ನಾ- । ನಂತರಾಯನು ಜನ್ಮವಾರರ- । ಲಿಂತು ನೀನು ಯಯಾತಿ ಕುಲದಲಿ ಯೆನ್ನ ವರಿಸಿರುವೆ ॥48॥

ಏಳನೆಯ ಜನ್ಮದಲಿ ಪಾಂಡ್ಯ ನೃ- । ಪಾಲನಾಗುವೆ ನಾನು ಚಂದ್ರನ । ಪೋಲುವಾನನ ಸೂರ್ಯಕಾಂತಿಯೊಳಾನು ಮೆರೆಯುವೆನು ॥
ಪೋಲುವೆನು ಮದನನನು ರೂಪದಿ । ತಾಳುವೆನು ನಾ ಜ್ಞಾನವೆಲ್ಲವ । ಹೇಳುವೆನು ಕೇಳೆನ್ನ ನಾಮವು ಪದ್ಮವರ್ಣ ವದು ॥49॥

ನಿನ್ನ ಜನ್ಮ ವಿದರ್ಭಕುಲದಲಿ । ಚಿನ್ನ ಪುತ್ಥಳಿಯಂತೆ ನೀ ಲಾ- । ವಣ್ಯವತಿಯಾಗಿರುವ ನಳದಮಯಂತಿಯರ ತೆರದಿ ॥
ಮುನ್ನವೆಮ್ಮ ವಿವಾಹಮಪ್ಪುದು । ಯಜ್ಞಯಾಗಾದಿಗಳ ಮಾಡುವೆ- । ನನ್ನಛತ್ರವನೇಕವಿಡಿಸುವೆ ಜಯಿಪೆ ಭೂಮಿಪರಾ ॥50॥

ದೇವದ್ವಿಜರರ್ಚನೆಯ ಮಾಡುವೆ । ನೀವಿಧದಿ ಸಾಮ್ರಾಜ್ಯವಾಳುತ । ವಸುಂಧರೆಯನ್ನು ಸುತಗರ್ಪಿಸುವೆನಂತ್ಯದಲಿ ॥
ಸಾವಕಾಲಕ ಗಸ್ತಿ ಋಷಿಯಿಂ । ಸೇವೆಯಲಿ ಜ್ಞಾನೋಪದೇಶವ । ಹೇವವಿಲ್ಲದೆ ಪಡೆದು ಮೋಕ್ಷವ ಗಳಿಸುವೆನು ನಿಜದಿ ॥51॥

ಮರಣಕಾಲ ಸಮೀಪವಾಗಲು । ತರುಣಿ ನಿನ್ನಯ ಕೂಡೆ ಮೋಕ್ಷದ । ಪುರಕೆ ಪೋಗುವೆ ಕೂತು ದಿವ್ಯ ವಿಮಾನದಲಿ ನಿಜವು ॥
ಹರನ ಪೂಜೆಯ ಮಹಿಮೆ ಮೇಣ್ ಶ್ರೀ । ಗಿರಿಯ ಶಿವರಾತ್ರಿಯ ಮಹಾತ್ಮೆಯ । ಧರಣಿಯಲಿ ವರ್ಣಿಸಲು ಶಕ್ಯವೆ ನರಭುಜಂಗರಲಿ ॥52॥

ಎನುತಲೀಪರಿ ವರ್ಣಿಸುತಲಾ । ಜನಪ ಶ್ರೀಶೈಲಕ್ಕೆ ನಡೆದನು । ವನಿತೆಯನು ಕರಕೊಂಡು ಶಿವರಾತ್ರಿ ದಿವಸಕ್ಕಾಗಿ ॥
ವಿನುತ ಶ್ರೀ ಪರ್ವತದ ಮಹಿಮೆಯ- । ನೆಣಿಸುವರೆ ಗಣಿಸುವರೆ ಶಕ್ಯವೆ । ಜನಪ ಪಡೆದನು ರಾಜ್ಯ ಭೋಗವ ಜನುಮಜನುಮದಲಿ ॥53॥

ಪರಿಯೋಳೀ ತಂತುಕಗೆ ಶ್ರೀಗುರು । ವರನು ಪೇಳ್ದನು ಮಲ್ಲಿಕಾರ್ಜುನ । ಹರನ ಶ್ರೀಪರ್ವತದ ಮಹಿಮೆಯನೆಲ್ಲವನು ಮುದದಿ ॥
ನಿರತ ಭೀಮಾತೀರಕಲ್ಲೇ । ಶ್ವರನ ಪೂಜಿಸು ಗಾಣಗಾಪುರ । ವರವು ಶ್ರೀಗಿರಿಮಲ್ಲಿಕಾರ್ಜುನ ನಿಜವು ಕಲ್ಲೇಶಾ ॥54॥

ಮರಳಿ ಪೂಜಿಸು ಸಂಗಮೇಶ್ವರ । ನಿರುವನವನ್ನೈ ಮಲ್ಲಿಕಾರ್ಜುನ । ನೆರಡು ಸ್ಥಾನದ ಮಹಿಮೆ ದೊಡ್ಡದು ಯೆಂದನಾಗುರುವು ॥
ಗುರುವಚನವನು ಕೇಳಿ ತಂತುಕ । ಮರಳಿಯುತ್ತರವಿತ್ತನಾಕ್ಷಣ । ಬರಿದೆ ಸಾಕು ವಿನೋದ ಬಡವನ ಕೂಡೆ ಚೇಷ್ಟೆಯಿದೆ ॥55॥

ಬಲ್ಲೆ ನಾನಾ ಮಲ್ಲಿಕಾರ್ಜುನ । ನಲ್ಲಿ ನೋಡಿದೆ ನಿನ್ನ ರೂಪವ । ಮಲ್ಲಿಕಾರ್ಜುನ ಸಂಗಮೇಶ್ವರ ಮೇಣು ಕಲ್ಲೇಶ ॥
ಎಲ್ಲರಿಹರ್ರೈ ನಿನ್ನ ರೂಪದಿ । ಬಲ್ಲೆ ನಿನ್ನಯ ಕಪಟನಾಟಕ । ಮೆಲ್ಲನೊಂದೇ ಮಾತ ಪೇಳ್ವೆನು ನೀನೆ ಸರ್ವೇಶಾ ॥56॥

ತಂತುಕಾರನ ಭಾವಭಕುತಿಗೆ । ಸಂತಸದಿ ನಗುನಗುತ ಶ್ರೀಗುರು । ವಿಂತು ಪೇಳ್ದನು ಪಾದುಕವ ನೀ ಗಟ್ಟಿ ಹಿಡಿಯೆನುತಾ ॥
ತಂತುಕಾರನು ಹಿಡಿಯಲಾಕ್ಷಣ । ಬಂತು ಪಾವನಗಾಣಗಾಪುರ । ತಂತುಕಾರನ ಮಠಕೆ ಕಳುಹಿದನಾಗ ಮೋದದಲಿ ॥57॥

ಊರಿನಲಿ ನಾಗರಿಕರೆಲ್ಲರು । ಕಾರಣವ ಕೇಳಿದರು ಖೂಳನೆ । ಕ್ಷೌರವೇಕೀದಿವಸ ಮಾಡಿಸಿಕೊಂಡೆ ಹೇಳೆನಲು ॥
ಕಾರಣವನಾ ಪೇಳ್ವೆ ಶ್ರೀಗಿರಿ । ಮಾರಹರ ಶ್ರೀಮಲ್ಲಿಕಾರ್ಜುನ । ಚಾರುಚರಣವ ನೋಡಿ ಬಂದೆನೆನುತ್ತ ಪೇಳಿದನು ॥58॥

ಮರುಳನಿವನೇನೆಂಬೆ ಗಾಣಗ । ಪುರದೊಳಿದ್ದನು ಯಿಂದು ಯೆನೆ ನಾ । ಗರಿಕರಿಗೆ ತೋರಿಸಿದನೆಲ್ಲ ಪ್ರಸಾದಭೂತಿಯನು ॥
ಗುರುಸಹಿತ ನಾ ಯಾತ್ರೆ ಮಾಡಿದೆ । ಗುರುವ ಕೇಳಿರಿ ಯೆನುತಲಾತನು । ಮರಳಿಯುತ್ತರ ಕೊಡಲು ವಿಸ್ಮಿತರಾದರೇನೆಂಬೆ ॥59॥

ಗುರುವು ಪೇಳಿದನೆನಗೆ ನೀ ಮುಂ । ದರಿಸಿ ಹೊಗ್ಯೆ ಮಠಕೆ ಸಂಗಮ । ಕಿರುವೆ ನಾನೀರಾತ್ರಿ ಶಿಷ್ಯರ ಕರೆಯಬೇಕೆನುತಾ ॥

ಗುರುನಿರೋಪವ ಪೇಳ್ದ ನೆಂದನು । ಹರುಷದಲಿ ತಂತುಕನೆಕೇಳುತ । ತೆರಳಿದನು ಸಂಗಮಕೆ ಶಿಷ್ಯರು ಭಾವಭಕುತಿಯಲಿ ॥60॥

ಹರುಷವಾಯಿತು ಶಿಷ್ಯ ವೃಂದಕೆ । ಮೆರಿಸಿದರು ಪರಿಪರಿಯ ಪೂಜೆಯ । ಹರುಷವಾಯಿತು ಮೇಣ್ ನೃಸಿಂಹಸರಸ್ವತಿಗೆ ॥

ಗುರುಮಹಿಮೆಯಿದ ನಂಬಲಾರದ । ದುರುಳರಿಗೆ ತಟ್ಟುವುದು ದುರಿತವು । ನರಕ ಭಾಜನರಾಗುವರು ಸದ್ಗುರು ಪರಾಙ್ಮುಖರು ॥61॥

ಪಕ್ಷವಾಗಲು ಬಂದು ಮುಟ್ಟಿ ಸ- । ಮಕ್ಷ ಯಾತ್ರಿಕರೆಲ್ಲ ಪೇಳ್ದರ । ದಕ್ಷಿಣೆಯಿಂದಲೆ ನೋಡಿದೆವು ತಂತುಕನ ಗಿರಿಮೇಲೆ ॥

ಸಾಕ್ಷಿಯಾದರು ಯಾತ್ರಿಕರು ಗುರು । ಮೋಕ್ಷದಾಯಕನೆನುತ ಸ್ತುತಿಸುತ । ಭಿಕ್ಷೆಯನು ಮಾಡಿಸಿದರಾ ಗುರುವರಗೆ ಪ್ರೇಮದಲಿ ॥63॥

ಮಲ್ಲಿಕಾರ್ಜುನದರ್ಶನದ ಬಹು । ಸಲ್ಲಲಿತ ಕಥೆಯಿದನು ಕೇಳಲು । ಮಲ್ಲಿಕಾರ್ಜುನರೂಪ ಸದ್ಗುರು ವೊಲಿವನೆಲ್ಲರಿಗೆ ॥

ಬಲ್ಲರಾರೀ ಗುರುಮಹಿಮೆಯನು । ಬಲ್ಲೆನೊಂದೇ ವಿಷ್ಣು ಭಕ್ತಿಯ । ಕೊಲ್ಲುತಿ ಹುದಿದು ಭವದ ತಾಪತ್ರಯಗಳೆಲ್ಲವನು ॥64॥

॥ ಅಧ್ಯಾಯ 44 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 45

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ನಂದಿಯೆಂಬವನೊರ್ವ ಗುರುಕೃಪೆ । ಯಿಂದ ಕಾವ್ಯವ ಮಾಡಿದನು ಬಹು । ಚಂದದಿಂದಲಿ ಗುರುವರನ ಸ್ತುತಿಸಿದನು ಭಕ್ತಿಯಲಿ॥

ಗುರುವು ಭಕ್ತಾಧೀನನೆಂಬುವ । ಬಿರುದು ಮೆರೆದುದಖಂಡಧರೆಯಲಿ । ಗುರುವು ನಾನಲೀಲೆಯಾಡುವ ಯುಗಯುಗದಿ ತಿಳಿಯೆ ॥

ಶರಣರನು ರಕ್ಷಿಸುವುದೊಂದೇ । ಗುರುಮಹಿಮೆಲಕ್ಷಣವು ಶರಣನ । ಹೊರತು ಶ್ರೀಗುರುವಿಲ್ಲ ಗುರುವಿನ ಹೊರತು ಜಗವಿಹುದೆ ? ॥1॥

ನಾಮಧಾರಕನೆಂದ ಸಿದ್ಧಗೆ । ಭೂಮಿಯಲಿ ನೀ ಕಂಡೆ ಕಣ್ಣಲಿ । ರಾಮಣೀಯಕ ಗುರುಮಹಿಮ ಯಿದನೇನವರ್ಣಿಸಲಿ ॥

ಭೂಮಿಯಲಿ ಗುರುವೇ ಪರಾತ್ಪರ । ರಾಮಣೀಯಕ ತತ್ವನವಪರ । ಬ್ರಹ್ಮಮೂರುತಿ ಕಂಡ ತೆರನಾಯ್ತಾ ಮಹಾತುಮನಾ ॥2॥

ಗುರುಚರಿತ್ರಾಮೃತದ ಪಾನವು । ದೊರೆಯಿತ್ತೈ ನಿನ್ನಯ ಪ್ರಸಾದದಿ । ಹರಿದುದ್ಯೆ ತಾಪತ್ರಯವು ಗುರುಚರಿತಮನನದಲಿ ॥

ಪರಮಪುರುಷಾರ್ಥಗಳು ಸಕಲವು । ದೊರೆತವೈ ಯನಗಿರದೆ ನಿನ್ನಯ । ದರುಶನದೊಳಾಯ್ತೆನಗೆ ಸಕಲಾಭಿಷ್ಟ ಸಾಧನವು ॥3॥

ಎಂದ ನುಡಿಯನು ಕೇಳುತಲಿ ನಲ- । ವಿಂದ ಸಿದ್ಧನು ಪೇಳತೊಡಗಿದ । ನಂದು ಶ್ರೀಗುರುವಿರಲು ಸಂಗಮದಲ್ಲಿ ಕೆಲದಿವಸ ॥

ನಂದಿನಾಮದ ವಿಪ್ರನೋರ್ವನು । ಬಂದನಲ್ಲಿಗೆ ಶ್ವೇತ ಕುಷ್ಟದಿ । ಬೆಂದು ಬಳಲಿದನವನು ಗುರುಚರಣದಲಿ ಭಕ್ತಿಯಲಿ ॥4॥

ವರುಷ ಮೂರನು ಕಳೆದು ತುಳಜಾ । ಪುರದೊಳಾರಾಧಿಸಿದನಾ ದ್ವಿಜ । ವರನು ಬಳಲಿದನನಿತು ದಿನ ವುಪವಾಸ ಮಾಡುತಲಿ ॥
ಬರುತ ಸ್ವಪ್ನದಿ ನುಡಿದಳಂಬೆಯು । ಬರದು ಗುಣ ನಿನಗಿಲ್ಲಿ ಪರಮೇ । ಶ್ವರಿಯ ಭಜಿಸೈ ಚಂದಲಾಂಬೆಗೆ ಎಂದಳಾದೇವಿ ॥5॥

ತೆರಳಿದನು ಜಗದಂಬೆ ತುಳಜಾ- । ಪುರನಿರೋಪನ ಕೊಂಡು ಮುಂದಕೆ । ಬರುತಲಾರಾಧಿಸಿದನೈ ಪರಮೇಶ್ವರನ ಮುದದಿ ॥
ತಿರುಗಿ ಚಂದಲೆದೇವಿಯಿದ್ದೆಡೆ । ಹರುಷದಲಿ ತಾನೇಳುಮಾಸದಿ । ಪರಿಪರಿಯ ಕಷ್ಟದಲಿ ಮಾಡಿದನವನುಪಾಸಗಳು ॥6॥

ಏಳು ತಿಂಗಳು ಕಳೆಯಲಾತಗೆ । ಮೇಲೆ ಸ್ವಪ್ನದಿ ದೇವಿ ನುಡಿದಳು । ಏಳು ನೀನಿಲ್ಲಿಂದ ಹೋಗೈ ಗಾಣಗಾಪುರಕೆ ॥
ತಾಳಿ ನರವೇಷವನು ಬಂದಿಹ । ಶೂಲಪಾಣಿಯು ಶರಣುಹೊಗಲವ । ಗೋಳ ನಿನ್ನಯ ಕೇಳ್ವ ಕುಷ್ಟವು ಹೋಗುವುದು ನಿಜದಿ ॥7॥

ಕುಷ್ಟ ರೋಗಿಯು ದೇವಿಯಾಡಿದ । ನಿಷ್ಠ ವಚನವ ಕೇಳುತಾಗಲೆ । ಬಿಟ್ಟ ಮಂಡೆಯಲಾಗ ದೇವಿಯ ಕೇಳಿದನು ಮುದದಿ ॥
ಇಷ್ಟು ದಿನ ನೀನಾರು ತಿಂಗಳು । ಕಷ್ಟವೇತಕೆ ಕೊಟ್ಟೆ ಸುಮ್ಮನೆ । ಬಿಟ್ಟು ಹೋಗುವೆನಿತ್ತು ಯೆರಡನೆ ಸ್ಥಾನಕಾದಿನವೆ ॥8॥

ಕೇಳು ನಾ ತುಳಜಾ ಭವಾನಿಯ । ಮೇಲೆ ಭರವಸೆ ವಿಟ್ಟು ಬಂದೆನು । ಮೇಲೆ ತಿಳಿಯಿತು ನಿನ್ನ ದೈವತ್ವವು ಕಣಾ ಯೇನು ॥
ಕೇಳಿ ನಗುವುದು ಜಗವು ಮನುಜನ । ಮೇಲೆ ಭರವಸವೇನು ದೇವರ । ಕೈಲಿ ಸಾಗದ ಕೆಲಸ ನರ ನಿಂದೇನು ಸಾಗುವುದೆ ? ॥9॥

ಮೋಸ ಹೋದೆನು ನಾನು ಕೇಳ್ವಿ । ಶ್ವಾಸವಿಟ್ಟೆನು ನಿನ್ನ ಮೇಲಾ- । ಯಾಸ ಕಷ್ಟ ನ ಸಹಿಸಿದೆನು ದುರ್ಭಾಗ್ಯವೆನ್ನದಲಾ ॥
ಈಸು ಲಜ್ಜೆಯ ತಾಳಬಾರದೆ । ಗಾಸಿಯಾಗದೆ ನಿನ್ನ ಕೀರ್ತಿಯು । ಭೂಷಣವೆ ನಿನಗಿದು ಕಣಾ ಪೇಳೆನಗೆ ನಿಜವಾಗಿ ॥10॥

ಮೊದಲೆ ಬಂದಾಕ್ಷಣಕೆ ಹೇಳದ । ಲೊದಗಿ ಸೇವೆಯ ಕೊಂಡೆ ಕೇಳ್ನಿನ । ಗಿದು ಪ್ರಯಾಸವೆನುತ್ತ ಕಂಡರೆ ಪೇಳಲಿಲ್ಲೇಕೆ ॥
ಇದನು ಕೇಳುವನಲ್ಲ ನಿನ್ನಯ । ಪದವ ಬಿಡುವವನಲ್ಲ ನಾನೀ । ಪದದ ಹತ್ತಿರ ಸೋಕ್ಷಮೋಕ್ಷವ ಮಾಡಿಕೊಳ್ಳುವೆನು ॥11॥

ಎಂದು ನಾನಾ ಪರಿಯೊಳಾದ್ವಿಜ । ನೆಂದನಾ ಪರಮೇಶ್ವರಿಯ ಕಡೆ । ಮುಂದೆ ನಡಿಸಿದನವನು ಸೇವೆಯನೇಕಭಾವದಲಿ ॥
ಬಂದು ಸ್ವಪ್ನದಿ ದೇವಿ ತಿರುಗಿ । ಅಂದಳತಗೆ ಹೋಗು ಹೋಗೆಲೊ । ಮುಂದೆ ಈ ತೆರ ಸ್ವಪ್ನವಾಯಿತು ದೇವಿಯರ್ಚಕಗೆ ॥12॥

ಕರೆದು ಪೂಜಾರಿಗಳು ದ್ವಿಜನಿಂ- । ಗರುಹಿದರು ದೇವಿಯನು ಕೋಪಿಸ । ದಿರು ಕಣಾ ನಡೆ ಗಾಣಗಾಪುರಕವಳು ನುಡಿದಂತೆ ॥
ತೆರಳದಿರೆ ಸಾಮದಲಿ ನಿನ್ನನು । ಹೊರಗೆ ದಬ್ಬುವೆವೆಂದು ದಂಡದಿ । ತೆರಳಬೇಕೈ ಎಂದು ನುಡಿದರು ದ್ವಿಜಗೆ ಪೂಜಕರು ॥13॥

ಎಂದ ನುಡಿಗಳ ಕೇಳುತಲಿ ನಲ- । ವಿಂದ ದ್ವಿಜ ಮಾಡಿದನು ಪಾರಣೆ । ಮುಂದೆ ಹಾದಿಯ ಹಿಡಿದನವನಾ ಗಾಣಗಾಪುರದಾ ॥
ಬಂದು ಮಠದಲಿ ಕೇಳಿದರೆ ಗುರು । ವಂದು ಸಂಗಮಕಿಹನೆನುತಲಾ । ಬಂದ ದ್ವಿಜನಿಗೆ ಪೇಳಿದರು ಮಠದಲ್ಲಿ ಜನರೆಲ್ಲಾ ॥14॥

ನಿನ್ನೆ ಕೇಳ್ ಶಿವರಾತ್ರಿಯಾಯಿತು । ಇನ್ನಿದೀಗಲೆ ಮಠಕೆ ಬರುವರು । ಅನ್ನ ಸಂತರ್ಪಣೆಯು ಪಾರಣೆಯಿಹುದು ಮಠದೊಳಗೆ ॥
ಎನ್ನು ತೀವಾಕ್ಯಗಳ ಪೇಳಲು । ಕಣ್ಣೆದುರಿಗಾಗುರುವೆ ಬಂದನು । ಬನ್ನಬಟ್ಟಿಹ ದ್ವಿಜಗೆ ದೂರದಿ ನಿಲಿಸಿದರು ಜನರು ॥15॥

ಗುರುವರನ ದರ್ಶನಕೆನುತ್ತಲೆ । ಹೊರಗೆ ಬಂದಿಹನೊರ್ವ ವಿಪ್ರನು । ಮರುಗುವನು ಪೀಡೆಯಲಿ ದೇಹದಿಶ್ವೇತ ಕುಷ್ಟದಲಿ ॥
ಗುರುವು ನುಡಿಯನು ಕೇಳಿ ಪೇಳ್ದನು । ಕರೆಯಿರವನನು ಮಠದೊಳಗೆ ಬಂ- । ದಿರುವನೈ ಯವಸಂಶಯದಿ ಗುರು ಭಕ್ತಿಯವಗಿಲ್ಲಾ ॥16॥

ಒಳಗೆ ಬರಲಾ ಶ್ವೇತಕುಷ್ಟದಿ । ಬಳಲುತಿಹ ದ್ವಿಜ ದೂರದಿಂದಲೆ । ಕೆಳಗೆ ನೆಲದಲಿ ದಂಡದಾಕಾರದಲಿ ನಮಿಸಿದನು ॥
ಒಳಗೆ ಬಂದಾಕ್ಷಣದಿ ಶ್ರೀಗುರು । ನಲವಿನಿಂ ಕೇಳಿದನು ಯೆನ್ನಯ । ಬಳಿಗೆ ಬಂದಿಹೆ ಯಾಕೆ ದೇವರ ಬಿಟ್ಟು ನರರೊಡನೆ ॥17॥

ಮನದಿ ಸಂಶಯವಿರಲು ಮನಕಾ- । ಮನೆಯ ಸಿದ್ಧಿಗೆ ಬರುವುದೇ ತಾ । ನೆನಲು ದ್ವಿಜಗಾಕ್ಷಣದೊಳಾಯಿತು ಮನದ ನಿರ್ಧಾರಾ ॥
ಮನುಜನಲ್ಲಿವನೆಂದು ನಿಶ್ಚಯ । ವನು ಮನದಿ ಮಾಡಿದನು ಲೋಟಾಂ- । ಗಣವ ಹಾಕಿ ದನವವನು ಶ್ರೀಗುರುವರನ ಸನ್ಮುಖದಿ ॥18॥

ಕ್ಷಮಿಸು ಶ್ರೀಗುರುರಾಜ ಯೆನ್ನನು । ತಮದ ಕತ್ತಲೆಯಲ್ಲಿ ತವ ಪದ-। ಕಮಲಗಳ ಮಹಿಮೆಯನು ಕಾಣದೆ ಬೆಂದು ಬಳಲಿದೆನು ॥
ತಿಮಿರ ಹಾರಿತು ದರ್ಶನದಲ್ಲೈ । ಮಿಮಲನಾದೆನು ತಾರಿಸೆನ್ನನು । ಕಮಲಭವಹರಿ ಹರರು ನಿನೆ ಸಗಣಸಾಕ್ಷಾತ ॥19॥

ಸಗುಣ ನೀ ಪರಬ್ರಹ್ಮನೆಂಬುದ । ಬಗೆಯದಾದೆನು ನಿನ್ನ ಮಹಿಮೆಯ । ಲಗಣಿತವು ನಿರುಪಮವು ಬಲ್ಲೆನೆ ಮೂಢ ನಾ ಮಶಕಾ ॥
ಜಗದಿ ನಾನೇ ಭಾಗ್ಯವಂತನು । ನಿಗಮಗೋಚರಮೂರ್ತಿಯನು ನಾ । ದೃಗುಯಗಳದಿಂ ನೋಡಿ ಧನ್ಯತೆಯಾಯ್ತು ಯೆನಗೀಗ ॥20॥

ದುರಿತಕರ್ಮನು ದುರಿತಗಿರಿ ನಾ । ದುರಿತದಾತ್ಮನು ದುರಿತದಲಿ ಪು- । ಟ್ಟಿರುವೆ ದುರಿತದ ಮೂರ್ತಿಯಾಗಿಹೆ ತಿಳಿವೆನಿದನೆಲ್ಲಾ ॥
ಶರಣುಹೊಕ್ಕೆನು ನಿನಗೆ ಜಗದಲಿ । ಶರಣರಿಂಗಾಧಾರ ನೀನೇ । ಶರಣರಿಗೆ ನೀ ವಜ್ರಪಂಜರನಾಗಿ ರಕ್ಷಿಸುವೆ ॥21॥

ಶರಣ ರಕ್ಷಕನೆಂಬ ಬಿರುದದು । ಮೆರೆವುದೈ ಮೂಜಗದೊಳೆನ್ನಯ । ದುರಿತರಾಶಿಯು ಬೂದಿ ಯಾಯಿತು ನಿನ್ನ ದರ್ಶನದಿ ॥
ಕರುಣಸಾಗರ ಯತಿವರೇಣ್ಯನೆ । ದೊರೆತವೈ ಪುರುಷಾರ್ಥಗಳು ಗೋ- । ಚರಿಸಿತೈ ಪರಬ್ರಹ್ಮಮೂರ್ತಿಯು ಧನ್ಯನಾನಾದೆ ॥22॥

ಮೂರುಮೂರುತಿ ಕೂಡಿ ನೀನೇ । ಧಾರುಣಿಯೊಳವತರಿಸಿ ಭಕ್ತರ । ತಾರಕನು ಸುರಧೇನು ಶರಣರಿಗೇನ ಹೇಳುವೆನು ॥
ಪಾರವಿಲ್ಲೈ ನಿನ್ನ ಮಹಿಮಾ । ವಾರಿಧಿಗೆ ಬಣ್ಣಿಪರು ಯಾರಿದ । ತೋರಿ ಸುವೆ ನರರೂಪ ಲಿಲಾವಿಗ್ರಹನು ನೀನು ॥23॥

ಉದ್ಧರಿಸಲಾ ಸಗರಪುತ್ರರ । ನೆದ್ದು ಬಂದಳು ಗಂಗೆ ಭೂಮಿಗೆ । ಶುದ್ಧ ಪಾವನ ಮಾಡುವರೆ ಜಗದಲ್ಲಿ ನೀ ಬಂದೆ ॥
ಬಿದ್ದ ಕಲ್ಲಾ ಚರಣಸ್ಪರ್ಶ ದೊ- । ಳೆದ್ದು ನಿಂತಳಹಲ್ಯೆಯದರೋಲ್ । ಶುದ್ಧನಾದೆನು ನಾನು ನಿನ್ನಯ ಚರಣದರ್ಶನದಿ ॥24॥

ಮದುವೆ ಮುಂಜಿಗಳಾದ ನಂತರ । ಉದುಭವಿಸಿತೀ ವ್ಯಾಧಿ ದೇಹದಿ । ಸುದತಿ ತ್ಯಜಿಸಿದಳೆನ್ನ ದೇಹವ ಮುಟ್ಟಲಾರಳಲಾ ॥
ಒದಗಿ ತಾಯ್ತಂದೆಗಳು ಬಿಟ್ಟರು । ವಿಧಿಯು ದುರ್ಘಟವೆಂದು ತಿಳಿದಾ । ಸದನವನು ನಾ ಬಿಟ್ಟೆ ಸಂಸಾರವನು ತ್ಯಜಿಸಿದೆನು ॥25॥

ಹೋಗಿ ತುಳಜಾಪುರಕೆ ದೇವಿಗೆ । ಬಾಗಿ ಶಿರವನು ಬೇಡಿಕೊಂಡೆನು । ಸಾಗಿದವು ತಿಂಗಳುಗಳೇಳು ಪವಾಸದಲಿಯಲ್ಲಿ ॥
ಆಗದ್ಯೆ ಪರಿಹಾರವಿಲ್ಲಿಂ । ಹೋಗು ಯೆಂದು ಭವಾನಿ ನುಡಿದಳು । ರೋಗವನು ಪರಿಹಾರ ಪರಮೇಶ್ವರಿಯು ಮಾಡುವಳು ॥26॥

ಹೋದೆ ನಾ ಪರಮೇಶ್ವರಿಯ ಕಡೆ । ಭೇದ ಬುದ್ಧಿಯ ನೆಣಿಸದಲ್ಲಿ ವಿ । ನೋದದಿಂದಾಚರಿಸಿದನು ಕೇಳ ವ್ರತಪುರಶ್ಚರಣೆ ॥
ಹಾದಿ ಕಾಣದೆ ಸೇವೆ ಮಾಡಿದೆ- । ನಾ ದಯಾನಿಧಿ ಪೇಳ್ದಳಾಕ್ಷಣ । ಹಾದಿ ಹಿಡಿಯ್ಯೆ ಗಾಣಗಾಪುರ ಕೆಂದು ಕೋಪದಲಿ ॥27॥

ದ್ಯೆನಹೀನನು ನಾನು ಯೆನಗಾ । ದೇವಿಯರೆ ಹೊರ ಹಾಕಿದರು ಮೇ । ಣಾವ ಪರಿಯಲಿ ಕಾಯ್ವರೆನ್ನನು ಯಾರು ಮೂಜಗದಿ ॥
ಪಾವನಾತ್ಮಕ ನೀನು ನಿನ್ನ ಕೃ । ಪಾವಲೋಕನ ಸಾಕು ಯೆನ್ನಯ । ಜೀವದಾಶೆಯ ದಿಲ್ಲ ಕಾಯ್ವವ ನೀನೆ ದಾತಾರಾ ॥28॥

ಮರಣಕಂಜುವನಲ್ಲ ನಾನೀ । ಪರಿಪರಿಯ ಸಂಕಷ್ಟ ಉಂಡೆನು । ತ್ವರಿತ ಪೇಳ್ವುದು ಗುರುವೆ ಯಾಶೆನಿರಾಶೆ ಯೆಂಬುದನು ॥
ಬರಿದೆಯಾಶೆಯ ಹಚ್ಚಿ ಯನ್ನನು । ಮರುಗಿಸಲು ಬೇಡಿನ್ನು ದೇವಿಯ । ಪರಿಯೊಳೆನ್ನನು ಚಾಳವಿಸಬೇಡೀಗ ಬಡವನನು ॥29॥

ಶರಣವತ್ಸಲ ಮೂರ್ತಿ ಶ್ರೀಗರು । ಚರಣಕೆರಗುವೆ ನಿನ್ನ ನಾನೀ । ಮರಣ ಬಯಸುವೆ ಹೇಳು ನೀ ನಿರ್ವಾಣವಚನವನು ॥
ಗುರ'ವು ಹೇಳಿದನೀವಚನಗಳ । ಕರೆದು ಪೇಳ್ದನು ಸೋಮನಾಥಗೆ । ಭರದೊಳಿವನನು ವಯ್ದು ಸಂಗಮದಲ್ಲಿ ಮೀಯಿಸಿರಿ ॥30॥

ತ್ವರಿತದಲಿ ಸಂಕಲ್ಪ ಹೇಳುತ । ಭರದಿ ಪುಷ್ಕರ ಸ್ನಾನ ತೀರಿಸಿ । ಬರಲಿ ಕೇಳ ಶ್ವತ್ಥ ವಿದ್ದೆಡೆಯಲ್ಲಿ ಬಲಬಂದು ॥
ತಿರುಗಿ ಬರಬೇಕಾದರವನಿಗೆ । ಧರಿಸಲಿಕೆ ನೂತನ ಸುವಸ್ತ್ರವ । ಭರದಿ ಕೊಡಬೇಕೆಂದು ಶ್ರೀಗುರುವಾಜ್ಞೆ ಕೊಟ್ಟನಲಾ ॥31॥

ಸ್ನಾನ ಮಾಡುತ ಹೊರಗೆ ಬರಲಾ । ವರ್ಣ ಬದಲಾಯಿಸಿತು ದೇಹದ । ಪೂರ್ಣವಾಗೆ ಪ್ರದಕ್ಷಿಣೆಗಳು ಸುವರ್ಣವಾಯಿತಲಾ ॥
ಜೀರ್ಣವಸ್ತ್ರಂಗಳನು ಬಿಟ್ಟಾ । ಕ್ಷೋಣಿಯಲಿ ಹಾಕಲ್ಕೆಯಾನೆಲ- । ವೇನ ಹೇಳಲಿ ಕ್ಷಾರವಾಯಿತು ಮಹಿಮೆ ಚೋದ್ಯವಲಾ ॥32॥

ತಿರುಗಿ ಸಂಗಮದಿಂದಲಾತನ । ಕರೆದು ತಂದನು ಸೋಮನಾಥನು । ಚರಣ ಕೆರಗಿದನಾಗ ಶ್ರೀಗುರುವರಗೆ ಭಕ್ತಿಯಲಿ ॥
ಪರಿಪರಿಯ ಸ್ತೋತ್ರದಲಿ ಶ್ರೀಗುರು- । ವರನ ಕೊಂಡಾಡಿದನು ನಂದಿಯು । ನೆರೆದ ನಾಗರಿಕರದು ಚೋದ್ಯವಪಟ್ಟರೇನೆಂಬೆ ॥33॥

ನುಡಿದನಾಕ್ಷಣ ಗುರುವು ನಂದಿಗೆ । ಇಡಿ ಶರೀರವ ನೋಡು ಕುಷ್ಟವು । ಅಡಗಿತೋ ಮೇಣಿಲ್ಲವೋ ಪೇಳೆನಗೆ ತ್ವರಿತದಲಿ ॥
ನುಡಿಯ ಕೇಳುತ ನಂದಿ ನೋಡಿದ । ನಡಿ ತನಕ ಮೈಯೆಲ್ಲ ಜಂಘೆಯ । ಕಡೆಗೆ ಕಿಂಚಿತ್ ಶೇಷವಿತ್ತದ ನೋಡಿ ಬೆರಗಾದಾ ॥34॥

ಬೆರಗಿನಲಿ ಕೇಳಿದನು ಶ್ರೀಗುರು- । ವರನೆ ನಿನ್ನ ಕೃಪಾಕಟಾಕ್ಷದಿ । ಹರಿದು ಹೋಯಿತು ಸರ್ವ ಜಂಘೆಯ ಶೇಷವೇತಕಿದು ॥
ಚರಣ ಕರಗಿದನಾಗ ಕರುಣಾ- । ಶರಧಿ ರಕ್ಷಿಸು ರಕ್ಷಿಸೆನಲಾ । ಗುರುವು ಪೇಳಿದ ಶೇಷವಿದು ಸಂದೇಹ ಲಕ್ಷಣವು ॥35॥

ಇದಕುಪಾಯವನೊಂದು ಪೇಳುವೆ । ವಿಧವಿಧದಲಿ ಕವಿತ್ವ ಮಾಡುತ । ಮುದದಿ ಸ್ತುತಿಸಲು ಯೆನ್ನ ನಿನ್ನಯ ರೋಗ ಪೋಗುವುದು ॥
ಇದಕೆ ನಂದಿಯು ಪೇಳ್ವನುತ್ತರ । ವೊದಗದೆನಗೆ ಕವಿತ್ವ ಕಾವ್ಯದ । ಹದನ ತಿಳಿಯದು ಓದುಬರಹವನರಿಯೆ ತಾನೆಂದಾ ॥36॥

ನರಹರಿಸರಸ್ವತಿಯು ನಂದಿಯ । ಕರೆದು ಹತ್ತರನಾಲಿಗೆಯೊಳಾ । ವರಭೂತಿಯನಿಟ್ಟ ನಾಕ್ಷಣ ಮಹಿಮೆಯೇನೆಂಬೆ ॥
ಚರಣಕೆರಗುತಲಾಗ ಶ್ರೀಗುರು- । ವರನ ಸಂತೋಷದಲಿ ಸ್ತುತಿಸಿದ । ಬರುವ ಶಬ್ದಕವಿತ್ವವಾಯಿತು ಗುರುಮಹಿಮೆ ನಿಜವು ॥37॥

ಗುರುವೆ ಮಾಯಾಪಾಶದಲಿ ನಾ- । ನುರುಳುತಿದ್ದೆನು ಮುಳುಗಿ ಭವಸಾ- । ಗರದಿ ಮುಳುಗಿದೆ ನಿನ್ನ ಚರಣ ಸ್ಮರಣೆ ಮಾಡದಲೆ ॥
ಪರಿಪರಿಯ ಚೌರ್ಯಾಂಶಿ ಯೋನಿಯೊ-। ಳಿರದೆ ಜನಿಸಿದೆ ಜನುಮಜನುಮದಿ । ಮರೆತೆ ನಿನ್ನನುಭವವು ಮಾಯಾಜಾಲವಾಗಿಹುದು ॥38॥

ಮಂದಮತಿ ನಾನಾದೆ ನಿನಗಾ- । ನೊಂದು ಗಳಿಗೆಯ ಧ್ಯಾನ ಮಾಡದೆ । ಬಂದು ಬಿದ್ದೆನು ದುರಿತಕುಂಡದಿ ಪಾರಗಾಣದಲೆ ॥
ಹಿಂದೆ ಮುಂದೆನಗೆಳೆವ ಮಾಯಾ- । ವೃಂದದಿಂದಲೆ ಭೀತನಾದೆನು । ತಂದೆ ನಿನ್ನಯ ಸ್ಮರಣೆಯಾಗದು ಕರ್ಮವಶದಿಂದಾ ॥39॥

ತಿರುಗಿ ನಾನಾ ಜನ್ಮ ಜನ್ಮಾಂ- । ತರದೊಳೀನರದೇಹ ದೊರಕಿತು । ದೊರಿಯಿತದರೊಳು ಜನ್ಮಬ್ರಾಹ್ಮಣಕುಲದಿ ತವ ಕೃಪೆಯು ॥
ದುರಿತವೇಷ್ಟಿತನಾಗಿ ಶ್ರೀಗುರು । ಚರಣ ಮರೆತೆನು ಪಾಪಿಪಾಮರ । ಧರಣಿಯಲಿ ನಾ ಮೂರ್ಖತನದಲಿ ಕಾಲವನು ಕಳೆದೆ ॥40॥

ಮಾತೆಯಂಗದ ಶೋಣಿತವು ಪಿತೃ । ರೇತವುಭಯವು ಕೂಡಿ ಗರ್ಭದಿ । ಕೂತು ಬುದ್ಬುದದಂತೆ ಕುಣಿದೆನು ಐದು ದಿನದಲ್ಲಿ ॥
ಆ ತತೂಕ್ಷಣ ಪಂಚತತ್ವದ । ಮಾತು ಬಂತೈ ಗರ್ಭದಲಿ ಮ- । ತ್ತೀತರವನಾನಿನ್ನು ಪಾಮರ ತಿಳಿಯಲಿಲ್ಲೆನಗೆ ॥41॥

ಮಾಸವೊಂದಕೆ ಪಿಂಡವಾದೆನು । ಮಾಸವೆರಡಕೆ ಕಾಲು ಕೈಗಳು । ಮಾಸ ಮೂರರೊಳಾಯ್ತು ಸರ್ವಾವಯವು ನವರಂಧ್ರಾ ॥
ಲೇಸಿನಿಂದಾ ಪಂಚ ತತ್ವವಿ- । ಶೇಷ ಸಂಪರ್ಕದಲಿ ದೇಹದ । ಪೋಷಣವು ಮೇಣಾಯ್ತು ಗರ್ಭದಿ ನಿನ್ನ ತಿಳಿಯದಲೆ ॥42॥

ಐದನೆಯಮಾಸದಲಿ ತ್ವಗ್ರೋ । ಮಾದಿಗಳು ಸಂಭವಿಸಿದವು ಮೇ । ಣಾದವಾರನೆ ಮಾಸದಲಿ ಕೇಳ್ ಶ್ವಾಸನಿಶ್ವಾಸ ॥
ಆದವೇಳನೆ ಮಾಸದಲಿ ಶ್ರೋ । ತ್ರಾದಿ ಜಿಹ್ವಾಘ್ರಾಣಗಳು ದೃಢ- । ವಾದ ನಂತರದಿ ಮಜ್ಜಾವೇದ ತಂತುಗಳು ॥43॥

ನೆರಳುತಿದ್ದೆನು ರುಧಿರವಿಷ್ಠಾ- । ವರಣದಲಿ ನಾ ಜನನಿಗರ್ಭದಿ । ಪರಿಯೊಳೀನವಮಾಸ ಕಳೆದೆನು ಬಹಳ ಕಷ್ಟದಲಿ ॥
ಪರಿ ಪರಿಯ ಕಟುತೀಕ್ಷ್ಣ ಉಷ್ಣವ । ಸರಸದಿಂ ತಿನ್ನುವಳು ತಾಯಿಯು । ಪರಮದುಃಖಾಸ್ಪದವು ಗರ್ಭಕೆ ಯಾರಿಗುಸುರುವುದು ॥44॥

ಜನನಿ ಭಕ್ಷ್ಯಾಭಕ್ಷ್ಯ ತಿಳಿಯದೆ । ಮನಕೆ ಬಂದಂದದಲಿ ದಿನ ದಿನ । ತಿನುವಳದರಿಂ ದುಃಖವೆನಗಾಗುವುದು ಗರ್ಭದಲಿ ॥
ಇನಿತು ನವಮಾಸಗಳ ಕಳೆದೆನು । ಜನನಿಗರ್ಭದಿ ಕಷ್ಟ ಪಟ್ಟೆನು । ಯೆನಗೆ ನಿನ್ನಯ ಸ್ಮರಣವಾಗದು ಮಾಯೆಯದು ಬಿಡದು ॥45॥

ಯೋನಿದ್ವಾರದಿ ಬಂದು ಜನುಮಕೆ । ಕ್ಷೋಣಿಯಲಿ ಬಂದಾಕ್ಷಣದಿ ವಿಧಿ । ತಾನೆ ಹಣೆಯಲಿ ಬರೆದು ಬಿಟ್ಟಿಹನೇನ ಹೇಳುವೆನು ॥
ಮಾನವರಿಗಾಯುಷ್ಯವರ್ಧವ । ಹಾನಿಯಾಯಿತು ನಿದ್ರೆಯಲಿ ಮು- । ತ್ತೇನು ಶೇಷವು ಬಾಲಯೌವನವಾರ್ಧಕದೊಳಾಯ್ತು ॥46॥

ಬಾಲತನದಲಿ ಬಹಳ ಸಂಕಟ । ತಾಳಲಾರದೆ ಕಷ್ಟವಾಯಿತು । ಹೇಳಲಾರೆನು ಭೋಗಿಸಿದೆನಾಪತ್ತು ಬಹುವಿಧದಿ ॥
ಹೇಲುಮೂತ್ರದಿ ನೆರಳುತಿದ್ದೆನು । ಕೇಳಲಾರರು ಯೆನಗೆ ಹೊಟ್ಟೆಗೆ । ಶೂಲವಾದರೆ ಮೊಲೆಯ ಬಾಯೊಳು ತುರುಕುವಳು ತಾಯಿ ॥47॥

ಹಸಿವೆಯಾಗಲು ಯೆನಗೆ ಮುಖದಲಿ । ಬಸಿವರೌಷಧ ಪ್ರೇಮದಲ್ಲೀ । ಶಿಶುವಳುವುದ್ಯೆ ಹೊಟ್ಟೆ ಬೇನೆಯೊಳೆಂದು ಪೇಳುವಳು ॥
ಶಿಶುತನದಿ ನಾನತ್ತು ಸುಮ್ಮನೆ । ಬಸವಳಿವ ಪರಿಯನ್ನು ನೋಡಳು । ಶಿಶುವ ಹಾಕುತ ತೊಟ್ಟಿಲಲಿ ಜೋಗುಳವ ಹಾಡುವಳು ॥48॥

ತೊಟ್ಟಿಲೊಳಗಿನ ವಸ್ತ್ರದಲಿ ತಾ । ದುಷ್ಟ ವೃಶ್ಚಿಕ ಕಚ್ಚಿದರೆ ಬಾಯ್ । ಬಿಟ್ಟು ಕೂಗಿದರರೆ ಬೈವರು ಹಟ್ಟಿ ಶಿಶುವೆಂದು ॥
ಇಷ್ಟಕಳುವುದು ತೀರಿದರೆ ಕೇಳ್ । ತೊಟ್ಟಿಲಿಂದಲೆ ಯೆತ್ತುವಳು ಮು- । ತ್ರಿಷ್ಟು ಸ್ತನಪಾನವನು ಮಾಳ್ಪಳು ನೋವನರಿಯದಲೆ ॥49॥

ತಿನಲು ಮಾತೆಯು ಖಾರಹುಳಿಯನು । ಸ್ತನದಿ ಬರುವವು ಗುಣಗಳೆಲ್ಲವು । ಯೆನಗೆ ಖಾರದಿ ಕೆಮ್ಮು ದಮ್ಮಾಗುವದು ನೋಡಿದರೆ ॥
ಎನಗೆ ಬಹುಕಹಿಕಾಢೆಹವ । ತಿನಿಸುವಳು ಕಾರಣವನರಿಯರು । ಮನದಿ ಬಹುವಿಧತ್ರಾಸವಾಯಿತು ಬಾಲತನದೊಳಗೆ ॥50॥

ವರುಷ ಹನ್ನೆರಡಾಯ್ತು ನಿನ್ನಯ । ಚರಣಸ್ಮರಣವದೆಂತದರಿಯೆನು । ಸ್ಮರಣಪಥದಲಿ ಬಾರದ್ರೆ ಕೇಳ್ ಪೂರ್ವಸಂಸ್ಕಾರಾ ॥
ಎರಡು ಭಾಗಗಳುಳಿದವಾಗಲೆ । ಹರೆಯ ಯೌವನ ಬಂತು ದೇಹಕೆ । ತರುಣಿಯರ ವಶವಾದೆ ಕಾಮನ ಬಲೆಗೆ ಸಿಲುಕಿದೆನು ॥51॥

ಮದನನೊಡ್ಡಿದ ಬಲೆಗೆ ಸಿಗಲಾ । ಸುದತಿಯರ ವಶವಾದೆ ಶ್ರೀಗುರು । ಪದವ ಮರೆತೆನು ತಂದೆ ತಾಯ್ಗಳ ತ್ಯಾಗಮಾಡಿದೆನು ॥
ವಿಧವಿಧದಿ ಪರನಿಂದೆ ಪರದ್ರ । ವ್ಯದ ವಿಷದ ಮಡುವಿನಲಿ ಸಿಲುಕಿದೆ । ವದನದಲಿ ಜನಿಂದೆ ಬಾರದು ನಿನ್ನ ಪದಭಜನಾ ॥52॥

ಜಾರಕರ್ಮವ ಮಾಡಿದೆನು ಪರ । ನಾರಿಯರ ಕೂಡಿದೆನು ವಿಷಯದ । ಚಾರುದಾಸ್ಯತ್ವವನು ಪಡೆದೆನು ಹೀನ ಕರ್ಮದಲಿ ॥
ನಾರಿಯರ ಕುಲಶೀಲಗಳನು ವಿ । ಚಾರ ಮಾಡದೆ ರಮಿಸಿದೆನು ಮದ । ವೇರಿತ್ಯೆ ಯೌವನದ ಮದಿರೆಯದೇನು ಹೇಳುವನು ॥53॥

ನುಂಗ ಬೇಕಾದೀಪವೆನುತ ಪ । ತಂಗ ಹಾರುವ ತೆರದೊಳಾನದ । ನಂಗಮದದಲಿ ವಿಷಯ ಸುಖಕೊಳಗಾದೆ ತಿಳಿಯದಲೆ ॥
ಸಂಗದೋಷವ ತಿಳಿಯ ದಲೆ ಮಾ- । ತಂಗನಾದೆನು ಮದದಿ ಕೇಳ್ಳೈ । ಯಂಗಿಕರಿಸಿದೆ ಪರರ ವಂಚಿಸಿ ಪರರದ್ರವ್ಯವನು ॥54॥

ಸಾಧುಸಂತರ ನಿಂದಿಸಿದೆನು ವಿ- । ನೋದವಲ್ಲದೆ ಬೇರೆಯರಿಯದೆ । ಹಾದಿ ತಪ್ಪಿದೆ ಮದನನೆನ್ನನು ಘಾತ ಮಾಡಿದನು ॥
ನೀ ದಯಾನಿಧಿ ನಿನ್ನ ನಿರ್ಮಲ । ಪಾದಸೇವೆಯು ಮರೆತು ಹೋಯಿತು । ಹೊದವೀಪರಿ ಯೌವನದಿ ದಿನ ನಿನ್ನ ನರಿಯದಲೆ ॥55॥

ಬಂತು ವಾರ್ಧಿಕ್ಯವು ಶರೀರಕೆ । ಕಾಂತೆ ಸುತರಿಗೆ ಬೇಡವಾದೆನು । ಬಂತು ಕಂಪ ಶರೀರಕದು ಸಹಿಸರು ಕುಟುಂಬಕರು ॥
ದಂತ ಹೋದವು ಕಣ್ಣು ಕುರುಡನು । ಬಂತು ಕಫವಾತದ ವಿಕಾರವು । ಮುಂದೆ ಕಿವುಡನ ತೆರದಿ ಬಹು ಸಂಕಷ್ಟವಾದವಲಾ ॥56॥

ಪರಿಪರಿಯೋಳಿ ತೆರದ ದುಃಖವ । ನಿರದೆ ಭೋಗಿಸಿ ತ್ರಾಸವಾಯಿತು । ಗುರುವೆ ನಿನ್ನಯ ಚರಣಸೇವೆಗೆ ಮನವು ಬಾರದಲಾ ॥
ಗುರುವೆ ನಿನ್ನನು ಕಂಡೆನೀಭವ । ಶರಧಿಯನು ದಾಟಿಸುವ ನೌಕೆಯು । ಚರಣಯುಗಳವು ನಿನ್ನ ಬಿಡದಲೆ ಹಿಡಿವೆನಾನಿನ್ನು ॥57॥

ಮಂದಮತಿ ನಾನಾಗಿ ಪದಮಕ । ರಂದಸೇವೆಯ ಸವಿಯ ತಿಳಿಯೆ ಮು । ಕುಂದ ನೀನೇ ವಿಶ್ವ ಪಾಲಕ ತಾರಕನು ನೀನೇ ॥
ಅಂಧರೀಜನರೆಲ್ಲ ನಿನ್ನನು । ವಂದಿಸರು ನಿಜತತ್ವರೂಪನ । ಬಂದೆ ನೀ ನರವೇಷ ಧರಿಸುತ ಜಗವ ಪಾಲಿಸಲು ॥58॥

ದೇವದೇವನೆ ನಿನ್ನ ಚರಣದ । ಸೇವೆಯನು ಕೊಡು ಯೆನಗದೊಂದೇ । ಭಾವದಲಿ ಸೇವಿಪೆ ನಿರಂತರ ನಿನ್ನ ಪದಯುಗವಾ ॥
ಈ ವಿಧದೊಳಾವಿಪ್ರನೊಂದೇ । ಭಾವದಲಿ ಸ್ತುತಿಸಿದನು ಗುರುವರನು । ಪಾವನಚರಿತ್ರನನು ತೋರಿಸಿ ಜನರ ಬೋಧಿಸಿದಾ ॥59॥

ನೋಡಿರೈ ಜನರೆಲ್ಲ ಗುರುವನು । ನೋಡಿರೈ ಪರಬ್ರಹ್ಮ ಮೂರ್ತಿಯ । ಮಾಡಿದೆನು ನಾ ದುರಿತವಗಣಿತ ದರ್ಶನದೊಳಿವನು ॥
ಮಾಡಿದನು ನಿರ್ದೋಷಿ ಯೆನ್ನನು । ಮಾಡಿರೀತನ ಸೇವೆಯನು ಮಾ । ತಾಡಿ ರೀತನಸ್ತುತಿಯ ಗುಣ ಮಹಿಮೆಯನು ಜಿಹ್ವೆಯಲಿ ॥60॥

ಪಾವಕನ ಸ್ಪರ್ಶದಲಿ ತೃಣವದು । ಜೀವಹಿಡಿವುದೆ ಸುಟ್ಟು ಹೋಗುವು । ದೀವಿಧದಿ ದುರಿತೌಘ ಸುಡುವುದು ಗುರುಕೃಪಾಂಜನದಿ ॥
ಸೇವಿಸಿರಿ ನೀವೆಲ್ಲ ಗುರುಪದ । ಕಾವನೈ ಭಕ್ತರನು ಗುರುಹೊರ । ತಾವುದೈ ಪರದೈವವಿಲ್ಲೈ ಗುರುವೆ ಪರದೈವ ॥61॥

ಬರೆಯಲಾ ವಿಧಿ ಹಣೆಯ ದುಷ್ಟಾ- । ಕ್ಷರಗಳನು ಗುರು ತೊಳೆದು ತೆಗೆಯುವ । ನರರೆ ಸುಷ್ಟಕ್ಷರಗಳನು ಗುರು ಬರೆವನಾಸ್ಥಳದಿ ॥
ನರಹರಿಸರಸ್ವತಿಯು ಹತ್ತಿಲಿ । ಸುರತರುವು ತಾನಿರಲು ಬಳಲುತ । ತಿರುಗುತಿ ಹ ಕಾರಣವದೇನಿದು ಭಜಿಸಿರೀತನನೆ ॥62॥

ಕೊಡುವನೀತನು ಸೌಖ್ಯ ವಿಹದಲಿ । ಕಡೆಗೆ ವೈಕುಂಠದಲಿ ವಾಸವ । ನುಡಿಯು ನಿಃಸಂದೇಹವಿದು ನಿಜ ನಿಜವು ನಿಜ ನಿಜವು ॥
ದೃಢಮನಸ್ಸಿಲಿ ನಂದಿ ಯೀಪರಿ । ಯಡಿಗೆರಗಿದನು ಗುರುವಿನೆದುರಿಲಿ । ಪಡೆದನೈ ಸಂತಸವ ಶ್ರೀಗುರು ಭಕ್ತವತ್ಸಲನು ॥63॥

ನಂದಿ ಯೀಪರಿ ಪರಮಸಂತಸ । ದಿಂದ ಕೊಂಡಾಡಿದನು ಗುರುವನು । ಮಂದಿಯನು ನೋಡುತಲಿ ಶ್ರೀಗುರುವೆಂದನಾಕ್ಷಣದಿ ॥
ಸುಂದರರದ ಕವಿತೆಯನು ಮಾಡುತ । ಲಿಂದು ಕವಿಯಾದನು ಕಣಾ ಯಿವ । ನಿಂದಿನಿಂದ ಕವೀಶ್ವರನು ಹೆಸರಾದನೀಜಗದಿ ॥64॥

ಈಸು ಪರಿಯಲಿ ಗುರುವು ಪ್ರೇಮದ । ಭಾಷೆಯಲಿ ಮಾತಾಡಿ ಹೆಸರಿಡೆ । ಶೇಷ ಕುಷ್ಟವು ನಷ್ಟವಾಯಿತು ತೊಡೆಯ ಮೇಲಿಂದಾ ॥
ಭಾಸುರದ ಗುರುಮೂರ್ತಿ ದೋಷದ । ರಾಶಿ ಸುಡುವುದು ದರ್ಶನದೊಳೀ । ಶೇಷಗಸದಳ ಗುರುಮಹಿಮೆಯನು ವರ್ಣಿಸಲು ನಿಜದಿ ॥65॥

ಎರಡನೆಯ ಕವಿ ಹೆಸರಿನಲಿ ನರ- । ಹರಿಯು ಬಂದನದೆಂತು ಕಥನವ । ನರುಹುವೆನು ಕೇಳ್ಮುಂದಿನಧ್ಯಾಯದಲಿ ಮನಗೊಟ್ಟು ॥
ಪರಮಪಾವನವೀಕಥೆಯ ವಿ । ಸ್ತರಿಸಿ ಕೇಳಲು ಸರ್ವಸಿದ್ಧಿಯು । ದೊರಕುವುದು ನಿಜವೆಂದು ನುಡಿದನು ವಿಷ್ಣು ಗುರುಮೂರ್ತಿ ॥66॥

॥ ಅಧ್ಯಾಯ 45 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 46

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ನರಹರಿ ಕವೀಶ್ವರಗೆ ಶ್ರೀಗುರು । ಕರುಣಿಸಿದನ್ನೈ ನಿಜಸ್ವರೂಪವ । ಶರಣು ಹೊಕ್ಕನು ಕವಿಯು ಶ್ರೀಗುರುಚರಣಯುಗಳದಲಿ॥

ಗುರುಭಜನ ಭವವಿಷದ ಭಂಜನ । ಗುರುಭಜನ ಪರಮಾರ್ಥಸಾಧನ । ಗುರುಚರಣಸದ್ಭಜನ ಭವಸಾಗರದ ಸಂತರಣ ॥
ಗುರುಭಜನ ದಾರಿದ್ರ್ಯನಾಶನ । ಗುರುಭಜನವೇ ಸೌಖ್ಯ ಸಾಧನ । ಗುರುಚರಣ ಮೋಕ್ಷಕ್ಕೆ ಸುಲಭದೊಳಿಹುದು ಸೋಪಾನ ॥1॥

ಎರಡನೆಯ ಕವಿಯಾದನೆನುತಲಿ । ಒರೆವೆ ನಿನಗಾಗ ಕೇಳೈ । ನರಹರಿಯ ನಾಮದಲಿ ಕೇಳೈ ನಾಮಧಾರಕನೆ ॥
ಗುರುವರನು ಗಾಣಗಪುರದೊಳಿರೆ । ಧರಣಿಯಲಿ ಪಸರಿಸಿತು ಕೀರ್ತಿಯು । ಶರಧಿಯಲಿ ತೆರೆ ಬಂದ ತೆರದಲಿ ಜನರು ಬರುತಿಹರು ॥2॥

ನಂದಿನಾಮದ ಕವಿಕವೀಶ್ವರ । ನೆಂದು ಹೆಸರಾಯ್ತುವಗೆ ನಂತರ । ಚಂದದಿಂದಲಿ ಬಹಳ ಕವಿತೆಗಳನ್ನು ಮಾಡಿದನು ॥
ಮುಂದೆಯಾತನ ಕವಿತೆ ಪಸರಿಸಿ । ತೆಂದು ಜಗದಲಿ ಖ್ಯಾತಿಯಾಯಿತು । ಬಂದು ವೊಯ್ವರು ಗುರುವ ಭಕ್ತರು ತಮ್ಮ ಮಂದಿರಕೆ ॥3॥

ಭಕ್ತನೋರ್ವನು ಗುರುವ ಮನೆಗಾ । ಸಕ್ತಿಯಿಂದಲೆ ತಂದನೊಂದಿನ । ಭಕ್ತಿ ಭಾವದಿ ಗುರುವು ಶೋಭನದಾಯಕನು ಯೆನುತಾ ॥
ಸುತ್ತು ಮುತ್ತಲು ಗುಡಿ ಪತಾಕೆಯ । ನೆತ್ತಿ ಚಿತ್ರವಿಚಿತ್ರ ತೋರಣ । ವಿಸ್ತರಿಸಿದನು ಹಿಪ್ಪರಿಗೆ ಗ್ರಾಮದಲಿ ಸೌರಂಭಾ ॥4॥

ಹರನ ದೇಗುಲವೊಂದು ಗ್ರಾಮದೊ-। ಳಿರುವುದಲ್ಲಿಯ ಲಿಂಗಕಲ್ಲೇ । ಶ್ವರನೆನುತ ರಂಜಿಸಿತು ಖ್ಯಾತಿಯ ಹಬ್ಬಿತಲ್ಲಲ್ಲಿ ॥
ಇರುವನಲ್ಲಿಯೆ ವಿಪ್ರನೋರ್ವನು । ನರಹರಿಯ ನಾಮದಲಿ ಮೆರೆದನು । ಪರಿಪರಿಯೊಳಾಲಿಂಗಸೇವೆಯ ಮಾಡಿದನು ನಿರತ ॥5॥

ನಿತ್ಯ ವೀನರಹರಿಯು ಪಂಚಕ । ವಿತ್ವವನು ಮಾಡುತ್ತಲಿದ್ದನು । ಭಕ್ತಿಯಲಿ ತಾನೊಪ್ಪಿಸುವನ್ಯೆ ಲಿಂಗಚರಣದಲಿ ॥
ಭಕ್ತ ಕಲ್ಲೇಶ್ವರನ ಹೊರತ- । ನ್ಯತ್ರ ಜಿಹ್ವೆಯನರ್ಪಿಸೆನು ತಾ । ಸಕ್ತನೇಮವ ಪಾಲಿಸಿದನಾ ಶಿವನ ಸೇವೆಯಲಿ ॥6॥

ಗುರುವಿಗಿರುವುದು ಕವಿತೆಯಲಿ ಬಹು । ಪರಿಯ ಪ್ರೇಮವು ಗುರುವ ಸ್ತುತಿಸೆನೆ । ನರಹರಿಯು ಪೇಳಿದನು ತನ್ನ ಯಭೇದ್ಯ ನೇಮವನು ॥
ನರನ ಹೊಗಳುವ ಜಿಹ್ವೆಯಲ್ಲೀ- । ಶ್ವರನ ಕಲ್ಲೇಶ್ವರನ ಪೊಗಳುವೆ । ನರಿಯೆನನ್ಯರ ನಾನು ಸಚರಾಚರ ಜಗತ್ತಿನಲಿ ॥7॥

ನುಡಿಯುತೀಪರಿ ನರಹರಿಯು ತಾ । ನಡೆದನ್ಯೆ ಮುಂದಕ್ಕೆ ಗರ್ವದಿ । ಮೃಡನ ಕಲ್ಲೇಶ್ವರ ಪೂಜೆಗೆ ಬಂದ ನಾದಿವಸ ॥
ನಡಿಸಿದನು ಕವಿತಾರಚನೆಯನು । ಮೃಡನಮುಂದಕೆ ಕೂತು ದಿನದೋಳ್ । ಗಡಬಡಿಸಿತ್ಯೆ ಮನವು ಕವಿತೆಯ ಮರೆತು ಮಲಗಿದನು ॥8॥

ಬಿತ್ತು ನಿದ್ರೆಯು ದೇಗುಲದಿ ಬಹು । ಚಿತ್ರ ಕಂಡನು ಸ್ವಪ್ನದಲಿ ಕೇಳ್ । ವಿಸ್ತರಿಸಿ ನೋಡಿದರೆ ಶ್ರೀಗುರುವಿಹನು ಲಿಂಗದಲಿ ॥
ಸುತ್ತುಮುತ್ತಲು ನೋಡಿದರೆ ಗುರು । ಮೂರ್ತಿಯಲ್ಲದೆ ಬೇರೆ ಕಾಣದೆ । ವಿಸ್ತರಿಸಿದನು ಷೋಡಶದ ಲುಪಚಾರ ಪೂಜೆಯನು ॥9॥

ಗುರುವು ಕೇಳಿದನವಗೆ ಸ್ವಪ್ನದಿ । ನರಹರಿಯೆ ನೀನೇಕೆ ಪೂಜಿಪೆ । ನರನ ಪೂಜಿಸು ನೀನು ಕಲ್ಲೇಶ್ವರನ ಭಕ್ತಿಯಲಿ ॥
ಗುರುವಚನವನು ಕೇಳದಲೆಯ । ಸ್ಥಿರಮನದಿ ಪೂಜೆಯನು ಮಾಡಿದ । ನರರೆ ಯೆಚ್ಚರವಾಯ್ತು ಕಂಡನು ಸ್ವಪ್ನದೂಹಿತವಾ ॥10॥

ಮನದಿ ವಿಸ್ಮಿತನಾಗಿ ನರಹರಿ । ನೆನಿಸಿದನು ನರಹರಿಸರಸ್ವತಿ । ಮನುಜನಲ್ಲಾ ನಿಜವಿವನು ಕಲ್ಲೇಶ್ವರನು ತಿಳಿಯೆ ॥
ಎನುತ ನಿರ್ಧಾರವನು ಮಾಡುತ । ಕ್ಷಣದೋಳಾಗುರುವಿದ್ದ ಸ್ಥಾನಕೆ । ವಿನಯದಿಂದೋಡಿದನು ಗುರುಚರಣದಲಿ ಬಿದ್ದನಲಾ ॥11॥

ವಂದಿಸುವೆ ನರಹರಿಸರಸ್ವತಿ । ಯಿಂದುಧರ ಕಲ್ಲೇಶ್ವರನೆ ನೀ- । ನೆಂದು ಮನದಲಿ ಖಾತ್ರಿಯಾಯಿತು ಕ್ಷಮಿಸು ಕ್ಷಮಿಸೆನ್ನಾ ॥
ನಿಂದಿಸಿದೆ ನರನೆಂದು ನಿನ್ನನು । ಮಂದಮತಿ ನಾ ತಿಳಿಯದಲೆ ಯೆನ । ಗೊಂದು ಬಾರಿಗೆ ಕ್ಷಮಿಸು ಯೆನ್ನಜ್ಞಾನ ಪರಿಹರಿಸು ॥12॥

ನೀನೆ ಕಲ್ಲೇಶ್ವರನು ಸಾಕ್ಷಾತ್ । ನೀನಿರುವೆ ಜಗಕೆಲ್ಲ ಗುರು ಯೆನ । ಗೇನು ಮಾಹಿತಿಯಾಗ ಮನವಾಯ್ತಯ್ಯ ಸ್ಥಿರವೆನಗೆ ॥
ಲೀನನಾಗಿಹೆ ನಿನ್ನ ಚರಣದಿ । ನೀನೆ ಶರಣಾಗತರ ಪಂಜರ । ನೀನನಾಥರ ನಾಥ ರಕ್ಷಿಸು ದೀನನಜ್ಞನನು ॥13॥

ಹತ್ತರದಲಿರಲಾ ನಿಧಾನವು । ಸುತ್ತು ಹುಡುಕುವುದೇಕೆ ವನದಲಿ । ಚಿತ್ತವಿಸೆ ಸುರಧೇನು ಮನೆಯಲಿ ದೈನ್ಯವೇನಿಹುದು ॥
ಹತ್ತು ಸಾವಿರ ವರುಷ ತಪದ ಸ । ಮಸ್ತ ಕಷ್ಟದಿ ಮಾಡಲಿವರಿಗೆ । ಹತ್ತಲಾಗದು ನಿನ್ನ ಪತ್ತೆಯು ಗೋಚರಿಸಿದೆನಗೆ ॥14॥

ನೀನೆ ಕಲ್ಲೇಶ್ವರನು ಯೆನ್ನ ಭಿ । ಮಾನವನು ನೀ ಕಾಯ್ದೆ ಸೇವೆಯು । ಪೂರ್ಣವಾಯಿತು ಫಲಿಸಿದುದು ಕೇಳ್ನಿನ್ನ ದರ್ಶನದಿ ॥
ಜ್ಞಾನಮೂರುತಿ ನೀ ಜಗದ್ಗುರು । ಕ್ಷೋಣಿಯಲಿ ನಾಟಕವನಾಡುವೆ । ನೀನೆ ಕರುಣಾನಿಧಿ ಯೆನುತ ಪದಕೆರಗಿದನು ದ್ವಿಜನು ॥15॥

ಗುರುವು ನಸುನಗುತೆಂದನಾತಗೆ । ನಿರತವೆನ್ನನು ನಿಂದಿಸುವೆ ನೀ । ಬರುವಕಾರಣ ವೇನು ನುತಿಸುತಲೆಮ್ಮ ಕಡೆಗೀಗಾ ॥
ಗುರು ನುಡಿದ ವಚನಗಳ ಕೇಳುತ । ಲರುಹಿದನು ನರಹರಿಯು ಕಲ್ಲೇ- । ಶ್ವರನ ಪೂಜೆಯ ಫಲದಿ ಕಂಡೆನು ಸಗುಣಮೂರ್ತಿಯನು ॥16॥

ನೀನು ಪರಮಾನಂದಮೂರುತಿ । ಜ್ಞಾನಜ್ಯೋತಿಯು ಭೇಟಿ ದೊರೆಯಿತು । ನಾನೆ ಧನ್ಯನು ಯೆನಗೆ ಬಹು ತಿಮಿರದಲಿ ಜ್ಯೋತಿಯಲಿ ॥
ನಾನು ಕಲ್ಲೇಶ್ವರನ ಪೂಜೆಯ । ಸಾನುರಾಗದಿ ಮಾಡೆ ತೋರಿದೆ । ನೀನೆ ಕಲ್ಲೇಶ್ವರನೆನುತ ನಿರ್ಧಾರ ಮಾಡಿದೆನು ॥17॥

ನಿನ್ನ ನೋಡಿದೆ ಲಿಂಗಸ್ಥಾನದಿ । ಸ್ವಪ್ನ ವೀ ಪರಿಯಾಗೆ ಮನದಲಿ । ಭಿನ್ನ ಭಾವವು ಪೋಯ್ತು ಚರಣದಿ ಭಕ್ತಿ ದೃಢವಾಯ್ತು ॥
ಎನ್ನನೀಕ್ಷಣ ಶಿಷ್ಯ ವೃಂದದಿ । ಭಿನ್ನ ಭಾವವ ಮರೆತು ಕೂಡಿಸು । ಸನ್ನುತಾತ್ಮನೆ ಯೆನುತ ಬಿನ್ನೈಸಿದನು ನರಹರಿಯಾ ॥18॥

ಮಾನಸದ ಪೂಜಾ ಪ್ರಕಾರದ । ಸಾನುರಾಗದ ಸ್ತುತಿಯು ಮಾಡಿದ । ನೇನ ಹೇಳುವೆ ಕವಿತೆಯಲಿ ಗುರು ಮೆಚ್ಚಿ ಹೇಳಿದನು ॥
ಏನ ಹೇಳುವನೀತ ಸ್ವಪ್ನದಿ । ತಾನೆ ಮಾಡಿದನೇಕ ಕವಿತೆಯ । ನಾನು ಸಾಕ್ಷಾತ್ ಮಠದೊಳಿರೆ ಯೆನಗಿದನು ತಿಳಿಸನಲಾ ॥19॥

ಎಂದು ನಾನಾಪರಿ ವಿನೋದಗ । ಳಿಂದ ಶ್ರೀಗುರು ವಸ್ತ್ರಭೂಷಣ- । ದಿಂದ ಸನ್ಮಾನಿಸಿದನಾನರಹರಿಕವೀಶ್ವರನಾ ॥
ಮುಂದೆ ಕಲ್ಲೇಶ್ವರನ ಪೂಜಿಸು । ಚಂದದಿಂದಲಿ ನಾನೆಯಲ್ಲಿಹೆ । ನೆಂದನಾ ಗುರುವರನು ಮೋದದೊಳಾ ನೃಸಿಂಹನಿಗೆ ॥20॥

ತಿರುಗಿಯುತ್ತರವಿತ್ತನಾ ದ್ವಿಜ । ಗುರುವೆ ಸಾಕ್ಷಾತ್ ನೀನೆ ಕಲ್ಲೇ- । ಶ್ವರನ ಮೂರುತಿ ಸಗುಣ ಬಿಡುವರೆ ಮರುಳನಾನಲ್ಲಾ ॥
ಚರಣಸೇವೆಯ ಮಾಡುತಿರುವೆನು । ಬರಿದೆ ಯೆರಡನೆ ದೇವರೇತಕೆ । ಗುರುಹೊರತು ಪರದೈವವಿಲ್ಲೈ ಸತ್ಯವಿದು ಸತ್ಯ ॥21॥

ಗುರುಹಸಾದದಿ ಕಾವ್ಯವಾಯಿತು । ನರಹರಿಯು ಕವಿಯಾದನೀಪರಿ । ಧರಣಿಯಲಿ ಸಕಲಾರ್ಥಸಾಧನ ಗುರುಪ್ರಸಾದವಲಾ ॥
ಗುರುವು ಕವಿನರಹರಿಯನುದ್ಧರಿ- । ಸಿರುವ ಕಥನಾಮೃತವ ಕುಡಿದರೆ । ದೊರೆಯುವುದು ಸರ್ವಾರ್ಥಸಿದ್ಧಿಗಳೆಂದನಾವಿಷ್ಣು ॥22॥

॥ ಅಧ್ಯಾಯ 46 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 47

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥
॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥
॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಒಂದೆ ಸಮಯದೊಳೇಳು ಶಿಷ್ಯರು । ಬಂದು ದೀಪಾವಳಿಗೆ ಕರೆಯಲು । ಒಂದೆ ಸಮಯದೊಳೆಂಟು ಸ್ಥಾನದೊಳಿದ್ದ ನಾಗುರುವು॥

ಗುರುವು ಸಚರಾಚರ ಜಗದೊಳಗೆ । ಭರಿತನಿಹನಣುರೇಣುಕಾಷ್ಠ ದೊ। ಳರಿಯರೀತನ ಮಹಿಮೆ ಗುಣಗಣಗಳನು ಯೋಗಿಗಳು ॥
ಪರಮ ಸಾಧ್ಯನು ಭಕ್ತಿ ಮಾರ್ಗದಿ । ಚರಣಸೇವೆಯ ಮಾಡಿಯಾತನ । ನರಿಯಿರೈ ಗುರುವೊಲಿದರೀ ಜಗಕ್ಷಣದೊಳೊಲಿಯುವುದು ॥1॥
ನಾಮಧಾರಕ ಕೇಳು ಶಿಷ್ಯಶಿ । ರೋಮಣಿಯೆ ನಾ ಪೇಳ್ವ ಕಥೆಯಿದು । ರಾಮಣೀಯಕವಿಹುದು ಗುರುವಿನ ಮಹಿಮೆ ನಿರುಪಮವು ॥
ಭೂಮಿಯಲಿ ಸಂತತಿಯು ಸಂಪತ್- । ಕಾಮಿತಾರ್ಥವನೆಲ್ಲ ಕೊಡುವುದು । ಕ್ಷೇಮದೀರ್ಘಾಯುಷ್ಯ ದಾಯಕ ಗುರುಚರಿತ್ರವಿದು ॥2॥
ಪತಿತಪಾವನನಿಹನು ಶ್ರೀಗುರು । ಯತಿವರೇಣ್ಯನು ಪುಣ್ಯಪಾವನ । ಕಥೆಯ ಪೇಳುವೆನೊಂದು ಕೇಳೈ ನಾಮಧಾರಕನೆ ॥
ಯತಿವರೇಣ್ಯನು ಗಾಣಗಾಪುರ । ಕ್ಷಿತಿಯೊಳಿರುತಿರಲೇಳು ಶಿಷ್ಯರು । ಯತಿವರೇಣ್ಯನಿಗಿತ್ತರಾಮಂತ್ರಣವ ಪ್ರೀತಿಯಲಿ ॥3॥

ಗುರುವೆ ದೀಪಾವಳಿಯ ಹಬ್ಬಕೆ । ಬರಲು ಬೇಕೈ ಯನ್ನ ಮನೆಗೆಂ । ದರುಹಿದನು ಪ್ರತಿಯೊಬ್ಬ ಶಿಷ್ಯನು ಪ್ರೇಮಭಾವದಲಿ ॥
ಗುರುವರನ ಸತ್ಪ್ರೇಮಪಾತ್ರರು । ಅರಿಯನವರಲಿ ಹೆಚ್ಚು ಕುಂದನು । ಕರೆದರೆಲ್ಲರು ತಮ್ಮ ಮನೆಗಾಗುರುವು ಬೇಕೆನುತಾ ॥4॥
ನಸುನಗುತ ಗುರುವೆಂದನವರಿ- । ಗುಸುರಿರೈ ನೀವೀಗ ಸಾಧ್ಯವೆ ? । ವಸುಮತಿಯೊಳೆಲ್ಲರಲಿಯೊಂದೇ ವೇಳೆ ಬರಬಹುದೆ ? ॥
ಕುಶಲತನದಲಿ ನೀವೆಯುಪದೇ- । ಶಿಸುವುದೆನಗೆ ವಿವೇಕ ಪೂರ್ವದಿ । ಕುಶಲತನದಲಿ ಬರುವೆನೆಂದೇ ಸ್ಥಾನದಲಿ ನಾನು ॥5॥
ದೂರದೂರದೊಳಿರುವವ್ರೈ ನಿ । ಮ್ಮೂರು ಗಳು ನಾನೆಲ್ಲರಲಿ ಬರ । ಲಾರೆ ನಿಮ್ಮೊಳು ಹಂಚಿ ಕೊಳ್ಳಿರಿ ಪ್ರೇಮಭಾವದಲಿ ॥
ಯಾರಮನೆಯಲಿ ಹಬ್ಬ ಮಾಳ್ಪ ವಿ । ಚಾರ ನಿಮ್ಮದು ತಿಳಿಸಿ ಪೋಗಲು । ಊರಿಗಾದಿನ ಬರುವೆ ಶಿಷ್ಯಾಧೀನ ನಾನಿಹೆನು ॥6॥
ಎಂದ ವಚನವ ಕೇಳಿ ಶಿಷ್ಯರು । ವಂದಿಸುತ ಗುರುವಿಂಗೆ ಪೇಳ್ದರು । ಇಂದು ನಮ್ಮೊಳು ಪಕ್ಷಪಾತವ ಮಾಡದಿರು ಗುರುವೆ ॥
ಕುಂದುಹೆಚ್ಚನು ಬಗೆಯದಲೆ ನೀ । ನೊಂದೆ ಭಾವದಿ ನಡಿಸು ನಮ್ಮನು । ಕುಂದು ತೋರಿಸಲೆಮಗೆ ನದಿಯಲಿ ಪ್ರಾಣ ತ್ಯಜಿಸುವೆವು ॥7॥
ಪೊಡವಿಪತಿ ದುರ್ಯೋಧನನ ಮನೆ । ಬಿಡುತ ಶ್ರೀಗೋಪಾಲಕೃಷ್ಣನು । ಬಡ ವಿದುರನಲಿ ಹೋಗಿ ಗಂಜಿಯ ಕುಡಿಯಲಿಲ್ಲೇನು ॥
ಬಡವನೆಂದೇ ನೀನುಪೇಕ್ಷಿಸೆ । ಪೊಡವಿಯಲಿ ಯಾರೆಮ್ಮ ಕಾಯ್ವರು । ಬಿಡೆವು ನಿನ್ನಡಿಗಳನು ಬಡವರೆ ನಾವು ಪ್ರೇಮದಲಿ ॥8॥
ಎಂದು ಗುರುವಿಗೆ ಸರ್ವಶಿಷ್ಯರು । ವಂದಿಸಿದರಾಕ್ಷಣದಿ ಶ್ರೀಗುರು । ವೆಂದನವರಿಗೆ ನಾನು ಬರುವೆನು ಯೆಲ್ಲರಲಿ ನಿಜವು ॥
ಎಂದ ನುಡಿಯನು ಕೇಳಿ ವಿಸ್ಮಯ । ದಿಂದ ಶಿಷ್ಯರು ಕೇಳಿದರು ನಿಜ- । ವೆಂದು ನಂಬೆವು ಯೆಲ್ಲರಲಿ ನೀ ಬರುವ ಪರಿ ಸಟೆಯು ॥9॥
ಇರದೆ ತಂತಮ್ಮೊಳಗೆ ಜಗಳದ । ಭರಕೆ ಬಂದರು ಶಿಷ್ಯರೆಲ್ಲರು । ಪರಿಯ ಕಂಡಾ ಗುರುವು ಯುಕ್ತಿಯನೊಂದ ಯೋಚಿಸಿದಾ ॥
ಕರೆದು ಪ್ರತಿಯೊಬ್ಬನಿಗೆ ಪೇಳಿದ । ಬರುವೆ ನಿನ್ನಯ ಮನೆಗೆ ಹಬ್ಬಕೆ । ತೆರಳು ನೀ ಮನೆಗೀಗ ಪೇಳದಿರನ್ಯರಿಗೆ ಗುಹ್ಯ ॥10॥

ಎನುತಲಾಶ್ವಾಸನವನೀಯುತ । ಮನೆಗೆ ಕಳುಹಿದನೆಲ್ಲರನು ಗುರು- । ವಿನ ಮನೋಭಾವವನು ತಿಳಿಯರು ಮೂಢರಜ್ಞರಲಾ ॥
ಮನದಿ ಹಿಗ್ಗುತ ಶಿಷ್ಯರೆಲ್ಲರು । ಮನೆಗೆ ತೆರಳಿದರಾಗ ಶ್ರೀಗುರು । ಮನೆಗೆ ಬರುವನು ತನ್ನ ದೆಂದೇ ಭಾವಿಸುತ ಮನದಿ ॥11॥

ಸ್ವಾಮಿ ದೀಪಾವಳಿಯ ದಿನವೀ । ಗ್ರಾಮ ಬಿಡುವಿರೆನುತ್ತ ಕೇಳ್ದವು । ಪ್ರೇಮವಿಲ್ಲವೆ ಹೋಗಬಾರದು ಬೇರೆಯೂರಿಂಗೆ ॥
ಗ್ರಾಮದೊಳಗಿನ ಶಿಷ್ಯರೀಪರಿ- । ಯಾ ಮಹಾತ್ಮನ ಬೇಡಿಕೊಳ್ಳಲು । ಗ್ರಾಮದಲ್ಲಿಯೆ ವಸಿಪೆನೆಂದನು ನಗುತ ಗುರುರಾಯಾ ॥12॥

ಬರಲು ದೀಪಾವಳಿತ್ರಯೋದಶಿ । ಪರಮಮಂಗಲಸ್ನಾನರಾತ್ರಿಯು । ಗುರುವು ತನ್ನಯ ರೂಪವೆಂಟನು ಮಾಡಿದನು ಭರದಿ ॥
ಪುರದೊಳಿದ್ದನು ತನ್ನ ರೂಪದಿ । ಭರದಿ ಕಳುಹಿದನೇಳು ರೂಪವ । ನರರೆ ಚೋದ್ಯವಿದೆಂತು ಭಕ್ತರಿಗೆಲ್ಲ ಗೋಚರನು ॥13॥

ಕೊಂಡು ಪೂಜೆಯನೆಲ್ಲರಿಂದಲೆ । ಕಂಡು ಸರ್ವರ ಭಕ್ತಿ ಭಾವವ- । ನುಂಡು ಸುಖಸಂತೋಷದಲಿ ತಿರುಗಿದನು ಮಠಕಾಗಿ ॥
ಕೊಂಡು ನಿಜರೂಪವನು ಮಠದಲಿ । ಕೊಂಡು ಭಕ್ತರ ಸೇವೆಯನು ಪ್ರ । ಚಂಡಮಹಿಮನು ಗುರುವು ಮಠದೊಳಗಿದ್ದ ನನಿತರಲಿ ॥14॥

ಕಾರ್ತಿಕದ ಪೌರ್ಣಿಮಿಗೆ ಭಕ್ತ- । ವ್ರಾತ ನೆರೆಯಿತು ಮಠದಿ ದೀಪಮ । ಹೋತ್ಸವಕೆ ಗುರು ನಗುತಲೆಲ್ಲರ ಕರಿಸಿ ಕೊಂಡನಲಾ ॥
ಮಾತು ಹೊರಟಿತು ಗುರುವು ತನ್ನಲಿ । ಪ್ರೀತಿಯಿಂದಲಿ ಬಂದನೆನುತಲಿ । ಮಾತ ಹೇಳಿದರವರು ತಂತಮ್ಮೊಳಗೆ ಗರ್ವದಲಿ ॥15॥

ತನ್ನದೇ ನಿಜ ಸುಳ್ಳ ಪೇಳುವ- । ರನ್ಯರೆನುತಲಿ ಹೇಳಿಕೊಂಡರು । ತನ್ನ ಉಡುಗರೆಯನ್ನು ಕೊಂಡನು ಗುರುವೆನುತ ನಗುತಾ ॥
ಭಿನ್ನ ಭಿನ್ನದ ತೆರೆದ ವಸ್ತ್ರಗ । ಳನ್ನು ತೋರಿಸಲವರು ವಿಸ್ಮಯ- । ವನ್ನು ಪಟ್ಟರು ಗುರುವು ಧರಿಸಿಹನೆಲ್ಲ ವಸ್ತ್ರಗಳಾ ॥16॥

ಗುರುವು ಮಠದೊಳಗಿದ್ದರಾದಿನ । ತೆರಳಲಿಲ್ಲ್ಯೈ ನಿಮ್ಮ ಗ್ರಾಮಕೆ । ಹರುಷದಿಂ ದೀಪಾವಳಿಯರವರಿಲ್ಲಿ ಮಾಡಿದರು ॥
ಖರೆಯನಾಡುವೆವಾವು ನಿಮ್ಮೊಳು । ಭರವಸೆಯು ನಮಗಿಲ್ಲವೆನುತಾ । ಪುರದ ಶಿಷ್ಯರು ಪೇಳಿದರು ಪರವೂರ ಶಿಷ್ಯರಿಗೆ ॥17॥

ಕೇಳುತೀಪರಿ ಮಹಿಮೆಯನು ಭ- । ಕ್ತಾಳಿ ವಿಸ್ಮಿತರಾಗಿ ಶ್ರೀಗುರು । ತಾಳಿದನು ತಾನೆಂಟು ರೂಪವ ಭಕ್ತವತ್ಸಲನು ॥
ಪಾಲಿಸಿದನ್ನೈ ತನ್ನ ಬಿರುದನು । ಹೇಳುವವರಾರಿವನ ಮಹಿಮಯ । ಕಾಲನನು ಜಯಿಸಿರ್ದ ಮೃತ್ಯುಂಜಯನೆ ಯಿವನೆಂದು ॥18॥

ಪರಿಪರಿಯೊಳಾಗುರುವ ಸ್ತುತಿಸುತ । ಮೆರಿಸಿ ದೀಪಾರಾಧನೆ ಯ ಶ್ರೀ । ಗುರುವಿಗಿತ್ತರು ಪಂಚಪಕ್ವಾನ್ನದ ಸುಭೋಜನವಾ ॥
ನರಹರಿಸರಸ್ವತಿಗೆ ಭಕ್ತರು । ಪರಿಪರಿಯ ಸ್ತೋತ್ರದಲಿ ಗುಣವಿ । ಸ್ತರಣೆಯನು ಮಾಡಿದರು ಸಂತೋಷದಲಿ ಪ್ರೇಮದಲಿ ॥19॥

ತಿಳಿಯಲಾರೆವು ನಿನ್ನ ಮಹಿಮೆಯ । ತಿಳಿಯೆ ನೀನೇ ವೇದಮೂರ್ತಿಯು । ಸಲಹುವರೆ ಭಕ್ತರನು ನೀ ನರರೂಪ ಧರಿಸಿದೆಯಾ ॥
ಇಳೆಯೊಳಗೆ ತ್ರೈಮೂರ್ತಿ ನೀನೇ । ತಿಳಿಯಲಾಗದು ಶೇಷನಿಗೆ ಮೇ । ಣುಳಿದವರ ಮಾತೇನು ಸ್ತುತಿಸಲು ನರರಿಗಸದಳವು ॥20॥

ಧರೆಯೊಳಾಯಿತು ಕೀರ್ತಿ ಶ್ರೀಗುರು । ವರನ ಮಹಿಮಾಗುಣದ ಶ್ರೀಗುರು । ನರಹರಿ ಸರಸ್ವತಿಯೆ ಸುರತರು ಕಾಮಧೇನುವಲಾ ॥
ಇರಲು ಸುರತರು ಕಾಲ ಹತ್ತರ । ತಿರುಗುವರು ಭೂಮಿಯನು ಹುಡುಕುತ । ಕುರುಡರಲ್ಲವೆ ಕಷ್ಟಸಾಯಾಸವನು ಮಾಡುವರು ॥21॥

ನರಹರಿಸರಸ್ವತಿಯ ಭಜಿಸಿರಿ । ಶರಣ ಕಲ್ಪದ್ರುಮವ ಭಜಿಸಿರಿ । ಪರಮಪುರುಷಾರ್ಥಗಳ ಸಾಧನಮಣಿಯ ಭಜಿಸಿರಲಾ ॥
ತ್ವರಿತದಲಿ ಫಲಕೊಡುವ ದಾತನು । ಗುರುವು ನನಗೆ ಪ್ರಚೀತಿಯಾಗಿದೆ । ನರರೆ ಭಜಿಸಿರಿ ಶರಣವವತ್ಸಲ ಕರುಣವಾರಿಧಿಯ ॥22॥

ಪಾನ ಮಾಡಲು ದೊರೆಯಲಮೃತವು । ಹೀನ ಕಟುಕ್ಷಾರೋದಕವ ತಾ । ಪಾನ ಮಾಡುವರೇನು ಮೂರ್ಖರು ಕುಡಿಯಿರಮೃತವನು ॥
ಜ್ಞಾನಿಗಳು ಗುರುಚರಣಭಕ್ತರು । ಪಾನ ಮಾಳ್ಪರು ಗುರುಕಥಾಮೃತ । ವೇನ ಸಾಧ್ಯವು ಗುರುಚರಣ ಸದ್ಭಕ್ತ ಮಂಡಳಿಗೆ ॥23॥

ಹೊಡಿಸುವೆನು ಡಂಗುರವ ಶ್ರೀಗುರು । ವಡಿಗಳನ್ನು ಸೇವಿಸಿರೆನುತ್ತಲಿ । ಹೊಡಿಸುವೆನು ಡಂಗುರವ ದುಂದುಭಿ ಮೇಲೆ ಬಾರಿಸುತಾ ॥
ಹೊಡಿಸುವೆನು ನಿಗಮಾಗ ಮಂಗಳ । ನುಡಿಯ ಶಾಸ್ತ್ರದ ಸಮ್ಮತಿಯ ನುಡಿ । ಗುಡುಗುಡಿಸುತಿದೆ ಶಬ್ದವಿದು ಮೂಜಗದಿ ಪ್ರತಿಧ್ವನಿ ॥24॥

ಗುರುವೆ ತ್ರೈಮೂರುತಿಯು ಜಗದಲಿ । ಗುರುಹೊರತು ಬೇರಿಲ್ಲ ಸದ್ಗತಿ । ಗುರುವ ನಿಂದಿಪನವನು ಸೂಕರನಾಗಿ ಜನಿಸುವನು ॥
ಬರಿದೆಯೆನ್ನಯ ಸ್ವೇಚ್ಛೇಯಿಂದಲಿ । ಬರದೆನೆನುತಲಿ ದೂರ ಬೇಡಿರಿ । ಪರಮನಿಗಮಾಗಮಗಳೀಪರಿ ಘೋಷಿಪವು ತಿಳಿಯೆ ॥25॥

ವೇದಶಾಸ್ತ್ರದ ಸಮ್ಮತಿಯು ನಿಮ- । ಗಾದರಿದ ಸ್ವೀಕರಿಸಿರೆಲ್ಲರು । ಭೇದಬುದ್ಧಿ ಯೊಳೆನ್ನ ದೀನುಡಿಯೆಂದುಪೇಕ್ಷಿಸದೆ ॥
ಈ ಧುರಂಧರ ಭವಶರಧಿಗಿದು । ಸಾಧನವು ತಾರಣಕೆ ಶ್ರೀಗುರು । ವಾದಯಾನಿಧಿಹೊರತು ತ್ರಿಜಗದಿ ತಾರಕರಕಾಣೆ ॥26॥

ಘೋರವಿದು ಸಂಸಾರದಡವಿಯು । ನೀರು ಕುಡಿಯಲು ಸಿಗದೆ ನೋಡು ಶ । ರೀರಿ ಬಳಲುವನೇನ ಹೇಳುವೆ ಯಾತನೆಯನವನಾ ॥
ಚಾರುತರ ಪೀಯೂಷದರವಟಿ । ಸಾರಿ ಡಂಗುರ ಹೊಡಿಸಿ ಹಾಕಿದ । ತಾರಕನು ಗುರುರಾಯ ಸೇವಿಸಲಮರರಾಗುವಿರಿ ॥27॥

ಗುರು ನೃಸಿಂಹಸರಸ್ವತಿಯ ತಾ । ನರನ ರೂಪದಿ ಲೀಲೆಯಾಡುವ । ಹರಿಹರ ವಿರಂಚಿಗಳೆ ಸಾಕ್ಷಾತ್ ಧರೆಗೆ ಬಂದಿಹರು ॥
ಇರುವನವನೈ ಗಾಣಗಾಪುರ । ವರದಿ ಭಕ್ತರ ಸಲಹಿ ಮುಕ್ತಿಯ । ಶರಣರಿಗೆ ತಾನೀವ ಸಂಶಯವೇನು ಮಾಡದಿರಿ ॥28॥

ಸತ್ತ್ಯೆಯಿಂದಲಿ ಪೇಳ್ವೆ ನಿಮಗೆ ಪ್ರ । ಶಸ್ತವಾದರೆ ಮಾಡಿನೋಳ್ಪುದು । ಸ್ವಸ್ಥಚಿತ್ತದಿ ಬೇಗ ತೆರಳಿರಿ ಗಾಣಗಾಪುರಕೆ ॥
ಪ್ರತ್ಯಯವ ಕಾಣುವಿರಿ ನಿಜಪುರು- । ಷಾರ್ಥಗಳ ಸಂಪಾದಿಸುತ ಗುರು- । ಭಕ್ತಿಯಲಿ ನಿನಗುತ್ತರೋತ್ತರ ವಿಷ್ಣು ವಚನವಿದು ॥29॥

॥ ಅಧ್ಯಾಯ 47 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 48

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುವಚನದಲಿ ಬೆಳೆಯ ಕೊಯ್ಯಲು । ಗುರುಕೃಪಾದೃಷ್ಟಿಯ ಚಮತ್ಕೃತಿ । ಯರರೆ ಒಕ್ಕಲಿಗನಿಗೆ ಸಾವಿರ ಪಾಲು ಬೆಳೆಯಾಯ್ತು॥

ಭತ್ತ ಬೆಳೆವರೆ ಗದ್ದೆಯದು ಫಲ । ವತ್ತು ನಿರ್ಮಲ ಬೇಕು ಬೀಜವು । ಬಿತ್ತಿದರೆ ಮಳೆ ಬೇಕು ಯೆಂದರೆ ಫಲವು ಚೆಲುವಿಹುದು ॥
ಭಕ್ತಿಯೆಂಬುವ ಬೀಜ ನಿರ್ಮಲ । ಭಕ್ತನಂತಃಕರಣಕ್ಷೇತ್ರದಿ । ಬಿತ್ತಿದರೆ ಗುರು ಕೃಪೆಯ ಮಳೆಯಿಂ ಫಲಕೆ ಬರುತಿಹುದು ॥1॥

ಕೇಳು ಶಿಷ್ಯನೆ ನಾಮಧಾರಕ । ಪೇಳುವೆನು ಮುಂದಿನ ಚರಿತ್ರವ । ಮೇಲೆ ಗಾಣಗಪುರದಿ ಶ್ರೀಗುರುವಿರಲು ದಿನನಿತ್ಯಾ ॥
ಲೀಲೆಯಿಂದಾಹ್ನಿಕವ ಸಂಗಮ । ಮೇಲೆ ತೀರಿಸುತಿದ್ದನಲ್ಲಿಗೆ । ಕಾಲಿನಿಂದಲೆ ನಡೆದು ಹೋಗುವನವನು ದಿನನಿತ್ಯಾ ॥2॥

ಹಾದಿಯಲಿ ಹೊಲವಿತ್ತು ಕೇಳ್ಯೆ । ಚೋದ್ಯವನು ನಾ ಪೇಳ್ವೆ ಯನುದಿನ । ಹಾದಿಯಲಿ ನಮಿಸುವನು ಹೊಲದವನೇಕಭಾವದಲಿ ॥
ಆದರದಿ ಗುರುವರನ ಮನ್ನಿಸಿ । ಪಾದಕೆರಗುವನವನು ಪುನರಪಿ । ಹಾದಿ ಹಿಡಿಯುವನೀತರದಿ ಹಲದಿವಸ ಗತಿಸಿದವು ॥3॥

ಗುರುವರನು ಮಧಾಹ್ನ ಕಾಲದಿ । ತಿರುಗಿ ಮಠಕ್ಕೈ ತರುವ ಸಮಯಕೆ । ತಿರುಗಿ ಬರುತವ ಚರಣ ಕೆರಗುವನೇಕ ಭಾವದಲಿ ॥
ಪರಿಯೊಳೀ ಹಲದಿವಸವಾಗಲು । ಗುರುಚರಣಸದ್ಭಕ್ತಿ ಬೆಳೆಯಿತು । ಗುರುವು ಸುಮ್ಮನೆ ಪೂಜೆ ಕೊಳ್ವನು ಮಾತನಾಡದಲೆ ॥4॥

ಪರಿಯೋಳೀ ಹಲದಿವಸವಾಗಲು । ಗುರುವು ಕುಣುಬಿಗೆ ಕೇಳ್ದನೊಂದಿನ । ದರದಿವಸ ವಂದಿಸುವೆ ಹೋಗುತ ಬರುತ ಸಂಗಮಕೆ ॥
ತ್ವರಿತದಿಂ ನಿನ್ನಿಚ್ಛೆಯನು ಯೆನ । ಗರುಹ ಬೇಕೆಂದವಗೆ ಪೇಳಲು । ಇರುವುದೊಂದೇ ವಾಸನೆಯು ಬೆಳೆಯಧಿಕ ಬರಬೇಕು ॥5॥

ಕೇಳಿದನು ಗುರು ಕುಣುಬಿಯಾಡಿದ । ಭೋಳೆತನದುತ್ತರವನಾಲಿಸಿ । ಕೇಳಿದನು ನೀನೇನು ಬಿತ್ತಿದೆ ಹೊಲದೊಳೀ ವರುಷಾ ॥
ಜೋಳವನು ಬಿತ್ತಿದೆನು ನಿನ್ನಯ । ಕಾಲಗುಣದಲಿ ಬೆಳೆಯು ಬಂದಿದೆ । ನಾಳೆ ನಾಡದು ತೆನೆಯು ಬರುವುದು ನಿನ್ನ ದಯೆಯಿಂದಾ ॥6॥

ಗುರುವರನೆ ದಯಮಾಡಿ ಹೊಲಕ್ಕೈ । ತರಲು ಬೇಕ್ಕೈ ನಿನ್ನ ಪಾವನ । ಚರಣ ತೀರ್ಥದಿ ಹೊಲವು ಹೊನ್ನಾಗರವೆಯಾಗುವುದು ॥
ಗುರುವೆ ತವ ಪೀಯೂಷ ದೃಷ್ಟಿಯೋ- । ಳಿರದೆ ನೋಡಿದರೆನ್ನ ಹೊಲವನು । ಬರುವುದಗಣಿತ ಬೆಳೆಯು ನಿಃಸಂದೇಹವೇ ನೋಡು ॥7॥

ನೀನು ಪ್ರತಿಪಾಲಿಸುವೆ ಯೆಲ್ಲರ । ಹೀನಜಾತಿಯು ಯೆನ್ನ ದೆಂದನು । ಮಾನ ಮಾಡಲು ಬೇಡವೆನಲಾ ಗುರುವು ಹರುಷದಲಿ ॥
ತಾನು ಹೋದನು ಹೊಲದಿ ಮತ್ತಾ । ಸಾನುರಾಗದಿ ಪೇಳ್ದನವನಿಗೆ । ನಾನು ಹೇಳುವೆನೊಂದು ಮಾತನು ಮಾಡುವಿಯೊ ನಿಜದಿ ॥8॥

ಲೇಸ ಹೇಳುವೆ ನಿನಗೆ ನೀ ವಿ । ಶ್ವಾಸವಿದ್ದರೆ ಹೇಳು ಮಾಡುವು । ದಾಶೆ ನಿನಗಿರೆ ಪೇಳ್ವೆನಿಲ್ಲವೆ ಹೊರಟು ಹೋಗುವೆನು ॥
ಈಸು ಪರಿಯಲಿ ಗುರು ನುಡಿಯಲು- । ಲ್ಲಾಸದಿಂದಲಿ ಕುಣಬಿ ಹೇಳಿದ- । ನೀಸುನಿಜ ಗುರು ವಚನ ಶಿರಸಾ ವಂದ್ಯವಾಗಿಹುದು ॥9॥

ಎರಡನೆಯ ಭಾವವನು ಜಗದೊಳ- । ಗರಿಯೆ ಗುರುನುಡಿ ವೇದವಾಕ್ಯವು । ಗುರುಹೊರತು ನಾನನ್ಯ ದೈವವನರಿಯೆನೆನಲಿವನು ॥
ಗುರುವು ಕುಣಬಿಯ ಭಾವ ಯೋಚಿಸಿ । ಹರುಷದಿಂದಲಿ ಪೇಳ್ದನವನಿಗೆ । ಮರೆಯ ಬೇಡ್ಕೈ ಯೆನ್ನ ಮಾತನು ಪೇಳ್ವೆನ್ನೈ ಹಿತವಾ ॥10॥

ನಾನು ಸಂಗಮಕೀಗ ಪೋಗುವೆ । ಸ್ನಾನ ತೀರಿಸುವಲ್ಲಿ ನಾ ಮು- । ಧ್ಯಾಹ್ನ ಸಮಯದಿ ಬರುವೆನನಿತರೊಳೆಲ್ಲ ಬೆಳೆಯಿದನು ॥

ನೀನು ಕೊಯ್ಯಲು ಬೇಕು ಬಹುಕ । ಲ್ಯಾಣವಾಗುವುದಾಗ ನಿಜವಿದು । ಮಾನಿಸದೆ ಸಂದೇಹವೆಂದನು ನಗುತ ಗುರುರಾಯ ॥11॥

ನುಡಿಯನೀಪರಿ ಹೇಳಿ ಶೂದ್ರಗೆ । ನಡೆದನಾಗುರುವರನು ಮುಂದಕೆ । ಸಡಗರದಲಿ ವಿಚಾರ ಮಾಡಿದನಾಗ ಹೊಲದವನು ॥

ನುಡಿದ ಗುರುವಾಕ್ಯ ಪ್ರಮಾಣವು । ಪೊಡವಿಯಲ್ಲಿದಕೇಕೆ ಸಂಶಯ । ನುಡಿಗೆ ತಪ್ಪುವವನಲ್ಲ ವೆಂದನು ಶದ್ರ ನಸುನಗುತಾ ॥12॥

ತ್ವರಿತದಲಿ ಗ್ರಾಮಕ್ಕೆ ಬಂದನು । ಭರದೊಳಧಿಕಾರಿಗಳಿಗೆಂದನು । ವರುಷ ವರುಷಕೆ ಕೊಡುವ ತೆರದಲಿ ಕೊಡುವೆ ಗೇಣಿಯನು ॥

ಬರೆದು ಕೊಡಿರೆನಗೀಗ ಹೋಲವೆಂ- । ದರುಹಲಾಶೂದ್ರನಿಗೆ ಪೇಳ್ದರು । ಅರಿವೆ ನಿನ್ನಯ ಯುಕ್ತಿ ಬಹು ಬೆಳೆ ಬಂದಿರಲು ಬೇಕು ॥13॥

ಪರಿಪರಿಯೊಳಾಶೂದ್ರ ಪೇಳಲು । ಬರೆದು ನಂಬಿಗೆಯಿಂದ ಗ್ರಾಮ- । ಸ್ಥರಿಗೆ ಕಡೆಗವನೊಪ್ಪಿಕೊಂಡನು ದ್ವಿಗುಣಧಾನ್ಯವನು ॥

ಬರಿಸಿಕೊಂಡರು ವಚನಪತ್ರವ । ತಿರುಗಿ ತಾನಭಯವನು ದೊರಕಿಸಿ । ತೆರಳಿದನು ಹೊಲಕಾಗ ಮುಂದಿಯ ಕೂಡಿಸುತ ಭರದಿ ॥14॥

ಮಂದಿಯನು ಕರೆದೊಯ್ದು ಹೊಲದಲಿ । ಯೆಂದನವರಿಗೆ ಬೆಳೆಯ ಕೊಯ್ಯಿರಿ । ಮಂದಿಯಾರಂಭಿಸಿದರಾತನ ಬೆಳೆಯ ಕೊಯ್ಯಲಿಕೆ ॥

ಬಂಧುಬಳಗವು ಸತಿಸುತರು ತಾವ್ । ಬಂದು ಅಡ್ಡೈಸಿದರು ಶೂದ್ರಗೆ । ಬಂದ ಪ್ರೇಮದ ಜನರ ಹೊಡೆದನು ಕಲ್ಲುಮಣ್ಣಿಂದಾ ॥15॥

ಮರುಳನಾದನು ಪತಿಯು ಬೆಳೆಯನು । ಬರಿದೆ ಕೊಯ್ಯುವನೀಗ ತೆನೆಗಳು । ಬರದೆ ವ್ಯರ್ಥವದಾಯ್ತು ಹೊಟ್ಟೆಗೆ ಉಣುವದೇನಿನ್ನು ॥

ಭರದೊಳೀಪರಿ ಸತಿಯು ಗ್ರಾಮ । ಸ್ಥರಿಗೆ ಪೇಳಲು ದ್ವಿಗುಣಧಾನ್ಯದ । ಬರವಣಿಗೆಯನು ಕೊಟ್ಟು ಪಡೆದನು ಆಭಯಪತ್ರವನು ॥16॥

ಏನ ಮಾಡಲದೇನು ಶೂದ್ರನು । ಧಾನ್ಯ ದ್ವಿಗುಣವ ಕೊಟ್ಟರಾಯಿತು । ತಾನು ಕೊಯ್ಯಲಿ ಬಿಡಲಿ ಯೆಂದಧಿಕಾರಿ ಪೇಳಿದನು ॥

ಸಾನುರಾಗದಿ ಸತಿಯು ಮರುಗಲು । ಮಾನಿನಿಯ ಗೋಳಾಟ ಕೇಳುತ । ಮಾನಿಸದೆ ಶರ್ತಿಯನು ಬಂದದ ನಡ್ಡಗಟ್ಟಿದರು ॥17॥

ಯಾರು ಬಂದರದೇನು ಶೂದ್ರನು । ತೊರನ್ನೈ ಸಮ್ಮೃತಿಯ ನೀವಧಿ । ಕಾರಿಗಳು ನಂಬಿಗೆಗೆ ತಪ್ಪಲು ಬಾರದೆನ್ನೊಡನೆ ॥
ತೋರಿದರೆ ಸಂಶಯವು ಕೊಳ್ಳಿರಿ । ಬೇರೆ ಮಾತೇನೀಗ ಧಾನ್ಯವ । ಹೇರಿಸುವೆ ಮನೆಯಿಂದಲೆಂದನು ದೂತರಿಗೆ ರೈತ ॥18॥

ದೂತರನು ಕಳುಹಿದನು ಶೂದ್ರನು । ಮಾತನಧಿಕಾರಿಗಳು ಕೇಳರು । ಭೀತಿಯಲಿ ಹಿಂತಿರುಗಿದರು ಸತಿಸುತರು ಬಾಂಧವರು ॥
ಈ ತೆರದಿ ಬೆಳೆ ಕೊಯ್ದು ಶೂದ್ರನು । ಪ್ರೀತಿ ಪೂರ್ವಕವಾಗಿ ಗುರುವಿಂ । ಗಾತತೂಕ್ಷಣ ತೋರಿಸಿದನ್ನೈ ಬೆಳೆಯ ಕೊಯ್ದುದನು ॥19॥

ಚರಣಕೆರಗಿದ ಶೂದ್ರನನು ಗುರು- । ವರನು ತಕ್ಕೈಸಿದನು ಮರುಳನೆ । ಬರಿದೆ ಚೇಷ್ಟೆಯ ಮಾಡಿದೇನು ಸಂಗಮಕೆ ಪೋಪಾಗ ॥
ಮರುಳತನದಲಿ ಚೇಷ್ಟೆ ಮಾತಿದು । ಭರವಸವ ನೀನಿಟ್ಟು ಕೊಯ್ದಿಹೆ । ಅರಿಯಬಾರದೆ ನಿನಗೆ ಸಾರಾಸಾರವಚನವದು ॥20॥

ಗುರುವಚನವನು ಕೇಳಿ ಶೂದ್ರನು । ತಿರುಗಿ ಯುತ್ತರವಿತ್ತನಾತಗೆ । ಗುರುವಚನವೇ ಕಾಮಧೇನುವು ಭೇದವೇನಿದಕೆ ॥
ಗುರುವು ನಗುತಭಿವಚನ ಕೊಟ್ಟನು । ಭರದೊಳೀ ನಿರ್ಧಾರ ಮನದೊಳ- । ಗಿರಲು ಭಾವನೆಯಂತೆ ಸಿಗುವುದು ಫಲವು ನಿಜವಾಗಿ ॥21॥

ಎಂದ ನೀಪರಿ ಮಠಕೆ ನಡೆದನು । ಚಂದದಿಂದ ಶ್ರೀಗುರುವು ಬಳಿ । ಕೊಂದೆ ಮನದಲಿ ಕುಣಬಿ ನಡೆದನು ತನ್ನ ಗುಡಿಸಲಿಗೆ ॥
ಮಂದಮತಿಯಿವ ಗುರುವು ಪೇಳಿದ । ನೆಂದು ಕೊಯ್ದನು ಬೆಳೆಯನೆಲ್ಲವ । ಕೊಂದನೆನ್ನುಪವಾಸದಲ್ಲಿಯೆ ಯೆಂದಳಾ ಸತಿಯು ॥22॥

ಮಂದಿ ಬಂದೀತೆರದಿ ಬೈಯಲು । ಮುಂದೆ ಪೇಳುವನವರಿಗೆಲ್ಲವ । ಕಂದೆರದು ನೋಡಿದರೆ ಗುರುನುಡಿ ಕಲ್ಪಲತೆಯಿಹುದು ॥
ಮುಂದೆ ಸಾವಿರಪಾಲು ವೃದ್ಧಿಯ । ದೆಂದು ನಂಬಿರಿ ದೂರಬೇಡಿರಿ । ಕುಂದು ಬರುವುದೆ ಗುರುನುಡಿಗೆ ತಾನೆಂದನಾಕುಣಬಿ ॥23॥

ಗುರುಕೃಪೆಯು ದೊರಕಿದರೆ ದೈನ್ಯದ । ಪರಿಯ ಹೇಳುವದೇನು ಮೂರ್ಖರೆ । ದೊರಕಿಹನು ಗುರುವಿವನು ಕಲ್ಪನಿಧಾನವೇನೆಂಬೆ ॥
ಗುರುವು ನರನೆಂಬುವರು ಪಾಪಿಗ । ಳರರೆ ನರಕವ ಭೋಗಿಪರು ಗುರು । ನರನ ರೂಪದ ಹರನು ಲೀಲಾವಿಗ್ರಹನು ಜಗದಿ ॥24॥

ಪರಿಪರಿಯೊಳೀ ಮಾತನಾಡಿದ । ಹರುಷದಿಂದಲಿ ಪುತ್ರಸತಿ ಯರ । ಪುರದ ನಾಗರಿಕರನು ಸಂತೈಸಿದನು ಮೋದದಲಿ ॥
ಪರಿಯೊಳೀದಿನವೆಂಟು ಗತಿಸಿದ- । ವರರೆ ಯಾಕ್ಷಣ ಶೀತವಾಯುವು । ಹೊರಟಿತೇನಾ ಶೀತದಲಿ ಬೆಳೆಯೆಲ್ಲ ವೊಣಗಿದುದು ॥25॥

ಮೂಲನಕ್ಷತ್ರದಲಿ ಮಳೆಯದ- । ಕಾಲವಾಯಿತು ಹೊಲಗಳೆಲ್ಲವು । ಹಾಳು ಬಿದ್ದವು ಬೆಳೆಯು ಸರ್ವವು ನಾಶವಾಯಿತಲಾ ॥
ಮೇಲೆ ಕೊಯ್ದಿಹ ದಂಟಿಗೊಂದಕೆ । ಹೇಳಲೇನದ ಹತ್ತು ದಂಟುಗ-। ಳೇಳುವುದನಾ ಕುಣಬಿ ಕಂಡನು ಚೋದ್ಯವೇನೆಂಬೆ ॥26॥

ಬೆಳೆಯು ಬಂತತಿಶಯವು ಕೇಳಾ । ಹೊಲದಿ ಶ್ರೀಗುರು ಪೇಳಿದಂದದಿ । ಬಳಿಕ ವಿಸ್ಮಿತರಾದರೆಲ್ಲರು ಗುರುಮಹಿಮೆ ನೋಡಿ ॥
ನಲವಿನಲಿ ಸತಿಬಂದು ಪತಿಗೆಂ- । ದಳು ಕಣಾ ನಾವರಿಯದೀ ಪರಿ । ಛಳಿಸಿದೆವು ಕ್ಷಮೆ ಮಡೆನುತ ಬಿನ್ನೈಸಿದಳು ಮುದದಿ ॥27॥

ಇಂತು ಪತಿಯೊಳು ಮಾತನಾಡುತ । ಕಾಂತೆಯೆಂದಳು ಹೊಲದ ದೈವಕೆ । ಸಂತಸದಿ ಪೂಜಿಸುತ ಪೊಪುದು ಮಠಕೆ ದರ್ಶನಕೆ ॥
ಇಂತು ಸಂತಸದಿಂದ ದಂಪತಿ । ನಿಂತು ಗುರುಸನ್ಮುಖದಿ ಸ್ತುತಿಸಲು । ಬಂತು ಕರುಣೆಯು ಶ್ರೀಗುರುವಿಗವರನ್ನು ನೋಡುತಲೆ ॥28॥

ಚರಣ ಕೆರಗುತ ದಂಪತಿಯರಾ । ಕರಗಳೆರಡನು ಜೋಡಿಸುತ ಬಹು । ಪರಿಯೋಳಾಗುರು ಚರಣ ಸ್ತುತಿಸಿದರಾಗ ಮನದಣಿಯೆ ॥
ಗುರುವೆ ನೀ ಸುರಧೇನು ಶರಣರ । ಗುರುವೆ ಕುಲದೈವತವು ಯೆಮ್ಮಯ । ಗುರುವಚನ ವಿಹುದೆಮಗೆ ಚಿಂತಾಮಣಿಗೆಮಿಗಿಲೆನಿಸಿ ॥29॥

ಶರಣುಹೊಕ್ಕೆವು ನಿನಗೆ ನಿನ್ನಯ । ಚರಣಮಹಿಮೆಯನರಿಯದಾದೆವು । ಶರಣುರಕ್ಷಕನೆಂಬ ಬಿರುದನು ತೋರಿಸಿದೆ ಯೆಮಗೆ ॥
ಗುರುವೆ ನಿನ್ನಯ ಮಹಿಮೆಯದು ಗೋ- । ಚರಕೆ ಬಂತೈ ಯೆಮಗೆನುತಗುರು । ಚರಣಕೆರಗಿದರವರು ಪುನರಪಿ ಭಕ್ತಿಭಾವದಲಿ ॥30॥

ಪರಿಪರಿಯೋಳಾರತಿಯ ಬೆಳಗುತ । ಗುರುವರನ ಪೂಜಿಸಿದಳಾಸತಿ । ವರವನಿತ್ತನು ಮೆಚ್ಚಿಯಾಕೆಗೆ ಗುರುವು ಕರುಣದಲಿ ॥
ಸಿರಿಯಖಂಡವು ನಿನ್ನ ವಂಶದಿ । ನಿರತ ವಾಸಿಸಲೆಂದು ಶ್ರೀಗುರು । ಹರಸಿದನು ತಿರುಗಿದರು ಮನೆಗಾದಂಪತಿಯರಾಗ ॥31॥

ಕಾಲ ಕ್ರಮಿಸಿದರೊಂದು ತಿಂಗಳ । ಮೇಲೆ ಬೆಳೆಯನು ಕೊಯ್ದು ನೋಡಲು । ಹೇಳಲೇನದ ಹಿಂದಿಗಿಂತಲು ನೂರುಪಾಲಾಯ್ತು ॥
ಪೇಳಿದನು ಗಾಮಸ್ಥರಿಗೆ ಬೆಳೆ । ಪಾಲ ಕೊಡುವೆನು ನಿಮ್ಮ ವೂರಿದು । ಹಾಳು ಬಿದ್ದಿಹುದಾನು ಕೊಡುವೆನು ಮುದದಿ ರಾಜನಿಗೆ ॥32॥

ಧಾನ್ಯ ಕೊಡುವೆನು ದ್ವಿಗುಣವೆನುತಲಿ । ನಾನು ಕೊಟ್ಟಿಹವಚನನಿಜವದು । ಧಾನ್ಯ ಬಂದಿದೆ ನೂರುಪಾಲಿನಲೇನು ಮಾಡುವೆನು ॥
ಮಾನಸದಿ ಸಂಶಯವ ತಾಳದೆ । ನಾನು ಕೊಡುವೆನದಾತ್ಮತೋಷದಿ । ಕ್ಷೋಣಿಯಲಿ ದುಷ್ಕಾಳ ಬಿದ್ದಿದೆಯೆಂದನಾ ಕುಣಬಿ ॥33॥

ಮರಳಿಯಧಿಕಾರಿಗಳು ಕುಣಬಿಗೆ । ಹರುಷದಿಂದುತ್ತರವನಿತ್ತರು । ಗುರುಕೃಪೆಯು ನಿನಗಾಯ್ತು ನಿನ್ನಯ ದೈವ ಫಲಸಿತಲಾ ॥
ಭರದೊಳೀಧಾನ್ಯವನು ನಿನ್ನಯ । ತರುಣಿ ಪುತ್ರರಿಗಿತ್ತು ಮುದದಲಿ । ಸರಸ ಸಂಸಾರವನು ಮಾಡೈ ವೊಲ್ಲೆವಿದನಾವು ॥34॥

ಅರಸನಿಗೆ ಕೊಡ ತಕ್ಕ ಧಾನ್ಯವ । ತರಿಸಿ ಕೊಟ್ಟನು ರಾಜದೂತಗೆ । ಮರಳಿ ಬಹು ಪರಿ ಹಂಚಿದನು ಧಾನ್ಯವನು ವಿಪ್ರರಿಗೆ ॥
ತಿರುಗಿಯುಳಿದಿಹ ಧಾನ್ಯವನು ಮನೆ । ಗಿರದ ಲೊಯ್ದನು ಗುರುವಚನದಿಂ । ದೊರಕಿತವನಿಗೆ ಭಾಗ್ಯ ವಿಶ್ವಾಸದಲಿ ಫಲವಿಹುದು ॥35॥

ಸೇವೆಯನು ಮಾಡಿದರೆ ಶ್ರೀಗುರು । ಕಾವನೈ ಭಕ್ತರನು ಸಂತತ । ವೀವನವರಿಗೆ ಪುತ್ರಧನಸಂಪತ್ತು ಸೌಖ್ಯವನು ॥
ಭಾವ ದೃಢ ವಿರಬೇಕು ಮಾತ್ರವೆ । ಆವಗಂ ಬೆಂಬಲಕೆ ಶ್ರೀಗುರು । ರಾಯನಿರುವನು ಬೇಡ ಸಂಶಯ ವಿಷ್ಣು ವಚನವಿದು ॥36॥

॥ ಅಧ್ಯಾಯ 48 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 49

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಊರ ಹತ್ತರವಿರುವ ತೀರ್ಥಗ- । ಳಾರೆರಡ ತೋರಿಸುತಲದ ವಿ- । ಸ್ತಾರಪೂರ್ವಕ ಮಹಿಮೆಯನು ಪೇಳಿದನು ಗುರುವರನು॥

ಧರೆಯೊಳಿಹ ತೀರ್ಥಗಳಿಗೆಲ್ಲರು । ದುರಿತ ಪರಿಹಾರಾರ್ಥ ಪೋಪರು । ದುರಿತರಾಶಿಯ ತೊಳೆಯುವರು ತೀರ್ಥದಲಿ ತಾಮಿಂದು ॥

ಪರಮಪಾವನತೀರ್ಥವೃಂದವು । ಗುರುಚರಣದಲಿ ಬಂದು ಸೇವಿಸಿ । ದುರಿತರಾಶಿಯ ತೊಳೆಯುವರು ಗುರುಚರಣವೇ ತೀರ್ಥ ॥1॥

ಚರಣಕೆರಗುತ ಸಿದ್ಧ ಮುನಿವರ । ಗರುಹಿದನು ಕೇಳ್ನಾಮಧಾರಕ । ಗುರುವು ತ್ರೈಮೂರುತಿಗಳೆಂದೇ ಪೇಳ್ದ ನೀನೆನಗೆ ॥

ಧರಣಿಯೊಳಗಿಹ ಸರ್ವತೀರ್ಥವ । ತೊರೆದು ಶ್ರೀಗುರುವರನು ಗಾಣಗ । ಪುರದಿ ನಿಂತಿಹಕಾರಣವನೀನರುಹು ನನಗೆಂದಾ ॥2॥

ಗಾಣಗಾಪುರ ಪುಣ್ಯ ಪಾವನ । ಸ್ಥಾನ ಮಹಿಮೆಯ ಹೇಳೆನಲು ಬಹು । ಸಾನುರಾಗದಿ ಸಿದ್ಧನುಡಿದನು ನಾಮಧಾರಕಗೆ ॥

ಕ್ಷೋಣಿಯಲಿ ಕೇಳ್ನಾಮಧಾರಕ । ಗಾಣಗಾಪುರವರವು ಗುರುವಿನ । ಸ್ಥಾನವಾದುದರಿಂದ ಮಹಿಮೆಯ ಪಾರವರ್ಧಿಸಿತು ॥3॥

ಗುರುವು ದೀಪಾವಳಿಯ ಪರ್ವಣಿ- । ಗಿರದೆ ಶಿಷ್ಯರ ಕರೆದು ಪೇಳಿದ- । ನಿರುವುದೈ ಬಹುಪುಣ್ಯ ತ್ರಿಸ್ಥಳಸ್ನಾನ ಮಾಡಿದರೆ ॥
ವರಪ್ರಯಾಗವು ಗಯೆಯು ಕಾಶೀ । ಪುರವು ಕೇಳಿ ಮೂರುಸ್ಥಾನಕೆ । ತೆರಳಿಯಾತ್ರೆಯ ಮಾಳ್ಪೆವೆಂದನು ನಗುತ ಗುರುರಾಯಾ ॥4॥

ಗುರುವರನ ಮನದಿಂಗಿತವತಾ- । ವರಿಯದೆಲ್ಲರು ಸಮ್ಮತಿಸಿದರು । ಗುರುವು ನಸುನಗುತೆಂದನವರಿಗೆ ಮರಳಿ ಮೋದದಲಿ ॥
ಭರದಿ ಸಾಯಾಸದಲಿ ತ್ರಿಸ್ಥಳ- । ಕಿರದೆ ಪೋಗುವದೇನು ಕಾರಣ- । ವಿರುವವೀಸ್ಥಾನಗಳು ಗಾಣಗಪುರ ಸಮೀಪದಲಿ ॥5॥

ನಡೆಯಿರೀಗಲೆ ಸ್ನಾನ ತೀರಿಸು- । ತೊಡನೆ ತ್ರಿಸ್ಥಳ ಸ್ನಾನ ಪುಣ್ಯವ । ಕೊಡುವೆ ನಿಮಗೆಂದೆನುತ ಪೇಳ್ದನು ಶ್ರೀಗುರುವು ಮುದದಿ ॥
ನಡೆದನಾ ಗುರು ತನ್ನ ಶಿಷ್ಯರ । ಗಡಣಸಹಿತವೆ ಭರದಿ ಸಂಗಮ- । ದೆಡೆಗೆ ಭೀಮಾ ಯಮರಜೆಯ ಸಂಗಮಕೆ ನಲವಿನಲಿ ॥6॥

ನೋಡಿರೈ ಷಟ್ಕುಳದಿ ಸ್ನಾನವ । ಮಾಡಿದರೆ ಪೋಲ್ವುದು ಪ್ರಯಾಗಕೆ । ನೋಡಿರೀ ಸಂಗಮದ ಮಹಿಮೆಯಪಾರವಾಗಿಹುದು ॥
ಕೂಡಿಹುದು ಭೀಮಾನದಿಯಲಿದು । ರೂಢಿಯಲಿಯವರಜೆಯು ಸಂಗಮ । ನೋಡಿದರೆ ದಕ್ಷಿಣದ ಗಂಗಾಯಮುನೆಯೆನಿಸುವುದು ॥7॥

ನದಿಯು ಭೀಮಾ ಪುಣ್ಯಪಾವನ । ವದರೊಳಗ ವುತ್ತರಪ್ರವಾಹಿಯು । ಅಧಿಕಪಾವನ ನೂರುಮಡಿ ಫಲ ಕಾಶಿಯಿಂದಧಿಕಾ ॥
ಇದರೊಳಗೆ ತೀರ್ಥಗಳು ಯೆಂಟಿಹ । ವಿದರ ಮಹಿಮೆಯಪಾರವಿರುವುದು । ಮುದದಿ ಪೇಳುವೆನೆಲ್ಲ ಮಹಿಮೆಯ ಕೇಳಿರಾದರದಿ ॥8॥

ಗುರುವಚನವನು ಕೇಳಿ ಶಿಷ್ಯರು । ತಿರುಗಿ ಬಿನ್ನೈಸಿದರು ಗುರುವಿಗೆ । ಕರುಣದಿಂದಲಿ ಪೇಳು ಹುಟ್ಟಿದುದೆಂತದಿ ನದಿಯು ॥
ಕರೆವರೇಕೀನದಿಯನಮರಜೆ । ಗುರುವೆ ಯಿದರಾಖ್ಯಾನವನು ಯಮ- । ಗರುಹ ಬೇಕೆಂದವರು ಕೇಳಲು ಪೇಳ್ದನಾ ಗುರುವು ॥9॥

ಧರೆಯೊಳಗೆ ವಿಖ್ಯಾತಜಾಲಂ । ಧರ ನಿಶಾಚರನೋರ್ವನಿದ್ದನು । ಸುರರ ಗೆದ್ದನು ಸುರಪುರವ ವಶಮಾಡಿದನು ಬಳಿಕಾ ॥
ಸುರನಿಶಾಚರರೊಳವೆ ಯುದ್ಧವು । ಭರದೊಳಾಯಿತು ಸುರರು ಸತ್ತರು । ಸುರಪತಿಯು ಹರನೊಡನೆ ದೂರಿ ದನಸುರನುನಟಳವಾ ॥10॥

ಹರನೆ ಕೇಳೈ ದೈತ್ಯವೃಂದವು । ಸುರರನೆಲ್ಲ ಕೊಂದು ಬಿಡುವುದು । ಧರಣಿಯಲಿ ಕೇಳ್ ದೈತ್ಯ ರಕ್ತದ ಬಿಂದು ಬಿದ್ದೊಡನೆ ॥
ಭರದಿ ಬಿಂದುವಿಗೊಬ್ಬರಕ್ಕಸ । ಬರುವ ಜನ್ಮಕೆ ನಮ್ಮ ಸುರರಿಗೆ । ಮರಣವಲ್ಲದೆ ಬೇರೆ ಗತಿಯಿಲ್ಲೇನ ಮಾಡುವುದು ॥11॥

ಮೂರುಲೋಕದೊಳೆಲ್ಲ ದೈತ್ಯರೆ । ಸೇರಿಹರು ಸುರವೃಂದವನು ಸಂ । ಹಾರ ಮಾಡುವರೇನ ಹೇಳಲಿ ಯೆನಲು ಸುರಪತಿಯು ॥
ಮಾರಹರನೀ ನುಡಿಯ ಕೇಳುತ । ಭಾರಿ ಕೋಪವ ತಾಳಿ ನಂದಿಯ- । ನೇರಿ ಹೊರಟನು ದೈತ್ಯ ಕುಲವಿದ್ವಂಸ ಮಾಡುವರೆ ॥12॥

ಇಂದುಮೌಳಿಯೆ ಕೇಳು ರಾಕ್ಷಸ । ವೃಂದ ಯಮಪುರ ಕಟ್ಟಿ ದಿವಿಜರ । ವೃಂದ ಜೀವಿಸ ಬೇಕು ಯೀಪರಿ ಮಾಡುಪಾಯವನು ॥
ಎಂದು ಬಿನ್ನೈಸಿದನು ಹರನಿಂ । ಗಿಂದ್ರ ಹರನಹುದೆಂದು ಮನದಲಿ । ಚಂದದಿಂ ಸಂಜೀವನೋದಕವಿತ್ತನಾ ಹರನು ॥13॥

ತಂದು ಸಂಜೀವನವ ಪ್ರೋಕ್ಷಿಸ । ಲಿಂದ್ರರಮರರ ಮೇಲೆ ದೈತ್ಯರು । ಕೊಂದ ಸುರವರರೆಲ್ಲ ನಡೆದರು ಎದ್ದು ಸ್ವರ್ಗಕ್ಕೆ ॥
ಹಿಂದುಳಿದ ಪೀಯೂಷವನು ದೇ । ವೇಂದ್ರಸಗ್ಗಕ್ಕೊಯ್ವ ಕಾಲದಿ । ಬಿಂದುಗಳು ಭೂಮಿಯಲಿ ಬಿದ್ದು ಪ್ರವಾಹವಾಯಿತಿದು ॥14॥

ಇದುವೆ ಸಂಜೀವಿನಿ ನದಿಯು ಮೇ-। ಣಿದಕೆ ಹೆಸರಿಹುದಮರಜಾ ನದಿ । ಇದುವೆಯದರಿಂ ಗುಪ್ತರೂಪದಿ ಖ್ಯಾತಿಹೊಂದಿಹಳು ॥
ಇದರೊಳಗೆ ಸ್ನಾನವನು ಮಾಡಲು । ಹೆದರದಿರುವರು ಕಾಲಮೃತ್ಯುವ । ಹೆದರಿಕೆಯು ಮೇಣುಂಟೆಯವರಿಗೆ ಕಾಲಮೃತ್ಯುವಿನ ॥15॥

ವರುಷ ನೂರಾಯುಷ್ಯ ಬರುವುದು । ಬರದು ರೋಗಾದಿಗಳ ಪೀಡೆಯು । ದುರಿತ ಬ್ರಾಹ್ಮಣ ಕೊಲೆಯು ಸಂಹರಿಸುವುದು ತತ್ಕಾಲ ॥
ಇರುವುದಿದು ಸಂಜೀವನೀನದಿ । ತಿರುಗಿ ಭೀಮಾನದಿಗೆ ಕೂಡಲು । ಮೆರೆವುದಿದುವೆ ಪ್ರಯಾಗ ಕೇಳು ತ್ರಿವೇಣಿ ಸಂಗಮವು ॥16॥

ಕಾರ್ತಿಕದಿ ಮಾಘದಲಿ ಸ್ನಾನವ । ಭಕ್ತಿಪೂರ್ವಕ ಮಾಡುವವರಿಗೆ । ಪ್ರಾಪ್ತಿಯಹುದಿಹಪರದ ಸೌಖ್ಯವು ಮೋಕ್ಷಸ್ನಾನವಿದು ॥
ಮತ್ತೆ ಗ್ರಹಣದ ಪರ್ವಕಾಲದಿ । ಮತ್ತೆ ಹರಿದಿನಸಂಕ್ರಮಣದಲಿ । ವಿಸ್ತರಿಸಿ ಸ್ನಾನವನು ಮೇಣಮವಾಸ್ಯೆ ದಿವಸದಲಿ ॥17॥

ಫಲವನಂತವು ಬರುವದದರಿಂ । ತಿಳಿಯೆ ಪ್ರತಿ ದಿನ ಸ್ನಾನವನು ಮಾಡಲು । ತಳೆದು ಪೂರ್ಣಾಯುಷ್ಯ ಲಕ್ಷ್ಮೀಸುಖವನುಣ್ಣುವರು ॥
ತೊಳೆದು ಹೋಗುವದೆಲ್ಲ ಪಾಪಂ- । ಗಳು ಸದಾ ಸ್ನಾನವನು ಮಾಡಲು । ಕಲಿಯ ಬಾಧೆಯು ತಟ್ಟದವರಿಗಶಕ್ಯವರ್ಣಿಸಲು ॥18॥

ಇಂತು ಸಂಗಮಮಹಿಮೆಯಿರುವುದ । ನಂತ ಮುಂದಿನ ತೀರ್ಥಮಹಿಮೆಯ । ಸಂತಸದಿ ನಾ ಪೇಳ್ವೆನೆಲ್ಲರು ಕೇಳುವುದು ಮುದದಿ ॥
ಮುಂತಿರುವುದ ಶ್ವತ್ಥವೃಕ್ಷವು । ನಿಂತು ಛಾಯಾಶ್ರಮದಿ ಸ್ನಾನವ । ಸಂತಸದಿ ಮಾಡಲ್ಕೆ ಕಾಯದ ಕಾಂತಿ ವರ್ಧಿಪುದು ॥19॥

ತೋರುತಿದೆಯಶ್ವತ್ಥ ಮನದಿ ವಿ । ಚಾರ ಮಾಡಲು ಕಲ್ಪವೃಕ್ಷವೆ । ಧಾರುಣೆಯೊಳಿದು ಕೊಡುವುದೈ ಕಾಮಿತವನೆಲ್ಲವನು ॥
ಕಾರಣದೊಳೀತೀರ್ಥ ನಿರುಪಮ । ಯಾರು ಸೇವಿಪರಿದನು ತಮ್ಮ ಮ- । ನೋರಥವು ಕೈಗೂಡುವುದು ಕೇಳಿದಕೆ ಸಂಶಯವೆ ? ॥20॥

ಗುರುತು ಹೇಳುವೆನೊಂದು ಗೋಪ್ಯವು । ನಿರತ ವಾಸವು ನಮ್ಮದಿಲ್ಲೆಯ । ಮರವಿದನುನೋಡಲ್ಕೆ ನಾನಿಹೆನೆಂದು ತಿಳಿಯುವುದು ॥
ಸುರತರುವ ಪೂಜಿಸುತಲಿದ ಶಂ- । ಕರಭುವನಕೈ ತರಲಲಿಲ್ಲಿಯೆ । ಹರ ತ್ರಿಯಂಬಕನಹನು ಕೇಳಾ ಸಂಗಮೇಶ್ವರನು ॥21॥

ಭಕ್ತಿಯಲಿ ಪೂಜಿಸಿರಿ ಸಂಗಮ । ದಾರ್ತಿಹರನಿಹ ಸಂಗಮೇಶ್ವರ । ಭಕ್ತಿಯಿಂದ ಪ್ರದಕ್ಷಿಣೆಯ ನೀವ್ ಮಾಡುವುದು ಬಳಿಕಾ ॥
ಮತ್ತೆ ಪೇಳುವೆನೊಂದು ಮಾತನು । ಭಕ್ತರಿಗೆ ಸಂಗಮದ ರುದ್ರನು । ವಿಸ್ತರಿಸೆ ಶ್ರೀಶೈಲ್ಯ ದೊಳಗಿಹ ಮಲ್ಲಿಕಾರ್ಜುನನೆ ॥22॥

ನಂದಿಕೇಶ್ವರನನ್ನು ಪೂಜಿಸಿ । ಮುಂದೆ ನಡೆಯಿರಿ ಚಂಡಿಸ್ಥಾನಕೆ । ವಂದಿಸುತ ನಂದಿಯನ ಪುನರಪಿ ಸೋಮಸೂತ್ರಕ್ಕೆ ॥
ಬಂದು ಪುನರಪಿ ನಂದಿಕೇಶನ । ವಂದಿಸುತ ನಂತರದಿ ಚಂಡಿಯ । ವಂದಿಸುವುದೈ ತಿರುಗಿ ಬರುವುದು ಸೋಮಸೂತ್ರಕ್ಕೆ ॥23॥

ತಿರುಗಿ ಬರುವುದು ನಂದಿ ಯಿದ್ದೆಡೆ । ತಿರುಗಿ ಚಂಡಿಯ ಕಡೆಗೆ ಹೋಗುತ । ತಿರುಗಿ ಬರುವುದು ಸೋಮಸೂತ್ರಕೆ ಭಕ್ತಿ ಭಾವದಲಿ ॥
ತೆರದೊಳೀಹರನ ಪ್ರದಕ್ಷಿಣೆ । ಭರದಿ ಮಾಡುತ ಮೂರುಬಾರಿಗೆ । ಹರನನೀಕ್ಷಿಸ ಬೇಕು ವೃಷಭಸ್ಥಾನದಿಂ ನೀವು ॥24॥

ಎಡದ ಕೈಯಲಿ ವೃಷಭವೃಷಣವ । ಹಿಡಿದು ತರ್ಜನಿಯಗುಂಟ ದೊಳಾ । ಮೃಡನ ವೃಷಭನ ಕೋಡ ಹಿಡಿವುದು ಪೂಜೆ ನೋಡುವುದು ॥
ಹಿಡಿದು ಸಮದೃಷ್ಟಿಯನು ನೋಡಲು । ಪಡೆವನೈ ಧನ ಧಾನ್ಯ ಸಂಪತ್ । ಮೃಡನು ಕೊಡುವನು ಪುತ್ರ ಪೌತ್ರಾದಿಗಳ ಸೌಖ್ಯವನು ॥25॥

ಕ್ರೋಶವರ್ಧದೊಳಿಹುದು ದಕ್ಷಿಣ । ಕಾಶಿ ಪಾವನ ಪುಣ್ಯತರ ನಾ । ಗೇಶಹೆಸರಿನ ತೀರ್ಥವಿದರಾಖ್ಯಾನ ಪೇಳುವೆನು ॥
ಭೂಸುರನು ಕೇಳೊರ್ವನಿದ್ದ ಮ । ಹೇಶ ಭಕ್ತನು ಸರ್ವಸಂಗದ । ದೋಷ ರಹಿತನು ತಿರುಗುತಿದ್ದನು ಮರುಳನಂದದಲಿ ॥26॥

ಆತ ಭಾರದ್ವಾಜ ಗೋತ್ರಜ । ಮಾತನಾಡನು ಜನರ ಸಂಗಡ । ವೀತನಿಹನು ಸದಾ ಶಿವಧ್ಯಾನದಲಿ ತತ್ಪರನು ॥
ಈತನಿಗೆ ಪ್ರತ್ಯಕ್ಷನಾದನು । ಭೂತನಾಥನು ಮನದಿ ಹಿಗ್ಗುತ । ಭೂತಳದಿ ತಿರುಗುವನು ದೇಹದ ಭಾವನವಗಿಲ್ಲಾ ॥27॥

ಮರುಳನೆಂದೇ ತಿಳಿಯುತವನನು । ನಿರತ ನಿಂದೆಯ ಮಾಳ್ಪರವನಿಗೆ । ಇರುವರವನಿಗೆ ಬಂಧುಗಳು ಕೇಳಿಬ್ಬರೈ ನಿಜದಿ ॥
ಕರೆವ ಹೆಸರೀಶ್ವರನು ಪರಮೇ- । ಶ್ವರನೆನುತ್ತಲಿ ಬಂಧುವಿಬ್ಬರು । ತೆರಳುವುದ ಕನುಕೂಲ ಮಾಡಿದರು ಕಾಶೀಪುರಗೆ ॥28॥

ಬಂದು ಹುಚ್ಚ ನಿಗೆಂದರವರಾ- । ನಂದದಿಂದಲಿ ಕಾಶಿಯಾತ್ರೆಗೆ । ಯಿಂದು ಹೊರಟೆವು ನಾವು ಬರುವಿಯೋ ನೀನು ನಮ್ಮೊಡನೆ ॥
ಬಂಧುಗಳಿಗುತ್ತರವನಿತ್ತನು । ಇಂದುಮೌಳಿ ಸಮೀಪವಿರಲಿಕೆ । ನಿಂದು ನೋಡದೆ ಕಾಶಿಯಾತ್ರೆಯೊಳೇನು ಫಲವಿಹುದು ॥29॥

ಮಂದಮತಿಯವನಲ್ಲಿವೈ ಯವ । ಮಂದಮತಿಯೆನ್ನವರೆ ಮೂರ್ಖರು । ಸಂದ ಬ್ರಹ್ಮಜ್ಞಾನಿಯಾತನಿಗೇನು ಹೇಳುವರು ॥
ಬಂಧುಗಳು ಹಿಗ್ಗಿದರು ಕಾಶಿಯ- । ನಿಂದು ತೋರಿಪನಿಲ್ಲಿಯಾದರೆ । ಮುಂದೆ ಸಾಯಾಸದಲಿ ಯಾತ್ರೆಗೆ ಹೋಗಲಿಕ್ಕೇಕೆ ॥30॥

ಎಂದು ಬಂಧುವಿಗೆಂದರಾಕ್ಷಣ- । ವಿಂದು ತೋರಿಸು ವಿಶ್ವನಾಥನ । ನೆಂದು ಹೇಳಲು ವಿಪ್ರ ಬ್ರಹ್ಮಜ್ಞಾನಿಯಾಕ್ಷಣಕೆ ॥
ಮಿಂದು ಗಂಗಾಸ್ನಾನ ತೀರಿಸಿ । ಬಂದನೈ ಮೇಲಕ್ಕೆ ಧ್ಯಾನದೊ । ಳಿಂದು ಶೇಖರನನ್ನು ಬಿನ್ನೈಸಿದನು ಮೋದದಲಿ ॥31॥

ನಿತ್ಯ ವಿಶ್ವೇಶ್ವರನ ದರ್ಶನ । ನಿತ್ಯ ಗಂಗಾಸ್ನಾನವನು ನೀ- । ನಿತ್ತು ಸಲಹಲು ಬೇಕೆನುತ ಬಿನ್ನೈಸಿದನು ಶಿವಗೆ ॥
ಕೃತ್ತಿವಾಸನು ಭೋಳನಿಹನಾ । ಭಕ್ತಿಪೂರ್ವಕ ಬೇಡಲಾತಗೆ । ಕ್ಷೇತ್ರವಾಯಿತು ಕಾಶಿಯಲ್ಲಿಯೆ ಚೋದ್ಯವೇನೆಂಬೆ ? ॥32॥

ಹುಟ್ಟಿದನು ವಿಶ್ವೇಶನಲ್ಲಿಯೆ । ಹುಟ್ಟಿದುದು ಮಣಿಕರ್ಣಿಕೆಯು ಉತ್- । ಕೃಷ್ಟತರದಲಿ ಕ್ಷೇತ್ರವಾಯಿತು ಕಾಶಿದಕ್ಷಿಣದಿ ॥
ಹುಟ್ಟಿತಲ್ಲಿಯೆ ತೀರ್ಥಕುಂಡವು । ಹುಟ್ಟಿದುದು ಭಾಗೀರಥಿಯು ಮೇ । ಣಿಷ್ಟತೀರ್ಥವಿದಾಯ್ತು ವಿಪ್ರನ ತೇಜವೇನೆಂಬೆ ॥33॥

ಕಂಡರಾಬಂಧುಗಳು ಕಾಶಿಯ । ಕುಂಡದೊಳಗಿಹ ಚಿಹ್ನವೆಲ್ಲವ । ಕಂಡು ಹೊಗಳಿದರಾಗ ಬಂಧುವು ಜ್ಞಾನಿ ತಾನೆಂದು ॥
ಕಂಡು ಬಂಧುಗಳನ್ನು ನುಡಿದನು । ಕಂಡಿರೈ ವಿಶ್ವೇಶಕಾಶಿಯ । ಮಂಡಳವನೀವಿಲ್ಲಿ ಬಂತೇ ನಿಜದಿ ಮನದೊಳಗೆ ॥34॥

ನಮ್ಮ ವಂಶೋದ್ಭವರಿಗಿದುವೇ । ನಿರ್ಮಲದ ಸುಕ್ಷೇತ್ರ ಕಾಶಿಯು । ನಮ್ಮ ವಂಶಕೆ ಕಾಶಿ ಯಾತ್ರೆ ಯಗತ್ಯ ಬೇರಿಲ್ಲಾ ॥
ನಿಮ್ಮ ಮನಕೆ ಪ್ರಶಸ್ತವಾದರೆ । ಸುಮ್ಮನಾ ಪಂಢರಿಗೆ ನಡೆಯಿರಿ । ನಮ್ಮದಿಹುದಾರಾಧ್ಯ ದೈವತ ಪುಂಡಲಿಕವರದಾ ॥35॥

ವರುಷ ವರುಷಕೆ ನೀವು ಪಂಢರ । ಪುರಕೆ ಕಾರ್ತಿಕಿ ಯಾತ್ರೆಮಾಳ್ಪುದು । ಕರೆಯಿರೆನ್ನನು ಮುಂದೆ ಹೆಸರನು ಪೇಳ್ವ ಗೋಸಾವಿ ॥
ಪರಿಯೊಳೀಸ್ಥಳದಲ್ಲಿ ವಿಶ್ವೇ- । ಶ್ವರನ ಕಾಶಿಯ ಜನ್ಮವಾಯಿತು । ಧರಿಸದಿರಿ ಸಂಶಯವ ಕಾಶಿಯ ದಿದುವೆ ಪ್ರತ್ಯಕ್ಷ ॥36॥

ಗುರುವು ಪೇಳಿದ ತೆರೆದಿ ಸ್ನಾನವ । ಭರದಿ ತೀರಿಸಿ ಕಾಶಿತೀರ್ಥದಿ । ತೆರಳಿದರು ಮುಂದಕ್ಕೆ ಪಾಪವಿನಾಶವಿದ್ದೆಡೆಗೆ ॥
ದುರಿತ ಬಹುವಿಹುದೆಂದು ಭಗಿನಿಯ । ಕರೆದು ಶ್ರೀಗುರುನಾಥ ಪೇಳಿದ । ನರಹುವೆನು ತವದೋಷ ಕೇಳೌ ಭಗಿನಿ ಪ್ರೇಮದಲಿ ॥37॥

ಚರಣ ಕೆರಗುತ ತಂಗಿ ನುಡಿದಳು । ಅರಿವು ಯೆನಗಿನ್ನೆಂತು ಹಿಂದಿನ । ದುರಿತಗಳ ನಾನರಿಯೆ ಮೂಢಳು ಜ್ಞಾನವೆನಗಿಲ್ಲಾ ॥
ಗುರುವರನೆ ನೀ ಜ್ಞಾನಜ್ಯೋತಿಯು । ಕರುಣದಿಂದೆನಗರುಹು ಹಿಂದಿನ । ದುರಿತಗಳ ಪರಿಹಾರ ಮಾಡುವ ಪರಿಗಳೆಲ್ಲವನು ॥38॥

ವಿನಯದಿಂದಲಿ ಗುರುವು ನುಡಿದನು । ಮನದಿ ಯೋಚಿಸಿ ನೋಡು ಹಿಂದಿನ । ಜನುಮದಲಿ ಮಾರ್ಜಾರಹತ್ಯೆಯ ಪಾಪ ದೊರೆತಿಹುದು ॥
ಮನೆಯೊಳಗೆ ಮಾರ್ಜಾರಿಯದು ಗ । ರ್ಭಿಣಿಯು ಮರಿಗಳನಿಡಲು ಮಡಿಕೆಯ । ಮನದೊಳರಿವಿಲ್ಲದಲೆ ತುಂಬಿದೆ ನೀರಿನಿಂದದನು ॥39॥

ನೀರಿನಿಂದಲೆ ತುಂಬಿ ಮಡಿಕೆಯ । ನೇರಿಸಿದೆ ಯೋಲೆ ಮೇಲೆ ಮರಿಗಳ । ಹಾರಿದವು ಪ್ರಾಣಗಳು ಮರಿಗಳು ಯಿದ್ದವೈದಲ್ಲಿ ॥
ನಾರಿ ರತ್ನಾಬಾಯಿ ಗುರುವಿನ । ಚಾರು ವಚನವ ಕೇಳಿಯಂಜಿಕೆ । ಯೂರಿದುದು ಮನದಲ್ಲಿ ತೋರಿತು ಕುಷ್ಟ ಬಿಳುಪಾಗಿ ॥40॥

ಭೀತಳಾದಳು ಮನದಿ ರತ್ನೆಯು । ಮಾತನೆಂದಳು ಶ್ರೀಗುರವಿಗಿದ । ಭ್ರಾತ ನೀ ಗುರುರಾಯ ಕರುಣಿಸು ಭಗಿನಿ ನಾ ನಿನ್ನಾ ॥
ಪಾತಕಗಳ ಪರಿಹರಿಸಲೀ । ಭೂತಳದಿ ಹೋಗುವರು ಕಾಶಿಯ । ಯಾತ್ರೆಗಾಗಿಯೇ ನಾನು ಬಂದೆನು ನಿನ್ನ ದರ್ಶನಕೆ ॥41॥

ದೋಷರಾಶಿಯನೆಲ್ಲ ನೀ ನಿ । ರ್ದೋಷ ಮಾಡುವಿಯೆಂದು ಮನದಲಿ । ಯಾಶೆಯಾಯಿತು ಸಲಹೊ ಯೆನ್ನಾಶೆಯನು ಯೆನ್ನಣ್ಣಾ ॥
ಈಸು ಪರಿಯಲಿ ವಿನಯದಿಂದ ವಿ- । ಶೇಷ ಬಿನ್ನಹ ಮಾಡಲಾಕ್ಷಣ । ದೋಷಹರ ಶ್ರೀಗುರುವು ನುಡಿದನು ಭಗಿನಿಗುತ್ತರವಾ ॥42॥

ಬರುವ ಜನುಮದಿ ಪಾಪಫಲಗಳ । ನಿರದೆ ಭೋಗಿಪೆನೆಂದು ದೃಢಮನ । ವಿರಲು ನಿನ್ನಯ ಕುಷ್ಟವನು ಹರಿಸುವೆನು ನಾನೀಗ ॥
ತಿರುಗಿ ಪ್ರತ್ಯುತ್ತರವನಿತ್ತಳು । ಗುರುವೆ ನಾ ಬಹುಜನ್ಮಜನ್ಮಾಂ । ತರದಿ ಬಳಲಿದೆ ಮೋಕ್ಷಪದವಿಯ ಕೊಟ್ಟ ಸಲಹೆನ್ನಾ ॥43॥

ಚರಣಗಳ ನಾ ಪಿಡಿದೆ ನಿನ್ನಯ । ಮರಣಜನನದ ಪರಿಯು ಸಾಕಿದ । ದುರಿತರಾಶಿಯ ನಾಶ ಮಾಡುವ ಚರಣ ನೋಡಿದೆನು ॥
ಬರುವ ಜನುಮಕೆ ಬೇಡ ಬೀಜವು । ದುರಿತಫಲವನು ಬಿಡುವೆ ಭೋಗಿಸಿ । ಕರುಣೆಯಣ್ಣಗೆ ಯಿಲ್ಲದಿರೆ ನಾ ಮಾಡಬೇಕೇನು ॥44॥

ಗುರುವು ಕರುಣಾವಚನ ಕೇಳುತ । ಲರುಹಿದನು ರತ್ನಾಯಿಗಾಕ್ಷಣ- । ವಿರುವುದಿದು ಮುಂದಕ್ಕೆ ಪಾಪವಿನಾಶತೀರ್ಥ ಕಣಾ ॥
ಭರದಿ ಸ್ನಾನವಮಾಡು ನಿನ್ನಯ । ದುರಿತ ದೋಷವು ಸುಟ್ಟುಹೋಗುವು । ದಿರದೆ ನಿಜವಿದು ನೋಡದೆಂದನು ಗುರುವು ನಸುನಗುತ ॥45॥

ನಿತ್ಯ ವಿಲ್ಲಿಯೆ ಸ್ನಾನ ಮಾಡಲು । ಸಪ್ತಜನ್ಮದ ಪಾಪ ಸುಡುವುದು । ಮತ್ತೆ ಸಂಶಯವೇಕೆ ನೋಡನುಭವವ ನೀ ಕ್ಷಣದಿ ॥
ಇತ್ತಲೀಪರಿ ಗುರು ನುಡಿಯೆ ಪ್ರತಿ । ನಿತ್ಯ ಮೂರ್ದಿನ ಸ್ನಾನ ಮಾಡಲು । ಯೆತ್ತ ಹೋಯಿತೊ ಪಾಪ ರತ್ನೆಯ ಕುಷ್ಟ ಪೋದುದಲಾ ॥46॥

ನಾಮಧಾರಕ ಕೆಳು ಶಿಷ್ಯಶಿ । ರೋಮಣಿಯೆ ನಿಜವಾಗಿ ಪೇಳುವೆ । ರಾಮಣೀಯಕ ಕಲ್ಪನೆಯ ಕಥೆಯಲ್ಲ ಸುಳ್ಳಲ್ಲಾ ॥
ಈ ಮಹಾತ್ಮ್ಯ ಯನೆನ್ನ ದೃಷ್ಟಿಯ । ಸೀಮೆಯಿಂದಲೆ ನೋಡಿದೆನು ಯೆನು । ತಾ ಮಹಾತುಮ ಸಿದ್ಧನೆಂದನು ನಾಮಧಾರಕಗೆ ॥47॥

ನೋಡಿದಳು ರತ್ನಾಯಿ ತೀರ್ಥದ । ಗೂಢ ಮಹಿಮೆಯ ಸ್ನಾನ ಮಾಡಿ ಸ- । ಗಾಢದಿಂದಲಿ ವಾಸಿಸಿದಳಾ ಮಠದಿ ಗುರುವರನಾ ॥
ನೋಡಿ ಮುಂದಕೆ ಕೋಟಿ ತೀರ್ಥವು । ರೂಢಿಯಲಿ ಪ್ರಖ್ಯಾತವಿರುವದು । ನೋಡಿರೆಂದನು ಮುದದಿ ಶ್ರೀಗುರು ಶಿಷ್ಯವೃಂದಕ್ಕೆ ॥48॥

ಧರಣಿಯೊಳಗಿಹ ಸರ್ವ ತೀರ್ಥಗ । ಳಿರುವವೀ ತೀರ್ಥದಲಿ ನೋಡಲು । ತರಣಿಸೋಮಗ್ರಹಣಕಾಲದಿ ಭಕ್ತಿಭಾವದಲಿ ॥
ಇರದೆ ಪೌರ್ಣಿಮೆ ಸಂಕ್ರಮಣದಲಿ । ಮೆರೆದ ಮಾವಾಸ್ಯೆಯಲಿ ಪ್ರತಿಪದೆ । ಗಿರದೆ ಸ್ನಾನವ ಮಾಡಬೇಕೀ ಕೋಟಿತೀರ್ಥದಲಿ ॥49॥

ವರುಷ ವರುಷಕೆ ಧೇನುವನಲಂ । ಕರಿಸಿ ಸದ್ವಿಪ್ರನಿಗೆ ದಾನವ । ನಿರದೆ ಮಾಡಲು ಕೊಟಿಗುಣ ಫಲವಿಹುದು ದಾನದಲಿ ॥
ವಿರಚಿಸಲು ದಾನವನು ಫಲವದು । ನಿರುಪಮವು ಕೇಳ್ದಾನವೊಂದಕೆ । ಬರುವುದಗಣಿತ ಫಲವು ಹೆಸರಿಗೆ ತಕ್ಕ ಫಲವಹುದು ॥50॥

ಮುಂದೆ ಮರೆವುದು ರುದ್ರಪದ ಗಯೆ । ಯೆಂದು ಪೇಳ್ವರು ಸಪ್ತಪದವಿದು । ವಂದಿಸಿರಿ ನೀವ್ ಭಕ್ತಿ ಭಾವದಿ ರುದ್ರಪದಕಿಲ್ಲಿ ॥
ಚಂದದಿಂ ಗಯೆಯಲ್ಲಿ ಮಾಡುವ । ಬಂಧುರದ ಕರ್ಮಗಳನಿಲ್ಲಿಯೆ । ಮಿಂದು ಮಾಡಲು ಕೋಟಿಜನ್ಮದ ಪಾಪ ಸುಡುವುದಲಾ ॥51॥

ಭಾಸಿಸುವುದಾ ಚಕ್ರತೀರ್ಥವಿ । ಶೇಷವಿಹುದೈ ಪುಣ್ಯವದರಲಿ । ಕೇಶವನು ವಾಸಿಪನು ಸನ್ನಿಧಿಯಲ್ಲಿ ಮೇಣದರಾ ॥
ಭಾಸಿಪುದು ಕೇಳ್ ತೀರ್ಥ ಪತಿತಗೆ । ಕೇಶವಸ್ನಾನದಲಿ ಪುಣ್ಯ ದ । ರಾಶಿ ಬರುವುದು ದ್ವಾರಕಾಸಮವಿಹುದು ದಕ್ಷಿಣದಿ ॥52॥

ಅಸ್ಥಿಗಳು ತೀರ್ಥದಲಿ ಬೀಳಲು । ವಿಸ್ತರಿಸುವವು ಚಕ್ರದಂದದಿ । ಭಕ್ತಿಭಾವದಿ ಸ್ನಾನಮಾಡಲು ಪುಣ್ಯ ಬಹುವಿಹುದು ॥
ವಿಸ್ತರಿಸಲೀಪರಿಯೋಳಾ ಗುರು । ಶಿಷ್ಯರೊಂದೇ ಭಾವದಲ್ಲಿ ಪ । ವಿತ್ರ ತೀರ್ಥದಿ ಸ್ನಾನ ಮಾಡಿದರಾಗ ಮೋದದಲಿ ॥53॥

ಮುಂದೆ ಮನ್ಮಥ ದಹನ ತೀರ್ಥವು । ಚಂದದಿಂದಲಿ ಪೂರ್ವಭಾಗಕೆ । ಕಂದೆರೆದು ನೋಡಿದರೆ ಗೋಕರ್ಣದ ಸಮಾನವದು ॥
ಮುಂದೆ ಕಲ್ಲೇಶ್ವರನು ರಂಜಿಪ । ನಿಂದುಶೇಖರ ಮಾಬಳೇಶ್ವರ । ನೆಂದು ತಿಳಿಯಿರಿ ಭೇದಭಾವವನೆಣಿಸದಲೆ ಮನದಿ ॥54॥

ಸ್ನಾನ ಮನ್ಮಥದಹನತೀರ್ಥದಿ । ಧ್ಯಾನ ಕಲ್ಲೇಶ್ವರನ ಮೂರ್ತಿಗೆ । ಸ್ನಾನ ಪೂಜಾಫಲದೊಳಷ್ಟೈಶ್ವರ್ಯ ಸಂಪ್ರಾಪ್ತಿ ॥
ಮಾನನಿಧಿಗಳೆ ಕೇಳಿ ಶ್ರಾವಣ । ಸ್ನಾನ ಮಾಡಲು ಕಾರ್ತಿಕದಿಬಹು । ಮಾನದಲಿ ಮಾಡಿದರೆ ದೀಪಾರಾಧನೆಯ ಮುದದಿ ॥55॥

ದೊರೆಯುವುದು ಬಹುಪುಣ್ಯವದರಿಂ- । ದರುಹುತೀಪರಿ ಶಿಷ್ಯರಿಗೆ ಗುರು । ವರನು ಸಂತೋಷವನು ಮನದಲಿ ಮಾಡಿದನು ನಿಜದಿ ॥
ಅರಿಯುವಂದದಿ ತೀರ್ಥಮಹಿಮೆಯ- । ನರುಹಿದನು ಗುರುವರನ ಕರುಣದಿ । ಧರೆಯೊಳಾದೆವು ಧನ್ಯರಿಂದೀತೀರ್ಥದಲಿ ಮಿಂದು ॥56॥

ಪರಮಪಾವನ ಸಕಲ ತೀರ್ಥಗ । ಳಿರಲು ಮನೆಯ ಸಮೀಪದೂರಕೆ । ತೆರಳುವುದು ಮೇಣೇಕೆ ಯಾತ್ರೆಯೊಳೇನು ಫಲವಿಹುದು ॥
ಗುರುಚರಣಸನ್ನಿಧಿಯ ತೀರ್ಥ ದ । ಪರಮಮಂಗಳಧಾಮವದರೊಳು । ಭರಿತವಿಹನ್ನೈ ಸರ್ವ ತೀರ್ಥಗಳೆಂದನಾಸಿದ್ಧಾ ॥57॥

ಮಿಂದು ತೀರ್ಥಗಳೆಂಟರಲಿ ತಾ । ಮಿಂದು ಗುರುವರ ಮಠಕೆ ತೆರಳಿದ । ನಂದಿನುತ್ಸವವೇನ ಪೇಳುವೆ ಮಠದಿ ಗುರುವರನಾ ॥
ಮಂದಿ ಕೂಡಿತು ವಿಪ್ರರೆಲ್ಲರು । ಬಂದು ಸಂತರ್ಪಣೆಯನಡಿಸಿದ । ರಿಂದುಧರನೇ ಗುರುವು ವಿಷ್ಣು ಸ್ವರೂಪನಿರುವನಲಾ ॥58॥

॥ ಅಧ್ಯಾಯ 49 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 50

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥
॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥
॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಶರಣವತ್ಸಲ ಶ್ರೀಗುರುವು ನಿಜ । ಶರಣನಾಗಿಹ ಯವನರಾಜನ । ಕರಿಸಿ ದರ್ಶನವಿತ್ತು ಮೋಕ್ಷವನಿತ್ತ ರಜಕನಿಗೆ॥

ನರಕಭಾಜನನಾದ ಪ್ರಾಣಿಯು । ನರನು ಸಂಚರಿಸುವನು ಧರೆಯಲಿ । ನರನ ನಾರಾಯಣನ ಮಾಳ್ಪುದು ಗುರು ಚರಣಭಕ್ತಿ ॥
ಗುರುವು ಜಾತಿವಿಜಾತಿ ನೋಡನು । ಗುರುವು ಕುಲವಾಚಾರ ನೋಡನು । ಗುರುವು ಭಕ್ತಿಯನೊಂದ ನೋಡುತ ಕೊಡುವನೈಮುಕ್ತಿ ॥1॥
ನಾಮಧಾರಕ ಕೇಳು ಶಿಷ್ಯಶಿ । ರೋಮಣಿಯೆ ಹಿಂದಿನ ಕಥಾನಕ । ಪ್ರೇಮದಲಿ ಶ್ರೀಪಾದ ಕೊಟ್ಟನು ವರವ ರಜಕನಿಗೆ ॥
ಆ ಮಹಾತುಮ ಮ್ಲೇಂಛಕುಲದಲಿ । ಭೂಮಿಪತಿಯುದರದಲಿ ಬೈದುರ । ಗ್ರಾಮದಲಿ ಹುಟ್ಟಿದನು ಶ್ರೀಗುರುವರಪ್ರಸಾದದಲಿ ॥2॥
ದೊರೆಯಿತಷ್ಟೈಶ್ವರ್ಯವವನಿಗೆ । ಗುರುಕೃಪೆಯ ಮಹಿಮಯಲಿ ಸತಿಸುತ । ಪರಮಸುಖಸಂಪತ್ತು ಮೇಣ್ಚತುರಂಗಬಲಸಹಿತಾ ॥
ಧರೆಯನಾಳ್ದನು ಪೂರ್ವಪುಣ್ಯದ । ಭರದೊಳವನೇನೆಂಬೆ ಗುರು ಕೃಪೆ । ಯಿರಲು ಸಿರಿಸಂಪತ್ತು ದಾಸಿಯರೇನು ಚೋದ್ಯವಿದು ॥3॥

ಹೀನಜಾತಿಯ ಜನುಮವಾದರು । ದಾನಧರ್ಮವ ಮಾಳ್ಪ ದೇವರ । ಧ್ಯಾನತತ್ಪರನೋದುವನು ದಿನನಿತ್ಯ ಕೋರಾಣಾ ॥
ಮಾನಿಸುವನವ ವಿಪ್ರವರ್ಣವ । ತಾನು ಪದ್ರವ ಕೊಡನು ಯಾರಿಗು । ಕ್ಷೋಣಿಯಲಿ ದೇವಾಲಯಂಗಳ ಕಟ್ಟಿಸಿದನವನು ॥4॥

ಮನೆಪುರೋಹಿತರೆಲ್ಲ ಮ್ಲೇಂಛರು । ಮನದಿ ಖಂತಿಯ ತಾಳಿ ರಾಜನಿ- । ಗೆನುವರೈ ನೀ ಮ್ಲೇಂಛರಾಜನು ಯೆಲ್ಲಿ ದ್ವಿಜರೆಲ್ಲಿ ॥
ನಿನಗೆ ಪಾತಕ ತಟ್ಟುವುದು ಕೊ । ರಣದ ಧರ್ಮವ ಮಾಡು ಕಾಫರ । ರೆನುವವರ ಸಂಗತಿಯ ಬಿಡಬೇಕೆಂದರರಸನಿಗೆ ॥5॥

ಮಂದವತಿ ದ್ವಿಜಜಾತಿ ದೇವರಿ- । ದೆಂದು ಪಾಷಾಣವನು ಪ್ರೇಮದಿ । ವಂದಿಪರು ಪಾಷಾಣಕಾಷ್ಠವ ಗಿಡಮರಂಗಳನು ॥
ಇಂದುಸೂರ್ಯಾದಿಗಳು ದೇವರು । ವಂದಿಪರು ಧೇನುವನು ವೃಷಭನ । ನಿಂದ್ಯರಿವರಾಕಾರ ಕೊಡುವರು ನಿರ್ವಿಕಾರನಿಗೆ ॥6॥

ಯವನಕುಲದಲಿ ಹುಟ್ಟಿ ಧರಣೀ । ಧವನೆನಿಸಿ ವಿಪ್ರರನು ಪೂಜಿಪ । ನಿವನೆನುತ ರಾಜನ ಪುರೋಹಿತರೆಲ್ಲ ನಿಂದಿಪರು ॥
ಅವರಿಗುತ್ತರವೀವನಾಕ್ಷಣ । ಯವನರಾಜನು ಕೋಪದಿಂದಲಿ । ಯವನ ಧರ್ಮವಿದೆಂತು ಪೇಳುವಿರೆಮಗೆ ತಿಳಿಯದಲೆ ॥7॥

ಇರುವನೀಶ್ವರ ಸಕಲಸಚರಾ- । ಚರದೊಳಣುತೃಣಕಾಷ್ಠದಲಿ ಸ್ಥಾ- । ವರವು ಜಂಗಮಸೃಷ್ಟಿಯೆಲ್ಲವು ದೇವಕೃತವಲ್ಲೆ ? ॥
ಪರಿ ಪರಿಯ ಬಹುನಾಮರೂಪವ । ಧರಿಸಿರುವ ಪರಮಾತ್ಮನೊಬ್ಬನೆ । ಅರಿಯರೀತನ ಗುಣ ಮಹಿಮೆಯನು ತರ್ಕಭಾಷ್ಯದಲಿ ॥8॥

ಯಾತರವು ಜಾತಿಗಳು ಸರ್ವವು । ಭೂತಪಂಚಕ ದಿಂದ ಜನಿಸಿದ- । ವೇತಕೀ ನವಯೌವನದ ಮದದಂಭವೆಲ್ಲರಿಗೆ ॥
ಜಾತಿಪರಜಾತಿಯನು ಮನ್ನಿಸಿ । ಪಾತಕವ ನೀವ್ ಮಾಳ್ಪರಲ್ಲದೆ । ಭೂತದಯೆಯಲಿ ಸರ್ವಜಗವ ಸಮಾನ ಮಾನಿಸಿರಿ ॥9॥

ಮಣ್ಣಿನಿಂದ ಕುಲಾಲನೊಬ್ಬನು । ಭಿನ್ನ ಭಿನ್ನಾ ಕೃತಿಯ ಮಡಿಕೆಗ । ಳನ್ನು ಮಾಳ್ಪನು ಭೇದವಿಹುದೇ ಮಣ್ಣಿನಲಿ ನೋಡೆ ॥
ಭಿನ್ನ ಭಿನ್ನಾಭರಣ ವಾಕೃತಿ । ಚಿನ್ನವೊಂದೇ ಇರುವುದದರಲಿ । ಭಿನ್ನ ಧೇನುಗಳಾಗೆ ಹಾಲದು ಭಿನ್ನ ವಿಹುದೇನು ॥10॥

ಬೇರೆಬೇರೆ ಶರೀರವದರೊಳು । ಸೇರಿರುವ ಪರಮಾತ್ಮ ನೊಬ್ಬನೆ । ತೋರುವನು ಶಶಿಯೋರ್ವ ಗಗನದಿ ಘಟದಿ ಹಲವಾಗಿ ॥
ಬೇರೆ ದೀಪಗಳಿರಲು ಜ್ಯೋತಿಯು । ಬೇರಿರುವುದೇ ಮಣಿಗಣವು ತಾ । ಬೇರಿರಲು ಬೇರಿಹುದೆ ಸೂತ್ರವು ಸರ್ವ ಕೊಂದಿಹುದು ॥11॥

ಪರಿಕಿಸಲು ತತ್ವವನು ಸರ್ವರೊ । ಳಿರುವನೈ ಪರಮಾತ್ಮನೊಬ್ಬನು । ಹಿರಿದು ಕಿರಿದವಗಿಲ್ಲ ಜಾತಿವಿಜಾತಿಯವಗಿಲ್ಲ ॥
ಪರಿಪರಿಯ ಪಾಷಣಕಾಷ್ಠವ । ನಿರದೆ ಪೂಜಿಪರೆಂದು ಪೇಳ್ದಿರಿ । ಹರಿಯು ವಾಸಿಪನೆಂದು ಪೇಳ್ವಿರಿ ಸರ್ವವಸ್ತುವಿಲಿ ॥12॥

ಎಲ್ಲ ಸಚರಾಚರದ ವಸ್ತುಗ । ಳಲ್ಲಿ ವಾಸಿಸುತಿಹನು ಶ್ರೀಹರಿ । ಕ್ಷುಲ್ಲಕರು ಚಂಚಲಮನುಷ್ಯರು ಪ್ರತಿಮೆ ಮಾಡುವರು ॥
ಅಲ್ಲನಿಹನಾ ಸರ್ವವಸ್ತುಗ- । ಳಲ್ಲಿಯದರಿಂ ಪ್ರತಿಮೆ ಪೂಜೆಗ । ಳೆಲ್ಲವರ್ಪಿತವಾಗುವುದು ಕೇಳಲ್ಲ ದೇವನಿಗೆ ॥13॥

ಚಿತ್ತಚಂಚಲವೆಂದು ಪ್ರತಿಮೆಯ । ಮೃತ್ತಿಕಾದಿಗಳಿಂದ ಮಾಡುತ । ನಿತ್ಯ ನಾರಾಯಣನ ಪೂಜಿಪರೇಕಭಾವದಲಿ ॥
ಶತ್ರುತನವನು ಮಳ್ಪು ದನುಚಿತ । ಮಿತ್ರತನದಲಿ ತಮ್ಮ ಮತವನು । ಸ್ವಸ್ಥ ಚಿತ್ತದಿ ನೀವು ಪ್ರತಿಪಾದಿಸಿರಿ ಮೋದದಲಿ ॥14॥

ಅರಸನಿಪರಿಯಲ್ಲಿ ತನ್ನಯ । ವರಪುರೋಹಿತರಿಂಗೆ ಪೇಳ್ದನು । ಭರವಸೆಯು ವಿಪ್ರರಲಿ ರಾಜನ ಪೂರ್ವ ಸಂಸ್ಕಾರ ॥
ಪರಿಯೊಳೀ ಹಲಕಾಲ ಹೋಗಲು । ಹೊರಟಿತರಸನಿಗೊಂದು ತೊಡೆಯಲಿ । ಕುರುವು ವೇದನೆಯಾಯ್ತು ರಾಜಗೆ ಬಹಳ ಪರಿಯಾಗಿ ॥15॥

ವೈದ್ಯರೆಲ್ಲರು ಬಂದು ರಾಜನಿ । ಗಿದ್ದ ಕುರುವನು ನೋಡಿ ತಮ್ಮಯ । ವೈದ್ಯಕೀಶಾಸ್ತ್ರದ ಪ್ರಯೋಗವ ಮಾಡಿದರು ಮುದದಿ ॥
ಇದ್ದ ಕುರುವದು ಶಾಂತವಾಗದೆ । ಎದ್ದು ತಾಪವ ಬಹಳ ಕೊಟ್ಟಿತು । ಬಿದ್ದನಾ ಚಿಂತೆಯಲಿ ರಾಜನು ತಾಪ ತಾಳದಲೆ ॥16॥

ಇತ್ತ ಗಾಣಗಾಪುರದಿ ಶ್ರೀಗುರು- । ಸತ್ತಮನು ನೋಡಿ ದನು ಬರುವನೆ- । ನುತ ರಾಜನು ತನ್ನ ದರ್ಶನಕಾಗಿ ಬೇಗದಲಿ ॥
ಮತ್ತೆ ರಾಜಗೆ ಪ್ರಕಟವಾಗಲು । ಇತ್ತ ಬರುವುದು ಮ್ಲೇಂಛವೃಂದವು । ಸತ್ವಶೀಲದ್ವಿಜರಿಗುಪಟಳವಾಗುವುದು ತಿಳೆಯೆ ॥17॥

ಬಂದುದೀಶ್ವರನಾಮ ವತ್ಸರ । ಬಂದಿರುವನೈ ಗುರುವು ಸಿಂಹಕೆ । ಮುಂದೆ ಗೌತಮಿಯಾತ್ರೆ ಮಾಡುವೆನೆಂದು ತೋಷದಲಿ ॥
ಮುಂದೆ ಬರುವನು ರಾಜನಿಲ್ಲಿಗೆ । ಎಂದು ಗುರುವರುಹಿದನು ಶಿಷ್ಯರಿ । ಗೊಂದೆ ಚಿಂತೆಯು ಹುಟ್ಟಿದುದು ಮುಂದೇನು ಗತಿಯೆಂದು ॥18॥
ನರಹರಿಸರಸ್ವತಿಯೆ ಬಲ್ಲನು । ತರಣ ಮಾಡಲು ಶಕ್ತನವನೇ । ಬರಿದೆ ಯೋಚಿಸಿ ಮಾಳ್ಪುದೇನದು ಯೆಂದರವರೆಲ್ಲಾ ॥
ಪರಿಯೊಳೀ ಗುರುಶಿಷ್ಯರೆಲ್ಲರು । ಅರಸು ಬರುವನೆನುತ್ತ ಯೋಚಿಸು । ತಿರಲು ಯವನಾಧಿಪಗೆ ಯೋಚನೆಯಾಯ್ತು ಭಾಗ್ಯದಲಿ ॥19॥
ದೂರ ಮಾಡಲು ಕುರುವ ವೈದ್ಯರು । ಭಾರಿ ಚಿಂತೆಯ ತಾಳಿಯವನು ವಿ- । ಚಾರ ಮಾಡಿದನೆಲ್ಲ ವಿಪ್ರರ ಕರಸಿ ಹತ್ತಿರಕೆ ॥
ಚಾರುತರ ಪ್ರೀತಿಯಲಿ ವಿಪ್ರರು । ಧಾರುಣೀಪತಿ ಗರುಹಿದರು ಕೇಳ್ । ಭಾರಿರೋಗಗಳೆಲ್ಲ ಪೂರ್ವಾರ್ಜಿತದ ಕರ್ಮಫಲಾ ॥20॥
ಶ್ರೇಷ್ಠ ಸತ್ಪುರುಷನ ಸುಧಾರಸ । ದೃಷ್ಟಿ ಬೀಳಲು ದುರಿತರಾಶಿಯು । ನಷ್ಟವಾಗುವುದೆಲ್ಲ ಕುರುವಿನ ಗೋಷ್ಠಿ ಬೇರೇನು ॥
ಕೊಟ್ಟನಭಿವಚನವನು ರಾಜನು । ಭ್ರಷ್ಟ ಯವನನೆ ನಾನು ವಿಪ್ರರ । ಶ್ರೇಷ್ಠ ಚರಣದ ದಾಸನಾಗಿಹೆ ಯವನನಾನಲ್ಲ ॥21॥
ಗುರುಚರಣಸೇವೆಯನು ನಾ ಮಾ- । ಡಿರುವೆ ಹಿಂದಿನ ಜನ್ಮದಲಿ ಯೆನಗರಿ- । ವಿರುವುದದರಿಂ ಸುಖದಸಂಪತ್ತಾಯ್ತು ಕೈವಶವು ॥
ದುರಿತ ಕಿಂಚಿತ್ತಿರುವ ಕಾರಣ । ಬರವದಾಯಿತು ಮ್ಲೇಂಛ ಕುಲದಲಿ । ಕರುಣ ದೃಷ್ಟಿಯೊಳೆನ್ನ ನೋಡಿರುಪೇಕ್ಷಿಸದಲೀಗಾ ॥22॥
ಹಿಂದೆ ಯಾರಿಗೆ ಸಾಧುದರ್ಶನ । ದಿಂದ ರೋಗನಿವಾರವಾಯ್ತಿದ । ನೊಂದೆ ಭಾವದಿ ಹೇಳಿರೆಂದನು ನೃಪನು ವಿಪ್ರರಿಗೆ ॥
ಎಂದ ನುಡಿಯನು ಕೇಳಿ ವಿಪ್ರ । ವೃಂದ ಸಂತೋಷದಲಿ ಪೇಳಿತು । ಸುಂದರಾಖ್ಯಾನವನು ಪೇಳ್ವೆನು ನಾಮಧಾರಕನೆ ॥23॥
ಅರಸ ಕೇಳೈ ನಿಮ್ಮ ಮಾತಿನ । ಭರವಸೆಯು ಯೆಮಗಾಯ್ತು ಯವನರು । ಭರವಸೆಯ ನೀಡಲಾರರೈ ನೀವೆಮ್ಮ ವಚನದಲಿ ॥
ತೆರಳಿರೇಕಾಂತಸ್ಥಳದಿ ನಿಮ । ಗರಿವ ಪರಿಯಲಿ ಪೇಳ್ವೆವಿಲ್ಲಿಯೆ । ಇರಲು ನಿಂದಿಪರೆಮಗೆ ನಿನ್ನಯ ಯವನಜಾತಿಯರು ॥24॥

ಇದನು ಕೇಳುತ ಯವನರಾಜನು । ಮುದದಿ ಪೇಳಿದನುತ್ತರವ ನೀವ್ । ಹೆದರದಿರಿ ನಿಮಗೇನ ಮಾಳ್ಪರು ಯವನಜಾತಿಯರು ॥
ಮುದದಿ ಯೆನ್ನನು ತಾರಿಸೆನುತಲಿ । ಪದಕೆ ನಮಿಸಿದನಾಗಲರಸನು । ಸದಯದಂತಃಕರಣದಲಿ ಯುಪದೇಶಿಸಿದರವಗೆ ॥25॥

ಅರಸ ಕೇಳ್ಳೈ ಹೋಗು ಯಾತ್ರೆಗೆ । ಮೆರೆವುದ್ಯೆ ಮುಂದಕ್ಕೆ ತೀರ್ಥವು । ದುರಿತನಾಶನವೆನ್ನುವರು ನೀವಲ್ಲಿ ಮೋದದಲಿ ॥
ತೆರಳಿ ಸ್ನಾನವ ಮಾಡಲಾಕ್ಷಣ । ದುರಿತನಾಶನವಹುದು ಯೆನಲಾ । ಧರಣಿ ಪತಿ ತ್ವರಿತದಲಿ ಬಂದನು ಪಾಪನಾಶನಕೆ ॥26॥

ಎಂದು ಕೇಳುತ ವಚನವನು ಸಾ- । ನಂದದಿಂದಲಿ ರಾಜ ನಡೆದನು । ಮುಂದೆ ಪಾಪವಿನಾಶತೀರ್ಥದಿ ಮಿಂದು ಬಂದನಲಾ ॥
ಚಂದದಿಂದಲಿ ಮೇಲೆ ಬರಲವ । ಮುಂದೆ ಕಂಡನು ಯುತಿಯನೊಬ್ಬನ । ವಂದಿಸುತ ತೋರಿಸಿದನವನಿಗೆ ತೊಡೆಯ ಸ್ಫೋಟಕವಾ ॥27॥

ತೊಡೆಯ ಕುರುವನು ನೋಡಿ ಯತಿವರ । ನುಡಿದನಾಕ್ಷಣ ಸಾಧುದರ್ಶನ । ವೊಡನೆ ಪರಿಹರಿಸುವದು ಪೇಳುವೆನೊಂದು ಗೋಷ್ಠಿಯನು ॥
ದೃಢಮನದೊಳಿದ ಕೇಳು ರಾಜನೆ । ಪಡೆವೆ ನಿನ್ನಯ ಕಾಮಿತಾರ್ಥವ । ನಿಡಲು ಬೇಕ್ಕೈ ಶ್ರದ್ಧೆ ಶ್ರೀಗುರುಚರಣಸೇವೆಯಲಿ ॥28॥

ಅರಸ ಕೇಳ್ಳೈ ಧರೆಯಲಿರುವುದು । ಪುರವವಂತಿಯು ರಮ್ಯ ಪಟ್ಟಣ- । ವಿರುವನಲ್ಲಿಯೆ ವಿಪ್ರನೋರ್ವನು ಜನ್ಮಮಾತ್ರದಲಿ ॥
ದುರಿತವಾಚರಿಸುತ್ತ ಶೂದ್ರಾ । ಚರಣ ಮಾಡುತಲಿರ್ದ ವೇಶ್ಯಾ । ತರುಣಿತತ್ಪರನನ್ಯ ಸ್ತ್ರೀಯಾಸಕ್ತನಾಗಿರುವ ॥29॥

ಸ್ನಾನಸಂಧ್ಯಾದಿಗಳ ತ್ಯಜಿಸಿದ । ನೇನ ಹೇಳುವೆ ದುರ್ಗುಣಂಗಳ । ಹೀನ ವೇಶ್ಯಾಸ್ತ್ರೀಯ ಪಿಂಗಲೆಯೊಡನೆ ವಾಸಿಪನು ॥
ತಾನು ವೇಶ್ಯಾಸ್ತ್ರೀಯ ಮನೆಯಲಿ । ಸಾನುರಾಗದೊಳುಂಡು ಸುಖಿಸುವ- । ನೇನ ಹೇಳುವೆನಲ್ಲಿ ಬಂದನು ಋಷಭ ಮುನಿವರನು ॥30॥

ಮುನಿವರನನೀಕ್ಷಿಸುತಲಿಬ್ಬರು । ವಿನಯದಿಂದಲಿ ಚರಣ ಕೆರಗುತ । ಮನೆಗೆ ಕರೆತಂದಾದರವ ಮಾಡಿದರು ಭಕ್ತಿಯಲಿ ॥
ವಿನುತ ಚರಿತಂಗರ್ಘ್ಯಪಾದ್ಯಾ- । ರ್ಪಣವ ಮಾಡಿದರೇಕಭಾವದಿ । ವಿನಯದಿಂ ಹದಿನಾರು ಪರಿಯುಪಚಾರ ಮಾಡಿದರು ॥31॥

ಚರಣಯುಗಳವ ತೊಳೆದು ತೀರ್ಥವ । ನಿರದೆ ಗ್ರಹಣವ ಮಾಡುತಿಬ್ಬರು । ವರಮುನಿಗೆ ಪಕ್ವಾನ್ನ ಭೋಜನ ಬಡಿಸಿದರು ಮುದದಿ ॥
ತಿರುಗಿ ಹಸ್ತವತಳೆಯುತಾ ಮುನಿ- । ವರನ ಮಂಚಕದಲ್ಲಿ ಕೂಡ್ರಿಸಿ । ಕರದಿ ಪಾದವನೊತ್ತಿದರು ತಾವೇಕಭಾವದಲಿ ॥32॥

ತರಣಿಯುದಯದೊಳೆದ್ದು ಮುನಿವರ । ತೆರಳಿದನು ಮುಂದಕ್ಕೆ ಯೋಗೀ । ಶ್ವರನಿಗಾಯಿತು ಹರುಷ ಸೇವೆಯ ನೋಡಿ ಪಿಂಗಲೆಯಾ ॥
ಪರಿಯೋಳಾದಿನ ಹಲವು ಹೋಗಲು । ತರುಣ ಭೂಸುರ ಮುದುಕನಾದನು । ಮರಣವಾಯಿತು ಪಿಂಗಲೆಗೆ ವಿಪ್ರನಿಗೆ ಕೆಲದಿನದಿ ॥33॥

ಧರಣಿಯಲ್ಲಿ ದಶಾರ್ಣದೇಶದ । ದೊರೆಯು ಹೆಸರಿನ ವಜ್ರಬಾಹುವು । ತರುಣಿ ಯಾತನರಾಣಿ ಸುಮತಿಯು ಅವರ ಹೊಟ್ಟೆಯಲಿ ॥
ಧರಿಸಿದನು ಜನ್ಮವನು ತದ್ಭೂ- । ಸುರನು ನಿಜಕರ್ಮಾನುಸಾರದೊ । ಳರಸಗಾಯಿತು ಹರುಷ ತರುಣಿಗೆ ಗರ್ಭವಾಯ್ತೆನುತಾ ॥34॥

ಪೊಡವಿಯಲಿ ಕೇಳ್ಸವತಿ ಮತ್ಸರ । ಕಡು ವಿಷಾರಿಯು ಸುಡದೆ ಬಿಡದದು- । ಗುಡುಸಲಾದರದೇನು ರಾಜನ ಮಂದಿರವದೇನು ॥
ಬಿಡದು ಸರ್ವರ ಹಿಡಿದು ಕೆಡುವುದು । ಪೊಡವಿಯಧಿಪತಿ ಜ್ಯೇಷ್ಠ ರಾಣಿಯ । ಪಡೆಯೆ ಗರ್ಭವ ಸವತಿ ಯೆರಡನೆ ರಾಣಿ ಕಿಚ್ಚಿನಲಿ ॥35॥

ಉರಗರಾಜನ ವಿಷವ ತರಿಸುತ । ತರುಣಿಯಿತ್ತಳು ಕಪಟದಲಿ ತ । ನ್ನರಮನೆಯೊಳಾಜ್ಯೇಷ್ಠ ಪತ್ನಿಯು ಕುಡಿದಳರಿಯದಲೆ ॥
ಮರಣ ಬಾರದೆ ಸರ್ವದೇಹದಿ । ಗರಳದಿಂ ವ್ರಣವಾಗಿ ಪೂನೆ । ತ್ತರು ವಿಶೇಷದಿ ಸುರಿಯುವುದು ಸರ್ವಾಂಗದಲಿ ತಿಳಿಯೆ ॥36॥

ಕಷ್ಟವೀಪರಿ ಭೋಗಿಸುತ ಸಂ । ಕಷ್ಟದಿಂದ ಪ್ರಸೂತಿಯಾದಳು । ಹೊಟ್ಟೆಯಿಂದಾ ಬಿದ್ದ ಕೂಸಿಗೆ ವ್ರಣವು ಬಾಧಿಸಿತು ॥
ದೃಷ್ಟಿಸಿದನಾ ರಾಜ ತನ್ನಯ । ಪಟ್ಟದರಸಿಯು ಕೂಸು ಪಡುತಿಹ । ಕಷ್ಟಗಳ ನೋಡಿದನು ಉಪಚಾರಗಳ ಮಾಡಿದನು ॥37॥

ವಿಷವು ಸರ್ವಾಂಗದಲಿ ವ್ಯಾಪಿಸೆ । ಬಸವಳಿದನಾ ಭೂಪ ಕೂಸಿನ । ವಿಷದ ಬಾಧೆಯು ಶಾಂತವಾಗದು ಯೇನ ಮಾಡಿದರು ॥
ವಸುಮತೀಶನು ದೇಶದೇಶದಿ- । ನಸಮವೈದ್ಯರ ತಂದು ಹೇರಳ । ವಸುವ ಖರ್ಚಿಸಿ ಯತ್ನ ಮಾಡಲು ಯಶವು ಸಿಗದಾಯು ॥38॥

ಕೂಸು ತಾಯಿಗಳಿಬ್ಬರಾವ್ರಣ । ತ್ರಾಸದಿಂದಲಿ ನೆರಳುವರು ಸಾ- । ಯಾಸದಿಂದಲಿ ಹಗಲಿರುಳು ಕೇಳ್ ನಿದ್ರೆಬಾರದಲಾ ॥
ಕ್ಲೇಶವಾಯಿತು ದೇಹಕೆಲ್ಲವು । ಮೂಸಿ ನೋಡರು ಭೋಜನವನವ । ರಾಶೆ ತೊರೆದರು ಜೀವವವರಿಗೆ ಭಾರವಾಯಿತಲಾ ॥39॥

ಕ್ಷೀಣವಾಯಿತು ದೇಹವಿದನಾ । ಕ್ಷೋಣಿಪಾಲಕ ನೋಡಿಯೊಂದಿನ । ವೇನ ಮಾಡುವುದೆಂದು ಚಿಂತಿಸ ತೊಡಗಿದನು ಮನದಿ ॥
ಮಾನಿನಿಯು ಜೀವಂತ ಶವವಿದ- । ಕೇನುಪಾಯವ ಮಾಡಿದರೆ ಗುಣ- । ವೇನುಬರುವುದೆ ಪೂರ್ವಜನ್ಮಾರ್ಜಿತವು ದುರ್ಘಟವು ॥40॥

ಬನ್ನ ಬಡುತಿಹ ಸತಿಯ ಕೂಸನು । ಕಣ್ಣಿನಿಂದಲೆ ನೋಡಲಾರೆನ । ರಣ್ಯದಲಿ ಬಿಟ್ಟರೆ ಯೆಮಗೆ ಲೇಸಹುದು ನಿಜವಾಗಿ ॥
ತನ್ನ ಪ್ರಾರಬ್ಧವನು ಭೋಗಿಸ- । ಲನ್ಯರಿಗೆ ದುಃಸಾಧ್ಯ ತಾನೇ । ಯುಣ್ಣ ಬೇಕೈ ಬೇರುಪಾಯವ ಕಾಣೆನೀ ಜಗದಿ ॥41॥

ಭೂತಳಾಧಿಪನಿಂತು ಯೋಚಿಸಿ । ಸೂತಗೆಂದನು ಸುತಸುತರನೀ । ಭೀತಿಯಿಲ್ಲದ ಲೊಯ್ದು ಬಿಡುವುದು ಬೇಗದಲಿ ವನದಿ ॥
ಮಾತ ಹೇಳುವೆನಿವರನೀಗಲೆ । ಕೂತುಕೊಳ್ಳಿರಿ ರಥದಿ ನಿರ್ಜನ । ವಾತಪೋವನದಲ್ಲಿ ಬಿಡುತಲಿ ತಿರುಗಿ ಬರಬೇಕು ॥42॥

ಅರಸನಾಡಿದ ನುಡಿಯ ಕೇಳುತ । ಭರದಿ ಸೂತನು ರಥವ ತಂದನು । ಅರಸಿಯನು ಕೂಸನ್ನು ಕೂಡಿಸಿ ರಥದಿ ತೆರಳಿದನು ॥
ಪುರದ ನರನಾರಿಯರು ನೋಡಿದ- । ರರರೆ ರಾಜನು ಪಾಪಿ ತನ್ನಯ । ತರಳನನು ರಾಣಿಯನು ಬಿಡುವನು ದುಷ್ಟತನವಿದಲಾ ॥43॥

ಎಂದು ನಾನಾಪರಿಪ್ರಲಾಪವ । ನಂದು ಮಾಡಿದರೆಲ್ಲ ಜನಪದ । ಮುಂದೆ ನಡೆದನು ಸೂತ ರಾಜಾಜ್ಞೆಯನು ಮೀರುವನೆ ॥
ತಂದು ರಾಜ್ಞಿಯ ಸೂತನಾಗಲೆ । ಚಂದದಿಂ ನಿರ್ಜನಪ್ರದೇಶದೊ- । ಳಂದುಬಿಟ್ಟನು ಹಿಂದೆ ತೆರಳಿದನಾಗ ವಹಿಲದಲಿ ॥44॥

ಮರಳಿ ಬಂದೀವಾರ್ತೆಯನು ನೃಪ । ಗರುಹಿದನು ವಹಿಲದಲಿ ಸೂತನು । ಪರಮ ಸಂತಸವಾಯ್ತು ರಾಜನಿಗೇನ ಹೇಳುವನು ॥
ಅರಸು ಪೇಳ್ದನು ಸವತಿಗಾಕ್ಷಣ । ಹರುಷವಾಯಿತು ಸವತಿಗತಿಮ- । ತ್ಸರಪ್ರಭಾವವನೇನ ಬಲ್ಲನು ನೃಪತಿ ಹೆಂಡತಿಯಾ ॥45॥

ಕೂಸುತಾಯಿಗಳಿಬ್ಬರೀ ವನ । ದೇಶದಲಿ ತಾವಿದ್ದರವರ ವಿ । ಶೇಷದುಃಖವನೆಂತು ಬಣ್ಣಿಪೆ ಶಕ್ಯವೆನಗಿಲ್ಲಾ ॥
ಕ್ಲೇಶವಾಯಿತು ಬಹಳವವರಿಗೆ । ಲೇಶವಾದರು ಕಾಣರುದಕವ । ತ್ರಾಸವಾಯಿತು ಕಾಣರನ್ನವ ವನದೊಳೇನೆಂಬೆ ॥46॥

ಧಾರುಣಿಪನರ್ಧಾಂಗಿಯವಳ ಶ । ರೀರ ಕೊಮಲ ಮಲ್ಲಿಗೆಯ ಹೂ । ಸೇರಿಹುದು ವ್ರಣವೆಲ್ಲ ಮೈಯಲಿ ರಕ್ತ ಸುರಿಯುವುದು ॥
ನೀರು ಕುಡಿಯಲು ಸಿಕ್ಕದಲೆ ಸುಕು । ಮಾರನನು ತಾನೆತ್ತಿ ನಡೆದಳು । ಧಾರುಣಿಯ ಮೇಲಿಹುದು ಕಲುಮುಳ್ಳಧಿಕ ತರವಾಗಿ ॥47॥

ಹುಲಿಕರಡಿ ಸಿಂಹಾದಿಮೃಗಗಳು । ನಲಿಯುವವು ನಿರ್ಜನ ಪ್ರದೇಶದಿ । ಚಲಿಸುವವು ಸರ್ಪಾದಿಗಳು ಬೆದರಿದಳು ನೋಡುತಲೆ ॥
ತೊಲಗುವೆನು ಜೀವವನು ಸಾಕಿ । ನೆಲನ ಬಾಳುವೆಯೆಂದು ದುಃಖಿಸಿ । ಲಲನೆ ನಡೆದಳು ಕೂಸನೆತ್ತುತಲಳುತ ದುಃಖದಲಿ ॥48॥

ಬಿಟ್ಟ ಮಂಡೆಯ ಕೈಯ ಕೂಸಿನ । ಬಟ್ಟೆಯಲಿ ಮುಳ್ಳುಗಳು ಕಾಲಿಗೆ । ನಟ್ಟು ರಕ್ತಸ್ರಾವವಾಯ್ತಾ ದೀನಬಾಲಿಕೆಗೆ ॥
ದೃಷ್ಟಿಸುತ ವೇತಾಳರಾಕ್ಷಸ । ರಟ್ಟಹಾಸದಿ ಕುಣಿವ ಪರಿಯನು । ನಿಟ್ಟುಸುರ ಬಿಡುತವಳು ನಡೆದಳು ಕೂಸನೆತ್ತುತಲೆ ॥49॥

ನಡೆಯುತೀಪರಿ ಮುಂದೆ ನೋಡಿದ । ಳಡವಿಯಲಿ ದನ ಕಾಯ್ವ ಹುಡುಗರ । ನುಡಿದಳವರಿಗೆ ನೀರು ಕೊಡಿರೈ ಬಾಲರಿರ ನಮಗೆ ॥
ಕುಡಿಯುವರೆ ಜಲ ಸಿಗದೆ ಗಂಟಲು । ಸುಡುವುದೈ ತೃಷೆಯಿಂದಲೇನಲಾ । ಹುಡುಗರಾಡಿದರವಳಿಗಾಕ್ಷಣ ಕರುಣ ವಚನದಲಿ ॥50॥

ಮರುಗದಿರು ನೀ ತಾಯೆ ಮುಂದಕೆ । ಪುರವಿಹುದು ಸುಂದರ ಮನೋಹರ । ದೊರೆಯುವುದು ಕೇಳಲ್ಲಿ ನಿನಗಾಶ್ರಯವು ನಿಜವಾಗಿ ॥
ಅರುಹಿದರು ಗೋಪಾಲಕರು ನೃಪ । ವರನ ರಾಣಿಯನೊಯ್ದರಲ್ಲಿಗೆ । ಹರುಷವಾಯಿತು ನಾರಿಗಾಪಟ್ಟಣವ ನೋಡುತಲೆ ॥51॥

ಹರುಷದಿಂ ನರನಾರಿಯರು ಸಂ- । ಚರಿಸುವುದನೋಡಿದಳು ರಾಣಿಯು । ತರುಣಿ ಕೇಳಿದರಾರು ರಾಜ್ಯ ಕ್ಕೊಡೆಯನಿಹರಿಲ್ಲಿ ॥
ಹರುಷಭರಿತರು ಪ್ರಜೆಗಳೆಲ್ಲರು । ದೊರೆಯುವುದೆ ಯೆನಗಾಶ್ರಯವು ಕೇಳ್ । ತರುಣಿ ಯೆನಗೆಯನಾಥೆ ದೀನೆಗೆ ಯೆಂದಳಾರಾಣಿ ॥52॥

ಅರಸನೀರಾಜ್ಯ ಕ್ಕೆ ಪದ್ಮಾ । ಕರನು ಪುಣ್ಯಾತ್ಮನು ಪ್ರತಾಪಿಯು । ದೊರೆಯುವುದು ನಿನಗಾಶ್ರಯವು ನಿಜ ದೀನವತ್ಸಲನು ॥
ಅರುಹು ತೀಪರಿರಾಜದಾಸಿಯ- । ರಿರದೆ ರಾಣಿಯನೊಯ್ದು ರಾಕ್ಷಣ । ದೊರೆಯ ಮುಂದಕೆ ಪೇಳಿದರು ವೃತ್ತಾಂತವೆಲ್ಲವನು ॥53॥

ಜನಪನಾ ವೃತ್ತಾಂತ ಕೇಳುತ । ಕನಿಕರದೊಳಾ ರಾಣಿಗಿತ್ತನು । ಮನೆಯನೊಂದನು ಪರಿಪರಿಯ ವಸ್ತ್ರಾನ್ನಗಳ ಮುದದಿ ॥
ವನಿತೆ ಯಿಪರಿ ಕಾಲ ಕಳೆದಳು । ವ್ರಣವು ಗುಣವಾಗದಲೆ ವರ್ಧಿಸಿ । ದಿನದಿನಕೆ ತ್ರಾಸವನು ಕೊಡುವುದು ಕರ್ಮಫಲವಿದಲಾ ॥54॥

ಭಾರಿ ಪೀಡೆಯು ವರ್ಧಿಸಿತು ಸುಕು- । ಮಾರಗಾಯಿತು ನಿಧನ ನೋಡುತ । ಧಾರುಣಿಪನರ್ಧಾಂಗಿ ಮಾಡಿದಳೈ ಪ್ರಳಾಪವನು ॥
ಧಾರುಣಿಯೊಳಪ್ಪಳಿಸಿ ಬಿದ್ದಳು । ನಾರಿ ಮೂರ್ಛೆಯ ಹೋಗಿ ಕರ್ಮವಿ । ಚಾರದಲಿ ಮನ ತಲ್ಲಣಿಸಿತೈ ಯೇನ ಹೇಳುವೆನು ॥55॥

ಪರಿಪರಿಯೋಳಾ ಯುವತಿ ತನ್ನ ಕು- । ವರನ ಗುಣಗಣ ವರ್ಣಿಸುತ ಬಹು- । ತೆರದಿ ಮಾಡಿದಳೈ ಪ್ರಳಾಪವ ದುಃಖ ತಾಳದಲೆ ॥
ಅರಮನೆಯ ದಾಸಿಯರು ರಾಣಿಯ । ಪರಮ ದಾರುಣ ಶೋಕವನು ಪರಿ- । ಹರಿಸಲಿಕೆ ಯತ್ನಿಸಿದರಾಗಲೆ ಶೋಕವನಿವಾರಾ ॥56॥

ತಾತ ನಿನ್ನಯ ಸದ್ಗುಣಂಗಳ । ವ್ರಾತ ಮರೆಯುವೆನೆಂತು ಯೆನ್ನೊಳು । ಮಾತನಾಡದೆ ಕೋಪದಿಂ ಮಲಗಿರುವೆ ಭೂಮಿಯಲಿ ॥
ಭೂತಳಾಧಿಪವಂಶದಲಿ ಸಂ । ಜಾತಜನ್ಮನು ನೀ ನದಿಲ್ಲಿಯ । ನಾಥ ನಂದದಿ ನೆಲದಿ ಮಲಗಿದೆ ಮಾತನಾಡದಲೆ ॥57॥

ಎನ್ನ ಪರಮಾನಂದಶರಧಿಗೆ । ನಿನ್ನ ವದನವೆ ಪೂರ್ಣಚಂದ್ರನು । ಎನ್ನೊಳೇತಕೆ ಕೋಪತಾಳಿದೆ ಪೇಳು ಸುಕುಮಾರಾ ॥
ಎನ್ನ ಸಾಕುವೆ ಯೆಂಬ ಭರವಸೆ । ಯನ್ನು ಧರಿಸಿದೆ ನೀನೆ ತೊರೆದರೆ । ಯನ್ನ ರಕ್ಷಿಪರಾರು ಮುಂದಕೆ ಚನ್ನ ಸುತರಾಯಾ ॥58॥

ನಿನ್ನ ಬಿಟ್ಟರೆ ಗಳಿಗೆಯಾದರು । ಯನ್ನ ಪ್ರಾಣವು ನಿಲ್ಲಲಾರದು । ಯೆನ್ನುತೀಪರಿ ಶೋಕವನು ಮಾಡಿದಳು ನೃಪನರಸಿ ॥
ಬನ್ನ ಬಡುತೀ ಪರಿಯ ದುಃಖಾ । ಪನ್ನಳನು ನೋಡುತಲಿ ಯರಮನೆ । ಖಿನ್ನ ವಾಯಿತು ದುಃಖದಲಿ ಮುಳುಗಿದರು ದಾಸಿಯರು ॥59॥

ಅರಮನೆಯ ನರನಾರಿಯರು ಬಹು । ಪರಿಯಸಾಂತ್ವನ ಮಾಡ ತೊಡಗಿದ । ರರರೆ ತಾಯಿಯ ಪುತ್ರಶೋಕವು ಶಾಂತವಾಗದಲಾ ॥
ಧರೆಯೊಳಿರುವುದು ಪುತ್ರಶೋಕವು । ಪರಮವಹ್ನಿಯು ಸುಡದೆ ಬಿಡುವುದೆ । ಮೆರೆವುದೈ ಮಿಗಿಲಾಗಿ ನಿರುಪಮ ಏಹುದು ಸುತದುಃಖ ॥60॥

ಹಿಂದಿನುಪಕಾರವನು ಸ್ಮರಿಸುತ । ಬಂದನಲ್ಲಿಗೆ ವೃಷಭ ಮುನಿವರ । ವಂದಿಸಿದಳಾ ತನನು ರಾಣಿಯು ಭಾವಭಕುತಿಯಲಿ ॥
ಚಂದದಿಂದರ್ಘ್ಯಾದಿಗಳ ಋಷಿ- । ಗೊಂದೆ ಮನದಲಿ ಕೊಟ್ಟು ಕೂಡಿಸ । ಲಂದು ಋಷಿಯಾ ಕೆಯನು ನುಡಿಸಿದ ಪ್ರೇಮಭಾವದಲಿ ॥61॥

ಸುದತಿ ಕೇಳೌ ನೀನು ಯಾಕೀ । ರುದನ ಮಾಡು ವಿಯಾಯಿತೇನದು । ಹದನ ಪೇಳಿದನೆಲ್ಲ ವೈಶ್ಯರ ರಾಜನಾಕ್ಷಣದಿ ॥
ಮುದದೊಳೀ ವೃತ್ತಾಂತ ಕೇಳುತ । ಸಮಯದಂತಃಕರಣಪೂರ್ವಕ । ಸುದತಿಗತಿ ಪ್ರೀತಿಯಲಿ ತತ್ವವ ಪೇಳ ತೊಡಗಿದನು ॥62॥

ಮೂಢತನದಲಿ ಸುದತಿ ದುಃಖವ । ಮಾಡುತಿರುವಿದ ಕೇನು ಹೇಳಲಿ । ರೂಢಿಯಲಿ ಹುಟ್ಟಿದರು ಸತ್ತವರಾರು ಪೇಳೆನಗೆ ॥
ನೋಡಲೀ ನರದೇಹ ಜಗದಲಿ । ಮೂಡುತಿಹು ಬುದ್ಬುದದ ಪರಿಯಲಿ । ನೋಡುವದರೊಳಗಡಗುವುದು ಶಾಶ್ವತವೆ ನರದೇಹಾ ॥63॥

ಐದುಭೂತಗಳೊಂದು ಕೂಡಲು । ಮೋದದಿಂದಾಗುವುದು ನರತನು । ಮೈದುಭೂತಗಳಡಗಿ ಹೋಗಲು ನಿಧನವೆನ್ನುವರು ॥
ಸಾಧಿ ಸುವನಾಕಾಲ ಗೊಂಜೆಗ । ಳಾದವೈ ಮಾನವರು ಕುಣಿವರು । ಚೋದ್ಯದಾಟವು ಸೂತ್ರಧಾರನ ತೆರದಿ ನಾಟಕದಿ ॥64॥

ತಾನು ಮಾಡಿದ ಪಾಪಕರ್ಮ ಫ । ಲಾನುಸಾರವು ವಾಸನಾಗುಣ । ಕ್ಷೋಣಿಯಲಿ ಮಯಾನುವೇಷ್ಟನರೆಲ್ಲ ನೋಡಿದರೆ ॥
ಏನು ದೇಹ ಸ್ವತಂತ್ರವಾರಿಗೆ । ಮಾನಿಸೌ ಕ್ಷಣಭಂಗುರದ ತನು । ಮಾನವರ ಬಾಳ್ವಿಕೆಯು ಮೂರೇ ದಿವಸವೀಜಗದಿ ॥65॥

ಹುಟ್ಟುವುದು ಮಾಯೆಯಲಿ ಮಾಯೆಯು । ಸೃಷ್ಟಿ ಗುಣಧರ್ಮಗಳ ಪೇಳುವೆ । ಹುಟ್ಟುವರು ಸಾತ್ವಿಕಗುಣದೊಳಾ ದೇವಗುಣವೆಲ್ಲ ॥
ಕೆಟ್ಟು ತಾಮಸದಲ್ಲಿ ದೈತ್ಯರು । ಹುಟ್ಟುವರು ರಜದಲ್ಲಿ ಮನುಜರು । ಇಷ್ಟ ಗುಣದಂದದಲಿ ಪಿಂಡಾಭಾಸವಾಗುವುದು ॥66॥

ತಾನು ಮಾಡಿದ ಪಾಪಕರ್ಮ ಫ- । ಲಾನುಸಾರದಿ ಜನ್ಮ ದೊರೆವುದು । ಮೇಣು ಸುಖದುಃಖಂಗಳಾಯುರ್ದಾಯವೀತೆರದಿ ॥
ಮಾನವರ ಪಾಡೇನು ಜೀವದ । ಮಾನಕಲ್ಪದ ಸುರವರರು ತಾ । ನೇನು ಸಾಯದೆ ಬದುಕುವರೆ ನಿಜವಾಗಿ ನೋಡಿದರೆ ॥67॥

ಸ್ಥಿರವಿದಾರಿಗೆ ದೇಹ ಪೇಳೌ । ಹರುಷ ತಾಳದೆ ಜನನದಲ್ಲಿಯೆ । ಮರುಗ ಬಾರದು ಮರಣದಲ್ಲಿಯೇ ಜ್ಞಾನಿಗಳು ತಿಳಿಯೆ ॥
ಬರಲು ಗರ್ಭದೊಳವನಿಗೊಂದಿನ । ಮರಣವದು ನಿಶ್ಚಯವಿದೆಂಬುದ । ನರಿತವರೆ ಕಡು ಜಾಣರಲ್ಲವೆ ತತ್ವ ನೋಡಿದರೆ ॥68॥

ಕರ್ಮ ಪೂರ್ವಾರ್ಜಿತವು ನೋಡಲು । ಧರ್ಮ ಸಂಭವಿಸುವುದು ಕರ್ಮದ । ಧರ್ಮದಿಂದಲೆ ತಿಳಿಯರಿದನೀ ಮೂಢಪಾಮರರು ॥
ನಮ್ಮವರುತಾಯ್ತಂದೆಗಳುಯೆನು । ತೊಮ್ಮ ಮಾಯಾಬಲೆಗೆಸಿಲುಕಲು । ಮರ್ಮವರಿಯರು ಬಳಲುವರು ಬಹುಜನುಮಜನುಮದಲಿ ॥69॥

ಬರೆದಿಹನು ವಿಧಿ ಲಿಪಿಯ ಹಣೆಯಲಿ । ಪರಿಹರಿಪನಿದನಾರು ಧರೆಯಲಿ । ನರನು ಕಾಲನ ಕರ್ಮಫಲವನು ಮೀರಲಾರನಲಾ ॥
ಮರುಳೆ ನೀನಶ್ವರದ ದೇಹದ । ಭರವಸೆಯ ಹಿಡಿದಂತೆ ತೋರ್ಪುದು । ಪರಿಹರಿಸು ದುಃಖವನು ನಿನ್ನಯ ಕರ್ಮ ಫಲವೇನು ॥70॥

ಜನನಿ ಯಾರಿಗೆ ಭಗಿನಿ ಯಾರಿಗೆ । ಜನುಮಜನುಮಾಂತರದಿ ಜನಿಸಿದೆ । ಮನದಿ ಸುಮ್ಮನೆ ಶೋಕವನು ಮಾಡುವೆ ವೃಥಾ ಮರುಗಿ ॥
ನಿನಗೆ ಮಂಗಲದಿಚ್ಛೆ ಯಿರಲಾ । ಮನುಮಥಾರಿಯ ಶರಣು ಹೋಗೌ । ಮನದಭೀಷ್ಟವ ಸಿದ್ಧಿಪನು ಕೇಳೆಂದನಾ ಮುನಿಯು ॥71॥

ಮುನಿಪನಾಡಿದ ನುಡಿಯ ಕೇಳುತ । ವನಿತೆ ಪೇಳ್ದಳು ಚರಣಕೆರಗುತ । ತನಯನೋರ್ವನೆ ಮಡಿದನಲ್ಲೈ ಕಣ್ಣ ಮುಂದೆಯಲೆ ॥
ಎನಗೆ ರಾಜ್ಯಭ್ರಷ್ಟವಾಯಿತು । ತನಯನೊಬ್ಬನ ಕೊಂಡು ನಾನೀ । ವನಕೆ ಬಂದೆನು ತಂದೆತಾಯ್ಗಳ ಮರೆತೆನೀ ವನದಿ ॥72॥

ತರುಣನಾಗಲು ಪುತ್ರನೆನಗಾ- । ದರಿಸುವನು ರಕ್ಷಿಸುವನೆಂಬುವ । ಭರವಸೆಯೊಳಾನಿದ್ದೆ ಪುತ್ರನು ಬಿಟ್ಟು ಪೋದನಲಾ ॥
ಧರೆಯೊಳೆನಗಿನ್ನೇಕೆ ಬಾಳ್ವಿಕೆ । ಮರಣ ಬಂದರೆ ಲೇಸೆನುತಲಾ । ಚರಣಕೆರಗುತ ಬಿನ್ನವಿಸಿದಳು ತರುಣಿ ಮುನಿವರಗೆ ॥73॥

ತರುಣಿಯಾಡಿದ ನುಡಿಯ ಕೇಳುತ । ಕರುಣೆ ಪುಟ್ಟಿತು ಋಷಭಯೋಗಿಗೆ । ಸ್ಮರಿಸಿ ಹಿಂದಿನ ಜನುಮದಲಿ ಮಾಡಿರ್ದ ಸೇವೆಯನು ॥
ಭರದಿ ಭಸ್ಮವ ಮಂತ್ರಿಸುತ ಮುನಿ- । ವರನು ಪ್ರೇತಕಪಾಲಕಿಟ್ಟನು । ಮರಳಿ ಬಾಯೊಳು ಭಸ್ಮಹಾ ಕಲು ಬಾಲನೆದ್ದನಲಾ ॥74॥

ಬಾಲನಂಗ ಸುವರ್ಣವಾಯಿತು । ಬೀಳು ಕೊಟ್ಟಿತು ಕುಷ್ಟವ್ಯೆ ತಾ । ತ್ಕಾಲಕಾಯಿತು ಮಾತೆಯಂಗವು ಚಿನ್ನ ದಂದದಲಿ ॥
ಕಾಲಿಗೆರಗಿದಳಾಗ ಮುನಿಗಾ । ಬಾಲನನು ಚರಣದಲಿ ಹಾಕಿದ । ಆಲಿಸೈ ಭೂಪಾಲ ಯೆಂದನು ಯತಿಯು ರಾಜನಿಗೆ ॥75॥

ವರವನಿತ್ತನು ಮೆಚ್ಚಿ ಯೋಗೀ- । ಶ್ವರನು ರಾಣಿಗೆ ಪ್ರೇಮದಿಂದಲಿ । ಜರೆಯು ತಟ್ಟದು ನಿಮಗೆ ತಾರುಣ್ಯವನು ಭೋಗಿಸುತಾ ॥
ಮೆರೆವ ನಿನ್ನಯ ಸುತ ಶತಾಯುಷಿ । ಧರಣಿಯಲಿ ಸತ್ಕೀರ್ತಿ ಪಡೆವನು । ಧರಣಿಯಾಳ್ವನು ಪಿತನಿಗಿಮ್ಮಡಿಯಾಗಿ ಲೌಕಿಕದಿ ॥76॥

ಇಂತು ವರವನ್ನಿತ್ತು ಮುನಿವರ । ಮುಂತೆರಳಿದನು ತನ್ನ ಯಾಶ್ರಮ । ಕಿಂತು ಮಹಿಮೆಯು ಸುತ್ಪುರುಷರದ ದೆಂದನಾ ಯತಿಯು ॥
ಶಾಂತಚಿತ್ತದಿ ಸತ್ಪುರುಷರಿಗ- । ನಂತಸೇವೆಯ ಮಾಡೆ ಕುರುವಿಗೆ । ಬಂತೆನುತ ತಿಳಿ ಗುಣವು ದರ್ಶನ ಮಾತ್ರದಲಿ ನೋಡೆ ॥77॥

ಕ್ಷಿತಿಯೊಡಯನಾ ಕ್ಷಣವೆ ನುಡಿದನು । ಯತಿವರನೆ ಪೇಳೆನಗೆ ಪಾವನ । ಸತಪುರುಷನಾಸ್ಥಾನ ಪೋಗುವೆನಲ್ಲಿ ಬೇಗದಲಿ ॥
ಯತಿಯೆ ನೀ ಪೇಳ್ದಂತೆ ಸ್ಫೋಟಕ । ದತುಳ ಬೇನೆಯು ಬಿಟ್ಟು ಪೋಗುವು । ದತುಳಮಹಿಮೆಯ ಸಾಧುದರ್ಶನವೆಂದನಾ ನೃಪನು ॥78॥

ಪೊಡವಿಯಧಿಪನ ನುಡಿಯ ಕೇಳುತ । ನುಡಿದನಾಯತಿವರನು ಕೇಳೈ । ಪೊಡವಿಯಲಿ ಭೀಮಾನದೀತೀರದಲಿ ಪುರವಿಹುದು ॥
ಒಡೆಯ ಶ್ರೀಗುರು ವಾಸವಾಗಿಹ । ಮೃಡನು ನರರೂಪದಲಿ ಬಂದಿಹ । ಸಡಗರದಿ ಪಾಲಿಪನು ಭಕ್ತರ ಗುರು ನೃಸಿಂಹಮುನಿ ॥79॥

ಗಾಣಗಾಪುರವೆಂಬ ಪೆಸರಿಹು । ದಾನೃಸಿಂಹಸರಸ್ವತಿಯ ಪದ । ವೇನ ಹೇಳುವೆ ದುರ್ಲಭವು ಸುರವರರಿಗೀಜಗದಿ ॥
ನೀನು ಹೋಗೈಯಲ್ಲಿ ಗುರುವನು । ಸಾನುರಾಗದಿ ಪೂಜಿಸಲು ಕುರು । ಹಾನಿಯಾಗುವುದೇನಸಾಧ್ಯವು ಗುರುವಿಗೀಜಗದಿ ॥80॥

ಬಂದನೊಂದೇಭಾವದಲಿ ಗುರು । ಸಂದರುಶನಕೆ ಯವನರಾಜನು । ಬಂದು ಕೇಳಿದನವನು ಮಠದಲಿ ಗಾಣಗಾಪುರದಿ ॥
ಮಂದಿ ಪೇಳಲು ನರನ ರೂಪದೊ- । ಳಿಂದುಧರನೈ ತಂದನೆನುತಲಿ । ಚಂದದಿಂದವನೆಲ್ಲಿಹನು ಪೇಳೆಂದು ಬಿಸುಸುಯ್ದಾ ॥81॥

ಭೀತರಾದರು ಕೆಲರು ಯವನ । ವ್ರಾತಕಿಹನಿವ ರಾಜ ಗುರುವಿಂ- । ಗೇತಕಿವ ಕೇಳುವನೊ ಹೇಳಲು ಬಾರದೀತನಿಗೆ ॥
ಈ ತೆರದೊಳಾ ಮನಸಿನಲಿ ಬಹು । ಭೀತಿಯಿಂದಲೆ ನುಡಿಯದಿರೆ ಮೇ । ಣಾತನೆಂದನು ಬಂದನೈ ಗುರುದರುಶನಕ್ಕೆನುತಾ ॥82॥

ನೋಡಿ ಯವನಾಧಿಪನ ಭಾವವ । ಗೂಢವಿಡದಲೆ ಹೇಳಿದರು ಕೇಳ್ । ರೂಢಿ ಪತಿಯೇ ಸ್ವಾಮಿ ಹೋಗಿಹ ಸಂಗಮದ ಕಡೆಗೆ ॥
ಮಾಡಿ ನಿತ್ಯಾಹ್ನಿ ಕವನಲ್ಲಿಸ । ಗಾಢದಿಂದಲಿ ತಿರುಗಿ ಬರುವನು । ಬೇಡ ಸಂಶಯ ಮಠಕೆ ಮಧ್ಯಾಹ್ನದಲಿ ಬರುತಿಹನು ॥83॥

ನುಡಿಯ ಕೇಳುತ ಮ್ಲೇಂಛರಾಜನು । ನಡೆದನಾ ಸಂಗಮಗೆ ಸರ್ವರ । ಬಿಡುತ ತಾನೇ ನಡೆದನಾಂದೋಲಿಕೆಯೊಳಗೆ ಕುಳಿತು ॥
ಪೊಡವಿ ಪತಿ ದೂರದಲಿ ಗುರುವರ । ನಡಿಗಳನು ನೋಡುತಲೆ ಕೆಳಗಿಳಿ । ದಡಿಗಡಿಗೆ ಕಾಲ್ನಡೆಯಲವ ಬಂದನು ಸಮೀಪದಲಿ ॥84॥

ಗುರುಚರಣಸಾನಿಧ್ಯದಲಿಯಾ । ಧರಣಿಪತಿ ಯವನಾಧಿಪನು ಗುರು- । ಚರಣ ಕಭಿವಂದಿಸುತ ಕೈಗಳ ಜೋಡಿಸುತ ಮುದದಿ ॥
ಗುರುವು ಕರುಣಾದೃಷ್ಟಿಯಿಂದಲೆ । ಧರಣಿಯಧಿಪನ ನೋಡಿ ಕೇಳ್ದನು । ಅರರೆ ನೀನೆಲ್ಲಿರುವೆ ರಜಕನೆ ಬಂದೆ ಯೆಲ್ಲಿಂದಾ ॥85॥

ದಾಸನೆನಿಸುವೆ ಯೆನ್ನ ಚರಣದ । ಈಸು ದಿನ ಪರಿಯಂತಯೆನಗು । ಲ್ಲಾಸದಿಂದಲಿ ಭೇಟಿಯಾಗದ ಕಾರಣವದೇನು ॥
ಈಸು ನುಡಿಯನು ಕೇಳುತಲೆ ಧರ- । ಣೀಶ ಯವನಿಗೆ ಜ್ಞಾನವಾಯಿತು । ತೋಷದಿಂದಲಿ ದಂಡದಾಕಾರದಲಿ ನಮಿಸಿದನು ॥86॥

ಸ್ಮರಣವಾಯಿತು ಪೂರ್ವಜನ್ಮದ । ಹರುಷಬಾಷ್ಪದ ಮಳೆಯು ಸುರಿಯಿತು । ಧರಣಿಯಲಿ ಪಾದುಕದ ಮೇಲುರುಳಾಡಿದನು ಮುದದಿ ॥
ಹರುಷದಿಂ ಸದ್ಗದಿತವಂತಃ । ಕರಣವಾಯಿತು ರುದನ ಮಾಡಿದ । ನರರೆ ತಾಯಿಯ ನೋಡುತಳುತಿಹ ಕೂಸಿನಂದದಲಿ ॥87॥

ಕರಗಳನು ಜೋಡಿಸುತ ಯವನೇ । ಶ್ವರನು ಸ್ತುತಿಸಲು ತೊಡಗಿದನು ಗುರು । ವರನೆ ಯೆನ್ನನು ಪೇಕ್ಷಿಸುವ ಕಾರಣವ ಪೇಳೆನಗೆ ॥
ಆಚರಣಯುಗಳವಿಯೋಗದಿಂದಲೆ । ಧರಣಿಯಲಿ ಪರದೇಶಿಯಾದೆನು । ಶರದಿಯಲಿ ಮುಳುಗಿಹೆನು ಮದದಿಂ ತುಳುಕುತಿಹೆ ನಾನು ॥88॥

ಗುರುವೆ ನಿನ್ನಯ ಚರಣ ಕಾಣದೆ । ಕುರುಡನಾದೆನು ನಾನು ಸಂಸೃತಿ- । ಶರಧಿಯಲಿ ಮಾಯಾಬಲೆಯೊಳಾ ಸಿಲುಕಿದೆನು ನಿಜವು ॥
ಮರೆತೆನಲ್ಲಾ ನಿನ್ನ ಸೇವೆಯ । ದುರುಳ ದುರ್ಮತಿ ಪಾಪಿ ಪಾಮರ । ನಿರಲು ನೀ ಹತ್ತಿರದಿ ನಿನ್ನನು ಕಾಣೆನಾದೆನಲಾ ॥89॥

ತರಣಿ ಕಿರಣವ ಕಣಲಾರದೆ । ನೆರಳುತಿಹೆ ಮಧ್ಯಾಹ್ನ ಕಾಲದೊ- । ಳುರುತರದ ಕತ್ತಲೆಯು ಗೂಬೆಗೆ ಮಂದಭಾಗ್ಯನಿಗೆ ॥
ಪರಿಯಿದಾಯ್ತೆನಗೀಗ ತಮದಾ । ವರಣದಿಂದ ದಿವಾಂಧನಾದೆನು । ಶರಣವತ್ಸಲ ನಿತ್ಯ ನಿರ್ಮಲ ಕಾಯೊ ನೀ ಯೆನ್ನಾ ॥90॥

ಎನಗೆ ಮನನಿರ್ಧಾರವಿತ್ತೈ । ಎನಗೆ ಶರಣಗೆ ನೀನು ಪೇಕ್ಷಿಸ- । ದನವರತ ದಯೆಯಿಂದ ಕಾಯುವೆ ಯೆಂಬ ನಿಶ್ಚಯವು ॥
ಎನಗೆ ನೀನಜ್ಞಾನವೆಂಬುವ- । ವನಧಿಯಲಿ ಯೇತಕ್ಕೆ ಹಾರಿದೆ । ನಿನಗೆ ಬಾರದೆ ಕರುಣೆ ಭಕ್ತಾಧೀನ ನೀನಾಗಿ ॥91॥

ಗುರುವೆ ನಿನ್ನಯ ಚರಣಸೇವೆಯ । ನಿರತ ಮಾಡುತ ಚರಣರಜವನು । ಶಿರದೊಳಿಡುತ ಪವಿತ್ರನಾಗುವೆ ಬೇರೆ ಮನವಿಲ್ಲಾ ॥
ಧರಣಿಯೊಳು ಸಾಮ್ರಾಜ್ಯ ಸಾಕಿದು । ಮರುಳನಾದೆನು ನಿನ್ನ ಸೇವೆಯ । ಮರೆತು ಸುಖಸಾಮ್ರಾಜ್ಯ ದೊರೆತರು ತುಚ್ಛವದು ತಿಳಿಯೆ ॥92॥

ಇಂತು ನಾನಾಪರಿಯೊಳಾಭೂ- । ಕಾಂತ ಸ್ತುತಿಸಲು ಶ್ರೀಗುರುವು ಬಹು । ಸಂತಸದೊಳಾಶೀರ್ವಚನವನು ಕೊಟ್ಟನಾತನಿಗೆ ॥
ಇಂತು ವಚನವ ಕೇಳುತಾಭೂ । ಕಾಂತನೆಂದನು ತೊಡೆಯ ಮೇಲಕೆ । ಬಂತು ಸ್ಫೋಟಕ ಬಹಳ ವೇದನೆಯದುವೆ ಕೊಡುತಿಹುದು ॥93॥

ನಸುನಗುತ ಗುರು ನುಡಿದನಾಕ್ಷಣ । ಪುಸಿಯ ಪೇಳುವಿ ತೊಡೆಯ ಮೇಲಿನ । ವಿಷಯಸ್ಫೋಟಕವೆಲ್ಲಿ ಕಾಣೆನು ನೋಡು ನೋಡೀಗಾ ॥
ಉಸುರಲಾಕ್ಷಣ ಗುರುವು ಮ್ಲೇಂಛರ । ವಸುಮತೀಶನು ನೋಡಿದಾಕ್ಷಣ । ಕಸರ ತೊಡೆಯಲ್ಲಿ ಕಾಣದಾದನು ಚೋದ್ಯವೇನೆಂಬೆ ॥94॥

ಮನದಿ ವಿಸ್ಮಯ ತಾಳಿ ಯವನನು । ಪುನಹ ಗುರುಚರಣಕ್ಕೆ ವಂದಿಸಿ । ವಿನಯಪರಭಕ್ತಿಯಲಿ ಸ್ತುತಿಸಿದನೇಕ ಭಾವದಲಿ ॥
ವಿನುತ ನಿನ್ನಯ ಚರಣ ಕೃಪೆಯಿಂ । ದೆನಗೆ ಸುಖಸಾಮ್ರಾಜ್ಯವಾಯಿತು । ಯೆನಗೆ ದೊರೆಯಿತು ಪುತ್ರಪೌತ್ರರಲಾಭ ನಿಜವಾಗಿ ॥95॥

ಎನಗ ದಷ್ಟೈಶ್ವರ್ಯ ಭೋಗವ । ದೆಣಿಕೆಯಿಲ್ಲದೆ ಸೌಖ್ಯ ದೊರೆಯಿತು । ಮನದೊಳೆನಗೊಂದಾಶೆ ಯಿರುವುದು ಪೂರಯಿಸು ನೀನು ॥
ನಿನಗಿದೆಲ್ಲವ ತೋರಿಸುವೆನ- । ರ್ಪಣೆಯ ಮಾಡುವೆ ನಿನ್ನ ಚರಣಕೆ । ಮನದ ಭೀಷ್ಟವ ಕೊಡುವೆ ಶ್ರೀಗುರುವೆಂದು ನಂಬಿಹೆನು ॥96॥

ನಿನ್ನ ಪಾವನ ಚರಣರಜದಲಿ । ಎನ್ನ ನಗರ ಪವಿತ್ರ ಮಾಳ್ಪುದು । ಪುಣ್ಯ ಪಾವನ ನಿನ್ನ ಚರಣದಿ ಲೀನನಾಗುವೆನು ॥
ಎನ್ನುತೀಪರಿ ಭೂಪ ನುಡಿಯಲು । ಸನ್ನುತಾನನ ಗುರುವು ನುಡಿದನು । ಎನ್ನ ಗಮನವಿದೇಕೆ ನಿನ್ನಯ ರಾಜಪಟ್ಟಣಕೆ ॥97॥

ಅರಸ ಕೇಳೈ ನಿನ್ನ ರಾಜ್ಯದಿ । ದುರಿತವಿಹುದೈ ಹಿಂಸೆಯಲಿ ತ । ತ್ಪರರು ಗೋಹತ್ಯವನು ಮಾಳ್ಪರು ಜಾತಿಬಂಧುಗಳು ॥
ಇರುವೆ ನಾನು ತಪಸ್ವಿ ತಾಪಸಿ । ಹರಿಯದೈ ಬಗೆ ಯೆಮಗೆ ನಿನ್ನಯ । ಪುರದೊಳೆ ನಲಂಗೀಕರಿಸಿದನ ಹಿಂಸೆಯನು ನೃಪನು ॥98॥

ಪದಯುಗಳಕಭಿವಂದಿಸಿದನೈ । ಮುದದಿ ಯುವನೇಶ್ವರನು ಪೇಳಿದ । ವಿದಿತವಾಯಿತು ಪೂರ್ವಜನ್ಮದ ಕಥೆಯು ನಿಜವಾಗಿ ॥
ಹದನವರಿತೆನು ಗುರುವೆ ನಿನ್ನಯ । ಪದದ ಸೇವಕ ನಿದ್ದೆ ರಾಜ್ಯದ । ಪದವು ನಿನ್ನಯ ವರ ಪ್ರಸಾದವು ರಜಕ ನಾನಿದ್ದೆ ॥99॥

ಚರಣ ದರ್ಶನವಾಗಲಾಕ್ಷಣ । ಸ್ಮರಣೆಯಾಯಿತು ಪೂರ್ವಜನ್ಮವು । ದೊರೆಯಿತೈ ಸಾಮ್ರಾಜ್ಯಲಕ್ಷ್ಮಿಯು ನಿನ್ನ ದಯೆಯಿಂದಾ ॥
ಕೊರತೆಯೊಂದೇ ಮ್ಲೇಂಛಜಾತಿಯು ।ಗುರುವೆ ನಿನ್ನಯ ವರದ ಮಹಿಮೆಯು । ಗುರುವು ದೃಷ್ಟಿಸಿ ನೋಡಿದರೆ ನಾ ಧನ್ಯನಾದೆನಲಾ
॥100॥

ಎನುತ ನಾನಾಪರಿಯೊಳಾಗುರು । ವನು ಯವನನೃಪ ಬಿನ್ನವಿಸಿದನು । ಮನದಿ ಯೋಚಿಸಿದನು ಕಣಾ ಗುರುವನ್ಯ ರೀತಿಯಲಿ ॥
ಎನಗೆ ಗೌತಮಿತೀರ್ಥವನುಸಾ । ಧನೆಯ ಮಾಡುವುದುಂಟುಸುರಗುರು । ಮಿನುಗುವನು ಸಿಂಹದಲಿಯವತಾರವನು ಮುಗಿಸುವೆನು ॥101॥

ಗುರುನೃಸಿಂಹಸರಸ್ವತಿಯ ದೀ । ತೆರೆದಿ ಯೋಚಿಸಿ ತೆರಳಿದನು ನೃಪ । ವರನು ಗುರುಪಾದುಕೆಯ ತಲೆಯಲ್ಲಿಟ್ಟು ತೆರಳಿದನು ॥
ಗುರುವ ಪೇಳ್ದನು ಯವನರಾಜಗೆ । ಸರಿಯೆ ನಿನಗಿದು ಹೀನಕರ್ಮವು । ತೆರಳು ಪಲ್ಲಕ್ಕಿಯಲಿ ನಗುವರು ಜಾತಿಬಾಂಧವರು ॥102॥

ಭೂಸುರರ ಸೇವಿಸಲು ನಿನಗುಪ । ಹಾಸಮಾಳ್ಪರು ಮ್ಲೇಂಛರೆಲ್ಲರು । ಯೀಸು ಪರಿಯಲಿ ಪಾದುಕೆಯ ತಲೆಯಲ್ಲಿ ಧರಿಸಿದರೆ ॥
ನಾಶವಪ್ಪುದು ನಿನ್ನ ಲೌಕಿಕ । ದೂಷಿಪರು ನಿನ್ನಯ ಪುರೋಹಿತ । ರೀಸು ಪರಿ ವ್ಯವಹಾರ ಲಂಘಿಪುದನುಚಿತವು ನೋಡೆ ॥103॥

ಅರಸ ನಗುತಿಂತೆಂದನಾ ಕ್ಷಣ । ಗುರುವೆ ನಿನ್ನಯ ಪಾದರಜದೊಳ- । ಗಿರುವರೈ ನೂರಾರು ರಾಜರು ನಾನು ಧರಣಿಪನೆ ? ॥
ದೊರೆಯಿತೆನಗೀ ರಾಜಪದವಿಯು । ಗುರುವೆ ನಿನ್ನಯ ಕೃಪೆಯ ಫಲದಿಂ । ಧರೆಗೆ ರಾಜನು ಗುರುಚರಣದಲಿ ದೀನ ರಜಕನಲಾ ॥104॥

ಗುರುವರನೆ ತವ ಚರಣ ದರುಶನ । ಪರಮ ಪಾವನ ಪುಣ್ಯ ಸಾಧನ । ದೊರೆದವೆನಗಿಂದಿನಲಿ ಜನ್ಮದ ಕಾಮಿತಗಳೆಲ್ಲಾ ॥
ಅರಸನೀ ಸರಿ ಮಾತನಾಡಲು । ತುರಗರಥಕಾಲ್ದಳಗಳೆಲ್ಲರು । ಬರುತ ರಾಜಗೆ ವಂದಿಸಿದರಾದರದ ಭಾವದಲಿ ॥105॥

ಕರಿತುರಗಪಾಯ್ದಳಗಳೆಲ್ಲವ । ಹರುಷದಿಂ ತೋರಿಸಿದನಾ ಗುರು । ವರಗೆ ಸಕಲೈಶ್ವರ್ಯವನು ಯವನೇಶನೇನೆಂಬೆ ॥
ಗುರುವು ಪೇಳಿದನಾಗ ಯವನಗೆ । ಕರಿಯ ಮೇಲಾರೋಹಣವ ನೀ । ಭರದಿ ಮಾಡೈ ನಗರವಿಹುದೈ ದೂರದೇಶದಲಿ ॥106॥

ಗುರುಚರಣದರ್ಶನವದಾಯಿತು । ಪರಮಧನ್ಯನು ತಾನೆನುತ ನೃಪ- । ವರನು ಹಿಗ್ಗುತ ಮನದಿ ನಡೆದನು ಮಾರ್ಗದಲಿ ಮುದದಿ ॥
ತುರಗರಥಗಳ ಮೇಲೆ ತಾ ಕು- । ಳ್ಳಿರಿಸಿದನು ಶಿಷ್ಯರನು ನೃಪನಾ । ಕರಿಯ ಮೇಲೇರಿದನು ನಡೆದರು ಮುಂದಕೀ ತೆರದಿ ॥107॥

ಗುರುವು ಯವನೇಶ್ವರನಿಗೆಂದನು । ಹರುಷವಾಯಿತು ನಿನ್ನ ಭಕ್ತಿಗೆ । ತೆರಳು ಮುಂದಕೆ ನಾನು ಬರುವೆನು ನಿನ್ನ ಪಟ್ಟಣಕೆ ॥
ಇರುವೆ ನಾ ಸನ್ಯಾಸಿ ತಾಪಸಿ । ದರದಿವಸ ಸಂಧ್ಯಾ ದಿಕರ್ಮವ । ನಿರದೆ ಮಾಡಲು ಬೇಕು ಬಂದರೆ ನಿನ್ನೊಡನೆ ನಾವು ॥108॥

ವಿಘ್ನ ಬರುವುವು ಕಾರಣದಿ ನೀ । ವಿನ್ನು ಹಿಂದಕೆ ಸಾವಕಾಶದಿ । ಬನ್ನಿ ರಾದರೆ ಮುಂದೆ ನಡೆವೆನು ನಾನು ವೇಗದಲಿ ॥
ಮುನ್ನ ದರ್ಶನ ಪಾವನಾಶನ । ಸನ್ನು ತಕ್ಷೇತ್ರದಲಿ ಯೆನುತವ- । ರೇಣ್ಯ ಶ್ರೀಗುರುವಾದನಂತರ್ಧಾನವೇನೆಂಬೆ ॥109॥

ಗುರುವು ಶಿಷ್ಯರಸಹಿತ ಮುಂದಕೆ । ತೆರಳಿದನು ಬೈದೂರನಗರಿಗೆ । ತ್ವರಿತದಲಿ ಬಂದರು ಮನೋವೇಗದಲಿಯಾಪುರಕೆ ॥
ಗುರುವು ಪಾಪವಿನಾಶಿ ತೀರ್ಥಕೆ । ಬರಲು ನಗರದ ಭಕ್ತರೆಲ್ಲರು । ಚರಣ ಕೆರಗಿದರಾಗ ಶ್ರೀಗುರುವಿದ್ದಡೆಗೆ ಬಂದು ॥110॥

ಬಂದನಲ್ಲಿಗೆ ನಾಗನಾಥನು । ಕಂದ ಸಾಯಂದೇವನಾತ್ಮಜ । ತಂದು ತನ್ನಯ ಮನೆಗೆ ಭೋಜನ ಮಾಡಿಸಿದನಾಗಾ ॥
ಎಂದನವನಿಗೆ ಗುರುವು ಯವನನು । ಮುಂದೆ ಪಾಪವಿನಾಶಸ್ಥಾನಕೆ । ಬಂದು ದರುಶನ ಕೊಡುವನಲ್ಲಿಗೆ ಹೋಗಬೇಕೀಗ ॥111॥

ಇಲ್ಲವಾದರೆ ನೃಪನು ಮ್ಲೇಂಛರ । ನೆಲ್ಲರನು ಕರಕೊಂಡು ಬರುವವ । ನಿಲ್ಲಿ ಬ್ರಾಹ್ಮಣರೆಲ್ಲರಿಗೆ ನಿಜ ತ್ರಾಸ ಹುಟ್ಟುವುದು ॥
ಮೆಲ್ಲನಲ್ಲಿಗೆ ಹೋಗುವುದು ನೀ- । ವೆಲ್ಲರಲ್ಲಿಯೆ ಬರುವುದೆನುತಲಿ । ಸಲ್ಲಲಿತವಾಕ್ಯವನು ಪೇಳಿದನಾಗ ಭಕ್ತರಿಗೆ ॥112॥

ಈಸು ಹೇಳುತ ಗುರುವು ಪಾಪವಿ- । ನಾಶ ತೀರ್ಥಕೆ ಬಂದು ತಾನು ಶು । ಭಾಸನದ ಮೇಲ್ಕೂತ ದಾಹ್ನಿಕ ಮಾಡತೊಡಗಿದನು ॥
ಈ ಸರಲಿಸೈನ್ಯದಲಿ ಮ್ಲೇಂಛಾ । ಧೀಶ ಗುರುವರನು ಕಾಣದಾದನು । ತ್ರಾಸವಾಯಿತು ಗುರುವು ಬಿಟ್ಟನೆ ತನಗೆನುತ ಮನದಿ ॥113॥

ಸ್ಮರಣೆಯಾಯಿತು ಬಳಿಕ ವೇಗದಿ । ದುರಿತನಾಶಕ್ಷೇತ್ರದಲಿ ತಾ । ಮರಳಿದರ್ಶನವೀವೆನೆನುತಲಿ ಪೇಳ್ದು ಪೋದನಲಾ ॥
ಅರಿಯೆನೀತನ ಮಹಿಮೆಯನು ತಾ । ನರನ ರೂಪದಿ ಸಂಚರಿಸುತಿಹ । ಹರನೆ ಸಾಕ್ಷಾತ್ ಭೇಟಿಯಾಯಿತು ಧನ್ಯ ತಾನೆಂದಾ ॥114॥

ಧರಿಸಿ ನಿಶ್ಚಯ ಗುರುವು ಮುಂದಕೆ । ತೆರಳಿಹನು ನಿಜವೆಂದು ಮನನಿ- । ರ್ಧರಿಸಿ ನಡೆದನು ಕೇಳು ನಲುವತ್ನಾಲ್ಕು ಹರದಾರಿ ॥

ದುರಿತ ನಾಶನಕ್ಷೇತ್ರದಲಿ ಗುರು- । ವರನ ನೋಡುತ ಭಕ್ತಿಭಾವದಿ । ಚರಣ ಕೆರಗಿದನಾಗ ಯವನ ನೃಪಾಲನೇನೆಂಬೆ ॥115॥

ಮನೆಗೆ ತೆರಳಲು ಬೇಕು ನಿನ್ನಯ । ವಿನುತ ಚರಣದ ಧೂಳಿಯಿಂ ಪಾ- । ವನವ ಮಾಡಲು ಬೇಕು ಭಕ್ತನ ಪಾಪದರಮನೆಯಾ ॥

ಎನುತಲೀಪರಿ ಗುರುವರನ ಬಹು । ವಿನಯದಿಂ ಪ್ರಾರ್ಥಿಸಲು ವೊಪ್ಪಿದ । ಜನಪ ನಗರವ ಶೃಂಗರಿಸಿದನು ರಾಜಠೀವಿಯಲಿ ॥116॥

ಮುತ್ತು ಪವಳದ ತೋರಣಂಗಳ । ವಿಸ್ತರಿಸಿದನು ಮಕರಗುಡಿಗಳ । ಹತ್ತಿಸುತ ಪಾಲಕಿಯೊಳಾ ಗುರುವರನ ಮೋದದಲಿ ॥

ಮತ್ತೆ ತಾನಾ ಪಾಲಕಿಯ ಬಹು । ಹತ್ತಿರದಿ ಕಾಲಿಂದ ನಡೆಯುವ । ಭೃತ್ಯನಂದದಿ ನಡೆದನವನ ಸವಿನಯವೇನೆಂಬೆ ॥117॥

ಆರತಿಯ ನೋವಾಳಿಸಿದರಾ । ನಾರಿಯರು ನಗರದಲಿ ರತ್ನದ । ಹಾರತುರೆಗಳನರ್ಪಿಸಿದರ್ಕ್ಕೆ ಗುರುಚರಣಗಳಿಗೆ ॥

ಭಾರಿ ಯುತ್ಸವವಂದು ನಗರದಿ । ತೋರಿತೆಲ್ಲರ ಮನದಿ ಹರುಷವು । ಚಾರುಸದ್ಗುರುವೆಲ್ಲಿ ಪರಮಾನಂದವಿಹುದಲ್ಲಿ ॥118॥

ಪುರದ ನರನಾರಿಯರು ತಂತಮ- । ಗರುಹುವರು ಚೋದ್ಯವನು ಶ್ರೀಗುರು । ವರನ ಪೂಜಿಪ ಮ್ಲೇಂಛನಲ್ಲಾ ಧನ್ಯ ಧನ್ಯನೃಪಾ ॥

ಧರಣಿಪನಭಾಗ್ಯೋದಯವುಬಹು । ಹಿರಿದಿಹುದು ನಿಜವೆಂದು ಸದ್ಗುರು-।ವರನಸೇವೆಯು ದೊರೆಯಿತಿವನಿಗೆ ಕಲಿಯೊಳಿದು ಚೋದ್ಯಾ ॥119॥

ರಾಜನಿವನಿಹ ಮ್ಲೇಂಛನಾದರು । ಪೂಜಿಪನು ಗುರುಬ್ರಾಹ್ಮಣರನು ವಿ । ರಾಜಿಪುದು ಸದ್ಧರ್ಮವೀತನ ರಾಜ್ಯದಲಿ ತಿಳಿಯೆ ॥

ಸೋಜಿಗವಲಾ ರಾಜಲೀಲೆಯು । ಸೋಜಿಗವಲಾ ಗುರುಪ್ರಭಾವವು । ಸೋಜಿಗವನೆಲ್ಲವನು ನೋಡುವೆವು ಎಂದರಾ ಜನರು ॥120॥

ಭೂಸುರರ ಮೇಲಿವನು ಜಾತಿ- । ದ್ವೇಷ ಮಾಡನು ರಾಜನುತ್ತಮ । ದೋಷ ಕಾಣೆವು ರಾಜ್ಯದಲ್ಲಿ ಗುರುಮಹಿಮೆ ನಿರುಪಮವು ॥
ಈಸು ಪರಿಯಲಿ ನಾಗರಿಕರು- । ಲ್ಲಾಸದಿಂ ಸಂಭ್ರಮವ ನೋಡುತ । ಲೇಸಹುದು ರಾಜ್ಯಕ್ಕೆನುತ ನಡೆತಂದರ್ರೈಟಿನಲಿ ॥121॥

ಏನ ಹೇಳಲಿ ಸಂಭ್ರಮವನಾ । ನೇನ ಹೇಳಲಿ ಗುರುಮಹಿಮೆಯನು । ಸಾನುರಾಗದಿ ಗುರುವರನ ಮನೆಗೊಯ್ದ ನಾನೃಪನು ॥
ಏನ ಹೇಳಲಿ ಗುರುವು ದ್ವಾರದಿ । ತಾನೆ ಬರಲಾಪಾಯಘಡಿ ವಿ । ಸ್ತೀರ್ಣ ದಿವ್ಯಾಂಬರವ ಹಾಸಿದನೇನ ಹೇಳುವೆನು ॥122॥

ಭೇರಿವಾಜಂತ್ರಿಗಳನೇಕವು । ಚಾರು ವಂದಿಗಳೊಂದೆ ಕೋರಲೋಳು । ಚ್ಚಾರಿಸಿದರ್ರೈ ಗುರುಸ್ತುತಿಯನೇನೆಂಬೆ ಸೌರಂಭಾ ॥
ಪಾರವಿಲ್ಲದ ದಾನಧರ್ಮವ । ಧಾರುಣೀಪತಿ ಮಾಡಿದನು ಭಂ- । ಡಾರಸೂರೆಯ ಮಾಡಿನು ಗುರುದರ್ಶನದ ಭರದಿ ॥123॥

ರಾಜಸಭೆಯೋಳು ತೋರವಾಗಿ ವಿ- । ರಾಜಿಸುವ ಸಿಂಹಾಸನದಿ ಗುರು । ರಾಜನನು ನರಹರಿಸರಸ್ವತಿ ಯತಿವರೇಣ್ಯನನು ॥
ರಾಜನಾರೋರಿಸಿದ ಭಕ್ತ । ವ್ರಾಜಪರಮಾನಂದಮೂರ್ತಿಯ । ಸೋಜಿಗವ ಬಣ್ಣಿಪರೆ ಶಕ್ಯವೆ ಯೆನಗೆ ಪಾಮರಗೆ ॥124॥

ಧಾರುಣಿ ಪನರಮನೆಯ ನಾರಿಯ । ರಾರತಿಯ ಬೆಳಗಿದರು ಹರುಷದಿ । ಬೇರೆಯೆಲ್ಲರ ಹೊರಗಿರಿಸಿ ತಾ ನಾಲ್ಕು ಶಿಷ್ಯರನು ॥
ಧಾರುಣಿಪನರ ಮನೆಗೆ ಬಿಟ್ಟನು । ತೋರಿಸಿದನಾ ಯವನರಾಜನು । ನಾರಿಯರ ನಿಜಪುತ್ರಪೌತ್ರರ ರತ್ನಭಂಡಾರ ॥125॥

ಅರಮನೆಯ ಸತಿಪುರುಷರೆಲ್ಲರು । ಚರಣಕೆರಗಿದರಾಗ ಶ್ರೀಗುರು- । ವರನ ಬಿನ್ನೈಸಿದನು ಯವನನೃಪಾಲನಾಕ್ಷಣಕೆ ॥
ಶರಣನಿಗೆ ದರ್ಶನವನಿತ್ತೈ । ಕರುಣದಿಂದೀರಾಜ್ಯ ವೈಭವ । ಚರಣ ಮಹಿಮೆಯ ಫಲವು ಕರುಣಾ ದೃಷ್ಟಿಯಲಿ ನೋಡು ॥126॥

ಗುರುವು ಭಕ್ತಿಗೆ ಮೆಚ್ಚಿ ಪೇಳ್ದನು । ಹರುಷವಾಯಿತು ನಿನ್ನ ಮನದಲಿ । ಧರಣಿಪನ ಭೋಗವನು ಭೋಗಿಸಿ ತೃಪ್ತಿಯಾಯ್ತೇನು ॥
ಅರಸನೆಂದನು ನಿನ್ನ ಕೃಪೆಯಲಿ । ಭರಿತವಾಯಿತು ಕಾಮಿತಾರ್ಥವು । ಚರಣಸೇವೆಯ ಕೊಟ್ಟು ಸಲಹೈ ಮೋದದಿಂದೆನಗೆ ॥127॥

ಗುರುವು ಪೇಳಿದನವಗೆ ನೀನೀ । ಧರೆಯ ಪುತ್ರನಿಗಿತ್ತು ಬಾ ಶ್ರೀ । ಗಿರಿಗೆ ಭೇಟಿಯನೀವೆ ಸೇವೆಯನೀವೆ ನಿನಗಲ್ಲಿ ॥
ಅರಸ ಜ್ಞಾನವ ಬೇಡಿದಾಕ್ಷಣ । ವರವನಿತ್ತನು ಜ್ಞಾನವಾಗಲಿ । ವರವನೀ ಪರಿಯಿತ್ತು ಗೌತಮ ತೀರ್ಥವನು ಮಾಡಿ ॥128॥

ತಿರುಗಿ ಬಂದನು ಗಾಣಗಾಪುರ- । ವರಕೆ ಶ್ರೀಗುರುರಾಯ ಪುರದೊಳು । ಪರಮಸಂತಸವಾಯ್ತು ಶ್ರೀಗುರುಚರಣದರ್ಶನದಿ ॥
ಪುರದ ನರನಾರಿಯರು ಭಕ್ತಿಯೋ- । ಳೆರಗಿದರು ಶ್ರೀಚರಣದಲಿ ಬಹು । ಪರಿಯೋಳಾರತಿ ಬೆಳಗಿದರು ತಾವೇಕಭಾವದಲಿ ॥129॥

ಕರೆದು ಶಿಷ್ಯರಿಗೆಲ್ಲ ಶ್ರೀಗುರು । ವರುಹಿದನು ಪ್ರಖ್ಯಾತಿಯಾಯಿತು । ಇರುವೆನಿಲ್ಲಿಯೆ ನಾನು ನಿರ್ಗುಣರೂಪದಲಿ ತಿಳಿಯೆ ॥
ತೆರಳುವೆನು ನಾ ಯಾತ್ರೆಗಾಗಿಯೆ । ಗಿರಿಗೆ ಶ್ರೀಹರಮಲ್ಲಿಕಾರ್ಜುನ । ವಿರುವ ಶ್ರೀಶೈಲಕ್ಕೆ ಗುಪ್ತದೊಳಿರುವೆ ನಾನಿಲ್ಲಿ ॥130॥

ನಿರತವೆನ್ನಯ ಸ್ನಾನ ಗಾಣಗ- । ಪುರವೆನುತ್ತಲಿ ನಿಜವ ತಿಳಿಯಿರಿ । ಹೊರಗೆ ಹೋಗೆನು ಸರ್ವಥಾ ಬಿಡೆ ಗಾಣಗಾಪುರವಾ ॥
ಗಿರಿಗೆ ಹೋಗುವೆನೆಂದು ಹೇಳುವೆ । ನರಮನುಷ್ಯರ ದೃಷ್ಟಿಯಲಿ ಶ್ರೀ । ಗಿರಿಯ ಯಾತ್ರೆಯ ಮಾಳ್ಪೆನಲ್ಲದೆ ಬೇರೆ ಮಾತಿಲ್ಲಾ ॥131॥

ಶರಣರಕ್ಷಕನೆಂಬ ಬಿರುದನು । ಧರಿಸಿ ಭಕ್ತರ ಕಾಯ್ವೆ ಗಾಣಗ । ಪುರದಿ ನಿರ್ಗುಣ ರೂಪದಲಿ ನಾನಿಹೆನು ಸಂತತದಿ ॥
ಧರೆಯು ಮ್ಲೇಂಛರಧೀನವಾಗಿದೆ । ಮರೆಯುತಿದೆ ಕಲಿ ಧರ್ಮಸತ್ತ್ವಯು । ಬರುತಿಹವು ಬಹು ಕಠಿಣ ದಿನಗಳು ಕಲಿ ಪ್ರಭಾವದಲಿ ॥132॥

ಸಗುಣರೂಪದೊಳಿರಲು ನಾನಾ । ವಿಗಡ ಧರ್ಮದ ಮ್ಲೇಂಛಜಾತಿಯು । ಸಗುಣರೂಪದೊಳೆನಗೆ ತ್ರಾಸವನೀವರೇನೆಂಬೆ ॥
ಜಗದಿ ಸದ್ಗುರುಭಕ್ತಿ ಸ್ಥಾಪಿಸಿ । ಬಗೆಬಗೆಯ ಲೀಲೆಯನು ತೋರಿದೆ । ಸಗುಣರೂಪದ ಕೆಲಸವಾಯಿತು ರಜಕದರ್ಶನವು ॥133॥

ನಾಮಧಾರಕ ಕೇಳು ಶಿಷ್ಯಶಿ । ರೋಮಣಿಯೆ ಈ ತೆರದಿ ಶಿಷ್ಯ । ಸ್ತೋಮ ಕರುಹಿದನಾಗ ಶ್ರೀಗುರುಮೂರ್ತಿ ಪ್ರೇಮದಲಿ ॥
ಭೂಮಿಯಲಿ ಬರುತಿಹುದು ದುರ್ದಿನ । ತಾಮಸಿಗಳಾ ಯವನರಾಜರು । ಈ ಮಹಿಯಲಿರಬೇಕು ಗುಪ್ತದೊಳೆಂದು ಗುರುಮತಿಯು ॥134॥

ನರರ ಲೌಕಿಕದೃಷ್ಟಿಯಲಿ ಶ್ರೀ । ಗಿರಿಯ ಯಾತ್ರೆಯು ನಿಜದಿ ನೋಡಲು । ಗುರುವು ನಿಜಧಾಮಕ್ಕೆ ತೆರಳುವ ಪೂರ್ವಪೀಠಿಕೆಯು ॥
ಅರಿವರಾರೀ ಗುರುಮಹಿಮೆಯನು । ಇರುವನಿಂದಿಗು ಗಾಣಗಪುರ । ವರದಿ ಶ್ರೀಗುರುಮೂರ್ತಿ ನಿರ್ಗುಣರೂಪದಲಿ ನಿಜವು ॥135॥

ಗಾಣಗಾಪುರವರದಿ ಭಕ್ತರು । ಸಾನುರಾಗದಿ ಭಕ್ತಿ ಭಾವದಿ । ಧ್ಯಾನ ಮಾಡಲು ಗುರುವು ಕೊಡುವನು ಕಾಮಿತಾರ್ಥವನು ॥
ಕ್ಷೋಣಿಯಲಿ ಕಾಮಿತ ಫಲವನನು- । ಮಾನವಿಲ್ಲದೆ ಕೊಡುತಿರುವ ಸುರ- । ಧೇನುವಲ್ಲಾ ಗಾಣಗಾಪುರ ಭೇದವೇನಿದಕೆ ॥136॥

ಪುತ್ರಪೌತ್ರರ ಧಾನ್ಯ ಧನಸಂ- । ಪತ್ತು ದೀರ್ಘಾಯುವನು ಪಡೆವರು । ಮೃತ್ಯುವನು ಗೆಲ್ಲುವರು ಭಕ್ತರು ಗಾಣಗಾಪುರದಿ ॥
ನಿತ್ಯದಲಿ ಶ್ರೀಗುರುಚರಿತ್ರವ । ಭಕ್ತಿಪೂರ್ವಕ ಪಠಣಮಾಡಲು । ಪ್ರಾಪ್ತಿಯಪ್ಪುದು ಸಕಲಕಾಮಿತ ವಿಷ್ಣು ವಚನವಿದು ॥137॥

॥ ಅಧ್ಯಾಯ 50 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 51

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ತೆರಳುವೆನು ಶ್ರೀಗಿರಿಗೆ ತಾನೆಂ । ದರುಹಿದನು ಶಿಷ್ಯರಿಗೆ ಪ್ರೇಮದಿ । ಶರಣರನು ಸಂತೈಸಿ ನಡೆದನು ಗುರುವು ಶ್ರೀಗಿರಿಗೆ॥

ಅರಿಯದಾಗುರುನಿಜ ಸ್ವರೂಪದ । ಬರಿದೆ ವಾದವ ಮಾಳ್ಪರಕಟಾ । ಗುರುವು ನಿರ್ಗುಣನೆಂದು ಕೆಲವರು ಹೇಳುವರು ಕೆಲರು ॥
ಗುರುವು ಜಗದಲಿ ಸಗುಣನೆನ್ನುವ । ರರಿಯೆ ತರ್ಕವ ನ್ಯಾಯಶಾಸ್ತ್ರವ । ಗುರುವಿಹನು ಪರತತ್ವ ನಿರ್ಗುಣಸಗುಣವೆರಡಿಹನು ॥1॥

ಗುರುವು ಪೇಳ್ಯೆ ಗಾಣಗಾಪುರ- । ವರಕೆ ಬಂದನು ಶ್ರೀಗುರುವು ಮುಂ । ದರುಹ ಮಾಡಿದನೇನನೆಂದನು ನಾಮಧಾರಕನು ॥
ಹರುಷದಿಂದಾ ಸಿದ್ಧ ಮುನಿ ಶ್ರೀ । ಗುರುವರನ ಸತ್ಕಥೆಯ ಪೇಳಿದ । ಗುರುವು ಮಾಡಿದನೊಂದು ಯುಕ್ತಿಯ ಬಂದ ನಂತರಕೆ ॥2॥

ನಾಮಧಾರಕ ಕೇಳು ಶಿಷ್ಯಶಿ । ರೋಮಣಿಯೆ ಮುಂದಿನ ಕಥಾಮೃತ । ರಮಣೀಯಕವಿಹುದು ಪಠಣದಿ ದೋಷ ನಾಶಕವು ॥
ಆ ಮಹಾತುಮ ಗುರುವರನು ನಿಜ । ಧಾಮಕಾಗಿಯೇ ಹೋಗಬೇಕೆಂ- । ದಾಮನದೊಳಗೆ ತಂದು ಯೋಚಿಸ ತೊಡಗಿದನು ಮನದಿ ॥3॥

ಖ್ಯಾತಿಯಾಯಿತು ದೇಶದೇಶದಿ । ಭೂತಳಾಧಿಪ ಯವನ ಭೇಟಿಗೆ । ಪ್ರೀತಿಯಿಂದಲಿ ಬಂದನಾಯಿತು ಭಕ್ತಿ ಯವನರಲಿ ॥
ಜಾತಿ ಜಾತಿಗಳೆಲ್ಲ ಬರುವರು । ಜಾತಿಮ್ಲೇಂಛರು ಬಂದು ವಿಪ್ರ- । ವ್ರಾತವೆಲ್ಲಕೆ ತ್ರಾಸ ಕೊಡುವರು ಧರ್ಮ ವರಿಯುವುದು ॥4॥
ಸಗುಣರೂಪದ ಮೂರ್ತಿ ಸಾಕೀ । ಜಗದಿ ಗುರುಭಕ್ತಿ ಪ್ರಭಾವವು । ಉಗಮವಾಯಿತು ಮುಂದೆ ತೆರಳುವೆ ಮಲ್ಲಿಕಾರ್ಜುನಕೆ ॥
ಬಗೆಬಗೆಯ ಲೀಲೆಗಳ ತೋರಿಸಿ । ಪ್ರಗಟವಾಯಿತು ಭಕ್ತಿಮಹಿಮೆಯು । ಸುಗಮವಾಯಿತು ಧರ್ಮಮಾರ್ಗವೆನುತ್ತ ಯೋಚಿಸುತಾ ॥5॥
ಹೋಗಿ ಬರುವೆನು ಮಲ್ಲಿಕಾರ್ಜುನ । ಶ್ರೀಗಿರಿಗೆ ತಾನೆನುತ ಕರುಣಾ- । ಸಾಗರನು ಭಕ್ತರನು ಕರೆದನು ಪೇಳ್ದನೀ ಹದನಾ ॥
ಶ್ರೀಗಿರಿಯ ಯಾತ್ರಾನಿಮಿತ್ತದಿ । ಹೋಗುವನು ಗುರುವೆಮ್ಮಬಿಟ್ಟು ವಿ- । ಯೋಗವನು ನಾವೆಂತು ತಾಳುವುದೆನುತ ಯೋಚಿಸುತಾ ॥6॥
ಚರಣಕೆರಗುತ ಪೇಳಿದರು ಶ್ರೀ- । ಗುರುವೆ ಯೆಮ್ಮನು ಬಿಟ್ಟು ಪೋಪುದು । ಸರಸ ತೋರ್ಪುದೆ ನಿನಗೆ ಯಾತ್ರೆಯ ಕಾರಣವಿದೇನು ॥
ಶರಣರಿಗೆ ಸುರಧೇನು ಯೆಂಬುವ । ಬಿರುದ ಕಾಯ್ದಿಹೆ ನೀನು ನಿನ್ನಯ । ಚರಣಯುಗವು ನಿಧಾನವಿತ್ತೆಮಗಿಂದು ಪರಿಯಂತಾ ॥7॥
ಬಿಟ್ಟು ನಮ್ಮನು ನೀನು ಪೋಗುವೆ । ಕೆಟ್ಟ ದುರಿತದ ರಾಶಿಗಳು ತವ । ದೃಷ್ಟಿಯಿಂದಲೆ ಸುಟ್ಟು ಹೋಗುವವೇನ ಹೇಳುವೆವು ॥
ಇಷ್ಟ ಕಾಮಿತಗಳನು ಕೊಡುತಿಹ । ಶ್ರೇಷ್ಠ ಸುರಲತೆ ನಿನ್ನ ಚರಣಗ- । ಳೆಷ್ಟ ಹೊಗಳಲಿ ನಿನ್ನ ಮಹಿಮೆಯನೆಂದರಾ ಜನರು ॥8॥
ಅಳುವ ನಿಜ ಕೂಸುಗಳ ತಾಯಿಯು । ತೋಲಗಿಪುದುಚಿತವೇನು ಗುರುವರ । ತಿಳಿಯೆ ನೀ ತಾಯಹುದು ನಾವ್ಯೆ ಬಾಲಕರು ನಿನ್ನಾ ॥
ತೊಲಗ ಬಾರದನಾಥದೀನರ । ತೊಲಗಬಾರದು ನಮ್ಮನಜ್ಞರ । ನುಳಿಯಲಾರೆವು ನಾವು ನಿನ್ನನು ಬಿಟ್ಟು ಅರೆಗಳಿಗೆ ॥9॥
ಪರಿಪರಿಯೊಳಾ ಭಕ್ತಮಂಡಳ । ಗುರುವರಗೆ ಬಿನ್ನೈಸಿದರು ಶ್ರೀ । ಗುರುವು ಪೇಳಿದನವರಿಗೆಲ್ಲುಪದೇಶಮಾತುಗಳಾ ॥
ಧರಿಸದಿರಿ ಚಿಂತೆಯನು ನಾವೀ । ಪುರದೊಳಿರುವೆವು ನಿತ್ಯ ಸಂಗಮ । ಕಿರದೆ ಮೀಯುತ ಮಠಕೆ ಮಧ್ಯಾಹ್ನಕ್ಕೆ ಬರುತಿಹೆವು ॥10॥

ಯಾರು ಪ್ರೇಮದೊಳೆನ್ನ ಭಜಿಪರೊ । ಧಾರುಣಿಯೋಳವರಿಂಗೆ ದೃಷ್ಟಿಗೆ । ತೋರಿಸುವೆ ರೂಪವನು ಸಗುಣವ ಗಾಣಗಾಪುರದಿ ॥
ಸೇರುವೆನು ಶ್ರೀಗಿರಿಗೆ ನರರ ವಿ- । ಚುರದೃಷ್ಟಿಗೆ ಗಾಣಗಾಪುರ । ಚಾರು ಶಾಶ್ವತ ವಾಸವೆಮ್ಮದು ನಿಜವು ನಿಜ ನಿಜವು ॥11॥

ತರಣಿಯುದಯಕೆ ಕ್ಷೇತ್ರವೌದುಂ- । ಬರದಿ ಕೃಷ್ಣಾ ತಟದ ಸ್ನಾನವು । ಪರಮಬಿಂದುಕ್ಷೇತ್ರದಲಿ ಯಾಹ್ನಿಕವು ದಿನದಿನದಿ ॥
ಬರುವೆ ಮಧ್ಯಾಹ್ನದಲಿ ಗಾಣಗ- । ಪುರಕೆ ಸಂಗಮದಲ್ಲಿ ಮೀಯುತ । ಶರಣವೃಂದದ ಪೂಜೆಕೊಳ್ಳುವೆ ಮಠದಿ ನಿರ್ಗುಣದಿ ॥12॥

ಮಾಡಿದರೆ ಚಿಂತೆಯನು ಮನದಲಿ । ಗೂಢರೂಪದಿ ಗಾಣಗಾಪುರ । ನಾಡಿನಲಿ ನಾನಿರುವ ಮಠದಲಿ ಸಾರ್ವಕಾಲದಲಿ ॥
ರೂಢಿಯಲಿ ಪ್ರೇಮದಲಿ ಭಕ್ತಿಯ । ಮಾಡುವವರಿಗೆ ಸಗುಣರೂಪವ । ನೋಡುವರು ಕಣ್ಣಿನಲಿ ಕಾಮಿತ ಪಡೆವರವರಲ್ಲಿ ॥13॥

ಮರವಿದನ್ನ ಶ್ವಸ್ಥ ವೆನ್ನದೆ । ಸುರತರುವು ಸಾಕ್ಷಾತ ಸಂಗಮ । ಕಿರುವುದೆಂದೇ ಭಾವಿಸಿರಿ ಮನದೊಳಗೆ ನಿಜವಾಗಿ ॥
ಭರಿತಭಕ್ತಿಯೊಳಿದನು ಪೂಜಿಸೆ । ತ್ವರಿತದಲಿ ಸಕಲಾರ್ಥಲಾಭವು । ಮರೆಯದಿರಿ ಕಾವಿತವ ಕೊಡುವೀಮರವು ಸುರತರುವು ॥14॥

ಸುರತರುವನಿದಪೂಜಿಸುತ ನಂ- । ತರಕೆ ತೆರಳಿರಿ ಯೆನ್ನಸ್ಥಾನ- । ಕ್ಕಿರುವವಲ್ಲಿಯೆ ಪಾದುಕಂಗಳು ನಿರ್ಗುಣಾತ್ಮಕವು ॥
ನಿರತ ಪೂಜಿಸೆ ಪಾದುಕಂಗಳ । ತ್ವರಿತದಲಿ ಕಾಮಿತವನೀವವು । ಮರೆಯದಿರಿ ನೀವ್ ವಿಘ್ನಹರ ಚಿಂತಾಮಣಿಯ ಬಳಿಕ ॥15॥

ವಿಘ್ನಗಳನೆಲ್ಲವ ವಿನಾಯಕ । ಭಗ್ನ ಮಾಡುವನಿವನ ಪೂಜಿಸೆ । ಸನ್ನುತಾಂತಃಕರಣದಲಿ ತೀರ್ಥಗಳನೆಲ್ಲವನು ॥
ಭಿನ್ನ ಭಾವವ ತೊರೆದು ಮಾಡೆಪ್ರ । ಸನ್ನನಾಗುವೆ ನಾನು ಕಾಮಿತ- । ವನ್ನು ಕೊಡುವೆನು ತ್ವರಿತದಲಿ ನೀವಿದನು ನಂಬುವುದು ॥16॥

ಹರುಷದಿಂದಾರತಿ ತ್ರಿಕಾಲದಿ । ಪರಮಭಕ್ತಿಪುರಃಸರದೊಳಾ- । ಚರಿಸಿದರೆ ಮಠದಲ್ಲಿ ಸಕಲಾಭೀಷ್ಟ ದೊರೆಯುವುದು ॥
ಪರಿಯೊಳೀಭಕ್ತರಿಗೆ ಪೇಳುತ । ತೆರಳಿದನು ಶ್ರೀಗುರುವು ಕಾಲಿಲಿ । ತಿರಗಿ ಬಂದರು ತರುಣರೆಲ್ಲರು ಶೋಕಪುಳಕಿತರು ॥17॥

ಗುರುನಿರೋಪವ ಕೊಂಡು ಶರಣರು । ಬರಲು ಮಠದಲಿ ಕಂಡರ್ಕೈ ಗುರು- । ವರನ ಸಗುಣಾಕಾರದಲ್ಲಿ ವಿಸ್ಮಿತವನೇನೆಂಬೆ ॥
ಪರಮವಿಸ್ಮಿತರಾಗಿ ಪೇಳ್ದರು । ಗುರುವ ನರನೆಂಬುವರು ಮೂರ್ಖರು । ನರಕಭಾಜನರವರು ತಿಳಿಯದು ಗುರುಮಹಿಮೆಯೆಮಗೆ ॥18॥

ಪೇಳುವನಿತರೊಳಿಲ್ಲ ಮೂರ್ತಿಯು । ಲೀಲೆಯನು ತೋರಿಸಿದನಾ ಗುರು । ಕೇಳಿದ್ಯೆ ನೀ ನಾಮಧಾರಕ ಗುಪ್ತನಾದನಲಾ ॥
ಲೀಲೆಯನು ತೋರಿಸುತಲಾ ಪಾ । ತಾಳಗಂಗೆಗೆ ಬಂದು ಮುಟ್ಟಲು । ಹೇಳಿದನು ಶಿಷ್ಯರಿಗೆ ಮುಂದಿನ ಕಾರ್ಯಕ್ರಮವೆಲ್ಲಾ ॥19॥

ತಂದು ನೀವ್ ಪರಿಪರಿಯ ಹೂವುಗ । ಳಿಂದ ದಿವ್ಯಾಸನವ ಮಾಡುವು- । ದೆಂದು ಪೇಳಲು ತಂದರ್ಕೈ ಪುಷ್ಪಗಳ ಬಹುವಿಧದಾ ॥
ಚಂದದಿಂದಾಸನವ ಮಾಡಲು । ಬಂದು ಕುಳಿತನು ನದಿಯ ದಾಟಲು । ಮುಂದೆ ಪೇಳಿದನಾಗ ಶಿಷ್ಯವೃಂದಕತಿಮುದದಿ ॥20॥

ಶರಣರೆಲ್ಲರು ತಿರುಗಿ ಗಾಣಗ । ಪುರಕೆ ತೆರಳಿರಿ ಮಲ್ಲಿಕಾರ್ಜುನ । ನಿರುವಸ್ಥಾನದೊಳೈಕ್ಯವಾಗುವೆ ಚಿಂತೆ ಮಾಡದಿರಿ ॥
ಇರವೆನಲ್ಲಿಯೆ ಗಾಣಗಾಪುರ । ವರದಿ ಭಕ್ತರ ಸೇವೆ ಕೊಳ್ಳುತ । ಧರಿಸದಿರಿ ಸಂದೇಹ ಸಂತತವಿರುವೆ ನಾನಲ್ಲಿ ॥21॥

ಮಾನವರ ದೃಷ್ಟಿಯಲಿ ನಾನು ಪ್ರ । ಯಾಣಮಾಡುವೆನೆಂದು ತೋರ್ಪುದು । ನಾನು ಭಕ್ತಾಧೀನ ವಾಸಿಪೆನವರ ಮನೆಯೊಳಗೆ ॥
ಮಾನಸದೊಳಗೆರಡು ನೆನೆಯದೆ । ಸಾನುರಾಗದಿ ನೀವು ಪೋಪುದು । ಗಾಣಗಾಪುರವರವು ಮಂಗಲಧಾಮವಿಹುದೆನಗೆ ॥22॥

ಗುರುವರನ ಮಾತುಗಳ ಕೇಳುತ । ಶರಣರಿಗೆ ಕಣ್ಣೀರು ತುಂಬಿತು । ಚರಣ ಕರಗಿದರೆಲ್ಲ ಗುರುವಿಗನನ್ಯ ಭಾವದಲಿ ॥
ಗುರುವು ಕರುಣಾದೃಷ್ಟಿಯಿಂದಲೆ । ಹರಸಿದನು ಸರ್ವರನು ನಂತರ । ಪರಮಪುಷ್ಪಾಸನದಿ ಕುಳಿತನು ತೆರಳಿದನುಗಿರಿಗೆ ॥23॥

ಗುರುವು ಕನ್ಯಾಗತನು । ಸಂವತ್ಸರವು ಬಹುಧಾನ್ಯಾಖ್ಯ ವುತ್ತರ । ಜನರು ಸೂರ್ಯನು ಕುಂಭಮಾಸದ ಸಂಕ್ರಮಣದಿನವು ॥
ಮೆರೆವ ಭೃಗುವಾರದಲಿ ಋತು ಶೈ- । ಶಿರದಿ ಮಾಘದ ಕೃಷ್ಣ ಪಕ್ಷದ । ಮೆರೆವ ಪ್ರತಿಪದೆ ದಿವಸ ಶ್ರೀಗುರು ತೆರಳಿದನು ಗಿರಿಗೆ ॥24॥

ಗುರುವು ಪೇಳಿದ ಶಿಷ್ಯರಿಗೆ ನಿಮ । ಗುರುತರರದ ಪುಷ್ಪಗಳ ಕಳುಹುವೆ । ನಿರಲಿ ನಿಮ್ಮೊಡನವು ಸದಾಕಾಲದಿ ಗುರುಪ್ರಸಾದ ॥
ಪರಮ ಭಕ್ತಿಯೊಳಿವನು ಪೂಜಿಸೆ । ಸಿರಿಯಖಂಡವು ನಿಮ್ಮ ವಂಶದೊ । ಳಿರುವುದಿದು ನಿಜವೆಂದು ನಂಬರಿ ಯೆಂದನಾ ಗುರುವು ॥25॥

ಗುರುತನೊಂದನು ಪೇಳ್ವೆ ಯಾರೀ । ಧರಣಿಯಲಿ ಗಾಯನದೊಳೆನ್ನನು । ಸ್ಮರಿಸುವರೊ ಅವರಲ್ಲಿ ಸಂತತ ವಾಸ ಮಾಡುವೆನು ॥
ಪರಮಪ್ರೀತಿಯು ಗಾಯನದೊಳಿರು । ತಿರುವು ದೆನಗೈ ಯವರ ಮನೆಯಲಿ । ಸಿರಿಯು ಸುಖಸಂಪತ್ತು ವಾಸಿಪವೈ ನಿರಂತರದಿ ॥26॥

ವ್ಯಾಧಿಯಾಗದ ದವರ ಮನೆಯಲಿ । ಮೋದದಿಂದಲಿ ಬಾಳ್ವರವರೀ । ಮೇದಿನಿಯಲಿವರಿಂಗೆ ಪೂರ್ಣಾಯುಷ್ಯವಿರುವುದಲಾ ॥
ಬಾಧಿಸನು ಮೇಣವರ ಕಾಲನು । ಮೋದದಿಂದಲಿ ಪತ್ರಪೌತ್ರರು । ಸಾಧಿಪರು ಸಕಲಾರ್ಥ ಕಾಮಿತ ಗುರುಪ್ರಸಾದದಲಿ ॥27॥

ಗುರುಚರಿತ್ರವನಾರು ಕೇಳ್ವರೊ । ಗುರುಚರಿತ್ರವನಾರು ಪಠಿಪರೊ । ಸಿರಿಯಖಂಡವ ಭೋಗಿಪರು ಸಂತತದ ಲವರೆಲ್ಲಾ ॥
ಧರಿಸದಿರಿ ಸಂದೇಹ ಮನದಲಿ । ತಿರುತಿರುಗಿ ನಾ ಪೇಳ್ವೆ ನಿಶ್ಚಯ । ವಿರುವದೆಂದಾ ಗುರುವು ಪೇಳುತ ನಡೆದನಾ ಸನದಿ ॥28॥

ಗುರುವು ನಿಜ ಧಾಮಕ್ಕೆ ತೆರಳಿದ । ತೊರೆದನೈ ತಮಗೆಂದು ಶಿಷ್ಯರು । ಪರಿಪರಿಯ ದುಃಖದಲಿ ಮುಳುಗಿದರೇನ ಹೇಳುವೆನು ॥
ಇರಲು ಕೆಲ ಸಮಯದಲಿ ತೀರದಿ । ಬರುತನಾವಿಕನೋರ್ವ ಪೇಳ್ದನು । ಗುರುವ ಕಂಡೆನು ನಿಮ್ಮ ಯರಡನೆ ದಂಡೆಯಲಿ ನಾವು ॥29॥

ಗುರುನೃಸಿಂಹಸರಸ್ವತಿಯು ಯತಿ । ವರನು ಧರಿಸಿಹನವನು ದಂಡವ । ಕರದೊಳೀಪರಿ ನೋಡಿದೆನು ಕಳುಹಿದ ನಿರೋಪವನು ॥
ತೆರಳಿದನು ಕರ್ದಳವನಕೆ ನಾ । ನಿರುವೆ ಸಂತತ ಗಾಣಗಾಪುರ । ವರದಿ ಪೇಳಿದನಿಂತು ವಾರ್ತೆಯು ತಿಳಿಸಿದೆನು ನಿಮಗೆ ॥30॥

ಭ್ರಾಂತತನವನು ಬಿಟ್ಟು ತೆರಳಿನಿ । ವಾಂತದಲಿ ನೀವ್ ಮನೆಗೆ ಬಿಡಿಬಿಡಿ । ಚಿಂತೆಯನು ದೃಷ್ಟಾಂತವಾಯಿತು ನಿಮಗೆ ಪೇಳುವೆನು ॥
ಸಂತಸದೊಳಾ ಗುರುವು ಪಾದದೊ । ಳಾಂತಿಹನು ಪಾದುಕಸುವರ್ಣದ । ಯೆಂತು ತೇಜಃಪುಂಜ ಯತಿವರ ನಿಹನು ನೋಡಲಿಕೆ ॥31॥

ತೆರಳ ಬೇಕ್ಕೈ ಮನೆಗೆ ಶಿಷ್ಯರು । ನಿರತ ಸುಖಿಯಹರೆನ್ನ ಭಕ್ತರು । ವರದ ಪುಷ್ಪಂಗಳನು ಕಳುಹುವೆನೆಂದು ಪೇಳಿದನು ॥
ಧರಿಸ ಬಾರದು ಸಂಶಯವ ನಾ- । ನಿರುವೆ ಸಂತತ ಗಾಣಗಾಪುರ । ವರದೊಳೆನುತಲಿ ಪೇಳ್ದನಾಯತಿವರನು ಕರುಣದಲಿ ॥32॥

ಇನಿತು ಪೇಳ್ದನು ನಾವಿಕನು ತಾ । ವಿನುತಚರಿತನ ದಿವ್ಯ ವಚನವ- । ನನಿತರೊಳು ಪುಷ್ಪಗಳು ಬಂದವು ಗುರುಪ್ರಸಾದವಲಾ ॥
ವಿನುತಶಿಷ್ಯರು ನಾಲ್ವರಿದ್ದರು । ಮನದ ಹರುಷದಿ ಪುಷ್ಪಗಳ ತಾ । ವಿನಯದಿಂದೇರಿಸಿದರಾಕ್ಷಣ ತಮ್ಮ ತಲೆಯೊಳಗೆ ॥33॥

ನುಡಿಯ ಕೇಳುತ ನಾಮಧಾರಕ । ನುಡಿದನ್ಯೆ ಸಿದ್ಧನಿಗೆ ಶಿಷ್ಯರ । ಗಡಣದಲಿ ಪ್ರಾಮುಖ್ಯವಾರಿಗೆ ಪುಷ್ಪ ಲಭಿಸಿದವು ॥
ನುಡಿದನಾಕ್ಷಣ ಸಿದ್ಧನೀಪರಿ । ಪೊಡವಿಯಲಿ ಬಹು ಮಂದಿ ಶಿಷ್ಯರ । ಗಡಣವಿತ್ತೈ ಗುರುನೃಸಿಂಹಸರಸ್ವತಿಗೆ ಕೇಳು ॥34॥

ಕೃಷ್ಣ ಬಾಲಉಪೇಂದ್ರ ಮಾಧವ । ರೆನ್ನುವರು ಯತಿಯಾಶ್ರಮಿಗಳಾ । ಸನ್ನುತ ಸರಸ್ವತಿಯ ನಾಮದಿ ಖ್ಯಾತರಿದ್ದರಲಾ ॥
ಪುಣ್ಯ ತೀರ್ಥಂಗಳಿಗೆ ಯವರನು । ಮುನ್ನವೇ ಕಳುಹಿದನು ಶ್ರೀಗುರು । ವಿನ್ನುಳಿದ ಪ್ರಾಪಂಚಿಕರು ಬಹು ಸಂಖ್ಯೆಯಗಣಿತವು ॥35॥

ಊರೊಳಿದ್ದರು ಸಕಲ ಶಿಷ್ಯರು । ಮೂರು ಶಿಷ್ಯರು ಯೆನ್ನ ಹೊರತಾ । ಊರಬಿಟ್ಟಾ ಗುರುವರನ ಸಂಗಾತ ಪೋದೆವಲಾ ॥
ಚಾರುಕವಿಗಳು ನಂದಿನರಹರಿ । ಮೂರನೇಯವ ಸಾಕರೆಯು ತಾ । ಚಾರುಪುಷ್ಪವ ಪಡೆದ ಭಾಗ್ಯನು ನಾನೆ ಮೇಣೊಬ್ಬ ॥36॥

ಗುರುಪ್ರಸಾದದ ಪುಷ್ಪಗಳ ತಾ । ನಿರದ ಶಿರದಲಿ ಧರಿಸಿಹೆನು ಯೆಂ । ದರುಹಿ ಸಿದ್ಧನು ತೆಗೆದು ತೋರಿಸೆ ನಾಮಧಾರಕಗೆ ॥
ಗುರುಚರಿತ್ರವೆ ಕಾಮಧೇನುವು । ದುರಿತದಾರಿದ್ರ್ಯಗಳ ನಾಶನ- । ವರುಹಿದೆನು ಸಂಕ್ಷೇಪದಲಿ ಗುರುಚರಿತವಗಣಿತವು ॥37॥

ಗುರುಚರಿತ ಪಾವನ ಪವಿತ್ರವು । ಗುರುಚರಿತ್ರವ ಪಠಿಸಿ ಕೇಳಲು । ದೊರೆಯುವವು ಸಿರಿ ಪುತ್ರಪೌತ್ರರು ಸಕಲಕಾಮಿತವು ॥
ಹರುಷವರ್ಧನ ಮೋಕ್ಷಸಾಧನ । ದುರಿತಹರಣ ವಿವೇಕಕಾರಣ । ಬರೆದರೀ ಗ್ರಂಥವನು ಪಡೆವರು ಸರ್ವಸಿದ್ಧಿಯನು ॥38॥

ಅರುಹಲೀಪರಿ ಸಿದ್ಧ ನಾಕ್ಷಣ । ಹರುಷವಾಯಿತು ನಾಮಧಾರಕ । ಗಿರದೆ ಸಕಲಾಭೀಷ್ಟ ಸಾಧನವಾಯ್ತು ಮೇಣವಗೆ ॥
ದೊರೆಯುವವು ಪರಮಾರ್ಥವೆಲ್ಲವು । ಗುರುಚರಿತ್ರವನೋದಿ ಕೇಳಲು । ಧರೆಯೊಳಿದಕನುಮಾನವಿಲ್ಲೆಂದರುಹಿದನು ಸಿದ್ಧಾ ॥39॥

ಗುರುಚರಿತ್ರಪಿಯೂಷಕುಂಭವ । ಭರದಿ ಕುಡಿಯಲು ಭಾವಶುದ್ಧಿಯ । ಲಿರುವವಲ್ಲಿಯೆ ಕೇಳು ಪುರುಷಾರ್ಥಗಳು ಕಿಂಕರರು ॥
ಧರೆಯೊಳೀಚಾರಿತ್ರಪಠಣದಿ । ಸಿರಿಯಖಂಡವು ರಂಜಿಸುವುದೀ । ತರದಿ ಬರುವವು ಪುತ್ರಪೌತ್ರರಸೌಖ್ಯ ಸುಖಶಾಂತಿ ॥40॥

ಗುರುನೃಸಿಂಹಸರಸ್ವತಿಯು ನಿಜ । ಶರಣರನು ರಕ್ಷಿಪನು ಬೆಂಬಲ । ಕಿರುವನಲ್ಲಾ ತನ್ನ ಭಕ್ತರ ವಂಶವಂಶದಲಿ ॥
ಪರಿಯೊಳೀ ಗುರುಚರಿತವನು ಗುರು- । ಚರಣಭಕ್ತ ಸರಸ್ವತಿಯು ತಾ । ನರುಹಿದನು ಗಂಗಾಧರಾತ್ಮಜ ಭಾವಭಕುತಿಯಲಿ ॥41॥

ಮೂಲಗ್ರಂಥ ಮರಾಠಿ ಶ್ರೀಗುರು- । ಲೀಲೆಯನು ನಾ ಕನ್ನಡಿಸಿದೆನು । ಆಲಿಸಿರಿ ಭಾವಿಕರು ಮನಗೊಟ್ಟಿದನು ಭಕ್ತಿಯಲಿ ॥
ಮೇಲೆ ಹೇಳುವದೇನು ಸಾಧ್ಯವು । ಪಾಲಿಸುವನಾ ಶ್ರೀಗುರುವು ನಿಜ । ಕಾಲಿನಲಿ ಬಿದ್ದವರ ತ್ಯಜಿಪನೆ ಶರಣವತ್ಸಲನು ॥42॥

ಹರನು ಗಂಗಾಧರನು ಗಿರಿಜಾ । ವರನು ನರರೂಪದಲಿ ಲೀಲೆಯ । ಚರಿಸಿ ಭಕ್ತೋದ್ಧರಣನಾದನು ಜಗದಿ ಕಲಿಯುಗದಿ ॥
ಹರುಷದಿಂದಾ ಗುರುಚರಣಕಾ- । ದರದಿ ಗ್ರಂಥಾರ್ಪಣೆಯ ಮಾಡುವೆ । ಧರೆಯು ಮಂಗಳಧಾಮವಾಗಲಿ ವಿಷ್ಣು ವಾಜ್ಞೆಯಲಿ ॥43॥

॥ ಅಧ್ಯಾಯ 51 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 52

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುವು ತನ್ನವತಾರ ತೀರಿಸಿ । ತೆರಳಿದನು ಶ್ರೀಶೈಲ್ಯಕೆನುತಲಿ । ಶರಣರೆಲ್ಲರು ಮನದಿದುಃಖವ ತಾಳಿದರು ಮರುಗಿ॥

ಗುರುವೆ ನಿನ್ನುಪಕಾರವನು ವಿ । ಸ್ತರಿಸಲಾರೆನು ಬಾಯಿಯಲಿ ಪಾ- । ಮರನಲಾ ನಾ ನೋಡಿದರೆ ನೀನಪರಿಮಿತಮಹಿಮಾ ॥
ಉರಗರಾಜನು ಸೋತನ್ನೈ ಮ- । ತ್ತಿರದೆ ನಿಗಮಾಗಮಗಳೆಲ್ಲವು । ಬರಿದೆ ಯತ್ನಿಸಿ ಬಳಲಿ ಬೆಂಡಾದರು ಕಣಾ ಜಗದಿ ॥1॥

ಗುರುವು ಪೋದನು ಯಾತ್ರೆಗಾಶ್ರೀ । ಗಿರಿಗೆ ನಂತರ ಚರಿತವೇನಾ । ಗಿರುವುದೆನಗರುಹೆಂದು ಬಿನ್ನೈಸಿದನು ಸಿದ್ಧನಿಗೆ ॥
ಹರುಷದಿಂದಾ ನಾಮಧಾರಕ । ಗರುಹಿದನು ಮುಂದಿನ ಕಥಾನಕ । ಪರಮಶಿಷ್ಯೋತ್ತಮನೆ ಕೇಳೈ ನಾಮಧಾರಕನೆ ॥2॥

ಏನಹೇಳಲಿ ಗುರುಮಹಿಮೆಯ ಪ್ರ- । ಮಾಣವಿಹುದೇ ವರ್ಣನೆಗೆ ನಾ- । ನೇನು ಶಕ್ತನೆ ನಿಗಮಗಳು ಬೆಂಡಾದವೈ ಸ್ತುತಿಸಿ ॥
ತಾನು ಯಾತ್ರೆಗೆ ಗಿರಿಗೆ ಹೋಗಲು । ಆನೃಸಿಂಹಸರಸ್ವತಿಯುತಾ । ಗಾಣಗಾಪುರದಿಂದ ಹೊರಡುವರೆಂದು ತಿಳಿಸಿದರು ॥3॥

ಪುರದ ನರನಾರಿಯರು ಕೂಡುತ । ಪರಿಪರಿಯಲಾ ಗುರುವರನ ಶ್ರೀ । ಚರಣದರ್ಶನಕಾಗಿ ಬಂದರು ಶೋಕಮಾನಸರು ॥
ಗಿರಿಗೆ ಹೋಗುವ ಕಾರಣವ ನಾ । ವರಿಯೆ ಪೇಳ್ವೈ ಶರಣ ವತ್ಸಲ । ಧರೆಯೊಳೀಯವತಾರವನು ಮುಗಿಸುವಿರಿ ಕಾಣುತದೆ ॥4॥

ನಿರತ ನೀನವ್ಯ ಕ್ತನಿದ್ದರು । ಪರಿಯೋಳೀ ವ್ಯಕ್ತಸ್ವರೂಪದಿ । ನರರ ಕಣ್ಣಿಗೆ ಸಗುಣರೂಪವ ತೋರಿಸುತಲಿದ್ದೆ ॥
ಚರಣದರ್ಶನ ಮಾತ್ರದಿಂದಲೆ । ದುರಿತರಾಶಿಯ ಸುಟ್ಟು ತೆಗದೆವು । ಅರಿಯಲಾರೆವು ಮುಂದೆ ಗತಿಯೇನೆಮಗೆ ಪೇಳಿಗಾ ॥5॥

ಗುರುವೆ ನಿನ್ನಯ ಚರಣನೌಕೆಯ । ಧರಿಸಿ ಸಂಸ್ಕೃತಿಶರಧಿ ದಾಟಿದೆ । ವರರೆ ಮುಂದೆಮಗೇನು ಗತಿ ತಾರಿಸುವ ಕೈವಾರಿ ॥
ಅರಿಯಲಾರೆವು ನೀನು ಭಕ್ತರ । ಸುರತರುವು ಸುರಧೇನುವೆಂಬೀ । ಬಿರುದ ಕಾಯುತ ರಕ್ಷಿಸಿದೆ ನೀನೆಮ್ಮನೀವರೆಗೆ ॥6॥

ಗುರುವೆ ತವ ಸಾನಿಧ್ಯ ದಿಂದಲೆ । ಯೆರಡನೆಯ ವೈಕುಂಠ ಗಾಣಗ- । ಪುರವು ಧರೆಯಲಿ ಯೆಂಬ ಕೀರ್ತಿಯು ಹಬ್ಬಿತ್ತೈ ಜಗದಿ ॥
ಗುರುವೆ ನೀನಿಲ್ಲಿಂದ ಹೋದರೆ । ಮೆರೆವುದೀ ಪುರದೀಪವಿಲ್ಲದ । ತೆರದಿ ಮಂದಿರ ತೋರುವುದು ಘೋರಾಂಧಕಾರವದು ॥7॥

ಜಲವ ತೊಲಗಿದ ಕಮಲವೋ ದೇ । ಗುಲವೊ ದೇವರ ಮೂರ್ತಿಯಿಲ್ಲದ । ಎಳೆ ಮಗುವೊ ತಾಯ್ತೊಲಗಿರಲದಾ ಪರಿಯೊಳೆಮಗಾಯ್ತು ॥
ಬಳಗಬಂಧುಗಳಾಪ್ತ ಮಿತ್ರರು । ಕುಲದ ದೈವತ ತಂದೆ ತಾಯ್ಗಳು । ಇಳೆಯೊಳಿದ್ದ ಸಮಸ್ತ ವಸ್ತುಗಳೆಮಗೆ ಗುರುಚರಣ ॥8॥

ಅಳುವಯೆಳೆ ಕೂಸುಗಳನೆಲ್ಲರ । ತೊಲಗ ಬಹುದೇ ತಾಯಿ ಶ್ರೀಗುರು । ವಿಳೆಯೊಳೆಮಗಿನ್ಯಾರು ಗತಿ ಕೈಬಿಡುವನೇ ಗುರುವು ॥
ತಳಮಳಿಸು ತೀಪರಿಯೊಳೆಲ್ಲರು । ಅಳುತ ಲೋಟಾಂಗಣವ ಹಾಕುತ । ಕಳವಳಿಸುತಾ ಚರಣ ಕಮಲಂಗಳನು ಬಿಗಿದಪ್ಪಿ ॥9॥

ಬಿಡೆವು ಬಿಡೆಬಿಡೆವೆಂದು ಶ್ರೀಗುರು- । ವಡಿಗಳನು ಬಿಗಿಹಿಡಿದ ಭಕ್ತರ । ಗಡಣಕರುಹಿದನಾಗ ತಾ ನಸುನಗುತ ಪ್ರೇಮದಲಿ ॥
ಹಿಡಿಯದಿರಿ ಚಿಂತೆಯನು ನಾನೀ । ಗುಡಿಯೊಳಗೆ ವಾಸಿಪೆ ನಿರಂತರ । ಎಡೆಬಿಡದೆ ಸಂಗಮದಿ ಸ್ನಾನವ ಮಾಳ್ಪೆ ನಿತ್ಯದಲಿ ॥10॥

ಇರುವೆ ನಾನೀ ಗಾಣಗಾಪುರ- । ವರದಿ ನಿರ್ಗುಣರೂಪದಲಿ ನೀ । ವಿರದೆ ಚಿಂತೆಯ ಮಾಡಬೇಡಿರಿ ಸತ್ಯವೀವಚನಾ ॥
ಧರೆಯು ಮ್ಲೇಂಛಾಕ್ರಾಂತವಾಗಿದೆ । ಬರುವರೆಲ್ಲರು ದರ್ಶನಕೆ ನಾ । ವಿರಲು ತ್ರಾಸವು ಬ್ರಹ್ಮವೃಂದಕೆ ಮುಟ್ಟುವುದು ನಿಜವು ॥11॥

ಭಕ್ತಿ ದೃಢವಾಗಿರಲು ನರರಿಗೆ । ನಿತ್ಯದಲಿ ನಾ ದೃಶ್ಯರೂಪದೊ । ಳಿತ್ತು ದರ್ಶನಕಾಯ್ವ ಭಕ್ತರ ಸತ್ಯ ಸತ್ಯವಿದು ॥
ಯಾತ್ರೆಯಿದು ಲೌಕಿಕದ ಮಾತು ಪ । ರಾರ್ಥವೆಂದರೆ ಸತತವಿಲ್ಲಿಯೆ । ಭಕ್ತರಕ್ಷಕನಾಗಿ ವಾಸಿಪೆ ಗಾಣಗಾಪುರದಿ ॥12॥

ನಾನು ಮಠದಲಿ ಪಾದುಕಂಗಳ । ಸಾನುರಾಗದಳಲ್ಲಿಡಲವನು ಅನು- । ಮಾನವಿಲ್ಲದೆ ಕಾಮಿತಂಗಳ ಕೊಡುತಿಹವು ನಿಮಗೆ ॥
ಮೇಣಿರುವುದಶ್ವತ್ಥ ವೃಕ್ಷವು । ಕ್ಷೋಣಿಯಲಿ ಸುರಧೇನುವೇಯದು । ಮಾನಿಸಿರಿ ನೀವೆನ್ನ ಮಾತಿದು ಸತ್ಯ ಸತ್ಯ ವಿದು ॥13॥

ಮಾಡಿ ಸ್ನಾನವ ಸಂಗಮದಲಿ ಸ । ಗಾಢದಶ್ವತ್ಥ ಪ್ರದಕ್ಷಿಣೆ । ಮಾಡಿ ನಂತರ ಮಾಡಿರೈ ನೀವ್ ಪಾದುಕಾರ್ಚನವಾ ॥
ರೂಢಿಯಲಿ ಕಾಮಿತವ ಕೊಡುವುದು । ಬೇಡ ಸಂಶಯವಿದಕೆ ಭಕ್ತರು । ಬೇಡಿದುದ ಕೊಡುತಿರುವ ಸಾಧನವಿದುವೆ ಕೇಳೆಂದಾ ॥14॥

ವಿಘ್ನ ಹರನು ವಿನಾಯಕನ ದಿವ । ಭಗ್ನ ಮಾಡುವ ಸರ್ವವಿಘ್ನಗ । ಳನ್ನು ಪೂಜಿಸಿರೇಕಭಾವದೊಳೀಗಣಾಧಿಪನಾ ॥
ಸನ್ನು ತಾತಃಕರಣದಲಿ ನೀವ್ । ಚನ್ನಗೀ ಪಾದುಕವ ಪೂಜಿಸೆ । ಪೂರ್ಣವಾಗುವವೈ ಮನೋರಥವೆಲ್ಲ ನಿಜಮಾತು ॥15॥

ನಾನು ವಾಸಿಪೆ ಮಠದಿ ನಿತ್ಯದಿ । ಗಾಣಗಾಪುರದಲ್ಲಿ ನಿಜವಿದು । ಮಾನಿಸಿರಿ ನಾ ಪೇಳ್ದ ಮಾತಿದು ಸತ್ಯವೆನ್ನುತಲಿ ॥
ಈ ನಿರೋಪವ ಕೊಟ್ಟು ಶ್ರೀಗುರು । ತಾನು ತೆರಳಿದನೂರಿನಿಂದಲೆ । ಮೇಣು ಬಂದರು ಸೀಮೆಪರಿಯಂತರಕೆ ಪೌರಜನ ॥16॥

ತಿರುಗಿ ಕಳುಹಿಸಿ ಕೊಟ್ಟೆನೆಲ್ಲರ । ಪುರಕೆ ಬಂದರು ನಾಗರಿಕರೈ । ಗುರುವ ಮಠದ ನಿಜಾಸನದಿ ನೋಡಿದರು ಚೋದ್ಯವಲಾ ॥
ಅರೆಗಳಿಗೆಯಲಿ ಗುಪ್ತವಾದರು । ಪರಿಯ ನೋಡುತ ಚೋದ್ಯ ಪಟ್ಟರು । ಅರರೆ ಶ್ರೀಗುರುಲೀಲೆಯದುಭುತವೆಂದರಾನರರು ॥17॥

ಗುರುವು ಸರ್ವವ್ಯಾಪಿ ಲಕ್ಷ್ಮೀ । ವರನು ತ್ರೈಮೂರುತಿಯ ರೂಪನು । ಗುರುವು ಸಚರಾಚರದಿ ಭರಿತನು ಗುರುವನಂತನಾ ॥
ಶರಣರನು ರಕ್ಷಿಸುವ ಕೆಲಸಕೆ । ಗುರುವು ನರ ರೂಪದಲಿ ಬರುವನು । ಗುರುಮಹಿಮೆಯನು ತಿಳಿಯರೀಮೂಜಗದಿ ನೋಡಿದರೆ ॥18॥

ತೋರಿಸುತ ದೃಷ್ಟಾಂತವನು ಗುರು । ಮೂರುತಿಯು ಶ್ರೀಗಿರಿಗೆ ನಡೆದನು । ಚಾರುಚರಿತನು ಬಂದನಾ ಪಾತಾಳಗಂಗೆಯಲಿ ॥
ತೋರಿಸುತಲಾ ಗಿರಿಯ ಶಿಷ್ಯರಿ । ಗೇರಿ ಪರ್ವತದಲ್ಲಿ ಹೂಗಳ । ನಾರಿಸುತ ತರಬೇಕೆನುತಲಾಜ್ಞಾಪಿಸಿದನಾಗಾ ॥19॥

ಎಂದ ನುಡಿಯನು ಕೇಳಿ ಶಿಷ್ಯರು । ತಂದರೈ ಬಹು ಪರಿಯ ಪುಷ್ಪವ । ಕುಂದಚಂಪಕಬಕುಲಕರವೀರಾದಿ ಪುಷ್ಪಗಳಾ ॥
ತಂದು ದಿವ್ಯಾಸನವನಾಹೂ- । ವಿಂದೆ ಮಾಡಿದರೇಕಭಾವದಿ । ಚಂದದಿಂದಾಗುರುವು ಪುಷ್ಪಾಸನವನೇರಿದನು ॥20॥

ಗುರುವು ಕನ್ಯಾಗತನು ಸಂವ । ತ್ಸರವು ಬಹುಧಾನ್ಯಾಖ್ಯ ವುತ್ತರ । ಚರನು ಸೂರ್ಯನು ಕುಂಭಮಾಸದ ಸಂಕ್ರಮಣದಿವಸಾ ॥
ಮೆರೆವ ಭೃಗುವಾರದಲಿ ಖುತುಶೈ- । ಶಿರದಿ ಮಾಘದ ಕೃಷ್ಣ ಪಕ್ಷದ । ಮೆರೆವ ಪ್ರತಿಪದೆದಿವಸ ಶ್ರೀಗುರು ತೆರಳಿದನು ಗಿರಿಗೆ ॥21॥

ಕೂತು ಪುಷ್ಪಾಸನದಿ ಪೇಳ್ದನು । ಮಾತ ಕೇಳಿರಿ ಶಿಷ್ಯರೆಲ್ಲರೆ । ನಾತೆರಳ್ದೆನೆನುತ್ತ ಮನದಲಿ ಖಂತಿ ಮಾಡಿದಿರಿ ॥
ಈ ತನಕ ನಾನಿದ್ದ ಪರಿಯಲಿ । ಭೂತಳದಿ ನಾನಿರುವೆ ಮಠದಲಿ । ಪ್ರೀತಿಯಲಿ ಸೇವಿಸಿರಿ ಪಾದುಕ ಗಾಣಗಾಪುರದಿ ॥22॥

ಗುರುತನೊಂದೇ ನಾನು ಪೇಳ್ವೆನು । ಗಿರಿಗೆ ಮುಟ್ಟಲು ನಿಮಗೆ ಪುಷ್ಪವ । ಭರದಿ ಕಳುಹಿಸಿ ಕೊಡುವೆ ಕೇಳಿರಿಯಿದು ಪ್ರಸಾದವಲಾ ॥
ಧರೆಯೊಳೀ ಪುಷ್ಪಗಳ ಪೂಜಿಸೆ । ದೊರೆಯುವುದು ಪರಮಾರ್ಥವೆಲ್ಲವು । ನಿರತವೀ ಪುಷ್ಪಗಳ ಪ್ರಾಣಸಮಾನ ಮಾನಿಸಿರಿ ॥23॥

ಮರಳಿ ಪೇಳುವೆನೊಂದುಪಾಯವ । ಚರಿತವನು ಗಾಯನದಿ ಹಾಡಲು । ಪರಮಪ್ರೀತಿಯೊಳೆನ್ನ ನಾಮಸ್ಮರಣೆಮಾಡಿದರೆ ॥
ಧರೆಯೊಳೆನಗವರತುಲಪ್ರೀಯರು । ನಿರತ ವಾಸಿಪೆನವರ ಮನೆಯಲಿ । ಗುರುವು ಭಕ್ತಾಧೀನನಿರುವನು ಮರೆಯದಿರಿದನ್ನು ॥24॥

ಭಕ್ತಿ ಭಾವದೊಳೆನ್ನ ಮುಂದಕೆ । ಕೀರ್ತನವ ಮಾಡುವರು ಪ್ರೇಮಾ । ಸಕ್ತಿಯಲಿ ಹಾಡುತಲಿ ರಾಗವ ತಾನಮಾನದಲಿ ॥
ಭಕ್ತರಿವರಿಹರಯ್ಯ ಪ್ರೀತಿಯ । ಪಾತ್ರರೆಮ್ಮಯ ನೋಡಿರಿದ ನೀವ್ । ಸತ್ಯ ಮಾತಿದು ಧರಿಸದಿರಿ ಸಂಶಯವ ಮನದೊಳಗೆ ॥25॥

ಎನ್ನ ಚರಿತಾಮೃತದ ಪಾನವ । ನನ್ಯ ಭಕ್ತಿಯೋಳಾರು ಮಾಳ್ಪರೊ । ಸನ್ನುತಾತ್ಮರೆ ಯವರ ಮನೆಯಲಿ ವಾಸಿಪೆನು ನಿತ್ಯ ॥
ಎನ್ನ ಚರಿತವ ಪಠಿಸುತಿಹ ಸಂ । ಪನ್ನರಲಿ ಸಿದ್ಧಿಗಳು ದಾಸಿಯ- । ರೆನ್ನ ಕೃಪೆಯಲಿ ಲಕ್ಷ್ಮಿ ವಾಸಿಪಳಲ್ಲಿ ಸಂತತದಿ ॥26॥

ಮೃತ್ಯುವಿನ ಭಯವಿಲ್ಲವವರಿಗೆ । ಪುತ್ರಪೌತ್ರಾದಿಗಳ ಸೌಖ್ಯವು । ನಿತ್ಯದಲಿಯನುಭವಿಸುತಂತ್ಯದಿ ಮೋಕ್ಷ ಪಡೆಯುವರು ॥
ಸತ್ಯವಿಲ್ಲವಿದೆಂದು ಮನ್ನಿ ಪ- । ಗೆತ್ತಣದು ಸುಖಪ್ರಾಪ್ತಿ ನರಕಕೆ । ಪಾತ್ರನಹನೀ ದುಷ್ಟಗೆಂಬರು ಜಗದಿ ಗುರುದ್ರೋಹಿ ॥27॥

ಗುರುಚರಣಸದ್ಭಕ್ತಿ ಯಿಲ್ಲದ । ನರನು ನರಕಕೆ ಭಾಜನನು ಪರಿ- । ಪರಿಯ ದುಃಖದಿ ಜನನಮರಣದ ಯಂತ್ರದಲಿ ಸಿಲುಕಿ ॥
ನೆರಳುವನು ಗುರುಕೃಪೆಯ ಕಾಣದೆ । ದೊರೆವುದೇ ಮೇಣವಗೆ ಮೋಕ್ಷವು । ಭರವಸವನಿಡಿರೆನ್ನ ಮಾತಿನ ಮೇಲೆ ನೀವೆಂದಾ ॥28॥

ಇಂತು ಪೇಳುತ ಶಿಷ್ಯರಿಗೆ ಗುರು । ಸಂತಸದಿ ನದಿಯಲ್ಲಿ ಹೊರಟನು । ಚಿಂತಿತಾನನದಿಂದ ಕುಳಿತರು ಶಿಷ್ಯರೀ ತಟದಿ ॥
ಇಂತು ಕುಳಿತಾ ನಾವಿಕನು ವೃ । ತ್ತಾಂತವನು ಪೇಳಿದನು ಬರುತಲೆ । ಸಂತಸದಿ ನಿಮಗೊಂದು ವಚನವ ಗುರುವು ಕೊಟ್ಟಿಹನು ॥29॥

ಕರದಿ ದಂಡವ ಧರಿಸಿಹನು ಯುತಿ । ವರನು ಕಾಷಾಯಾಂಬರವನು- । ಟ್ಟಿರುವ ಚಿನ್ನದ ಪಾದುಕಂಗಳು ಚರಣದೊಳಗವಗೆ ॥
ತರಣಿಯಂದದಿ ಕಾಂತಿಯಿದ ನಿಮ- । ಗರುಹ ಬೇಕೆಂದೆನಗೆ ಪೇಳ್ದನು । ನರಹರಿ ಸರಸ್ವತಿಯ ಹೆಸರಿನ ದಿವ್ಯ ಯತಿವರನು ॥30॥

ಇರುವೆ ನಾನಾ ಗಾಣಗಾಪುರ । ವರದಿ ನಿರ್ಗುಣರೂಪದಲಿ ನೀವ್ । ನಿರತ ಪೂಜಿಸಲೇಕಭಾವದಿ ಸಕಲಫಲ ಪ್ರಾಪ್ತಿ ॥
ತೆರಳಿದೆನು ಲೌಕಿಕದ ಶ್ರೀಗಿರಿ । ವರಕೆ ನಿಜವಿದು ಸಗುಣರೂಪದಿ । ಬರುವೆ ದೃಷ್ಟಿಗೆ ಸಗುಣರೂಪದಿ ಭಕ್ತ ಶ್ರೇಷ್ಠರಿಗೆ ॥31॥

ಅರುಹಿದನು ಶ್ರೀಗುರುವದೀಪರಿ । ಬರಿವೆ ಚಿಂತಿಪುದೇಕೆ ಹೂಗಳು । ಬರುವವೀಕ್ಷಣ ಗುರುಪ್ರಸಾದವ ಕೊಳ್ಳಿನೀವೆಂದು ॥
ಅರುಹಲಾ ನಾವಿಕನು ನದಿಯಲಿ । ಹರಿದು ಬಂದವು ನಾಲ್ಕು ಹೂಗಳು । ಹರುಷದಿಂದವ ತೆಗೆದುಕೊಂಡರು ತೆರಳಿದರು ಮನೆಗೆ ॥32॥

ನುಡಿಯ ಕೇಳುತ ನಾಮಧಾರಕ । ನುಡಿದನೈ ಸಿದ್ಧನಿಗೆ ಶಿಷ್ಯರ । ಗಡಣದಲಿ ಪ್ರಾಮುಖ್ಯವಾರಿಗೆ ಪುಷ್ಪ ಲಭಿಸಿದವು ॥
ನುಡಿದನಾಕ್ಷಣ ಸಿದ್ಧ ನೀಪರಿ । ಪೊಡವಿಯಲಿ ಬಹುಮಂದಿ ಶಿಷ್ಯರ । ಗಡಣವಿತ್ತೈ ಗುರುನೃಸಿಂಹಸರಸ್ವತಿಗೆ ಕೇಳು ॥33॥

ಕೃಷ್ಣ ಬಾಲಉಪೇಂದ್ರ ಮಾಧವ । ರೆನ್ನುವರು ಯುತಿಯಾಶ್ರಮಿಗಳಾ । ಸನ್ನುತ ಸರಸ್ವತಿಯ ನಾಮದಿ ಖ್ಯಾತರಿದ್ದರಲಾ ॥
ಪುಣ್ಯ ತೀರ್ಥಂಗಳಿಗೆಯವರನು । ಮುನ್ನವೇ ಕಳುಹಿದನು ಶ್ರೀಗುರು । ವಿನ್ನುಳಿದ ಪ್ರಾಪಂಚಿಕರು ಬಹುಸಂಖ್ಯೆಯಗಣಿತವು ॥34॥

ಊರೊಳಿದ್ದರು ಸಕಲ ಶಿಷ್ಯರು । ಮೂರುಶಿಷ್ಯರು ಯೆನ್ನ ಹೊರತಾ । ಊರ ಬಿಟ್ಟು ಗುರುವರನ ಸಂಗಾತ ಹೋದರಲಾ ॥
ಚಾರು ಕವಿಗಳು ನಂದಿನರಹರಿ । ಮರನೇಯನ ಸಾಕರೆಯು ನಾ । ಚಾರು ಪುಷ್ಪವ ಪಡೆದ ಭಾಗ್ಯರು ನಾವೆ ನಾಲ್ವರಲಾ ॥35॥

ಗುರುಪ್ರಸಾದದ ಪುಷ್ಪಗಳ ತಾ- । ನಿರದೆ ಶಿರದಲಿ ಧರಿಸಿಹೆನು ಯೆಂ । ದರುಹಿ ಸಿದ್ಧನು ತೋರಿಸಿದನಾ ನಾಮಧಾರಕಗೆ ॥
ಹರುಷ ತಾಳ್ದನು ನಾಮಧಾರಕ । ಗುರುಪ್ರಸಾದವನಿಂದು ನೋಡಿದೆ । ಧರೆಯೊಳಗೆ ಸರಿಯಾರಿರುವರೈ ಯೆನುತ ಹಿಗ್ಗಿದನು ॥36॥

ಗುರುಚರಿತವಿದು ಕಾಮಧೇನುವು । ಗುರುಚರಿತವಿದು ಕಲ್ಪಲತೆ ಯೀ । ಧರೆಯೊಳಿಹ ಶ್ರೀಗುರುಚರಿತ್ರದ ಮಹಿಮೆಯನು ಜಗದಿ ॥
ಸುರರು ತಿಳಿಯರು ಭಾಗ್ಯಹೀನರು । ಧರಣಿಯಲಿ ತಾ ನರರ ರೂಪದಿ । ಬರುವರೆಂಬರು ವಿಷ್ಣು ಮೊದಲಾದಖಿಳ ಸುರವರರು ॥37॥

॥ ಅಧ್ಯಾಯ 52 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅಧ್ಯಾಯ 53

॥ ಶ್ರೀ ಗುರುಭ್ಯೋ ನಮಃ । ಶ್ರೀ ಗುರುದತ್ತಾತ್ರೇಯ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀಪಾದಶ್ರೀವಲ್ಲಭ ನರಸಿಂಹಸರಸ್ವತೀ ಚರಣಾರವಿಂದಾಭ್ಯಾಂ ನಮಃ ॥

॥ ಶ್ರೀ ಗಣಾಧಿಪತಯೇ ನಮಃ ॥ ಶ್ರೀ ಮಹಾಸರಸ್ವತಿಭ್ಯೋ ನಮಃ ॥ ಸರ್ವೇಭ್ಯೋ ದೇವೇಭ್ಯೋ ನಮಃ ॥

(ಭಾಮಿನೀ ಷಟ್ಪದಿ)

ಸಾರಾಂಶ ॥ ಗುರುಚರಿತ್ರಾಧ್ಯಾಯಸಾರವ । ನರುಹಿದನು ಪ್ರೇಮದಲಿ ಸಿದ್ಧನು । ತಿರುಗಿ ಪಠಣದ ವಿಧಿಯ ಫಲವನು ವಿಸ್ತರಿಸಿದನವಾ॥

ಗುರುರ್ಬ್ರಹ್ಮಾ ಗುರುರ್ವಿಷ್ಣು ಗುರುರ್ದೇವೋ ಮಹೇಶ್ವರಃ । ಗುರುರೇವ ಪರಬ್ರಹ್ಮಾ ತಸ್ಮೈ ಶ್ರೀಗುರವೇ ನಮಃ ॥1॥

ಗುರುಚರಿತ್ರಾಧ್ಯಾಯವೈವ- । ತ್ತೆರಡ ಕೇಳುತ ನಾಮಧಾರಕ । ಹರುಷಪುಳಕಾಂಕಿತನು ಬ್ರಹ್ಮಾ ನಂದದಲಿ ಮುಳುಗಿ ॥
ಕೊರಳ ಸೆರೆ ಬಿಗಿಹಿಡಿದವಾತಗೆ । ಮರೆತನ್ನ ನಿಜದೇಹಭಾನವ । ಭರದೊಳಾ ರೋಮಾಂಚವೆದ್ದು ಸಮಾಧಿಸುಖವಾಯ್ತು ॥2॥

ನೇತ್ರದಲಿ ಪ್ರೇಮಾಶ್ರು ಸುರಿದವು । ಗಾತ್ರವೆಲ್ಲ ಸಕಂಪವಾಯಿತು । ಗಾತ್ರವೆಲ್ಲ ವಿವರ್ಣವಾಯ್ತು ವಿಚಾರವಡಗಿದುದು ॥
ಸಾತ್ವಿಕಾಷ್ಟಕಭಾವ ಮೂಡಿತು । ಚಿತ್ರವಾಯ್ತು ಸಮಾಧಿಸುಖವದು । ಗಾತ್ರವೆಲ್ಲವು ಘರ್ಮದಿಂದಲಿ ತೋಯಿಸಿತು ಭರದಿ ॥3॥

ಹರುಷವಾಯಿತು ಸಿದ್ಧ ಯೋಗೀ । ಶ್ವರಗೆ ಗುರುಚರಿತಾಮೃತದಲೀ । ಪರಿಯ ಸುಖಸಾಮ್ರಾಜ್ಯವಾಯಿತ ದೆನುತ ಯೋಚಿಸಿದಾ ॥
ಕರದೊಳಿವನ ಸಮಾಧಿಯನು ನಾ । ಭರದೊಳಿಳಿಸದೆ ಬಿಟ್ಟ ರೀತನ । ಕೊರತೆ ಹೆಚ್ಚು ವುದಲ್ಲದೀ ಸುಜ್ಞಾನ ಮುಳುಗುವುದು ॥4॥

ಎನುತಲೀಪರಿ ಯೋಚಿಸುತಲಾ । ಮುನಿವರೇಣ್ಯನು ಸಿದ್ಧಿಯೋಗಿಯು । ತನುವನಗಲಾಡಿಸುತ ಬಾ ಬಾ ಕಂದ ಬಾರೆನುತಾ ॥
ನಿನಗೆ ತಾರಣವಾಯ್ತು ಲೋಕದ । ಜನರ ತರಣೋಪಾಯ ನಿನ್ನೊಳು । ಮುಳುಗುವುದು ನೀನೇಳು ಯೇಳೆಂದನು ಮುನೀಶ್ವರನು ॥5॥

ಗುರುಚರಣದಲಿ ಭಕ್ತಿ ದೃಢತರ- । ವಿರಲು ಬೇಕೈ ಲೌಕಿಕದಿ ತ । ತ್ವರತೆ ಬೇಕೈ ಶಾಸ್ತ್ರ ಸಮ್ಮತ ಕರ್ಮವಿರಬೇಕು ॥
ಗುರುಚರಣ ಸದ್ಭಕ್ತಿ ಬಾಲಕ । ಭರದಿ ನೀನಿದ ಕೇಳ್ದಿ ಹೆನುತೀ । ಗುರುಚರಿತಾಮೃತದ ಶರನಿಧಿಗುಕ್ಕಿ ತಾನಂದಾ ॥6॥

ನೀನು ಕೇಳಿದೆ ಯೆಂದು ಯೆನಗೆ ಕ- । ಥಾನಕವು ನೆನಪಾಯ್ತು ಪೇಳಿದೆ । ಜ್ಞಾನಮಯದೀಪವನು ಹಚ್ಚಿದೆ ಜಗಕೆ ಬೆಳಕಾಯ್ತು ॥
ಹಾನಿಯಾಯಿತು ದುಃಖಪೀಡೆಯು । ನೀನು ತಾರಕನಾಗಿ ಜಗಕೀ । ಏನು ಮಾಡುವೆ ಮಾತನಾಡೆಲೆ ಯೆಂದನಾ ಸಿದ್ಧ ॥7॥

ಪರಿಪರಿಯೊಳಾ ಸಿದ್ಧ ಮುನಿಯಾ । ದರದಿ ಪೇಳಲು ನಾಮಧಾರಕ । ತೆರೆದನೈ ನಿಜನೇತ್ರಗಳ ಪ್ರೇಮಾಶ್ರುಪೂರದಲಿ ॥
ಕರಗಳನು ಜೋಡಿಸುತ ಸಿದ್ಧನಿ । ಗರುಹಿದನು ಪ್ರೇಮದಲಿ ಬಿನ್ನಹ । ಗುರುವೆ ವಂದಿಪೆ ನಿನ್ನ ಮಹಿಮೆಯನಾರು ವರ್ಣಿಪರು ॥8॥

ಗುರುವೆ ನೀನಾಧಾರ ವಿಶ್ವಕೆ । ಗುರುವೆ ಕರುಣಾನೌಕೆ ನೀನೇ । ಗುರುವೆ ಭವಸಾಗರವ ದಾಟಿಪ ನಾವಿಕನು ನೀನೇ ॥
ಗುರುಚರಿತವಮೃತಕ್ಕೆ ಮಿಗಿಲದು । ಗುರುಚರಿತಪೀಯೂಷಶರಧಿಯ । ಲಿರದೆ ಭಕ್ತರ ಮುಳುಗಿಸುತ ನೀನಮೃತ ಕುಡಿಸಿದೆಯಾ ॥9॥

ಪರಿಪರಿಯ ದಿವ್ಯೌಷಧಂಗಳ । ತರುತ ಸಾರವ ತೆಗೆದು ಪಂಡಿತ । ರಿರಿಸುವರು ತ್ರೈಲೋಕ್ಯ ಚಿಂತಾಮಣಿರಸಾಯನವಾ ॥
ಪರಿಯೊಳೆನಗಾ ಗುರುಚರಿತ್ರದ । ಪರಮಸಾರವ ತೆಗೆದು ಕೊಡು ಯೆಂ । ದೆರಗಿದನು ಚರಣಕ್ಕೆ ಸಿದ್ಧಗೆ ನಾಮಧಾರಕನು ॥10॥

ಎಂದ ನುಡಿಯನು ಕೇಳಿ ಪರಮಾ । ನಂದವಾಯಿತು ಸಿದ್ಧ ಯೋಗಿಗೆ । ಕಂದ ಕೇಳ್ಳೈ ಪೇಳ್ವೆನವತರಣಿಕೆಯನೆಲ್ಲವನು ॥
ವಂದಿಸುತ ಗುರುದೇವರನು ತಾ । ಬಂದು ಶಿಷ್ಯನ ಕಂಡನಾಗುರು- । ಎಂದುಪೇಳಿದೆ ಮೊದಲನೆಯ ದಧ್ಯಾಯದಲಿ ನೋಡು ॥11॥

ಸರಸಿಜಾಸನನೆಂತು ಜನಿಸಿದ । ಪರಿಪರಿಯ ಯುಗಧರ್ಮಕಥನವು । ಶರಣ ಸಂದೀಪಕನ ಕಥೆಯಧ್ಯಾಯವೆರಡರಲಿ ॥
ಶರಣರಕ್ಷಕನೆಂಬ ಬಿರಿದಿಲಿ । ಹರಿಸಿದನು ದುರ್ವಾಸಶಾಪವ । ಹರಿಯು ಧರೆಗವತರಿಸಿದನ ದಧ್ಯಾಯ ಮೂರರಲಿ ॥12॥

ಸತ್ಯವನು ಪರಿಕಿಸಲು ಬಂದು ಶಿ । ಶುತ್ವ ಪಡೆದರು ಬ್ರಹ್ಮ ಮೊದಲಾ । ವಿಶ್ವ ಪಾಲರು ಬಟ್ಟೆ ಗೆಟ್ಟರು ನಾಲ್ಕರಲಿ ತಿಳಿಯೆ ॥
ವಿಶ್ವಪಾಲಕ ದತ್ತಮೂರ್ತಿ ಶಿ । ಶುತ್ವ ಪಡೆದರು ಬ್ರಹ್ಮಕುಲದಲಿ । ಸಾತ್ವಿಕ ಶ್ರೀಪಾದರಾದರು ಪಂಚಮಾಧ್ಯಾಯಾ ॥13॥

ಆರನೇಯಧ್ಯಾಯದಲಿ ಸುರ- । ವೈರಿ ರಾವಣನಿಂದ ಲಿಂಗವ । ಹಾರಿಸುತ ಗೋಕರ್ಣದಲಿ ಸ್ಥಾಪಿಸಿದನಾಗಣಪಾ ॥
ಧಾರುಣಿಯೊಳಾ ಕ್ಷೇತ್ರಮಹಿಮೆಯ । ಧಾರುಣಿಪಗರುಹಿದನು ಗೌತಮ । ಚಾರುಗೋಕರ್ಣದಪವಿತ್ರತೆ ಸಪ್ತಮಾಧ್ಯಾಯ ॥14॥

ಪ್ರಾಣ ತ್ಯಜಿಸಲು ನದಿಗೆ ಬಂದಾ । ಮಾನಿನಿಗೆ ಜಡ ಸುತಗೆ ಪ್ರೇಮದಿ । ಜ್ಞಾನವಿತ್ತನು ಗುರುವು ಕೇಳೆಂಟನೆಯ ಧ್ಯಾಯದಲಿ ॥
ಕ್ಷೋಣಿಪತಿಯವನರಲಿ ಜನಿಸುವೆ । ನೀನೆನುತ ರಜಕನಿಗೆ ವರವನು । ಸಾನುರಾಗದಿ ಕೊಟ್ಟನೈ ಗುರು ನವಮಪ್ರಕರಣದಿ ॥15॥

ತುಡುಗರಾ ಶ್ರೀಪಾದಯಾತ್ರೆಗೆ । ನಡೆಯುತಿಹ ವಿಪ್ರನನು ಕೊಂದರು । ವೊಡನೆ ಶ್ರೀಗುರು ಬದುಕಿಸಿದನೈ ದಶಮದಧ್ಯಾಯ ॥
ಪೊಡವಿಯಲ್ಲಿ ಕರಂಜಪುರದಲಿ । ಮಡದಿಯಂಬಾಬಾಯಿಯುದರದೊ । ಳೊಡನೆ ಬಂದನು ನರಹರಿಯು ಹನ್ನೊಂದರಲಿನೋಡು ॥16॥

ನರಹರಿಯು ಜ್ಞಾನವನು ಹೇಳುತ । ತೊರೆದು ತಾಯ್ತಂದೆಗಳ ಕಾಶೀ । ಪುರದಿ ಸನ್ಯಾಸನನು ಕೊಂಡನು ದ್ವಾದಶಾಧ್ಯಾಯಾ ॥
ಮರಳಿ ತಾಯ್ತಂದೆಗಳನೀಕ್ಷಿಸಿ । ಬರಲು ಗೋದಾತೀರದಲಿ ಭೂ- । ಸುರನ ಕುಕ್ಷಿವ್ಯಥೆಯ ಚರಿಸಿದನೈ ತ್ರಯೋದಶದಿ ॥17॥

ಚಾರುಸಾಯಂದೇವನಿಂಗಾ । ಕ್ರೂರಯವನನು ತುಚ್ಛಸಲಿಕಾ । ಘೋರಶಾಸನವಿತ್ತನೈ ಹದಿನಾಲ್ಕರಲಿ ತಿಳಿಯೆ ॥
ಧಾರುರುಣಿಯೊಳಿಹ ತೀರ್ಥಗಳಿಗಾ । ಚಾರಕೋಸುಗ ಕಳುಹಿ ಶಿಷ್ಯರ । ಭಾರಿ ಗುಪ್ತ ದೊಳಿದ್ದನೈ ಹದಿನೈದರಲಿ ತಿಳಿಯೆ ॥18॥

ತೊರೆದು ಗುರುವನು ಬಂದ ವಿಪ್ರಂ । ಗರುಹಿದನು ಭಕ್ತಿ ಪ್ರಕಾರವ । ತೆರಳಿದನು ಹದಿನಾರರಲಿ ಗುರು ಭಿಲ್ಲವಡಿಗಾಗಿ ॥
ಕಿರಿಮತಿಯ ಬ್ರಾಹ್ಮಣನು ಭುವನೇ । ಶ್ವರಿಗೆ ಜಿಹ್ವೆಯ ಛೇದಿಸಲು ಭೂ । ಸುರನಿಗಿತ್ತನು ಜ್ಞಾನ ಹದಿನೇಳರಲಿ ಶ್ರೀಗುರುವು ॥19॥

ಕಿತ್ತಿ ಘೇವಡೆ ಬಳ್ಳಿಯನು ತಾ- । ನಿತ್ತನೈ ಕುಂಭವನು ಬಡವಗೆ । ವಿಸ್ತರಿಸಿತಾ ಮಹಿಮೆ ಹದಿನೆಂಟರಲಿ ಗುರುವರನಾ ॥
ಇತ್ತು ಯೋಗಿನಿಯರಿಗೆ ವರವನು । ಕೀರ್ತಿಯೌದುಂಬರದ ವರ್ಣಿಸಿ । ಮತ್ತೆ ಸಂಗಮಕಾಗಿ ಹತ್ತೊಂಭತ್ತರಲಿ ಬಂದಾ ॥20॥

ಸತಿಯ ಬ್ರಹ್ಮ ಪಿಶಾಚಬಾಧೆಯ । ಗತಿಗೆ ಹಚ್ಚುವ ಸ್ತ್ರೀಗೆ ಕೊಟ್ಟನು । ಸುತರ ಮರಣದಿ ಜ್ಞಾನವಿಪ್ಪತ್ತರಲಿ ಕೊಟ್ಟನಲಾ ॥
ಯತಿಯ ಉಪದೇಶದಲಿ ಪ್ರೇತಕೆ । ಮತಿಯು ಬಂತೌದುಂಬರದೊಳಾ । ಸತಿಗೆ ಸಂತಸವಿತ್ತ ನಿಪ್ಪತ್ತೊಂದರಲಿ ಗುರುವು ॥21॥

ಬಡವನಲಿ ಭಿಕ್ಷೆಯನು ಬೇಡುತ । ಹಡೆಯದಿಹ ಮುದಿಯಮ್ಮ ಹಾಲನು । ಒಡನೆ ಹಿಂಡಿಸಿದನು ಗುರುವ ದಿಪ್ಪತ್ತಯೆರಡರಲಿ ॥
ಪೊಡವಿಪತಿ ಗಾಣಗದಿ ಗುರುವಿಗೆ । ಕೊಡಲು ಮಠವನು ಬಂದು ನಿಂತನು । ವೊಡನೆ ಯಿಪ್ಪತಮೂರರಲಿ ಪೈಶಾಚಮೋಚನವು ॥22॥

ಮುನಿ ತ್ರಿವಿಕ್ರಮ ನಿಂದಿಪುದನಾ । ಮನದಿ ತಿಳಿದಾ ವಿಶ್ವರೂಪವ । ವಿನಯದಲಿ ತೋರಿಸಿದನಿಪ್ಪತನಾಲ್ಕರಲಿ ಗುರುವು ॥
ಮನದಿ ಗರ್ವದಿ ಕುದಿವ ವಿಪ್ರರ । ಮುನಿ ತ್ರಿವಿಕ್ರಮ ಗುರುಕಡೆಗೆ ತಂ । ದನು ಕಣಾ ಮದ ಮುರಿಯಲಿಕೆ ಯಿಪ್ಪತ್ತ ಯ್ಯೆದರಲಿ ॥23॥

ವೇದ ಪಠಣದ ಮದದ ದ್ವಿಜರಿಗೆ । ವೇದರಚನೆಯ ಹೇಳಿ ಬುದ್ಧಿಯ । ವಾದವನು ಪೇಳಿದನ ದಿಪ್ಪತ್ತಾರರಲಿ ಗುರುವು ॥
ಹಾದಿ ನಡೆವಂತ್ಯಜನ ಮುಖದಿಂ । ವೇದ ನುಡಿಸುತ ದ್ವಿಜರ ಯಮಪುರ । ಹಾದಿ ಹಚ್ಚಿದ ಮುದದೊಳಿಪ್ಪತ್ತೇಳರಲಿ ಗುರುವು ॥24॥

ಪತಿಧರ್ಮಾಧರ್ಮನರುಹುತ । ಸತಿಸುತರನೊಡನವನ ಕಳುಹಿದ । ನತಿವಿನೋದದೊಳಿಪ್ಪತೆಂಟನೆಯಲ್ಲಿ ಶ್ರೀಗುರುವು ॥
ಯತಿವರನು ಭಸ್ಮ ಪ್ರಭಾವವ । ಚತುರತನದಲಿ ಪೇಳಿ ರಕ್ಕಸ । ಕಥೆಯ ಪೇಳ್ದನು ಇಪ್ಪತೊಂಬತ್ತರಲಿ ನೀ ನೋಡು ॥25॥
ಮರಣವಾಗಲು ಪತಿಗೆನುತ ಪರಿ- । ಪರಿಯಶೋಕವ ಮಾಳ್ಪ ಸತಿಗಾ । ಗುರುವು ಬೋಧೆ ಯನಿತ್ತನೈ ಮೂವತ್ತರಲಿ ನೋಡು ॥
ತರುಣಿಗಾನಂತರ ಪತಿ ವ್ರತೆ । ಯರ ಸುತತ್ವವ ಬೋಧಿಸಿದನಾ । ಗುರುವು ಮೂವತ್ತೊಂದರಲಿ ಸಹಗಮನವಿಧಿಗಳನು ॥26॥
ಪತಿಯೊಡನೆ ಸಹಗಮನಕಾಗಿಯೆ । ಸತಿಯು ತೆರಳಲು ಗುರುವ ನೋಡಲು । ಪತಿಯ ಮೂವತ್ತೆರಡರಲಿ ಯೆಬ್ಬಿಸಿದನಾ ಗುರುವು ॥
ಕ್ಷಿತಿಪತಿಗೆ ರುದ್ರಾಕ್ಷಮಹಿಮೆಯ । ಯತಿವರೇಣ್ಯನು ಕುಕ್ಕುಟದ ಸ- । ತ್ಕಥೆಯ ಮೂವ್ವತ ಮೂರರಲಿ ಹೇಳಿದನು ಶ್ರೀಗುರುವು ॥27॥
ಅರುಹಿ ರುದ್ರಾಧ್ಯಾಯಮಹಿಮೆಯ । ಧರಣಿಪನ ಸುತನನು ಪರಾಶರ । ವರಮುನಿಯು ಮೂವತ್ತನಾಲ್ಕರ ಲೆಬ್ಬಿಸಿದ ಮುದದಿ ॥
ಅರುಹಿ ಕಚನಾಖ್ಯಾನವನು ಮೇ- । ಣರುಹಿ ಸೀಮಂತಿನಿಯ ವ್ರತವನು । ಗುರುವು ಮೂವತ್ತೈದರಲಿ ಸದ್ಧರ್ಮ ಹಚ್ಚಿದನು ॥28॥
ತರುಣಿಯೊಡನೆ ಪರಾನ್ನ ಭೋಜನ । ಕಿರದೆ ಹೋದ ದ್ವಿಜಗೆ ಕರ್ಮದ । ಪರಿಯ ಮೂವತ್ತಾರರಲಿ ಹೇಳಿದನು ಶ್ರೀಗುರುವು ॥
ಪರಿಪರಿಯ ಆಹ್ನಿಕಪ್ರಕಾರವ । ನರುಹುತಾ ವಿಪ್ರನಿಗೆ ಮೆಚ್ಚುತ । ವರವನಿತ್ತನು ಗುರುವು ಮೂವತ್ತೇಳರಲಿ ತಿಳಿಯೆ ॥29॥
ಮೂರುಜನರಿಗೆ ಸಾಲುವಡಿಗೆಯ । ರೂರಮಂದಿಯನೆಲ್ಲನುಣಿಸಿದ । ಕಾರಣಿಕ ಗುರುರಾಯ ಮೂವತ್ತೆಂಟರಲಿ ನೋಡೆ ॥
ನಾರಿ ಗಂಗಾ ಬಂಜೆ ಮುದುಕಿಯು । ಚಾರು ಪುತ್ರರ ಪಡೆದಳದರ ವಿ- । ಚಾರ ಮೂವತ್ತೊಂಬತರಲಾ ಚೋದ್ಯವೇನೆಂಬೆ ॥30॥
ಕಾಷ್ಠ ಶುಷ್ಕಕೆ ತರಿಸಿ ಪಲ್ಲವ । ಕುಷ್ಟರೋಗವ ನಾಶ ಮಾಡಿದ । ಶ್ರೇಷ್ಠ ಮಹಿಮಾವರ್ಣನವು ನಾಲ್ವತ್ತರಲಿ ತಿಳಿಯೆ ॥
ಇಷ್ಟ ಕಾರ್ಯವ ಕೊಡುವ ಕಾಶೀ । ಪಟ್ಟಣದ ಯಾತ್ರೆಯನು ಪೇಳಿದ । ಶ್ರೇಷ್ಠ ತೀರ್ಥಾಖ್ಯಾನ ನಾಲ್ವತ್ತೊಂದರಲಿ ತಿಳಿಯೆ ॥31॥

ಗುರುವು ಸಾಯಂದೇವ ಸತಿಪು- । ತ್ರರನು ಕರಿಸುತ ವರವನಿತ್ತನು । ಗುರುವರನವ ಸ್ತುತಿಸಿದನು ನಾಲ್ವತ್ತೆರಡರಲಿ ತಿಳಿಯೆ ॥

ವರದಶ್ರೀಮದನಂತವ್ರತವನು । ಗುರುವು ಸಾಯಂದೇವಗರುಹುತ । ಭರದೊಳದ ಮಾಡಿಸಿದನ್ನೈ ನಾಲ್ವತ್ತಮೂರರಲಿ ॥32॥

ಗುರುವು ತಂತುಕನಿಂಗೆ ಶ್ರೀಗಿರಿ । ಹರನ ತೋರಿಸಿ ಮಹಿಮೆಯನು ವಿ । ಸ್ತರಿಸಿದನು ನಾಲುವತ್ತನಾಲ್ಕನೆಯಲ್ಲಿ ನೋಡಿದೆಯಾ ॥

ಕೊರಗಿ ಕುಷ್ಟದಿ ಬಂದು ತುಳಜಾ । ಪುರದಿ ಸಾಗದೆ ಬರಲು ಶ್ರೀಗುರು-। ವರನು ನಾಲ್ವತ್ತೈದರಲಿ ಕುಷ್ಟವನು ಹರಿಸಿದನು ॥33॥

ಬರಲು ಹಿಪ್ಪರಗೆ ಗ್ರಾಮದಲಿ ನರ-। ಹರಿ ಕವಿಯು ತಾ ಶಿಷ್ಯನಾದನು । ಗುರುವ ನಲ್ವತ್ತಾರರಲಿ ಸ್ತುತಿಸಿದನು ವಿಧವಿಧದಿ ॥

ಶರಣರಲಿ ದೀಪಾವಳಿಯ ದಿನ । ತೆರಳಿದನು ತಾನೆಂಟು ದೇಶಕೆ । ಗುರುವು ನಾಲ್ವತ್ತೇಳರಲಿ ಮಾಡಿದನು ಚೋದ್ಯವಲಾ ॥34॥

ಬೆಳೆಯ ಕೊಯ್ಯಲು ಹೇಳಿ ಕುಣಬಿಯ । ಬೆಳೆಯ ಸಾವಿರಪಾಲು ಮಾಡಿದ । ಫಲವ ನಾಲ್ವತ್ತೆಂಟರಲಿ ವರ್ಣಿಸುವ ಪರಿಯೇನು ॥

ಬಳಿಕ ಸಂಗಮದಷ್ಟ ತೀರ್ಥಂ । ಗಳನು ತೋರಿಸಿ ತಂಗಿ ಕುಷ್ಟವ । ತೊಳೆದ ನಾಲ್ವತ್ತೊಂಭತರಲ್ಲೈ ಮಹಿಮೆಯಗಣಿತವು ॥35॥

ಹರಿಸಿ ಮ್ಲೇಂಛಾಧಿಪನ ಕುರುವನು । ಪುರಕೆ ತೆರಳುತ ಯವನರಾಜನ । ವರವನೈವತ್ತರಲಿ ಕೊಟ್ಟನು ಯವನರಾಜನಿಗೆ ॥

ಧರೆಯೊಳಗೆ ಕಲಿ ರಾಜನಾಳಿಕೆ । ಯಿರುವು ದೆನುತಲಿ ನೋಡಿ ಗುಪಿತದೊ । ಳಿರುವೆನೆಂದನು ಗುರುವು ಕೇಳ್ಳೈ ಯಂತ್ಯ ಪ್ರಕರಣದಿ ॥36॥

ಕರಿಸಿ ಶಿಷ್ಯರಿಗೆಂದನಾ ಗುರು- । ವರನು ಕೇಳಿರಿ ಪೋಗುವೆನು ಶ್ರೀ । ಗಿರಿಯಯಾತ್ರೆಗೆ ಮಲ್ಲಿಕಾರ್ಜುನ ದರ್ಶನಕೆ ನಾನು ॥

ಗುರುವಚನವನು ಕೇಳಿ ಗಾಣಗ- । ಪುರದ ನರನಾರಿಯರು ಮರುಗುತ । ಗುರುಚರಣಧೂಳಿಯಲಿ ಲೋಟಾಂಗಣವ ಹಾಕಿದರು ॥37॥

ಕುರುಳ ನೇವರಿಸುತ್ತ ಶಿಷ್ಯರಿ- । ಗರುಹಿದನು ಗುರುವರನು ಕೇಳಿರಿ । ಇರುವೆ ನಿಲ್ಲಿಯೆ ಗಾಣಗಾಪುರಮಠದಿ ನಿತ್ಯದಲಿ ॥

ಧರಿಸಿರೈ ಮದ್ಭಜನಭಕ್ತಿಯ । ದೊರಕುವುದು ಪರಮಾರ್ಥವೆಲ್ಲವು । ಮರುಗ ಬೇಡಿರೆನುತ್ತ ನಡೆದನು ಕರ್ದಳೀವನಕೆ ॥38॥

ಗುರುವು ನಾವಿಕನಿಂ ನಿರೋಪವ । ಶರಣರಿಗೆ ಕಳುಹಿದನು ಪುಷ್ಪವ । ಪಠಿಸಲು ಗುರುಚರಿತ ಶರಧಿಯಪಾರವಾಗಿಹುದು ॥
ಶರಧಿಯಮೃತದಪಾರವಿದರಿಂ । ಭರದೊಳೈವತ್ತೆರಡು ಕಂಭಗ । ಳಿರದೆ ತುಂಬಿಸಿ ತಂದೆ ಭಕ್ತವೃಂದಸಲುವಾಗಿ ॥39॥

ತೆರಳಿದನು ಶ್ರೀಗಿರಿಗೆ ಶ್ರೀಗುರು । ವರನೆನುತ್ತಲಿ ಯೋಚಿಪರು ಶ್ರೀ । ಗುರುವರನು ಕೇಳಿಹನು ಗಾಣಗಪುರದಿ ನಿರ್ಗುಣದಿ ॥
ಧರೆಯೊಳಗೆ ಕಲಿರಾಜ್ಯ ವಾಯ್ತೆಂ । ದರಿತು ಶ್ರೀಗುರು ಗುಪ್ತವಾದನು । ಶರಣರಿಗೆ ಸಗುಣದಲಿ ತೋರ್ಪನು ಸರ್ವಕಾಲದಲಿ ॥40॥

ಗುರುಚರಿತ್ರದ ಸಾರವೀಯವ- । ತರಣಿಕೆಯು ಯಿದನಾರು ಪಠಿಪರೊ । ದೊರೆಯುವವು ಕಾಮಿತಗಳೆಲ್ಲವು ಭಾವವೊಂದಿರಲು ॥
ಪರಮಶಿಷ್ಯನು ನೀನು ನೀನನ । ತರಣಿಕೆಯ ಬೇಡಿರ್ದಕಾರಣ । ದೊರೆಯಿತ್ತೈ ಮರ್ತ್ಯರಿಗೆ ಗುರುಚರಿತಾಮೃತದ ಸಾರ ॥41॥

ಗುರುಚರಿತ್ರವ ಕೇಳಿದವರಿಗೆ । ತ್ವರಿತದಲಿ ಧ್ಯಾನದಲಿ ಬರುವುದು । ಚರಿತ ಕೇಳದರಿಂಗೆ ಜನಿಸುವುದಿಚ್ಛೆ ಕೇಳುವರೆ ॥
ಅರುಹಿದೆನು ನಾ ನಿನಗೆ ಕೇಳವ । ತರಣಿಕೆಯ ಸ್ಮರಣದಲಿ ಶ್ರೀಗುರು । ಚರಿತ ಸರ್ವವು ವ್ಯಕ್ತವಪ್ಪುದು ಕಣ್ಣಿಗೆದುರಿನಲಿ ॥42॥

ಚರಣಕೆರಗುತ ನಾಮಧಾರಕ । ನರುಹಿದನು ಸಿದ್ಧನಿಗೆ ನಿನ್ನಯ । ಕರುಣದಲಿ ಸರ್ವಾರ್ಥಸಿದ್ಧಿಯು ದೊರೆವುದಿದು ಸಿದ್ಧ ॥
ಧರೆಯೊಳಗೆ ಸಪ್ತಾಹವಾಚನ । ಪರಿಯ ಪೇಳಲು ಬೇಕೆನುತಲಾ । ಪರಮಸಿದ್ಧ ಮುನೀಂದ್ರನೆಂದನು ನಗುತಲಾತನಿಗೆ ॥43॥

ಇರಲು ಸ್ವಾಂತಃಕರಣಶುದ್ಧಿಯು । ನಿರತ ಪಠಿಸೈ ಗುರುಚರಿತ್ರವ । ದೊರೆಯುವುದು ಸುಖವಿಹಪರದಿ ಶಾಶ್ವತದ ಮಂಗಲವು ॥
ಎರಡನೆಯ ಪರಿ ಪೇಳುವೆನು ನೀ । ನಿರದೆ ಮನಗೊಟ್ಟಿದನು ಕೇಳುತ । ಚರಿಸಲಾ ತೆರನಾಗಿ ಫಲವಹುದನುಪಮವು ನೋಡೆ ॥44॥

ಧರೆಯೊಳೀ ಸಪ್ತಾಹವಾಚನ । ಪರಿಯ ಪೇಳ್ವೆನು ಮಿಂದು ಮಡಿಯಲಿ । ಪರಮಶಾಸ್ತ್ರೋಕ್ತದಲಿ ಪ್ರಾರಂಭಿಸಲು ಬಹುಪುಣ್ಯ ॥
ವರ ಮುಹೂರ್ತದ ಶುದ್ಧಿಯಲಿ ತಾ- । ನಿರದೆ ಮಾಡುತ ಸ್ನಾನ ಸಂಧ್ಯಾ । ನಿರತ ಪಠಣದ ಸ್ಥಾನವನು ಶೋಭಿಸುತ ರಂಗದಲಿ ॥45॥

ವಿಧಿ ಪುರಸ್ಪರ ದೇಶಕಾಲದ । ಮುದದಿ ಸಂಕಲ್ಪವನು ಮಾಡುತ । ಲೊದಗಿ ಶ್ರೀಗುರುರೂಪ ಪುಸ್ತಕ ಪೂಜೆ ಮಾಡುವುದು ॥
ಮೊದಲಿನಿಂದಲೆ ಸ್ಥಾನವೊಂದೇ । ವಿದಿತವಾಗಿರ ಬೇಕು ಪಠಣಕೆ । ಮುದದಿ ವಿಪ್ರಾರ್ಚನೆಯ ಮಾಡುತ ಪಠಣಕಾರಂಭಾ ॥46॥

ಇರಲು ಬೇಕೈ ದೀಪ ಸೋಜ್ವಲ । ಧರಿಸ ಬೇಕೈ ಮೌನವನು ತಾ । ಬರಿದೆ ಮಾತಾಡುವದು ಸಲ್ಲದು ತತ್ವ ಭಾಷಣವು ॥
ಚರಣಕೆರಗುತ ಗುರುಹಿರಿಯರನು । ಧರಿಸಿ ಕಾಮಾದಿಗಳ ನೇಮವ । ಗುರುಚರಿತ್ರದ ಪಠಣಕಾರಂಭಿಪುದು ಭಕ್ತಿಯಲಿ ॥47॥

ದಿನಮೊದಲಿಗೊಂಭತ್ತು ಪ್ರಕರಣ । ದಿನವೆರಡಕೆ ಕ್ವೀಸ ದಿನಮೂ । ರನೆಗೆ ಯಿಪ್ಪತ್ತೊಂಭತ್ತೈ ನಾಲ್ಕನೆಗೆ ಪಸತಿಸ ॥
ದಿನದೊಳೈದಕೆ ಮೂವತೆಂಟೈ । ದಿನದೊಳಾರನೆ ಮೂರುನಲುವತು । ದಿನದೊಳೇಳಕೆ ಸರ್ವಪುಸ್ತಕವನತರಣೆ ಕೂಡಿ ॥48॥

ನಿತ್ಯ ಪಾಠವು ತೀರಿದಾಕ್ಷಣ । ಉತ್ತರಾಂಗದ ಪೂಜೆ ಮಾಳ್ಪುದು । ಭಕ್ತಿಯಲಿ ವಂದಿಸುತ ಗುರುವನು ತಿಂಬುದುಪಹಾರಾ ॥
ರಾತ್ರಿಯಲಿ ಭೂಶಯನ ಮಾಳ್ಪುದು । ಶಾಸ್ತ್ರಸಮ್ಮತ ಮಡಿಯ ಪಾಲಿಸಿ । ಸಪ್ತ ದಿನವೀ ನೇಮಗಳ ಪಾಲಿಪುದು ಭಕ್ತಿಯಲಿ ॥49॥

ಏಳುದಿನವೀಪರಿಯ ನೇಮವ । ಪಾಲಿಸುತ ಸಪ್ತಾಹವಾಚನ । ಲೀಲೆಯಿಂ ತೀರಿಸುತ ಶಕ್ತ್ಯನುಸಾರ ಭೋಜನವಾ ॥
ಮೇಲೆ ದ್ವಿಜಮುತ್ತೈದೆಯರಿಗಾ । ಲೀಲೆಯಿಂದಲಿ ಮಾಡಿದರೆ ಗುರು । ಪಾಲಿಸುವನೈ ದರ್ಶನವ ಕೇಳ್ನಾಮಧಾರಕನೆ ॥50॥

ಭೂತಪ್ರೇತಾದಿಗಳ ಬಾಧೆಯು । ಖಾತ್ರಿಯಲಿ ಸಂಹಾರವಪ್ಪುದು । ಪಾತಕಂಗಳು ಸುಟ್ಟು ಹೋಗುವವೀ ಪಠಣದಿಂದಾ ॥
ಭೂತಳದಿ ಶೀಗುರುಚರಿತ್ರದ । ಪ್ರೀತಿಪೂರ್ವಕ ಪಠಣ ಮಾತ್ರದಿ । ಭೀತಿರೋಗಾದಿಗಳು ನಾಶಿಪವೇನ ಹೇಳುವೆನು ॥51॥

ಚರಣಕೆರಗುತ ನಾಮಧಾರಕ । ನರುಹಿದನು ಸಿದ್ಧನಿಗೆ ಕೇಳೈ । ಪರಮಧನ್ಯನು ನಾನು ಕೇಳ್ ಕೃತಕೃತ್ಯನಾದೆನಲಾ ॥
ಬರಿದೆ ಬಾಲಕನೆಂದುಪೇಕ್ಷಿಸ । ದಿರದೆ ನೀನುಪಕಾರ ಮಾಡಿದೆ । ಮರೆವೆನೆಂತೈ ನಿನ್ನ ಕರಣಿಯಗಾಧವಾಯಿತಲಾ ॥52॥

ಸುರತರುವಲಾ ಸಿದ್ಧ ಮುನಿ ತಾ । ಕರವ ಪಸರಿಸೆ ನಾಮಧಾರಕ । ಕರುಣದಿಂ ಸುರಿಸಿದನು ಫಲಗಳನೇಕಪರಿಯಾಗಿ ॥
ಇರುವನಥವಾ ನಾಮಧಾರಕ । ಪರಮಚಾತಕ ಸಿದ್ಧ ಮೇಘನು । ಸುರಿಸಿದನು ವರ್ಷವನು ಲಾಭವದಾಯ್ತು ಜಗಕೆಲ್ಲಾ ॥53॥

ವಂದಿಸುವೆ ಶೀಗುರುಚರಣವನು । ವಂದಿಸುವೆ ನಾ ಸಿದ್ಧ ಮುನಿಯನು । ವಂದಿಸುವೆ ನಾ ನಾಮಧಾರಕ ಶಿಷ್ಯರತ್ನವನು ॥
ಒಂದೆರೂಪವು ಶಿಷ್ಯ ಗುರುಗಳು । ಚಂದದಿಂದೆರಡಾಗಿ ಜಗದಲಿ । ಬಂಧುರದ ಲೀಲೆಯನು ಕ್ರೀಡಿಪರೆರಡು ರೂಪದಲಿ ॥54॥

ಗುರುಚರಿತ್ರಮರಾಠಿಗ್ರಂಥದ । ಪರಮಸಾರವಿದೆಂದು ಕನ್ನಡಿ । ಗರಿಗೆ ಪ್ರೇಮದೊಳರ್ಪಿಸುವೆನೀ ಮೋಕ್ಷಸಾಧನವಾ ॥
ತೊರತೆಗಳ ನೋಡದಲೆ ಗ್ರಂಥೋ- । ತ್ಕರುಷವನು ಬಯಸುವುದು ಶ್ರೀಗುರು । ಚರಿತವಲ್ಲವೆ ದೋಷಗಳ ನಿರ್ದೋಷಮಾಳ್ಪುದಲಾ ॥55॥

ಕನ್ನಡಿಗನಾನಲ್ಲ ಗ್ರಂಥಗ- । ಳನ್ನು ಕಲಿತವನಲ್ಲ ಛಂದ । ಸ್ಸನ್ನೆ ನೋಡದೆ ಬರೆದೆನೀ ಗುರುಸ್ತುತಿಯೆನುತ ಮುದದಿ ॥
ಮನ್ನಿಪುದು ಪಂಡಿತರು ದೋಷಗ- । ಳನ್ನು ನೋಡದೆ ಸೂಜ್ಞರಲ್ಲವೆ । ಮನ್ನಿಸುವುದೀ ಗ್ರಂಥ ಹಂಸಕ್ಷೀರನ್ಯಾಯದಲಿ ॥56॥

ಮಶಕ ಪಾಮರ ನಾನಹುದು ನಿಜ । ವಸುಮತಿಯೊಳೀ ಗುರುಮಹಾತ್ಮ್ಯೆಯು । ಕುಶಲತೆಯ ಸಾಗರವು ಪ್ರೇಮಾಮೃತದ ಶರಧಿಯಲಾ ॥
ವಿಷಮತನವನು ಬಿಟ್ಟು ಗ್ರಂಥ । ಪ್ರಸರವನು ಮಾಡುವುದು ಪ್ರೇಮದಿ । ಮಶಕವಾದರು ಬಾಯೊಳಿರದೇ ಜೇನು ತರುವದಲಾ ॥57॥

ಎನ್ನದೀ ಕೃತಿಯಲ್ಲ ಬರಿಸಿದ । ಸನ್ನುತಾತ್ಮನು ದತ್ತರಾಜನು । ವಿಷ್ಣು ಗುರುರೂಪದಲಿ ಸ್ಫುರಣೆಯನಿತ್ತು ಮುಗಿಸಿದನು ॥
ಬಣ್ಣಿಸಲಿಕ ಸದಳವು ಶೀಗುರು । ವರ್ಣನಾತೀತನು ಕಣಾ ಯೆನ । ಗಿನ್ನು ಸಾಧ್ಯವೆ ಸರ್ವಮಹಿಮೆಯ ಬರೆದು ತೆಗೆಯುವರೆ ॥58॥

ವೇದಶಾಸ್ತ್ರ ಪುರಾಣಗಳು ತಾ । ಹಾದಿ ಕಾಣದೆ ಕುರುಡವಾದವು । ಬೋಧವಿಲ್ಲದೆ ನೇತಿಯೆಂದುತ್ತರವ ಕೊಟ್ಟರವಲಾ ॥
ಆದಿ ಮೂರುತಿಯಾದ ಶ್ರೀಗುರು । ಪಾದಮಹಿಮೆಯ ಹೊಗಳಲಾರೆನು । ಆ ದಯಾನಿಧಿಗುರುವಿಗರ್ಪಿಪೆನಲ್ಪ ಸೇವೆಯನು ॥59॥

ಗುರುಮಹಿಮೆ ನಿರುಪಮವು ಯೆನ್ನೀ । ಪರಿಮಿತದ ಸೇವೆಯಲಿ ಗುರುವಿನ । ಪರಮಮಹಿಮೆಯು ವ್ಯಕ್ತವಾಗದು ತತ್ವ ತಿಳಿದಿಹೆನು ॥
ತರಣಿಗಾದೀಪದಲಿ ಪೂಜೆಯ । ಮೆರೆಸುವಂತೀ ಸಾಧನವಲಾ । ಪರಿಯೊಳೇ ಸೇವೆಯನುಪೇಕ್ಷಿಸುವನೆ ದಿವಾಕರನು ॥60॥

ಗುರುಚರಿತ್ರವನೋದಿ ಭವದೊಳು । ದುರಿತ ತಾಪತ್ರಯಗಳೆಲ್ಲವು । ಪರಿಹರಿಸಿದಂತಾಯ್ತು ಸ್ವಾರ್ಥವಿದಾಯ್ತು ನೋಡಿದರೆ ॥
ಧರೆಯೊಳೀ ಪೀಯೂಷಕಲಶವ । ನಿರದೆ ಕರ್ಣಾಟಕದ ಶ್ರೀ ಗುರು । ಚರಣಸೇವಕರಿಂಗೆ ಭಾಷಾಂತರವನರ್ಪಿಸುವೆ ॥61॥

ಚಾರುವ್ಯಾಸಾದಿಗಳು ಚರಣದೊ । ಳೇರಿಸಿರುವರು ನಿನಗೆ ಮುಕ್ತಾ । ಹಾರಗಳ ದಿವ್ಯಾಂಬರಂಗಳ ಗಣನೆಯಿಲ್ಲದಲೆ ॥
ಏರಿಸಿದೆ ನಾ ದೀನ ತುಳಸೀ । ಹಾರವೊಂದನು ಭಕ್ತಿಭಾವದಿ । ದೂರಮಾಡನು ಹಾರವಿದನ್ನೆ ದೀನನಾನೆಂದು ॥62॥

ಗುರುವೆನಗೆ ನಿಪ್ಪಾಣಿಯೂರಿನ । ಗುರುಚರಣ ಸದ್ಭಕ್ತ ಜ್ಞಾನೇ । ಶ್ವರಿಯ ಸೇವಕ ವಿಷ್ಣು ಶರ್ಮನು ಕೊಡಲು ಸಮ್ಮತಿಯಾ ॥
ವಿರಚಿಸಿದೆನೀ ಕನ್ನಡದಿ ಗುರು । ಚರಿತವನು ಸದ್ಗುರು ಪ್ರಸಾದದೊ- । ಳರಿತವನು ನಾನಲ್ಲ ವ್ಯಾಕರಣಾದಿಬಂಧಗಳಾ ॥63॥

ದತ್ತರಾಜನ ಕೃಪೆಯು ದತ್ತ ಚ- । ರಿತ್ರವನು ನಿರ್ಮಾಣ ಮಾಡಿತು । ಯೆತ್ತ ಶ್ರೀಗುರುಚರಿತ ಪಾಮರನೆತ್ತ ನಾ ನೋಡೆ ॥
ಇತ್ತನೆನಗಾ ವಿಷ್ಣು ಸದ್ಗುರು । ವುತ್ತಮೋತ್ತಮ "ಲೇಖಣಿಯ" ಸ । ಚ್ಚಿತ್ತ ಹಾರಕ ಸಾಧನವ ಜ್ಞಾನೋಬಲಿಖಿತವನು ॥64॥

ಜ್ಞಾನರಾಜನ ಲೇಖಣಿಯು ಮ । ತ್ತೇನಹೇಳಲಿ ತತ್ಪ್ರಭಾವವ । ತಾನೆ ಸದ್ಗುರು ದತ್ತರಾಜನು ಬಂದು ಬರಿಸಿದನು ॥
ಜ್ಞಾನಿಗಳು ದೋಷವನು ನೋಡದೆ । ಕ್ಷೋಣಿಯಲಿ ಸ್ವೀಕರಿಸಲಾಸು- । ಜ್ಞಾನಮೂರುತಿ ದತ್ತರಾಜನು ಕೊಡದಿರನು ಜ್ಞಾನಾ ॥65॥

ಬರೆದೆನೆಂದೀ ಗುರುಚರಿತ್ರವ । ಬರಿದೆ ಯೆನಗಭಿಮಾನವಿಲ್ಲ್ಯ । ಗುರುಮಹಿಮೆ ಯೆಲ್ಲವನು ಬರೆಯಲು ಶೇಷಗಸದಳವು ॥
ಮೆರೆವ ಗಗನವೆ ಸಾಲದಾತನ । ಚರಿತವನು ವಿಸ್ತಾರ ಮಾಡಲು । ಸರಸತಿಯ ಚಾತುರ್ಯ ಸಾಲದು ಲೀಲೆವರ್ಣಿಸಲು ॥66॥

ತರಣಿಗಿಹುದತಿ ಬೆಳಕು ಪ್ರಶಾಶಕಸ್ತು್ತುರಿ- । ಗಿರುವುದೈ ಪರಿಮಳ ಸುಧಾಕರ- । ಗಿರುವುದು ಸುಧಾರಸವು ಕೇಳೀ ಸಿದ್ಧ ತತ್ವಗಳು ॥

ಅರುಹದಿರೆ ನಾನೇನು ಶ್ರೀಗುರು । ಚರಿತಲೀಲೆಯ ಸಿದ್ಧತತ್ವಕೆ । ಕೊರತೆ ಬರುವದೆ ಹೇಳಿದರೆ ದೊಡ್ಡಸ್ತಿಕೆಯೆ ಯೆನಗೆ ॥67॥

ಗುರುಚರಣಕರ್ಪಿಸಿದ ಶ್ರೀ ಗುರು- । ಚರಿತವೆಂಬೀ ಅಲ್ಪಸೇವೆಯ । ಕರುಣದಿಂದಾ ದತ್ತರಾಜನು ಸ್ವೀಕರಿಸದಿರನು ॥

ಪರಮಭಕ್ತಿಯೋಳೆಸಗಿದೀ ಗುರು । ಚರಿತದಂದದಿ ಮುಂದೆ ಶ್ರೀಗುರು । ವರನ ಸೇವೆಯು ನಡೆದಿರಲಿ ಗಂಗಾನದಿಯತೆರದಿ ॥68॥

ಮಾಸಮಾಘದ ಶುಕ್ಲಪಕ್ಷದ । ಭಾಸುರದ ಪಂಚಮಿಯೊಳಾ ಗುರು । ವಾಸರದೊಳಾರಂಭಿಸಿದೆ ರಕ್ತಾಕ್ಷಿ ವತ್ಸರದಿ ॥

ಆಶ್ವೀನದ ಸಿತ ಪಕ್ಷದಲಿ ಗುರು । ವಾಸರದಿ ಷಷ್ಠಿಯ ದಿವಸದಲಿ । ಲೇಸಿನಿಂ ಮುಗಿಸಿದೆನು ಕ್ರೋಧನ ವತ್ಸರದೊಳಿದನು ॥69॥

ಮಂಗಲಂ ಶ್ರೀದತ್ತರಾಜಗೆ । ಮಂಗಲಂ ಶ್ರೀಭಕ್ತ ವರದಗೆ । ಮಂಗಲಂ ಶ್ರೀಪಾದಶ್ರೀವಲ್ಲಭಗೆ ಯತಿವರಗೆ ॥

ಮಂಗಲಂ ನರಹರಿ ಸರಸ್ವತಿ । ಮಂಗಲಂ ನಿನಗರ್ಪಿಸುವೆ ಶುಭ । ಮಂಗಲಂ ಶ್ರೀರಾಘವೇಂದ್ರಗೆ ವಿಷ್ಣು ದಾಸನಿಗೆ ॥70॥

॥ ಅಧ್ಯಾಯ 53 ಸಂಪೂರ್ಣಂ । ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

॥ ಶ್ರೀ ಗುರುಚರಿತ್ರ ಸಮಾಪ್ತ॥

ಆರತಿ

ರಾಗ :- ಭೈರವಿ-ಸಾರಂಗ-ಪೂರ್ವಿ-ಯಮನಕಲ್ಯಾಣ-ವಗೈರೆ, ಕಾಲಕ್ಕೆ ತಕ್ಕ ರಾಗದಲ್ಲಿ ಹಾಡಬಹುದು. ಪಾರಾಯಣ ಪ್ರಾರಂಭ ಮತ್ತು ಮುಕ್ತಾಯದ ಪೂಜೆಯ ಸಮಯದಲ್ಲಿ ಹಾಡುವದು.

ಮಂಗಲಂ ಜಯ ಮಂಗಲಂ ॥ ಪಲ್ಲ॥

ಅತ್ರಿತನಯ ಶ್ರೀದತ್ತನಿಗೆ । ಚಿತ್ರಚರಿತ ಗುರುಮೂರುತಿಗೆ ॥
ಧಾತ್ರಿಯ ತಿರುಗುತ ಭಕ್ತರ ಸಲಹುವ । ಸ್ತೋತ್ರಪ್ರಿಯ ದತ್ತಾತ್ರೆಯಗೆ । ಮಂಗಲಂ ॥1॥

ಮೂರುಗುಣಾತ್ಮಕ ಮೂರುತಿಗೆ । ಮೂರುಜಗದಿ ಸಂಚಾರಿಪಗೆ ॥
ಧಾರುಣಿಯಲಿ ದುರಿತಾಳಿಯ ಹರಿಸುವ । ವಾರಿಜಮಿತ್ರ ಪ್ರಕಾಶನಿಗೆ । ಮಂಗಲಂ ॥2॥

ಕಲಿಯುಗದಲಿ ಕಲಿಹರಣನಿಗೆ । ಜಲಜಭವಾರ್ಚಿತ ಚರಣನಿಗೆ ॥
ಖಳ ಸಂಹರಣಗೆ ತ್ರೈಮೂರುತಿಗೆ । ತಿಳಿಯಲು ತ್ರಿಗುಣಾತೀತನಿಗೆ । ಮಂಗಲಂ ॥3॥

ವಾಡಿಕ್ಷೇತ್ರನಿವಾಸನಿಗೆ । ರೂಢಿಯ ರಜಕಗೆ ಕೊಟ್ಟವಗೆ ॥
ಆಡಿಸಿ ವೇದವ ಪತಿತನ ಮುಖದಿಂ । ಗೂಢವ ಜನರಿಗೆ ತೋರಿದಗೆ । ಮಂಗಲಂ ॥4॥

ಬರಡೆಮ್ಮೆಯ ಹಿಂಡಿಸಿದವಗೆ । ಕೊರಡು ಸತ್ತಿರಲದ ಚಿಗಿಸಿದಗೆ ॥
ಶರಣತಂತುಕನಿಗೆ ಶ್ರೀಶೈಲ್ಯವ ಬಹು । ತ್ವರಿತದಿ ತೋರಿಸಿ ಮೆರದವಗೆ । ಮಂಗಲಂ ॥5॥

ಕುಷ್ಟವಹರಿಸಿದ ಮಹಿಮನಿಗೆ । ಇಷ್ಟಾರ್ಥವನೀಯುವ ಗುರುವರಗೆ ॥
ಅಷ್ಟ ಸ್ಥಾನದೊಳಷ್ಟ ರೂಪದಿಂ । ದಿಷ್ಟಾರ್ಥವ ತಾನಿತ್ತವಗೆ । ಮಂಗಲಂ ॥6॥

ಔದುಂಬರಛಾಯಾಪ್ರಿಯಗೆ । ವೇದಕೆ ತಾಗದ ಲೀಲನಿಗೆ ॥
ಮೇದಿನಿಯಲಿ ಗಂಧರ್ವನಗರದಲಿ । ಮೋದದಿ ಲೀಲೆಯ ತೋರಿದಗೆ । ಮಂಗಲಂ ॥7॥

ಬಂಜೆಗೆ ಪುತ್ರರನಿತ್ತವಗೆ । ಕಂಜನಾಭಸೇವಿತ ಪದಗೆ ॥
ಭಂಜಿಸಿ ದೈತ್ಯರ ಶಿಷ್ಟರ ಸಲಹುವ । ಮಂಜುಳರೂಪಗೆ ದತ್ತನಿಗೆ । ಮಂಗಲಂ ॥8॥

ಯತಿನರಸಿಂಹಸರಸ್ವತಿಗೆ । ನುತಜನಸೇವಿತಚರಣನಿಗೆ ॥
ಯತಿವರ ಶ್ರೀಪಾದಶ್ರೀವಲ್ಲಭ । ಗತಿಮುದದಿಂ ಮಂಗಲವೆನುವೆ । ಮಂಗಲಂ ॥9॥

ಕೃಷ್ಣಾ ನದಿತಟವಾಸನಿಗೆ । ವಿಷ್ಣು ಶರ್ಮನಿಂ ಸೇವಿತಗೆ ॥
ವಿಷ್ಣು ಶಿಷ್ಯನಾ ರಾಘವೇಂದ್ರನಿಗೆ । ಮನ್ನಿಸಿ ಸರ್ವವ ಕೊಡುವವಗೆ । ಮಂಗಲಂ ॥10॥

॥ ಶ್ರೀಗುರು ದತ್ತಾತ್ರೇಯಾರ್ಪಣಮಸ್ತು । ಶುಭಂ ಭವತು॥

ಅರ್ಪಣೆ

ಪೂಜ್ಯ ತಾಯಿ - ತಂದೆ

ಶ್ರೀಮತಿ ಕಮಲಾ ದಕ್ಷಿಣಾಮೂರ್ತಿ ದಿಕ್ಷಿತ,

(1935 – 2002)

ಶ್ರೀ ದಕ್ಷಿಣಾಮೂರ್ತಿ ತಿಮ್ಮಣ್ಣ ದಿಕ್ಷಿತ, ಓಣಿಕೈ

(1927 – 1996)

ಶ್ರೀಮತಿ ಕಮಲಾ ದಕ್ಷಿಣಾಮೂರ್ತಿ ಗ್ರಂಥಮಾಲಿಕೆಯ ಪ್ರಕಟಣೆಗಳು

1. ದೈನಂದಿನ ಪ್ರಾರ್ಥನಾ ಶ್ಲೋಕಗಳು
2. ಸಂಧ್ಯಾವಂದನಾದಿ ನಿತ್ಯಕರ್ಮಗಳು
3. ನಿತ್ಯೋಪಯೋಗಿ ವೇದ ಮಂತ್ರಗಳು
4. ನಾಮ ಪಾರಾಯಣ ಸ್ತೋತ್ರಗಳು
5. ಪಂಚಾಯತನ ದೇವ ಪೂಜಾ ವಿಧಿ
6. ನಿತ್ಯ ಭಜನಾ ಪದ್ಧತಿ
7. ಆದಿ ಶಂಕರಾಚಾರ್ಯರ ಕೃತಿಗಳು
8. ಹಬ್ಬ-ಹರಿದಿನಗಳ ಆಚರಣೆ
9. ಓಣಿಕ್ಕೈ ಮನೆತನ - ವಂಶ ವೃಕ್ಷ
10. ಹವ್ಯಕರ ಹಾಡುಗಳು
11. ಬಹೂಪಯೊಗೀ ನಾಮಾವಳಿಗಳು
12. ಶ್ರೀ ಗುರುಚರಿತ್ರ ಪದ್ಯ

ಸದ್ಗುರು ಸುಜ್ಞಾನ ವೇದಿಕೆಯ ಪ್ರಕಟಣೆಗಳು

1. ವೈದಿಕ-ಜೀವನ ಕೈಪಿಡಿ
2. ವೈದಿಕ ಜ್ಯೋತಿ
3. ಪ್ರತಿ ಸಾಂವತ್ಸರಿಕ ಶ್ರಾದ್ಧ ಪ್ರಯೋಗ
4. ದೇವಿ ಆರಾಧನಾ ಪ್ರದೀಪ
5. ವಾಸ್ತು ಪ್ರಯೋಗ ದೀಪ
6. ಪುರಾಣೋಕ್ತ ಶ್ಲೋಕ್ಯೈ: ಪ್ರತಿ ಸಾಂವತ್ಸರಿಕ ಶ್ರಾದ್ಧ ಪ್ರಯೋಗ

ಪ. ಪೂ. ನಾರಾಯಣಾನಂದ ತೀರ್ಥ ಪ್ರತಿಷ್ಠಾನ (ರಿ)

ಸಂ. 431, ಶ್ರೀರಕ್ಷಾ, 7ನೇ ಮುಖ್ಯ ರಸ್ತೆ, ಇಸ್ರೋ ಬಡಾವಣೆ, ಬೆಂಗಳೂರು-560111,

ಕರ್ನಾಟಕ, ದೂರವಾಣಿ : +91 94482 42402, sddixit@outlook.com